ಸಂವಾದ: ೧-೬

ಸಂಚಿಕೆ ೧

ನವೆಂಬರ್ - ಡಿಸೆಂಬರ್ 1986

ಸಂವಾದ

ಸಂವಾದ ಪ್ರಕಾಶನ ಮಲ್ಲಾಡಿಹಳ್ಳಿ ಚಿತ್ರದುರ್ಗ ಜಿಲ್ಲೆ

ಈ ಸಂಚಿಕೆಯ ಲೇಖಕರು :

ರಾಮಚಂದ್ರದೇವ, 116/A 22ನೇ ಮುಖ್ಯರಸ್ತೆ, ಶ್ರೀನಗರ, ಬೆಂಗಳೂರು-50

ವೈದೇಹಿ, ಕವಿತಾಂಪೌಂಡು, ಸಿರಿಬೀಡು ಉಡುಪಿ.

ಪಾಂಡುರಂಗಹೆಗಡೆ, ಪರಿಸರಸಂರಕ್ಷಣಕೇಂದ್ರ, ಹುಲಿಮಳಗಿ ಬಿಲ್ಡಿಂಗ್
ಶಿರಸಿ-581401.

ಶಶಿಕಲಾವಸ್ತ್ರದ, ಉಪನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮಂಡ್ಯ

ಸ. ರಘುನಾಥ, ಗೌನಿಪಲ್ಲಿ, ಶ್ರೀನಿವಾಸಪುರ ತಾಲ್ಲೂಕು ಕೋಲಾರಜಿಲ್ಲೆ 563135

ಗಜಾನನಈಶ್ವರಹೆಗಡೆ, ಶ್ರೀಗಜೇಂದ್ರ ಎಂ.ಬಿ.ಆರ್. ಕಾಲೇಜು ಸಿರಿಗೆರೆ,
ಚಿತ್ರದುರ್ಗ ಜಿಲ್ಲೆ.

ರಾಜಶೇಖರ ಹನುಮಲಿ, ಎಂ. ಬಿ. ಆರ್ ಕಾಲೇಜು ಸಿರಿಗೆರೆ. ಚಿತ್ರದುರ್ಗ ಜಿಲ್ಲೆ.

ರಾಜೇಂದ್ರಚೆನ್ನಿ, ಇಂಗ್ಲೀಷ್‌ವಿಭಾಗ, ಸಹ್ಯಾದ್ರಿಕಾಲೇಜು ಶಿವಮೊಗ್ಗ.

ಜಿ. ಎಲ್. ರಾಮಪ್ಪ, ಮಲ್ಲಾಡಿಹಳ್ಳಿ-577 531.

ಎಂ. ವಿ. ಕೃಷ್ಣ, ಮುಖ್ಯೋಪಾಧ್ಯಾಯರು, ಪ್ರೌಢಶಾಲೆ, ಶೆಟ್ಟಿಹಳ್ಳಿ ಅಮಟೆಕೊಪ್ಪ
ಅಂಚೆ ಶಿಕಾರಿಪುರ ತಾಲ್ಲೂಕು ಶಿವಮೊಗ್ಗ ಜಿಲ್ಲೆ.

ಜಿ. ಎನ್. ಮಲ್ಲಿಕಾರ್ಜುನ, ಸರ್ಕಾರಿ ಪದವಿಕಾಲೇಜು, ಹೊಸದುರ್ಗ.

ಓ. ಎಲ್. ನಾಗಭೂಷಣಸ್ವಾಮಿ, ಇಂಗ್ಲೀಷ್‌ವಿಭಾಗ, ಸಹ್ಯಾದ್ರಿಕಾಲೇಜು
ಶಿವಮೊಗ್ಗ.

ಡಾ. ಅನುಪಮನಿರಂಜನ, ನಾಲ್ಕನೆಯ ಟಿ ಬ್ಲಾಕ್, ಜಯನಗರ ಬೆಂಗಳೂರು.

ಸಂವಾದ-೧

Printed Published and Edited for Samvada Prakashana,
Malladihalli post Chitradurga Dist, 577531.
Printers: Mubeen Printers, Khadikendra Road, Malladihalli,
Chitradurga Dist. 577 531.

ಮಾತನಾಡುವ ಮರ

○ ರಾಮಚಂದ್ರದೇವ

ಪರಂಪರೆ-ವರ್ತಮಾನ, ಸ್ಥಾವರ-ಬದಲಾವಣೆಗಳ ನಂಟು ಕುರಿತು ವಿದ್ವಜ್ಜನ ತಮ್ಮ ಮಾತು ಹೇಳಿರುವರು. ಈಗ ಆ ಸಂಗತಿಯ ಕೆಲವು ಹೊಡೆಗಳನ್ನು ತಿಳಿಯಲೆಳಸುವೆನು.

೧

ಬುದ್ಧನ ಸಮಕಾಲೀನ ತತ್ತ್ವಜ್ಞರು ಆರು ಜನ : ಪುರಾಣ ಕಶ್ಯಪ, ಅಜಿತ ಕೇಶಕಂಬಳಿ, ಪಕುಡ ಕಚ್ಚಯನ, ಸಂಜಯ ಬೇಲತಿಪುತ್ತ, ಮಖ್ಖಲಿ ಗೋಸಲ ಮತ್ತು ನಿಗಂಥ ನಾಥಪುತ್ತ. ಈ ಪೈಕಿ ನಿಗಂಥ ನಾಥಪುತ್ತ ಮಹಾವೀರನ ಅಲಿಯಾಸ್ ಹೆಸರು ಇವರು ಆ ಕಾಲವನ್ನು ಅರ್ಥಮಾಡಿಕೊಳ್ಳಲು ಯತ್ನಿಸಿದರು. ಆದರೆ ಅಷ್ಟು ಜನರಲ್ಲಿ ಬುದ್ಧ ಮಾತ್ರ ಹೊಸ ಧರ್ಮ ಸ್ಥಾಪನೆಯಲ್ಲಿ ಯಶಸ್ವಿಯಾದನು. ಬುದ್ಧನ ಯಶಸ್ಸಿನ ಕಾರಣವಾಗಿ ಸಂಜಯ ಬೇಲತಿಪುತ್ತನ ಶಿಷ್ಯರು ಬುದ್ಧನನ್ನು ಸೇರಿದರು. ಆಗ ನಿರಾಶನಾದ ಸಂಜಯ ಬೇಲತಿಪುತ್ತ "ಮೂರ್ಛೆ ಹೋದ, ಬಿಸಿ ನೆತ್ತರು ಅವನ ಬಾಯಿಂದ ಹೊರಬರಲಾರಂಭಿಸಿತು."[1] ಆಗಿನ ಕಾಲದ ಕಾವಳಗಳು ಮನಸ್ಸಿಗೆ ಕಂತಿದ ಮಖ್ಖಲಿ ಗೋಸಲ ಹುಚ್ಚು ಹಿಡಿದು ಸತ್ತ. ತನ್ನ ಜೀವನಾಂತ್ಯದಲ್ಲಿ ಗೋಸಲನು ಕುಂಬಾರಗಿತ್ತಿ ಹಲಹಲಳ ಮನೆಯಲ್ಲಿದ್ದನು. ಆ ಸಮಯ ಒಂದು ತಾತ್ತ್ವಿಕ ಪ್ರಶ್ನೆಗೆ ಉತ್ತರ ಕೇಳಿ ಅವನ ಶಿಷ್ಯ ಅಯಂಪುಲನು ಬಳಿ ಬಂದನು. ಆಗ ಗೋಸಲನು ಕೊಟ್ಟ ಉಪದೇಶ : "ವೀಣೆ ಬಾರಿಸು, ಹೋಗು, ವೀಣೆ ಬಾರಿಸು."[2] ಮಖ್ಖಲಿ ಗೋಸಲನ ಮೆಚ್ಚುಗೆಯ ಗಣರಾಜ್ಯದ ಜೀವನಕ್ರಮ,

ಮೌಲ್ಯ ವ್ಯವಸ್ಥೆ ನಾಶವಾಗುತ್ತಿದ್ದ ಕಾಲ ಅದು. ಅಂಥಲ್ಲಿ ದಿನನಿತ್ಯದ ಜೀವನದ ಸುಖ ನಾಶವಾಗದ ನಮೂನೆ ಅದಕ್ಕೆ ಮೆರುಗು ಕೊಡುವ ಚಿರನೂತನ ಸಂಭ್ರಮ ಗಳಾದ ವೀಣೆ,ಹಾಡು,ಕುಣಿತ, ಒಂದು ಹನಿಸುರೆ, ಮತ್ತು ಹೆಣ್ಣಿನ ಪ್ರೇಮಕ್ಕೆ ಮಾತ್ರ ಅರ್ಥವುಂಟೆಂದು ಆಗ ಆತನಿಗೆ ಬೋಧವಾಗಿದ್ದಿರಬಹುದು. ಮಹಾವೀರನ ಯಶಸ್ಸು ಬುದ್ಧನದಕ್ಕೆ ಹೋಲುವೆ ಮಾಡಿದರೆ ಕಿನ್ನಿ ನಮೂನೆಯದು. ಮಹಾವೀರ ಅಸುವಳಿದ ಮತ್ತು ಆತನ ಶಿಷ್ಯರು ತಮ್ಮ ತಮ್ಮೊಳಗೆ ಲಡಾಯಿ ಮಾಡಿಕೊಂಡ ಸುದ್ದಿಯನ್ನು ತಂದ ಚುಂಡನಿಗೆ ಬುದ್ಧ ಇಂತು ಪರಿ ನುಡಿದನು :

"ಈಗ ಇರುವ ಗುರುಗಳಲ್ಲಿ ಗೌರವ ಬೆಂಬಲದ ದೃಷ್ಟಿಯಿಂದ, ನನ್ನ ಸ್ಥಾನಕ್ಕೆ ಏರುವ ಗುರುಗಳನ್ನು, ಯಾರನ್ನೂ, ಚುಂಡಾ, ನಾನು ಕಾಣೆ. ಈಗ ಇರುವ ಸಂಘಗಳಲ್ಲಿ, ಬೆಂಬಲ ಮತ್ತು ಗೌರವದ ದೃಷ್ಟಿಯಿಂದ, ಭಿಕ್ಕುಗಳ ಸಂಘಕ್ಕೆ ಸಮನಾದ ಯಾವ ಸಂಘವನ್ನೂ, ಚುಂಡಾ, ನಾನು ಕಾಣೆ. ಯಾರಾದರೂ ಸತ್ಯವಂತರು ಎಲ್ಲಾ ರೀತಿಯಲ್ಲಿ ಯಶಸ್ವಿಯಾದ, ಎಲ್ಲಾ ರೀತಿಯಲ್ಲಿ ಪರಿಪೂರ್ಣ ವಾದ, ತಪ್ಪುಗಳಿಲ್ಲದ, ನಿಂತ ನೀರಲ್ಲದ, ಸಂಪೂರ್ಣ ರೀತಿಯಲ್ಲಿ ಪ್ರವಾದಿಸಲ್ಪಟ್ಟ ಧರ್ಮದ ಬಗ್ಗೆ ಮಾತಾಡುತ್ತಿದ್ದರೆ, ಚುಂಡಾ, ಅವರು ನನ್ನ ಈ ಧರ್ಮದ ಬಗ್ಗೆ ಮಾತನಾಡುತ್ತಿರುತ್ತಾರೆ."[3]

ದೇಬೀಪ್ರಸಾದ ಚಟ್ಟೋಪಾಧ್ಯಾಯರು ಇಂತು ಪರಿ ಮಾತನ್ನು ಉದ್ಧರಿಸಿದ ಬಳಿಕ ಲಿಖಿಸುವಂತೆ ಬುದ್ಧ ಹೇಳಿದುದು ಖರೆಯಾಗಿತ್ತು. ಅವರು ಕೇಳುವ ಪ್ರಶ್ನೆ ಯಾಕೆ ಇದು ಇಂತು? ಉಳಿದವರು ಸೋತು, ಬುದ್ಧ ಗೆಲ್ಲುವ ಹಾಗೆ ಆದದ್ದು ಯಾತಕ್ಕಾಗಿ ? ಚಟ್ಟೋಪಾಧ್ಯಾಯರು ಇದಕ್ಕೆ ಕೊಡುವ ಉತ್ತರ ಆ ಯುಗವನ್ನು ಹೊಸನಮೂನೆ ನೋಡಲು ಮಾಡುವುದು. ಈ ವಿಷಯಕ್ಕೆ ಹೊಡೆಮರಳಿ ಬರುವ. ಅದಕ್ಕೆ ಸುರುವಲ್ಲಿ ಆ ಯುಗ ಎಂಥದಿತ್ತೆಂದು ನೋಡುವ ಅಗತ್ಯವಿರುವುದು.

ಬುದ್ಧಯುಗದಲ್ಲಿ ನಡೆಯುತ್ತಿದ್ದ ಘನ ಪರಿವರ್ತನೆ ಹೇಳಿದರೆ, ಬೇರೆ ಬೇರೆ ಕಡೆ ಇದ್ದ ಕುಂಞಾ ಕುಂಞಾ ಗಣರಾಜ್ಯಗಳನ್ನು ಅರಸೊತ್ತಿಗೆ ಜ್ಯಾರಿಯಲ್ಲಿದ್ದ ರಾಜ್ಯಗಳ ರಾಜರು ನಿರ್ನಾಮ ಮಾಡುತ್ತಿದ್ದುದು. ಸಮಾನತೆ ಮತ್ತು ಸ್ವಾತಂತ್ರ್ಯಗಳಿದ್ದ ಗಣರಾಜ್ಯಗಳು ಇವು. ಬುದ್ಧ ವಸ್ಸಕಾರನ ಪ್ರಶ್ನೆಗೆ ಉತ್ತರಿಸಿ ದಾಗ ಹೇಳಿದ ನಮೂನೆ ಈ ಗಣರಾಜ್ಯಗಳ ಪ್ರಜೆಗಳು ಸಮಸ್ಯೆ ತಂದ ಸಂಗತಿ ಯನ್ನು ಒಟ್ಟುಕೂಡಿ ಕೂತು ಚರ್ಚೆ ಮಾಡಿ ತೀರ್ಮಾನಿಸುತ್ತಿದ್ದರು. ಅವರು ಏಕಾಂತವನ್ನೆಂತುಪರಿ ಅಂತೇಪರಿ ಸಾಂಘಿಕ ಜೀವನವನ್ನು ಇಷ್ಟಪಡುವವರಾಗಿದ್ದರು.

ಅರಸೊತ್ತಿಗೆ ವಿಸ್ತರಿಸಿ ಬೆಳೆದಂತೆ ಗಣರಾಜ್ಯಗಳೊಂದಿಗೆ ಈ ಮೌಲ್ಯಗಳು ನಾಶವಾಗುತ್ತಿದ್ದವು.

ಗಣರಾಜ್ಯಗಳ ನಿರ್ನಾಮಕ್ಕೆ ಕುಂಞಾ ಕುಂಞಾ ಕಾರಣಗಳು ದಂಡಿಯಾಗ್ಯುತ್ತಿದ್ದವು. ಪ್ರಜೆಗಳಿಗೆ ತಮ್ಮನ್ನು ಆಳುವವನನ್ನು ಆರಿಸುವ ಹಕ್ಕು ಇರುವುದು ಅಧಿಕಾರ ವಂಶಪಾರಂಪರ್ಯವಾಗಿ ಬರುವ ಅರಸೊತ್ತಿಗೆಯ ಕಣ್ಣಿನೇರದಿಂದ ಅಪಾಯಕಾರಿ ಎಂಬುದು ಅವರ ನಿಲುವಾಗಿತ್ತು. ಕೋಸಲದ ರಾಜ ಪಸೇನದಿ ಬುದ್ಧನ ಶಾಕ್ಯಕುಲವನ್ನು ನಿರ್ನಾಮ ಮಾಡಬೇಕೆಂದಿದ್ದನು-ಮದುವೆ ಸಂಗತಿಯಲ್ಲಿ ವಂಚನೆ ಮಾಡಿದರೆಂಬ ಎಳೆ ಹಿಸಿದು. ಪಸೇನದಿಗೆ ಬುದ್ಧನ ಬಗ್ಗೆ ಗೌರವವಿತ್ತು. ತೆದಕಾರಣವಾಗಿ ಬುದ್ಧ ಆಗ ಅದಕ್ಕೆ ತಡೆ ಮಾಡಿದನು. ಆದರೆ ಬುದ್ಧನ ಬಗ್ಗೆ ಈ ತೆರದ ಗೌರವವಿರದ ಪಸೇನದಿಯ ಮಗ ವಿಡ್ದುಭನನ್ನು ತಡೆಯುವುದು ಸಾಧ್ಯವಾಗದಾಯಿತು. ಆತ ಶಾಕ್ಯಕುಲವನ್ನು ಧ್ವಂಸಗೊಳಿಸುವ ಪಣಹಿಡಿದು "ಅವರ ದೇಶವನ್ನು ಆಕ್ರಮಿಸಿದ, ನಗರಗಳನ್ನು ವಶಪಡಿಸಿಕೊಂಡ, ಗಂಡು, ಹೆಣ್ಣು, ಮಕ್ಕಳು ಎಂಬ ಭೇದವಿಲ್ಲದೆ ಎಲ್ಲರನ್ನೂ ಕೊಚ್ಚಿ ಸಾಯಿಸಿದ."[4] ಮತ್ತೆ ಇಷ್ಟೆಲ್ಲಾ ಆಗಿ, ಶಾಕ್ಯ ರಾಜ್ಯ ವಿಡ್ದುಭನ ಅಜ್ಜನ ಮನೆ! ಅವನ ಅಮ್ಮ ವಸಭಕತ್ತಿಯು ಮಹಾನಾಮ ಶಾಕ್ಯನ ಮಗಳು; ನಾಗಮುಂಡ ಎಂಬ ಗುಲಾಮ ಕನ್ನಿಕೆಯಲ್ಲಿ ಹುಟ್ಟಿದವಳು. ಅಜಾತಶತ್ರು ಕರುಣೆಯಿಲ್ಲದೆ ಸಾಯಿಸಿದ ವೈಶಾಲಿಯ ಲಿಚ್ಛವಿಗಳು ಅವನ ಕರುಳುಬಳ್ಳಿ. ಲಿಚ್ಛವಿಗಳ ಮಹಾಸಮ್ಮತ ಚೇತಕನ ಮಗಳು ಚೇಲಣ ಅಜಾತಶತ್ರುವಿನ ತಂದೆ ಬಿಂಬಸಾರನ ಮೂರನೆಯ ಹೆಂಡತಿ. ದೇಬೀಪ್ರಸಾದ ಚಟ್ಟೋಪಾಧ್ಯಾಯರು ಆ ಕಾಲದ ಇನ್ನೊಂದು ಕೊಲೆಗಳ ಸರಪಳಿಯನ್ನು ಇಂತು ಪರಿ ಕೊಡುವರು :

"ಬಿಂಬಸಾರನನ್ನು ಅವನ ಮಗ ಅಜಾತಶತ್ರು ಕೊಂದ; ಅಜಾತಶತ್ರುವನ್ನು ಅವನ ಮಗ ಉದಯಬದ್ಧ ಸಾಯಿಸಿದ; ಉದಯಬದ್ಧ ಅವನ ಮಗ ಅನುರುದ್ಧಕನಿಂದ ಕೊಲೆಯಾದ; ಅನುರುದ್ಧಕ ಅವನ ಮಗ ಮುಂಡನಿಂದ, ಮುಂಡ ಅವನ ಮಗ ನಾಗದಶಕನಿಂದ ಕೊಲೆಯಾದರು. ನಾಗದಶಕ ತನ್ನ ಮಗನಿಂದ ಕೊಲೆಯಾಗಲಿಲ್ಲ. ಯಾಕೆ ಹೇಳಿದರೆ ಅದರ ಮೊದಲು ಪ್ರಜೆಗಳು ಇದು ಪಿತೃಹಂತಕರ ಬಳ್ಳಿಯೆಂದು ತೀರ್ಮಾನಿಸಿ ನಾಗದಶಕನನ್ನು ಸಿಂಹಾಸನದಿಂದ ಇಳಿಸಿ ಮಂತ್ರಿ ಸುಸುನಾಗನಿಗೆ ಪಟ್ಟಕಟ್ಟಿದರು."[5]

ಗಣರಾಜ್ಯಗಳ ನಾಶದ ಕಾರಣವಾಗಿ ಮೊದಲಿನ ಮೌಲ್ಯಗಳಾದ ಸ್ವಾತಂತ್ರ್ಯ, ಸಮಾನತೆ, ಸಹೋದರತೆಗಳು ನಾಶವಾಗುತ್ತಿದ್ದವು. ಬುದ್ಧ ಒಂದು ಸೂತ್ತದಲ್ಲಿ ಹೇಳಿದ ಹಾಗೆ ಎಲ್ಲಿ ಹೋಗಲಿ ಅಲ್ಲಿ "ಶ್ರೀಮಂತಿಕೆಯ ಮೋಹ ಕಾಣುತ್ತಿದೆ. ಒಬ್ಬರು ಇನ್ನೊಬ್ಬರಿಗೆ ಏನನ್ನೂ ಕೊಡುವುದಿಲ್ಲ. ಸಮುದ್ರ ಪರ್ಯಂತ ಆಸ್ತಿ ಲೂಟಿ

ಮಾಡಿದ್ದು ಸಾಕಾಗದೆ ಅದರಾಚೆಗೂ ಲೂಟಿ ಮಾಡುವ ಮನಸ್ಸು ಈ ಅರಸರದ್ದು."[6] ಕಮ್ಯೂನಿನ ದಿನಗಳು ಮುಗಿದಿದ್ದವು. ವೈಯಕ್ತಿಕ ಆಸ್ತಿಯ ದಿನಗಳು ಸುರುವಾಗಿದ್ದವು. ಪ್ರತಿಯೊಬ್ಬ ಶಸ್ತ್ರ ಸಜ್ಜಿತನಾಗಿದ್ದ ಪಂಗಡದ ವ್ಯವಸ್ಥೆಯ ಬದಲು ಕೆಲವರು ಶಸ್ತ್ರ ಸಜ್ಜಿತರಾಗಬಲ್ಲ ಸೈನ್ಯವಿತ್ತು. ಸೈನ್ಯಕ್ಕೆ ಮುಖ್ಯಸ್ಥರಾಗಿ ಸೇನಾಧಿಕಾರಿ, ರಾಜ ಇದ್ದರು. ಸೈನ್ಯ ನಿರ್ವಹಣೆಗೆ, ಅಧಿಕಾರಿಗಳಿಗೆ ಸಂಬಳ ಕೊಡಲಿಕ್ಕೆ ಈಗ ಹಣ ಬೇಕಾಗಿತ್ತು. ಹಣಕ್ಕಾಗಿ ತೆರಿಗೆ ವಸೂಲಿ ಪ್ರಾರಂಭವಾಗಿತ್ತು. ಅದೂ ಎಂಥಾ ವಸೂಲಿ–

"ತೆರಿಗೆಯ ಭಾರದಿಂದ ಜಗ್ಗಿದವರಾಗಿ ಪ್ರಜೆಗಳು ತಮ್ಮ ಹೆಂಡತಿ ಮಕ್ಕಳೊಡಗೂಡಿ ಕಾಡಿನಲ್ಲಿ ಪ್ರಾಣಿಗಳ ತೆರದಿ ಜೀವಿಸುತ್ತಿದ್ದರು. ಒಂದು ಕಾಲದಲ್ಲಿ ಗ್ರಾಮವಿದ್ದ ಕಡೆ ಈಗ ಏನೂ ಇರಲಿಲ್ಲ. ರಾಜನ ತೆರಿಗೆ ಅಧಿಕಾರಿಗಳ ಬಗೆಗಿನ ಭೀತಿಯಿಂದಾಗಿ ಪ್ರಜಾಜನರು ತಮ್ಮ ತಮ್ಮ ಮನೆಯಲ್ಲಿ ವಾಸಿಸಲು ಹಿಂಜರಿಯುತ್ತಿದ್ದರು. ಮನೆಯನ್ನು ಬಿಟ್ಟು ಸೂರ್ಯೋದಯದ ಬಳಿಕ ಅವರು ಕಾಡಿಗೆ ಓಡಿಹೋಗುತ್ತಿದ್ದರು. ಹಗಲು ರಾಜನ ಅಧಿಕಾರಿಗಳು ಪ್ರಜಾಜನರನ್ನು ಸುಲಿಗೆ ಮಾಡಿದರೆ ರಾತ್ರಿ ಕಳ್ಳರು ಸುಲಿಗೆ ಮಾಡುತ್ತಿದ್ದರು."[7]

ಅಷ್ಟಲ್ಲ, ರಾಜನ ಅಧಿಕಾರಿಗಳು ಕಳ್ಳರೊಡನೆ ಸಂಧಾನ ಮಾಡಿಕೊಂಡು ದುಡ್ಡು ಸುಲಿಯುತ್ತಿದ್ದರು. ಬೇರೆ ಬೇರೆ ತೆರನಾಗಿ ದುಡ್ಡು ಸುಲಿಯುವ ಕೆಲಸವನ್ನು ಅರಸು ಅಹರ್ನಿಶಿ ನಡೆಸಿದ್ದನು. ಅಡವು, ಬಡ್ಡಿ, ಚಕ್ರಬಡ್ಡಿಗಳು ಆಗ ಪ್ರಾರಂಭವಾಗಿದ್ದವು. ಅವು ವ್ಯಾಪಾರಿ ಜನಕ್ಕೆ ಸುಲಿಗೆ ಮಾರ್ಗವಾಗಿದ್ದವು. ಸಿದ್ಧಾರ್ಥ ಅರಮನೆ ತ್ಯಾಗ ಮಾಡಲಿಕ್ಕೆ ಆತನು ಓರ್ವ ಭಿಕ್ಷುಕನನ್ನು ನೋಡಿದ್ದು ಮೂರು ಕಾರಣಗಳಲ್ಲಿ ಒಂದು ಎಂಬುದು ಬರೋಬ್ಬರಿ ಮಾತು. ಯಾಕೆ ಹೇಳಿದರೆ ಖಾಸಗಿ ಆಸ್ತಿಗಳ ಒಡೆತನ ಆಗ ಸುರುವಾಗಿತ್ತು. ಪರಿಣಾಮವಾಗಿ ಭಿಕ್ಷುಕರು ಅಲ್ಲೊಬ್ಬರು ಇಲ್ಲೊಬ್ಬರು ಕಾಣಿಸಿಕೊಳ್ಳಲು ಮೊದಲಾಗಿತ್ತು. ಗಣರಾಜ್ಯವಾದ ಕಪಿಲವಸ್ತುವಿನ ಸಿದ್ಧಾರ್ಥನಿಗೆ ಇದನ್ನು ನೋಡಿ ಪರಿಚಯವಿರುವುದು ಸಾಧ್ಯವಿರಲಿಲ್ಲ. ಯಾಕೆ ಹೇಳಿದರೆ ಭಿಕ್ಷುಕರು ಗಣರಾಜ್ಯಗಳ ಮೌಲ್ಯಗಳಲ್ಲೊಂದಾದ ಸಮಾನತೆಯ ನಾಶ ಮತ್ತು ಖಾಸಗಿ ಆಸ್ತಿಯ ಒಡೆತನದ ಬೆಳವಣಿಗೆ ನಂತರದ ಫಲಗಳಾಗಿದ್ದರು.

ಸಾರಾಂಶ : ಇಂತು ಪರಿ ಅದು ತನಕ ಇದ್ದ ಸಮಾಜರಚನೆ, ಮೌಲ್ಯಗಳು ಬುದ್ಧನ ಕಾಲದಲ್ಲಿ ಬದಲಾಗುತ್ತಿದ್ದವು. ಗಣರಾಜ್ಯಗಳ ನಾಶ ಮತ್ತು ಅರಸೊತ್ತಿಗೆಯ ವಿಸ್ತರಣೆ ಜನರ ಯೋಚನೆಯ ಕ್ರಮವನ್ನು ಬದಲಾಯಿಸಿದ್ದವು.

ಇಂತು ಪರಿಸ್ಥಿತಿಯಿರಲು ಬುದ್ಧನ ಸಮಕಾಲೀನ ತತ್ತ್ವಜ್ಞರು ಜನರ ಮನಸ್ಸು ಗೆಲ್ಲುವೆಡೆ ಸೋತರು. ಬುದ್ಧನು ಸಕ್ಸೆಸ್ಸಾದನು. ಚಟ್ಟೋಪಾಧ್ಯಾಯ ಅವರ ಪ್ರಕಾರ ಇದಕ್ಕೆ ಕಾರಣ ನಶಿಸಿ ಹೋಗುತ್ತಿದ್ದ ಗಣರಾಜ್ಯಗಳ ಮೌಲ್ಯಗಳಾದ ಸ್ವಾತಂತ್ರ್ಯ, ಸಮಾನತೆ, ಅಹಿಂಸೆ ಮೊದಲಾದವುಗಳನ್ನು ಬುದ್ಧನು ತನ್ನ ಬೌದ್ಧಧರ್ಮ ದಲ್ಲಿ ಉಳಿಸಿಕೊಂಡನು. ತದುಕಾರಣವಾಗಿ ಹಳತು ನಶಿಸಿಲ್ಲವೆಂಬ ಭ್ರಮೆ ಜನರಲ್ಲಿ ಅಂಕುರಿಸಿತು. ಬುದ್ಧನು ಬಿಂಬಸಾರ ಮುಂತಾದ್ದ ಜನದೊಡನೆ ಅಂಬಗ ಇಂಬಗ ಹೊಂದಾಣಿಕೆ ಮಾಡಿದನು; ಮಾಡಿದರೆ ಉದೆ ಕಾನಳ ಮುಸುಕಿಸುವ ನಾಶದ ನಡುವೆ ಹಳೆ ಜೀವನ ಮೌಲ್ಯಕ್ಕೆ ಮಾನ್ಯತೆ ಕೊಡುವ ಒಂದು ಧರ್ಮವನ್ನು ಸೃಷ್ಟಿಸಿದನು. ಇಂತು ಉಳಿದವರು ವಾಸ್ತವವನ್ನು ಅರಿಯಲೆಳಸಿದರೆ ಬುದ್ಧನು ಅದಕ್ಕೆ ಪರ್ಯಾಯ ಒಂದನ್ನು ಸೃಜಿಸಿದನು.

ನಾಶವಾಗುತ್ತಿದ್ದ ಪರಂಪರೆಗೆ ಬುದ್ಧನು ಇಂತು ಜೀವ ಕೊಟ್ಟನು. ಅಮೂಲ್ಯವಾದ ಮೌಲ್ಯಗಳ ಖನಿಯಾಗಿದ್ದ ಪರಂಪರೆ ಬುದ್ಧಧರ್ಮದಲ್ಲಿ ಉಳಿಯಿತು. ವಿನಾಶಿ ಮತ್ತು ಮೌಲ್ಯವಿರಹಿತ ಆದ ವರ್ತಮಾನಕ್ಕೆ ಅದು ಇಂತು ಪರಿ ಒಂದು ಆಸರೆಯಾಯಿತು. ಬುದ್ಧ ವರ್ತಮಾನವನ್ನು ಎದುರಿಸುತ್ತಿದ್ದ ನೆಲೆಯೇ ಆದುವರೆಗೆ ಜೀವಂತ ಸಂಪ್ರದಾಯವಾಗಿದ್ದ, ಈಗ ನಾಶವಾಗುತ್ತಿದ್ದ ಪರಂಪರೆಯು ಆ ಮೌಲ್ಯಗಳಾಗಿದ್ದವು.

೨

ಚಟ್ಟೋಪಾಧ್ಯಾಯರು ಬುದ್ಧ, ಬುದ್ಧಕಾಲದ ಬಗ್ಗೆ ಲಿಖಿಸಿದ ಸಂಗತ್ಯಾನುಸಾರಗಳನ್ನು ಇಂತುಪರಿ ಸಂಗ್ರಹಿಸಲು ಗಡದ್ದು ಕಾರಣವಿದೆ. ಅದು ಹೇಳಿದರೆ, ಬುದ್ಧನ ರೀತಿಯಲ್ಲಿ ಪರಂಪರೆಯ ಮೌಲ್ಯ, ಆ ಮೌಲ್ಯಾಧಾರಿತ ಜೀವನಮಾರ್ಗ ವನ್ನು ಉಳಿಸಿಕೊಳ್ಳಲು ನಡೆದ ಒಂದು ಪ್ರಯತ್ನವನ್ನು ಇತ್ತೀಚೆಗೆಲಾಗಿ ಕಂಡಿರುವೆವು. ಅದು ಹೇಳಿದರೆ, ಗಾಂಧೀಜಿಯದ್ದು. ಗಾಂಧೀಜಿಗೆ ಮತ್ತು ಬುದ್ಧನಿಗೆ ಇರುವ ಏಕಗುಣಗಳಲ್ಲಿ ಇದು ಒಂದು.

ಗಾಂಧಿ ಉಡುತ್ತಿದ್ದ ಬಟ್ಟೆ, ಅವರ ಊಟದಕ್ರಮ, ಆಶ್ರಮದ ಕಲ್ಪನೆ, ರಾಟೆ, ಅದನ್ನು ಆಧರಿಸಿದ ಆರ್ಥಿಕಸಿದ್ಧಾಂತಗಳು, ಜೀವನಕ್ರಮ–ಇವು ಪರಂಪರೆ ಯಲ್ಲಿದ್ದ ಅತ್ಯುತ್ತಮವನ್ನು ಉಳಿಸುವ ಯತ್ನಗಳಾಗಿದ್ದವು. ಪರಂಪರೆಯನ್ನು

ಆಧುನಿಕ ಯುಗದ ತುಮುಲಗಳಿಗೆ ಅವರು ಮುಖಾಮುಖಿ ತಂದರು. ಇಂತು ಪರಂಪರೆಯನ್ನು ಸಜೀವ ಮೌಲ್ಯದ ನೆಲೆಯಾಗಿ ಉಳಿಸಲು ಯತ್ನಿಸಿದರು. ಮತ್ತು ಅವರು ಅದನ್ನು ಹೀಗೆ ಉಳಿಸಲು ಯತ್ನಿಸಿದ್ದು ಪಾಶ್ಚಾತ್ಯೀಕರಣ, ಯಾಂತ್ರೀಕರಣಗಳ ನಡುವೆ.

ಇದು ರಿವೈವಲಿಸಂ ಅಲ್ಲ. ಯಾಕೆ ಹೇಳಿದರೆ ಇದು ಪರಂಪರೆಯನ್ನು ಜೀವಂತವೆಂದು ಭಾವಿಸಿ ಅನುಷ್ಠಾನಿಸಿದ ಬಗೆಯಾಗಿತ್ತು.

ಆದರೆ ಗಾಂಧೀಜಿ ಪರಂಪರೆ ಮುಖೇನ ವರ್ತಮಾನವನ್ನೆದುರಿಸಿದ ಕಾಲಾವಧಿಯ ಹಿಂದೆ ಮುಂದಲ್ಲಿ ಒಂದು ಪ್ರಮುಖ ಭಾರತೀಯ ವಿದ್ಯಾವಂತವರ್ಗ ಪರಂಪರೆಯೊಡನೆ ಸಂಬಂಧ ವಿಚ್ಛೇದಿಸಲು ಉಮೇದಿನಲ್ಲಿತ್ತು. ಪರಂಪರೆ ಬಗ್ಗೆ ಉದಾಸೀನವಾಗಿರಲು ಈ ವರ್ಗ ಕಲಿತಿತ್ತು. ರಾಜಾರಾಮಮೋಹನರಾಯರು ಇಂಗ್ಲಿಷ್ ಬೇಕು, ಸಂಸ್ಕೃತ ಸಾಹಿತ್ಯ ಅರ್ಥಹೀನ ಕಗ್ಗಲು ಎಂದು ಲಿಖಿಸಿದಾಗ ಈ ಉದಾಸೀನತೆಯನ್ನು ಅಭಿವ್ಯಕ್ತಿಸುತ್ತಿದ್ದರು.

ಹತ್ತೊಂಬತ್ತನೇ ಶತಮಾನದ ಅಖೇರು ಕಾಲಕ್ಕೆ ಭಾರತೀಯ ವಿದ್ಯಾವಂತ ಮನಸ್ಸು ಪಾಶ್ಚಾತ್ಯ ಸಂಸ್ಕೃತಿಯೆದುರು ಗೊಂದಲಗೊಂಡುದಕ್ಕೆ ಅದು ತನ್ನ ಪರಂಪರೆ ಬಗ್ಗೆ ಖಚಿತ ನಿಲುವನ್ನು ತಾಳದೆ ಇದ್ದದ್ದು ಕಾರಣವಾಗಿದೆ.[8] ಪರಂಪರೆಯ ಪುನರ್ಮೌಲ್ಯಮಾಪನ ಆಗಿರಲಿಲ್ಲ. ಜೊತೆಗೆ ಸತ್ತು ವಾಸನೆ ಬರುತ್ತಿದ್ದ ಭಾರತೀಯ ಸಮಾಜ ಪದ್ಧತಿ, ಸಂಪ್ರದಾಯಗಳು ಪಾಶ್ಚಾತ್ಯೀಕರಣದ ಬಗೆಗೆ ಆಕರ್ಷಣೆ ಹುಟ್ಟಿಸಿದ್ದವು.

೨

ಭಾರತೀಯ ಸಂಪ್ರದಾಯಬದ್ಧ ಜೀವನ ಸತ್ತು ವಾಸನೆ ಬರುತ್ತಿರುವುದು ಮತ್ತು ಪಾಶ್ಚಾತ್ಯರನ್ನು ಅನುಕರಿಸುತ್ತಿರುವ ಭಾರತೀಯರು ಸತ್ತಜೀವನ ನಡೆಸುತ್ತಿರುವುದು; ಹಾಗೂ ಪೂರ್ವ–ಪಶ್ಚಿಮಗಳ ಸಂಘರ್ಷ ಮತ್ತೆ ಮತ್ತೆ ಸಾಹಿತ್ಯದಲ್ಲಿ ವಸ್ತುವಾಗಿದೆ. ಮುದ್ದಣನಲ್ಲಿ ಕಾಣುವುದಿಲ್ಲ ಅದು. ಆದರೆ ಸುಮಾರು ಅತ ಬರೆಯುತ್ತಿದ್ದ ಕಾಲದ 'ಇಗ್ಗಪ್ಪ ಹೆಗ್ಗಡೆಯ ವಿವಾಹ ಪ್ರಹಸನ' ದಲ್ಲಿ ಕಾಣುತ್ತಿದೆ. ಇಗ್ಗಪ್ಪ ಹೆಗ್ಗಡೆಯ ವಿವಾಹ ಸಂಪ್ರದಾಯಬದ್ಧ ಜೀವನ ಕೊಳೆಯುತ್ತಿರುವುದನ್ನು

ಸೂಚಿಸುತ್ತದೆ. ನಾಟಕದ ಕೊನೆಯ ದೃಶ್ಯ ಪಾಶ್ಚಾತ್ಯ ವಿಚಾರಧಾರೆಯ ಪ್ರಭಾವ ದಿಂದಾಗಿ ಹೊಸಗಾಳಿ ಈ ಸಮಾಜಕ್ಕೆ ಬರಬಹುದೆಂಬುದರ ಸೂಚಿಯಾಗಿದೆ. ತದ ನಂತರದ ಬೋಳಾರ ಬಾಬುರಾಯರ 'ವಾಗ್ದೇವಿ'ಯಲ್ಲಿ ಇದು ಕಾಣುವುದು. 'ವಾಗ್ದೇವಿ' ಯಲ್ಲಿ ಸಂಪ್ರದಾಯ ಬದ್ಧ ಹಿಂದೂ ಸ್ವಾಮಿಗಳ ಕೊಳೆತ ಜೀವನ ರೀತಿಯ ಚಿತ್ರಣವಿದೆ. ಈ ಸಂಪ್ರದಾಯಿಕ ಜೀವನ ರೀತಿಯ ಹೊರಗಿರುವ ಆಡಳಿತ ವ್ಯವಸ್ಥೆ ಸಮೇತ ಕೊಳೆತಿದೆ. ಮಠ ಮತ್ತು ಉಳಿದ ಸಮಾಜವನ್ನು ಬಿಟ್ಟು, ಹೆಸರನ್ನು ಬದಲಾಯಿಸಿಕೊಂಡು ಬೇರೆ ಕಡೆ ಹೋದ ಸೂರ್ಯನಾರಾಯಣ ಮಾತ್ರ ತನ ಜೀವನಕ್ಕೊಂದು ಹೊಸ ಉಸಿರು ತರಲು ಶಕ್ತನಾಗುವನು. ಕುವೆಂಪು ರವರ 'ಕಾನೂರು ಹೆಗ್ಗಡತಿ'ಯಲ್ಲಿ ಕಾಲೇಜು ವಿದ್ಯಾಭ್ಯಾಸ ಪಡೆದ, ಹಿಂದೂ ಸಂಸ್ಕೃತಿಯ ಉತ್ತಮ ಮೌಲ್ಯಗಳ ಪರಿಚಯವುಳ್ಳ ಹೂವಯ್ಯನು ನಿಂತಂತೆ ನಿಂತ' ಕೊತಂತೆ ಕೊತ ಹಳ್ಳಿಯ ಸಂಪ್ರದಾಯಬದ್ಧ ಜೀವನಕ್ಕೆ ಹೊಸಗಾಳಿ ಕೊಡಲೆಳಸು ವನು. 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಕುವೆಂಪು ಅವರು ಪಾಶ್ಚಾತ್ಯ ಪ್ರಭಾವವನ್ನು ಮತ್ತು ಇಂಗ್ಲೀಷ್ ವಸಾಹತುಶಾಹಿ ಪ್ರಾರಂಭವಾದ ನಂತರದ ಭಾರತದ ಹಳ್ಳಿಯನ್ನು ಕ್ರೈಸ್ತ ಮಿಷನರಿಗಳು, ಮತಾಂತರ ಯತ್ನ ಮೊದಲಾದ ವುಗಳ ಮೂಲಕ ತೋರಿಸುವರು. 'ಬೀಸೋಕಲ್ಲು ಸವಾರಿ' ಈ ಪ್ರಭಾವ ಮತ್ತು ಅದಕ್ಕೆ ನಮ್ಮ ಹಳ್ಳಿಜನರ ಪ್ರತಿಕ್ರಿಯೆ ತೋರಿಸುವ ಅಪ್ರತಿಮ ಭಾಗ. ಕಾರಂತರ ಕಾದಂಬರಿಗಳಲ್ಲಿ ಲಚ್ಚನ ಥರದ ಪಾತ್ರಗಳು ಇಂಗ್ಲಿಷ್ ಸಂಸ್ಕೃತಿಗೆ ಮಾರು ಹೋಗಿ, ಆಷಾಢಭೂತಿಗಳಾಗಿ ತಾಖತ್ತಿಲ್ಲದವರಾಗಿರುವರು. ಅಂತೆ ತರಹ ಇಂಗ್ಲೀಷ್ ವಿದ್ಯಾ ಭ್ಯಾಸ ಕಾರಣವಾಗಿ ಸಂಪ್ರದಾಯ ಬದ್ಧ ಜೀವನದಿಂದ ಹೊರಗೆ ಹೋಗಲು ವಿನಾ ಯಕ ಇಡಗುಂಜಿಯಂಥವರಿಗೆ ಸಾಧ್ಯ ಆಗಿದೆ. ಪೂರ್ವ–ಪಶ್ಚಿಮ ಎಂಬುದಕ್ಕಿಂತ ಮಿಗಿಲಾಗಿ ವ್ಯಕ್ತಿತ್ವ ಯಾವ ನಮೂನೆಯದು ಎಂಬುದರ ಮೇಲಿಂದ ಈ ಸಂಗತಿಗಳು ಹೋಗುವುವು ಎಂದವರು ತಿಳಿದಂತೆ ಕಾಣುವುದು. 'ಚಿಕವೀರ ರಾಜೇಂದ್ರ' ದಲ್ಲಿ ಮಾಸ್ತಿಯವರು ಮತ್ತೆ ಇಂಗ್ಲಿಷರ ಆಕ್ರಮಣಶೀಲತೆ, ಪಾಶ್ಚಾತ್ಯರ ಪ್ರಭಾವ, ನಿಧಾ ನವಾಗಿ ನಶಿಸುತ್ತಿರುವ ನಮ್ಮ ಸಂಸ್ಕೃತಿ ಮತ್ತು ಪರಂಪರೆಗಳ ಚಿತ್ರ ಕೊಡುವರು. ಆಂಗ್ಲ ತಂದೆ ಭಾರತೀಯ ತಾಯಿಯಲ್ಲಿ ಹುಟ್ಟಿಸಿದ ಬೇರಿಲ್ಲದ ನಮೂನೆಯ ಚಟ್ಟಿಕಾರರನ್ನು ಕುರಿತು 'ಚಟ್ಟಿಕಾರ ತಾಯಿ' ಎಂಬೊಂದು ಕತೆಯನ್ನು ಮಾಸ್ತಿಯವರು ಲಿಖಿಸಿರುವರು. ಅಡಿಗರ, "ಭೂತ", "ಸ್ವಾತಂತ್ರ್ಯ: 1958 ರ ಪಾಠ" ಕವನಗಳ ಮುಖ್ಯ ವಸ್ತು ಪಾಶ್ಚಾತ್ಯೀಕರಣ ಮತ್ತು ಪರಪರೆಯೊಂದಿ- ಗಿನ ವರ್ತಮಾನದ ಸಂಬಂಧಗಳಾಗಿವೆ. ಪಾಶ್ಚಾತ್ಯೀಕರಣವನ್ನು ಸುತ್ತಿ ಬಿಗಿದಿರುವ ಬಂದಳಿಕೆಯೆಂದು, ಪರದೇಶಿ ಗೊಡ್ಡುಗಾಳಿಯ ಕಾಮಕೇಳಿಯೆಂದು ಅವರು

ಕರೆಯುವರು. ಪರಂಪರೆಯ ಮೌಲ್ಯಗಳನ್ನು ಚಿನ್ನವನ್ನು ಅಗೆದಂತೆ ಅಗೆದು ತೆಗೆದು ಇಷ್ಟ ದೇವತೆಗೆ ಒಗ್ಗಿಸುವ ಅತ್ಯಸೂಚಿಸುವ ಅವರ ಪ್ರತಿಮೆ ಪ್ರಸಿದ್ಧವಾದದ್ದು. 'ಇಗ್ಗಪ್ಪ ಹೆಗ್ಗಡೆ' 'ವಾಗ್ದೇವಿಗಳ' ಲೇಖಕರಿಂದ ಹಿಡಿದು ಅನಂತಮೂರ್ತಿ, ರಾಮಚಂದ್ರಶರ್ಮರ ವರೆಗೆ ಪಾಶ್ಚಾತ್ಯೀಕರಣದ ಬಗ್ಗೆ, ಪರಂಪರೆ –ವರ್ತಮಾನಗಳ ಸಂಬಂಧಗಳ ಬಗ್ಗೆ ಪ್ರತಿಕ್ರಿಯಿಸದ ಮುಖ್ಯ ಲೇಖಕನಿಲ್ಲ.

ರಾಮಚಂದ್ರಶರ್ಮರ 'ಹೇಸರಗತ್ತೆ' ಈ ವಸ್ತುವಿನ ಬಗ್ಗೆ ಬರೆದ ಪದ್ಯ. ಆದರೆ ಅವರು ಭಾರತಕ್ಕೆ ಮಾತ್ರ ಸಂಬಂಧ ಪಟ್ಟಂತಲ್ಲದೆ ವಸಾಹತು ಶಾಹಿಯ ಸ್ವರೂಪದ ಬಗ್ಗೆ ಬರೆದಿರುವರು. ಅದಕ್ಕಾಗಿ ಅವರು ಇಟಲಿಯ ವಸಾಹತಾಗಿದ್ದ ಇಥಿಯೋಪಿಯಾವನ್ನು ಮುಖ್ಯಕೇಂದ್ರವನ್ನಾಗಿ ತೆಗೆದುಕೊಳ್ಳುವರು. ಇನ್ನೊಂದು ದೇಶದ ವಸಾಹತಿನ ಪರಿಣಾಮವಾಗಿ ಹುಟ್ಟಿ ಸೃಷ್ಟಿಶೀಲವಾಗಲು ಸಾಧ್ಯವಾಗದಂತೆ ಬರಡಾದ ಜನಾಂಗದ ಬಗ್ಗೆ ಈ ಪದ್ಯ ಇದೆ. ಯಾಕೆಂದರೆ, ಈಗ, ವೀರ್ಯವರ್ಧಕವಾದ "ಕಂತಾರಿಡೀಸನ್ನು ಇಡಿ ಇಡೀ ನುಕಿದರು ಸಡಿಲವಾಗದು ತೊಡೆಯ ಗೋರಿ ಮೌನ" ಅಲ್ಲದೆ, ಹೀಗೆ ಹುಟ್ಟಿಸಿದವರು ಸಮೇತ ಹಡಗಿಂದ ಹಾರಿ ತೀಟೆ ತೀರಿಸಿ ಕೊಂಡ ನಾವಿಕರು. 'ರಾತ್ರಿ ಹಾದರದ ಮದ'ವಿದು ಪ್ರೇಮ–ಪ್ರೀತಿಗಳ ಫಲವಲ್ಲ,

ಬೇರೆ ದೇಶಗಳ ವಸಾಹತುಗಳಾಗಿ ಮಾರ್ಪಟ್ಟ ಎಲ್ಲ ನಾಡುಗಳ ಮತ್ತು ಎಲ್ಲ ಜನಾಂಗಗಳ ಮೇಲಿನ ಪದ್ಯವಾಗಿದೆ ಇದು. ಕನ್ನಡದಲ್ಲಿ ಇದುವರೆಗೆ ಬಂದಿರುವ ಕೃತಿಗಳು ಪಾಶ್ಚಾತ್ಯೀಕರಣಗೊಂಡ ಭಾರತೀಯರ ಬಗ್ಗೆ ಅಥವಾ ಭಾರತೀಯತೆ ಮೇಲೆ ಆಗಿರುವ ಪಾಶ್ಚಾತ್ಯ ಪ್ರಭಾವದ ಬಗ್ಗೆ ಬರೆದಿರುವವು. ಶರ್ಮರು ಸುರು ಸಲಕ್ಕೆ ವಸಾಹತುಶಾಹಿ ನಿಮಿತ್ತ ಬೇರೊಂದು ದೇಶದ ಪ್ರಭಾವಕ್ಕೆ ಸಿಕ್ಕಿ ತನ್ನ ಪರಂಪರೆಯನ್ನು, ಸ್ವಂತಿಕೆಯನ್ನ, ಮತ್ತು ಸೃಷ್ಟಿಶೀಲತೆಯನ್ನು ಕಳೆದುಕೊಂಡ ನಾಡು– ಜನಾಂಗದ ಬಗ್ಗೆ ಬರೆದಿರುವರು.

ಅಭಿವೃದ್ಧಿ ಮತ್ತು ಅಭಿವೃದ್ಧಿಗೊಳ್ಳದ ರಾಷ್ಟ್ರಗಳ ಸಂಗತ್ಯಾನುಸಾರ ಸಮೇತ ಕವನದಲ್ಲಿ ಒಡಮೂಡಿ ಬರುವುದು ಶರ್ಮರ ಪ್ರತಿಭೆಗೆ ಗುರುತು.ಕವನವಲ್ಲಿ ಬರುವ ವಿವರಗಳ ಪ್ರಕಾರ ಮುಂದುವರಿದ ವಸಾಹತುಶಾಹಿ ಬೆಳೆಸುವ ಲಂಡನ್ನು ಮುಂತಾದೆಡೆ ಪ್ರಯಾಣಕ್ಕೆ ಬಸ್ಸು ರೈಲುಗಳಿರುವುವು; ಅಲ್ಲಿನ ನಾವಿಕರು ಹಡಗಲ್ಲಿ ಬರುವರು ಆದರೆ ಇಲ್ಲಿ,ಈ ಅನಭಿವೃದ್ಧಿಶೀಲ ಇಥಿಯೋಪಿಯಾದಲ್ಲಿ ಪ್ರಯಾಣಕ್ಕಿರುವುದು ಹೇಸರಗತ್ತೆಗಳು ಮಾತ್ರ.

ಪಾಶ್ಚಾತ್ಯೀಕರಣದ ಪರಿಣಾಮವಾಗಿ ತಯಾರಾದ ನೆಲೆಯಿಲ್ಲದ ಭಾರತೀಯರನ್ನು ಚಿತ್ರಿಸುವ ಇತ್ತೀಚಿನ ಇನ್ನೊಂದು ಕೃತಿಯೆಂದರೆ ಗಿರೀಶ ಕಾರ್ನಾಡರ ನಾಟಕ 'ಅಂಜುಮಲ್ಲಿಗೆ'. ಇಲ್ಲಿನ ಹರೀನ್ ಪಕ್ಕಾ ಇಂಗ್ಲಿಷ್‌ಮನ್ ಆಗಲು ಹೆಣಗುವ ಭಾರತೀಯ. ಗೌತಮ ಇಂಗ್ಲಿಷ್‌ಮನ್ ಆಗಲು ಪ್ರಯತ್ನಿಸಿ ಕೊನೆಯಲ್ಲಿ ಭಾರತಕ್ಕೆ ಮರಳುತ್ತೇನೆನ್ನು ವವನು. ವಸಾಹತುಶಾಹಿಯ ಪರಿಣಾಮ ಭಾರತ-ಪಾಕಿಸ್ತಾನಗಳ ಮೇಲೆ ಮಾತ್ರವಲ್ಲದೆ ಇಂಗ್ಲೆಂಡಿನ ಮೇಲೆ ಸಮೇತ ಆಗಿದೆ. ಇಂಗ್ಲೆಂಡಿಗೆ ಈ ದೇಶದ ಜನರು ಬಂದಿರುವುದು, ಡೇವಿಡ್‌ನಂಥವರ ವರ್ಣದ್ವೇಷ ಅದರ ಪರಿಣಾಮ. ಇಲ್ಲಿ ವರ್ಣ ದ್ವೇಷಗಳಿಲ್ಲದವನು ಸತೀಶ್ ಒಬ್ಬನೇ. ಆದರೆ ಅವನು ಸಮೇತ ಕೊನೆಯಲ್ಲಿ ನ್ಯೂರೋಟಿಕ್ ಆಗುವನು.

ಈ ಮೇಲಿನ ಸಂಗತಿಗಳು ಪಾಶ್ಚಾತ್ಯ ಪ್ರಭಾವ, ಪರಂಪರೆ–ವರ್ತಮಾನಗಳ ಸಂಬಂಧಗಳ ಬಗ್ಗೆ ನಮ್ಮ ಸಾಹಿತಿಗಳ ಪ್ರತಿಕ್ರಿಯೆಯ ಸವಿಸ್ತೃತ ವಿಶ್ಲೇಷಣೆ ಅಲ್ಲ. ಇದೊಂದು ತೋರ ರೂಪದ ಗುರುತಿಸುವಿಕೆ, ಅಷ್ಟೆ. ಆದರೆ ಪರಂಪರೆ –ವರ್ತಮಾನದ ಸಂಬಂಧ, ಪರಂಪರೆ ಬಗೆಗಿನ ವಿಮುಖತೆ, ಸಂಪ್ರದಾಯದ ಜಡತ್ವ, ಪಾಶ್ಚಾತ್ಯೀಕರಣದ ಮೋಹ, ಅದರಿಂದಾಗಿ ವ್ಯಕ್ತಿತ್ವದ ನೆಲೆ ತಪ್ಪಿದ್ದು ಮೊದಲಾದ ವಿಷಯಗಳು 'ಇಗ್ಗಪ್ಪ ಹೆಗ್ಗಡೆ'ಯಿಂದ ಹಿಡಿದು ಇದುವರೆಗೆ ನಿರಂತರವಾಗಿ ಸಾಹಿತ್ಯ ದಲ್ಲಿ ಹರಿದುಬಂದ ವಸ್ತು. ಈ ಕುರಿತಾದ ಸವಿಸ್ತೃತ ಸಂಶೋಧನೆಯನ್ನು ಯಾರೇ ಆದರೂ ಪ್ರತ್ಯೇಕವಾಗಿ ಮಾಡುವುದು ಅತ್ಯಂತ ಅಗತ್ಯವಿದೆ. ಯಾಕೆಂದರೆ ಈ ವಸ್ತು ನಮ್ಮ ಎಲ್ಲ ಮುಖ್ಯ ಲೇಖಕರ ಬೆನ್ನು ಹತ್ತಿ ಅವರು ಇದರ ಬಗ್ಗೆ ಬರೆ ಯುವಂತೆ ಮಾಡಿದೆ. ಈ ವಿಷಯದ ಮೇಲೆ ಬಂದ ಇತ್ತೀಚಿನ ಅದ್ಭುತ ಕೃತಿ ಯೆಂದರೆ ಮನೋಹರ ಗ್ರಂಥಮಾಲೆಯ 'ಪುಟಬಂಗಾರ' ಎಂಬ ಸ್ಮರಣಸಂಚಿಕೆಯಲ್ಲಿ ಪ್ರಕಟವಾದ ರಾಮಾನುಜನ್‌ರ 'ಒಂದು ದಿನಚರಿಯ ಕೆಲವು ದಿನಗಳು' ಎಂಬ ಸಣ್ಣ ಕತೆಯಾಗಿದೆ. ಕನ್ನಡ ಸಾಹಿತ್ಯ ಪರಂಪರೆಯ ಹೊರಗಿರುವ 'ಎ ಪ್ಯಾಸೇಜ್ ಟು ಇಂಡಿಯಾ' ಇದೇ ವಿಷಯದ ಮೇಲಿನ ಕೃತಿ.

೪

ಪರಂಪರೆಯ ಬಗ್ಗೆ ಯೋಚಿಸಿದಾಗ ಭಾರತೀಯ ದಂತಕತೆಗಳಲ್ಲೊಂದಾದ ಮಾತನಾಡುವ ಮರದ ನೆನಪಾಗುತ್ತದೆ.

ಈ ಮರ ನಾವಾಗಿ ಹೋಗಿ ಮಾತನಾಡಿದರೆ ಮಾತ್ರ ನಾವು ಮಾತಾಡಿದ ಭಾಷೆಯಲ್ಲಿ ಮಾತಾಡುತ್ತದೆ-ಪರಂಪರೆಯಂತೆ. ಮಾತಾಡಿಸದೆ ಇದ್ದರೆ ಅದು ತನ್ನಷ್ಟಕ್ಕೆ ಎಲ್ಲೋ ಹುದುಗಿಕೊಂಡಿರುತ್ತದೆ ಕಾಡಿನ ಮಧ್ಯೆ. ಭಾರತಕ್ಕೆ ದಾಳಿಯೆತ್ತಿ ಬಂದ ಅಲೆಗ್ಸಾಂಡರ್ ಗಾಢ ಕಾಡಲ್ಲಿ ಇದನ್ನು ಹುಡುಕಿಕೊಂಡು ಹೋಗಿ ಮಾತಾಡಿಸಿದನಂತೆ. ಅಲೆಗ್ಸಾಂಡರ್‌ನ ಮತ್ತು ಈ ಮರದ ಭೇಟಿ ಯುರೋಪು ಮತ್ತು ಭಾರತದ ಪರಂಪರೆಯ ಮೊದಲನೆಯ ಭೇಟಿಯ ಸಂಕೇತವಾಗಿದೆ.

ತಮ್ಮ ಪುಸ್ತಕಕ್ಕೆ ಹೆಸರು ಕೊಟ್ಟ ಈ ಮರದ ಮೊದಲ ರೂಪ ನೋಡ ಸಿಗುವುದು ಹರಪ್ಪಾದ ಒಂದು ಸೀಲಲ್ಲಿ ಎಂದು ರಿಚರ್ಡ್ ಲೇನೊಯ್ ಹೇಳುವರು. ಕ್ರಿ ಶ. ಹನ್ನೆರಡನೇ ಶತಮಾನದ ಯುರೋಪಿನ ಮ್ಯಾಪುಗಳಲ್ಲಿ ಈ ಚಿತ್ರವಿದೆಯೆಂದು ಅವರು ಉಲ್ಲೇಖಿಸುವರು. ಇಸ್ಲಾಂ ಪರಂಪರೆಯಲ್ಲಿ ಇದನ್ನು ವಾಖ್ ವಾಖ್ ಮರ ಎಂದು ಕರೆಯುತ್ತಾರಂತೆ.

ಆದರೆ ನಮಗೆ ಈ ಮರ ಸ್ಪಷ್ಟ ನೋಡಲಿಕ್ಕೆ ಸಿಗುವುದು ಮೊಗಲರ ಕಾಲದ ಒಂದು ಚಿಕಣಿ ಚಿತ್ರದಲ್ಲಿ. ಇದರ ಕಾಲ ಸುಮಾರು ಕ್ರಿ. ಶ. 1650. ಈ ಚಿತ್ರ ಬರ್ಲಿನ್‌ನ ಇಸ್ಲಾಮಿಸಷ್ ಮ್ಯೂಸಿಯಂನಲ್ಲಿದೆಯಂತೆ. ಭಾರತೀಯ ಚಿತ್ರಗಳಲ್ಲಿ ಅತ್ಯಂತ ವಿಶಿಷ್ಟ ಪರಿ ಚಿತ್ರ ಇದು. ಸುಮಾರಾಗಿ ಭಾರತೀಯ ಚಿತ್ರಗಳು ಮತ್ತು ಶಿಲ್ಪಗಳು ಚಲನೆಯ ಭಾವನೆಯನ್ನು ಉದ್ದೀಪಿಸದ ಭಂಗಿಯಲ್ಲಿರುವುವು. ಇದಕ್ಕೆ ಬಹುಶಃ ಒಂದು ಅತ್ಯುನ್ನತ ಆನಂದದ ಅಥವಾ ಉತ್ಕರ್ಷದ ಕ್ಷಣದಲ್ಲಿ ಕಾಲ ನಿಂತಿರುತ್ತದೆ, ಯಾಕೆ ಹೇಳಿದರೆ ಅದು ಭೂತ, ವರ್ತಮಾನ, ಭವಿಷ್ಯತ್ತುಗಳನ್ನು ಮೀರಿದ ಕಾಲಾತೀತದ ಕ್ಷಣ ಎಂಬ ಭಾವನೆ ಕಾರಣವಿದ್ದೀತು. ಶ್ರವಣ ಬೆಳಗೊಳದ ಗೊಮ್ಮಟ, ಚಿದಂಬರಂನ ನಟರಾಜ ಶಿಲ್ಪಗಳು ಕಾಲ ಚಲಿಸದೆ ನಿಂತ ಈ ಅತ್ಯಾನಂದದ ಅದೂ ಪರವಶತೆಯ ಕಾಲಾತೀತ ಕ್ಷಣವನ್ನು ಸೆರೆಹಿಡಿಯುವುವು. ಅಜಂತಾದ ಚಿತ್ರಗಳು, ಅಥವಾ ಬೇಲೂರು-ಹಳೆಬೀಡುಗಳ ನರ್ತಕಿಯರು, ಅಥವಾ ಕೊನಾರ್ಕಿನ ಮಿಥುನ ಶಿಲ್ಪಗಳು ಕೂಡಾ. ಆದರೆ ಮಾತಾಡುವ ಮರದ ಈ ಚಿತ್ರ ಮಾತ್ರ ಕಾಲಾತೀತ ಆನಂದದ ಕ್ಷಣವನ್ನು ಸೆರೆಹಿಡಿಯುವುದರಲ್ಲಿ ಮಗ್ನವಲ್ಲ. ಬದಲು ಇದು ಜೀವನದ ಕರಾಳತೆಯನ್ನು ಮತ್ತು ಗೂಢತೆಯನ್ನು ಹಿಡಿಯಲು ಪ್ರಯತ್ನಿಸುತ್ತದೆ.

ಈ ಮರದ ಕಾಂಡ ಹಾವುಗಳಿಂದಾಗಿದೆ. ಹಾವುಗಳೇ ಸುರುಳಿ ಸುತ್ತಿ

ಮರದ ಕಾಂಡವಾಗಿದೆ. ಮರಕ್ಕೆ ಸೂಜಿಯಂತಿರುವ ಅಲುಗುಗಳುಳ್ಳ ಎಲೆಗಳಿವೆ. ಹಣ್ಣಿಲ್ಲ. ಹಣ್ಣಿನ ಬದಲು ಅಲ್ಲಲ್ಲಿ ಏಳು ಜನ ಬೆತ್ತಲೆ ಹೆಂಗಸರು ನೇತುಬಿದ್ದಿದ್ದಾರೆ. ಮರದ ತುಂಬ ಮರದ ಕೊಂಬೆಗೆ ಫಲ ಬಂದು ಚಿಗುರಿರುವಂತೆ ಕುದುರೆ, ಹುಲಿ, ಹಸು, ಆನೆ, ಟಗರು ಮೊದಲಾದ ಪ್ರಾಣಿಗಳ ಮುಖಗಳಿವೆ. ಈ ಮುಖಗಳ ಭಾವ ಅವು ಕೆನೆಯುವುದಕ್ಕೆ, ಅಥವಾ ಏನನ್ನೋ ಹೇಳುವುದಕ್ಕೆ, ಅಥವಾ ನೆಗೆಯುವುದಕ್ಕೆ ತಯಾರಾದಂತಿದೆ. ಮರ ಫಲ ಬಿಟ್ಟಿದೆಯೇನೋ ಎಂಬಂತೆ ಅನಕ್ಕೆ ನೇತಾಡುತ್ತಿರುವ ಸಪ್ತ ಕನ್ನಿಕೆಯರೂ ಅಷ್ಟೆ. ಇವರು ಯಾವುದನ್ನೋ ಕಂಡವರು ಅದನ್ನು ಹೇಳಲು ಕಾತರರಾಗಿರುವವರು. ಮರದ ಬುಡದಲ್ಲಿ ಮೀನುಗಳು, ಹಾಗೂ ಟಗರು, ಕುದುರೆಗಳ ಮುಖಗಳಿರುವ ಸಣ್ಣ ಪುಟ್ಟ ಗಿಡಗಳು ಇವೆ. ಮರದ ಕಾಂಡ, ಎಲೆಗಳು ಕಡು ಹಸಿರು ಬಣ್ಣದಲ್ಲಿ ಹಿನ್ನೆಲೆಯನ್ನು ತೋರಿಸುತ್ತಿದ್ದರೆ, ಪ್ರಾಣಿಗಳ ಮುಖಗಳು ಮತ್ತು ಸಪ್ತಕನ್ನಿಕೆಯರು ಆ ಹಿನ್ನೆಲೆಯಿಂದ ಎದ್ದು ತೋರುವ ರೀತಿಯಲ್ಲಿ ಹಣ್ಣೆಲೆಯ ಬಣ್ಣದಲ್ಲಿ ಚಿತ್ರಿತರಾಗಿದ್ದಾರೆ.

ವರ್ತಮಾನದ ನೆಲೆಯಲ್ಲಿ ನಿಂತು ಮಾತಾಡಿಸಿದಾಗ ಮಾತ್ರ ಪರಂಪರೆಯ ಸಂಕೇತವಾದ ಈ ಮರ ಇಂದಿನ ನಮಗೆ ಪ್ರಸ್ತುತವಾಗುತ್ತದೆ. ಇಲ್ಲವಾದರೆ ಇದೊಂದು ಸನಾತನ ವೃಕ್ಷ. ಇದರ ಬಂದಳಿಕೆ ನಮ್ಮ ಕತ್ತು ಬಿಗಿದೀತು, ಅಷ್ಟೆ. ನೇಣು ಹಾಕಿಕೊಳ್ಳಲಿಕ್ಕೆ ಮಾತ್ರ ಇದರ ಉಪಯೋಗ.

ವರ್ತಮಾನದ ನೆಲೆಯಲ್ಲಿ ನಿಂತು ಮಾತಾಡಿಸಿದಾಗ ಮಾತ್ರ ಈ ಮರ ತನ್ನ ಗುಟ್ಟು ಬಿಟ್ಟುಕೊಟ್ಟೀತು. ಆಗ ಮಾತ್ರ ಈ ಮರ ಪಾಶ್ಚಾತ್ಯ ಪ್ರಭಾವದೆದುರು ಗೊಂದಲಗೊಳ್ಳದಂತೆ, ನೆಲೆ ಕಳೆದುಕೊಳ್ಳದಂತೆ ನಮ್ಮನ್ನು ಕಾಪಾಡಬಲ್ಲುದು.

ಯಾಕೆಂದರೆ ಅತ್ಯಂತ ತುಮುಲಪೀಡಿತವಾದಾಗ, ಗೊಂದಲಗೊಂಡಾಗ ಸಜೀವ ಪರಂಪರೆ ಮಾತ್ರ ನಮಗೆ ನಮ್ಮ ಮೌಲ್ಯದ ನೆಲೆಗಳನ್ನು ಒದಗಿಸಬಲ್ಲದು.

ಬುದ್ಧ ಮತ್ತು ಗಾಂಧಿ ಪರಂಪರೆಗೆ ಯಾಕೆ ಹಿಂದಿರುಗಿದರೆಂದರೆ ಅವರಿಗೆ ಆಗ ಪರಂಪರೆ ಮಾತ್ರ ಜೀವನಸೆಲೆ ಮೌಲ್ಯಗಳನ್ನು ಕೊಡಬಲ್ಲುದಾಗಿತ್ತು. ಮತ್ತು, ಪರಂಪರೆಯ ಮರವನ್ನು ಅದು ವರ್ತಮಾನದ ಭಾಷೆಯಲ್ಲಿ ಮಾತಾಡುವ ನಮೂನೆ ಹೇಗೆ ಮಾತಾಡಿಸಬೇಕೆಂದು ಅವರಿಗೆ ತಿಳಿದಿತ್ತು.

○

ಟಿಪ್ಪಣಿ

ಈ ಲೇಖನದ ಮೊದಲ ಭಾಗದಲ್ಲಿ ಬರುವ ಬುದ್ಧ, ಬುದ್ಧಕಾಲದ ಇತಿಹಾಸ, ಗಣರಾಜ್ಯಗಳ ವಿಷಯು ಮೊದಲಾದ ಪ್ರತಿಯೊಂದು ವಿವರ, ಉದ್ಧರಣೆಗಳನ್ನು ನಾನು ಶ್ರೀ ದೇಬೀಪ್ರಸಾದ ಚಟ್ಟೋಪಾಧ್ಯಾಯರ 'ಲೋಕಾಯತ' ಎಂಬ ಪುಸ್ತಕದಿಂದ ಪಡೆದಿರುವೆನು. ಅದನ್ನಿಲ್ಲಿ ಋಣದಿಂದ ನೆನೆಯುವೆನು.

1) ಜಿ. ಪಿ. ಮಲಶೇಖರ್, ಡಿಕ್ಷನರಿ ಆಫ್ ಪ್ರಾಪರ್ ಪಾಲಿನೇಮ್ಸ್, ಲಂಡನ್, 1937-38.

2) ಎ. ಎಲ್. ಭಾಷಂ, ಹಿಸ್ಟರಿ ಆಫ್ ಡಾಕ್ಟ್ರಿನ್ಸ್ ಆಫ್ ಆಜೀವಿಕಾಸ್, ಪುಟ :63

3) ರೈಸ್ ಡೇವಿಡ್, ಡಯಲಾಗ್ಸ್ ಆಫ್ ದಿ ಬುದ್ಧ, ಭಾಗ 3, ಪುಟ : 118.

4) ರೈಸ್ ಡೇವಿಡ್, ಬುದ್ಧಿಸ್ಟ್ ಇಂಡಿಯಾ, ಕಲ್ಕತ್ತಾ, 1950, ಪುಟ : 8

5) ಥಾಮಸ್ ಇ. ಜೆ, ದಿ ಲೈಫ್ ಆಫ್ ಬುದ್ಧ, ಲಂಡನ್, 1931. ಪುಟ : 168-169

6) ಓಲ್ಡೆನ್ ಬರ್ಗ್, ಎಚ್. ಬುದ್ಧ, ಕಲ್ಕತ್ತಾ, 1927. ಪುಟ : 64.

7) ಫಿಕ್, ಆರ್. ದಿ ಸೋಷಿಯಲ್ ಆರ್ಗನೈಸೇಷನ್ ಇನ್ ನಾರ್ಥ್-ಈಸ್ಟ್ ಇಂಡಿಯಾ ಇನ್ ಬುದ್ಧಾಸ್ ಟೈಮ್, ಕಲ್ಕತ್ತಾ, 1920. ಪುಟ : 121.

ಮೇಲಿನ ಎಲ್ಲಾ ಉದ್ಧರಣಗಳೂ ಶ್ರೀ ಚಟ್ಟೋಪಾಧ್ಯಾಯರ 'ಲೋಕಾಯತ' ದಲ್ಲಿ ಉದ್ಧೃತವಾದವುಗಳು.

8) ನೋಡಿ—ಎಂ. ಜಿ. ಕೃಷ್ಣಮೂರ್ತಿ, ಆಧುನಿಕ ಭಾರತೀಯ ಸಾಹಿತ್ಯ ಮತ್ತು ಇತರ ಲೇಖನಗಳು, ಸಾಗರ, 1970.

ಎಚ್ಚರವೇ, ನನ್ನನೆಚ್ಚರಿಸು ಬಾ

ಂ ವೈದೇಹಿ

ಊರಿಗೆ ಊರೇ ರಜೆಯಲ್ಲಿದೆಯೇನೋ ಎಂಬಂತಹ ನಿಶ್ಶಬ್ದತೆ. ಒಂದೇ ಒಂದು ಶಬ್ದ ಸಾರಣಿಸಿದರೂ ಇಲ್ಲ. ಆದರೆ ಇಂದು ಆದಿತ್ಯವಾರವಲ್ಲ.

ಆದಿತ್ಯವಾರವಲ್ಲವಾದುದರಿಂದ ನಾ ಪೇಟೆಗೆ ಹೋಗಬಹುದಿತ್ತು. ಮಕ್ಕಳು ಕೊಟ್ಟ ಪಟ್ಟಿ ಉದ್ದವಿತ್ತು. ಸದ್ದೇ ಮಾಡದೆ ತೆಪ್ಪಗಿದ್ದ ಮನೆಯೊಳಗೆ ನನ್ನ ಕಾಲ ಸಪ್ಪಳಕ್ಕೆ ನಾನೇ ಹೆದರುತ್ತಾ ಹೊರಡಲು ಸಜ್ಜಾದೆ. ಕಾಫಿ ಕುಡಿದು ಬಾಗಿಲು ಭದ್ರಪಡಿಸಿ ಮೆಟ್ಟಲಿಳಿದೆ.

ಹೊರಗಿರುವ ಪ್ರಶಾಂತಿ ಸಹಿಸಲಾರದ್ದು. ಇದೇನು ಹಕ್ಕಿ ಪಕ್ಕಿಗಳೂ ರಜೆಯಲ್ಲಿವೆಯೋ ? ಮರಗಳತ್ತ ನೋಡಿದರೆ ಒಡಲೊಳಗಿನ ಚಿಲಿಪಿಲಿಗಳ ಸುಖನಿದ್ರೆ ಚದುರಿ ಹೋದೀತು ಎಂಬಂತೆ ಅಲ್ಲಾಡದೆ ತುಟಿಗಚ್ಚಿ ನಿಂತಿದ್ದವು. ನೆಟಿಗೆ ಮುರಿದಂತೆ ಶಬ್ದ ಮಾಡುತ್ತಾ ಮೇಲಿನೆಲೆಯಿಂದ ಕೆಳಗಿನೆಲೆಗೆ ಕುಪ್ಪಳಿಸುತ್ತಾ ಆಟವಾಡುವ ನೀರಿನ ತೊಟ್ಟುಗಳು ಸಹ ಪಿಟಕ್ಕೆನ್ನದೆ ಇದ್ದವು. ಮೊಗ್ಗುಗಳು ಅರಳುವುದನ್ನೇ ಮರೆತಂತಿದ್ದವು.

ವರ್ಷದ ಎಂಟು ತಿಂಗಳಿಡೀ ಗಳಗಳ ಉರಿದು ಭೂಮಿಯ ಆಚೆಕಡೆಗೊಮ್ಮೆ ಈಚೆಕಡೆಗೊಮ್ಮೆ ಎಂದು ಎರಡು ಹಂತಗಳಲ್ಲಿ ಕೆಲಸಮಾಡಿ ಸಿಕ್ಕಾಪಟ್ಟೆ ಆಯಾಸಗೊಂಡಂತಿರುವ ಸೂರ್ಯ. 'ನೀನು ಪಾಪ, ರಜೆ ಹಾಕುವಂತೆಯೇ ಇಲ್ಲವಲ್ಲ ಮಹರಾಯ' ಎಂದರೆ ಅವನೂ ಮಾತಾಡಲಿಲ್ಲ. ಸಣ್ಣಗೆ ಹರಡಿದ್ದ ಎಣ್ಣೆಗಪ್ಪಿನ ಬೆಳಕಲ್ಲಿ ರಥದೊಳಗೆ ಪುಕ್ಕಲು ಮಗುವಿನಂತೆ ಮಲಗಿದ್ದ. ಅರೆತೆರೆದ ಕಣ್ಣುಗಳು ಮೋಡದ ದಪ್ಪ ಹೊದಿಕೆಯನ್ನು ಕತ್ತಿನ ತನಕ ಹೊದೆದಿದ್ದ. ಕುದುರೆಗಳು ಅಭ್ಯಾಸ ಬಲವೆಂಬಂತೆ ಮುಂದೆ ಮುಂದೆ ಸಾಗುತ್ತಿದ್ದವು.

ನೋಡುತ್ತಾ ನನಗೂ ಕಣ್ಣುಮುಚ್ಚಿ ಬಂತು. ಪೇಟೆಗೆ ಹೋಗುವುದೇ ಬೇಡ. ತರುವುದನ್ನೆಲ್ಲ ನಾಳಗೆ ತಂದರಾಯಿತು. ಈಗ ಮನೆಗೆ ಹಿಂದಿರುಗಿ ಬಿಡಬೇಕು. ಕಂಬಳಿ ಹೊರಗೆಳೆದು ನಾನು ಬೆಚ್ಚಗೆ ಹೊದೆದು ಮಲಗಿ ಬಿಡಬೇಕು–ಎಂಬಷ್ಟು ಆಸೆಯಾಯಿತು. ಆದರೆ ಆಗಲೇ ಬಲು ದೂರದ ದಾರಿ ಹಿಂದೆ ಸರಿದಾಗಿತ್ತು.

ಅರೆಬರೆ ಎಚ್ಚರದಲ್ಲಿ ನಿಂತಿತ್ತು ಸಿಟಿಬಸ್.

ಹತ್ತುತ್ತಿರುವ ಪ್ರಯಾಣಿಕರೂ ನಿದ್ದೆ ಕೂರುತಿದ್ದಾರೆಯೇ ? ನಡೆಯುವ ಜೋರಿಗೇ ಗಾಳಿ ಬೆದರಿ ಬೀಸಿ ಸೆಕೆ ಹಾರಿಸಬೇಕು—ಅಂತಹ ಬೇಸಿಗೆಯ ಆ ಚುರುಕು ಎಲ್ಲಿ ಹೋಯಿತು ? ಮಳೆಗಾಲವಲ್ಲವೆ ಎಂಬ ಜಾಗ್ರುತೆ ಚಪ್ಪಲಿ ಉಡುಗೆ ಎಲ್ಲದರಲ್ಲಿಯೂ. ಎಲ್ಲಿ ಕಂಡರೂ ಮಾತು ಎಂಬ ಶಬ್ದ ಸಹ ಇಲ್ಲ. ಎಲ್ಲರೂ ಕವಿದಿರುವ ಅನಂತ ಮೌನದ ಹಾಸಿನ ಒಂದೊಂದು ಕಣದಂತಿದ್ದರು ಹತ್ತುವಾಗಲೂ ಇಳಿಯುವಾಗಲೂ. ಬಸ್ಸು ಹೊರಡುವುದರಲ್ಲಿಯೂ ಹಾರ್ನಿನಲ್ಲಿಯೂ

ನಿದ್ದೆಗೆ ಮೌನವೆನ್ನುತ್ತಾರೆಯೇ ? ಅಥವಾ ಮೌನವೇ ನಿದ್ದೆಯೇ ?

ಅಸಹ್ಯ ನೀರವತೆ ಬಸ್ಸಿನ ಒಳ ಹೊಕ್ಕು ಕುಳಿತು ಬಿಟ್ಟಿತ್ತು; ಹೇಳಿಕೆಯೇ ಇಲ್ಲದೆ ಔತಣಕ್ಕೆ ಬಂದು ಕೂರುವ ಸೋಮಾರಿ, ದರಿದ್ರ, ದೈನ್ಯದ ಹಾಗೆ. ಅಂತೂ ಪೇಟೆ ಬೀದಿ ಬಂತು.

ನಾನೂ ಮೌನ ರಕ್ಕಸಿಯ ಪ್ರತಿನಿಧಿಯಂತೆ ಕೆಳಗಿಳಿದೆ. ಹೆಜ್ಜೆ ಮುಂದು ವರಿಸಿದೆ. ಸಪ್ಪಳವೇ ಇಲ್ಲದೆ ಹಾಗೆ ನಡೆಯುತ್ತಿರುವಾಗ ಒಮ್ಮೆ ಭಯಂಕರ ಭಯವಾಗಿ ನನ್ನ ಹೆಜ್ಜೆ ಹಿಂದುಮುಂದಾಗಿಲ್ಲವಷ್ಟೆ ಎಂದು ನಾನೇ ಪರಿಶೀಲಿಸಿಕೊಂಡೆ. ನೆಮ್ಮದಿಯ ಉಸಿರೊಂದು ಸದ್ದಿಲ್ಲದೆ ಹೊರ ಬಿತ್ತು.

ಬೇಸಿಗೆ ರಜೆಯಲ್ಲಿ ಹೀಗೆ ನಡೆಯುತ್ತಿರುವಾಗ ಹೊಸ ಹೊಸ ಮುದ್ದು ಮುಖಗಳು ಎದುರಾಗುತ್ತಿದ್ದುವು. ಈಗ ಅವೆಲ್ಲಿ? ಹೊಸ ಪುಸ್ತಕಗಳ ಪರಿಮಳ ಮೂಸುತ್ತಾ, ಲೇಬಲು ಹಚ್ಚುತ್ತಾ, ಹೊಸ ಪೆನ್ಸಿಲುಗಳನ್ನು ಕೆತ್ತಿ ಕೆತ್ತಿ ಸಣ್ಣ ಮಾಡುತ್ತಾ ಹೆತ್ತವರನ್ನು ಪೆನ್ನು ಪೆನ್ಸಿಲು, ಪತ್ರಗಳು, ಮಳೆ ಚಪ್ಪಲಿ, ಮಳೆಯಂಗಿ ಇತ್ಯಾದಿಗಳಿಗಾಗಿ ಪೀಡಿಸಿರಬಹುದು. ನನ್ನಂತೆ ಅನೇಕರು, ಕೆಲವರಾದರೂ—ನನ್ನ ಹಿಂದೆ ಮುಂದೆ ಅವರು ಕೊಟ್ಟ ಪಟ್ಟಿ ಹಿಡಿದುಕೊಂಡು ಪೇಟೆ ಬೀದಿ ಸುತ್ತುತ್ತಿರಬಹುದು.

ಬಸ್ಸಿನಲ್ಲಿ ಪೇಟೆಯಲ್ಲಿ ಪಾರ್ಕಿನಲ್ಲಿ ಎಲ್ಲೆಂದರಲ್ಲಿ ಸಿಗುತ್ತಿದ್ದ ಆ ಮಕ್ಕಳ ಮುಖದಲ್ಲಿ ಇನ್ನೊಂದು ರಜೆ ಬಂದಾಗ ಬೇರೆಯೇ ಬೆಳವಣಿಗೆಯ ರೇಖೆಗಳು. ಇವತ್ತಿದ್ದವರು ನಾಳೆ ಬೇರೆಯೇ. ಆದರೆ ಆ ಜಾಗದಲ್ಲಿ ಎಷ್ಟು ಬೇಗ ಅವೇ ಮನಸ್ಸುಗಳು ಹೊಸದಾಗಿ ಬಂದು ತುಂಬುತ್ತವೆ!

ಅವೇ ಮನಸ್ಸುಗಳೇ? ಹಾಗಾದರೆ ಆ ಮಕ್ಕಳೆಲ್ಲ ಐಸ್‌ಕ್ರೀಂ ತಿನ್ನುತ್ತಿರುವಾಗ, ಅದೊಂದು ದಿನ, ಪಕ್ಕದಲ್ಲಿಯೇ, ಜೀವ ಇಟ್ಟುಕೊಳ್ಳುವಷ್ಟೂ ಆಹಾರ ಸಿಗದ, ಶಾಲೆಯ ಮುಖ ಕಾಣದ, ಆಸೆ ಆಳಕ್ಕೆ ಹುಗಿದುಹೋದ ಕಣ್ಣುಗಳ, ನನಗಿನ್ನೂ ಮರೆಯಲಾಗದ ಆ ಪುಟ್ಟ ಹುಡುಗಿಯ ಮನಸ್ಸು? ಅದು ಆ ಜಾಗಕ್ಕೆ ಬಂದು ತುಂಬುವುದು ಯಾವಾಗ? ಆ ಮನಸ್ಸಿಗೆ ನಿಲ್ಲಲೂ ತಾವಿಲ್ಲ, ತ್ರಾಣವಿಲ್ಲ. ಆಸೆಯ ಭಾರ ಮಾತ್ರ ಕಣ್ಣುಗುಳಿಗಳಲ್ಲಿ ತುಂಬಿಕೊಂಡು ಪಾತಾಳದಲ್ಲಿ ಸಮಾಧಿಯಾಗುತ್ತಲೇ ಇದೆ. ಒಮ್ಮೆ ಮಾತಾಡಿಸಿದ್ದೇ ಓಡಿ ಬಂದು ತೊಡೆಯೇರಿ ಕುಳಿತು ಬಿಟ್ಟಿತಲ್ಲವೆ ಹುಡುಗಿ?! ತನ್ನ ಹಸಿವನ್ನು ಹೇಳಿಕೊಂಡಿತ್ತು. ಹಗುರ ಹಾತೆಯಂತಿತ್ತು. ಬೆಂಕಿಗೆ ಬೀಳಲೆಂದೇ ಹುಟ್ಟಿದವರಂತೆ.

ಆ ಹುಡುಗಿಯ ಹಸಿವು ಬೇರೆ. ಇತರ ಮಕ್ಕಳ ಹಸಿವು ಬೇರೆ ತೆರನದ್ದೇನು? ಜಗತ್ತಿನ ಕಣ್ಣಿಗೆ ಅವಳ ಹಸಿವು, ಮನಸ್ಸು ಕಾಣುವುದೇ ಇಲ್ಲವೇಕೆ? ....ಮಂಪರು ಯಾಕೆ ಕವಿದಿದೆ?

ಜಗತ್ತನ್ನು ದೂರುವ ದಾರ್ಷ್ಟ್ಯ ನನಗೆ ಎಲ್ಲಿಂದ ಬಂತು! ಜಗತ್ತಿನ ಕಣ್ಣು ಬೇರೆ ನನ್ನ ಕಣ್ಣು ಬೇರೆಯೇ ಎಂಬಂತೆ. ಸರಿಯಾಗಿ ನೋಡಿದರೆ ಸುತ್ತ ನಿದ್ದೆ ಇದೆ ಎಂದರೆ ನಾನೂ ನಿದ್ದೆಯಲ್ಲಿದ್ದೇನೆ ಎಂದೇ ಅರ್ಥವಷ್ಟೆ?

.... ಎಣಿಸುತ್ತಾ ಹೋದಂತೆ ಜೊಂಪು ಜಾಸ್ತಿಯಾಯಿತು.

ಉದ್ದನಕ್ಕೂ ಪವಡಿಸಿದಂತಿದ್ದ ಮೆಟ್ಟಿಲು ಹತ್ತಿ ಒಳಗೆ ಹೋದರೆ ಆ ಇಡೀ ಸಮುಚ್ಚಯದಲ್ಲಿ ಯಾರೊಬ್ಬರೂ ಇಲ್ಲವೆನ್ನುವಂತಹ ವಾತಾವರಣ.

"ಇವತ್ತು ರಜೆಯಾ? ಇವತ್ತು ಆದಿತ್ಯವಾರವೇನು?"—ಗಟ್ಟಿಯಾಗಿ ಕೇಳಿದೆ.

"ಖಂಡಿತ ಅಲ್ಲ"—ಎಂದು ನುಡಿದಂತಾಯಿತು. ಯಾರೋ ಕುರ್ಚಿಯ ಮೇಲೆ ಕುಳಿತಿದ್ದಂತೆ ಕಾಣುತ್ತಿದ್ದರು.—ಆದರೆ ಅವರ ದನಿ ಬಾವಿಯೊಳಗಿಂದ ಬಂದಂತಿತ್ತು.

ರೆಪ್ಪೆ ಹೊಡೆದೆ. ನನಗೆ ಎಚ್ಚರವಿದೆಯಲ್ಲ! ಅಥವಾ ನಾನು ನಿಶಾಚರಿ ರೋಗಿಯೋ? ನಾನು ಯಾಕೆ ಹೀಗೆ ಸುಪ್ತ ಸ್ಥಿತಿಯಲ್ಲಿದ್ದೇನೆ? ನನ್ನಂತೆ ಈಗ ಪೇಟೆಗೆ ಹೊರಟಿರಬಹುದಾದ ಎಲ್ಲ ತಾಯಂದಿರ ಅವಸ್ಥೆಯೂ ಹೀಗೆಯೆ ಆಗಿರಬಹುದೆ?

ನಾನು ಮತ್ತಷ್ಟು ಒಳ ನಡೆದೆ ಅಲ್ಲಲ್ಲಿ ಜನರಿದ್ದಂತೆ ಕಾಣಿಸಿದರೆ ವಿನಃ ನನಗೆ ನಿರ್ಣಯವಾಗಿ ಹೇಳಲಿಕ್ಕಾಗಲಿಲ್ಲ. ಕಣ್ಣಗಲಿಸಿದೆ. ಆಗಲೂ ಹಾಗೆಯೇ. ನನಗೆ ಯಾಕೆ ಎಚ್ಚರವಾಗುತ್ತಿಲ್ಲ?

ಎಚ್ಚರವಾಗಬೇಕೆಂದು ಉತ್ಕಟವಾಗಿ ಬಯಸಿದೆ. ನನಗೆ ಎಚ್ಚರವಿದ್ದರಲ್ಲವೆ ಇಡೀ ಲೋಕ ನನ್ನ ಪಾಲಿಗೆ ಎಚ್ಚರವಾಗಿರುವುದು? ಇಲ್ಲವಾದರೆ ಸಮಸ್ತ ಸೃಷ್ಟಿಯೂ ಸತ್ತಂತೆಯೇ. ನಾ ಎಚ್ಚರಾಗಲೇ ಬೇಕೆಂದು ಪಣ ತೊಟ್ಟೆ.

ಅಲ್ಲೇ ಬೀದಿ ಬದಿಯ ತಣ್ಣೀರನ್ನು ಮುಖಕ್ಕೆ ಹೊಡೆದುಕೊಂಡೆ. ಇನ್ನೊಂದು ಕಾಫಿ ಕುಡಿದೆ. ಬೆಳಿಗ್ಗೆ ಎದ್ದಾಗಿನಿಂದ ಈ ಕ್ಷಣದ ತನಕ ಕಳೆದ ಗಳಿಗೆಗಳನ್ನು ನೆನೆಯಲು ಯತ್ನಿಸಿದೆ. ಬಾಡಿದ ರೆಪ್ಪೆ ತೆರೆದುಕೊಳ್ಳಲಿಲ್ಲ. ಚಿರುಟಿ ಚಿರುಟಿ ಬಿಸಿಲಿಗೆ ಕರಟಿ ಚಕ್ಕಳವಾಗುತ್ತಿದ್ದ ಆ ಪುಟ್ಟ ಜೀವದ, ಮಂಪರಿನ ಹುಟ್ಟೂ ಇಲ್ಲದ, ಕಣ್ಣುಗಳನ್ನು ನೆನೆಸಿಕೊಂಡೆ. 'ನನ್ನನ್ನು ಎಬ್ಬಿಸು ಬಾ' ಎಂದು ಕರೆದೆ. ಅಂದು ಓಡಿ ಬಂದು ಮಡಿಲು ಏರಿದಂತೆ ಈಗಲೂ ಸಹ ಹಾಗೆಯೇ ಮಾಡೀತು ಎಂದು ಕಲ್ಪಿಸಿಕೊಂಡೆ. ಆದರೂ ನನ್ನ ನಿದ್ದೆ ಕೆಡಲಿಲ್ಲ. ಬದಲು ಇನ್ನಷ್ಟು ಜಡ ವಾದೆ. ಎಚ್ಚರಾಗಲೇ ಬೇಕೆಂಬ ಹಟಮಾತ್ರ ಕೆನ್ನೆತ್ತರು ಕಟ್ಟುವಂತೆ ಚಿವುಟಿ ಚಿವುಟಿ ಹೋಗುತ್ತಿತ್ತು. ಇಷ್ಟು ಬೇಗ ಸೋಲುವುದಾ ಎಂದು ಮೂಗು ಮುರಿ ಯುತ್ತಿತ್ತು.

ಪುನಃ ಅಂಗಡಿಯೊಳಗೆ ಕಾಲಿಡುವ ಯತ್ನ ಮಾಡುತ್ತಾ "ಸತ್ಯ ಹೇಳಿ, ಇವತ್ತು ಎಲ್ಲ ಕಡೆ ರಜೆಯೇ?" ಎಂದು ಕೇಳಿದರೆ—

"ಒಂದು ನಿಮಿಷ ನಿಲ್ಲಿ. ಈ ಪಿಸ್ತೂಲು ಸರಿಯಿದೆಯೋ ಇಲ್ಲವೋ ಎಂದು ನೋಡಬೇಕಾಗಿದೆ. ಸ್ವಲ್ಪ ಹೊತ್ತು ಹಾಗೆಯೇ ಅಲ್ಲಾಡದೇ ನಿಲ್ಲಿ!" —ಆಜ್ಞೆಯಾಗಿತ್ತು ದನಿ.

ಸರಕ್ಕಂತ ದನಿ ಬಂದತ್ತ ತಿರುಗಿದೆ. ಮನುಷ್ಯನೊಬ್ಬ ಕೈಯಲ್ಲಿ ಪಿಸ್ತೂಲು

ಿಡಿದು ಅದನ್ನು ಪರೀಕ್ಷಿಸುವವರಂತೆ ನೋಡುತ್ತಿದ್ದ. ನಡುಗುತ್ತಾ ಹೊರಗಿಣಕಿದೆ. ೂರ್ಯ ಇನ್ನೂ ಮಲಗಿಯೇ ಇದ್ದ. ಕುದುರೆಗಳು ಅತ್ತಿತ್ತ ನೋಡದೆ ರಥ ಳೆಯುತ್ತಲೇ ಇದ್ದುವು. ಇದು ರಾತ್ರಿಯಲ್ಲವೆಂದು ಖಾತ್ರಿಯಾಯಿತು. ಆದಳೆ ಈ ಮಂಪರು ಯಾಕೆ ?

ನನ್ನೊಳಗೆ ನಾನೇ ಕೇಳಿಕೊಂಡದ್ದು ಆತನಿಗೆ ಕೇಳಿಸಿತೋ ಎಂಬಂತೆ ಆತ ಹ ಗಹಿಸಿ ನಕ್ಕ. ನಗೆಯು ಅಡಿಯಲ್ಲಿ ಆತ ನಿದ್ದೆ ಮತ್ತಿನ ಉತ್ಕಂಠತೆಯಿಂದ ರ್ಧ ನಿಮೀಲಿತನೇತ್ರದಿಂದ ನನ್ನನ್ನೇ ನೋಡುತ್ತಿರುವಂತೆ ಕಂಡು ಹಿಮ್ಮೆಟ್ಟಿದೆ. ಕ್ಷಣ ಹೊರಗೆ ಧಾವಿಸಿದೆ.

ಅಟ್ಟಹಾಸದ ನಗೆ ನನ್ನನ್ನಟ್ಟಿಸಿಕೊಂಡು ಬಂತು. ಹಿಂದೆಯೇ ಿಸ್ತೂಲು ಹಾರಿದ ಸದ್ದು. ನನಗೆ ತಾಗಿತೇ, ರಕ್ತ ಚಿಮ್ಮಿತೇ, ನೋಡಲು, ೋವು ಅನುಭವಿಸಲು ಸಮಯವೆಲ್ಲಿ ? ನನ್ನ ಹಿಂದು ಮುಂದೆಲ್ಲ ಜನ. ಾವಿಸುತ್ತಿದ್ದರು. ಎಲ್ಲಿಗೆ ? ಎಲ್ಲಿಗೆ ? ನಿಲ್ಲಿಸಿ ಕೇಳ ಬೇಕೆಂದುಕೊಂಡರೆ ನನಗೇ ಿಲ್ಲಲು ಆಗುತ್ತಿಲ್ಲ.

ಏನೋ ಹೊಟ್ಟೆ ಹಾರಿದಂತಹ ದೊಡ್ಡ ಶಬ್ದ. ಬೆಂಕಿಯ ಜ್ವಾಲೆ ಿಮಿಷದಲ್ಲಿ ಕಟ್ಟಡದಿಂದ ಕಟ್ಟಡಕ್ಕೆ ಹಾರುತ್ತಾ ಯಾವುದೋ ಗುರಿಯನ್ನು ಅವಸರವಾಗಿ ಮುಟ್ಟಿ ಏನನ್ನೋ ಸುಟ್ಟು ಬೂದಿ ಮಾಡಿ ಮಟ್ಟಸ ಮಾಡಲಿಕ್ಕಿದೆ ಎಂಬ ಧಾವಂತದ ಜ್ವಾಲೆ. ಅದರ ಕೆಂಪು ಸೀಳು ನಾಲಗೆಗೆ ಎಟುಕಿದ ಜನರು ಬೆಂದು ಮಾಂಸದ ಮುದ್ದೆಯಾಗುತ್ತಿದ್ದರು. ಆದರೆ ಆಕ್ರಂದನಗಳೇ ಇರುತ್ತಿರಲಿಲ್ಲ. ಬೆಂಕಿ ನಂದಿಸುವವರೂ ಕಾಣಲಿಲ್ಲ. ಶಬ್ದವೇ ಇಲ್ಲದ ವಾತಾವರಣದಲ್ಲಿ ಇಂತಹ ಶಬ್ದಗಳೇ ತುಂಬಿರಬೇಕೆ ? ನಾನೆಲ್ಲಿರುವುದೀಗ ? ನರಭಕ್ಷಕರ ಪರ್ಯಾಯ ದ್ವೀಪದಲ್ಲಿ ಅಲ್ಲವಷ್ಟೆ ?

ಬಲವಂತವಾಗಿ ಕಣ್ಣು ಬಿಡಿಸಿಕೊಳ್ಳುತ್ತಾ ಅತ್ತಿತ್ತ ನೋಡಿದರೆ ಯಾರೋ ಒಂದಷ್ಟು ಜನ ಹರಿಶ್ಚಂದ್ರನ ಮುಖವಾಡ ಧರಿಸಿದವರು ಕಾಣಿಸಿದರು. ಪಕ್ಕದಲ್ಲಿಯೇ ಹರಿಶ್ಚಂದ್ರನ ಮುಖವಾಡಗಳೇ ತುಂಬಿರುವ ಒಂದು ಅಂಗಡಿ. ಅಲ್ಲಿ ಬಿರುಸಿನಿಂದ ವ್ಯಾಪಾರ ನಡೆಯುತ್ತಿತ್ತು. ಮುಖವಾಡ ಕೊಂಡವರು ಅದನ್ನು ತೊಟ್ಟು ಮೂಲೆಯಲ್ಲಿ ಒಟ್ಟಿದ್ದ ಉದ್ದ ಕೋಲುಗಳ ರಾಶಿಯಿಂದ

ಒಂದನೆಳೆದುಕೊಂಡು ಅರೆಬೆಂದ ದೇಹಗಳನ್ನು ಬೆಂಕಿಯೊಳಗೆ ದೂಡುತ್ತಿದ್ದರು. ಮೌನದ ಆ ಹಾಸಿನಲ್ಲಿ ಮಿದುಳು ಛಿಟಿ ಛಿಟಿಲೆನ್ನುವ ಶಬ್ದ. ಕೇಳಲಾರದೆ, ನಾ ಕಿವಿ ಮುಚ್ಚಿಕೊಂಡೆ. ಆದರೆ ಕಣ್ಣಿಗಿದ್ದಂತೆ ಕಿವಿಗೆ ಸ್ವಂತ ಮುಚ್ಚಳವಿದೆಯೇ? ಇದ್ದಿದ್ದರೆ !

ಇಂತಹ ಗಳಿಗೆಯಲ್ಲಿಯೂ ಆಸೆಯೆಂಬುದು ಪುಳಕ್ಕನೆ ಮೇಲೆದ್ದು ಬರುತ್ತದೆಯಲ್ಲ ! ಹೊತ್ತುಗೊತ್ತು ಏನೂ ಇಲ್ಲದೆ ಬರುವುದೆಂದರೆ ಆಶೆಯೊಂದೇ.

ಬೆಂಕಿ ಹಬ್ಬುತ್ತಿತ್ತು. ಹಿಮಾಲಯದಷ್ಟೇ ಎತ್ತರದ ಅಗ್ನಿ ಪರ್ವತವೊಂದು ಈ ಊರಿನಲ್ಲಿದೆಯೆಂದು ಭ್ರಮಿಸುವಷ್ಟು ಎತ್ತರಕ್ಕೇರಿತು.

ಬೆಂಕಿಯ ಗರ್ಭದೊಳಗೆ ಭಯಂಕರಾಕಾರದ ನಿದ್ದೆ ಆರಾಮವಾಗಿ ಕೈಕಾಲು ಚೆಲ್ಲಿ ಗೊರಕೆ ಹೊಡೆಯುತ್ತಾ ಇದ್ದದ್ದನ್ನು ಕಂಡು ಮೆಟ್ಟಿಬೀಳುತ್ತಿದ್ದಂತೆ ಅದು ಸದ್ದೇ ಮಾಡದೆ ಮಗ್ಗುಲು ಮಗುಚಿ ಆಕಳಿಸಿತು. ಬೆಂಕಿಗೂ ಅದನ್ನು ಸುಡಲು ಸಾಧ್ಯವಿಲ್ಲವೆ ಹಾಗಾದರೆ ? ಅಥವಾ ಬೆಂಕಿಯ ಮೂಲವೇ ನಿದ್ದೆಯಿರಬಹುದೇ ? ಸೂರ್ಯನ ಬಲವೂ ಇಲ್ಲದ ಅಂತರಿಕ್ಷದ ಮುಖ ಕಪ್ಪಿಟ್ಟಿತು, ನನ್ನ ಕಣ್ಣೊಳಗೆ ಹೊಗೆ ತೂರಿಕೊಂಡಿತು. ಕಣ್ಣು ಉರಿಯ ತೊಡಗಿತು.

ಮಕ್ಕಳ ನೆನಪು, ಬದುಕಿನ ನೆನಪು, ಕನಸುಗಳ ನೆನಪು—ನೆನಪು ನೆನಪು ನೆನಪುಗಳ ಸರಪಣಿ ನನ್ನನ್ನೆಳೆಯುತ್ತಿತ್ತು. ಆದರೆ ಹೆಜ್ಜೆ ಎತ್ತಿ ಇಡುವುದೊಂದೇ ಗೊತ್ತು. ಒಂದಂಗುಲ ಮುಂದುವರಿಯಲಿಲ್ಲ. ಪ್ರಯತ್ನ ಬಿಡಲೂ ಇಲ್ಲ. ಇದ್ದಬದ್ದ ಶಕ್ತಿಯನ್ನೆಲ್ಲ ಗೋರಿಕೊಂಡು ಒಂದೊಂದೇ ಹೆಜ್ಜೆಯಿಂದ ಒಂದು ಗುಡ್ಡದ ಮೇಲೆ ಹತ್ತಿಕುಳಿತುಕೊಳ್ಳುವುದರೊಳಗೆ ಸತ್ತೇ ಹೋದವರಂತಿದ್ದೆ. ಆ ಪರಿವೆಯೇ ಇಲ್ಲದೆ ಗುಡ್ಡ ಮಾತ್ರ ನಿರ್ಲಿಪ್ತತೆಯಿಂದ ನಿಂತಂತಿತ್ತು. ಅಲ್ಲಾಡದೆ ನಿಂತಿತ್ತು.

ಮುಸುಕುಗಣ್ಣುಗಳೆದುರು ಇಡಿಯ ಊರು ಕಾಣಿಸುತ್ತಿತ್ತು. ದೂರದಲ್ಲಿ ಶಾಲೆಯ ತಲೆಯೂ ಕಾಣಿಸಿತು. ಊರಿನ ಈ ಭಾಗಕ್ಕೆ ಇನ್ನೂ ಬೆಂಕಿಯ

ಬಿಸಿಯೇ ತಾಗಿರಲಿಲ್ಲ. ಶಬ್ದಗಳು ಸತ್ತಿರಲಿಲ್ಲ. ಅಲ್ಲಿಯ ಮಕ್ಕಳು ಬಾಯಿ ಪಾಠ ಒಪ್ಪಿಸುತ್ತಿರುವುದು ಕೇಳಿಸಿತು. ರಕ್ಷಿಸಲಾರದ ವ್ಯಾಕರಣ ಪಾಠವೂ ಅಲ್ಲಿ ನಡೆಯುತ್ತಲಿತ್ತು. ಇಡಿಯ ಶಾಲೆಯ ಕಟ್ಟಡ ಬಾಯಿಪಾಠದ ಗೂಡೆಂಬಂತೆ ತೋರಿತು.

"ಮಕ್ಕಳಿಗೆ ಬೆಂಕಿ ನಂದಿಸುವ ಬಗ್ಗೆ ಹೇಳಿ ಕೊಡಿ. ಹೀಗೆಲ್ಲ ಬೆಂಕಿ ಬೀಳುವ ಪ್ರಮೇಯವೇ ಇಲ್ಲದಂತಹ ವಾತಾವರಣವನ್ನು ಹೇಗೆ ಸೃಷ್ಟಿಸ ಬಹುದೆಂದು ಹೇಳಿ ಕೊಡಿ. ಬೆಂಕಿಯ ಅಡಿಯಲ್ಲಿ ಅರೆಗಣ್ಣಿನ ನಿದ್ದೆಯಿದೆ. ಅದನ್ನು ಸಾಯಿಸುವುದು ಹೇಗಂತ ಹೇಳಿ ಕೊಡಿ. ಕೊನೇ ಪಕ್ಷ ನಮ್ಮ ಮಕ್ಕಳಿಗೆ ಬೆಂಕಿ ಬಿದ್ದ ದಾರಿಯನ್ನು ತಪ್ಪಿಸಿ ಬೇರೆ ದಾರಿಯಲ್ಲಿ ಮನೆಗೆ ಹೋಗಲಿಕ್ಕಾದರೂ ಹೇಳಿ ಕೊಡಿ ...."

–ಇನ್ನೂ ಏನೆಲ್ಲಾ ಕಿರುಚಿವೆನೋ. ನನ್ನ ನಿದ್ದೆ ಕಣ್ಣು ಬಾಯಿ ಮುಚ್ಚಿಸಿ ಬಿಟ್ಟಿತು.

ಒಬ್ಬಾಡಿ ಸ್ವಲ್ಪ ಬಿಡಿಸಿಕೊಂಡು ಚಡಿಯಲ್ಲಿ ಮತ್ತೆ ಇಣುಕಿದೆ. ಗುಡ್ಡದ ಮೇಲೆಯೂ ಕೆಳಗೆ ಬೇಣದಲ್ಲಿಯೂ ಇತ್ತಿನ ಧಾತಿಲ್ಲದೆ ಜಾನುವಾರುಗಳು ಮೇವಿನಲ್ಲಿ ಮಗ್ನವಾಗಿದ್ದವು. ಯಾರದೂ ಮನೆಯ ಮಾಡಿನ ಮೇಲೆ ಬೆಕ್ಕೊಂದು ಕಣ್ಣು ಮುಚ್ಚಿಕೊಂಡು ಸನ್ಯಾಸಿಯಂತೆ ಕುಳಿತಿತ್ತು. ಒಂದು ಮನೆಯ ಅಂಗಳದಲ್ಲಿ ನಾಯಿ ತಾನು ಹುಟ್ಟಿದ್ದೇ ಬೊಗಳುವುದಕ್ಕೆ ಎಂಬಂತೆ ಒಂದೇ ಸಮನೆ ಬಾಯಿ ಕಳೆದಿತ್ತು.

ಕಾಲ ಭೂತದಂತೆ ಗಪ್‌ಚುಪ್ಪಾಗಿ ಸರಿಯುತ್ತಿತ್ತು.

....

ಎಲ್ಲಿಂದಲೋ ಚೆಂಡೆ ಬಡಿತ. ನಿದ್ದೆ ಮಾಡುವವ ಎದ್ದು ಕುಪ್ಪೆಟ್ಟು ಹಾರಬೇಕು ಹಾಗೆ ನಾಟಕದ ಸಾತೊಂದು 'ಎಚ್ಚರೆಚ್ಚರ, ದಾರಿ ನಿಚ್ಚಳ' ಎಂದೆಲ್ಲಾ ಮುಂದುವರಿದಿತ್ತು. ಆದರೆ ಮನೆಬಾಗಿಲುಗಳೆಲ್ಲ ಮುಚ್ಚಿದ್ದವು. ಕರಿಕವಿದ ಆಕಾಶ ದಿಂದಾಗಿ ಹೊತ್ತು ಎಷ್ಟಾಯಿತು, ಸಂಜೆಯೇ, ರಾತ್ರಿಯೇ, ಮಧ್ಯಾಹ್ನವೇ ಎಂಬುದೂ ತಿಳಿಯದೆ ಚಡಪಡಿಸಿದೆ. ಕ್ರಾಂತಿ ಶಾಂತಿ ಇತ್ಯಾದಿಗಳ ಅಂತರ್ಮುಖಗಳು ಬಹಿರ್ಮುಖಗಳು ಗಸ್ತು ತಿರುಗುತ್ತಲೇ ಇದ್ದವು. ಬೆಂಕಿ ಹಬ್ಬುತ್ತಾ ಇತ್ತು. ಒಂದೆಡೆ ಜನರು ಆಹುತಿಯಾಗುತ್ತಲೇ ಇದ್ದರು. ಈ ನಡುವೆ ಬೆಂಕಿಯಲ್ಲಿ ಮೈ ಕಾಯಿಸಿ

ಕೊಳ್ಳುತ್ತಾ ತುರುಕಾಲಿನಲ್ಲಿ ಆಲಸ್ಯದ ಮೊಟ್ಟೆಗಳಂತೆ ಕುಳಿತವರನ್ನು ಕಂಡು ಮರಗಟ್ಟುವಂತಾಯಿತು.

ಈ

ಎಲ್ಲರ ನಡುವೆಯೂ

ಮುಚ್ಚಟೆಯಾಗಿರುವ ನಿಶ್ಯಬ್ದತೆ. ಅನಂತ ಶಯನೋತ್ಸವದಲ್ಲಿ ನಿದ್ದೆ !

ಅದು ಯಾರು, ಓ ಅಲ್ಲಿ ?

ಆ ಕರಟಲು ಹುಡುಗಿಯಲ್ಲವೆ ?

ದಿಡುಗುಟ್ಟಿಕೊಂಡು ಓಡಿ ಬರುತ್ತಿತ್ತು. ಬೆಂಕಿ ಅದನ್ನು ಬೆರೆಸಿಕೊಂಡು ಬರುತ್ತಿತ್ತು. "ಬಾ, ಬಾ. ಓಡಿ ಬಾ ಅಯ್ಯೋ ಬಾ ಬೇಗ"—ಕರೆಯುತ್ತಿದ್ದಂತೆಯೇ, ನೋಡುತ್ತಿದ್ದಂತೆಯೇ, ಬೆಂಕಿಯ ನಾಲಗೆ—ರೂಪಕಳೆದು ರೇಷೆ ಮಾತ್ರ ಉಳಿದಿದ್ದ ಹಸಿರು ಒಣಗಿದ್ದ ಆ ಜೀವವನ್ನು ಹಿಡಿದು ಹುರಿದು ಕರುಕುರು ಜಗಿದು ನುಂಗಿ, ಊರು ಚೊಕ್ಕ ಮಾಡಿದೆನೆಂಬ ತೃಪ್ತಿ ಚಪ್ಪರಿಸಿತು. ಆ ಹುಡುಗಿಯೋ, ಚೂರೂ ಕಿರುಚಾಡಲಿಲ್ಲ. ಉಸಿರಿದ್ದಷ್ಟು ಹೊತ್ತೂ ಆ ಬೆಂಕಿಯಿಂದ ತಪ್ಪಿಸಿಕೊಳ್ಳಲು ಓಡಿಬಂತು ಅಷ್ಟೆ.

ನಾ ಬೊಬ್ಬೆ ಹೊಡೆದೆ.

"ಊರು ಸ್ಮಶಾನವಾಗುತ್ತಾ ಇದೆ. ಮಕ್ಕಳನ್ನು ಮೊದಲು ಇಲ್ಲಿಂದ ಹೊರಡಿಸುವ. ಭವಿಷ್ಯವನ್ನು ಮೊದಲು ಬಚಾವು ಮಾಡುವ. ಬನ್ನೀ....ಬನ್ನೀ......" —ನನ್ನ ಬೊಬ್ಬೆಗೆ ಇತರ ಸ್ವರಗಳೇ ಕೂಡಿ ಬರಲಿಲ್ಲ. ನಾ ಬಿಕ್ಕಿ ಬಿಕ್ಕಿ ಅತ್ತೆ. ಆದರೆ ಕಣ್ಣೀರು ತೊಟ್ಟಿಕ್ಕಲು ಕೂಡ ಇಲ್ಲ. ನನ್ನಂತೆ ಅನೇಕರು, ಪೇಟೆ ಬೀದಿಯಲ್ಲಿ ಹಿಂದೆ ಮುಂದೆ ಇದ್ದವರು, ಸುಟ್ಟು ಹೋಗದೆ ಉಳಿದವರು ಎಲ್ಲೆಲ್ಲೋ ಮೂಲೆಯಲ್ಲಿ ನನ್ನಂತೆಯೇ ಸ್ವರವಿಲ್ಲದೆ ಬೊಬ್ಬಿಡುತ್ತಿರಬಹುದಲ್ಲವೇ ?

ಮೋಡದ ಗೊದಡಿ ಆಕಾಶವನ್ನು ಪೂರ್ತಿ ಮುಚ್ಚಿಯೇ ಬಿಟ್ಟಿತ್ತು

ಆಕಾಶವೆಂಬುದೇ ಇಲ್ಲ ಎನ್ನುವಂತಹ ಭ್ರಮೆ ಕವುಚುವಂತೆ. ನುಳೆ ಮಾತ್ರ ಒಂದು ಹನಿಯೂ ಇಲ್ಲ. ಈ ಗುಡ್ಡ ಮೋಡವನ್ನು ತಟ್ಟಬಾರದೇ ?

ಗುಡ್ಡದ ಕೆಳಗೆ ಕುರಿ ಮಂದೆಯೊಂದು ಸಾಲಾಗಿ ಹೋಗುತ್ತಿತ್ತು ಪ್ರಶಾಂತವಾಗಿ, ಶಲಿತ್ಸ್ಸಿಸಿ, ಯಾವ ಬಿಸಿಯೂ ತಟ್ಟದೆ.

ನಾ ಒಂದೋ ಎಚ್ಚರಾಗಬೇಕು. ಇಲ್ಲ ಪೂರ್ತಿ ನಿದ್ದೆಯೊಳಗೆ ನುಸುಳಬೇಕು. ಅದೂ ಅಲ್ಲ ಇದೂ ಅಲ್ಲದ ಸ್ಥಿತಿಯಲ್ಲಿ ಇನ್ನು ಹೆಚ್ಚು ಹೊತ್ತು ಇರಬಾರದು. ನಾ ಎಚ್ಚರಾಗುತ್ತೇನೆ.— ಎಂಬ ದೃಢತೆಯಿಂದ ನಿದ್ದೆಯೋಡಿ ಸಿಕೊಳ್ಳಲು ಕೊನೆಯ ಅಸ್ತ್ರವಾಗಿ ಕುರಿಗಳ ಲೆಕ್ಕಕ್ಕೆ ತೊಡಗಿದೆ. ಒಂದು. ಎರಡು. ಮೂರು ....

ಎಣಿಸುತ್ತಿದ್ದಂತೆ ಚಿಕ್ಕಂದಿನಲ್ಲಿ ಕಲಿತ "ನಿದ್ದೆ ಬರಲು" ಎಂಬ ಪದ್ಯದ ಸಾಲುಗಳು ನೆನಪಾದವು. ಬೆದರಿ ತಕ್ಷಣ ಲೆಕ್ಕ ನಿಲ್ಲಿಸಿದೆ, ಆದರೆ ಅಷ್ಟರೊಳಗೆ ಕುರಿಲೆಕ್ಕದ ಸಾಲನ್ನು ಅನುಸರಿಸಿ ನಿದ್ರಾರಾಕ್ಷಸಿಯ ಹೆಜ್ಜೆ ಹತ್ತಿರ ಹತ್ತಿರ ಬರುತ್ತಿರುವುದರ ಅರಿವಾಯಿತು. ತಪ್ಪಿಸಿಕೊಂಡು ಓಡ ಬೇಕೆಂದರೆ ದಿಕ್ಕೆ ಕಾಣದಂತೆ ಕಣ್ಣೆವೆಗಳು ಭಾರವಾದವು.

ನಿರೀಕ್ಷೆ ಒಂದು ಮೂಲೆಯಲ್ಲಿ ಕುಳಿತು ತಾನೇ ಕಟ್ಟಿದ ಹಾಡನ್ನು ತನ್ನಷ್ಟಕ್ಕೇ ಗುನುಗುತ್ತಿತ್ತು.

ಮಲಗಿರುವ ಶಾಲೆಗಳಿಂದ ಮಕ್ಕಳು
ಹೊರಗೋಡಿ ಬಂದಾವು ರೆಪ್ಪೆ ಬಾಗಿಲ ತೆರೆದು
ಆಡುತಾಡುತ ಗುಡ್ಡ ಅಲುಗಾಡಿಸಿಯಾವು.
ಗುಡ್ಡ ಅಲುಗಾಡಿ ಮೋಡದ ಬೆನ್ನು ತಟ್ಟಿ
ಮೋಡವೆದ್ದು ಗುಡುಗಾಡಿ ನಿದ್ರಾರಾಕ್ಷಸಿಯ ಅಟ್ಟಿ
ಸುರಿದೀತು ಮಳೆಯ ಮಂತ್ರಜಲ.
ಅಡಗಿ ದಾವಾನಲ
ಚಿಗುರೀತು ಭೂಮಿಯೊಡಲು
ತಟಪಟ ಹನಿಗಳ ಜಾರುಬಂಡಿಯಾಟದ ಗಲಾಟೆಗೆ
ಮೈ ಮುರಿದು ಎದ್ದಾನು ಸೂರ್ಯ

ಹರಡಿ ಬೆಳಕು, ಮರ ಮರ್ಮರಿಸಿ
ಅರಳಿ ಹೂವು ಹಕ್ಕಿಗಳ ಚಿಲಿಪಿಲಿ
ಎಚ್ಚರದ ಗಾಳಿ ಸವರಿ ಅಭಯ
ಎಚ್ಚರಾಗಲು ಸೋತ ನನ್ನನೆಚ್ಚರಿಸಲು
ಎಚ್ಚರಾಗುವೆ ನಾನು ನೋಡಲೆಚ್ಚರದಿಂದ
ಎಚ್ಚರದ ಜಗವನ್ನು
ಎಚ್ಚರಾಗುವೆ ನಾನು, ನಾನೆಚ್ಚರಾಗುವೆ, ಎಚ್ಚರಾಗುವೆ ... .

ಕುಳಿತಲ್ಲೇ ಓಲಾಡುತ್ತಾ ನಿರೀಕ್ಷೆ ರಾಗವಾಗಿ ಸಣ್ಣಗೆ ಗುನುಗುತ್ತಿದ್ದಂತೆಯೇ

ನಾ ನಿಧಾನವಾಗಿ ಕುಸಿದೆ—ಆಸೆ ಭರವಸೆಯ ಬೇರನ್ನು ಗಟ್ಟಿಯಾಗಿ ಹಿಡಿದುಕೊಂಡೆ.

ಅನುಭವ

ಸಪ್ತಸಾಗರದಾಚೆ

○ **ಪಾಂಡುರಂಗ ಹೆಗಡೆ**

ಜಗತ್ತಿನಲ್ಲಿ ವಿಕಾಸಹೊಂದಿರುವ ಔದ್ಯಮಿಕ ದೇಶಗಳ ತವರೂರಾದ ಯುರೋಪನ ಹಾಲಂಡ್ ದೇಶದಲ್ಲಿ ಎರಡು ತಿಂಗಳದ ಅಧ್ಯಯನದಲ್ಲಿ ಭಾಗವಹಿಸುವ ಅವಕಾಶ ಒದಗಿ ಬಂದಿತ್ತು. ಬದಲಿ ಶಕ್ತಿ ಮೂಲಗಳ ಬಗ್ಗೆ ಇದ್ದ ಈ ಅಧ್ಯಯನದ ಜೊತೆ ಅಲ್ಲಿಯ ದೇಶದ ಜನರ ಸಂಸ್ಕೃತಿಯನ್ನು ಹತ್ತಿರದಿಂದ ನೋಡುವ ಅವಕಾಶ ಒದಗಿ ಬಂದಿತ್ತು.

ಮುಂಬಯಿಯಲ್ಲಿ ವಿಮಾನ ಏರಿ ಕುಳಿತಾಗ ಮೊದಲನೆಯ ಬಾರಿ ಪಯಣಿಸುವಾಗ ಇರುವ ದುಗುಡ, ಕಾತರ ಮನಸ್ಸನ್ನು ಆವರಿಸಿತ್ತು. ಬಾನಿನಿಂದ ಕೆಳಗಡೆ ಕಣ್ಣುಹಾಯಿಸಿದಾಗ ಕಂಡದ್ದು ವಿಶಾಲವಾದ ಮರುಭೂಮಿ. ಅಲ್ಲಲ್ಲಿ ತೈಲ ಸಾಗಿಸಲು ಹಾಕಿರುವ ಕೊಳವೆಗಳೂ ಕಾಣಿಸುತ್ತಿದ್ದವು. ಮರುಭೂಮಿಯನ್ನು ದಾಟಿ ಮೆಡಿಟರೇನಿಯನ್ ಸಮುದ್ರದ ನೀಲಿ ನೀರಿನ ದಡದಲ್ಲಿರುವ ಸುಂದರವಾದ ಪಟ್ಟಣ ಎಥೆನ್ಸ್‌ದಲ್ಲಿ ವಿಮಾನ ಇಳಿಯಿತು. ಗ್ರೀಸ್ ದೇಶದ ರಾಜಧಾನಿಯಲ್ಲಿ ಇಳಿದು ವಿಮಾನ ನಿಲ್ದಾಣದಲ್ಲಿ ಅಡ್ಡಾಡಿ ಸ್ವಚ್ಛವಾದ ಗಾಳಿಯನ್ನು ಸೇವಿಸಿ ವಿಮಾನಯಾನ ಮಾಡಲು ಮರಳಿದೆವು.

ಮೆಡಿಟರೇನಿಯನ್ ಸಮುದ್ರದ ಮಧ್ಯದಲ್ಲಿರುವ ಚಿಕ್ಕ ಪುಟ್ಟ ದ್ವೀಪಗಳ ಸೊಬಗನ್ನು ಸವಿಯುತ್ತಿದ್ದ ಹಾಗೆ ಯುರೋಪ್ ಖಂಡದ ಭವ್ಯವಾದ ಹಿಮಾಚ್ಛಾದಿತ ಆಲ್ಪ್ಸ್ ಪರ್ವತಮಾಲೆ ಗೋಚರಿಸತೊಡಗಿತು. ಏಕಾಗ್ರಚಿತ್ತನಾಗಿ ಆ ಹಿಮ ಶಿಖರಗಳ, ಹೆಪ್ಪುಗಟ್ಟಿದ ಸರೋವರದ ದೃಶ್ಯವನ್ನು ಸವಿಯತೊಡಗಿದೆ. ಹಿಮ ಕಣಿವೆಯ ಮಧ್ಯದಲ್ಲಿರುವ ಚಿಕ್ಕಪಟ್ಟಣಗಳು, ಅಲ್ಲಲ್ಲಿ ಹಿಮಕರಗಿದ ದೃಶ್ಯವನ್ನು ನೋಡುತ್ತಾ ಮೈಮರೆತೆ. ಸ್ವಿಟ್‌ಜರಲಂಡ್‌ನ ಈ ಸೊಬಗನ್ನು ಕಣ್ಣುಗಳಲ್ಲಿ ತುಂಬಿಕೊಳ್ಳುತ್ತಿದ್ದ ಹಾಗೆ ಇವೆಲ್ಲ ಮರೆಯಾಗಿ ಫ್ರಾನ್ಸದೇಶದ ಮೈದಾನ ಪ್ರದೇಶದ ದರ್ಶನವಾಯಿತು. ದಟ್ಟವಾದ ಮೋಡದ ಮರೆಯಿಂದ ಪೇರಿಸ್ ಶಹರದ ಭವ್ಯ ದೃಶ್ಯವನ್ನು ನೋಡುತ್ತಿದ್ದ ಹಾಗೆ ವಿಮಾನ ಪೇರಿಸ್ ವಿಮಾನ ನಿಲ್ದಾಣದಲ್ಲಿ ಇಳಿಯಿತು.

ವಿಮಾನ ನಮ್ಮ ಕೊನೆಯ ತಾಣವಾದ ಹಾಲಂಡ್‌ನ ಅಮಸ್ಟರಡಮ್ ಶಹರದತ್ತ ಸಾಗುತ್ತಿದ್ದ ಹಾಗೆ ನನ್ನ ಮನಸ್ಸಿನ ದುಗುಡ ಹೆಚ್ಚಾಯಿತು. ಹೊಸ ದೇಶ, ಹೊಸ ಜನರು. ಅಲ್ಲಿ ಇಳಿದು ನಾನು ಅಧ್ಯಯನಕ್ಕಾಗಿ ಬಂದ ವಿಶ್ವವಿದ್ಯಾಲಯವನ್ನು ತಲುಪಬೇಕಾಗಿತ್ತು. ಕೊನೆಯ ತಾಣದಲ್ಲಿ ವಿಮಾನ ಇಳಿದಾಗ ಮಂಜುಕವಿದ ವಾತಾವರಣ. ಅತ್ಯಾಧುನಿಕ ವಿಮಾನ ನಿಲ್ದಾಣ ನನ್ನನ್ನು ದಂಗುಬಡಿಸಿತು. ನನ್ನ ಸಾಮಾನನ್ನು ತೆಗೆದುಕೊಂಡು ಹೊರ ಬರುತ್ತಿದ್ದ ಹಾಗೆ ವಿಚಾರಣೆಗಾಗಿ ಇದ್ದ ಸ್ಥಳದಲ್ಲಿ ನಾನು ತಲುಪಬೇಕಾದ ಸ್ಥಳ—ಎನ್‌ಸ್ಕೆದೆ ಕುರಿತು ವಿಚಾರಿಸಿದೆ. ಅವರು ನೇರವಾಗಿ ನನ್ನ ಸಹಾಯಕ್ಕೆ ಬಂದು ವಿಶ್ವವಿದ್ಯಾಲಯಕ್ಕೆ ಟೆಲಿಫೋನ್ ಮಾಡಿದರು. ನಮಗಾಗಿ ವಿಮಾನ ನಿಲ್ದಾಣದಲ್ಲಿ ವಾಹನ ಕಾಯುತ್ತಿರುವ ವಿಷಯ ತಿಳಿಸಿದರು. ವಾಹನದಲ್ಲಿ ಕುಳಿತುಕೊಂಡು ಹಾಲಂಡ್‌ನ ಮತ್ತೊಂದು

ತುದಿಯಲ್ಲಿರುವ ಎನ್‌ಸ್ಕದೆಯತ್ತ ಪಯಣ ಹೊರಟೆವು.

ಹಾಲೆಂಡ್‌ಗೆ ಬಂದು ಒಂದು ವಾರವಾಗಿತ್ತು. ವಿಶ್ವವಿದ್ಯಾಲಯದ ಪರಿಸರಕ್ಕೆ ಹೊಂದಿಕೊಳ್ಳ ತೊಡಗಿದ್ದೆ. ಅಧ್ಯಯನಕ್ಕಾಗಿ ಬಂದ ವಿವಿಧ ದೇಶಗಳ ಜನರಿಗೆ ಉಳಿದುಕೊಳ್ಳಲು ಅಂತರರಾಷ್ಟ್ರೀಯ ವಸತಿ ಗೃಹದಲ್ಲಿ ಏರ್ಪಾಡು ಮಾಡಲಾಗಿತ್ತು. ಪ್ರತಿಯೊಬ್ಬರಿಗೂ ಒಂದು ಕೋಣೆ,ಪ್ರತಿ ಹತ್ತು ಜನರಿಗೆ ಒಂದು ಸಾಮೂಹಿಕ ಅಡುಗೆ ಮನೆ. ಸುಸಜ್ಜಿತವಾದ ವಸತಿಯ ಕೋಣೆ–ಪಂಚತಾರಾ ಹೋಟಲಿಗೆ ಸರಿಸಾಟಿಯಾಗಿತ್ತು. ಇಪ್ಪತ್ತು ಮಹಡಿಯ ಈ ಕಟ್ಟಡವು ಭವ್ಯವಾದ ಹೋಟಲಿನ ಹಾಗಿತ್ತು. ಮಲೆನಾಡಿನ ಸಾಮಾನ್ಯ ಹಳ್ಳಿಯಿಂದ ಬಂದ ನನಗೆ ಈ ಭವ್ಯ ವಾತಾವರಣಕ್ಕೆ ಹೊಂದಿ ಕೊಳ್ಳುವುದು ದೊಡ್ಡ ಸಮಸ್ಯೆಯಾಗಿತ್ತು. ಮೆತ್ತನೆಯ ಸುಪ್ಪತ್ತಿಗೆಯ ಮೇಲೆ ಮಲಗಲು ಸಾಧ್ಯವಿಲ್ಲ ಎನಿಸಿದಾಗ ಕಂಬಳಿಯನ್ನು ನೆಲದ ಮೇಲೆ ಹಾಸಿ ಮಲಗತೊಡಗಿದೆ.

ಎನ್‌ಸ್ಕದೆ ಒಂದು ಸಣ್ಣ ಪಟ್ಟಣ. ಬಂದ ಮೊದಲು ಇಲ್ಲಿಯ ಸ್ವಚ್ಛತೆ, ನಿಯಮವನ್ನು ಅನುಸರಿಸಿ ಇರುವೆಗಳಂತೆ ಚಲಿಸುವ ವಾಹನಗಳು ಗಮನ ಸೆಳೆಯುತ್ತಿದ್ದವು. ಆದರೆ ಕ್ರಮೇಣ ಇಲ್ಲಿಯ ಯಾಂತ್ರಿಕ ಜೀವನದಲ್ಲಿನ ಟೊಳ್ಳುತನದ ಅರಿವಾಗಲು ಹೆಚ್ಚು ಸಮಯ ಹಿಡಿಯಲಿಲ್ಲ. ಕಸ ಗುಡಿಸಲು, ಬಟ್ಟೆ ತೊಳೆಯಲು ತೊಳೆದ ನಂತರ ಒಣಗಿಸಲು ಎಲ್ಲದಕ್ಕೂ ಯಂತ್ರ! ಕಂಪ್ಯೂಟರ್‌ನ ಗುಂಡಿ ಒತ್ತಿದರೆ ನಮಗೆ ಬೇಕಾದ ಮಾಹಿತಿ ಕ್ಷಣದಲ್ಲಿ ಲಬ್ಧ. ಎಲ್ಲವೂ ಯಂತ್ರದಿಂದ ನಡೆಯುವ, ನಡೆಸಲ್ಪಡುವ ಜಗತ್ತು!

ತರಕಾರಿ ಕೊಳ್ಳಲು ಹೋದರೆ ಕಣ್ಣಿಗೆ ಅಂದವಾಗಿ ಕಾಣುವ ಹಾಗೆ ಪ್ಲೇಸ್ಟಿಕ್ ಚೀಲಗಳಲ್ಲಿ ಪೇರಿಸಿಟ್ಟ ವಸ್ತುಗಳು ಎಲ್ಲೆಲ್ಲೂ ಕಾಣಸುತ್ತವೆ. ಆದರೆ ಈ ಅಂದ ಚಂದದ ಬೆಡಗಿಗೆ ಮರುಳಾಗಿ ಖರೀದಿಸಿದ ತರಕಾರಿಗೆ ರುಚಿ ಇಲ್ಲದಿರುವುದನ್ನು ಕಂಡುಕೊಂಡೆ. ತಂಪಾದ ಹವಾನಿಯಂತ್ರಿತ ಕೊಠಡಿಯಲ್ಲಿ ತಿಂಗಳುಗಟ್ಟಲೆ ಇಟ್ಟಿರುವ ಈ ತರಕಾರಿಯನ್ನು ಸಾವಿರಾರು ಮೈಲಿ ದೂರದ ದೇಶದಿಂದ ಆಮದು ಮಾಡಿ ಕೊಳ್ಳುತ್ತಿದ್ದರು, ಜೀವನದ ಪ್ರತಿಯೊಂದು ಹಂತದಲ್ಲಿ ಕೃತ್ರಿಮ ವಸ್ತುವಿನ ಬಳಕೆ. ತಾವು ವಾಸಿಸುವ ಕಟ್ಟಡವನ್ನು ಸಂಪೂರ್ಣವಾಗಿ ಕೃತ್ರಿಮವಾಗಿ ಬಿಸಿ ಮಾಡಿ ಬದುಕುವ ಇಲ್ಲಿಯ ಜನರ ಬದುಕನ್ನು ಅರ್ಥ ಮಾಡಿ ಕೊಳ್ಳಲು ಸಾಧ್ಯವಾಗದೆ ತೊಳಲಾಡಿದೆ.

ವಿಶ್ವವಿದ್ಯಾಲಯದಲ್ಲಿಯೂ ಸಹ ಇತರ ಜನರ ಜೊತೆ ಮಾತುಕತೆ ನಡೆದಾಗ ಅದು ಕೇವಲ ವ್ಯಾಪಾರ ಸಂಬಂಧದ ಸಂವಾದವೆನ್ನುವ ಹಾಗೆ ನಡೆಯುತ್ತಿದ್ದುದನ್ನು ಗಮನಿಸಿದೆ. ಇಲ್ಲಿಯ ಯಾಂತ್ರಿಕ ಜೀವನದಲ್ಲಿ ಮನುಷ್ಯ ತನ್ನ ಮತ್ತು ಇತರ ಮನುಷ್ಯರ ಜೊತೆಯಲ್ಲಿನ ಸಂಬಂಧದ ಮಾನವೀಯತೆಯನ್ನೇ ಕಳೆದುಕೊಂಡ ಹಾಗೆ ನನಗೆ ಅನಿಸಿತು. ಭೋಗವಾದಿಗಳಾದ ಇಲ್ಲಿಯ ಜನರ ಮನಸ್ಸನ್ನು ಆಕರ್ಷಿಸುವ ಜಾಹಿರಾತು ಎಲ್ಲೆಡೆಗೆ ಗೋಚರಿಸುತ್ತಿದ್ದವು. ಇವರ ಮಿತಿ ಇಲ್ಲದ ಆಸೆಗಳನ್ನು ತೃಪ್ತಿಗೊಳಿಸಲು ಪೇಟೆಯಲ್ಲಿ ತರತರಹದ ವಸ್ತುಗಳಿದ್ದವು. ಆದರೂ ಸಹ ಇಲ್ಲಿಯ ಜನರ ಮುಖದ ಮೇಲೆ ಸಂತೃಪ್ತಿಯ ಛಾಯೆ ಇರಲಿಲ್ಲ. ನಿಸರ್ಗದ ಜೊತೆ ನೇರವಾದ ಸಂಬಂಧವನ್ನು ಕಳೆದುಕೊಂಡ ಈ ಜನರು ಮಾನವೀಯ ಸಂಬಂಧದ ಮಧುರತ್ವವನ್ನು ಕಳೆದುಕೊಂಡಿರುವರೇನೋ ಎಂಬ ಸಂಶಯ ಮೂಡಿತು.

ವಸತಿಗೃಹದ ಭವ್ಯ ವಾತಾವರಣವನ್ನು ತೊರೆದು ಹಾಲಂಡ್‌ನ ಮಧ್ಯಮ ವರ್ಗದ ಮನೆಯೊಂದರಲ್ಲಿ ಬಾಡಿಗೆದಾರನಾಗಿ ಬಂದು ಉಳಿದೆನು. ಮನೆಯ ಮಾಲಿಕ ರಾನ್ ನನ್ನ ಹಾಗೆ ಯುವಕ. ವಿಶ್ವವಿದ್ಯಾಲಯದಲ್ಲಿ ಕಂಪ್ಯೂಟರ್ ಇಂಜಿನಿಯರ್. ಪಟ್ಟಣದ ಹೊರವಲಯದಲ್ಲಿನ ಸಾಮಾನ್ಯವಾದ ಹಂಚಿನ ಮನೆ. ಅಲ್ಲಿಯ ಜನಾಂಗದ ಮಧ್ಯೆ ವಾಸ ಮಾಡಿ ಅವರ ಜೀವನವನ್ನು ಹತ್ತಿರದಿಂದ ನೋಡುವ ಅವಕಾಶ ದೊರೆಯಿತು.

ಈ ಮನೆಯಿಂದ ವಿಶ್ವವಿದ್ಯಾಲಯಕ್ಕೆ ಹೋಗಲು ಹಳೆಯ ಸೈಕಲ್ ಖರೀದಿಸಿದೆ. ಸಮತಟ್ಟಾದ ಹಾಲಂಡ್‌ದಲ್ಲಿ ಸೈಕಲ್ ಸವಾರಿ ಮಾಡುವ ನನ್ನ ಕನಸು ನನಸಾಯಿತು. ಸೈಕಲ್ ಸವಾರಿ ಮಾಡಲು ಪಟ್ಟಣ ಮತ್ತು ಹಳ್ಳಿಗಳಲ್ಲಿ ಬೇರೆ ಸೈಕಲ್ ರಸ್ತೆಯನ್ನೇ ಮಾಡಿರುತ್ತಾರೆ. ಬಿಡುವಿದ್ದಾಗ ಸೈಕಲ್ ಏರಿ ಸುತ್ತಲಿನ ಪರಿಸರವನ್ನು ನೋಡತೊಡಗಿದೆ.

ರಾನ್ ತನ್ನ ಮನೆಯಲ್ಲಿನ ಸ್ವಚ್ಛತೆಯ ನಿಯಮದ ಬಗ್ಗೆ ಪರಿಚಯಿಸಿದ. ಭಾರತದ ಬಗ್ಗೆ ಅರಿತುಕೊಳ್ಳುವ ಹಂಬಲವಿದ್ದ ಅವನು ಬಹುಬೇಗನೆ ನನ್ನ ಗೆಳೆಯನಾದ. ನಿಧಾನವಾಗಿ ತನ್ನ ಕುಟುಂಬದ ಕಥೆಯನ್ನು ಅರುಹಿದ.

ವಿಶಾಲವಾದ ಮನೆಯಲ್ಲಿ ರಾನ್ ಒಬ್ಬನೇ ವಾಸವಾಗಿದ್ದ. ಅವನ ಹೆಂಡತಿಯು ವಿವಾಹ ವಿಚ್ಛೇದನ ಪಡೆದು ಎರಡು ವರ್ಷಗಳಾಗಿದ್ದವು. ಅವನ

ತಂದೆ ಮತ್ತು ತಾಯಿ ವಯಸ್ಸಾದವರಿಗಾಗಿ ಇರುವ **Old Age Home** ನಲ್ಲಿ ವಾಸಮಾಡುತ್ತಿದ್ದರು. ಆಗಾಗ ಅವರು ಇವನನ್ನು ಕಾಣಲು ಬರುತ್ತಿದ್ದರು. ಹಾಲಂಡ್ ಮತ್ತು ಯುರೋಪಿನ ಇತರ ದೇಶಗಳಲ್ಲಿ ಹಿರಿಯರಿಗಾಗಿ ಸರ್ಕಾರದವರು ಬೇರೆ ವ್ಯವಸ್ಥೆಯನ್ನೇ ಏರ್ಪಡಿಸಿರುತ್ತಾರೆ. ಕುಟುಂಬದ ಜೀವನದಲ್ಲಿ ಔದ್ಯಮಿಕ ಕ್ರಾಂತಿಯ ಜೊತೆ ಸಾಮಾಜಿಕವಾಗಿಯೋ ಪರಿವರ್ತನೆ ಆಗಿದೆ. ಮಕ್ಕಳು ಹದಿವಯಸ್ಸಿನವರಾದ ನಂತರ ತಂದೆ-ತಾಯಿಯಿಂದ ಬೇರೆ ಜೀವಿಸಲು ಆರಂಭಿಸುವರು. ಮದುವೆಯಾದ ನಂತರ ಜೊತೆಗೆ ವಾಸ ಮಾಡುವವರು ಹೆಂಡತಿ ಮತ್ತು ಚಿಕ್ಕಮಕ್ಕಳು ಮಾತ್ರ. ಇತ್ತೀಚಿನ ವರ್ಷಗಳಲ್ಲಿ ವಿವಾಹ ವಿಚ್ಛೇದನ ಹೆಚ್ಚುತ್ತಿದ್ದ ಹಾಗೆ ಬೇರೆ ಇರುವ ಮಹಿಳೆಯರಿಗೆ, ಚಿಕ್ಕಮಕ್ಕಳಿಗೆ ಸರಕಾರವು ಧನಸಹಾಯ ನೀಡುತ್ತಿದೆ. ಇಲ್ಲಿ ನಿರುದ್ಯೋಗತನವೂ ಹೆಚ್ಚಾಗುತ್ತಿದ್ದು ಅವರಿಗೂ ಸಹ ಜೀವನ ಸಾಗಿಸಲು ಸರಕಾರ ಹಣ ನೀಡುತ್ತದೆ. ಕುಟುಂಬದ ಪ್ರತಿಯೊಬ್ಬ ಸದಸ್ಯನ ಜೊತೆ ಔಪಚಾರಿಕತೆಗೆ ಹೆಚ್ಚಿನ ಆಧ್ಯತೆ. ಆತ್ಮೀಯತೆಗಿಂತ ಹೆಚ್ಚಾಗಿ ವ್ಯಾಪಾರಿ ಭಾವನೆ ಇದ್ದ ಹಾಗೆ ಅನಿಸಿತು. ಕುಟುಂಬದ ಸದಸ್ಯರಲ್ಲಿ ಸಾಮರಸ್ಯದ ಕೊರತೆಯಿಂದಾಗಿ ಇಂದು ಈ ಔದ್ಯಮಿಕ ದೇಶಗಳಲ್ಲಿ ಕೌಟುಂಬಿಕ ಘಟಕದ ಮಹತ್ವ ಕಡಿಮೆಯಾಗಿದೆ ಬಹುಶಃ ಇದು ಅನಿವಾರ್ಯವೇನೋ !

ರಾನ್ ನನ್ನನ್ನು ಹತ್ತಿರವೇ ಇರುವ 'ಹಿರಿಯರ ಮನೆ'ಯೊಂದನ್ನು ನೋಡಲು ಕರೆದೊಯ್ದಾಗ ಅಲ್ಲಿ ವಾಸವಾಗಿರುವ ಅಜ್ಜ-ಅಜ್ಜಿಯರನ್ನು ಹತ್ತಿರದಿಂದ ನೋಡಿದೆ ಅವರಿಗೆ ಕುಳಿತಲ್ಲಿ ಊಟ, ತಿಂಡಿಯ ವ್ಯವಸ್ಥೆ, ಆ ಕಟ್ಟಡದಲ್ಲೇ ಉಪಚಾರಕ್ಕಾಗಿ ಡಾಕ್ಟರ್ ಸಹ ಇದ್ದರು ಅಲ್ಲಿ ವಾಸಿಸುವ ೮೦ ವರ್ಷದ ಮುದುಕಿಯೊಬ್ಬಳನ್ನು ಮಾತನಾಡಿಸಿದಾಗ ಸಿಕ್ಕ ಉತ್ತರ "ನನಗೆ ಬೇಕಾಗುವ ಎಲ್ಲ ಸೌಲಭ್ಯವಿದೆ. ಆದರೆ ಇಲ್ಲಿಯ ಊಟ ಔಷಧಿಗಳನ್ನು ಸೇವಿಸುವುದಕ್ಕಿಂತ ನನ್ನ ಸಾವು ಯಾವಾಗ ಬರುವದೇದು ಕಾಯುತ್ತಲಿರುವೆನು."

ಹಾಲೆಂಡ್‌ನಲ್ಲಿರುವ ಒಬ್ಬ ಸಾಮಾನ್ಯ ಅಂಚೆ ಪೇದೆಯ ಮನೆಯಲ್ಲಿ ಅತಿಥಿಯಾಗಿ ಉಳಿಯುವ ಸಂಯೋಗ ಒದಗಿ ಬಂತು. ಅಂಚೆಯನ್ನು ಹಂಚುವ ಅಲಫಾನ್ಸ ಭಾರತಕ್ಕೆ ಎರಡು ಬಾರಿ ಭೇಟಿ ಕೊಟ್ಟಿದ್ದ. ಹಿಂದಿಯನ್ನು ಕಲಿತ ಅಲಫಾನ್ಸ ನನಗೆ ಡಚ್ ಸಂಸ್ಕೃತಿಯ ಹತ್ತಿರದ ಪರಿಚಯ ಮಾಡಿಸುವದರಲ್ಲಿ ಸಹಾಯಕನಾದ.

ಪಾಶ್ಚಿಮಾತ್ಯ ದೇಶದಲ್ಲೂ ಸಹ ನಮ್ಮ ಭಾರತದ ಹಾಗೆ ಜಾತಿ, ವರ್ಗದ ವ್ಯವಸ್ಥೆ ಇದೆ. ಹೊರಗಿನ ಜನರಿಗೆ ಇದರ ಅರಿವಾಗುವದು ಕಠಿಣ. ಸಮಾಜದ ಕೆಳ ವರ್ಗದ ಜನರಲ್ಲಿ ಬಡತನ ಇಲ್ಲದಿದ್ದರೂ, ಅವರ ಜೀವನದ ಶೈಲಿ, ವಾಸ ಮಾಡುವ ಮನೆ ಮತ್ತು ಅವರ ಸಾಮಾಜಿಕ ಗುಂಪು ಒಂದು ನಿರ್ಧಿಷ್ಟವಾದ ಮಟ್ಟವನ್ನು ತೋರುತ್ತವೆ. ಇವರು ಮುಖ್ಯವಾಗಿ ಕಾರ್ಮಿಕ ವರ್ಗದವರು. ಮಧ್ಯಮ ವರ್ಗದವರು ಮತ್ತು ಮೇಲಿನ ವರ್ಗದ ಜನರಲ್ಲಿ ಸಹ ನಿಶ್ಚಿತವಾದ ಅಂತರಗಳಿರುತ್ತವೆ. ಇಲ್ಲಿಯೂ ಸಹ ಈ ವಿವಿಧ ಗುಂಪಿನ ಜನರು ಮತ್ತೊಂದು ಗುಂಪಿನ ಜನರ ಜೊತೆ ಸಂಪರ್ಕವನ್ನು ಹೊಂದಿರುವುದಿಲ್ಲ. ಇವರಲ್ಲಿ ಸಂಬಂಧ ಏರ್ಪಡುವುದು ಅತಿ ವಿರಳ.

ನನ್ನ ಗೆಳೆಯನು ಅಂಚೆ ಹಂಚುವ ಕೆಲಸದ ಬಗ್ಗೆ ಆಗಾಗ ಕೆಲವು ಸ್ವಾರಸ್ಯಕರವಾದ ಘಟನೆಗಳನ್ನು ವಿವರಿಸುತ್ತಿದ್ದ. ಇತ್ತೀಚೆಗೆ ಅಂಚೆ ಹಂಚುವ ಕೆಲಸವನ್ನು ಅಂಚೆ ಇಲಾಖೆಯ ವಾಹನದ ಮೂಲಕ ಮಾಡಬೇಕೆಂಬ ಹೊಸ ನಿಯಮ ಬಂದಾಗ ವಾಹನ ನಡೆಸಲು ಬಾರದ ಗೆಳೆಯನನ್ನು ನೋಡಿ ಅಧಿಕಾರಿಗಳಿಗೆ ಆಶ್ಚರ್ಯ! ಈಗ ಅಂಚೆ ಪತ್ರವನ್ನು ವಿಂಗಡನೆ ಮಾಡುವ ವಿಭಾಗದಲ್ಲಿ ಕಾರ್ಯ ಮಾಡುತ್ತಿದ್ದ. ಕೆಲವೇ ದಿನಗಳಲ್ಲಿ ಅಂಚೆ ವಿಂಗಡನೆಗೂ ಸಹ ಯಂತ್ರವನ್ನು ಸ್ಥಾಪಿಸುವ ಸಿದ್ಧತೆ ನಡೆದಿದ್ದು, ಅದು ಬಂದ ನಂತರ ಈ ಗೆಳೆಯನಂತೆ ಇತರ ಹಲವಾರು ಜನರು ನಿರುದ್ಯೋಗಿಗಳ ಸಾಲನ್ನು ಸೇರುವರು.

ಇದೇ ಗೆಳೆಯನು ನನ್ನನ್ನು ಹೊಸತೊಂದು ಅಂಗಡಿಗೆ ಕರೆದೊಯ್ದು ಈ ಅಂಗಡಿಗಳಿಗೆ 'ಪ್ರಕೃತಿ ಅಂಗಡಿ' ಎಂದು ಹೆಸರು (Nature Shop) ಇಲ್ಲಿ ಕೀಟನಾಶಕ ಬಳಸದೇ ಇರುವ, ರಸಗೊಬ್ಬರ ಉಪಯೋಗಿಸದೇ ಬೆಳೆದ ನೈಸರ್ಗಿಕ ತರಕಾರಿ, ಬೇಳೆ–ಕಾಳುಗಳನ್ನು ಮಾರಾಟ ಮಾಡುತ್ತಾರೆ. ಇತ್ತೀಚಿನ ದಿನಗಳಲ್ಲಿ ಯುರೋಪಿನ ಪ್ರತಿಯೊಂದು ಪಟ್ಟಣದಲ್ಲಿ ಇಂತಹ ಅಂಗಡಿಗಳು ತಲೆ ಎತ್ತುತ್ತಿವೆ. ಇವುಗಳನ್ನು ನಡೆಯಿಸುವವರು ಒಬ್ಬ ವ್ಯಕ್ತಿಯಾಗಿರದೆ, ಸಾಮಾನ್ಯವಾಗಿ ಯುವ ಕಾರ್ಯಕರ್ತರಾಗಿರುತ್ತಾರೆ. ಇವರು ಪ್ರಸ್ತುತ ಔದ್ಯಮೀಕರಣದಿಂದ ಬೇಸತ್ತು ತಮ್ಮದೇ ಆದ ಹೊಸ ಜೀವನ ಪದ್ಧತಿಯನ್ನು ಸ್ಥಾಪಿಸುವ ಪ್ರಯತ್ನದಲ್ಲಿ ನಿರತರಾಗಿದ್ದಾರೆ. ವಿಕಾಸ ಹೊಂದಿದ

ಈ ಮುಂದುವರಿದ ದೇಶಗಳಲ್ಲಿನ ಏಕಾಕಿ ತನವನ್ನು ತೊಡೆದು ಬದುಕ ಬಯಸುವ ನವ ಕಾರ್ಯಕರ್ತರ ಜೊತೆ ಮಾತನಾಡುವದೇ ಒಂದು ಹೊಸ ಅನುಭವ. ನಿಸರ್ಗದೊಡನೆ ನಿಕಟವಾಗಿ ಸಂಪರ್ಕ ಹೊಂದಿ ಜೀವನ ನಡೆಸುವ ಈ ಹೊಸ ಪೀಳಿಗೆಯ ಜನರು ಇಂತಹ ಅಂಗಡಿಗಳ ಮೂಲಕ ತಮ್ಮ ವಿಚಾರವನ್ನು ಸಾಮಾನ್ಯ ಜನರಿಗೆ ತಲುಪಿಸುತ್ತಿದ್ದರು. ಹೊರಗೆ ಕಾಣುವ ವ್ಯಾಪಾರೀಕರಣದ ವಾತಾವರಣದಲ್ಲಿ ಆತ್ಮೀಯತೆಯನ್ನು ಸೂಸುವ ಹೊಸ ಚೈತನ್ಯ ನೀಡುವ ತಾಣ ಇದಾಗಿತ್ತು.

ಲಂಡನ್‌ನಲ್ಲಿರುವ ಗೆಳೆಯನನ್ನು ಕಾಣಲು ಹೋದಾಗ ನಮ್ಮನ್ನು ಆಳಿದ ಬ್ರಿಟಿಷ್ ದೇಶವನ್ನು, ಅಲ್ಲಿಯ ಜನರನ್ನು ಅರಿಯುವ ಅವಕಾಶ ಒದಗಿ ಬಂತು. ಇಂದು ಅತಿ ಹೆಚ್ಚಿನ ನಿರುದ್ಯೋಗಿಗಳ ಸಮಸ್ಯೆಯನ್ನು ಎದುರಿಸುತ್ತಿರುವ ಬ್ರಿಟನ್ ಬಹಳ ಸಂಕಟದಲ್ಲಿದೆ. ಲಂಡನ್ ಶಹರದಲ್ಲಿ ಅಲೆದಾಡುವಾಗ ಮುಂಬಯಿ ಅಥವಾ ದಿಲ್ಲಿಯ ಒಂದು ಭಾಗಕ್ಕೆ ಬಂದ ಅನುಭವ. ಹಾಲಂಡ್‌ನಲ್ಲಿರುವ ಸ್ವಚ್ಛತೆ ಇಲ್ಲಿ ಇರಲಿಲ್ಲ. ರಸ್ತೆಯಲ್ಲಿ ಬಿಸಾಡಿದ ಕಾಗದದ ರಾಶಿಗಳು, ಉದ್ಯಾನವನದಲ್ಲಿ ಹರಕು ಬಟ್ಟೆ ತೊಟ್ಟ ನಿಸ್ತೇಜವಾದ ಮುಖ ಹೊತ್ತು ನಿಂತ ಭಿಕ್ಷುಕರ ದರ್ಶನವಾಯಿತು. ಉಳಿಯಲು ಮನೆ ಇಲ್ಲದ, ಹೊಟ್ಟೆಗೆ ಹಿಟ್ಟಿಲ್ಲದ ಇಂತಹ ನಿರ್ಗತಿಕರಿಗೆ ಸಾರ್ವಜನಿಕ ಸ್ಥಳ, ಪಾತಾಳ ರೈಲಿನ ನಿಲ್ದಾಣಗಳು ತಂಗುದಾಣವಾಗಿವೆ.

ಬ್ರಿಟನ್ ಮತ್ತು ಇತರ ದೇಶಗಳು ರಷ್ಯಾದ ಅಣ್ವಸ್ತ್ರಗಳಿಗೆ ಹೆದರಿಕೊಂಡು ಪ್ರತಿದಿನ ಯುದ್ಧದ ಅವ್ಯಕ್ತವಾದ ಭಯದಲ್ಲಿರುವ ಹಾಗೆ ಕಂಡಿತು. ರಷ್ಯಾದ ಗುಮ್ಮನ ಬೆದರಿಕೆಯನ್ನು ಹೋಗಲಾಡಿಸಲು ಅಮೇರಿಕಾವು ಬ್ರಿಟನ್‌ದಲ್ಲಿ ೪೫ ಕಡೆ ಪ್ರಕ್ಷೇಪಾಸ್ತ್ರ (Missiles) ಗಳನ್ನು ಇಟ್ಟಿದ್ದಾರೆ. ಈ ಅಸ್ತ್ರದ ನೆಲೆಗಾಗಿ ಹಲವಾರು ಕಡೆ ಹಳ್ಳಿಯ ಮಧ್ಯದಲ್ಲಿ ಅಮೇರಿಕದ ಸೇನಾಪಡೆ ತನ್ನ ವಾಸ್ತವ್ಯವನ್ನು ಹೂಡಿದೆ. ಇಂತಹ ಅಸ್ತ್ರಗಳ ಸ್ಥಾಪನೆಯನ್ನು ವಿರೋಧಿಸಿ ಗ್ರಿನ್‌ಹಮ್ ಎಂಬಲ್ಲಿ ಎಂಟು ವರ್ಷಗಳಿಂದ ಚಳುವಳಿ ನಡೆಯುತ್ತಿದೆ. ಇಲ್ಲಿ ಮಹಿಳೆಯರು ಶಾಂತಿಯುತವಾಗಿ ಹೋರಾಟ ನಡೆಯಿಸುತ್ತಿದ್ದಾರೆ. ಯುದ್ಧಕ್ಕೆ ಆಮಂತ್ರಣ ನೀಡುವ ಈ ಅಸ್ತ್ರಗಳನ್ನು ಇಂಗ್ಲಂಡ್‌ದಲ್ಲಿ ಸ್ಥಾಪಿಸ ಬಾರದೆಂಬುದು ಈ ಜನರ ಬೇಡಿಕೆಯಾಗಿದೆ. ಈ ಮಹಿಳೆಯರ ಹೋರಾಟ ಇಂಗ್ಲಂಡ್ ಮತ್ತಿತರ ದೇಶದ ಜನರ ಆಸಕ್ತಿಗಳಿಸಿದೆ.

ಇಂದು ವಿವಿಧದೇಶಗಳಲ್ಲಿ ಇಂತಹ ಚಳುವಳಿ ನಡೆಯುತ್ತಿದೆ.

ಗ್ರಿನ್‌ಹಮ್‌ದಲ್ಲಿ ಮಹಿಳೆಯರನ್ನು ಹತ್ತಿಕ್ಕಲು ಅಮೇರಿಕದ ಸೈನಿಕರು ಮುಂದಾಗಿರುವ ವಿಷಯ ದೇಶಭಕ್ತರಾದ ಬ್ರಿಟೀಷರಿಗೆ ಹಿಡಿಸಲಿಲ್ಲ. ಈ ಕಾರಣ ದಿಂದಾಗಿ ಇಂದು ಶಾಂತಿಗಾಗಿ ಹೋರಾಡುವ ಚಳುವಳಿ ಪ್ರಬಲವಾಗುತ್ತಿದೆ.

ಸೂರ್ಯ ಮುಳುಗದ ರಾಷ್ಟ್ರವೆಂದು ತನ್ನ ಶಕ್ತಿಯ ಬಲದಿಂದ ಭಾರತ ಮತ್ತು ಇತರ ರಾಷ್ಟ್ರಗಳನ್ನು ಆಳಿದ ಬ್ರಿಟಿಷ್ ಸಾಮ್ರಾಜ್ಯ ಇಂದು ಅಮೇರಿಕದ ಶಕ್ತಿಗೆ ತಲೆಬಾಗಿದೆ! ಅಮೇರಿಕದ ಸೈನಿಕ ನೆಲೆಗಳು ಬ್ರಿಟಿಷ್ ದೇಶವನ್ನು ಆಕ್ರಮಿಸಿಕೊಂಡಿರುವಾಗ ದೇಶಪ್ರೇಮಿಗಳಾದ ಬ್ರಿಟಿಷ್ ಜನತೆಯ ಸ್ವಾಭಿಮಾನಕ್ಕೆ ದೊಡ್ಡ ಪೆಟ್ಟಾಗಿದೆ. ಇಂಗ್ಲೆಂಡ್ ಎದುರಿಸುತ್ತಿರುವ ರಂಗಭೇದದ ಕಿಚ್ಚು, ಲಂಡನ್‌ನಲ್ಲಿ ಕಂಡ ಕೊಳಚೆಪ್ರದೇಶ, ನಿಸ್ತೇಜಮುಖದ ಭಿಕ್ಷುಕರು–ಸೂರ್ಯ ಮುಳುಗದ ಸಾಮ್ರಾಜ್ಯದಲ್ಲಿ ಭೀಕರ ಕತ್ತಲೆ!!

ವಿಮಾನಯಾನದಲ್ಲಿ ನೋಡಿದ ಸ್ವಿಟ್‌ಜರಲಂಡ್‌ನ ಸುಂದರ ಆಲ್ಪ್ಸ್ ಪರ್ವತದ ಹಿಮಶಿಖರಗಳನ್ನು ಹತ್ತಿರದಿಂದ ನೋಡುವ ಸದವಕಾಶ ಒದಗಿ ಬಂತು. ಪ್ರಕೃತಿಯ ರಮಣೀಯತೆಯನ್ನು ತನ್ನಲ್ಲಿ ಒಂದಾಗಿಸಿಕೊಂಡ ಈ ಪುಟ್ಟ ದೇಶದ ಜನರ ಸೌಂದರ್ಯಪ್ರಜ್ಞೆಯನ್ನು ನೋಡಿ ಬೆರಗಾದೆ. ಹಳ್ಳಿ ಪಟ್ಟಣಗಳ ರಸ್ತೆಯ ಪಕ್ಕದಲ್ಲಿ ಶುದ್ಧವಾದ ನೀರಿನ ಕೊಳಗಳು ಅದರ ಸುತ್ತ ಅರಳಿ ನಿಂತ ಹೂವಿನ ಕುಂಡಗಳು. ಇಡೀ ವಿಶ್ವದಲ್ಲಿ ಸ್ವಚ್ಛತೆಗೆ ಹೆಸರುವಾಸಿಯಾದ ಈ ಪ್ರದೇಶದಲ್ಲಿ ಜನರು ತಮ್ಮ ಹುಟ್ಟಿನಿಂದ ಶಿಸ್ತನ್ನು ಮೈಗೂಡಿಸಿಕೊಂಡ ಹಾಗಿದೆ.

ಆಲ್ಪ್ಸ್ ಪರ್ವತಗಳತ್ತ ಕಾಲ್ನಡಿಗೆಯಲ್ಲಿ ಪಯಣಿಸುವಾಗ ಅರಣ್ಯಪ್ರದೇಶದಲ್ಲಿ ಹಸಿರು ಮಾಯವಾಗಿ ಕೆಲವೆಡೆ ಎಳೆಯಗಿಡಗಳು ಒಣಗಿನಿಂತಿದ್ದವು. ಹಲವುಕಡೆ ಅವು ಸತ್ತು ನೆಲದ ಮೇಲೆ ಬಿದ್ದಿದ್ದವು. ಅಮ್ಲ ಮಳೆಯ ಪರಿಣಾಮ ಎಂದು ತಿಳಿದುಬಂದಾಗ ಮನಸ್ಸು ಖಿನ್ನವಾಯಿತು. ಇದೇ ತರಹ ಇಲ್ಲಿನ ಸುಂದರ ನೀಲಿ ಸರೋವರದ ಜಲಚರಗಳು ಪ್ರಾಣವಾಯು ಇಲ್ಲದೆ ನೀರಿನಲ್ಲಿ ಸಾಯುತ್ತಿರುವ ವಿಷಯ ತಿಳಿದು ಅಭಿವೃದ್ಧಿಯ, ವಿಕಾಸದ ಈ ಪರಿಣಾಮಗಳು ನನ್ನ ಮನಸ್ಸಿನಲ್ಲಿ ಹಲವಾರು ಪ್ರಶ್ನೆಗಳನ್ನು ಮೂಡಿಸಿದವು. ವಿಕಾಸ ಹೊಂದಿದ ಈ ಪುಟ್ಟ

ರಾಷ್ಟ್ರದಲ್ಲಿ ಶ್ರೀಮಂತಿಕೆ ತಾಂಡವವಾಡುತ್ತಿತ್ತು. ನಿರುದ್ಯೋಗ ಇಲ್ಲದ ಈ ದೇಶದ ಪ್ರಜೆಗಳು ಇಂದು ತಮ್ಮ ಅತೀ ವಿಕಾಸದ ಪರಿಣಾಮದಿಂದ ಬಳಲುತ್ತಿದ್ದರು. ಅವರಿಗೆ ಕೆಲಸ ಕೊಡುತ್ತಿದ್ದ ಉದ್ದಿಮೆಗಳು, ಅವರು ಉಪಯೋಗಿಸುವ ವಾಹನಗಳು, ಅವರ ಭೋಗವಾದೀ ಜೀವನವೇ ಅವರಿಗೆ ಮುಳುವಾಗಿ ಪರಿಣಮಿಸಿತ್ತು. ವಾಹನಗಳಿಂದ, ಉದ್ದಿಮೆಗಳಿಂದ ಹೊರಟ ಮಾಲಿನ್ಯವು ಮಳೆಯ ನೀರಿನ ಜೊತೆ ಬೆರೆತು ಆಮ್ಲಮಳೆಯಾಗಿ ಪ್ರಕೃತಿಯನ್ನು ನಾಶಪಡಿಸಲು ಆರಂಭಿಸಿದೆ. ಗಿಡಮರಗಳು ಸಾಯುತ್ತಿದ್ದು ಸುಂದರ ಸರೋವರಗಳು ಆಗಲೆ ಸತ್ತಿವೆ. ಆಗಲೆ ಕೆಲವು ಸರೋವರಗಳಿಗೆ ಕೃತ್ರಿಮವಾಗಿ ಪ್ರಾಣವಾಯುವನ್ನು ತುಂಬುವ ಕಾರ್ಯ ಆರಂಭವಾಗಿತ್ತು.

ವೈಜ್ಞಾನಿಕವಾಗಿ, ಯಾಂತ್ರಿಕವಾಗಿ ಮನುಷ್ಯನು ಪ್ರಗತಿ ಸಾಧಿಸಿದರೂ ಸಹ, ಇಂದು ಅವನು ಅದರ ಮಿತಿಯನ್ನು ತಲುಪಿರುವಂತೆ ಕಂಡಿತು. ಇವುಗಳ ಅತೀ ಬಳಕೆಯಿಂದಾಗಿ ಪ್ರಕೃತಿಯು ನಾಶವಾಗತೊಡಗಿದೆ. ಮನುಕುಲಕ್ಕೆ ಅನಿವಾರ್ಯವಾದ ನೀರು, ಗಾಳಿಯನ್ನು ನೀಡುವ ನಿಸರ್ಗವನ್ನೇ ನಾಶಪಡಿಸುವ ಈ ಪಾಶ್ಚಿಮಾತ್ಯ 'ಪ್ರಗತಿಯ' ಸಾಧನೆಗೆ ನಾವೂ, ಜಗತ್ತಿನ ಇತರ ರಾಷ್ಟ್ರಗಳೂ ಮರುಳಾಗಿರುವುದು ಒಂದು ವಿಪರ್ಯಾಸ ಅಲ್ಲವೆ ?

ಹಲವಾರು ಯುವ ಗೆಳೆಯರು ಆರಂಭಿಸಿದ, ಪ್ರಕೃತಿ ಪಾದಯಾತ್ರೆಯಲ್ಲಿ ಭಾಗವಹಿಸಿದೆ. ಹಳ್ಳಿಗಳಿಗೆ ಹೋಗುವಾಗ ದಾರಿಯಲ್ಲಿನ ಅರಣ್ಯದ ಸ್ಥಿತಿಯನ್ನು ಗೆಳೆಯರು ವಿವರಿಸುತ್ತಿದ್ದರು. ಕೆಲವು ಕಡೆ ಅರಣ್ಯ ಅಧಿಕಾರಿಗಳು ನಮ್ಮ ಜೊತೆಗೆ ಬಂದು ವಿವರಣೆಯನ್ನು ಒದಗಿಸುತ್ತಿದ್ದರು. 'ಸಾಸನ್‌ವೀಲ್' ಅರಣ್ಯದ ಅಧಿಕಾರಿ ನಮ್ಮನ್ನು ಕರೆದೊಯ್ದು ಸತ್ತಿರುವ ಮರಗಳ, ಜೀವಕಳೆದುಕೊಂಡ ಮಣ್ಣಿನ ವಿವರಣೆ ನೀಡಿದ. ಬಹಳ ಖಿನ್ನ ಮನಸ್ಸಿನಿಂದ ಅವನು ಹೇಳಿದ್ದು—"ಈ ಅರಣ್ಯದಲ್ಲಿ ಮುಕ್ಕಾಲುಪಾಲು ಗಿಡಗಳು ನಾಶವಾಗಿವೆ. ಮುಂಬರುವ ವರ್ಷಗಳಲ್ಲಿ ಮಾಲಿನ್ಯವನ್ನು ಸಂಪೂರ್ಣವಾಗಿ ತಡೆದಲ್ಲಿ ಮಾತ್ರ ನಮ್ಮ ಹಸಿರನ್ನು ಉಳಿಸಿಕೊಳ್ಳಲು ಸಾಧ್ಯ.

ಪಾದಯಾತ್ರಿಗಳ ಜೊತೆ ನಡೆಯುವಾಗ ಅಲ್ಲಿಯ ಹಳ್ಳಿಗಳ ಸ್ಥಿತಿಯು ಅರಿವಾಗತೊಡಗಿತು. ಕೃಷಿ ಮತ್ತು ಹೈನುಗಾರಿಕೆಯಲ್ಲಿ ತೊಡಗಿರುವ ಹಳ್ಳಿಯ ಜನರಿಗೂ, ಪಟ್ಟಣದ ಜನರಿಗೂ ಯಾವ ವ್ಯತ್ಯಾಸ ಇರಲಿಲ್ಲ. ಎಲ್ಲ ಯಾಂತ್ರಿಕ ಜೀವನ. ಕೃಷಿ ಮಾಡುವಾಗ ಮಣ್ಣನ್ನು ಕೈಯಿಂದ ಮುಟ್ಟುವ ಅಗತ್ಯವಿರಲಿಲ್ಲ.

ಹಳ್ಳಿಯ ಜನರು ತಮ್ಮ ಮನೆಯೊಳಗೆ ಟಿ. ವಿ. ಮುಂದೆ ಕುಳಿತು ಆ ಪೆಟ್ಟಿಗೆಯ ದಾಸರಾಗಿದ್ದರು. ನಮ್ಮ ಸಹಪಾಠಿಗಳು ಬೀದಿ ನಾಟಕ ಮಾಡಿದಾಗ ಒಂದು ದೊಡ್ಡ ಹಳ್ಳಿಯಲ್ಲಿ ಕೇವಲ ೧೫–೨೦ ಜನ ಮಾತ್ರ ಬಂದಿದ್ದರು. ಆಧುನಿಕತೆಯ ಪ್ರವಾಹದಲ್ಲಿ ಇಲ್ಲಿಯ ಜನಪದ ಕಲೆಗಳು ಕೊಚ್ಚಿಕೊಂಡು ಹೋಗಿವೆ.

ಲಿಂಡರ್ ಎಂಬ ಹಳ್ಳಿಯನ್ನು ತಲುಪಿದಾಗ ಮಳೆ ಆರಂಭವಾಗಿತ್ತು. ಮಳೆಯಿಂದ ರಕ್ಷಣೆ ಪಡೆಯಲು ವಿಶಾಲವಾದ ವೃಕ್ಷದ ಕೆಳಗಡೆ ಆಶ್ರಯ ಪಡೆದೆವು. ಆಗ ಎನ್ನಾ ಎಂಬ ಯುವತಿಯು ನನ್ನ ಹತ್ತಿರ "ಭಾರತದಲ್ಲಿ ಜನರು ಸ್ವಿಟ್‌ಜರ್ ಲಂಡ್ ಬಗ್ಗೆ ಯಾವ ವಿಚಾರ ಹೊಂದಿದ್ದಾರೆ" ? ಎಂದು ಕೇಳಿದಳು. ನಾನು ಉತ್ತರಿಸುತ್ತಾ "ನಿಮ್ಮ ದೇಶವೆಂದರೆ ಸುಖ ಸಮೃದ್ಧಿಯ ನಾಡು,' ಸ್ವರ್ಗಸುಖ ವನ್ನು ಅನುಭವಿಸುತ್ತಿರುವ ಜನರು" ಎಂದು ಹೇಳಿದೆ. ಅದಕ್ಕೆ ಅವಳು "ಹೌದು ಇದು ನಮ್ಮ ಸ್ವರ್ಗ. ಆದರೆ ಈ ಸ್ವರ್ಗದಲ್ಲಿ ಉಸಿರಾಡಲು ಶುದ್ಧವಾದ ಗಾಳಿ ಯಿಲ್ಲ, ಕುಡಿಯಲು ಸ್ವಚ್ಛವಾದ ನೀರಿಲ್ಲ. ಈ ಸುಖದಲ್ಲಿ ಮುಳುಗಿದ ಜನರಿಗೆ ಆತ್ಮೀಯವಾಗಿ ನಾಲ್ಕು ಮಾತನಾಡಲು ಸಮಯವಿಲ್ಲ. ಈ ಸ್ವರ್ಗದ ಮತ್ತೊಂದು ಮುಖವನ್ನು ಭಾರತೀಯರಿಗೆ ತಿಳಿಸುವಿರಾ ? ಎಂದು ಕೇಳಿದಳು.

ಪ್ಯಾರಿಸ್ ಶಹರ ಫ್ರಾನ್ಸ್ ದೇಶದ ರಾಜಧಾನಿ. ತನ್ನ ವೈಭವಕ್ಕೆ ಹೆಸರುವಾಸಿಯಾಗಿರುವ ಈ ಶಹರದ ಮತ್ತೊಂದು ಮುಖವನ್ನು ಪರಿಚಯಿಸಿದ್ದು ಗೆಳತಿ ಪಾಸ್ಕಲ್. ಪ್ಯಾರಿಸ್‌ನ ಕೊಳಚೆ ಪ್ರದೇಶ ನಮ್ಮಲ್ಲಿಯ ಹಾಗೆ ಇರದಿದ್ದರೂ ಸಹ ಆ ಬಡಜನರ ಬವಣೆ ಬೇರೆಯಲ್ಲ ಎಂದು ಅನಿಸಿತು. ಸುಖ–ಸೌಲಭ್ಯದ ಸಮುದ್ರದಲ್ಲಿ ತೇಲುತ್ತಿರುವ ಬಹುಪಾಲು ಜನರಿಗೆ ಈ ಬಡ ಜನರ ಅಸ್ತಿತ್ವದ ಕಲ್ಪನೆಯೇ ಇಲ್ಲವಾಗಿದೆ. ಇಂದು ಈ ಜನರಿಗೆ ಉಳಿಯಲು ಮನೆ ಇದೆ ಆದರೆ ದುಡಿಯಲು ಕೆಲಸವಿಲ್ಲ. ಸಮಾಜವಾದಿ ಸರ್ಕಾರದ ಸವಲತ್ತುಗಳು ಈ ಕಡು ಬಡವರನ್ನು ತಲುಪುವುದಿಲ್ಲ. ಸರಕಾರ ಕೊಡುವ ನಿರುದ್ಯೋಗ ಭತ್ತೆಯು ಕೇವಲ ಕೆಲಸದಲ್ಲಿದ್ದು ನಂತರ ನಿರುದ್ಯೋಗಿಗಳಾದವರಿಗೆ ಮಾತ್ರ ಲಭಿಸುತ್ತದೆ. ಹುಟ್ಟಿನಿಂದ ನಿರುದ್ಯೋಗಿಗಳಾದ ಈ ಬಡ ಜನರಿಗೆ ಯಾವ ಸೌಲಭ್ಯವೂ ದೊರಕದು. ಕಾಗದ ಪತ್ರವನ್ನು ಓದಲು ಬಾರದ ನಿರಕ್ಷರತೆ ಇವರಲ್ಲಿದೆ. ಇವರ ಮಕ್ಕಳು ಶಾಲೆಗೆ ಹೋಗುವುದಿಲ್ಲ. ಹೋಗಲಾರರು. ಯುರೋಪಿನ ದೇಶಗಳಲ್ಲಿ ಬಂದೊದಗಿದ ಆರ್ಥಿಕ ಮುಗ್ಗಟ್ಟಿನಿಂದಾಗಿ ನಿರುದ್ಯೋಗಿಗಳ ಸಂಖ್ಯೆ ಹೆಚ್ಚುತ್ತಿದೆ. ಕಾರ್ಖಾನೆಗಳಲ್ಲಿ ಕೆಲಸ ಕಳೆದುಕೊಂಡ ಜನರು ಈ ಕಡುಬಡವರ ಸಾಲಿಗೆ ಸೇರಿದ್ದಾರೆ. ಪ್ಯಾರಿಸ್‌ದಲ್ಲಿ

ಇಂದು ಅವರ ಸಂಖ್ಯೆ ಹತ್ತು ಸಾವಿರ.

ಈ ಜನರು ಹೊಟ್ಟೆಪಾಡಿಗಾಗಿ ಪೇರಿಸ್‌ನಗರದ ಹೊರ ವಲಯದಲ್ಲಿರುವ ಕಾಡಿಗೆ ನಡೆದು ಹೋಗಿ ಅಲ್ಲಿನ ಕಾಡು ಹೂಗಳನ್ನು ಆಯ್ದುತಂದು ಶಹರದಲ್ಲಿನ ಹೂವಿನ ಅಂಗಡಿಯಲ್ಲಿ ಮಾರಾಟ ಮಾಡಿ ಒಂದು ಹೊತ್ತಿನ ಊಟವನ್ನು ಸಂಪಾದಿಸುತ್ತಾರಂತೆ! ಒಂದು ಹೊತ್ತಿನ ಊಟಕ್ಕೂ ಇಲ್ಲದ ಜನರು ಪೇರಿಸ್‌ನಲ್ಲಿರುವ ವಿಷಯ ತಿಳಿದು ನಾನು ದಂಗಾದೆನು. ನಮ್ಮಲ್ಲಿಯ ಹರಿಜನರ ಹಾಗೆ ಇವರನ್ನು ಕೀಳು ಭಾವನೆಯಿಂದ ನೋಡಲಾಗುತ್ತಿದೆ.

ಪಾಶ್ಚಿಮಾತ್ಯ ದೇಶಗಳು ಬಡತನ ನಿರ್ಮೂಲನ ಮಾಡಿವೆ ಎಂದು ತಿಳಿದಿರುವ ನಮ್ಮ ಕಲ್ಪನೆ ತಪ್ಪಾದದ್ದು ಎಂಬ ಅರಿವಾಯಿತು. ಬಹುಶಃ ಪೇರಿಸ್ ನಂತಹ ಶಹರಗಳಿಗೆ ಭೇಟಿಕೊಡುವ ಪ್ರವಾಸಿಗರು ಅಲ್ಲಿಯ ಥಳಕು ಬಳಕಿಗೆ ಮರುಳಾಗಿ ಮರಳುವುದು ಸರ್ವಸಾಮಾನ್ಯ. ಅವರ ಹತ್ತಿರ ಅಲ್ಲಿಯ ಮತ್ತೊಂದು ಮುಖದ ದರ್ಶನ ಮಾಡಲು ಸಮಯವಾದರೂ ಎಲ್ಲಿದೆ?

ಸಪ್ತ ಸಮುದ್ರದಾಚೆ ಇರುವ ಈ ನಾಡಿನಲ್ಲಿ ನಾಲ್ಕು ತಿಂಗಳ ಭ್ರಮಣ ಮಾಡಿದ ನಂತರ ಭಾರತದ ಬಗ್ಗೆ ಹೆಚ್ಚಿನ ಆದರ, ಅಭಿಮಾನ ಉಂಟಾಯಿತು. ಜಗತ್ತಿನ ಪ್ರಕೃತಿಯ ಬೀಡಾದ ಸ್ವಿಟ್‌ಜರ್‌ಲಂಡ್‌ನ್ನು ಕಾಶ್ಮೀರವನ್ನಾಗಿಸಿಕೊಂಡಿರುವ, ಹಾಲಂಡ್‌ನ ಮೈದಾನವನ್ನೂ, ಬ್ರಿಟನ್-ಫ್ರಾನ್ಸ್‌ನ ಗುಡ್ಡಗಾಡನ್ನು ತನ್ನಲ್ಲಿ ಹುದುಗಿಸಿಕೊಂಡಿರುವ ಭಾರತ ನಿಜವಾಗಿಯೂ ವಿಶಿಷ್ಟವಾದ ದೇಶ ಅನಿಸಿತು. ಎಲ್ಲದಕ್ಕಿಂತ ಹೆಚ್ಚಿನದು ನಮ್ಮ ಜನರಲ್ಲಿರುವ ಆತ್ಮೀಯತೆ. ಮಾನವೀಯ ಸಂಬಂಧಗಳನ್ನು ತಮ್ಮ ಬಡತನದಲ್ಲೂ ಕಾಪಾಡಿಕೊಂಡು ಬಂದಿರುವುದು ನಮ್ಮ ಸಾಧನೆಗಳಲ್ಲೊಂದು. ಆದರೆ ಪಾಶ್ಚಿಮಾತ್ಯ ಮಾದರಿಯ ವಿಕಾಸವನ್ನು ಅಂಧ ಅನುಕರಣೆ ಮಾಡತೊಡಗಿರುವ ನಾವು ಆ ದೇಶಗಳ ತಪ್ಪಿನಿಂದ ಪಾಠ ಕಲಿಯಲು ಸಾಧ್ಯವಿಲ್ಲವೆ?

ಅಸ್ತಿತ್ವ

—ಶಶಿಕಲಾ ವಸ್ತ್ರದ

ಆಗಸಕೆ ಮೊಗವೆತ್ತಿ ಎರಡೂ ಕೈ ಚಾಚಿ
ಕಾಡುತಿದೆ ಸೂರೆಗೊಳುವ ಕನಸು ಎಲ್ಲ ಬಾಚಿ.
ಮುಡಿದೇನೇ ತಾರೆಗಳ ಹೂವುಗಳ ಮಾಡಿ ?
ಪಡೆದೇನೇ ಚಂದಿರನ ತಿಲಕದಲಿ ಸೂಡಿ ?
ದೇವ—ದೇವಾ ನಿಂತನೆಲದಲ್ಲೇ
ಗಟ್ಟಿಯಾಗಿಲ್ಲದ, ಬಿಟ್ಟ ಬೇರಿನ—
ತುದಿಗೇ ನೀರಿಲ್ಲದೆ,
ಸುಡು—ಸುಡುವ ಕಾವಿನಲಿ
ಹತಾಶೆ—ವಿಷಾದಗಳ ಒಡಲುರಿಯು
ಝಳಪಿನ ಹೊಳಪಿನಲ್ಲೇ
ನಗುವ ಮೂಗುತಿ ಧರಿಸಿ
ತುಂಬಲಾರೆನೇ ಉಡಿಯು
ಕನಸುಗಳ ಗುಡಿಸಿ—ಗುಡಿಸಿ ?
ನುಚ್ಚು ನೂರಾಗಿಸಿದ, ಎದೆಯು ಹಂಬಲಗಳು
ಚಲ್ಲಿದ ಹಾದಿಗುಂಟ
ಉದ್ದಕ್ಕೂ ನಗು—ನಗುತ್ತ, ಪರಿಷೆ
ಹೊರಟಿದ್ದಾರೆ ಹಿತಚಿಂತಕರು
ಹಾಡ ಹಾಡುತ್ತಾ.
ಹೋಗಿ ಬನ್ನಿ ಗೆಳೆಯರೇ,
ಒಮ್ಮೆ ನೋಡಿ ಹಿಂದಿರುಗಿ,
ನೀವು ತುಳಿದು ನುಗ್ಗಾದ
ಪಕಳೆಗಳ ತುಟಿಗಳಲಿ
ಅರಳುತಿದೆ ನಗೆಯ ಮುಗುಳು !

ಕಿತ್ತ ಕಣ್ಣಿನ ಚರಿತ್ರೆ

—ಸ. ರಘುನಾಥ

ತಾಜಮಹಲಿನ ಮುಂದೆ
ಚಲುವಿನ ಸೋನೆ
ಹಂಸಕಲೆ, ಬೆರಗು ಬಲೆ

ಸೃಷ್ಟಿ ವಿನ್ಯಾಸದಚ್ಚರಿ
ಸಾಲು ಬೆಟ್ಟಗಳಲ್ಲಿ
ನವಿಲು ನರ್ತನದ ಗತಿ.

ಕಲೆಯು ಬೀಜ ಕಲ್ಲೊಡನೆ ಪ್ರೀತಿ
ಕಠಿಣ ಉಳಿಗಳ ಹೊಕ್ಕು
ಚಿತ್ತಾರದ ಸೃಷ್ಟಿ ಲೋಕ.

○ ○ ○

ಕಲ್ಲೊಡನೆ ಕರಗಿದ ಖಂಡ ಮಾಂಸ
ಪಿಳಿಪಿಳಿ ಕಣ್ಣು; ಮಿಂಚು
ಮಾತಿನಲ್ಲೆದೆಯ ಹಿಮದ ಹೆಪ್ಪು.

ಮಹಲು ಚಲುವಿನ ಸೋನೆ
ಮುಂದು ಅಚ್ಚರಿ ಕಣ್ಣು. ಮೇಲೆ ಬೆಳ್ಳಕ್ಕಿ
ನೋಟದೊಡನಾಟ.

ಕಿತ್ತ ಕಣ್ಣು
ಮರೆಯಾದ ನೋಟ
ರೂಪಿಸಿದ ಕಲೆಯೊಡನೆ ಮಬ್ಬು ನೆನಪು.

ನೂರು ರೂಪಿನ ಕನಸು ಹೊತ್ತ ಶಿಲೆ
ಶೀಲ ಕಳಕೊಂಡ ಕನ್ನೆ, ಮಳಲ ದಿಣ್ಣೆ
ಅನಾಥ ಉಳಿ ಗೂಟ.

ಎಣ್ಣೆಗಡಿಗೆಯ ಮೇಲೆ
ಬರೆದು ಉಳಿದಷ್ಟೆ ಕಥೆ
ತುಟಿಯುಲುಗಿ ಹೊರಬಂದ ಮಾತು ಮಾತು.

ನೀಲಿ ಆಗಸದಲ್ಲಿ ಎಷ್ಟೋ ಹಾರಿದ ಹಕ್ಕಿ
ತೆರೆದದ್ದು ಯಾವ ದಾರಿ ?
ಇತಿಹಾಸದಪಹಾಸ ಕಪ್ಪು ಚುಕ್ಕಿ.

ಮೂರು ಹನಿಗಳು

—ಶ್ರೀ ಗಜೇಂದ್ರ

೧

ಗಿಡ ಹತ್ತಿರವಿದ್ದಾಗ
ಉತ್ತುಂಗ ಶಿಖರವೂ
ಮರೆಯಾಗುವುದು

೨

ನೆಲ ಆಕಾಶ
ಒಂದು ಅಣು ಮತ್ತೊಂದು
ಬೃಹತ್ತು
ಆಕಾಶ ಚಿಗುರುವುದು
ನೆಲದಲ್ಲಿ

೩

ಮಾತು ಬೆಳ್ಳಿ ಮೌನ ಬಂಗಾರ
ಇದ್ದವರಿಗೆ
ಹೇಗಿದ್ದರೇನು ಇಲ್ಲದವರಿಗೆ
ಮಣ್ಣೇ ಮಣ್ಣು

ಮರಳಿ ಕೊಡುವಿರಾ ....

—ರಾಜಶೇಖರ ಹನುಮಲಿ

ನನ್ನೆಲ್ಲ ಕಳೆದ ಸುಂದರ ದಿನಗಳನು
ಮರಳಿ ಕೊಡುವಿರಾ ನನಗೆ ?
ನನ್ನದಾಗಿಹ ಪದವಿ ಭಾಗ್ಯ
ಎಲ್ಲವನೂ ಬಿಟ್ಟು ಕೊಡಬಲ್ಲೆ

ಕಿರೀಟ ಯೌವ್ವನದ ಉನ್ಮತ್ತ
ತೆರೆಗಳನು ಹಿಂದು ಬಿಟ್ಟು
ಬರಿಗೈಲಿ ಚಾಚಿ ನಿಲ್ಲಬಲ್ಲೆ–
ಮರಳಿ ಕೊಡುವಿರಾ ನನ್ನ ಬಾಲ್ಯವೆನಗೆ ?

ನನ್ನ ಮಧುಸಂಪುಟದಿ
ಒಂದೊಂದೆ ಅಣಿಮುತ್ತು ಮಿಂಚಿ
ನೆನಪಾಗುತಿವೆ
ನನ್ನವ್ವ ಮಿಡಿದ ಗರತಿಯಹಾಡು
ತಟ್ಟಿ ಮಲಗಿಸುವಾಗ–
ಗಿಲಿಕಿರಿದ ಬಳೆಗಳ ಕಿಂಕಿಣಿ ಮೋಡಿ–
ಎದೆಯ ಮೃದು ಸ್ಪರ್ಷದಲಿ
ಎರೆದ ಅಮೃತವರ್ಷ ನನಗಿಲ್ಲ

ಇಂದು ನನಗಿಲ್ಲ–
ಚಿಟ್ಟೆ ಕಿನ್ನರರ ಬೆನ್ನಟ್ಟಿ
ಕಾಮನಬಿಲ್ಲ ಹಿಡಿದ ದಿನಗಳನು
ಮರಳಿ ಕೊಡುವಿರಾ ನನಗೆ ?
ಮಳೆ ಹನಿಯು ಸಿಂಪುಗಳ ಬಾಯಲಿ
ಹಾಕಿ ಮುತ್ತಿನಂತೆ ಸವಿದ

ಕಪ್ಪೆಚಿಪ್ಪಾದ ಮಧುಕ್ಷಣವ.
ಮರಳಲ್ಲಿ ಕಾಲಿಟ್ಟು ಮನೆಕಟ್ಟಿ
ಮಕ್ಕಳು ಮರಿಗಳ ಮಾಡಿ
ಆಡಿದ ಕನಸಿನ ದಿನಗಳನ್ನು....

ಇಂದಿನ ವರ್ಷ ವರ್ಷಗಳ ಬದುಕ
ನದರಿಲ್ಲದೆಯೆ ಸಮಜಾಟಿ ಮಾಡುವೆನು
ಆ ನನ್ನ ಪುಟ್ಟಕ್ಷಣಗಳಿಗೆ
ಹೇಳಿ,
ಮರಳಿಕೊಡುವಿರಾ ನನ್ನ ಬಾಲ್ಯವೆನಗೆ ?

O

ಅನಾದರಣೆಗೊಳಗಾದ ಪುಸ್ತಕ.

ನಿರಂಜನರ 'ಮೃತ್ಯುಂಜಯ' : ಒಂದು ಪರಿಚಯ.

○ ರಾಜೇಂದ್ರ ಚೆನ್ನಿ

ಇತಿಹಾಸವನ್ನು ಬಳಸಿಕೊಂಡು ಕಾದಂಬರಿ ಬರೆಯುವವರಿಗೆ ಒಂದು ವಿಶಿಷ್ಟವಾದ ಸಮಸ್ಯೆ ಎದುರಾಗುತ್ತದೆ. ಇದು ಕಾದಂಬರಿಯಲ್ಲಿ ಚಿತ್ರಿತವಾಗಬೇಕಾದ ಇತಿಹಾಸದ ಜೀವನದ ಮೂರ್ತ ವಿವರಗಳಿಗೆ ಸಂಬಂಧಿಸಿದ್ದು. ಕಾದಂಬರಿಯ ರಕ್ತ ಮಾಂಸಗಳಾದ ಚಿತ್ರಣದ ವಿವರಗಳು ಮೂರ್ತವಾಗಿರದಿದ್ದಲ್ಲಿ ಇತಿಹಾಸ ಕೇವಲ ನೆಪಮಾತ್ರವಾಗಿಬಿಡುತ್ತದೆ. ಅಲ್ಲದೆ ಇತಿಹಾಸದ ಬಗ್ಗೆ ಬರಹಗಾರ ಏನೇ ಹೇಳಿದರೂ ಅದು ಬರಿ ಹೇಳಿಕೆಯ ಮಟ್ಟದಲ್ಲಿ ಉಳಿಯುತ್ತದೆ. ಬರಹಗಾರನಿಗೆ ಇತಿಹಾಸವೆಂದರೆ ಕಾಲದ ಗರ್ಭದಲ್ಲಿ ಅಡಗಿಬಿಟ್ಟಿರುವ ಬದುಕಿನ ಘಟ್ಟವೊಂದನ್ನು ಮೂರ್ತವಾಗಿ ಪುನಃ ಸೃಷ್ಟಿಸಿಕೊಳ್ಳುವ ಕೆಲಸ. ಆದರೆ ಇತಿಹಾಸದ ಬದುಕಿನ ವಿವರಗಳನ್ನು ಹಿಡಿದುಕೊಡುವ. ತವಕದಲ್ಲಿ ಅವುಗಳನ್ನು ಅತಿರಂಜಿತವಾಗಿಸಿಬಿಟ್ಟರೆ ಅವುಗಳು ಓದುಗನಿಗೆ ದೂರವಾಗಿಬಿಟ್ಟು ಅವನು ಆ ವಿವರಗಳನ್ನು 'ವಸ್ತು ಸಂಗ್ರಹಾಲಯದ ವಸ್ತುಗಳಂತೆ ಬರಿ ಮಾಹಿತಿಗಾಗಿ ಅಥವಾ ರಂಜನೆಗಾಗಿ ಸ್ವೀಕರಿಸಬಹುದು. ಸಾಮಾನ್ಯ ದರ್ಜೆಯ ಐತಿಹಾಸಿಕ ಕಾದಂಬರಿಗಳಲ್ಲಿ ನಾವು ಇದನ್ನೇ ನೋಡುತ್ತೇವೆ. ಅಂದರೆ ಮೇಕಪ್ ಮಾಡಿಕೊಂಡ ನಟನ ವೇಷದ ಜತೆಗೆ ಅವನ ಗಡ್ಡಕ್ಕೆ ಉಪಯೋಗಿಸಿದ ಅಂಟು ಮತ್ತು ಬಣ್ಣದ ಗೆರೆಗಳನ್ನು ನೋಡಿದಂತೆ. ಮಾಸ್ತಿಯವರು ಐತಿಹಾಸಿಕ ಕಾದಂಬರಿಗಳ ಇಂಥ ಬಾಲಿಷ ರೀತಿಯನ್ನು ಬಿಟ್ಟು ಇತಿಹಾಸದ ಬದುಕನ್ನು ವಾಸ್ತವವಾದೀ ಕಲ್ಪನೆಯ ಮೂಲಕ ನೋಡಿ ಬರೆಯುವದನ್ನು ರೂಢಿಸಿಕೊಂಡರು. ವರ್ಣನೆಗಳಲ್ಲಿ, ಪಾತ್ರಗಳ ಮಾತು ಮತ್ತು ನಡುವಳಿಕೆಯಲ್ಲಿ ಮಾಸ್ತಿ ಎಂಥ ನಿಷ್ಠುರವಾದ ಯಥಾರ್ಥವಾದಿಗಳಾಗಿರುತ್ತಾರೆಂದರೆ ಅವರು ಉದ್ದೇಶಪೂರ್ವಕವಾಗಿಯೇ ಐತಿಹಾಸಿಕವೆನ್ನುವ ಹಣೆ ಚೀಟಿ ಪಡೆಯುವ ಎಲ್ಲ ಅಂಶಗಳನ್ನು

ತಮ್ಮ ಕಾದಂಬರಿಗಳಿಂದ ಹೊರಗಿಡುವಂತೆ ತೋರುತ್ತದೆ. ರಮ್ಯವಾಗಬಹುದಾದದ್ದನ್ನು ಸಾಮಾನ್ಯಗೊಳಿಸುವ ಈ ಬಗೆ ಅವರ ಜೀವನದೃಷ್ಟಿಯ ದ್ಯೋತಕವೂ ಆಗಿದೆ. ನಿರಂಜನರ 'ಮೃತ್ಯುಂಜಯ' ಇತಿಹಾಸವನ್ನು ತೀರ ಭಿನ್ನವಾದ ರೀತಿಯಲ್ಲಿ ಬಳಸಿಕೊಳ್ಳುತ್ತದೆ. ಕಾದಂಬರಿಯಲ್ಲಿ ಎದ್ದು ಕಾಣುವ ಅಂಶವೆಂದರೆ ಇಜಿಪ್ತಿನ ಗತಕಾಲವೊಂದರ ಮೂರ್ತವಾದ ಮತ್ತು ಕೆಲವು ಕಡೆಗೆ ದೀರ್ಘವೆನಿಸುವ ವಿವರಗಳು. ಇಜಿಪ್ತಿನ ಬದುಕಿನ ಈ ವಿವರಗಳು ನಮಗೆ ಕಡಿಮೆ ಪರಿಚಿತವಾಗಿದ್ದರಿಂದ ಮತ್ತು ಕಾದಂಬರಿಯ ಭಾಷೆ ವಿವರಗಳಿಗೆ ಜೀವಸ್ಪರ್ಶ ಮಾಡಿಸುವಷ್ಟು ಉದ್ದೀಪಕವಾಗಿರದೆ ಇದ್ದರಿಂದ ಮೊದಲ ಓದಿನಲ್ಲಿ ಅವು ನಮಗೆ ತೊಡಕಾಗುತ್ತವೆ. ಕಥೆಯ ಓಟಕ್ಕೆ ಅಡಚಣೆಯಾದಂತೆ ಭಾಸವಾಗುತ್ತದೆ. ಆದರೆ ಕಾದಂಬರಿಯ ಬಂಧವನ್ನು ಸರಿಯಾಗಿ ಗುರುತಿಸಿದಾಗ ಈ ವಿವರಗಳು ಕೇವಲ ಒಬ್ಬ ಸಂಶೋಧಕನ ಟಿಪ್ಪಣಿಗಳಲ್ಲ, ಕಾದಂಬರಿಯ ಸತ್ವಕ್ಕೆ ಅನಿವಾರ್ಯವಾದಂಥವು ಎನ್ನುವುದು ಸ್ಪಷ್ಟವಾಗುತ್ತದೆ. ಕಾದಂಬರಿಯ ಸತ್ವ ಮತ್ತು ಅದನ್ನು ಹೊಮ್ಮಿಸುವ ಅದರ ಬಂಧ—ಇವೆರಡನ್ನು ಗುರುತಿಸಲು ಇಜಿಪ್ತಿನ ಇತಿಹಾಸದ ಮತ್ತು ನಿರಂಜನರು ಬಳಸಿಕೊಳ್ಳುವ ಪುರಾಣ ಕಥೆಗಳ ಪರಿಚಯ ಅವಶ್ಯಕವಾಗಿದೆ.

ಪುರಾತನ ಇಜಿಪ್ತನ್ನು 'ಸತ್ತರೂ ಸಮಾಧಿಯಾಗದ ಸಮಾಜ'ವೆಂದು ಇತಿಹಾಸಕಾರರು ವರ್ಣಿಸಿದ್ದಾರೆ. ಅಲ್ಲಿಯ ಪಿರಮಿಡ್‌ಗಳಂತೆ ಜಡವಾಗಿ, ಒಳಗಿನ ಕ್ರಮಶೀಲತೆ ಸತ್ತ ಮೇಲೆಯೂ ಸ್ಥಿರತೆಯ ಭ್ರಮೆಯುಂಟು ಮಾಡುವಂತಹ ಸಮಾಜ ವ್ಯವಸ್ಥೆ ಅಲ್ಲಿಯದಾಗಿತ್ತು. ಅದರ ಬಾಳಿಕೆಯ ಗುಣವನ್ನು ಮತ್ತು ನಿರಂತರ ಪುನರಾವರ್ತನೆಯನ್ನು ನೋಡಿದವರಿಗೆ ಆ ಸಮಾಜದಲ್ಲಿ ಒಳಗಣ ಘರ್ಷಣೆಗಳು, ಪಲ್ಲಟಗಳು ಇದ್ದುವೆಂಬುದನ್ನು ಊಹಿಸಲೂ ಕಷ್ಟವಾಗಬಹುದು. ಇಜಿಪ್ತಿನ ನಾಗರೀಕತೆ ಬೆಳವಣಿಗೆ ಬದಲಾವಣೆಯನ್ನು ಪೊರೆಯುವಂತಹದ್ದಾಗಿರಲಿಲ್ಲ. ಜಡತೆ ಮತ್ತು ನಿಶ್ಚಲತೆ ಅದರ ಮುಖ್ಯ ಲಕ್ಷಣಗಳಾಗಿದ್ದವು. ಗ್ರೀಕ್ ಇತಿಹಾಸಕಾರರು ಗುರುತಿಸಿದಂತೆ ಇಜಿಪ್ತನ್ನು ಹುಟ್ಟುಹಾಕಿದ್ದು ನೈಲ್ ನದಿ. ವಿಶಾಲವಾದ ಮರಳುಗಾಡನ್ನು ಇಬ್ಭಾಗಿಸಿ ಹರಿಯುವ ಈ ನದಿ ಪ್ರತಿವರ್ಷವೂ ನಿಯಮಿತವಾಗಿ ಪ್ರವಾಹದ ಮೂಲಕ ತನ್ನ ಇಕ್ಕೆಲದಲ್ಲಿ ಫಲವತ್ತಾದ ಮಣ್ಣನ್ನು ಹೊತ್ತು ತರುತ್ತಿತ್ತು. ದಡದ ಸುತ್ತಲಿನ ಕಾಡನ್ನು ಜವುಗನ್ನು ಸವರಿ ಬಿಟ್ಟು ಇಜಿಪ್ತಿನ ಪುರಾತನರು ಕೃಷಿ ಪದ್ಧತಿಯನ್ನು ರೂಢಿಸಿಕೊಂಡದ್ದು ಮನುಷ್ಯ

ತನ್ನ ಬದುಕಿಗಾಗಿ ಅನುಕೂಲವಾದ ಕೃತ್ರಿಮ ಪರಿಸರವೊಂದನ್ನು ನಿರ್ಮಿಸಿಕೊಂಡ ಮೊದಲ ಉದಾಹರಣೆಗಳಲ್ಲೊಂದಾಗಿತ್ತು. ಅದೇ ಹೊತ್ತಿನಲ್ಲಿ ಶುರುವಾದ ಹೊಸ ಕೃಷಿ ಸಾಧನಗಳ ಬಳಕೆ, ಲೋಹಗಳ ಉಪಯೋಗದಿಂದಾಗಿ ಮಾನವ ನಾಗರೀಕತೆ ಹೊಸ ಘಟ್ಟವೊಂದನ್ನು ತಲುಪಿದಂತಾಯಿತು. ಇಂತಹ ಕೃಷಿ ವ್ಯವಸ್ಥೆ ಕ್ರಮೇಣವಾಗಿ ಮನುಷ್ಯನ ತಕ್ಷಣದ ಅವಶ್ಯಕತೆಗಳಿಗಿಂತಲೂ ಮಿಗಿಲಾದ ಹೆಚ್ಚುವರಿಯನ್ನು ಉತ್ಪಾದಿಸಲು ಸಮರ್ಥವಾದಾಗ ನಗರಗಳು ಹುಟ್ಟಿಕೊಂಡು ಹೊಸ ಸಮಾಜ ವ್ಯವಸ್ಥೆ ಸಾಧ್ಯವಾಯಿತು. ಈ ಹೆಚ್ಚುವರಿ ಇಲ್ಲದಿದ್ದಲ್ಲಿ ನೈಲ್ ನದಿಯ ದಡದ ಉದ್ದಕ್ಕೂ ಸ್ವಾವಲಂಬಿ ಹಳ್ಳಿಗಳು ಹುಟ್ಟಿ ಕೊಳ್ಳುತ್ತಿದ್ದವೇ ಹೊರತು ವಿಶಾಲವಾದ ಸಾಮ್ರಾಜ್ಯವೊಂದು ಹುಟ್ಟುವುದು ಅಸಾಧ್ಯವಾಗುತ್ತಿತ್ತು. ಈ ಹೆಚ್ಚುವರಿಯಿಂದಾಗಿ ಅಂದಿನ ತಂತ್ರಜ್ಞಾನ, ಕಲೆ, ವಾಸ್ತುಶಿಲ್ಪ ಇವುಗಳು ಬೆಳೆಯುವದು ಸಾಧ್ಯವಾಯಿತು. ಮತ್ತು ಈ ಹೆಚ್ಚುವರಿಯನ್ನು ಉತ್ಪಾದಿಸುವ ವರ್ಗ, ಅದರ ಆಧಾರದ ಮೇಲೆ ಆಳ್ವಿಕೆ ಮಾಡುವ ವರ್ಗ ಹಾಗೂ ಆಡಳಿತ ವ್ಯವಸ್ಥೆಗೆ ಅವಶ್ಯಕವಾದ ಅಧಿಕಾರಿ ವರ್ಗ ಇವೆಲ್ಲವೂ ಒಂದು ಶ್ರೇಣೀಕೃತ ವ್ಯವಸ್ಥೆಯನ್ನು ನಿರ್ಮಿಸಿದವು. ಜತೆಗೆ ಈ ಅರ್ಥವ್ಯವಸ್ಥೆಯ ಮುಖ್ಯ ಅಂಗವಾದ ಪುರೋಹಿತಶಾಹಿ ಕೂಡ ಬಲಿಷ್ಠವಾಯಿತು. ಇಜಿಪ್ತಿನ ಅಗಾಧವಾದ ವಾಸ್ತುಶಿಲ್ಪವನ್ನು, ಅಲ್ಲಿಯ ಗೋರಿಗಳಲ್ಲಿ ಕಾಣುವ ಸಂಪತ್ತನ್ನು ಮಾತ್ರ ನೋಡುವವರಿಗೆ ಈ ವ್ಯವಸ್ಥೆಯ ಆಂತರಿಕ ಘರ್ಷಣೆಗಳು ಮತ್ತು ಕ್ರೌರ್ಯದ ಹಿನ್ನೆಲೆ ಅರ್ಥವಾಗುವದಿಲ್ಲ. ಇಜಿಪ್ತಿನ ಫೆರೋಗಳ ವಂಶಾವಳಿಗಳು ನಿಜವಾದ ಇತಿಹಾಸವನ್ನು ಹೇಳುವುದಿಲ್ಲ. ಅಲ್ಲಿಯ ಸಮಾಜ ವ್ಯವಸ್ಥೆಯ ಮುಖ್ಯ ಲಕ್ಷಣವೆಂದರೆ ಅದು ಉಳಿಯಬೇಕಾದರೆ ಅದರ ಶ್ರೇಣಿಕೃತ ವರ್ಗವ್ಯವಸ್ಥೆಯಲ್ಲಿ ಯಾವ ಬದಲಾವಣೆಗೂ ಆಸ್ಪದವಿರದಂತೆ ಇಡೀ ಸಮಾಜವನ್ನ ಜಡಗೊಳಿಸುವುದು ಅವಶ್ಯಕವಾಗಿತ್ತು. ಇದನ್ನು ಸಾವಿರಾರು ವರ್ಷಗಳವರೆಗೆ ಯಶಸ್ವಿಯಾಗಿ ಉಳಿಸಿಕೊಂಡಿದ್ದು ಇಜಿಪ್ತಿನ ಸಮಾಜದ ಅಂತಸತ್ವವನ್ನು ತೋರಿಸುವದಿಲ್ಲ. ಬದಲಾಗಿ ಅದರ ಆಧಾರವಾಗಿದ್ದ ಕ್ರೌರ್ಯದತ್ತ ಮತ್ತು ಪುರೋಹಿತಶಾಹಿಯ ಹಿಡಿತದತ್ತ ಬೆರಳು ಮಾಡಿ ತೋರಿಸುತ್ತದೆ. ಇಜಿಪ್ತಿನ ಸಮಾಜ ವ್ಯವಸ್ಥೆಯ ಕ್ರೌರ್ಯಕ್ಕೆ ಮುಖ್ಯ ಕಾರಣವಾದದ್ದು ಅಲ್ಲಿಯ ವಿಶಿಷ್ಟವಾದ ಧರ್ಮ, ಬಹುಶಃ ಮರಳಿನಲ್ಲಿ ಬಹುಕಾಲ ಕೊಳೆಯದೇ ಇದ್ದ ಶವಗಳಿಂದಾಗಿ ಅಲ್ಲಿಯ ಧಾರ್ಮಿಕ ಚಿಂತನೆ ಮನುಷ್ಯನ ಸಾವಿನ ನಂತರದ ಶಾಶ್ವತತೆಯನ್ನು ಗೀಳಾಗಿಸಿಕೊಂಡಿತು. ಶವಲೇಪನ, ಮತ್ತು ಸಾವಿನ ನಂತರದ ಜಗತ್ತಿನಲ್ಲಿ ಸತ್ತವನಿಗೆ ಬೇಕಾಗುವ

ಸಾಮಾಗ್ರಿಗಳ ಬಗ್ಗೆ ವಿವರವಾದ ವಿಧಿ ವಿಧಾನಗಳು ಹುಟ್ಟಿಕೊಂಡವು. ಅರ್ಥ ವ್ಯವಸ್ಥೆಯ ಹೆಚ್ಚುವರಿ ನಿಷ್ಪ್ರಯೋಜಕವಾದ ಗೋರಿಗಳನ್ನು, ಪಿರಮಿಡ್‌ಗಳನ್ನು ಕಟ್ಟುವುದರಲ್ಲಿ ವ್ಯಯವಾಗತೊಡಗಿತು. ಹೀಗಾಗಿ ಗುಲಾಮರು ಮತ್ತು ಕೃಷಿಕರು ಅಮಾನುಷವಾದ ದುಡಿಮೆಯಲ್ಲಿ ತೊಡಗಿದರೂ ಅವರ ನಿತ್ಯ ಜೀವನ ಕನಿಷ್ಠ ಮಟ್ಟವಾಗಿರುವುದು ಅನಿವಾರ್ಯವಾಯಿತು. ಇಂಥ ಪರಿಸ್ಥಿತಿಯಲ್ಲಿ ವ್ಯವಸ್ಥೆಯ ಅಸಮಾನತೆಯ ವಿರುದ್ಧ ಯಾವ ರೀತಿಯ ಪ್ರತಿಭಟನೆಯೂ ಆಗದಂತೆ ನೋಡಿಕೊಳ್ಳುವ ಜವಾಬ್ದಾರಿ ಧರ್ಮದ್ದಾಯಿತು. ಸಾವಿನ ನಂತರದ ಬಗೆಗಿನ ಸಾಮೂಹಿಕ ಗೀಳನ್ನು (Mass obsession) ಉಪಯೋಗಿಸಿಕೊಂಡು ಮನುಷ್ಯನ ಇಹದ ಬದುಕಿನ ಅಸಹ್ಯವನ್ನು ಅವನು ಪ್ರತಿಭಟಿಸದಂತೆ ಅಲ್ಲಿಯ ಪುರೋಹಿತಶಾಹಿ ನೋಡಿಕೊಂಡಿತು. ಜತೆಗೆ ಎಲ್ಲ ಕಡೆಗೂ ಹಬ್ಬಿದ ಮಂದಿರ ಗಳು ಹೇರಳವಾದ ಆಸ್ತಿಯನ್ನು ಗುಲಾಮರನ್ನು ಹೊಂದಿದ್ದರಿಂದ ಪುರೋ ಹಿತಶಾಹಿ ಒಂದು ಪರ್ಯಾಯವ್ಯವಸ್ಥೆಯನ್ನು ರೂಪಿಸಿಕೊಂಡಿತು. ಹೀಗಾಗಿ ಆಳುವ ವರ್ಗ ಮತ್ತು ಪುರೋಹಿತಶಾಹಿ ಎರಡೂ ಸೇರಿ ದುಡಿಯುವ ವರ್ಗವನ್ನು ತಮ್ಮ ಕರಾಳ ಹಿಡಿತದಲ್ಲಿಟ್ಟು ಕೊಂಡಿದ್ದವು. ಇಜಿಪ್ತಿನ ಸಮಾಜ ವ್ಯವಸ್ಥೆಯ ಈ ರೂಪ ಎಷ್ಟು ನಿಚ್ಚಳವಾಗಿದೆಯೆಂದರೆ ಮಾರ್ಕ್ಸ್‌ನ ವರ್ಗ ವಿಶ್ಲೇಷಣೆಗೆ ಬೇಕಂತಲೇ ತಯಾರಿಸಿದ ಒಂದು ಮಾದರಿಯಂತಿದೆ ! ನಿರಂಜನರು ಇಜಿಪ್ತಿನ ವರ್ಗವ್ಯವಸ್ಥೆಯ ಸ್ವರೂ ಪವನ್ನು ಸೂಕ್ಷ್ಮವಾಗಿ ಗ್ರಹಿಸಿದ್ದಾರೆ. ಇದು ಕಾದಂಬರಿಯ ಮುಖ್ಯ ಅಂಶವಾದ ಫೆರೋ ಮತ್ತು ಪುರೋಹಿತಶಾಹಿಯ ವಿರುದ್ಧ ನೀರಾನೆ ಪ್ರಾಂತದ ಮೆನೆಪ್‌ಟಾ ಮಾಡುವ ಬಂಡಾಯಕ್ಕೆ ಮಾತ್ರ ಸೀಮಿತವಾಗಿಲ್ಲ. ಕಾದಂಬರಿಯ ಎಲ್ಲ ವಿವರಗಳೂ ಇಜಿಪ್ತಿನ ವರ್ಗವ್ಯವಸ್ಥೆಯ ಸ್ವರೂಪವನ್ನು ಮೂರ್ತವಾಗಿ ಹಿಡಿದುಕೊಡುವ ಕುರುಹುಗಳಾಗಿವೆ. ಇದನ್ನು ಅರ್ಥ ಮಾಡಿ ಕೊಂಡರೆ ಕಾದಂಬರಿಯ ಬಂಧದ ಒಂದು ರೂಪ ನಮಗೆ ಗೋಚರಿಸುತ್ತದೆ. ಕಾದಂಬರಿಯ ಕೇಂದ್ರ ಮೊದಲ ಭಾಗದಲ್ಲಿ ಬಹಳ ಮತ್ತು ಬೇಗನೆ ಸುಲಭವಾಗಿ ನಡೆದು ಹೋಗುವ ಬಂಡಾಯವಲ್ಲ. ಕಾದಂಬರಿಯ ಬಂಧವಿರುವುದು ನಾಯಕ ಮೆನೆಪ್‌ಟಾ ಇಜಿಪ್ತಿನ ಸಮಾಜವ್ಯವಸ್ಥೆಯ ಸ್ವರೂಪವನ್ನು ಅರ್ಥ ಮಾಡಿಕೊಳ್ಳುವ ಚಿಂತನೆಯ ಬೆಳವಣಿಗೆಯಲ್ಲಿ. ಅಂದರೆ ಕಾದಂಬರಿಯ ರಚನೆ ಘಟನೆಗಳ ಬದಲಾಗಿ ನಾಯಕನ ಮಾನಸಿಕ ಬೆಳವಣಿಗೆಯನ್ನು ಅನುಸರಿಸುತ್ತದೆ. ನಿರಂಜನರು ಮೊದಲಿನಿಂದಲೂ ಕೊಡುತ್ತಾ ಹೋಗುವ ಜನ ಜೀವನದ ವಿವರಗಳು ಕ್ರಮೇಣವಾಗಿ ತೆರೆಯನ್ನು ಸರಿಸುತ್ತಾ ವ್ಯವಸ್ಥೆಯ ಮೂಲದಲ್ಲಿರುವ ಕ್ರೌರ್ಯವನ್ನು ಬಯಲುಮಾಡುತ್ತವೆ. ಅವುಗಳನ್ನು ಅನುಸರಿಸು ವಂತೆ ಮೆನೆಪ್‌ಟಾ ಕೂಡ ತನ್ನ ಸುತ್ತಲಿನ ಬದುಕಿನ ಆಳಕ್ಕೆ ಇಳಿಯುತ್ತಾ

ಕೊನೆಗೆ ಅದರ ನಿಜಸ್ವರೂಪವನ್ನು ಅರ್ಥಮಾಡಿಕೊಳ್ಳುತ್ತಾನೆ. ಕಂದಾಯ ವಸೂಲಿಯ ಅನ್ಯಾಯವನ್ನು ಮಾತ್ರ ಮೊದಲಿಗೆ ಪ್ರತಿಭಟಿಸಿದ ಅವನು ಕಾದಂಬರಿಯ ಕೊನೆಗೆ ವಿಚಾರಣೆಯ ಸನ್ನಿವೇಶದಲ್ಲಿ ಇಡೀ ಸಮಾಜ ವ್ಯವಸ್ಥೆಯ ಭ್ರಷ್ಟತೆಗೆ ಸವಾಲು ಎಸೆಯುತ್ತಾನೆ. ಮೊದಲ ಭಾಗದ ನೀರಾನೆ ಪ್ರಾಂತದ ಜೀವನದ ಸರಳತೆಗೂ ಮುಂದೆ ಮೆಂಫಿಸ್‌ನ ಬದುಕಿನ ಸಂಕೀರ್ಣತೆಗೂ ಇರುವ ವ್ಯತ್ಯಾಸಕ್ಕೂ ಇದೇ ಕಾರಣ. ಆದ್ದರಿಂದ ಕಾದಂಬರಿಯ ಬೆಳವಣಿಗೆ ಇರುವದು ಸಾಮಾನ್ಯ ವೆನಿಸುವ ವಿವರಗಳನ್ನು ಕೊಡುತ್ತಾ ಕೊನೆಗೆ ಅವುಗಳ ಹಿಂದಿರುವ ಸಮಾಜ ವ್ಯವಸ್ಥೆಯ ಸ್ವರೂಪವನ್ನು ಬಯಲು ಮಾಡುವದರಲ್ಲಿ.

ಕಾದಂಬರಿಯ ವಿವರಗಳು ಸ್ಪಷ್ಟಮಾಡುವಂತೆ ನೀರಾನೆ ಪ್ರಾಂತದ ಬಂಡಾಯ ಸಾಧ್ಯವಾಗುವದು ಮತ್ತು ಒಂದು ವರ್ಷ ಕಾಲ ಆಳ್ವಿಕೆಯ ದೌರ್ಜನ್ಯ ದಿಂದ ದೂರವಾಗಿರುವದು ಪೆರೋ ಮತ್ತು ಪುರೋಹಿತಶಾಹಿಯ ಮಧ್ಯದ ತಿಕ್ಕಾಟದಿಂದ ಹುಟ್ಟಿಕೊಂಡ ಅನಿಶ್ಚಿತ ವಾತಾವರಣದಿಂದ. ಇದಾವುದರ ಪರವೆ ಇಲ್ಲದ ಮೆನೆಪ್‌ಟಾ ಮತ್ತು ಅವನ ಜನರು ತಮ್ಮ ಬದುಕಿನಲ್ಲಿ ಕಾಣುವ ಅನ್ಯಾಯದ ವಿರುದ್ಧ ಬಂಡೇಳುತ್ತಾರೆ. ಅವರ ದೃಷ್ಟಿಯಲ್ಲಿ ಅನ್ಯಾಯಕ್ಕೆ ಕಾರಣವಾಗಿರುವವರು ಪ್ರಾಂತದ ಭೂ ಮಾಲೀಕರು ಮತ್ತು ಕಂದಾಯ ವಸೂಲಿ ಅಧಿಕಾರಿಗಳು. ಆದರೆ ತುಂಬಾ ಸರಳವಾದ ಈ ಘರ್ಷಣೆಯ ಪರಿಕಲ್ಪನೆ ಬಹಳ ಬೇಗನೆ ಬದಲಾಗುತ್ತದೆ. ಕಾದಂಬರಿಯ ಒಂದು ಮುಖ್ಯ ರೂಪಕವಾದ 'ಚೌಕ ಮಣೆ ಆಟ' ರಾಜಕೀಯದ ಸಂಕೀರ್ಣತೆಯನ್ನು ಮನದಟ್ಟು ಮಾಡಿಕೊಡುತ್ತದೆ. ಸ್ವತಃ ಮೆನೆಪ್‌ಟಾ ಅರ್ಥಮಾಡಿಕೊಳ್ಳುವಂತೆ ಪೆರೋ, ಮಹಾ ಅರ್ಚಕ, ಭೂ ಮಾಲೀಕರು ಎಲ್ಲರೂ ಈ ಆಟದಲ್ಲಿ ಕಾಯಿಗಳು. ನನ್ನ ದೃಷ್ಟಿಯಲ್ಲಿ ಕಾದಂಬರಿಯ ಅತ್ಯಂತ ಯಶಸ್ವಿ ಅಂಶವೆಂದರೆ ಈ ಚೌಕಮಣೆ ಆಟದ ತಿರುವುಗಳನ್ನು ನಿರಂಜನರು ವಿಶ್ಲೇಶಿಸುವ ರೀತಿ. ನೀರಾನೆ ಪ್ರಾಂತದ ಬದುಕಿನ ವರ್ಣನೆ ಸ್ವಲ್ಪಮಟ್ಟಿಗೆ ಭಾವುಕವಾಗಿದೆ ಮತ್ತು ಆದರ್ಶೀಕರಣದಿಂದಾಗಿ ತೆಳುವಾಗಿದೆ ಎನಿಸುತ್ತದೆ. ಆದರೆ ಮಹಾಮನೆ ಮತ್ತು ಮಹಾಮಂದಿರದ ಮಧ್ಯದ ಶೀತಲಯುದ್ಧದ ವಿವರಗಳು ಜೀವಂತವಾಗಿವೆ. ಇಜಿಪ್ತಿನ ಆಳುವ ವರ್ಗದ ಲೋಲುಪತೆಯ ಜೀವನ, ಮಾನ ವೀಯ ಮೌಲ್ಯಗಳೇ ಇಲ್ಲದ ಸಿನಿಕತನ ಮತ್ತು ಭ್ರಷ್ಟತೆ, ಭಾವನೆಗಳಿಗೆ ಅವಕಾಶವೇ ಇಲ್ಲದ ಕ್ರೂರ ಜಾಣತನ ಇವೆಲ್ಲವು ಸಹಜವಾಗಿ ಮೂಡಿ ಬಂದಿವೆ. ಮೇಲು ವರ್ಗದ ಸಿನಿಕತನದ ಮನುಷ್ಯ ಸಂಬಂಧಗಳು ನೀರಾನೆ ಪ್ರಾಂತದ ಜನರ ಸಹಜ ಸಂಬಂಧಗಳ ವೈದೃಶ್ಯದಿಂದಾಗಿ ನಾಗರೀಕತೆಯೊಂದರ

ಸಾವಿನ ಕತೆಯನ್ನು ಸೂಕ್ಷ್ಮವಾಗಿ ಹೇಳುತ್ತವೆ. ಈ ಭ್ರಷ್ಟ ವರ್ಗದ ಪ್ರತಿನಿಧಿಯಾದ ಹೆಪ್ಸೆಟ್, ತನ್ನಕಾರ್ಯಸಾಧನೆಗಾಗಿ ತನ್ನ ರತಿವರ್ಚಸ್ಸನ್ನು ಬಳಸಿಕೊಳ್ಳುವ ಇಜಿಪ್ತಿನ ರಾಣಿ, ತನ್ನ ಪುರುಷತ್ವವನ್ನು ದಾಸಿಯರಿಗೆ ಧಾರೆಯೆರೆದು 'ಸೆಡ್' ಉತ್ಸವದಿಂದ ಮಾತ್ರ ಯೌವ್ವನ ಪಡೆದುಕೊಳ್ಳಬಯಸುವ ಪೆರೋ—ಇವರಲ್ಲಿ ಅಧೋಗತ ಸಮಾಜವೊಂದರ ಪ್ರತಿನಿಧಿಗಳಾಗಿದ್ದಾರೆ. ಮಹಾ ಅರ್ಚಕ ಹೇಪಾಟ್ ಮತ್ತು ಅವನ ಹಿಂಬಾಲಕರು ದಬ್ಬಾಳಿಕೆಯಲ್ಲಿ ಸಾಮೀಲಾಗಿರುವ ಪುರೋಹಿತಶಾಹಿಯನ್ನು ಪ್ರತಿನಿಧಿಸುತ್ತಾರೆ. ರಾಜಸತ್ತೆ ಮತ್ತು ಪುರೋಹಿತಶಾಹಿಯ ಮಧ್ಯ ಅಧಿಕಾರಕ್ಕಾಗಿ ಕಚ್ಚಾಟ ಇಜಿಪ್ತಿನ ಸಂದರ್ಭದಲ್ಲಿ ಅನಿವಾರ್ಯವಾಗಿತ್ತು. ಪೆರೋ ತಾನು ರಾನ ಪುತ್ರನೆಂದು ಹೇಳಿಕೊಳ್ಳುತ್ತಿದ್ದರಿಂದ ಅಗ್ರಪೂಜೆಯ ಹಕ್ಕು ಅವನಿಗೆ ಸೇರಿತ್ತು. ಆದರೆ ಮಂದಿರಗಳಿಗೆ ಹೇರಳವಾದ ಆಸ್ತಿಯಿದ್ದಿದ್ದರಿಂದ ಮತ್ತು ಸಾವಿನನಂತರದ ಜಗತ್ತಿಗೆ ಪ್ರವೇಶ ದೊರಕಿಸುವುದು ಪುರೋಹಿತಶಾಹಿಯ ಹಕ್ಕಾಗಿದ್ದರಿಂದ ರಾಜಸತ್ತೆಯನ್ನು ಅದು ಅಲ್ಲಾಡಿಸುವಷ್ಟು ಬಲಶಾಲಿಯಾಗಿತ್ತು. ಈ ಚೌಕಮಣಿ ಆಟದಲ್ಲಿ ಕಾಯಿಗಳಾಗಿದ್ದ ಭೂ ಮಾಲೀಕರು ಎರಡೂ ಪಕ್ಷಗಳ ಬೆಂಬಲಕ್ಕಾಗಿ ಎಲ್ಲ ರಾಜಕೀಯ ತಂತ್ರಗಳನ್ನು ಬಳಸುತ್ತಿದ್ದರು. ಈ ಶೀತಲ ಯುದ್ಧದಿಂದ ಹುಟ್ಟಿಕೊಂಡ ಅನಿಶ್ಚಿತ ರಾಜಕೀಯ ಪರಿಸ್ಥಿತಿ ಕಾದಂಬರಿಯ ಕ್ರಿಯೆಗೆ ಹಿನ್ನೆಲೆಯಾಗಿದೆ. ನೀರಾನೆ ಪ್ರಾಂತದಲ್ಲಿ ನಡೆಯುವ ಬಂಡಾಯವನ್ನು ಹತ್ತಿಕ್ಕುವುದು ಸುಲಭವಾಗಿದ್ದರೂ ಈ ಪರಿಸ್ಥಿತಿಯಿಂದಾಗಿ ಅದು ವಿಲಂಬವಾಗುತ್ತದೆ. ಪೆರೋನ ಅತಿಥಿಯಾಗಿ ರಾಜಧಾನಿಗೆ ಬರುವ ಮೆನೆಪ್‌ಟಾ ರಾಜಕೀಯದ ಸುಳಿಯಲ್ಲಿ ಸಿಕ್ಕಿಕೊಳ್ಳುತ್ತಾನೆ, ನೀರಾನೆ ಪ್ರಾಂತದ ಭೂಮಾಲೀಕರು ಮಹಾ ಅರ್ಚಕನ ಪಕ್ಷವನ್ನು ಸೇರಬಹುದಾದ್ದರಿಂದ ಪೆರೋ ಅಮಾತ್ಯ ಮೆನೆಪ್‌ಟಾನನ್ನು ಮೊದಲು ಬರಮಾಡಿಕೊಳ್ಳುತ್ತಾನೆ. ಆದರೆ ತನ್ನ ಬಲದ ಸಮರ್ಥನೆಗಾಗಿ ಮತ್ತು ಭೂಮಾಲೀಕರನ್ನು ತನ್ನ ಹಿಡಿತದಲ್ಲಿಟ್ಟು ಕೊಳ್ಳುವದಕ್ಕಾಗಿ ಮಹಾ ಅರ್ಚಕ ಹೇಪಾಟ್ ಮೆನೆಪಾಟ್‌ನನ್ನು ಬಂಧಿಯಾಗಿಸುತ್ತಾನೆ. ರಾಜಕೀಯದ ಕುತಂತ್ರವನ್ನು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳುವ ರಾಣಿ ನೇರವಾಗಿಯೇ ಹೇಳುವಂತೆ ಪೆರೋ ಮತ್ತು ಮಹಾಅರ್ಚಕರ ಮಧ್ಯ ರಾಜಿಯಾಗುವುದಕ್ಕೆ ಮೆನೆಪ್‌ಟಾ ಬಲಿಯಾಗಬೇಕಾಗುತ್ತದೆ. ಹೀಗೆ ಮೆನೆಪ್‌ಟಾ ಮತ್ತು ನೀರಾನೆ ಪ್ರಾಂತದ ಜನರು ರಾಜಕೀಯದ ಆಟದಲ್ಲಿ ಬಲಿಪಶುಗಳಾಗುತ್ತಾರೆ. ಈ ಸಂದರ್ಭದಲ್ಲಿ ಮೆನೆಪ್‌ಟಾ ಅಸಹಾಯಕತೆ ಮತ್ತು ಆದರ್ಶವಾದ ಅಸಹಜವೆನಿಸುತ್ತದೆಯಾದರೂ ಅವನು ಇಜಿಪ್ತಿನ ಸಮಾಜ ವ್ಯವಸ್ಥೆಯನ್ನು ಸರಿಯಾಗಿಯೇ ಅರ್ಥ ಮಾಡಿಕೊಳ್ಳುತ್ತಾನೆ. "ನಮ್ಮ ಸಮಾಜ ವಿಸ್ತಾರ ಬುನಾದಿಯ ಮೇಲಿನ ಹತ್ತಾಳು ಎತ್ತರದ ಗೋರಿ. ಈ

ಸೋಪಾನ ವ್ಯವಸ್ಥೆ ನಿಂತಿರೋದು ಸಹಸ್ರ ಸಹಸ್ರ ಶ್ರಮಜೀವಿಗಳ ಭುಜಗಳ ಮೇಲೆ. ಎತ್ತರಕ್ಕೆ ಹೋಗ್ತಾ ಅಗಲ ಕಿರಿದು. ದುಡಿಸುವ ಕಾಪೀರುಗಳು ಭೂಮಾಲೀಕರು, ವರ್ತಕರು, ಸೈನ್ಯ, ಆಡಳಿತಗಾರರು, ಅರ್ಚಕರು. ಸುಲಿಗೆಯ ಸೂತ್ರ ಈ ವ್ಯವಸ್ಥೆಯನ್ನು ಬಿಗಿದು ಕಟ್ಟಿದೆ.” (ಪುಟ 381)

“ಧರ್ಮಗುರು ಪ್ರಸನ್ನನಾಗಬೇಕೆಂದು ರಾಜವಂಶ ಹಾತೊರೆಯುತ್ತದೆ. ಅವನ ಆಶ್ರಯಕ್ಕಾಗಿ ಭೂಮಾಲೀಕರು ಬಾಯಿ ಬಿಡುತ್ತಾರೆ. ಹಾಗೆ ಯೋಚಿಸುತ್ತ ಮೆನೆಪ್‌ಟಾನಿಗೆ ಅನಿಸಿತು : ಸಮಾಜವನ್ನು ಬಿಗಿಯಾಗಿ ಹಿಡಿದಿರುವ ಶಕ್ತಿಗಳು ಮೂರು– ಸಮೀಪದಿಂದ ಭೂಮಾಲೀಕ ಗಣ, ದೂರದಿಂದ ಪೆರೋ ಮತ್ತು ಮಹಾ ಅರ್ಚಕ” (ಪುಟ 283)

ಸಮಾಜ ವ್ಯವಸ್ಥೆಯ ಈ ಸ್ವರೂಪವನ್ನು ಬಯಲು ಮಾಡುವದೇ ಕಾದಂಬರಿಯ ಕೇಂದ್ರ ಬಿಂದು ಎಂದಿಟ್ಟುಕೊಂಡರೆ ಕಾದಂಬರಿಯಲ್ಲಿ ವೈಯಕ್ತಿಕ ಮಟ್ಟದಲ್ಲಿ ಕಾಣುವ ದೌರ್ಜನ್ಯದ ವಿವರಗಳು, ಈ ವಿಶ್ಲೇಷಣೆಯ ಹಿನ್ನೆಲೆಯಲ್ಲಿ ಹೆಚ್ಚಿನ ಅರ್ಥವಂತಿಕೆ ಪಡೆದುಕೊಳ್ಳುತ್ತವೆ. ಮೊದಲಿಗೆ ನೀರಾನೆ ಪ್ರಾಂತದ ಬಂಡಾಯದಲ್ಲಿ ಪಾಲುಗೊಳ್ಳುವ ಎಲ್ಲರಿಗೂ ಬೆಂಬಲವಾಗಿರುವದು ತಾವು ಋಜು ಮಾರ್ಗದಲ್ಲಿ ನಡೆಯುತ್ತಿದ್ದೇವೆ ಎನ್ನುವ ಸರಳವಾದ ನೈತಿಕ ಸ್ಥೈರ್ಯ. ಆದರೆ ಹಿನ್ನೆಲೆಯೆಲ್ಲವೂ ಅರ್ಥವಾದ ಮೇಲೆ ಅವರು ನೆಚ್ಚಿಕೊಂಡ ‘ಮಾಟ್’ (ವೈಯಕ್ತಿಕ ನೀತಿಮಾರ್ಗ) ಚರಿತ್ರೆಯ ತಿರುವಿನೊಂದರಲ್ಲಿ ದುಡಿಯುವ ವರ್ಗ ಆಳುವ ವರ್ಗದ ವಿರುದ್ಧ ಹೂಡಬೇಕಾದ ಬಂಡಾಯ ಶಕ್ತಿಯಾಗಿ ಪರಿಣಮಿಸುತ್ತದೆ. ಹೀಗೆ ಕಾದಂಬರಿಯ ಬಂಧ ವ್ಯಕ್ತಿ ತನ್ನ ಸ್ವಂತ ಬದುಕಿನ ನೋವುಗಳಿಂದ ಆರಂಭಿಸಿ ಅವುಗಳ ಹಿನ್ನೆಲೆಯನ್ನು ಚರಿತ್ರೆಯ ವಿಶಾಲವಾದ ಭಿತ್ತಿಯ ಮೇಲೆ ಗುರುತಿಸಿ ಕೊಳ್ಳುವತ್ತ ಸಾಗುವ ಕ್ರಿಯೆಯನ್ನು ಅನುಸರಿಸುತ್ತದೆ. ಅರ್ಚಕ ವರ್ಗದವನಾಗಿದ್ದೂ ಅದರಿಂದ ಸಿಡಿದೆದ್ದ ಮೆನ್ನ ವ್ಯವಸ್ಥೆಯ ಕ್ರೌರ್ಯವನ್ನು ನೋಡಿ ವಿಹ್ವಲಗೊಂಡ ಸೂಕ್ಷ್ಮ-ಜೀವಿ. ಅಸಹಾಯಕ ಹುಚ್ಚಿನ ಮಟ್ಟದಲ್ಲಿದ್ದ ಅವನ ವೈಯಕ್ತಿಕ ಬಂಡಾಯ ಕಾದಂಬರಿಯ ಕೊನೆಗೆ ಹೆಚ್ಚು ಕ್ರಿಯಾಶೀಲವಾಗುತ್ತದೆ. ಅವನು ಕೂಡ ವೈಯಕ್ತಿಕ ಮಟ್ಟದ ಬಂಡಾಯ ತರಬಹುದಾದ ಒಬ್ಬಂಟಿತನವನ್ನು ಮೀರಿ ದುಡಿಯುವ ವರ್ಗದ ಸಾಮಾಜಿಕ ಬಂಡಾಯದಲ್ಲಿ ಒಂದಾಗುತ್ತಾನೆ.

ಕಾದಂಬರಿಯ ಸತ್ವವನ್ನು ಪೋಷಿಸುವ ಅದರ ಬಂಧದ ಇನ್ನೊಂದು

ಅಂಶವೆಂದರೆ ನಿರಂಜನರು ಬಳಸಿಕೊಳ್ಳುವ ಪುರಾತನ ಇಜಿಪ್ತಿನ ಪುರಾಣ ಕತೆಗಳು (Myths). ಅದರಲ್ಲೂ ಮುಖ್ಯವಾಗಿ ಒಸ್ಸೈರಿಸ್‌ಗೆ ಸಂಬಂಧಿಸಿದ ಪುರಾಣ ಕತೆಗಳು. ಕಾದಂಬರಿಯ ಹೆಸರೇ ಸೂಚಿಸುವಂತೆ ಕಾದಂಬರಿಕಾರರ ಆಶಯ ನಾಯಕನಾದ ಮೆನೆಪ್‌ಟಾನನ್ನು ಮೃತ್ಯುಂಜಯನಾದ ಒಸ್ಸೈರಿಸ್‌ನ ಜತೆಗೆ ಸಮೀಕರಿಸುವದು. ಈ ಆಶಯದಲ್ಲಿ ವೈಯಕ್ತಿಕ ಬದುಕನ್ನು ಸಮಷ್ಟಿಯ ಬದುಕಿನ ಹಿನ್ನೆಲೆಯಲ್ಲಿ ನೋಡುವ ಪ್ರಯತ್ನವನ್ನು ಕಾಣಬಹುದು. ಒಂದು ರೀತಿಯಲ್ಲಿ ಇಜಿಪ್ತಿನ ನಿಜವಾದ ಇತಿಹಾಸ ಜನಪದದ ಈ ಪುರಾಣ ಕತೆಗಳಲ್ಲಿ ಅಡಗಿದೆ. ಆರ್ನಲ್ಡ ಟಾಯನ್ ಬಿ (Arnold J. Toynbee)ಯವರು ಗುರುತಿಸುವಂತೆ ಇಜಿಪ್ತಿನ ಪುರಾಣಕತೆಗಳು ಆ ಸಮಾಜದ ವರ್ಗಸಂಘರ್ಷದ ಸಾಂಕೇತಿಕ ಕಥನಗಳಾಗಿವೆ. ಸೂರ್ಯದೇವತೆಯ ರೂಪನಾದ ರಾ ದೇವತೆಗೆ ಸಂಬಂಧಪಟ್ಟ ಪುರಾಣಕತೆಗಳು ಆಳುವ ವರ್ಗ ಮತ್ತು ಪುರೋಹಿತಶಾಹಿಯ ತತ್ವದ (ideology) ಮೂಲದಲ್ಲಿದ್ದವು. ಅದ್ದರಿಂದಲೆ ಫೆರೋನನ್ನು ರಾನ ಪುತ್ರನೆನ್ನುವ ಮತ್ತು ರಾ ಇಜಿಪ್ತಿನ ಮೊದಲ ಫೆರೋ ಎನ್ನುವ ಹುನ್ನಾರು ನಡೆಯಿತು. ರಾ ಪುರಾಣಕತೆಗಳು ಆಳುವ ವರ್ಗದ ಧರ್ಮಕ್ಕೆ ಬೆಂಬಲವಾದವು ಆದರೆ ಒಸ್ಸೈರಿಸ್‌ಗೆ ಸಂಬಂಧಿಸಿದ ಪುರಾಣಕತೆಗಳು ಟಾಯನ್ ಬಿಯವರ ಮಾತಿನಲ್ಲಿ ಶ್ರಮವರ್ಗದ ಧರ್ಮ ವ್ಯವಸ್ಥೆಯಾಗಿ ಮಾರ್ಪಟ್ಟವು (Proletarian Church). ದುಡಿಯುವ ವರ್ಗದಲ್ಲಿ ಆಳವಾಗಿ ಬೇರೂರಿದ್ದ ಒಸ್ಸೈರಿಸ್ ಪುರಾಣಕತೆಗಳನ್ನು ರಾಮಾಯಣಕತೆಗಳ ಜತೆ ಮೇಳವಿಸಿ ಕೊಂಡಿದ್ದ ವರ್ಗಸಂಘರ್ಷವನ್ನು assimilation ಮೂಲಕ ನಿವಾರಿಸುದ ಐತಿಹಾಸಿಕ ಪ್ರಕ್ರಿಯೆಯ ಒಳ ಇತಿಹಾಸವಾಗಿದೆ. ಆದರೆ ಇಷ್ಟೆಲ್ಲವಾದರೂ ಒಸ್ಸೈರಿಸ್ ಪುರಾಣ ಕತೆಗಳು ದುಡಿಯುವ ವರ್ಗದ ಆಶಯಗಳನ್ನು ಬಿಂಬಿಸುವ ಮಟ್ಟಿಗೆ ತಮ್ಮ ಸ್ವಾಭಾವಿಕ ಗುಣವನ್ನು ಉಳಿಸಿಕೊಂಡಿದ್ದವು. ಗ್ರೀಕ್ ಸಂಸ್ಕೃತಿಯ ಏರು ಕಾಲದಲ್ಲಿಯೂ ಉಳಿದುಕೊಂಡ ಈ ಪುರಾಣ ಕತೆಗಳು ಕಾದಂಬರಿಗೆ ಒಂದು ಚೌಕಟ್ಟನ್ನು ಒದಗಿಸುತ್ತವೆ. ಒಸ್ಸೈರಿಸ್ ಪುರಾಣಕತೆಗಳು ಮೂಲಭೂತವಾಗಿ ಫಲವಂತಿಕೆಗೆ ಸಂಬಂಧಪಟ್ಟ ಮತ್ತು ನಾಗರೀಕತೆ ಕೃಷಿ ವ್ಯವಸ್ಥೆಯ ಮೊದಲ ಹಂತದಲ್ಲಿದ್ದಾಗ ಹುಟ್ಟಿಕೊಂಡ ಪುರಾಣಕತೆಗಳು (Fertility MYths). ನಿರಂಜನರು ಈ ಪುರಾಣಕತೆಗಳನ್ನು ಕಾದಂಬರಿಯಲ್ಲಿ ಬಹಳ ಸೂಕ್ಷ್ಮವಾಗಿ ಬಳಸಿಕೊಂಡಿದ್ದಾರೆ. ನೇರವಾಗಿ ಎಲ್ಲಿಯೂ ಸೂಚಿಸದಿದ್ದರೂ ಈ ಪುರಾಣಕತೆಗಳನ್ನು ಅವರು ವರ್ಗ ಸಂಘರ್ಷದ ಹಿನ್ನಲೆಯಲ್ಲಿ ಬಳಸಿಕೊಳ್ಳುತ್ತಾರೆ ಎನ್ನುವುದು ಸ್ಪಷ್ಟವಾಗಿದೆ. ಒಸ್ಸೈರಿಸ್ ಇಜಿಪ್ತಿನ ಜನರಿಗೆ ಕೃಷಿಯನ್ನು ಕಲಿಸಿಕೊಟ್ಟ ಎನ್ನುವ ಕತೆ ಅದರ ಹುಟ್ಟಿನ

ಸಂದರ್ಭವನ್ನು ಸೂಚಿಸುತ್ತದೆ. ಒಸೈರಿಸ್‌ನು ಸಾವು ಅವನ ಶರೀರದ ಅಂಗಗಳು ಬೇರೆ ಬೇರೆ ಕಡೆಗೆ ಹಂಚಿಹೋಗುವದು, ಐಸಿಸ್‌ನ ಪ್ರಯತ್ನದಿಂದ ಅವನು ಮೃತ್ಯುಂಜಯನಾಗಿ ಮೃತ್ಯುಲೋಕದ ಒಡೆಯನಾಗುವದು ಇವೆಲ್ಲವೂ ಫಲವಂತಿಕೆಯ ಪುರಾಣಕತೆಗಳಲ್ಲಿ ಸಾಮಾನ್ಯವಾಗಿ ಕಂಡು ಬರುವಂತಹ ಅಂಶಗಳು. ಅವು ಇಜಿಪ್ತಿನಂತಹ ಮರಳುಗಾಡಿನಲ್ಲಿ ತುಂಬಾ ನಿಖರವಾಗಿ ಕಂಡುಬರುವ ನೈಸರ್ಗಿಕ ಬದಲಾವಣೆಗಳಿಗೆ ಮನುಷ್ಯನ ಕಲ್ಪನೆ ಕೊಟ್ಟ ಕಥಾರೂಪಗಳು. ಒಸೈರಿಸ್‌ನ ಶವವನ್ನು ಗೋರಿಯಲ್ಲಿ ಡುವದು ಮತ್ತು ಅವನು ಪರಲೋಕದಲ್ಲಿ ಮೃತ್ಯುಂಜಯನಾಗುವುದು ಬೀಜವನ್ನು ಬಿತ್ತಿ ಅದು ಭೂಮಿಯೊಳಗಿಂದ ಜೀವಪಡೆದು ಹೊರಬರುವದರ ಸಂಕೇತವಾಗಿದೆ. ಇನ್ನೊಂದು ರೀತಿಯಲ್ಲಿ ಅದು ನೈಲ್ ನದಿ ತನ್ನ ಪ್ರವಾಹದಿಂದ ಫಲವಂತಿಕೆ ತರುವ ಮತ್ತು ಆನಂತರ ಒಣಗಿ ಹೋಗುವ ಮರುಳುಗಾಡಿನ ನಿರಂತರ ಪುನರಾವರ್ತನೆಯ ಸಾಂಕೇತಿಕ ಕತೆಯೂ ಹೌದು. ಆದ್ದರಿಂದಲೇ ಒಸೈರಿಸ್ ಮತ್ತು ಐಸಿಸ್ ಜೀವಶಕ್ತಿಯ ಮತ್ತು ಫಲವಂತಿಕೆಯ ಸಂಕೇತವಾಗಿದ್ದಾರೆ. ಕಾದಂಬರಿಯಲ್ಲಿ ಒಸೈರಿಸ್ ಜಡ್ಡುಗಟ್ಟಿದ ನಾಗರೀಕತೆಯ ನೇತಾರರು ರಾನ ಆರಾಧಕರಾಗಿದ್ದರೆ ದುಡಿಯುವ ವರ್ಗದ ಪ್ರತಿಭಟನೆಯ ನಾಯಕನಾದ ಮೆನೆಪ್‌ಟಾ ಅವನ ಜನರಿಗೆ ಒಸೈರಿಸ್ ಆಗಿದ್ದಾನೆ. ನಿರಂಜನರು ಫಲವಂತಿಕೆ ತರುವ ಜೀವಶಕ್ತಿಯನ್ನು ಶ್ರಮವರ್ಗದ ಬಂಡಾಯ ಶಕ್ತಿಯ ಜತೆಗೆ ಸಮೀಕರಿಸಿ ನೋಡಿದ್ದಾರೆ. ಒಸೈರಿಸ್ ಪುರಾಣ ಕತೆಯ ಹಿನ್ನಲೆಯನ್ನು ನೆನಪಿನಲ್ಲಿಟ್ಟರೆ ಕಾದಂಬರಿಯ ಕೊನೆಗೆ ಬರುವ ಮೆನೆಪ್‌ಟಾನ ಶವಲೇಪನದ ವಿಧಿಯ ದೀರ್ಘ ವರ್ಣನೆಗಳ ಮಹತ್ವ ಗೊತ್ತಾಗುತ್ತದೆ. ಇಜಿಪ್ತಿನ ಆಳುವ ವರ್ಗ ಅಲ್ಲಿಯ ಅರ್ಥ ವ್ಯವಸ್ಥೆ ಉತ್ಪಾದಿಸುವ ಎಲ್ಲ ಹೆಚ್ಚುವರಿಯನ್ನು ಗೋರಿ ಕಟ್ಟುವದರಲ್ಲಿ ಮತ್ತು ಪಿರಮಿಡ್ ಕಟ್ಟಿಸುವದರಲ್ಲಿ ವ್ಯಯ ಮಾಡುತ್ತಿತ್ತು. ಶವ ಲೇಪನ ಮತ್ತು ಸಂಸ್ಕಾರದ ವಿಧಿಗಳು ಬಹಳ ಖರ್ಚಿನ ಬಾಬತ್ತಾಗಿದ್ದರಿಂದ ಬಡ ಜನತೆಗೆ ಪರಲೋಕದಲ್ಲಿಯೂ ಪ್ರವೇಶ ಸಿಕ್ಕುವುದು ಕಷ್ಟವಾಗುತ್ತಿತ್ತು. ಆದ್ದರಿಂದ ಮೆನೆಪ್‌ಟಾನ ಶವವನ್ನು ಕದ್ದು ತಂದು ಸಂಸ್ಕಾರ ಮಾಡುವುದು ಅವನ ಜನರಿಗೆ ಒಂದು ಪ್ರತಿಭಟನೆಯ ರೂಪವಾಗಿತ್ತು. ಮನುಷ್ಯನ ಇಹದ ಬದುಕಿನ ಜತೆಗೆ ಪರದ ಬದುಕನ್ನು ನಿಯಂತ್ರಿಸುವ ಆಳುವ ವರ್ಗದ ವಿರುದ್ಧ ತಮ್ಮ ಹಕ್ಕನ್ನು ಸಾಧಿಸಿದಂತಾಗುವದರಿಂದ ಆ ಶವ ಲೇಪನ ಮತ್ತು ಸಂಸ್ಕಾರ ಅವರಿಗೆ ಮುಖ್ಯವಾಗುತ್ತವೆ. ಅಲ್ಲದೆ ಮೆನೆಪ್‌ಟಾ ಕೂಡ ಸಾವಿನ ನಂತರ ಮೃತ್ಯುಂಜಯನಾಗುವ ಒಸೈರಿಸ್ ಆಗಿದ್ದರಿಂದ ಈ ವಿವರಗಳು ಅವಶ್ಯಕವಾಗಿವೆ. ಮೂಲಭೂತವಾಗಿ ಫಲವಂತಿಕೆಯ ಸಂಕೇತವಾದ ಒಸೈರಿಸ್ ಸಾವಿನ ನಂತರದ

ಲೋಕದ ಒಡೆಯನೂ ಆಗಿದ್ದನೆನ್ನುವದನ್ನು ಗಮನದಲ್ಲಿಡ ಬೇಕು ಅಲ್ಲದೆ ಕಾದಂಬರಿಯಲ್ಲಿ ಮೆನೆಪ್‌ಟಾನ ಹೆಂಡತಿ ನೆಫಿಸ್‌ಳನ್ನು ಐಸಿಸ್‌ಗೆ ಮತ್ತು ಮಗ ರಾಮೆಸಿಪ್‌ಟಾನನ್ನು ಹೋರಸ್‌ನಿಗೆ ಹೋಲಿಸಲಾಗಿದೆ. ಈ ಎಲ್ಲ ಹಿನ್ನೆಲೆಯ ಮುಖ್ಯ ಆಶಯವೆಂದರೆ ಫಲವಂತಿಕೆಯ ಪುರಾಣಕತೆಗಳು ಆಳುವ ವರ್ಗದ ವಿರುದ್ಧ ಬಂಡೇಳುವ ದುಡಿಯುವ ವರ್ಗದ ಶಕ್ತಿ ನಿಸರ್ಗದ ಫಲವಂತಿಕೆಯಂತೆ ನಿರಂತರ ವಾದುದು ಎನ್ನುವುದನ್ನ ಸೂಚಿಸುವದು.

ಕಾದಂಬರಿಯ ಮುಖ್ಯ ಕ್ರಿಯೆ ಸಾಕಷ್ಟು ಸರಳವಾಗಿದೆ. ಮೆನೆಪ್‌ಟಾ ಮತ್ತು ಸಂಗಡಿಗರು ಒಸೈರಿಸ್ ಜಾತ್ರೆಗಾಗಿ ಅಬ್ಬುವಿಗೆ ಪ್ರಯಾಣ ಮಾಡುತ್ತಾರೆ. ಅಲ್ಲಿ ಇಜಿಪ್ತಿನ ಬದುಕಿನ ಹಲವು ಮುಖಗಳ ಪರಿಚಯವಾಗುವದರ ಜತೆಗೆ ಒಸೈರಿಸ್‌ನ ಸಾವು ಮತ್ತು ಮರುಹುಟ್ಟಿನ ವಿಧಿಯ ಆಚರಣೆಗಳ ವರ್ಣನೆಯೂ ಇದೆ. ಮುಂದೆ ಕಾದಂಬರಿಯಲ್ಲಿ ಬಳಕೆಯಾಗುವ ಒಸೈರಿಸ್ ಪುರಾಣ ಕತೆಗಳು ಇಲ್ಲಿ ಸೂಚ್ಯವಾಗಿ ಬಂದಿವೆ. ಮುಂದೆ ನೀರಾನೆ ಪ್ರಾಂತದಲ್ಲಿ ಕ್ಷಿಪ್ರವಾಗಿ ನಡೆಯುವ ಬಂಡಾಯ ಮತ್ತು ಆನಂತರದ ಬದಲಾವಣೆಗಳ ವರ್ಣನೆಯಿದೆ. ನೀರಾನೆ ಪ್ರಾಂತಕ್ಕೆ ಸಂಬಂಧಿಸಿದ ಭಾಗಗಳ ಮುಖ್ಯ ತೊಂದರೆಯೆಂದರೆ ಮೆನೆಪ್‌ಟಾ ಸೇರಿದಂತೆ ಅಲ್ಲಿಯ ಪಾತ್ರಗಳು ರಟ್ಟಿನ ಆಕೃತಿಗಳಂತೆ ತೆಳುವಾಗಿರುವದು, ಬಹಳ ಸರಳ ಗೊಳಿಸಿದ (Pastoral types) ಅನ್ನು ಹೋಲುತ್ತವೆ. ಕಾದಂಬರಿಯ ಮುಖ್ಯ ಭಾಗವಾಗಿರುವ ರಾಜಧಾನಿಯ ಚಿತ್ರಣ ಶಕ್ತಿಪೂರ್ಣವಾಗಿದೆ. ತಮ್ಮ ಎಲ್ಲ ವಕ್ರತೆ ಗಳೊಂದಿಗೆ ಅಲ್ಲಿಯ ಪಾತ್ರಗಳು ನಮ್ಮ ಗಮನಸೆಳೆಯುತ್ತವೆ. ಕೊನೆಯ ಭಾಗದಲ್ಲಿ ಮೆಪ್‌ಟಾನ ಸಾವು ಮತ್ತು ಬಂಡಾಯದ ಸೋಲುಗಳು ಚಾರಿತ್ರಿಕ ಅನಿವಾರ್ಯ ಗಳಾಗಿರುವುದರಿಂದ ಅವುಗಳ ಸಂಭಾವ್ಯತೆಯನ್ನು ಪ್ರಶ್ನಿಸಬೇಕಿಲ್ಲ. 'ಮೃತ್ಯುಂಜಯ' ಒಂದು ಐತಿಹಾಸಿಕ ಕಾದಂಬರಿಯಾದ್ದರಿಂದ ಅದು ಚರಿತ್ರೆಯ ಪುನಃಸೃಷ್ಟಿಯಾಗಿ ಎಷ್ಟರ ಮಟ್ಟಿಗೆ ಯಶಸ್ವಿಯಾಗುತ್ತದೆ ಎನ್ನುವುದು ಮುಖ್ಯವಾದ ಪ್ರಶ್ನೆ. ಮೇಲೆ ಹೇಳಿದಂತೆ ಕಾದಂಬರಿಯ 'ಐತಿಹಾಸಿಕ' ವಿವರಗಳು ಕಾದಂಬರಿಯ ಬಂಧಕ್ಕೆ ಅನಿವಾರ್ಯ ವಾಗಿವೆ. ಕಾದಂಬರಿಯ ನಿಜವಾದ ಕ್ರಿಯೆ ವೈಯಕ್ತಿಕ ಬದುಕನ್ನು ಚರಿತ್ರೆಯ ಮತ್ತು ಪುರಾಣಕತೆಗಳ ವಿಶಾಲ ಹಿನ್ನೆಲೆಯಲ್ಲಿ ನೋಡುವ ಆಶಯಕ್ಕೆ ಪೂರಕ ವಾಗಿದೆ.

ಆದರೆ ಕಾದಂಬರಿಯನ್ನು ಓದಿದ ಮೇಲೆ ಅದರ ವಸ್ತುವಿನ ಹರಹಿಗೆ, ಮನುಷ್ಯನ ಬದುಕನ್ನು ಇತಿಹಾಸದ ಮೂರ್ತ ಹಿನ್ನೆಲೆಯಲ್ಲಿ ನೋಡುವ ವಿಶಾಲ

ದೃಷ್ಟಿಗೆ ತಕ್ಕುದಾದ ಶಕ್ತಿಯನ್ನು ಕಾದಂಬರಿಯ ಭಾಷೆ ಪೂರ್ತಿಯಾಗಿ ಸಾಧಿಸಿಲ್ಲ ಎನ್ನುವ ಭಾವನೆಯುಳಿದು ಕೊಳ್ಳುತ್ತದೆ. ಇತಿಹಾಸದ ಪುನಃಸೃಷ್ಟಿಯ ಕೆಲಸದಲ್ಲಿ ಪಾತ್ರಗಳ ನಡುವಳಿಕೆಯಷ್ಟೆ ಅವರು ಆಡುವ ಮಾತೂ ಮಹತ್ವದ್ದಾಗಿರುತ್ತದೆ. ಸಾಮಾನ್ಯವಾಗಿ ಐತಿಹಾಸಿಕ ಕಾದಂಬರಿಯ ಬರಹಗಾರ ಇದನ್ನು ಎರಡು ರೀತಿ ಯಲ್ಲಿ ಸಾಧಿಸುತ್ತಾನೆ. ಒಂದು, ಪಾತ್ರಗಳ ಆಡು ಮಾತನ್ನು ಪೂರ್ತಿಯಾಗಿ ಶೈಲೀಕರಿಸಿಬಿಡುವುದು. ಇದರಿಂದ ಓದುಗ ಮತ್ತು ಪಾತ್ರಗಳ ಬದುಕಿನ ಮಧ್ಯದ ದೂರ ಮೊದಲಿನಿಂದ ಕೊನೆಯವರೆಗೆ ಒಂದೇ ಮಟ್ಟದಲ್ಲಿ ಉಳಿದುಕೊಂಡು ಯಾವ ಆಭಾಸಕ್ಕೂ ಅವಕಾಶವಿರುವುದಿಲ್ಲ. ಇನ್ನೊಂದು, ಪಾತ್ರಗಳ ಆಡು ಮಾತಾಗಿ ಓದುಗ ಗುರುತಿಸಬಲ್ಲ, ಸದ್ಯ ಚಲಾವಣೆಯಲ್ಲಿರುವ ಆಡು ಮಾತನ್ನು ಸ್ವಲ್ಪ ಪರಿಷ್ಕೃತಗೊಳಿಸಿ ಬಳಸುವುದು. ಇದರಿಂದ ಓದುಗ ಇತಿಹಾಸದ ಚಿತ್ರಿತ ಬದುಕನ್ನು ತಾನು ಬಲ್ಲ ಬದುಕಿನ ಅರಿವಿನಿಂದ ಪುನಃಸೃಷ್ಟಿಸಿ ಓದಿಕೊಳ್ಳುತ್ತಾನೆ. ಇದರ ಅರ್ಥ ಇಷ್ಟೆ. ಬರಹಗಾರ ಬಳಸುವ ಶೈಲಿ ವಿಶಿಷ್ಟವಾಗಿದ್ದಲ್ಲಿ ಅದು ಒಂದು Convention ಇದ್ದ ಹಾಗೆ. ಅದರ ಸಫಲತೆ ಓದುಗ ಅದನ್ನು ಒಂದು Convention ಆಗಿ ಸ್ವೀಕರಿಸುವುದರ ಮೇಲೆ ಅವಲಂಬಿಸಿದೆ. 'ಮೃತ್ಯುಂಜಯ' ಕಾದಂಬರಿಯ ಭಾಷೆ ಕೆಲವೊಮ್ಮೆ ಗ್ರಾಮ್ಯ ಮತ್ತು ಸಾಹಿತ್ಯಿಕ ಭಾಷೆಗಳ ಮಿಶ್ರ ಣವಾಗಿ ಬಿಡುವುದರಿಂದ ಓದುಗನ ಏಕಾಗ್ರತೆಗೆ ತೊಂದರೆಯಾಗುತ್ತದೆ. ಶ್ರೇಷ್ಠ ಕೃತಿಯೊಂದರಲ್ಲಿ ಭಾಷೆ ಕಥಾವಸ್ತು, ನಿರೂಪಣೆ, ಪಾತ್ರಗಳು ನಿರ್ಮಿಸುವ ರಚನೆಗಳಿಗೆ (Structure) ಪೂರಕವಾಗುವ ಇನ್ನೊಂದು ರಚನೆಯನ್ನು ನಿರ್ಮಿಸುತ್ತದೆ. ಅಂದರೆ ಭಾಷೆ ಕೇವಲ ವಾಹಕವಾಗಿರದೇ ಸತ್ವಶಾಲಿಯಾಗಿದ್ದಲ್ಲಿ ಅದು ತನ್ನ ಲಯದ ಏರಿಳಿತದಿಂದ, ಭಾಷಿಕ ಪ್ರತಿಮೆ ಪ್ರತೀಕಗಳಿಂದ ಅರ್ಥವಂತಿ ಕೆಯ ಇನ್ನೊಂದು ಮಜಲನ್ನು ಸೃಷ್ಟಿಸುತ್ತದೆ. ಘಟನೆಗಳು ನೀಡುವ ಅರ್ಥ ಕ್ಕಿಂತ ಹಿರಿದಾದ ಒಂದು ಅರ್ಥವಂತಿಕೆ ಇಂಥ ಕೃತಿಗಿರುತ್ತದೆ. ನಿರಂಜನರ ಭಾಷೆ ಅಷ್ಟೊಂದು ಧ್ವನಿಪೂರ್ಣವಾಗಿಲ್ಲ ಎನಿಸುತ್ತದೆ. ಕೆಲವೊಮ್ಮೆ ಭಾಷೆಯ 'ನಿರ್ಲಿ ಪ್ತತೆ' ಯಿಂದಾಗಿ ಅದ್ಭುತವಾದ ವಿವರಗಳು ಕೂಡ ಉದ್ದೀಪಕವಾಗುವುದಿಲ್ಲ. ಆದರೆ ಕಾದಂಬರಿಕಾರರ ಸೃಷ್ಟಿಶೀಲ ಮನಸ್ಸು ವಸ್ತುವಿನ ಮೇಲೆ ಗಟ್ಟಿಯಾಗಿ ಕುದುರಿರುವುದರಿಂದ, ಹಿರಿದಾದ ಅವರ ಮಾನವವಾದಿ ಧೋರಣೆಯು ತುಡಿತ ಕೃತಿಯ ಉದ್ದಕ್ಕೂ ಮಿಡಿಯುತ್ತದೆಯಾದ್ದರಿಂದ ಭಾಷೆಯು ಕುಂದು ಅಷ್ಟೊಂದು ಬಾಧಿಸುವುದಿಲ್ಲ. ಇತಿಹಾಸದ ಬಗ್ಗೆ ಪ್ರಬುದ್ಧವಾದ ಚಿಂತನೆಯೇ ಇಲ್ಲದಿರುವ ನಮ್ಮ ಪರಿಸರದಲ್ಲಿ "ಮೃತ್ಯುಂಜಯ" ದಂಥ ಒಂದು ಒಳ್ಳೆಯ ಐತಿಹಾಸಿಕ ಕೃತಿಯ ಅಧ್ಯಯನ ಬಹಳ ಆವಶ್ಯಕವಾಗಿದೆ.

ಟಿಪ್ಪಣಿ :

ಇಜಿಪ್ಟಿನ ಇತಿಹಾಸದ ಹಿನ್ನೆಲೆಗಾಗಿ ನಿರಂಜನರು ಸೂಚಿಸಿದ ಪುಸ್ತಕಗಳ ಜತೆಗೆ ಈ ಕೆಳಗಿನವುಗಳನ್ನು ಬಳಸಬಹುದು.

1. A Study of History : *Arnold J. Toynbee*
2. What Happened in History : *V. Gordon Childe*
3. The Golden Bough : *Sir James Frazer*

ಕೃಷಿ ಮತ್ತು ಔದ್ಯೋಗಿಕ ಉತ್ಪನ್ನಗಳ ಬೆಲೆ

○ ರಾಮಮನೋಹರ ಲೋಹಿಯಾ/ಜಿ. ಎಲ್. ರಾಮಪ್ಪ

ಕೃಷಿ ಉತ್ಪನ್ನಗಳ ವಿಚಾರವನ್ನು ಅಂತಿಮವಾಗಿ ನಿರ್ಧರಿಸುವುದು ಅವುಗಳ "ಬೆಲೆ"ಯೇ. ಕೃಷಿ ಹುಟ್ಟುವಳಿಗಳದ್ದು ಸಾಮಾನ್ಯವಾಗಿ ಕಡಿಮೆ ಬೆಲೆ ವ್ಯಾಪಾರ ಕರಾರುಗಳು ಕೂಡ ವ್ಯವಸಾಯ ಉದ್ದಿಮೆಗೆ ಪ್ರೋತ್ಸಾಹ ದಾಯಕವಲ್ಲದವಾಗಿವೆ. ಕೃಷಿ ಪ್ರದೇಶವು ವಿಶಾಲವಾಗಿದ್ದು ರೈತರು ಬೇರೆ ಬೇರೆ ಪ್ರದೇಶಗಳಲ್ಲಿ ದೂರಕ್ಕೆ ಹಂಚಿಹೋಗಿ ಅಸಂಘಟಿತರಾಗಿರುವುದರಿಂದ ತಮ್ಮ ಇಚ್ಛೆಗೆ ಅನುಗುಣವಾಗಿ ಬೆಲೆಗಳನ್ನು ನಿಯಂತ್ರಿಸುವುದು ಅವರಿಗೆ ಕಷ್ಟವಾಗುತ್ತದೆ. ಅದಕ್ಕೆ ಭಿನ್ನವಾಗಿ ಬೇಡಿಕೆಗೆ ತಕ್ಕ ಉತ್ಪಾದನೆ ಇಲ್ಲದ ಅಭಾವ ಕಾಲಗಳಲ್ಲಿ ಬೆಲೆಗಳು ತೀವ್ರವಾಗಿಯೇ ಮೇಲೆ ಹೋಗುವ ಅತಿ ಉತ್ಸಾಹ ತೋರುತ್ತವೆ. ಈ ಎರಡೂ ಪರಿಸ್ಥಿತಿಗಳಲ್ಲಿ ಕೃಷಿ ಉತ್ಪನ್ನಗಳ ಅನಿಯಂತ್ರಿತ ಬೆಲೆಗಳು ಕಿರಿ ಕಿರಿ ಉಂಟು ಮಾಡುತ್ತವೆ. ಬೆಲೆ ಕಡಿಮೆಯಾದಾಗ ಆಹಾರ ಧಾನ್ಯಗಳ ಉತ್ಪಾದನೆಯು ನಿರುತ್ಸಾಹಗೊಂಡು, ಜನ ಸಂಖ್ಯೆಯ ಅತಿ ಹೆಚ್ಚಿನ ಭಾಗವಾದ ರೈತರ ಜೀವನಮಟ್ಟವು ಕುಗ್ಗುತ್ತದೆ. ಬೆಲೆ ಏರಿದಾಗ ನಗರವಾಸಿಗಳು ಮತ್ತು ಭೂರಹಿತ ಕಾರ್ಮಿಕರಿಗೆ ಕಿರಿಕಿರಿಯನ್ನುಂಟುಮಾಡಿ ಸಾಮಾಜಿಕಸಾಮರಸ್ಯ ಪ್ರವಾಹಕ್ಕೆ ಅಡ್ಡಿ ತರುವಂತಹ ಅನಾವಶ್ಯಕ ಛಿದ್ರಗಳುಂಟಾಗುತ್ತವೆ. ಆದ್ದರಿಂದ ಕೃಷಿಕರು ಮತ್ತು ಜನತೆಯ ಇತರ ಎಲ್ಲಾ ಸಮೂಹದವರು ಸಾಮರಸ್ಯದಿಂದಿರಬೇಕೆಂದರೆ ಆಹಾರ ಪದಾರ್ಥಗಳ ಉತ್ಪಾದನೆಯ ಪ್ರಮಾಣವನ್ನು ಕಾಯ್ದುಕೊಳ್ಳಲು ಹಾಗೂ ಪ್ರೋತ್ಸಾಹ ನೀಡಲು, ಕೃಷಿ ಉತ್ಪನ್ನಗಳ ಬೆಲೆಗಳನ್ನು ನಿಯಂತ್ರಿಸುವುದು ಅವಶ್ಯಕ.

ಔದ್ಯೋಗಿಕ ಮತ್ತು ಕೃಷಿ ಉತ್ಪನ್ನಗಳ ಬೆಲೆಗಳ ನಡುವೆ ಇರಬೇಕಾದ ಸಮಾನತೆಯ ತತ್ವವು ಜನತೆಯ ಎಲ್ಲಾ ವರ್ಗಗಳಿಗೂ ನ್ಯಾಯ ನೀಡುತ್ತದೆ. ಇಷ್ಟೇ ಅಲ್ಲದೆ ಇದು ಉತ್ಪಾದಕತೆಯನ್ನು ಹೆಚ್ಚಿಸಿ ನಿತ್ಯ ಜೀವನದಲ್ಲಿ ಸಮಾಧಾನ ಭಾವನೆಯನ್ನು ಮೂಡಿಸುತ್ತದೆ. ಅನೇಕ ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಕೈಗಾರಿಕೆ ಮತ್ತು ಕೃಷಿ ಉತ್ಪನ್ನಗಳ ಉತ್ಪಾದಕತೆಯ ಖರ್ಚುವೆಚ್ಚ, ಅವುಗಳ ವ್ಯಾಪಾರಾಟದ ಬೆಲೆಸೂಚ್ಯಂಕಗಳು ಮತ್ತು ಲಾಭಾಂಶಗಳ ಪ್ರಮಾಣ ಮುಂತಾದವುಗಳನ್ನು ಲೆಕ್ಕ ಹಾಕಲು ಸಂಸ್ಥೆಗಳೇ ಇವೆ. ಇಂತಹ ಸಂಸ್ಥೆಗಳು ಯೋಗ್ಯ ಮಾರ್ಗವನ್ನು ಸೂಚಿಸುತ್ತಾ ಬೆಲೆಗಳು ಅತಿಯಾಗಿ ಹೆಚ್ಚು ಕಡಿಮೆಯಾದಾಗ ಅವುಗಳನ್ನು ಸರಿದೂಗಿಸುವ ಮಾರ್ಗವನ್ನು ಕಂಡುಹಿಡಿಯಲು ಗಂಭೀರ ಚರ್ಚೆ ನಡೆಸುತ್ತವೆ. ನಂತರ ಈ ಚರ್ಚೆಯ ತೀರ್ಮಾನವನ್ನು ಕಾರ್ಯಗತಗೊಳಿಸುವ ಭಾರವು ರೈತನಿಂದ ಅಥವಾ ಬಳಕೆದಾರನಿಂದ ಅಥವಾ ಭಾಗಶಃ ಇಬ್ಬರಿಂದಲೂ ನಿರ್ವಹಿಸಲ್ಪಡುತ್ತದೆ. ಅಥವಾ ರೈತ ಮತ್ತು ಬಳಕೆದಾರರ ಸಂಬಂಧಕ್ಕೆ ಭಂಗ ಬಾರದಂತೆ ಸಹಾಯಧನ ಕ್ರಮದೊಡನೆ ಸರ್ಕಾರ ಮಧ್ಯೆ ಪ್ರವೇಶಿಸುತ್ತದೆ. ಭಾರತದಂತಹ ದೇಶಕ್ಕೆ ಕರಾರುವಾಕ್ಕಾದ ಲೆಕ್ಕಾಚಾರ ಸಾಧ್ಯವಿಲ್ಲದ್ದರಿಂದ ಅಂದಾಜಿನ ಲೆಕ್ಕಾಚಾರವನ್ನು ಕಂಡುಕೊಳ್ಳಬಹುದು. ಆದರೆ ಯಾವುದೇ ನಿರ್ದಿಷ್ಟ ನೀತಿಯನ್ನು ಹೊಂದದ ಭಾರತಸರ್ಕಾರವು ಕಳೆದ ವರ್ಷಗಳಲ್ಲಿ ಬೆಲೆಗಳ ಏರುವಿಕೆ ಮತ್ತು ಕುಸಿತದ ಬಗ್ಗೆ ನಿಷ್ಕ್ರಿಯೆಯ ತಾಟಸ್ಥ್ಯದ ಧೋರಣೆಯನ್ನೇ ತೋರಿದೆ. ಬೆಲೆ ನೀತಿಗೆ ಸಂಬಂಧಪಟ್ಟಂತೆ ಕೈಗಾರಿಕೋದ್ಯಮಿ ಸಮೂಹಗಳ ವಿರೋಧವನ್ನು ಎದುರಿಸುವುದಕ್ಕಿಂತ ಅಸಂಘಟಿತ ರೈತವೃಂದವನ್ನು ಎದುರಿಸುವುದು ಒಂದು ಸರ್ಕಾರಕ್ಕೆ ಸುಲಭದ ಕಾರ್ಯ. 1949 ರ ಧಾನ್ಯ ಸಂಗ್ರಹ ನೀತಿಯು ರೈತರ ಮೇಲಿನ ಇಂತಹ ಆಕ್ರಮಣಕ್ಕೆ ಒಂದು ನಿದರ್ಶನವಾಗಿದೆ.

ಧಾನ್ಯ ಸಂಗ್ರಹಣಾ ನೀತಿಯನ್ನು ವಿರೋಧಿಸಿ ಆಗ ನಡೆದ ಚಳುವಳಿಯು ಇಳುವರಿ, ಹೆಚ್ಚುವರಿ ಉತ್ಪಾದನೆ ಮತ್ತು ಬೆಲೆಗಳ ಏರಿಳಿವು ಇವುಗಳ ಲೆಕ್ಕಾಚಾರದಲ್ಲಿ ಸರ್ಕಾರವು ಪೂರ್ಣವಾಗಿ ತಪ್ಪುದಾರಿ ತುಳಿದಿತ್ತು ಎಂಬುದನ್ನು ತೋರಿಸಿತು. ಮಾರುಕಟ್ಟೆಯ ಮತ್ತು ಸರ್ಕಾರ ನಿಗದಿಪಡಿಸಿದ ಬೆಲೆಗಳ ನಡುವೆ ಒಂದು ಮಣಕ್ಕೆ 5 ರೂಪಾಯಿನ ವ್ಯತ್ಯಾಸ ಸಾಕೆಂಬ ಸೂತ್ರ ಕಾರ್ಯಗತವಾಗಲೇ ಇಲ್ಲ. ಸರ್ಕಾರವು ನೀಡಿದ 13 ರೂಪಾಯಿ ಮತ್ತು ಮಾರುಕಟ್ಟೆಯ 20 ರಿಂದ 24 ರೂಪಾಯಿಗಳ

ಬೆಲೆಗಳ ನಡುವಿನ ಅಂತರವು ಸುಮಾರು ಸರಾಸರಿ 10 ರೂಪಾಯಿಗಳಷ್ಟು ಉಳಿಯಿತು. ಧಾನ್ಯಸಂಗ್ರಹಣೆಯ ಖರ್ಚುಗಳು ಅಪಾರವಾಗಿದ್ದು ಸರ್ಕಾರಿ ನೌಕರರಿಂದಲೂ ಸಹ ಸಾಕಷ್ಟು ತೆರೆಮರೆಯ ವ್ಯವಹಾರಗಳು ನಡೆದವು. ಆಹಾರ ಕಲಬೆರಕೆ ಸಾಮಾನ್ಯ ವಾಗಿತ್ತು. ಅನೇಕ ಪ್ರಕರಣಗಳಲ್ಲಿ ಸರ್ಕಾರವು ಕಾನೂನು ಕ್ರಮ ಕೈಗೊಳ್ಳಬೇಕಾ ಯಿತು. ಬಂಧನ ಮತ್ತು ಗೋಲಿಬಾರುಗಳೂ ನಡೆದವು. ಇಂತಹ ಪರಿಸ್ಥಿತಿಯಲ್ಲಿ ಕಿಸಾನ್ ಪಂಚಾಯಿತಿಯೇನಾದರೂ ಕೇವಲ ರೈತರ ಹಿತದಬಗ್ಗೆ ಯೋಚಿಸುವ ಸಂಸ್ಥೆ ಯಾಗಿದ್ದರೆ ಅದು ಲಾಬಿವಲಯಗಳನ್ನು ಸೃಷ್ಟಿಸಿ ಕೃಷಿ ಉತ್ಪನ್ನಗಳಿಗೆ ಹೆಚ್ಚಿನ ಬೆಲೆಗಾಗಿ ಚಳುವಳಿಮಾಡುತ್ತಿತ್ತು. ಆ ಮಾರ್ಗ ಸಹಜವಾಗುತ್ತಿತ್ತು. ಆದರೆ ಕಿಸಾನ್ ಪಂಚಾಯತವು ಕೈಗಾರಿಕೆ ಮತ್ತು ಕೃಷಿ ಹುಟ್ಟುವಳಿಗಳ ಬೆಲೆಗಳ ಸಮಾನತೆಯ ತತ್ವವನ್ನು ಆಧರಿಸಿ ಕೃಷಿ ಹುಟ್ಟುವಳಿಗಳ ಬೆಲೆ ಇಳಿಕೆಗೆ ಸಮಾನವಾಗಿ ಕೈಗಾರಿಕೆ ಗಳ ಹುಟ್ಟುವಳಿಗಳ ಬೆಲೆಯೂ ಇಳಿಯಬೇಕೆನ್ನುವ ಬೇಡಿಕೆಯನ್ನು ಮುಂದಿಟ್ಟಿತ್ತು.

ಬೆಲೆಗಳ ಸಮಾನತೆಯ ತತ್ವವು ಏನು ಹೇಳುತ್ತದೆಂದರೆ ಕೈಗಾರಿಕೆಯ ಉತ್ಪನ್ನಗಳಾದ ಬಟ್ಟೆ, ಸಿಮೆಂಟು, ಕಬ್ಬಿಣ, ಸೀಮೆಎಣ್ಣೆ, ರಾಸಾಯನಿಕ ಗೊಬ್ಬರ ಮುಂತಾದವುಗಳು ಮತ್ತು ಆಹಾರಧಾನ್ಯಗಳಂತಹ ಕೃಷಿ ಉತ್ಪನ್ನಗಳು ಇವೆರಡರ ಬೆಲೆಗಳೂ ಸಮಾನವಾಗಿ ನಿರ್ಧರಿಸಲ್ಪಡಬೇಕು. ಕೃಷಿ ಉತ್ಪನ್ನಗಳಿಗೆ ಕಡಿಮೆ ಬೆಲೆ ದೊರೆಯುತ್ತಿದ್ದರೆ ಕೈಗಾರಿಕೆಯ ಉತ್ಪನ್ನಗಳ ಬೆಲೆಗಳೂ ಕಡಿಮೆಯಾಗಬೇಕು. ಬೆಲೆ ಗಳ ಈ ಸಮಾನತೆಯ ತತ್ವವು ಬಹಳ ಮುಖ್ಯವಾದದ್ದು. ಕೈಗಾರಿಕೆ ಅಥವ ಕೃಷಿ ವಲಯಗಳು ಕೇವಲ ತಮ್ಮ ತಮ್ಮ ವರ್ಗದ ಹಿತವನ್ನಷ್ಟೇ ಗಮನಿಸಿದರೆ ಸಾಮಾ ಜಿಕ ಸಾಮರಸ್ಯ ಉಳಿಯಲಾರದು. ಉದಾಹರಣೆಗೆ ರೈತರು ತಮ್ಮ ಹುಟ್ಟು ವಳಿಗಳಿಗೆ ಅತಿಹೆಚ್ಚಿನ ಬೆಲೆ ಕೇಳುತ್ತಾರೆಂದುಕೊಳ್ಳಿ. ಆಗ ರೈತರೊಂದಿಗೇ ವಾಸಿ ಸುವ ಬಹು ಸಂಖ್ಯಾತ ಭೂರಹಿತ ಕಾರ್ಮಿಕರು ಕಷ್ಟ ಅನುಭವಿಸಿ ಕ್ರಮೇಣ ರೈತರ ಬಗೆಗಿನ ಪ್ರೀತಿ—ತಾಳ್ಮೆಗಳನ್ನು ಕಳೆದುಕೊಂಡು ಬಿಡಬಹುದು. ಆದ್ದರಿಂದ ಆರ್ಥಿಕ ಅಧಃಪತನದಲ್ಲಿರುವ ಭಾರತದಂತಹ ದೇಶದಲ್ಲಿ ಕೇವಲ ಒಂದು ವರ್ಗಕ್ಕೆ ಸೀಮಿತವಾದ ಸ್ವಾರ್ಥಪರ ನಡವಳಿಕೆಯನ್ನು ಅನುಸರಿಸುವ ನೀತಿಯು ಆ ವರ್ಗಕ್ಕೆ ಮುಳುವಾಗಿ ಬಿಡುತ್ತದೆನ್ನುವುದನ್ನು ಮರೆಯಬಾರದು.

ಇಂದು ಗ್ರಾಹಕರ ಚಳುವಳಿಯು ಬಲಗೊಳ್ಳುವ ಉತ್ಸಾಹ ತೋರುತ್ತಿದೆ. ಅಂತಹ ಚಳುವಳಿಗಳು ಈ ಮೂಲ ತತ್ವಗಳನ್ನು ಗಮನಿಸಿದರೆ ಅವು ಹೆಚ್ಚು ಅರ್ಥ ಪೂರ್ಣವಾಗಲು ಸಾಧ್ಯವಾಗುತ್ತದೆ.

ವಾದ-ಸಂವಾದ

ಡಾ. ಪೋಲಂಕಿ ರಾಮಮೂರ್ತಿಯವರ ಸೀತಾಯಣ

○ ಎಂ. ವಿ. ಕೃಷ್ಣ

ಶ್ರೀ ಪೋಲಂಕಿ ರಾಮಮೂರ್ತಿಯವರು ವಾಲ್ಮೀಕಿ ರಾಮಾಯಣದ ಬಗೆಗೆ ತಮ್ಮದೇ ಆದ ಕ್ರಾಂತಿಕಾರಕ ವಿಮರ್ಶೆಯನ್ನು ನೀಡಿ ವಿವಾದದ ಅಲೆಯನ್ನು ಎಬ್ಬಿಸಿದ್ದಾರೆ. ರಾಮಾಯಣದ ಈ ಮೊದಲಿನ ಎಲ್ಲ ವಿಮರ್ಶಕರದು, 'ಪಾರಾಯಣದ ಓದು' ಆದ್ದರಿಂದ ಅವರು ವಿಮರ್ಶಕರಾಗಲು ಸಾಧ್ಯವಾಗಿಲ್ಲ ಎನ್ನುವ ಇವರು ತಮ್ಮ ವಾದಸರಣಿಯನ್ನು ಮತ್ತು ಆ ಮೂಲಕ ಮಂಡಿಸುವ ಸಿದ್ಧಾಂತವನ್ನು ಒಪ್ಪಿಕೊಳ್ಳುವಂತೆ ಓದುಗನನ್ನು ಒತ್ತಾಯಿಸುತ್ತಾರೆ. "ರಾಮಾಯಣ ದಲ್ಲಿ ಸೀತಾಯಣವನ್ನು ಗುರುತಿಸುವದೇ ಓದುಗನ ಸಹೃದಯತೆಗೆ ಸಾಕ್ಷಿ" (ಸೀತಾಯಣ–ಪುಟ 26) ಎನ್ನುತ್ತಾರವರು. ಅವರ ವಾದಸರಣಿಯನ್ನು ಅನು ಮೋದಿಸುವ ಓದುಗಮಾತ್ರ ಸಹೃದಯ ಎನ್ನುವ ನಿಲುವು ಎಷ್ಟರಮಟ್ಟಿಗೆ ಉಚಿತವಾಗುತ್ತದೆನ್ನುವ ಪ್ರಶ್ನೆ ಬರುತ್ತದೆ. ಅಲ್ಲದೆ, ಇತರ ಅನುವಾದಕರು ಮತ್ತು ವಿಮರ್ಶಕರು ಕಾವ್ಯದ ವಾಚ್ಯಾರ್ಥವನ್ನು ಮಾತ್ರ ಗ್ರಹಸಿದ್ದಾರೆಂದೂ, ತಾವು ಮಾತ್ರ ಸೂಚ್ಯಾರ್ಥವನ್ನೂ ಗ್ರಹಿಸಿರುವುದಾಗಿ ಅವರು ಹೇಳಿಕೊಳ್ಳುತ್ತಾರೆ.

ಪೋಲಂಕಿಯವರ ಈ ಮಾತುಗಳಿಂದ ಉತ್ತೇಜಿತನಾಗಿ ಸೀತಾಯಣವನ್ನು ಅಭ್ಯಸಿಸಿದರೆ ನನಗೆ ಅದರ ಉದ್ದಕ್ಕೂ ಪೂರ್ವಾಗ್ರಹದ ದೃಷ್ಟಿಕೋನ ಎದ್ದು ಕಾಣಿಸಿತು. ಸಂದರ್ಭಗಳನ್ನು ಇಡಿಯಾಗಿ ಪರಿಶೀಲಿಸದೇ ತಮಗೆ ಬೇಕಾದ ಬಿಡಿಭಾಗಗಳನ್ನು ಕಿತ್ತು ತೆಗೆದುಕೊಳ್ಳುವಲ್ಲಿ ಮತ್ತು ಕಾವ್ಯದ ಸೂಚ್ಯಾರ್ಥದ

ಹೆಸರಿನಲ್ಲಿ ತಮ್ಮ ಉದ್ದೇಶಕ್ಕೆ ತಕ್ಕ ಅರ್ಥವನ್ನು ಕಲ್ಪಿಸುವಲ್ಲಿ ಅವರ ಈ ದೃಷ್ಟಿಕೋನ ಸ್ಪಷ್ಟವಾಗುತ್ತದೆ. ಅಲ್ಲದೇ ಅವರ ಅಭಿಪ್ರಾಯಗಳಲ್ಲೇ ಪರಸ್ಪರ ವಿರೋಧಗಳೂ ಅಲ್ಲಲ್ಲಿ ಕಂಡುಬರುತ್ತವೆ. ಶ್ರೀ ರಾಮಮೂರ್ತಿಯವರ ಇಂಥ ಧೋರಣೆ ಬಿಂಬಿತವಾಗುವ 'ಸೀತಾಯಣ'ದ ಭಾಗಗಳನ್ನು ಎತ್ತಿ ತೋರಿಸುವದರ ಮೂಲಕ ಅವರು ಮಂಡಿಸುವ 'ಸೀತಾಯಣ'ವಾದದ ಅಸಂಗತತೆಯನ್ನು ಗುರುತಿಸಿ ಕೊಳ್ಳಬಹುದು.

ಶೋಕ—ಶ್ಲೋಕ :

"ಆದಿ ಶ್ಲೋಕದಲ್ಲಿ ಶೋಕವಿಲ್ಲ; ಕೋಪವಿದೆ, ತಾಪವಿದೆ–ಅನುತಾಪ, ಪರಿತಾಪ, ಸಂತಾಪಗಳಿಲ್ಲ; ಹಿಂಸೆಯಿದೆ, ಕರುಣೆಯಿಲ್ಲ. ಕಾಮವಿದೆ, ಪ್ರೇಮವಿಲ್ಲ" ಎನ್ನು ತ್ತಾರೆ ರಾಮಮೂರ್ತಿಯವರು.

ವಾಲ್ಮೀಕಿ ಬೇಡನಾಗಿದ್ದು ನಂತರ ತಪದ ಸಂಸ್ಕಾರ ಬಲದಿಂವ ಮೇಲ್ಮಟ್ಟಕ್ಕೆ ಏರಿ ಹಿಂಸೆಯನ್ನು ಬಿಟ್ಟು ಎಲ್ಲಾ ಜೀವಜಂತುಗಣಗಳಲ್ಲೂ ದಯೆ ಕರುಣೆ ಬೆಳೆಸಿಕೊಂಡವನು. ಆದುದರಿಂದಲೇ ಬೇಡನು ಹಕ್ಕಿಯನ್ನು ಬೇಟೆಯಾ ಡಿದಾಗ ಹಕ್ಕಿಯಬಗ್ಗೆ ಕರುಣೆ, ದಯೆ, ಅನುಕಂಪ ಆತನಲ್ಲಿ ಮೂಡಿಬಂದಿವೆ. ಆದ್ದರಿಂದಲೇ ಹಕ್ಕಿಯ ಆ ಸ್ಥಿತಿಗೆ ಕಾರಣವಾದ ಬೇಡನ ಬಗ್ಗೆ ಕೋಪ ಬಂದಿದೆ. ಇಲ್ಲಿ ವಾಲ್ಮೀಕಿಯ ಕೋಪವು ಹಕ್ಕಿಯ ಮೇಲಿನ ಕರುಣೆಯ ಮೂಲದಿಂದ ಉದ್ದೀಪಗೊಂಡುದನ್ನು ಗಮನಿಸಬೇಕು. ಹೀಗಾಗಿರದಿದ್ದರೆ ಅವನ ಕರುಣೆ, ದಯೆ, ಅನುಕಂಪಗಳು ನಟನೆಗಳಾಗುತ್ತಿರಲಿಲ್ಲವೆ ? ನೋಡಿ, ನಾವು ಇಂದು ಶೋಷಿತವರ್ಗದ ಬಗ್ಗೆ ಅನುಕಂಪ ತಾಳುವಾಗಲೇ ಶೋಷಕವರ್ಗದ ಬಗ್ಗೆ ನಮ್ಮಲ್ಲಿ ತಾಪ, ಸಂತಾಪಗಳೂ ಉಂಟಾಗುತ್ತವಲ್ಲವೆ ? ಇಲ್ಲವಾದರೆ ಅದು ಬರೀ ಮೊಸಳೆಕಣ್ಣೀರು ಆದೀತಲ್ಲವೆ? ತಪ್ಪು ಮಾಡಿದವರಿಗೆ ಕೊಟ್ಟ ಶಿಕ್ಷೆಯನ್ನು ಹಿಂಸೆ ಎಂದು ಹೇಳುವದು ತಪ್ಪೆನಿಸುತ್ತದೆ. ದೋಷರಹಿತರಿಗೆ ಆದ ಹಿಂಸೆ ಮಾತ್ರ ನಿಜ ವಾದ ಹಿಂಸೆಯಾಗುತ್ತದೆ.

ಇನ್ನು ಈ ಶ್ಲೋಕದಲ್ಲಿ ಬರುವ 'ಮಿಥುನ' ಎಂಬ ಪದಕ್ಕೆ ಮೈಥುನ ಎಂಬರ್ಥವನ್ನು ಹೇಗೆ ಕೊಡುವುದು? ಇಲ್ಲಿ ಅದಕ್ಕೆ 'ಜೋಡಿ' ಎಂದೇ ಅರ್ಥ. ಕ್ರೌಂಚ ಪಕ್ಷಿಗಳು ಕಾಮಕ್ರೀಡೆಯಲ್ಲಿ ನಿರತವಾಗಿದ್ದವು ಎಂದು ಒಪ್ಪಿಕೊಂಡಾಗಲೂ

ಆದರಿಂದ ಇಡೀ ರಾಮಾಯಣದ ಕೇಂದ್ರ ಮತ್ತು ವಾಲ್ಮೀಕಿಯ ಉದ್ದೇಶ 'ಲೈಂಗಿಕತೆ' ಆಗುತ್ತದೆಂದು ಹೇಳಬಹುದೆ ?

ರಾಮಾಯಣದಲ್ಲಿ ಲೈಂಗಿಕತೆ :

"ವಾಲ್ಮೀಕಿಯ ರಾಮಾಯಣದಲ್ಲಿ ಲೈಂಗಿಕತೆಯೇ ತುಂಬಿಕೊಂಡಿದೆ. ರಾಮ, ಸೀತೆ, ಲಕ್ಷ್ಮಣ ಇವರು ಲೈಂಗಿಕ ಅತೃಪ್ತಿಯಿಂದ ಕೊರಗುತ್ತಾರೆ"–ಎಂಬುದು ಪೋಲಂಕಿ ಯವರ ಅಭಿಪ್ರಾಯ. ಅವರು ನೀಡುವ ವಾದದ ಕೆಲವು ಅಂಶಗಳ ಹಿನ್ನೆಲೆಯನ್ನು ಈಗ ಗಮನಿಸೋಣ.

● ಮಾಯಾಜಿಂಕೆಯ ಪ್ರಸಂಗದ ಸಂದರ್ಭದಲ್ಲಿನ ಸೀತೆಯ ಬೇಡಿಕೆಯ ಮಾತು ಹೀಗಿದೆ:

> ಕಾಮವೃತ್ತಮಿದಂ ರೌದ್ರಂ ಸ್ತ್ರೀಣಾಮಸದೃಶಂ ಮತಮ್ ।
> ವಪುಷಾತ್ವಸ್ಯ ಸತ್ವಸ್ಯ ವಿಸ್ಮಯೋ ಜನಿತೋ ಮಮ ॥
>
> (ಅರಣ್ಯ : (43-20)

'ತನ್ನ ಬಯಕೆ ಈಡೇರಲೇಬೇಕೆಂಬ ಆಗ್ರಹಪೂರ್ವಕವಾದ ನಡವಳಿಕೆ ಸ್ತ್ರೀಯರಿಗೆ ಯುಕ್ತವಲ್ಲ. ಆದರೂ ಜಿಂಕೆಯ ಮೈಯನ್ನು ಕಂಡಾಗ ನನಗೆ ವಿಸ್ಮಯ ಉಂಟಾಗಿದೆ. ಅದನ್ನು ಪಡೆಯಲೇ ಬೇಕೆಂಬ ಉತ್ಕಟವಾದ ಬಯಕೆಯಾಗಿದೆ' ಎನ್ನುವದು ಈ ಮಾತಿನ ಅಭಿಪ್ರಾಯ. ಈ ಮಾತಿನ ಸೂಚ್ಯಾರ್ಥಕ್ಕೆ ಹೋದರೆ–ಜಿಂಕೆಯು 'ಮಾರೀಚಮಾಯೆ' ಮನಸ್ಸಿಗೆ ಕವಿದು, ಮನಸ್ಸು ಚಂಚಲಗೊಂಡು, ಜಿಂಕೆಯನ್ನು ಪಡೆಯಲೇಬೇಕೆಂಬ ಆಸೆತಾಳುವಲ್ಲಿ ಮುಂದಾಗುವ ಅನಾಹುತದ ಸೂಚನೆ ನಿಷ್ಪನ್ನವಾಗುತ್ತದೆ. ಶ್ರೀ ರಾಮಮೂರ್ತಿಯವರು ಈ ಪದ್ಯಕ್ಕೆ ಅರ್ಥ ಹಚ್ಚುವಾಗ 'ಈ ರೂಪವಾದ ಕಾಮಪ್ರವೃತ್ತಿ ಸ್ತ್ರೀಯರಿಗೆ ಸದೃಶವಾದುದಲ್ಲ' ಎನ್ನುತ್ತಾರೆ. ಇಲ್ಲಿ 'ಕಾಮ' ಎಂದರೆ ಆಸೆ ಎಂಬರ್ಥವೇ ಹೊರತು ಲೈಂಗಿಕ ಸಂಬಂಧಿಯಾದ ಕಾಮಾಕಾಂಕ್ಷೆ ಎಂದಾಗುವುದಿಲ್ಲ. ಜಿಂಕೆಯಲ್ಲದ ಜಿಂಕೆಗಾಗಿ ಮನಸೋತು ಅದರ ಆಸೆಗೆ ಬಲಿಬಿದ್ದು ಅನಾಹುತದ ಕಂದರಕ್ಕೆ ಬೀಳುವ ಮನಸ್ಸಿನ ಪ್ರತಿಮೆಯೊಂದು ದೊರೆಯಬಹುದಾದ ಮಾಯಾಜಿಂಕೆಯ ಪ್ರಸಂಗದ ಶ್ಲೋಕವೊಂದರಲ್ಲಿನ 'ಕಾಮ' ಶಬ್ದಕ್ಕೆ ಜೋತು ಬಿದ್ದರೆ ಹೇಗೆ ?

● ಸೀತೆಯು ಕಾಮಾರ್ತಳಾಗಿದ್ದರೂ ಅವಳಿಗೆ ರಾಮನಿಂದ ಆ ಸುಖ ಸಿಕ್ಕುತ್ತಿರಲಿಲ್ಲ. ರಾಮನು ಪುರುಷರೂಪದ ಸ್ತ್ರೀ (ಶೈಲೂಷ) ಎಂದು ಸೀತೆಯೇ ಹೇಳಿದ್ದಾಳೆ. ಅವಳಿಂದ ಇಂಥ ಮಾತು ಬರಬೇಕಾದರೆ ಸೀತೆಯ ದಾಂಪತ್ಯ ಜೀವನದಲ್ಲಿ ಅತೃಪ್ತಿ ಇದ್ದಿರಬೇಕೆಂದು ಪೋಲಂಕಿಯವರು ಭಾವಿಸುತ್ತಾರೆ. ಶೈಲೂಷನೆನ್ನುವ ಸೀತೆಯ ಮಾತು–ಸಂದರ್ಭ ಹೀಗಿವೆ—

ಕಿಂತ್ವಾಮನ್ಯತ ವೈದೇಹಃ ಪಿತಾಮೇ ಮಿಥಿಲಾಧಿಪಃ ।
ರಾಮಜಾಮಾತರಂ ಪ್ರಾಪ್ಯ ಸ್ತ್ರೀಯಂ ಪುರುಷವಿಗ್ರಹಮ್ ॥
(ಅಯೋಧ್ಯಾ ;(30-3)

'ರಾಮ, ನಿನ್ನನ್ನು ಅಳಿಯನನ್ನಾಗಿ ಮಾಡಿಕೊಂಡ ನನ್ನ ತಂದೆ ಜನಕ ಮಹಾರಾಜನು ನಿನ್ನನ್ನು ಪುರುಷರೂಪದ ಹೆಂಗಸು ಎಂದು ತಿಳಿದಿದ್ದಾನೆಯೇ' ? ವ್ಯಂಗ್ಯಾತ್ಮಕವಾದ ಈ ಪ್ರಶ್ನೆಯಲ್ಲಿಯೇ ಉತ್ತರವೂ ಅಡಗಿದೆ. ತನ್ನನ್ನು ಕಾಡಿಗೆ ಕರೆದುಕೊಂಡು ಹೋಗುವಂತೆ ಒತ್ತಾಯಿಸುವ ಸೀತೆಯ ಈ ಮಾತಿನ ಸೂಚ್ಯಾರ್ಥ–ನೀನು ಪುರುಷಸಿಂಹ. ಜತೆಯಲ್ಲಿ ನೀನಿರುವಾಗ ನನಗೆ ಯಾವ ತೊಂದರೆಯೂ ಬರುವುದಿಲ್ಲ-ಯಾವ ಭಯವೂ ಇರುವುದಿಲ್ಲ ಎಂದಾಗುತ್ತದೆ.

ಈ ಮಾತಿನ ನಂತರದ ಸೀತೆಯ ಇನ್ನೊಂದು ಮಾತು ನಾನು ಕಂಡುಕೊಳ್ಳುವ ಈ ಅರ್ಥಕ್ಕೆ ಹೇಗೆ ಪುಷ್ಟಿಕೊಡುತ್ತದೆನ್ನುವದನ್ನು ನೋಡಿ—

ನಚಮೇ ಭವಿತಾ ತತ್ರ ಕಶ್ಚಿತ್ ಪಥಿ ಪರಿಶ್ರಮಃ ।
ಪೃಷ್ಟ ತಸ್ತವ ಗಚ್ಛಂತ್ಯಾಃ ವಿಹಾರಶಯನೇಷ್ವಿವ ॥
(ಅಯೋಧ್ಯಾ : (30-11)

'ನಿನ್ನೊಂದಿಗೆ ಹೋಗುತ್ತಿರುವಾಗ ದಾರಿಯಲ್ಲಿ ನನಗೆ ಯಾವ ಕಷ್ಟವೂ ಬರದು. ನಿನ್ನೊಂದಿಗೆ ವಿಹಾರ, ನಿನ್ನೊಂದಿಗೆ ಶಯನಗಳಂತೆಯೇ ಅದೂ ನನಗೆ ಸುಖಕರವೇ ಆಗಿರುತ್ತದೆ.'

'ಪುರುಷರೂಪದಸ್ತ್ರೀ,' 'ಶೈಲೂಷ'—'ನಪುಂಸಕತ್ವ ಪೀಡಿತ' ರಾಮನಿಂದ ಸೀತೆಗೆ ಲೈಂಗಿಕ ತೃಪ್ತಿದೊರೆಯದ್ದರ ಬಗ್ಗೆ ವಾದಿಸುವ ಪೋಲಂಕಿಯವರೇ ಸೀತಾ ವಿಯೋಗದ ಸಂದರ್ಭದಲ್ಲಿ ರಾಮನ ದುಃಖವನ್ನು ಇನ್ನೊಂದು ದಿಕ್ಕಿನಿಂದ

ವಿವರಿಸ ತೊಡುಗುತ್ತಾರೆ. ಇಲ್ಲಿ ರಾಮನು, 'ತನಗೆ ಸೀತೆ ಈಗ ಇಲ್ಲವಾದಳಲ್ಲಾ, ಅವಳ ಜೊತೆಗಿನ ಶೃಂಗಾರದ ಒಡನಾಟ ವಿಲಾಸಗಳು ಇಲ್ಲವಾದವಲ್ಲಾ ಎಂದು ಗಿಡಮರಗಳನ್ನು, ಹೂಹಣ್ಣುಗಳನ್ನು, ನದಿ ಮರಳು ದಿಣ್ಣೆಗಳನ್ನು, ಹಕ್ಕಿಗಳನ್ನು ನೋಡುತ್ತಾ ಅವುಗಳಲ್ಲಿಯ ಸೀತೆಯ ತುಟಿಗಳನ್ನು, ಸ್ತನಗಳನ್ನು, ಕೊರಳನ್ನು, ತೊಡೆ-ತೋಳುಗಳನ್ನು, ನಡುವನ್ನು, ನಿತಂಬವನ್ನು ಕಾಣುತ್ತಾ ಕಾಮೋನ್ಮತ್ತನಾಗಿ ಪ್ರಲಾಪಿಸುವನು.' (ಸೀತಾಯಣ ; ಪುಟ–37) ಇದೆಲ್ಲ 'ರಾಮ ನಪುಂಸಕತ್ವ ವಾದಕ್ಕೆ' ವಿರೋಧವಾಗುತ್ತದೆನ್ನುವದು ಪ್ರೋಲಂಕಿಯವರಿಗೆ ಹೇಗೆ ಹೊಳೆಯಲಿಲ್ಲವೋ? 'ರಾಮಾಯಣದ ಓದು ಮುಂದುವರೆಸುವ', 'ವಿಮರ್ಶೆಯನ್ನು ಬೆಳೆಸುವ' ರಾಮಮೂರ್ತಿಯವರ ವಿಮರ್ಶೆಯ ಪ್ರಾಮಾಣಿಕತೆಯ ಬಗ್ಗೆ ಇಂತಹ ವಿರೋಧಾಭಾಸಗಳು ನಮ್ಮಲ್ಲಿ ಗೊಂದಲವನ್ನೆಬ್ಬಿಸುತ್ತವೆ.

● ರಾಮನು ಜಟಾಧಾರಿ, ತಾಪಸಿ, ಜಿತೇಂದ್ರಿಯ–ಇದರಿಂದ ಸೀತೆ ವಿರಹಿ ಎನ್ನುತ್ತಾರೆ. ಇದ್ದಿದ್ದೀತು. ಆದರೆ ಅವರ ದಾಂಪತ್ಯದ ಅನ್ಯೋನ್ಯತೆಯ ಬಗ್ಗೆ ಸೀತೆಯೇ ಹೇಳಿದ ಒಂದು ಮಾತು ಹೀಗಿದೆ–

ಸಮಾಮನಾದಾಯ ವನಂ ನತ್ವಂ ಪ್ರಸ್ಥಾತುಮರ್ಹಸಿ ।
ತಪೋವಾಯದಿ ವಾರಣ್ಯಂ ಸ್ವರ್ಗೋವಾ ಸ್ಯಾತ್ತಯಾ ಸಹ ॥
(ಅಯೋಧ್ಯಾ : 30-10)

–ಅಂದರೆ, ಕಾಡಿನಲ್ಲಿ ರಾಮನು ಜಟಾಧಾರಿ, ತಾಪಸಿ, ಜಿತೇಂದ್ರಿಯ ಆಗಿದ್ದರೆ ಸೀತೆಯೂ ಜಟಾಧಾರಿಣಿ, ತಾಪಸಿ, ಜಿತೇಂದ್ರಿಯೆ.'

● ಇನ್ನು ರಾವಣನು ಸೀತೆಯನ್ನು ಅಪಹರಿಸುವ ಸಂದರ್ಭದಲ್ಲಿನ ಶ್ಲೋಕ–

ತಾಮಕಾಮಾಂ ಸಕಾಮಾರ್ತಃ ಪನ್ನಗೇಂದ್ರ ವಧೂಮಿವ ।
ವಿವೇಷ್ಟಮಾನಾಮಾದಾಯ ಉತ್ಪಪಾತಾನರಾವಣಃ ॥
(ಅರಣ್ಯ : 49-22, 23)

ಈ ಶ್ಲೋಕಕ್ಕೆ ಅವರ ಪ್ರಾಮಾಣಿಕ ವಿವರಣೆ ಇಂತಿದೆ :

"ಅಕಾಮಳಾದ ಸೀತೆಯು ಪನ್ನಗೇಂದ್ರ ವಧುವಿನಂತೆ ಸುತ್ತಿಕೊಳ್ಳುತ್ತಿರಲು, ಕಾಮಾ

ರ್ತನಾದ ರಾವಣನು ಅವಳನ್ನು ಹೊಂದಿ ಎಗರಿದನು. ಇಲ್ಲಿ ಬಳಸಿರುವ 'ಪನ್ನಗೇಂದ್ರ ವಧು' ಮತ್ತು 'ವಿವೇಷ್ಟನ' (ಸುತ್ತಿಕೊಳ್ಳುವದು ಅಥವ ತಳುಕುಹಾಕಿಕೊಳ್ಳುವದು) ಇವುಗಳನ್ನು ಬಳಸಿಕೊಂಡು 'ಅಕಾಮಾ' ಎಂಬುದೂ 'ಸಕಾಮಾ' ಎಂದೇ ಅರ್ಥ ವನ್ನು ಕೊಡುತ್ತದೆ......... ಸೀತೆ 'ಕಾಮಾರ್ಥಿ'ಯಾಗಿದ್ದಳು........"
(ಸೀತಾಯಣ : ಪುಟ –83).

ವಾಲ್ಮೀಕಿ ರಾಮಾಯಣದಲ್ಲಿ ಇವೇ ಪದಗಳನ್ನು ಬಳಸಿರುವ ಇನ್ನು ಕೆಲವು ಸಂದರ್ಭಗಳು ಹೀಗಿವೆ–

ಹೇಮಮಾಲೀ ಮಹಾದಂಷ್ಟ್ರೋ ರಾಕ್ಷಸೋ ಭೂಚ್ಛರಾಹತಃ ।
ತಂ ದೃಷ್ಟ್ವಾ ಪತಿತಂ ಭೂಮೌ ರಾಕ್ಷಸಂ ಘೋರದರ್ಶನಂ ॥
ರಾಮೋರುಧಿರ ಸಿಕ್ತಾಂಗಂ **ವೇಶ್ಟಮಾನಂ** ಮಹೀತಲೇ ।
(ಅರಣ್ಯ : 44-23)

—ಇಲ್ಲಿ ರಕ್ತಸಿಕ್ತನಾದ ಮಾರೀಚನು ಸಾಯುವಾಗ ಯಾರಿಗೆ 'ತಳುಕು' ಹಾಕಿಕೊಂಡಿದ್ದನು ?

ಏಷ ರಾವಣವೀರ್ಯೇಣ ಲಕ್ಷ್ಮಣ ಪತಿತಃಕ್ಷಿತಾ ।
ಸರ್ಪದ್ವೇಷ್ಟತೇ ವೀರೋ ಮಮಶೋಕಮುದೀರಯನ್ ॥
(ಯುದ್ಧ : 102-3)

—ಇಲ್ಲಿ ಸರ್ಪವೂ (ಕಾಮಸಂಕೇತ ?) ಬಂದಿದೆ. ಆದರೆ ಇಲ್ಲಿ ಲಕ್ಷ್ಮಣನು ರಾವಣನಿಂದ ಪೆಟ್ಟು ತಿಂದು (ರಾಮನಲ್ಲಿ ದುಃಖವನ್ನುಂಟುಮಾಡುತ್ತಾ....!) ಹಾವಿನಂತೆ ತಳುಕು ಹಾಕಿಕೊಂಡದ್ದು ಯಾರನ್ನು ?

ಅಂತಃಪುರಾದ್ವಿನಿಷ್ಪ್ರೇತೂ ರಾಕ್ಷಸ್ಯಃ ಶೋಕಕರ್ಶಿತಾಃ ।
ವಾರ್ಯಮಾಣಾಃ ಸುಬಹುಶೋ **ವೇಷ್ಟಂತ್ಯ** ಕ್ಷಿತಿಪಾಂಸುಷು ॥
(ಯುದ್ಧ : 113-2)

—ಇಲ್ಲಿ ಮೃತನಾದ ರಾವಣನನ್ನು ನೋಡಲು ಅಂತಃಪುರದಿಂದ ಹೊರಟ ರಾಕ್ಷಸಿಯರು ದಾರಿಯಲ್ಲಿ ಯಾರಿಗೆ ತಳುಕು ಹಾಕಿಕೊಂಡುಬಿಟ್ಟರು?

ಇನ್ನು 'ವಿವೇಷ್ಟಮಾನಾ' ಎಂಬ ಪದಕ್ಕೆ ತಳುಕು ಹಾಕಿಕೊಳ್ಳುವದು ಎಂಬರ್ಥ ಇಟ್ಟುಕೊಂಡರೂಕೂಡ ಸೀತೆಯು ರಾವಣನಿಗೆ ತಳುಕುಹಾಕಿಕೊಂಡಿದ್ದಳು ಎಂಬರ್ಥ ಬರುವುದಿಲ್ಲ. 'ವಿವೇಷ್ಟಮಾನಾಂ ತಾಂ ಆದಾಯ ರಾವಣಃ ಉತ್ಪಪಾತ' ಇದು–'ತಳುಕು ಹಾಕಿಕೊಂಡಿರುವ ಸೀತೆಯನ್ನು ಎತ್ತಿಕೊಂಡು ರಾವಣನು ಹಾರಿದನು' ಎಂದಾಗುತ್ತದೆ. 'ಉದರ, ಸ್ತನಗಳು ರಾವಣನಿಗೆ ಕಂಡುಗಿಂಡಾವೆಂದು ತೊಡೆಗಳನ್ನು ತೋಳುಗಳನ್ನು ಬಾಗಿಸಿಕೊಂಡು ಅಶೋಕವನದಲ್ಲಿ ಕುಳಿತುಕೊಳ್ಳುವ' ಸೀತೆಯನ್ನು ನೋಡಿದ್ದ ರಾಮಮೂರ್ತಿಯವರು ಇಲ್ಲಿ 'ವಿವೇಷ್ಟಮಾನಾ'ಕ್ಕೆ ತಳುಕು ಹಾಕಿಕೊಂಡು ಸೀತೆಯ ಲೈಂಗಿಕ ಅತೃಪ್ತಿಯ ಸೂಚ್ಯಾರ್ಥವನ್ನು ಹುಡುಕಿ ತೆಗೆದಿದ್ದಾರೆ.

ಅಲ್ಲದೆ ಮುಂದೆ, ಸೀತೆಯನ್ನು ಹೊಗಳಿ ಅವಳನ್ನು ತನ್ನ ವಶಮಾಡಿಕೊಳ್ಳಬೇಕೆನ್ನುವ ಉದ್ದೇಶದಿಂದ ಬಂದ ರಾವಣನ ಹೊಗಳಿಕೆಯನ್ನು ಸೀತೆಯ ಪ್ರತಿಕ್ರಿಯೆ ಎಂದು ಭಾವಿಸಿ ವಿವರಿಸುತ್ತಾರೆ. ಕಾಗೆ-ನರಿ ಕಥೆಯ ನರಿಯು ಕಾಗೆಯನ್ನು 'ಒಳ್ಳೆಯ ಸಂಗೀತಗಾರ' ಎಂದು ಹೊಗಳಿದರೆ-ಕಾಗೆಯು ಮಧುರ ಕಂಠಹೊಂದಿತ್ತು ಎಂದು ನಿಷ್ಪನ್ನ ಮಾಡಿಕೊಂಡರೆ ಹೇಗೆ?

● ರಾವಣನಾದ ಮೇಲೆ ಇನ್ನು ಲಕ್ಷ್ಮಣನ ಸರದಿ.

"ಸೀತೆಗೆ ಲಕ್ಷ್ಮಣನಮೇಲೂ, ಲಕ್ಷ್ಮಣನಿಗೆ ಸೀತೆಯ ಮೇಲೂ ಮನಸ್ಸಿನ ಆಳದಲ್ಲಿ ಅನುರಾಗವಿದ್ದಿತು. ಆದರೆ ಪಾಪಭೀರುಗಳಾಗಿಯೋ ಅಥವಾ ಅದರಿಂದ ಸಮಾಜದಲ್ಲಿ ಅಪಕೀರ್ತಿಗೆ ಗುರಿಯಾಗಬಹುದೆಂದೋ, ರಾಮನ ಕೋಪಕ್ಕೆ ತುತ್ತಾಗಬಹುದೇದೋ ಅವರು ಆ ಬಯಕೆಯನ್ನು ಕಾರ್ಯರೂಪಕ್ಕೆ ತರಲಾರದೇ ಒಬ್ಬರು ಇನ್ನೊಬ್ಬರಿಗೆ ಮನದ ಬಯಕೆಯನ್ನು ತಿಳಿಸಲೂ ಆಗದೇ, ತಮ್ಮ ತಮ್ಮಲ್ಲೇ ಮೂಕವೇದನೆಯನ್ನು ಅನುಭವಿಸುತ್ತಾರೆ." ಈ ವಾದಕ್ಕೆ ಅವರು ಕೊಡುವ ಪುರಾವೆಗಳೆಂದರೆ—

"ಲಕ್ಷ್ಮಣನು ತನ್ನ ಹೆಂಡತಿಯನ್ನು ಬಿಟ್ಟು ಸೀತಾರಾಮರ ಜೊತೆಗೆ ವನವಾಸಕ್ಕೆ ಹೊರಡುವುದು. ಆದರೆ ಲಕ್ಷ್ಮಣನು ಆ ಸಂದರ್ಭದಲ್ಲಿ ಹೇಳಿಕೊಂಡ ಮಾತು ಹೀಗಿದೆ: -"ಶಸ್ತ್ರಧಾರಿಯಾಗಿ ನಾನು ನಿನ್ನ ಮುಂದೆ ಹೋಗುತ್ತೇನೆ. ಕಾಡಿನಲ್ಲಿ ನಿಮ್ಮ ಸೇವೆಯನ್ನು ಮಾಡಿಕೊಂಡು ಇರುತ್ತೇನೆ. ನೀನು ಸೀತೆಯೊಡನೆ ಸಂತಸದಿಂದ ವಿಹರಿಸು. ನಿಮ್ಮ ಜಾಗ್ರುತಾವಸ್ಥೆಯಲ್ಲೂ ನಿದ್ರೆಯ ವೇಳೆಯಲ್ಲೂ ನಾನು ಎಲ್ಲಾ ಕೆಲಸಗಳನ್ನು ಮಾಡಿಕೊಂಡು ಹೋಗುತ್ತೇನೆ". ಲಕ್ಷ್ಮಣನ ಈ ಮಾತಿನ ವಾಚ್ಯಾರ್ಥ

ವನ್ನು ತೆಗೆದುಕೊಂಡರೆ ಮಜವಿರುವದಿಲ್ಲ. ಅದಕ್ಕೇ ಸೀತಾಯಣದ ಸೂಚ್ಯಾರ್ಥ ಹುಡುಕಿ ತೆಗೆದಿದ್ದಾರೆ. ರಾಮನು ಕಷ್ಟದಲ್ಲಿಸಿಲುಕಿಕೊಂಡು 'ಹಾಯ್‌ಸೀತಾ ಹಾಯ್ ಲಕ್ಷ್ಮಣಾ' (ಇದು ಮಾರೀಚನ ಮೋಸವೆಂಬು ನಮಗೆ ಗೊತ್ತಿದೆ) ಎಂದು ತನ್ನವರನ್ನು ಕೂಗಿದ್ದು ಸೀತಾಲಕ್ಷ್ಮಣರ ಲೈಂಗಿಕ ಸಂಬಂಧಕ್ಕೆ ಪುರಾವೆಯಾಗ ಲಾರದೆ ? ತನ್ನ ಪತಿ ಕಷ್ಟದಲ್ಲಿ ಸಿಲುಕಿಕೊಂಡಿದ್ದಾನೆಂದುಕೊಂಡು, ಸಹಾಯಕ್ಕಾಗಿ ಕೂಗಿಕೊಳ್ಳುತ್ತಿದ್ದಾನೆಂದುಕೊಂಡು, ಸೀತೆಯ ರಕ್ಷಣೆಯಭಾರ ಹೊತ್ತ ಲಕ್ಷ್ಮಣನು ರಾಮನ ಸಹಾಯಕ್ಕಾಗಿ ಧಾವಿಸದಿದ್ದುದನ್ನು ಕಂಡು ಅಸಹಾಯಕತೆಯಿಂದ ಪೈಪರಚಿ ಕೊಳ್ಳುವಂತೆ ಲಕ್ಷ್ಮಣನನ್ನು ನಿಂದಿಸತೊಡಗುವ ಸೀತೆಯ ರೀತಿ ಅವಳ ಮನದಾಳ ದಲ್ಲಿದ್ದ ಲಕ್ಷ್ಮಣನ ಬಗೆಗಿನ ಬಯಕೆಯನ್ನು ಹೇಳದಿದ್ದಗೆ—ಹಾಯ್ ! ಶಬ್ದದ ಲಜ್ಜೆಯ ನೋಡಾ ! ಇನ್ನು ಸೀತಾಪಹರಣದ ಕಾಲಕ್ಕೆ ಸೀತೆಯು ಸಹಾಯಕ್ಕಾಗಿ ಲಕ್ಷ್ಮಣನನ್ನು ಮೊದಲು ಕರೆದಳೆಂದು ಹೇಳುತ್ತಾರೆ ಆದರೆ ಸೀತೆ ಮೊದಲು ಕರೆದದ್ದು ರಾಮನನ್ನೇ. (ಅರಣ್ಯ : 49–22) ಲಕ್ಷ್ಮಣನನ್ನಲ್ಲ. ಲಕ್ಷ್ಮಣನನ್ನು ಕರೆ ಯುವಾಗಲೂ ಅವಳು ಕರೆಯುವುದು—'ಗುರುಚಿತ್ತಪ್ರಸಾದಕ' (ಹಿರಿಯರ ಮನಸ್ಸಿಗೆ ಸಂತೋಷವನ್ನುಂಟು ಮಾಡುವವ) ಎಂದು.

> ಹಾ ಲಕ್ಷಣಾ ಮಹಾಬಾಹೋ ಗುರುಚಿತ್ತಪ್ರಸಾದಕ ।
> ಪ್ರಿಯಮಾಣಾಂ ನಜಾನಿಷೇ ರಕ್ಷಸಾಮಾಮರ್ಷಿಣಾ ॥
>
> (ಅರಣ್ಯ : 49 24)

ತನ್ನನ್ನು ರಕ್ಷಿಸುವ ಮೂಲಕ ಗುರುಚಿತ್ತಪ್ರಸಾದಕನೆಂಬುದನ್ನು ಸಾರ್ಥಕಗೊಳಿಸ ಬೇಕೆಂಬುದು ಅವಳ ಮಾತಿನ ಇಂಗಿತ. ಶ್ರೀ ರಾಮಮೂರ್ತಿಯವರ ವಾದದಲ್ಲಿ ತುಂಬ ವಿಚಿತ್ರವಾದುದೆಂದರೆ-ರಾಮನು ತನ್ನ ಕಷ್ಟಕಾಲದಲ್ಲಿ ಸೀತಾ-ಲಕ್ಷ್ಮಣರಿಬ್ಬರ ಹೆಸರು ಗಳನ್ನು ಒಟ್ಟಿಗೇ ಸೇರಿಸಿಕೂಗುವುದು ಸೀತೆ ಲಕ್ಷ್ಮಣರ ನಡುವೆ ಗುಪ್ತ ಸಂಬಂಧವನ್ನು ಸೂಚಿಸುತ್ತದೆನ್ನುವದು. ದಿನನಿತ್ಯದಲ್ಲಿ ಅಣ್ಣತಂಗಿಯರಿಬ್ಬರ ಹೆಸರುಗಳನ್ನು ಒಟ್ಟಿಗೆ ಕೂಗುವದು ಅಪಾರ್ಥಕ್ಕೆ ಎಡೆಮಾಡಿಕೊಡಬಲ್ಲದೇ ? ರಾಮನು ತನ್ನವರಾದ ಇಬ್ಬರನ್ನೂ ಕೂಗುವದು ಅದೆಂತು ಅಪಾರ್ಥದ ಸೂಚನೆ ನೀಡುತ್ತದೆನ್ನುವದು ನನಗಂತೂ ಬಗೆಹರಿಯುತ್ತಿಲ್ಲ.

● ಲಕ್ಷ್ಮಣನು ಸೀತೆಯನ್ನು ದಂಡಕಾರಣ್ಯದಲ್ಲಿ ಬಿಟ್ಟು ಹೋಗಲು ಬಂದ ಸನ್ನಿವೇಶ ಸೀತಾ-ಲಕ್ಷ್ಮಣ ಗುಪ್ತಸಂಬಧದ ರಾಮಮೂರ್ತಿಯಪರವಾದದ ಕ್ಲೈಮ್ಯಾಕ್ಸ್ ಆಗಿದೆ. ಲಕ್ಷ್ಮಣನು ರಾಮನ ಆಜ್ಞೆಯನ್ನು ಸೀತೆಗೆ ತಿಳಿಸಿದಾಗ, ಸೀತೆಯು ಮೂರ್ಛೆ

ತಿಳಿದೆದ್ದನಂತರ ಹೇಳುವ ಮಾತು—

ನಿರೀಕ್ಷ್ಯಮಾದ್ಯ ಗಚ್ಛತ್ವಮೃತುಕಾಲಾತಿವರ್ತನೀಮ್ ॥ (ಉ : 48-19)

ಇದಕ್ಕೆ ಉತ್ತರವಾಗಿ ಲಕ್ಷ್ಮಣನು ಆಡುವ ಮಾತು—

ಶಿರಸಾವಂದ್ಯ ಧರಿಣೀಂ ವ್ಯಾಹರ್ತುಂ ನಶಶಾಕಹ ।
ಪ್ರದಕ್ಷಿಣಂಚ ತಾಂ ಕೃತ್ವಾರುದನ್ನೇವ ಮಹಾಸ್ವನಃ ॥ (ಉ : 48-20)
ಧ್ಯಾತ್ವಾ ಮುಹೂರ್ತಂ ತಾಮಾಹ ಕಿಂಮಾಂ ವಕ್ಷ್ಯಸಿಶೋಭನೇ ।
ದೃಷ್ಟಪೂರ್ವಂನತೇರೂಪಂ ಪಾದೌದೃಷ್ಟಾತವಾನಘೇ ॥ (ಉ: 48-21)
ಇತ್ಯುಕ್ತ್ವಾ ತಾಂ ನಮಸ್ಕೃತ್ಯ ಪುನರ್ನಾವಮುಪಾರುಹತ್ ॥
(ಉ : 48-22)

ಇದಕ್ಕೆ ಪೋಲಂಕಿಯವರ ಅರ್ಥವಿವರಣೆ : ಲಕ್ಷ್ಮಣನ ಉತ್ತರದೊಂದಿಗೆ ವಿಮರ್ಶೆ ಮಾಡಿದಾಗ ಸೀತೆಯು ಉದ್ದೇಶ ತಾನು ಗರ್ಭಿಣಿಯೆಂಬುದನ್ನು ತೋರಿಸುವದಷ್ಟೇ ಅಲ್ಲವೆಂದೂ, ಅದನ್ನು ಹೇಳುವಾಗ ಸೀತೆ ಎಲ್ಲಾ ವಿಧವಾದ ಮುಜುಗರ ಮೈಥಿಳಿಗಳನ್ನು ಬಿಟ್ಟುದಷ್ಟೇ ಅಲ್ಲದೇ ತನ್ನ ಇಂಗಿತದ ಆಳದಲ್ಲಿರುವ ಬಯಕೆಗಳಿಗೆ ಅಭಿವ್ಯಕ್ತಿಯನ್ನು ಕೊಡುತ್ತಿದ್ದಾಳೆ. ಲಕ್ಷ್ಮಣ ಸೀತೆಗೆ ಋತುಕಾಲ ನಿಂತಿರುವುದನ್ನು (ಗರ್ಭಿಣಿಯಾದುದನ್ನು) ಖಚಿತಪಡಿಸಿಕೊಳ್ಳಬೇಕಾದರೆ ಅವಳ ದೇಹದ ಯಾವದೋ ಒಂದು ಭಾಗವನ್ನು, ಪ್ರದೇಶವನ್ನು ಕಣ್ಣಾರೆ ನೋಡಬೇಕು." ಪೋಲಂಕಿಯವರು ಹೇಳುವ ಭಾಗವನ್ನು ನೋಡಿದರೆ ಋತುಮತಿ ಆದದ್ದು ತಿಳಿದೀತೆ ಹೊರತು ಋತುಕಾಲ ನಿಂತದ್ದು ತಿಳಿಯಲಾರದು ! ಇನ್ನು ಸೀತೆ ಈ ಮಾತನ್ನು ಹೇಳುವ ಮೊದಲು ರಾಮನಿಗೆ ಕಳುಹಿಸುವ ಸಂದೇಶದಲ್ಲಿ ತಾನು ಪತಿಪರಾಯಣೆ, ಪರಿಶುದ್ಧೆ ಎಂದೂ, ಪತಿಯ ಆಜ್ಞೆ ತನಗೆ ಶಿರೋಧಾರ್ಯವೆಂದೂ ಹೇಳಿದ್ದಾಳೆ. ಲಕ್ಷ್ಮಣನ ಬಗೆಗೆ ತನ್ನ ಬಯಕೆ ಕೈಗೂಡುವ ಸುಯೋಗ ಬಂದಿರುವಾಗ ಸೀತೆಯದು ಇದೆಂಥ ಮೂರ್ಖತನವಲ್ಲವೆ ? ತನ್ನ ಪರಿಶುದ್ಧತೆಯ ಬಗೆಗೆ–ರಾಮನಿಷ್ಠೆಯ ಬಗ್ಗೆ ಹೇಳಿ ಇನ್ನಳ ಬಗೆಗೆ ಮನದಲಿ ಆಳವಾದ ಬಯಕೆ ಹೊಂದಿರುವ ಲಕ್ಷ್ಮಣನನ್ನು ನಿರುತ್ಸಾಹಗೊಳಿಸುತ್ತಿರುವಳಲ್ಲ ! ಹಾಗಿದ್ದರೆ, ಸೀತೆ ಮತ್ತು ಲಕ್ಷ್ಮಣರ ಈ ಸಂಭಾಷಣೆಯ ತಾತ್ಪರ್ಯವೇನಿರಬಹುದು ?

ಜೈಮಿನಿಭಾರತದಲ್ಲಿನ ಸೀತಾಪರಿತ್ಯಾಗದ ಪ್ರಸಂಗದಲ್ಲಿ ಸೀತೆ, "ಲಕ್ಷ್ಮಣ ಹಿಂದೆ ಬಿಟ್ಟುಹೋದಂತೆ ಈ ದಟ್ಟ ಕಾಡಿನಲ್ಲಿ ನನ್ನನ್ನು ಒಬ್ಬಂಟಿಯಾಗಿ ಬಿಟ್ಟು

ಹೇಗೆ ತಾನೇ ಹೋಗುತ್ತೀ ?" ಎಂದು ಕೇಳುತ್ತಾಳೆ. ವಾಲ್ಮೀಕಿ ರಾಮಾಯಣದಲ್ಲಿ ಯೂ ಸೀತೆ ಇದೇ ಅರ್ಥದಲ್ಲಿ ಹೇಳಿದ್ದಾಳೆನ್ನುವುದು ನನ್ನ ಅನಿಸಿಕೆ. ಜೈಮಿನಿ ಯಲ್ಲಿ ತಾನು ಗರ್ಭಿಣಿ ಎಂಬುದನ್ನು ಹೇಳಿಲ್ಲ, ಇಲ್ಲಿ ವಾಲ್ಮೀಕಿ ರಾಮಾಯಣದಲ್ಲಿ –ಗರ್ಭಿಣಿಯಾಗಿರುವ ತನ್ನನ್ನು ಈ ದಟ್ಟ ಕಾಡಿನಲ್ಲಿ ಬಿಟ್ಟು ಹೇಗೆ ಹೋಗುತ್ತೀ ಎನ್ನುತ್ತ ತನ್ನ ಮಾತಿಗೆ ಹೆಚ್ಚು ಒತ್ತು ಕೊಟ್ಟಿದ್ದಾಳೆ. "ಋತುಕಾಲಾತಿವರ್ತಿನೀಂ ನಿರೀಕ್ಷ್ಯ ತ್ವಂ ಅದ್ಯ ಮಾಗಚ್ಛ" (ಗರ್ಭಿಣಿ ಇರುವುದನ್ನು ಕಂಡೂ ನೀನು ಈಗ ಹೋಗಬೇಡ). ನನಗೆ ಕಾಣುವ ಈ ಅರ್ಥವು ರಾಮಮೂರ್ತಿಯವರಿಗೆ ಪಾರಾಯ ಣದ ಓದಿನ ಅರ್ಥವಾಗಿ ಕಂಡರೆ ನಾನು ಅಸಾಯಕ.

● ಲವ–ಕುಶರ ಜನ್ಮ ಸಂಬಂಧ : ಪ್ರೋಲಂಕಿಯವರ ವಾದದಂತೆ–ಲವಕುಶರು ರಾಮನಿಗೆ ಅಯೊಧ್ಯೆಯಲ್ಲಿ, ವನವಾಸದಲ್ಲಿ, ಮತ್ತೆ ಅಯೋಧ್ಯೆಯಲ್ಲಿ ಮಕ್ಕಳಾಗ ದೇ ಕಾಡಿನಲ್ಲಿ ಹುಟ್ಟಿದ, ಪ್ರಕೃತಿಯ ಹೆಸರಿನ, ಪ್ರಕೃತಿದತ್ತಮಕ್ಕಳು. (ಸೀತಾ ಯಣ : ಪುಟ 46) ಸೀತೆಯು ನಿಸರ್ಗದಲ್ಲಿ ರಾವಣನನ್ನು ಕೂಡಿ, ನಿಸರ್ಗದಲ್ಲೇ ಗರ್ಭವತಿಯೆಂದು ವಸಿಷ್ಠರಿಗೆ ಗೋಚರಿಸಿ, ನಿಸರ್ಗದಲ್ಲೇ ಗರ್ಭಹೊತ್ತು, ನಿಸರ್ಗದಲ್ಲೇ ಲವಕುಶರನ್ನು ಹೆತ್ತಳು. (ಸೀತಾಯಣ ಪುಟ-93). ವಾಲ್ಮೀಕಿ ರಾಮಾಯಣದಲ್ಲಿ ಕಾವ್ಯಸಾಕ್ಷ್ಯದಲ್ಲಿ ಕಂಡುಕೊಂಡ ಸೀತಾ ರಾವಣರ ಗುಪ್ತ ಸಂಯೋಗ ಜಾನಪದದ ಮುಗ್ಧಪ್ರಜ್ಞೆಗೆ ಬೋಧೆಯಾಗಿದೆ. ಇತ್ಯಾದಿ

ಈ ವಾದಗಳಿಗೆ ಪ್ರತಿಯಾಗಿ–

ರಾವಣನ ಮರಣದ ನಂತರ ದುಃಖತಪ್ತಳಾದ ಅವನ ಮಡದಿ ಮಂಡೋದರಿ ಹೇಳುವ ಮಾತು ನೋಡಿ–

> ಅನಯಿತ್ವಾತು ತಾಂದೀನಾಂ ಛದ್ಮನಾತ್ಮಸ್ವದೂಷಣ ।
> ಅಪ್ರಾಪ್ಯಚೈವ ತಂಕಾಮಂ ಮೈಥಿಲೀ ಸಂಗಮೇ ಕೃತಮ್ ॥
>
> (ಯುದ್ಧ : 114-23)

(ಸೀತೆಯೊಂದಿಗೆ ಕೂಡಬೇಕು ಎಂಬ ತನ್ನ ಮನಸ್ಸಿನ ಆಸೆಯನ್ನು ಈಡೇರಿಸಿಕೊಳ್ಳದೇ ಸತ್ತನು).

ವಾಲ್ಮೀಕಿ ರಾಮಾಯಣದಂತೆಯೇ, ರಾವಣನ ಸಾವಿನ ಅನೇಕ ಸಹಸ್ರ ವರ್ಷಗಳ ನಂತರ ಲವಕುಶರ ಜನನವಾಗಿದೆ. ರಾಮನು ಅಯೋಧ್ಯೆಯಲ್ಲಿ ರಾಜ್ಯಭಾರ ಮಾಡು ತ್ತಿರುವ ಸಂದರ್ಭದಲ್ಲಿ ಸೀತೆಯು ಗರ್ಭಿಣಿಯಾದದ್ದು ತಿಳಿದು ಹೇಳುವ ಮಾತು

ಬರುತ್ತದೆ.

ಅಪತ್ಯಲಾಭೋವೈದೇಹಿ ತ್ವಯಿಮೇ ಸಮುಪಸ್ಥಿತಃ ||
(ಉತ್ತರ : 42-31)

(ವೈದೇಹಿ ನನಗೆ ನಿನ್ನಲ್ಲಿ ಸಂತಾನಲಾಭವು ಒದಗಿ ಬಂದಿದೆ).

ಅದೂ ಅಲ್ಲದೇ ಲವಕುಶರು ರಾಮನನ್ನು ಹೋಲುತ್ತಿದ್ದರೆನ್ನುವ ಮಾತೂ ರಾಮಾಯಣದಲ್ಲಿ ಬರುತ್ತದೆ.

●

ನನ್ನ ಈ ಟಿಪ್ಪಣಿ ಸೀತಾಯಣದ ಓದಿನ ತೋರುಗಾತ್ರದ್ದು ಮಾತ್ರ. ರಾಮಮೂರ್ತಿಯವರ ವಾದಗಳಿಗೆಲ್ಲ ಉತ್ತರಿಸುತ್ತಾ ಹೋದರೆ ಅದೇ ಒಂದು ಪ್ರತಿ ಸೀತಾಯಣವಾಗಬಹುದು. ಕಾಗದದ ಪುಟಗಳಿಗೂ ಮಹತ್ವವಿದೆಯಲ್ಲವೆ ! ಆದರೆ ಇಷ್ಟೆಲ್ಲದರ ಕೊನೆಗೆ ಒಂದು ಮೂಲ ಸಂಶಯವನ್ನು ಈ ಟಿಪ್ಪಣಿಗಳ ಕೊನೆಗೆ ಹೇಳದೆ ಇರಲಾರೆ. ನಿರ್ದಿಷ್ಟ ಸಾಂಸ್ಕೃತಿಕ ಸಂದರ್ಭ ಹೊಂದಿರುವ ಮಹಾಕಾವ್ಯವೊಂದನ್ನು ತೆಗೆದುಕೊಂಡು ಅದರಲ್ಲಿನ ಅಲ್ಲಲ್ಲಿನ ಬಿಡಿ ಪದ್ಯಗಳನ್ನು ಆರಿಸಿಕೊಂಡು ಸ್ವತಂತ್ರವಾಗಿ ವಿಮರ್ಶಿಸುತ್ತ ಇಡೀ ಕಾವ್ಯದ ಅರ್ಥವನ್ನು ಗ್ರಹಿಸುವದು ಸರಿಯಾದ ಕ್ರಮವಾಗುತ್ತದೆಯೆ ? ಹೀಗೆ ಮಾಡುವಾಗ ನಾವು ಆ ಪದ್ಯಗಳನ್ನು ಅವುಗಳ ಸಾಂಸ್ಕೃತಿಕ ಸಂದರ್ಭ–ಪರಿಸರಗಳಿಂದ ಕಿತ್ತು ತೆಗೆದಂತಾಗುವುದಿಲ್ಲವೆ ? ವಿಜ್ಞಾನದ ವಿದ್ಯಾರ್ಥಿಯಾದ ನನಗೆ ಸೀತಾಯಣದ ಓದು ಕಾವ್ಯಮೀಮಾಂಸೆಯ ಈ ಪ್ರಶ್ನೆಗಳನ್ನು ಮೂಡಿಸಿಬಿಟ್ಟಿದೆ. ○

ಸೀತಾಯಣ ಪುಟಗಳು– 138 ಬೆಲೆ : 8–00
ಲೇ: ಡಾ. ಪ್ರೋಲಂಕಿರಾಮಮೂರ್ತಿ ಎಂ.ಎ. ಪಿ.ಎಚ್.ಡಿ.
ಪ್ರ : ವಿಚಾರಿ ಪ್ರಕಾಶನ ಎರಡನೇ ಅಡ್ಡರಸ್ತೆ, ಗಾಂಧಿಬಜಾರ್
ಶಿವಮೊಗ್ಗ–2.

ಭಾರತದ ನಿರುದ್ಯೋಗ ಸಮಸ್ಯೆ

ಜಿ. ಎನ್. ಮಲ್ಲಿಕಾರ್ಜುನ ಎಂ.ಕಾಂ.

ಮಾನವ ಶಕ್ತಿಯ ಅನುಪಯೋಗ ಅಥವಾ ಅರೆ ಉಪಯೋಗಕ್ಕೆ ಸಾಮಾನ್ಯವಾಗಿ ನಿರುದ್ಯೋಗ ಎಂದು ಕರೆಯುತ್ತೇವೆ. ಉತ್ಪಾದಕತೆಯ ಮಾಪನ ಪಟ್ಟಿಯಲ್ಲಿ ಉದ್ಯೋಗಸ್ಥನ ಸ್ಥಾನ ಶೇ. 100 ಆದರೆ ನಿರುದ್ಯೋಗಿಯ ಸ್ಥಾನ ಶೇ. '0'. ಬಡದೇಶವೊಂದರ ಮುಖ್ಯ ಪ್ರಯತ್ನವೆಂದರೆ ಈ ಮಾಪನ ರೇಖೆಯನ್ನು ಮೇಲೇರಿಸುವುದು ಹೇಗೆ ಎಂಬುದು ? ಅಂದರೆ ಉತ್ಪಾದಕತೆಯ ಆಧಾರದ ಮೇಲೆ ನಿರುದ್ಯೋಗಿಗಳನ್ನು ಗುರುತಿಸಿ ಅವರ ಮಾನವ ಶಕ್ತಿಯನ್ನು ಉತ್ಪಾದನಾ ಶಕ್ತಿಯನ್ನಾಗಿ ಪರಿವರ್ತಿಸುವುದು. ಈ ಪ್ರಯತ್ನವನ್ನು ಆರ್ಥಿಕ ಅಭಿವೃದ್ಧಿಯತ್ತ ಹಾಕುವ ದಾಪುಗಾಲು ಎಂದೂ ಹೇಳಬಹುದು. ಒಂದು ದೇಶವನ್ನು ಆರ್ಥಿಕವಾಗಿ ಸಬಲಗೊಳಿಸಲು, ಅಥವಾ ನಿರುದ್ಯೋಗದಂತಹ ಸಮಸ್ಯೆಯನ್ನು ನಿವಾರಿಸಲು ನಾಲ್ಕು ಮುಖ್ಯ ಅಂಶಗಳು ಅವಶ್ಯಕವೆನಿಸುತ್ತವೆ. ಅವುಗಳೆಂದರೆ ಮೊದಲನೆಯದಾಗಿ ಸಮಸ್ಯೆಯನ್ನು ಕೊನೆಗೊಳಿಸಬೇಕೆಂಬ ಪ್ರೇರಣೆ, ಎರಡನೆಯದಾಗಿ ತಿಳುವಳಿಕೆ, ಮೂರನೆಯದಾಗಿ ಅದಕ್ಕೆ ಬೇಕಾದ ಬಂಡವಾಳ ಮತ್ತು ಕೊನೆಯದಾಗಿ ಉತ್ಪಾದಿತ ವಸ್ತುಗಳನ್ನು ಮಾರಾಟ ಮಾಡಲು ಬೇಕಾಗುವ ಮಾರುಕಟ್ಟೆ.

ಪ್ರೇರಣೆಗೆ ಸಂಬಂಧಿಸಿದಂತೆ ಹೇಳುವುದಾದರೆ ನಿರುದ್ಯೋಗ ಸಮಸ್ಯೆಯನ್ನು ನಿವಾರಿಸಿಕೊಂಡು ತಮ್ಮ ಸ್ಥಿತಿಯನ್ನು ಉತ್ತಮಪಡಿಸಿಕೊಳ್ಳಬೇಕೆಂಬ ಹಂಬಲ ಎಲ್ಲರಿಗೂ ಇರಲಾರದು. ಇದು ಕೆಲವರಿಗಿದ್ದರೂ ಅದನ್ನು ಸಾಧಿಸಬೇಕು ಎಂಬ ಬಗೆಗಿನ ತಿಳುವಳಿಕೆ ಇರಲಾರದು. ಉನ್ನತ ಬದುಕಿನ ಕನಸನ್ನು ಕಾಣುತ್ತಾ ದಿನ ತಳ್ಳುವ ಕೋಟಿಗಟ್ಟಲೆ ನಿರುದ್ಯೋಗಿಗಳು ತಮ್ಮ ಬದುಕನ್ನು ರೂಪಿಸಿಕೊಳ್ಳಲಾರವ ಅಸಹಾಯಕ ಪರಿಸ್ಥಿತಿಯಲ್ಲಿದ್ದಾರೆ. ಇವರಿಗೆ ಉತ್ತಮ ಮಾರ್ಗದರ್ಶನ ನೀಡಿದರೆ ತಮ್ಮ ಜೀವನಕ್ಕೊಂದು ಹಾದಿ ಕಂಡುಕೊಳ್ಳಬಲ್ಲರು. ಆದರೆ ಇವರ ಬಗ್ಗೆ ಮರುಕ ತೋರಿ ಮಾರ್ಗದರ್ಶನ ನೀಡುವವರಾರು ? ದೇಶದ ಸುಶಿಕ್ಷಿತ ಜನಾಂಗ ಅದು

ತಮ್ಮ ಜವಾಬ್ದಾರಿ ಎಂದು ಅರಿತು ನಡೆಯುವ ಹೊಣೆಗಾರಿಕೆಯ ಶಿಕ್ಷಣವನ್ನು ವಿಶ್ವವಿದ್ಯಾನಿಲಯಗಳು ಇಂದು ನೀಡುತ್ತಿವೆಯೆ ? ಒಬ್ಬ ವ್ಯಕ್ತಿ ಸುಶಿಕ್ಷಿತನಾಗ ಬೇಕಾದರೆ ಅದಕ್ಕೆ ತಗುಲುವ ಇತರರ ಪರಿಶ್ರಮದ ಮೌಲ್ಯವನ್ನು ಲೆಕ್ಕಾಚಾರ ಹಾಕುತ್ತಿದ್ದೇವೆಯೆ ? ಈ ದಿಶೆಯಲ್ಲಿ ಯೋಚಿಸಿದವರಲ್ಲಿ ಚೀನೀಯರೇ ಮೊದಲಿಗ ರೆಂದು ಕಾಣುತ್ತದೆ.

ಎರಡನೇ ಜಾಗತಿಕ ಯುದ್ಧದ ಪೂರ್ವದಲ್ಲಿನ ಅವರ ಲೆಕ್ಕಾಚಾರದಂತೆ ಒಬ್ಬ ವ್ಯಕ್ತಿಯ ಒಂದು ವರ್ಷದ ವಿಶ್ವವಿದ್ಯಾನಿಲಯದ ಶಿಕ್ಷಣಕ್ಕೆ ತಗುಲುವ ವೆಚ್ಚ ಮೂವತ್ತು ಜನ ಕೃಷಿಕರ ಒಂದು ವರ್ಷದ ಸತತ ಪರಿಶ್ರಮ ! ಇದಕ್ಕೆ ಪ್ರತಿಯಾಗಿ ಆ ಶ್ರಮಿಕ ರೈತರುಗಳಿಗೆ ವಿದ್ಯಾವಂತ ಜನ ನೀಡುವ ಕೊಡುಗೆ ಯೆಂದರೆ ಅವರಿಂದ ದೂರವಾಗಿ, ಪಟ್ಟಣಗಳಲ್ಲಿ ತಳವೂರಿ, ತಮ್ಮ ವಿದ್ಯಾಭ್ಯಾಸಕ್ಕೆ ಕಾರಣರಾದವರಿಗೆ ದೊರಕದ ವಿಶೇಷ ಸವಲತ್ತುಗಳನ್ನು ಪಡೆಯುತ್ತ ಐಷಾರಾಮ ಜೀವನ ಸಾಗಿಸುವುದು. ತಾವು ಪಡೆಯುತ್ತಿರುವ ಸವಲತ್ತುಗಳಿಂದ ಯಾವ ಕಾಲಕ್ಕೂ ವಂಚಿತರಾಗದಿರುವುದಕ್ಕೆ ತಮ್ಮದೇ ಆದ ಸಂಘಗಳ, ಸಂಯೋಜನೆಗಳ ಭದ್ರ ಕೋಟೆಗಳನ್ನು ನಿರ್ಮಿಸಿಕೊಳ್ಳುವುದು. ಹಾಗಾಗಿ ಶಿಕ್ಷಣವು ಉದ್ಯೋಗಾವಕಾಶಗಳಿಗೆ ತೆರೆದ ಬಾಗಿಲಾಗಿರದೆ "ಸವಲತ್ತುಗಳಿಗಾಗಿಯೇ ಇರುವ ರಹದಾರಿ" (pssport to privileges)ಯಾಗಿದೆ. ಈ ಸಮಸ್ಯೆ ಹೊಸದೇನೂ ಅಲ್ಲ. ಬಹು ಹಿಂದೆಯೇ ಇದರ ಬಗ್ಗೆ ಲಿಯೋಟಾಲ್‌ಸ್ಟಾಯ್ ಬರೆಯುತ್ತಾ 'ವ್ಯಕ್ತಿಯೊಬ್ಬನ ಬೆನ್ನ ಏರಿ ಕುಳಿತು ಆತನನ್ನು ಮುಂದೆ ಹೋಗುನಂತೆ ಒತ್ತಾಯಿಸುವಾಗ್ಯೂ ಆತನ ಆ ದುಃಸ್ಥಿ ತಿಗಾಗಿ ಮರುಕಪಡುತ್ತೇನೆ, ಆ ಸ್ಥಿತಿಯಿಂದ ಆತನನ್ನು ವಿಮುಕ್ತಿಗೊಳಿಸಲು ಆತನ ಬೆನ್ನು ಬಿಟ್ಟಿಳಿಯುವುದೊಂದನ್ನು ಬಿಟ್ಟು ಸಾಧ್ಯವಿರುವ ಎಲ್ಲ ಪ್ರಯತ್ನಗಳನ್ನೂ ಮಾಡುತ್ತೇನೆ. ಎನ್ನುತ್ತಾನೆ. ಈ ಪ್ರಶ್ನೆಗೆ ಈಗ ಉತ್ತರ ಹುಡುಕಬೇಕಾಗಿದೆ. ವಿದ್ಯಾವಂತ ಜನ ಅವಿದ್ಯಾವಂತರ ಪಾಠ್ಯದ ಮೇಲೆ ಸವಾರಿ ಮಾಡುವುದನ್ನು ತಡೆದು ತಮಗಿರುವ ಸವಲತ್ತುಗಳನ್ನು ಮುಕ್ತ ಮನಸ್ಸಿನಿಂದ ವಂಚಿತರೊಂದಿಗೆ ಹಂಚಿಕೊಳ್ಳುವಂತಹ ಮನೋಭಾವವನ್ನು ಬೆಳೆಸುವುದು ಶಿಕ್ಷಣದ ಗುರಿಯಾಗಬೇಕು. ವಿದ್ಯಾವಂತ ಅಲ್ಪಸಂಖ್ಯಾತರು ಅವಿದ್ಯಾವಂತರೊಂದಿಗೆ, ಗ್ರಾಮೀಣ ಪರಿಸರದೊಂದಿಗೆ ತಮ್ಮನ್ನು ಗುರುತಿಸಿಕೊಳ್ಳದೆ ಅವರಿಂದ ಸದಾಕಾಲ ದೂರವಿರುವ ಶಿಕ್ಷಣ ವ್ಯವಸ್ಥೆ ಯಿಂದ ಹೊರಬರಬೇಕಾಗಿದೆ. ಅಂದಾಗ ಮಾತ್ರ ನಿರುದ್ಯೋಗಸಮಸ್ಯೆಗೆ ಒಂದು ಪರಿಹಾರ ಸಾಧ್ಯವಾಗುತ್ತದೆ. ಸವಲತ್ತುಗಳನ್ನು ಪಡೆಯುವುದೊಂದನ್ನೇ ರೂಢಿಸಿಕೊಂಡ ಜನ ಕೊಡುವುದನ್ನೂ ಕಲಿತರೆ ಸಮಸ್ಯೆ ಸಡಿಲಗೊಳ್ಳುತ್ತದೆ.

ಯಾವುದೇ ಒಬ್ಬ ವ್ಯಕ್ತಿಯನ್ನು ಉತ್ಪಾದನೆಯಲ್ಲಿ ತೊಡಗಿಸಬೇಕಾದರೆ ಪ್ರೇರಣೆ ಮತ್ತು ಶಿಕ್ಷಣ ಇವೆರಡೇ ಸಾಲದು. ಜೊತೆಗೆ ಉತ್ಪಾದನಾ ಸಾಮಗ್ರಿಗಳನ್ನು ಮತ್ತಿತರ ಉಪಕರಣಗಳನ್ನು ಕೊಳ್ಳಲು ಬಂಡವಾಳದ ಅವಶ್ಯಕತೆಯೂ ಇದೆ. ಹಿಂದುಳಿದ ರಾಷ್ಟ್ರಗಳು ತಮ್ಮ ಹಿಂದುಳಿಯುವಿಕೆಗೆ ಬಂಡವಾಳದ ಕೊರತೆಯೇ ಮೂಲಕಾರಣವೆಂದು ಭಾವಿಸಿವೆ. ಉತ್ಪಾದನಾ ಕಾರ್ಯಕ್ಕೆ ಬಂಡವಾಳ ಬೇಕು ನಿಜ. ಆದರೆ ಎಂತಹ ಬಂಡವಾಳ ಮತ್ತು ಎಷ್ಟು ಬೇಕು ಮತ್ತು ಎಷ್ಟನ್ನು ಹೂಡಲು ತಮ್ಮಿಂದ ಸಾಧ್ಯವಿದೆ ಎನ್ನುವುದನ್ನು ಮೊದಲು ಸ್ಪಷ್ಟವಾಗಿ ನಿರ್ಧರಿಸಿಕೊಳ್ಳಬೇಕು. ನಮಗೆ ಬೇಕಾಗುವ ಬಂಡವಾಳದ ಮೊತ್ತ ಉತ್ಪಾದನೆಗಾಗಿ ನಾವು ಬಳಸುವ ತಂತ್ರಜ್ಞಾನವನ್ನು ಅವಲಂಬಿಸಿರುತ್ತದೆ. ಸ್ಥಳೀಯವಾಗಿ ಅಭಿವೃದ್ಧಿಪಡಿಸಿದ ತಂತ್ರಜ್ಞಾನವನ್ನು ಬಳಸುವುದರಿಂದ ಕಡಿಮೆ ವೆಚ್ಚದಲ್ಲಿ ಹೆಚ್ಚು ಉದ್ಯೋಗಾವಕಾಶಗಳನ್ನು ಸೃಷ್ಟಿಸಬಹುದು. ತಂತ್ರಜ್ಞಾನಕ್ಕೆ ಅಲ್ಲಿಯ ಮಣ್ಣಿನ ವಾಸನೆಯಿರುವುದರ ಜೊತೆಗೆ ಅದನ್ನು ಉತ್ಪಾದನಾ ವಿಧಾನಗಳಲ್ಲಿ ಸುಲಭವಾಗಿ ಬಳಸಿಕೊಳ್ಳಬಹುದು. ಆದರೆ ಇಂದು ಅಭಿವೃದ್ಧಿಶೀಲ ಅಥವಾ ಅನಭಿವೃದ್ಧ ರಾಷ್ಟ್ರಗಳು ತಮ್ಮ ಅಭಿವೃದ್ಧಿಯನ್ನು ಮುಂದುವರಿದ ರಾಷ್ಟ್ರಗಳಿಂದ ತಂತ್ರಜ್ಞಾನವನ್ನು ದುಬಾರಿ ಬೆಲೆಯಲ್ಲಿ ಆಮದುಮಾಡಿಕೊಳ್ಳುವುದರಲ್ಲಿ ಕಂಡುಕೊಳ್ಳುತ್ತಿವೆ. ಹಾಗಾಗಿ ಅವು ತಮ್ಮ ಬಂಡವಾಳದ ಕೊರತೆಯನ್ನು ಹೆಚ್ಚಿಸಿಕೊಳ್ಳುವುದರ ಜೊತೆಗೆ ನಿರುದ್ಯೋಗವನ್ನು ಆಮದು ಮಾಡಿಕೊಂಡಂತಾಗುತ್ತಿದೆ. ಆಮದು ಮಾಡಿಕೊಂಡ ಆಧುನಿಕ ತಂತ್ರಜ್ಞಾನಕ್ಕೆ ತಕ್ಕಂತೆ ಉತ್ಪಾದನಾ ವ್ಯವಸ್ಥೆ (organisational structure) ಯಲ್ಲೂ ಬದಲಾವಣೆ ಅವಶ್ಯಕವೆನಿಸುತ್ತದೆ. ಇಂದು ಉತ್ಪಾದನಾ ಘಟಕಗಳನ್ನು ವ್ಯವಸ್ಥೆಗೊಳಿಸಿ ನಿರ್ವಹಿಸುವುದರ ಸಲುವಾಗಿಯೇ ಪರಿಣತಿ ಹೊಂದಿದ ತಂಡಗಳನ್ನು ತರಬೇತಿಗೊಳಿಸಲಾಗುತ್ತಿದೆ. ಈ ಮಟ್ಟದ ಪರಿಣತೀಕರಣ (specialisation) ಅಧಿಕ ಬಂಡವಾಳವನ್ನು ಬೇಡುವುದರ ಜೊತೆಗೆ ಉತ್ಪಾದನಾ ಚಟುವಟಿಕೆಗಳ ನಡುವಿನ ಸಮನ್ವಯವನ್ನು ದುರ್ಬಲಗೊಳಿಸುತ್ತದೆ. ಸ್ಥಾಪಿತ ಉತ್ಪಾದನಾ ವಿಧಾನಗಳಲ್ಲಿಯ ಸಣ್ಣಬದಲಾವಣೆಗೂ ಅವಕಾಶವನ್ನು ನಿರಾಕರಿಸುತ್ತದೆ. ಇದಕ್ಕೆ ಒಂದು ಉದಾಹರಣೆಯೆಂದರೆ, ಅಮೇರಿಕಾದ 'ಫೋರ್ಡ್ ಮೋಟಾರು ಸಂಸ್ಥೆ'ಯು 1903 ರಲ್ಲಿ ಮೋಟಾರು ಕಾರೊಂದನ್ನು ಉತ್ಪಾದಿಸಲು ತೆಗೆದುಕೊಂಡ ಸಮಯ ಕೇವಲ ಆರುತಿಂಗಳು. ಆದರೆ ಅರವತ್ತು ವರ್ಷಗಳನಂತರ ಅದೇ ಸಂಸ್ಥೆ ಆ ಕಾರನ್ನು ಮಾರ್ಪಾಡುಗೊಳಿಸಬೇಕಾಗಿ ಬಂದಾಗ ಅದಕ್ಕೆ ಪೂರ್ವ ಸಿದ್ಧತೆಗಾಗಿಯೇ ಬೇಕಾದ ಸಮಯ ಮೂರುವರೆ ವರ್ಷಗಳು ಮತ್ತು ನೂರಕ್ಕಿಂತಲೂ ಹೆಚ್ಚು ಪಟ್ಟು ಬಂಡವಾಳ! ಇದು ಪರಿಣತೀಕರಣದ ಮತ್ತು

ತಂತ್ರಜ್ಞಾನದ ಬೆಳವಣಿಗೆಯ ಫಲ. ಅಂದರೆ ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿಯ ತಾಂತ್ರಿಕ ಬೆಳವಣಿಗೆಯನ್ನು ವಿರೋಧಿಸುವುದು ಎಂದಲ್ಲ. ಅಂತಹ ತಂತ್ರಜ್ಞಾನವನ್ನು ಬಡ ರಾಷ್ಟ್ರಗಳು ಅನುಸರಿಸುವುದರಿಂದ ಸಹಜವಾಗಿಯೇ ಬಂಡವಾಳದ ಕೊರತೆ ಸೃಷ್ಟಿಯಾಗುತ್ತದೆ. ಅದಕ್ಕಾಗಿ ಮುಂದುವರಿದ ರಾಷ್ಟ್ರಗಳನ್ನು ಅವಲಂಬಿಸಿ ಅವುಗಳ ಶರತ್ತುಗಳಿಗೆ ಒಪ್ಪಿ, ತಮ್ಮಗಳ ಅಭಿವೃದ್ಧಿಯನ್ನು ಬಲಿಕೊಡಬೇಕಾಗುತ್ತದೆ. ಇದರಿಂದ ಶ್ರೀಮಂತ ರಾಷ್ಟ್ರಗಳಲ್ಲಿ ಸೃಷ್ಟಿಯಾಗಬೇಕಿದ್ದ ನಿರುದ್ಯೋಗ ಬಹು ಸುಲಭವಾಗಿ ಬಡರಾಷ್ಟ್ರಗಳಿಗೆ ರವಾನೆಯಾಗುತ್ತದೆ. ಆದ್ದರಿಂದ, ನಿರುದ್ಯೋಗ ಸಮಸ್ಯೆಯನ್ನು ನಿವಾರಿಸಿಕೊಳ್ಳಲು ಆ ದೇಶ ತನಗೆ ಸರಿಹೊಂದುವ ತಂತ್ರಜ್ಞಾನವನ್ನು ಆಯ್ಕೆ ಮಾಡಿಕೊಳ್ಳಬೇಕಾಗುತ್ತದೆ.

ಶಿಕ್ಷಣ, ತಂತ್ರಜ್ಞಾನ ಮತ್ತು ಬಂಡವಾಳದ ಜೊತೆಗೆ ಒಂದು ದೇಶದ ಅಭಿವೃದ್ಧಿಗೆ ಅವಶ್ಯಕವಾದ ಮತ್ತೊಂದು ಅಂಶವೆಂದರೆ ಮಾರುಕಟ್ಟೆ. ಉತ್ಪಾದಿತ ವಸ್ತುಗಳಿಗೆ ತಕ್ಷಣದ ಮಾರುಕಟ್ಟೆ ಅಥವಾ ಬೇಡಿಕೆ ದೊರೆಯದೆ ಹೋದಾಗ ಉತ್ಪಾದನಾ ಘಟಕಗಳು ಆರ್ಥಿಕ ಬಿಕ್ಕಟ್ಟನ್ನು ಎದುರಿಸಲಾರದೆ ಕಣ್ಮರೆಯಾಗ ತೊಡಗುತ್ತವೆ. ಅದು ದುಡಿಯುವ ಕೈಗಳು ಕೈ ಚೆಲ್ಲಿ ಕುಳಿತುಕೊಳ್ಳಲು ಕಾರಣವಾಗುತ್ತದೆ. ಆದರೆ ಉತ್ಪಾದಿತ ವಸ್ತುಗಳ ಬಗೆಗಿನ ಮಾರುಕಟ್ಟೆ ಕುಸಿಯುವುದಾದರೂ ಏಕೆ? ಕೈಗಾರಿಕಾ ಘಟಕಗಳು ಉತ್ಪಾದಿಸುವ ವಸ್ತುಗಳು ಅಲ್ಲಿಯ ಜನರ ಅವಶ್ಯಕತೆಗಳಿಂದ ದೂರವಾಗಿದ್ದರೆ ಅಥವಾ ಅಲ್ಲಿಯ ಜನರಲ್ಲಿ ಕೊಂಡುಕೊಳ್ಳುವ ಸಾಮರ್ಥ್ಯ ಕಡಿಮೆ ಇದ್ದರೆ ಆ ವಸ್ತುಗಳ ಮಾರಾಟ ಕಡಿಮೆಯಾಗುತ್ತದೆ. ಆದ್ದರಿಂದ ಅಭಿವೃದ್ಧಿಯ ಬಗ್ಗೆ ಕಳಕಳಿಯಿರುವ ದೇಶ ತನ್ನ ಜನರಿಗೆ ಅವಶ್ಯಕವಾದ ವಸ್ತುಗಳನ್ನು ಮಾತ್ರ ಉತ್ಪಾದಿಸಬೇಕಾಗುತ್ತದೆ. ಇಲ್ಲಿ ಒಂದು ಪ್ರಶ್ನೆ. ಉತ್ಪಾದಿತ ವಸ್ತುಗಳಿಗೆ ಸ್ಥಳೀಯ ಮಾರುಕಟ್ಟೆ ಇಲ್ಲದೆ ಹೋದಲ್ಲಿ ಅಂತರ ರಾಷ್ಟ್ರೀಯ ಮಾರುಕಟ್ಟೆಯಲ್ಲಿ ವಿಕ್ರಯಿಸಬಹುದಲ್ಲ? ಈ ಸಾಧ್ಯತೆಯನ್ನು ತಳ್ಳಿ ಹಾಕಲಾರದಾದರೂ ಅಭಿವೃದ್ಧಿ ಹೊಂದಿದ ರಾಷ್ಟ್ರಗಳೊಂದಿಗೆ ಅಲ್ಲಿ ಪೈಪೋಟಿ ನಡೆಸುವುದಂತೂ ಅಸಾಧ್ಯ. ಒಂದು ವೇಳೆ ಸಾಧ್ಯವಾಗುವದೆನ್ನುವುದಾದರೆ ಅದಕ್ಕೆ ತಗಲುವ ಬಂಡವಾಳದ ಬೆಲೆ ತುಂಬಾ ದುಬಾರಿ. ಅದಕ್ಕಾಗಿ ಬಡರಾಷ್ಟ್ರಗಳು ಪುನಃ ಮುಂದುವರಿದ ರಾಷ್ಟ್ರಗಳನ್ನು ಯಾಚಿಸಬೇಕಾಗುವುದು. ಇದು ಶ್ರೀಮಂತ ರಾಷ್ಟ್ರಗಳ ಮೇಲಿನ ಬಡರಾಷ್ಟ್ರಗಳ ಅವಲಂಬನೆಯನ್ನು ಹೆಚ್ಚು ಮಾಡುತ್ತದೆಯೇ ವಿನಃ ಸಮಸ್ಯೆಗೆ ಪರಿಹಾರವಾಗುವುದಿಲ್ಲ. ಆದ್ದರಿಂದ ನಿರುದ್ಯೋಗ ಸಮಸ್ಯೆಯ ನಿವಾರಣೆಗೆ ಸ್ಥಳೀಯ ಮಾರುಕಟ್ಟೆಗಳು ಸೂಕ್ತ ಪರಿಹಾರ ನೀಡಬಲ್ಲವು.

ಅಭಿವೃದ್ಧಿಗೆ ಅವಶ್ಯಕವಾದ ಮೇಲಿನ ನಾಲ್ಕು ಅಂಶಗಳು ಪರಸ್ಪರ ಪೂರಕವಾಗದಿದ್ದಲ್ಲಿ ಉದ್ದೇಶಿತ ಗುರಿ ತಲುಪಲು ಸಾಧ್ಯವಿಲ್ಲ. ಶಾಲಾಕಾಲೇಜುಗಳಲ್ಲಿ ಪಡೆಯುವ ಶಿಕ್ಷಣ ಉದ್ಯೋಗಾವಕಾಶಗಳಿಗೆ ತೆರದ ಬಾಗಿಲಂತಿದ್ದು ಹೂಡಿದ ಬಂಡವಾಳ ಅವಶ್ಯಕ ವಸ್ತುಗಳನ್ನು ಉತ್ಪಾದಿಸುವಲ್ಲಿ ವಿನಿಯೋಗವಾಗಬೇಕು. ಅಂದರೆ, ಉತ್ಪಾದನಾ ಅಂಶಗಳನ್ನು ಉತ್ಪಾದಕರೀತಿಯಲ್ಲಿ ಸಂಯೋಜಿಸುವ ಯೋಜನೆ ಬಹು ಮುಖ್ಯ. ಭಾರತದಲ್ಲಿ ಇಂದು ಯೋಜನೆಗಳನ್ನು ರೂಪಿಸುವ ತಜ್ಞರ ಲೆಕ್ಕಾಚಾರ ಹೇಗಿದೆಯೆಂದರೆ–ವ್ಯಕ್ತಿಯೊಬ್ಬನನ್ನು ಕೆಲಸದಲ್ಲಿ ತೊಡಗಿಸಲು ಇಂತಿಷ್ಟು ವಿದ್ಯುಚ್ಛಕ್ತಿ ಇಂತಿಷ್ಟು ಬಂಡವಾಳ, ಇಂತಿಷ್ಟು ಸಿಮೆಂಟು, ಇಂತಿಷ್ಟು ಕಬ್ಬಿಣ ಅವಶ್ಯಕವಾಗಿದ್ದು ಅವಿಲ್ಲದೆ ಉದ್ಯೋಗಾವಕಾಶಗಳನ್ನು ಸೃಷ್ಟಿಸುವುದು ಸಾಧ್ಯವೇ ಇಲ್ಲ ಎನ್ನುವ ಧೋರಣೆ. ಇದು ಮನಸ್ಸಿನ ಭ್ರಮೆಯಷ್ಟೇ ಆಗಿದ್ದು ತಾಜಮಹಲನ್ನು ಕಟ್ಟುವಾಗ, ಗೋಳಗುಮ್ಮಟವನ್ನು ನಿರ್ಮಿಸುವಾಗ, ಯುರೋಪಿನ ಉತ್ತಮ ಕಲಾಕೃತಿ–ಚರ್ಚುಗಳನ್ನು ಕಟ್ಟುವಾಗ ಸಿಮೆಂಟಾಗಲೀ, ಕಬ್ಬಿಣವಾಗಲೀ, ವಿದ್ಯುತ್‌ಶಕ್ತಿಯಾಗಲೀ ಬಳಸಲ್ಪಡಲಿಲ್ಲ ಎನ್ನುವ ವಿಷಯವನ್ನು ತಮ್ಮ ದೃಷ್ಟಿಪಟಲದ ಮೇಲೆ ತಂದುಕೊಳ್ಳುವುದು ಆವಶ್ಯಕ. ಆಧುನಿಕ ತಂತ್ರಜ್ಞಾನ ಮತ್ತು ಅಧಿಕಬಂಡವಾಳಗಳಿಲ್ಲದೆ ಉದ್ಯೋಗಾವಕಾಶಗಳನ್ನು ಕಲ್ಪಿಸುವುದು ಅಸಾಧ್ಯ ಎನ್ನುವ ಧೋರಣೆಯನ್ನು ಕೈ ಬಿಡಬೇಕು. ಹಾಗಾದರೆ ಕಡಿಮೆಬಂಡವಾಳ ಹೂಡಿ ಹಳೆಯದಾದ ತಂತ್ರಜ್ಞಾನದಿಂದ ಹೆಚ್ಚು ಉದ್ಯೋಗಾವಕಾಶಗಳನ್ನು ಅಥವಾ ಅಭಿವೃದ್ಧಿಯನ್ನು ಸಾಧಿಸುವುದು ಹೇಗೆ ಸಾಧ್ಯ ? ಈ ನಿಟ್ಟಿನಲ್ಲಿ ಯೋಜನಾ ಆಯೋಗ ತುಳಿಯಬೇಕಾದ ಹಾದಿ ಯಾವುದು ? ಒಂದು ಸರಳ ಉದಾಹರಣೆಯನ್ನು ನೀಡುವುದಾದರೆ, ಮನುಷ್ಯನ ಹಲವು ಅವಶ್ಯಕತೆಗಳನ್ನು ಪೂರೈಸುವ ಪ್ರಕೃತಿಯ ವರಪ್ರಸಾದನಂತಿರುವ ಕಾಡುಗಳನ್ನು ಅಭಿವೃದ್ಧಿಪಡಿಸಿ, ಸಂರಕ್ಷಿಸಲು ಬೇಕಾಗುವ ಬಂಡವಾಳವೆಷ್ಟು ? ಈ ವಿಷಯದಲ್ಲಿ ಬೌದ್ಧಧರ್ಮದ ಸಂಸ್ಥಾಪಕನಾದ ಬುದ್ಧ, ತನ್ನ ಅನುಯಾಯಿಗಳಿಗೆ ಕೊನೆಯಪಕ್ಷ ಐದುವರ್ಷಕ್ಕೊಮ್ಮೆಯಾದರೂ ನಮ್ಮ ಜೀವಿತ ಅವಧಿಯಲ್ಲಿ ಒಂದೊಂದು ಗಿಡನೆಟ್ಟು ಪೋಷಿಸಬೇಕೆಂದು ಹೇಳಿರುವುದು ಅದೆಷ್ಟು ಸಮಂಜಸ ! ಭಾರತ ಇದನ್ನು ಅನುಸರಿಸಿದ್ದಾದರೆ ಸಾಕಷ್ಟು ಆರೋಗ್ಯಕರ ಗಾಳಿ, ಮಳೆ, ನೆರಳು ಆಹಾರ, ಗೊಬ್ಬರ, ಮರಮುಟ್ಟುಗಳು ಸುಲಭವಾಗಿ ದೊರಕುತ್ತವೆ. ಈ ಕಾರ್ಯದಲ್ಲಿ ಭಾರತದ ಒಟ್ಟು ಜನಸಂಖ್ಯೆಯ ಅರ್ಧದಷ್ಟು ಜನ ಭಾಗಿಯಾದರೂ ಐದು ವರ್ಷಗಳ ನಂತರದ ವೃಕ್ಷಸಂಪತ್ತು 38 ಕೋಟಿ ! ಇದನ್ನು ಇತ್ತಷ್ಟು ವ್ಯವಸ್ಥಿತ ರೀತಿಯಲ್ಲಿ ಕೈಗೊಂಡರೆ ಭಾರತದ ಇದುವರೆಗಿನ ಪಂಚವಾರ್ಷಿಕ ಯೋಜನೆಗಳು ನೀಡಲಾಗದ ಪ್ರತಿಫಲವನ್ನು ನಿರೀಕ್ಷಿಸಬಹುದು. ಇದೊಂದು ಆಲೋಚನೆಯಷ್ಟೇ. ಭಾರತದ ಎಲ್ಲ ಸಮಸ್ಯೆಗಳಿಗೆ ಇದು

ಪರಿಹಾರ ಎಂದಲ್ಲ, ಅಧಿಕ ಬಂಡವಾಳ, ಉನ್ನತಮಟ್ಟದ ತಂತ್ರಜ್ಞಾನ, ಸಿಮೆಂಟು ವಿದ್ಯುತ್‌ಶಕ್ತಿ, ಕಬ್ಬಿಣ, ಇವುಗಳಿಲ್ಲದೆಯೂ ಆಸಕ್ತ ಮಾನವನ ಸಬಲ ಕೈಗಳಿಗೆ ಕೆಲಸಕೊಡುವುದೂ ಸಾಧ್ಯ ಎನ್ನುವ ಅಂಶದತ್ತ ಗಮನ ಸೆಳೆಯುವುದೇ ಈ ಉದಾಹರಣೆಯ ಉದ್ದೇಶ. ಆಲೋಚನೆಗಳನ್ನು, ಆದರ್ಶಗಳನ್ನು ಕಾರ್ಯರೂಪಕ್ಕೆ ತರಲು ಅಸಾಧ್ಯವಾದ ಅಂಶವೇನಲ್ಲ. ○

ಆಧಾರ :

Small is beautiful

E.F. Schumacher

ಹೊಸ ಓದು

ಚಿದಂಬರ ರಹಸ್ಯ

○ ಓ. ಎಲ್. ನಾಗಭೂಷಣಸ್ವಾಮಿ

'ಚಿದಂಬರ ರಹಸ್ಯ'ದಂಥ ಒಂದು ಕಾದಂಬರಿಯ ಬಗ್ಗೆ ಏನೆಲ್ಲ ಬರೆಯಬಹುದಾದರೂ ಅದು ಕಾದಂಬರಿಯನ್ನ ಓದಿದಾಗ ಆಗುವ ಅನುಭವಕ್ಕೆ ಸಮನಾಗುವುದಿಲ್ಲ. ಉತ್ತಮ ಕಾದಂಬರಿಯನ್ನು ಹಾಗೆ ಒಂದು ಸಾರಿಗೆ 'ಓದಿ' ಮುಗಿಸಿಬಿಡುವುದಕ್ಕೂ ಆಗುವುದಿಲ್ಲ.ಮತ್ತೆ ಮತ್ತೆ 'ಓದಿ'ದಂತೆಲ್ಲ ಅರ್ಥ 'ಆಗುತ್ತಾ' ಹೋಗುತ್ತದೆ. ಪ್ರತಿಯೊಬ್ಬ ಓದುಗನಿಗೂ ಆಗ ಬೇಕಾದ ಅರ್ಥವನ್ನು, ಪ್ರತಿಯೊಬ್ಬ ಓದುಗನೂ ಮಾಡಿಕೊಳ್ಳಬೇಕಾದ ಅರ್ಥವನ್ನು ಚಿಕ್ಕ ಲೇಖನವೊಂದರಲ್ಲಿ ಬರೆದು ವಿವರಿಸಿ ತಲುಪಿಸುವುದು ಅಸಾಧ್ಯ. ಮತ್ತೆ ಮತ್ತೆ ಓದುವುದು, ಮತ್ತೆ ಓದಿ ಮೆಚ್ಚುವುದು ಮಾತ್ರ ಉತ್ತಮ ಕಾದಂಬರಿಯ ಬಗ್ಗೆ ನಾವು ಮಾಡಬಹುದಾದ ಉತ್ತಮ ವಿಮರ್ಶೆ.

'ಚಿದಂಬರ ರಹಸ್ಯ' ಒಳಗೊಳ್ಳುವ ವಿಷಯಗಳು ಅನೇಕವಿವೆ. ಆ ವಿಷಯಗಳಿಗೆ ಬೇಕಾದಷ್ಟು ವಿವರಣೆಗಳಿವೆ. ವಿಷಯಗಳನ್ನು, ವಿವರಗಳನ್ನು ನೋಡುವ ರೀತಿ ಸಮಗ್ರವಾಗಿದೆ. ಮತ್ತು ಹೇಳ ಬೇಕಾದ್ದನ್ನು ಜೋಡಿಸಿ ಹೇಳಿರುವ ರೀತಿ ಅಪರೂಪದ್ದು ಪ್ರೌಢ. ಕನ್ನಡ ಕಾದಂಬರಿ ಇಂಥ ಒಂದು ಅನುಭವವನ್ನೂ ಕೊಡಲು ಸಾಧ್ಯ ಎಂಬುದನ್ನು ತೋರಿಸಿಕೊಟ್ಟಿದೆ. ನಿಜವಾಗಿ ಹೊಸದಾದ ಅನುಭವದ ಬಗ್ಗೆ ಅಚ್ಚುಕಟ್ಟಾಗಿ ಬರೆದು ವಿವರಿಸುವುದು ಕಷ್ಟ.

ಕನ್ನಡದಲ್ಲಿ, ಕಣ್ಣಿಗೆ ಕಂಡದ್ದು ಮಾತ್ರ ಅಥವಾ ಕಣ್ಣಿಗೆ ಕಾಣುವಷ್ಟು ಮಾತ್ರವೇ ಮುಖ್ಯವಾಗಿರುವ ವಾಸ್ತವ ಮಾರ್ಗದ ಕಾದಂಬರಿಗಳಿವೆ. ಲೇಖಕನ ನಿಲುವು, ವಿಚಾರ, ಅಥವಾ ವ್ಯಕ್ತಿತ್ವ ಮಾತ್ರ ಮುಖ್ಯವಾಗಿರುವ ನವ್ಯ ಕಾದಂಬರಿಗಳಿವೆ. ಮುಂದೇನು ಎಂಬ ಕುತೂಹಲವೇ ಮುಖ್ಯವಾಗಿರುವ ಕಥೆಯ ಕಾದಂಬರಿಗಳಿವೆ. ಅಥವಾ ಪಾತ್ರಗಳ ಶಕ್ತಿಯನ್ನು ಅಥವಾ ವಿಚಿತ್ರವನ್ನು ಮಾತ್ರ ಆಧಾರ ಮಾಡಿಕೊಂಡಿರುವ ಕಾದಂಬರಿಗಳಿವೆ. ಇಂಥ ಯಾವುದೇ ಕಾದಂಬರಿ ವಿಮರ್ಶೆಗೆ ಸುಲ

ಭವಾಗಿ ಸಿಗುತ್ತದೆ. ಯಾಕೆಂದರೆ ಕಾದಂಬರಿಯಲ್ಲಿ ಏನಾಗುತ್ತದೊ ಅದಕ್ಕೆಲ್ಲ ತಕ್ಕಮಟ್ಟಿಗೆ ಸ್ಪಷ್ಟವಾದ ಖಚಿತವಾದ ಉತ್ತರ ಕಾದಂಬರಿಯಲ್ಲಿ ಸಿಗುತ್ತದೆ. 'ಮರಳಿ ಮಣ್ಣಿಗೆ'ಯಲ್ಲಿ ರಾಮು ಮತ್ತೆ ಹಳ್ಳಿಗೆ ವಾಪಸ್ಸು ಬಂದದ್ದು ಯಾಕೆ? 'ಸಂಸ್ಕಾರ' ದಲ್ಲಿ ಪ್ರಾಣೇಶಾಚಾರ್ಯ– ನಾರಣಪ್ಪರ ತಿಕ್ಕಾಟದ ಸ್ವರೂಪ ಎಂಥದ್ದು? ಈ ತಿಕ್ಕಾಟದ ಮೂಲಕ ಲೇಖಕ ಹೇಳ ಬೇಕೆಂದಿರುವುದು ಏನು? 'ಶಿಕಾರಿ'ಯ ನಾಗಪ್ಪ ಹಿಂಸೆ ಅನುಭವಿಸುವುದು ಯಾಕೆ? ಬೇರೆಯವರನ್ನು ಅವನು ಹಿಂಸಿಸುವುದು ಯಾಕೆ? 'ವಂಶವೃಕ್ಷ'ದ ತೊಡಕಿಗೆ ಶ್ರೋತ್ರಿಯ ವ್ಯಕ್ತಿತ್ವ ಎಷ್ಟು ಮಟ್ಟಿಗೆ ಕಾರಣ? ಇಂಥ ಮುಖ್ಯವಾದ ಪ್ರಶ್ನೆಗಳಿಗೆ ಕಾದಂಬರಿಯೊಳಗಿನಿಂದಲೇ ಉತ್ತರಗಳನ್ನು ಹುಡುಕಿ ತೆಗೆಯುವುದು ಸಾಧ್ಯ.

ಆದರೆ 'ಕರ್ವಾಲೋ' ಮತ್ತು 'ಚಿದಂಬರ ರಹಸ್ಯ' ಈ ಕಾದಂಬರಿಗಳ ರೀತಿಯೇ ಬೇರೆ. ಇವು ಹುಟ್ಟಿ ಹಾಕುವ ಪ್ರಶ್ನೆಗಳಿಗೆ ಪೂರ್ಣವಾದ ಉತ್ತರ ಕಾದಂಬರಿಯೊಳಗೇ ಸಿಗುವುದಿಲ್ಲ. ಅದನ್ನು ಕಾದಂಬರಿಗಳು ನಮ್ಮಲ್ಲಿ ಹುಟ್ಟಿಸುವ ಭಾವದೊಳಗೆ, ನಮ್ಮ ಮೇಲೆ ಮಾಡಿದ ಪ್ರಭಾವದೊಳಗೆ ಹುಡುಕಬೇಕಾಗುತ್ತದೆ. ಇವು ಕಾದಂಬರಿಯ ರೂಪದ ಮಹಾಕಾವ್ಯಗಳು. ಅಂದರೆ, ಮಹಾಕಾವ್ಯ ಈಗ ನಮ್ಮಲ್ಲಿ ಮಹಾಕಾವ್ಯದ 'ರೂಪ'ದಲ್ಲೆ ಬರುವುದು ಸಾಧ್ಯವಿಲ್ಲ. ಸಧ್ಯಕ್ಕಂತೂ ಮಹಾಕಾವ್ಯ ಕಾದಂಬರಿ ಮತ್ತು ಸಿನಿಮಾದ ರೂಪದಲ್ಲಿ ಹುಟ್ಟುತ್ತಿದೆ. 'ಕರ್ವಾಲೋ' ಕೊಡುವುದು ಒಂದು ದರ್ಶನವನ್ನು. ಅದು ಒಂದು ಅನುಭಾವಕಥನ. ಹಾರುವ ಓತಿಯ ಕಥೆಯನ್ನು ಹಿಂಬಾಲಿಸಿಕೊಂಡು ಹೋಗಿ, ಅದು ಮರೆಯಾದಾಗ ನಮಗೆ ಆಗುವ ಅನುಭವವನ್ನು ದರ್ಶನ, ಅನುಭಾವ ಅಂತಲ್ಲದೆ ಬೇರೆ ಹೇಗೆ ವಿವರಿಸಲು ಸಾಧ್ಯ? 'ಚಿದಂಬರ ರಹಸ್ಯ' ಕೂಡ ಅಂಥದೇ ದರ್ಶನವನ್ನು ಬೇರೆ ಇನ್ನೊಂದು ನೆಲೆಯಲ್ಲಿ ಬೇರೆ ವಾತಾವರಣದಲ್ಲಿ ಕಟ್ಟಿಕೊಡುತ್ತದೆ. 'ಚಿದಂಬರ ರಹಸ್ಯ', 'ಕರ್ವಾಲೋ'ದಷ್ಟು ಚೆನ್ನಾಗಿಲ್ಲ ಎಂಬಂತೆ ಆಗಾಗ ಮಾತಾಡಿಕೊಳ್ಳುವುದುಂಟು. ಎರಡೂ ಪೂರ್ತಿ ಬೇರೆ ರೀತಿಯವು. ಆದರೂ ಎರಡರ ಮೂಲ ಶೋಧ ಒಂದೇ. ಆದರೆ 'ಚಿದಂಬರ ರಹಸ್ಯ'ದಲ್ಲಿ ಸಮಾಜ ಸಮಾಜದೊಳಗಿನ ಜನರ ಸಂಬಂಧ, ಮತ್ತು ವರ್ತನೆಯ ತೊಡಕುಗಳು ಹೆಚ್ಚು ಮುಖ್ಯವಾಗುತ್ತವೆ. 'ಕರ್ವಾಲೋ' ದಲ್ಲಿ ಶೋಧದ ನೆಲೆ ಬೇರೆಯಾಗಿದ್ದು, ಸಮಾಜದ ತೊಡಕುಗಳು ಅಸ್ಪಷ್ಟ ಹಿನ್ನೆಲೆಯಾಗಿ, ಸೂಚನೆಯಾಗಿ ಸಿಗುತ್ತವೆ. ಮತ್ತೆ ಈ ಎರಡೂ ಕಾದಂಬರಿಗಳಲ್ಲಿ 'ಆಗು'ವುದು ಮುಖ್ಯ. ಇಲ್ಲಿ ಪಾತ್ರವೆಂಬಂಥ ಪಾತ್ರಗಳೂ, ಉದ್ದೇಶಪೂರ್ವಕ ಸಂಕೇತಗಳೂ ಇಲ್ಲ. 'ಚಿದಂಬರ ರಹಸ್ಯ'ದ ಯಾವುದೇ ವ್ಯಕ್ತಿಯನ್ನು ವಿವರಿಸಲು ಪ್ರಯತ್ನಪಟ್ಟು ನೋಡಿ ಆಗಿದ್ದನ್ನು ಹೇಳು

ವುದಕ್ಕೆ ಎಷ್ಟು ಬೇಕೋ ಅಷ್ಟು, ಆಗಿದ್ದನ್ನು 'ಮಾಡಿದವರು' ಆಗಿಕಥನದ ಅಗತ್ಯಕ್ಕೆ ತಕ್ಕಂತೆ ಇಲ್ಲಿನ ಜನ ಬರುತ್ತಾರೆ. ಹತ್ತು ಜನ ಕೂತು ಒಂದು ಕತೆ ಹೇಳುತ್ತ ಹೋದಾಗ, ಕಥನ ಮಾತ್ರ ಮುಖ್ಯವಾಗಿ, ಅರ್ಥಗಳೆಲ್ಲ ತಮ್ಮ ಪಾಡಿಗೆ ತಾವು ಹೊಳೆಯುತ್ತ ಹೋಗುತ್ತದಲ್ಲ ,ಹಾಗೆ. ಕರ್ವಾಲೋದಲ್ಲಿ ಇಂಥ ಗುಣ, ಗೆಳೆಯರ ನಡುವೆ ಹೇಳಿದ ಕಥೆಯ ಗುಣ, ಜಾಸ್ತಿಯಾಗಿದೆ.

'ಚಿದಂಬರ ರಹಸ್ಯ' ಕಥನ ಎಷ್ಟು ಆಕರ್ಷಕವಾಗಿದೆಯೆಂದರೆ ಕಥೆಯ ಅನೇಕ ಎಳೆಗಳು ಒಂದರೊಡನೊಂದು ಹೇಗೆ ಹೆಣೆದುಕೊಂಡಿವೆ ಎಂಬುದು ಒಂದು ಒದಿಗೆ ಪತ್ತೆಯಾಗುವುದು ಕಷ್ಟ. ಇದರಲ್ಲಿ ಬರುವ ಜನರನ್ನು, ಅವರು ಮಾಡುವ ಕೆಲಸ ಗಳನ್ನು ಜ್ಞಾಪಿಸಿಕೊಳ್ಳಿ. ಪ್ರೀತಿ ಬೇಕು, ಕ್ರಾಂತಿಬೇಕು ಎಂಬ ಕಾಲೇಜು ಪಡ್ಡೆ ಹುಡಗರು, ಅಲೆಮಾರಿ ಗೋಸಾಯಿಗಳು, ಸಂಶೋಧನ ಕೇಂದ್ರದ ಪಾಟೀಲರು, ತಲೆ ಬಿಸಿ ಆಚಾರಿಗಳು; ಪತ್ತೆದಾರ ಅಂಗಾಡಿ ಮತ್ತು ಪೆದ್ದ ಪ್ರಿನ್ಸಿಪಾಲ; ತೋಟದ ಯಜಮಾನ ಕೃಷ್ಣೇಗೌಡ ಮತ್ತು ಕತೆಗಾರ ಜಯರಾಮು; ಸಂಶೋಧನ ಕೇಂದ್ರದ ಸಿದ್ದಪ್ಪ, ಹೆಗಡೆ, ಮಹಮದ್ ಮತ್ತು ಮೇಷ್ಟ್ರು ರಾಮಚಂದ್ರು; ಮಹಮದ್ ಬೇರಿ ಮತ್ತವನ ಗುಂಪು ಹಾಗೂ ಜಯಂತಿ; ತೋಟದ ಆಳುಗಳು, ಹರಾಜು ಕೂಗುವ ಜವಾನ, ವೆಂಕಟೇಶ್ವರನ ಭಕ್ತರು, ಅಲ್ಲಾ ಭಕ್ತರು, ನಾಟಕ ನೋಡಲು ಬಂದ ಹೆಂಗ ಸರು; ಹೋಟಲು, ಕಾಲೇಜು, ರಸ್ತೆಜಗಳ ಟಿ.ಬಿ., ಸಂಶೋಧನಕೇಂದ್ರ, ಮನೆ, ಕಾಡು, ಬೆಟ್ಟ, ಲಂಟಾನ, ಏಲಕ್ಕಿ–ಒಂದ ಊರಿನಲ್ಲಿ ಒಂದೇಕಾಲದಲ್ಲಿ ಏನೆಲ್ಲ ನಡೆಯುಬಹು ದೋ ಅದೆಲ್ಲ ನಡೆಯುತ್ತವೆ. ನೀವು ಒಂದು ಊರನ್ನು ನೋಡಿದರೆ ಜನ 'ಇರು ತ್ತಾರೆ', ಏನೇನೋ 'ಆಗು'ತ್ತಿರುತ್ತದೆ. ಸುಮ್ಮನೆ ನೋಡಿದರೆ ಎಲ್ಲ ಅಸ್ತವ್ಯಸ್ತ, ಅರ್ಥ ರಹಿತ. ಆದರೆ ಊರಿನ ಬಗ್ಗೆ ಕತೆ ಮಾಡಿ ಹೇಳ ತೊಡಗಿ, ಆಗ ನೀವು ಕಂಡದ್ದರಲ್ಲಿ ಬೇಕಾದ್ದನ್ನು ಆಯ್ದು ಜೋಡಿಸಬೇಕಾಗುತ್ತೆ. ಹಾಗೆಯೆ 'ಚಿದಂಬರ ರಹಸ್ಯ' ಇರುವುದು-ಅಸ್ತವ್ಯಸ್ತ ಬದುಕಿನ ಘಟನೆಗಳನ್ನು ಆಯ್ದು ಜೋಡಿಸಿ ಕಥನ ಮಾಡುತ್ತ ಅರ್ಥಗಳನ್ನು ಹೊರಡಿಸುತ್ತದಲ್ಲ—ಅದರಲ್ಲಿ.

ಇಲ್ಲಿನ ಜನರನ್ನೆಲ್ಲ ಒಳಗಿನವರು—ಹೊರಗಿನವರು ಅಂತ ವಿಭಾಗಿಸಬಹುದೆ? ಹುಡು ಗರು, ತಮ್ಮ ಸ್ವಾರ್ಥದ ಪ್ರಶ್ನೆಗಳಲ್ಲೆ ಮುಳುಗಿದ ವಯಸ್ಕರು, ಇವರನ್ನೆಲ್ಲ ಅರ್ಥಮಾಡಿಕೊಳ್ಳುತ್ತ ತಾತ್ವಿಕ ಶೋಧದಲ್ಲಿ ಆಸಕ್ತರಾದ ಪ್ರಬುದ್ಧರು ಅಂತ ನೋಡಬಹುದೇ? ಇಲ್ಲಿನ ಜನರೆಲ್ಲರ ನಡುವೆ ಯಾವ ಯಾವ ರೀತಿಯಲ್ಲಿ ಸಂಬಂಧ ಬೆಳೆಯುತ್ತದೆ? ಇಂಥ ಪ್ರಶ್ನೆಗಳನ್ನೆ ತೆಗೆದುಕೊಂಡು ಕಾದಂಬರಿಯನ್ನು ವಿಶ್ಲೇಷಣೆ

ಮಾಡಬಹುದು. ಒಟ್ಟು ಜೋಡಣೆಯು ನಟ್ಟು ಬೋಲ್ಟುಗಳನ್ನು ಹುಡುಕುತ್ತ ಕೂರಬಹುದು. ಆದರೆ ಅದರಿಂದ ಹೆಚ್ಚು ಲಾಭವಿಲ್ಲ. ಕೃತಿ ಕೊಡುವ ಅನುಭವ ದಟ್ಟವಾಗುವುದಿಲ್ಲ. ಕತೆ ಬರೆದು ಮುಗಿಸಿದ ಲೇಖಕನಿಗೆ ಉಪಯೋಗವಿಲ್ಲ. ಅಥವಾ ಇದನ್ನು ಅನುಕರಣೆ ಮಾಡುವ ಮತ್ತೊಬ್ಬ ಕತೆಗಾರನಿಗೆ, ಹೇಗಿದ್ದರೂ ಮತ್ತೆ ಇಂಥ ಸಂಯೋಜನೆ ಅನುಕರಣೆಯಾಗುವುದರಿಂದ, ಅನಗತ್ಯ. ಕಾದಂಬರಿಯ ತಾಂತ್ರಿಕ, ಯಾಂತ್ರಿಕ ವಿವರಗಳು ಹಾಗೇ ಇರಲಿ. ಹಿಂದಿನ ಪ್ಯಾರಾದ ಕೊನೆಯ ಮಾತನ್ನ, ಸ್ವಲ್ಪ ಮುಂದುವರೆಸೋಣ.

ಘಟನೆಗಳನ್ನೂ ವಿವರಗಳನ್ನೂ ಜೋಡಿಸುವ ದೃಷ್ಟಿ ಇದೆಯಲ್ಲ ಅದು ಸಮಗ್ರ ದೃಷ್ಟಿ. ಕಾದಂಬರಿಯಲ್ಲಿ ಒಂದು ಮಾತು ಬರುತ್ತದೆ. ಎಲ್ಲ ಸಮಸ್ಯೆಗಳೂ ಮಾನವೀಯ ಸನ್ನಿವೇಶದ ತುಣುಕುಗಳು.' ಅಂತ ಆದ್ದರಿಂದ ಇಡೀ ಸನ್ನಿವೇಶ ಮುಖ್ಯವಾಗುತ್ತದೆ. ಕಾಡು, ಮರ, ಲಂಟಾನ, ಬೆಟ್ಟ ಏಲಕ್ಕಿ, ಸಂಶೋಧನಕೇಂದ್ರ, ತಾಲ್ಲೂಕು ಬೋರ್ಡು ರಾಜಕೀಯ, ಜಾತಿ, ಪ್ರೀತಿ, ದೆವ್ವ, ಹರಾಜು, ಬ್ಯಾಂಕು ಎಲ್ಲ ಒಂದರೊಳಗೆ ಒಂದು ಸೇರಿಕೊಂಡುಬಿಡುತ್ತವೆ. ಹೀಗೆ ಎಲ್ಲ ಒಂದರೊಳಗೆ ಒಂದು ಸೇರಿಕೊಂಡಿದೆ ಅಂತ ಗೊತ್ತಾಗುವುದು ಹೊರಗಿನಿಂದ ನೋಡುವ ಕಣ್ಣಿಗೆ ಮಾತ್ರ; ಓದುಗನಿಗೆ ಗೊತ್ತಾಗುತ್ತದೆ. ಕತೆಗಾರನಿಗೆ ಗೊತ್ತಿದೆ. ಆದರೆ ಕಥನದಲ್ಲಿ ಸಿಕ್ಕಿಕೊಂಡ ಜನಕ್ಕೆ ತಮ್ಮ ತಮ್ಮ ಸಮಸ್ಯೆಗಳೇ ಬದುಕಿನ ಚಿದಂಬರ ರಹಸ್ಯವಾಗಿ ಕಾಣುತ್ತವೆ. ಹುಡುಗರಿಗೆ ಪ್ರೀತಿಯೇ ಚಿದಂಬರ ರಹಸ್ಯ. ಕೃಷ್ಣೇಗೌಡನಿಗೆ, ಮನೆ ಮೇಲೆ ಬೀಳುವ ಕಲ್ಲು, ಅದು ಹುಟ್ಟುಹಾಕುವ ಕುಟುಂಬ ಸಮಸ್ಯೆ, ಇದೆಲ್ಲ ದೆವ್ವದ ಕಾಟವೆ ಎಂಬ ಅನುಮಾನ, ಮತ್ತು ಇವೆಲ್ಲಕ್ಕೂ ತನ್ನ ವ್ಯಾಪಾರಕ್ಕೂ ಹಾಗೂ ತಾಲ್ಲೂಕು ಬೋರ್ಡು ರಾಜಕೀಯಕ್ಕೂ ಇರುವ ಸಂಬಂಧದ ಪ್ರಶ್ನೆಗಳು ಚಿದಂಬರ ರಹಸ್ಯ. ಅಂಗಾಡಿಗೆ ಬೆಲೆ ಇಳಿದಿದ್ದು ಯಾಕೆ? ಜೋಗಿಹಾಳರು ಸತ್ತದ್ದು ಹೇಗೆ? ಕೆಸರೂರು ಯಾಕೆ ಸಾಹಸ, ಉದ್ಯಮಶೀಲತೆಗೆ, ಪ್ರಬುದ್ಧತೆಗೆ ಆಹ್ವಾನ ನೀಡುವುದಿಲ್ಲ ಎಂಬ ಪ್ರಶ್ನೆ ಚಿದಂಬರ ರಹಸ್ಯ. ಮುಹಮ್ಮದ್ ಬೇರಿಗೆ ಅಂಗಾಡಿ ಮತ್ತು ಗೆಳೆಯರು ನಡೆಸುವ ಚಟುವಟಿಕೆಗೆ ಕಾರಣ ಏನು ಅಂತ ತಿಳಿಯದಿರುವುದು, ಮತ್ತು ಆ ಕೆಲಸಗಳು ತನ್ನ ಲಾಭ ಕಡಿಮೆ ಮಾಡುತ್ತವೆ ಎಂಬ ಸಂಶಯ ಚಿದಂಬರ ರಹಸ್ಯ. ಇನ್ನು ಜಯರಾಮನಿಗೆ ಜೀವನದ ಸ್ವರೂಪ ಏನು? ಅನುಭವ ಮತ್ತು ಅದರ ಮೂಲಾಧಾರವಾದ ಮನುಷ್ಯನ ನಡುವಳಿಕೆಗಳ ಸ್ವರೂಪ ಏನು ಎಂಬುದು ಚಿದಂಬರ ರಹಸ್ಯ. ನಮ್ಮ ಬದುಕಿನ ಕ್ರಿಯೆ ನಮ್ಮ ಸ್ವತಂತ್ರದ್ದೋ ಅಥವಾ ಮೀರಲು ಸಾಧ್ಯವಿಲ್ಲದ ಪ್ರಕೃತಿಯ ನಿಯಮಗಳಿಗೆ ಬದ್ಧವೋ ಎಂಬುದು ಪ್ರಬುದ್ಧರ ತಾತ್ವಿಕ

ಚಿದಂಬರ ರಹಸ್ಯ. ಹೀಗೆ, ಒಬ್ಬೊಬ್ಬರದೂ ಒಂದೊಂದು.

ಆದರೆ ಕಥನವನ್ನು ಹೊರಗಿನಿಂದ ಕಾಣುವ ಕಣ್ಣಿಗೆ, ಸಮಗ್ರ ದೃಷ್ಟಿಗೆ, ಕಾಣಿಸುವುದು ಸ್ವಂತದ ರಹಸ್ಯದ ಭಾರದಲ್ಲಿ ತೊಳಲುವ ಬಿಡಿ ಬಿಡಿ ಜನರಲ್ಲ, ನಿರ್ಲಿಪ್ತ ಅಸಹಾಯಕತೆಯಲ್ಲಿ ಅವನತಿಯತ್ತ ಹೋಗುತ್ತಿರುವ ಇಡೀ ಒಂದು ಸಂಸ್ಕೃತಿ ಕಾಣುತ್ತದೆ. ಒಬ್ಬೊಬ್ಬರ ರಹಸ್ಯವು ಬಯಲಾಗುತ್ತ ಕೊನೆಯ ಆಸ್ಫೋಟದಲ್ಲಿ ಇಡೀ ಕೆಸರೂರು ಹಾಳಾಗುತ್ತದೆ. ಆದರೂ ಉಳಿಯುವುದು ಇದೆ. ಜಾತಿ ಧರ್ಮ ಎಲ್ಲ ಮೀರಿದ ಕೇವಲ ಮನುಷ್ಯ ಪ್ರೀತಿ ಮತ್ತು ಏಲಕ್ಕಿಗಿಡ!

ಬದುಕು ಒಂದು ಚಿದಂಬರ ರಹಸ್ಯವಾಗುವುದಕ್ಕೆ, ರಹಸ್ಯದ ಭಾರ ಅಸಹನೀಯವಾಗಿ ವಿನಾಶದ ಆಸ್ಫೋಟ ಆಗುವುದನ್ನು ತಪ್ಪಿಸುವುದಕ್ಕೆ ಪರಿಹಾರ ಇಲ್ಲವೆ? ಕಾದಂಬರಿಯಲ್ಲಿ ಇನ್ನೊಂದು ಮಾತು ಬರುತ್ತದೆ. 'ಕೆಸರೂರಿನ ಜನರೆಲ್ಲ ತಮ್ಮ ತಲೆಯಲ್ಲಿ ಒಂದು ಕತೆ ಇಟ್ಟುಕೊಂಡು. ಅದೇ ನಿಜ ಅಂತ ನಂಬಿ, ಹಾಗಂತ ಇತರರನ್ನೂ ನಂಬಿಸುವುದಕ್ಕೆ ತಮ್ಮ ತಲೆಯೊಳಗಿನ ಕತೆಗೆ ಅನುಗುಣವಾದ ಸಾಕ್ಷಿಯನ್ನು ಹುಡುಕುತ್ತ ಓಡಾಡುತ್ತಿದ್ದಾರೆ' ಅಂತ. ಈ ತಲೆಯೊಳಗಿನ ಕತೆಯನ್ನು ಸ್ವಾರ್ಥ,ಸನಾತನ ಧರ್ಮ, ಹಣದ ಆಸೆ, ಅಧಿಕಾರದ ಬಯಕೆ, ತತ್ವ, ಏನಂತ ಬೇಕಾದರೂ ಕರೆಯಿರಿ. ಯಾವುದೇ ಪೂರ್ವಾಗ್ರಹ ಇರುವುದನ್ನು ಇರುವಂತೆ ಕಾಣುವುದಕ್ಕೆ ಬಿಡುವುದಿಲ್ಲ. ಇರುವ ಸತ್ಯ ಕಾಣದೆ ಅಥವ ತಲೆಯೊಳಗಿನ ಕತೆಗೆ ಹೊಂದದೆ ಹೋದಾಗ 'ರಹಸ್ಯ'ವಾಗುತ್ತದೆ.

ಕಾದಂಬರಿಯಲ್ಲಿ ಇನ್ನೂ ಒಂದು ಮಾತು ಬರುತ್ತದೆ, 'ಏನನ್ನೂ ಮುಚ್ಚಿಟ್ಟುಕೊಳ್ಳದೆ ಬದುಕುವುದು.' ಪ್ರಕೃತಿ ರಹಸ್ಯವನ್ನು ಮತ್ತು ಬಚ್ಚಿಡುವುದನ್ನು ಶಿರಸ್ಕರಿಸುತ್ತದೆ. ಪ್ರಕೃತಿ ನಿಗೂಢ ಹೌದು. ಆದರೆ ಏನನ್ನೂ ಬಚ್ಚಿಡುವುದಿಲ್ಲ. ಕಂಡುಕೊಳ್ಳಲಾಗದಿರುವುದು ನಮ್ಮ ಮಿತಿ ಇರಬಹುದು. ಏನೂ ಬಚ್ಚಿಡದೆ ಬದುಕುವುದು ಎಂದರೆ ಸ್ವತಂತ್ರವಾಗಿ ಬದುಕುವುದು. ಪ್ರೀತಿಯೊಡನೆ ಬದುಕುವುದು. ತಲೆಯೊಳಗಿನ ಕತೆಗಳನ್ನು, ಪೂರ್ವಾಗ್ರಹಗಳನ್ನು ತಿರಸ್ಕರಿಸಿ ಇರುವ ಸತ್ಯ ಅಂಗೀಕರಿಸಿ ಅರ್ಥಮಾಡಿಕೊಳ್ಳುತ್ತ ಬದುಕುವುದು. ಹಾಗೆ ಕಾದಂಬರಿಯ ಕೊನೆ ಇದನ್ನು ಎತ್ತಿ ಹಿಡಿಯುತ್ತದೆ. ತೇಜಸ್ವಿ ಇತ್ತೀಚೆಗೆ ಸಂದರ್ಶನದಲ್ಲಿ ಹೇಳಿದ ಮಾತು ಇಂಥದೇ. ಅವರ ಕಾದಂಬರಿ ಧರ್ಮದ ಜಾಗದಲ್ಲಿ ವೈಚಾರಿಕತೆಯನ್ನು ಮನುಷ್ಯತ್ವವನ್ನು ಸ್ಥಾಪಿಸುವ ಪ್ರಯತ್ನ.

'ಚಿದಂಬರ ರಹಸ್ಯ'ವನ್ನು ಇನ್ನೂ ಅನೇಕಥರ ಸೀಳಿ ನೋಡಬಹುದು. ಹಾಸ್ಯ-ಗಂಭೀರತೆ, ವ್ಯಂಗ್ಯ, ಇಲ್ಲಿ ತಮ್ಮಷ್ಟಕ್ಕೇ ಆಗುವ ಸಂಕೇತಗಳು ಅವುಗಳ ಸಂಬಂಧ, ಈ ಕಾದಂಬರಿಯ ಆಶಯ ತೇಜಸ್ವಿಯವರ ಹಿಂದಿನ ಕತೆ ಕಾದಂಬರಿಗಳಿಂದ ಹೇಗೆ ಬೆಳೆಯುತ್ತ ಬಂದಿದೆ—ಇತ್ಯಾದಿ. ಇಂಥ ವಿದ್ವತ್ತಿನ ಅಧ್ಯಯನ ಇಲ್ಲದೆಯೂ 'ಚಿದಂಬರ ರಹಸ್ಯ' ಸುಮ್ಮನೆ ಓದುವ ನಿಮಗೆ ಖಂಡಿತ ಗಾಢ ಅನುಭವ ನೀಡಿ, ಮತ್ತೆ ಮತ್ತೆ ನೆನಪಿಗೆ ಬಂದು ಕಾಡುತ್ತದೆ. ನಿಮ್ಮ ಒಳಗನ್ನು ತಡಕಿಕೊಳ್ಳುವಂತೆ ಒತ್ತಾಯಿಸುತ್ತದೆ. ○

ನನ್ನ ಕೃತಿಗಳು ಮತ್ತು ಕನ್ನಡ ಕಾದಂಬರಿ ಪರಂಪರೆ

○ ಡಾ. ಅನುಪಮಾ ನಿರಂಜನ

ಕನ್ನಡ ಕಾದಂಬರಿ ಪ್ರೇರಣೆ ಪಡೆದದ್ದು ಪಾಶ್ಚಾತ್ಯ ಸಾಹಿತ್ಯದಿಂದ. ಯೂರೋಪಿನ ರಮ್ಯ ಮತ್ತು ವಾಸ್ತವವಾದೀ ಪರಂಪರೆಗಳ ಕಾದಂಬರಿಗಳು ಈ ಶತಮಾನದ ಆರಂಭದ ಕನ್ನಡ ಲೇಖಕರ ಮೇಲೆ ಮಹತ್ವದ ಪ್ರಭಾವ ಉಂಟು ಮಾಡಿದವು. ಅಲ್ಲಿನ ಕಾದಂಬರಿಯ ಸ್ವರೂಪ ಮತ್ತು ತಂತ್ರಗಳನ್ನು ಇವರು ಅಭ್ಯಾಸಮಾಡಿದರೂ ಕಥಾ ಚೌಕಟ್ಟಿನೊಳಗಣ ತಿರುಳು ನಮ್ಮ ನೆಲದ್ದೇ ಆಗಿತ್ತು.

ಕಾದಂಬರಿ ಪರಂಪರೆಯ ಅಧ್ಯಯನ ಮಾಡುವಾಗ ಆಯಾ ಜನಾಂಗದ ಬದುಕಿನ ಚರಿತ್ರೆಯ ತಿಳುವಳಿಕೆ ಲೇಖಕರಿಗಿರಬೇಕಾಗುತ್ತದೆ. ಸಾಮಾಜಿಕ, ರಾಜಕೀಯ, ಆರ್ಥಿಕ, ಸಾಂಸ್ಕೃತಿಕ ಒಳಸುಳಿಗಳ ಅರಿವು, ವಾಸ್ತವವನ್ನು ಗ್ರಹಿಸಲಿಕ್ಕೆ ನೆರವಾಗುವಂಥವು. ವ್ಯಕ್ತಿ ಜೀವನ ಮತ್ತು ಸಮಾಜ ಜೀವನದ ನಡುವಿನ ಸಂಕೀರ್ಣ ಸಂಬಂಧಗಳನ್ನು ಅರ್ಥೈಸುವುದು, ವ್ಯಕ್ತಿತ್ವದ ಅಂತರಂಗದ ಶೋಧನೆ ಮಾಡುವುದು, ವೈಚಾರಿಕವಾಗಿ ಹಾಗೂ ವೈಜ್ಞಾನಿಕವಾಗಿ ಆಲೋಚನೆ ಮಾಡುವುದು. ಇವೆಲ್ಲಾ ವಾಸ್ತವವಾದೀ ಕಾದಂಬರಿಗಳ ಮೂಲ ಸ್ವರೂಪ. ಹೀಗೆ ಭೂತಕಾಲದ ಶೋಧನೆ ವರ್ತಮಾನದೊಂದಿಗೆ ಮುಖಾಮುಖಿಯಾದಾಗ ಭವಿಷ್ಯದ ದರ್ಶನವೂ ಸ್ಪಷ್ಟವಾಗುತ್ತದೆ.

ನಮ್ಮ ಆರಂಭದ ಕಾದಂಬರಿಗಳು ಈ ಹಿನ್ನೆಲೆಯಲ್ಲಿ ರಚಿತವಾದವು. ಆ ಕಾದಂಬರಿಗಳಾದ 'ಇಂದಿರಾಬಾಯಿ' 'ವಾಗ್ದೇವಿ' 'ಮಾಡಿದ್ದುಣ್ಣೋ ಮಹಾರಾಯ' ಇವುಗಳ ಬಗ್ಗೆ ನೀವೀಗಾಗಲೇ ಸಾಕಷ್ಟು ಚರ್ಚೆ ನಡೆಸಿರಬಹುದು. ಆದರೆ ಕಾದಂಬರಿ ಪರಂಪರೆಗೆ ಲೇಖಕಿಯರ ಮೌಲಿಕ ಕೊಡುಗೆ ಏನು? ಎಂಬುದರ ಬಗ್ಗೆ ಹೆಚ್ಚು ಪ್ರಸ್ತಾಪವಾದಂತಿಲ್ಲ. ಅಂಥ ಕೊಡುಗೆ ಇದೆಯೋ ಇಲ್ಲವೆ? ಇದ್ದರೆ

ಅದು ಯಾಕೆ ದಾಖಲಾಗಿಲ್ಲ? ಎಂಬ ಪ್ರಶ್ನೆಗಳಿಗೂ ನಾವು ಉತ್ತರ ಕಂಡು ಹಿಡಿಯಬೇಕಾಗಿದೆ.

ಈ ಶತಮಾನದ ಆರಂಭದಲ್ಲೇ ನಂಜನಗೂಡಿನ ತಿರುಮಲಾಂಬಾ ಕಾದಂಬರಿ ರಚಿಸಲು ಆರಂಭಿಸಿದ್ದರು. ಈಕೆ ಕನ್ನಡದ ಮೊದಲ ಲೇಖಕಿ. 1913 ರಲ್ಲಿ 'ಸುಶೀಲೆ' ಎಂಬ ಕಾದಂಬರಿಯನ್ನು ಇವರು ಪ್ರಕಟಿಸಿದರು. ಎಳೆತನದಲ್ಲೇ ಬಂದೊದಗಿದ ವೈಧವ್ಯದಿಂದ ಕೊರಗುತ್ತಾ ಕೂರದೆ, ಓದು ಬರವಣಿಗೆಯಲ್ಲಿ ಅರ್ಥ ಕಂಡುಕೊಂಡವರು ಈಕೆ. ಇವರ ಸತೀಹಿತೈಷಿಣೀ ಗ್ರಂಥಮಾಲೆಯ ಬಗ್ಗೆ 1917 ರಲ್ಲಿ ಮಾಸ್ತಿಯವರು ಬರೆಯುತ್ತಾ " ತಿರುಮಲಾಂಬಾ ಆಗಲೇ ಏಳು ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ನಾನಿನ್ನೂ ಒಂದು ಪುಸ್ತಕವನ್ನೂ ಪ್ರಕಟಿಸಿಲ್ಲ." ಎಂದಿದ್ದರು. ಆಗಿನ ವಿಧವೆಯರ ಬದುಕು, ಸಮಾಜದ ಲೋಪದೋಷಗಳು ತಿರುಮಲಾಂಬಾ ಕಾದಂಬರಿಗಳ ಮುಖ್ಯ ವಸ್ತುಗಳು. ತಮ್ಮ ಕಾದಂಬರಿಗಳ ವಸ್ತುವಿನ ಆಯ್ಕೆಯಲ್ಲಿ ಇವರು ವಾಸ್ತವಕ್ಕೆ ಸ್ಪಂದಿಸಿದರೂ ಬರವಣಿಗೆಯ ರೀತಿ ರಮ್ಯ ಮಾದರಿಯದು. ತಿರುಮಲಾಂಬಾ ಅವರ ಕಾಲದ ಜನಪ್ರಿಯ ಬರಹಗಾರ್ತಿಯಾಗಿದ್ದರು. [ಆಗ ಜನಪ್ರಿಯ ಪುರುಷ ಸಾಹಿತಿ ಯಾರೂ ಇರಲಿಲ್ಲ ಎಂಬುದನ್ನು ಗಮನಿಸಿ]

ಅನಂತರ ಬರೆಯಲಾರಂಭಿಸಿದ ಆರ್. ಕಲ್ಯಾಣಮ್ಮ ತಮ್ಮ "ನಿರ್ಭಾಗ್ಯ ವನಿತೆ" ಎಂಬ ಕಾದಂಬರಿಯ ಮುನ್ನುಡಿಯಲ್ಲಿ ಹೀಗೆ ಬರೆದಿದ್ದಾರೆ : "ಭಾರತೀಯ ವಿತಂತುಗಳ ಸ್ಥಿತಿ ಶೋಚನೀಯವಾಗಿದೆ. ತುಂಬಿದ ಮನೆಯಲ್ಲಿ ಅತ್ತರೆ ಆ ಮನೆ ಅಭಿವೃದ್ಧಿಯಾಗುವುದಿಲ್ಲವೆಂದು ಇದರಲ್ಲೂ ಆಕ್ಷೇಪಿಸುವರಾದ್ದರಿಂದ ತಾವಿರುವ ಮನೆಯಲ್ಲಿ ಅಳುವುದಕ್ಕೆ ಕೂಡ ಸ್ವಾತಂತ್ರವಿಲ್ಲದೆ ಪರಾಧೀನೆಯರಾಗಿದ್ದಾರೆ." ಅಳುವುದಕ್ಕೆ ಕೂಡ ಸ್ವಾತಂತ್ರ್ಯವಿಲ್ಲದೆ.... ಎಂಬ ಮಾತುಗಳಲ್ಲಿ ಆ ಕಾಲದ ವಿಧವೆಯರ ಘೋರ ಯಾತನೆ, ಅಸಹಾಯಕತೆ, ಸಮಾಜದ ಕ್ರೌರ್ಯ ಚಿತ್ರಿತವಾಗಿವೆ.

1952 ರ ಸುಮಾರಿಗೆ ತ್ರಿವೇಣಿ ಕೃತಿರಚನೆ ಆರಂಭಿಸಿದರು. ಹೊಸವಸ್ತು, ಹೊಸರೂಪ, ಚತುರ ಸಂಭಾಷಣೆ, ರಮ್ಯ ಸನ್ನಿವೇಶಗಳು ಇವು ತ್ರಿವೇಣಿ ವೈಶಿಷ್ಟ್ಯ. ಅಪಾರ ಓದುಗ ವರ್ಗವನ್ನು ಪಡೆದ ಹೆಮ್ಮೆ ಅವರದಾಗಿತ್ತು. 'ಬೆಕ್ಕಿನಕಣ್ಣು' 'ಬೆಳ್ಳಿ ಮೋಡ' 'ಹಣ್ಣೆಲೆ ಚಿಗುರಿದಾಗ' ಅವರ ಪ್ರಮುಖ ಕಾದಂಬರಿಗಳು. ಅವರ ಬಳಿಕ ಒಂದು ಪೀಳಿಗೆಯ ಲೇಖಕಿಯರು ತ್ರಿವೇಣಿ ಕೃತಿಗಳಿಂದ ಪ್ರಭಾವಿತರಾಗಿ ಅವರಂತೆಯೇ ಕೃತಿರಚನೆ ಮಾಡಲು ಯತ್ನಿಸಿದ್ದು ದಾಖಲಾಗಬೇಕಾದ ಅಂಶ.

ತ್ರಿವೇಣಿಯವರ ಬಳಿಕ ಹೊಸಗಾಳಿಯಾಗಿ ಬಂದವರು ಎಂ. ಕೆ. ಇಂದಿರಾ. ಪಾಶ್ಚಾತ್ಯ ಸಾಹಿತ್ಯದ ಸಂಪರ್ಕವಿಲ್ಲದ ಇವರು ಪ್ರಭಾವಗೊಂಡದ್ದು ಹಳಗನ್ನಡ ಕಾವ್ಯಗಳಿಂದ ಮತ್ತು ಬದುಕಿನಿಂದ. ಮಲೆನಾಡಿನ ಆಡುಭಾಷೆಯ ತನಿ, ಹಸಿ ಹಸಿ ತಾಜಾಪಾತ್ರಗಳು, ವಿಭಿನ್ನ ಸನ್ನಿವೇಶಗಳ ಸೃಷ್ಟಿಯಲ್ಲಿ ಇವರು ಎತ್ತಿದ ಕೈ. 'ತುಂಗ ಭದ್ರ' 'ಗೆಜ್ಜೆಪೂಜೆ' 'ಫಣಿಯಮ್ಮ' ಇವರ ಮುಖ್ಯಕೃತಿಗಳು. ಇತ್ತೀಚಿನ ದಿನಗಳಲ್ಲಿ ವಾಸ್ತವವಾದಿ ಪರಂಪರೆಯಲ್ಲಿ ಬಂದ ಕಾದಂಬರಿಗಳೆಂದರೆ ಎಚ್. ಎಸ್. ಪಾರ್ವತಿ ಯವರ 'ಜಬಾಲಾ' ಸರೋಜಾ ನಾರಾಯಣರಾವ್ ಅವರ 'ವಾನಪ್ರಸ್ಥ,' ಸಾರಾ ಅಬೂಬಕ್ಕರ್ ರ 'ಚಂದ್ರಗಿರಿ ತೀರದಲ್ಲಿ' ವೈದೇಹಿಯವರ 'ಅಸ್ಪೃಶ್ಯರು,' ವೀಣಾ ಶಾಂತೇಶ್ವರರ 'ಶೋಷಣೆ ಬಂಡಾಯ ಇತ್ಯಾದಿ' ಗೀತಾ ನಾಗಭೂಷಣರ 'ಹಸಿಮಾಂಸ ಮತ್ತು ಹದ್ದುಗಳು.'

ನಾನಿಲ್ಲಿ ನಮೂದಿಸಿರುವುದು ಗಂಭೀರ ಬರಹಗಾರ್ತಿಯರನ್ನು ಮಾತ್ರ. ಕನ್ನಡ ಕಾದಂಬರಿ ಪರಂಪರೆಗೆ ಈ 70 ವರ್ಷಗಳಲ್ಲಿ ಲೇಖಕಿಯರ ಮೌಲಿಕ ಕೊಡುಗೆ ಅಪಾರವಾಗಿದೆ. ಆದರೆ ಈ ಕೊಡುಗೆಯ ಬಗ್ಗೆ ಯಾವ ವಿಚಾರಸಂಕಿರಣ ಗಳಲ್ಲೂ ಪ್ರಸ್ತಾಪವಾಗದಿರುವುದು ಲೇಖಕಿಯರಿಗಾದ ಅನ್ಯಾಯವನ್ನು ಬೊಟ್ಟು ಮಾಡಿ ತೋರಿಸುತ್ತದೆ. Major writer ಆದ ತಿರುಮಲಾಂಬಾ, ತ್ರಿವೇಣಿ, ಇಂದಿರಾ ಬಗ್ಗೆ ಯಾರೂ ಮಾತಾಡಿಲ್ಲ. ಹೀಗಾಗಲು ಕಾರಣಗಳೇನು ? ಮೊದಲನೆಯದಾಗಿ ಲೇಖಕಿಯರ ಬಗ್ಗೆ ವಿಮರ್ಶಕರ ದಿವ್ಯ ನಿರ್ಲಕ್ಷ್ಯ. ಪುಸ್ತಕಗಳನ್ನು ಓದದೆ ಟೀಕಿಸ ಲೆತ್ನಿಸುವ ಪುರುಷರ ಅಹಂಕಾರ ನನ್ನನ್ನು ದಿಗ್ಭ್ರಮೆಗೊಳಿಸಿದೆ. ಎರಡನೆಯದು ಲೇಖಕಿಯರನ್ನು ಬೆಂಬಲಿಸುವ ಗುಂಪುಗಳಿಲ್ಲ; ಮಠಗಳಿಲ್ಲ. ಮೂರನೆಯದು ಅವರ ಪ್ರಮುಖ ಕೃತಿಗಳ ಬಗ್ಗೆ ಎಲ್ಲೂ ವಿಚಾರ ಸಂಕಿರಣಗಳು ನಡೆದಿಲ್ಲ. ಇದನ್ನು ಸರಿಪಡಿಸಬೇಕಾದರೆ ಏನು ಮಾಡಬಹುದು ? ಇತ್ತೀಚಿನ ಹತ್ತು ವರ್ಷಗಳಲ್ಲಿ ಯುರೋ ಪು ಮತ್ತು ಅಮೇರಿಕಗಳಲ್ಲಿ ಸ್ತ್ರೀವಾದಿ ವಿಮರ್ಶೆಯೊಂದು ರೂಪುಗೊಂಡಿದೆ. ಇದರ ಪ್ರಮುಖ ಕಾಳಜಿ, ಸ್ತ್ರೀಯರ ಕೃತಿಗಳನ್ನು ಹೊಸದೃಷ್ಟಿಕೋನದಿಂದ ವೀಕ್ಷಿಸುವುದು. ಫ್ರಾನ್ಸಿನ ಖ್ಯಾತ ಕಾದಂಬರಿಗಾರ್ತಿ ಸೈಮೋನ್ ದಬೋವಾ ಹೀಗೆ ಹೇಳಿದ್ದಾಳೆ; "ಸ್ತ್ರೀ ಸಂವೇದನೆ ಪುರುಷನದಕ್ಕಿಂತ ಭಿನ್ನ. ಆದ್ದರಿಂದ ಅವರ ಬರವಣಿಗೆ ಯಾವಾ ಗಲೂ ಭಿನ್ನವಾಗಿಯೇ ಇರುತ್ತದೆ." ಆದ್ದರಿಂದ ಲೇಖಕಿಯ ಕೃತಿಗಳನ್ನು ವಿಮರ್ಶಿ ಸುವಾಗ ಬೇರೆಯೇ ಮಾನದಂಡಗಳಿರಬೇಕಾಗುತ್ತದೆ ಎಂದು ಸ್ತ್ರೀವಾದಿ ವಿಮರ್ಶಕರ ಅಭಿಪ್ರಾಯ. ಅಂದರೆ ಗಂಭೀರ ಲೇಖಕಿಯರ ಕೃತಿಗಳನ್ನು ಪೂರ್ವಾಗ್ರಹಪೀಡಿತ ರಾಗದೆ ಮೌಲ್ಯಮಾಪನ ಮಾಡುವ ಹೊಸ ವಿಮರ್ಶಕರು ನಮಗೆ ಬೇಕಾಗಿದೆ. ಆಗ

ಮಾತ್ರ ಲೇಖಕಿಯರಿಗೆ ನ್ಯಾಯಸಿಗುವುದು ಸಾಧ್ಯ ಎನಿಸುತ್ತದೆ. ಇಲ್ಲಿರುವ ವಿಮರ್ಶಕರು ಮತ್ತು ವಿಚಾರವಂತರು ಈ ಪರ್ಯಾಯ ವಿಮರ್ಶಾ ಪದ್ಧತಿಯ ಬಗ್ಗೆ ಗಂಭೀರ ವಾಗಿ ಆಲೋಚಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಈ ಹಿನ್ನೆಲೆಯಲ್ಲಿ ನನ್ನ ಕೆಲವು ಕಾದಂಬರಿಗಳ ವಿಶ್ಲೇಷಣೆ ಮಾಡ ಬಯಸುತ್ತೇನೆ. ಈ ಕೃತಿಗಳ ವೈಚಾರಿಕ ಪ್ರೇರಣೆಗಳೇನು ? ಅವುಗಳಲ್ಲಿ ವ್ಯಕ್ತಿಜೀವನ ಮತ್ತು ಸಮಾಜ ಜೀವನ ಹ್ಯಾಗೆ ರೂಪುಗೊಂಡಿದೆ ? ವಸ್ತುವಿನ ವಿಕಾಸದ ಕ್ರಮ ಎಂತಿದೆ ? ಕಾದಂಬರಿಯು ವಸ್ತು ಆಕೃತಿಯನ್ನು ಹ್ಯಾಗೆ ರೂಪಿಸಿಕೊಂಡಿತು ? ನನ್ನ ಪ್ರಮುಖ ಕಾಳಜಿಗಳೇನು ? ಭಾಷೆಯನ್ನು ಯಾವ ರೀತಿಯಲ್ಲಿ ದುಡಿಸಿಕೊಂಡಿದ್ದೇನೆ ? ಇತ್ಯಾದಿ.

ನನ್ನ ಸೃಜನಾತ್ಮಕ ಕ್ರಿಯೆಯ ಮೂಲಸೆಲೆ ಎಲ್ಲಿಂದ ಆರಂಭವಾಯಿತು ? ಎಂಬುದನ್ನು ನಾನು ಮೊದಲು ಹೇಳಬೇಕು. ನಾನು ಹುಟ್ಟಿದ್ದು ಬಡನೇಕಾರರ ಕುಟುಂಬದಲ್ಲಿ. ನನ್ನ ತಾಯಿಯ ಕಡೆ ಕುಲಕಸುಬನ್ನು ನಡೆಸಿಕೊಂಡು ಬರುತ್ತಿದ್ದರು. ತಂದೆಯ ಕಡೆಯವರೆಲ್ಲಾ ಶೈಕ್ಷಣಿಕ ಕ್ಷೇತ್ರಕ್ಕಿಳಿದವರು. ಹೀಗಾಗಿ ಎರಡೂ ಕ್ಷೇತ್ರಗಳ ಪರಿಣಾಮ ನನ್ನ ಮೇಲಾಯಿತು. ಬಾಲ್ಯದಿಂದ ಸುತ್ತಲಿನದೆಲ್ಲವನ್ನೂ ಕುತೂಹಲದಿಂದ ವೀಕ್ಷಿಸುವುದು ನನ್ನ ಜಾಯಮಾನ. ಹಾಗೆಯೇ ಜನರ ಮಾತಿಗೂ ಕಿವಿಗೊಡುತ್ತಿದ್ದೆ. ನನ್ನ ಅಜ್ಜ ಅಜ್ಜಿಯರು ಹೇಳಿದ ಕತೆಗಳು, ನೆಂಟರಿಷ್ಟರ ಮಾತ್ರುಗಳಲ್ಲಿ ನುಸುಳಿದ ಘಟನೆಗಳು ನನ್ನ ಮೇಲೆ ಪರಿಣಾಮ ಬೀರಿದ್ದವು. ಗಳಗನಾಥ, ವೆಂಕಟಾಚಾರ್ಯ, ಬಿ. ಘ. ಕಾಳೆಯವರ ಪತ್ತೇದಾರಿ ಕಾದಂಬರಿಗಳನ್ನು ಓದಿದ್ದೆ. ಕಾರಂತ, ಪುಟ್ಟಪ್ಪನವರ ಕೃತಿಗಳನ್ನು ಓದಿ ಮೋಡಿಗೊಳಗಾಗಿದ್ದೆ. ಪ್ರಕಟವಾಗದಿದ್ದರೂ ಹದಿವಯಸ್ಸಿನಲ್ಲೇ ಕತೆಗಳನ್ನು ಗೀಚಲಾರಂಭಿಸಿದ್ದೆ. ಅದನ್ನು ಬಲ್ಲ ನೆಂಟರಿಷ್ಟರು, "ಪಾಪ ಬಡವರು. ಆದ್ರೆ ಹುಡುಗಿ ಬುದ್ಧಿವಂತೆ ಕತೆ ಗಿತೆ ಬರೀತಾಳೆ," ಅನ್ನುತ್ತಿದ್ದರು. ಆಗ ನನಗೆ ಅನಿಸುತ್ತಿತ್ತು. ಈ ಬಡತನದ ಅಪಮಾನ ಮತ್ತು ಹೀನಾಯವನ್ನು ನಾಶಮಾಡಲಿಕ್ಕೆ ಮತ್ತು ಇವರಿಂದ ಹೊಗಳಿಕೆ ಗಿಟ್ಟಿಸಿಕೊಳ್ಳಬೇಕಾದರೆ ನಾನು ಚೆನ್ನಾಗಿ ಕತೆ ಬರೀಬೇಕು ಅಂತ. ಈ ಆಸೆಗಿಂತ ಒಳಗಿನ ಒತ್ತಡವೇ ಹೆಚ್ಚಾಗಿತ್ತು. ಕಂಡ ಘಟನೆಗಳು ಕತೆಗಳಾಗಿ ನನ್ನ ಮನಸ್ಸಿನಲ್ಲಿ ರೂಪುಗೊಳ್ಳುತ್ತಿದ್ದವು. ಅವನ್ನು ಬರೆಯದಿದ್ದರೆ ಬದುಕಲು ಸಾಧ್ಯವೇ ಇಲ್ಲ ಅನಿಸುತ್ತಿತ್ತು.

"ಸಂಕೋಲೆಯೊಳಗಿಂದ" ಕಾದಂಬರಿ ಬರೆದಾಗ ನನಗೆ 19 ವರ್ಷ ವಯಸ್ಸು. ನಾನಾಗ ಮೆಡಿಕಲ್ ಕಾಲೇಜಿನ ವಿದ್ಯಾರ್ಥಿನಿ. ಅಷ್ಟು ಹೊತ್ತಿಗೆ ನಾನು ಒಂದೂ

ಇಂಗ್ಲೀಷ್ ಕಾದಂಬರಿ ಓದಿರಲಿಲ್ಲ. ಹಳಗನ್ನಡ ಸಾಹಿತ್ಯದ ಗಂಧ ಕೂಡ ನನಗಿರಲಿಲ್ಲ. ಆದರೆ 'ಸೀಮಿತ ಅನುಭವಕ್ಕೇ ನಾನು ತೀವ್ರವಾಗಿ ಸ್ಪಂದಿಸಿದೆನೆಂದು ಕಾಣುತ್ತದೆ.

ಆಗ ನಮ್ಮ ತಂದೆ ಮೈಸೂರಿನ ಕಿವುಡ ಮೂಗರ ಶಾಲೆಯ ಸೂಪರಿಂಟೆಂಡೆಂಟ್ ಆಗಿದ್ದರು. ಅಲ್ಲಿದ್ದ ನಮ್ಮ ಮನೆಯಿಂದ ಸುಮಾರು ಅರ್ಧ ಮೈಲಿ ದೂರವಿದ್ದ ಮೆಡಿಕಲ್ ಕಾಲೇಜಿಗೆ ದಿನವೂ ನಡೆದು ಹೋಗುತ್ತಿದ್ದೆ. ಆಗ ಈ ಕಥಾ ವಸ್ತು ಸ್ಫುರಿಸಿತು ಕಾಲೇಜಿಗೆ ಹೋಗುತ್ತಾ ಬರುತ್ತಾ ಈ ಕತೆಯ ಬಗ್ಗೆಯೇ ಚಿಂತಿಸುತ್ತಿದ್ದೆ. ದಾರಿಯಲ್ಲಿ ದಿನವೂ ಎತ್ತಿನ ಬಂಡಿಗಳ ಸಾಲು ಸಿಗುತ್ತಿತ್ತು. ಬೆಳಗ್ಗೆ ಅವು ಮೈಸೂರು ಪಟ್ಟಣಕ್ಕೆ ಅಭಿಮುಖವಾಗಿ ಹೋದರೆ ಸಂಜೆ ಹಿಂತಿರುಗಿ ಬರುತ್ತಿದ್ದುವು. ಅವುಗಳಲ್ಲಿ ಕುಳಿತ ಜನ ಹಾಡುವುದನ್ನು ಕೇಳಿದ್ದೆ. ಒಮ್ಮೊಮ್ಮೆ ಅಳುವುದನ್ನೂ ಕೇಳಿದ್ದೆ. ಈ ಬದುಕಿನ ಚಿತ್ರ ನನ್ನನ್ನು ತೀವ್ರವಾಗಿ ತಟ್ಟಿತ್ತು. ಹಾಗೆಯೇ ಸೈಕಲ್ ಸವಾರಿ ಮಾಡುತ್ತಿದ್ದ ಗಂಡಸರನ್ನು ಕಂಡಾಗ ನನಗೂ ಸೈಕಲ್ ಸವಾರಿ ಮಾಡುವ ಆಸೆಯಾಗುತ್ತಿತ್ತು. ಆದರೆ ಅದು ಸಾಧ್ಯವಿರಲಿಲ್ಲ ಯಾಕೆಂದರೆ ನಾನು ಹುಡುಗಿ. ಅಲ್ಲದೆ ಮನೆಯಲ್ಲಿ ಕಡು ಬಡತನ. ಮುಂದೆ ನನ್ನ ಕಾದಂಬರಿಯಲ್ಲಿ ನಂದಾ ಎಂಬ ಮೆಡಿಕಲ್ ವಿದ್ಯಾರ್ಥಿನಿಯ ಪಾತ್ರ ಸೃಷ್ಟಿಸಿದಾಗ ಅವಳು ಸೈಕಲ್ ಮೇಲೆ ಓಡಾಡುವ ದಿಟ್ಟೆಯ ಹಾಗೆ ಚಿತ್ರಿಸಿದೆ. ಅಂದರೆ ಹೇಳಲಾಗದ ಮತ್ತು ಅನುಭವಿಸಲಾಗದ ಎಷ್ಟೋ ಅನಿಸಿಕೆಗಳು ಕಾದಂಬರಿಯಲ್ಲಿ ಜೀವ ತಳೆದುವು.

ಮೆಡಿಕಲ್ ಕಾಲೇಜಿನ ವಿದ್ಯಾರ್ಥಿನಿಯಾಗಿದ್ದ ನಾನು ಪ್ರತಿಯೊಂದನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದೆ. ಡಿಸೆಕ್ಷನ್ ಥಿಯೇಟರಿನಲ್ಲಿ ಹೆಣ ಕುಯ್ಯುವಾಗ ಮನುಷ್ಯನ ದೇಹದ ಅಂಗಾಂಗ, ಮಾಂಸಖಂಡ, ನರನಾಡಿಗಳ ಅಭ್ಯಾಸದ ಜೊತೆಗೆ ಅವನ ಬದುಕಿನ ಬಗ್ಗೆಯೂ ಯೋಚಿಸುತ್ತಿದ್ದೆ. ಉದಾಹರಣೆಗೆ ನಾವು ಕುಯ್ಯುತ್ತಿದ್ದ ಹೆಣ, ಬದುಕಿದ್ದಾಗ ಏನಾಗಿರಬಹುದು? ಅವನು ಆತ್ಮಹತ್ಯೆ ಮಾಡಿಕೊಳ್ಳಲು ಅಥವಾ ಸಾಯಲು ಕಾರಣಗಳೇನು? ಎಂದೆಲ್ಲಾ ವಿಚಾರ ಮಾಡುತ್ತಿದ್ದೆ. ಹಾಗೆಯೇ ಪೋಸ್ಟ್‌ಮಾರ್ಟಂಗೆ ಅದೇ ತಾನೇ ಅಪಘಾತದಲ್ಲಿ ಮೃತ್ಯುವಪ್ಪಿದ ಶರೀರ ಬಂದಾಗ, ಟೇಬಲಿನ ಮೇಲೆ ಚೆಲ್ಲಿದ ರಕ್ತದ ಮಡುವಿನಲ್ಲೂ ನನಗೆ ಆ ವ್ಯಕ್ತಿಯ ಬದುಕಿನ ಬಗೆಯೇ ಚಿಂತೆಯಾಗುತ್ತಿತ್ತು. ಕಾಲೇಜಿನ ಕಾರಿಡಾರುಗಳಲ್ಲಿ ಓಡಾಡುವಾಗ, ಪೆಥಾಲಜಿಯಲ್ಲಿ ಮೈಕ್ರೋಸ್ಕೋಪ್‌ನಡಿ slide ಇಟ್ಟು ಪರೀಕ್ಷಿಸುವಾಗ ವಾಸ್ತವದ ಜೊತೆಗೆ ಕಲ್ಪನೆಯೂ ಕೂಡಿಕೊಳ್ಳುತ್ತಿತ್ತು.

ಇನ್ನೊಂದು ವಿಷಯ ನೆನಪಾಗಿದೆ. ನನಗೆ ಮೆಡಿಕಲ್ ಕಾಲೇಜಿನಲ್ಲಿ ಸೀಟು ಸಿಕ್ಕಿದಾಗ ನನ್ನ ತಂದೆ "ಐದು ವರ್ಷ ನಿನ್ನ ಓದಿಸೋಕಾಗಲ್ಲ. ಕಾಲೇಜಿಗೆ ಸೇರಬೇಡ," ಎಂದು ಗಲಾಟೆ ಮಾಡಿದ್ದರು. ಮನೆಯಲ್ಲಿ ಅಷ್ಟೊಂದು ಬಡತನವಿತ್ತು. ನಾನು ಹುಡುಗಿಯಾದ್ದರಿಂದ ಮನೆಯಲ್ಲಿ ತಾರತಮ್ಯ ಕೂಡ ಇತ್ತು. ಬಡತನ ಮತ್ತು ಶೋಷಣೆ ಎರಡೂ ನನ್ನನ್ನು ಆ ವಯಸ್ಸಿನಲ್ಲಿ ಬಲವಾಗಿ ಕಾಡಿದ್ದುವು. ಈ ಎಲ್ಲ ಅನುಭವಗಳೂ ಕಾದಂಬರಿಯಲ್ಲಿ ನಂದಾಳಂತಹ ಪಾತ್ರವನ್ನು ಸೃಷ್ಟಿಸಲು ಪ್ರೇರಣೆಗಳು.

ಕಾದಂಬರಿಯ ನಾಯಕಿ ವಿಜಯಾ ಗಂಡನಿಂದ ಪಡೆದ ಸಿಫಿಲಿಸ್‌ಗೆ ಈಡಾಗಿ ಸಾಯುತ್ತಾಳೆ. ಇಂಥ ಎಷ್ಟೋ ರೋಗಿಗಳನ್ನು ನಾನು ಆಸ್ಪತ್ರೆಯಲ್ಲಿ ಕಂಡಿದ್ದೆ. ಅವರ ನೋವು ನರಳಾಟಗಳನ್ನು ಗಮನಿಸಿದ್ದೆ. ಬದುಕಬೇಕು, ಚೆನ್ನಾಗಿ ಬಾಳಬೇಕು ಎಂಬ ಅವರ ಆಸೆಯನ್ನು ಗುರುತಿಸಿದ್ದೆ. ಆದರೆ ಪುರುಷಪ್ರಧಾನ ಸಮಾಜದಲ್ಲಿ ಹೆಣ್ಣು ಹೇಗೆ ಮೌನವಾಗಿಯೇ ಸಾಯಬೇಕಾಗುತ್ತದೆ ಎಂಬುದನ್ನು ತೋರಿಸಬೇಕಾಗಿತ್ತು ನನಗೆ. ವಿಜಯಾ ಇಂಥ ಅನಿಸಿಕೆಗಳನ್ನು ಪ್ರತಿನಿಧಿಸುತ್ತಾಳೆ.

ಆ ಸಮಯದಲ್ಲಿ ನಾನು ಅನೇಕ ನರ್ಸ್‌ಗಳನ್ನು ಹತ್ತಿರದಿಂದ ಬಲ್ಲವಳಾಗಿದ್ದೆ. ಅವರಲ್ಲಿ ಒಳ್ಳೆಯವರಿದ್ದರು, ಕೆಟ್ಟವರಿದ್ದರು, ಮೋಜುಗಾರರಿದ್ದರು– ಬೇರೆಲ್ಲ ವೃತ್ತಿಗಳಲ್ಲಿರುವಂತೆ. ಆಸ್ಪತ್ರೆಯ ದುಗುಡ ದುಮ್ಮಾನಗಳನ್ನು ಹತ್ತಿರದಿಂದ ಕಂಡಿದ್ದೆ. ಆಗ ಕಂಡ ಡಾಕ್ಟರೊಬ್ಬರ ಕ್ರೌರ್ಯ ಈಗಲೂ ಮರೆಯಲು ಸಾಧ್ಯವಾಗುತ್ತಿಲ್ಲ.

ಹೆರಿಗೆಗೆ ಬಂದ ಬಡ ಹೆಂಗಸೊಬ್ಬಳು ಕಾಟಿನ ಮೇಲೊರಗಿ ಚೀರುತ್ತಿದ್ದಾಳೆ. ನೋವು ತಡೆಯಲಾರದೆ ಆಕೆ ಡಾಕ್ಟರರ ಕೈಹಿಡಿದಾಗ "ಬೆವರಿನ ಕೈಲಿ ಯಾಕೆ ಹಿಡೀತಿ ?" ಎಂದು ಗದರಿಸಿದರು. ರಕ್ತಸ್ರಾವವಾಗತೊಡಗಿತು. ಆದರೆ ಲೇಡಿ ಡಾಕ್ಟರು ಏನನ್ನೋ ಹೇಳುತ್ತಾ ನಗುತ್ತಿದ್ದರು. ಅಷ್ಟರಲ್ಲಿ ಶ್ರೀಮಂತ ಶೆಟ್ಟರು ಹೆಂಡತೀನ ಕರ್‍ಕೊಂಡು ಬಂದಿದಾರೆ ಎಂಬ ಸುದ್ದಿ ಬಂತು. ಡಾಕ್ಟರು ಈ ಬಡ ಹೆಂಗಸನ್ನು ಬಿಟ್ಟು ಶೆಟ್ಟರಲ್ಲಿಗೆ ಹೋದರು. ರಕ್ತ ಭುಗ್ ಭುಗ್ಗೆಂದು ಚಿಮ್ಮಿ ಬಡ ಹೆಂಗಸು ಹೇಳುಕೇಳುವವರಿಲ್ಲದೆ ಸತ್ತಳು. ಅವಳು ಸತ್ತಮೇಲೆ ಡಾಕ್ಟರು ಬಂದವರು "ಮಗೂನ ಹೊರಗೆ ತೆಗೆದ್ಬಿಡೋಣ. ಇಲ್ದಿದ್ರೆ ಸುಮ್ನೇ ನಮ್ಮೇಲೆ ಅಪವಾದಬರುತ್ತೆ" ಎಂದರು.

ಆಸ್ಪತ್ರೆಯಲ್ಲಿ ನಾನು ಕಂಡ ಇಂಥ ಎಷ್ಟೋ ಘಟನೆಗಳು ಕಾದಂಬರಿ

ರಚಿಸುವಾಗ ವಾಸ್ತವ ಆಧಾರ ನೀಡಿದವು. ಪಲ್ಸ್, ಟೆಂಪರೇಚರ್, ಡೆಟಾಲ್, ಆಪರೇಷನ್, ಆಂಪ್ಯುಟೇಷನ್, ಸಲೈನ್ ಡ್ರಿಪ್, ಬ್ಲಡ್‌ಟ್ರಾನ್ಸ್‌ಫ್ಯೂಷನ್, ಔಷಧಿ ಇಂಜೆಕ್ಷನ್‌ಗಳ ಗೋಜಲುಗಳ ಮಧ್ಯೆಯೂ ಮಾನವೀಯ ಹೃದಯ ಸ್ಪಂದಿಸುವುದು ನನ್ನ ಪ್ರಮುಖ ಕಾಳಜಿಯಾಗಿತ್ತು.

ಹೀಗೆ ರೋಗಿ ವಿಜಯಾ, ಮೆಡಿಕಲ್ ವಿದ್ಯಾರ್ಥಿನಿ ನಂದಾ ಮತ್ತು ನರ್ಸ್ ನೀಲಾ ಈ ಮೂರು ಮುಖ್ಯ ಪಾತ್ರಗಳನ್ನಿರಿಸಿಕೊಂಡು ನಾನು 'ಸಂಕೋಲೆಯೊಳಗಿಂದ' ಕಾದಂಬರಿ ರಚಿಸಿದೆ. ಈ ಕಾದಂಬರಿಯ ಕೇಂದ್ರವಸ್ತು ಸ್ತ್ರೀ ಶೋಷಣೆ. ಶೋಷಣೆಯ ವಿವಿಧ ಸ್ತರಗಳು ಮತ್ತು ಅದಕ್ಕಿದಿರು ಹೋರಾಟ ಕಟ್ಟುವ ಆಶಯ ಒಂದಕ್ಕೊಂದು ಪೂರಕವಾಗಿ ಬರುತ್ತವೆ. ಕಾದಂಬರಿಯ ಆಕೃತಿ ಕೂಡ ಆ ಕಾಲಕ್ಕೆ ಹೊಸತಾಗಿತ್ತು. ಪ್ರಥಮ ಪುರುಷದಲ್ಲಿ ವಿಜಯಾ ಆರಂಭಿಸುವ ಕತೆಯನ್ನು ನಂದಾ ಮುಂದುವರಿಸುತ್ತಾಳೆ. ಮುಕ್ತಾಯ ನೀಲಾಳಿಂದ ಈ ತಂತ್ರ, ಕತೆಯ ವಿಕಾಸಕ್ಕೆ ನೆರವಾಗುವುದಲ್ಲದೆ ಧ್ವನಿ ದಟ್ಟವಾಗಲೂ ಸಹಾಯ ನೀಡಿದೆ.

32 ವರ್ಷಗಳ ಹಿಂದೆ ಅಸಮಾನತೆ, ಅನ್ಯಾಯ, ಶೋಷಣೆಗಳ ವಿರುದ್ಧ ದನಿಯೆತ್ತಿ ನಾನು ಕಾದಂಬರಿ ಬರೆದಿದ್ದೆ. ಈಗಲೂ ಆ ಬಂಡಾಯ ಮನೋವೃತ್ತಿ ನನ್ನಲ್ಲಿದೆ. ಅಷ್ಟು ಸಣ್ಣ ವಯಸ್ಸಿನಲ್ಲಿ ಇಂಥ ಕಾದಂಬರಿ ಹ್ಯಾಗೆ ಬರೆದೆನೆಂಬ ವಿಸ್ಮಯ ನನಗೀಗಲೂ ಇದೆ. "ಸಂಕೋಲೆಯೊಳಗಿಂದ ಮೌಲಿಕ ದೃಷ್ಟಿಯಿಂದ ಒಳ್ಳೆಯ ಕಾದಂಬರಿ" ಎಂದು ಖ್ಯಾತ ವಿಮರ್ಶಕ ಡಿ. ಆರ್. ನಾಗರಾಜ ಹೇಳಿದ್ದನ್ನು ನಾನು ಮರೆಯಲಾರೆ.

ಮೆಡಿಕಲ್ ಕಾಲೇಜಿನ ಓದು ವೈಜ್ಞಾನಿಕ ಅಭ್ಯಾಸದ ಹಿನ್ನೆಲೆ ಒದಗಿಸಿದ್ದರಿಂದ ಮುಂದೆ ಯಾವಾಗಲೂ ಆ ದೃಷ್ಟಿಕೋನ ನನ್ನ ಚಿಂತನ ವಿಧಾನವನ್ನು ರೂಪಿಸಿತು.

(ಮುಂದುವರಿಯುವದು)

ಸಂಪಾದಕನ ಟಿಪ್ಪಣಿಗಳು

ಇತ್ತೀಚೆಗೆ ನನ್ನ ಮನೆಗೆ ಒಬ್ಬ ಅಪರೂಪದ ಅತಿಥಿ ಬಂದು, ನನ್ನ ಕಣ್ಣುಗಳು ತೇವಗೊಳ್ಳುವಂತಹ, ಅತ್ಯಂತ ಸಂತೋಷದ ಘಟನೆಯನ್ನು ಹೇಳಿದರು. ಪುಣೆಯ ಸಮೀಪದಲ್ಲಿನ ರಾಣಿಗಜ ಎನ್ನುವುದೇ ಈ ಘಟನೆಯ ಕೇಂದ್ರಸ್ಥಳ. ರಾಣಿಗಜಹಳ್ಳಿ ಸುಮಾರು ಏಳುನೂರು ಮನೆಗಳ ಹಳ್ಳಿಯಂತೆ. ಸುಮಾರು ಇಪ್ಪತ್ತು ವರ್ಷಗಳ ಹಿಂದೆ ಈ ಹಳ್ಳಿಯ ನಾಲ್ಕು ನೂರರಷ್ಟು ಕುಟುಂಬಗಳು ಕಳ್ಳಭಟ್ಟಿ ಕೆಲಸ ಮಾಡಿಕೊಂಡು ಜೀವಿಸುತ್ತಿದ್ದವಂತೆ. ಆಗೊಬ್ಬ ಅಲ್ಲಿಗೆ ಬಂದು ಆ ಹಳ್ಳಿಯವನಾದ. ಆ ಜನರೊಂದಿಗೆ ಬೆರೆತು–ಬಂಧುವಾಗಿ–ಇಡೀ ಆ ಹಳ್ಳಿಯ ಪರಿವರ್ತನೆಯ ಹರಿಕಾರ ಆದನಂತೆ. ಆ ವ್ಯಕ್ತಿಯ ಬಗೆಗೆ ನನಗೆ ದೊರೆತ ಚಿತ್ರದ ಮುಂದೆ ಅವನ ಹೆಸರು ಗೌಣವಾಗಿ ಕಂಡಿತೋ ಏನೋ–ನನಗೆ ಆತನ ಹೆಸರು ಮರವೆಯಾಗಿದೆ.

ಸಹ್ಯಾದ್ರಿಯ ಕಣಿವೆಯೊಳಗಿನ ಆ ಹಳ್ಳಿಯ ಜನರನ್ನೆಲ್ಲ ಸಂಘಟಿಸಿ ಬೆಟ್ಟದ ಓರೆಗಳನ್ನು ಕೊರೆದು ಕಾಲುವೆ ತೋಡಿ ಮಳೆಯ ನೀರನ್ನು ದೊಡ್ಡ ದೊಡ್ಡ ಆರುಬಾವಿಗಳಲ್ಲಿ ಸಂಗ್ರಹಿಸಿ ಅವರ ಭೂಮಿಯ ಸ್ವಲ್ಪ ಭಾಗಕ್ಕೆ ನೀರಾವರಿಯ ಏರ್ಪಾಡು ಆಯಿತು. ಒಣಗಿ ಕಂದಾಗಿರುತ್ತಿದ್ದ ಭೂಮಿ ಹಸಿರಾಗತೊಡಗಿದಂತೆ ರಾಣಿಗಜ ಹಳ್ಳಿಯ ಜನರ ಕಣ್ಣಿಗೆ ಹೊಸ ಸಾಧ್ಯತೆಗಳ ದೃಷ್ಟಿ ಗೋಚರವಾಗ ತೊಡಗಿತು. ಇಂದು ಬ್ಯಾಂಕ್ ಆಫ್ ಮಹಾರಾಷ್ಟ್ರದವರಿಂದ ನಲವತ್ತು ಲಕ್ಷಗಳಷ್ಟು ಸಾಲಪಡೆದುಕೊಂಡು ಇನ್ನೊಂದು ವ್ಯಾಪ್ತವಾದ ಸಾಮೂಹಿಕ ನೀರಾವರಿ ಯೋಜನೆಯನ್ನು ರೂಪಿಸಿಕೊಳ್ಳುವ ಹಂತದಲ್ಲಿದ್ದಾರೆ. ಮನೆಗೊಬ್ಬರಂತೆ ಶ್ರಮದಾನ ನೀಡಿ ನೀರಾವರಿ ಕಾಲುವೆಗಳನ್ನು ತೋಡುತ್ತಿದ್ದಾರೆ. ಈ ನೀರಾವರಿಯಿಂದ ಆಹಾರಧಾನ್ಯಗಳ ಜೊತೆಗೆ ಹತ್ತಿ, ಕಬ್ಬು ಮುಂತಾದ ವಾಣಿಜ್ಯ ಬೆಳೆಗಳನ್ನು ಬೆಳೆದು ಎರಡು ವ ಮೂರು ವರ್ಷಗಳಲ್ಲಿಯೇ ಈ ನಲವತ್ತು ಲಕ್ಷಗಳನ್ನು ಹಿಂದಿರುಗಿಸುವ ಆತ್ಮ ವಿಶ್ವಾಸವನ್ನು ರಾಣಿಗಜನ ಜನ ಬೆಳೆಸಿಕೊಂಡಿದ್ದಾರೆ. ಈ ಹೊಸ ಯೋಜನೆಯಿಂದ ಇನ್ನು

ಮುಂದೆ ಪ್ರತಿ ಎಕರೆಗೆ ಆದಾಯವು ಮೂರು ಸಾವಿರ ರೂಪಾಯಿಗಳಷ್ಟು ಹೆಚ್ಚಾಗುವ ಅಂದಾಜಿದೆ.

ಈ ಊರಲ್ಲಿ ಸಾರ್ವಜನಿಕ ಶೌಚಾಲಯಗಳು–ಸಾರ್ವಜನಿಕ ಸ್ನಾನಗೃಹಗಳಷ್ಟೇ ಅಲ್ಲ–ಸಾರ್ವಜನಿಕ ಟೆಲಿವಿಜನ್ ಸೆಟ್ಟುಗಳನ್ನೂ ಏರ್ಪಡಿಸಿದ್ದಾರೆ. ಟೆಲಿವಿಜನ್ ಉಪಯೋಗಿಸುವುದನ್ನು ತಿಳಿದ ಯಾರು ಬೇಕಾದವರೂ ಅವುಗಳನ್ನು ಉಪಯೋಗಿಸಬಹುದಂತೆ. ಈ ಎಲ್ಲ ಬದಲಾವಣೆಗಳ ಕೇಂದ್ರವಾದ ವ್ಯಕ್ತಿಯು ಎಲ್ಲರೊಂದಿಗೂ ಬೆರೆಯುತ್ತ, ಸಾರ್ವಜನಿಕ ಭಜನಾಮಂದಿರವೊಂದರಲ್ಲಿ ಬೀಡು ಬಿಟ್ಟಿರುತ್ತಾನಂತೆ. ಇದೆಲ್ಲಕ್ಕಿಂತ ನನಗೆ ಅತ್ಯಂತ ಮುದ ನೀಡಿದ ವಿಷಯವೆಂದರೆ –ಹಾಲಂಡ್(?) ದೇಶದ ಸೇವಾಸಂಸ್ಥೆಯೊಂದು ಈ ಊರಿನ ಬೆಳವಣಿಗೆಯನ್ನು ಕಂಡು, ಆಸಕ್ತಿ ವಹಿಸಿ, ಸಹಾಯಧನ ನೀಡಲು ಮುಂದೆ ಬಂದರೆ ಆ ಊರಿನ ಜನರೆಲ್ಲ ಅದನ್ನು ತಿರಸ್ಕರಿಸಿದರಂತೆ! ಜನಸಾಮಾನ್ಯರಲ್ಲಿ 'ನಮಗೆ ತಿರುಪೆ ಬೇಡ' ಎನ್ನುವ ಆತ್ಮ ಪ್ರತ್ಯಯವನ್ನು ಬೆಳೆಸಿದ ಆ ವ್ಯಕ್ತಿಯ ಸಾಧನೆಯ ಮುಂದೆ ಉಳಿದೆಲ್ಲ ಬದಲಾವಣೆಗಳೂ ನನಗೆ ಅತ್ಯಲ್ಪವೆಂದು ತೋರುತ್ತವೆ. ಕೆಲವು ವರ್ಷಗಳಷ್ಟು ಹಿಂದೆ ನನ್ನ ಕಮ್ಯುನಿಷ್ಟ ಗೆಳೆಯನೊಬ್ಬ 'Charitable institutions are a curse on the people' ಎಂದಾಗ ನನಗೆ ಅದನ್ನು ಒಪ್ಪುವದು ಕಷ್ಟವೆನಿಸಿತ್ತು. ಜನಸಂಖ್ಯೆಯ ಹೆಚ್ಚಿನ ಭಾಗ ಬಡವರಿಂದ ತುಂಬಿರುವ ನಮ್ಮ ಸಾಮಾಜಿಕ ಸಂದರ್ಭದಲ್ಲಿ ದಾನಸ್ವೀಕರಿಸುವ ಸೇವಾಸಂಸ್ಥೆಗಳ ಕೆಲಸ ತುಂಬ ಮುಖ್ಯವೆಂದು ವಾದಿಸಿದ್ದೆ. ಅದಕ್ಕವನು–'ನಿಮಗೆ ಯಾಕೋ ಅರ್ಥವಾಗುತ್ತಿಲ್ಲ' ಎಂದು ಸುಮ್ಮನಾಗಿದ್ದ.

ನನಗೆ ರಾಣಿಗಜದ ವಿಷಯ ತಿಳಿದಾಗ ನನ್ನ ಕಮ್ಯುನಿಷ್ಟ್ ಗೆಳೆಯನ ಮಾತಿನ ಹಿಂದಿನ ತತ್ವ ನಿಧಾನವಾಗಿ ಗೋಚರವಾಗತೊಡಗಿತು. ದೇಣಿಗೆ–ದಾನಗಳನ್ನು ಸ್ವೀಕರಿಸುತ್ತ ರಾಣಿಗಜದ ಪ್ರಗತಿ ಸಾಧಿಸುತ್ತೇನೆಂದು ಆ ವ್ಯಕ್ತಿ ಹೊರಟಿದ್ದರೆ ರಾಣಿಗಜದ ಸ್ವಾವಲಂಬನದ-ಸ್ವಾತಂತ್ರ್ಯದ ಇಂದಿನ ಪರಿಸ್ಥಿತಿ ಸಾಧ್ಯವಾಗಿರುತ್ತಿರಲಿಲ್ಲ. ಯಾಕೆಂದರೆ ದೇಣಿಗೆ- ದಾನ ಸಹಾಯಗಳು ಜನಗಳಲ್ಲಿನ ಆತ್ಮಾಭಿಮಾನವನ್ನು ಕೊಂದುಹಾಕುತ್ತವೆ. ನಮ್ಮ ಕೆಲಸಕ್ಕೆ ಪ್ರತಿಫಲವಲ್ಲದ, ಪುಕ್ಕಟೆಯಾಗಿ ಬಂದ ಹಣ ನಮ್ಮನ್ನು ಕೊಳೆಸುತ್ತದೆ. ಅದು ನಮ್ಮನ್ನು ಆಲಸಿಗಳನ್ನಾಗಿಸುತ್ತದೆ, ಪರಾವಲಂಬಿಗಳನ್ನಾಗಿಸುತ್ತದೆ. ಆತ್ಮಾಭಿಮಾನ ಕಳೆದುಕೊಂಡ ನಾವು ಕ್ರಮೇಣ ಗುಲಾಮರಾಗುತ್ತ ತಲೆಹಿಡುಕರಾಗುತ್ತ ಬರುತ್ತೇವೆ. ಹೀಗೆ ಪುಕ್ಕಟೆದಾನದಿಂದ ಸಾಧಿಸುವ ಪ್ರಗತಿ ಮೇಲ್ಪದರನ್ನು ಮಾತ್ರವಾಗಿ ಜನರಲ್ಲಿ ಮೂಲಭೂತ ಬದಲಾ

ವಣೆಯನ್ನು ಹುಟ್ಟಿಹಾಕಿರುವುದಿಲ್ಲ. ಇಂಥ ಪ್ರಗತಿ ಸಾಧಿಸಿಕೊಂಡ ಭಾಗದ ಜನರು ಕಳ್ಳಭಟ್ಟಿಯಿಂದ ಜೀವನ ಸಾಗಿಸುವ ಜನರಿಗಿಂತ ಯಾವ ವಿಧದಲ್ಲಿಯೂ ಭಿನ್ನರಲ್ಲ. ಸಾರ್ವಜನಿಕ ಸೇವೆಯ ಕೈಂಕರ್ಯತೊಡುವ ವ್ಯಕ್ತಿಗಳಿಗೆ ರಾಣಿಗಜದ 'ಬಾಬಾ' (ನನಗೆ ಹಾಗೆಂದು ಕರೆಯಬೇಕೆನ್ನಿಸಿದೆ) ಒಬ್ಬ ಆದರ್ಶವ್ಯಕ್ತಿ. ಇವನು ಸಾಮಾಜಿಕ ಪರಿವರ್ತನೆಯ ನಿಜವಾದ ಮಾರ್ಗ ತಿಳಿದವನಾಗಿದ್ದಾನೆ. ಜನರ ಆರ್ಥಿಕ-ಸಾಮಾಜಿಕ ಜೀವನದಲ್ಲಿ ಸ್ವಾವಲಂಬನೆ ಸಾಧಿಸುವತ್ತ ಮೂಲಭೂತ ಬದಲಾವಣೆಯನ್ನು ಹುಟ್ಟಿಹಾಕುವ ಈ ವ್ಯಕ್ತಿಯ ಸೇವೆ ಸಾರ್ಥಕವಾದದ್ದು. ಬಾಗಿ ಸೆಟೆಯುವುದನ್ನು ತಲೆ ಎತ್ತಿ ನಿರ್ಭಯದ, ಸ್ವಾತಂತ್ರ್ಯದ, ಬದುಕು ಬಾಳುವುದನ್ನು, ಆತ್ಮಾಭಿಮಾನದ ಬೆಚ್ಚನೆಯ ಕಿಚ್ಚನ್ನು ಎದೆಯಲ್ಲಿ ಮೂಡಿಸುವುದನ್ನು ಮಾಡುವ ವ್ಯಕ್ತಿ ನಿಜವಾದ ಸಮಾಜಸುಧಾರಕನಾಗಬಲ್ಲ.

ಗಾಂಧೀಜಿಯವರು ಇದನ್ನು ತುಂಬ ಚೆನ್ನಾಗಿ ತಿಳಿದುಕೊಂಡಿದ್ದರು. ಚರಕದ ಬಗ್ಗೆ ಹೇಳುವಾಗ, ಮೂಲೋದ್ಯೋಗ ಶಿಕ್ಷಣದ ಮಹತ್ವ ವಿವರಿಸುವಾಗ, 'ಹಿಂದ್ ಸ್ವರಾಜ್'ನಲ್ಲಿ ಭಾರತದ ಆರ್ಥಿಕ ಬೆಳವಣಿಗೆ ಕುರಿತು ತಮ್ಮ ಒಳನೋಟ ನೀಡುವಾಗ ಬಾಪೂಜಿಯವರು ಸಾಮಾಜಿಕ ಸುಧಾರಣೆಯ ಮೂಲಭೂತ ಗ್ರಹಿಕೆಯನ್ನು ತಿಳಿಸಿಕೊಡುತ್ತಾರೆ. ಆದರೆ ಗಾಂಧೀಜಿಯವರ ಅತ್ಯಂತ ನಿಕಟವರ್ತಿಯಾಗಿದ್ದ ನೆಹರೂರವರು, ಬಡಭಾರತೀಯರಿಗೆ ಆತ್ಮವಿಶ್ವಾಸದ ಬದುಕನ್ನು ನೀಡಬಹುದಾಗಿದ್ದ ಗಾಂಧೀಮಾರ್ಗವನ್ನು ಬಿಟ್ಟು ಹೊರದೇಶಗಳಿಂದ ತಂತ್ರಜ್ಞಾನವನ್ನು ಆಮದು ಮಾಡಿಕೊಳ್ಳುತ್ತ ಔದ್ಯೋಗೀಕರಣದ ಬೆನ್ನುಹತ್ತಿದರು. ಗಾಂಧೀಜಿಯವರು ನೆಹರೂರ ಬದಲು ಲೋಹಿಯರಂತಹ, ಕಾಮರಾಜ್, ರಾಜಗೋಪಾಲಾಚಾರಿಯಂತಹ ಈ ನೆಲದ ಬದುಕಿಗೆ ಸ್ಪಂದಿಸಬಲ್ಲಂತಹ ವ್ಯಕ್ತಿಯೊಬ್ಬನನ್ನು ಈ ದೇಶದ ಪ್ರಧಾನಿ ಪಟ್ಟಕ್ಕೆ ಆರಿಸಲು ಸಾಧ್ಯವಾಗಿದ್ದರೆ ಭಾರತದ ಚಿತ್ರ ಎಷ್ಟರಮಟ್ಟಿಗೆ ಭಿನ್ನವಾಗಿರುತ್ತಿತ್ತು ಎನ್ನುವದು ಕುತೂಹಲದ ವಿಷಯ. ಸಮಾಜಸುಧಾರಕರು ತಮ್ಮ ಸುತ್ತ ಕೂಡಿಹಾಕಿಕೊಳ್ಳುವ, ತಮ್ಮ ಉತ್ತರಾಧಿಕಾರಿಯಾಗಿ ಆರಿಸಿಕೊಳ್ಳುವ ವ್ಯಕ್ತಿಗಳನ್ನು ವರೆಗೆ ಹಚ್ಚಿ ಪರೀಕ್ಷಿಸದಿದ್ದರೆ ಆತ್ಮವಂಚಕರು ಮೇಲುಗೈ ಸಾಧಿಸಿ-ಸುಧಾರಣೆಯನ್ನು ಹಿಮ್ಮುಖಗೊಳಿಸಿ, ಸುಧಾರಕನ ಮೂಲೋದ್ದೇಶವು ಮೂಲೆಗೆ ಹೋಗಿ ಬಿಡುವಂತೆ ಮಾಡುತ್ತಾರೆ.

ಹಿಪಾಕ್ರಸಿ ಕೇವಲ ರಾಜಕೀಯ ಮತ್ತು ಸಾರ್ವಜನಿಕ ಕ್ಷೇತ್ರಕ್ಕೆ ಮಾತ್ರ ಹಾನಿಯುಂಟುಮಾಡುತ್ತಿಲ್ಲ. ನಮ್ಮ ಸಾಹಿತ್ಯ ಮತ್ತು ಸಂಸ್ಕೃತಿಯ ಕ್ಷೇತ್ರಗಳೂ


ಇದರಿಂದ ಸಾಕಷ್ಟು ಬಳಲುತ್ತಿವೆ. ಅಂತರಂಗದ ಪಿಸುಧ್ವನಿಗಳಿಗೆ ಕಿವುಡಾಗುತ್ತ ಸದ್ಯದ ಸೆಳವಿಗೆ ಹೊಂದಿಕೊಂಡು ಹೋಗುವ ಆಮಿಷಕ್ಕೆ ಓಗೊಡುವಲ್ಲಿ, ಬದುಕು–ಬರಹಗಳ ನಡುವಿನ ಹೊಂದಾಣಿಕೆಗೆ ಪ್ರಾಮಾಣಿಕ ತುಡಿತವನ್ನೂ ಹೊಂದಿರದ ಸೃಜಶೀಲರೆನ್ನಿಸಿಕೊಳ್ಳುವವರಿದ್ದಾರೆ. ವಿಮರ್ಶೆಯ ಲೋಕವಂತೂ ತಮಾಷೆಯದಾಗಿ ಬಿಟ್ಟಿದೆ. ತರಂಗ-ತುಷಾರಕ್ಕಾಗಿ ಲೇಖನ ಬರೆಯಬೇಕಾದರೆ ಆ ಪತ್ರಿಕೆಗಳಲ್ಲಿ ಬರೆಯುವ ಲೇಖಕರನ್ನು ಹೆಸರಿಸಿ ಗಮನಾರ್ಹ ಬರಹಗಾರರೆನ್ನುತ್ತಾರೆ. ಇನ್ನು ಬೇರೆ ಪತ್ರಿಕೆಗಳಿಗೆ ಬರೆಯಬೇಕಾದರೆ ಆ ಪತ್ರಿಕೆಗೆ ಬರೆಯುವ ಲೇಖಕರನ್ನು ಹೆಸರಿಸಿ ಗಮನಾರ್ಹರೆನ್ನುತ್ತಾರೆ. ಇನ್ನು ಬೆಂಗಳೂರಿನಲ್ಲಿ ನಡೆಯುವ ಸಂಕಿರಣಗಳಲ್ಲಿ ಬೆಂಗಳೂರಿನ ಗಮನಾರ್ಹ ಲೇಖಕರನ್ನು ಹುಡುಕುವದು. ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿಗೆ 'ಬೆಂಗಳೂರು ಸಾಹಿತ್ಯ ಅಕಾಡೆಮಿ' ಎಂದು ಹೆಸರಿಸಿದರೆ ಸರಿಯಾದ ಹೆಸರಾಗುತ್ತದೆ. ಈ ಸಂಸ್ಥೆ ನಡೆಸುವ ಸೆಮಿನಾರು–ಕಾರ್ಯಾಗಾರಗಳು ಬಹುತೇಕ ಬೆಂಗಳೂರಿನ ಲೇಖಕರ rehabilitation camp ಗಳಿದ್ದಂತೆ ಇರುತ್ತವೆ. ಕ್ಲಾಸಿಕಲ್ ಸಂಗೀತದಿಂದ 'ರಾತ್ರಿ ಆಯ್ತು ಮಲಗೋಣ' ದಂಥ ಸಿನೆಮಾಹಾಡಿಗೆ, ಕ್ಲಾಸಿಕ್ಸ್‌ಗಳಿಂದ ಪತ್ತೆದಾರಿಕಾದಂಬರಿ–ಕಾಮಿಕ್ಸ್‌ಗಳ ಓದಿಗೆ, ಗಾಂಧಿ–ಟಿಳಕ ಲೋಹಿಯರ ಸಾಮಾಜಿಕ ಚಟುವಟಿಕೆಗಳಿಂದ ರುಕ್ಷ ರಾಜಕಾರಣಕ್ಕೆ, ಸಹೃದಯ ನಿರ್ಲಿಪ್ತ ಪ್ರತಿಕ್ರಿಯೆಯಿಂದ ಗುಂಪುಗಾರಿಕೆಯ ವಿಮರ್ಶಾಲೋಕಕ್ಕೆ ಪಲ್ಲಟಗೊಂಡ ನಮ್ಮ ಸಂವೇದನೆಯು ಪದಾರ್ಥ ಲೋಕಕ್ಕೀಗ ರೋಗತಗುಲಿಬಿಟ್ಟಿದೆ. ಈ 'ನಿಮ್ನಾಭಿರುಚಿ'ಯ ರೋಗವನ್ನು ಗುರುತಿಸಿಕೊಂಡು ನಮ್ಮನ್ನು ನಾವು ಸರಿಪಡಿಸಿಕೊಳ್ಳುವ ಮಾರ್ಗಕ್ಕೆ ಹತ್ತಿರವಾಗಬೇಕಾಗಿದೆ. ಇದಾಗದಿದ್ದರೆ ನಾವು ರೋಬಾಟುಗಳಂತೆ ಹೃದಯಹೀನರಾಗಿ, ತರಣಿಯಹುಳು ತನ್ನ ಬಲೆಯ ತಾನೆ ಹೆಣೆದುಕೊಳ್ಳುವಂತೆ ಕ್ರೌರ್ಯದ ಆವರಣದೊಳಗೆ ಸಿಕ್ಕು ಒಬ್ಬರ ಮುಖ ಒಬ್ಬರಿಗೆ ಸರಿಯಾಗಿ ಕಾಣದೆ ಒಬ್ಬರನ್ನೊಬ್ಬರು ಕೊಂದುಕೊಳ್ಳಬಹುದು. ಇದೆಲ್ಲ ನಮ್ಮ ಹೊಸಹುಟ್ಟಿನ ಮೊದಲಿನ ಬೇನೆಯ ಕಾಲ, ಬದಲಾವಣೆಯ ಮುಂಚಿನ ತಾತ್ಕಾಲಿಕ ತುಮುಲ ಎಂದುಕೊಳ್ಳುತ್ತ ನಿರ್ಲಿಪ್ತತೆಯನ್ನು ತೋರುವುದು ಆತ್ಮವಂಚನೆಯಾಗುತ್ತದೆ. ಹೊಸಹುಟ್ಟಿನ ರೂಪರೇಷೆಗಳನ್ನು-ಬದಲಾವಣೆಯ ದಿಕ್ಕನ್ನು ಗುರುತಿಸಿಕೊಳ್ಳುವಲ್ಲಿ, ಅದು ಒಳಗೊಳ್ಳಬೇಕಾದ ಮೌಲ್ಯಗಳನ್ನು ಆವಿಷ್ಕರಿಸಿಕೊಳ್ಳುವಲ್ಲಿ ನಾವು ಕ್ರಿಯಾತ್ಮಕ ಪಾತ್ರವಹಿಸಬೇಕಾಗಿದೆ.

ಇಂಥ ಸಂದರ್ಭದಲ್ಲಿ **ಸಂವಾದ** ಮೂಡಿಬರುತ್ತಿದೆ. ಸಂವಾದವು **ರುಜುವಾತು, ಶೂದ್ರ, ಸಂಕ್ರಮಣ, ಅಂಕಣ** ಮುಂತಾದ ಪತ್ರಿಕೆಗಳೊಂದಿಗೆ ಪೂರಕವಾಗಿ ಕೆಲಸ ಮಾಡುವ ಆಸೆಹೊಂದಿದೆ. ಇದರೊಂದಿಗೆ ಹಳ್ಳಿಯ ಪ್ರಜ್ಞೆ ಮತ್ತು ಸಾಂಸ್ಕೃ

ತಿಕ ಆವರಣಕ್ಕೆ ಅಭಿವ್ಯಕ್ತಿಕೊಡುವ ವಿಶೇಷ ಉದ್ದೇಶ ಹೊಂದಿದೆ. ಕನ್ನಡದಲ್ಲಿ 'ಹಗುರಓದಿನ' ಪತ್ರಿಕೆಗಳ ಪುಟಗಳ ಸಂಖ್ಯೆಗೆ ಹೋಲಿಸಿದರೆ 'ಗಹನಓದಿನ' ಪುಟಗಳ ಸಂಖ್ಯೆ ಅತಿ ಅಲ್ಪ. ಇದುಕೇವಲ ವಿಲೋಮಗೊಂಡ ರುಚಿ (inverted taste)ಯು ಪರಿಣಾಮ ಎಂದುಕೊಳ್ಳುವಂತಿಲ್ಲ. ಅಂದರೆ ಗಹನಓದಿನ ಓದುಗರು ಇಲ್ಲದ್ದಕ್ಕೆ ಇಷ್ಟು ಕಡಿಮೆ ಪುಟಗಳು ಬರುತ್ತಿವೆ ಎನ್ನುವ ವಿವರಣೆಕೊಡಲಾಗುವು ದಿಲ್ಲ. ಕಡಿಮೆ ಸಂಖ್ಯೆಯ ಓದುಗರು ಇರಲು 'ನಿರ್ವಾತ' (vaccum) ಕೂಡ ಕಾರಣವಾಗಿದೆ. ಗಹನ ಓದಿನ ಹೆಚ್ಚು ಹೆಚ್ಚು ಪುಟಗಳು ಬಂದಂತೆ ಈ ನಿರ್ವಾತ ಸ್ಥಿತಿಯು ಕ್ರಮೇಣ ಕಡಿಮೆಯಾಗುತ್ತ ಅದರೊಂದಿಗೆ ಇಂಥ ಪುಟಗಳ ಓದುಗರ ಸಂಖ್ಯೆಯೂ ಹೆಚ್ಚುತ್ತದೆನ್ನುವ ನಂಬಿಕೆ ನಮ್ಮದು. ಕನ್ನಡದಲ್ಲಿ ಇಂದು ಬರುತ್ತಿರುವ ವಾರಪತ್ರಿಕೆಗಳ ಸಂಖ್ಯೆ ಮತ್ತು ಅವುಗಳ ಪ್ರಸಾರ ಸಂಖ್ಯೆಯನ್ನು ಗಮನಿಸಿದಾಗ ನನ್ನ ಮಾತು ಸರಿ ಅನ್ನಿಸಬಹುದು. ಹೊಸ ಪತ್ರಿಕೆಗಳು ಬಂದಂತೆ ಅವು ಓದು ಗರನ್ನು ಹಂಚಿಕೊಳ್ಳುತ್ತವೆನ್ನುವದಕ್ಕಿಂತ ಅವು ಹೊಸ ಓದುಗರನ್ನು ಕಂಡುಕೊಳ್ಳುತ್ತ ವೆನ್ನುವ ಮಾತು ಹೆಚ್ಚು ಸರಿಯಾದದ್ದು. ಗಹನಓದಿನ ಪುಟಗಳು ನಮ್ಮ ಸಾಂಸ್ಕೃ ತಿಕ ಬದಲಾವಣೆಯ ರೂಪರೇಷೆಗಳನ್ನು ಗುರುತಿಸಲು ಪ್ರಯತ್ನಿಸುತ್ತವೆ ಮತ್ತು ಮೌಲ್ಯಗಳನ್ನು ರೂಪಿಸಿಕೊಳ್ಳುವ ಕ್ರಿಯೆಗೆ ಸಹಕಾರಿಯಾಗುತ್ತವೆ ಎನ್ನುವ ಆಶಾವಾದ ದೊಂದಿಗೆ **ಸಂವಾದ** ಹೊರಬರುತ್ತಿದೆ.

●

ಸಂವಾದದ ನಮ್ಮ ಪ್ರಯತ್ನಕ್ಕೆ ಪ್ರೋತ್ಸಾಹ ನೀಡಿದ ಎಲ್ಲ ಸ್ನೇಹಿತರಿಗೆ, ಚಂದಾದಾರ ಬಂಧುಗಳಿಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ. ಇದರೊಂದಿಗೇ ನಾವು ಹೇಳಿದ ದಿನಕ್ಕಿಂತ ತುಂಬ ತಡವಾಗಿ ಸಂವಾದವನ್ನು ಹೊರತರುತ್ತಿರುವದಕ್ಕೆ ಕ್ಷಮೆಕೋರುತ್ತೇವೆ.



ಸಂಚಿಕೆ ೨

ಜನವರಿ–ಫೆಬ್ರುವರಿ 1987

ಸಂವಾದ

ಸಂವಾದ ಪ್ರಕಾಶನ ಮಲ್ಲಾಡಿಹಳ್ಳಿ ಚಿತ್ರದುರ್ಗ ಜಿಲ್ಲೆ

ಈ ಸಂಚಿಕೆಯ ಲೇಖಕರು :

ಪೂರ್ಣಚಂದ್ರ ತೇಜಸ್ವಿ, ಮೂಡಿಗೆರೆ ಅಂಚೆ, ಚಿಕ್ಕಮಗಳೂರು.

ಶಿವಾನಂದ ಬೇಕಲ್, ಆಕಾಶವಾಣಿ ಮಂಗಳೂರು.

ಶಾಂತ ಬಿ. ಎನ್. ಫಾತಿಮಾಗಾರ್ಡನ್ಸ್, ವೆಲೆನ್ಸಿಯಾ, ಮಂಗಳೂರು-575 002

ಎಂ. ಎಸ್. ಕೆ. ಪ್ರಭು, ಆಕಾಶವಾಣಿ ಧಾರವಾಡ.

ಡಾ|| ಎ. ಎನ್. ನಾಗರಾಜ್, 61, 1ನೇ ಅಡ್ಡರಸ್ತೆ, ವಿದ್ಯಾನಗರ ಶಿವಮೊಗ್ಗ.

ಯಶವಂತ ಡೋಂಗ್ರೆ, ವಾಣಿಜ್ಯ ಶಾಸ್ತ್ರ ವಿಭಾಗ, ಮಂಗಳ ಗಂಗೋತ್ರಿ ಕೊಣಾಜೆ,
ದಕ್ಷಿಣಕನ್ನಡಜಿಲ್ಲೆ.

ಎಡ್ವರ್ಡ್‌ಗೋಲ್ಡ್‌ಸ್ಮಿತ್, 'ದ ಇಕಾಲಾಜಿಸ್ಟ್' ಪತ್ರಿಕೆಯ ಪ್ರಕಾಶಕರು, ಲಂಡನ್.

ಡಾ|| ಅನುಪಮಾ ನಿರಂಜನ, ನಂ.515, 7ನೇ ಮೇನ್ 5ನೇ ಬ್ಲಾಕ್, ಜಯನಗರ
ದಕ್ಷಿಣ, ಬೆಂಗಳೂರು-41.

ಜಿ. ಪಿ. ಬಸವರಾಜು, ಪ್ರಜಾವಾಣಿ ವರದಿಗಾರರು, ವಿಲಾಗ್ರೇನ್ ಕಟ್ಟಡ,
ಹಂಪನಕಟ್ಟೆ, ಮಂಗಳೂರು-1 575 001.

ಶ್ರೀನಿವಾಸ ಪ್ರಸಾದ್, ಆಕಾಶವಾಣಿ, ಭದ್ರಾವತಿ.

ಸಂವಾದ-೨

ಸಂಪಾದಕ ಮಂಡಲಿಯ ಆರು ಜನ ಸದಸ್ಯರಲ್ಲಿ ಒಬ್ಬೊಬ್ಬರು ಒಂದೊಂದು ಸಂಚಿಕೆ ಸಂಪಾದಿಸುತ್ತಾರೆ. 86 ನವಂಬರ್-ಡಿಸೆಂಬರ್/ರಾಘವೇಂದ್ರ ಪಾಟೀಲ 87 ಜನವರಿ-ಫೆಬ್ರುವರಿ/ಡಿ.ಎಸ್. ನಾಗಭೂಷಣ ಮಾರ್ಚ್-ಎಪ್ರಿಲ್/ಬಿದರಹಳ್ಳಿ ನರಸಿಂಹಮೂರ್ತಿ ಮೇ-ಜೂನ್/ಸ. ಉಷಾ ಜುಲೈ-ಆಗಸ್ಟ್/ವೈ. ಮಂಜಪ್ಪ ಸೆಪ್ಟಂಬರ್-ಅಕ್ಟೋಬರ್/ಜಿ.ಎಲ್. ರಾಮಪ್ಪ

Printed Published and Edited for Samvada Prakshana.
Malladihalli post Chitradurga Dist. 577 531.

Printed at :
Mubeen Printers
Khadikendra Road, Malladihalli
Chitradurga Dist. 577 531.

ತೇಜಸ್ವಿ ಸಂದರ್ಶನ

○ ಶಿವಾನಂದ ಬೇಕಲ್

ಹೊಸಬರೊಂದಿಗೆ ಮಾತಾಡಲು ಸಾಮಾನ್ಯವಾಗಿ ಹಿಂಜರಿಯುವ ತೇಜಸ್ವಿಯವರನ್ನು ಶಿವಾನಂದ ಬೇಕಲ್ ಆಕಾಶವಾಣಿ ಮೈಕ್ ಹಿಡಿದು ಮಾತಾಡಿಸುವಲ್ಲಿ ಯಶಸ್ವಿಯಾಗಿದ್ದಾರೆ. ತೇಜಸ್ವಿ ಸಾಕಷ್ಟು ಉಮೇದಿನಿಂದಲೇ ಮಾತನಾಡಿದ್ದಾರೆ. ಧ್ವನಿಮುದ್ರಣದ ಕೆಲವು ಭಾಗಗಳು ಇಲ್ಲಿವೆ, :

ಬೇಕಲ್ : ಎಲ್ಲರೂ ನಗರದ ಕಡೆ ವಲಸೆ ಹೋಗ್ತಿರೋವಾಗ ನೀವು ಕಾಡಿನ ಮಧ್ಯೆ ವಾಸ್ತವ್ಯ ಹೂಡಿರೋದು, ನಿಮ್ಮ ಸಾಹಿತ್ಯಕ ಚಟುವಟಿಕೆಗಳಿಗೆ ಪ್ರೇರಣೆ ಸಿಗಲಿ ಅನ್ನೊ ಕಾರಣದಿಂದಲೇ ?

ತೇಜಸ್ವಿ : ನಾನು ಸಾಹಿತ್ಯಿಕ ಚಟುವಟಿಕೆಗಳನ್ನು ನನ್ ಜೀವನದ ಪ್ರಧಾನ ಉದ್ದೇಶವನ್ನಾಗಿ ಯಾವತ್ತೂ ಮಾಡ್ಕೊಂಡಿಲ್ಲ. ನನಗೆ ಮೂಲತಃ ಪ್ರಕೃತಿ ಮತ್ತು ಪರಿಸರ ಇಂಥಡವುಗಳ ಬಗ್ಗೆ ತುಂಬಾ ಆಸಕ್ತಿ ಇದೆ. ಇದಕ್ಕೆ ಮೂಲ ಕಾರಣ ನಮ್ಮ ತಂದೆಯವ್ರು ಚಿಕ್ಕಂದಿನಿಂದ ನನ್ನ ಬೆಳಸ್ಕೊಂಡು ಬಂದ ರೀತಿ. ಅವ್ರು ವಿಜ್ಞಾನ, ಕಲೆ ಎಲ್ಲದಕ್ಕಿಂತ ಹೆಚ್ಚು ಪ್ರಕೃತಿ ಕುತೂಹಲದಾಯಕವಾದ್ದು ಅನ್ನೋದನ್ನ ತೋರ್ಸ್ಕೊಟ್ರು. ಎರಡನೆಯದಾಗಿ ಪೇಟೆಯ ಪರಿಸರ ನನ್ಗೆ ಅಷ್ಟು ಅಪರಿಚಿತವಾದ್ದೇನೂ ಅಲ್ಲ. ಆದ್ರೆ

ಪೇಟೆ ನಿಮ್ಮಲ್ಲಿ ಉತ್ಪಾದಿಸಿ ಮಾಡ್ತಕ್ಕಂತ ಕುತೂಹಲಕ್ಕೆ ಒಂದು ಕೊನೆ ಇದೆ. ಪ್ರಕೃತಿ, ಕಾಡು, ಹೊಳೆ, ಪರ್ವತ, ಬೆಟ್ಟಗುಡ್ಡಗಳು ನಿಮ್ಮಲ್ಲಿ ಉತ್ಪತ್ತಿ ಮಾಡುವ ಕುತೂಹಲಕ್ಕೆ ಒಂದು ಕೊನೆ ಅನ್ನೋದಿಲ್ಲ. ಹಾಗಾಗಿ ಸಾಹಿತ್ಯೇತರವಾದ ಉದ್ದೇಶಗಳಿಗಾಗಿ, ಸಾಹಿತ್ಯದಿಂದ ಅನ್ಯವಾದ ಉದ್ದೇಶಗಳಿಗಾಗಿ ಮೂಲತಃ ನನ್ನ ಅನುಷಂಗಿಕ ಟೆಂಪರಮೆಂಟ್, ಅಭಿರುಚಿ, ಆಕಡೆ ಇದ್ದದ್ರಿಂದ ನಾನು ಅಲ್ ಬಂದು ಬದುಕ್ತಾ ಇದ್ದೀನಿ ಅಂತ ನಾನು ತಿಳ್ಕೊಂಡಿದ್ದೇನೆ. ಆದ್ರೆ ಸಾಹಿತ್ಯ ನಾವು ಬರೀಬೇಕೂಂತ ಹೇಳಿ ಅದಕ್ಕೆ ತಕ್ಕ ಪರಿಸರ ಹುಡ್ಕೊಂಡ್ ಹೋಗಿ ಬದುಕೋದು ನಾನೂ ಆಕೆಲ್ಸ ಮಾಡಿಲ್ಲ, ಬೇರೆಯವ್ರಿಗೂ ಅದು ಮಾಡ್‌ಬೇಡಿ ಅಂತ ಹೇಳ್ತೀನಿ. ತಪ್ಗೆ ತೋಚ್‌ದಂತೆ ಬದುಕ್ತಾ ಅದಕ್ಕೆ ಅನುಗುಣವಾಗಿ ಸಾಹಿತ್ಯವನ್ನೂ ಬರಕೋತ ಹೋಗ್‌ಬೇಕಾದ್ದು ಪ್ರತಿಯೊಂದು ಕಲಾವಿದ್ನ ಕರ್ತವ್ಯಾಂತ ತಿಳ್ಕೊಂಡಿದ್ದೀನಿ.

ಬೇಕಲ್ : "ನಿಗೂಢ ಮನುಷ್ಯರು" ಅಥ್ವಾ "ಕರ್ವಾಲೋ"ದಂಥ ಕಾದಂಬರಿಯ ದೃಷ್ಟಿಕ್ಕೆ ಕಾಡಿನ ಪರಿಸರ ಹೇಗೆ ನಿಮ್ಮಲ್ಲಿ ಪ್ರೇರಕ ಶಕ್ತಿಯಾಗಿ ಕೆಲ್ಸ ಮಾಡಿದೆ ಅನ್ನೋದನ್ನ ಯೋಚಿಸ್ತಿರುವಾಗ.... ಈ ಎರಡು ಕಾದಂಬರಿಗಳ ಟ್ರೀಟ್‌ಮೆಂಟ್ ಮೇಲ್ನೋಟ್ಕಿನಲ್ಲಿ ಭಿನ್ನವಾಗಿ ಕಾಡುಬಂದ್ರೂ ಮೂಲತಃ ಈ ಎರಡ್ರಲ್ಲೂ ಕಾಡುಬರುವ ಅಗೋಚರ ಶಕ್ತಿಯ ಹಿನ್ನೆಲೆ ಮತ್ತು ಕಲ್ಪನೆ ಕೆಲವು ಸಾಮಾನ್ಯ ಪ್ರಶ್ನೆಗಳನ್ನು ಎತ್ತುತ್ತವೇಂತ ನನ್ನ ಅಭಿಪ್ರಾಯ....

ತೇಜಸ್ವಿ : ಇದು ನೀವು ಆಲೋಚ್ನೆ ಮಾಡೋದಕ್ಕಿಂತ ಅತ್ಯಂತ ಸಂಕೀರ್ಣವಾದ ಪ್ರಶ್ನೆ. ಇದಕ್ಕೆ ನಾನು ಸ್ವಲ್ಪ ಹಿಂದುಮುಂದುಗಳನ್ನು ನಿಮ್ಗೆ ವಿವರಿಸ್ಬೇಕಾಗ್ತದೆ. ನಾವು 1974 ರಲ್ಲಿ ಬರಹಗಾರ್ರ ಮತ್ತು ಕಲಾವಿದ್ರ ಸಮ್ಮೇಳನ ಒಂದ್ ಮಾಡ್‌ದ್ವು. ಆಗಿನ್ ಕಾಲಕ್ಕೆ ನಾವ್ ಏನ್ ಹೇಳ್‌ದ್ವು ? ಹಿಂದೂ ಧರ್ಮವನ್ನು ಯಾವ್‌ದೇ ಸ್ವರೂಪದಿಂದ ನಾವ್ ಪ್ರತಿಪಾದಿಸಿದ್ರೂನೂ, ಯಾವ್ ರೀತಿಯಿಂದಾಗ್ಲೀ ಅದು ಅಂತಿಮವಾಗಿ ಜಾತಿಪದ್ಧತಿ, ಮೇಲು ಕೀಳುಗಳು, ಅಸ್ಪೃಶ್ಯತೆ ಇವುಗಳನ್ನು ಪ್ರತ್ಯಕ್ಷವಾಗಿ ಇಲ್ವೇ ಪರೋಕ್ಷವಾಗಿ ಪ್ರತಿಪಾದ್ನೆ ಮಾಡ್ತದೆ. ಇದನ್ನ ನಾವು ತಿರಸ್ಕರಿಸಿ ಬೇರೆ ಬೇರೆ ಹಿಂದೂ ಧರ್ಮದ ಅಂಶಗಳನ್ನು ತಗೊಂಡು ಇವು ಬಹಳ ಒಳ್ಳೇವು ಅಂತ್ಹೇಳಿ ಅವನ್ನು ಪ್ರತಿಪಾದ್ನೆ ಮಾಡ್ದ್ರೂ ಅಂತಿಮವಾಗಿ ಅವ್ರು ಇದ್ನೇ ಮಾಡ್ತವೆ. ಯಾಕಂತ್ಹೇಳಿದ್ರೆ ಇಂಥ ಪ್ರಯತ್ನಗಳು ಕಳೆದ ಅನೇಕ ಸಾವ್ರ ವರ್ಷಗಳಿಂದ ಭಾರತದಲ್ಲಿ ಆದ್ರೂ ಸಹ ಈ ಅನಿಷ್ಟಗಳನ್ನು ಸಾಹಿತ್ಯದ ಮುಖಾಂತ್ರ ತೊಡೆಯೋಕ್ಕೆ ಆಗ್ತಾ ಇಲ್ಲ. ಸಾವ್ರ ವರ್ಷದ ಹಿಂದೆ ಪಂಪ 'ಮನುಜ ಜಾತಿ ತಾನೊಂದೇ ವಲಂ' ಅಂತ್ಹೇಳಿ ಹೇಳ್ದ. ಸಾವ್ರ ವರ್ಷ ಆದ್

ಮೇಲೂ ಸಹ ನಾನ್ ಅದೇ ಸಮಸ್ಯೆಯನ್ನು ಫೇಸ್ ಮಾಡ್ತಾ ಇದ್ದೀವಿ. ಆದ್ರಿಂದ ನಾವು ನಮ್ಮ ನಿಜವಾದ ಸಾಮಾಜಿಕ ಕಳಕಳಿ ಏನಾದ್ರೂ ಇದ್ದ ಪಕ್ಷದಲ್ಲಿ ಈ ಧಾರ್ಮಿಕತೆಯನ್ನು ಬಿಟ್ಟು ಕೇವಲ ಸಾಮಾಜಿಕತೆಯನ್ನೇ ಸಾಮಾಜಿಕ ಕಳಕಳಿಯನ್ನೇ ನಮ್ಮ ಸಾಂಸ್ಕೃತಿಕ ಉದ್ದೇಶವನ್ನಾಗಿ ಮಾಡ್ಕೊಳ್‌ಬೇಕೂಂತ ಯೋಚ್ನೆ ಮಾಡ್ದೆ. ಆದ್ರೆ ಧರ್ಮಕ್ಕಿರುವ ಒಂದು Special Quality–ವಿಶಿಷ್ಟವಾದ ಶಕ್ತಿ ಏನಪ್ಪಾಂತಂದ್ರೆ ನಮ್ಮ ಜೀವನದಲ್ಲಿರುವ ಅಗಮ್ಯ ಮತ್ತು ಅಗೋಚರವಾಗಿರುವ ಕೆಲವು ಸಮಸ್ಯೆಗಳನ್ನು ಫೇಸ್ ಮಾಡೋದು. ಪ್ರಕೃತಿ ಮತ್ತು ಪರಿಸರ ನಮ್ಮಲ್ಲಿ ಈವೊತ್ತು ಯಾವ್ಯಾವ ಗಂಭೀರವಾದ ಸಮಸ್ಯೆಗಳನ್ನು ಫೇಸ್ ಮಾಡೋ ಹಾಗೆ ಮಾಡುತ್ತೋ ಅದನ್ನ ಧರ್ಮ ಇಲ್ಲಿವರೆಗೆ ಮಾಡಿಲ್ಲ. ಸಾವು, ಒಂದು ಅನಂತವಾದ್ದರ ಜತೆಗೆ ನಂತವಾದ ಮನುಷ್ಯನ ಸಂಬಂಧ ಏನು ಅನ್ನೋದನ್ನ ಯೋಚ್ನೆ ಮಾಡುವ ಪ್ರಶ್ನೆ, ಮರಣಾನಂತ್ರವೂ ಮನುಷ್ಯನಿಗೆ ತನ್ನ Existence ಇದೆಯೋ ಇಲ್ವೋ ಅನ್ನೋ ಈ ಅಮೂರ್ತವಾದ ಸಮಸ್ಯೆಗಳನ್ನು ಫೇಸ್‌ಮಾಡೋದಕ್ಕೆ ಧರ್ಮದ ಮುಖಾಂತರ ಸಾಹಿತ್ಯದಲ್ಲಿ ಸಾಧ್ಯವಾಗಿದೆ. ನಾವು ನಮ್ಮ ಧರ್ಮವನ್ನು ಯಾವ ರೀತಿಯಿಂದ್ಲೂ ಪ್ರತಿಪಾದಿಸ್ಲೇಬಾರ್ದು ; ನಮ್ಗೆ ಬರೇ ಸಾಮಾಜಿಕ ಕಳಕಳಿಯೇ ಮುಖ್ಯ, ಈ ಹಿಂದೂ ಧರ್ಮವನ್ನು ಯಾವ ಇದರ Version ಅನ್ನು ಸಪ್ಪೋರ್ಟ್ ಮಾಡ್ದ್ರೂನೂ ಕೊನೆಗೆ ಇಂಥ ಕೆಲವು ಅನಿಷ್ಟ ಪದ್ಧತಿಗಳಿಗೆ ಪೂರಕವಾಗತ್ತೇ ಅಂತ ಹೇಳಿ ತೀರ್ಮಾನ ತಗೊಂಡಾಗ, ಹಾಗಾದ್ರೆ ಧರ್ಮಕ್ಕೆ ಬದಲಾಗಿ ನಾವು ಸಾಹಿತ್ಯದಲ್ಲಿ ಇನ್ನು ಯಾವುದನ್ನು ಅಷ್ಟೇ ಆಳವಾಗಿ ಮನುಷ್ಯನನ್ನು ಕಲಕುವಂಥನ್ದ – ಯಾವುವನ್ನು ಪ್ರತಿಷ್ಠಾಪನೆ ಮಾಡ್‌ಬಹುದು–ಇನ್ಯಾವ ಸೆಂಟರ್ ಇದೆ, ನಮ್ಗೆ ? ಇದನ್ನ ಕಂಡುಹಿಡ್ಯೋದಕ್ಕೆ ಪ್ರಯತ್ನ ಮಾಡ್‌ಬೇಕಾಯ್ತು.

"ನಿಗೂಢ ಮನುಷ್ಯರು", "ಕಾರ್ವಾಲೋ" ಮತ್ತು ಈಚೆಗೆ ಬರೆದಿರೋ "ಚಿದಂಬರ ರಹಸ್ಯ" ಈ ಮೂರೂ ಕಾದಂಬರಿಗಳಲ್ಲೂ ಮೂಲತಃ ನಾನ್ ಮಾಡಿರೋ ಪ್ರಯತ್ನ ಏನೂಂತ ಹೇಳ್ಬೇಕಂದ್ರೆ, ಧರ್ಮದ ಬದ್ಲಾಗಿ Rationalism and Science ಇವು ಧರ್ಮದಷ್ಟೇ ಆಳವಾಗಿ ಮನುಷ್ಯನನ್ನು ಕಲಕುವುದಕ್ಕೆ ಸಾಧ್ಯವೇ ? ಧಾರ್ಮಿಕತೆಯ ಮುಖಾಂತ್ರ ಹಿಂದೆ ಸಾಹಿತಿ ಯಾವ್ಯಾವ ಸಮಸ್ಯೆಗಳನ್ನು ಫೇಸ್‌ಮಾಡ್‌ತಿದ್ನೋ, ಎದುರಿಸ್ತಿದ್ನೋ ಅದನ್ನು Rationalism ಮುಖಾಂತ್ರಾನೋ ವಿಜ್ಞಾನದ ಮುಖಾಂತ್ರಾನೋ ಫೇಸ್ ಮಾಡಲು ಸಾಧ್ಯವೇ? ಇದು ನಿಮ್ಗೆ ಅರ್ಥ ಆಗುತ್ತೇ ಅಂತ ಕಾಣುತ್ತೆ? ಅಂ ? ಧರ್ಮ ಎಷ್ಟು ಆಳವಾಗಿ, ಒಂದು ಲಿಂಗವೋ ಅಥ್ವಾ ಒಂದು ಜನಿವಾರವೋ ಯಾವ್‌ದೋ ಒಂದು, ಎಷ್ಟು ಆಳವಾದ Symbol ಆಗೋಕೆ ಸಾಧ್ಯವೋ ಅಷ್ಟೇ

ಆಳವಾದ Symbol ಆಗಿ ಒಂದು flying lizard ಆಗೋದಕ್ಕೆ ಸಾಧ್ಯಾಂತೆ ಪ್ರಯತ್ನ ಮಾಡಿದ್ದು. ಆದ್ರಿಂದ ನಿಗೂಢ ಮನುಷ್ಯರಲ್ಲೇ ಆಗ್ಲಿ, ಕರ್ವಾಲೋನಲ್ಲೇ ಆಗ್ಲಿ ಬರುವ ಪ್ರಕೃತಿಯ ಪರಿಸರ ನಾನ್ ಈಗ ವಿವರಿಸ್ದ್ನಲ್ಲಾ ಅಂ ? ಆ ಪ್ರಯತ್ನಕ್ಕೆ ಸಂಬಂಧ ಪಟ್ಟದ್ದು.

ಬೇಕಲ್ : ಪ್ರಾಣಿಪಕ್ಷಿ ಕೆರೆತೊರೆಗಳ ನಡುವೆ ಬದುಕುವ ನಿಮ್ಮ ಜೀವನ ಧೋರಣೆಯಲ್ಲಿ ಒಟ್ಟು ಮಾನವ ಜನಾಂಗದ ಸ್ಥಾನ ಎಲ್ಲಿ ?

ತೇಜಸ್ವಿ : ನೀವ್ "ಚಿದಂಬರ ರಹಸ್ಯ" ಕಾದಂಬರಿಯನ್ನು ಓದಿದ್ರೆ ಅದ್ರಲ್ಲಿ ಒಂದ್ ಅರ್ಥ ಆಗತ್ತೆ ನಿಮ್ಗೆ, ಮನುಷ್ಯ ಸಮಾಜವನ್ನ ಮನುಷ್ಯ ಸಮಾಜಾ ಅಂತಾನೇ ನೋಡೋದಕ್ಕೆ ಆಗೋದಿಲ್ಲ. ಮನುಷ್ಯ ಸಮಾಜ ತನಗಿಂತ ದೊಡ್ಡದಾಗಿರುವ ಪರಿಸರ ಅನ್ನೋ ಒಂದು ಸಮಾಜದ ಜತೆಗೆ ಮಿಳಿತವಾಗಿದೆ. ಮನುಷ್ಯನನ್ನ ತನ್ನ ಪರಿಸರದಿಂದ ಪ್ರತ್ಯೇಕಗೊಳಿಸಿ ವಿಶ್ಲೇಷಿಸೋದಕ್ಕೆ ಸಾಧ್ಯವೇ ಆಗೋದಿಲ್ಲ. ಇವ್ನು ತನ್ನನ್ನೂ ತಾನು ಹಾಳ್‌ಮಾಡ್ಕೊಳ್ಬೇಕಾದಂಥ ಪರಿಸ್ಥಿತಿ ಬಂದಾಗ ತನ್ನ ಸುತ್ತುಮುತ್ತಲೂ ಹಾಳ್ ಮಾಡ್ಕೊಂಡಿರ್ತಾನೆ. ಮನುಷ್ಯ ಎಷ್ಟರಮಟ್ಟಿಗೆ ಪರಿಸರಕ್ಕೆ ಬದ್ಧನಾಗಿರ್‌ತಕ್ಕಂತವ್ನು ? ಈ ಸಮಸ್ಯೆಯನ್ನೇ ಆ ಕಾದಂಬರಿಯಾದ್ಯಂತ ನಾನು ವಿಶ್ಲೇಷಣೆ ಮಾಡೋದಕ್ಕೆ ಪ್ರಯತ್ನ ಮಾಡಿದ್ದೀನಿ. ಅದು ಕೇವಲ ಪರಿಸರ ಸಂರಕ್ಷಣೆ ಒಂದನ್ನೇ ಪ್ರೊಪಗೇಟ್ ಮಾಡುವಂಥ ಕಾದಂಬರಿಯಲ್ಲ. ಪರಿಸರ ಅಂದ್ರೆ ಏನು ? ಮನುಷ್ಯ ಅಂದ್ರೆ ಏನು ? ಪರಿಸರವನ್ನು ನಾಶಮಾಡತಕ್ಕಂಥ ಮನುಷ್ಯನ ಸೊಸೈಟಿ ಹೇಗಿರುತ್ತೆ ? ಮತ್ತು ಪರಿಸರವನ್ನು ನಾಶಮಾಡತಕ್ಕಂಥ ಮನುಷ್ಯನ ಆತ್ಮ ಏನಾಗುತ್ತೆ, ಹ್ಯಾಗೆ ಆತ್ಮ ಘಾತುಕವಾಗಿರತಕ್ಕಂಥ ನಡವಳಿಕೆಗಳಿಂದ್ಲೇನೇ, ಪರಿಸರ ಘಾತುಕವಾದ ಕೆಲ್ಸಗಳಾಗ್ತವೆ. ತನ್ನ ಸುತ್ತುಮುತ್ತು ಇರತಕ್ಕಂಥ ತೊರೆ ನದಿಗಳನ್ನೆಲ್ಲಾ ಕಲ್ಮಶಗೊಳಿಸತಕ್ಕಂಥ ಮನುಷ್ಯ ತನ್ನ ರಕ್ತನಾಳಗಳನ್ನ ಹ್ಯಾಗ್ ಕಲ್ಮಶಗೊಳ್ಸಿಕೊಳ್ತಾನೆ, ಪರಿಸರವನ್ನು ನಾಶಮಾಡೋದು ತನ್ನನ್ನು ತಾನು ನಾಶಮಾಡ್‌ಕೊಳ್ತಾ ಇರೋದ್ರ ಒಂದು ಮುನ್ನುಡಿಯಂತೆ–ಆದ್ಯಂತ ಆ ಕಾದಂಬರಿಯಲ್ಲಿ ನಾನು ಮಾಡಿದ್ದೀನಿ. ಅದ್ರಿಂದ ಹೊಳೆ ತೊರೆ ನದಿಗಳು ಮನುಷ್ಯನ ರಕ್ತನಾಳಗಳು. ಮನುಷ್ಯನ ಮಿದುಳು ಇವೆಲ್ಲಾ ಯಾವ್ದೋ ಒಂದೇ ಒಂದು ಕೇಂದ್ರದಿಂದ ನಿಯಂತ್ರಿತಗೊಳ್ತದೆ ಅನ್ನೋದನ್ನ ಅಲ್ಲಿ ಯೋಚ್ನೆ ಮಾಡಿದ್ದೀನಿ.

ಬೇಕಲ್ : ಬರವಣಿಗೆ ಅಷ್ಟೆ ಅಲ್ಲ, ಫೋಟೋಗ್ರಫಿಯಲ್ಲಿ ಕೂಡಾ ನೀವು ಹೆಸರು ಮಾಡಿದ್ದೀರಾ. ಈ ಫೋಟೋಗ್ರಫಿಯಲ್ಲಿ ನಿಮ್ಗೆ ಆಸಕ್ತಿ ಮೂಡೋದಕ್ಕೆ ಏನ್ ಕಾರಣ

ಇರಬಹುದು ?

ತೇಜಸ್ವಿ : ಫೋಟೋಗ್ರಫಿಯಲ್ಲಿ ನನ್ನ ಆಸಕ್ತಿ ಮೂಡೋದಕ್ಕೆ ಫೋಟೋಗ್ರಫಿಯ ಕೆಲವು desciplines ಇದ್ದಾವಲ್ಲ–ನಾವು ನವ್ಯಕಾವ್ಯದ ಸಂದರ್ಭದಲ್ಲಿ ಒಂದು ರೀತಿಯ ಆತ್ಮರತವಾದಂಥ ಕಾದಂಬರಿಗಳು, ಕತೆಗಳು, ಕವನಗಳು ಬರ್ತಿದ್ವು ಅಂದ್ರೆ ಏನಪ್ಪಾ-ಬರಹಗಾರ್ನೇ ಅದ್ರ ಸೆಂಟರ್ ಆಗಿರ್ತಿದ್ದ. ತಾನು, ತನ್ ಮನಸ್ಸು, ತನ್ನ ಸೈಕಲಾಜಿಕಲ್ ಕಾಂಪ್ಲೆಕ್ಸಸ್ ತನ್ನ ಅಧೋಗತಿ ಅಥ್ವಾ ಉನ್ನತಿ, ತನ್ನ ಆಲೋಚನಾಕ್ರಮ ಬಹಳ ಮುಖ್ಯವಾಗಿರ್ತಿದ್ವು-ಅಂತ ಹೇಳ್ದ್ರೆ ಒಂಥರಾ ಸೆಲ್ಫ್ ಸೆಂಟರ್ಡ್ ಅಂತೀವಲ್ಲ ಆ ರೀತಿಯ ಕತೆ ಕವನ ಕಾದಂಬರಿಗಳು ಬಹಳ ಹೆಚ್ಚಾಗಿರ್ತಿದ್ವು. ಆ time ಲ್ಲಿ ನನ್ಗೆ ಫೋಟೋಗ್ರಾಫಿಯ desciplines ಇವೆ ನೋಡಿ, Photography ಏನ್ ಮಾಡ್ದ್ರೂ ನಿಮ್ಮನ್ನು ನಾಯಕ್‌ನನ್ನಾಗಿ ಮಾಡೋದಿಲ್ಲ. ನೀವ್ ಏನಿದ್ರೂ ಕೆಮರಾ ಹಿಂದಿರ್‌ಬೇಕೇ ಹೊರ್ತು, ಕೆಮರಾ ಮುಂದೆ ಹೋಕೊಂಡ್ ನೀವು ನಿಮ್ಮನ್ನೇ ನಾಯಕ್‌ನನ್ನಾಗಿ ಮಾಡ್ಕೊಂಡು ಒಂದು ಕಲಾಕೃತಿಯನ್ನು ರಚನೆ ಮಾಡೋದಕ್ಕೆ ಆಗೋದೇ ಇಲ್ಲ. ನೀವು ಪಾತ್ರಧಾರಿ ಆಗೋಕ್ಕೆ ಸಾಧ್ಯವೇ ಇಲ್ದೇ ಇರೋವಂತ ಒಂದು ಆರ್ಟ್ ಅದು. ಅದ್ರಲ್ಲಿ ಏನಿದ್ರೂ ಅದ್ರ ಹಿಂದೆ ಇರ್‌ಬೇಕು. ಈ Photography ಯ desciplines ನನ್ಗೆ ಭಾಳಾ ಹಿಡ್ಸಿದ್ವು. ಏನು, ಕೇವಲ ಒಬ್ಬ ವರದಿಗಾರ್ನಾಗಿ ಕೇವಲ ಒಬ್ಬ ವೀಕ್ಷಕನಾಗಿ ಜೀವನ್‌ದಲ್ಲಿ ಉಳಿಯುವಂಥ ಒಂದು ಶಿಸ್ತಿದೆ ನೋಡಿ, participate ಮಾಡ್ದೇನೇನೇ observe ಮಾಡೋದು, ಮತ್ತು Observation ಮುಖಾಂತ್ರಾನೇ ನಿಮ್ಮ participation ಏನು ಅನ್ನೋದನ್ನ ಹೊರಜಗತ್ತಿಗೆ ತೋರ್ಸೋದು, ಆ desciplines ನನ್ನ ಭಾಳಾ ಹಿಡ್ಸಿದ್ರಿಂದ ನಾನು photography ಯಲ್ಲಿ participate ಮಾಡ್ತಾ ಇದ್ದಿದ್ದು ; Photography ಯನ್ನು ಅಳವಡಿಸ್ಕೊಂಡಿದ್ದು ಈಗ್ ನನ್ಗೆ ಅದ್ರಲ್ಲೇನೂ ಅಂಥಾ ಒಂದು ಶ್ರದ್ಧಾಸಕ್ತಿಗಳಿಸ್ನೂ ಉಳ್ದಿಲ್ಲ ಆದ್ರೆ ಆ desciplines ಮಾತ್ರ ನನ್ ಬರವಣಿಗೆಯಲ್ಲಿ ಉಳ್ಕೊಂಡ್‌ಬಂದಿದೆ.

ಇಂದು—ಮುಂದು :

ಎಲ್ಲ ಹಳೆಯ ಮತಗಳ ಪ್ರಕಾರ ಸುಖದ ಆಯ್ಕೆಯ ದೃಷ್ಟಿಯಿಂದ ಮನುಷ್ಯನು ಬೇಜವಾಬ್ದಾರಿಯುವ. ತತ್‌ಕ್ಷಣದ ಮತ್ತು ಆತ್ಯಂತಿಕ ಇವೆರಡರಲ್ಲಿ ಮನುಷ್ಯನು ತತ್‌ಕ್ಷಣದ ಸುಖಕ್ಕೇ ಜೋತುಬೀಳುತ್ತಾನೆ. ಬಹುತೇಕ ಜನರ ವಿಷಯದಲ್ಲಿ ಇದು ನಿಜವೂ ಹೌದು. ಹೀಗೆಂದು ಸುಖದ ಸಾಧ್ಯತೆಯನ್ನೇ ಅಲ್ಲಗಳೆಯುವದಕ್ಕಿಂತ ಅದರ ಬಗ್ಗೆ ದೂರದೃಷ್ಟಿಯ ಕಲ್ಪನೆಯನ್ನು ಇಟ್ಟುಕೊಳ್ಳುವುದು ಉತ್ತಮ. ಆದರಿಂದ ಜೀವನದ ಗುರಿಗಳಲ್ಲಿ ಸುಖಕ್ಕೂ ಅದು ಸ್ಥಾನ ಕಲ್ಪಿಸಿದಂತೆ ಆಗುತ್ತದೆ. ಈ ಕ್ಷಣದ ಮತ್ತು ದೂರದೃಷ್ಟಿಯ ಸುಖದ ವಿಷಯದಲ್ಲಿ ಪರಸ್ಪರ ಸಮತೋಲನ ಕಷ್ಟ ಸಾಧ್ಯವಾದದ್ದು. ಅದಕ್ಕೆ ತಿಳುವಳಿಕೆ ಮತ್ತು ಪ್ರಜ್ಞಾಪೂರ್ವಕ ಪ್ರಯತ್ನ ಬೇಕು. ಸುಖದ ಸಮಸ್ಯೆಯನ್ನು ನಿವಾರಿಸಿಕೊಳ್ಳಲು ಸುಖದ ಕಲ್ಪನೆಯನ್ನೇ ಕೈಬಿಡುವದೆಂದರೆ—ಸೋಂಕು ತಗುಲಿದೆ ಎಂದು ವೈದ್ಯನು ಕೈಯನ್ನೇ ಕತ್ತರಿಸಿ ತೆಗೆದಂತೆ. ಈ ಚಿಕಿತ್ಸೆಗೆ ಬುನಾದಿಯಾದ ತರ್ಕವೆಂದರೆ ಕೈಯೇ ಇಲ್ಲದಿದ್ದರೆ ಸೋವೂ ಇರಲಾರದಲ್ಲ ?

ಸುಖದ ಔಚಿತ್ಯಪೂರ್ಣ ಅನುಸಂಧಾನವು ಹೊಸಮತದ ಆಕಾಂಕ್ಷೆಯಾಗಿರುತ್ತದೆ.

"Happiness : Now Care and Future care"
ಎಡ್ವರ್ಡ್ ಡಿಬೋನೋನ *The Happiness Purpose* ದಿಂದ.

ಸಾವಿನ ಬೊಗಸೆಯಲ್ಲಿ ಹೂಬಿಟ್ಟ ಕಾವ್ಯ

○ ಬಿ. ಎನ್. ಶಾಂತ

ಮುಂಬಯಿಯ ಅಪ್ರೋಲೋ ಬಂದರ್. ಸಂಜೆಯ ಸೂರ್ಯ ಬಣ್ಣ ಬಳಿಯುತ್ತಿದ್ದ. ಸಮುದ್ರ ಎಲ್ಲವನ್ನೂ ಹೀರಿಕೊಳ್ಳುತ್ತಿತ್ತು. ತಂಗಾಳಿ ಹಿತವಾಗಿ ಬೀಸುತ್ತಿತ್ತು. ಕಲಕತ್ತೆಯ ಚಹಾ ವ್ಯಾಪಾರಿ ಗೋರ್ಡಾನ್ ಫಾಕ್ಸ್ ಎಲ್ಲ ಕೆಲಸಗಳನ್ನು ಮುಗಿಸಿಕೊಂಡು ಅಪೊಲೊ ಬಂದರ್ ಬಳಿಯಿದ್ದ ತನ್ನ ಹೋಟೆಲಿಗೆ ಮರಳುತ್ತಿದ್ದ. ಗಾಳಿಯಲ್ಲಿ ತೇಲಾಡಿ ಬಂದ ಹಾಳೆಯೊಂದು ಫಾಕ್ಸ್‌ನ ಕಾಲಿಗೆ ತಾಕಿತು. ಯಾಂತ್ರಿಕವಾಗಿ ಎತ್ತಿಕೊಂಡು ಕಣ್ಣಾಡಿಸಿದ ಫಾಕ್ಸ್ :

"ಸಾವೇ
ನೀನಾರು
ಎಲ್ಲಿಂದ ಬಂದಿ ?
ನನ್ನನ್ನೆಲ್ಲಿಗೆ ಕರೆದೊಯ್ಯುವಿ ?
ದಾರಿ ಬಲುದೂರವೆ
ಕಗ್ಗತ್ತಲು ಕವಿದಿದೆಯೆ ?

....
....
...."

ಫಾಕ್ಸ್ ಹಾಳೆಯನ್ನು ತಿರುವಿ ತಿರುವಿ ನೋಡಿದ. ಅದು Illustrated weekly ಯ ಹಾಳೆ. ಪದ್ಯವನ್ನು ಮತ್ತೆ ಓದಿದ. ಹಿಡಿದು ಅಲ್ಲಾಡಿಸುವ ಸಾಲುಗಳು. ಸರಳ, ನೇರ ತುಡಿದ ಭಾವಗಳು. ಓದಿದಂತೆಲ್ಲ ಫಾಕ್ಸ್ ಕರಗಿ ಹೋದ, ವಿಸ್ಮಯಗೊಂಡ. ಹಾಳೆಯಲ್ಲಿದ್ದ ಪದ್ಯಗಳು ಅವನನ್ನು ಇಡೀ ಆವರಿಸಿಬಿಟ್ಟಿದ್ದವು. ಇನ್ನಷ್ಟು ಪದ್ಯಗಳನ್ನು ಓದುವ ಹಂಬಲ ಹುಚ್ಚಾಗಿ weekly ಯ ಸಂಪಾದಕರನ್ನು ಭೇಟಿ ಮಾಡಿದ. ವಿವರ ಕೇಳಿದ. ಪುಸ್ತಕ ಪ್ರಕಟಿಸುವ ಆಸೆ ತಿಳಿಸಿದ.

ಹೀಗೆ ಫಾಕ್ಸ್‌ನನ್ನು ಪದ್ಯಗಳ ಮೂಲಕ ಕಾಡಿದ ಹುಡುಗಿ ಬೇರಾರು ಅಲ್ಲ– **ಗೀತಾಂಜಲಿ**. **ಗೀತಾಂಜಲಿ** ರವೀಂದ್ರನಾಥ ಠಾಕೂರರ ಹೆಸರಾಂತ ಕವನ ಸಂಕಲನ. ಆದರೆ ಇಲ್ಲಿನ ಈ ಹುಡುಗಿ ಆ ಹೆಸರನ್ನು ಹೊತ್ತ ಒಂದು ಪುಟ್ಟ ಕಾವ್ಯ ಚಿಲುಮೆ. ನಿಜಕ್ಕೂ ಈ ಹುಡುಗಿ ತನ್ನ ಪುಟ್ಟ ಬೊಗಸೆಗಳ ತುಂಬ ಹಾಡನ್ನೇ ತುಂಬಿಕೊಂಡಿದ್ದಳು. ಫಾಕ್ಸ್ ಈ ಬೊಗಸೆಯನ್ನು ಕಂಡದ್ದು ಕೇವಲ ಆಕಸ್ಮಿಕ.

ವಿಚಿತ್ರ ಎಂದರೆ ಗೀತಾಂಜಲಿಯ ಪದ್ಯಗಳೆಲ್ಲ ಪ್ರಕಟಣೆಗೆಂದು ನೀಟಾಗಿ ಫೈಲಲ್ಲಿ ಜೋಡಿಸಿಟ್ಟ ರೀತಿಯಲ್ಲಿರಲಿಲ್ಲ. ಹಾಸಿಗೆಯಡಿ, ದಿಂಬಿನ ಕವರಿನೊಳಗೆ, ಬೀರುವಿನ ಗೊಂಬೆಗಳ ಹಿಂದೆ, ಅವಳ ಹಳೆಯ ಲಂಗಗಳ ಜೇಬಿನೊಳಗೆ ಹೀಗೆ ಎಲ್ಲೆಲ್ಲೂ ಸಿಕ್ಕಂತವು. ಇವುಗಳನ್ನು ಒಟ್ಟುಮಾಡಿ ಜೋಡಿಸಿ ಪ್ರಕಾಶಕ ಫಾಕ್ಸ್‌ಗೆ ತಲುಪಿಸಿದವಳು ಗೀತಾಂಜಲಿಯ ತಾಯಿ ಕೌಶಿ ಬದರುದ್ದೀನ್.

ಎಂಥ ಓದುಗರನ್ನೂ ತನ್ನ ಸುಂದರ, ಸರಳ ಪದ್ಯಗಳಿಂದ ಬೆಚ್ಚಿಬೀಳಿಸುವ, ಆಕರ್ಷಿಸುವ ಗೀತಾಂಜಲಿ ಹದಿನಾರು ವರ್ಷದ ಪುಟ್ಟ ಬಾಲೆ. 1961 ರಲ್ಲಿ ಮೀರತ್‌ನಲ್ಲಿ ಹುಟ್ಟಿದ ಈ ಹುಡುಗಿ 1977 ರಲ್ಲಿ ಬಾಂಬೆಯಲ್ಲಿ ಕ್ಯಾನ್ಸರ್‌ನಿಂದ ಸತ್ತಳು. ನಾವು ನೀವೆಲ್ಲ ನೋಡುವ ನೂರಾರು ಸರಳ ಹುಡುಗಿಯರಂತೆ ಆಕೆಯೂ ಒಬ್ಬಳು. ತನ್ನ ಗೆಳೆಯ ಗೆಳತಿಯರೊಂದಿಗೆ ಶಾಲೆಯಲ್ಲಿ, ಅಂಗಳದಲ್ಲಿ ಕುಣಿದು ಕುಪ್ಪಳಿಸುವ, ಕುಂಟಾಬಿಲ್ಲೆಯಾಡುವ ಎಳೆಯ ವಯಸ್ಸಲ್ಲಿ ಸಾವಿನ ಬಗ್ಗೆ ಚಿಂತಿಸತೊಡಗಿದ್ದು ನಿಜಕ್ಕೂ ಬದುಕಿನ ವಿಪರ್ಯಾಸ. ತನ್ನನ್ನು ಕಬಳಿಸಿಬಿಡುವ ಕಾಯಿಲೆ ಬಂದದ್ದು ಗೊತ್ತಾದಾಗ ಈ ಹುಡುಗಿ ತನ್ನೆಲ್ಲ ಯಾತನೆಯನ್ನು ಖುಷಿ, ಕಾತರ, ಭಯಗಳನ್ನು ಶಬ್ದಗಳಲ್ಲಿ ಹಿಡಿಯಲು ಯತ್ನಿಸಿದಳು. ಅನುಭವದ ತೀವ್ರತೆಯಿಂದ ತುಡಿಯುತ್ತಿದ್ದ ಈ ಶಬ್ದಗಳು, ಸಾಲುಗಳು ಅವಳ ಅಂತರಾಳದಿಂದ ಹೊಮ್ಮಿದ ಹಾಡುಗಳಾದವು. ಗೀತಾಂಜಲಿ ಹೀಗೆ ಬಿಟ್ಟುಹೋಗಿರುವ ಹಾಡುಗಳು ಒಂದಲ್ಲ, ಎರಡಲ್ಲ, ನೂರಾರು. ಒಂದೊಂದೂ ನಮ್ಮನ್ನು ಗಾಢವಾಗಿ ಕಲಕುತ್ತದೆ, ಅಚ್ಚರಿಗೊಳಿಸುತ್ತದೆ, ಚಿಂತನೆಗೆ ಹಚ್ಚುತ್ತದೆ.

ಗೀತಾಂಜಲಿಯ ಆಲೋಚನೆಗಳು, ಅವಳೆತ್ತುವ ಪ್ರಶ್ನೆಗಳು, ಸಾವು ಬದುಕಿನ ಅಂತರವನ್ನು ತಿಳಿಸುವ ಅವಳ ಅನಿಸಿಕೆಗಳು ನಮ್ಮನ್ನು ದಿಜ್ಮೂಢರನ್ನಾಗಿ ಮಾಡುತ್ತವೆ. ಇಷ್ಟು ಪುಟ್ಟ ಹುಡುಗಿ ಇಂಥದೆಲ್ಲ ಬರೆಯಲು ಸಾಧ್ಯವೆ ಎಂದು ಹುಬ್ಬೇರಿಸುವಂತಾಗುತ್ತದೆ. ಸಾವು ಬಂದು ನಮ್ಮೆದುರು ಧುತ್ತೆಂದು ನಿಂತಂತೆ ಭಾಸವಾಗುತ್ತದೆ.

ಗೀತಾಂಜಲಿಯ ಪದ್ಯಗಳಲ್ಲಿ ಕಾವ್ಯಾತ್ಮಕ ಗುಣ (Poetic elements) ನಮಗೆ ಸಿಕ್ಕದಿರಬಹುದು. ಅಚ್ಚುಕಟ್ಟಾದ ಬಂಧ, ರೂಪ, ಶೈಲಿ, ಪ್ರಾಸ, ತಕ್ಕ ವಿರಾಮ ಚಿಹ್ನೆ, ಇವಾವುವು ಇಲ್ಲದೆ ಪದ್ಯವಾಗಿಲ್ಲ ಎಂದು ವಿಮರ್ಶಾಬುದ್ಧಿ ಹೇಳಬಹುದು. ಆದರೆ ಅವಳ ಪದ್ಯಗಳಲ್ಲಿರುವ ಸರಳತೆ, ಪ್ರಾಮಾಣಿಕತೆ, ತೀವ್ರತೆ, ತುಡಿತ, ಅದ್ಭುತ ಜೀವಂತಿಕೆ, ಲವಲವಿಕೆ, ಮೋಡಿಗಳಿಗೆ ನಾವು ಮಾರುಹೋಗಲೇಬೇಕಾಗುತ್ತದೆ.

ಗೀತಾಂಜಲಿಗೆ ತನ್ನ ಈ ಪದ್ಯಗಳು ಪ್ರಕಟವಾಗುತ್ತವೆ, ಪುಸ್ತಕದ ರೂಪದಲ್ಲಿ ಹೊರಬರುತ್ತವೆ ಎಂಬುದು ಗೊತ್ತಿತ್ತೊ, ಇಲ್ಲವೊ. ಇದಾವುದರ ಪರಿವೆಯಿಲ್ಲದೆ ಕೇವಲ ತನ್ನ ನೋವನ್ನು ಮೌನವಾಗಿ ಅನುಭವಿಸಿ, ಒಂಟಿತನದ ಯಾತನೆಯನ್ನು ಉಂಡು, ಸಾವಿನ ನೆರಳಿನಲ್ಲಿಯೇ ತಾವು ಕಳೆದ ಸುಂದರ ದಿವಗಳ ನೆನಪುಗಳನ್ನು ಮೆಲುಕು ಹಾಕಿ ತನ್ನ ಕಾವ್ಯವನ್ನು ರೂಪಿಸಿದಳು.

"ಪ್ರತಿ ಸಂಜೆ
ಹಗಲು
ಕೆಂಧೂಳಿಯನು
ಸಂಧಿಸುವ ಹೊತ್ತು
ಕಿಟಕಿಯ ಬಳಿ
ಕುಳಿತು
ನೋಡುತ್ತೇನೆ
ಮುಳುಗುವ ಸೂರ್ಯನನ್ನು

....

...."

ಹೀಗೆ ತನ್ನ ಕೋಣೆಯ ಕಿಟಕಿಯ ಮೂಲಕ ಹೊರಜಗತ್ತಿನ ಸಂಪರ್ಕ ಪಡೆದು ಅಲ್ಲಿ ಕಂಡ ಸೂರ್ಯ, ಚುಕ್ಕಿ, ಚಂದ್ರ, ಗಿಡ, ಮರ, ಕಡಲನ್ನು ತನ್ನ ಕೈಗಳಿಂದ ಬಾಚಿ ತಬ್ಬಿ ಹಿಡಿದಿರುವುದು, ಇನ್ನೊಂದು ಅರ್ಥದಲ್ಲಿ ತನ್ನ ಸುತ್ತಲಿನ ಜಗತ್ತಿನ ಚೆಲುವನ್ನು ಹಿಡಿದಿಟ್ಟಿರುವುದು ಗೀತಾಂಜಲಿ ಪದ್ಯಗಳ ಕಾವ್ಯಶರೀರವಾಗಿದೆ. ಈ ಚುಕ್ಕಿ, ಚಂದ್ರ, ಗಿಡ—ಮರಗಳೊಂದಿಗೆ ನಾವೆಲ್ಲ ಸ್ನೇಹಿತರೊಂದಿಗೆ ಹಂಚಿಕೊಳ್ಳುವಂತೆ ಈ ಹುಡುಗಿ ತನ್ನೆಲ್ಲ ಭಾವನೆಗಳನ್ನು ಹಂಚಿಕೊಂಡದ್ದು, ಸಾವಿನ ಭಯ ಮರೆಯಲು ಯತ್ನಿಸಿದ್ದು, ಬದುಕಿನಾರಾಧನೆಗೆ ತೊಡಗಿದ್ದು ಈ ಪದ್ಯಗಳಲ್ಲಿ ದಾಖಲಾಗಿದೆ.

ಕಲಾವಿದರ, ಬರಹಗಾರರ, ಚಿಂತಕರ ಅಭಿವ್ಯಕ್ತಿಗಳಿಗೆ ಗಾಢತೆಯನ್ನು, ತೀವ್ರತೆಯನ್ನು, ಅರ್ಥವಂತಿಕೆಯನ್ನು ತಂದುಕೊಡುವ ಸಾವು ಈ ಪುಟ್ಟ ಬಾಲಕಿಯ ಪದ್ಯಗಳಲ್ಲೂ ಅದನ್ನೇ ತುಂಬಿದೆ.

ಸಾವಿನ ನೆರಳಲ್ಲಿ ಬದುಕಿನಾರಾಧನೆ, ಒಂಟಿತನದ ಯಾತನೆಯ ಕ್ಷಣಗಳಲ್ಲೂ ಬದುಕಿನ ಚೆಲುವಿಗೆ ಮುಖಮಾಡಿ ನಿಲ್ಲುವ ಹಠ–ಇವು ಗೀತಾಂಜಲಿಯ ಪದ್ಯಗಳು ನಮಗೆ ತಲುಪಿಸುವ ಸಂದೇಶ.

"**Poems of Geetanjali**" ಸಂಗ್ರಹದಿಂದ ಆಯ್ದು ಅನುವಾದಿಸಿದ ಕೆಲವು ಪದ್ಯಗಳು ಇಲ್ಲಿವೆ.

ಅರೆತೆರೆದ - ಕಿಟಕಿ

೧

ನಿನ್ನೆ ರಾತ್ರಿ
ಚಂದ್ರ
ನನ್ನ ಭೆಟ್ಟಿಯಾಗಿದ್ದ
ಅರೆತೆರೆದ
ಕಿಟಕಿಯ
ಮೂಲಕ.

ಯಾಕೋ
ದುಃಖಿತನಾಗಿ, ಬಳಲಿದಂತೆ
ಕಂಡ.
ಕೂಡಲೆ ಮೋಡದಲ್ಲಿ
ಮರೆಯಾದ
ಮೋಡ ಪಾರದರ್ಶಕವಾಗಿತ್ತು
ನಾನದೆಲ್ಲ ನೋಡಿಬಿಟ್ಟೆ.

ಬಾಲ್ಯದ ನೆನಪುಗಳು
ಧುಮ್ಮಿಕ್ಕುತ್ತ ಬಂದವು.......
ಜೊತೆಗೆ
ಮಗುವಾಗಿದ್ದಾಗ
ನನ್ನನ್ನು ತಾಯಿ
ಕಂಕುಳಲ್ಲೆತ್ತಿಕೊಂಡು
ನನ್ನ ಖುಷಿಪಡಿಸಲು
ಚಂದ್ರನತ್ತ ಬೊಟ್ಟುಮಾಡಿ ತೋರಿದ್ದು.

ಕಣ್ಣೀರು
ಹರಿದು ಹೋಗುವ ಬದಲು

ಫಳಫಳಿಸಿದವು.
ನಾನು
ಕನಸಿನ ನಾಡಿನತ್ತ
ಮುಗುಳ್ನಗುವೆ.

ಎಷ್ಟೊಂದು ಆಶಿಸುವೆ
ನಾನು ಪುನಃ
ಮಗುವಾಗುವಂತಿದ್ದರೆ
ನೀನು —ಚಂದ್ರ,
ಕಳೆದುಹೋದ ದಿನಗಳ
ಅದೇ ಮಾಂತ್ರಿಕನಾಗಿದ್ದರೆ !

ಹಕ್ಕಿಯೊಂದ ಹಾರುವುದ ಕೇಳಿದೆ

೨

ಇದ್ದಕ್ಕಿದ್ದಂತೆ
ಕಳೆದ ರಾತ್ರಿ ಮಳೆ ಸುರಿಯಿತು.
ಹೊರಗಡೆ ಹಕ್ಕಿಯೊಂದು
ಹಾಡುವುದ ಕೇಳಿದೆ.

ಅಂದುಕೊಂಡೆ, ಗೆಳೆಯ
ನಿನ್ನ ಭಾಷೆ ನನಗೆ
ಅರ್ಥವಾಗುವಂತಿದ್ದರೆ

ರಾತ್ರಿ
ಗಾಳಿಯಿಂದಾಗಿ ಚಳಿಯಿತ್ತು :
ಬಹುಶಃ ನಿನ್ನ

ಗೂಡಿನಲ್ಲಿಯು ಬಿಸಿ
ಸಾಲದಾಯಿತೇನೋ ನಿನಗೆ,
ಸಹಾಯಕ್ಕಾಗಿ ಸಂಗಾತಿಯನ್ನು
ಕರೆಯಲು ನೀನು ಹಾಡುತ್ತಿದ್ದಿ.

ನಿನ್ನ ಹಾಡು ನಿಂತ
ಎಷ್ಟೋ ಹೊತ್ತಿನ ಮೇಲೆ,
ನಿನ್ನ ಬಗ್ಗೆ ಯೋಚಿಸಿದೆ
ಆಶ್ಚರ್ಯದಿಂದ........
ನಿನ್ನ ಹಾಡು
ಅದು ಸುಖದ ಹಾಡೇ
ಅಥವಾ ನಿನ್ನ ದುಃಖದ ಬಗ್ಗೆ
ಹಾಡುತ್ತಿದೆಯೊ
ಏನೇ ಆಗಲಿ
ಗೆಳೆಯ, ನಿನ್ನಿಂದ
ನಾನೀಗ ಪಾಠ ಕಲಿತಿರುವೆ :
ನಾನು ಹುಷಾರಿಲ್ಲ
ಎಂದ ಮಾತ್ರಕ್ಕೆ ಹಾಡುವುದೇಕೆ
ನಿಲ್ಲಿಸಬೇಕು.

ಹಾಡು
ಬಿರುಗಾಳಿಯನ್ನು ತಣ್ಣಗಾಗಿಸಬಹುದು
ಸಂತೋಷ ಅರಳಿಸಬಹುದು
ಅನುಮಾನ, ಭಯಗಳ
ಹೊಡೆದೋಡಿಸಬಹುದು.

ನನ್ನಲ್ಲಿರುವುದು ಬರೀ ನೆನಪುಗಳು

೩

ಪ್ರತಿ ಮುಂಜಾನೆ
ಜಗತ್ತನ್ನು
ಸ್ವಾಗತಿಸುವಾಗ
ನನ್ನ ಹೃದಯ ಹಿಂಡುತ್ತದೆ.
ಕಣ್ಣುಗಳಲ್ಲಿ ನೀರು ತುಂಬುತ್ತದೆ.

ಭೂತ-ವರ್ತಮಾನಗಳನ್ನು
ನೆನೆದಂತೆ
ಒಂದು ಕ್ಷಣ
ಕಾಲ ಸ್ತಬ್ಧವಾಗುತ್ತದೆ
ನೆನಪಿನ
ಸ್ಪ್ರಿಂಗ್ ಬೋರ್ಡಿನಿಂದ
ಮನಸ್ಸಿಗೆ ಧುಮುಕುತ್ತವೆ
ಎಷ್ಟೋ ನೆನಪುಗಳು
ಕೆಲವು ಸುಖದವು
ಕೆಲವು ತೀರ ನೋವಿನವು
ಇಷ್ಟಿಷ್ಟೆ ನನಗಿರುವ ನೆನಪುಗಳು
ಅವುಗಳಿಂದಲೇ ಸಂಭ್ರಮಿಸುತ್ತ,
ಅವನ್ನೆ ಅವಲಂಬಿಸುತ್ತ
ಅವುಗಳಿಂದಲೇ ಜೀವಿಸುತ್ತಿರುವೆ
ನಾನು ಸಾಯಬಹುದು..........

ಸಾಯಿ ಎಂದು ಹೇಳಿದನೇ ನಾನು ?
ಓಹ್ ಇಲ್ಲ ! ಇಲ್ಲ ಪ್ರಿಯ ದೇವರೇ,
ದಯವಿಟ್ಟು ನನ್ನ ಬದುಕಲು ಬಿಡು
ಪ್ರಿಯಅಮ್ಮ ಗಟ್ಟಿಯಾಗಿ ಹಿಡಿದುಕೊ ನನ್ನ

ದುಃಖದಾಳಕ್ಕೆ ಮುಳುಗಲು
ನನ್ನ ಬಿಡಬೇಡ
ಮಾತು ಕೊಡುವೆ
ಇನ್ನೆಂದು ಹತಾಶೆಯಿಂದ ಮಾತಾಡುವುದಿಲ್ಲ.

ನೋವಿನ ಪಾತಾಳಕ್ಕೆ
ಗಾಢ ಯಾತನೆಗೆ, ದುಃಖಕ್ಕೆ
ಸಾಗಿದ್ದರೂ....
ಪ್ರಿಯ ದೇವರೇ ನಿನ್ನ ಬೇಡುತ್ತೇನೆ
"ದಯವಿಟ್ಟು ನನ್ನ ಬದುಕಲು ಬಿಡು".

ನನ್ನ ಕಣ್ಣೀರು ಹರಿಯುತ್ತೆ
ನಿಧಾನವಾಗಿ ಜೋರಾಗಿ, ಸಲೀಸಾಗಿ
ನನ್ನ ಅಂಜುಕುಳಿ ಹೃದಯ
ಮಂಕಾಗಿ ಗೊಣಗುತ್ತೆ
ಧೈರ್ಯದ ಮಾತು ಕೊಡುತ್ತೇನೆ
ಇನ್ನೆಂದೂ ಸ್ವಮರುಕದಲ್ಲಿ
ಮುಳುಗುವುದಿಲ್ಲ.

ಬಾಡುತ್ತಿರುವ ದಿನಮಣಿಯ
ಕೊನೆಯ ಕಿರಣಗಳನ್ನು
ಹಿಡಿಯಲು ನನ್ನ ನೋವಿನ
ಕಣ್ಣುಗಳನ್ನು ಎತ್ತುತ್ತೇನೆ
ಆತ ಮತ್ತೆ ಬರಬಹುದೆಂದು
ನನ್ನ ಎದುರುಗೊಳ್ಳಬಹುದೆಂದು
ನನ್ನ ಭಗ್ನ ಹೃದಯಕ್ಕೆ
ಕಾವು ಕೊಡಬಹುದೆಂದು
ಆಶಿಸುತ್ತಾ.

ಎರಗುತ್ತಿದೆ ಬಿರುಗಾಳಿ

೪

ಶಾಂತವಾಗಿ, ಸ್ತಬ್ಧವಾಗಿ
ಕಾಣುತ್ತಿದೆ ಕಡಲು.
ಆದರೂ,
ಚುಕ್ಕೆ ಚೆಲ್ಲಿದ
ಆಕಾಶದಲ್ಲಿ
ಗುಡುಗು ಇದೆ.
ಮೋಡಗಳಂಚಿನ ಸುತ್ತ
ಬೆಳ್ಳಿ ಪರದೆಯ ಹಿಂದೆ
ಹತ್ತಿರದಲ್ಲೆಲ್ಲೊ
ಚಂದ್ರನಿದ್ದಾನೆ
ನಾ ಬಲ್ಲೆ ಆದನ್ನು...............

ಮಿಂಚು
ಫಳ್ಳೆಂದಿದೆ,
ತುಸು ಮೊದಲು
ಗುಡುಗು ಮತ್ತೆ
ಸಿಂಹದಂತೆ ಗರ್ಜಿಸಿದೆ.
ಎರಗುತ್ತಿದೆ
ಅದೆಂಥ ಬಿರುಗಾಳಿ!
ನನಗೆ ಗೊತ್ತೂ ಇಲ್ಲ,
ಹೇಳಲೂ ಬರುತ್ತಿಲ್ಲ,
ಯಾಕೆ.
ಅದರ ಪರಿಣಾಮ
ಮನ ಕಲಕುತ್ತಿದೆ
ಕಾರಣ ನನ್ನ ಹೃದಯದಲ್ಲಿ
ಎಲ್ಲವೂ ಶಾಂತವಾಗಿದೆ.

ವಿದಾಯ

೨೩

ನೀನೆನಗೆ ಕೈಬೀಸಿ
ವಿದಾಯ ಹೇಳಲಿಲ್ಲ.
ನೀ ನನ್ನ ಕಣ್ಣಲ್ಲಿ
ಕಣ್ಣಿಟ್ಟು ನೋಡಲಿಲ್ಲ.

ನಾನು ಉಸಿರು
ಬಿಗಿ ಹಿಡಿದಾಗ
ನೀನು ಸುಮ್ಮನೆ
ಹಿಂದೆ ಸರಿದು ಬಿಟ್ಟೆ.

ನನ್ನನ್ನು ಹೀಗೆ ಬಿಟ್ಟು
ನೀನು ಹೊರಟು ಹೋಗಿ ಬಿಟ್ಟೆ..........
ನಿರ್ಜನ ಪ್ರದೇಶಕ್ಕೆ.
ಒಂದು ಹನಿ ಕಣ್ಣೀರಿಲ್ಲ
ಒಂದು ನಿಟ್ಟುಸಿರಿಲ್ಲ.

ಅಯ್ಯೋ

೭

ವಿಶ್ರಾಂತಿಗೆಂದು
ಅಡ್ಡಾಗಿರುವ ಈ
ನನ್ನ ಹಾಸಿಗೆಯ ಪಕ್ಕ
ಎಣ್ಣೆ ದೀಪವೊಂದು
ನೋವಿನಿಂದ ಉರಿಯುತ್ತಿದೆ.

ನನ್ನ ಸುತ್ತ ಸುಳಿದಾಡುತ್ತಿರುವ
ಮುಖಗಳಲ್ಲಿನ ಸಂಕಟವನ್ನು
ನೋಡುತ್ತೇನೆ,
ಸಾವು ಯಾವಾಗ ಬಂದೆರಗಬಹುದೆಂದು
ತಿಳಿಯದೆ.

ನನ್ನ ನುಂಗಲು
ಸಾವು ಕಾಯುತ್ತಿದ್ದರೂ
ನಾನೇನು ಹೆದರುತ್ತಿಲ್ಲ
ತೋಳು ತೆರೆದು
ಅವಳನ್ನು ಸ್ವಾಗತಿಸುತ್ತೇನೆ.
ಅಯ್ಯೋ,
ಕೊಡಲು ನನ್ನಲ್ಲಿ ಉಳಿದಿರುವುದು
ಬರಿಯ ಕಣ್ಣೀರು
ಮತ್ತು
ನನ್ನ ಬರಡು ದೇಹ.

ಸಿಸಿರೊ

ಎಂ. ಎಸ್. ಕೆ. ಪ್ರಭು

ಸಿಸಿರೊ ಎಂ. ಎಸ್. ಕೆ. ಪ್ರಭು ಇತ್ತೀಚೆಗೆ ಬರೆದಿರುವ ಇನ್ನೂ ಪ್ರಕಟವಾಗಬೇಕಿರುವ ಪೂರ್ಣ ಪ್ರಮಾಣದ ನಾಟಕ. ರೋಮ್ ಸಾಮ್ರಾಜ್ಯದ ರಾಜಕಾರಣದಲ್ಲಿ ಸಕ್ರಿಯವಾಗಿ ಭಾಗ ವಹಿಸಿದ 'ಬುದ್ಧಿಜೀವಿ' ಸಿಸಿರೊನ ದುರಂತದ ಸುತ್ತ ರಚಿತವಾಗಿರುವ ಈ ನಾಟಕ ಸಮಕಾಲೀನ ರಾಜಕಾರಣ ಹಾಗೂ ಬುದ್ಧಿಜೀವಿಗಳ ದುರಂತವನ್ನು ಧ್ವನಿಸಬಲ್ಲುದಾಗಿದೆ.

ಇಲ್ಲಿ 'ಸಂವಾದ'ದ ಓದುಗರಿಗಾಗಿ ಈ ನಾಟಕದ ಮೊದಲಂಕವನ್ನು ಪ್ರಕಟಿಸುತ್ತಿದ್ದೇವೆ. ಇಡೀ ನಾಟಕದ ಸಂರಚನೆ ಹಾಗೂ ಓಘವನ್ನು ಪರಿಚಯಿಸುವ ಈ ಅಂಕ ನಾಟಕದ ಒಂದು ಭಾಗ ಹೇಗೋ ತನ್ನದೇ ಅರ್ಥ ಹೊರಡಿಸುವ ಒಂದು ಸ್ವತಂತ್ರ ತುಣುಕೂ ಆಗಿದೆ.

ಅಂಕ : ಒಂದು

ಸಿಸೆರೋನ ಮನೆ, ಕೆಟಲಸ್, ರುಫಸ್, ಲುಕ್ಸಿಯಸ್, ಲಿಟಿಕಸ್, ಕ್ವಿಂಟಸ್ ಸೌಹಾರ್ದ ಕೂಟದಲ್ಲಿ ಭಾಗವಹಿಸುತ್ತಿದ್ದಾರೆ

ಕೆಟಲಸ್ : ಇದೊಂದು ಕವನ ಕೇಳಿ.... ಬಹುಶಃ ಸಿಸೆರೊ, ನನ್ನ ಮೇಲೆ ಅಸೂಯೆ ಪಡಬಹುದು....

ಸಿಸೆರೋ : ಇರಲಿ ಕೆಟಲಸ್, ಮೊದಲು ಪದ್ಯ ಹೇಳು, ಕೇಳೋಣ. ಅಸೂಯೆ ಪಡ್ತೀನೋ ಅಭಿಮಾನ ಪಡ್ತೀನೋ ಆಮೇಲೆ ನೀನೇ ನೋಡು....

ಕೆಟಲಸ್ : ಅಯ್ಯೋ ಸಿಸೆರೋ ಮಹಾಶಯ, ಅಸೂಯೆನಾದ್ರೂ ಪಡು. ಅಭಿಮಾನ ಆದ್ರೂ ತೋರಿಸು, ಆದರೆ ನನ್ನ ಮೇಲೆ ಕರುಣೆ ಇಟ್ಟು, ವಿಮರ್ಶೆ ಮಾತ್ರ ಮಾಡಬೇಡ....

(ಎಲ್ಲರೂ ನಗುತ್ತಾರೆ)

ಸಿಸೆರೋ : ನನ್ನ ವಿಮರ್ಶೆಗೆ ನೀನು .... ರೋಮನ್ ಚಕ್ರಾಧಿಪತ್ಯದ ಸರ್ವೋತ್ತಮ ಕವಿ ಕೆಟಲಸ್ ಇಷ್ಟೊಂದು ಹೆದರಿಕೆ ಪಡೋದನ್ನ ನೋಡಿ, ನನ್ನ ಗೆಳೆಯನಾದ ನೀನು ಬರೆದ ಕವಿತೆ ಮೆಚ್ಚಿಕೊಂಡು ನಿನ್ನ ಮೇಲೆ ಅಭಿಮಾನ ಪಡೋದಕ್ಕಿಂತ ಹೆಚ್ಚಾಗಿ, ನನ್ನ ಬೌದ್ಧಿಕ ಸಾಮರ್ಥ್ಯದ ಬಗ್ಗೇನೇ ಅಭಿಮಾನ ಅನ್ನಿಸ್ತಿದೆ.

ಕೆಟಲಸ್ : ನಿನ್ನ ಮೇಲೆ ನಿನಗೆ ಅಭಿಮಾನ ಇರೋದು, ಅದೂ ಸ್ವಲ್ಪ ಜಾಸ್ತೀನೇ ಇರೋದು.... ನಮಗೇನೂ ಹೊಸ ವಿಷಯ ಅಲ್ಲವಲ್ಲಾ ಸಿಸೆರೋ....

ರುಫಸ್ : ಸಿಸೆರೋ ಅಂದ್ರೆ ಆತ್ಮಾಭಿಮಾನಕ್ಕೆ ಮತ್ತೊಂದು ಹೆಸರಲ್ಲವೆ ?

ಕೆಟಲಸ್ : ಹೌದು ರುಫಸ್ ಅಭಿಮಾನ ಹೀನರು ಅಂದ್ರೆ ನಾವೇ .... ಯಃಕಶ್ಚಿತ್ ಕ್ಲೋಡಿಯಾ ಕೈಯಲ್ಲಿ ಸಿಕ್ಕಿ ಮೋಸ ಹೋದವರು

ಸಿಸೆರೋ : ಏನದು ಕೆಟಲಸ್ ನೀನು ಹೇಳೋದು ? "ಅಭಿಮಾನ ಹೀನರು ಅಂದ್ರೆ ನಾವೇ" ಅಂದ್ಯಲ್ಲ ? ಅಂದ್ರೆ, ನೀನಲ್ಲದೆ ಇನ್ನೊಬ್ಬರು ಯಾರು ಆ ಸಾಹಸಿ, ಪಿಶಾಚಿಯ ಕೈಯಲ್ಲಿ ಸಿಕ್ಕಿದ್ದು ? ಅಂದ್ರೆ .. ಇಲ್ಲಿ ಇರೋರ ಪೈಕಿ ಯಾರು ಅಂತ ನನ್ನ ಜಿಜ್ಞಾಸೆ....

ಕೆಟಲಸ್ : (ಗಂಟಲು ಸರಿಪಡಿಸಿಕೊಳ್ಳುತ್ತ) ಅಂದ್ರೆ, ನಿನ್ನ ಶಿಷ್ಯನ ದುರಂತ ನಿನ್ನ ಗಮನಕ್ಕಿನ್ನೂ ಬಂದಿಲ್ಲ, ಸಿಸೆರೋ ?

ಸಿಸೆರೋ : ರುಫಸ್, ಏನು ಸಮಾಚಾರ ? (ಗಂಭೀರವಾಗಿ) ನನ್ನ ಶಿಷ್ಯನಾಗಿ ನೀನು ..

ಕೆಟಲಸ್ : ಸಿಸೆರೋ .... ಇಲ್ಲಿ ಸ್ವಲ್ಪ ಕೇಳು ...

ಸಿಸೆರೋ : ನಾನು ಒಬ್ಬ ಬುದ್ಧಿಜೀವಿಯಾಗಿ, ಒಬ್ಬ ರಾಷ್ಟ್ರಪುರುಷನಾಗಿ, ಒಬ್ಬ ಉತ್ತಮ ವಾಗ್ಮಿಯಾಗಿ, ಒಬ್ಬ ತತ್ವಜ್ಞಾನಿಯಾಗಿ, ಒಬ್ಬ ಕವಿಯಾಗಿ, ಮನುಷ್ಯನ ನೈತಿಕ ಜೀವನಕ್ಕೆ ಬಹಳ ಮಹತ್ವ ಕೊಡುತ್ತೇನೆಂಬ ವಿಷಯ

ನಿಮಗೆಲ್ಲಾ ತಿಳಿದಿರಬೇಕು... ಲುಕ್ಸಿಯಸ್, ನೀನು ಚರಿತ್ರಕಾರ, ಇದನ್ನ ಗುರುತು ಹಾಕಿಕೋ.... ಸಿಸೆರೋ ನೈತಿಕ ಜೀವನಕ್ಕೆ ಬಹಳ ಬೆಲೆ ಕೊಡ್ತಾನೆ ....ನನ್ನ ಸ್ನೇಹಿತರು, ನನ್ನ ರಾಷ್ಟ್ರ ಬಾಂಧವರು, ನನ್ನ ಶಿಷ್ಯರು ಅನ್ನಿಸಿಕೊಂಡು ಜಗದ್ವಿಖ್ಯಾತರಾಗಬಯಸೋ ಯುವಕರು ಇದನ್ನ ಮರೀದೇ ಇರೋದು ತುಂಬ ಒಳ್ಳೇದು...

ಲುಕ್ಸಿಯಸ್ ; ಸರಿ, ಸಿಸೆರೋ.... ನೀನು ಇದನ್ನ ಬಹಳ ಸರ್ತಿ ನನಗೆ ಹೇಳಿದ್ದೀಯಲ್ಲ.... ನನ್ನ ಟಿಪ್ಪಣಿ ಪುಸ್ತಕದಲ್ಲಿ ಇದು ಆಗಲೇ ಬಂದಿದೆ ...

ಸಿಸೆರೋ ; ಆದ್ರೂ ಪರವಾಗಿಲ್ಲ; ಇನ್ನೊಮ್ಮೆ ಬರ್ಕೊ.... ಮುಖ್ಯವಾದ ವ್ಯಕ್ತಿಗಳ ಬಗ್ಗೆ ಮುಖ್ಯವಾದ ವಿಷಯಗಳನ್ನ ಪದೇ ಪದೇ ಬರೆದುಕೊಂಡು ನೆನಪಿಟ್ಟುಕೊಂಡರೆ ತಪ್ಪೇನಿಲ್ಲ . ಸರಿ; ರುಫಸ್, ಏನು ವಿಷಯ ?

ರುಫಸ್ ; (ಗಂಟಲು ಸರಿಪಡಿಸಿಕೊಂಡು) ಏನಿಲ್ಲ.... ಮೊನ್ನೆ ನಾಟಕ ನೋಡೋಕೆ ಹೋಗಿದ್ದೆ ... ಕೆಳದರ್ಜೆ ಜನ, ನೋಡೋಕೆ ಬಂದಿದ್ದೋರು ತುಂಬಾ ಗಲಾಟೆ ಮಾಡ್ತಿದ್ರು ಈ ಈ . ಕ್ಲೋಡಿಯಾ ಕೂಡ ಇದ್ದಳು. ನನ್ನ ಹತ್ರ ಬಂದು, ಏನಾದ್ರೂ ಮಾಡಿ, ಈ ಕೆಳದರ್ಜೆ ಜನ ಬಾಯಿ ಮುಚ್ಚಿಕೊಂಡಿರೋ ಹಾಗೆ ಮಾಡಿ ಅಂದಳು.... ನಾನು ಹೋಗಿ, ಆ ಜನಗಳ ಮಧ್ಯೆ ನಿಂತು ನಮ್ಮ ಸಾಂಸ್ಕೃತಿಕ ಪರಂಪರೆ, ಮೌಲ್ಯ, ಕಲಾ ಪ್ರೋತ್ಸಾಹಗಳ ಬಗ್ಗೆ ನಾಲ್ಕು ಮಾತಾಡಿ ಅವರು ನಾಚಿಕೆ ಪಟ್ಟುಕೊಳ್ಳೋ ಹಾಗೆ ಮಾಡಿದೆ.... ಆಮೇಲೆ ನಾವೆಲ್ಲಾ ನಿಶ್ಚಿಂತೆಯಿಂದ, ನೆಮ್ಮದಿಯಿಂದ ನಾಟಕ ನೋಡಿದ್ವಿ.... ನನಗೆ ಕೃತಜ್ಞತೆ ತೋರಿಸೋಕೆ ಕ್ಲೋಡಿಯಾ ತನ್ನ ಮನೇಲಿ ಒಂದು ಕೂಟ ಏರ್ಪಡಿಸಿದ್ದಳು ...

ಸಿಸೆರೋ ; ರುಫಸ್, ನಾನು ಹೇಳ್ತಿದೀನಿ, ಗಮನ ಇಟ್ಟು ಕೇಳು.... ನೀನು ನಾಟಕ ಗೃಹದಲ್ಲಿ ಮಾಡಿದ ಕೆಲಸ ನನಗೆ ಮೆಚ್ಚಿಗೆಯಾಗಿದೆ.... ಆದ್ರೆ ನೀನು ಕ್ಲೋಡಿಯಾ ಗೃಹದಲ್ಲಿ....

(ಎಲ್ಲರೂ ನಗುತ್ತಾರೆ)

ಸಿಸೆರೋ : ಇದು ನಗೋ ವಿಷಯ ಅಲ್ಲ, ನನಗೆ ಕೆಳದರ್ಜೆ ಜನಗಳ ವಿಷಯದಲ್ಲಿ ಅನುಕಂಪ ಇದೆ.... ಯಾಕೇಂದ್ರೆ, ಈ ಕೆಳದರ್ಜೆ ಜನ ನಮಗೆ ಮತ ನೀಡದೆ ಇದ್ರೆ, ನಾವು ಕಾನ್ಸೈಲ್ ಆಗೋದಿಲ್ಲ, ಪ್ರೇಟರ್ ಆಗೋದಿಲ್ಲ.

ಕ್ವೇಸ್ಟರ್ ಆಗೋದಿಲ್ಲ. ಕಾನ್ಸಲ್ ಆಗೋದಿಲ್ಲ. ಸೆನೆಟರ್ ಆಗೋದಿಲ್ಲ.... ಈ ಗಣರಾಜ್ಯದ ಕೀರ್ತಿ ಅಚಂದ್ರಾರ್ಕವಾಗಿ ಮುಂದುವರೀಬೇಕಾದ್ರೆ ನಾವು ಶ್ರೀಮಂತ ವರ್ಗದ, ಸುಶಿಕ್ಷಿತ, ಸುಸಂಸ್ಕೃತ ಸುಧಾರಿತ ಜನ ಈಡೈಲ್, ಪ್ರೇಟರ್ ಆಗಬೇಕು. ಕ್ವೇಸ್ಟರ್ ಆಗಬೇಕು.... ಕಾನ್ಸಲ ಆಗಬೇಕು.... ಅಂದ್ರೆ, ಅಧಿಕಾರ ನಮ್ಮ ಕೈಯಲ್ಲಿರಬೇಕು. ಆದ್ರಿಂದ ಈ ಕೀಳು ವರ್ಗದ ಕ್ಷುದ್ರರನ್ನು ನಾವು ಎದುರು ಹಾಕ್ಕೋಬಾರ್ದು. ರಾಜಕೀಯ ಅಂದ್ರೆ ಕೀಳು ವರ್ಗ ಮೇಲುವರ್ಗಗಳನ್ನು ಬಂಧಿಸೋ ಶಕ್ತಿ. ಅದಕ್ಕೇ ನಾನು ಪದೇಪದೇ ಹೇಳೋದು, ಪ್ರತಿಯೊಂದು, ವ್ಯಕ್ತಿಯಲ್ಲೂ ದೈವಿಕ ಶಕ್ತಿಯ ಅಂಶವಿದೆ. ಆ ಶಕ್ತಿಯ ಆರಾಧನೆಯಿಂದಲೇ ಅಧಿಕಾರ ಪ್ರಾಪ್ತಿ.... ರುಫಸ್ ನೀನು ನಾಟಕ ಗೃಹದಲ್ಲಿ ಮಾಡಿದ ಕೆಲಸಕ್ಕೆ ನನ್ನ ಶಾಭಾಸಗಿರಿ ಇದೆ...ಆದ್ರೆ, ಕ್ಲೋಡಿಯಾ ಅಂಥ ಹೆಣ್ಣು ಪಿಶಾಚಿಯ ಕೈಯಲ್ಲಿ ಸಿಕ್ಕಿಹಾಕಿಕೊಂಡು ನಿನ್ನ ಜೀವನಾನ ವ್ಯರ್ಥ ಹಾಳುಮಾಡಿಕೊಳ್ಳಬೇಡ ... ಜನಜೀವನ ಈ ಥರ ಅಪವಿತ್ರಗೊಳ್ಳುತ್ತಿರುವ ಕೆಟ್ಟ ದಿನಗಳಲ್ಲಿ ಪರಿಶುದ್ಧ ಜೀವನದ ಆದರ್ಶವನ್ನು ಎತ್ತಿ ಹಿಡಿದು, ಇತಿಹಾಸದಲ್ಲಿ ಅಮರನಾಗೋದು ನನ್ನ ಜೀವನದ ಗುರಿ ಅಂತಕಾಣುತ್ತೆ. ನನ್ನ ಶಿಷ್ಯತ್ವ ಬಯಸೋ ಈ ಘನ ರೋಮನ್ ಜನ ನನ್ನ ವ್ಯಕ್ತಿತ್ವದ ಅಂತಸ್ಸತ್ವವನ್ನು ಗೌರವಿಸೋ ಪ್ರಾಮಾಣಿಕತೇನ ತೋರಿಸಬೇಕು ಅಂತ ನನ್ನ ಬಯಕೆ....

ಲುಕ್ರಿಯಸ್ : (ನಗುತ್ತಾ) ಸಿಸೆರೋ, ಚರಿತ್ರೆ ಯಾರಿಗೂ ಅನ್ಯಾಯ ಮಾಡೋದಿಲ್ಲ ...

ಸಿಸೆರೋ : ಚರಿತ್ರೆ ಅನ್ಯಾಯ ಮಾಡೋದಿಲ್ಲ, ಚರಿತ್ರಕಾರ ಅನ್ಯಾಯ ಮಾಡಬಹುದು. ....ಒಬ್ಬ ಚರಿತ್ರಕಾರ ಯಾರಾದ್ರೂ ಮಹಾಪುರುಷನಿಗೆ ಅನ್ಯಾಯ ಮಾಡಿದ್ರೆ ಚರಿತ್ರಕಾರ ಹೀಗೆ ಅನ್ಯಾಯ ಮಾಡಿದ ಅಂತಾನೂ ಚರಿತ್ರೆಯಲ್ಲಿ ದಾಖಲಾಗುತ್ತೆ. ಆದ್ರಿಂದ, ಲುಕ್ರಿಯಸ್, ನೀನು ನನ್ನ ವಿಚಾರದಲ್ಲಿ ಉದಾರವಾಗಿರಬೇಕು. ನನ್ನ ಚರಿತ್ರೆಯಲ್ಲಿ ನನ್ನ ಹೊಗಳಿಕೆ ಪದೇ ಪದೇ ಬರಲೇಬೇಕು.... ಅದು ನ್ಯಾಯಸಮ್ಮತವಾದ ಬಯಕೆ ತಾನೆ ? ಜನ, ಇಂದಿನ ಜನ, ನಾಳಿನ ಜನ, ಒಂದುನೂರು ವರ್ಷಗಳ ನಂತರ ಹುಟ್ಟೋ ಜನ, ಒಂದು ಸಾವಿರ ವರ್ಷಗಳ ನಂತರ ಹುಟ್ಟೋ ಜನ ನನ್ನ ಜೀವನವನ್ನು, ನಾನು ಪ್ರತಿಪಾದಿಸಿದ ಮೌಲ್ಯಗಳನ್ನು ಗೌರವದಿಂದ ಕಾಣಬೇಕು ಅಂತ ನನ್ನ ಅದಮ್ಯ ಬಯಕೆ... ಇದರಲ್ಲಿ ನನಗೆ ಅವಮಾನ, ನಾಚಿಕೆ ಇಲ್ಲ,

ಯಾಕೇಂದ್ರೆ, ನಾನು ಅಂಥ ಜೀವನ ನಡೆಸ್ತಿದೀನಿ.... ಅಂಥಾ ವಿಚಾರ ಗಳ ಪ್ರತಿಪಾದನೆ ಮಾಡ್ತಿದೀನಿ.

ಲುಕ್ಸಿಯುಸ್ : ಆದ್ರೆ ಸಿಸೆರೋ, ನಾವು ಚರಿತ್ರಕಾರರು ಕೆಲವು ನಿಯಮಗಳನ್ನ ಅನುಸರಿಸ ಬೇಕಾಗಿರುತ್ತದೆ ಅಂತ ನಿನಗೆ ಗೊತ್ತಿರಬೇಕು.....

ಸಿಸೆರೋ : ಅಂದ್ರೇನು ? ನೀನು ನನ್ನ ಪ್ರೀತಿಸೋದಿಲ್ಲವೆ ? ನೀನು ನನ್ನ ಗೌರವಿಸೋ ದಿಲ್ಲವೆ ? ಅದಕ್ಕೆಲ್ಲಾ ಬೆಲೆ ಇಲ್ಲವೆ ?

ಲುಕ್ಸಿಯಸ್ : ಸಿಸೆರೋ, ನೀನು ಚರಿತ್ರಕಾರರ ಮೇಲೆ ಇಂಥಾ ಒತ್ತಡ ಹೇರಿದೆ ಅಂತಾನೂ ಚರಿತ್ರೆ ದಾಖಲು ಮಾಡುತ್ತಲ್ಲಾ ?

ಕೆಟಲಸ್ : ಅದೆಲ್ಲಾ ಸರಿ, ಆದ್ರೆ, ನಾವು ಇಲ್ಲಿ ಸೇರಿದ್ದು, ನನ್ನ ಪದ್ಯ ಕೇಳೋದ ಕ್ಕಲ್ಲವೇ ? ಅದಕ್ಕೇನೂ ಬೆಲೆ ಇಲ್ಲವೆ ? ಯಾರಾದ್ರೂ ದಯವಿಟ್ಟು ಅಪ್ಪಣೆ ಕೊಡಿಸ್ತೀರಾ ?

ಅಟಿಕಸ್ : ನಾನು, ಒಂದು ಮಾತು ಹೇಳಬಹುದಾದ್ರೆ ....

ಕೆಟಲಸ್ : ನಾನು ಇಷ್ಟು ಹೊತ್ತೂ ತಡೆದಿದ್ದೇನೆ .... ನಮ್ಮ ನೆಚ್ಚಿನ ಶ್ರೀಮಂತ ವರ್ತಕ ಅಟಿಕಸ್ ಮಾತಾಡಬೇಕಂದ್ರೆ, ಇನ್ನೂ ಸ್ವಲ್ಪ ಹೊತ್ತು ಬಾಯಿ ಮುಚ್ಚಿಕೊಂಡು ಕೂತಿರೋದು ನನಗೇನೂ ಕಷ್ಟವಿಲ್ಲ .... ಜೀವನ ನನಗೆ ಬಹಳಷ್ಟು ಸಂಯಮದ ಪಾಠಗಳನ್ನ ಕಲಿಸಿದೆ....

ರುಫಸ್ : ಈ ನಗರದ ಜಂಜಾಟದ ಜೀವನದಲ್ಲಿ ನನಗಿರೋ ಒಂದೇ ಸಮಾಧಾನ ಅಂದ್ರೆ, ಇಂಥ ವಿದ್ವಜ್ಜನ ಸಂಗ, ವಿದ್ವತ್ ಕೂಟ .... ಇದರಲ್ಲಿ, ಈ ಜಂಜಾಟಕ್ಕೆ ಕಾರಣರಾದ ಅಟಿಕಸ್ ಮಹಾಶಯರಂಥ ವರ್ತಕರ ವಾರ್ತಾ ಲಾಪ ಎಷ್ಟರಮಟ್ಟಿಗೆ ಸಮಂಜಸ ?

ಸಿಸೆರೋ : ರುಫಸ್, ಅಟಿಕಸ್ ನನ್ನ ಪ್ರಾಣ ಸ್ನೇಹಿತ. ಅವನು ವರ್ತಕ, ಲೇವಾ ದೇವಿ ವ್ಯವಹಾರಸ್ಥ, ಧನವಂತ, ಆದರೂ ನನ್ನಂಥ ಬುದ್ಧಿಜೀವಿಗಳ ಪರಮಾಪ್ತ .... ಅವನ ಅಭಿರುಚಿ, ಜಿಜ್ಞಾಸೆ, ಜ್ಞಾನಪಿಪಾಸೆ, ವಿದ್ವಜ್ಜನಾ ದರ ಕೆಲವರಲ್ಲಾದರೂ ಇದೆ ಅಂತ, ರೋಮ್‌ನ ಚರಿತಾರ್ಥ ನಡೆದಿದೆ ... ನನ್ನಂಥ....

ಕೆಟಲಸ್ : ಯಾಕೋ, ನನ್ನ ಪದ್ಯಕ್ಕೆ ಈಹೊತ್ತು ಅದೃಷ್ಟವಿಲ್ಲ ಅಂತ ಕಾಣುತ್ತೆ. ಲುಕ್ಸಿಯಸ್ .... ಇದೂ ನಿನ್ನ ಚರಿತ್ರೇಲಿ ಬರುತ್ತೋ ಹೇಗೆ ?

'ರೋಮನ್ ಸಾಮ್ರಾಜ್ಯದಲ್ಲಿ ಒಳ್ಳೊಳ್ಳೇ ಮಹಾ ಕವಿಗಳಿದ್ದರೂ ಅವರಿಗೆ ಸರಿಯಾದ ಪ್ರೋತ್ಸಾಹವಿಲ್ಲದೆ ಅವರ ಪ್ರತಿಭೆ ಕಮರಿ ಹೋಗು ತ್ತಿತ್ತು.... ಉದಾಹರಣೆ ಕೆಟಲಸ್ ....'

(ನಗು)

ಸಿಸೆರೋ : ಕೆಟಲಸ್, ನೀನು ಯಾವಾಗಿನಿಂದ ಮಹಾ ಕವಿಯಾದೆ ? ನಾನಿನ್ನೂ ಹಾಗೆ ಹೇಳೇ ಇಲ್ಲ !

ಕೆಟಲಸ್ : ಇದೇನು ಬಂತಪ್ಪಾ ಗ್ರಹಚಾರ ? ಈವೊತ್ತು ಬೆಳಿಗ್ಗೆ ಎದ್ದ ಕೂಡಲೆ ಒಂದು ಹಿಂಡು ಕಾಗೆ ನನ್ನ ಮನೆಯ ಮೇಲೆ ಬಂದು ಕೂತುಕೊಂಡವು. ಆಗ್ಲೇ ಜೀವ ಅಳುಕಿತು .... ಇದ್ಯಾಕೋ ಒಳ್ಳೆ ಶಕುನ ಅಲ್ಲ ಅಂದುಕೊಂಡೆ.... .... ಶಕುನ ನಿಜ ಆಗ್ತಿದೆ .... ನಾನ ಯಾವಾಗಿನಿಂದ ಮಹಾ ಕವಿ ಆದೆ ?

ಸಿಸೆರೋ : ಹೌದು, ಉತ್ತರ ಹೇಳು .... ನೀನು ನನ್ನ ಮೇಲೆನಾದ್ರೂ ಪದ್ಯ ಬರೆದಿದ್ದೀಯಾ ?

ಕೆಟಲಸ್ : (ಕ್ಷಮಾಪಣಾ ಧ್ವನಿಯಲ್ಲಿ) ಇಲ್ಲಾ.... ಆದ್ರೆ, ಪ್ಲೇಟೋನ ಪ್ರಕಾರ....

ಸಿಸೆರೋ : ಇರಲಿ, ಪ್ಲೇಟೋ ಇಲ್ಲ ಈಗ, ಸಿಸೆರೋ ಇದ್ದಾನೆ .... ಮರೀಬೇಡ ....

ಕೆಟಲಸ್ : ಇರಲಿ ಅಂದುಬಿಟ್ರೆ ಹೇಗೆ ? ಇಲ್ಲಿ ನೋಡಿ ಸ್ನೇಹಿತರೆ, ಈವೊತ್ತು ಬೋನಾಡಿಯಾ ಹಬ್ಬ .... ಸೃಷ್ಟಿಶಕ್ತಿದೇವಿಯ ಹಬ್ಬ.... ನಮಗೆ ಮಕ್ಕ ಳನ್ನ ಕೊಡೋದೇವಿ, ನಮ್ಮ ನೆಲದಲ್ಲಿ ಹೂವು, ಕಾಯಿ, ಹಣ್ಣು, ಧಾನ್ಯ ಬೆಳೆಯೋ ಹಾಗೆ ಕೃಪೆ ಮಾಡೋ ದೇವಿ, ನಮ್ಮ ದನಕರು, ಆಡು, ಕೋಳಿ ಗಳು ವೃದ್ಧಿಯಾಗೋ ಹಾಗೆ ವರ ಕೊಡೋ ದೇವಿ ... ಅವಳ ಮೇಲೆ ಒಂದು ಪದ್ಯಾನ ಈಗಿಂದೀಗ ನಿಮ್ಮೆದುರಿಗೆ ರಚಿಸಿ ಹೇಳ್ತೀನೆ.... ಒಳ್ಳೇ ಪದ್ಯ ಆಗಿದ್ರೆ, ಲುಕ್ರಿಯಸ್ ಚರಿತ್ರೇಲಿ ನನ್ನ ಹೆಸರು ಸೇರಿಸಲಿ. ಈವೊತ್ತು ಶುಭದಿನ ... ನಮ್ಮ ಹೆಂಗಸರೆಲ್ಲಾ ಸೀಸರನ ಮನೇಲಿ ಬೋನಾಡಿಯಾಪೂಜೆ ಮಾಡ್ತಿದಾರಲ್ಲ ... ನನ್ನ ಮನೆ ಮೇಲೆ ಕಾಗೆ ಜಾತ್ರೆ ನಡೆದಿದ್ದರೆಲಿಅದೇನೂ ಪರವಾಗಿಲ್ಲ....

ರುಫಸ್ : ಆದ್ರೆ .... ಬೋನಾಡಿಯಾ ಆರಾಧನೆ ಮಾಡೋದು ಬರೀ ಹೆಂಗಸರ ಕರ್ತವ್ಯ. ನೀನ್ಯಾಕೆ ಮಾಡಬೇಕು ? ನೋಡ್ದೋಕೇನೋ ನಿನ್ನ ಮುಖ ಮುದ್ದು ಮುದ್ದಾಗಿದೆ ನಿಜಾ....

(ನಗು)

ಕ್ವಿಂಟಸ್ ; (ಪ್ರವೇಶಿಸುತ್ತಾ) ; ಓಹೋ ಏನು, ಬಹಳ ತಮಾಷೆ ವಿಷಯ ಇಂತ ಕಾಣುತ್ತೆ ....

ರುಫಸ್ ; ಹಾಂ ! ತಮಾಷೆ ವಿಷಯಾನೆ... ಬಾ .... ಕ್ವಿಂಟಸ್

ಕ್ವಿಂಟಸ್ ; ಹೂಂ .... ಯಾರ ವಿಷಯ ?

ಲುಕ್ಸಿಯಸ್ ; ನಮ್ಮ ಈ ನವಯುವಕ, ಸಿಸೆರೋನ ಶಿಷ್ಯ ರುಫಸ್ ದವುಡಿ ಹೆಣ್ಣಿನ ಬಲೆಗೆ ಬಿದ್ದಿರೋ ವಿಷಯ....

ರುಫಸ್ ; ಇಲ್ಲ ಇಲ್ಲ, ನನ್ನ ಮಾತು ಕೇಳಿ....

ಕ್ವಿಂಟಸ್ ; ಮೊದಲು ಎಲ್ಲರೂ ಸ್ವಲ್ಪ ಈ ಮಿಶ್ರಿತ ಮದ್ಯವನ್ನ ತೆಗೆದುಕೊಂಡು ಮೈ ಬೆಚ್ಚಗೆ ಮಾಡಿಕೊಳ್ಳೋಣ.

ಲುಕ್ಸಿಯಸ್ ; ಆಹಾ ! ಸಿಸೆರೋ, ನಿನ್ನ ತಮ್ಮ ಕ್ವಿಂಟಸ್‌ಗೆ ನಾವು ಚಿರ ಋಣಿಗಳು. ಈ ಚಳಿಯ ವಾತಾವರಣದಲ್ಲಿ ಸ್ನೇಹಿತರ ಜೊತೆ ಕೂತುಕೊಂಡು, ಹಿತವಾದ ಮದ್ಯವನ್ನು ಗುಟುಕುತ್ತಾ ರಾಜಕಾರಣದ ಸಲ್ಲಾಪದ ನಡುವೆ ಕ್ಲೋಡಿಯಾನಂಥ ಸುಂದರ ಯುವತಿಯ ಜೀವನ ವಿಮರ್ಶೆ ಮಾಡೋದು ನಿಜಕ್ಕೂ ಚೇತೋಹಾರಿ !

ಸಿಸೆರೋ ; ಲುಕ್ಸಿಯಸ್, ವ್ಯಂಗ್ಯ ಸಾಕು.... ನಮ್ಮ ರೋಮನ್ ಬುದ್ಧಿಜೀವಿಗಳ ಚಾತುರ್ಯ ವಿದ್ಯೆಗಳೆಲ್ಲಾ ವ್ಯಂಗ್ಯದಲ್ಲಿ ತೃಪ್ತಿ ಪಡೆಯೋದು ದುರದೃಷ್ಟಕರ ವಿಷಯ. ವೈಚಾರಿಕತೆ ಅಂದ್ರೆ ವಿವೇಕ. ವಿವೇಕವೇ ತತ್ತ್ವಜ್ಞಾನದ ಪರಮ ಪ್ರಯೋಜನ. ನಮ್ಮ ಬದುಕಿಗೆ ನೆರವಾಗದ ವೈಚಾರಿಕತೆ ಯಾಗಲೀ, ವಿವೇಕವಾಗಲೀ ನಾಯಿಮೊಲೆಯ ಹಾಲಿದ್ದ ಹಾಗೆ. ಇವನ್ನು ನಾವೆಲ್ಲ ಮರೀದೇ ಪರಿಪೂರ್ಣ ವೈಚಾರಿಕತೆಯ ಸಾಧಕರಾಗಬೇಕೆ ಹೊರತು, ಕೂಪ ಮಂಡೂಕಗಳಾಗಿ ಪ್ರಯೋಜನವಿಲ್ಲ. ಈ ದಿನ ನಮ್ಮ ಗಣರಾಜ್ಯಕ್ಕೆ ವಿಷವಾಗಿ ಪರಿಣಮಿಸಿರೋ ಸೀಸರ್, ಕ್ರಾಸಸ್, ಕ್ಲೋಡಿಯಸ್ .... ಈ ಮೂವರು ರಾಕ್ಷಸರನ್ನು ನಿವಾರಿಸೋ ತನಕ ನನಗೆ ಸಮಾಧಾನವಿಲ್ಲ .... ಇದು ತಮಾಷೆಯ ವಿಷಯವಲ್ಲ .... ಈ ಕ್ಲೋಡಿಯಸ್‌ನ ಚರಿತ್ರೆ ಯಾರಿಗೆ ಗೊತ್ತಿಲ್ಲ ? ಇವರೆಲ್ಲಾ ರೋಮನ್ ಸಾಮ್ರಾಜ್ಯವನ್ನ ಉದ್ಧಾರ ಮಾಡೋಕೆ ಹುಟ್ಟಿದೋರಲ್ಲ .... ಇವರ ಪಾಪದ ಬೆಂಕಿಯಿಂದ ನಮ್ಮ ಇಡೀ ಸಾಮ್ರಾಜ್ಯ ಉರಿದು ಬೂದಿಯಾಗೋದನ್ನ ತಪ್ಪಿಸಬೇಕಾದಂಥ ಪವಿತ್ರ ಕರ್ತವ್ಯ ನಮ್ಮ ಮುಂದಿದೆ ....

ಏತನ್ಮಧ್ಯೆ ನನ್ನನ್ನ ಕಾಡೋಕೆ ಹುಟ್ಟಿರೋ ಮತ್ತೆರಡು ವಿಷಜಂತುಗಳ ಅಂದ್ರೆ, ಆಂಟೋನಿ, ಸೀಸರನ ಬಾಲ .... ಅವನ ಜೊತೆ ಲಂ ಎತ್ತಿಕೊಂಡು ತಿರುಗೋ ಆ ಹೆಣ್ಣುನಾಯಿ ಸಿತಿರಸ್ ... ಓಹೋ! ಈ ರೋಮ್ ಸಾಮ್ರಾಜ್ಯಕ್ಕೆ ಹಿಂದೆ ಯಾವಾಗಲೂ ಇಷ್ಟೊಂದು ವಿಪತ್ತು ಗಳು ಒಟ್ಟಿಗೇ ವಕ್ರಿಸಿಲ್ಲವೆಂದು ಕಾಣುತ್ತೆ. ನಾನು ದಮನ ಮಾಡಿದ ಕ್ಯಾಟಲೀನ್ ಒಳಸಂಚನ್ನು ಬಿಟ್ಟು .... ಅಬ್ಬಾ ! ಕ್ಯಾಟಲೀನ್ ನಂಥ ರಾಕ್ಷಸ ಮತ್ತೆಲ್ಲೂ ಸಿಕ್ಕೋದಿಲ್ಲ. ನಾನಿದ್ದೆ ಅಂತ, ಆ ದುಷ್ಟ ನಿರ್ನಾಮ ವಾದ .... ರೋಮ್ ಬದುಕಿಕೊಂಡಿತು !

ಲುಕ್ಸಿಯಸ್ : ಆಯ್ತು ಸಿಸೆರೋ . ಅದೆಲ್ಲಾ ಈಗ ಮರೆತಿರೊ ವಿಷಯ .... ಈವೊತ್ತಿನ ನಮ್ಮ ಸಮಸ್ಯೆ ಅಂದ್ರೆ, 'ಕ್ಲೋಡಿಯಾ ಪ್ರಭಾವದಿಂದ ಅಧೋಗತಿಗಿಳಿ ಯುತ್ತಿರುವ ರೋಮಿನ ಸಾರ್ವಜನಿಕ ಜೀವನದ ಪುನರುಜ್ಜೀವನ' ಅಲ್ವೇ?

ಕೆಟಲಸ್ : ಅಲ್ಲ, ಈವೊತ್ತಿನ ವಿಷಯು ಅಂದ್ರೆ, ನಾವೆಲ್ಲ ಗೆಳೆಯ ಸಿಸೆರೋನ ಮನೆಯಲ್ಲಿ ಸೇರಿರೋದು, ನನ್ನ ಕಾವ್ಯ ಕೇಳೋದಕ್ಕೆ .... ಅಟಿಕಸ್ ನಿನಗಾದ್ರೂ ನೆನಪಿರಬೇಕು, ನಾವು ಈ ಗೋಷ್ಠೀನ ಹೇಗೆ ಪ್ರಾರಂಭ ಮಾಡಿದ್ವು ಅಂತ ? ....

ಅಕಟಸ್ : (ಗಂಟಲು ಸರಿಪಡಿಸಿಕೊಳ್ಳುತ್ತಾ) : ಹೌದು, ಆದರೆ ನಿನ್ನ ಕಾವ್ಯಕ್ಕೂ ಕ್ಲೋಡಿಯಾಗೂ ಇರೋ ಸಂಬಂಧವನ್ನ ಗಮನಿಸಿ, ನಾವು ನೇರವಾಗಿ ಯಾಕೆ ಕ್ಲೋಡಿಯಾ ವಿಷಯಾನೇ ಮಾತಾಡಬಾರದು ಹೇಳು ? ಪ್ರತಿಮೆಗಳಲ್ಲಿ, ಪ್ರತೀಕಗಳಲ್ಲಿ ಕಾವ್ಯಾತ್ಮಕವಾಗಿ ಮಾತಾಡಿ ಅದು ಯಾರಿಗೂ ಸರಿಯಾಗಿ ಅರ್ಥವಾಗಲಿಲ್ಲವಲ್ಲ ಅಂತ ಯಾಕೆ ಪೇಚಾಡಬೇಕು ?

ಸಿಸೆರೋ : ಹೌದು ಹೌದು. ಈವೊತ್ತಿನ ತುರ್ತಿನ ವಿಷಯು ಕಾವ್ಯ ಅಲ್ಲ, ನೈತಿಕತೆಯು ಅಭಾವ.

ಕ್ವಿಂಟಸ್ : ನಾವು ಇನ್ನೊಂದು ಸುತ್ತು ಈ ಮದ್ಯ ಸೇವಿಸಿ ವಿಚಾರ ವಿಶ್ಲೇಷಣೆ, ವಿಮರ್ಶೆ ಪ್ರಾರಂಭಿಸಬಹುದು.

ಸಿಸೆರೋ : ನನಗೆ ನಿಮ್ಮ ಮಾದಕ ಪೇಯುದ ಅವಶ್ಯಕತೆ ಇಲ್ಲದಿರೋದ್ರಿಂದ, ಈ ಗೋಷ್ಠೀಲಿ ನಾನೊಬ್ಬನಾದರೂ ಸಮನಾದ ತಲೆಯಿಂದ ಭಾಗವಹಿಸಬಹು ದಾಗಿದೆ (ನಗುತ್ತಾ) ಅಲ್ಲವೇ ? ಹೂಂ....ನಡೀಲಿ, ನಿಮ್ಮ ಮದಿರಾರಾಧನೆ ನೀವು ಕುಡೀಬೇಡಿ ಅಂತ ಧರ್ಮ ಬೋಧನೆ ಮಾಡೋಕೆ ನಾನೇನೂ ಪೈಥಾಗೋರಾಸ್ ಅಲ್ಲವಲ್ಲ !

ಲುಕ್ರಿಯಸ್ : ಹುಂ, ಅದಕ್ಕೇ ಅಂತ ಕಾಣುತ್ತೆ ನೀನು ಜಿರೇಲಿಯಸ್‌ಗೆ ಬಂಡವಾಳ ಕೊಟ್ಟು ಪಡಖಾನೆ ನಡೆಸ್ತಿರೋದು.

ಸಿಸೆರೋ : ನಾನು ಪಡಖಾನೆ ನಡೆಸ್ತಿರೋದು ನನ್ನ ಸ್ವಂತ ಬಂಡವಾಳದಿಂದ .... ರೋಮ್‌ನಲ್ಲಿ ವೃತ್ತಿ ಸ್ವಾತಂತ್ರ್ಯ ಇದ್ಯಲ್ಲಾ ?

ಕೆಟಲಸ್ : ನಿನ್ನ ಸಂವಿಧಾನಾತ್ಮಕ ದೃಷ್ಟಿ ತರ್ಕಬದ್ಧವಾಗಿದೆ ಸಿಸೆರೋ, ಹೂಂ! ಈಗ, ಈ ಕವನ....

ರುಫಸ್ : ಪದ್ಯ ಮಾತ್ರ ಈಗ ಬೇಡ ಮಹಾರಾಯ! ಅದೆಲ್ಲಾ ಈಗ ತಲೆಗೆ ಹೋಗೋದಿಲ್ಲ.... ಈ ನೈತಿಕತೆ ವಿಷಯ ಬೇಕಾದ್ರೆ ಬೇಕಾದಷ್ಟು ಹರಟೋಣ.... ಅದಾದ್ರೆ ರಸವತ್ತಾಗಿರುತ್ತೆ....

ಸಿಸೆರೋ : ನೋಡಿ ಗೆಳೆಯರೇ, ಈಗ ರೋಮಿನ ರಾಜಕಾರಣದಲ್ಲಿ ಧೂಮಕೇತುವಿನಂತೆ ಪ್ರವರ್ಧಮಾನಕ್ಕೆ ಬರ್ತಿರೋ ಸೀಸರನ ಪ್ರಭಾವಾನೇ ತಗೊಳ್ಳಿ.... ಯಾರು ಈ ಸೀಸರ ? ಅವನಿಗೇನಾದ್ರೂ ರೋಮಿನ ಪ್ರಜಾಪ್ರಭುತ್ವದ ಬಗ್ಗೆ ಅಸಲಿ ಕಳಕಳಿ ಇದ್ಯೆ ? ನಮ್ಮ ಶ್ರೀಮಂತ ವರ್ಗದ ಸದಸ್ಯನಾಗಿ, ಅದರ ಘನತೆ ಗೌರವಗಳನ್ನ ಅವನು ಎಷ್ಟು ಮಟ್ಟಿಗೆ ಕಡೆಗಣಿಸಿದಾನೆ ಅಂತ ನೋಡಿದ್ರೆ....

ರುಫಸ್ : ಅವನ ಮೊದಲ ಹೆಂಡತಿ ಕಾರ್ನೀಲಿಯ, ನಮ್ಮ ವಂಶದ, ಕ್ವಿಂಟಸ್ ಪಾಂಪಿಯಸ್ ರುಫಸ್‌ನ ಮಗಳು. ಪಾಂಪಿಯಾನ ಅವನು ಎರಡನೆ ಮದುವೆಯಾಗಿದ್ರೂ, ಬೇರೆ ಹೆಂಗಸರ ಜೊತೆ ಹೋಗೋದನ್ನ, ಲಕ್ಷಣವಾದ ಹುಡುಗರ ಜೊತೆ ಮಲಗೋದನ್ನ ಬಿಟ್ಟಿಲ್ಲ ಅಂತಾರೆ.... ಇವಳು, ನಿಮಗೆ ತಿಳಿದಿರೋ ಹಾಗೆ, ಸರ್ವಾಧಿಕಾರಿ ಸುಲ್ಲಾನ ಮಗಳು.... ಇಂಥಾ ಮುತ್ತಿನಂತಹ ಹೆಂಡತಿ ಮನೇಲಿದ್ರೂ ....

ಕ್ವಿಂಟಸ್ : ನನಗೆ ತಿಳಿದಿರೋ ಹಾಗೆ, ಸೆನೇಟರೆ ಕ್ಯಾಟೋನ ತಂಗಿ ಸರ್ವಿಲಿಯಾ ಅವನ ಹಳೇ ಪ್ರೇಯಸಿ.... ಬ್ರುಟಸನ ತಾಯಿ....

ಲುಕ್ರೆಯಸ್ : ಸಿಸೆರೋ, ನನಗೆ ಒಂದು ಅನುಮಾನ ಕಾಡ್ತಾ ಇದೆ. ಬ್ರುಟಸ್ ಇದಾನಲ್ಲ, ಸೀಸರನ ನೆಚ್ಚಿನ ಬಂಟ, ಅವನು ಸೀಸರನ ಮಗ ಅಂತ ಹೇಳ್ತಾರಲ್ಲ....

ಸಿಸೆರೋ : ಅದೆಲ್ಲಾ ನನಗೆ ಗೊತ್ತಿಲ್ಲ, ಆದ್ರೆ ಬ್ರುಟಸ್ ಮಾತ್ರ ಒಬ್ಬ ನಿಜವಾದ

ಗೌರವಸ್ಥ. ಐದುನೂರು ವರ್ಷಗಳ ಹಿಂದೆ ಪ್ರಜಾಪೀಡಕನಾಗಿದ್ದ ಟಾರ್ಕಿನ ರಾಜನನ್ನು ಕೊಂದ ಮಹಾ ಪರಾಕ್ರಮಿ ಬ್ರುಟಸ್‌ನ ವಂಶಸ್ಥ ....

ಕೆಟಲಸ್ : ಅಯ್ಯೋ ! ಅಂತ ಘನವಾದ ವಂಶದ ಕುಡಿ, ಈ ಜೂಲಿಯಸ್ ಸೀಸರ್‌ನ ಪಕ್ಷ ವಹಿಸಿದ್ದು ಎಂಥಾ ವಿಪರ್ಯಾಸ !

ರುಫಸ್ : ಸೀಸರ್ ಎಂಥಾ ಲಂಪಟ ಅಂದ್ರೆ, ಅವನ ಪ್ರೇಯಸಿಯರ ಹೆಸರುಗಳ ಪಟ್ಟೀ ಮಾಡ್ತಾ ಹೋದ್ರೆ ಅದು ಬೆಳೀತಾನೇ ಇರುತ್ತೆ....

ರುಫಸ್ : ಪಾಂಪೆಯ ಹೆಂಡ್ತಿ ಮ್ಯೂಸಿಯಾನೂ ಅವನ ರಖಾವಂತೆ.

ಕ್ವಿಂಟಸ್ : ಅವಳೊಬ್ಬಳೇ ಏನು ? ಇನ್ನೂ ಎಷ್ಟೋ ಜನ ಹೆಂಗಸರು, ಗಂಡಸರು.... ಅವನಲ್ಲಿ ಅದೇನು ಆಕರ್ಷಣೆ ಇದ್ಯೋ ಅಂತ ...

ಲುಕ್ರಿಯಸ್ : ನೀನು ಅಸೂಯೆ ಪಡ್ತಿದೀಯಾ, ಕ್ವಿಂಟಸ್.... (ನಗು)

ಸಿಸೆರೋ : ನನ್ನ ತಮ್ಮ ಅಸೂಯೆ ಪಡ್ತಿಲ್ಲ, ಅವನೂ ನನ್ನ ಹಾಗೇನೇ .. ಅಸಹ್ಯ ಪಡ್ತಿದಾನೆ.... ಈ ಸೀಸರ್‌ನ ಹಾವಳಿಗೆ ಕೊನೆಯೇ ಇಲ್ಲವೇ ?

ಅಟಿಕಸ್ : ನಮ್ಮ ಕೊಳ್ಳಿ ದೆವ್ವದ ಹೆಂಡ್ತಿನೂ ಬುಟ್ಟೀಗೆ ಹಾಕ್ಕೊಂಡಿದಾನಂತೆ.

ರುಫಸ್ : ಕೊಳ್ಳಿದೆವ್ವ ? ಯಾರು ?

ಅಟಿಕಸ್ : (ನಗುತ್ತಾ) : ಅದೇ ನಮ್ಮ ಕ್ರಾಸಸ್.... ಉರೀತಿರೋ ಮನೇನ ಅಗ್ಗವಾಗಿ ಕೊಂಡುಕೊಂಡು, ಬೆಂಕಿ ಆರಿಸೋ ಪಡೆಬಿಟ್ಟು, ಆಸ್ತಿ ಕಬಳಿಸ್ತಾನಲ್ಲ ಅದಕ್ಕೇ ಕೊಳ್ಳಿದೆವ್ವ ಅಂದೆ .

ಸಿಸೆರೋ : ಹಹ್ಹಾ....ಚೆನ್ನಾಗಿದೆ, ವಿಶ್ಲೇಷಣೆ ... ಅನ್ವರ್ಥವಾಗಿದೆ, ಅನ್ವರ್ಥವಾಗಿದೆ! ಅಂದಹಾಗೆ, ಬೇಕಿಬೀಳದೆ ಇರೋ ಮನೆಗಳಿಗೂ ಕೊಳ್ಳಿ ಇಟ್ಟು, 'ಈ ಮನೇನ ನನಗೆ ಬಿಡಿಗಾಸಿಗೆ ಮಾರಿ, ಇಲ್ಲಾ, ಇದು ಬೆಂದು ಹೋದ ಮೇಲೆ, ಬೂದಿನ ಮೈಗೆ ಸವರಿಕೊಳ್ಳಿ' ಅಂತಾನಂತೆ, ಅವನು....

ಲುಕ್ರಿಯಸ್ : ಅನ್ನಬಹುದು ಏನೂ ಆಶ್ಚರ್ಯವಿಲ್ಲ.... ಅವನೊಬ್ಬ ಧನಪಿಶಾಚಿ,.... ಅಸಾಧ್ಯ ದುರಾಶೆ. ಹಣಕ್ಕಾಗಿ ಏನೂ ಮಾಡೋಕೂ ಹೇಸದ ನೀಚ.... ಇವನು ಹೆಂಡ್ತೀನ ಸೀಸ್‌ರ್‌ನಿಗೆ ತಲೆಹಿಡಿಯೋದ್ರಲ್ಲಿ ಆಶ್ಚರ್ಯವಿಲ್ಲ.

ಸಿಸೆರೋ : (ವ್ಯಂಗ್ಯ) ಈ ಸೀಸರ್ ಮಹಾನುಭಾವನ ಕೀರ್ತಿ ರೋಮ್‌ನಲ್ಲಿ ಅಷ್ಟೇ ಅಲ್ಲ, ಹೊರ ದೇಶಗಳಲ್ಲೂ ಸಾಕಷ್ಟು ಪ್ರಚಾರವಾಗಿದೆ. ನಿನಗೆ ನೆನಪಿರ

ಬೇಕು, ಲುಕ್ಸಿಯಸ್, ಜನ ಏನಂತಿದ್ರು ಅಂತ .... ಸೀಸರ್ ಗಂಡಸಿಗೆ ಹೆಂಗಸು, ಹೆಂಗಸಿಗೆ ಗಂಡಸು (ನಗು).... ಒಂದು ಸಲ, ನಂಗಿನ್ನೂ ಚೆನ್ನಾಗಿ ನೆನಪಿದೆ; ಸೆನೇಟ್‌ನಲ್ಲಿ ಬಿಥಿನೀಯಾದ ರಾಜನ ಮಗಳ ನೈಸಾಗೆ ರೋಮನ್ ಸರ್ಕಾರ ಧನಸಹಾಯ ಮಾಡಬೇಕು ಅಂತ ಅವನು ಜೋರಾಗಿ ಮಾತಾಡ್ತಿದ್ದ. ಬಿಥಿನೀಯಾದರಾಜ ನಿಕೋಮೀಡ್ಸ್ ತನ್ನನ್ನ ಎಷ್ಟೊಂದು ಅಕ್ಕರೆಯಿಂದ ನೋಡ್ಕೊಂಡಿದ್ದ ಅಂತ ಹೊಗಳಿದ. ಆಗ ನಾನು ಹೇಳ್ದೆ; 'ಸೀಸರ್, ಆ ವಿಚಾರ ಹೆಚ್ಚಿಗೆ ಹೇಳೋ ಅವಶ್ಯ ಕತೆ ಇಲ್ಲ, ಸಾಕು. ನಿಕೋಮೀಡ್ಸ್ ನಿನಗೆ ಏನು ಕೊಟ್ಟ, ನೀನು ನಿಕೋಮೀಡ್ಸ್‌ಗೆ ಏನು ಕೊಟ್ಟೆ ಅಂತ ನಮಗೆಲ್ಲಾ ತುಂಬಾ ಚೆನ್ನಾಗಿ ಗೊತ್ತು' — ಅಂದೆ. ಇಡೀ ಸೆನೆಟ್ ಹೊಟ್ಟೆ ಬಿರಿಯೋ ಹಾಗೆ ನಗ್ತು. ಸೀಸರ ಬಾಯ್ಮುಚ್ಕೊಂಡು ಕೂತ್ಕೊಂಡ. ಹಾಗಿತ್ತು, ನನ್ನ ಮಾತಿನ ಪ್ರಚಂಡ ಪ್ರಭಾವ! ನಾನು ಬಾಯಿ ತೆಗೆದ್ರೆ ಸಾಕು ಸಿಡಿಲು ಬಡೀತಿತ್ತು, ಸಿಡಿಲು!

ಕೆಟಲಸ್ : ಕಾವ್ಯದಿಂದ ವಿಷಯ ಬದಲಾಯಿಸ್ರಿ, ನೈತಿಕ ಅಧಃಪತನ ಅಂದ್ರಿ.... ಹೋಗ್ಲಿ, ಅಂತ ಸುಮ್ಮನಿದ್ದೆ... ಅದ್ರೆ, ಮತ್ತೆ ಮತ್ತೆ, ವಿಷಯ ಬದ್ಲಾಗ್ತಾ ಸಿಸೆರೋ ಸ್ವಯಂ ಪ್ರಶಂಸೇಗೇ ಬರ್‍ತಾ ಇದ್ಯಲ್ಲ....

ಸಿಸೆರೋ : ಅಲ್ಲಾ, ಇರೋ ಮಾತು ಹೇಳಿದೆ ಅಷ್ಟೆ.... ಸತ್ಯ ಬಿಟ್ಟು ಬೇರೆ ಹೇಳಿಲ್ಲ... ಹಾಂ... ಇನ್ನು ಸೀಸರನ ವಿಷಯಕ್ಕೆ ಹಿಂದಿರುಗೋದಾದ್ರೆ, ಮೊನ್ನೆ ಫೋರಮ್‌ನಲ್ಲಿ ಭಾಷಣ ಕುಟ್ತಿದ್ನಲ್ಲಾ ಆ ಪಡ್ಡೆ ಹುಡುಗ ಸರ್ವಿಯಸ್ ಸಲ್ಪಿಸಿಯಸ್....

ಕ್ವಿಂಟಸ್ : ಅವನೂ ಸೀಸರನ ಚೇಲಾನೆ...

ಸಿಸೆರೋ : ಅವನ ಹೆಂಡ್ತಿ, ಪೋಸ್ತುಮಿಯಾನ ನೋಡಿದಿರಾ ?.... ನೋಡೋಕೆ ಒಳ್ಳೇ ಲಕ್ಷಣವಾಗಿದಾಳೆ– ಸೀಸರ್ ಅವಳಿಗೂ ಮೂಗುದಾರ ಪೋಣಿ ಸಿದಾನಂತೆ ...

ಕ್ವಿಂಟಸ್ : ಗೇಬಿನಿಯುಸನ ಹೆಂಡ್ತಿ, ಲೊಲ್ಲಿಯಾ, ಮೊನ್ನೆ ಸಂಜೆ ಸೀಸರನ ಮನೆ ಯಿಂದ ಹೊರಬಿದ್ಲು, ಎಡ, ಬಲ, ಹಿಂದೆ ಮುಂದೆನೋಡ್ಕೊಂಡು ಕದ್ದುಮುಚ್ಚಿ ಬಂದೋಳ ಹಾಗೆ ಸರಸರ ಅಂತ ಹೋಗ್ತಾ ಇದ್ದದ್ದನ್ನ ನಾನೇ ಕಣ್ಣಾರೆ ಕಂಡೆ...

ಕೆಟಲಸ್ : ಇಂಥವನ ಮನೇಲಿ ಈಗ ಬೋನಾಡಿಯಾ ಪೂಜೆ ನಡೀತಿರೋದು ನ್ಯಾಯುವೇ ಅಂತ ಕೇಳ್ತೀನಿ.... ಸೀಸರನ ಸೈನಿಕರ ಸಮರಗೀತೆ ಯಾವುದು ಗೊತ್ತೆ? "ದಾರಿಬಿಡಿ, ದಾರಿಬಿಡಿ, ಎಂಡರ ಗಂಡನ ಮೆರೆಸುತ । ಬಂದೆವು ಬಕ್ಕತಲೆ ಶೂರನ ಕುಣಿಸುತ । ಮುಚ್ಚಿಡಿ, ಬಚ್ಚಿಡಿ ಹೆಂಡಿರ, ಜೋಪಾನ। ಬಿದ್ದರೆ ಕಣ್ಣಿಗೆ, ಖಂಡಿತ ಸತ್ಯಾ ನಾಶ। ಆಗುವವರೆಲ್ಲರು ಅವನ ವಶ।"

ಸಿಸೆರೋ : ಏನು ಮಾಡೋದು? ನಾಚಿಕೆ ಕೆಟ್ಟೋರು ಊರಿಗೆ ದೊಡ್ಡೋರು. ಅವನಿಗೊಂದು ರಾಜಕೀಯ ಸ್ಥಾನ ಇದೆಯಲ್ಲ.... ಅಂದ್ಮಾಗೇ ಈ ರಾತ್ರಿ ಅವನ ಪ್ರೆಯುಸಿಯುರೆಲ್ಲಾ ಅವನ ಮನೆಲೇ ಸೇರಿರೋದ್ರಿಂದ, ಅವನು ಯಾರಾದ್ರೂ ಒಬ್ಬ ಹುಡಗನ್ನ ಆಶ್ರುಯಿಸಬೇಕಾಗುತ್ತೇನೋ ... (ನಗು)....

ಲುಕ್ಸಿಯಸ್ : ಹೌದು ಸಿಸೆರೋ, ಆದ್ರೆ, ಈ ಕ್ರಾಸಸ್, ಕ್ಲೋಡಿಯಸ್ ಇವರೆಲ್ಲಾ ನಿನ್ನ ಆಪ್ತರಾಗಿದ್ರುಲ್ಲವೆ? ಈಗ್ಯಾಕೆ ಹೀಗೆ?

ಸಿಸೆರೋ : ಕ್ಯಾಟಲೀನನ ಒಳಸಂಚನ್ನು ಬಯಲು ಮಾಡೋ ಪವಿತ್ರ ಕಾರ್ಯದಲ್ಲಿ ಇವರೆಲ್ಲಾ ನನ್ನ ಸ್ನೇಹಿತರಾಗಿದ್ರು ನಿಜ. ನನ್ನ ಸಮರ್ಥ ನಾಯಕತ್ವದಲ್ಲಿ ಪಾಂಪೆಯ ಹಿತಾಸಕ್ತಿಗಳನ್ನ ರಕ್ಷಿಸಿದೆವು. ರೋಮನ್ ಸಾಮ್ರಾಜ್ಯವನ್ನ ನಾನು ಕಾಪಾಡಿದೆ. ನಾನು ನನ್ನ ಜೀವನವನ್ನೇ ಪಣವಾಗಿಟ್ಟು ಈ ಗಣರಾಜ್ಯವನ್ನು ರಕ್ಷಿಸಿದೆ. ಆದ್ರೆ .... ಆದ್ರೆ.... (ಗದ್ಗದಿತನಾಗುತ್ತಾನೆ)

ಕ್ವಿಂಟಸ್ : ಅಣ್ಣಾ.... ಸಮಾಧಾನ ಮಾಡ್ಕೋ....

ಸಿಸೆರೋ : ಹೆದರಬೇಡ ಕ್ವಿಂಟಸ್, ನೀನು ಯಾವಾಗ್ಲೂ ನನ್ನ ಜೊತೆಗಿರು.... ಈ ಪಿಂಡ ಇಂಥದಕ್ಕೆಲ್ಲಾ ಜಗ್ಗೋದಿಲ್ಲ.... ಸಿಸೆರೋ ಯಾರು, ಏನು ಅನ್ನೋದನ್ನ ಪ್ರಪಂಚ ಯಾವತ್ತೂ ಮರೀದೇ ಇರೋ ಹಾಗೆ ನನ್ನ ಸ್ಮಾರಕಾನ ನಿರ್ಮಿಸ್ತೀನಿ ನೋಡ್ತಿರು.

ಕೆಟಲಸ್ : ಸಿಸೆರೋ, ನಮ್ಮ ಈ ಕೂಟ ತುಂಬಾ ಗಂಭೀರವಾಗ್ತಾ ಇದ್ಯಲ್ಲಾ .... ನಿನ್ನ ಈ ಉದ್ವೇಗಕ್ಕೆ ಏನು ಕಾರಣ ಅಂತ ಕೇಳಬಹುದೇ?

ಸಿಸೆರೋ : ಎಲ್ಲಾ ಕೃತಘ್ನರು, ಕೆಟಲಸ್. ಯಾರನ್ನೂ ನಂಬೋ ಹಾಗಿಲ್ಲ, ಕಾಲ. ನಮ್ಮ ಕಾಲಮೇಲೆ ನಾವು ನಿಂತ್ಕೋಬೇಕು, ನಾವು ಏನು ಅನ್ನೋದನ್ನ

ನಮ್ಮ ಸ್ವಂತ ಮೆಹನತ್ತಿನಿಂದ ಜಗತ್ತಿಗೆ ತೋರಿಸಿಕೊಡಬೇಕು. ಅದನ್ನ ನಾನು ಮಾಡ್ತೀನಿ.... ನನ್ನ ಉಪಕಾರಕ್ಕೆ ಉದಾಸೀನವಾಗಿರೋ ಈ ಪಾಂಪೆ ಕೂಡ ಮಣ್ಣು ತಿನ್ತಾನೆ ನೋಡ್ತಿರು, ಲುಕ್ಸಿಯಸ್.... ನಿನ್ನ ಚರಿತ್ರೇಲಿ ಇದೂ ಬರುತ್ತೆ.

ಲುಕ್ಸಿಯಸ್ : ಅದು ಸರಿ, ಈಗ ಏನಾಯ್ತು ಸ್ವಲ್ಪ ಹೇಳ್ತೀಯಾ ಸಿಸೆರೋ ?

ಸಿಸೆರೋ : ನಾನು ಮಾಡಿದ ಸಾಹಸಾನ ಬಣ್ಣಿಸಿ, ಆಯ್ದ ಪದಗಳಲ್ಲಿ ವಿಶೇಷವಾಗಿ ಗಮನಕೊಟ್ಟು ರಚಿಸಿದ ಒಂದು ಪತ್ರದಲ್ಲಿ ನನ್ನ ಪ್ರಿಯ ಮಿತ್ರ ಅಂದ್ಕೊಂಡಿದ್ದ ಸರ್ವಾಧಿಕಾರಿ ಪಾಂಪೇಗೆ ಒಂದು ಪತ್ರ ಬರೆದೆ. ಪತ್ರ ಲೇಖನದ ಅತ್ಯುತ್ಕೃಷ್ಟ ಮಾದರಿ .... ಕ್ಯಾಟಲೀನನ ಒಳ ಸಂಚನ್ನು ನಾನು ನನ್ನ ಸಾಹಸದಿಂದ, ಬುದ್ಧಿವಂತಿಕೆಯಿಂದ ಹೇಗೆ ವಿಫಲ ಗೊಳಿಸಿ ಪಾಂಪೆಗೆ ಮಹದುಪಕಾರ ಮಾಡಿದ್ದೇನೆ ಅಂತ ತಿಳಿಸಿದೆ... ಆದ್ರೆ ಅವನಿಂದ ತೀರ ತಡವಾಗಿ ಬಂದ ಉತ್ತರ ನೋಡಿ ನನ್ನ ರಕ್ತ ತಣ್ಣಗಾಯ್ತು. ಈ ಜಗತ್ತಿನಲ್ಲಿ ಕೃತಜ್ಞತೆ ಅನ್ನೋದೇ ಇಲ್ಲವೆ ಅಂತ ಅನುಮಾನ ಹುಟ್ಟಿದೆ. ನಿಮಗೆಲ್ಲಾ ಗೊತ್ತು ಎಂಥೆಂಥ ಖದೀಮರು ಒಳ ಸಂಚಿನಲ್ಲಿ ಸೇರಿದ್ರು, ಅವರೆಲ್ಲಾ ಹೇಗೆ ಮಣ್ಣು ಮುಕ್ಕಿದರು ಅಂತ.... ಲೆಂಟುಲಸ್ ಒಬ್ಬನ್ನ ನಾನು ಮುಗಿಸಿದ್ರೂ ಸಾಕಿತ್ತು, ರೋಮನ್ ಇತಿಹಾಸದಲ್ಲಿ ನನ್ನ ಹೆಸ್ರು ಅಜರಾಮರವಾಗಿ ಉಳಿಯಲಿಕ್ಕೆ. ಆದ್ರೆ, ಆ ಒಳಸಂಚಿನಲ್ಲಿ ಒಂದು ಪಿಳ್ಳೆ ಕೂಡ ಉಳೀದ ಹಾಗೆ ನಿರ್ನಾಮ ಮಾಡಿ, ಪಾಂಪೆಯ ಅಧಿಕಾರ ಅಬಾಧಿತವಾಗಿ ಉಳಿಯೋದಕ್ಕೆ ಅವಕಾಶ ಮಾಡಿ ಕೊಟ್ಟಿದ್ದಕ್ಕೆ ಇವನು ಕೊಟ್ಟ ಬಹುಮಾನ ಏನು ?

ಕೆಟಲಸ್ : ಹೌದು, ಏನು ? ಮಾರ್ಕಸ್ ಟುಲ್ಲಿಯಸ್ ಸಿಸೆರೋಗೆ ಅವಮಾನ ! ಛೆ....ಛೆ....

ಸಿಸೆರೋ : ಪಾಂಪೆಯ ಅಧಿಕಾರ ರಕ್ಷಣೆಗೆ ನಾನು ಸಾಮಾನ್ಯ ಜನಪಕ್ಷದಿಂದ ಶ್ರೀ ಮಂತರ ಪಕ್ಷಕ್ಕೆ ಹಾಲಬೇಕಾಯ್ತು....ನಮ್ಮ ರಾಷ್ಟ್ರದ ಹಿತದೃಷ್ಟಿಯಿಂದ ಪಕ್ಷಾಂತರ ಮಾಡಿದೆ. ನನಗೇನಾಗಬೇಕಾಗಿತ್ತು ? ಆದ್ರೆ ಯಾರಿಗೋಸ್ಕರ ಇಷ್ಟೆಲ್ಲಾ ಬವಣೆ ಪಟ್ಟೆನೋ ಅವ್ನೇ ನನ್ನ ಬಗ್ಗೆ ಈಗ ಉದಾಸೀನ ವಾಗಿದಾನೆ, ಅಷ್ಟೇ ಅಲ್ಲ....

ಕ್ವಿಂಟಸ್ : ಮಾರ್ಕಸ್....

ಸಿಸೆರೋ : ಪಾಂಪೆ ನನಗೆ ಬರೆದ ಕಾಗದದಲ್ಲಿ, 'ಓಹೋ, ಹೀಗೆ ಮಾಡಿದೆಯಾ? ಹುಂ.... ಸರಿಬಿಡು'– ಅಂತ ಬರೆದಿದಾನೆ. ಒಂದೇ ಒಂದಾದ್ರೂ ಶಾಭಾಶ್ ಇಲ್ಲ... ನನ್ನ ಮಹತ್ವದ ಪಾತ್ರದ ಬಗ್ಗೆ ಮೆಚ್ಚಿಗೆ ಇಲ್ಲ; ಕೃತಜ್ಞತೆ ಇಲ್ಲ .. ನಾನು ಗಟ್ಟಿಯಾಗಿ ಹೇಳ್ತೀನಿ ಕೇಳಿ, ಆ ವೇಳೇಲಿ ನಾನು ಇಲ್ಲದೆ ಇದ್ರೆ ಕ್ಯಾಟಲೀನ್' ಲೆಂಟುಲಸ್ ಕಥಗಸ ಮತ್ತು ಅವರ ಘಟಾಲಮ್ಮ ನ ಇತರ ದೇಶದ್ರೋಹಿ ದರೋಡೆಕೋರರು, ಪುಂಡರು, ಈ ಭವ್ಯವಾದ ರೋಮ್ ಅನ್ನೇ ಹುರಿದು ಮುಕ್ಕಿಬಿಡ್ತಿದ್ರು ...

ಲುಕ್ಸಿಯಸ್ : ಸಿಸೆರೋ, ಈ ವಿಷಯುಗಳೆಲ್ಲಾ ನನ್ನ ಟಿಪ್ಪಣಿ ಪುಸ್ತಕದಲ್ಲಿ ಸವಿವರವಾಗಿ ಬಂದಿದೆ ಅಂತ ಭರವಸೆ ಕೊಡ್ತೀನಿ. ಈಗ ನಮ್ಮ ಚರ್ಚೇನ ಮುಂದು ವರೆಸೋಣ....

ಕಿಟಲಸ್ : ಹಾಂ! ಅಂತೂ ಕೊನೆಗೆ ಕ್ಯಾಟಲೀನ್ ಹಂತಕನಿಗೆ ನಮಸ್ಕರಿಸಿ, ಕ್ವಿಂಟಸ್ ನ ಗಮನವನ್ನು ನಮ್ಮ ಖಾಲಿ ಪಾನಪಾತ್ರೆಗಳತ್ತ ಹರಿಸಲಪ್ಪಣೆಯೆ ?

ಕ್ವಿಂಟಸ್ : ಅತಿಥಿಗಳ ಸೇವೆಗೆ ಸದಾ ಸಿದ್ಧ! ನಮ್ಮ ಬಂಡವಾಳದ ಬಲದಿಂದ ಪಡಖಾನೆನಡೆಸ್ತಿರೋ ಔರೇಲಿಯಸ್ ಒಳ್ಳೇ ಚುರುಕಾದ ಮದ್ಯವನ್ನೇ ಕಳಿಸಿದ್ದಾನೆ. ತಗೊಳ್ಳಿ, ಇದು ಔರೇಲಿಯಸ್‌ನ ವಿಶೇಷ ಮದ್ಯ ಮಿಶ್ರಣ. .... ರೋಮ್‌ನಲ್ಲಿ ಬೇರೆಲ್ಲೂ ಸಿಕ್ಕೋದಿಲ್ಲ!
(ಚಪ್ಪಾಳೆ— ಹೆಣ್ಣು ಗುಲಾಮರು ಮದ್ಯವನ್ನು ತಂದು ಬಟ್ಟಲಿಗೆ ಸುರಿ ಯುತ್ತಾರೆ)

ಸಿಸೆರೋ : ನನ್ನ ಬಂಡವಾಳದ ಚುರುಕು ಹೇಗಿದೆ ?

ಲುಕ್ಸಿಯುಸ್ : ಚುರುಕಾಗೇ ಇದೆ. ಸಿಸೆರೋ ... ನಾನು ಕ್ಯಾಟಲೀನನ ಒಳಸಂಚಿನ ಆಳವಾದ ಅಧ್ಯಯನ ಮಾಡಿದ್ದೇನೆ. ಅದರಲ್ಲಿ ನಿನ್ನ ಪಾತ್ರದ ಮಹತ್ವ ದ ಬಗ್ಗೆ ಅನುಮಾನವೇ ಇಲ್ಲ.... ನಿನ್ನ ಬಂಡವಾಳಾನ ನೀನು ಹೀಗೆ ಅತಿ ಚಲಾವಣೆ ಮಾಡೋದು ಮಾತ್ರ....

ಸಿಸೆರೋ : ಧನ್ಯವಾದಗಳು, ಲುಕ್ಸಿಯಸ್, ನಾನು ಯಾವಾಗಲೂ ಚಲಾವಣೇಲಿರೋ ಕೆ ಇಷ್ಟಪಡ್ತೀನಿ.

ಲುಕ್ಸಿಯುಸ್ : ನೀನು ತಪ್ಪು ತಿಳಿಯದಿದ್ದರೆ ನನ್ನದೊಂದು ಅನುಮಾನ ಹೇಳಲೇ ?

ಸಿಸೆರೋ : ಹೇಳು, ಲುಕ್ಸಿಯಸ್. ಆದರೆ ನನ್ನ ಮಹತ್ವವನ್ನು ಕಡೆಗಣಿಸುವ ಯಾವ ವಿಚಾರವನ್ನೂ ನಾನು ಒಪ್ಪಲು ಸಿದ್ಧನಿಲ್ಲ. ಅದನ್ನಷ್ಟು ನೆನ

ಪಿಟ್ಟುಕೊಂಡರೆ ಒಳ್ಳೇದು.

ಲುಕ್ಸಿಯಸ್ : ಆಯ್ತು. ನನ್ನ ವಿಚಾರ ನಿನಗೆ ಪೂರ್ತಿ ಖುಷಿ ಕೊಡದೇ ಇದ್ದರೂ, ಇತಿಹಾಸಕಾರನಾಗಿ, ನನಗನಿಸಿದ್ದನ್ನ ಹೇಳ್ತೀನೆ. ಕ್ಯಾಟಲೀನನ ನಿರ್ನಾಮ ಮಾಡಿ, ತಾವು ರಾಜಕೀಯ ಪ್ರಮುಖರಾಗೋ ಉದ್ದೇಶದಿಂದ ಸೀಸರ್, ಕ್ರಾಸಸ್ ಮುಂತಾದವರು ತಾವೇ ಮುಂದೆ ಬರಲು ಹಿಂಜರಿದು, ಈ ಕೆಲಸಾನ ನಿನ್ನಿಂದ ಮಾಡಿಸಿರಬಹುದಲ್ಲವೇ ? ಅಂದ್ರೆ, ಅದೇನೂ ಕಡಿಮೆ ಮಹತ್ವದ್ದು ಅಂತ ಅಲ್ಲ...

ಸಿಸೆರೋ : ಏನು ಏನು ನೀ ಹೇಳೋದು ಲುಕ್ಸಿಯಸ್ ?

ಲುಕ್ಸಿಯಸ್ : ಈ ಪ್ರಶ್ನೆ ಬಹಳ ದಿನಗಳಿಂದ ನನ್ನ ಮನಸ್ಸನ್ನ ಕೊರೀತಾ ಇದೆ. ಒಳಸಂಚಿನ ವಿಚಾರಣೆ ಕಾಲದಲ್ಲಿ, ಅನಂತರ ಇವರೆಲ್ಲಾ ನಡೆದುಕೊಳ್ತಾ ಇರೋ ರೀತಿ ನೋಡಿ ...

ಸಿಸೆರೋ : ಆದ್ರೆ ನಿನ್ನ ಅನುಮಾನಕ್ಕೆ ಏನು ಕಾರಣ, ಹೇಳ್ತೀಯಾ?

ಲುಕ್ಸಿಯಸ್ : ಇಲ್ಲಿ ನೋಡು ಸಿಸೆರೋ, ಕ್ಯಾಟಲೀನ ತಾನು ಬಡಬಗ್ಗರ, ಜನಸಾಮಾನ್ಯರ ಪಕ್ಷಪಾತಿ, ಅವರ ಹಿತಾಸಕ್ತಿಗಳ ರಕ್ಷಕ ಅಂತ ಹೇಳಿಕೊಂಡು ಮುಂದೆ ಬಂದೋನು. ಆದ್ದರಿಂದ ಸಹಜವಾಗಿಯೇ ಶ್ರೀಮಂತರ ಶತ್ರುವಾದ, ಪಾಂಪೆಯ ವಿರೋಧಿಯಾದ. ಸೀಸರ್, ಕ್ರಾಸಸ್ ಇವರೆಲ್ಲಾ ಯಾರು ? ಶ್ರೀಮಂತ ವರ್ಗದೋರು, ಗೌರವಸ್ಥರು, ಪ್ರತಿಷ್ಠೆಯ ಜನ. ತಾವು ಕ್ಯಾಟಲೀನನ ವಿರೋಧಿಗಳು ಅಂತ ತೋರಿಸಿಕೊಂಡರೆ, ಶ್ರೀಮಂತರ ಸಹಾನುಭೂತಿ ಅವರಿಗೆ ಸಿಕ್ಕೋದಿಲ್ಲ, ಆದ್ದರಿಂದ ಮುಂದೆ ಬರೋದಕ್ಕೆ ಅಡಚಣೆ— ಸಿನೇಟ್ ಪೂರ್ತಿ ಶ್ರೀಮಂತರ ಕೈಯಲ್ಲೇ ಇದೆ. ಇನ್ನು, ಬಡಬಗ್ಗರ ಪಕ್ಷಪಾತಿಗಳು ಅಂತಾನೂ ಪ್ರಕಟವಾಗಿ ಹೇಳಿಕೊಳ್ಳೋದು ಅವರಿಗೆ ಸಾಧ್ಯವಿಲ್ಲ. ಶ್ರೀಮಂತರ ಪರ ಅಂತ ಹೇಳಿಕೊಂಡರೆ, ಜನಸಾಮಾನ್ಯರ ಬೆಂಬಲ ಸಿಕ್ಕೋದಿಲ್ಲ, ಕ್ಯಾಟಲೀನನ ಬಲ ಹೆಚ್ಚುತ್ತೆ. ಇಂಥ ಪರಿಸ್ಥಿತೀಲಿ, ಶ್ರೀಮಂತರನ್ನ ಎದುರು ಹಾಕಿಕೊಳ್ಳದೆ, ಬಡಬಗ್ಗರ ಸಹಾನುಭೂತೀನೂ ಕಳೆದುಕೊಳ್ಳದೆ, ಕ್ಯಾಟಲೀನನನ್ನು ಸದೆಬಡಿದು, ರಾಜಕೀಯ ಪ್ರಾಮುಖ್ಯತೆ ಪಡ್ಯೋದು ಹೇಗೆ? ಅದಕ್ಕೇ ನಿನ್ನನ್ನು ಬಳಸಿಕೊಂಡರು. ನೀನು ಅಮಾಯಕನಾಗಿ, ಶ್ರೀಮಂತ ವರ್ಗದ ವಕ್ತಾರನಾಗಿ, ಜನಸಾಮಾನ್ಯರ ವಿರೋಧಿಯಾಗಿ ಸೀಸರನ ರೊಟ್ಟಿ ತುಪ್ಪಕ್ಕೆ ಬೀಳುವಂತೆ ಮಾಡಿದೆ.

ಸಿಸೆರೋ : (ಹತಾಶನಾಗಿ ಗಟ್ಟಿಯಾಗಿ ಕಿರುಚುತ್ತಾ) ಇಲ್ಲ.... ಇದು ಸಾಧ್ಯವಿಲ್ಲ .... ನನ್ನ ಬುದ್ಧಿಮತ್ತೆ, ನನ್ನ ಶ್ರಮ, ನನ್ನ ಆದರ್ಶ, ನನ್ನ ನಿಷ್ಠೆ, ನನ್ನ ಜೀವನದ ಅತ್ಯಂತ ಮಹತ್ವದ ಸಾಧನೆ ಇಷ್ಟೊಂದು ಅರ್ಥಹೀನವಾಗಿ ರೋದು ಸಾಧ್ಯವಿಲ್ಲ.... ನನ್ನಿಂದ ರೋಮ್‌ನ ಪ್ರಜಾಪ್ರಭುತ್ವ ಉದ್ಧಾರ ವಾದುದು ಮೋಸವಲ್ಲ, ಸುಳ್ಳಲ್ಲ, ನನ್ನ ಜೀವನ ವ್ಯರ್ಥವಲ್ಲ....

ಕ್ವಿಂಟಸ್ : ಲುಕ್ಸಿಯಸ್, ಸಾಕು ನಿನ್ನ ವಿಪರೀತದ ವ್ಯಾಖ್ಯಾನ. ಚರಿತ್ರಕಾರ, ನಡೆದುದನ್ನು ನಡೆದ ಹಾಗೆ ಬರೆದಿಡಬೇಕೇ ಹೊರತು, ಅದಕ್ಕೆ ಬಣ್ಣ ಕಟ್ಟಿ, ತನ್ನ ಊಹಾಪೋಹಗಳನ್ನು ಹೊಸೆಯಬಾರದು. ಇದೇನು, ಎಲ್ಲಾ ಕಣ್ಣುಮುಚ್ಚಿಕೊಂಡು ಮಲಗಿ ನಿದ್ದೆಹೊಡೆಯುತ್ತಿದ್ದಾರಲ್ಲ .... ಕುಡಿದದ್ದು ಜಾಸ್ತಿಯಾಯಿತು.... ಊಟ ಬರಲಿ... ರುಫಸ್, ಏಳು ಊಟವಾದ ಮೇಲೆ ಮಲಗಿಕೊಳ್ಳುವಿಯಂತೆ.... ಕೆಟಲಸ್, ಏಳು, ಏಳು— ನಿನಗೆ ನಿನ್ನ ಮಿತಿಯೇ ತಿಳಿದಿಲ್ಲ .. ಅಟಕಸ್, ಇದೇನು, ನೀನು ಕೂಡ ಅಮಲಿನಲ್ಲಿದ್ದೀಯಾ ?

ಕೆಟಲಸ್ : (ಎಚ್ಚರ ಮಾಡಿಕೊಳ್ಳುತ್ತಾ, ತೊದಲುತ್ತಾ)ಹಾಂ.... ನೈತಿಕ ಅಧಃಪತನ ಕ್ಲೋಡಿಯಾ ಮನೆ ನೋಡಿದೀರಾ ಯಾರಾದ್ರೂ? ರುಫಸ್ ನೋಡಿ ದಾನೆ........ಅವಳ ಮನೆ ಮಹಡಿ ಮೇಲೆ ನಿಂತುಕೊಂಡ್ರೆ, ಪೂರ್ವಕ್ಕೆ ಒಂದು ಸಾರ್ವಜನಿಕ ಸ್ನಾನಗೃಹ ಇರೋದು ಕಾಣುತ್ತೆ........ ಕ್ಲೋಡಿಯಾ ದಿನಾ ಬೆಳಿಗ್ಗೆ ಅಲ್ಲಿ ಬಂದು ನಿಂತುಕೊಂಡು, ಸ್ನಾನ ಮಾಡೋ ಬೆತ್ತಲೆ ಗಂಡಸರನ್ನ ನೋಡ್ತಾಳೆ.... ಆಮೇಲೆ, ತನ್ನ ಗುಲಾಮರನ್ನ ಕಳಿಸಿ, ತನಗಿಷ್ಟ ಬಂದೋರನ್ನ ಸ್ನಾನಗೃಹದಿಂದ ಕರೆಸಿ ಕೋತಾಳೆ.... ಹ ಹ್ಹಾ ಹ್ಹಾ ...

ಸಿಸೆರೋ : ಲುಕ್ಸಿಯಸ್ ನಿನ್ನ ಸುಳ್ಳು ಚರಿತ್ರೇನ ಜನ ನಂಬಬಾರದು .... ನಿಜ ಹೇಳಬೇಕೂಂದ್ರೆ.... ನೀನು ಅದನ್ನ ಬರೀಲೇಬಾರದು, ನನ್ನ ಆಣೆ. ಅಷ್ಟೂ ಮೀರಿ ನೀನು ಬರೆದದ್ದೇ ಇದ್ರೆ, ನನ್ನ ಶಕ್ತಿಮೀರಿ, ಅದು ಪ್ರಕಟ ಆಗದ ಹಾಗೆ ನಾನು ಎಚ್ಚರವಹಿಸುತ್ತೇನೆ .. ನಿಜವಾದ ಇತಿಹಾಸ ವನ್ನು ನಾನೇ ಬರೀತೇನೆ.... ಗ್ರೀಕ್ ಮತ್ತು ಲ್ಯಾಟಿನ್‌ನಲ್ಲಿ ಬರೀತೇನೆ ... ಕಾವ್ಯರೂಪದಲ್ಲಿ ಬರೀತೇನೆ.... ....(ಕಾವ್ಯ ಓದುವ ಗಂಭೀರ ಧಾಟಿ ಯಲ್ಲಿ) "ಓ ರೋಮಿನ ಅದೃಷ್ಟವೇ, ಆದೃಷ್ಟ ... ಕ್ಯಾನ್ಸಲ್ ಆಗಿ ನಾ ಅಧಿಕಾರ ಹಿಡಿದ ದಿನವೇ ರೋಮಿನ ಪವಿತ್ರ ಜನ್ಮದಿನ....

ಲುಕ್ಸಿಯಸ್ : ನಾನೇ ಚರಿತ್ರೆಯಲ್ಲ....ನಾನು ಕೇವಲ ಚರಿತ್ರಕಾರ.

ಕೆಟಲಸ್ : ಮಹಾಕವಿ ಕೆಟಲಸ್ ಹೇಳ್ತಾನೆ, ಕಿವಿ ನಿಮಿರಿಸಿ ಕೇಳಿ : ನಿಶ್ಯಬ್ದ ಗೋರಿಯೊಳಗೂ ಸುಖದ, ಸಮಾಧಾನದ ಅನುಭವ ಸಾಧ್ಯವಿದ್ದರೆ, ನಾವು ಪಡಿಸುವ ದುಃಖದ ಗೋಳು ಕರೆಯುನದಾವ ಕಾಲಕೆ ಮೆಲಕು ಹಾಕಲು ಕಾದಿಡಬೇಕು ? ಇದ ತಿಳಿದುಕೋ, ಕೊಂಚ. ಪ್ರೇಮದಿಂದ, ಸ್ನೇಹದಿಂದ, ಉದುರಿದ ಕಂಬನಿಯೊಂದು, ನಿಶ್ಯಬ್ದದೆಡೆಗೆ ಹರಿದರೆ, ಅಕಾಲ ಮೃತ್ಯುವೇ ಬರಲಿ, ಭಯವಿರದು ಅನುಗ್ರಹಿಸುವ ಪ್ರೇಮಶಕ್ತಿಯೊಂದಿರಲಿ....

ಲುಕ್ಸಿಯಸ್ : ಚರಿತ್ರಕಾರರ ಮೇಲೆ ಒತ್ತಾಯ ತರೋದು ಪರಮ ಅನ್ಯಾಯ, ಚರಿತ್ರೆ ಕ್ಷಮಿಸೋದಿಲ್ಲ.

ಸಿಸೆರೋ : ಲುಕ್ಸಿಯಸ್, ನೀನು ತುಂಬಾ ಕುಡಿದಿದೀಯಾ.... ○

ಯಾವ ಟೀಕೆಯೂ ಇಲ್ಲದೆ........

ನವದೆಹಲಿ. ಡಿ. 7 (ಯು. ಎನ್ .ಐ)– ಕಳೆದ ನಾಲ್ಕೂವರೆ ವರ್ಷಗಳ ಅವಧಿಯಲ್ಲಿ ದೇಶದ ವಿವಿಧ ಭಾಗಗಳಲ್ಲಿ 32 ಸಾವಿರದಷ್ಟು ಪರಿಶಿಷ್ಟ ಜಾತಿ ಮತ್ತು ಬುಡಕಟ್ಟಿನವರ ಕೊಲೆಗಳಾಗಿದ್ದು ಅವರ 44 ಸಾವಿರದಷ್ಟು ಮಹಿಳೆಯರು ಅತ್ಯಾಚಾರಕ್ಕೆ ಒಳಗಾಗಿದ್ದಾರೆ.

ಪರಿಶಿಷ್ಟ ಜಾತಿ ಮತ್ತು ಬುಡಕಟ್ಟೇತರರು ಈ ಕೃತ್ಯಗಳನ್ನು ಎಸಗಿದ್ದಾರೆ ಎಂದು ರಾಜ್ಯಸಭೆ ಮುಂದೆ ಇಟ್ಟ ಅಧಿಕೃತ ದಾಖಲೆಯಲ್ಲಿ ತಿಳಿಸಲಾಗಿದೆ.

(ಪ್ರಜಾವಾಣಿ ಸುದ್ದಿ)

ನಾನೇಕೆ ಅಮೇರಿಕಾ ಬಿಟ್ಟು ಬಂದೆ ?

○ ಡಾ|| ಎ. ಎಸ್. ನಾಗರಾಜ್

ನಾನು ಅಮೇರಿಕಾಕ್ಕೆ ಮೊದಲು ಹೋಗಿದ್ದು 1956 ರಲ್ಲಿ. ವ್ಯವಸಾಯದಲ್ಲಿ ಒಂದು ಪಿ.ಎಚ್.ಡಿ ಡಿಗ್ರಿ ಗಿಟ್ಟಿಸಿಕೊಂಡು ಬರೋಣ ಹಾಗೇ ಅಲ್ಲಿನ ರಂಗು ರಂಗಿನ ಜೀವನದಲ್ಲಿ ಪಾಲುಗೊಂಡು, ಜೀವನದಲ್ಲಿ ಒಂದು ಹೊಸ ಅನುಭವ ಪಡೆದುಕೊಂಡು, ಒಂದು ಹೊಸ ಸಂಸ್ಕೃತಿಯಲ್ಲಿ ಮಿಂದು ಬರೋಣ ಎಂದು. ಏಳು ವರ್ಷ ಅಲ್ಲಿ ವ್ಯಾಸಂಗ ನಂತರ ಸಂಶೋಧನೆಗಳನ್ನು ಮಾಡಿ ಅಲ್ಲಿನ ವಿದ್ಯಾಭ್ಯಾಸ ಕ್ರಮಕ್ಕೆ, ಉಪಾಧ್ಯಾಯ ಮತ್ತು ವಿದ್ಯಾರ್ಥಿ ವಿದ್ಯಾರ್ಥಿನಿಯರ ಮಧ್ಯೆ ಇರುವ ಸುಂದರವಾದ ಸಂಬಂಧಕ್ಕೆ ಮನಸೋತೆ. ಅಲ್ಲಿಯ ಸಂಶೋಧಕರು ತಮ್ಮ ಕೆಲಸದಲ್ಲಿ ತೋರುವ ಆಸಕ್ತಿ ತಲ್ಲೀನತೆ ನಮ್ಮೆಲ್ಲರಿಗೂ ಆಶ್ಚರ್ಯಕಾರಕವಾಗಿತ್ತು. ಉಪಾಧ್ಯಾಯರಿಗೆ ವೃತ್ತಿಯ ಬಗ್ಗೆ ಅಪಾರಜ್ಞಾನ, ಆಳವಾದ ಅನುಭವ ಇದ್ದರೂ ಅಹಂಕಾರವಿಲ್ಲ. ವಿದ್ಯಾರ್ಥಿಗಳನ್ನು ಸಮಾನತೆಯಿಂದ ಕಂಡು, ನಿಸ್ಮೈಯಿಂದ ಪಾಠ ಹೇಳುತ್ತಾರೆ. ಒಳ್ಳೆಯ ಕೆಲಸ ಮಾಡಿದವರಿಗೆ ಎಲ್ಲೆಲ್ಲೂ ಉತ್ತೇಜನ, ಗೌರವ, ಕೈ ತುಂಬ ಸಂಬಳ ಸಂಶೋಧನೆಗೆ ಬೇಕಾದ ಎಲ್ಲ ಸೌಲಭ್ಯಗಳು ಮತ್ತು ಸ್ವಾತಂತ್ರ್ಯ.

ಅಲ್ಲಿನ ಜನಗಳನ್ನು ಮಾತನಾಡಿಸುವುದು, ಅವರೊಡನೆ ವ್ಯವಹರಿಸುವುದು ಸುಲಭ. ಅವರ ಮುಖಗಳಲ್ಲಿ ನಿಮ್ಮನ್ನು ಕಂಡಾಗ ಮುಗುಳ್ನಗೆ–ಸ್ವಲ್ಪ ಗುರುತಾದರೆ ಸಾಕು ಏಕವಚನದಲ್ಲಿ ಮಾತನಾಡಿಸುವಷ್ಟು ಆತ್ಮೀಯರಾಗಿಬಿಡುತ್ತಾರೆ. ಹುಡುಗರೊಂದು ಗುಂಪು ಹುಡುಗಿಯರೊಂದು ಗುಂಪು ಕಟ್ಟಿಕೊಳ್ಳುವುದಿಲ್ಲ. ಎಲ್ಲಾ ಸುಲಭವಾಗಿ ಬೆರೆಯುತ್ತಾರೆ, ಸ್ನೇಹಿತರಾಗುತ್ತಾರೆ. ಇದೊಂದು ಸುಂದರವಾದ ಅನುಭವ. ಒಬ್ಬಳು ಅಮೇರಿಕನ್ ಹುಡುಗಿ ನನಗೆ ತುಂಬಾ ಆತ್ಮೀಯ ಸ್ನೇಹಿತೆಯಾಗಿ ಕಡೆಗೆ ನನ್ನ ಹೆಂಡತಿಯಾದಳು (ಹೆಸರು ನ್ಯಾನ್ಸಿ).

ಅಮೇರಿಕಾದ ಅನೇಕ ಸ್ಥಳಗಳಲ್ಲಿ ಪ್ರಕೃತಿ ಸೌಂದರ್ಯ ತುಂಬಾ ಮನ ಮೋಹಕವಾದದ್ದು ಯೆಲ್ಲೊಸ್ಟೋನ್ ಮತ್ತು ಯೋಸೆಮಿಟಿ ನ್ಯಾಷನಲ್ ಪಾರ್ಕು ಗಳಲ್ಲಿರುವ ಅದ್ಭುತ ಕಾಡುಗಳು, ಝರಿಗಳು, ಜಲಪಾತಗಳು, ನೆಲದಿಂದ ನೂರು ಅಡಿ ಮೇಲಕ್ಕೆ ಹಾರುವ ನೀರಿನ ಬುಗ್ಗೆಗಳು, ಕಾಡುಮೃಗಗಳು, ಗ್ರ್ಯಾಂಡ್ ಕ್ಯಾನ್ ಯನ್ ನ್ಯಾಷನಲ್ ಪಾರ್ಕಿನಲ್ಲಿ ಭೂಮಿಯ ಮಟ್ಟದಿಂದ ಸಾವಿರಾರು ಅಡಿ ಕೆಳಗಿರುವ ಪರ್ವತ ಶ್ರೇಣಿ ಮತ್ತು ನದಿ ಇವೆಲ್ಲಾ ನನ್ನನ್ನು ಕೈ ತೆರೆದು ಪ್ರೀತಿ ಯಿಂದ 'ನೀನಿಲ್ಲೇ ಇರು' ಎಂದು ಆಮಂತ್ರಣ ಕೊಟ್ಟವು.

ಇವೆಲ್ಲದರ ಜತೆಗೆ ಅಲ್ಲಿಯ ನಿತ್ಯಜೀವನ ಎಷ್ಟು ಸರಳ ಮತ್ತು ಸುಲಭ. ಮನೆ ತುಂಬಾ ಕೆಲಸ ಹಗುರ ಮಾಡುವ ಸಲಕರಣೆಗಳು, ಸುಮಧುರ ಸಂಗೀತಕ್ಕೆ ಸ್ಟೀರಿಯೋ ರೇಡಿಯೋಗ್ರಾಮ್ ಮತ್ತು ಟೇಪ್‌ರಿಕಾರ್ಡರು. ಆಫೀಸುಗಳಲ್ಲಿ ಜಟ್-ಪಟ್ ಕೆಲಸ. ಲಂಚವಿಲ್ಲ, ನಾಳೆ ಬನ್ನಿಗಳ ಪುನರುಚ್ಚಾರಣೆ ಇಲ್ಲ. ಗಡಸಾಗಿ 'ಏನ್ರೀ ಬೇಕು' ಎಂದು ಕೇಳುವ ವರ್ತಕರಿಲ್ಲ; ಬದಲಾಗಿ ಮುಗುಳ್ನಗೆಯಿಂದ, ಸಿಹಿ ಯಾಗಿ ಮಾತನಾಡುವ ವರ್ತಕರು ಎಲ್ಲಾ ಕೆಲಸಗಳಿಗೂ ಗೌರವ. ಯಾವ ಕೆಲಸ ಮಾಡಿದರೂ ನಿಮ್ಮನ್ನು ನಿಕೃಷ್ಟವಾಗಿ ಕಾಣುವುದಿಲ್ಲ. ಪೋಲೀಸರೂ ಕೂಡ ನಿಮ್ಮನ್ನು ಚೆನ್ನಾಗಿಯೇ ಮಾತನಾಡಿಸಿ, ತಪ್ಪು ಮಾಡಿದಾಗ ನಗುನಗುತ್ತಾ ಜುಲ್ಮಾನೆ ಹಾಕುತ್ತಾರೆ. ಎರಡು ಕಾರುಗಳಿಗೆ ಡಿಕ್ಕಿ ಹೊಡೆದಾಗ, ಮಾಲೀಕರುಗಳು ಕೆಳಗಿಳಿದು, ನಗುಮುಖ ದಿಂದ ನಮಸ್ಕಾರ ಹೇಳಿ, ಕೇಸ್ ಹಾಕುವುದಿಕ್ಕೆ ಇನ್‌ಷೂರೆನ್ಸ್ ನಂಬರು ಬರೆದು ಕೊಳ್ಳುತ್ತಾರೆ ! ಹೋಟೆಲುಗಳಲ್ಲಿ ಭಾರತದಲ್ಲಿರುವಂತೆ, ನಿಮ್ಮ ಮುಖ ನೋಡದೆ ತಿಂಡಿಗಳ ಹೆಸರುಗಳನ್ನೆಲ್ಲಾ ಒದರಿ, ನಿಮ್ಮ ಉತ್ತರಕ್ಕೂ ಕಾಯದೆ ಓಡಿ ಹೋಗುವ ಕೊಳಕು ಮಾಣಿಗಳಿಲ್ಲ. ಶುಭ್ರವಾದ ಯೂನಿಫಾರಂ ಹಾಕಿಕೊಂಡು, ನಿಮ್ಮೆದುರಿಗೆ ನಿಂತು ಮುಗುಳ್ನಗೆಯಿಂದ 'ಹೈ' 'ಗುಡ್‌ಮಾರ್ನಿಂಗ್' ಇತ್ಯಾದಿ ಹೇಳಿ, ನಿಮ್ಮ ಅವಶ್ಯ ಕತೆಗಳನ್ನು ಬರೆದುಕೊಂಡು ಹೋಗುವ ಯುವಕ ಯುವತಿ ಮಾಣಿಯರು !

ಸಾಕು, ಸಾಕು, ಇನ್ನು ಹೆಚ್ಚಿಗೆ ಹೇಳಿದರೆ ಭಾರತದಿಂದ ಅಮೇರಿಕಾಕ್ಕೆ ವಲಸೆ ಹೋಗಬೇಕೆನ್ನುವವರ ಸಂಖ್ಯೆ ಮತ್ತೂ ಹೆಚ್ಚಾದೀತು. ಇಷ್ಟೆಲ್ಲಾ ಸೌಕರ್ಯಗಳ ನ್ನು, ಸುಲಭ ಜೀವನವನ್ನು, ವೃತ್ತಿಯಲ್ಲಿ ಉತ್ತೇಜನ ಕೊಡುವ ವಾತಾವರಣವನ್ನು ಬಿಟ್ಟು ಹೋಗುವವನ ಎಂಥಾ ಮೂರ್ಖ ಎಂದು ನಿಮಗನ್ನಿಸಬಹುದು. ಅಥವಾ ನಿಮ್ಮಂತೆ ನಾನೂ ಕೂಡ ಅಲ್ಲಿ ಕೆಲಸ ಗಿಲಸ ಸರಿಯಾಗಿ ಮಾಡದೆ ನನ್ನನ್ನು ಓಡಿಸಿ ಬಿಟ್ಟರೋ ಅದನ್ನು ನಾನು ಹೇಗೆ ಹೇಳಿಕೊಳ್ಳೋಕಾಗುತ್ತೆ–ಬೇರೆ ಗೌರವ ಪೂರ್ವಕ

ವಾದ ಕಾರಣಗಳನ್ನು ಕೊಡುವುದು ಸೂಕ್ತ. ಅಮೇರಿಕಾ ಸಂಸ್ಕೃತಿಯಲ್ಲಿ ಎದ್ದುಕಾಣುವ ಅಂತಹ ಹಲವಾರು ಕಾರಣಗಳಿವೆ.

ಅಮೇರಿಕಾದಲ್ಲಿ ಎಲ್ಲಾ ರಭಸದಿಂದ ಓಡುತ್ತಿರುತ್ತವೆ— ಕಾರುಗಳು, ಜೆಟ್ ವಿಮಾನಗಳು, ಮಾತ್ರವಲ್ಲ- ಕಂಪನಿಗಳ ಮೇನೇಜರುಗಳಿಂದ ಹಿಡಿದು, ಹೋಟೆಲಿನಲ್ಲಿ ನಿಮಗೆ ತಿಂಡಿ ಕೊಡುವ ಪರಿಚಾರಕ (ನಿ) ಯರುಗಳವರೆಗೆ ಎಲ್ಲಾ ನಾಗಾಲೋಟದಿಂದ ಓಡುತ್ತಿರುತ್ತಾರೆ. ವೈಜ್ಞಾನಿಕ ಸಂಶೋಧನೆಗಳನ್ನು ಕೂಡ ಅತಿ ವೇಗದಿಂದಲೇ ಮಾಡಬೇಕು. ಇಲ್ಲದಿದ್ದರೆ ಮತ್ತೊಂದು ಪ್ರಯೋಗಶಾಲೆಯಿಂದ ಒಬ್ಬ ವಿಜ್ಞಾನಿ ನೀವು ಮಾಡುತ್ತಿರುವ ಸಂಶೋಧನೆಯ ಬಗ್ಗೆಯೇ ಕೆಲಸ ಮಾಡಿ ಅದರ ಬಗ್ಗೆ ಒಂದು ಲೇಖನ ಬರೆದುಬಿಡುತ್ತಾನೆ. ಈ ವೇಗದ ಅವಶ್ಯಕತೆ ನನಗಂತೂ ತುಂಬಾ ಉದ್ವೇಗ ಉಂಟು ಮಾಡುತ್ತಿತ್ತು. ವೃತ್ತಿಯಿಂದ ರಜೆ ಪಡೆದು ಒಂದು ಪಾರ್ಕಿಗೋ, ಸಮುದ್ರತೀರಕ್ಕೋ ವಿಹಾರಕ್ಕಾಗಿ ವಿಶ್ರಾಂತಿಗಾಗಿ ಹೋದಾಗ ಕೂಡ, ದಾರಿಯಲ್ಲಿ ನಾಗಾಲೋಟದಿಂದ ಓಡುವ ಕಾರುಗಳ ಜತೆಗೆ ನಾವೂ ಹೆಣಗಾಡಲೇ ಬೇಕು. ವಿಹಾರ ಸ್ಥಳವನ್ನು ತಲುಪಿದ ಮೇಲೆ ಅಲ್ಲಿ ಕಿಕ್ಕಿರಿದ ಜನಸಂದಣಿ, ರೇಡಿಯೋ ಟೇಪ್ ರೆಕಾರ್ಡರ್‌ಗಳ ಧಾಂದಲೆ, ಈಜುವ ಕೊಳದಲ್ಲಿ ನೂರಾರು ಜನ. ಒಂದು ಭಾರಿ ಸಮಾರಾಧನೆಗೆ ಹೋದರೆ ನಮಗೆ ಎಷ್ಟು ವಿಶ್ರಾಂತಿ ಸಿಕ್ಕುತ್ತೋ, ಅಷ್ಟೇ ವಿಶ್ರಾಂತಿ ಅಮೇರಿಕಾದ ವಿಹಾರ ಸ್ಥಳಗಳಲ್ಲಿ ನಮಗೆ ಸಿಕ್ಕುವುದು.

ಡಿಪಾರ್ಟ್‌ಮೆಂಟು ಸ್ಟೋರುಗಳಲ್ಲಿ ತುಂಬಿರುವ ಸಾಮಗ್ರಿಗಳನ್ನು ಹೇರಳವಾಗಿ ಕೊಳ್ಳುವ ಆಸೆಯನ್ನು ಆಕರ್ಷಕ ಜಾಹಿರಾತುಗಳು ಕಲಿಸುತ್ತವೆ, ಪ್ರೋತ್ಸಾಹಿಸುತ್ತವೆ, ಹೆಚ್ಚಿಸುತ್ತವೆ. ಅದಕ್ಕೆ ಬೇಕಾದ ಹಣಕ್ಕಾಗಿ ಗಂಡ ಹೆಂಡಿರು ಇಬ್ಬರೂ ಕೆಲಸ ಮಾಡಬೇಕು. ಹಲವಾರು ಸಂಸಾರಗಳಲ್ಲಿ 8 ಗಂಟೆ ಒಂದು ಕೆಲಸ ಮಾಡಿ ನಂತರ 2-3 ಗಂಟೆಯ ಮತ್ತೊಂದು ಕೆಲಸ ಕೂಡ ಮಾಡುವುದುಂಟು. ಮನೆಗೆ ಬರುವ ಹೊತ್ತಿಗೆ ಸುಸ್ತಾಗಿರುತ್ತದೆ. ಒಂದೆರಡು ಗಂಟೆ ಹೊತ್ತು ಟಿ. ವಿ. ನೋಡಿ ಅದರ ಮುಂದೆಯೇ ಊಟ ಮಾಡಿ, ಕಾಲೆಳೆದುಕೊಂಡು ಹೋಗಿ ನಿದ್ರೆ ಮಾಡುವುದು. ಹೆಂಡತಿ ಮಕ್ಕಳಿಗೇ ಸಮಯವಿಲ್ಲ. ಇನ್ನು ನಮ್ಮಂತಹ ಸ್ನೇಹಿತರಿಗೆ ಸಮಯ ಎಲ್ಲಿಂದ ತಂದಾರು!

ನಾನು ವಿದ್ಯಾರ್ಥಿಯಾಗಿದ್ದಾಗ ಅನೇಕ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿದ್ದೆ. ಸಹಪಾಠಿಗಳ ಜತೆ, ವಿದ್ಯಾರ್ಥಿ ಸಂಘಗಳ ಸದಸ್ಯರುಗಳ ಜತೆ, ಹರಟೆ ಕೊಚ್ಚುವುದಕ್ಕೆ ಸಮಯ ಸಿಕ್ಕುತ್ತಿತ್ತು. ಆದ್ದರಿಂದ ಒಂಟಿತನ ನನ್ನನ್ನು ಕಾಡಲಿಲ್ಲ. ಅಮೇರಿಕನ್

ವಿದ್ಯಾರ್ಥಿಗಳ ಸ್ನೇಹ ಅಷ್ಟೊಂದು ಆಳವಾದದ್ದಲ್ಲ ಎನ್ನುವ ಭಾವನೆ ಬಂದರೂ, ನಮ್ಮ ವಿದ್ಯಾಲಯದಲ್ಲಿ 200 ಜನ ಭಾರತೀಯರು ಕೂಡ ಇದ್ದುದರಿಂದ ಅವರಲ್ಲಿ ಕೆಲವರ ಜತೆ ಆಳವಾದ ಸ್ನೇಹ ಬೆಳೆಸುವುದು ಸಾಧ್ಯವಾಯಿತು.

ನಾನು ಪಿ. ಎಚ್. ಡಿ ಸಂಪಾದಿಸಿಕೊಂಡು, ಹೆಂಡತಿ ಮಕ್ಕಳ ಸಮೇತ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯಕ್ಕೆ ಸಂಶೋಧನೆಗಾಗಿ ಹೋದೆ. ಅಲ್ಲಿ ವಿದ್ಯಾರ್ಥಿಗಳೊಡನೆ ಸಂಪರ್ಕ ಬಹಳ ಕಡಿಮೆಯಾಯ್ತು. ನಮ್ಮ ಸಹೋದ್ಯೋಗಿಗಳೇ ಸ್ನೇಹಿತರು. ಅವರೆಲ್ಲಾ 100% ಅಮೇರಿಕನ್ನರು. ನಮಗೆ ಯಾರ ಮನೆಗಾದರೂ ಹೋಗಬೇಕು ಯಾರೊಡನೆಯಾದರೂ ಹರಟೆ ಕೊಚ್ಚಬೇಕು ಎನ್ನುವ ಆಸೆ ಬಂದಾಗ, ಯಾರಿಗಾದರೂ ಫೋನ್ ಮಾಡಿ "ಜಾನ್ ಇವತ್ತು ನಿಮಗೆ ಬಿಡುವಾಗಿದೆಯೇ" ಎಂದು ವಿಚಾರಿಸಿದಾಗ ಜಾನ್‌ಗೆ "ಕಾರು ತೊಳೆಯುವ ಕೆಲಸ, ಮಾರನೆಯ ದಿನ ಸಿನಿಮಾ ನೋಡುವ ಕಾರ್ಯಕ್ರಮ ಇತ್ಯಾದಿ ಆದ್ದರಿಂದ ಮುಂದಿನವಾರ ಒಟ್ಟು ಸೇರುವುದಕ್ಕೆ ಪ್ರಯತ್ನ ಪಡೋಣ ಎಂಬ ಉತ್ತರ ದೊರೆಯುತ್ತಿತ್ತು. ನಂತರ ರಿಚರ್ಡ್‌ಗೆ, ಜೋಗೆ, ರಾಬರ್ಟ್ ಎಲ್ಲರಿಗೂ ಒಬ್ಬರ ನಂತರ ಮತ್ತೊಬ್ಬರಿಗೆ ಫೋನ್ ಮಾಡಿದಾಗ ಎಲ್ಲರಿಂದಲೂ ಅದೇ ಉತ್ತರ. ವಿವರಗಳಲ್ಲಿ ಮಾತ್ರ ಸ್ವಲ್ಪ ವ್ಯತ್ಯಾಸಗಳು, ಕಡೆಗೆ ಬೆಂಗಳೂರಿಂದ ಬಂದಿದ್ದ ರಾಜನ್‌ಗೆ ಫೋನ್ ಮಾಡಿದರೆ ಅವನಿಂದ ಮಾತ್ರ" ಕೆಲಸ ಇದ್ದೇ ಇರುತ್ತೆ, ನಾಳೆ ಮಾಡಿದರಾಯಿತು. ಖಂಡಿತ ಬನ್ನಿ ಇಲ್ಲೇ ಊಟ ಮಾಡ್ಕೊಂಡು ಹೋಗಿ" ಎಂಬ ಉತ್ತರ ದೊರೆಯುತ್ತಿತ್ತು. ಅಥವಾ ಮತ್ತಿಬ್ಬರು ಭಾರತೀಯ ಮಿತ್ರರಿಂದ ಕೂಡ ಆತ್ಮೀಯ ಆಹ್ವಾನ ಸಿಕ್ಕುತ್ತಿತ್ತು. ಆದರೆ ಅವರೆಲ್ಲ ವಿದ್ಯಾರ್ಥಿಗಳು. ಓದಬೇಕು ಬರೆಯಬೇಕು. ಅವರ ಸಮಯ ನಾವು ತಾನೆ ಎಷ್ಟು ತೆಗೆದುಕೊಳ್ಳುವುದು ಸಾಧ್ಯ ಹಾಗಾಗಿ ಆತ್ಮೀಯ ಸ್ನೇಹಿತರ ಕೊರತೆ ನಮ್ಮನ್ನು ಆಳವಾಗಿ ಕಾಡುತ್ತಿತ್ತು.

ನಾನು ಇಲಿನಾಯ್ಸ್ ವಿಶ್ವವಿದ್ಯಾಲಯದಲ್ಲಿದ್ದಾಗ ಪತ್ರಿಕೆಗಳಲ್ಲೆಲ್ಲಾ ಮೊದಲ ಪೇಜಿನಲ್ಲಿ ಕಣ್ಣು ಕುಕ್ಕುತ್ತಿದ್ದ ವರ್ತಮಾನ: ಟೆಕ್ಸಾಸಿನಲ್ಲಿ ಒಬ್ಬ ವಿಶ್ವವಿದ್ಯಾಲಯದ ಒಂದು ಕಟ್ಟಡದ ಮೇಲೆ ಹತ್ತಿ ಹೋಗಿ 3-4 ಬಂದೂಕುಗಳನ್ನು ತುಂಬಿಕೊಂಡು, ಕೆಳಗಿದ್ದ ಜನರ ಮೇಲೆ, ಹೆಂಗಸರು ಮಕ್ಕಳಿಗೆ ರಿಯಾಯಿತಿ ತೋರಿಸದೆ ಗುಂಡು ಹಾರಿಸಿ 18 ಜನರನ್ನು ಕೊಂದ. ಅವನಿಗೆ ಜನ ಗುಂಡಿನೇಟಿಗೆ ಸಾಯುವುದನ್ನು ನೋಡುವುದೇ ಒಂದು ಆನಂದ. ಅವನ ಮನೆಯ ವಾತಾವರಣದಲ್ಲಿ ಅವನ ಮನಸ್ಸು ತುಂಬಾ ನೊಂದಿತ್ತಂತೆ. ನೊಂದು ನೊಂದು ಅವನ ಬುದ್ಧಿ ಕೆಟ್ಟಿತ್ತಂತೆ-ಭಾರತದಲ್ಲೂ

ನೊಂದವರ ಸಂಖ್ಯೆ ಕಡಿಮೆಯೇನಿಲ್ಲ. ಆದರೆ ಆ ನೋವಿಗೆ ನಮಗೆ ಸಂಬಂಧವೇ ಇಲ್ಲದ ಜನರನ್ನು ಬಲಿ ಕೊಡುವ ಪ್ರವೃತ್ತಿ ಬೆಳೆದು ಬಂದಿಲ್ಲ.

ಇಲಿನಾಯ್ಸ್ ವಿಶ್ವವಿದ್ಯಾಲಯದ ಅರ್ಬಾನ ಕ್ಯಾಂಪಸ್ಸಿನಲ್ಲಿ ನನ್ನ ಭಾರತೀಯ ಮಿತ್ರನೊಬ್ಬ ಸಿನಿಮಾದ 2 ನೇ ಆಟಕ್ಕೆ ಹೋಗಿ, ಮುಗಿದ ನಂತರ ನಡೆದುಕೊಂಡು ಮನೆಗೆ ಹೋಗುತ್ತಿದ್ದ. ಒಂದು ಕಾರಿನಲ್ಲಿ 7-8 ಜನ ಅಮೇರಿಕನ್ ಹುಡುಗ ಹುಡುಗೀಯರು ಬಂದು ಇವನನ್ನು ಹಿಡಿದುಕೊಂಡು ಎಲ್ಲಾ ಕಡೆಗಳಿಂದ ಕೋಲು, ಸೈಕಲ್ ಚೈನ್ ಇತ್ಯಾದಿಗಳಿಂದ, ಅವನು ಪ್ರಜ್ಞೆ ತಪ್ಪಿ ಬೀಳುವ ತನಕ ಹೊಡೆದರು. ಅಷ್ಟು ಹೊತ್ತಿಗೆ ಅದೃಷ್ಟ ವಶಾತ್ ಒಂದು ಟ್ಯಾಕ್ಸಿ ಅದೇ ರಸ್ತೆಯಲ್ಲಿ ಬಂತು. ಪ್ರಜ್ಞೆ ತಪ್ಪಿದವನನ್ನು ಅಲ್ಲೇ ಬಿಟ್ಟು ಎಲ್ಲಾ ಓಡಿಹೋದರು. ಹೊಡೆದವರಿಗೂ ಹೊಡೆಸಿಕೊಂಡವನಿಗೂ ಯಾವ ಸಂಬಂಧವೂ ಇರಲಿಲ್ಲ. ಜಗಳವಂತೂ ಆಗಿರಲೂ ಸಾಧ್ಯವೇ ಇರಲಿಲ್ಲ. ಆ ಹುಡುಗರಿಗೆ ಒಬ್ಬ ನಿಸ್ಸಹಾಯ ಹುಡುಗ ಏಟಿಗೆ ವಿಲಿ ವಿಲಿ ಒದ್ದಾಡುವುದನ್ನು ನೋಡುವುದೇ ಆನಂದ.

ಮತ್ತೊಬ್ಬ ಚಿಕಾಗೋ ಪಟ್ಟಣದಲ್ಲಿ ನರ್ಸುಗಳ ಹಾಸ್ಟೆಲಿಗೆ ನುಗ್ಗಿ ಹದಿನೈದೋ ಹದಿನಾರೋ ಹುಡಿಗಿಯರನ್ನು ಕಟ್ಟಿಹಾಕಿ ಒಬ್ಬೊಬ್ಬರನ್ನಾಗಿ ಬಲಾತ್ಕಾರವಾಗಿ ಸಂಭೋಗಿಸಿ (ರೇಪು) ಕೊಂದು ಹಾಕಿದ್ದ. ಒಬ್ಬಳು ಮಾತ್ರ ಮಂಚದ ಕೆಳಗೆ ಉರುಳಿಕೊಂಡು ಅವನಿಗೆ ಕಾಣಿಸದೆ ಉಳಿದುಕೊಂಡಳು. ಒಬ್ಬ ಪಿ. ಎಚ್. ಡಿ ವಿದ್ಯಾರ್ಥಿ 100 ಜನ ಹುಡುಗಿಯರನ್ನು ಬೇರೆ ಬೇರೆ ಕಾಲೇಜುಗಳಲ್ಲಿ ಇದೇ ರೀತಿ ರೇಪ್ ಮಾಡಿ ಕೊಂದಿದ್ದ. ನಾವು ಕ್ಯಾಲಿಫೋರ್ನಿಯಾದ ಬರ್ಕ್ಲಿ ಪಟ್ಟಣದಲ್ಲಿದ್ದಾಗ ನಮ್ಮ ಮನೆಯ ಹತ್ತಿರವೇ ಒಬ್ಬಾಕೆಯನ್ನು ಯಾರೋ ಒಬ್ಬ ಇದೇ ರೀತಿ ಕೊಂದಿದ್ದ ಇದು ಅವನ 14 ನೆಯ ಕೊಲೆಯಾಗಿತ್ತು. ಸ್ಯಾನ್ ಫ್ರಾನ್ಸಿಸ್ಕೋ ಪಟ್ಟಣ ನಾವಿದ್ದ ಬರ್ಕ್ಲಿ ನಗರದಿಂದ 18 ಮೈಲಿ ದೂರದಲ್ಲಿತ್ತು; ಆ ಪಟ್ಟಣದಲ್ಲಂತೂ ಪ್ರತಿ ನಿತ್ಯ ಹೊಸ ಹೊಸ ರೀತಿಯ ಕೊಲೆಗಳಾಗುತ್ತಿದ್ದವು. ಒಬ್ಬ ತನ್ನ ಹೆಂಡತಿಯ ಮುಖದ ಮೇಲೆ ಆಮ್ಲ ಸುರಿದು ಕೊಂದರೆ, ಮತ್ತೊಬ್ಬ ಬೆಡ್‌ರೂಮಿಗೆ ಗ್ಯಾಸ್ ತುಂಬಿ ಹೆಂಡತಿಯನ್ನು ಕೊಂದಿದ್ದ. ಈ ಕೊಲೆಗಾರರು 8-10 ವರ್ಷದ ಹೆಣ್ಣು ಮಕ್ಕಳನ್ನು ಕೂಡ ರೇಪು ಮಾಡಿ ಸಾಯಿಸುತ್ತಿದ್ದರು- ನಾವಿದ್ದ ಊರುಗಳಲ್ಲೇ ಇಂತಹ ಕೃತ್ಯಗಳು ನಡೆಯುತ್ತಿದ್ದಾಗ, ನನ್ನ ಹೆಂಡತಿ ಮತ್ತು ಮಗುವಿಗೆ ಯಾವಾಗ ಸರದಿ ಬರುತ್ತೋ ಎಂಬ ಹೆದರಿಕೆ ನನ್ನನ್ನು ಸದಾ ಕಾಡುತ್ತಿತ್ತು. ಕೆಲವು ಕೊಲೆಗಡುಕರು, ಸಾಮಾನು

ಮಾರುವ ವರ್ತಕರಂತೆ ಬಂದು, ಬೆಲ್ ಮಾಡಿ ಬಾಗಿಲು ತೆಗೆಸಿ, ಬಂದೂಕ ತೋರಿಸಿ ಒಳಗೆ ನುಗ್ಗಿ ಹೆಂಗಸನ್ನು ರೇಪ್ ಮಾಡಿ ಕೊಲ್ಲುತ್ತಿದ್ದರು. ನನ್ನ ಹೆಂಡತಿಗೆ ನಾನೇ ಬೆಲ್ ಮಾಡಿದಾಗ ಕೂಡ ಯಾರು ಎಂದು ಕೇಳಿ ನಾನು ಯಾವುದೋ ಒಂದು ಗುಪ್ತ ಪಾವ ಪದ ಉಚ್ಚರಿಸಿದಾಗ ಮಾತ್ರ ಬಾಗಿಲು ತೆಗೆಯುವಂತೆ ಹೇಳಿಕೊಟ್ಟಿದ್ದೆ !

ನನ್ನ ಹೆಂಡತಿಯ ಸಂಬಂಧಿಯೊಬ್ಬ, ಚಿಕಾಗೊ ನಗರದ ಒಂದು ಕ್ಲಬ್ಬಿನಲ್ಲಿ, ಕೆಲಸ ಮಾಡುತ್ತಿದ್ದ. ಅಲ್ಲಿ ಅನೇಕ ಒಬ್ಬರಿಗೊಬ್ಬರು ಗುಂಡು ಹಾರಿಸುವ ಜಗಳಗಳು ನಡೆಯುತ್ತಿದ್ದವಂತೆ. ಒಂದು ಬಾರಿಯಂತೂ ಇವನು ಅಂತಹ ಇಬ್ಬರ ಮಧ್ಯೆ ಸಿಕ್ಕಿ ಹಾಕಿಕೊಂಡು ಇಂಚುಗಳ ಅಂತರದಲ್ಲಿ ಗುಂಡೇಟು ತಪ್ಪಿಸಿಕೊಂಡನಂತೆ. ದೊಡ್ಡ ದೊಡ್ಡ ನಗರಗಳಲ್ಲಿ ಕೊಲೆ ರೇಪುಗಳು ಅಧಿಕ ಸಂಖ್ಯೆಯಲ್ಲಿ ನಡೆಯುವುದು ಮಾತ್ರವಲ್ಲ. ನಾವಿದ್ದ 10-15000 ಜನಸಂಖ್ಯೆ ಇದ್ದ ಸಣ್ಣ ಊರುಗಳಲ್ಲೂ ಈ ರೀತಿಯ ಕೊಲೆ ಗಡುಕರು ಇರುತ್ತಿದ್ದರು ಸಾಯಂಕಾಲ ಕತ್ತಲಾದ ಮೇಲೆ ನಿರ್ಜನ ಪ್ರದೇಶದಲ್ಲಿ (ಮಾರ್ಕೆಟ್ಟುಗಳನ್ನು ಬಿಟ್ಟು ಬಡಾವಣೆಗಳಲ್ಲಿ ಕೂಡ) ಗಂಡ-ಹೆಂಡತಿ ಇಬ್ಬರೇ ನಡೆದು ಹೋಗುವುದು ಈಗಲೂ ಅಪಾಯಕರ. 1983 ರಲ್ಲಿ ಈ ರೀತಿಯ ಹಿಂಸಕರ ಸಂಖ್ಯೆ 1963 ಕ್ಕಿಂತ ಬಹುಪಾಲು ಹೆಚ್ಚಿತ್ತು. 500 ಜನರಿಂದ 2000 ಜನದವರೆಗಿರುವ ಸಣ್ಣ ಸಣ್ಣ ಹಳ್ಳಿಗಳಲ್ಲಿ ಇಂತಹ ಜೀವಭಯ ಕಡಿಮೆ. ನನ್ನ ವೃತ್ತಿಗೆ ದೊಡ್ಡ ದೊಡ್ಡ ಪ್ರಯೋಗ ಶಾಲೆಗಳ ಅವಶ್ಯಕತೆ ಇತ್ತು ಇಂತಹ ಪ್ರಯೋಗ ಶಾಲೆಗಳು ನಗರಗಳಲ್ಲಿ ಮಾತ್ರ ಇರುತ್ತವೆ. ಅಲ್ಲೆಲ್ಲಾ ಜೀವಭಯ ನಮ್ಮನ್ನು ಸದಾ ಕಾಡುತ್ತಿರುತ್ತದೆ.

ಹಿಂಸೆ ವ್ಯಾಪಕವಾಗಿ ಅಮೇರಿಕನ್ ಸಮಾಜದಲ್ಲಿ ಬೆಳೆದು, ಲೈಂಗಿಕತೆಯ ಜತೆಗೆ ಬೆರೆತು, ಬಲಾತ್ಕಾರ ಸಂಭೋಗ ಮತ್ತು ಹೆಣ್ಣಿನ ಕೊಲೆಯಲ್ಲಿ ಕೊನೆಗಾಣುವುದಕ್ಕೆ ಕಾರಣಗಳೇನು ? ಒಂದು ಮುಖ್ಯ ಕಾರಣ—ಹೆಣ್ಣಿನ ನಗ್ನತೆಯನ್ನು ಜಾಹೀರಾತುಗಳಲ್ಲಿ ಹೇರಳವಾಗಿ ಬಳಸಿಕೊಳ್ಳುವುದು ಲೈಂಗಿಕ ಕ್ರಿಯೆಗೆ ಪ್ರಚೋದನೆ ಮಾಡುತ್ತಲೇ ಇರುತ್ತದೆ. ಜತೆಗೆ ಸಿನಿಮಾಗಳಲ್ಲಿ, ಟಿ. ವಿ. ಯಲ್ಲಿ ವರ್ಷಕ್ಕೆ 300-400 ಬಲಾತ್ಕಾರ ಸಂಭೋಗಗಳನ್ನು, 300-400 ಕೊಲೆಗಳನ್ನು, 2000-3000 ಇತರೆ ಹಿಂಸೆಯನ್ನು ಪ್ರಚೋದಿಸುವ ಕಥೆ-ನಾಟಕಗಳನ್ನೂ ಮಕ್ಕಳೂ ಸೇರಿ ಎಲ್ಲಾ ನೋಡುತ್ತಾರೆ. ಈ ರೀತಿ ಲೈಂಗಿಕ ಪ್ರಚೋದನೆಯ ಜತೆಗೆ ಹಿಂಸೆಗೆ ಕೂಡ ಉತ್ತೇಜನ ಕೊಟ್ಟಾಗ ಸಮಾಜದಲ್ಲಿ ಬಲಾತ್ಕಾರ ಸಂಭೋಗಿಗಳೂ, ಕೊಲೆಗಾರರೂ ಹೆಚ್ಚಿಕೊಳ್ಳುತ್ತಾರೆ. ಇದೆಲ್ಲ ಸಿನೆಮಾಗಳ ಮಾರಾಟಕ್ಕೆ, ಸಾಧನ ಸಾಮಗ್ರಿಗಳ ಮಾರಾಟಕ್ಕೆ ಲೈಂಗಿಕತೆ ಮತ್ತು ಹಿಂಸೆಯ ಬಳಕೆಯಿಂದ ಸಮಾಜಕ್ಕಾಗುವ ಹಾನಿಯಲ್ಲಿ ಒಂದು ಭಾಗಮಾತ್ರ.

ಟೀವಿ ಮತ್ತು ರೇಡಿಯೋಗಳಲ್ಲಿ 10-15 ನಿಮಿಷಗಳಿಗೊಮ್ಮೆ ಜಾಹೀರಾತುಗಳು ಸುಂದರವಾದ ದೃಷ್ಯಗಳ ಮೂಲಕ, ಮನಮುಟ್ಟುವ ಸಂಗೀತದ ಮೂಲಕ, ಮನ ಮೋಹಕ ತರುಣಿಯರ ಮೂಲಕ ನಿಮಗೆ ಸಾವಿರಾರು ಸಾಧನ ಸಾಮಗ್ರಿಗಳನ್ನು ಕೊಂಡುಕೊಳ್ಳುವಂತೆ ಪ್ರೇರೇಪಿಸುತ್ತಾ ಇರುತ್ತವೆ. ನಿಮಗೆ ಜೀವನದಲ್ಲಿ ಆನಂದ ದೊರಕುವುದು ಈ ಸಾಧನ ಸಾಮಗ್ರಿಗಳಿಂದ ಮಾತ್ರ, ನಿಮಗೆ ಆತ್ಮೀಯರಾದವರಿಗೆ ಪ್ರೀತಿಯನ್ನು ತೋರಿಸುವ ಮಾರ್ಗ ಇವುಗಳನ್ನು ಕೊಂಡು ಕೊಡುವುದು, ಎಂದು ಸಾರಿ ಸಾರಿ ಹೇಳುತ್ತವೆ. ಪ್ರೀತಿ ಪ್ರೇಮಗಳನ್ನು ತೋರಿಸುವುದಕ್ಕೆ ಬೇರೆ ಮಾರ್ಗಗಳುಂಟು ಎನ್ನುವುದನ್ನು ಜನ ಮರೆಯುತ್ತಾರೆ. ಜೀವನದಲ್ಲಿ ಆನಂದ ಸಿಕ್ಕುವುದು ಮಾನವೀಯ ಸಂಬಂಧಗಳಲ್ಲಿ ಎಂಬುದನ್ನು ಮರೆತು, ಆ ಸಂಬಂಧಗಳು ಚೆನ್ನಾಗಿ ಬೆಳೆಯಲು ಅತಿ ಅವಶ್ಯಕವಾದ ಸಹನೆ, ಆಸಕ್ತಿ, ಪ್ರೀತಿ, ಅರ್ಥಮಾಡಿಕೊಳ್ಳುವ ಪ್ರುವೃತ್ತಿ ಇತ್ಯಾದಿಗಳನ್ನ, ಕಳೆದುಕೊಳ್ಳುತ್ತಾರೆ. ಇದರಿಂದಲೇ ವಿವಾಹ ವಿಚ್ಛೇದನ ಲೈಂಗಿಕ ವಿಕೃತಿ, ಕೊಲೆಗಡುಕರಲ್ಲಿ ಎದ್ದು ಕಾಣುವ ಜೀವದ್ವೇಷ, ಇವೆಲ್ಲ ದೊಡ್ಡ ಪ್ರಮಾಣದಲ್ಲಿ ಕಾಣುತ್ತಿರುವುದು.

ಹೆಚ್ಚಿಗೆ ಮಾರಾಟವಾಗಬೇಕಾದರೆ ಜನಗಲ್ಲಿ ಹಳೆಯ ಸಾಧನಗಳ ಬಗ್ಗೆ ಜಿಗುಪ್ಸೆ ಹುಟ್ಟಿಸಬೇಕು. ಹೀಗೆ ಮಾಡಿದಾಗ ಸಾಧನಗಳನ್ನು ಬದಲಾಯಿಸಿ ಹೊಸದನ್ನು ಕೊಂಡರೇ ಆನಂದ ಎಂಬ ಪ್ರುವೃತ್ತಿ ಬೆಳೆದು–ಮಾನವೀಯ ಸಂಬಂಧಗಳಿಗೂ ವ್ಯಾಪಿಸಿ, ವಯಸ್ಸಾದವರ (ಹಳೆಯದು) ಬಗ್ಗೆ ತಿರಸ್ಕಾರ, ಹಳೆಯ ಸಂಗಾತಿಯನ್ನು ಬಿಟ್ಟು ಹೊಸ ಸಂಗಾತಿಯನ್ನು ಬಯಸುವುದು (ವಿವಾಹ ವಿಚ್ಛೇದನ) ಇವಕ್ಕೆಲ್ಲಾ ಕಾರಣವಾಗುತ್ತಿದೆ.

ಈ ಸಂಸ್ಕೃತಿಯ ಮತ್ತೊಂದು ಘೋರ ಪರಿಣಾಮ, ಮಕ್ಕಳ ಮೇಲೆ ದ್ವೇಷ ಮತ್ತು ದೌರ್ಜನ್ಯ. ಪ್ರತಿವರ್ಷ 5000 ಮಕ್ಕಳು ತಂದೆ ತಾಯಿಗಳ ಹೊಡೆತದಿಂದ ಕೈಕಾಲು ಮುರಿದು, ಮೂಳೆಗಳು ಜಜ್ಜಿಹೋಗಿ ಸಾಯುತ್ತವಂತೆ. ನಾನು ಈ ಬಗ್ಗೆ ಪತ್ರಿಕೆಗಳಲ್ಲಿ ಓದಿದಾಗ (ಉದಾಃ ಒಬ್ಬ ತಾಯಿ ತನ್ನ ಮಕ್ಕಳ ಕಾಟ ಸಹಿಸಲಾರದೆ, ಬಿಸಿ ನೀರಲ್ಲಿ ಮುಳುಗಿಸಿ ಅವುಗಳನ್ನು ಸಾಯಿಸಿದ್ದು) ನಂಬುವುದೇ ಕಷ್ಟವಾಯಿತು. ಅಮೆರಿಕಾದಲ್ಲಿ ಡಾಕ್ಟರ್‌ನಾಗಿರುವ ನನ್ನ ತಮ್ಮ ಇಂತಹ ಮೂಳೆ ಮುರಿದ ಮಕ್ಕಳನ್ನು ಸದಾ ನೋಡುತ್ತಿರುತ್ತಾನಂತೆ.

ಮಕ್ಕಳ ಸ್ಕೂಲಿನ ಒಬ್ಬ ಪ್ರಿನ್ಸಿಪಾಲ, 7–8 ವರ್ಷದ ಹೆಣ್ಣು ಮಕ್ಕಳಿಗೆ

ಮೊದಲು ಬಹುಮಾನಗಳ ಆಸೆ ತೋರಿಸಿ ಅವುಗಳ ಬೆತ್ತಲೆ ಫೋಟೋಗಳನ್ನು ತೆಗೆದು, ನಂತರ ಅದನ್ನು ತಂದೆ ತಾಯಿಗಳಿಗೆ ತೋರಿಸುತ್ತೇನೆಂದು ಹೆದರಿಸಿ, ಆ ಮಕ್ಕಳೊಡನೆ ಬಲಾತ್ಕಾರ ಸಂಭೋಗ ಮಾಡಿದ್ದನ್ನು ತೋರಿಸುವ ವಿಡಿಯೋ ಕ್ಯಾಸೆಟ್ಟುಗಳನ್ನು ಮಾರಾಟಮಾಡುತ್ತಿದ್ದನಂತೆ. ಇದನ್ನು ಕೊಂಡು ಕೊಂಡು ಆ ಮಕ್ಕಳು ನೋವಿನಿಂದ ನರಳುವುದನ್ನು ನೋಡಿ ಆನಂದಿಸುವ ಜನರ ಸಂಖ್ಯೆ ಲಕ್ಷಗಟ್ಟಲೆ

ವ್ಯಾಪಾರೀ ಸಂಸ್ಕೃತಿಯ ಪರಿಣಾಮವನ್ನು ಬಹುತೇಕ ಸಂಸಾರಗಳಲ್ಲಿ ನೋಡಬಹುದು. ಅಣ್ಣ–ತಮ್ಮ, ತಂಗಿ, ತಂದೆ ತಾಯಿ–ಮಕ್ಕಳು, ಗಂಡ–ಹೆಂಡತಿ ಇತ್ಯಾದಿ ಸಂಬಂಧಗಳಲ್ಲಿ ಆಳವಾದ ಪ್ರೀತಿ, ಪ್ರೇಮಗಳು ಅಪರೂಪ. ಸಾಧನ–ಸಾಮಾಗ್ರಿಗಳಿಗೆ ತುಂಬಾ ಹೆಚ್ಚು ಪ್ರಾಧಾನ್ಯತೆ ಕೊಟ್ಟಾಗ, ಮಾನವೀಯ ಸಂಬಂಧಗಳಲ್ಲಿ ಆಕರ್ಷಣೆ ಕಡಿಮೆ ಆಗುತ್ತೆ. ಈ ಸಂಬಂಧಗಳನ್ನು ಚೆನ್ನಾಗಿ ಬೆಳೆಸುವುದಕ್ಕೆ ಬೇಕಾದ ಸಮಯ, ಸಹನೆ, ಆಸಕ್ತಿ, ಅನುಕಂಪ, ಕೊಡುಗೆಯ ಶಕ್ತಿ ಮುಂತಾದುವು ಆ ಸಂಸ್ಕೃತಿಯಲ್ಲಿ ತುಂಬಾ ಅಪರೂಪ. ನಿರ್ಜೀವ ವಸ್ತುಗಳೊಡನೆ ಸಂಬಂಧ ಬಹಳ ಸುಲಭ, ಅವು ಹೇಳಿದಂತೆ ಕೇಳುತ್ತವೆ, ಕೇಳಿದಾಗ ಕೊಡುತ್ತವೆ. ನೀವು ಅವಕ್ಕೆ ಕೊಡುವ ಅವಶ್ಯಕತೆ ಇಲ್ಲ. ಅವುಗಳೊಡನೆ ವ್ಯವಹರಿಸಿ, ನಂತರ ಅವುಗಳಿಗೆ ತದ್ವಿರುದ್ಧವಾಗಿರುವ ಮಾನವರೊಡನೆ ಸಂಬಂಧ ಬೆಳೆಸುವುದು ಎಷ್ಟು ಕಷ್ಟ. ಮಾನವರು ನೀವು ಹೇಳಿದಂತೆ ಕೇಳುವುದಿಲ್ಲ, ತಮ್ಮದೇ ಭಾವನೆಗಳು, ಆದರ್ಶಗಳು ; ನೀವು ಬಯಸಿದಂತೆ ನಡೆದುಕೊಳ್ಳುವುದಿಲ್ಲ; ನೀವು ಕೇಳಿದಾಗಲೆಲ್ಲಾ ಕೇಳಿದ್ದನ್ನೆಲ್ಲಾ ಕೊಡುವುದಿಲ್ಲ. ಎಲ್ಲಕ್ಕಿಂತ ಹೆಚ್ಚಾಗಿ ನಿಮ್ಮಿಂದ ಕೂಡ ಪ್ರೀತಿ, ಪ್ರೇಮಗಳ ಕೊಡುಗೆಯನ್ನು-ಬಯಸುತ್ತಾರೆ. ಈ ಕೊಡುಗೆ ಅಮೆರಿಕನ್ ಸಂಸ್ಕೃತಿಯಲ್ಲಿ ಬೆಳೆದವರಿಗೆ ಬಹಳ ಕಷ್ಟ. ಇದೇ ಅಲ್ಲಿ ಮಾನವೀಯ ಸಂಬಂಧಗಳು ಸುಲಭವಾಗಿ ಕುಸಿದುಬೀಳುವುದಕ್ಕೆ ಮುಖ್ಯ ಕಾರಣ.

ಅಮೆರಿಕನ್ ಸಂಸ್ಕೃತಿಯಲ್ಲಿ ಈಗ ದೊಡ್ಡ ಪ್ರಮಾಣದಲ್ಲಿ ಉಪಯೋಗಿಸುತ್ತಿರುವ ವಸ್ತುಗಳ ನಿರ್ಮಾಣದಿಂದ, ಉಪಯೋಗದಿಂದ, ಮತ್ತು ಬೇಡದ ವಸ್ತುಗಳನ್ನು ಎಸೆಯುವುದರಿಂದ, ಪರಿಸರಕ್ಕೆ ಪ್ರತಿವರ್ಷ 70 ಲಕ್ಷ ಹಳೆಯ ಕಾರುಗಳು, 10 ಕೋಟಿ ಹಳೆಯ ಟೈರುಗಳು, 2 ಕೋಟಿ ಟನ್ನು ಹಳೆಯ ಕಾಗದ, 2800 ಕೋಟಿ ಹಳೆಯ ಬಾಟ್ಲುಗಳು, ಕಾರ್ಖಾನೆಗಳಿಂದ 16½ ಕೋಟಿ ಟನ್ನು ಘನ ಪದಾರ್ಥಗಳು ಮತ್ತು 17 ಕೋಟಿ ಟನ್ನು ಹೊಗೆ ಮತ್ತು ಅನಿಲಗಳು ಇತ್ಯಾದಿಗಳನ್ನು ಸುರಿಯುತ್ತಿದ್ದಾರೆ. ಜತೆಗೆ ಹಲವಾರು ಲಕ್ಷ ಟನ್ನು ಕೀಟನಾಶಕಗಳು. ಪ್ರತಿಯೊಬ್ಬ ಅಮೆರಿಕನ್ನನ ದೇಹದಲ್ಲಿ 100 ಮಿಲಿ ಗ್ರಾಂ ಡಿ. ಡಿ. ಟಿ. ಮತ್ತು ಡಿ. ಡಿ. ಇ.

ಇದೆಯಂತೆ. ಅವನ ಇಡೀ ಜೀವಮಾನದಲ್ಲಿ ಇದನ್ನು ಸಂಪೂರ್ಣವಾಗಿ ದೇಹದಿಂದ ಹೊರಗೆ ಹಾಕುವುದು ಸಾಧ್ಯವಿಲ್ಲ. ಅಣು ಅಸ್ತ್ರಗಳ ಪರೀಕ್ಷೆಗಳಿಂದ 1945-58 ರ ಅವಧಿಯಲ್ಲಿ ಗಾಳಿಗೆ 0.32 ಟನ್ ಸಿ-14 ಎನ್ನುವ ರೇಡಿಯೋ ಆಕ್ಟಿವ್ ವಸ್ತು (ಪ್ರಕೃತಿಯಲ್ಲಿ ಸಾಧಾರಣವಾಗಿರುವುದು 0.65 ಟನ್ನು) 14 ಟನ್ ಸ್ಟ್ರಾನ್ಷಿಯಂ-90 ಮತ್ತು ಸೀಸಿಯಂ-137 ಅನ್ನು ತುಂಬಿದ್ದಾರೆ. ಈ ಸ್ಟ್ರಾನ್ಷಿಯಂ-90 ತಾಯಿಯ ಹಾಲಿನಲ್ಲಿ ಹೊರಬಂದು ಮಕ್ಕಳಿಗೆ ಮೂಳೆಯ ಕ್ಯಾನ್ಸರ್, ರಕ್ತದಕ್ಯಾನ್ಸರ್ ಇತ್ಯಾದಿ ಕಾಯಿಲೆಗಳಿಗೆಕಾರಣವಾಗುತ್ತಿದೆ.

ಕೊಳವೆ ಬಾವಿಗಳ ನೀರಿನಲ್ಲಿ ಕೂಡ ಕೀಟನಾಶಕಗಳು, ನೈಟ್ರೇಟುಗಳು ತುಂಬಿದ್ದು, ಅನೇಕ ಪ್ರಾಂತ್ಯಗಳಲ್ಲಿ ಕುಡಿಯಲು ಅಯೋಗ್ಯ. ಕುಡಿಯುವುದಕ್ಕೆ ಮತ್ತು ಅಡಿಗೆಗೆ ಬೇಕಾದ ನೀರನ್ನು ಜನಸಂದಣಿ ಮತ್ತು ಕೈಗಾರಿಕೆಗಳು ಕಡಿಮೆ ಇರುವ ಪರ್ವತ ಶ್ರೇಣಿಗಳ ಚಿಲುಮೆಗಳಿಂದ ಬಾಟ್ಲುಗಳಲ್ಲಿ ತುಂಬಿ ಮಾರುತ್ತಾರೆ.

ಮಾನವ ಪ್ರಕೃತಿಯಿಂದ ಸಂಪೂರ್ಣ ಬೇರೆಯಾಗಿದ್ದಾನೆ. ಪ್ರಕೃತಿಯನ್ನು ತನ್ನ ಉಪಯೋಗಕ್ಕಾಗಿ ಹೇಗೆ ಬೇಕಾದರೂ ಬಳಸಿಕೊಳ್ಳಬಹುದು, ಎಷ್ಟು ಬೇಕಾದರೂ ಕಲುಷಿತ ಮಾಡಬಹುದು, ಇದರಿಂದ ತನಗೇನೂ ಹಾನಿಯಾಗದು ಎಂಬ ಭ್ರಮೆ. ಈ ರೀತಿ ಪ್ರಕೃತಿಯಿಂದ, ಸಹಮಾನವರಿಂದ, ಇತರ ಜೀವಿಗಳಿಂದ ಬೇರೆಯಾದ ಮಾನವ, ಸತ್ತ ಬಳಕೆಯ ವಸ್ತುಗಳನ್ನು ಪೂಜಿಸುವ ಮಾನವ ಜೀವನದಲ್ಲಿ ಸುಖ ತೃಪ್ತಿಗಳನ್ನು ಕಾಣದೆ, ಮಾದಕ ಪಾನೀಯಗಳಲ್ಲಿ, ಹಿರೋಯಿನ್ ಕೊಕೇನ್ ಮುಂತಾದ ಮಾದಕ ವಸ್ತುಗಳಲ್ಲಿ ಆನಂದ ಹುಡುಕುತ್ತಾನೆ. ಇಲಿನಾಯ್ಸ್ ಪ್ರಾಂತದ ನಾರ್ಮಲ್ ಎಂಬ ಸಣ್ಣ ಊರಿನ ಹೈಸ್ಕೂಲ್ ವಿದ್ಯಾರ್ಥಿಗಳಲ್ಲಿ ಕೂಡ ನೂರಕ್ಕೆ 85 ಜನ ವಿದ್ಯಾರ್ಥಿಗಳು ಈ ರೀತಿಯ ಮಾದಕ ದ್ರವ್ಯಗಳನ್ನು ಉಪಯೋಗಿಸುತ್ತಾರಂತೆ.

ಈ ರೀತಿ ಆಳವಾದ ಮಾನವೀಯ ಸಂಬಂಧಗಳಿಲ್ಲದ, ಹಿಂಸೆ ತುಂಬಿದ, ಕಲುಷಿತವಾದ ಪರಿಸರದಲ್ಲಿ, ನಾವು ಬಾಳಿ ಮಕ್ಕಳನ್ನು ಬೆಳೆಸುವುದು ಒಳ್ಳೆಯದೆ ಎಂದು ಆಳವಾಗಿ ಆಲೋಚಿಸಿ, ಒಳ್ಳೆಯದಲ್ಲ ಎಂದು ತೀರ್ಮಾನಿಸಿ, ಭಾರತಕ್ಕೆ ಬಂದೆವು (1967 ರಲ್ಲಿ) ಭಾರತಕ್ಕೆ ಬಂದ ಮೇಲೆ, ಇಲ್ಲಿ ನಮಗೆ ಕಂಡ ಒಳ್ಳೆಯ ಅಂಶಗಳೇನು, ಕುಂದುಕೊರತೆಗಳೇನು ?

ಭಾರತಕ್ಕೆ ಬಂದ ಮೊದಲ ಎರಡು ವರ್ಷ ಬೆಂಗಳೂರಿನಲ್ಲಿದ್ದೆವು. ಆಗ

ಬೆಂಗಳೂರು ಇಂದಿಗಿಂತ ತುಂಬಾ ಪ್ರಶಾಂತವಾಗಿತ್ತು. ಇಂದಿನಷ್ಟು ವಾಹನಗಳಿರಲಿಲ್ಲ. ದರೋಡೆಕೋರರಿರಲಿಲ್ಲ. ಸಿನೆಮಾ 2 ನೇ ಆಟಕ್ಕೆ ಹೋಗಿ ಬಂದರೂ ಅಷ್ಟೊಂದು ಹೆದರಿಕೆ ಇರಲಿಲ್ಲ. 1969 ರಲ್ಲಿ ಮೈಸೂರಿಗೆ ಹೋದ ಮೇಲಂತೂ ಅಲ್ಲಿಯ ಪ್ರಶಾಂತತೆ ಮತ್ತೂ ಚೆನ್ನಾಗಿತ್ತು. ಅಲ್ಲಿದ್ದ 11 ವರ್ಷಗಳಲ್ಲಿ ಮೈಸೂರಿನ ಜನ ಸಂಖ್ಯೆ ತುಂಬಾ ಹೆಚ್ಚಾಗಿ, ವಾಹನಗಳ ಸಂಖ್ಯೆ ಕೂಡ ಬಹುಮಟ್ಟಿಗೆ ಹೆಚ್ಚಾಗಿ, ಅನೇಕ ಕೈಗಾರಿಕೆಗಳು ಸ್ಥಾಪಿತವಾಗಿ, 1980 ರ ಸಮಯಕ್ಕೆ ಪರಿಸರ ಮಾಲಿನ್ಯ ದಲ್ಲಿ ಅಮೆರಿಕಾ ನಗರಗಳಿಗೇನೂ ಕಮ್ಮಿ ಇಲ್ಲ ಎಂದು ಸಾರುವಂತಿತ್ತು. ವ್ಯವ ಸಾಯದಲ್ಲಿ ಹೇರಳವಾಗಿ ಕೀಟನಾಶಕಗಳ ಬಳಕೆಗೆ ಯಾವ ರೀತಿಯ ನಿಯಂತ್ರಣವೂ ಇಲ್ಲದ್ದರಿಂದ, ಅಮೆರಿಕಾ ತರಕಾರಿಗಳಲ್ಲಿ, ಧಾನ್ಯಗಳಲ್ಲಿ ಇರುವ ಕೀಟನಾಶಕಗಳ ಪ್ರಮಾಣಕ್ಕಿಂತ ನಮ್ಮಲ್ಲಿ ಹೆಚ್ಚಾಗಿಯೇ ಇತ್ತು.

ಸ್ಕೂಲುಗಳಲ್ಲಿ ಉಪಾಧ್ಯಾಯ-ವಿದ್ಯಾರ್ಥಿಗಳ ಸಂಬಂಧದಲ್ಲಿ ಅಮೇರಿಕಾದಲ್ಲಿ ದ್ದ ಸುಂದರ ವಾತಾವರಣ ಇಲ್ಲಿಲ್ಲ. ಸರಕಾರಿ ಆಫೀಸುಗಳಲ್ಲಿ ಎಲ್ಲೆಲ್ಲೂ ಲಂಚ, ತಡ ಮಾಡಿ ಮುಂದೂಡುವ ಪ್ರವೃತ್ತಿ. ಜಾತೀಯತೆ, ಕೋಮುವಾರು ಗಲಭೆಗಳು, ಪ್ರತಿ ಭೆಗೆ ಬೆಲೆ ಇಲ್ಲದಿರುವುದು. ಸ್ಕೂಲು ಕಾಲೇಜುಗಳಲ್ಲಿ ಹೆಣ್ಣು-ಗಂಡುಗಳ ನಡುವೆ ಇರುವ ದೂರ, ಆತ್ಮೀಯತೆ ವಿಶ್ವಾಸಗಳಿಗೆ ಎಡೆಯಿಲ್ಲದಿರುವುದು. ಒಬ್ಬ ಹುಡುಗಿ ಹುಡುಗನೊಂದಿಗೆ ಮಾತನಾಡಿದರೆ ಸಾಕು, ಲೈಂಗಿಕ ಸಂಬಂಧದ ಆರೋಪ, ಸಂಶ ಯ. ಗಂಡು ಹೆಣ್ಣುಗಳ ಮಧ್ಯೆ ಲೈಂಗಿಕ ಸಂಬಂಧ ಬಿಟ್ಟರೆ ಬೇರೆಯಾವ ತರಹ ದ ಸಂಬಂಧದ ಅರಿವೂ ಇಲ್ಲದಿರುವ ಜನ ಇತ್ಯಾದಿ, ಇತ್ಯಾದಿ. ಇವೆಲ್ಲವೂ ನಮ್ಮ ಸಂಸ್ಕೃತಿಯಲ್ಲಿ ಎದ್ದು ಕಾಣುವ ಕೆಲವು ಕೊರತೆಗಳು.

ಇಷ್ಟಾದರೂ ಜಾತಿಯತೆ ದಾಟಿದ, ತೆರೆದ ಮನಸ್ಸುಗಳ ಹಲವಾರು ಜನ ಇನ್ನೂ ಇದ್ದಾರೆ ಸ್ನೇಹಕ್ಕೆ, ಪ್ರೀತಿಗೆ ಅಮೇರಿಕಾದಲ್ಲಿದ್ದಷ್ಟು ಕೊರತೆ ಇಲ್ಲಿಲ್ಲ. ಜೀವಭಯವಂತೂ ಬಹಳ ಬಹಳಕಡಿಮೆ ಇಲ್ಲಿ ನಡೆಯುವ ಕಳ್ಳತನ ದರೋಡೆಗಳು ಸಾ ಮಾನ್ಯವಾಗಿ ಚಿನ್ನಕ್ಕಾಗಿ, ದುಡ್ಡಿಗಾಗಿ. ಮನೆಯಲ್ಲಿ ಚಿನ್ನ, ದುಡ್ಡು ಇಲ್ಲದಿದ್ದರೆ, ಜೀವಭಯ ಮತ್ತೂ ಕಡಿಮೆ ನಮಗೆ ಗುರುತೇ ಇಲ್ಲದ, ಖುಷಿಗಾಗಿ ಕೊಲೆ ಮಾಡುವ ಹಿಂಸಕರು ಬಹಳ ಅಪರೂಪ. ದೊಡ್ಡ ದೊಡ್ಡ ನಗರಗಳಲ್ಲಿ ಹಿಂಸೆಯನ್ನು ಪ್ರಚೋದಿಸು ವ ಸಿನೆಮಾಗಳಿಂದ ಪ್ರಭಾವಿತರಾಗಿ, ಅಲ್ಲೊಬ್ಬ ಇಲ್ಲೊಬ್ಬ ಕೊಲೆಗಾರ ಹೆಣ್ಣು ದ್ವೇಷಿ ಕಾ ಣಿಸಿಕೊಳ್ಳುತ್ತಿದ್ದಾನೆ. ಇದೊಂದು ವಿಷಯದಲ್ಲಿ ನಾವು ಅಮೆರಿಕಾ ಮಟ್ಟ ಮುಟ್ಟಬೇಕಾದ ರೆ ಇನ್ನೂ 40–50 ವರ್ಷಗಳು ಬೇಕಾಗಬಹುದು ... .

ಶ್ರೀ ಕ್ಲಾಸನ್‌ರಿಗೊಂದು ಬಹಿರಂಗ ಪತ್ರ

○ ಯಶವಂತ ಡೋಂಗ್ರೆ.

‘ಅಭಿವೃದ್ಧಿಯ’ ಕಲ್ಪನೆಯ ಬಗೆಗಿನ ಚರ್ಚೆ ಇಂದು ನಿನ್ನೆಯದಲ್ಲವಾದರೂ, ‘ಅಭಿವೃದ್ಧಿಯ ಬಗೆಗಳು’ ಮತ್ತು ‘ಪರಿಕರಗಳ’ ಬಗೆಗಿನ ಚರ್ಚೆ ಹೊಸ ಹೊಸ ರೂಪ ಪಡೆದುಕೊಳ್ಳುತ್ತಲೇ ನಡೆದಿದೆ. ಕೈಗಾರಿಕೀಕರಣದ ನಂತರದ ಪರಿಸರ ವಿನಾಶದ ಪರಿಣಾಮದ ಅರಿವಿನೊಡನೆ, ಅಭಿವೃದ್ಧಿಯ ವ್ಯಾಖ್ಯೆಯನ್ನು ಬದಲಿಸುವ, ಉದ್ದೇಶವನ್ನು ಪುನರ್ವಿಮರ್ಶಿಸುವ ಮತ್ತು ಅಭಿವೃದ್ಧಿಯ ಹೆಸರಿನಲ್ಲಿ ರಾಷ್ಟ್ರೀಯ ಹಾಗೂ ಅಂತರ ರಾಷ್ಟ್ರೀಯ ಸಂಸ್ಥೆಗಳು ಕೈಗೊಳ್ಳುತ್ತಿರುವ ಕಾರ್ಯಕ್ರಮಗಳ ಮಿತಿಗಳನ್ನು ಎತ್ತಿತೋರಿಸುವ ಕೆಲಸವೂ ನಡೆಯುತ್ತಿದೆ.

ಇಂದು ಬಹುತೇಕ ಎಲ್ಲ ರಾಷ್ಟ್ರಗಳ ಅದರಲ್ಲೂ ವಿಶೇಷವಾಗಿ ತೃತೀಯ ಜಗತ್ತಿನ ರಾಷ್ಟ್ರಗಳ ಅಭಿವೃದ್ಧಿಯ ಸೂತ್ರ ಹಿಡಿದಿರುವುದು ಅಂತರ ರಾಷ್ಟ್ರೀಯ ಆರ್ಥಿಕ ವ್ಯವಸ್ಥೆಯಡಿಯಲ್ಲಿ ರಚಿತವಾದ ಜಾಗತಿಕ ಬ್ಯಾಂಕು (World Bank) ಮತ್ತು ಅದರ ಸಹ ಸಂಸ್ಥೆಗಳು. ಆದರೆ ಈ ಸಂಸ್ಥೆಗಳು ಪ್ರಚುರ ಪಡಿಸುತ್ತಿರುವ ಅಭಿವೃದ್ಧಿ ಕಾರ್ಯಕ್ರಮಗಳು ಯಾವ ಬಗೆಯವು? ಇವುಗಳಿಂದ ತೃತೀಯ ಜಗತ್ತಿನ ಜನರ ಮತ್ತು ಪರಿಸರದ ಮೇಲಾಗುತ್ತಿರುವ ಪರಿಣಾಮಗಳೇನು? ಈ ಅಭಿವೃದ್ಧಿ ಕಾರ್ಯಕ್ರಮಗಳು ಕೇವಲ ಶ್ರೀಮಂತ ರಾಷ್ಟ್ರಗಳಿಗೆ ಮತ್ತು ಅಲ್ಲಿಯ ಬಹುರಾಷ್ಟ್ರೀಯ ನಿಗಮಗಳಿಗೆ ಮಾತ್ರ ಸಹಾಯಕವಾಗುತ್ತಿವೆಯೇ?

ಈ ಬಗೆಯ ಯೋಚನೆಗಳಿಗೆ ಪುರಾವೆ ಒದಗಿಸುವ ಪ್ರಯತ್ನವಾಗಿ, ಇಂಗ್ಲೆಂಡಿನಿಂದ ಪ್ರಕಾಶಿತವಾಗುವ The Ecologist ಎನ್ನುವ ಪತ್ರಿಕೆ, 1985ರ ಆರಂಭದಲ್ಲಿ ವಿಶೇಷ ಸಂಚಿಕೆಯೊಂದನ್ನು ಹೊರತಂದಿತು. ಜಾಗತಿಕ ಬ್ಯಾಂಕಿನ ಅಧ್ಯಕ್ಷ ಶ್ರೀ ಎ. ಡಬ್ಲ್ಯೂ. ಕ್ಲಾಸನ್‌ರನ್ನು ಉದ್ದೇಶಿಸಿ ಬರೆದ ಪತ್ರದ ರೂಪದಲ್ಲಿರುವ ಸಂಪಾದಕೀಯದ ಜೊತೆಗೆ, ಈ ಸಂಚಿಕೆ ಏಶ್ಯಾ ಮತ್ತು ಆಫ್ರಿಕಾದ ರಾಷ್ಟ್ರಗಳನ್ನು ಒಳಗೊಂಡಂತೆ ಹಲವು ಅಭಿವೃದ್ಧಿ ಶೀಲ ರಾಷ್ಟ್ರಗಳಲ್ಲಿ ಜಾಗತಿಕ ಬ್ಯಾಂಕು ನಿರ್ದೇಶಿಸುತ್ತಿರುವ ಅಭಿವೃದ್ಧಿ

ಕಾರ್ಯಕ್ರಮಗಳನ್ನು ವಿಶ್ಲೇಷಿಸುತ್ತದೆ. ಭಾರತದಲ್ಲಿನ ಅಭಿವೃದ್ಧಿ ಕಾರ್ಯಕ್ರಮಗಳ ಬಗೆಗೂ ಮೂರು ನಾಲ್ಕು ಲೇಖನಗಳು ಇದರಲ್ಲಿವೆ. ಇಲ್ಲಿ ಚರ್ಚಿತವಾದ ಸಂಗತಿಗಳು 'ಅಭಿವೃದ್ಧಿಯ' ಬಗೆಗಿನ ಹಲವರ ಕಲ್ಪನೆಗೆ ಹೊಸವಸ್ತು ಒದಗಿಸಲು, ಹೊಸ ಆಯಾಮ ನೀಡಲು ಸಾಧ್ಯವಾದೀತೆಂಬುದು ನನ್ನ ಅನ್ನಿಸಿಕೆ. ಅಂತೆಯೇ ಸಂಚಿಕೆಯ ಮುಖ್ಯ ಭಾಗವಾದ ಸಂಪಾದಕರ ಪತ್ರವನ್ನೂ ಮತ್ತು ಭಾರತದಲ್ಲಿ ಜಾಗತಿಕ ಬ್ಯಾಂಕು ಹುಟ್ಟು ಹಾಕಿದ ಅಭಿವೃದ್ಧಿ ಕಾರ್ಯಕ್ರಮವೊಂದರ ವಿಶ್ಲೇಷಣೆಯನ್ನೂ ಅನುವಾದಿಸಿಕೊಡುತ್ತಿದ್ದೇನೆ.

ಇವರಲ್ಲಿನ ಬರಹಗಳು ಅಲ್ಲಲ್ಲಿ ಹಳತಕ್ಕೇ ಜೋತು ಬೀಳುವ ಯತ್ನದಂತೆ ಪುರಾತನತೆಯನ್ನು ವೈಭವೀಕರಿಸುವಂತೆ ಕಂಡು ಬರಬಹುದಾದರೂ, ಅಭಿವೃದ್ಧಿಯ ಹೆಸರಿನಲ್ಲಿ ನಡೆಯುವ ಕಾರ್ಯಕ್ರಮಗಳ 'ಇನ್ನೊಂದು ಮುಖ'ದ ಪರಿಚಯ ಇಚ್ಛಿಸುವ ಯಾರಾದರೂ, ಈ ಜೋಡಿ ಸಂಚಿಕೆಯನ್ನು ಓದಲೇ ಬೇಕೆಂಬುದು ನನ್ನ ನಂಬಿಕೆ.

○

ಪ್ರಿಯ ಶ್ರೀ ಕ್ಲಾಸನ್,

ತೃತೀಯ ಜಗತ್ತಿನಲ್ಲಿ ಇತ್ತೀಚೆಗೆ ಹೆಚ್ಚುತ್ತಿರುವ ಮಾನವ ಕ್ಲೇಶ, ನ್ಯೂನ ಪೋಷಣೆ (Malnutrition) ಮತ್ತು ಕ್ಷಾಮಗಳಂಥ ಸಮಸ್ಯೆಗಳನ್ನು ಬೆಳೆಸುವಲ್ಲಿ ನಿಮ್ಮ ಬ್ಯಾಂಕು ಮತ್ತು ನೀವು ಮಾಡುತ್ತಿರುವ ಇತರೆ ಅಂತರ ರಾಷ್ಟ್ರೀಯ ಸಂಸ್ಥೆಗಳು, ಅದರಲ್ಲೂ ವಿಶೇಷವಾಗಿ ಸಂಯುಕ್ತ ರಾಷ್ಟ್ರ ಆಹಾರ ಮತ್ತು ವ್ಯವಸಾಯ ಸಂಸ್ಥೆಯ (Food and Agricultural organization FAO) ಪಾತ್ರವನ್ನು ಜಗತ್ತಿನ 'ನಾಯಕರುಗಳ' ಮುಂದೆ ತೆರೆದಿಡಲೆಂದು, 'ದಿ ಇಕೋಲೊಜಿಸ್ಟ್'ನ ಈ ಜೋಡಿ ಸಂಚಿಕೆಯನ್ನು ಸಜ್ಜುಗೊಳಿಸಲಾಗಿದೆ.

ಆಫ್ರಿಕ ಮತ್ತು ದಕ್ಷಿಣ ಏಶ್ಯಾಗಳಲ್ಲಿ ಭಾರೀ ಜನಸಂಖ್ಯಾ ಸ್ಫೋಟ ಅನಿ

ಕಾರ್ಯವೆಂಬುದು ಕಳೆದೊಂದು ದಶಕದಿಂದ ನಿಚ್ಚಳವಾಗಿತ್ತು. 1975 ರಲ್ಲಿ ನಾನು 'Environment Canada' ಕ್ಕೆ ಕೆಲಸ ಮಾಡುತ್ತಿದ್ದ ಕಾಲದಲ್ಲಾಗಲೇ 'ಈ ಶತಮಾನದ ಕೊನೆಯೊಳಗೆ ಅರ್ಧ ಕೋಟಿ ಜನರಾದರೂ ಹೊಟ್ಟೆಗಿಲ್ಲದೆ ಸಾಯುತ್ತಾರೆ' ಎಂದು ಸೂಚಿಸುತ್ತಿದ್ದ ಪೊತ್ತಗೆಗಳು ಪ್ರಚಲಿತವಾಗಿದ್ದವು. ಸ್ಟ್ಯಾನ್‌ಫೋರ್ಡ್ ವಿಶ್ವವಿದ್ಯಾಲಯದ ಪ್ರೊ. ಪಾಲ್ ಎರ್ಲಿಶ್, ಸರಕಾರಗಳು ಮತ್ತು ಅಂತರರಾಷ್ಟ್ರೀಯ ಸಂಸ್ಥೆಗಳು ಪ್ರಕ್ಷೇಪಿಸಿದ, ಈ ಶತಮಾನದ ಕೊನೆಗಿನ ಜನಸಂಖ್ಯಾ ಅಂಕಿ ಅಂಶಗಳು ಎಷ್ಟು ಹಾಸ್ಯಾಸ್ಪದವಾಗಿದ್ದುವೆಂಬುದನ್ನು ಜೊಟ್ಟುಮಾಡಿ ತೋರಿಸುತ್ತಿದ್ದರು. ಮೂವತ್ತು ಬಿಲಿಯನ್ ಜನಸಂಖ್ಯೆಗೆ ಆಸರೆ ನೀಡಬಹುದೆಂಬ FAO ನ ಧಾರ್ಷ್ಟ್ಯದ ಮಾತು ಹಾಗಿರಲಿ, ಈ ಜಗತ್ತು ಆರೇಳು ಬಿಲಿಯನ್ ಜನಸಂಖ್ಯೆಯನ್ನು ಸಾಕುವುದೂ ಸಾಧ್ಯವಿಲ್ಲ.

1977 ರಲ್ಲಿ ರೆಕ್‌ಝಾವಿಕ್‌ನಲ್ಲಿ ನಡೆದ 'ಪರಿಸರದ ಭವಿಷ್ಯ'ದ ಬಗೆಗಿನ ಎರಡನೇ ಅಂತರರಾಷ್ಟ್ರೀಯ ಸಮ್ಮೇಳನದ ಪ್ರತಿನಿಧಿಗಳು, "ಹಸಿವಿನಿಂದಾಗಿ ಒಂದು ಸಾವಿರ ಮಿಲಿಯ ಜನ ಸಾಯುವುದು ಈ ಶತಮಾನದ ಅತ್ಯಂತ ಘೋರ ದುರಂತವಾದೀತು" ಎಂದು ಸಾರಿದ್ದರು. ಅನಂತರದ ಘಟನೆಗಳೆಲ್ಲ ಈ ವಿಷಾದಕರ ಪ್ರತೀಕ್ಷೆಯ ಬಗೆಗಿನ ನಂಬಿಕೆಯನ್ನು ವೃದ್ಧಿಗೊಳಿಸುತ್ತಲೇ ಸಾಗಿವೆ. ಇಂದು ಇಪ್ಪತ್ತಕ್ಕೂ ಹೆಚ್ಚು ಆಫ್ರಿಕನ್ ದೇಶಗಳ ಜನರು ಕ್ಷಾಮದಿಂದ ಭೀತರಾಗಿದ್ದಾರೆ. ಮಿಲಿಯಗಟ್ಟಲೆ ಅಲ್ಲದಿದ್ದರೂ ಸಾವಿರಾರು ಜನ ಈಗಾಗಲೇ ಸಾವಿಗೀಡಾಗಿದ್ದಾರಲ್ಲದೆ, ಬದುಕುಳಿದಿರುವವರ ಭವಿಷ್ಯವೂ ಘೋರವಾಗಿಯೇ ಇದೆ. ಆಫ್ರಿಕಾದಲ್ಲೇ ಅತ್ಯಂತ ಹೆಚ್ಚು ಕೃಷಿ ಸಾಮರ್ಥ್ಯ ಹೊಂದಿದೆಯೆಂದೂ, ಇದನ್ನು ಅರಬ್‌ದೇಶಗಳ 'ರೊಟ್ಟಿಯ ಚೀಲ'ವನ್ನಾಗಿ ಪರಿವರ್ತಿಸಬಹುದೆಂದೂ, ಕೆಲವೇ ವರ್ಷಗಳ ಕೆಳಗೆ FAO ಹೇಳುತ್ತಿದ್ದ ಸೂಡಾನ್‌ನಲ್ಲಿ ಇಂದು ಹಸಿವಿನ ಸಮಸ್ಯೆ ಇನ್ನೂ ಉಲ್ಬಣಗೊಂಡಿದೆ.

ಇದೇಕೆ ಹೀಗಾಗುತ್ತಿದೆ? ನೀವು ಮತ್ತು ನಿಮ್ಮ ಸಹಾಧಿಕಾರಿಗಳು ಹೇಳುವ ಪ್ರಕಾರ "ಜನ ಬಡವರಿದ್ದಾರೆ. ಆದ್ದರಿಂದಲೇ ಅವರು ಹಸಿದಿದ್ದಾರೆ". ಅಂದರೆ ಇದರರ್ಥ, ಕ್ಷಾಮದ ಪರಿಹಾರ ಜನರನ್ನು ಹಣವಂತರನ್ನಾಗಿಸುವುದರಲ್ಲಿದೆ, ಅಂತೆಯೇ ಆರ್ಥಿಕ ಅಭಿವೃದ್ಧಿಯ ಅಗತ್ಯವಿದೆ, ಎಂದಾಗುತ್ತದೆ. ಇನ್ನೊಂದರ್ಥದಲ್ಲಿ ಹೇಳುವುದಾದರೆ, ಯಾವ ಉದ್ದೇಶಗಳಿಗಾಗಿ ಧನ ಸಹಾಯ ಮಾಡಲು ಜಾಗತಿಕ ಬ್ಯಾಂಕನ್ನು ಹುಟ್ಟುಹಾಕಲಾಗಿದೆಯೋ ಮತ್ತು ಯಾವುದು ಅಲ್ಪಾವಧಿಯ ರಾಜಕೀಯ ಮತ್ತು ಆರ್ಥಿಕ ಆಸಕ್ತಿಗಳಿಗೆ ಸಹಕಾರಿಯಾಗಿದೆಯೋ ಅಂತಹ ನಿಮ್ಮ ಪರಿಹಾರೋಪಾಯಗ

ಳನ್ನು ತರ್ಕಸಮ್ಮತವನ್ನಾಗಿಸಲು ಅಗತ್ಯವಿರುವಂತೆ ನೀವು ಹಸಿವಿನ ವ್ಯಾಪ್ತಿಯನ್ನು ವ್ಯಾಖ್ಯಾನಿಸುತ್ತಿದ್ದೀರಿ.

ನಿಮ್ಮ Fairfield Osborn Memorial ಉಪನ್ಯಾಸದಲ್ಲಿ (1982) ಆರ್ಥಿಕಾಭಿವೃದ್ಧಿಯ ಬಗೆಗಿನ ನಿಮ್ಮ ಅರೆಮನಸ್ಸಿನ ಸಮರ್ಪಣಾಭಾವ ಸ್ಪಷ್ಟವಾಗಿಯೇ ನಿರೂಪಿತವಾಗಿದೆ. ಅದರಲ್ಲಿ ನೀವು ಬಡತನ ಮತ್ತು ನ್ಯೂನ ಪೋಷಣೆಯನ್ನು ಹೊಡೆದೋಡಿಸಲು ಅಭಿವೃದ್ಧಿ ಅಗತ್ಯ ಎಂದು ಹೇಳುತ್ತೀರಷ್ಟೇ ಅಲ್ಲದೆ, ಅಂತಹ ಅಭಿವೃದ್ಧಿ ಪ್ರಾಕೃತಿಕ ಪರಿಸರವನ್ನು ರಕ್ಷಿಸುವ ಸಾಮರ್ಥ್ಯವನ್ನೂ ಕಲ್ಪಿಸಿಕೊಡುತ್ತದೆ ಎಂಬರ್ಥದ ಕೋಗು ಹಾಕುತ್ತೀರಿ. ಒಂದು ಉತ್ತಮ ಪರಿಸರ ಹೆಚ್ಚಿನ ಬಾರಿ ನಿರಂತರ ಆರ್ಥಿಕ ಬೆಳವಣಿಗೆಯನ್ನು ಅವಲಂಬಿಸಿರುತ್ತದೆ. "ಎಲ್ಲಾ ರೀತಿಯ ಅಭಿವೃದ್ಧಿಯೂ ನಾವು ಜೀವಿಸುತ್ತಿರುವ ಸ್ಥಿತಿಯನ್ನು ಉತ್ತಮ ಪಡಿಸುತ್ತದೆ" ಮತ್ತು "ಎಲ್ಲಾ ರೀತಿಯ ಆರ್ಥಿಕ ಬೆಳವಣಿಗೆಯೂ ಜನರ ಪರಿಸರವನ್ನು ಸಮತೋಲಿತವಾಗುವಂತೆ ವೃದ್ಧಿ ಪಡಿಸುತ್ತದೆ" ಎಂದು ಹೇಳುತ್ತೀರಿ.

ಇವು ತೀರ ಆಘಾತವನ್ನುಂಟು ಮಾಡಬಲ್ಲ ಹೇಳಿಕೆಗಳು. ತೆರೆದ ಗಣಿಗಳಿಂದಾಗಿ ಪಾಳುಗೆಡವಲ್ಪಟ್ಟ ವಿಶಾಲ ಪ್ರದೇಶಗಳು, ಈ ಕೆಲಸಗಳಿಂದಾಗಿ ಔನ್ನತ್ಯ ಹೊಂದಿವೆ ಎಂದು ನೀವು ಭಾವಿಸುತ್ತೀರ? ಜಾಗತಿಕ ಬ್ಯಾಂಕಿನಿಂದ ಧನ ಸಹಾಯ ಪಡೆದವುಗಳೂ ಸೇರಿದಂತೆ ಹಲವು ಸಾರ್ವಕಾಲಿಕ ನೀರಾವರಿ ಯೋಜನೆಗಳು ಹುಟ್ಟು ಹಾಕಿರುವ ನೂರಾರು ಮಿಲಿಯ ಹೆಕ್ಟೇರುಗಳಷ್ಟು ಜೌಗು ಮತ್ತು ಲವಣಯುಕ್ತ ಭೂ ಪ್ರದೇಶ, ಅಲ್ಲಿಯ ಜನರ ಜೀವನ ಸ್ಥಿತಿಯನ್ನು ಸುಧಾರಿಸಿದೆಯೆಂದು ನೀವು ನಂಬುತ್ತೀರ ? ಹತ್ತಾರು ಮಿಲಿಯ ಗ್ರಾಮೀಣ ಮತ್ತು ಗಿರಿಜನತೆಯನ್ನು ತಮ್ಮ ನಿವಾಸ ಸ್ಥಾನಗಳಿಂದ ಒತ್ತಾಯ ಪೂರ್ವಕ ಹೊರಬರುವಂತೆಮಾಡಿ ತೃತೀಯ ಜಗತ್ತಿನ ಜನನಿಬಿಡ ನಗರ ಸಂಕೀರ್ಣಗಳಲ್ಲಿನ ಕೊಳಚೆ ಪ್ರದೇಶಗಳಲ್ಲಿ ದಾರಿದ್ರ್ಯಪೂರ್ಣ ಜೀವನ ನಡೆಸುವಂತೆ ಮಾಡಿರುವ 'ವಿಶಾಲ ಅಭಿವೃದ್ಧಿ ಕಾರ್ಯಕ್ರಮಗಳು' "ಅಲ್ಲಿ ಜೀವಿಸುತ್ತಿರುವ ಜನರ ಪರಿಸ್ಥಿತಿಯನ್ನು ಸುಧಾರಿಸಿವೆ" ಎಂದು ನೀವು ನಿಜವಾಗಿಯೂ ನಂಬಿದ್ದೀರ? ಹೌದಾದರೆ ನೀವು ಏನನ್ನೂ ನಂಬುವವರು !

ಇನ್ನೂ ವಿಷಾದದ ಸಂಗತಿ ಎಂದರೆ 'ನೀವು ಧನ ಸಹಾಯ ಮಾಡುವ ಆರ್ಥಿಕ ಅಭಿವೃದ್ಧಿ' ತಾತ್ಕಾಲಿಕವಾಗಿಯಾದರೂ ನಾವು ಪಶ್ಚಿಮದ ರಾಷ್ಟ್ರಗಳಲ್ಲಿ ಕಾಣುತ್ತಿರುವ ಭೌತಿಕ ಏಳಿಗೆಯನ್ನು ತಾವೂ ಹೊಂದಲು ಸಾಧ್ಯವಾಗುತ್ತದೆ ಎಂಬಂಥ ಭಾವನೆ ಒರು

ನೀತಿ, ತೃತೀಯ ಜಗತ್ತಿನ ನಿವಾಸಿಗಳೆದುರು, ವಿಶ್ವಾಸಪೂರ್ಣ ತಂತ್ರದ ಸೋಗು ಹಾಕುವ ಅಪರಾಧ ಗೈಯುತ್ತಿರುವುದು.

ತೃತೀಯ ಜಗತ್ತಿನ ರಾಷ್ಟ್ರಗಳು ಯಾವತ್ತೂ ನಿಮ್ಮಿಂದ ಸಾಲ ಪಡೆಯುತ್ತಲೇ ಹೋಗುವುದು ಸಾಧ್ಯವಿಲ್ಲವಾದ್ದರಿಂದ, ಅವು ಅಭಿವೃದ್ಧಿ ಹೊಂದಬೇಕಾದರೆ "ಆರ್ಥಿಕ ಮಿಗತೆ" (Economic Surplus) ಯನ್ನು ಸಾಧಿಸಲೇ ಬೇಕೆಂಬುದು ನಿಮಗೆ ಚೆನ್ನಾಗಿ ಗೊತ್ತಿರುವ ವಿಷಯ. ಆದರೆ ಅದನ್ನು ಅವರು ಸಾಧಿಸುವುದಾದರೂ ಹೇಗೆ? ತಾವು ಈಗಾಗಲೇ ಮಾಡಿಕೊಂಡಿರುವ ಸಾಲದ ಕರಾರುಗಳ ಪ್ರಕಾರ ಬಡ್ಡಿ ತೆರುವುದು ಹಾಗಿರಲಿ, ಬಹಳಷ್ಟು ಸಂದರ್ಭಗಳಲ್ಲಿ ಅವುಗಳ ವಿದೇಶೀ ಆದಾಯ ತಮ್ಮ ತೈಲೋತ್ಪನ್ನಗಳ ಆಮದಿನ ಮರುಪಾವತಿಗೂ ಸಾಕಾಗುತ್ತಿಲ್ಲ. ನೀವು ಇನ್ನೂ ಅವುಗಳಿಗೆ ಹಣ ನೀಡುತ್ತಲೇ ಹೋದರೆ, ಅಂತಹ ಬಡ್ಡಿ ಮರುಪಾವತಿಯ ಬಾಕಿಯೂ ಬೆಳೆಯುತ್ತಲೇ ಹೋಗುತ್ತದೆ. ಇದಕ್ಕಿಂತ ಮುಖ್ಯವಾದ ವಿಷಯವೆಂದರೆ, ಸಾಧಾರಣ ಎಲ್ಲ ಸಂದರ್ಭಗಳಲ್ಲಿಯೂ ಈ ದೇಶಗಳ ವಿದೇಶೀ ವಿನಿಮಯ ಗಳಿಕೆಯ ಹೆಚ್ಚಿನ ಭಾಗ ಭೂ ಮೂಲಗಳಿಂದಲೇ ಬರುತ್ತಿದೆ ಎಂಬುದು ಮತ್ತು ಜಾಗತಿಕ ಮಾರುಕಟ್ಟೆಯಲ್ಲಿ ತಮ್ಮ ಉತ್ಪಾದನೆಯನ್ನು ಲಾಭದಾಯಕವನ್ನಾಗಿಸಲು ಬಳಸುವ ತೀವ್ರಾಭಿಲಾಶೆಯ ಉತ್ಪಾದನಾಕ್ರಮಗಳ ಪರಿಣಾಮದಿಂದಾಗಿ ಈ ಭೂ ಮೂಲಗಳು ಅವನತಿ ಹೊಂದುತ್ತಿರುವುದು. ಇಂತಹ ಪರಿಸ್ಥಿತಿಯಲ್ಲಿ ಅವುಗಳ ವಿದೇಶೀ ಗಳಿಕೆ ವರ್ಷದಿಂದ ವರ್ಷಕ್ಕೆ ಇಳಿಯುತ್ತಲೇ ಹೋಗುತ್ತದೆ.

ಫಿಲಿಫೈನ್ಸ್‌ನಲ್ಲಿ ಬ್ಯಾಂಕುಗಳಿಂದ ಸಾಲ ಪಡೆದು, ಕಬ್ಬಿನ ಉತ್ಪಾದನೆಯಲ್ಲಿ ತೀವ್ರಾಭಿಲಾಶೆಯ ಉತ್ಪಾದನಾ ಕಾರ್ಯಕ್ರಮಗಳನ್ನು ಹಮ್ಮಿಕೊಂಡವರ ಭೂಮಿ ಕ್ರಮೇಣ ಅವನತಿ ಹೊಂದುತ್ತಿರುವ ಬಗ್ಗೆ ಅಲ್ಲಿನ ಕೃಷಿಕ 'ಬಾಸಿಲ್ ರೋಸ್ಸಿ' ನನಗೆ ಬರೆದ ಪತ್ರವೊಂದನ್ನು ನಾನು ಇಂಗ್ಲೆಂಡಿನ ಬ್ಯಾಂಕುಗಳಿಗೆ ಕಳುಹಿಸಿಕೊಟ್ಟಿದ್ದೆ. ಇಂತಹ ಕಾರ್ಯಕ್ರಮಗಳಿಂದ ಅಭಿವೃದ್ಧಿ ಸಾಧ್ಯವಿಲ್ಲವೆನ್ನುವುದು ಮತ್ತು ಅಭಿವೃದ್ಧಿಯ ಹೆಸರಿನಲ್ಲಿ ತೃತೀಯ ಜಗತ್ತು ವಿನಾಕಾರಣ ತನ್ನ ಪರಿಸರವನ್ನು, ಸಾಂಸ್ಕೃತಿಕ ಆದರ್ಶ ಮತ್ತು ಸಾಮಾಜಿಕ ಸ್ವರೂಪಗಳನ್ನು ಬಲಿ ನೀಡುವಂತೆ ಮಾಡಲಾಗುತ್ತಿದೆ ಎಂಬುದು, ನೀವೂ ಮತ್ತು 'ಅಭಿವೃದ್ಧಿಯ ವ್ಯವಹಾರ'ದಲ್ಲಿ ತೊಡಗಿರುವ ಎಲ್ಲರೂ ತಿಳಿದ ವಿಷಯವೇ ಆಗಿದೆ.

ಅದೇನೆ ಇರಲಿ, ಅಭಿವೃದ್ಧಿಯು ಬಡವರನ್ನು ಶ್ರೀಮಂತರನ್ನಾಗಿಸುತ್ತದೆ ಮತ್ತು ಅವರಿಗೆ ಉಣ್ಣುವ ಸಾಮರ್ಥ್ಯವನ್ನು ನೀಡುತ್ತದೆ ಎಂಬುದನ್ನು ಅನುಮೋದಿ

ಸಲು ನಿಮ್ಮ ಬಳಿ ಇರುವ ವಿವರಣೆಗಳಾದರೂ ಏನು ? ಜಗತ್ತಿನ ಅತ್ಯಂತ ಅಭಿವೃದ್ಧಿ ಹೊಂದಿದ ರಾಷ್ಟ್ರವಾದ ಅಮೆರಿಕೆಯಲ್ಲಿ, 'ಈ ಅಭಿವೃದ್ಧಿ' ಬಡತನ ಮತ್ತು ನ್ಯೂನ ಪೋಷಣೆಯನ್ನು ತೊಡೆದು ಹಾಕಿದೆಯೇನು? ಅಮೆರಿಕದ "ಕರಿಯರ ವಾಸಸ್ಥಳ"ಗಳಲ್ಲಿನ ಜನರು ತೀರಾ ಬಡವರಾಗಿದ್ದಾರೆ. ಇವರಲ್ಲಿ ಕುಟುಂಬಗಳು ಮತ್ತು ಇಡೀ ಸಮುದಾಯ ತೀರ ಅಭದ್ರವಾಗಿದ್ದು ಸಹಾಯಕ್ಕೆ ಗಂಡಸರೂ ಇಲ್ಲದ ಮನೆಗಳನ್ನು ಕೇವಲ ಒಬ್ಬ ಸ್ತ್ರೀ ನಡೆಸುವಂತಾಗಿದೆ. ಇಲ್ಲಿ ಮದ್ಯಪಾನ, ಮಾದಕ ಪದಾರ್ಥಗಳ ಚಟ, ಕರ್ತವ್ಯಲೋಪ ಮತ್ತು ಅಪರಾಧಗಳು ಸರ್ವೇಸಾಮಾನ್ಯವಾಗಿದ್ದು, ಯಾವುದೇ ನಿಯೋಜಿತ ಅಧಿಕಾರ ಪದ್ಧತಿಯ ಬಗೆಗೂ, ದ್ವೇಷವಲ್ಲದಿದ್ದರೂ ಅಪನಂಬಿಕೆಯಂತೂ ಸಾಮಾನ್ಯವಾಗಿದೆ. ಇದನ್ನೇ ಆಸ್ಕರ್ ಲೆವಿಸ್ 'culture of poverty' ಎಂದು ಕರೆಯುತ್ತಾನೆ. ವಿಶೇಷವೆಂದರೆ ಇದು ಅತ್ಯುಚ್ಚ ಭೌತಿಕ ಸಂಪತ್ತಿನ ಸಹವರ್ತಿಯಾಗಿರುವುದು. ಇದರ ಬಲಿಪಶುಗಳು ಬಣ್ಣದ ಟೆಲಿವಿಷನ್‌ಗಳನ್ನೂ, ವೀಡಿಯೋ ಟೇಪ್ ರೆಕಾರ್ಡರ್‌ಗಳನ್ನೂ, ದುಬಾರಿಯ ವಾಹನಗಳನ್ನೂ ಹೊಂದಿರುವುದು ಸಾಧ್ಯವಿದೆ.

"ಧರ್ಮ ಜನರಿಗೆ ಅಫೀಮು ಇದ್ದಂತೆ" ಎನ್ನುವಲ್ಲಿ ಕಾರ್ಲ್‌ಮಾರ್ಕ್ಸ್ ಬಹುಶಃ ತಪ್ಪುಮಾಡಿದ್ದಾನೆ. ಭೌತವಾದವೇ (Materialism) ನಿಜವಾದ ಅಫೀಮು. ಏಕೆಂದರೆ ಇಂತಹ ಆಟಿಕೆಗಳೊಡನೆ ಆಡುವ ಸಾಮಾಜಿಕವಾಗಿ ಪರಕೀಯರಾದ ಜನ, ತಾತ್ಕಾಲಿಕವಾಗಿಯಾದರೂ ಬೇರೆಯದೇ ಜಗತ್ತಿಗೆ ಹೋಗಿ, ನಾವು ದುಸ್ಸಹವಾಗಿಸಿರುವ, ನಿಜವಾದ ಜಗತ್ತನ್ನು ಮರೆಯುತ್ತಾರೆ. ಆದರೆ ಆ ಜಗತ್ತು ಅವರ ಮೂಲಭೂತ ರಸಾಸ್ವಾದದ (aesthetic) ಆಧ್ಯಾತ್ಮಿಕ ಮತ್ತು ಸಾಮಾಜಿಕ ಅಗತ್ಯಗಳನ್ನು ಪೂರೈಸಲಾರದು. ಇವಾನ್ ಎಲ್ಲಿಶ್ ಹೇಳಿರುವ ಹಾಗೆ, "ಅಭಿವೃದ್ಧಿ ಬಡತನವನ್ನು ನಿವಾರಿಸಲಿಲ್ಲ. ಬದಲಿಗೆ ಆಧುನೀಕರಿಸಿದೆ"

ಸಂಯುಕ್ತ ಸಂಸ್ಥಾನದಲ್ಲಿನ ಅನಿಯಂತ್ರಿತ ಅಭಿವೃದ್ಧಿ ನ್ಯೂನ ಪೋಷಣೆಯನ್ನು ಸಹಾ ತೊಡೆದು ಹಾಕಿಲ್ಲ. ಅಮೆರಿಕೆಯಲ್ಲಿನ ಸುಮಾರು ಇಪ್ಪತ್ತು ಮಿಲಿಯ ಜನ ಒಂದಿಲ್ಲೊಂದು ರೀತಿಯ ಪೋಷಕ ಆಹಾರದ ಕೊರತೆಯಿಂದ ಸಂಕಷ್ಟಪಡುತ್ತಿದ್ದಾರೆ. ಅಂದರೆ ಆಹಾರವೇ ಸಿಗುತ್ತಿಲ್ಲವೆಂದಲ್ಲ. ಆದರೆ ಈ ಜನ ತಮ್ಮ ಹಣವನ್ನು ಆಹಾರಕ್ಕಾಗಿ ಖರ್ಚು ಮಾಡುವುದಕ್ಕಿಂತಲೂ, ಉಪಯೋಗವಿಲ್ಲದ ಅನುಭೋಗೀ ವಸ್ತುಗಳು, ಮದ್ಯ, ಮಾದಕ ವಸ್ತುಗಳಿಗೇ ವ್ಯಯಿಸುವಷ್ಟು ಮಾನಸಿಕವಾಗಿ ಅಸ್ವಸ್ಥರೂ, ಸಾಮಾಜಿಕವಾಗಿ ಪರಕೀಯರೂ ಆಗಿಬಿಟ್ಟಿದ್ದಾರೆ. ಅಂತೆಯೇ ಬೆಳವಣಿಗೆ ನ್ಯೂನ ಪೋಷಣೆಯನ್ನೂ ನಿವಾರಿಸಲಿಲ್ಲ, ಬದಲಿಗೆ ಆಧುನೀಕರಿಸಿದೆ

ಬಡತನ ಮತ್ತು ನ್ಯೂನ ಪೋಷಣೆಗಳಿಲ್ಲದ ಸಮಾಜ ಒಂದನ್ನು ಹುಡುಕಬೇಕೆಂಬ ಬಯಕೆ ನಿಮಗಿದ್ದರೆ ನೀವು ಕೈಗಾರಿಕೀಕೃತ ಜಗತ್ತಿನೆಡೆಗೆ ನೋಡಬೇಕಿಲ್ಲ. ಆದಿವಾಸಿಗಳು ಎನ್ನಬಹುದಾದ ಕೆಲವು ಜನರಿಂದಿಗೂ ಉಳಿದಿದ್ದಾರೆ. ಕೆಲವರು ನೀವು ಯೋಜಿಸುತ್ತಿರುವ Polcnoroeste ಕಾರ್ಯಕ್ರಮದ ಪ್ರದೇಶವಾದ ಅಮೆಜೋನಿಯಾದ ಅಳಿದುಳಿದ ಪ್ರದೇಶಗಳಲ್ಲಿದ್ದಾರೆ. ಕೆಲವರು, ಅವರ ಅವನತಿಗಾಗಿ ನೀವು ಧನ ಸಹಾಯ ಯೋಜಿಸುತ್ತಿರುವ ಪ್ರದೇಶವಾದ ಮಧ್ಯಪ್ರದೇಶದ ಬಸ್ತಾರ್‌ನಲ್ಲಿದ್ದಾರೆ ಅವರ ಸಮಾಜ ಮತ್ತು ಪರಿಸರ ಇನ್ನೂ ಹಾಳಾಗದೆ ಉಳಿದಿದೆ. ಅಂತೆಯೆ ಅವರ ಸದಸ್ಯರುಗಳು ಅಮೇರಿಕದ slum ಗಳಲ್ಲಿರುವವರಲ್ಲಿ ಸಾಮಾನ್ಯವಾಗಿರುವಂತೆ, ಸಾಮಾಜಿಕ ಪರಕೀಯತೆಯಿಂದಾಗಲೀ ನ್ಯೂನ ಪೋಷಣೆಯಿಂದಾಗಲೀ ಬಳಲುತ್ತಿಲ್ಲ. ಹಾಗೆ ನೋಡಿದರೆ ಅತ್ಯಂತ ಮೌಲಿಕವಾದದ್ದು ಎಂದು ಯಾರೂ ಹೇಳಬಲ್ಲ, ಅಲ್ಲಿಯ ಜನರಿಗೆ ರಕ್ಷಣೆ ಮತ್ತು ಎಲ್ಲ ತರಹದ ಪ್ರಮುಖ ದೈಹಿಕ ಮತ್ತು ಮಾನಸಿಕ ಸಂತುಷ್ಟತೆಯನ್ನು ಕೊಡಬಲ್ಲ "ಜೀವಂತ ಪರಿಸರದ ಬಂಡವಾಳವನ್ನು" ಅವರು ಹೊಂದಿದ್ದಾರೆ. ಒಮ್ಮೆ, ನಿಮ್ಮ ವಿಶಾಲ ಅಭಿವೃದ್ಧಿ ಕಾರ್ಯಕ್ರಮಗಳಿಂದಾಗಿ ಇಂತಹ ಸಮಾಜದ ಸದಸ್ಯರುಗಳು ಬೇರ್ಪಟ್ಟು, ಯಾವುದೋ ದೊಡ್ಡ ಜನನಿಬಿಡ ನಗರ ಸಂಕೀರ್ಣಗಳ ಕೊಳಚೆ ಪ್ರದೇಶಗಳಲ್ಲಿ ಆಶ್ರಯ ಪಡೆಯುವಂತಾದರೆ, ಆರ್ಥಿಕ ಅಭಿವೃದ್ಧಿ ಎಂದೂ ಗಳಿಸಿಕೊಡಲಾರದ, ಈ ಎಲ್ಲ ಐಶ್ವರ್ಯದ ಮೂಲಗಳಿಂದಲೂ ಅವರು ವಂಚಿತರಾಗುತ್ತಾರೆ.

'The Social and Environmental effects of Large Dams' ಎನ್ನುವ ನಮ್ಮ ಪುಸ್ತಕದಲ್ಲಿನ ಒಂದು ಭಾಗವನ್ನು ಆಧುನಿಕ ನೀರಾವರಿ ಪದ್ಧತಿಗಳಲ್ಲಿ ಸಾಧಾರಣವಾಗಿರುವ ಸಾಮಾಜಕ ಮತ್ತು ಪರಿಸರದ ಸಮಸ್ಯೆಗಳನ್ನು ಹುಟ್ಟುಹಾಕದಿರುವ ಒಂದೇ ಒಂದು ನೀರಾವರಿ ಪದ್ಧತಿ, ಸಾಂಪ್ರದಾಯಿಕ ಪದ್ಧತಿ ಮಾತ್ರ ಎಂದು ನಿರೂಪಿಸಲು ವಿನಿಯೋಗಿಸಿದ್ದೇವೆ. ಮರುಭೂಮೀಕರಣದ ಬಗೆಗಿನ ಸಂಯುಕ್ತರಾಷ್ಟ್ರ ಪರಿಸರ ಕಾರ್ಯಕ್ರಮದ [UNEP] ಸಮ್ಮೇಳನದಲ್ಲಿ ಕೂಡ, ಸಹೇಲಿಯಾ ಪರಿಸರದ ಭೂಮಿ ಇನ್ನೂ ಹೆಚ್ಚು ಅವನತಿ ಹೊಂದದಂತೆ ತಡೆಯುವ ಒಂದೇ ಮಾರ್ಗವೆಂದರೆ, ಸಾವಿರಾರು ವರ್ಷಗಳಿಂದ ಅಲ್ಲಿ ಪ್ರಚಲಿತವಿದ್ದ ಗ್ರಾಮ್ಯ ಪದ್ಧತಿಯನ್ನು ಹೋಲುವ ಯೋಜನೆಯನ್ನೇ ಅನುಸರಿಸುವುದು, ಎಂದು ತೀರ್ಮಾನವಾಗಿರುವುದು ಗಮನಿಸಬೇಕಾದ ವಿಷಯ. ಇಲ್ಲಿನ ಆದಿವಾಸಿ ಜನಗಳು ಹಸಿವು, ನ್ಯೂನ ಪೋಷಣೆ, ಕ್ಷಾಮಗಳಿಂದ ಬಳಲುತ್ತಿದ್ದಿಲ್ಲ. ವಿಲಿಯಮ್ ಡ್ಯಾಂಡೋ ತನ್ನ ಪುಸ್ತಕ "Geography of Famine" ನಲ್ಲಿ ಹೇಳಿರುವಂತೆ "ಇವೆಲ್ಲ ಬಹುತೇಕ ಮಾನವ ನಿರ್ಮಿತ ವಿಷಯಗಳು ಮತ್ತು 'ಮಾರುಕಟ್ಟೆ ವ್ಯವ

ಸ್ಥೆಯ' ಅಭಿವೃದ್ಧಿಯ ಜೊತೆಗೇ ಇವುಗಳ ವ್ಯಾಪ್ತಿ ಮತ್ತು ಗಂಭೀರತೆಯೂ ಹೆಚ್ಚುತ್ತಾ ಹೋಯಿತು."

ಮುಖ್ಯ ವಿಷಯವೆಂದರೆ, ಇಂದು ನಮ್ಮ ಗ್ರಹದ ಮೇಲಿನ ಜೀವರಾಶಿಯ ಉಳಿವಿನ ಬಗ್ಗೆಯೇ ಭೀತಿ ಹುಟ್ಟಿಸುತ್ತಿರುವ ಯಾವುದೇ ಪ್ರಮುಖ ಸಮಸ್ಯೆಯೂ ಈ ಜನಗಳಿಂದ ಉದ್ಭವಿಸಿದ್ದಲ್ಲ ಎಂಬುದು. ಅವರು ತಮ್ಮ ಮರಗಳನ್ನು ಕಡಿಯುವುದಿಲ್ಲ, ನೆಲವನ್ನು ಮರುಭೂಮಿಯಾಗಿಸುವುದಿಲ್ಲ ಅಥವ ಉಸಿರಾಡುವ ಗಾಳಿಯನ್ನಾಗಲೀ, ಕುಡಿಯುವ ನೀರನ್ನಾಗಲೀ ಕಲುಷಿತ ಗೊಳಿಸುವುದೂ ಇಲ್ಲ. ನಾವು ಮಾಡುತ್ತಿರುವಂತೆ ಅವರು ವಾತಾವರಣದ ಮೂಲಭೂತ ರಾಸಾಯನಿಕ ರಚನೆಯನ್ನೇ ಬದಲು ಮಾಡುವುದಿಲ್ಲ. ಅಥವ ಜಗತ್ತಿನ ಹವಾಮಾನವನ್ನೇ ಅಭದ್ರವಾಗಿಸುವ ಭೀತಿಯನ್ನೂ ಉಂಟು ಮಾಡುವುದಿಲ್ಲ. ಹಾಗೆ ನೋಡಿದರೆ ಅವರು ಅಣು-ಬಾಂಬುಗಳನ್ನೂ ನಿರ್ಮಿಸುವುದಿಲ್ಲ! ಆದರೂ irony ಎಂದರೆ ನೀವು ಅವರ ಜೀವನ ಕ್ರಮದ ಸರ್ವನಾಶಕ್ಕೆ ಧನ ಸಹಾಯ ಮಾಡುವ ತೀವ್ರಾಭಿಲಾಷೆ ಹೊಂದಿರುವುದು ಮತ್ತು ಇನ್ನೂ ಹೆಚ್ಚಿನ irony ಎಂದರೆ ಅದನ್ನು 'ಬಡತನದಿಂದ ಅವರನ್ನು ರಕ್ಷಿಸುವ' ನೆಪದಲ್ಲಿ ಮಾಡುತ್ತಿರುವುದು.

ಅಭಿವೃದ್ಧಿ, ನ್ಯೂನ ಪೋಷಣೆ ಅಥವ ಕ್ಷಾಮದಂತಹ ಸಮಸ್ಯೆಗಳಿಗೆ ಪರಿಹಾರ ವನ್ನು ಒದಗಿಸಲಾಗದುದಕ್ಕೆ ತೀರ ಸ್ಪಷ್ಟ ಕಾರಣವೆಂದರೆ, ಈ ಅಭಿವೃದ್ಧಿಗಾಗಿ ಹಣ ಶೇಖರಿಸಲು ತೃತೀಯ ಜಗತ್ತು ಅಧಿಕ ಮೊತ್ತದ ವಿದೇಶೀ ವಿನಿಮಯಗಳಿಸಬೇಕಿರು ವುದು. ಮತ್ತು ಅಂತಹ ಗಳಿಕೆಗಾಗಿ ಮೊಟ್ಟ ಮೊದಲಾಗಿ ತನ್ನ ಕಾಡುಗಳನ್ನು ಮಾರಬೇ ಕಿರುವುದು. ಇಂಡೋನೇಶಿಯಾದ 'ಆರ್ಥಿಕ ಪವಾಡಕ್ಕೆ' ಹಣ ಹೂಡಿಕೆಯಾದದ್ದು, ಮಲೇಶಿಯಾ ತನ್ನ ಬಹುತೇಕ ಆರ್ಥಿಕಾಭಿವೃದ್ಧಿ ಕಾರ್ಯಕ್ರಮಗಳಿಗೆ ಹಣ ಹುಟ್ಟಿ ಹಾಕಿದ್ದು ಹೀಗೆಯೇ, ಈಗ ನ್ಯೂ ಗಯಾನ ಇದೇ ರೀತಿ ತನ್ನ ಅಭಿವೃದ್ಧಿಗೆ ಹಣ ಒದಗಿ ಸುವ ಪ್ರಸ್ತಾಪ ಹೊಂದಿದೆ. ತೃತೀಯ ಜಗತ್ತಿನಲ್ಲಿ ಅರಣ್ಯನಾಶದಿಂದಾಗುವ ಪರಿಣಾಮ ಗಳೇನೆಂಬುದನ್ನು ನಾವು ಮುಂದೆ ನೋಡೋಣ. ಸದ್ಯಕ್ಕೆ ನಾವು ಗಮನಿಸಬೇಕಾದ ವಿಷಯವೆಂದರೆ, ಒಮ್ಮೆ ಅವರ ಅರಣ್ಯಗಳು ಮುಗಿದವೆಂದರೆ ತೃತೀಯ ಜಗತ್ತಿನ ಸರಕಾರಗಳು ವಿದೇಶೀ ವಿನಿಮಯದ ಮೂಲವಾಗಿ ನೆಡು ತೋಪು (Plantation) ಬೆಳೆಗಳನ್ನೂ, ಪಶುಪಾಲನೆಯನ್ನೂ ಅವಲಂಬಿಸಬೇಕಾಗುತ್ತದೆ. ತೃತೀಯ ಜಗತ್ತಿನ ಹಲವಾರು ರಾಷ್ಟ್ರಗಳಲ್ಲಿ ಈಗಾಗಲೇ ಶೇಕಡ ಐವತ್ತಕ್ಕಿಂತ ಹೆಚ್ಚು ಭಾಗ ಒಳ್ಳೆಯ ಕೃಷಿ ಯೋಗ್ಯ ಭೂಮಿಯನ್ನು ರಫ್ತಿಗಾಗಿ ವಾಣಿಜ್ಯ ಬೆಳೆಗಳನ್ನು ಬೆಳೆಯಲು ಉಪಯೋಗಿಸ

ಲಾಗುತ್ತಿದೆ ತಮ್ಮ ತೈಲ ಆಯಾತದ ಏರುತ್ತಿರುವ ವೆಚ್ಚ ಮತ್ತು ಬೆಳೆಯುತ್ತಲೇ ಇರುವ ಬಡ್ಡಿ ಬಾಕಿಗಳಿಂದಾಗಿ, ವಿದೇಶೀ ವಿನಿಮಯದ ಕೊರತೆ ಅಧಿಕವಾಗುತ್ತಿರುವುದರಿಂದ ಈ ದೇಶಗಳು ಇನ್ನೂ ಹೆಚ್ಚಿನ ಭೂಮಿಯನ್ನು, ಈಗಾಗಲೇ ನ್ಯೂನ ಪೋಷಿತರಾದ 'ತಮ್ಮ ಜನತೆಗಾಗಿ ಆಹಾರ ಬೆಳೆಯುವಲ್ಲಿಂದ' ವಿಮುಖವಾಗಿಸಿ 'ರಫ್ತಿಗಾಗಿ ವಾಣಿಜ್ಯ ಬೆಳೆಗಳನ್ನು ಬೆಳೆಯಲು ಉಪಯೋಗಿಸಲಾಗುತ್ತಿದೆ. ತಮ್ಮ ತೈಲ ಆಯಾತದ ಏರುತ್ತಿರುವ ವೆಚ್ಚ ಮತ್ತು ಬೆಳೆಯುತ್ತಲೇ ಇರುವ ಬಡ್ಡಿ ಬಾಕಿಗಳಿಂದಾಗಿ ವಿದೇಶೀ ವಿನಿಮಯದ ಕೊರತೆ ಅಧಿಕವಾಗುತ್ತಿರುವುದರಿಂದ ಈ ದೇಶಗಳು ಇನ್ನೂ ಹೆಚ್ಚಿನ ಭೂಮಿಯನ್ನು, ಈಗಾಗಲೇ ನ್ಯೂನ ಪೋಷಿತರಾದ 'ತಮ್ಮ ಜನತೆಗಾಗಿ ಆಹಾರ ಬೆಳೆಸುವತ್ತ' ತೊಡಗಿಸಬೇಕಾಗಿದೆ.

ಭಾರತದಲ್ಲಿ ಪ್ರತಿ ವರ್ಷ ಹುಟ್ಟುವ ಮಕ್ಕಳಲ್ಲಿ ಕೇವಲ ಶೇಕಡ ಹದಿನೈದರಷ್ಟು ಜನ ಮಾತ್ರ ಅಗತ್ಯ ಪೋಷಿತ ಆಹಾರ ಪಡೆಯುತ್ತಾರಾದರೂ, ಭಾರತ ಸರಕಾರವು ತನ್ನ ಆಹಾರ ರಫ್ತಿಗಾಗಿ ಸಾಧ್ಯವಾದುದನ್ನೆಲ್ಲ ಮಾಡುತ್ತಿರುವುದನ್ನು ಕಾಣುತ್ತೀರಿ ಇಂತಹ ಕಾರ್ಯನೀತಿಯೊಂದು ಆ ದೇಶದ ಜನರ ಹಿತಾಸಕ್ತಿಗಳಿಗೆ ಪೂರಕವಾದದು ಎಂದು ನೀವು ನಂಬುವುದು ಸಾಧ್ಯವೆ? ಅದರ ಆಹಾರದ ಇನ್ನೂ ಹೆಚ್ಚಿನ ಭಾಗವನ್ನು ರಫ್ತುಮಾಡುವುದರ ಮೂಲಕ ನೂರಾರು ಮಿಲಿಯ ಹಸಿದ ಹೊಟ್ಟೆಗಳನ್ನು ತುಂಬುವುದು ಸಾಧ್ಯವೆ!

ನಿಮ್ಮ ಈ ಬಗೆಯ ಕೃಷಿ ಕಾರ್ಯನೀತಿಗಳೆಲ್ಲ ನಿರ್ಧಾರವಾಗುವುದು, GIFAP ನಂತಹ ಪ್ರತಿನಿಧಿಗಳನ್ನು ಹೊಂದಿದ Agro-chemical ಕೈಗಾರಿಕೆಗಳ ಸಂಪೂರ್ಣ ಹತೋಟಿಯಲ್ಲಿರುವ ನಂತಹ ಸಂಸ್ಥೆಯ ಶಿಫಾರಸಿನ ಮೇಲೆ ಎಂಬುದು ತೀರ ವಿಷಾದದ ವಿಷಯ. ರಾಸಾಯನಿಕಗಳ ಮಾರಾಟವನ್ನು ಗರಿಷ್ಟಗೊಳಿಸುವಲ್ಲಿ ಸಹಕಾರಿಯಾಗಿದೆ ಮತ್ತು ಪಶ್ಚಿಮದ ಆಹಾರ ಸಂಸ್ಕರಣ ಘಟಕಗಳಿಗೆ ಸುಲಭದರಗಳಲ್ಲಿ ಆಹಾರ ಪದಾರ್ಥಗಳನ್ನು ಮತ್ತು ವಿಶೇಷವಾಗಿ ಗೋ ಮಾಂಸವನ್ನು ಆಮದು ಮಾಡಿಕೊಳ್ಳಲು ಅನುವಾಗುತ್ತದೆ ಎಂಬ ಅರ್ಥದಲ್ಲಿ ನೋಡಿದಾಗ ಮಾತ್ರ FAO ನ ಕಾರ್ಯನೀತಿಗಳು ಸಮಂಜಸವೆನಿಸಲು ಸಾಧ್ಯ. ಅಂತೆಯೆ FAO ನಿಂದ ಸ್ಫೂರ್ತಿ ಪಡೆದ ಯೋಜನೆಗಳಿಗೆ ಧನ ಸಹಾಯ ನೀಡುವ ಮೂಲಕ ನೀವು ಮಾಡುತ್ತಿರುವ ಸಾಧನೆಯೆಂದರೆ, ಇತ್ತೀಚೆಗಷ್ಟೇ ನಮ್ಮ ಗಮನಕ್ಕೆ ಬರಲಾರಂಭಿಸಿರುವ, ಹಸಿವು ಮತ್ತು ಕ್ಷಾಮಗಳನ್ನು ಹುಟ್ಟು ಹಾಕುತ್ತಿರುವುದು.

ಅತಿ ಘೋರ ಎನ್ನಬಹುದಷ್ಟು ಪರಿಸರದ ಅವನತಿಗೆ ಕಾರಣವಾಗುವುದರ ಮೂಲಕವೂ, ನಿಮ್ಮ ಕಾರ್ಯನೀತಿಗಳು ಬಡತನ ಮತ್ತು ಕ್ಷಾಮಕ್ಕೆ ಬೆಂಗಾವಲಾಗುತ್ತಿವೆ.

ಪರಿಸರದ ಅವನತಿಯು ವಿಷಯವೇನಿದ್ದರೂ ಶ್ರೀಮಂತರ ಆತಂಕ ಮತ್ತು ಆಸಕ್ತಿಯ ವಿಷಯವೆಂದೂ, ಬಡವರ ಆಸಕ್ತಿಗಳೇನಿದ್ದರೂ ಭೌತಿಕ ಹಿತ ಮತ್ತು ಅದನ್ನು ಪಡೆಯಲು ಅನುವಾಗುವಂತೆ ಉದ್ದಿಮೆಗಳು ನೀಡಬಲ್ಲ ಕೆಲಸಗಳು ಮಾತ್ರವೆಂದು ನಾವು ಸಾಧಾರಣವಾಗಿ ನಂಬುವಂತೆ ಮಾಡಲಾಗಿದೆಯಾದರೂ, ಇದೊಂದು ಅಸಂಬದ್ಧ ನಿಲುವು. ಸತ್ಯದ ವಿಷಯವೆಂದರೆ, ಪರಿಸರದ ಅವನತಿಯೇ ಜಗತ್ತಿನ ಇಂದಿನ ಬಡತನ ಹಾಗೂ ಕ್ಷಾಮದ ಮೂಲಕಾರಣ ಎನ್ನುವುದು. ಆಫ್ರಿಕದಲ್ಲಿ ನಾವಿಂದು ಕಾಣುತ್ತಿರುವ ದುರಂತವು ಅನಿವಾರ್ಯವಾದ ಮತ್ತು ಧೃಢೀಕರಿಸಲಾಗದ ಅನಾವೃಷ್ಟಿಯ ಪರಿಣಾಮ ಅಥವ ದೈವ ಲೀಲೆ ಎನ್ನುವುದಕ್ಕಿಂತಲೂ ಹೆಚ್ಚಾಗಿ ನಿಮ್ಮ ತರಹದ ಅಭಿವೃದ್ಧಿ ಬ್ಯಾಂಕುಗಳ ಧನಸಹಾಯದಿಂದ ಮತ್ತು ಜಾಗತಿಕ ಯುದ್ಧದ ನಂತರ ಉಂಟಾದ ಪರಿಸರದ ಅನವತಿಯ ಪರಿಣಾಮವೆನ್ನುವುದು ಹೆಚ್ಚು ಸಮಂಜಸ.

ಅನಾವೃಷ್ಟಿ ಉಂಟಾಗಿದೆ ಎಂದು ಹೇಳಲಾಗುವ ಹಲವಾರು ಪ್ರದೇಶಗಳಲ್ಲಿ ಮಳೆಯ ಪ್ರಮಾಣ ಸ್ವಲ್ಪವೂ ಕಡಿಮೆಯಾಗಿಲ್ಲ. ಆದರೆ ಕಾಡುಗಳ ನಾಶ ಮತ್ತು ತೀವ್ರಾಭಿಲಾಷೆಯ ಕೃಷಿ ಪದ್ಧತಿಗಳಿಂದಾಗಿ, ನೀರನ್ನು ಉಳಿಸಿಕೊಳ್ಳುವ ಮಣ್ಣಿನ ಶಕ್ತಿ ಕುಂಠಿತವಾಗಿದೆ. ಎಲ್ಲೆಲ್ಲಿ ಮಳೆ ಕಡಿಮೆಯಾಗಿದೆಯೋ ಅಲ್ಲೆಲ್ಲ, ಅದರ ಪರಿಣಾಮ ಹಿಂದೆ ಆಗುತ್ತಿದ್ದುದಕ್ಕಿಂತಲೂ, ತೀರ ಗಂಭೀರವಾಗಿ ಕಾಣಿಸಿಕೊಳ್ಳುತ್ತಿದೆ. ಇದಕ್ಕೂ ಪರಿಸರದ ಅವನತಿ ಮತ್ತು ತಮ್ಮ ದನಗಳನ್ನು ಮೇಯಿಸಲು ಅಲೆಮಾರಿ ಜನಗಳು ಉಪಯೋಗಿಸುತ್ತಿದ್ದ ಭೂಮಿಯನ್ನೂ ಸಹ ಅವರಿಂದ ಕಸಿದುಕೊಂಡು ವಾಣಿಜ್ಯ ಬೆಳೆಗಳನ್ನು ಬೆಳೆಯುಲು ಉಪಯೋಗಿಸಿದ್ದೇ ಕಾರಣವಾಗಿದೆ. (ಉದಾಹರಣೆಗೆ-ಸಹೇಲಿಯಾದಲ್ಲಿ, ಫ್ರಾನ್ಸ್‌ಗೆ ರಫ್ತುಮಾಡಲೆಂದು ಬಟಾಣಿ ಬೆಳೆಯುತ್ತಿರುವುದು)

ಪರಿಸರವನ್ನು ನಾಶಗೊಳಿಸುವವರು ಬಡವರು ಎಂಬುದು ನೀವು ಹಾಕುತ್ತಿರುವ ಸೋಗು ಮಾತ್ರ ಎಂದು ಪುನಃ ಹೇಳಬೇಕಾದ ಅಗತ್ಯವಿಲ್ಲ. ನಿಮ್ಮ Osborn ಉಪನ್ಯಾಸದಲ್ಲಿ ನೀವು "ಬಡತನ ಪರಿಸರದ ಮೇಲೆ ಗಂಭೀರವಾದ ಮತ್ತು ಬಹಳಷ್ಟು ಬಾರಿ ಮಾರ್ಪಡಿಸಲಾಗದಂತಹ ಒತ್ತಡವನ್ನು ಹೇರುತ್ತದೆ." ಎಂದು ಹೇಳಿದ್ದೀರಿ. "ಅಳಿವು ಉಳಿವಿನ ಹಂತಗಳಲ್ಲಿ ಜನ ಕೆಲವುಸಾರಿ ತೀವ್ರಾಭಿಲಾಷೆಯಿಂದ ಪರಿಸರವನ್ನು ದುಡಿಸಿಕೊಳ್ಳುತ್ತಾರೆ. ಅತಿ ಬಳಕೆ, ಭೂ ಸವೆತ ಕೊಚ್ಚಿಹಾಕಲ್ಪಟ್ಟ ಅರಣ್ಯಗಳು, ಕಲುಷಿತ್ರಗೊಂಡ ಮೇಲ್ಮೈ ನೀರು ಮುಂತಾದವುಗಳಿಂದ ವಿದಿತವಾಗುವಂತೆ, ಬಡತನವು ಬಹಳಷ್ಟು ವರ್ಷಗಳಿಂದ ನೈಸರ್ಗಿಕ ಸಂಪತ್ತಿನ ವ್ಯವಸ್ಥಾಪನೆಯ ಕೊರತೆಯನ್ನು ಉಂಟುಮಾಡಿದೆ" ಎಂದೂ ಹೇಳಿದ್ದೀರಿ. ಇವು ಯಾರನ್ನಾದರೂ ದಾರಿ ತಪ್ಪಿಸಬಹುದಾದ ಹೇಳಿಕೆಗ

ಕೆಂಬುದನ್ನೂ ನೀವು ಬಲ್ಲಿರಿ,

ಕೃಷಿಕರ ಚಟುವಟಿಕೆಗಳಿಂದಾಗಿ ಅರಣ್ಯದ ಮೇಲಾಗುತ್ತಿರುವ ಪರಿಣಾಮ ಮೂವತ್ತು ವರ್ಷ ಹಿಂದಿದ್ದುದಕ್ಕಿಂತ ಇಂದು ಹೆಚ್ಚಾಗಿದೆ ಎಂಬುದು ನಿಜ. ಇದಕ್ಕೆ ಭಾಗಶಃ ಕಾರಣ ಕೃಷಿಕರ ಸಂಖ್ಯೆ ಹೆಚ್ಚಾಗಿರುವುದಾದರೆ, ಇನ್ನೂ ಮುಖ್ಯ ಕಾರಣ ಅವರ ಬಹುಭಾಗ ಅರಣ್ಯವನ್ನು ಮರಮುಟ್ಟಿನ ಕಂಪನಿಗಳು ಕಡಿದುರುಳಿಸಿರುವುದು ತಮ್ಮ ಕಾಡುಗಳು ಇದ್ದ ಹಾಗೇ ಇದ್ದಾಗ ಸಹಿಸಿಕೊಳ್ಳುವಂತಿದ್ದ ಈ ಜನರ ಚಟುವಟಿಕೆಗಳು ಈಗ ಇದ್ದಕ್ಕಿದ್ದಂತೆ ವಿನಾಶಕಾರಿಯಾಗುತ್ತಿವೆ ಎಂಬುದು ನಿಮ್ಮ ಮಾತಿನ ಅರ್ಥವೇ? ಗ್ರಾಮೀಣ ಕೃಷಿಕರ ವ್ಯವಸಾಯ ಪದ್ಧತಿ ಮತ್ತು ಹುಲ್ಲುಗಾವಲುಗಳ ಮೇಲಿನ ಅದರ ಪರಿಣಾಮವೂ ಇದೇ ರೀತಿಯಾಗಿದೆ. ಉದಾಹರಣೆಗೆ ಮೆಸಾಯ್(Mesai) ಜನಗಳ ಹುಲ್ಲುಗಾವಲುಗಳನ್ನು ಅಗತ್ಯಕ್ಕಿಂತ ಹೆಚ್ಚು ಮೇವಿಗೆ ಬಿಡುತ್ತಿದ್ದಾರಾದರೆ ಅದಕ್ಕೆ ಪ್ರಮುಖ ಕಾರಣ, ಅವರ ದನಗಳ ಓಡಾಟ ಮೊದಲು ಲಭ್ಯವಿದ್ದ ಒಟ್ಟು ಜಾಗದ ಕೇವಲ ಕಾಲಂಶಕ್ಕೆ ಮಾತ್ರ ಸೀಮಿತಗೊಳ್ಳಬೇಕಾಗಿರುವುದು. ಉಳಿದ ಭೂಮಿಯನ್ನೆಲ್ಲ ವಸಾಹತುಶಾಹಿ ಆಡಳಿತ ತನ್ನ ವಾಣಿಜ್ಯ ಅಗತ್ಯಗಳಿಗಾಗಿ ಮುಟ್ಟುಗೋಲು ಹಾಕಿಕೊಂಡಿರುವುದು. ಸಹೇಲಿಯಾದ ಅಂಚಿನ ಪ್ರದೇಶಗಳಲ್ಲಿನ ಹುಲ್ಲುಗಾವಲಿಗೂ ಇದೆ ವಿಷಯ ಅನ್ವಯವಾಗುತ್ತದೆ.

ಭಾರತದ ಗ್ರಾಮೀಣ ಮತ್ತು ಗಿರಿಜನರನ್ನು ಉದಾಹರಣೆಯಾಗಿ ತೆಗೆದುಕೊಳ್ಳುವುದಾದರೆ, ಆ ದೇಶದಲ್ಲಿ ನಿಜವಾಗಿಯೂ ಅಳಿದುಳಿದ ಕಾಡುಗಳನ್ನು ರಕ್ಷಿಸಲು ಪ್ರಯತ್ನಿಸುತ್ತಿರುವವರು, ಅವರು ಮಾತ್ರ. ಬಿಹಾರದಲ್ಲಿ ಸಾಲ್ (SAL) ಮರಗಳನ್ನು ಕಡಿದು ಈ ಜಾಗದಲ್ಲಿ ನೀಲಗಿರಿ ತೋಟಗಳನ್ನು ಬೆಳೆಸುವುದರ ವಿರುದ್ಧ ಸೈನ್ಯದೊಡನೆ ಹೊಡೆದಾಡಿ ಕಾಡನ್ನು ರಕ್ಷಿಸಲು ಯತ್ನಿಸಿ, ನೂರಾರು ಸಂತಾಲ್ ಗಿರಿಜನರು ಪ್ರಾಣ ತೆತ್ತಿದ್ದಾರೆ. ಸುಂದರಲಾಲ್ ಬಹುಗುಣ ಮತ್ತು ಚಂಡಾ ಪ್ರಸಾದ್ ಭಟ್‌ರ ನೇತೃತ್ವದಲ್ಲಿ, ಹಿಮಾಲಯದ ಪ್ರದೇಶಗಳಲ್ಲಿ ಗ್ರಾಮಸ್ಥರೇ ಸಂಘಟಿಸಿದ 'ಚಿಪ್ಕೋ' ಚಳುವಳಿ ಈಗ ದೇಶದ ಉದ್ದಗಲಕ್ಕೂ ಹಬ್ಬುತ್ತಿದೆ.

ತೃತೀಯ ಜಗತ್ತಿನಲ್ಲಿನ ಪರಿಸರದ ಅವನತಿಯು ಆ ದೇಶಗಳ ಸದ್ಯದ ಅಭಿವೃದ್ಧಿ ಕಾರ್ಯನೀತಿಯ ಅನಿವಾರ್ಯ ಬಳುವಳಿಯಾಗಿದೆ. ಆ ದೇಶಗಳ ಜನರು ಬಡವರಾಗಿರುವುದು, ನೀವು ಯೋಚಿಸಲಿಚ್ಛಿಸುವಂತೆ, ಅಪೂರ್ಣ ಅಭಿವೃದ್ಧಿಯಿಂದಾಗಿ ಅಲ್ಲ. ಬದಲಿಗೆ ಈಗಾಗಲೇ ಅಭಿವೃದ್ಧಿ ಹೊಂದಿರುವವರು ಅವರ ಶಕ್ತಿಯನ್ನು

ಕುಂದಿಸಿರುವುದರಿಂದ, ಅವರ ದ್ರವ್ಯಾಧಾರದ ಮೂಲಗಳನ್ನೆಲ್ಲ ಈ ಅಭಿವೃದ್ಧಿಕಾರರು ಕೊಳ್ಳೆ ಹೊಡೆದಿರುವುದರಿಂದ ಮತ್ತು ಈಗ ಅವರು, ದಿನೇ ದಿನೇ ಚಂದ್ರನ ಮೇಲ್ಮೈಯನ್ನು ಹೋಲುವಂತೆ ಅವನತಿಗೀಡಾಗುತ್ತಿರುವ ಭೂಮಿಯಿಂದಲೇ ಜೀವನೋಪಾಯವನ್ನು ಕಂಡುಕೊಳ್ಳಬೇಕಾದ ದಂಡನೆಗೆ ಒಳಗಾಗಿರುವುದರಿಂದ.

ಶ್ರೀ ಕ್ಲಾಸನ್, ಅವರು ಬಡವರಾಗಿದ್ದಾರೆ, ಏಕೆಂದರೆ ನೀವು ಮತ್ತು ನಿಮ್ಮ ಸಹಾಧಿಕಾರಿಗಳು ಸೇರಿ ಅವರನ್ನು ಬಡವರನ್ನಾಗಿಸಿದ್ದೀರಿ. ನೀವು ಮುಂದುವರೆಯುತ್ತಿರುವ ವೇಗವನ್ನು ಗಮನಿಸಿದರೆ ಇನ್ನು ಕೆಲವೇ ದಶಕಗಳಲ್ಲಿ ಈ ಗ್ರಹದ ಮೇಲಿನ ಮಾನವ ಜೀವಿಗಳಲ್ಲಿನ ಅತಿ ಹೆಚ್ಚಿನ ಸಂಖ್ಯೆ ಬಡವರು ಮತ್ತು ಹಸಿದವರದ್ದೇ ಆಗಿರುತ್ತದೆ.

FAO ನ ನಿಯತಕಾಲಿಕ Ceres ನ 1971 ರ ಅಕ್ಟೋಬರ್ ಸಂಚಿಕೆಯಲ್ಲಿ ನಿರೂಪಿತವಾದ, ಜಗತ್ತಿಗೆ ಆಹಾರ ಒದಗಿಸುವ ಯೋಜನೆಗೆ ಪೂರ್ಣವಾಗಿ ನೀವು ಧನ ಸಹಾಯ ನೀಡುವುದಾದಲ್ಲಿ ಏನಾಗಬಹುದೆಂಬುದನ್ನು ಪರ್ಯಾಲೋಚಿಸಿ. ಆ ನಿಯತಕಾಲಿಕ ಹೀಗೆ ಹೇಳುತ್ತದೆ : ಮೊದಲನೆಯದಾಗಿ "ಅಮೆಜಾನ್ ತಗ್ಗು ಪ್ರದೇಶದ ಸುಮಾರು ಏಳು ಮಿಲಿಯ ಹೆಕ್ಟೇರ್ ಮತ್ತು ಈಕ್ವಿಡೋರಿಯಲ್ ಆಫ್ರಿಕದ ಸ್ವಲ್ಪ ಕಡಿಮೆ ಭೂ ಪ್ರದೇಶವನ್ನು ನಾವು ತೀವ್ರವಾದ ಕೃಷಿಗೆ ಒಳಪಡಿಸುತ್ತೇವೆ. ಎರಡನೆಯದಾಗಿ, ಈಗ ಇಡೀ ಜಗತ್ತಿನಲ್ಲಿ ವ್ಯವಸಾಯಕ್ಕೊಳಪಟ್ಟಿರುವ ಒಟ್ಟು ಭಾಗಕ್ಕೆ ಬಹುತೇಕ ಸಮನಾಗಬಲ್ಲ, ಸಹರಾ ಮರುಭೂಮಿಯ ಹನ್ನೆರಡು ಮಿಲಿಯ ಚದುರ ಕಿ.ಮೀ. ಭೂಮಿಯನ್ನೊಳಗೊಂಡಂತೆ, ಜಗತ್ತಿನ ಬೆಚ್ಚನೆಯ ಮರುಭೂಮಿ ಪ್ರದೇಶವೆಲ್ಲ, ಉಕ್ಕುವ ಹಸಿರಿನ ಸಮುದ್ರವಾಗುವುದನ್ನು ಸಾಧ್ಯವಾಗಿಸುತ್ತೇವೆ, ಶುಚಿ ನೀರಿನ ಅಪರಿಮಿತ ಸರಬರಾಜಿನಿಂದಾಗಿ ಈಗ ಸಾಗುವಳಿಯಾಗುತ್ತಿರುವ ಭೂಮಿಗೆ ಸಾರ್ವಕಾಲಿಕ ನೀರಾವರಿ ಸೌಕರ್ಯ, ವಿಶಾಲ ಪ್ರದೇಶಗಳಲ್ಲಿ ಶಾಶ್ವತ ಹುಲ್ಲುಗಾವಲುಗಳು ಮತ್ತು ಉಷ್ಣವಲಯದ ಕಾಡುಗಳಿಗೆ ನೀರಿನ ವ್ಯವಸ್ಥೆ ಇವುಗಳೂ ಸಾಧ್ಯವಾಗುತ್ತವೆ."

ಇದು, ಯಂತ್ರ ವಿಜ್ಞಾನದ ಭ್ರಾಂತಿ ಹಿಡಿದ, LSD ಪ್ರೇರಿತ ಹದಿಹರೆಯದವನೊಬ್ಬನ ಬಡಬಡಿಕೆಯಂತೆ ಕಾಣುವುದಿಲ್ಲವೆ? ಮಿಲಿಯಗಟ್ಟಲೆ ಹಸಿದ ಹೊಟ್ಟೆಗಳಿಗೆ ಆಹಾರದ ಮಾರ್ಗ ಹುಡುಕಲು, ವರ್ಷವೊಂದಕ್ಕೆ ಸುಮಾರು ಐನೂರು ಮಿಲಿಯ ಡಾಲರುಗಳನ್ನು ಸಂಶೋಧನೆಗಾಗಿ ಪಡೆಯುವ, ಸಂಯುಕ್ತ ರಾಷ್ಟ್ರದ ಘಟಕವೊಂದರ ಗಂಭೀರ ಮಾತುಗಳಿವು ಎಂದು ಯಾರೂ ನಂಬಲಾರರು. ಅಂತಹ ಯೋಜನೆಯೊಂದರ ಮೂರ್ಖತನ ಆ ಮಾತುಗಳಲ್ಲೇ ಎಲ್ಲರಿಗೂ ಸ್ಪಷ್ಟವಾಗುತ್ತದೆ. ಪೂರ್ಣ ಮರುಭೂಮಿ

ಎಂದು ಪರಿಗಣಿಸುವ ಮೊದಲು ಇನ್ನೊಂದೆರಡು ಬೆಳೆ ಮಾತ್ರ ಸಾಧ್ಯವಿರಬಹುದಾದ ಅಮೆಜೋನಿಯಾದ ಹೆಚ್ಚಿನ ಭಾಗ, ವ್ಯವಸಾಯಕ್ಕೆ ಖಂಡಿತ ಯೋಗ್ಯವಾದುದುದಲ್ಲ.

ಅಂಶವೆಂದರೆ ಈ ಯೋಜನೆ ಪ್ರಕಟವಾದ ಹದಿನಾಲ್ಕು ವರ್ಷಗಳ ನಂತರವೂ, ಸಹರಾದ ಈ ಹನ್ನೆರಡು ಮಿಲಿಯ ಚದುರ ಕಿ.ಮೀ. ಮರುಭೂಮಿ, "ಉಕ್ಕುವ ಹಸಿರಿನ ಸಮುದ್ರವಾಗುವುದು" ಹಾಗಿರಲಿ, ಬದಲಿಗೆ ವೇಗವಾಗಿ ವಿಸ್ತರಿಸುತ್ತಾ ಆಫ್ರಿಕದ ಹೆಚ್ಚಿನ ಭಾಗವನ್ನು ನುಂಗಿಹಾಕುವ ಬೆದರಿಕೆ ಹುಟ್ಟಿಸುತ್ತಿದೆ. ಪ್ರಸ್ತುತ ಪ್ರವೃತ್ತಿಯಲ್ಲಿ, ಜಗತ್ತಿನಲ್ಲಿ ಉಳಿದಿರುವ ವ್ಯವಸಾಯಿಕ ಭೂಮಿಯು ಕನಿಷ್ಟ ಮೂರನೇ ಒಂದು ಭಾಗವಾದರೂ ಮರುಭೂಮಿಯಾಗಿ ಮಾರ್ಪಾಟಾಗುತ್ತದೆ ಎಂದು, ಮರುಭೂಮೀಕರಣದ ಬಗೆಗಿನ 1977ರ ಸಮ್ಮೇಳನದಲ್ಲಿ UNEPಯೇ ಒಪ್ಪಿಕೊಂಡಿದೆ. ಇನ್ನು ಶುಚಿ ನೀರಿನ ಸರಬರಾಜಿನ ಬಗ್ಗೆ ಹೇಳುವುದಾದರೆ, ಅದುಕೂಡ ಒಂದು ಕನಸು ಮಾತ್ರ. ನೀರಿನ ಕೊರತೆ ಮುಂದಿನ ದಶಕದಲ್ಲಿ ಜಗತ್ತಿನ ಬಹು ಗಂಭೀರ ಸಮಸ್ಯೆಗಳಲ್ಲಿ ಒಂದಾಗಲಿದೆ. ಇದು ನೀವು ಮತ್ತು FAO ಶಿಫಾರಸು ಮಾಡುತ್ತಿರುವ ಮತ್ತು ಕಾಡುಗಳ ನಾಶ ಹಾಗು ತೀವ್ರಾಭಿಲಾಷೆಯ ಕೃಷಿಯನ್ನೇ ಅವಲಂಬಿಸಿರುವ, ಆರ್ಥಿಕಾಭಿವೃದ್ಧಿ ನೀತಿಗಳಿಂದಾಗಿಯೇ ನೇರವಾಗಿ ಹುಟ್ಟುವಂತಾದ್ದಾಗಲಿದೆ.

ಇನ್ನು ಈ ನೀರನ್ನು ಸರಬರಾಜು ಮಾಡುವ ಸಾರ್ವಕಾಲಿಕ ನೀರಾವರಿ ಯೋಜನಗಳ ಬಗ್ಗೆ ಹೇಳುವುದಾದರೆ, ಇವು ಭೂಮಿಯಲ್ಲಿನ ಜೌಗು ಮತ್ತು ಲವಣಗಳನ್ನು ವೃದ್ಧಿಸುತ್ತಾ, 'ಶೀವ ಮತ್ತು ಉಪ್ಪಿನ ಪದರಗಳಿಂದ ಕೂಡಿದ ಮರುಭೂಮಿಗಳನ್ನು' ಮಾತ್ರವೇ ನಿರ್ಮಿಸಬಲ್ಲವು. ಸಾರ್ವಕಾಲಿಕ ನೀರಾವರಿ ಸೌಕರ್ಯವುಳ್ಳ ಭೂಮಿಯಲ್ಲಿ ಶೇಕಡ ಐವತ್ತಕ್ಕೂ ಹೆಚ್ಚಿನ ಭಾಗ ಬೇರೆ ಬೇರೆ ಶ್ರೇಣಿಗಳಲ್ಲಿ ಇಂತಹ ಅಥವ ತತ್ಸಂಬಂಧಿ ಸಮಸ್ಯೆಗಳಿಂದ ಪೀಡಿತವಾಗಿವೆ ಎಂಬುದನ್ನು FAO ಕೂಡ ಒಪ್ಪಿಕೊಂಡಿದೆಯಾದರೂ ಶ್ರೀ ಸವುಮ [Saouma] ಮಾತ್ರ ತನ್ನ ಹುಚ್ಚು ಕಾರ್ಯನೀತಿಗಳಿಂದ ವಿಮುಖನಾಗಲು ಸಿದ್ಧನಿಲ್ಲವೆಂಬುದು, ಮಧ್ಯಆಫ್ರಿಕದ ಏಳು ಮಿಲಿಯ ಚದುರ ಕಿ.ಮೀ. ಜಾಗವನ್ನು ದನಗಳ ದೊಡ್ಡಿಯನ್ನಾಗಿ ಪರಿವರ್ತಿಸುವ ಆತನ ಹಟದಿಂದಲೇ ಸ್ಪಷ್ಟವಾಗುತ್ತದೆ. (ಮಧ್ಯ ಆಫ್ರಿಕದಲ್ಲಿ ಮಾಂಸಕ್ಕಾಗಿ ದನಗಳನ್ನು ಸಾಕುವುದಕ್ಕಾಗಿ ಕಾಡನ್ನು ಕಡಿದು, Tse Tse Fly ಗಳನ್ನು ನಾಶ ಮಾಡುವ FAO ನ ಯೋಜನೆಗೆ ಸಂಬಂಧಿಸಿದಂತೆಹೇಳಿದ ಮಾತು)

ಕೊನೆಯದಾಗಿ ಒಂದು ಮಾತು. ನೀವು ಇಂತಹ ಭಾರೀ ಯೋಜನೆಗಳಿಗೆ

ಧನ ಸಹಾಯ ನೀಡುವಾಗ, ಹೆಚ್ಚಿನ ಬಾರಿ, ಇಲ್ಲಿ ಮತ್ತು ಅಲ್ಲಿ ಎರಡೂ ಕಡೆ ಹಬ್ಬಿಕೊಂಡಿರುವ, ತೃತೀಯ ಜಗತ್ತಿನ ಸರಕಾರೀ ಚೇಲಗಳ, ಅವರ ಅಧಿಕಾರಶಾಹಿಯ ಮತ್ತು ಅವರ ವರ್ತಕ ಸಮುದಾಯದ ಪಾತಕಿಗಳ ಜೊತೆ ಶಾಮೀಲಾಗುತ್ತೀರಿ, ಎಂಬುದು ತಿಳಿದಿರಲಿ. ದೊಡ್ಡ ದೊಡ್ಡ ಅಭಿವೃದ್ಧಿ ಯೋಜನೆಗಳಿಗಾಗಿ ನೀಡುತ್ತಿರುವ ಹಣದಲ್ಲಿನ ದೊಡ್ಡ ಮೊತ್ತ, ಕುಟಿಲ ರಾಜಕಾರಣಿಗಳಿಂದ ಬೇರೆಯದೆ ಉದ್ದೇಶಗಳಿಗಾಗಿ ಬಳಸಲ್ಪಡುತ್ತದೆ ಎಂಬುದು ನಮ್ಮ ಸಂಶೋದನೆಗಳಿಂದ ತಿಳಿದು ಬಂತು. ಉದಾಹರಣೆಗೆ ಶ್ರೀ ಲಂಕಾದಲ್ಲಿನ ಮಹಾವೇಲಿ ಯೋಜನೆಯಲ್ಲಿ, ನಮಗೆ ಖಂಡಿತವೆಂದು ತಿಳಿದು ಬಂದ ಪ್ರಕಾರ, [ಇದನ್ನು ಸಾಬೀತು ಪಡಿಸುವುದು ಯಾರಿಂದಲೂ ಸಾಧ್ಯವಿಲ್ಲದಿದ್ದರೂ ಸಹ] ಕನಿಷ್ಟ ಶೇಕಡ ಮೂವತ್ತರಷ್ಟು ಹಣ ಈ ರೀತಿ ಪೋಲಾಗಿದೆ ಬ್ರೆಜಿಲ್‌ನಲ್ಲಿ ಇಂದು ನಿರ್ಮಿಸಲಾಗುತ್ತಿರುವ ದೊಡ್ಡ ಆಣೆಕಟ್ಟುಗಳ ವಿಷಯದಲ್ಲಿಯೂ ಹೀಗೇ ನಡೆಯುತ್ತಿರುವುದು ಈಗಾಗಲೇ ತಿಳಿದಿರುವ ವಿಷಯವೇ ಆಗಿದೆ. ಹಲವಾರು ದೇಶಗಳಲ್ಲಿ [ಉದಾಹರಣೆಗೆ ಇಂಡೋನೇಶಿಯಾ] ಪ್ರತಿ ಮಂತ್ರಿಯೂ ಅರಣ್ಯಗಳ ಬಗ್ಗೆ ತನ್ನದೇ ರಿಯಾಯಿತಿಗಳನ್ನು ಹೊಂದಿದ್ದಾನೆಂದು ಸಾಮಾನ್ಯವಾಗಿ ಒಪ್ಪಿಕೊಳ್ಳಲಾಗಿದೆ. ಭಾರತದಲ್ಲಿ, ಬಹಳಷ್ಟು ವರ್ಷಕಾಲ ಸ್ವತಃ ಸರಕಾರೀ ಅಧಿಕಾರಿಯಾಗಿದ್ದ ಮತ್ತು ಅರಣ್ಯ ಹಾಗೂ ಕೃಷಿಯ ಬಗೆಗಿನ ತಮ್ಮ ಪಾಂಡಿತ್ಯಕ್ಕಾಗಿ ಸದಾ ಗೌರವಿಸಲ್ಪಡುವ ಶ್ರೀ ಬಿ.ಬಿ. ವೋರಾ ಹೇಳುವಂತೆ "ಭ್ರಷ್ಟ ರಾಜಕಾರಿಣಿ, ಭ್ರಷ್ಟ ಅಧಿಕಾರಶಾಹೀ ಮತ್ತು ಭ್ರಷ್ಟ ವರ್ತಕ ಇವರ ತ್ರಿವೇಣಿ ಸಂಗಮದ ಫಲವಾದ ದುಷ್ಟಕೂಟವೇ" ಆ ದೇಶದ ಅರಣ್ಯಗಳನ್ನು ಕೊಚ್ಚಿ ಹಾಕಲು ಕಾರಣ.

ಅಂತಹ ಕಾರ್ಯಕ್ರಮಗಳಿಗೆ ಹಣ ನೀಡುವುದರ ಮೂಲಕ ನೀವೂ ಆ ಒಪ್ಪಂದದಲ್ಲಿ ಭಾಗಿಗಳಾಗುತ್ತಿದ್ದೀರೆಂಬ ಅರಿವು ನಿಮಗಿದೆಯೇ? ನೀವು ಧನ ಸಹಾಯ ಮಾಡಿ ಪುಷ್ಟೀಕರಿಸುತ್ತಿರುವುದು ಸಾಟಿ ಇಲ್ಲದ ಸಾಂಸ್ಥೀಕೃತ ದುಷ್ಕಾರ್ಯಗಳನ್ನು. ಇಲ್ಲಿಯ ಬಹು ಮುಖ್ಯ ವಿಷಯವೆಂದರೆ ಈ 'ಅಭಿವೃದ್ಧಿ' ಕಾರ್ಯಕ್ರಮಗಳು, ಕೇವಲ ಕೆಲ ಶ್ರೀಮಂತರ ಹಣವನ್ನು [ಉದ್ದೇಶಿತ] ಗುರಿಯಿಂದ ಬೇ ರೆ ಡೆ ಗೆ ತಿರುಗಿಸುವಂತಹುದು ಮಾತ್ರವಾಗಿರದೆ, ಮೂಲ ಸಂಪತ್ತೇ ಇಲ್ಲವಾಗಿ, ಎಂದೆಂದೂ ಸರಿಪಡಿಸಲಾಗದಂಥ ಹಸಿವು ಮತ್ತು ಬಡತನದ ದಂಡನೆಗೆ ಗುರಿಯಾದ ಮತ್ತು ನೀವು 'ಸಹಾಯ ಮಾಡುತ್ತಿರುವುದಾಗಿ' ಹೇಳಿಕೊಳ್ಳುತ್ತಿರುವ, ಗ್ರಾಮೀಣ ಸಮುದಾಯದ ಸಂಪತ್ತನ್ನು ವಿಮುಖವಾಗಿಸುವ ದುಷ್ಕಾರ್ಯವಾಗಿರುವುದು.

ಶ್ರೀ ಕ್ಲಾಸನ್, ಸತ್ಯದರ್ಶನ ಮಾಡಿಸುವ ಈ 'ಅಸಂಸ್ಕೃತ ವಿಧಾನದಿಂದ'

ನಿಮಗೆ ಆಘಾತವಾಗಬಹುದು. ಆದರೆ ನನ್ನ ದೃಢವಾದ ಅರಿಕೆಯೆಂದರೆ, 'ಈ ಪತ ವನ್ನು ಎಂದಿಗೂ ಕಡೆಗಣಿಸಬೇಡಿ' ಎಂಬುದು. ಉಷ್ಣವಲಯ ಜಗತ್ತಿನ ಸರ್ವನಾಶಕ್ಕೆ, ಅಲ್ಲಿನ ಅಳಿದುಳಿದ ಅರಣ್ಯಗಳ ವಿನಾಶಕ್ಕೆ ಆ ಕಾಡುಗಳಲ್ಲಿನ ಜೀವರಾಶಿಯ ಅಂತ್ಯಕ್ಕೆ ಮತ್ತು ಅಲ್ಲಿರುವ ಮನುಷ್ಯ ಜೀವಿಗಳ ಹಸಿವು ಮತ್ತು ಬಡತನದ ವೃದ್ಧಿಗೆ, ನೀವು ಧನ ಸಹಾಯ ಮಾಡುತ್ತಾ ಹೋಗುವುದನ್ನು ಹಾಗೆಯೇ ಬಿಡುವುದು ಸಾಧ್ಯವಿಲ್ಲ.

ತಮ್ಮ ವಿಶ್ವಾಸಿ ;
ಎಡ್ವರ್ಡ್ ಗೋಲ್ಡ್‌ಸ್ಮಿತ್,
ಪ್ರಕಾಶಕ, 'ದಿ ಇಕೋಲೊಜಿಸ್ಟ್'.

ಕಾವ್ಯ ಪ್ರಯೋಜನ

ಕವಿ ಅಸಾಧ್ಯವಾದುದನ್ನು ಏಕೆ ಬಯಸುತ್ತಾನೆ ? ಕಾವ್ಯದ ಮೂಲ ಉದ್ದೇಶವೇ ಅದು–ಇಲ್ಲದುದಕ್ಕಾಗಿ ತುಡಿಯುವ ಈ ಆಶಯವು ಮಾಂತ್ರಿಕತೆಯಿಂದ ಕಾವ್ಯಕ್ಕೆ ಬಂತು. ಒಟ್ಟಾರೆ ಹೇಳುವುದಾದರೆ ತನ್ನ ಇಡೀ ಸಮಾಜವನ್ನು ಆದರ್ಶದ ಹಂಬಲಗಳತ್ತ ಕೊಂಡೊಯ್ಯುವದೇ ಕವಿಯ ಉದ್ದೇಶ. ಇದನ್ನೆ ಚಲನ್‌ಸ್ಕಿ 'ಯಥಾರ್ಥತೆಯ ಆದರ್ಶೀಕರಣ' ಎನ್ನುತ್ತಾನೆ, ಅಥವಾ ಗಾರ್ಕಿ ಹೇಳುವಂತೆ 'ಕಲೆ ಯಥಾರ್ಥತೆಯನ್ನು ಮೀರಿ ಎತ್ತರಕ್ಕೆ ಬೆಳೆದು, ವ್ಯಕ್ತಿ ಆ ಯಥಾರ್ಥತೆಯಿಂದ ಬೇರ್ಪಡದಂತೆ ಮಾಡಿ ಆತನನ್ನು ಕಾಪಾಡಬೇಕು. ಕಲೆಗಾರನ ಕಾಣ್ಕೆಯ ಮೂಲಕ ಜೀವನವನ್ನು ನೋಡುವವನಿಗೆ ಹೊಸ ಬೆಳಕು ಮೂಡುತ್ತದೆ. ಬದುಕಿಗೆ ಹೊಸ ಆಯಾಮ ದೊರೆತು ಅದನ್ನು ಎದುರಿಸಲು ಹೊಸ ಶಕ್ತಿ ಹುಟ್ಟುತ್ತದೆ,

–ಜಾರ್ಜ್ ಥಾಮ್‌ಸನ್
'ಮಾರ್ಕ್ಸ್‌ವಾದ ಮತ್ತು ಕಾವ್ಯ' ಪುಸ್ತಕದಿಂದ

ನನ್ನ ಕೃತಿಗಳು ಮತ್ತು ಕನ್ನಡ ಕಾದಂಬರಿ ಪರಂಪರೆ

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

○ ಡಾ. ಅನುಪಮಾ ನಿರಂಜನ

ನಾನು ಬೇರೆ ಕಾದಂಬರಿಗಳನ್ನು ಬರೆಯುವ ಹೊತ್ತಿಗೆ ಸಾಕಷ್ಟು ಸಿದ್ಧತೆ ನಡೆಸಲು ಆರಂಭಿಸಿದೆ. ನನ್ನ ವೈದ್ಯ ವೃತ್ತಿ ಒಂದು ನೆಲೆಯನ್ನು ಕಂಡುಕೊಂಡದ್ದರಿಂದ ವ್ಯಾಪಕವಾಗಿ ಸಾಹಿತ್ಯಾಭ್ಯಾಸ ಮಾಡುವುದು ಸಾಧ್ಯವಾಯಿತು. ಪಾಶ್ಚಾತ್ಯ ಸಾಹಿತ್ಯದ ಅಧ್ಯಯನದೊಂದಿಗೆ ಯೂರೋಪಿನ ದಾರ್ಶನಿಕರ ಬರಹಗಳನ್ನು ರೂಢಿಸಿಕೊಂಡೆ. ಇದರಿಂದ ನನ್ನ ಚಿಂತನ ಶೀಲತೆಗೆ ಭದ್ರನೆಲೆಗಟ್ಟು ದೊರಕಿದಂತಾಯಿತು. ಈ ಸಮಯದಲ್ಲೇ ನಾನು 'ಎಳೆ' ಎಂಬ ಕಾದಂಬರಿ ಬರೆದೆ.

ಈ ಕಾದಂಬರಿ ರಚನೆಯ ಪ್ರೇರಣೆಗಳು ಹೀಗಿವೆ :

ನನ್ನ ತಾಯಿಯ ತಂದೆ ಕುಲ ಕಸುಬು ಮಾಡುತ್ತಿದ್ದರು ಎಂದು ಹಿಂದೆಯೇ ಹೇಳಿದ್ದೆನಲ್ಲ. ಈ ತಾತ ಇದ್ದುದು ಮೈಲಪನಹಳ್ಳಿ ಎಂಬ ಕುಗ್ರಾಮದಲ್ಲಿ. ಅಲ್ಲಿಗೆ ನನ್ನ ಎಳೆತನದಲ್ಲಿ ಆಗಾಗ್ಗೆ ಹೋಗುತ್ತಿದ್ದುದು ನೆನಪಿದೆ. ತಾತ ಮನೆಯಲ್ಲಿ ಎರಡು ಕೈಮಗ್ಗ ಹಾಕಿಕೊಂಡಿದ್ದರು. ಅವರು ವಿಪರೀತ ಸೋಮಾರಿಯಾದುದರಿಂದ ಅವರ ಇಬ್ಬರು ಗಂಡು ಮಕ್ಕಳು ಮಗ್ಗದಲ್ಲಿ ಕೂತು ಸೀರೆ ನೇಯುತ್ತಿದ್ದರು. ಅರಳೀಕಟ್ಟೆ ಮೇಲೆ ಕುಳಿತು ಬಾಯಿ ಬಿಟ್ಟರೆಂದರೆ ಹಲ್ಕ ಮಾತುಗಳು ಉದುರುತ್ತಿದ್ದುವು. ಅಜ್ಜಿ ಗಂಡನ ಮಾತಿಗೆ ಎದುರಾಡುತ್ತಿರಲಿಲ್ಲ. ತಲೆ ಬಗ್ಗಿಸಿ ಸದಾ ಕೆಲಸ ಮಾಡುತ್ತಿದ್ದರು. ಆಕೆ ರಾಗಿ ಮುದ್ದೆ ಮಾಡುವುದನ್ನೂ, ಕೋಳಿ ಸಾರು ಮಾಡುವುದನ್ನೂ ಕಂಡಿದ್ದೆ. "ಮಸಾಲೆಗೆ ಬೆಳ್ಳುಳ್ಳಿ ಹಾಕಿ ರುಬ್ಬಿದರೆ ಗಂ ಅಂತ ವಾಸನೆ ಬರುತ್ತೆ" ಎಂದು ಹೇಳುವುದನ್ನೂ ಕೇಳಿದ್ದೆ. ಅಂದರೆ ನಾನು ಒಂದು ಶೂದ್ರ ಸಂಪ್ರದಾಯವನ್ನು ನನ್ನರಿವಿಲ್ಲದಂತೆಯೇ ಗಮನಿಸುತ್ತಿದ್ದೆ. ಮುಂದೆ 'ಎಳೆ' ಕಾದಂಬರಿಯಲ್ಲಿ ಉಗ್ರಪ್ಪನ ಪಾತ್ರ ಸೃಷ್ಟಿಸುವಾಗ ಈ ತಾತನ ಚಿತ್ರ ನೆನಪಿಗೆ ಬಂತು.

ದೊಡ್ಡಬಳ್ಳಾಪುರದಲ್ಲಿ ನನ್ನ ಇನ್ನೊಬ್ಬ ಶಾಸನವರ ಮನೆಗೆ ಹೋದಾಗ ಊರ ತುಂಬ ಇರುವ ಮಗ್ಗಗಳನ್ನು ಕಂಡಿದ್ದೆ. ಪ್ರತಿ ಮನೆಯಲ್ಲೂ ಹೆಂಗಸರು ತೋಡುವುದು, ಸುತ್ತುವುದು ಮಾಡಿದರೆ ಗಂಡಸರು ಮಗ್ಗದಲ್ಲಿ ಕುಳಿತು ನೇಯುತ್ತಿದ್ದರು. ಓಣಿಗಳಲ್ಲಿ ಬಣ್ಣ ಬಣ್ಣದ ಲಡಿಗಳನ್ನು ಎಳೆದು ಕಟ್ಟಿ ಸಿಕ್ಕು ಬಿಡಿಸುತ್ತಿದ್ದರು. ಅಲ್ಲಿದ್ದ ಬಡತನ ನನ್ನನ್ನು ದಿಗ್‌ಭ್ರಮೆಗೊಳಿಸಿತ್ತು. ಕೆಲವೇ ಶ್ರೀಮಂತರು ಆ ಊರನ್ನು ರಾಜರಂತೆ ಆಳುತ್ತಿದ್ದರು.

ಅಲ್ಲಿ ಭಾಗವತರೊಬ್ಬರು ನಡೆಸಿದ ಕಾಲಕ್ಷೇಪ ನೋಡಿದ್ದು ನೆನಪಿದೆ. ಸಾಧಾರಣ ಎತ್ತರದ ಶ್ಯಾಮಲಕಾಯ, ಜರಿಯ ಪಂಚೆ, ರೇಷ್ಮೆಷರ್ಟ್, ವಲ್ಲಿ, ಹಣೆಗೆ ವಿಭೂತಿ ಕತ್ತಿನವರೆಗೆ ಕೂದಲು. ಕಂಚಿನಂತಹ ಕಂಠ, ಮಧ್ಯ ಮಧ್ಯ ಹಾಡು. 'ಥೇಟ್ ನಾರದರ ತರ ಕಾಣ್ತಾನೆ' ಎಂದಿದ್ದರು ಯಾರೋ! "ನೋಡೋಕೆ ಮಹಾಭಕ್ತ. ರಾತ್ರಿ ಹೊತ್ತು ಸೂಳೇರ ಮನೆಗೆ ಹೋಗ್ತಾನೆ" ಎಂದಿದ್ದರು ಯಾರೋ!

ಕಾದಂಬರಿಯಲ್ಲಿ ಒಬ್ಬ ಭಾಗವತನನ್ನು ಸೃಷ್ಟಿಸಬೇಕಾಗಿ ಬಂದುದು ನೇಕಾರ ಜನಾಂಗದ ಮೂಲ ಪುರಾಣ ಹೇಳಿಸಲೋಸುಗ, ತನ್ಮೂಲಕ ಅವರ ಆಚಾರ ವಿಚಾರ ನಂಬಿಕೆಗಳನ್ನು ವಿವರಿಸುವುದಕೋಸ್ಕರ. ಹಾಗೇ ಪುರಾಣ ಹೇಳುತ್ತಾ ಇರುವಾಗಿನ ಒಂದು ದೃಶ್ಯದಲ್ಲಿ ಅಲ್ಲಿ ನೆರೆದಿದ್ದ ವಿವಿಧ ಬಗೆಯ ಜನರ ಮೇಲೆ 'ಅಡಗ ತಿಂಬರು ಕಣಕದಡುಗೆ ಇರಲ್ಕೆ' ಎಂಬ ವಚನ ಯಾವ ರೀತಿ ಬೇರೆ ಬೇರೆ ಪರಿಣಾಮ ಮಾಡಿತು ಎಂಬುದರ ಸಮಗ್ರ ಚಿತ್ರಣವಿದೆ. ಇದು ಕಾದಂಬರಿಯಲ್ಲಿ ನನಗೆ ಬಹು ಪ್ರಿಯವಾದ ಭಾಗ.

ದೊಡ್ಡಬಳ್ಳಾಪುರದಲ್ಲಿದ್ದಾಗ ಒಮ್ಮೆ ಕೆರೆತುಂಬಿ ಕೋಡಿ ಹರಿಯಿತು. ಆಗ ಅಲ್ಲಿನ ಬಡಜನರ ಉನ್ಮಾದ ಸಂತೋಷಗಳನ್ನು ಕಂಡಿದ್ದೆ. ಕೋಡಿಬಿದ್ದ ನೀರನ್ನು ನೋಡಲಿಕ್ಕೆ ಜನ ಮಳೆಯಲ್ಲಿಯೇ ಓಡಿದರು. ಮರುದಿನ ತೆಪ್ಪೋತ್ಸವ ನಡೆಯಿತು. ಎರಡು ಡ್ರಂಗಳ ಮೇಲೆ ಬೂರುಗಮರದ ತೆಪ್ಪ ಕಟ್ಟಿದ್ದರು. ಅದರ ಮೇಲೆ ಬಿದಿರು ತಟಿಕೆಗೆ ಹಿತ್ತಾಳೆಯ ಮುಖದ ಗಂಗಮ್ಮನ ಫಲಕ. ತೆಪ್ಪದ ಸುತ್ತಲೂ ಮಣ್ಣಿನ ದೀಪದ ಕುಡಿಕೆಗಳನ್ನು ಹಿಡಿದು ಕುಳಿತ ಜನ, ಏರಿಯ ತುಂಬಾ ಜನ ಜಂಗುಳಿ. 'ಗಂಗಮ್ಮ ಕಾಪಾಡಮ್ಮೋ ಮಾತಾಯಿ' ಎಂಬ ಉದ್ಗಾರ. ತೆಪ್ಪ ಕೆರೆಯ ಒಂದು ಸುತ್ತು ಬಂತು. ಅನಂತರ ದೀಪದ ಕುಡಿಕೆಗಳನ್ನು ನೀರ ಮೇಲೆ ತೇಲಿ ಬಿಟ್ಟರು. ಆ ಚಿತ್ರ ಇವತ್ತಿಗೂ ಕಣ್ಣ ಮುಂದಿದೆ. ಈ ಜಾನಪದ ಹಬ್ಬವೂ ಕಾದಂಬರಿಯೊಳಗಡೆ ನುಸುಳಿದೆ.

ನನ್ನ ತಾಯಿಯ ತಂಗಿ ರಸವತ್ತಾಗಿ ದೆವ್ವ ಪಿಶಾಚಿಗಳ ಕಥೆ ಹೇಳುತ್ತಿದ್ದರು. ಅವರು ಹೇಳಿದ ದೆವ್ವ ಬಿಡಿಸುವ ವಿವರ ಹೀಗಿತ್ತು : ದೆವ್ವ ಹಿಡಿದವಳನ್ನು ಅಮಾವಾಸ್ಯೆ ರಾತ್ರಿ ಸ್ಮಶಾನಕ್ಕೆ ಕರೆದುಕೊಂಡು ಹೋಗಿ ಅಲ್ಲಿ ಮಣ್ಣಿನ ಗೊಂಬೆಯ ಮುಂದೆ ಮಂತ್ರವಾದಿ ಕೂರಿಸುತ್ತಾನೆ. ಅವಳ ಮುಂದೆ ಎಕ್ಕದೆಲೆಯಲ್ಲಿ ರಾಶಿ ಹಾಕಿದ ಅನ್ನದ ಮೇಲೆ ಕೋಳಿ ಕುಯ್ದು ರಕ್ತ ಸಿಂಪಡಿಸುತ್ತಾನೆ. ಆಮೇಲೆ ಅರಿಸಿನದ ನೀರು ಮುಖಕ್ಕೆ ಎಸೆದು 'ನೀನ್ಯಾರು ಹೇಳು?' ಎಂದು ಬೊಬ್ಬಿಡುತ್ತಾನೆ. ಉತ್ತರಿಸದಿದ್ದರೆ ಹೆಂಡದ ಪಾತ್ರೆ ಮೂಗಿಗೆ ಹಿಡಿಯುತ್ತಾನೆ. ಆಗ ದೆವ್ವ ಬಾಯಿ ಬಿಟ್ಟು 'ನಾನು ಹೋಗುತ್ತೇನೆ ಹೊಡೀ ಬೇಡ' ಎನುತ್ತೆ. ನಿಂಗೇನು ಬೇಕು ? ಎಂದಾಗ ಎಲೆ ಅಡಿಕೆ ಸಾಕು ಅನ್ನುತ್ತೆ. ನೀನು ಹೋದೆ ಅನ್ನೋದಕ್ಕೆ ಏನಾರ ಗುರ್ತು ಕೊಡು ಅಂದಾಗ ತನ್ನ ಒಂದೆರಡು ಕೂದಲು ಕಿತ್ತು ಕೊಡುತ್ತೆ.

ಒಂದು ದಲಿತ ಜನಾಂಗದ ಸಂಪ್ರದಾಯ ನಂಬಿಕೆಗಳ ಚಿತ್ರ ಕೊಡುವಾಗ ಈ ಘಟನೆಗಳೆಲ್ಲಾ ತುಂಬಾ ನೆರವಾದವು.

'ಎಳೆ' ಒಂದು ಜನಾಂಗದ ಪರಿಳಿತಗಳನ್ನು ಚಿತ್ರಿಸುವ ಕೃತಿ. ಇಲ್ಲಿ ನಾನು ಆರಿಸಿಕೊಂಡದ್ದು ನೇಕಾರ ಜನಾಂಗವನ್ನು. ಆ ಜನರ ಬದುಕಿನ ರೀತಿ ನೀತಿಗಳು, ಇವರ ನಂಬಿಕೆಗಳು, ಆಚಾರ-ವಿಚಾರಗಳು, ನೋವು-ನಲಿವುಗಳು ಪುಟ್ಟ ಸಂತೋಷಗಳು ಇವು ಸಾಕಷ್ಟು ವಿವರಗಳೊಂದಿಗೆ ಚಿತ್ರಿತವಾಗಿವೆ.

ಇಲ್ಲಿ ಎರಡು ಶ್ರೀಮಂತ ಕುಟುಂಬಗಳನ್ನೂ ತೆಗೆದುಕೊಂಡಿದ್ದೇನೆ. ಉಳಿದ ಪಾತ್ರಗಳೆಲ್ಲಾ ಇವರ ಕೆಳಗೆ ಜೀತದಾಳುಗಳು. ಒಂದೇ ಜಾತಿಯಾದಗೂ ಈ ಎರಡು ವರ್ಗಗಳಲ್ಲಿ ನಡೆಯುವ ಘರ್ಷಣೆ ನನ್ನ ಮುಖ್ಯ ಕಾಳಜಿ. ಕಾದಂಬರಿಯಲ್ಲಿ ಮುಖ್ಯ ಪಾತ್ರವಾದ ರಂಗದಾಸನಿಗೆ ಅವನ ಸ್ನೇಹಿತ ಗಂಗಾಧರ ಕೇಳುತ್ತಾನೆ: 'ನಿಂಗೆ ಪ್ರತಿಯೊಂದರ ಮೂಲ ಹುಡುಕ ಬೇಕು ಅಲ್ವ?' ರಂಗದಾಸ ಅನ್ನುತ್ತಾನೆ: 'ನಾನು ಸಮಾಜ ಶಾಸ್ತ್ರದ ವಿದ್ಯಾರ್ಥಿ. ಪ್ರತಿಯೊಂದು ಎಳೇನೂ ಬಿಡಿಸಿ ನೋಡದಿದ್ರೆ ಅದು ಮುರಿದರೆ ಸರಿಮಾಡೋದಕ್ಕೂ ನನಗೆ ಗೊತ್ತಾಗೋದಿಲ್ಲ.' ಈಮಾತುಗಳೇ ಕಾದಂಬರಿಯ ಕೇಂದ್ರ ಶಿಲ್ಪ. ಮನುಷ್ಯನ ಭಾವನೆಗಳ ಎಳೆ, ಸಾಮಾಜಿಕ ಸಂಬಂಧಗಳ ಎಳೆ ಇವೆಲ್ಲಾ ಇಲ್ಲಿ ಸೂಚ್ಯವಾಗಿ ಬರುತ್ತವೆ. ರಂಗದಾಸ ಸಮಾಜ ಶಾಸ್ತ್ರದ ವಿದ್ಯಾರ್ಥಿಯಾದ್ದರಿಂದಲೇ ನಿರ್ಲಿಪ್ತನಾಗಿ ಆ ಜನಾಂಗದ ಮೂಲವನ್ನು, ಅದರ ಬೆಳವಣಿಗೆಯನ್ನು, ಬದಲಾವಣೆಗಳನ್ನು ಅಭ್ಯಸಿಸುತ್ತಾನೆ.

ಪ್ರೊಫೆಸರ್ ಸಾಂಬಶಿವನ್ ಮತ್ತು ರಂಗದಾಸನ ಚರ್ಚೆಗಳು ಕಾದಂಬರಿಯ ಮೂಲ ಆಶಯಕ್ಕೆ ಆಳ ವಿಸ್ತಾರಗಳನ್ನು ಕೊಡುತ್ತವೆ. ಉದಾ: ರಂಗದಾಸನ ಮಾತು: "ಆದಿವಾಸಿ ಸಂಸ್ಕೃತಿಯ ಮೂಲ ಲಕ್ಷಣಗಳು ನಮ್ಮಲ್ಲೂ ಇವೆ. ಕಲ್ಲಿನ ಪೂಜೆ, ದೆವ್ವ, ಪಿಶಾಚಿಗಳ ಕಾಟ, ಮದುವೆ-ಸಾವಿನ ಸಂದರ್ಭದ ಸಂಪ್ರದಾಯ ಇವೆಲ್ಲಾ ಅವರದನ್ನ ಹೋಲುತ್ತವೆ. ನಮ್ಮಂಥ ಬಡವರಾದೋರು ಜನಿವಾರ ಹಾಕ್ಕೊಳಲ್ಲ. ಗೋತ್ರವೂ ಕೂಡ ನಮಗೆ ತಿಳಿಯದು. ಆದ್ರೆ ಐಶ್ವರ್ಯವಂತರಿಗೆ ಗೋತ್ರಗಳಿವೆ. ಅವರು ಜನಿವಾರ ಹಾಕ್ಕೊತಾರೆ. ಬ್ರಾಹ್ಮಣರ ಥರ ಅವರು ಮದುವೆ ಮಾಡುತ್ತಾರೆ, ಶ್ರಾದ್ಧ ಮಾಡುತ್ತಾರೆ".

ಶೂದ್ರ ಜನಾಂಗದ ಬ್ರಾಹ್ಮಣೀಕರಣದ ಹೆಜ್ಜೆಗಳು ಈ ಮಾತುಗಳಿಂದ ಸ್ಪಷ್ಟವಾಗುತ್ತವೆ. ಇದು ಈಗ ಎಲ್ಲ ಜಾತಿಗಳಲ್ಲೂ ನಡೆಯುತ್ತಿರುವಂಥದು.

ಕಥೆಯ ವಿಕಾಸಕ್ಕೆ ನಾನು ಮೂರು ನೆಲೆಗಳನ್ನು ಆರಿಸಿಕೊಂಡಿದ್ದೇನೆ. ಪೌರಾಣಿಕ, ಚಾರಿತ್ರಿಕ ಮತ್ತು ವರ್ತಮಾನ. ಪೌರಾಣಿಕ ಹಿನ್ನೆಲೆಯಲ್ಲಿ ರಾಮು-ಸೀತೆ,ರಾವಣ ಪುಂಡಲೀಕ, ಮಹಾಶ್ವೇತೆ ಮತ್ತು ದೇವಲ ಮಹರ್ಷಿಯ ವೃತಾಂತ ಬರುತ್ತವೆ. ಚಾರಿತ್ರಿಕ ಅಂಶವಾಗಿ ನೇಕಾರ ದೇವರ ದಾಸಿಮಯ್ಯನ ವಚನಗಳು ಮತ್ತು ಶಿವಣ್ಣ ನಾಯಕನ ಚರಿತ್ರೆಯನ್ನು ಬಳಸಿದ್ದೇನೆ. ಪೌರಾಣಿಕ ಪಾತ್ರಗಳೊಂದಿಗೆ ವರ್ತಮಾನದ ಪಾತ್ರಗಳ ಸಾದೃಶ್ಯಗಳನ್ನು ತೋರಿಸುತ್ತಾ ಅವಕ್ಕೆ ಒಂದು ರೀತಿಯ 'ಶಾಶ್ವತ' ಗುಣ ನೀಡುವುದು ನನ್ನ ಉದ್ದೇಶ.

ನೇಕಾರ ಸಮಾಜದ ಬದಲಾಗುತ್ತಿರುವ ಮೌಲ್ಯಗಳನ್ನು ಸಾಂಸ್ಕೃತಿಕ, ಸಾಮಾಜಿಕ ಮತ್ತು ರಾಜಕೀಯ ನೆಲೆಗಳಲ್ಲಿ ಗುರುತಿಸಿದ್ದೇನೆ. 'ನಾವು ಬ್ರಾಹ್ಮಣ ಪುರೋಹಿತ್ರನ್ನ ಕರೆಸ್ತೀವಿ ಬ್ರಾಹ್ಮಣರು ಮಾಡೋಶಾಸ್ತ್ರಗಳನ್ನ ಮಾಡ್ತೀವಿ' ಎನ್ನುವ ಶ್ರೀಮಂತ ಉಗ್ರಪ್ಪ ಸಮಾಜದ ಏಣಿಯಲ್ಲಿ ಹತ್ತಲು ಬ್ರಾಹ್ಮಣೀಕರಣದ ತಂತ್ರ ಬಳಸುತ್ತಾನೆ.

ಉಗ್ರಪ್ಪನ ಮಗಳು ಗಿರಿಜಾ ಬಡಯುವಕ ರಂಗದಾಸನನ್ನು ಪ್ರೀತಿಸುತ್ತಾಳೆ. ಆದರೆ ಅವರ ತಂದೆಯ ಒತ್ತಾಯಕ್ಕೆ ಮಣಿದು ಶ್ರೀಮಂತ ಮುದ್ದುಸ್ವಾಮಿಯನ್ನು ಮದುವೆಯಾಗಬೇಕಾಗುತ್ತದೆ. ಆಗ ರಂಗದಾಸನು ಹೇಳುತ್ತಾನೆ: "ಅವಸರ ಮಾಡ್ಬೇಡ ಯಾವುದಕ್ಕೂ ಯೋಚ್ನೆ ಮಾಡು". ಆಗ ಗಿರಿಜಾ 'ನನ್ನ ಹಣೇಲಿ ಬರ್ದಂಗಾಗ್ತದೆಬಿಡು' ಎನ್ನುತ್ತಾಳೆ. ಇಂತ ಅಸಹಾಯ ಗಿರಿಜಾ ತನ್ನ ಗಂಡನನ್ನು ಕಳೆದುಕೊಂಡು ಒಂದು

ಮಗುವಿನ ತಾಯಿಯಾದ ಮೇಲೆ ನಂಬಲಾರದಷ್ಟು ಬದಲಾಗುತ್ತಾಳೆ. ಕೆಲಸಕ್ಕೆ ಸೇರ ಬೇಡ ಎಂದು ತಂದೆ ಹೇಳಿದಾಗ, "ನಿಮ್ಮ ಮಾತು ಕೇಳಿ ಮದುವೆ ಮಾಡ್ಕೊಂಡು ನನ್ನ ಬಾಳು ಹೀಗಾಯ್ತು. ಇನ್ನು ನಾನು ಯಾರ ಮಾತೂ ಕೇಳೋದಿಲ್ಲ. ನಂಗೆ ಸರಿ ಅನ್ನಿದ್ದನ್ನ ನಾನು ಮಾಡೇ ಮಾಡ್ತೀನಿ" ಅನ್ನುತ್ತಾಳೆ.ಕಡೆಗೆ ರಂಗದಾಸನನ್ನು ಮದುವೆಯಾಗುವ ಧೈರ್ಯವನ್ನೂ ತೋರುತ್ತಾಳೆ. ಬದಲಾಗುತ್ತಿರುವ ಹೆಣ್ಣಿನ ಚಿತ್ರ ಇಲ್ಲಿ ನನ್ನ ಮುಖ್ಯ ಉದ್ದೇಶ.

ಶ್ರೀಮಂತ ಕುಟುಂಬಗಳು ಮತ್ತು ಜೀತಗಾರರು ಮುಖಾಮುಖಿಯಾಗುವುದು ಸಂಘಟಿತ ಹೋರಾಟದಿಂದ ತಮ್ಮ ಪರಿಸ್ಥಿತಿಯಲ್ಲಿ ಬದಲಾವಣೆ ಸಾಧ್ಯವೆಂಬ ಅರಿವು ಬಡವರಲ್ಲಿ ಮೂಡುವುದು ಕಾದಂಬರಿಯ ರಾಜಕೀಯ ತಿರುವು. ಇದು ಜನಪರ ಧೋರಣೆಗಳನ್ನು ಸೂಚಿಸುತ್ತದೆ. ಹೀಗೆ ಒಂದು ಜನಾಂಗದ ಸಂಪ್ರದಾಯಗಳು, ವ್ಯಕ್ತಿಗತ ಶೋಧನೆಗಳು, ಸಾಮಾಜಿಕ ಸಂಬಂಧಗಳು ಮತ್ತು ಬದಲಾವಣೆಯ ಎಳೆಗಳನ್ನು ಒಟ್ಟಾಗಿ ಸೇರಿಸಿರುವುದು ಈ ಕಾದಂಬರಿಯ ವೈಶಿಷ್ಟ್ಯ. ಬಂಡಾಯ, ದಲಿತ ಮುಂತಾದ ಯಾವ ಹಣೆ ಪಟ್ಟಿಯನ್ನು ಕಟ್ಟಿಕೊಳ್ಳದೆ, ಸದ್ದಿಲ್ಲದೆ ನನ್ನ ಕೆಲಸ ನಾನು ಮಾಡಿಕೊಂಡು ಹೋಗಿದ್ದೇನೆ.

'ಮಾಧವಿ' ಒಂದು ಪೌರಾಣಿಕ ಕಾದಂಬರಿ. ವಸ್ತು, ರೂಪ ಮತ್ತು ಧೋರಣೆಗಳಲ್ಲಿ ಇದು ವಾಸ್ತವವಾದೀ ಪರಂಪರೆಯನ್ನೇ ಬಿಂಬಿಸುವುದರಿಂದ ಇವತ್ತಿನ ಅಧ್ಯಯನಕ್ಕೆ ಇದನ್ನೂ ಆರಿಸಿಕೊಂಡಿದ್ದೇನೆ.

ಈ ಕಾದಂಬರಿ ಬರೆಯಲು ಪ್ರಚೋದನೆಗಳು ಹೀಗಿವೆ :

ಸಮಾಜ ವಿಜ್ಞಾನಿ ಇರಾವತಿ ಕರ್ವೆಯವರ ಪುಸ್ತಕ 'ಯುಗಾಂತ' ಓದಿದಾಗ ಪುರಾಣದ ವ್ಯಕ್ತಿಗಳನ್ನೂ ಆಗಿನ ಸಮಾಜವನ್ನೂ ವೈಜ್ಞಾನಿಕವಾಗಿ ವಿಶ್ಲೇಷಿಸುವುದು ಸಾಧ್ಯ ಎಂದು ತೋರಿತು. ಅದೇ ಸಮಯಕ್ಕೆ ಡಾಂಗೆಯವರ 'India from primitive communism to slavery' ಪುಸ್ತಕವನೋದಿದೆ. ಅದರಲ್ಲೊಂದು ಅಡಿ ಟಿಪ್ಪಣಿ ಹೀಗಿತ್ತು : ಊಳಿಗಮಾನ್ಯ ಸಮಾಜ ವ್ಯವಸ್ಥೆಯಲ್ಲಿ ಹೆಂಗಸನ್ನು ಕೊಳ್ಳುವುದು, ಮಾರುವುದು, ದಾನಮಾಡುವುದು ಸಾಧಾರಣ ಪದ್ಧತಿಯಾಗಿತ್ತು. ಯಯಾತಿ ತನ್ನ ಮಗಳಾದ ಮಾಧವಿಯನ್ನು ಈ ರೀತಿ 'ಬಾಡಿಗೆ'ಗೆ ಕೊಟ್ಟಿದು ಮಹಾಭಾರತದ ಉದ್ಯೋಗ ಪರ್ವದಲ್ಲಿ ಚಿತ್ರಿತವಾಗಿದೆ. ಈ ವಿಷಯ ನಿರಂಜನರಿಗೆ ಹೇಳಿದಾಗ "ಮಾಧವಿ

ಯನ್ನು ನಾಯಕಿಯನ್ನಾಗಿಮಾಡಿ ಒಂದು ಕಾದಂಬರಿ ಬರೆಯಿರಿ ಚೆನ್ನಾಗಿರುತ್ತೆ" ಎಂದರು.

ನಾನು ಯೋಚಿಸುವುದಕ್ಕೆ ಶುರುಮಾಡಿದೆ. ಯೋಚಿಸಿದಷ್ಟು ಮಾಧವಿ ನನಗೆ ಜಗತ್ತಿನ ಎಲ್ಲ ಶೋಷಿತ ಸ್ತ್ರೀಯರ ಸಂಕೇತವಾಗಿ ಕಂಡಳು. ಸ್ವಾತಂತ್ರ್ಯ ಬಯಸುವ ಇಂಥ ವ್ಯಕ್ತಿ ಎಲ್ಲ ಕಾಲಗಳಲ್ಲೂ ಇರಬಹುದಾದಂತಹವಳು. ಆದ್ದರಿಂದಲೇ ಈ ವಸ್ತು ಇಂದಿನ ಕಾಲಕ್ಕೂ Relevent ಆಗುತ್ತದೆ ಅನಿಸಿತು. ವರ್ತಮಾನ ಕಾಲದ ಕತೆ ಬರೆಯುವುದು ಸುಲಭವಾಗುತ್ತಿತ್ತು. ಆದರೂ ನಾನು ಪೌರಾಣಿಕತೆಯನ್ನೇ ಆರಿಸಿಕೊಂಡೆ.

ಕತೆಯ ವಸ್ತು ಹೀಗಿದೆ :

ಗಾಲವ, ವಿಶ್ವಾಮಿತ್ರನ ಶಿಷ್ಯ. ಗುರುದಕ್ಷಿಣೆಗೆಂದು ಮೈಯಲ್ಲಾ ಬೆಳ್ಳಗೂ ಕಿವಿ ಮಾತ್ರ ಕಪ್ಪಾಗಿಯೂ ಇರುವ ಎಂಟುನೂರು ಕುದುರೆ ತಂದುಕೊಡೆಂದು ವಿಶ್ವಾಮಿತ್ರ ಕೇಳಿದ. ಈ ಕುದುರೆಗಳ ಸಂಪಾದನೆಗೆಂದು ಗಾಲವ ಅರಸ ಯಯಾತಿಯ ಬಳಿಗೆ ಹೋದ. ಯಯಾತಿಯ ಬಳಿ ಕುದುರೆಗಳೂ ಇರಲಿಲ್ಲ, ಹಣವೂ ಇರಲಿಲ್ಲವಾದುದರಿಂದ ತನ್ನ ಮಗಳು ಮಾಧವಿಯನ್ನೇ ಗಾಲವನಿಗೆ ದಾನ ಮಾಡಿದ.

"ದೇವ ಗಂಧರ್ವ ಅಪ್ಸರೆಯರಿಗೆ ಮಿಗಿಲಾದ ಸೌಂದರ್ಯವುಳ್ಳ ಮಾಧವಿಯನ್ನು ಯಾರಾದರೂ ಪುಣ್ಯಾತ್ಮ ರಾಜನಿಗೆ ಕೊಟ್ಟು, ನಿಮ್ಮ ಗುರುದಕ್ಷಿಣೆಗೆ ಬೇಕಾದ ಅಶ್ವಗಳನ್ನು ಕನ್ಯಾಶುಲ್ಕ ರೂಪದಲ್ಲಿ ದೊರಕಿಸಿಕೊಳ್ಳಬೇಕಾಗಿ ಪ್ರಾರ್ಥನೆ" ಎನ್ನುತ್ತಾನೆ ಯಯಾತಿ.

ಹರ್ಯಶ್ವನೆಂಬ ಮೊದಲರಾಜ ಒಂದು ವರ್ಷ ಮಾಧವಿಯನ್ನಿಟ್ಟುಕೊಂಡು ಅವಳಿಂದ ಒಬ್ಬ ಮಗನನ್ನು ಪಡೆದು ಗಾಲವನಿಗೆ ಶುಲ್ಕ ರೂಪದಲ್ಲಿ 200 ಕುದುರೆ ಕೊಡುತ್ತಾನೆ. ಮತ್ತಿಬ್ಬರು ರಾಜರಿಂದ ಇದೇ ಗುತ್ತಿಗೆಯ ಮೇಲೆ 400 ಕುದುರೆ ಗಳಿಸುತ್ತಾನೆ. ಈ ಆರುನೂರು ಕುದುರೆ ತೆಗೆದುಕೊಂಡು ವಿಶ್ವಾಮಿತ್ರನ ಬಳಿ ಹೋದಾಗ ಅವನು ಮಾಧವಿಯನ್ನೂ ಒಂದುವರ್ಷ ಇರಿಸಿಕೊಳ್ಳುತ್ತಾನೆ. ಅಲ್ಲಿಂದ ಮಾಧವಿ ತಂದೆಯ ಮನೆಗೆ ಹಿಂತಿರುಗುತ್ತಾಳೆ. ಯಯಾತಿ ಪಾಪ ಪ್ರಜ್ಞೆಯಿಂದ ಮಗಳಿಗೆ ಸ್ವಯಂವರ ಏರ್ಪಡಿಸುತ್ತಾನೆ. ಜೀವನದಲ್ಲಿ ಮೊದಲ ಬಾರಿ ಆಯ್ಕೆಯ ಸ್ವಾತಂತ್ರ್ಯ ಬಂದಾಗ ಮಾಧವಿ ಸ್ವಯಂವರಕ್ಕೆ ಬಂದಿದ್ದ ರಾಜಕುಮಾರರನ್ನೆಲ್ಲಾ ತಿರಸ್ಕರಿಸಿ 'ವನವೇ ನನ್ನ ವರ' ಎಂದು ಕಾಡಿಗೆ ಹೊರಟು ಹೋಗುತ್ತಾಳೆ.

ಕಾದಂಬರಿ ರಚಿಸುವ ಮುನ್ನ 'ಮಾಧವಿ'ಯ ಬಗ್ಗೆ ನಾನು ಸಾಕಷ್ಟು ಮಾಹಿತಿ ಲೆಹಾಕಬೇಕಾಗಿತ್ತು. ಮಾಧವಿಯ ಉಲ್ಲೇಖ ಮಹಾಭಾರತದ ಉದ್ಯೋಗ ಪರ್ವ, ಆದಿಪರ್ವ, ಅನುಶಾಸನಪರ್ವ, ಶಾಂತಿಪರ್ವ, ಸಭಾಪರ್ವಗಳಲ್ಲಿ ಬಂದಿದೆ. ಈ ಶ್ಲೋಕ ಗಳನ್ನೆಲ್ಲಾ ಸಂಸ್ಕೃತ ಪಂಡಿತ ಸುಮತಿ ಅನಂತಾಚಾರ್ ಮೂಲದಲ್ಲಿ ಓದಿ ಅರ್ಥೈಸಿ ಹೇಳಿದರು.

ಆ ಕಾಲದ ಸಮಾಜದ ರೀತಿ ನೀತಿಗಳನ್ನೂ ನಾನು ಅರ್ಥ ಮಾಡಿಕೊಳ್ಳ ಬೇಕಾಗಿತ್ತು. ಅಷ್ಟು ಹೊತ್ತಿಗಾಗಲೇ ಊಳಿಗಮಾನ್ಯ ಸಮಾಜ ವ್ಯವಸ್ಥೆ ಪ್ರತಿಷ್ಠಾಪಿತ ವಾಗಿತ್ತು. ಸ್ತ್ರೀ 'ಆಸ್ತಿ' ಎಂದು ಭಾವಿಸಲ್ಪಟ್ಟು ಗುಲಾಮಳ ಸ್ಥಾನಕ್ಕೆ, ಭೋಗ ವಸ್ತು ವಿನ ಸ್ಥಾನಕ್ಕೆ ರವಾನಿಸಲ್ಪಟ್ಟಿದ್ದಳು. ಗಂಡ ತನ್ನ ಹೆಂಡತಿಯನ್ನು, ತಂದೆ ತನ್ನ ಮಗ ಳನ್ನು ಮಾರಬಹುದಾಗಿತ್ತು ಅಥವಾ ದಾನ ಕೊಡಬಹುದಾಗಿತ್ತು. ಇದರ ವಿರುದ್ಧ ಸ್ತ್ರೀ ಚಕಾರವೆತ್ತುವಂತಿರಲಿಲ್ಲ. ಎತ್ತಿದರೂ ಅದು ವಿಫಲ ಪ್ರತಿಭಟನೆಯಾಗುತ್ತಿತ್ತು.

ಆ ಕಾಲದ ಪರಿಸರದ ವಾಸ್ತವ ಚಿತ್ರಣ ಕೊಡಬೇಕಾದರೆ ನಾನು ಇನ್ನಷ್ಟು ವಿಷಯಗಳನ್ನು ಜೊತೆಗೂಡಿಸಬೇಕಾಗಿತ್ತು. ಉದಾಹರಣೆಗೆ ಅಂದಿನ ಭಾರತದ ಭೂಪಟ ಸಿದ್ಧಮಾಡಿಕೊಂಡೆ. ಅಂದು ಆ ನಗರಗಳಿಗೆ ಇರುತ್ತಿದ್ದ ಹೆಸರು, ಹರಿಯು ತ್ತಿದ್ದ ನದಿಗಳು, ಕಾಡುಗಳು ಇವನ್ನು ಗುರುತಿಸಿಕೊಂಡೆ. ಅಂದಿನ ಜನ, ರಾಜರು ಮತ್ತು ಸಾಮಾನ್ಯರು ಉಪಯೋಗಿಸುತ್ತಿದ್ದ ಆಹಾರ, ವೇಷ ಭೂಷಣ, ಒಡವೆ ವಸ್ತುಗಳು ಅರಮನೆ ಸಿಂಗಾರ, ಆಸ್ಥಾನದ ರೀತಿ ನೀತಿ, ಋಷ್ಯಾಶ್ರಮಗಳ ವರ್ಣನೆ, ಆಗಿನಕಾಲದ ಅಳತೆ–ತೂಕ, ಯುದ್ಧವಿಧಾನ ಇವೆಲ್ಲವನ್ನೂ ಅಭ್ಯಸಿಸಲು ರಾಮಾಯಣ, ಮಹಾಭಾರತ ಗ್ರಂಥಗಳು ನೆರವಾದವು.

ಹೀಗೆ ವಸ್ತು ಮತ್ತು ಪರಿಸರ ಸಿದ್ಧವಾದಾಗ ಅದಕ್ಕೆ ನಿರ್ದಿಷ್ಟವಾದ ರೂಪು ಕೊಡಲು ಯತ್ನಿಸಿದೆ. ಪೌರಾಣಿಕ ಪಾತ್ರಗಳ ಮನಃಸ್ಥಿತಿ ಚಿತ್ರಿಸುವಾಗ ವರ್ತಮಾನದ ಪಾತ್ರಗಳಿಗೂ ಅವಕ್ಕೂ ಇರುವ ಸಾದೃಶ್ಯ ಕಂಡೆ. ಮನುಷ್ಯನ ರಾಗದ್ವೇಷಗಳು, ಶೋಷಣೆಯ ವಿವಿಧ ಸ್ತರಗಳು ಆಗಲೂ ಇದ್ದುವು, ಈಗಲೂ ಇವೆ. ಹೀಗಾಗಿ ಮಾನವ ಇಲ್ಲಿ ಸರ್ವಕಾಲಿಕ ವ್ಯಕ್ತಿಯಾಗುತ್ತಾನೆ. ಪರಿಸ್ಥಿತಿ ಬದಲಾದರೂ ಮಾನವನ ನಡವಳಿಕೆ ಯಲ್ಲಿ ಹೆಚ್ಚು ಬದಲಾವಣೆಯಾಗಿಲ್ಲ ಎನ್ನುವ ಸತ್ಯ ಇಂದಿನ ಸಾಮಾಜಿಕ ಪರಿಸ್ಥಿತಿಯಲ್ಲಿ ಕಂಡು ಬಂದಿದೆ. ಮಾಧವಿಯ ಶೋಷಣೆ ಬಗ್ಗೆ ನಾನಿಲ್ಲಿ ಹೆಚ್ಚು ಹೇಳುವುದಿಲ್ಲ. ಪುರು ಷನ ಮತ್ತು ಸಮಾಜದ ಕ್ರೌರ್ಯ ಕತೆಯ ಹಂದರದಲ್ಲೇ ದಟ್ಟವಾಗಿ ಕುಳಿತಿದೆ.

ಕಾದಂಬರಿಯಲ್ಲಿ ಆಡು ಭಾಷೆ ಬಳಸಿದ್ದೇನೆ. ಪುರಾಣದ ರಾಜರು ಯಾವ ರೀತಿ ಮಾತಾಡುತ್ತಿದ್ದರೆಂಬುದು ನಮಗೆ ಗೊತ್ತಿಲ್ಲ. ಆದರೆ ಕನ್ನಡದಲ್ಲಿ ಪ್ರಕಟವಾದ ಪುರಾಣ ಗ್ರಂಥಗಳಲ್ಲಿ ರಾಜ ಮಹಾರಾಜರು ಗ್ರಾಂಥಿಕ ಭಾಷೆ ಆಡುವುದನ್ನು ಕಾಣುತ್ತೇವೆ. ರಾಜನಾಗಲೀ ಶ್ರೀ ಸಾಮಾನ್ಯನಾಗಲೀ ಪುಸ್ತಕದ ಭಾಷೆಯಲ್ಲಿ ಮಾತಾಡುವುದಿಲ್ಲ. ಈ ಹಿನ್ನೆಲೆಯಲ್ಲಿ ನನ್ನ ಪಾತ್ರಗಳು ಗ್ರಾಂಥಿಕ ಭಾಷೆ ಉಪಯೋಗಿಸದೆ ಆಡು ಭಾಷೆಯಲ್ಲಿಯೇ ಮಾತಾಡುತ್ತಾರೆ. ಇದು ವಾಸ್ತವತೆಗೆ ಹತ್ತಿರ ಎಂಬುದರಿಂದಾಗಿ.

ಬೇರೆ ಪೌರಾಣಿಕ ಕೃತಿಗಳಲ್ಲಿ ದೇವಾಧಿದೇವತೆಗಳು ಪ್ರತ್ಯಕ್ಷರಾಗುವ ಪವಾಡಗಳನ್ನು ಮಾಡುವ ಸಂಗತಿಗಳನ್ನು ನಾನಿಲ್ಲಿ ಬಳಸಿಕೊಂಡಿಲ್ಲ. ನಾನು ಪ್ರತಿಯೊಂದನ್ನೂ ವೈಜ್ಞಾನಿಕ ದೃಷ್ಟಿಕೋನದಿಂದ ಅಭ್ಯಸಿಸಿ ಅಂತೆಯೇ ವಿಶ್ಲೇಷಿಸಿದ್ದೇನೆ. ಉದಾ : ಪುತ್ರ ಕಾಮೇಷ್ಠಿಯಾಗಮಾಡಿ ಪಾಯಸ ಕುಡಿದರೆ ಮಕ್ಕಳಾಗುತ್ತವೆಂಬ ನಂಬಿಕೆಯನ್ನು ನಾನು ಪ್ರಶ್ನಿಸಿದ್ದೇನೆ. ಋಷಿಯೊಬ್ಬ ಮಾಧವಿಗೆ ವರ ಕೊಡುತ್ತಾನಂತೆ. "ನೀನು ಎಷ್ಟು ಸಾರಿ ಪ್ರಸವಿಸಿದರೂ ಪ್ರಸವವಾದ ಕೆಲವೇ ದಿನಗಳಲ್ಲಿ ನವ ತರುಣಿಯಂತೆ ಕನ್ಯತ್ವವನ್ನು ಪಡೆ". ವೈದ್ಯಕೀಯವಾಗಿ ಇಂಥ ಸ್ಥಿತಿಯನ್ನು ಮರಳಿ ಪಡೆಯುವುದು ಸಾಧ್ಯವಿಲ್ಲ. ಒಬ್ಬ ಹುಡುಗಿಗೆ ಕನ್ಯತ್ವವೇ ಮುಖ್ಯ ಎನ್ನುವ ವಾದವನ್ನು ನಾನು ಒಪ್ಪುವುದೂ ಇಲ್ಲ.

ಖ್ಯಾತ ವಿಮರ್ಶಕಿ ಡಾ॥ ಎಚ್.ಎಸ್. ಸುಜಾತ 'ಮಾಧವಿ' ಬಗ್ಗೆ ಹೀಗೆಂದಿದ್ದಾರೆ : ಇಡೀ ಕಾದಂಬರಿಯಲ್ಲಿ ಅಂತರ್ಗತವಾಗಿರುವುದು ಶೋಷಣೆಯ ವಿವಿಧ ಹಂತಗಳು, ವಿಫಲ ಪ್ರತಿಭಟನೆ ಹಾಗೂ ವ್ಯಂಗ್ಯ. ತೀರ ಸರಳ ನಿರೂಪಣೆಯಲ್ಲಿ ಅನುಪಮಾ ಏರುದನಿಯಿಲ್ಲದೆ ತಣ್ಣನೆಯ ಕಟಕಿಯಿಂದ ಇದನ್ನು ಸಾಧಿಸಿದ್ದಾರೆ. ಪುರಾಣಗಳ ಆದರ್ಶವನ್ನು ಕಳಚಿಹಾಕಿ, ಸಾಮಾನ್ಯ ಮಾನವರ ಚಿತ್ರಣ ನೀಡಿ ಧರ್ಮದ ಹೆಸರಿನಲ್ಲಿ ನಿರಂತರ ಶೋಷಣೆ ಮಾಡುತ್ತಿದ್ದ ಅರಮನೆಗಳ ಅಂತರಂಗವನ್ನು ಬಯಲಿಗೆಳೆದಿದ್ದಾರೆ.

ಹೀಗೆ ನನ್ನ ಕಾದಂಬರಿಗಳೆಲ್ಲಾ ವಾಸ್ತವವಾದೀ ಪರಂಪರೆಯ ಅಡಿಪಾಯದ ಮೇಲೇ ನಿಂತಿವೆ. ಬದುಕನ್ನು ಪ್ರೀತಿಸಿ ಸದಾಕಾಲಕ್ಕೂ ಅದರಿಂದಲೇ ನಾನು ಪ್ರೇರಣೆ ಪಡೆದಿದ್ದೇನೆ. ನನ್ನ ಧೋರಣೆಗಳು ಯಾವಾಗಲೂ ಜನಪರವಾಗಿವೆ. ಒಂದು ರೀತಿಯಲ್ಲಿ ಪ್ರಗತಿಶೀಲ ಚಳುವಳಿಯಿಂದ ಪ್ರಭಾವಿತಳಾದ ನಾನು ಅದೇ ನಂಬುಗೆಯನ್ನು ಈಗಲೂ ಉಳಿಸಿಕೊಂಡಿದ್ದೇನೆ.

ಹೊಸ ಓದು

ನಂಬಿಕೆಗಳು :

○ ಲೇ. ಕೃಷ್ಣ ಮಾಸಡಿ

ಅಕ್ಷರ ಪ್ರಕಾಶನ, ಸಾಗರ.

ಕೃತಿಯ ಶಿಲ್ಪ ಸೌಂದರ್ಯಕ್ಕೆ ಅಗತ್ಯಕ್ಕಿಂತ ಹೆಚ್ಚಿನ ಪ್ರಾಧಾನ್ಯತೆ ಕೊಟ್ಟ ನವ್ಯ ಚಳುವಳಿ ಬದುಕಿನ ಸಮಗ್ರ ಸೌಂದರ್ಯವನ್ನು ಗ್ರಹಿಸುವಲ್ಲಿ ವಿಫಲವಾಯಿತು. ವಸ್ತು ನಿಷ್ಠತೆ, ಆತ್ಮ ವಿಮರ್ಶೆ, ಮೌಲ್ಯ ವಿವೇಚನೆಗಳು ಈ ಚಳುವಳಿಯ ಪ್ರಧಾನ ಗುಣಗಳಾಗಿ ಕನ್ನಡ ಸಾಹಿತ್ಯ ಹೊಸ ಆಯಾಮಗಳನ್ನು, ಅರ್ಥವಲಯಗಳನ್ನು ಪಡೆಯಲು ಸಾಧ್ಯವಾಯಿತಾದರೂ, ಈ ಚಳುವಳಿಯ ಅಹಂಕಾರ ಮತ್ತು ಸಿನಿಕತೆಗಳಿಂದಾಗಿ ನವ್ಯ ಮಾರ್ಗದ ಬಹುಪಾಲು ಬರವಣಿಗೆಗಳು ಹುಬ್ಬು ಗಂಟಿಕ್ಕಿದ, ಹುಸಿ ಗಾಂಭೀರ್ಯದ ಸೃಷ್ಟಿಗಳೇ ಆದವು. ಬದುಕಿನ ಉಲ್ಲಾಸ ತಮಾಷೆಗಳು, ಮರೆಯಾಗಿ ನವ್ಯ ಅನೇಕ ಸೃಜನಶೀಲ ಕೃತಿಗಳು 'ಅನಿಮಿಕ್' ರೋಗಿಗಳಂತೆ ಕಾಣತೊಡಗಿದವು. ಸೂತ್ರಬದ್ಧ ಪಾತ್ರಗಳು, ಲೆಕ್ಕಾಚಾರದ ಸನ್ನಿವೇಶಗಳು ಗಂಭೀರವಾದುದನ್ನು ಹೇಳುವಂತೆ ಪೋಸು ಕೊಡುತ್ತಾ ನಗೆ ಉಕ್ಕಿಸುವ ಸಹಜ ಸಂಗತಿಗಳನ್ನು ಬೇಕೆಂದೇ ತಿರಸ್ಕರಿಸಿದವು. ಆದರೆ ಇದು ಬಹುಕಾಲ ನಡೆಯಲಿಲ್ಲ. ನವ್ಯ ಚಳುವಳಿಯಿಂದಲೇ ಎದ್ದುಬಂದ ಲಂಕೇಶ್ ಅವರು ಸೃಷ್ಟಿಸಿದ "ಮುಸ್ಸಂಜೆಯ ಕಥಾ ಪ್ರಸಂಗ" ತನ್ನ ಒಡಲ ತುಂಬ ಇಂತಹ ಸಹಜ, ತಮಾಷೆಯ ಪ್ರಸಂಗಗಳನ್ನು ತುಂಬಿಕೊಂಡೇ ಬಂತು. ನವ್ಯ ಮಾರ್ಗವನ್ನು ಪ್ರಜ್ಞಾಪೂರ್ವಕವಾಗಿ ಧಿಕ್ಕರಿಸಿದ ಪೂ. ಚಂ. ತೇಜಸ್ವಿ ಅವರ ಕಥೆಗಳಲ್ಲಿ, ಕಾದಂಬರಿಗಳಲ್ಲಿ ತಮಾಷೆ, ತಿಳಿಹಾಸ್ಯ, ಉಲ್ಲಾಸಗಳು ಕೃತಿಗಳ ಅವಿಭಾಜ್ಯ ಅಂಗಗಳಾಗಿ ರೂಪ ಪಡೆದುಕೊಂಡವು. ನವ್ಯ ಚಳುವಳಿ ಕಳಾಹೀನವಾದಂತೆಲ್ಲ ಈ ಬಗೆಯ ಕೃತಿಗಳೂ ಹೆಚ್ಚತೊಡಗಿದವು. ಕೃಷ್ಣಮಾಸಡಿ ಅವರ ಕಾದಂಬರಿ–'ನಂಬಿಕೆಗಳು' ಇಂಥ ಒಂದು ಸಾಹಿತ್ಯ ಪ್ರಕಾರದ ಮುಂದುವರಿಕೆಯೇ ಆಗಿದೆ.

ಶಿವಮೊಗ್ಗ ಜಿಲ್ಲೆಯ ಹೊನ್ನಾಳಿಯ ಗ್ರಾಮೀಣ ಪರಿಸರದ ದಟ್ಟ ಅನುಭವಗಳ ಹಿನ್ನೆಲೆಯಲ್ಲಿ ಬರೆಯುತ್ತಿರುವ ಮಾಸಡಿ, ಇದೇ ಹಿನ್ನಲೆಯಲ್ಲಿ ಈಗಾಗಲೇ

ಕೃತಿಗಳನ್ನು ಕಟ್ಟಿರುವ ಲಂಕೇಶರ ನೆರಳಿನಲ್ಲಿ ಇರುವಂತೆ ಕಾಣಿಸುತ್ತದೆ. 'ಮುಸ್ಸಂಜೆ'ಯು, ಪಾತ್ರಸೃಷ್ಟಿ, ಪ್ರಸಂಗ ವರ್ಣನೆಗಳನ್ನು ನೆನೆದವರಿಗಂತೂ, ಲಂಕೇಶರ ದಟ್ಟ ಪ್ರಭಾವದಲ್ಲಿಯೇ ಮಾಸಡಿ ಉಳಿದಿರುವ ನಂಬಿಕೆಯೂ ಹುಟ್ಟುತ್ತದೆ. ಆದರೆ 'ನಂಬಿಕೆಗಳು' ಕಾದಂಬರಿಯನ್ನು ನಿರ್ದಿಷ್ಟ ಉದ್ದೇಶದ ಕಡೆಗೆ ನಡೆಸುವಲ್ಲಿ ಮಾಸಡಿ ತೋರುವ ಪ್ರಬುದ್ಧತೆ, ಒಟ್ಟಾರೆ ಕೃತಿಯ ಮೇಲಿನ ನಿಯಂತ್ರಣ, ಬರವಣಿಗೆಯನ್ನು ಜೀವಂತಗೊಳಿಸುವ ಕೌಶಲ– ಇವು ಮಾಸಡಿಯವರಿಗೆ ಒಂದು ಪ್ರತ್ಯೇಕ ವ್ಯಕ್ತಿತ್ವವನ್ನು, ಪ್ರತಿಷ್ಠೆಯನ್ನು ತಂದು ಕೊಡುತ್ತವೆ.

ಪ್ರೇಮ, ಜೂಜು, ಧರ್ಮ, ದೇವರು, ದೆವ್ವ, ಹಬ್ಬ, ಆಚರಣೆ ಹೀಗೆ ಅನೇಕ ಗ್ರಾಮೀಣ ಬದುಕಿನ ಸಂಗತಿಗಳನ್ನು ಈ ಕಾದಂಬರಿ ತನ್ನ ತೆಕ್ಕೆಗೆ ತೆಗೆದುಕೊಂಡರೂ, ವಾಸ್ತವವಾಗಿ ಈ ಕೃತಿಯ ಕೇಂದ್ರ 'ನಂಬಿಕೆಗಳು'. ಹಳ್ಳಿಯ ಜನ ಸಮುದಾಯದವೊಂದು ತನ್ನ 'ಅಜ್ಞಾನ'ದಲ್ಲಿ ಅಥವಾ ಚತುರ ವ್ಯವಹಾರ ಜ್ಞಾನದಲ್ಲಿ ಅಳವಡಿಸಿಕೊಳ್ಳುವ ನಂಬಿಕೆಗಳು, ಅವುಗಳನ್ನು ಆಶ್ರಯಿಸುವ ರೀತಿ, ಒಂದು ನಂಬಿಕೆಯನ್ನು ಕಳಚಿಕೊಂಡು ಮತ್ತೊಂದಕ್ಕೆ ಆತುಕೊಳ್ಳುವಲ್ಲಿನ ಅವಸ್ಥಾಂತರ; ಈ ನಂಬಿಕೆಗಳ ಪರಿಣಾಮವಾಗಿ ಅಸ್ತಿತ್ವ ಪಡೆದುಕೊಳ್ಳುವ ಧರ್ಮ, ದೇವರು, ಬಾಬಾ, ಸ್ವಾಮಿ– ಒಂದಲ್ಲ ಒಂದು ಬಗೆಯಲ್ಲಿ ಈ ನಂಬಿಕೆಗಳು ಇಡೀ ಸಮುದಾಯದ ಬದುಕಿಗೆ ಆಸರೆ ನೀಡಿದಂತೆ ಮಾಡಿ ಶೋಷಿಸುವುದು– ಇದರ ದಟ್ಟ ಚಿತ್ರಣ ವಾಸ್ತವ ನೆಲೆಗಟ್ಟಿನಲ್ಲಿ ಈ ಕಾದಂಬರಿಯ ಹರವಿನಲ್ಲಿ ಜೀವ ಪಡೆದುಕೊಳ್ಳುತ್ತದೆ.

ತನ್ನ ಸಣ್ಣ ಪುಟ್ಟ ಸಂಗತಿಗಳ ಅನುಭವದ ಹಿನ್ನೆಲೆಯಲ್ಲಿ ಮನುಷ್ಯ ಕಂಡುಕೊಳ್ಳುವ 'ಸತ್ಯ'ಗಳು, ಮೌಲ್ಯಗಳು, ರೂಢಿಸಿಕೊಳ್ಳುವ ನಂಬಿಕೆಗಳು ಅವನ ಬದುಕಿನಲ್ಲಿ ಎಷ್ಟು ಖಚಿತವಾದ ಅರ್ಥ ಪಡೆದುಕೊಳ್ಳುತ್ತವೆ ಎಂಬುದನ್ನು ಈ ಕೃತಿ ಪ್ರತಿಪಾದಿಸುತ್ತದೆ. ಈ ಕಾದಂಬರಿಯ ನಾಯಕ ಹುಗ್ಗಿಹಾಲ ನಮ್ಮ ಶೇಕಡ 70 ರಷ್ಟು ಜನರಂತೆ ಅಕ್ಷರ ಜ್ಞಾನದಿಂದ, ಪುಸ್ತಕ ಓದಿನಿಂದ ವಂಚಿತನಾದವನು. ವೈಜ್ಞಾನಿಕ ತಿಳುವಳಿಕೆ, ವೈಚಾರಿಕ ಮನೋಧರ್ಮ ಇತ್ಯಾದಿಗಳೆಲ್ಲ ಹುಗ್ಗಿಹಾಲನಿಗೆ ಅಸ್ಪೃಶ್ಯವಾಗಿಯೇ ಉಳಿಯುವ ಶಬ್ದಗಳು. ಆತ ದೇವರಲ್ಲಿ, ದೆವ್ವಗಳಲ್ಲಿ, ನಂಬಿಕೆ ಇಟ್ಟವನು. ಸ್ವಾಮಿಗಳಲ್ಲಿ, ಬಾಬಾಗಳಲ್ಲಿ, ಮಠಗಳಲ್ಲಿ ಆಚರಣೆ ಆರಾಧನೆಗಳಲ್ಲಿ ಶ್ರದ್ಧೆ ಉಳಿಸಿಕೊಂಡವನು. ಆರಂಭದಲ್ಲಿ ಹೀಗೆ ನಮ್ಮೆದುರಿಗೆ ಬರುವ ಹುಗ್ಗಿಹಾಲ, ನಿಧಾನಕ್ಕೆ, ತನ್ನ ಅನುಭವಗಳನ್ನೇ ಬದುಕಿನ ಪಾಠ ಮಾಡಿಕೊಂಡು ಸಂಗತಿಗಳನ್ನು ನೇರವಾಗಿ ನೋಡಲು ಕಲಿಯುತ್ತಾನೆ. ಸತ್ಯ ಬಯಲಾದಂತೆ, ಆತನ ಹಳೆಯ ನಂಬಿಕೆಗಳು ತಲೆ

ಕೆಳಗಾಗುತ್ತವೆ, ಹೊಸ ಮೌಲ್ಯಗಳು ಆವಿಷ್ಕಾರವಾಗುತ್ತವೆ. ಅಸ್ಥಿರತೆ, ತಾಕಲಾಟಗಳು, ಮರೆಯಾಗಿ ದೇವರು, ದೆವ್ವ, ಬಾಬಾಗಳ ಮಿಥ್ಯೆಯ ವಲಯಗಳನ್ನು ದಾಟಿಕೊಂಡು ಆತ ಬೆಳಕಿನೆಡೆಗೆ ಸಾಗಿ ಬರುತ್ತಾನೆ. ಕಾದಂಬರಿ ಕೊನೆಗೊಳ್ಳುವ ವೇಳೆಗೆ ಈ ನಾಯಕ, ತನ್ನ ಮನೆಯ 'ಕಲ್ಲಿನ ದೇವರ' ಪ್ರತಿಮೆಯನ್ನು ಯಾವ ಮಾನಸಿಕ ತೊಳಲಾಟಗಳೂ ಇಲ್ಲದೆ ಕೆರೆಗೆ ಬಿಸಾಡುವ ಹಂತವನ್ನು, ದೃಢತೆಯನ್ನು ಪಡೆದುಕೊಂಡಿರುತ್ತಾನೆ. ಇದು ಕಾದಂಬರಿಯ ಮುಖ್ಯ ಆಶಯವಾಗಿ, ಮಹತ್ವದ ಬೆಳವಣಿಗೆಯಾಗಿ ಕಾಣಿಸಿಕೊಳ್ಳುತ್ತದೆ.

ತನ್ನ ಮುಖ್ಯ ಧ್ವನಿಯ ಜೊತೆಗೇ ಕಾದಂಬರಿ ಅನೇಕ ಸಂಗತಿಗಳನ್ನು ಮಂಡಿಸುತ್ತ ಹೋಗುತ್ತದೆ. ಓ.ಸಿ. ಆಟದಂಥ ಜೂಜು ಗ್ರಾಮೀಣ ಪರಿಸರವನ್ನು ಪ್ರವೇಶಿಸಿ ಕ್ರಿಯಾಶೀಲ ಜನರನ್ನು ನಿಷ್ಕ್ರಿಯಗೊಳಿಸುವುದು, ಲಂಪಟರನ್ನಾಗಿಸುವುದು, ಸೋಮಾರಿಗಳ ಹಿಂಡನ್ನೇ ಸೃಷ್ಟಿಸುವುದು, ಇದರ ಪರಿಣಾಮವಾಗಿ ಇಡೀ ಹಳ್ಳಿ ಅವನತಿಯ ದಾರಿ ಹಿಡಿಯುವುದು ಚಿತ್ರಿತವಾಗುತ್ತದೆ. ಆದರೆ ಈ ನಿರಾಶಾದಾಯಕ ಸ್ಥಿತಿಯ ಮಧ್ಯದಿಂದಲೇ ಹೊಸ ಭರವಸೆಗಳು ಮೇಲೇಳುತ್ತವೆ. ಮಳೆ–ಬೆಳೆ, ಸತ್ವಶಾಲೀ ಭೂಮಿಗಳ ಸಂಗದಲ್ಲಿ ಹೊಸ ಬದುಕು ಚಿಗುರೊಡೆಯುತ್ತದೆ; ಕ್ರಿಯಾಶೀಲತೆ, ಜೀವಂತಿಕೆಗಳು ಮತ್ತೆ ಬಂದು ಕೂಡಿಕೊಳ್ಳುತ್ತವೆ. ಹಾಗೆಯೇ ಶೋಷಕ ಶಕ್ತಿಗಳ ನಿಯಂತ್ರಣದಲ್ಲಿ ಮಾನವೀಯತೆಯ ಸೆಲೆ ಬತ್ತಿಹೋದಂತೆ ಕಾಣುವ ಮನುಷ್ಯ, ಮತ್ತೆ ಪ್ರೀತಿ–ಅನುಕಂಪಗಳನ್ನು ಪಡೆದು 'ಮನುಷ್ಯ'ನಾಗುತ್ತಾನೆ. ಹೀಗೆ ಗ್ರಾಮೀಣ ಸಮುದಾಯವೊಂದು ತನ್ನೆಲ್ಲ ಏಳು-ಬೀಳುಗಳ ವಾಸ್ತವ ಚಿತ್ರಣದೊಂದಿಗೆ ನಮ್ಮ ಕಣ್ಮುಂದೆ ನಿಲ್ಲುತ್ತದೆ.

ಸಮಾಜವಾದೀ ಆಶಯಗಳೆಲ್ಲಾ ಮುಖ್ಯ ಧ್ವನಿಯಾಗಿ ಈ ಕಾದಂಬರಿಯಲ್ಲಿ ಕಾಣಿಸಿಕೊಂಡರೂ, ಲೇಖಕ ತನ್ನ ಆಶಯಗಳ ಈಡೇರಿಕೆಗಾಗಿ ಇಡೀ ಕೃತಿಯನ್ನು ಒಂದು ಫಾರ್ಮುಲಾದಲ್ಲಿ ಬಂಧಿಸುವುದಿಲ್ಲ; ಪಾತ್ರಗಳನ್ನು ಬಲಿಗೊಡುವುದಿಲ್ಲ; ಸನ್ನಿವೇಶಗಳನ್ನು ತಿರುಚುವುದಿಲ್ಲ. ಲೇಖಕ ಕೃತಿಯಲ್ಲಿ ನೇರ ಪ್ರವೇಶಮಾಡಿ ಉಪದೇಶಾಮೃತ ಹರಿಸುವುದಿಲ್ಲ. ಕೃತಿ ಸಹಜವಾಗಿ ಅರಳಲು, ಘಟನೆಯಿಂದ ಘಟನೆಗೆ ಬೆಳೆಯಲು ಮುಕ್ತ ಸ್ವಾತಂತ್ರ್ಯ ಕೊಡುತ್ತಾರೆ. ಇದು ಕಾರಣವಾಗಿ ಲೇಖಕನ ಮುಖ್ಯ ಆಶಯ ಓದುಗರ ಹೆಗಲೇರಿ ಅವರಿಗೆ ಹೆಣಭಾರವಾಗುವುದಿಲ್ಲ. ಪ್ರತಿಯಾಗಿ ಅವರನ್ನು ಆದರಿಸಿ, ಗಾಢ ಚಿಂತನೆಗೆ ಒಡ್ಡುತ್ತದೆ. ಒಂದು ಗ್ರಾಮೀಣ ಬದುಕನ್ನು, ಅಲ್ಲಿನ ವೈವಿಧ್ಯಮಯ ವ್ಯಕ್ತಿಗಳನ್ನು, ಜೀವಂತ ತಮಾಷೆಗಳನ್ನು, ನೋವಿನ–ಯಾತನೆಯ ಸನ್ನಿವೇಶಗಳನ್ನು ಯಥಾವತ್ತಾಗಿ ದಾಖಲಿಸುತ್ತಲೇ, ಅಲ್ಲಿಯ ವ್ಯಕ್ತಿಗಳು ಕಂಡುಕೊಳ್ಳುವ ಸತ್ಯಗಳನ್ನು ಓದುಗರ ಮುಂದೆ ತೆರೆದಿಡುತ್ತದೆ. ಈ ಸತ್ಯಗಳೇ ಕೃತಿಯ 'ಕಾಣ್ಕೆ'ಯಾಗುವುದು, ಈ

ಕಾಣ್ಕೆ ಲೇಖಕನ ಆಶಯದ ಪ್ರತಿಬಿಂಬವಾಗುವುದು ಈ ಕೃತಿಯ ವಿಶೇಷ.

ದಟ್ಟ ಗ್ರಾಮೀಣ ಬದುಕಿನ ಹೇರಳ ಸರಕನ್ನು ಮಾಸಡಿ ಅವರು ತಮ್ಮ ಮೊದಲ ಕಥಾ ಸಂಕಲನ 'ಪುರುಷನ ಮುಂದೆ ಮಾಯೆ ಸ್ತ್ರೀಯೆಂಬ'ದಲ್ಲಿ ಹರವಿದ್ದರೂ ಅಲ್ಲಿ ಕಥೆ ಕಟ್ಟುವ ರೀತಿ, ಅನುಭವಗಳ ಮಂಡನೆ, ನಿರ್ಲಿಪ್ತ ನಿರೂಪಣೆ ಇತ್ಯಾದಿ ಬರ ವಣಿಗೆಯ ಕುಶಲಗಾರಿಕೆ ಇಲ್ಲದೆ ಕೃತಿ ಕುಸಿದದ್ದನ್ನು ಕಾಣಬಹುದು. ಆದರೆ 'ನಂಬಿಕೆ ಗಳು' ಕಾದಂಬರಿಯ ಮೂಲಕ ಮಾಸಡಿ ತಾವು ಬಹಳ ದೂರ ಸಾಗಿ ಬಂದಿರುವುದನ್ನು ತೋರಿಸಿದ್ದಾರೆ; ಜೊತೆಗೆ ಅವರ ಆರೋಗ್ಯಕರ ಧೋರಣೆಗಳನ್ನೂ. ○

—ಜಿ.ಪಿ. ಬಸವರಾಜು

ಅಂಕ

○ ಲೇ. ಬೊಳುವಾರು ಮಹಮ್ಮದ್ ಕುಂಞ
ಪರಿಸರ ಪ್ರಕಾಶನ, ಶಿವಮೊಗ್ಗ.

'ಅಂಕ' ಬೊಳುವಾರರ ಮೂರನೆಯ ಕಥಾಸಂಕಲನ. ಈಗಾಗಲೇ ಸಾಕಷ್ಟು ಹೆಸರು ಮಾಡಿರುವ ಬೊಳುವಾರು ಆಕರ್ಷಕವಾಗಿ ಕಥೆ ಹೇಳಬಲ್ಲರು. ಮುಂದೇನಾ ದೀತು ಎಂಬ ಕುತೂಹಲ ಉಳಿಸಿ ಕೊಳ್ಳಬಲ್ಲರು, ಕೆಲವೊಮ್ಮೆ ಧಿಡೀರ್ ಎಂದು ಅನಿ ರೀಕ್ಷಿತ ತಿರುವು ಕೊಟ್ಟು ಕಥೆ ಮುಗಿಸಬಲ್ಲರು. ಜನಪ್ರಿಯ ಕಥೆಗಳ ಎಲ್ಲಾ ಗುಣಗಳನ್ನು ಒಳಗೊಂಡೂ ಬೊಳುವಾರರ ಕಥೆಗಳು ವಸ್ತುವಿನ ದೃಷ್ಟಿಯಿಂದ ಭಿನ್ನವಾಗುತ್ತವೆ.

ಬೊಳುವಾರು ಪ್ರಯಾಸದಿಂದ ಕಥೆ ಕಟ್ಟಬೇಕಿಲ್ಲ. ತಾವು ಕಂಡದ್ದನ್ನು, ಗ್ರಹಿಸಿ ಬರೆದರೇ ಎಷ್ಟೋ ಕಥೆಗಳಾದಾವು. ಒಂದು ರೀತಿಯಲ್ಲಿ 'ಅಂಕ' ಸಂಕಲನದ ಎಲ್ಲಾ ಕಥೆಗಳೂ ಮುಸ್ಲಿಂ ಜನಾಂಗವನ್ನು ಕಾಡುವ ಬಡತನ, ಅಜ್ಞಾನ, ಅಸಹಾಯ ಕತೆ, ಶೋಷಣೆಗಳ ಪ್ರತ್ಯಕ್ಷ ವರದಿ ಇದ್ದಂತೆ. ಬೊಳುವಾರರ ಬಹುತೇಕ ಪಾತ್ರ ಗಳು ನೋವಿನ ಕುಲುಮೆಯಲ್ಲಿ ಬೆಂದವು. ರುಖಿಯಾ ಕಥೆಯ ಹಲೀಮಳನ್ನು ಬಿಟ್ಟರೆ ಉತ್ಸಾಹ, ಲವಲವಿಕೆಯಿಂದ ತುಂಬಿದ ಪಾತ್ರಗಳೇ ಈ ಸಂಕಲನದಲ್ಲಿ ಇಲ್ಲವೆನ್ನಬ ಹುದು.

'ಅಂಕ' ಈ ಸಂಕಲನದ ಮೊದಲ ಮತ್ತು ಮುಖ್ಯ ಕಥೆ. ಮನ ಕರಗಿಸುವ ಘಟನೆಗಳೊಂದಿಗೆ ಬೆಳೆಯುತ್ತಾ ನಾಟಕೀಯವಾಗಿ ಕೊನೆಗೊಳ್ಳುವ ಕಥೆಗಳೆಂದರೆ ನನಗೆ ಬಹಳಇಷ್ಟ, ಆದರೆ ಈ ಕಥೆಯಲ್ಲಿ ಅಂಥದೇನೂ ಇಲ್ಲ ಎಂದೇ ಆರಂಭವಾಗುವ 'ಅಂಕ' ಕತೆಯನ್ನು ಮನಕರಗಿಸುವಂತೆ, ನಾಟಕೀಯವಾಗುವಂತೆ ಮಾಡಬಹುದಾದ ಎಲ್ಲಾ ಗಿಮಿಕ್‌ಗಳನ್ನೂ ಕಥೆಗಾರ ಬಳಸಿಕೊಂಡಿದ್ದಾರೆ. ಉಮ್ಮಾಬಿ ಎಂಬ ಬಡ ಮುಸ್ಲಿಂ ಮಹಿಳೆ ಮತ್ತು ರೆಹಮಾನ್ ಉರುಫ್ ರಮೇಶ ಎಂಬ ಆಕೆಯ ಮಗನ ವೈಯಕ್ತಿಕ ಬದುಕು, ಮುತ್ತುಪ್ಪಾಡಿಯ ಹಿಂದೂ–ಮುಸ್ಲಿಂ ಮುಖಂಡರ ತೆವಲಿಗೆ ಸಿಕ್ಕು ಸಾಮಾಜಿಕ ವಾಗುವುದನ್ನು, ಬದುಕಿರುವ ಹುಡುಗನಿಗಿಂತ ಸತ್ತಮೇಲೆ ಅವನ ಶವ ದಕ್ಕಿಸಿಕೊಳ್ಳು ವುದೇ ಇವರಿಗೆ ಮುಖ್ಯವಾಗುವುದನ್ನು, ಮನುಷ್ಯನ ಕ್ಷುದ್ರತೆಯೆಲ್ಲಾ ನಾಗರೀಕತೆಯ ಬಟ್ಟೆ ಕಳಚಿ ಬೆತ್ತಲಾಗುವುದನ್ನು ಬೊಳುವಾರ ವ್ಯಂಗ್ಯವಾದ, ಹರಿತವಾದ ದನಿ ಯಲ್ಲಿ ಚಿತ್ರಿಸಿದ್ದಾರೆ. ರಹಮಾನ್ ರಮೇಶನಾಗಬೇಕಾದ ಅನಿವಾರ್ಯತೆಯನ್ನು ಮತಾಂತರದ ಹಾದಿಗೆ ಅವನನ್ನು ತಳ್ಳಿದ ಕಡುಬಡತನವನ್ನು, ತಾಯಿ-ಮಗನ ನಡುವಣ ಪ್ರೀತಿಯನ್ನು 'ಕರುಳು ಕತ್ತರಿಸುವ' ರೀತಿಯಲ್ಲೇ ಹೇಳಿದ್ದಾರೆ. ಇಡೀ ಕಥೆಯಲ್ಲಿ ಸಂಯ ಮದ ಮಾತಾಗಿ ಕೇಳುವುದು "ಆ ಹುಡುಗನಿಗೆ ಹೆಚ್ಚುಆಯುಸ್ಸು ಕೊಡುವಂತೆ ನಾವೇಕೆ ಅಲ್ಲಾಹುವಿನಲ್ಲಿ ಪ್ರಾರ್ಥಿಸಬಾರದು? " ಎಂಬ ಮೌಲವಿಯ ದನಿ ಮಾತ್ರ.

ತನ್ನೆಲ್ಲಾ ಮಿತಿಗಳೊಂದಿಗೆ ಸಂಕಲನದ ಅತ್ಯುತ್ತಮ ಕಥೆ 'ಅಂಕ' ಸಂಕಲನದ ಎರಡನೆಯ ಕಥೆ 'ರುಖಿಯಾ' ಒಂದು ಸಾಧಾರಣ, ಮಾಮೂಲಿ ಪ್ರೇಮ ಕಥೆ. 'ಭೇಟಿ' ಹೆತ್ತಮಗನನ್ನು ಒಪ್ಪಿಕೊಳ್ಳಲಾಗದ, ಬಯಸಿಯೂ ಉಳಿಸಿಕೊಳ್ಳುವ ಧೈರ್ಯವಿಲ್ಲದ ಮೂಸಾಸಾಬರ ಕಥೆ ಮೂಸಜ್ಜನ ಆಂತರಿಕ ತುಮುಲವನ್ನೇನೋ ಕಥೆಗಾರ ಚನ್ನಾಗಿ ಬಿಚ್ಚಿಟ್ಟಿದ್ದಾರೆ, ಆದರೆ ಆತನ ಮಗನ ಪಾತ್ರ, ಬೆಳವಣಿಗೆ, ಆತನ ಅಲೆಮಾರಿತನಕ್ಕೆ ಕಾರಣ ಎಲ್ಲಾ ಅಸ್ಪಷ್ಟ.

ಎರಡು ರೂಪಾಯಿಗೆ ಕೆ.ಜಿ. ಯಂತೆ ಮನೆಗಿಪ್ಪತ್ತು ಕೆ.ಜಿ. ಅಕ್ಕಿಕೊಡಲು ಅನುವಾಗುವಂತೆ ಹೆಸರುಬರೆದುಕೊಂಡು ಹೋಗಲು ಪಂಚಾಯ್ತಾಫೀಸಿನ ಕರುಣಾಳುಗಳು ಬರುತ್ತಾರೆಂದು, ಇದ್ದ ಮನೆಯನ್ನೂ ಒಡೆದು ಮೂರಾಗಿಸಿಕೊಂಡು ಕೂತ ಕುಂಞಿ ಪಾತಮ್ಮ ಮತ್ತು ಆಕೆಯ ಮನೆಯವರ ದುರಂತ ಕಥೆ– 'ಕಪ್ಪು ಕಲ್ಲಿನ ಸೈತಾನ' ಅಕ್ಕಿಯ ಆಸೆಗೆ ಬದಲಾಗಿ ಅಲ್ಲಾಹುವಿನ ಹೆಸರಿನಲ್ಲಿ ಕಟ್ಟಿಸುವ ಯತೀಮ್‌ಖಾನಾಗೆ ಮೂರು ಗುಡಿಸಲಿನಿಂದ ದಿನಾ ತಲಾ ಹತ್ತು ಪೈಸೆ ಕೂಡಿಸುವ ಜವಾಬ್ದಾರಿ ಮೇಲೆ ಬರುತ್ತದೆ. ಜೊತೆಗೆ ಇಲ್ಲಿ ಮೂರು ಮನೆಯಿದ್ದರೂ, ಜಮಾತಿಗೆ ಒಂದೇ ರೂಪಾಯಿ

ಚಂದಾ ಏಕೆ ಬರುತ್ತಿದೆ ಎಂಬ ಪ್ರಶ್ನೆಯೂ ಎದುರಾಗುತ್ತದೆ. ಬಡಕುಟುಂಬದ ಕಾತರ ಸಂಭ್ರಮ, ಬಡತನ, ನೋವುಗಳನ್ನು, ಇಡೀ ಪರಿಸ್ಥಿತಿಯ ವ್ಯಂಗ್ಯವನ್ನು ಬೊಳುವಾರು ಸೊಗಸಾಗಿ ಹಿಡಿದಿಟ್ಟಿದ್ದಾರೆ. ಆದರೆ ಪರಿಣಾಮದ ದೃಷ್ಟಿಯಿಂದ ಕಥೆಯ ಕಡೆಯ ಪ್ಯಾರಾ ಬಿಟ್ಟಿದ್ದರೇ ಚೆನ್ನಾಗಿತ್ತು. ಇಲ್ಲಿ ಬರುವ ಕೋಡುಗಲ್ಲು ಸೈತಾನನ ಸಂಕೇತವಿರಬಹುದು. ಆದರೆ ಈ ಸೈತಾನ ತರುವ ನಾಶದ ಅರಿವು ಕುಂಞಿ ಪಾತುಮ್ಮನಿಗಾಗಲಿ ಆಕೆಯ ಮನೆಯವರಿಗಾಗಲೀ ಇಲ್ಲ. ಉದ್ದೇಶಪೂರ್ವಕವಾಗಿ ಕಪ್ಪು ಕಲ್ಲಿನ ಸೈತಾನನನ್ನು ಕತೆಯ ಮೇಲೆ ಹೇರದಿದ್ದರೂ, ಒಟ್ಟು ಕಥೆಗೇನೂ ನಷ್ಟವಾಗುತ್ತಿರಲಿಲ್ಲ.

'ಮುದುಕ ಹೇಳಿದ ಕಥೆ' ಸತ್ಯಕ್ಕೆ ಅಂಟಿಕೊಂಡ ಪಂಡಿತರ ಬದುಕಿನ ರೀತಿಯನ್ನು, ಅದರಿಂದಾಗಿ ಅವರು ಎದುರಿಸಬೇಕಾಗಿ ಬಂದ ಪರೀಕ್ಷೆಯ ಕಥೆ.

"ಹಲ್ಲೆಯ ನಂತರ" ಮೂವತ್ತು ರೂಪಾಯಿಯ ಸೀರೆಗಾಗಿ ಇಬ್ಬರು ಹೆಂಗಸರ ನಡುವಣ ಹೋರಾಟದ, ನಂತರದ ರಾಜಿಯ 'ಕರುಳು ಕತ್ತರಿಸುವ ಕಥೆ'.

'ಪ್ರಗತಿಪಥ ಅಥವಾ ದನದ ಬಾಲ' ಹಳ್ಳಿಯೊಂದು ಬೆಳೆಯುತ್ತಾ ಹೋದಂತೆ ಮಾನವೀಯ ಸಂಬಂಧಗಳು ಹಿಡಿದ ಅವನತಿಯ ಹಾದಿಯನ್ನು, ಜಾತ್ಯಂಧತೆಯ ಮೆರೆಯುವಿಕೆಯನ್ನು ವರದಿಯಂತೆ ಹೇಳುವ ಕಥೆ.

ಮುತ್ತುಪ್ಪಾಡಿ ಬೊಳುವಾರರ ಎಲ್ಲಾ ಕಥೆಗಳೂ ನಡೆಯುವ ಸ್ಥಳ. ಖಾದರ್, ರುಖಿಯಾ, ಹಸನಬ್ಬ, ಪಂಡಿತ ಮೊದಲಾದ ಪಾತ್ರಗಳು ಮತ್ತೆ ಮತ್ತೆ ವೇಷ ಬದಲಿಸಿಕೊಂಡು ನಮ್ಮೆದುರು ಬರುತ್ತವೆ. ತಮ್ಮ ಪಾತ್ರಗಳನ್ನು, ಅವು ಓಡಾಡುವ ಮುತ್ತುಪ್ಪಾಡಿಯನ್ನು, ಪಾತ್ರಗಳು ಎದುರಿಸುವ ಸನ್ನಿವೇಶಗಳನ್ನು ಬೊಳುವಾರು ಸೊಗಸಾಗಿ ಚಿತ್ರಿಸಬಲ್ಲರು.

ಆದರೆ ಅಂಕ, ಪ್ರಗತಿ ಪಥದಂಥ ಕತೆಗಳನ್ನು ಓದುವಾಗ ಬೊಳುವಾರರ ಭಾಷೆಯಲ್ಲಿ ಸಂಯಮದ ಕೊರತೆ ಇದೆ ಎಂದು ಅನಿಸದಿರುವುದಿಲ್ಲ. 'ಏನನ್ನಾದರೂ' ಹೇಳಿ ಬಿಡುವ ಚಪಲದಿಂದ ಅವರು ಪೂರ್ತಿ ಪಾರಾಗಿಲ್ಲ. ಒಟ್ಟು ಸಮಾಜದ ಬಗ್ಗೆ, ಅವರ ಕಥೆಗಳಲ್ಲಿ ಅನಗತ್ಯ ಕಹಿ ಇಲ್ಲ ನಿಜ. ಆದರೆ ಅವರಿಗಿರಬಹುದಾದ ಸಿಟ್ಟನ್ನೂ ಅವರು ಅದುಮಿಟ್ಟುಕೊಂಡಿಲ್ಲ. ಈ ಸಿಟ್ಟು ಕಥೆ ಹೇಳುವಾಗ ವ್ಯಂಗ್ಯವಾಗಿ ಬಿಡುತ್ತದೆ. ಆ ವ್ಯಂಗ್ಯವನ್ನು ಅವರು ತಮ್ಮ ಕಥೆಗಳ ಮೇಲೆ ಹೇರಿಬಿಡುತ್ತಾರೆ. ಉದಾಹರಣೆಗೆ ಅಂಕ ಕಥೆಯನ್ನೇ ನೋಡಿ. ಯಾವ ಸೋಗಿಲ್ಲದೆ, ಗಿಮಿಕ್ ಇಲ್ಲದೆ ಬರೆದಿದ್ದರೂ

'ಅಂಕ' ಒಂದು ಒಳ್ಳೆಯ ಕಥೆಯಾಗುತ್ತಿತ್ತು. ಆದರೆ ಕಥೆಗಾರ ತನ್ನ ಸಿಟ್ಟಿಗೆ ಕಡಿವಾಣ ಹಾಕಿಲ್ಲದಿರುವುದೂ ಸ್ಪಷ್ಟ.

ಬೊಳುವಾರರ ಕಥೆಗಳಲ್ಲಿ ಅಂತರ್ಗತವಾದ ಸಿಟ್ಟು, ಅನ್ಯಾಯದ ಭಾವನೆಗಳು ನವಿರಾದ ಹಾಸ್ಯವಾಗೋ, ಅರ್ಥಪೂರ್ಣ ವಿಷಾದವಾಗಿಯೋ ವ್ಯಕ್ತವಾಗುವುದು ತೀರ ಕಡಿಮೆ. ಆದರೆ ಕಥೆಗಾರ ಆ ನಿಟ್ಟಿನಲ್ಲಿ ಸಾಗಬಲ್ಲರು ಎಂಬುದಕ್ಕೆ 'ಕಪ್ಪುಕಲ್ಲಿನ ಸೈತಾನ' ಕಥೆಯನ್ನೇ ಉದಾಹರಿಸಬಹುದು.

ಬೊಳುವಾರು ಈಗಾಗಲೇ ಮೂರು ಸಂಕಲನಗಳನ್ನು ಹೊರತಂದಿದ್ದಾರೆ. ಆದರೆ ಅವರ ಮೊದಲ ಸಂಕಲನದ ಕತೆಗಳಿಗೂ ಮೂರನೇ ಸಂಕಲನದ ಕತೆಗಳಿಗೂ ಅಂತಹ ವಿಶೇಷ ವ್ಯತ್ಯಾಸಗಳೇನೂ ಕಾಣುವುದಿಲ್ಲ. ಪ್ರತಿ ಸಂಕಲನದಲ್ಲೂ ಒಂದೋ-ಎರಡೋ ಒಳ್ಳೆಯ ಕಥೆಗಳು ಸಿಗುತ್ತವೆಂಬುದು ಬೇರೆಯೇ ವಿಷಯ. ಘಟನೆಗಳನು ಬಿಚ್ಚಿಡುವಲ್ಲಿ ಸಮರ್ಥವಾದರೂ, ಅವರ ಬಹಳಷ್ಟು ಕಥೆಗಳು 'ಹಿಗೇಕೆ' ಎಂಬ ಪ್ರಶ್ನೆಯನ್ನು ಶೋಧಿಸ ಹೊರಡುವುದು ಕಡಿಮೆ.

ಬೊಳುವಾರರ ಅನುಭವ ಮತ್ತು ಚಿಕಿತ್ಸಕ ದೃಷ್ಟಿಯಿಂದ ಇನ್ನೂ ಒಳ್ಳೆಯ ಕಥೆಗಳು ಬರಬೇಕಿವೆ. ಬಿಟ್ಟ ಕಣ್ಣಿಂದ ಸಮಾಜವನ್ನು ನೋಡುವಶಕ್ತಿ ಇರುವ ಅವರಿಂದ ವೈವಿಧ್ಯಮಯವಾದ ಕಥೆಗಳನ್ನು ನಿರೀಕ್ಷಿಸುವುದು ಖಂಡಿತ ತಪ್ಪಲ್ಲ. ○

—ಶ್ರೀನಿವಾಸ ಪ್ರಸಾದ್

ಸಂಪಾದಕರ ಟಿಪ್ಪಣಿಗಳು:

ಪ್ರಿಯ ಓದುಗರೇ,

'ಸಂವಾದ'ದ ಎರಡನೇ ಸಂಚಿಕೆ ನಿಮ್ಮ ಕೈ ಸೇರುತ್ತಿದೆ. ಒಂದರ್ಥದಲ್ಲಿ 'ಪ್ರಾಯೋಗಿಕ'ವಾಗಿದ್ದ ಮೊದಲ ಸಂಚಿಕೆಯ ನಂತರ ನಮಗೆ ದೊರೆತ ಬೆಂಬಲ ಪ್ರೋತ್ಸಾಹಗಳು, ಸಾಹಿತ್ಯಕ-ಸಾಂಸ್ಕೃತಿಕ ನಿಯತಕಾಲಿಕೆಗಳ ಪ್ರಕಾಶನಕ್ಕೇ ಸಂಬಂಧಿಸಿದಂತೆ ಕನ್ನಡದಲ್ಲಿ ಈಗಿರುವ ನಿರಾಶಾದಾಯಕ ಪರಿಸ್ಥಿತಿಯಲ್ಲೂ ನಮ್ಮ ಪ್ರಯತ್ನದಲ್ಲಿ ನಂಬಿಕೆ ಹುಟ್ಟಿಸಿವೆ. 'ಸಂವಾದ' ತನ್ನ ಬೆನ್ನ ಮೇಲೆ ತುಸು ಭಾರವಾದ ಜವಾಬ್ದಾರಿಯನ್ನೇ ಹೊತ್ತಿದೆ. ಅದನ್ನು ನಿಮಗೆ ತಿಳಿಸಿಯೂ ಇದ್ದೇವೆ. ಆಧುನಿಕ ನಾಗರೀಕತೆಯ ವಿಷದ ಹಲ್ಲುಗಳು ನಿಧಾನವಾಗಿ ನಮ್ಮ ಸಾಂಸ್ಕೃತಿಕ ಬೇರುಗಳನ್ನೇ ಕಡಿದುಹಾಕುತ್ತಿರುವುದರ ಅರಿವಿನೊಂದಿಗೇ ಹೊಸ ಬದುಕಿನ ಆಶಯಗಳನ್ನು ಗುರುತಿಸುವ ಕೆಲಸ 'ಸಂವಾದ'ದ್ದಾಗಿದೆ.

ಒಂದು ಸಣ್ಣ ಉದಾಹರಣೆ : ಮಂಗಳೂರು ವಿಶ್ವವಿದ್ಯಾಲಯದಲ್ಲಿ ಡಾ॥ ರಾಮಮನೋಹರ ಲೋಹಿಯಾ ಅವರ ವಿಚಾರಧಾರೆ ಕುರಿತು ಸಂಶೋಧನೆ ನಡೆಸುತ್ತಿರುವ ಗೆಳೆಯ ರಾಜಾರಾಂತೋಳ್ಪಾಡಿ 'ಲೋಹಿಯಾವಾದ : ಒಂದು ಟಿಪ್ಪಣಿ' ಎಂಬ ಒಂದು ಕಿರು ಪುಸ್ತಕವನ್ನು ಪ್ರಕಟಿಸಿದ್ದಾರೆ. ಲೋಹಿಯಾ ವಿಚಾರಗಳನ್ನು ತುಂಬಾ ಅಚ್ಚುಕಟ್ಟಾದ ಕನ್ನಡದಲ್ಲಿ, ಕೆಲವು ಒಳ್ಳೆಯ ವೈಯಕ್ತಿಕ ಒಳನೋಟಗಳೊಂದಿಗೆ ಈ ಪುಸ್ತಕ ಪ್ರಸ್ತುತ ಪಡಿಸುತ್ತದೆ. ಮಾಹಿತಿ ಒದಗಿಸುವ ಮೊದಲ ಭಾಗದವರೆಗೆ ಹೊಸ ಓದುಗನಿಂದ ಆಸಕ್ತಿ ಹಾಗೂ ಕುತೂಹಲಗಳಿಂದ ಓದಿಸಿಕೊಂಡು ಹೋಗುವ ಈ

ಪುಸ್ತಕ ಓದುಗನಿಗೆ ಶಿಕ್ಷಣ ಕೊಡಬಯಸುವ ಎರಡನೇ ಭಾಗದಲ್ಲಿ ತೋಳ್ಪಾಡಿಯವರಲ್ಲಿನ 'ವಿಶ್ವವಿದ್ಯಾಲಯತೆ' ಎಚ್ಚರಗೊಂಡಂತಾಗಿ ತನ್ನೆಲ್ಲಾ ಸುಸಾಂಗತ್ವವನ್ನು ಕಳೆದುಕೊಂಡು ನಮ್ಮ ವಿಶ್ವವಿದ್ಯಾಲಯ ಲೋಕದಲ್ಲಿ ಬಂಧಿತರಾದ ಖ್ಯಾತ ವಿಮರ್ಶಕರ 'ನ್ಯಾಯಾಧೀಶ' ಶೈಲಿಗೆ ಬಿದ್ದು ಈ ತೀರ್ಪು ಕೊಡುತ್ತದೆ; " . ಆದರೆ ಇಡೀ ಲೋಹಿಯಾವಾದ Commonsense ಮಟ್ಟದಲ್ಲೇ ಉಳಿದು ಬಿಡುತ್ತದೆ"

ತೋಳ್ಪಾಡಿಯವರು ಏನು ಹೇಳುತ್ತಿದ್ದಾರೆ ? ಒಂದು ವಿಚಾರ ಒಂದು ಸಂಕೀರ್ಣ ತಾರ್ಕಿಕ ಮಹಾಸೌಧವಾಗಿ ಬೆಳೆದು ನಿಮ್ಮ ಪ್ರಚಂಡ ಬುದ್ಧಿಮತ್ತೆಗೆ ಸವಾಲಾಗಿ ನಿಲ್ಲದೆ Commonsense ಮಟ್ಟದಲ್ಲೇ ನಿಮ್ಮನ್ನು ತಲುಪಬಲ್ಲುದಾದರೆ ಅದು ಅದರ ಮಿತಿ ಎಂದೇ ? ನಾನು ತೋಳ್ಪಾಡಿಯವರೊಬ್ಬರ ಬಗ್ಗೆ ಮಾತ್ರ ಹೇಳುತ್ತಿಲ್ಲ. ನಮ್ಮ ವಿಶ್ವವಿದ್ಯಾಲಯಗಳ ಕೊಳಗಳಲ್ಲಿ ಇನ್ನೂ ಅರಳುತ್ತಿರುವ ಪುಷ್ಪ ಅವರು. ಆದರೆ ನಾನು ಹೇಳುತ್ತಿರುವುದು ರಾಜಾರಾಂ ತೋಳ್ಪಾಡಿಯಂತಹ ಪ್ರತಿಭಾವಂತರನ್ನು ವಕ್ರಗೊಳಿಸುವ ನಮ್ಮ ಸಮಕಾಲೀನ ಬೌದ್ಧಿಕ ವ್ಯೂಹದ ಬಗ್ಗೆ ; ಪುಸ್ತಕರಾಶಿಯ ಮಧ್ಯೆ, ಸೆಮಿನಾರುಗಳ ವಾದ-ವಿವಾದಗಳ ಮಧ್ಯೆ ಬೌದ್ಧಿಕ ಅವಲಿನ ಎತ್ತರದಲ್ಲಿ ಕ್ರಮೇಣ ಬತ್ತಿ ಹೋಗುತ್ತಿರುವ 'Commonsense' ಬಗ್ಗೆ ; ನೇರವಾದ, ಸರಳವಾದ, ಸಾಮಾನ್ಯ ಬುದ್ಧಿಮತ್ತೆಗೂ ಗ್ರಾಹ್ಯವಾಗಬಲ್ಲ ವಿಚಾರವನ್ನು ಅನುಮಾನದಿಂದಲೇ ನೋಡುವ ಮನೋಸ್ಥಿತಿಯ ಬಗ್ಗೆ ..


ನಮ್ಮ ಕೃತಕ ಬಟ್ಟೆಗಳನ್ನು ನೇಯುವ, ನಮ್ಮ ರೆಫ್ರಿಜಿರೇಟರುಗಳನ್ನು ಏರ್ ಕಂಡೀಷನರುಗಳನ್ನು ತಯಾರಿಸುವ, 'ಸ್ವಯಂ ರಕ್ಷಣೆಗೆ ಮಾತ್ರ' ಯುದ್ಧ ವಿಮಾನಗಳನ್ನು ಜೋಡಿಸುವ, 'ಶಾಂತಿಯುತ ಉದ್ದೇಶಗಳಿಗೆ ಮಾತ್ರ' ಅಣುಶಕ್ತಿಯನ್ನು ಉತ್ಪಾದಿಸುವ ನಮ್ಮ ಬೃಹತ್ ಯಂತ್ರ ಸ್ಥಾವರಗಳು ನಮ್ಮೊಳಗೂ ಕಾರ್ಯನಿರ್ವಹಿಸಲಾರಂಭಿಸಿವೆ. ಸಂಕೀರ್ಣವಾಗಿರದ, ಬೃಹತ್ ಆಗಿರದ, ಪಾಂಡಿತ್ಯವನ್ನು ಬೇಡದ, ಕೊನೆ ಇಲ್ಲದ ಚರ್ಚೆಗಳಿಗೆ ಗ್ರಾಸವಾಗದ ಯಾವೊಂದನ್ನು ಸ್ವೀಕರಿಸಲಾಗದ ಮನೋಸ್ಥಿತಿ ಇದು. ಈ ಮನೋಸ್ಥಿತಿಯೇ 'ಒಂದು ಹೆಜ್ಜೆ ಮುಂದೆ ಸಾಕು' ಎಂದು ಇಡೀ ಮಾನವ ಜನಾಂಗವನ್ನು ಒಂದು ನಾಗರೀಕತೆಯ ಮಹಾ ಬಿಕ್ಕಟ್ಟಿನಿಂದ ಪಾರುಮಾಡಲು ಗಾಂಧಿ ಎಂಬ ವ್ಯಕ್ತಿ ಮಾಡಿದ ಪ್ರಯತ್ನ ನಮಗೆ 'ಹಿಂದಕ್ಕೆ ಇಟ್ಟ ಹೆಜ್ಜೆ'ಯಂತೆ ಕಾಣುವಂತೆ ಮಾಡಿರುವುದು. ಯಾಕೆಂದರೆ ಅವರ ಕಣ್ಮುಂದೆ ಖಾಸಗಿ ಅಥವಾ ರಾಜ್ಯ ಬಂಡವಾಳದ ಮೇಲೆ ಬೆಳೆದು ನಿಂತ ಪ್ರಚಂಡ ಬುದ್ಧಿಮತ್ತೆಯ ಪ್ರತಿಷ್ಠಿತರು ಮಾತ್ರ ಇರಲಿಲ್ಲ. ಸರಳವಾದದ್ದನ್ನು ಗ್ರಹಿಸಬಲ್ಲ, ಮಿತಿಗಳಿರುವ ಬದುಕಿನ ಮೇಲೆ ಮಾತ್ರ

ಕಣ್‌ನೆಟ್ಟಿದ್ದ ಜನ ಕೋಟಿ ಇದ್ದಿತು. ಅವರೆಲ್ಲರನ್ನೂ ಎಚ್ಚರಿಸಿ ತಮ್ಮೊಂದಿಗೆ ಕೊಂಡೊಯ್ಯಲು ಅವರಿಗೆ Commonsense ಅಷ್ಟೇ ಬೇಕಾಗಿತ್ತು ಮತ್ತು ಸಾಕಾಗಿತ್ತು. ಅದಕ್ಕಿಂತ ಹೆಚ್ಚಿನದು ಅವರಿಗೆ ಗುರಿ ತಪ್ಪಿಸುವ ಸರಕಾಗಿ ಮಾತ್ರ ಕಾಣುತ್ತಿತ್ತು.

ಅವರ ಗುರಿಯಾದರೂ ಯಾವುದು? ಬದುಕಿನ ಮೂಲ ಚೆಲುವನ್ನು ಚಿಮಿಸುವ ಅದರೊಳಗಿನ ಸಹಜ ಸಂಗೀತದ ಸ್ವರಾಲಾಪಗಳನ್ನು ಪರಿಚಯಿಸುವುದು. 1926ರಲ್ಲಿ ಅಹ್ಮದಾಬಾದ್‌ನಲ್ಲಿ ಒಂದು ಸಂಗೀತ ಸಮ್ಮೇಳನದಲ್ಲಿ ಮಾತನಾಡುತ್ತಾ ಅವರು ಹೇಳಿದ್ದರು : "....ನಮ್ಮಲ್ಲಿ ಸಂಗೀತ ಪ್ರಜ್ಞೆ ಇಲ್ಲದಿರುವುದರಿಂದ ಸ್ವರಾಜ್ಯದ ಕೆಲಸ ನಮ್ಮ ಮನಸ್ಸಿಗೆ ಮುಟ್ಟುವುದಿಲ್ಲ. ಕೋಟ್ಯಾಂತರ ಜನರು ಸಾಮರಸ್ಯದಿಂದ ಹಾಡಿದಾಗ ಅಥವಾ ದೇವರ ಹೆಸರನ್ನು ಒಕ್ಕೊರಲಿನಿಂದ ಹೇಳಿದಾಗ ಒಂದು ಬಗೆಯ ಸಂಗೀತ ಮೂಡುತ್ತದೆ. ಆಗ ನಾವು ಸ್ವರಾಜ್ಯದತ್ತ ಮೊದಲ ಹೆಜ್ಜೆ ಇಡುತ್ತೇವೆ. ಇಷ್ಟು ಸರಳವಾದದ್ದನ್ನೂ ನಾವು ಸಾಧಿಸದಿದ್ದರೆ ಸ್ವರಾಜ್ಯವನ್ನು ಗೆಲ್ಲುವುದು ಹೇಗೆ?"

ಆದರೆ ಒಂದು ಜನಾಂಗದ ಅನುಭವರಾಶಿಯ ಒಳಸುಳಿಗಳಿಂದ ಒಡಮೂಡುವ Commonsense ಅನ್ನು ಮೆಟ್ಟಿ ನೀತ ವಿಚಾರಗಳ, ವಿಜ್ಞಾನಗಳ ಬೃಹತ್ ಚಕ್ರಗಳು ನಮ್ಮ ತಲೆಗಳೊಳಗೆ ಗಡಗಡನೆ ತಿರುಗುತ್ತಿರುವಾಗ ಸಂಗೀತವಾದರೂ ಎಲ್ಲಿಂದ ಕೇಳೀತು? ಅದಕ್ಕೇ ನಾವು ಪದ್ಯವನ್ನು ಬಗೆವ ಬಗೆಯನ್ನು ಕಲಿತುಕೊಂಡು ಆನಂದಿಸುತ್ತೇವೆ.

ಸಂವಾದ ಇಂತಹ 'ಆನಂದ ವನ್ನು ಕೊನೆಗಾಣಿಸುವ ದಿಕ್ಕಿನಲ್ಲಿ ಕೆಲಸ ಮಾಡ ಬಯಸುತ್ತದೆ. ಈ ಕೆಲಸ ನಿಮ್ಮ Commonsense ಗೆ ಒಪ್ಪಿಗೆಯಾಗುವುದಾದರೆ ದಯವಿಟ್ಟು ನಮ್ಮೊಡನೆ ಬನ್ನಿ.



ಸಂವಾದದ ಮೊದಲ ಸಂಚಿಕೆ.... . ....

○ ....ಖಂಡಿತ ಗ್ರಾಮಾಂತರ ಪ್ರದೇಶದಲ್ಲಿ ಸಂವಾದವನ್ನು ಯಶಸ್ವಿಗೊಳಿಸುವಿರಿ ಎಂಬ ನಂಬಿಕೆ ನನಗಿದೆ.

–ಕುಂ. ವೀರಭದ್ರಪ್ಪ
ಗುಳ್ಯಂ. (ಆಂಧ್ರಪ್ರದೇಶ)

○ ಸಂವಾದ ನಿನ್ನೆ ಬಂದಿದೆ. ಕುತೂಹಲದಿಂದ ಓದಿದೆ... ಪತ್ರಿಕೆಯ ಗುಣಮಟ್ಟ ಚೆನ್ನಾಗಿದೆ. ಮೊದಲ ಸಂಚಿಕೆಯೇ ಆಕರ್ಷಕವಾಗಿ ಬಂದಿದೆ. ಪತ್ರಿಕೆ ನನಗೆ ತುಂಬಾ ಇಷ್ಟವಾಯಿತು.

–ಎಚ್. ಎಸ್. ವೆಂಕಟೇಶಮೂರ್ತಿ
ಬೆಂಗಳೂರು.

○ ಇನ್ನೊಂದು ಪತ್ರಿಕೆ ಖಂಡಿತ ಹೆಚ್ಚಲ್ಲ. ಸಂಚಿಕೆ ಚೆನ್ನಾಗಿ ಆರಂಭವಾಗಿದೆ... ಮಲ್ಲಾಡಿಹಳ್ಳಿಯಂಥ ಹಳ್ಳಿಗಾಡಿನಿಂದ ಇಂಥ ಒಂದು ಪತ್ರಿಕೆ ತೆಗೆಯುವ ಸಾಹಸ ದೊಡ್ಡದು. ನಿಮಗೆ ಶುಭ ಕೋರುತ್ತೇನೆ.

–ಗಿರಡ್ಡಿ ಗೋವಿಂದರಾಜ
ಧಾರವಾಡ.

○ ಈಗಿರುವ ಪತ್ರಿಕೆಗಳಿಗಿಂತ ಸಂವಾದ ಭಿನ್ನವಾಗಿ ಮೂಡಿಬರಬೇಕೆಂಬುದು ನಮ್ಮ ಬಯಕೆ. ನೀವೆಲ್ಲ ಪ್ರಯತ್ನ ಮಾಡಿದರೆ ನಿಮ್ಮಿಂದ ಹಾಗೆ ಮಾಡುವದು ಸಾಧ್ಯ.

––ಎಚ್. ದುಂಡಿರಾಜ್
ಉಡುಪಿ.

○ ಸಂವಾದ ತಲುಪಿತು. ಚೆನ್ನಾಗಿ ಬಂದಿದೆ. ಉಪಯುಕ್ತ ಲೇಖನಗಳಿವೆ ನಿಮಗೂ ಗೆಳೆಯರಿಗೂ ಅಭಿನಂದನೆಗಳು.

–ನರಹಳ್ಳಿ ಬಾಲಸುಬ್ರಮಣ್ಯ
ಬೆಂಗಳೂರು.

○ ಆರಿಸಿದ ಬರಹಗಳ ವಿಸ್ತಾರ ತುಂಬ ಕೆಲಸ ಮಾಡಲಿದ್ದೀರೆಂದು ಸೂಚಿಸಿತು ... ಪುಸ್ತಕಗಳ ಪರಿಶೀಲನೆ-ಸಂವಾದ ಸರಿಯಾದ ರೀತಿಯಲ್ಲಿ ಆಗಲಿಲ್ಲ, ಬರೀ ಪೇಪರುಗಳ ದುಷ್ಟ ವಿಮರ್ಶೆ ಅಷ್ಟೇ ಆಗಿ ನಿಂತಿದೆ. ಹೊಸ ರೀತಿಯ ಮೌಲ್ಯ ಮಾಪನ, ಪುನರ್ ಮೌಲ್ಯಮಾಪನದ ಕೆಲಸಕ್ಕೆ ಜಾಸ್ತಿ ಗಮನಹರಿಸಬೇಕೆಂದು ಕೋರುತ್ತೇನೆ.

—ಆರ್. ವಿಜಯರಾಘವನ್
ಶಿವಾರಪಟ್ಟಣ (ಕೋಲಾರ)

○ ಸಂವಾದ ತಲುಪಿದೆ. ಹೊಸ ಪತ್ರಿಕೆಯ ಬಗ್ಗೆ ಕೆಲವರು ತುಂಬಾ ಅಶಾಭಾವ ತಾಳಿದ್ದಾರೆ.

—ಎಂ. ಎಸ್. ಪರಮೇಶ್ವರ
ಅಂಬಿಕಾನಗರ (ಉ.ಕ.)

○ ನಿರೀಕ್ಷೆಗೂ ಮೀರಿ ಉತ್ತಮಾಂಶಗಳನ್ನು ಹೊಂದಿದೆ. ವಸ್ತು ವೈವಿಧ್ಯ ಎದ್ದು ತೋರುತ್ತಿದೆ. ಮುಂದಿನ ಸಂಚಿಕೆಯನ್ನು ನಿಜವಾಗಿಯೂ ಕುತೂಹಲದಿಂದ ಎದುರು ನೋಡುತ್ತಿದ್ದೇನೆ.

—ಮೋಹನದಾಸ್ ಭಾವಸ್‌ಕರ್
ಬೆಂಗಳೂರು-4.

○ ಮೊದಲ ಸಂಚಿಕೆ ಖುಷಿ ಕೊಟ್ಟಿತು. ಹಾರ್ದಿಕ ಶುಭಾಶಯಗಳು.

ಸ್ವಾಮಿನಾಥ ಗೌನಿಪಲ್ಲಿ.

○ ಕ್ರಾಂತಿಕಾರಕ ಸಾಹಿತ್ಯ ಮತ್ತು ಸಾಂಸ್ಕೃತಿಕ ಲೇಖನಗಳಿಗೆ ಇನ್ನೊಂದು-ಉನ್ನತ ವೇದಿಕೆಯಾಗುವುದರಲ್ಲಿ ಸಂದೇಹವಿಲ್ಲ.

—ಅಬ್ದುಲ್ ಹಮೀದ್
ಹಂದನಕೆರೆ (ತುಮಕೂರು)

ಸಂಚಿಕೆ ೩

ಮಾರ್ಚಿ-ಏಪ್ರಿಲ್ 1987

ಸಂವಾದ

ಸಂವಾದ ಪ್ರಕಾಶನ ಮಲ್ಲಾಡಿಹಳ್ಳಿ ಚಿತ್ರದುರ್ಗ ಜಿಲ್ಲೆ

ಈ ಸಂಚಿಕೆಯ ಲೇಖಕರು :

ಎಚ್. ಎಸ್. ಶಿವಪ್ರಕಾಶ, ಇಂಗ್ಲೀಷ್ ಅಧ್ಯಾಪಕ, ಸರ್ಕಾರಿ ಗೃಹ ವಿಜ್ಞಾನ ಕಾಲೇಜು, ಶೇಷಾದ್ರಿ ರಸ್ತೆ ಬೆಂಗಳೂರು-560001

ಟಿ. ಎಸ್. ರಾಮಸ್ವಾಮಿ, 73, 7ನೇ ಮೇನ್, ಸರಸ್ವತಿ ಪುರಂ ಮೈಸೂರು-1

ಡಾ|| ಶಂಬಾಜೋಷಿ, ಸಾಧನಕೇರಿ, ಧಾರವಾಡ

ಡಾ|| ಶಿವರಾಮ ಕಾರಂತ, ಸಾಲಿಗ್ರಾಮ, ದಕ್ಷಿಣ ಕನ್ನಡ

ಪ್ರೊ. ಬಿ. ಕೃಷ್ಣಪ್ಪ, ಪ್ರಾಂಶುಪಾಲರು, ವಿಶ್ವೇಶ್ವರಯ್ಯ ವಿಜ್ಞಾನ ಕಾಲೇಜು, ಬೊಮ್ಮನಕಟ್ಟೆ, ಭದ್ರಾವತಿ

ವಿ. ಎನ್. ಲಕ್ಷ್ಮಿನಾರಾಯಣ, 14-ಎ, 15ನೇ ಕ್ರಾಸ್, ಜಯನಗರ, ಮೈಸೂರು-570014

ಎಚ್. ಡುಂಡಿರಾಜ್, ತಾಂತ್ರಿಕ ಅಧಿಕಾರಿಗಳು, ಕಾರ್ಪೊರೇಷನ್ ಬ್ಯಾಂಕ್, ಪಿ. ಬಿ. ನಂ. 64, ಉಡುಪಿ-576101. ದ. ಕ.

ಸವಿತಾ ನಾಗಭೂಷಣ, c/o ನಾಗಭೂಷಣ, ಆಕಾಶವಾಣಿ, ಮಂಗಳೂರು

ಎಂ. ರಾಜು, c/o ಪಿ. ಮುನಿಸ್ವಾಮಿ, ಹೊಸಮನೆ ಮುಖ್ಯರಸ್ತೆ, ಶಿವಮೊಗ್ಗ

ಪ್ರೊ. ಪಾಂಡುರಂಗ ಉಡುಪ, ಮುಖ್ಯಸ್ಥರು, ಕನ್ನಡ ವಿಭಾಗ, ಡಿ. ವಿ. ಎಸ್ ಕಾಲೇಜು, ಶಿವಮೊಗ್ಗ.

ಸಂವಾದ-೩

ಈ ಸಂಚಿಕೆಯ ಸಂಪಾದಕರು

ಬಿದರಹಳ್ಳಿ ನರಸಿಂಹಮೂರ್ತಿ

ಖಾಸಗಿ ಪ್ರಸಾರಕ್ಕಾಗಿ

Printed Published and Edited for Samvada Prakashana
Malladihalli post Chitradurga Dist. 577 531.

Printed at :
Mubeen Printers
Khadikendra Road, Malladihalli
Chitradurga Dist. 577 531.

ರಿಕ್ಯೂನ ಕೊನೆಯ ಟೀ ಸಮಾರಂಭ

○ ಎಚ್. ಎಸ್. ಶಿವಪ್ರಕಾಶ

○

ರಿಕ್ಯೂ ಜಪಾನಿನ ಝೆನ್ ಗುರು. ಟೀ ಸಮಾರಂಭದ ಪ್ರವೀಣ. ಹಿದಯೋಷಿ ಚಕ್ರವರ್ತಿ ರಿಕ್ಯೂನ ಶಿಷ್ಯ. ಆ ಕಾಲದ ರಾಜಕೀಯ ಗೊಂದಲಗಳಲ್ಲಿ ತನ್ನ ಗುರು ತನ್ನ ವಿರುದ್ಧ ಫಿತೂರಿ ನಡೆಸುತ್ತಿರುವನೆಂಬ ಶಂಕೆ ಮೂಡಿ ಹಿದಯೋಷಿ ರಿಕ್ಯೂಗೆ ಗೌರವಾರ್ಹ ಮರಣ ದಂಡನೆ ವಿಧಿಸುತ್ತಾನೆ. ಆದರ ಪ್ರಕಾರ ರಿಕ್ಯೂ ಹರಾಕಿರಿ ಮಾಡಿಕೊಳ್ಳಬೇಕು. ಅದಕ್ಕೆ ಮೊದಲು ರಿಕ್ಯೂ ತನ್ನ ಆಪ್ತ ಗೆಳೆಯರೊಂದಿಗೆ ಟೀ ಸಮಾರಂಭ ಆಚರಿಸುತ್ತಾನೆ.

ಯುಗದ ಹಾಗೇ ಪ್ರತಿಯೊಂದೂ ಕ್ಷಣ.
ಚೆರ್ರಿ ತೋಟದ ಗಾಳಿ
ತರುತ್ತದೆ ಮತ್ತೊಮ್ಮೆ
ಉರುಳಿ ಹೋದ ವಸಂತಗಳ ಗಂಧ
ಹಕ್ಕಿ ಹಾಡು

ಟೀ ಕೋಣೆ ನಡುವೆ
ಅಂಗೈಯಗಲ ಹಳದಿ ಅರಳಿರುವ ಹೂದಾನಿ–
ಎಲ್ಲಿ ಎಲ್ಲಿ ಅದರ ನೂರಾರು ಸೋದರರು !

ಎಲ್ಲಿ ಹೋಗುತ್ತವೆ
ಎಲ್ಲಿಂದ ಬರುತ್ತವೆ
ಒಂದೂ ಗೊತ್ತಿಲ್ಲ
ಈ ಕೋಣೆಗೆ, ಟೀ ಪಾತ್ರೆಗೆ

ಕುದಿ ಬಂದ ನೀರಲ್ಲಿ ಕೇಳಿಸಿತು ರಿಕ್ಯೊಗೆ
ಹೋಗಿ ಬನ್ನಿ ವಸಂತಗಳೆ
ಹೋಗಿ ಬನ್ನಿ ವಸಂತಗಳೆ
ಮಂಜಲ್ಲಿ ಹಾಡುವ ಹಕ್ಕಿ

ಒಲೆಯು ಮಂದ ಬೆಳಕು
ಉರಿದು ಇತರ ಗೆಳೆಯರ ಕಣ್ಣಲ್ಲಿ
ನೆನಪು ಬಂತು ಮತ್ತೆ :
ಸಾಯಬೇಕು ರಿಕ್ಯೊ–ಇವತ್ತೇ
ತನ್ನ ಕೈಯಿಂದಲೇ ;
ಚಕ್ರವರ್ತಿಯ ಆಜ್ಞೆ

ಸುರಿದುಕೊಂಡರು ಟೀಯನ್ನು
ಖಾಲಿ ಬಟ್ಟಲುಗಳೊಳಗೆ
ಸುರಿದುಕೊಳ್ಳುವ ಹಾಗೆ ತಮ್ಮ ಜೀವವನ್ನು.
ಒಂದೊಂದು ಗುಟುಕು ಟೀಯಲ್ಲಿ
ಕೋಟಿ ಕೋಟಿ ಕಲ್ಪಗಳು

ಆಮೇಲೆ
ಒಂದೊಂದು ಕೈಯಲ್ಲು ಒಂದೊಂದು ಖಾಲಿ ಬಟ್ಟಲು
ಒಂದನ್ನು ಬಿಟ್ಟು–
ಅಪ್ಪಳಿಸಿದ ರಿಕ್ಯೊ ತನ್ನ ಬಟ್ಟಲನ್ನು ನೆಲಕ್ಕೆ
"ಕುಡಿಯದಿರಲಿ ಯಾರೂ ಈ ಪಾಪಿಷ್ಟ ಬಟ್ಟಲಿಂದ"

ಆಮೇಲೆ
ಎಲ್ಲ ಮಿಂಚಿನ ಹಾಗೆ;
ಕತ್ತಿ, ಕತ್ತಿ ಬಿಂಬಿಸಿದ ಕಣ್ಣುಗಳು
ಕಣ್ಣುಗಳಲ್ಲಿ ಕಣ್ಣುಗಳು

ಚಿಮ್ಮಿದ ರಕ್ತ
ಕೋಟಿ ಬುದ್ಧರು ಕಲ್ಪಗಳು

ಹೊಳೆಯುತ್ತಾ ಇದೆ ಕತ್ತಿ ಮಿಂಚಿನ ಹಾಗೆ
ರಕ್ತ ಚೆರ್‍ರಿಯ ಹಾಗೆ

ಶಂಸ್ ತಬ್ರೀಜ಼್

೨

ಶಂಸ್ ತಬ್ರೀಜ಼್ ಹನ್ನೆರಡನೆಯ ಶತಮಾನದ ಸೂಫಿ ಕವಿ. ರೂಮಿಯ ಗುರು-ಪ್ರಿಯತಮ. ರೂಮಿಯಂತಹ ಘನತೆವೆತ್ತ ಮೌಲಾನಾ ಅರೆ-ಹುಚ್ಚ ಶಂಸ್‌ನ ಬೆನ್ನುಬಿದ್ದದ್ದನ್ನು ಕಂಡು ರೂಮಿಯ ಅನುಯಾಯಿಗಳು ಕುಪಿತರಾಗಿ ಶಂಸ್‌ನ ಚರ್ಮ ಸುಲಿದು ಅವನನ್ನು ತುಂಡರಿಸಿದರು. ಆಗ ರೂಮಿ ಅವನ ಸುಲಿದ ಚರ್ಮವನ್ನು ಕೊರಳ ಹಾರವಾಗಿ ಧರಿಸಿ ಉನ್ಮತ್ತನಾಗಿ ಕುಣಿಯುತ್ತ ಶಂಸ್ ಕುರಿತು ಕವಿತೆ ಕಟ್ಟಿ ಹಾಡಿದನೆಂದು ಪ್ರತೀತಿ. ಈ ಘಟನೆಗಳು ನಡೆದ ತುರ್ಕಿಸ್ಥಾನ ಆಗ ಮಂಗೋಲರ ವಶದಲ್ಲಿತ್ತು.

ಗುಲಾಬಿ ವನಗಳೆಲ್ಲ ಕಸಾಯಿಖಾನೆಗಳಾಗಿವೆ ಇಂದು
ಮಧುಶಾಲೆಯಲ್ಲಿ ಮತ್ತೊಬ್ಬ ಪ್ರೇಮಿ ವಧೆಯಾದ ಇಂದು
ಉಳಿದ ಯಾವ ದ್ರಾಕ್ಷಿ ತೋಟದ ಯಾವ ಗೊಂಚಲನ್ನೇ ಹಿಂಡು
ರಸವಿಲ್ಲ
ರಕ್ತ ಬರೀ ರಕ್ತ
ಶಂಸ್ ತಬ್ರೀಜ಼್ ನಿನ್ನ ರಕ್ತ

ಹೇಳು ಸಾತಿ ಹೇಳು
ಯಾವ ಕಡೆಗಿದೆ ಮಕ್ಕಾದ ರಸ್ತೆ
ಎಲ್ಲಿ ಹೂತು ಹೋಗಿದೆ ಜಂಜಂನ ಜೀವ ಜಲ

ಕಾಬಾ ಕಳುವಾದ ಹಾಗೆ
ಖುರಾನು ಕುಪ್ಪು ಹಿಡಿದ ನೆಲದಿಂದ ಸೀದಾ ಹೊರಟಂತೆ
ಕನಸೋ ನನಸೋ
ಕೋನ್ಯಾದ ತುಂಬಾ........

ಕಾಡಿಂದ ಸಿಂಹಗಳ ಫವುಜು
ನಾಡುನಗರಗಳೆಲ್ಲಾ
ಬರೀ ಮೂಳೆರಾಶಿ
ಬರೀ ಹೆಣಗಳ ನಾತ

ಅಲ್ಲಾ ಹೋ ಅಕ್ಬರ್... ....
ನಾವೇನು ನಿನ್ನ ಚದುರಂಗದಲ್ಲಿ ದಾಳಗಳು
ನಾವೇನು ನಿನ್ನ ಕೊರಳಿಗೆ ಕೊಳಲು
ನಾವೇನು ನಿನ್ನ ಗಾಳಿ ಬೀಸುವ ಕಡೆ
ಪಟ ಪಟ ಬಡಿವ ಬಾವುಟಗಳು

ಹೇಳು ಎಲ್ಲಿದೆ ಕತ್ತಿ
ಮುಸ್ತಫಾ ಕೊಟ್ಟ ಶಾಂತಿಯ ಕತ್ತಿ.
ಮತ್ತೊಬ್ಬ ತಾಯ ಮೊಲೆ ಕಡಿದು
ಮತ್ತೊಂದು ಕೂಸನ್ನು ನೆಲಕ್ಕೆ ಅಪ್ಪಳಿಸುತ್ತಿರುವ
ಮಂಗೋಲ ರಾಕ್ಷಸರ ನಾಡಲ್ಲಿ
ನಿಲ್ಲಿಸಿ ನಮಾಜನ್ನು ಬಂಧುಗಳೆ
ಎಲ್ಲಿ ಕೊಂದು ಹಾಕಿದರು ಹೇಳಿ ನನ್ನ ಪ್ರಿಯತಮನನ್ನು
ಎಲ್ಲಿ ಹೂತು ಹಾಕಿದರು ಅವನ ಕಣ್ಣ ಕದಿರರನ್ನು
ಕವಿತೆ ಜೇನಿಕ್ಕಿದ್ದ ಹೃದಯ ಕುಂಭವನ್ನು

ರೂಮಿ ಹುಚ್ಚ ಅನ್ನುವ ಜಗವೇ
ನಿನ್ನ ಪಾಲಿನ ನರಕ ಇನ್ನೂ ಉಳಿದಿದೆ
ನನ್ನ ಪಾಲಿನ ಸ್ವರ್ಗ ಕಳೆದು ಹೋಗಿದೆ

ಆ ಸ್ವರ್ಗಸ್ಥಳಿತ್ತು ಶಂಸ್‌ನ ಕಣ್ಣಂಚಲ್ಲಿ
ಅವನೇ ಗಂಡ ನನ್ನ ಪಾಲಿಗೆ
ಅವನೇ ಕೂಸಾಗಿ ತುಟಿ ಇಕ್ಕಿದ್ದ ನನ್ನೆದೆ ಹಾಲಿಗೆ
ಅವನೇ ನನ್ನ ಕನಸಿನ ನಾಲಗೆ
ಮಕ್ಕಾ ಇತ್ತು ಅವನ ಪಕ್ಕದಲ್ಲೇ
ಮದೀನಾ ಅವನ ಬದಿಯಲ್ಲೇ
ಮುಸ್ತಫಾ ಅವನ ಎದೆಯಲ್ಲೇ

ಎಲ್ಲಿತ್ತು ಲಿಂಗ ನಮ್ಮ ಪ್ರೇಮಕ್ಕೆ
ಎಲ್ಲಿತ್ತು ಅಂಗ ನಮ್ಮ ಪ್ರೇಮಕ್ಕೆ

ಮರುಭೂಮಿಯಲ್ಲಿ ಅಲೆಯುವವರಿಗೆ
ತಿಳಿನೀರು ಬುಗ್ಗೆ ತೋರುವ ಖಿಜಿರ್
ಎಲ್ಲಿದೆ ಹೇಳು
ಎಲ್ಲಿದೆ ತೋರು

ಕಸಾಯಿಖಾನೆಗಳಲ್ಲಿ ಗುಲಾಬಿ ವನ ನೆಡುವ
ವಧಾ ಸ್ಥಾನಗಳನ್ನು ಮಧುಶಾಲೆ ಆಗಿಸುವ
ರಕ್ತವನ್ನೇ ರಸವಾಗಿಸುವ
ನನ್ನ ಮೂಳೆಗಳ ರಸವಾಗಿರುವ
ನನ್ನ ಪ್ರಿಯಕರ ಶಂಸ್‌ನ
ಮಾಂಸದ ತುಕಡ

ಎಲ್ಲಿದ್ದರೂ ಬನ್ನಿ
ಅಲ್ಲಿಯೇ ಸೇರಿ ದರವೇಶಿ ಬಾಂಧವರೆ
ಅಲ್ಲಿ ಮಾತ್ರ ಉಳಿದಿದೆ ಮಾಂಸ
ಅಲ್ಲಿ ಮಾತ್ರ ಉಳಿದಿದೆ ಮಧು

ಇಲ್ಲಿ ಮಾತ್ರ ಉಳಿದಿದೆ ಕವಿತೆ

ಬೆಟ್ಟಗಳ ಮಗಳಾಗಿ ಹೋಗು ದಕ್ಷನ ಮಗಳೆ

೩

ನೀನು ತಿರುಗಿ ಬರುವೆ ಅಂತ
ಕರಗದೆ ಕಾಯುತ್ತವೆ ಈ ನೂರು ಮಂಜಿನ ಬೆಟ್ಟ
ಅಲ್ಲಿ ಕೊರೆವ ಗವಿ ಕತ್ತಲಿನಲಿ
ಅರಳುತ್ತಲೇ ಇರುತ್ತವೆ ನೀಲಿ ಮಂಜು ತಾವರೆ

ಕೈಯ ಕೊಳ್ಳಿ ಮಾಡಿ
ಜೀವದೆಣ್ಣೆ ಬತ್ತಿ ದೀಪಗಳನು
ಉರಿಸುತ್ತ ಕಣ್ಣಲ್ಲಿ ಸುತ್ತ
ನಿನ್ನ ಬರವಿನ ಹಗಲು ಇರುಳಿನ
ಗೆಜ್ಜೆಯುಲಿವಿಗೆ ಹೆಜ್ಜೆಗಳನಿಕ್ಕುತ್ತ
ಹೊಟ್ಟೆ ಎದೆಗಳ ಡೊಳ್ಳು ಬಾರಿಸುತ
ಪಾತಾಳ ಮೆಟ್ಟಿ
ಗೌರಿಶಂಕರ ನೆತ್ತಿ ನಡುಗುವ ಹಾಗೆ
ಆಗಸದ ಭಿತ್ತಿ ಹರಿಯುವ ಹಾಗೆ
ನೆಗೆನೆಗೆದು ಕುಪ್ಪಳಿಸಿ ಬೆವಬೆವೆತು
ದಣಿದುರುಳಿ ಮತ್ತೆದ್ದು
ಕುಣಿಯುತ್ತಲೇ ಇರುತ್ತಾರೆ
ಈ ನಂದಿ ಆ ಭೃಂಗಿ
ಭೂತಗಣಗಳ ಮಧ್ಯ

ದೇವಪುತ್ರಿಗೂ ಆ ಜೀವ ತಿರುಕನಿಗೂ
ಯಾವ ಯಾತರ ನಂಟು
ಹೊತ್ತಾಯಿತು ಹೊರಡು
ಕಟ್ಟಿಕೊ ನೆನಪಿನ ಗಂಟು
ಮುತ್ತುಗಳ ಸರನತ್ತು ಬೆಂಡೋಲೆ

ಅಪ್ಪುಗೆ ಸೋಕುಗಳ ಜರತಾರಿ ಸೀರೆ
ಕಟ್ಟಿಕೊ ಕಟ್ಟಿಕೊ ನೆನಪಿನ ಗಂಟು

ಒಡಲು ಸುಡುಗಾಡಲ್ಲಿ
ಎಲುಬಿನ ಚೂರು ಕರುಕು ಬಾಡು
ಬಿಸುಟ ವಿಮಾನಗಳ
ನಡುವೆ ನಾನಿಲ್ಲಿ ಒಬ್ಬೊಂಟಿ
ಪಕ್ಕ ಈ ಮುದಿಯೆತ್ತು

ನೀ ಬರುವೆ ಬರುವೆ ಎಂಬ ಕನಸಿನ
ಇರುವೆ ಕಚ್ಚಿದರೂ
ಮರೆತು ಒರಗಿರುವ ಭೂತಗಣಗಳ
ನಡುವೆ

ಶಕ್ತಿಯಿಲ್ಲದೆ ಶಿವನ ಮೈಯೆಲ್ಲ ಶವವಾಗಿ
ಬತ್ತುವಳು ಗಂಗೆ ತಲೆಯಲ್ಲಿ
ಕಂದುವನು ಚಂದ್ರ ಮುಡಿಯಲ್ಲಿ

ನನ್ನ ಎದೆಗೊರಗಿ ಹಗಲುಗನಸುತ್ತಿದ್ದ
ನಿನ್ನ ಹೆರಳುಗಳ ಕಪ್ಪು ಹೊಳಪಲ್ಲಿ
ಹೊಕ್ಕು ಬಾಗಿದ ಸೂರ್ಯ ಕಿರಣಗಳ ಬಿಲ್ಲು
ಒಡೆದು ಕಾಮನಬಿಲ್ಲು
ಎಷ್ಟು ಕಾಮನಬಿಲ್ಲು ಲೋಕಗಳು

ಭೂತಗಳ ಬೂದಿಬುಡುಕನ
ಬುಡುಬುಡುಕೆಯುವನ
ಸುಡುಗಾಡು ಮೈಯಲ್ಲಿ

ಹೋಗು ದಕ್ಷನ ಮಗಳೆ
ದಶದಿಕ್ಕುಗಳ ಜ್ವಾಲೆ ಕರೆಯುತ್ತಿದೆ ನಿನ್ನ
ಮೂಲೋಕಗಳ ಯಜ್ಞಶಾಲೆ ಕರೆಯುತ್ತಿದೆ ನಿನ್ನ
ಮರೆತ ವಿಲಯದ ಧೂಮಮಾಲೆ ಕರೆಯುತ್ತಿದೆ ನಿನ್ನ
ಬಾರೆ ಸತಿ ಬಾಯೆಂದು
ಪತಿಯಿದ್ದರೂ ನಿನಗೆ ಸತಿಯೆಂದು

ಕ್ಷಾಮಡಾಮರ ಡಮರು ತೊಗಲು ಹರಿಯುವ ಹಾಗೆ
ಕ್ರೂರ ಕರ್ಕಶ ಮೊರೆತ ಹಾಡು ಅನ್ನುವ ಹಾಗೆ
ಅಸುರರೇ ಸುರರಾಗಿ ಸುರರೆ ಅಸುರರ ಹಾಗೆ
ಕೇಕೆ ಕೇಳಿ ನಡುವೆ
ಮಂತ್ರ ಘೋಷಣೆ ನಡುವೆ
ನರರ ವರಕಿಗರ ಮಾಂಸ ಭಕ್ಷಣೆ ನಡುವೆ

ನೀ ಹೋಗಿ
ಶಿವನೆಲ್ಲಿ ಭವನೆಲ್ಲಿ
ಅಂತ ಬಿದ್ದಾಗ ಉರಿಯಲ್ಲಿ
ನಿನ್ನ ಜೊತೆ ಬೂದಿ
ಸುರಭೂಜಧೇನುಗಳು-ಚಿಂತಾಮಣಿಗಳು

ಕೇಕೆ ಕೇಳಿರಿ ನಡುವೆ
ಮಂತ್ರ ಘೋಷಣೆ ನಡುವೆ
ವರವರಗುಟ್ಟಿ ನರಕ ನನ್ನೊಳಗೆ
ನಾನು ನರಕಗಳೊಳಗೆ
ಒಡಲು ಸುಡುಗಾಡೊಳಗೆ
ಎಲುಬು ತುಣುಕುಗಳೊಳಗೆ
ಜೀವ ಸಂಚಾರಗಳು

ಹುಳುಗಳೂ ಫಣಿಯಾಗಿ
ಹೆಡೆಯೆತ್ತಿ
ಒಲೆದು ನೋವು ಪುಂಗಿಗೆ
ಅಚರವೂ ಚರವಾಗಿ
ಸಿಡಿಲು ಡಮರುಗ ಅಗೋ
ನರರೂಪಿ ಮಿಂಚುಬಳ್ಳಿ ಸಂಚಯು ಇಗೋ

ಕಡಲೆಲ್ಲ ಬಡಬಾನಲದ ತವರಿನ್ನು
ಇನ್ನು ರಕ್ತದ ವರ್ಷಾ ಕಾಲ
ಮಲಯ ಮಾರುತ ಇನ್ನು
ಪ್ರಲಯ ಜಂಝಾವಾತ

ಇನ್ನು ತಾಂಡವ ನೃತ್ಯ

ಅಗೋ ಬಂದ
ಇಗೋ ನಿಂದ
ಭೂತಗಣಗಳ ನಾಥ
ವೀರಭದ್ರ
ಅಹಹಾ ಕರುಣಾಸಮುದ್ರ

ದೇವಿಯರ ಅಳಲು ಮುಟ್ಟಿದರು ನಭವನ್ನು
ಕಿವುಡಾಗಿ ಕುರುಡಾಗಿ ಕಡಿಯುವನು
ದೇವದೇವರ ರುಂಡ
ಕೆಡಹುವನು ಸ್ವರ್ಗ ವೈಭವ ಸ್ಥಂಭ

ಕೇಕೆಕೇಳಿಗಳಲ್ಲಿ
ಮಂತ್ರಘೋಷಣೆಯೆಲ್ಲಿ

ಅವನಿಕಾಂತನೆ ಅವನೆ ಬೇಕೆಂದು ಎಂದು
ಭವಭವದಿ ಜಿಂದು
ಮತ್ತೆ ನೀನು ಹುಟ್ಟುವುದು ಬೆಟ್ಟಗಳ ಮಗಳಾಗಿ
ಘಟ್ಟಗಳ ಬದಿಯಲ್ಲಿ
ಬಯಲು ಬಟ್ಟೆಗಳಲ್ಲಿ
ಕಾಡುಗಳ ಒಡವಾಡಿ ಬಾನಾಡಿ
ಕೋಗಿಲೆ ಗಿಳಿಯು ಜೊತೆ ಮಾತಾಡಿ
ಸಿಂಹಶಾರ್ದೂಲಗಳ ಜೊತೆ ಆಟಗಳಾಡಿ
ಬೆಳಕು ಬೇಡರ ರಸಸಿದ್ಧಯೋಗಿಗಳ
ಜೊತೆ ಜೊತೆ ಅಲೆದಾಡಿ
ಹೊಸಜಗದ ಕಡಲ ಕರೆ
ನದಿ ತೀರಗಳ ಪಕ್ಕ
ಹಸುರಾದ ನಗರಗಳ ಪಕ್ಕ
ಹಸಿವಿರದ ಹಳ್ಳಿಗಳ ಗಲ್ಲಿ ಬೀದಿಗಳಲ್ಲಿ
ಅರಸಿ ಅರಸುತ ಬರುವೆ

ಕೋಟಿ ದೇಹಗಳಲ್ಲಿ

ಕೋಟಿ ಕೊರಳುಗಳಲ್ಲಿ
ಬೆಳದಿಂಗಳೆ ಬಿಸಿಲೆ
ಕೋಗಿಲೆಯೆ ಮಾಮರವೆ
ಹೇಳಿ ಎಲ್ಲಿದೆ ಹಾದಿ
ನಾ ತೊರೆದು ಬಂದ ಭವಹರನ ಭವನಕ್ಕೆ
ಕಾದಿರುವೆ ಕಾದಲೆ ನಾನು ನಿನಗೆಂದು
ಮರುಭೂಮಿ ಹಿಮರಾಶಿ ಸುಡುಗಾಡುಗಳ ಜೊತೆಗೆ
ಕೋಟಿ ಕಾಯಗಳಲ್ಲಿ
ಯೋಗ ಮುದ್ರೆ ತಳೆದು

ದೇವ ಮಾನವನಾದ ಆ ಯುಗದ ಮೊದಲು
ನೀನು ನನ್ನ ಇಹಗಳ ಒಡತಿ
ನಾನು ನಿನ್ನ ಮಹಗಳ ಒಡೆಯ

ಬೆಸೆದು ಅರೆಚಣ
ಬಿರಿಸಿ ಮರುಚಣ ಬಿಡಿಸುವ
ಅಪ್ಪುಗೆ ಸಿಡಿಮುತ್ತೆ
ಈ ಕ್ಷಣವೆ
ನಮಗೆಲ್ಲ

ತೀಡಿಕೊ ಮುಂಗುರುಳು
ಹೋಗು ಹೋಗಿ ಬಾ
ದಕ್ಷನ ಮಗಳೆ

"ನಾಗಾರ್ಜುನನೇಕೆ ತಲೆಯ ಕಡಿದುಕೊಂಡು"

— ಅಲ್ಲಮ

ಳ

(ನಾಗಾರ್ಜುನ ೨ನೇ ಶತಮಾನದ ಮಹಾಯಾನ ದಾರ್ಶನಿಕ, ಅನುಭಾವಿ, ತಾಂತ್ರಿಕ, ರಸಸಿದ್ಧ, ತಾರ್ಕಜ್ಞ, ವಿಜ್ಞಾನಿ. ಶಾತವಾಹನರ ಕಾಲದಲ್ಲಿ ಬದುಕಿದವನು. ಶಾತಕರ್ಣಿ ಚಕ್ರವರ್ತಿಗೆ ಸೆರೆಯಾಳುಗಳನ್ನು ನೋಡಿಕೊಳ್ಳುವುದರ ಬಗ್ಗೆ ಚಾಣಕ್ಯನ ಅರ್ಥಶಾಸ್ತ್ರದ ಪರಿಕಲ್ಪನೆಗಳನು ಟೀಕಿಸಿ ಪತ್ರ ಬರೆದವನು. ತನ್ನ ರಸಸಿದ್ಧ ಯೋಗ ಸಾಧನೆಯಿಂದ ಸುವರ್ಣಕಾಯುವನ್ನು ಪಡೆದುಕೊಂಡಿದ್ದ. ೨೦೦ ವರ್ಷ ಬಾಳಿದ ತನ್ನ ಕಾಲದ ವೈರುಧ್ಯಗಳಿಂದ ಬೇಸತ್ತು ತನ್ನ ಶಿಷ್ಯ ಆರ್ಯ ದೇವನಿಂದ ತನ್ನನ್ನು ತಾನೇ ಕೊಲ್ಲಿಸಿಕೊಂಡ.)

"ನಾಗಾರ್ಜುನ"

೧ ಬುದ್ಧ ಬೋಧಿಸತ್ತ್ವರ ಪ್ರಾರ್ಥನೆ

ಭವದ ಚಿಪ್ಪೊಡೆದು
ದಿವದ ಗಡಿ ದಾಟಿ
ಬರದೆ ಹೋಗದೆ ಹೋದ
ಸಿದ್ಧರೆ
ಬುದ್ಧರೆ

ಕರೆದರೂ ಕೇಳಿಸದ ನದಿ ದಂಡೆ ಆಚೆ
ಬೋಧಿ ಫಲ ತರಿದುಂಡು
ಫಲದಾಸೆ ನೀಗಿ

ಯಾರು ಕೂಗಿದರೆಂದು
ಯಾರು ಕೊರಗಿದರೆಂದು
ಮರುಗಿ ಮರಳಿದವಳೆ
ಮರಳ ಕಣದ ಹಾಗೆ ಗಣತಿ ಮೀರಿದ
ಬೋಧಿಸತ್ವರೆ
ಭವಂತರೆ

ಆ ದಂಡೆ ಈ ದಂಡೆ
ನಡುವೆ
ಎಲ್ಲಿ ಸೇತುವೆ ?

೨ ನಾಗಾರ್ಜುನನ ಶಂಕೆ

ಹೊಳೆ ಬಿಸಿಲು ಹೊನ್ನ ಕಳಶಗಳು
ಬಿಳಿಮುತ್ತು ಹವಳ ನೀಲಮಣಿ ಪಚ್ಚೆ
ಹೊರೆತರುವ ಮಣ್ಣು ಗಾಡಿಗಳು
ಕಡಲಾಚೆ ನಾಡುಗಳ ಖ್ಯಾತಿ ಕೆಣಕುವ
ಹರಿತುರುಗ ಸೇನೆ ಶಸ್ತ್ರಾಗಾರಗಳು
ವಿಶಾಲ ಮಂದಿರ ವಿಹಾರಗಳು
ಸಂಗೀತ ನಾಟ್ಯ ಗೋಷ್ಠಿಗಳು
ತರ್ಕ ತಂತ್ರ ಸಿದ್ಧಾಂತ ಶಾಸನ
ಸಾರ ಗಟ್ಟಿ ಗಟ್ಟಿ
ಕಟ್ಟಿಟ್ಟ ಗ್ರಂಥರಾಶಿ
ಎಲ್ಲೆಲ್ಲೂ ಯಾಕೆ ನಿಟ್ಟುಸಿರು
ಯಾಕೆ ಹಸಿವು
ಯಾಕೆ ನೋವು
ಪಥಪಥದ ಮಧ್ಯ ಪಥಭ್ರಾಂತ
ಕಾಡುಕತ್ತಲೆ ದಂಡೆತ್ತಿ
ಕುರಿತು ರಾಜಧಾನಿಗಳಲ್ಲಿ
ಎದೆಎದೆಗೂಡಲಿ ಸಿಂಹ ಶಿಬಿರ

ಗುಳ್ಳೆನರಿಗಳ ನ್ಯಾಯ
ಬುದ್ಧಾಸನದಲ್ಲಿ ಬಕನ ಧ್ಯಾನ

೩ ಶಾತಕರ್ಣಿಗೆ ನಾಗಾರ್ಜುನನ ಪತ್ರ

ಶಾತಕರ್ಣಿ
ಶಾತವಾಹನ ಚಕ್ರವರ್ತಿ
ಶಸ್ತ್ರ ಶಾಸ್ತ್ರ ಪಂಡಿತ
ಶತ್ರುದಮನ ನೀತಿಗಳಲ್ಲಿ ನಿಷ್ಣಾತ
ಗೋದಾವರಿ ನೀರು
ದಕ್ಷಿಣ ಜಲಧಿ
ಶ್ರೀಗಿರಿ ಸಂಪತ್ತು
ಸ್ವಂತ ಸ್ವತ್ತೆಂದು ಸ್ವಾಯತ್ತೆ ಪಡೆದವನೆ
ಇಷ್ಟಾದರೂ ಹೇಳು
ಬಕ ಎಂದು ಯೋಗಿಯಾದೀತು
ನಿನ್ನ ಸಾಮ್ರಾಜ್ಯದಲ್ಲಿ
ಪಂಜರದ ಗಿಣಿ ಯಾವಾಗ ಕವಿಯಾದೀತು
ಅದನ್ನು ನುಂಗಿ ಹಾಕಲೆಂದೆ ಹೊಂಚು ಹಾಕಿದ ಬೆಕ್ಕು
ಯಾರನ್ನು ಎಂದು ಹೇಗೆ ಕಾದಿತ್ತು
ಹೆಮ್ಮೀನು ಕಿರು ಮೀನ ನುಂಗಿ
ಮೊಸಳೆ ಹೆಮ್ಮೀನ ನುಂಗಿ
ತಿಮಿಂಗಿಲ ಮೊಸಳೆಯ ನುಂಗಿ
ಅರ್ಥಶಾಸ್ತ್ರದ ಮತ್ಸ್ಯ ನೀತಿ ಕಡಲು
ಎಂದು ನೆಲವಾದೀತು
ಸುಖದ ನೆಲೆಯಾದೀತು

ಒಂದೇ ಒಂದು ಸಲ ಒಬ್ಬನ್ನ ಕೊಂದವನ
ಮತ್ತೆ ಮತ್ತೆ ಕೊಲ್ಲುವ
ನೀತಿಯ ಗಲ್ಲುಗಂಬಗಳ
ನಿನ್ನ ಕ್ರೂರ ಕಾರಾಗೃಹಗಳಲ್ಲಿ
ಕರುಣೆ ಎಲ್ಲಿತ್ತು

ಯಾಕೆ ಅಲಕಾವತಿಯಲ್ಲಿ ದಾರಿದ್ರ್ಯ
ಯಾಕೆ ನಂದನಗಳಲ್ಲಿ
ಏಡತೆಗಳ ಹಿಂಡು ಗುಣಿತ

೪ ಮತ್ತೆ ಬೋಧಿಸತ್ತ್ವರ ಪ್ರಾರ್ಥನೆ

ಯಾವ ಲೋಕದಲ್ಲೇ ಇರಲಿ
ಬರೀ ಒಂದು ಹುಲ್ಲುಕಡ್ಡಿ
ಅಥವಾ ಕೀಟ
ನೊಂದೀತು ಎಂದು
ಅರೆಗಣ್ಣು ತೆರೆದು ಪೊರೆವ ಕಟಾಕ್ಷದ
ಅವಲೋಕಿತೇಶ್ವರರೆ

ಕಾಡು ಹುಲಿಗೂ ತಾಯ ಮೊಲೆಯಾಗಿ ಮೂಡುವರೆ
ಕಾಡು ಸಿಂಹದ ಕೇಸರಿಯ ಬುಡದಲ್ಲಿ
ಸಣ್ಣ ಸಣ್ಣ ಕೀಟಗಳನ್ನು ಪೊರೆಯುವವರೆ
ಸುಡುಗಾಡು ಮೌನದ ನಡುವೆ
ಸುಳಿಗಾಳಿಯಾದವರೆ
ಜೀವ ನೋವಿಗೆ ಸಾವೆಂಬ ಮದ್ದು
ಸಾವೆಂಬ ಮದ್ದೊಳಗೆ ನಿರ್ವಾಣವಿದ್ದು
ಜೀವಿಗಳ ಬಾಯೊಳಗೆ
ಬೇಡ ಬೇಡ ಅಂದರೂ ತುರುಕುವವರೆ

ಪುಣ್ಣುಕಾಯುವ ಹೊನ್ನು ಗಣಿಯಾಗಿಸಿದ
ರಸಸಿದ್ಧ ವಿದ್ಯಾ ಪಾರಂಗತರೆ
ನಾನಾ ವಾದ ವಿವಾದ ಪ್ರತಿವಾದಗಳ
ಕುರುಡಾನೆ ಕುಂಭಸ್ಥಳಕ್ಕೆ
ಪ್ರಜ್ಞೆಯ ತೀಕ್ಷ್ಣ ಅಂಕುಶ ಚುಚ್ಚುವವರೆ

ನಿರ್ಜೀವಕ್ಕೂ ಜೀವ ಉಸುರಿ
ಹೃದಯಗಳ ಎಡೆಬಿಡದ ಡವಡವ ಕೇಳಿ ಬಂದ
ಮಹಾಕರುಣೆ ಮಹಾಯಾನ ಸಾರಥಿಗಳೆ

ಎಲ್ಲಿ ಸಾರಥ್ಯ ?
ಎಲ್ಲಿ ಸಾರ್ಥಕ್ಯ ?
ಎಲ್ಲಿ ರಹಸ್ಯವಿದ್ಯೆ ?

ಶೂನ್ಯವಾದರೂ ಪೂರ್ಣವಾಗಿರುವ
ಬುದ್ಧ ಗುರುವಿನ ಕೈಯ ತಿರುಪೆ ಪಾತ್ರೆ

೫ ಆರ್ಯದೇವನಿಗೆ ಆದೇಶ

ಹೀಗೇ ನನ್ನ ಜೊತೆ
ವರ್ಷಗಟ್ಟಲೆ ಪದ್ಮಾಸನಸ್ಥ
ಸಂಗಾತಿ ಶಿಷ್ಯ ಆರ್ಯದೇವ
ನೀನೂ ಈಗ ಗುರು

ಇನ್ನೂರು ಶಿಶಿರಗಳ ಬಳಿಕ
ಇನ್ನೇನು ಮಂಜು ಸೋನೆ
ಮೃತ್ಯು ಬಾಧೆ
ತಗುಲಿದರೂ ಕನಲದೆ ಕದಲದೆ ಉಳಿವ
ಈ ಪರುಷಕಾಯ
ಸಾಕಯ್ಯ

ಹೊತ್ತಿಸಿಕೋ ನಿನ್ನ ಕಣ್ಣಲ್ಲಿ ನನ್ನ ಬೆಳಕನ್ನು
ಕಟ್ಟಿಕೋ ನಿನ್ನ ಎದೆಯಲ್ಲಿ
ಕನಸು ಹಕ್ಕಿ ಗೂಡನ್ನು

ಈ ದಂಡೆ ಆ ದಂಡೆ
ನಡುವೆ
ಕುಸಿವರೂ ಸೇತುವೆ
ನದಿ ಹರಿಯುತ್ತಲೇ ಇದೆ
ನಡೆಸು ನಡು ನೀರಲ್ಲಿ ಎಚ್ಚರದಿಂದ
ಭವದ ದೋಣಿಗಳನ್ನು

ನಾಗಾರ್ಜುನ ಪರುಷ ಸೋಕಿದ ಬಳಿಕ
ಅಪಲೋಹ ನೀನಲ್ಲಿ

ಹೋಗಿ ಬರುವೆ ಇನ್ನು
ಹೊರಡು ನೀ ಮತ್ತೆ ಅಪಲೋಹಗಳ ಗಣಿಗೆ
ಅಳಲು ಕರೆಯುವ ಧಳೆಗೆ
ಹುಲ್ಲುಕಡ್ಡಿ ಕ್ರಿಮಿಕೀಟಗಳ ಮೊರೆಗೆ

○

ಭಾಷೆಯ ಬೆಳವಣಿಗೆ

ಒಂದು ಸಮಾಜದಲ್ಲಿನ ವ್ಯಕ್ತಿಗಳ ಹಿರಿಮೆ, ಸೂಕ್ಷ್ಮಜೀವನ, ಮಾನಸಿಕ ಜೀವನ, ಸಾಧನೆಗಳು ಬೆಳೆಯದೆಯೇ ಆ ಜನ ಸಮುದಾಯದ ಭಾಷೆಯು ಬೆಳೆಯಲಾರದು. ಅನುವಾದದಿಂದ ಆ ಕೆಲಸ ಮಾಡುತ್ತೇವೆ–ಎನ್ನುವುದು ಸರಿಯಲ್ಲ. ಅನುವಾದ, ಇಲ್ಲದ ಜ್ಞಾನವನ್ನು ಜನಕ್ಕೆ ದೊರಕಿಸಲು ಅನಿವಾರ್ಯದ ಕೆಲಸ. ಅದು ಆಗಲೇ ಬೇಕು. ಆದರೆ ಜನರು ತಾವಾಗಿ ತಮ್ಮ ತಾಯ್ನುಡಿಯಲ್ಲಿ ಅನುಭವಿಸಿದ್ದನ್ನು, ತಿಳಿದದ್ದನ್ನು, ತರ್ಕಿಸಿದ್ದನ್ನು, ಯೋಚಿಸಿದ್ದನ್ನು ಹೇಳಲು ಕಲಿತಲ್ಲದೆ ನುಡಿ ಬೆಳೆಯಲಾರದು.

—ಶಿವರಾಮಕಾರಂತ
"ಬಿಡಿ ಬರಹಗಳು"

ಕೇಳು ಜನಮೇಜಯ

ಕುಮಾರವ್ಯಾಸನ ಕಾವ್ಯ ಕಲ್ಪನೆ : ಕೆಲವು ಸಾಧ್ಯತೆಗಳು.

○ ಟಿ. ಎಸ್. ರಾಮಸ್ವಾಮಿ

ಶ್ರೀ ವನಿತೆಯರಸನೆ ವಿಮಲರಾ
ಜೀವಪೀಠನ ಪಿತನೆ ಜನಕತಿ
ಪಾವನನೆ ಸನಕಾದಿ ಸಜ್ಜನನಿಕರ ದಾತಾರ
ರಾವಣಾಸುರ ಮಥನ ಶ್ರವಣಸು
ಧಾವಿನೂತನ ಕಥನ ಕಾರಣ
ಕಾವುದಾನತ ಜನವ ಗದುಗಿನ ವೀರನಾರಯಣ

ಗದುಗಿನ ವೀರನಾರಾಯಣ 'ಶ್ರೀವನಿತೆ'ಯ ಗಂಡ: ಆದರೂ ಅವಳಿಂದ ಅವನಿಗೆ ಸೃಷ್ಟಿಕಾರ್ಯಕ್ಕೆ ಎಳ್ಳಷ್ಟೂ ಪ್ರಯೋಜನವಿಲ್ಲ. ಏಕೆಂದರೆ, ಮುಂದಿನ ಸಾಲಿನಲ್ಲಿ 'ರಾಜೀವ ಪೀಠ'ನನ್ನು ನೆನಪಿಸುತ್ತಾ ತನ್ನ ಹೊಕ್ಕುಳಿಂದಲೇ ಬ್ರಹ್ಮನನ್ನು ಸೃಷ್ಟಿಸಿದ ಪದ್ಮನಾಭನ ಸ್ವಯಂಭೂ ಕಲ್ಪನೆಯನ್ನೂ ಕವಿ ತರುತ್ತಿದ್ದಾನೆ. ಹೀಗೆ ಸ್ವಪರಿಪೂರ್ಣನಾದ ದೈವದೊಂದಿಗೆ, ಇನ್ನೊಂದು ಮೈಯ ಅಗತ್ಯವಿರುವ ಅಪರಿಪೂರ್ಣ ಶ್ರೀ ವನಿತೆಯರಸನನ್ನು ಬೆರೆಸುವುದಾದರೂ ಹೇಗೆ ? ಈ ಬೆರಕೆ ಇಲ್ಲಿ ಅಷ್ಟೇ ಬಂದಿದ್ದರೆ ಆಕಸ್ಮಿಕ ಎಂದುಕೊಂಡು ಸುಮ್ಮನಿರಬಹುದಿತ್ತು. ಆದರೆ ಈ ದ್ವಂದ್ವ ಕಾವ್ಯದಲ್ಲಿ ಉದ್ದಕ್ಕೂ ಕುಮಾರವ್ಯಾಸನ ದೈವಕ್ಕೆ ಅಂಟಿಕೊಂಡೇ ಬಂದಿದೆ.

ಪದ್ಯದ ಇಷ್ಟು ಭಾಗ ತನ್ನ ಕಾವ್ಯದ ನಾಯಕನನ್ನು ಕುರಿತದ್ದು. ತನ್ನ ದೈವ ಯಾವತರದ್ದು ಎನ್ನುವುದರಿಂದಲೇ ತನ್ನ ಕಾವ್ಯ ಯಾವತರದ್ದು ಆಗಿರಬೇಕು ಎನ್ನುವುದನ್ನು ಕುಮಾರವ್ಯಾಸ ನಿಶ್ಚಯಿಸಿಕೊಳ್ಳುತ್ತಿದ್ದಾನೆ. ತನ್ನ ದೈವ ಶ್ರವಣಸುಧಾ ವಿನೂತನ ಕಥನಕಾರಣ ಎಂದಾಗ ಅದು ತನ್ನ ದೈವದ ವಿಶೇಷಣ ಮಾತ್ರವಲ್ಲ. Manifesto ಕೂಡ ಹೌದು ; ತನ್ನ ಸಹೃದಯರನ್ನು ಆಯ್ಕೆ ಮಾಡಿಕೊಂಡಿರುವ ಹೇಳಿಕೆಯೂ ಹೌದು. ತನ್ನ ಕಾವ್ಯ ಓದುಗಬ್ಬ ಅಲ್ಲ; ಕೇಳುಗಬ್ಬ ('ಶ್ರವಣಸುಧಾ') ಅದರಿಂದ ತನ್ನ ಶ್ರೋತೃಗಳು ಆಸ್ಥಾನದ ಓದುಗನಂಥ ಪಂಡಿತರಲ್ಲ; ಅವರು ಆನತ ಜನ; ತನ್ನ/ತಮ್ಮ ದೈವಕ್ಕೆ ಬಾಗಿದವರು. ಹೀಗಾಗಿ ಈ ಕಾವ್ಯದ ಕೇಳುವಿಕೆಗೆ ಈಗಾಗಲೇ ಸಿದ್ಧವಾದವರು ಅವರು ಅಕ್ಷರಸ್ಥರಾಗಿರಲೇ ಬೇಕಾಗಿಲ್ಲ.

ಕುಮಾರವ್ಯಾಸ ಇಂಥ ಸಹೃದಯರನ್ನ ಆಯ್ಕೆ ಮಾಡಿಕೊಂಡದ್ದು ಕೂಡ ಆಕಸ್ಮಿಕ ಅಲ್ಲ. ಅವನ ದೈವಕೂಡ ಇಂಥ ಆಯ್ಕೆಯನ್ನೇ ಮಾಡುವಂಥಾದ್ದು–ಎನ್ನುವಲ್ಲಿ ಈ ಪದ್ಯಕ್ಕೆ ಇನ್ನೂ ಅರ್ಥವಿಸ್ತಾರ ಸಾಧ್ಯವಾಗುತ್ತದೆ. (ಸನಕಾದಿ ಸಜ್ಜನಸಿಕರ ದಾತಾರ ಎಂಬುದರೊಡನೆ 7ನೇ ಪದ್ಯದ ಕೇಳುವ ಸೂರಿಗಳು ಸನಕಾದಿಗಳು ಜಂಗಮ ಜನಾರ್ದನರು, ಎನ್ನುವುದನ್ನೂ ಇಟ್ಟು ನೋಡಿದಾಗ ದಾತಾರನಾದ ತನ್ನದೈವದ ನೀತಿಯೇ ಕೇಳುಗಬ್ಬದತ್ತವಾಲಿದ್ದು, ಸಾಮಾನ್ಯ ಜನರತ್ತವಾಲಿದ್ದು. ಇಲ್ಲಿ ಅಂತ ಜಾಣತನನ ಸರ್ಕಸ್ಸನ್ನೇನೂ ಕವಿ ಮಾಡುತ್ತಿಲ್ಲ. ಅವನ ಮನಸ್ಸು ಮೂಡಿಸುವ ದೈವದ ಚಿತ್ರ ಲೋಗರಿಗೆ ಹತ್ತಿರವಾದದ್ದು ಎಂಬುದಕ್ಕೆ ಎಷ್ಟುಬೇಕಾದರೂ ಉದಾಹರಣೆ ಕೊಡಬಹುದು. ಸುಮ್ಮನೆ ರ್‍ಯಾಂಡಂ ಆಗೇ ಕೊಡುವುದಾದರೆ, ವಿರಾಟಪರ್ವದ ಹತ್ತನೆಯ ಸಂಧಿಯಲ್ಲಿ ಬರುವ ಕೃಷ್ಣನ ಚಿತ್ರ ಹೀಗಿದೆ. ಅಭಿಮನ್ಯುವಿನ ಮದುವೆಗೆಂದು ವಿರಾಟನಗರಕ್ಕೆ ಕೃಷ್ಣ ಬರುವಾಗ ಜನ ಅವನನ್ನು ನೋಡಲು ಮುತ್ತುತ್ತಾರೆ. ಆಗ ಕಾವಲು ಪಡೆಯುವರು-ಅವರೂ ಪಾಂಡವರ ಕಡೆಯವರೇ ಆ ಜನವನ್ನು ಹೊಡೆದಟ್ಟುತ್ತಾರೆ. ಆಗ ಕೃಷ್ಣ ಆ ಕೈಗೋಲಿನವರನ್ನು ಜರೆದು ಜನಕ್ಕೆ ಕಾಣಿಸಿಕೊಳ್ಳುತ್ತಾನೆ.

ಮೇಲೆ ಬೀಳುವ ಮಂದಿಯನು ಕೈ
ಗೋಲಿನವರಪ್ಪಳಿಸೆ ಲಕ್ಷ್ಮೀ
ಲೋಲನವದಿರ ಜರೆದು ಕಾಣಿಸಿಕೊಳುತ ಪುರ ಜನವ (10.ಸಂ.70ಪ.

ಹಾಗೆಯೇ ಕೃಷ್ಣನ ಅಪ್ಪನಾದ ವಸುದೇವನೇ ಹೇಳುವ ಮಾತು ಇದು.

ಲೋಗರೆನ್ನವರೆಂದು ಲೋಗರಿ
ಗಾಗಿ ಬದುಕುವೆನೆಂಬ ಬಲುಗೈ
ದಾನಿ ಕೃಷ್ಣನನೇನ ಹೇಳುವೆನೆಂದನರಸಂಗೆ (ವಿರಾಟ 10 64)

ಹೀಗೆ ಕಾವ್ಯದುದ್ದಕ್ಕೂ ಮೂರ್ತದೈವದ ಕಲ್ಪನೆಯನ್ನು ಕಟ್ಟಿಕೊಡುವನೆಂದ ಮಾತ್ರಕ್ಕೆ, ದೈವದ ಅಮೂರ್ತತೆಯ ಕಲ್ಪನೆಯನ್ನು ಕುಮಾರವ್ಯಾಸ ಬಿಟ್ಟುಕೊಟ್ಟವನೆಂದೇನೂ ಅಲ್ಲ. ಯಾವ ನಿಮಿಷದಲ್ಲೂ ಈ ಮೂರ್ತತೆ ಅವನ ಮನಸ್ಸಿನ ಹಿನ್ನಲೆಗೆ ಇದ್ದೇ ಇದೆ. ಆದರೆ ಈ ಅಮೂರ್ತದೈವ ತನ್ನನ್ನು ಮೂರ್ತೀಕರಿಸಿಕೊಳ್ಳುವ ರೀತಿಯಲ್ಲಿ ಕುಮಾರವ್ಯಾಸನ ಕುತೂಹಲ ಅಡಗಿರಬೇಕು! ಅದರಿಂದಲೇ ನಿರಂತರ ಹೊಸ ಹೊಸದಾಗುವ, repeated ಅಲ್ಲದ 'ವಿನೂತನತೆ' ತನ್ನ ಕಾವ್ಯದ ಕಥನ ರೀತಿಯ ವಿನೂತನತೆಯೂ ಹೌದು, ತನ್ನ ಕಥನ ಕಾರಣ ಅಂದರೆ ತನ್ನದೈವದ ಸೃಷ್ಟಿಕ್ರಿಯೆಯ ವಿನೂತನತೆಯೂ ಹೌದು. (ವಿನೂತನ ಕಥನ ಕಾರಣ)

ಪಾರಿಜಾಸನೆ ಸಕಲ ಶಾಸ್ತ್ರವಿ
ಚಾರದುದ್ಭವೆ ವಚನ ರಚನೋ
ದ್ಧಾರೆ ಶ್ರುತಿ ಪೌರಾಣದಾಗಮ ಸಿದ್ಧಿದಾಯಕಿಯೆ
ಶೌರಿ ಸುರಪತಿ ಸಕಲ ಮುನಿಜನ
ಸೂರಿಗಳಿಗನುಪಮದ ಯುಕುತಿಯೆ
ಶಾರದೆಯೆ ನರ್ತಿಸುಗೆ ನಲಿದೊಲಿದೆನ್ನ ಜಿಹ್ವೆಯಲಿ ॥೧.೧.೫॥

ಆದಿನಾರಾಯಣಿ ಪರಾಯಣಿ
ನಾದಮಯೆ ಗಜಲಕ್ಷ್ಮಿ ಸತ್ವಗು
ಣಾಧಿದೇವತೆ ಅಮರ ವಂದಿತ ಪಾದ ಪಂಕರುಹೆ
ವೇದಮಾತೆಯೆ ವಿಶ್ವತೋಮುಖಿ
ಯೈದು ಭೂತಧಾರಿಯೆನಿಪೀ
ದ್ವಾದಶಾತ್ಮ ಜ್ಯೋತಿ ರೂಪಿಯೆ ನಾದೆ ಶಾರದೆಯೆ ॥೬॥

ಮೊದಲ ಪದ್ಯದ ಥೀಮನ್ನೇ ಇನ್ನೂ ಆಳವಾಗಿ ಮೂಡಿಸಲು ಈ ಪದ್ಯಗಳು ಬಂದಂತಿವೆ. ಮೊದಲ ಪದ್ಯ (೫)ದಲ್ಲಿ ಬರುವ ಸರಸ್ವತಿಯು ಚಿತ್ರ ವಾಙ್ಮಯರೂಪಿಣಿ ಸರಸ್ವತಿಯ ಚಿತ್ರ. ಅವಳನ್ನ 'ಯುಕ್ತಿ' ಎಂದು ಕುಮಾರವ್ಯಾಸ ಕರೆಯುತ್ತಾನೆ. ಅಂದರೆ ಅವಳು ಹೆಚ್ಚು instrumental ಆದವಳು. ಸಕಲಶಾಸ್ತ್ರ ವಿಚಾರದ ಉದ್ಭವೆಯಿಂದ ಅವಳ ವಚನ ರಚನೋದ್ಧಾರದಲ್ಲಿ [ವಚನ ರಚನೆ ಮಾತಾಡುವಿಕೆ 'ಅಭಿವ್ಯಕ್ತಿ'ಕೂಡ ಒಂದು ರೀತಿಯ 'ಉದ್ಧಾರ' ಎಂದೆ] ಶ್ರುತಿ, ಪುರಾಣ ಆಗಮಗಳ ಸಿದ್ಧಿಯನ್ನು ಪಡೆಯಲು ಸಕಲರಿಗೂಯುಕ್ತಿ instrumental ಆದವಳು. ವಿಶೇಷವೆಂದರೆ ಇವಳು ಶೌರಿಗೆ ಅಂದರೆ ಗದುಗಿನ ವೀರನಾರಾಯಣನಿಗೂ ಉಳಿದ ಜನಕ್ಕೆ ಬೇಕಾದಂತೆಯೇ ಅನಿವಾರ್ಯವಾದವಳು ಈ ಯುಕ್ತಿ ಸಾಮಾನ್ಯನಿಗೆ ಹೇಗೊ, ಹಾಗೇ ದೈವಕ್ಕೂ ಅನಿವಾರ್ಯವಾದ ಗುಣ ಎನ್ನುವುದರಲ್ಲಿ ಹೊಸತನವಿದೆ. ಅಷ್ಟೇ ಅಲ್ಲ, ಎಲ್ಲರಿಗೂ ವಿಚಾರ ಸಾಮಾನ್ಯವಾದ ಪ್ರವೃತ್ತಿ ಎನ್ನುವಲ್ಲೂ ಹೊಸತನವಿದೆ. ಈ ಮಟ್ಟಿಗೆ ದೈವ-ಮಾನುಷದ ಗುಣದ ಅಭಿನ್ನತೆಯನ್ನು ಕಾಣುವಲ್ಲಿ ಕುಮಾರವ್ಯಾಸ ತನ್ನ ಹಿಂದಿನ ಪದ್ಯದ ಸಾಮಾನ್ಯತೆಯ ಅರ್ಥವನ್ನು ವಿಶಾಲಗೊಳಿಸುತ್ತಿದ್ದಾನೆ. ನಿಜ. ಆದರೆ ಕುಮಾರವ್ಯಾಸನ ಕಾಣ್ಕೆ ಇಲ್ಲಿಗೇ ಮುಗಿಯುವುದಿಲ್ಲ. ಇದೇ ವಾಙ್ಮಯಕ್ಕೆ ಇನ್ನೊಂದು ರೂಪವೂ ಇದೆ. ಅದಿಲ್ಲದೆ ಕುಮಾರವ್ಯಾಸನ ಸರಸ್ವತಿಯ ಚಿತ್ರ ಸಂಪೂರ್ಣವಾಗುವುದಿಲ್ಲ.

'ಆದಿನಾರಾಯಣಿ ಪರಾಯಣಿ' ಎನ್ನುವ ಸಾಲುಗಳಲ್ಲಿ 'ಶ್ರೀವನಿತೆರಸನೆ' ಯಿಂದಾಗ ಎತ್ತಿದ ಅರ್ಥಗಳನ್ನೇ ಮತ್ತೆ ವಿಚಾರಕ್ಕೆ ಒಡ್ಡುತ್ತಿದ್ದಾನೆ. ನಾರಾಯಣಿ

-ನಾರಾಯಣನ ಸ್ತ್ರೀ ರೂಪವೂ ಹೌದು, ಲಕ್ಷ್ಮಿಯೂ ಹೌದು. 'ಪರ್ಯಾಯಣ' ಎನ್ನುವ ದಕ್ಕೆ ಚರಮಗುರಿ ultimate aim ಎನ್ನುವ ಅರ್ಥವೂ ಇದೆ. ಅಂತಿಮಗುರಿ ನಾರಾಯಣಿಯೇ ಎನ್ನುವುದರಿಂದ, (ಅವಳನ್ನು 'ಲಕ್ಷ್ಮಿ' ಎಂದೂ ಇದೇ ಪದ್ಯದಲ್ಲಿ ಕರೆದ್ದಾನೆ) ಶ್ರೀ ವನಿತೆ, ಸರಸ್ವತಿ ಎಲ್ಲಾ ನಾರಾಯಣತ್ವದ ಇನ್ನೊಂದು ಅಭಿವ್ಯಕ್ತಿಯೇ ಆಗಿಬಿಡುವುದು ಸಲೀಸಾಗಿ ಬಿಡುತ್ತದೆ.

ಇಷ್ಟಾದರೂ, ಕುಮಾರವ್ಯಾಸನ ಸರಸ್ವತಿಯ ಚಿತ್ರ ಪೂರ್ತಿಯಾಗುವುದಿಲ್ಲ. ಈ ಪದ್ಯದಲ್ಲಿ ಅವಳು ಸೃಷ್ಟಿಯ ಚೈತನ್ಯ. ಸತ್ವಗುಣಾಧಿದೇವತೆ 'ನಾದಮಯಿ' ವೇದಮಾತೆ. ಆದರೆ ವೇದವೊಂದೇ ಅವಳ ಅಭಿವ್ಯಕ್ತಿ ಎಂದು ಒಪ್ಪಿಕೊಳ್ಳುವುದಕ್ಕೂ ಕುಮಾರವ್ಯಾಸ ಸಿದ್ಧನಿಲ್ಲ. ಅವಳು ವಿಶ್ವತೋಮುಖಿ, ಅಂದರೆ, ವಿಶ್ವದ ಎಲ್ಲ ರೀತಿಯ ಅಭಿವ್ಯಕ್ತಿಗಳಿಗೂ ಅವಳು ಬಾಯಾದವಳು. (ಹಾಗಾಗೇ ಪಂಚಭೂತಗಳ ಅಂದರೆ ಜಡದ) ಆಧಾರವಾದವಳು; ದ್ವಾದಶಾತ್ಮಗಳ (ಅಂದರೆ ಚೇತನದ ಜ್ಯೋತಿಯಾಗಬಲ್ಲಳು. ಈ ಎಲ್ಲದರ ಚೈತನ್ಯ ಅಭಿವ್ಯಕ್ತವಾಗುವುದೇ ಮಾತಿನಿಂದ. ಹಾಗಾಗಿ ಅವಳು ನಾದೆ. 'ನಾದೆ' ಎಂಬುದಕ್ಕೆ 'ನಾದರೂಪಿಣಿಯೆ' ಎನ್ನುವ ಪಾಠಾಂತರ ಸಾಧ್ಯವೇ ಇಲ್ಲ. ನಾದವೇ ಅವಳು ನಾದದ ಮುಖೇನ ಮಾತ್ರ ಅಭಿವ್ಯಕ್ತಗೊಳ್ಳುವಂಥವಳು. ಪಂಪನ 'ಪರಮ ಜಿನೇಂದ್ರವಾಣಿಯೆ ಸರಸ್ವತಿ, ಬೇರದು ಪೆಣ್ಣ ರೂಪಮಂ ಧರಿಯಿಸಿ ನಿಂದುದಲ್ತು' ಮುಂತಾದ ಸಾಲಿನ ಪದ್ಯದ ಅರ್ಥದ ಛಾಯೆಯಲ್ಲೇ ಇವನ ಸರಸ್ವತಿಯ ಶ್ಲೋಕ ಪ್ರಾರಂಭವಾಗಿ ಪಂಪನಿಗಿಂತ ಭಿನ್ನವಾಗುವ ರೀತಿ ಇಲ್ಲಿ ಮುಖ್ಯ ಎನಿಸುತ್ತದೆ. ವಿಚಾರ-ಅಭಿವ್ಯಕ್ತಿ ಎರಡರ ಮೂಲ ಅತಿಮಾನುಷ ಅಷ್ಟೇ ಅಲ್ಲ, ಅತಿದೈವಿಕ ಕೂಡ. (ಅದು ಕುಮಾರವ್ಯಾಸನ ಶೌರಿಗೂ ಹಿಂದಿನದು) ಅಷ್ಟೇ ಅಲ್ಲ, ರೀತಿಯ ಅಭಿವ್ಯಕ್ತಿಯೂ ('ನಾದೆ') ಸರಸ್ವತಿಯೇ ಆಗುವುದರಿಂದ ಕಾವ್ಯವಾಗಲಿ, ಮಾತಾಗಲಿ ಎಲ್ಲವೂ ದೈವದ ಅವತಾರಗಳೇ ಆಗಿಬಿಡುತ್ತವೆ. ಇಂಥ ನಿಲುವಿನ ಕವಿಗೆ ಮಾತಿನ ಯಾವ ರೀತಿಯೂ ಅಸ್ಪೃಶ್ಯವಾಗುವುದು ಸಾಧ್ಯವೇ ಇಲ್ಲದೆ ಹೋಗುತ್ತದೆ. ಅವನಿಗೆ ಮನಸ್ಸಿನ ಯಾವ ಭಾವನೆಯ ಅಭಿವ್ಯಕ್ತಿಯೂ ದೈವದ ಅಭಿವ್ಯಕ್ತಿಯೇ ಆಗುತ್ತದೆ. ಆದ್ದರಿಂದಲೇ ಕುಮಾರವ್ಯಾಸ ಮನುಷ್ಯನ 'ಏರುವೆ'ಯ ಚಿತ್ರವನ್ನು ಸೃಷ್ಟಿಸುವುದಿಲ್ಲ. ' ಸುಜನಾ ಅವರು ಈಗಾಗಲೇ ತೋರಿರುವಂತೆ ಮನುಷ್ಯನ ಭಾವಗ್ರಂಥಿಗಳ ವಿಶ್ಲೇಷಣೆ-ಅಂದರೆ ಮನುಷ್ಯನ ಬೇರೆ ಬೇರೆ ಭಾವದ ಅಭಿವ್ಯಕ್ತಿಗಳ ಸಂಕೀರ್ಣತೆಯ ಅವಗಾಹನೆ ಕುಮಾರವ್ಯಾಸನ ಆಧ್ಯಾತ್ಮಿಕ ಉದ್ದೇಶವೂ ಆಗಿ ಬಿಡುತ್ತದೆ. ಇದಕ್ಕೆ ಅವನ ಸರಸ್ವತಿಯ/ಜ್ಞಾನದ/ದೈವದ ಪರಿಕಲ್ಪನೆಯಲ್ಲೇ ಕಾರಣಗಳಿವೆ. ಉತ್ಪ್ರೇಕ್ಷೆ, ರೂಪಕಗಳಷ್ಟನ್ನೇ ಅಲ್ಲ, ಅಶ್ಲೀಲವೆನ್ನಬೆಹುದಾದ ಬೈಗಳಗಳನ್ನೂ

ಅತನ ಕಾವ್ಯ ಸಹಜವಾಗಿ ಮೈಗೊಳ್ಳುವುದಕ್ಕೆ ಇಂಥ ಮಡಿಯಿಲ್ಲದ ಮನಸ್ಥಿತಿ ಕಾರಣ ವಾಗುತ್ತದೆ. ['ನಾದ'ಎನ್ನುವ ಪದವನ್ನೇ ಕುಮಾರವ್ಯಾಸ ಅಭಿವ್ಯಕ್ತಿಯ ಅರ್ಥವನ್ನು ಸೂಚಿಸಲು ಆಯ್ಕೆಮಾಡಿಕೊಂಡದ್ದು, ಅವನ ಮನಸ್ಸು ಬರವಣಿಗೆಗಿಂತ ಹೇಳುವಿಕೆಗೆ–ಅಂದರೆ oral tradition ಅಧೀನವಾದ್ದರಿಂದ ಎಂಬುದನ್ನು ಬೇರೆಯಾಗಿ ಹೇಳಬೇಕಾಗಿಲ್ಲ]

ವೀರನಾರಾಯಣನೆ ಕವಿ ಲಿಪಿ
ಕಾರ ಕುವರವ್ಯಾಸ ಕೇಳುವ
ಸೂರಿಗಳು ಸನಕಾದಿಗಳು ಜಂಗಮ ಜನಾರ್ದನರು
ಚಾರು ಕವಿತೆಯ ಬಳಕೆಯುಲ್ಲ ವಿ
ಚಾರಿಸುವೊಡಳವಲ್ಲ ಚಿತ್ತವ
ಧಾರುಹೋ ಸರ್ವಜ್ಞರಾದಳು ಸಲುಗೆ ಬಿನ್ನಪವ ॥೭॥

ಹಿಂದಿನ ಪದ್ಯದ ತಾರ್ಕಿಕವಾದ ಬೆಳವಣಿಗೆಯಾಗಿ ಈ ಪದ್ಯವಿದೆ. ಸೃಷ್ಟಿಯ ಎಲ್ಲ ಅಭಿವ್ಯಕ್ತಿಯೂ ದೈವದ ಅಭಿವ್ಯಕ್ತಿಯೇ ಆದ್ದರಿಂದ 'ವೀರನಾರಾಯಣನೆ ಕವಿ' ಎನ್ನುವಲ್ಲಿ ವಿನಯದ ಸಜ್ಜನಿಕೆಯ ಮಾತು ಇಲ್ಲ. ಈ ಪದ್ಯದ ಕಾವ್ಯಾಭಿವ್ಯಕ್ತಿಯ ಚಿಂತನ ಕ್ರಮ ಅನನ್ಯವಾದದ್ದು ಎಂಬುದನ್ನು ಗಮನಿಸಿದಲ್ಲಿ, ಈ ಸಾಲನ್ನು ಕವಿಯ ವಿನಯದ ಮಾತೆಂದು ಹೇಳುವುದು ಈ ಕವಿಯ ಕಾವ್ಯಮೀಮಾಂಸೆಗೆ ನಾವು ಮಾಡುವ ಅಪಚಾರ. ಕವಿ, ವೀರನಾರಾಯಣ, ಸರಿ. ಆದರೆ 'ಕೇಳು'ವ ಸಹೃದಯ ಜನಾರ್ದನನೇ. ಇಲ್ಲಿ ಬದುಕಿನ/ಕಾವ್ಯದ ಅನಿವಾರ್ಯತೆಯ ಬಗ್ಗೆ ವಿಶಿಷ್ಟವಾದ ಒಳನೋಟವಿದೆ. ದೈವದ ಸೃಷ್ಟಿ (ಕಾವ್ಯವೂ ಸೇರಿದಂತೆ) ಮತ್ತೆ ದೈವದ ಅನುಭವಕ್ಕಾಗಿಯೇ ನಿರ್ಮಿತವಾದದ್ದು. ಇದು ಒಂದು ಮಜಲಿನ ಅರ್ಥ. ಇನ್ನೊಂದು, ಸಮುದಾಯವೇ ದೈವವಾದ್ದರಿಂದ (ಜಂಗಮ-ಜನಾರ್ದರು) ಅದರ ಅಭಿವ್ಯಕ್ತಿ ಎಲ್ಲವೂ ಕಾವ್ಯ. ಅಷ್ಟೇ ಅಲ್ಲ, ಅದನ್ನು ಅನುಭವಿಸುವ ಸಹೃದಯವೂ ಸಮುದಾಯವೇ ಆಗುತ್ತದೆ. ಕುಮಾರವ್ಯಾಸನ ದೈವದ ಸೃಷ್ಟಿಯಲ್ಲಿ ಈ ಹೇಳುವ-ಕೇಳುವ ಆಟ ನಿರಂತರವಾಗಿ ನಡೆಯುತ್ತಲೇ ಇರುವಂಥದು.

ಈ ಹೇಳುವ-ಕೇಳುವವರ ಮಧ್ಯದಲ್ಲಿ 'ಬರೆ'ಯುವ ಲಿಪಿಕಾರನ ಅಗತ್ಯವಾದರೂ ಏಕೆ? ಕುಮಾರವ್ಯಾಸನಿಗೆ ಈ ನಿರಂತರ 'ಜಂಗಮಜನಾರ್ದನ'–'ವೀರನಾರಾಯಣ'ರ ಸಂವಾದದ recorder ಆಗಿ ಮಾತ್ರ ಕವಿ ವ್ಯಕ್ತಿಯ ಸ್ಥಾನವಿರುವಂತಿದೆ ಕಾವ್ಯದ ಸೃಷ್ಟಿ ಕರ್ತೃವೂ, ಭೋಕ್ತೃವೂ ಸಮುದಾಯವೇ ಎನ್ನುವಲ್ಲಿ, ಕುಮಾರ

ವ್ಯಾಸನಿಗೆ ಕಾವ್ಯ ಮಾನವ-ದೈವ ಸಂಬಂಧದಲ್ಲಿ ಆಗುವ ಒಂದು event ಕೂಡ ಹೌದು. ಒಂದು context ಕೂಡ ಹೌದು. ಆದ್ದರಿಂದಲೇ, ಈ ಪದ್ಯದ ಮುಂದಿನ ಸಾಲುಗಳು ದೈವದ ಸೃಷ್ಟಿಯ ವಿನೂತನತೆಯಂತೆಯೇ ತನ್ನ ಕಾವ್ಯದ ವಿನೂತನತೆಯನ್ನೂ ಕುರಿತು ಹೇಳುತ್ತವೆ. 'ಚಾರುಕವಿತೆಯ ಬಳಕೆಯಲ್ಲ' ಎನ್ನುವಲ್ಲಿ 'ಬಳಸು'ಎನ್ನುವುದಕ್ಕೆ to make use of ಅನ್ನುವಂತೆಯೇ to repeat ಎನ್ನುವ ಅರ್ಥವೂ ಇದೆ. to borrow ಎನ್ನುವ ಅರ್ಥವೂ ಸಾಧ್ಯ ಇರಬಹುದು. ಈ ಮೂರು ಅರ್ಥದಲ್ಲೂ ಚಾರುಕವಿತೆಯನ್ನು ಬಳಸದ್ದು ಈ ಕೃತಿ. (ಚಾರು ಕವಿತೆ ಎಂದರೆ ಕೇವಲ ಚಂದಕ್ಕಷ್ಟೆ ಬಳಸುವಂಥದು) ಮುಂದಿನ ಸಾಲಂತೂ ಇಡೀ ಪದ್ಯದ ಅರ್ಥವನ್ನು ಭಾವವಾನಿ enact ಮಾಡಿ ತೋರಿ ಬಿಡುತ್ತದೆ. 'ಸಲುಗೆ ಬಿನ್ನಪವ' ಎನ್ನುವಲ್ಲಿ ಬಿನ್ನಪವನ್ನು ಸಲ್ಲಿಸಲಿ ಎನ್ನುವ ಅರ್ಥದ ಜತೆಗೇ, ಸರ್ವಜ್ಞರಾದವರು ಈ ಸಲುಗೆಯ ಬಿನ್ನಪವನ್ನು ಅವಧರಿಸಲಿ ಎನ್ನುವ ಅರ್ಥವೂ ಇದೆ. 'ಸಲುಗೆ ಬಿನ್ನಪ' ಎನ್ನುವ ನುಡಿಗಟ್ಟು ಶಿಷ್ಟ ಕಾವ್ಯ ಮೀಮಾಂಸೆಯ 'ಕಾಂತಾಸಮ್ಮಿತಿ' ಪರಿಭಾಷೆಗಿಂತ ಸಂಕೀರ್ಣವಾದ ಪರಿಕಲ್ಪನೆಗೆ ಹುಡುಕಾಟ ನಡೆಸುತ್ತಿರುವುದರ ಜತೆಗೇ, ಕವಿಯ ದೈವದ/ಸಹೃದಯನ ಸಂಕೀರ್ಣ ಸಂಬಂಧವನ್ನು ಸುಂದರವಾಗಿ ತಿಳಿಸುತ್ತದೆ. ಅದರ ಜತೆಗೆ ಕಾವ್ಯದ ಈ ಲಿಪೀಕರಣ ಜಂಗಮ ಜನಾರ್ದನನಿಗೆ-ವೀರನಾರಾಯಣನಿಗೆ ವ್ಯಕ್ತಿಕವಿ ಮಾಡುವ 'ಸಲುಗೆ ಬಿನ್ನಪ' ಕೂಡ ಹೌದು. ಈ ಅರ್ಥದಲ್ಲಿ ಕವಿಯ ವೈಯಕ್ತಿಕತೆಯ ಸಮರ್ಥನೆಯನ್ನೂ ಕವಿ ಮಾಡಿಕೊಳ್ಳುತ್ತಿದ್ದಾನೆ. ಎನಿಸುತ್ತದೆ.

ಇಂಥ ನಿಲುವನ್ನು ತಳೆದ ಕವಿಗೆ-ವ್ಯಕ್ತಿ ನೆಲೆಯಲ್ಲಿ ಕಾವ್ಯದ ರಚನೆಯನ್ನು ಸಮರ್ಥಿಸಿಕೊಳ್ಳುವುದು ಸಾಕಷ್ಟು ಗೊಂದಲಗಳನ್ನು ಉಂಟುಮಾಡಬಹುದು. ಕವಿ-ವ್ಯಕ್ತಿಕವಿ ಇವರ ಭಿನ್ನತೆಯ ಸಮಸ್ಯೆ ನವೋದಯ ಕವಿಗಳನ್ನೂ ಬೇರೆ ಬೇರೆ ಮಜಲುಗಳಲ್ಲಿ ಕಾಡಿದ್ದುಂಟು. ಮುಖ್ಯವಾಗಿ ಬೇಂದ್ರೆ-ಅಂಬಿಕಾತನಯದತ್ತ ಈ ದ್ವಂದ್ವವನ್ನೂ ಕುರಿತೇ ಬೇಂದ್ರೆಯವರ ಕವನಗಳಲ್ಲಿ, ಕಾವ್ಯಮೀಮಾಂಸೆಯಲ್ಲಿ ಅರೆಪಾಲು ವಿಚಾರಗಳು ನಡೆದದ್ದನ್ನು ನೆನೆಯಬಹುದು. ಈ ಸಮಸ್ಯೆಯನ್ನು ಸಂವಹನೆಯ ಸಮಾಜ ಶಾಸ್ತ್ರದ ದೃಷ್ಟಿಯಿಂದ ಅಧ್ಯಯನ ಮಾಡಬೇಕಾದ್ದಿದೆ. ಆದರೆ ಈ ಸಮಸ್ಯೆಯನ್ನು ಕುಮಾರವ್ಯಾಸ ಇಲ್ಲಿ ನೀಗಿಕೊಂಡದ್ದು ತನ್ನ ದೈವದ ಕಲ್ಪನೆಯ ಮುಖೇನ. ಪ್ರಕೃತಿ-ಪುರುಷರ ಅವಿನಾಭಾವ ಸಂಲಗ್ನದ ಪರಿಕಲ್ಪನೆಯ ಮುಖೇನ. ಮಾನುಷ್ಯ-ದೈವದ ಅಭಿನ್ನತೆಯ ಪರಿಕಲ್ಪನೆಯ ಮುಖೇನ. ಈ ಸಂದರ್ಭದಲ್ಲಿ ಕವಿ ತನ್ನನ್ನು ವ್ಯಾಸನ ಮಗ ಎಂದು ಕರೆದುಕೊಳ್ಳುವ ಪದ್ಯಗಳೆರಡೂ-ಈ ದೃಷ್ಟಿಯಿಂದ ಮುಖ್ಯವಾಗುತ್ತದೆ.

ದುರಿತ ಕುಲಗಿರಿ ವಜ್ರದಂಡನು
ಧರೆಗೆ ಜಂಗಮಮೂರ್ತಿ ಕವಿವಾ
ರಿರುಹ ದಿನಮಣಿ ನಿಖಿಲಯತಿಪತಿ ದಿವಿಜವಂದಿತನು
ತರಳನನು ತನ್ನವನೆಂದು ಪತಿ
ಕರಿಸಿ ಮಗನೆಂದೊಲಿದು
ವರವನಿತ್ತನು ದೇವ ವೇದವ್ಯಾಸ ಗುರುರಾಯ ॥ ೧೧ ॥

ವಂದಿತಾಮಳ ಚರಿತನಮರಾ
ನಂದ ಯದುಕುಲ ಚಕ್ರವರ್ತಿಯು
ಕಂದ ನತ ಸಂಸಾರ ಕಾನನ ಘನ ದವಾನಳನು
ನಂದ ನಂದನ ಸನ್ನಿಭನು ಸಾ
ನಂದ ದಿಂದಲೆ ನಮ್ಮವನು ಕೃಪೆ
ಯಿಂದ ಸಲಹುಗೆ ದೇವ ಜಗದಾರಾಧ್ಯ ಗುರುರಾಯ ॥೧೨॥

ಹನ್ನೊಂದನೆಯ ಪದ್ಯದಲ್ಲಿ 'ಕವಿ ವಾರಿರುಹ ದಿನಮಣಿ' ಯಾದ ವ್ಯಾಸನ ಚಿತ್ರವನ್ನು ಗಮನಿಸಬೇಕು. ಅವನನ್ನು ಧರೆಯ ಜಂಗಮಮೂರ್ತಿ ಎನ್ನುವಾಗ ಹಿಂದಿನ ಜಂಗಮ ಜನಾರ್ದನನ ಪರಿಕಲ್ಪನೆಗೆ ಧಕ್ಕೆಯಾಗದ ಹಾಗೆ ವ್ಯಾಸನನ್ನೂ ದೈವ-ಮಾನುಷವೆರಡರ ತೆಕ್ಕೆಯಲ್ಲಿ ಸೇರಿಸಿದ್ದು ಕುಮಾರವ್ಯಾಸನ ಒಟ್ಟು ದೃಷ್ಟಿಗೆ ಹಾಳತವಾಗೇ ಇದೆ. ಈ ಕವಿಗೆ ತಾನು ವ್ಯಾಸನ ಮಗನಾಗುವುದೇ ಉದ್ಧಾರದ ರೀತಿ. ವೇದವ್ಯಾಸನಾ ಇವನನ್ನು ಮಗನೆಂದು ಉದ್ಧರಿಸಿದ ಹಾಗೆ ಪತಿಕರಿಸಿದ್ದರಿಂದ ಆದದ್ದೇನು? ವರವನ್ನು ಕೊಟ್ಟ. ಯಾವ ವರ ? ಯಾಕೆ ವರ ? ಇಲ್ಲಿ ಕವಿ ಬೇಕಂತಲೇ ambiguity ಯನ್ನ ಇಟ್ಟುಕೊಂಡಿರಬಹುದು. ವ್ಯಾಸನ ಭಾವಸಂತಾನಕ್ಕೆ ಒಳಗಾಗುವುದು ಒಂದು ವರವಾದರೆ, ಆ ಭಾವ ಪ್ರಕಟಣೆಯ ಕ್ರಿಯೆಯಾದ ಕಾವ್ಯ ರಚನೆಯೂ ವ್ಯಾಸನ ವರವೇ ಎನ್ನುವ ಅರ್ಥವೂ ಇರಬಹುದೇನೋ.

ಮುಂದಿನ ಪದ್ಯದ ಅರ್ಥವೂ ತೊಡಕಿನದೇ. 'ನಂದನಂದನ ಸನ್ನಿಭನು' ದೇವ ಜಗದಾರಾಧ್ಯ ಗುರುರಾಯ ಎನ್ನುವ ಮಾತುಗಳಿಂದ ಈ ಪದ್ಯದ ಪ್ರಾರ್ಥನೆ ಗದುಗಿನ ವೀರನಾರಾಯಣನನ್ನು ಮಾತ್ರವಲ್ಲ, ಕೃಷ್ಣ ಸನಿಭನಾದ ಕೃಷ್ಣದ್ವೈಪಾಯನನ್ನು ಕುರಿತು ಆಗುವಂತಿದೆ. ಹಿಂದಿನ ಪದ್ಯದ ಬಲದಿಂದ ವ್ಯಾಸನ ಮಗನಾಗಿದ್ದ ಕವಿ, ವ್ಯಾಸನೇ ಕೃಷ್ಣನೂ ಆಗಿಬಿಡುವುದರಿಂದ ಸಲೀಸಾಗಿ ದೈವದ ಕೂಸು ಆಗಿಬಿಡುತ್ತಾನೆ.

ಇದು ದಾಸ ಪಂಥದ ಭಕ್ತಿಯ ಮೈಮರೆವಿನ ಥರದ ತಂದೆ ಮಕ್ಕಳ ಸಂಬಂಧ ಅಲ್ಲ. ಕಾವ್ಯ ನಿರ್ಮಾಣದ ಗಟ್ಟಿ ಸಂದರ್ಭವೊಂದರಲ್ಲಿ, ವೈಯಕ್ತಿಕ ಅಭಿವ್ಯಕ್ತಿಗಿಂತ ಸಮುದಾಯಿಕ ಅಭಿವ್ಯಕ್ತಿ ಹಿರಿದೆಂದು ಒಪ್ಪಿಕೊಂಡೂ, ಕವಿವ್ಯಕ್ತಿಯ ಸೃಜನಶೀಲ ಪ್ರಯತ್ನವನ್ನೂ ಸಮರ್ಥಿಸಿಕೊಳ್ಳುವ ಪರಿ ಇದು. ವ್ಯಕ್ತಿ ಹಾಗು ದೈವದ ವಿಚಿತ್ರ ಸಂಘರ್ಷ ಅವನ ಮಹಾ ಭಾರತದ ಪಾತ್ರಗಳ ಹಣೆಬರಹವಾದಂತೆಯೇ, ಈ ಕವಿಗೂ, ಸಾಮುದಾಯಿಕವಾಗಿ ಕಾವ್ಯದ ಸ್ವತಂತ್ರ ಅಸ್ತಿತ್ವದ ಅರಿವು–ಅದರ ವೈಯಕ್ತಿಕ ಅಭಿವ್ಯಕ್ತಿಯ ತುರ್ತು ಇವೆರಡೂ ಕೂಡಿಕೊಂಡೇ ಇರಬೇಕಾದದ್ದು ಇವನ ಕಲೆಯ ಕರ್ಮವಾಗಿದೆ. ಅವನ ಕರ್ಣ, ಅರ್ಜುನ, ದುರ್ಯೋಧನರು ದೈವದೊಂದಿಗೆ ಹೋರಾಡಿ, ಅರಿತು ಒಂದಾಗಿ ಮತ್ತೆ ಮರೆತು ಹೋರಾಡಿ ಮೈಗರೆಯುವಂತೆಯೇ ಕವಿಯ ಅಭಿವ್ಯಕ್ತಿಯೂ ಸೃಷ್ಟಿಯ/ಸಮುದಾಯದ/ಜಂಗಮ–ಜನಾರ್ದನರ ಅಭಿವ್ಯಕ್ತಿಯರೀತಿ ಬೇರೆ ಎಂದಾಗಿ, ಮತ್ತೆ ಒಂದಾಗುತ್ತಾ ಹೋಗುವ ನಿರಂತರ ಪ್ರಕ್ರಿಯೆ : ಇವೆರಡೂ ಒಂದೇ ರೀತಿಯವು-ಎಂದು ತೋರುತ್ತದೆ. ಈ ಅರ್ಥದಲ್ಲೂ ಕುಮಾರವ್ಯಾಸನ ಜಾನಪದ ಕಾವ್ಯ ಮೀಮಾಂಸೆಯನ್ನು ಇನ್ನೂ ತೀವ್ರವಾಗಿ ಪರಿಶೀಲಿಸುವ ಅಗತ್ಯವಿದೆ. 2

ಪದದ ಪ್ರೌಢಿಯ ನವರಸಂಗಳ
ವುದಿತವೆನ್ನುವಭಿದಾನ ಭಾಪವ
ಬೆದಕಲಿಂಗದು ಬಲ್ಲ ಪ್ರೌಢರ ಮೀ ಕಥಾಂತರಕೆ
ಇದು ವಿಚಾರಿಸೆ ಬರಿಯ ತೊಳಸಿಯ
ವುದಕದಂತಿರೆಯಿಲ್ಲಿ ಸೋಳ್ಪುದ
ಪದುಮನಾಭನ ಮಹಿಮೆ ಧರ್ಮ ವಿಚಾರ ಮಾತ್ರವನು ॥೧೪॥

ಕುಮಾರವ್ಯಾಸನ ಕಾಲಕ್ಕೆ 'ಸೂಕ್ತಿ ಸುಧಾರ್ಣವ' ದಂಥ ಬೇರೆ ಬೇರೆ ಕಾವ್ಯದ ರಸಸ್ಥಾನಗಳನ್ನು ಬೆದಕಿ ತೆಗೆದು ಪೋಣಿಸಿಡುವಂಥ (anthology) ಗಳು ಇದ್ದವು. ಕಾವ್ಯದ ಪದದಪ್ರೌಢಿ, ರಸಸ್ಥಾನಗಳನ್ನು, ಅಭಿದಾನಗಳನ್ನು (terminology) ಬಳಸಿ ಗುರುತಿಸುವ ಕಾವ್ಯ ವಿಮರ್ಶೆಯ ಪರಂಪರೆ ವಿದ್ಯಾರ್ಥಿಗಳ ಶಿಕ್ಷಣದ ಅಂಗವಾಗಿ ಮಾತ್ರವಲ್ಲ ಪಾಂಡಿತ್ಯದ ಭಾಹವಾನಿ ಕೂಡ ಚಾಲ್ತಿಯಲ್ಲಿತ್ತು.

ಅಂಥ 'ಬೆದಕಾಟ'ವನ್ನು ಈ ಕಾವ್ಯದಲ್ಲಿ ಬಲ್ಲಪ್ರೌಢರು ಸಹ (ಅವಧಾರಣೆ ಮೂಲದ್ದೇ) ಮಾಡಬಾರದು ಎನ್ನುವಲ್ಲಿ ವಿನಯದ ಬದಲು ಆಜ್ಞೆಯ ಮಾತೇ ಇದೆ ಏಕೆಂದರೆ ಇದು ಕಥಾಂತರ. 'ಕೃಷ್ಣ ಕಥೆ' (೧೫ನೇ ಪದ್ಯ) ಯ ಕಥಾಂತರ (shift ಎನ್ನುವ ಅರ್ಥದಲ್ಲಿ) ಸೃಷ್ಟಿಯಲ್ಲಿ ಏನಿದೆಯೋ ಅದೆಲ್ಲ ಇಲ್ಲಿದೆ. ಇಲ್ಲಿ ಒಂದು ಆಕೃ

ಅದಕ್ಕೆ ಇದೆ. ('ಭಾರತಾಕೃತಿ'). ಆದರೆ ಆದರ ಬಿಡಿಗಳು ಮೀಮಾಂಸೆಯ ಪರಿಭಾಷೆಗೆ ಸಿಕ್ಕುವಂಥವಲ್ಲ. ಇದನ್ನು ಅಂಥ ಎರಕದಲ್ಲಿ ಹೊಯ್ದು ಮಾಡಿದ್ದಲ್ಲ. ಹೀಗೆನ್ನುವಾಗ, ಕವಿ ತನ್ನ ಕೃತಿಯ ವಿಶಿಷ್ಟತೆಯನ್ನಷ್ಟೇ ಅಲ್ಲ, ತನ್ನ ಕಾಲದ ಉಳಿದ ಕೃತಿಗಳ ವಿಮರ್ಶೆಯನ್ನೂ ಮಾಡುತ್ತಿದ್ದಾನೆ. [ಏಳನೆಯ ಪದ್ಯದಲ್ಲಿ 'ವಿಚಾರಿಸು ವೊಡಳವಲ್ಲ' ಎಂಬಲ್ಲಿನ ಈ 'ವಿಚಾರ'ಕ್ಕೆ ಕಾವ್ಯವಿಮರ್ಶೆಯ ಅರ್ಥವೇ ಇರಬೇಕು. ಆದ್ದರಿಂದಲೇ ಅಲ್ಲಿ ತನ್ನ ಸಹೃದಯರನ್ನು 'ಸರ್ವಜ್ಞರಾದರು' ಎಂದು ಕರೆಯುತ್ತಾನೆ. ಅಂದರೆ ಬರಿಯ ಕಾವ್ಯ ಮೀಮಾಂಸೆಯ ಪರಿಭಾಷೆಯ ಬೇಲಿಯಲ್ಲಿ ಬಂದಿಯಾಗದೆ ಬದುಕ ಕಂಡದರು ಎಂಬರ್ಥ ಎನಿಸುತ್ತದೆ. ಹಾಗಲ್ಲದೆ ಬರಿಯ 'ಪ್ರೌಢ'ರ ಜತೆ'ಸಲುಗೆ ಬಿನ್ನಪ'ಸಾಧ್ಯವಿಲ್ಲದ ಮಾತು.]

ಇಲ್ಲಿ ಬರುವ 'ಬರಿಯ ತೊಳಸಿಯ ಉದಕ' ಎನ್ನುವಲ್ಲಿನ 'ಬರಿ'ಗೆ ಖಾಲಿ ಎನ್ನುವ ಅರ್ಥ ಏನೂ ಇಲ್ಲ. ಗೀತೆಯಲ್ಲಿ, ಶಾಸ್ತ್ರರೀತಿಯ ಪೂಜೆಗಿಂತ ಭಿನ್ನವಾದ ಪೂಜೆಯನ್ನು ಹೇಳುತ್ತಾ 'ಹೂವು ನೀರು ಸೊಪ್ಪು ಯಾವುದರಿಂದ ಪೂಜಿಸಿದರೂ ನಾನು ತೃಪ್ತ' ಎಂದ ಕೃಷ್ಣನ ಮಾತು ಕವಿಯ ಈ ಮಾತಿಗೆ ಬೆನ್ನಾಗಿ ಇದೆ. ಕುಮಾರವ್ಯಾಸನಿಗೆ ಈ ಇಲ್ಲಿ ಗೀತೆಯ ಈ allusion ನಿಂದ, ಶಾಸ್ತ್ರೀಯ ಕಾವ್ಯ ಪದ್ಧತಿಗಿಂತ ಭಿನ್ನವಾದ ಕಾವ್ಯಪದ್ಧತಿಯನ್ನು ಅಧಿಕೃತಗೊಳಿಸುವುದೇ ಮುಖ್ಯ ಉದ್ದೇಶ. ಹಾಗಲ್ಲದೆ, ಈ ಕವಿಗೆ ತುಳಸಿಯ ನೀರು 'ಬರಿ'ಯ ನೀರಾಗುವುದಂತೂ ಸಾಧ್ಯವಿಲ್ಲ. ಅವನ ಕೃಷ್ಣನಿಗೂ ಸಾಧ್ಯವಿಲ್ಲ. [3] ಹಾಗಾಗಿ, ಇಲ್ಲಿ ನೋಡಬೇಕಾದ್ದು, ಪದ್ಮನಾಭನ ಮಹಿಮೆ, ಧರ್ಮ ವಿಚಾರ ಮಾತ್ರವನು. ಈ 'ಪದುನಾಭ'ನ ಅರ್ಥ ಸಾಧ್ಯತೆಗಳನ್ನು ಹಿಂದಿನ ಪದ್ಯಗಳಲ್ಲೇ ಕುಮಾರವ್ಯಾಸ ಸಿದ್ಧ ಮಾಡಿರುವುದರಿಂದ-ಈ ಪದ್ಯದಲ್ಲೂ 'ಕಥಾಂತರ' ಎಂಬ ಮಾತಿನಿಂದ ಮತ್ತೆ ತನ್ನ ದೈವದ–ಕಾವ್ಯದ ಅರ್ಥವನ್ನು ಸ್ಪಷ್ಟಪಡಿಸಿಕೊಂಡಿರುವುದರಿಂದ ದೈವದ ಮಹಿಮೆ ಎಂಬುದು ಸೃಷ್ಟಿಯ ಸಂಕೀರ್ಣತೆಯನ್ನು ಕುರಿತ ಮಾತೇ ಆಗುತ್ತದೆ.

ಆದರೆ ಈ ಪದ್ಯದ ಅರ್ಥದ ಬಿಕ್ಕಟ್ಟು 'ಧರ್ಮವಿಚಾರ ಮಾತ್ರವನು' ಈ ಕಾವ್ಯದಲ್ಲಿ ಕಾಣಬೇಕು ಎಂಬ ಮಾತಿನಿಂದ ತೀರಾ ಹೆಚ್ಚುತ್ತದೆ ಎಂಬುದು ನಿಜ. ಕುಮಾರವ್ಯಾಸ 'ಧರ್ಮ'ಕ್ಕೆ ಯಾವ ಅರ್ಥ ಕೊಡುತ್ತಾನೆ ಎನ್ನುವುದು ತಲೆ ತಿನ್ನುವ ಮಾತು. ಈ ಕಾರಣಕ್ಕಾಗಿ ೧೭ ನೆಯ ಪದ್ಯವನ್ನೂ ಇದರೊಟ್ಟಿಗೆ ನೋಡಬೇಕಾಗಬಹುದು.

ಅರಸುಗಳಿಗಿದು ವೀರ ದ್ವಿಜರಿಗೆ
ಪರಮ ವೇದದ ಸಾರ ಯೋಗೀ
ಶ್ವರರ ತತ್ವ ವಿಚಾರ ಮಂತ್ರಿ ಜನಕ್ಕೆ ಬುದ್ಧಿ ಗುಣ
ವಿರಹಿಗಳ ಶೃಂಗಾರ ವಿದ್ಯಾ

ಪರಿಣತರಲಂಕಾರ ಕಾವ್ಯಕೆ
ಗುರುವೆನಲು ರಚಿಸಿದ ಕುಮಾರವ್ಯಾಸ ಭಾರತವ.

ಅರಸುಗಳಿಗಿದು ವೀರ ಇತ್ಯಾದಿ ಮಾತುಗಳು ಭಾರತವನ್ನು ಕುರಿತ ಅಭಿಪ್ರಾಯಗಳು ನಿಜ. ಆದರೆ ಕುಮಾರವ್ಯಾಸನ ಅಭಿಪ್ರಾಯವೂ–ತನ್ನ ಕಾವ್ಯವನ್ನು ಕುರಿತು-ಇದೇ ಆಗಿತ್ತೇ ? (ನವರಸಗಳ ಉದಿತ ಎನ್ನುವ ಅಭಿಧಾನ ಭಾವ ಬೆದಕಲಾಗದು–ಎಂದು ಹೇಳಿದವನೇ, ವೀರ, ಶೃಂಗಾರ, ಅಲಂಕಾರಗಳು ಇಲ್ಲಿವೆ ಎಂದು ಹೇಳುತ್ತಿದ್ದಾನೆಯೇ ? 'ತತ್ವ್ತವಿಚಾರ' ವೇನೋ ಇಲ್ಲಿ ಇದೆ. ಇಲ್ಲಿ ಬರುವ ನೀತಿಗಳನ್ನು ತತ್ವ್ತಗಳು ಎನ್ನುವುದಾದರೆ ನೀತಿಗಳಂತೂ ಕಾವ್ಯದ ಕಾಲುಭಾಗ ಅದೇ ಇದೆಯೆನೋ ಎನ್ನುವ ಮಟ್ಟಿಗೆ ಇದೆ. ಶಕುನಿ, ನಾರದ, ಭೀಷ್ಮ, ವಿದುರ, ವ್ಯಾಸ, ಕೃಷ್ಣ ಎಲ್ಲರ ನೀತಿಗಳು ಇಲ್ಲಿ ಇವೆ. ಆದರೆ ಅವನ್ನು ಕುಮಾರವ್ಯಾಸನ ಲೋಕನೀತಿ ಎಂದೇನಾದರೂ ಒಟ್ಟಗಿಟ್ಟು ನೋಡಿದರೆ ತಲೆಕೆಟ್ಟು ಹುಚ್ಚು ಹಿಡಿಯುತ್ತದೆ. ಒಂದಕ್ಕೊಂದು ವಿರುದ್ಧವಾದವು ಅವು ಅಷ್ಟೇ ಅಲ್ಲ ಅಂಥ ನೀತಿ ಭಾಗಗಳ ಪ್ರತಿ ಪದ್ಯದ ಕೊನೆಯಲ್ಲೂ ಶಕುನಿ ಹೇಳಿದ, ಭೀಷ್ಮ ಹೇಳಿದ, ವಿದುರ ನಿಂತೆಂದ, ಒಂದಾಗಿ ಸದಾ ರಿಪೀಟ್ ಮಾಡುತ್ತಾ ಆ ಮಾತುಗಳು ಆಯಾ ಪಾತ್ರಗಳ ಅಭಿಪ್ರಾಯ ಎನ್ನುವುದನ್ನು ಕವಿ ಒತ್ತಿ ಹೇಳುತ್ತಲೇ ಇರುತ್ತಾನೆ. ವೀರ, ಶೃಂಗಾರಗಳಂತೂ ಅವು ಆಯಾ ಬದುಕಿನ ಭಾಗವಾಗಷ್ಟೇ ಬಂದಿದೆ. ಈ ನೀತಿ, ಧರ್ಮ, ವೀರ, ಭಕ್ತಿ ಕೂಡಾ ಕಾವ್ಯದ ಪಾತ್ರಗಳಿಂದ ಸ್ಥಾಪಿತವಾಗಬೇಕಾದ ಪ್ರಕ್ರಿಯೆ ಎಂದು ಕುಮಾರವ್ಯಾಸ ಅಂದುಕೊಂಡಿಲ್ಲ. ಮಹಾಭಾರತದ ಅದ್ಭುತ ಯುದ್ಧವೆಲ್ಲಾ ಮುಗಿದ ಮೇಲೆ ಆದದ್ದಾದರೂ ಏನು ?

ಆ ಸುಯೋಧನನದ ಮನೆಯನವ
ನೀಶ ಹೊಕ್ಕನು ಪವನಸುತ ದು
ಶ್ಯಾಸನನ ಸದನವನು ಪಾರ್ಥಗೆ ಕರ್ಣಭವನದಲಿ
ವಾಸವಾದುದು ಯಮಳರಿಗೆದು
ಶ್ಯಾಸನಾನುಜರರ ಮನೆಗಳುಳಿ
ದೈಸುಮನೆ ಭಂಡಾರವಾದುದು ಭೂಪ ಕೇಳೆಂದ. ॥ಗದಾ॥ 13.10

ಮನ್ನಣೆಯಲಿ ಯುಯುತ್ಸು ಹೊಕ್ಕನು
ತನ್ನ ಮನೆಯನು ಭೀಷ್ಮಗುರುಕೃಪ
ರುನ್ನತಾಲಯವಾಯ್ತು ನೃಪನ ಪಸಾಯ್ತ ಸಂತತಿಗೆ

ಮುನ್ನಿಸವರೇ ಮಂತ್ರಿ ಸಚಿವರು [4]
ಮುನ್ನದಾವಂಗಾವ ಪರುಠವ
ಭಿನ್ನವಿಲ್ಲದೆ ಪೌರಜನವೆಸೆದಿರ್ದುದಿಭ ಪುರಿಯ ||ಗದಾ.13.||

ಹೊಗು–ಅವನೀಶ ಮುಂತಾಗಿ ಅರ್ಥದ ಸಾವಿರ ಪಲುಕುಗಳನ್ನು ತೂರುವ ಕುಮಾರವ್ಯಾಸನ ಭಾಷೆಯ ಮಾತು ಸದ್ಯಕ್ಕಿರಲಿ. ಮೇಲಿನ ಪದ್ಯಗಳು ಕವಿಗೆ tragedy ಅರ್ಥ ಹೊಮ್ಮಿಸಲು ಒದಗಿಸಿವೆ ಎನ್ನುವುದಕ್ಕಿಂತ, ಮಹಾಭಾರತ ಯುದ್ಧದಿಂದ ಧರ್ಮ ಸಂಸ್ಥಾಪನೆ ಆಯಿತು ಎಂದೇನೂ ಕವಿ ಭಾವಿಸುವುದಿಲ್ಲ. ಹಾಗೆ ಧರ್ಮ ಸಂಸ್ಥಾಪನೆಯನ್ನು ಮಾಡುವ ಶಾಸ್ತ್ರೀಯ ದೈವದ–ಧರ್ಮದ ಕಲ್ಪನೆ ಕುಮಾರವ್ಯಾಸನಿಗೆ ಇಲ್ಲ.[5] ಅವನಿಗೆ 'ಇರುವ' ಯಾವುದೂ ಇನ್ನೊಂದಾಗಿ ಆಗುವುದಿಲ್ಲ. 'ಇರು'ವ ರೀತಿಯಲ್ಲೇ ಎಲ್ಲವೂ ಮುಕ್ತಿಯನ್ನು ಪಡೆಯುತ್ತವೆ. ಅವನ ಮುಕ್ತಿಯ ಕಲ್ಪನೆ ಕೂಡ ವಿಶಿಷ್ಟವಾದದ್ದು. ಕೌರವ, ಕರ್ಣ, ಶಕುನಿ, ಧರ್ಮರಾಯ ಎಲ್ಲರೂ ಇನ್ನೊಂದಾಗಿ ಮಾರ್ಪಾಡಾಗಿ ಮುಕ್ತರಾದವರಲ್ಲ. ಇದ್ದಂತೆಯೆ ತಮ್ಮತನದಲ್ಲೇ ಸಾಯುಜ್ಯವನ್ನು ಪಡೆದವರು. ಮಹಾಭಾರತ ಯುದ್ಧದಿಂದ ಏನೂ ಆಗಲಿಲ್ಲ ಎನ್ನುವುದರಿಂದ ಕುಮಾರವ್ಯಾಸನಿಗೆ ನೋವೇನೂ ಇಲ್ಲ. ಅವನ ಪ್ರಕಾರ ಹಾಗೆ ಏನಾದರೂ ಆಗುವುದು ಸಾಧ್ಯವಿಲ್ಲ. ಆದ್ದರಿಂದಲೇ ಅವನ ಧರ್ಮದ ಕಲ್ಪನೆಗೆ ವಿಶಿಷ್ಟ ಅರ್ಥಗಳು ಬರುತ್ತವೆ.

ಗದಾಪರ್ವದ ಕೊನೆಯಲ್ಲಿ (೧೨ಸಂ. ಪ ೧೨) ಯುಧಿಷ್ಠಿರ ಭೀಷ್ಮನ ಬಳಿ ಬಂದು ರಾಜಧರ್ಮ ಸಮಸ್ತ ಧರ್ಮವನ್ನು ಕೇಳುತ್ತಾನೆ. ಆದರೆ ಅವನು 'ತಿಳಿ'ಯುವುದು ದಾನ ಧರ್ಮವನ್ನು ಮಾತ್ರ. ಇಷ್ಟನ್ನೆ ಹೇಳುವುದಕ್ಕೆ ಕುಮಾರವ್ಯಾಸನ 'ದಾನ ಧರ್ಮದ' ಮೇಲಿನ ಪ್ರೇಮ ಕಾರಣವಿರಲಾರದು. ಆಯಾ ಪಾತ್ರಗಳ ಸ್ವಭಾವ ತಮಗೆ ಬೇಕಾದ ಗುಣಗಳನ್ನು ಮಾತ್ರ ಹೀರುತ್ತವೆ. ಈ ದೃಷ್ಟಿಗೇ, ಮಾನವ ಸ್ವಭಾವದ 'ಭಾವಗ್ರಂಥಿ' ಕುಮಾರವ್ಯಾಸನಿಗೆ ಮುಖ್ಯ ವಸ್ತುವಾಗುವುದು. 'ಅರಸುಗಳಿಗಿದು ವೀರ' ಎನ್ನುವ ಮೇಲಿನ ಸಾಲುಗಳಲ್ಲೂ, ಈ ಮಾನವ ಸ್ವಭಾವವೇ ಕಾವ್ಯಾನುಭವದ ಸಂದರ್ಭದಲ್ಲೂ ಕೆಲಸ ಮಾಡುತ್ತದೆ ಎನ್ನುವ ಎಚ್ಚರಿಕೆಯನ್ನು ಕವಿ ಪ್ರಕಟಿಸುತ್ತಿದ್ದಾನೆ ಅಷ್ಟೆ. ತನ್ನ ಕಾವ್ಯ 'ಕಾವ್ಯಕ್ಕೆ ಗುರು' ಇರಬಹುದು. ಆದರೆ ಈ ಕಾವ್ಯ ಕೇಳುವವರ ಬೇರೆ ಬೇರೆಯ ಸ್ವಭಾವಕ್ಕೆ ಅಷ್ಟಷ್ಟೇ ಆಗಿಬಿಡುವುದೂ ನಿಜ. ಅಥವಾ ತನ್ನ ಕೇಳುಗರಲ್ಲಿ ಅವರವರಿಗೆ ಬೇಕಾದ್ದನ್ನು ಅಷ್ಟೇ ಅವರವರು ತೆಗೆದುಕೊಳ್ಳುವುದೂ

ನಿಜ. ಆದರೆ ಇದರಿಂದಾಗಿ ವಿಚಲಿತಗೊಳ್ಳುವುದು ಈ ಕವಿಯಗುಣ ಅಲ್ಲವೇ ಅಲ್ಲ. ತನ್ನ ಕಾವ್ಯದ ಪಾತ್ರಗಳ ಮುಖೇನ ಅವನು ಕಾಣಿಸುವ ಜೀವನ ದರ್ಶನಕ್ಕೂ, ಅವನ ಕಾವ್ಯ ಜೀವನವನ್ನು ಕುರಿತ ಅವನ ದರ್ಶನಕ್ಕೂ ವ್ಯತ್ಯಾಸವೇ ಇಲ್ಲ. ಅದನ್ನು ಇನ್ನೂ ಸ್ಪಷ್ಟಗೊಳಿಸಲೆಂದೇ

ಹರಿಯು ಬಸುರೊಳಗಖಿಳ ಲೋಕದ
ವಿರಡವಡಗಿಹವೋಲು ಭಾರತ
ಶರಧಿಯೊಳಡಗಿಹವನೇಕ ಪುರಾಣ ಶಾಸ್ತ್ರಗಳು

ಎನ್ನುತ್ತಾನೆ. ಇದು ಬರಿಯ ಹೆಮ್ಮೆಯ ಮಾತಷ್ಟೇ ಅಲ್ಲ. ಸೃಷ್ಟಿಯಲ್ಲಿ ಮಾನವನ ಆಯ್ಕೆಗೂ, ಕಾವ್ಯದಲ್ಲಿ ಸಹೃದಯರ ಆಯ್ಕೆಯ ಸ್ವಭಾವಕ್ಕೂ ಇರುವ ಸಾಮ್ಯವನ್ನು ಕಂಡು ಆಡಿದಮಾತು. ಆಯಾ ಸ್ವಭಾವಕ್ಕೆ ತಕ್ಕ ಹಾಗೇ ಈ ಆಯ್ಕೆ ನಡೆಯುವಂಥದು ಕವಿಯ ಪ್ರಕಾರ. ಆದ್ದರಿಂದಲೇ ಪ್ರಪಂಚಕ್ಕೂ ಕಾವ್ಯಕ್ಕೂ ಹೆಚ್ಚು ವ್ಯತ್ಯಾಸವನ್ನು ಕವಿ ಕಾಣುವುದಿಲ್ಲ. ಆದ್ದರಿಂದಲೇ ಇವನದು ಕಥಾಂತರ.

ಕಾವ್ಯ ಪ್ರಯೋಜನವನ್ನು ಕುರಿತ ಕುಮಾರವ್ಯಾಸನ ದೃಷ್ಟಿ ಕೂಡ ಈ ಒಟ್ಟು ದೃಷ್ಟಿಗೆ ಹಾಳತವಾಗಿರುವುದನ್ನು ಗಮನಿಸಬೇಕು. ಅವನು ಭಾರತ ಕಥನವನ್ನು ಒಂದು ಪ್ರಸಂಗ ಎಂದು ಕರೆಯುತ್ತಾನೆ. ಅಂದರೆ ಅದೊಂದು event [6] ಆದರೆ ಇದರ ಪ್ರಯೋಜನ ಮಾತ್ರ ವಿಚಿತ್ರವಾದದ್ದು.

ಭಾರತದ ಕಥನ ಪ್ರಸಂಗವ
ಕ್ರೂರಕರ್ಮಿಗಳೆತ್ತ ಬಲ್ಲರು
ಘೋರ ರೌರವವನ್ನು ಕೆಡಿಸುಗು ಕೇಳ್ದ ಸಜ್ಜನರ : ೨೨

ಇದನ್ನು ಕೇಳುವವರು ಸಜ್ಜನರು ಎಂದಮೇಲೆ ಅವರಿಗೆ ಘೋರರೌರವ ಯಾಕೆ ಬರುತ್ತದೆ. ಅಂದ ಮೇಲೆ ಈ ಕಾವ್ಯ ಕೇಳಿ ಘೋರರೌರವದಿಂದ ಪಾರಾಗುವ ಉಸಾಬರಿಯಾದರೂ ಏನಿದೆ ಅವರಿಗೆ? ಕವಿಗೆ ಇರುವ 'ಪಾಪ'ದ ಪರಿಕಲ್ಪನೆಯನ್ನು ಹೆಚ್ಚು ಸ್ಪಷ್ಟ ಗೊಳಿಸಿಕೊಳ್ಳುವವರೆಗೆ ಈ ಸಾಲುಗಳು ದಡ್ಡನ ಬರಹಗಳಾಗೇ ಕಾಣುತ್ತವೆ. ಹನ್ನೊಂದನೆಯ ಪದ್ಯದಲ್ಲಿ ಕುಮಾರವ್ಯಾಸ, ವ್ಯಾಸನನ್ನು 'ದುರಿತ ಕುಲಗಿರಿ ವಜ್ರದಂಡನು-ಕವಿವಾರಿರುಹ ದಿನಮಣಿ' ಎಂದು ಕರೆದಿದ್ದನ್ನು ನೆನೆದುಕೊಳ್ಳಬಹುದು. ಅವನು ಕವಿವಾರಿರುಹ ದಿನಮಣಿಯಾದ್ದರಿಂದಲೇ ದುರಿತ ಕುಲಗಿರಿ ವಜ್ರದಂಡ. ಅವನು ಧ

ು ಜಂಗಮಮೂರ್ತಿಯಾದುದರಿಂದಲೇ ಅವನು ಕವಿವಾರಿರುಹದಿನಮಣಿ. ಪ್ರಾಯಶಃ ಕಾವ್ಯದಿಂದ ಕುಮಾರವ್ಯಾಸ ಸದ್ಯಃಪರನಿರ್ವೃತಿಯನ್ನು ಬಯಸುವುದಿಲ್ಲ. ೀವ್ರವಾದ involvement ಅನ್ನ ಬಯಸುತ್ತಾನೆ. ಬದುಕಿನಲ್ಲೂ ಅಷ್ಟೇ. ಕಾವ್ಯನ್ನು ಕೇಳುವುದು ಆ ಸಮುದಾಯದಲ್ಲಿ ನಡೆಯುವ ಒಂದು ಸಮುದಾಯಕ event ದ್ದರಿಂದ, ಅವರು ಸಜ್ಜನರೇ ಇರಲಿ, ಈ ಸಾಮುದಾಯದ event ಗೆ ಒಳಗಾಗದ್ದೇ ಘೋರರೌರವ. ಕಾವ್ಯದಲ್ಲೂ ಕೌರವನಾಗಲಿ, ಕರ್ಣನಾಗಲೀ ತಮ್ಮನ್ನು ಒಟ್ಟು ನಡೆಯುತ್ತಿರುವ ಕ್ರಿಯೆಗೆ ಸಂಪೂರ್ಣ ಒಪ್ಪಿಸಿಕೊಂಡಿದ್ದವರೆ. ಅವರಾರೂ ನರಕಕ್ಕೆ ಹೋದರು ಎಂದು ಕುಮಾರವ್ಯಾಸ ಕೇಳಲಿಲ್ಲ ಎಲ್ಲರೂ ಮುಕ್ತರಾದರು. ಎಂದರೆ, ಕುಮಾರವ್ಯಾಸನ ಪಾಪದ ಕಲ್ಪನೆ ಸೃಷ್ಟಿಯ ಚಟುವಟಿಕೆಯಲ್ಲಿ involve ಆಗದೆ ಹೊರಗೆ ಉಳಿಯುವ ಷ್ಕ್ರಿಯತೆ ಎಂಬ ಅರ್ಥದ್ದು. ಹಾಗಾಗೇ ಕಾವ್ಯಾಸ್ವಾದನೆ–ಕೇಳುಗಬ್ಬದ context ಲ್ಲಿ ಒಂದು ಸಾಮೂಹಿಕ ಚಟುವಟಿಕೆ. ಅದರಿಂದ ಹೊರಗಾಗುವುದೇ ಪ್ರಾಯಶಃ ಘೋರ ರೌರವ–ಎಂಬುದು ಅವನ ಅರ್ಥ ಇರಬೇಕು. ಸದ್ಯದ ಮಟ್ಟಿಗೆ ಕುಮಾರವ್ಯಾಸನ 'ಪಾಪ'ದ ಕಲ್ಪನೆಯನ್ನು ಇನ್ನು ಹೆಚ್ಚು ಕಂಡುಕೊಳ್ಳುವುದಿದೆ. ಅವನ ಪಾತ್ರಗಳಾವುವೂ 'ಪಾಪಿ'ಗಳಲ್ಲ ಯಾವುವೂ ನರಕಕ್ಕೆ ಹೋಗುವುದಿಲ್ಲ. ಯುದ್ಧದಲ್ಲಿ ಸದಾ ಅಪ್ಸರೆಯರ ಗಣಗಳು ಸತ್ತ ಎರಡೂ ಕಡೆಯುವರನ್ನ ಆತುಕೊಂಡು ಸ್ವರ್ಗಕ್ಕೆ ಒಯ್ಯುತ್ತವೆ. ಕುಮಾರವ್ಯಾಸ ತನ್ನ ಕಾವ್ಯಸಂದರ್ಭವನ್ನು ಸೃಷ್ಟಿಯ ಅನಿವಾರ್ಯ ಚಟುವಟಿಕೆ ಎಂದೇ ಭಾವಿಸುವುದರಿಂದ ಹಾಗೂ ಕಾವ್ಯ–ನಾರಾಯಣ-ಜಂಗಮ ಜನಾರ್ದನರ ನಿರಂತರ ಸಂವಾದವೂ ಗುವುದರಿಂದ ಈ event ನಿಂದ ಹೊರಗೆ ಉಳಿಯುವುದು ಎಂಥವನಿಗೂ ಅಸಾಧ್ಯವೇ ಗಿಬಿಡುತ್ತದೆ. ಹಾಗೆ ಉಳಿಯುವುದೇ ಕ್ರೂರ ಕರ್ಮ. ಒಳಗಾಗುವುದೇ ಸಜ್ಜನಿಕೆ ಎಂದೇ ಅವನ ಅಭಿಪ್ರಾಯ ಇರಬಹುದು. ಸದ್ಯಕ್ಕೆ ಈ ಸಾಲುಗಳನ್ನು ದಡ್ಡತನದ ಸಾಲುಗಳೆಂದು ತೀರ್ಮಾನಿಸುವುದಕ್ಕಿಂತ ಕುಮಾರವ್ಯಾಸನ 'ಪಾಪ'ದ ಪರಿಕಲ್ಪನೆಯನ್ನು ರ್ಥ ಮಾಡಿಕೊಳ್ಳಲು ಇರುವ ಆಹ್ವಾನವಾಗಿ ತೆಗೆದುಕೊಂಡಲ್ಲಿ, ಅವನ ಕಾವ್ಯಮೀಮಾಂಸೆ ಇನ್ನೂ ಸ್ಪಷ್ಟವಾಗುತ್ತದೆ. ಎಂದಷ್ಟೇ ಹೇಳಬಹುದು. (ಈ ಪದ್ಯದ ಹಿನ್ನೆಲೆಯಲ್ಲಿ ೨೦.೨೧ನೆಯ ಪದ್ಯಗಳು ಪ್ರಕ್ಷೇಪಗಳೆಂಬುದು ಸ್ಪಷ್ಟ. ಆದರೂ ಅವುಗಳ unction ಅನ್ನು ವಿವೇಚಿಸುವ ಅಗತ್ಯವಿದೆ)

ಕಾವ್ಯ ಒಂದೇ ಸಾರಿಯ ರಚನೆಗೆ ನಿಂತು ಹೋಗುವಂಥದೂ ಅಲ್ಲ. ಬೆಳೆಯುತ್ತಾ ಹೋಗುವಂಥದು. ಸೃಷ್ಟಿಯ ಹಾಗೆಯೇ.

ಕೃತಿಯನವಧರಿಸುವುದು ಸುಕವಿಯ
ಮತಿಗೆ ಮಂಗಳವೀವುದಧಿಕರು
ಮಥಿಸುವುದು ತಿದ್ದುವುದು ಮೆರೆವುದು ಲೇಸಸೂಚಿಪುದು ॥೧೬॥

ಎನ್ನುವಲ್ಲಿ 'ಲೇಸಸಂಚಿಪುದು' ಎನ್ನುವ, ಲೇಸೆನಿಸಿದ್ದನ್ನು ಸೃಷ್ಟಿಯಲ್ಲಿ ಲೇಸಾದದ್ದನ್ನ ತನ್ನ ಕಾವ್ಯದಲ್ಲಿ ಸೇರಿಸುತ್ತಾ ಹೋಗುವುದಕ್ಕೂ ಓದುಗರಿಗೆ ಆಹ್ವಾನ ಕೊಡುತ್ತಾನೆ. ('ಲೇಸು' ಎನ್ನುವುದು ಆಯಾ ಸ್ವಭಾವಗಳಿಂದ ನಿರ್ಧರಿತವಾಗುವುದೆಂದು ಗೊತ್ತಿದ್ದು) ಹೀಗೆ 'ಪ್ರಕ್ಷೇಪ'ಕ್ಕೆ ಆಹ್ವಾನ ಕೊಡುವುದೂ ಮತ್ತೆ ವಿನಯದ ಮಾತಲ್ಲ. ತನ್ನ ಸಹೃದಯರಿಗೂ ದೈವಕ್ಕೂ ಅಭಿನ್ನತೆಯನ್ನು ವೈಚಾರಿಕವಾಗಿ ಮಾತ್ರ ನೋಡಿಕೊಂಡಿಲ್ಲದೆ, ಅದು ಅವನ ಸ್ವಭಾವವೇ ಆಗಿರುವುದೇ ಇಂಥ ನಿಲುವಿಗೆ ಕಾರಣ.

ಕಾವ್ಯ ಸೃಷ್ಟಿಯ ನಂತರವೂ ಕಾವ್ಯ ಬೆಳೆಯಬೇಕಾದ ಅಗತ್ಯದ ಅರಿವು-ದೈವ ಸೃಷ್ಟಿಯನ್ನು/ಸಮುದಾಯವನ್ನು/ಜನಸಾಮಾನ್ಯವನ್ನು ಅದರ ಎಲ್ಲಾ ಕ್ರಿಯಾಶೀಲ ಸ್ಥಿತಿಗಳನ್ನು ಕಂಡುಕೊಂಡ ಕವಿಗೆ-ರಕ್ತಗತವಾಗಿಬಿಟ್ಟಿದೆ. ಹಾಗಾಗಿಯೇ ಅವನ ಕಾವ್ಯ ಮೀಮಾಂಸೆ, ಮನಶ್ಶಾಸ್ತ್ರ, ಆಧ್ಯಾತ್ಮಿಕತೆ ಎಲ್ಲ ಒಂದೆಸೆಲೆಗೆ ಬಂದು ನಿಲ್ಲುತ್ತದೆ ಅಥವಾ ನಿಜ ಹೇಳಬೇಕೆಂದರೆ ಅವು ಎಲ್ಲೂ ಬೇರೆ ಬೇರೆ ಆಗುವುದೇ ಇಲ್ಲ.

ಟಿಪ್ಪಣಿ :

1 ಕುಮಾರವ್ಯಾಸನ ಜೀವನದ ಪರಿಕಲ್ಪನೆಯ ಮಾಡೆಲ್ ವಿಕಾಸದ ಮಾಡೆಲ್ ಅಲ್ಲ. ಅಂದರೆ, ಕುಮಾರವ್ಯಾಸನಿಗೆ ದೈವ ಅನ್ನುವುದು ಮನಸ್ಸಿನ ಒಂದು ಸ್ಥಿತಿ ಅಲ್ಲ-ಶರಣರ ಮಾಡೆಲ್ ವಿಕಾಸದ ಮಾಡೆಲ್. ಷಟ್ಸ್ಥಲ ಇಂಥ ವಿಕಾಸದ ಪರಿಕಲ್ಪನೆ. ಕುಮಾರವ್ಯಾಸನ ಜಗತ್ತಿನಲ್ಲಿ ಇಂಥ ಏರುವೆಗಳು ಇಲ್ಲ. ಅವನ ಕಾವ್ಯದಲ್ಲಿ ಎಲ್ಲ ಪಾತ್ರಗಳೂ ಎಲ್ಲ ಅನುಭವವನ್ನು ಪಡೆಯಬಲ್ಲರು. ಆದರೆ ಅದು ವಿಕಾಸಶೀಲ ಅಲ್ಲ. ಅಲ್ಲಿ suffering ಕೂಡ ವಿಕಾಸದ ಸೋಪಾನವಲ್ಲ. knowledge ಕೂಡ ಮರವೆಯನ್ನು ಕಳೆಯುವಂಥದಲ್ಲ. ಎರಡು ಅತಿಗಳೂ ಒಟ್ಟಿಗೆ ಇರಬಲ್ಲವು. ಹಾಗಾಗೇ ಕುಮಾರವ್ಯಾಸನಿಗೆ ನೀತಿಯ ಪ್ರಶ್ನೆ ಅಮುಖ್ಯ. ನಿಯತಿಯ ಪ್ರಶ್ನೆಯೂ ಅಮುಖ್ಯ. ಯಾಕೆಂದರೆ, ಮೋಕ್ಷ ಎಲ್ಲರಿಗೂ ಸಿಗುವಂಥದೆ. ಅದು ನೀತಿಯನ್ನು ಆಧರಿಸಿದ್ದು ಅಲ್ಲ. ಹಾಗಾಗೇ ಅವನ ಮುಖ್ಯ ಕೇಂದ್ರ 'ಭಕ್ತಿ'ಯೂ ಅಲ್ಲ. ಅದಕ್ಕಿಂತ 'ಭಾವಗ್ರಂಥಿಗಳನ್ನು ಬಿಡಿಸುವುದರಲ್ಲಿ'. ಈ ಬಿಡಿಸುವಿಕೆ ಕೂಡ ಕವಿಯ ಮನಶಾಸ್ತ್ರೀಯ ತೆವಲಲ್ಲ. ತೀರಾ ಸರಳವೆನಿಸುವ ಭಾವದಲ್ಲೂ ಇರುವ ವಿಭಾಸಗಳನ್ನು ದರ್ಶಿಸುವುದರಿಂದಲೇ ಸೃಷ್ಟಿಯ (ಅ ಮೂಲಕ 'ಭಗವಂತ'ನ) ದರ್ಶನ ಕುಮಾರವ್ಯಾಸನಿಗೆ ಸಾಧ್ಯ.

2 ೧೩ ನೆಯ ಪದ್ಯವನ್ನು ಈ ದೃಷ್ಟಿಯಿಂದ ವಿವರವಾಗಿ ನೋಡುವ ಸಾಧ್ಯತೆಗಳನ್ನು ಹುಡುಕಬೇಕಾಗಿದೆ. ಅಲ್ಲಿ ಕಾವ್ಯವನ್ನು ಕವಿ 'ತಿಳಿಯ ಹೇಳುವ ಪ್ರಕ್ರಿಯೆ' ಎಂದು ಕರೆಯುತ್ತಾನೆ. 'ತಿಳಿ' ಎನ್ನುವುಕ್ಕೆ 'ತಿಳಿಯಾಗು' ಎನ್ನುವ ಅರ್ಥ ಸಹಜವಾಗೇ ಮೂಡಲು 'ಹಲವು ಜನ್ಮದ ಪಾಪರಾಶಿಯ ತೊಳೆವ ಜಲವಿದು' ಎನ್ನುವ ಪ್ರತಿಮೆ ಸಹಾಯಕವಾಗಿದೆ. ಕೃಷ್ಣನ ಕಥೆ ಎನ್ನುವುದಕ್ಕೆ ಕೃಷ್ಣದ್ವೈಪಾಯನನ ಕಥೆ ಹಾಗೂ ದೈವವಾದ ಕೃಷ್ಣನ ಕಥೆ ಎಂದೂ ಅರ್ಥ ಸಾಧ್ಯವಾಗುತ್ತದೆ. ಕೃಷ್ಣನ ಕಥೆ ತಿಳಿಯಾಗಲು ಕಾವ್ಯರಚನೆ ಪ್ರಯತ್ನಿಸುತ್ತದೆ ಎಂದು ಏನಾದರೂ ಅರ್ಥವೇ ನೋಡಬೇಕು. ಈ ತಿಳಿಯ ಹೇಳುವ ಪ್ರಕ್ರಿಯೆ ಕೂಡ ದೈವದ ಭೋಗಕ್ಕಾಗಿಯೇ. ಅವನ ದೈವಮಾನವ ಸಮುದಾಯವನ್ನು ಒಳಗೊಳ್ಳುವುದರಿಂದ 'ತಿಳಿಯ ಹೇಳುವ ಪ್ರಕ್ರಿಯೆ' ಎಂದು ಕಾವ್ಯವನ್ನು ಕರೆಯುವದರ ಹಿಂದೆ ಇರುವ ಅವನ ಮನಸ್ಸನ್ನು

ಹಿಡಿಯಲು ಹೇಗಾದರೂ ಸಾಧ್ಯವಾಗಬೇಕು. 'ಭಾರತಾಕೃತಿ ಪಂಚಮ ಶ್ರುತಿಯು' ಎಂಬಲ್ಲೂ ಅರ್ಥಕ್ಕೆ ಅಂಥವೇ ಸವಾಲುಗಳು ಇರುವಂತಿದೆ. ಪಂಪನ 'ಕಥಾಭಿತ್ತಿ'ಯ ಕಲ್ಪನೆಯೊಂದಿಗೆ ಹೋಲಿಸಿ ನೋಡಿದಲ್ಲಿ ಇದು ಇನ್ನೂ ಹೆಚ್ಚು ಸ್ಪಷ್ಟವಾಗಬಹುದು. ಈ ಪದ್ಯದಲ್ಲಿ ಶ್ರುತಿ ಎನ್ನುವ ಪದಕ್ಕೆ ಸಿಕ್ಕ ಪುನರಾವರ್ತನೆಯಿಂದ ಕಾವ್ಯದ ಕೇಳುವ ಗುಣಕ್ಕೆ ಬಿದ್ದಿರುವ ಒತ್ತನ್ನು ಗಮನಿಸಬೇಕು. ಇದೇ ಸಂಧಿಯ ೫, ೬, ೧೮ನೆಯ ಪದ್ಯಗಳು 'ಭಾರತಾಕೃತಿ' ಎನ್ನುವ ಕಲ್ಪನೆಯ ಅರ್ಥವನ್ನು ಸ್ಪಷ್ಟಗೊಳಿಸುವಲ್ಲಿ ನೆರವಾಗಬಹುದು.

3 ಇಲ್ಲೇ ಇದೇ ಸಂಧಿಯ ೧೫ ನೇ ಪದ್ಯವನ್ನು ಗಮನಿಸಬಹುದು. 'ಹಲಗೆ ಬಳಪವ ಪಿಡಿಯದೊಂದಗ್ಗಳಿಕೆ, ಪದವಿಟ್ಟಳುಪದೊಂದಗ್ಗಳಿಕೆ..........ಇತ್ಯಾದಿ. ಈ ಪದ್ಯ ಕುಮಾರವ್ಯಾಸನ ಕಾವ್ಯ ಕ್ರಿಯೆಯ ನಿರರ್ಗಳತೆಯನ್ನು ಸೂಚಿಸಲು ಬಂದಿದೆ ಎಂಬ ಸಾಮಾನ್ಯ ಅಭಿಪ್ರಾಯವಿದೆ. ಆದರೆ ಅದಕ್ಕಿಂತ 'ವೀರನಾರಾಯಣನ ಕಿಂಕರ'ನಾದ ಕವಿ oral tradition ಅನ್ನು ಕಾವ್ಯಮಾಧ್ಯಮವನ್ನಾಗಿ ಆರಿಸಿಕೊಂಡಿದ್ದರಿಂದ ಬರವಣಿಗೆಯ laborious ಸರ್ಕಸ್ಸಿನ ಶ್ರಮಗಳು ತನಗೆ ಇಲ್ಲ ಎನ್ನುವುದನ್ನು ಮಾತ್ರ ಇಲ್ಲಿ ಹೇಳುತ್ತಿದ್ದಾನೆ. ಹಾಡುಗಬ್ಬದ ನಿರರ್ಗಳತೆಯ ಬಗ್ಗೆಯೂ ಹುಳುತ್ತಿದ್ದಾನೆ. "ಪದದ ಪ್ರೌಢಿಯ........" ಇತ್ಯಾದಿ ಸಾಲುಗಳಲ್ಲಿ ಶಿಷ್ಟ ಸಾಹಿತ್ಯದ ಮಿತಿಗಳನ್ನು ಕುರಿತು ಹೇಳುತ್ತಿರುವಂತೆಯೇ ಈ ಪದ್ಯದಲ್ಲೂ ಬರವಣಿಗೆಯ ಸಾಹಿತ್ಯದ ಕಷ್ಟಗಳನ್ನೂ, ಮಿತಿಗಳನ್ನೂ ಹೇಳುತ್ತಿದ್ದಾನೆ-ಎನ್ನುವುದು ಗಮನಾರ್ಹ.

4 ಈ ಮುಖ್ಯಮಂತ್ರಿಸಚಿವರು ಎಂಥವರು ಎನ್ನುವುದಕ್ಕೆ ಉದ್ಯೋಗ ಪರ್ವದ ೮ನೇ ಸಂಧಿಯ ೩ ರಿಂದ ೪೦ರವರೆಗಿನ ಪದ್ಯಗಳನ್ನು ನೋಡಿ. ಆ ಮಂತ್ರಿಗಳೇ ಧರ್ಮರಾಯನ ಮಂತ್ರಿಗಳಾದರು ಎಂದೆ?

5 ಪೀಠಿಕಾ ಸಂಧಿಯ ಮೊದಲ ಪದ್ಯದ 'ರಾವಣಾಸುರ ಮಥನ ಶ್ರವಣ ಸುಧಾ ವಿನೂತ್ನನ ಕಥನ ಕಾರಣ' ಎನ್ನುವ ಸಾಲನ್ನು ಎರಡು ಬೇರೆ ಬೇರೆ ವಾಕ್ಯಗಳನ್ನಾಗಿ ಅಷ್ಟೆ ಅಲ್ಲ ಒಟ್ಟಿಗೆ ಒಂದೇ ವಾಕ್ಯವಾಗಿ ಕೂಡ ಓದಿಕೊಳ್ಳಬಹುದು. ('ರಾವಣಾಸುರ ಮಥನ' ಎನ್ನುವುದಕ್ಕೆ ಇರುವ ಸಮುದ್ರಮಥನದ allusion ನಿಂದ) ರಾವಣಾಸುರನನ್ನು ಕೊಂದೂ ಗದುಗಿನ ವೀರ ನಾರಾಯಣ ಮಾಡಿದ್ದೇನು? ವಿನೂತನ ಶ್ರವಣಸುಧೆಯೊಂದಕ್ಕೆ ಕಾರಣನಾದ ಅಷ್ಟೆ. ಅಸುರತ್ವ ವನ್ನು ನಾಶಮಾಡಲಿಲ್ಲ ಅವನು-ಅದನ್ನು 'ಮಥಿಸಿದ' ಎನ್ನುವಾಗಲೂ ಇಂಥದೇ ನಿಲುವು ಕವಿಗೆ ಇರುವಂತಿದೆ. ಇವನ ದೈವಕ್ಕೆ ಜಗತ್ತಿಗೆ ಯಾವುದರ ವಿನಾಶವೂ ಸಾಧ್ಯವೇ ಇಲ್ಲವೇನೋ. ಅಗತ್ಯವೂ ಇಲ್ಲವೇನೋ.

6 ಕುಮಾರವ್ಯಾಸ ತನ್ನ ಕಾವ್ಯ ಭಾಗಗಳನ್ನು 'ಸಂಧಿ' ಎಂದು ಕರೆಯುತ್ತಾನೆ. ಷಟ್ಪದಿಯ ಕಾವ್ಯಗಳಲ್ಲಿ ಮಾತ್ರ ಆಶ್ವಾಸ, ಪರಿಚ್ಛೇದ: ಇತ್ಯಾದಿಗಳಿಗೆ ಬದಲಾಗಿ 'ಸಂಧಿ' ಎನ್ನುವ ಹೆಸರು ಮೊದಲಿಗೆ ಬಳಕೆಗೆ ಬಂತು. ಒಂದು ಬಾರಿ ಕಲೆತಾಗ one sitting ಕೇಳಿ ಮುಗಿಸಬಹುದಾದಷ್ಟು ಭಾಗ ಒಂದು ಸಂಧಿ. 'ಸಂಧಿ' ಎಂದರೆ ಭೇಟಿ ಎನ್ನುವ ಅರ್ಥ ಗೊತ್ತಿರುವಂಥದೆ. ಷಟ್ಪದಿ ಕಾವ್ಯಗಳು ಪ್ರಾರಂಭದಲ್ಲಿ ಹಾಡುಗಬ್ಬಗಳೇ ಆದ್ದರಿಂದ ಈ ಸಂಧಿ ಎನ್ನುವ ಪದ (ಸಂಜೆಯ ಹೊತ್ತಿನ?) ಊರ ಜನರ ಮಾಮೂಲಿ ಭೇಟಿಯ ಕಲೆಯುವ ಕಾಲವನ್ನು ಸೂಚಿಸಬಹುದಿತ್ತು. ಹಾಗಾಗಿ ಈ ಸಂಧಿಕಾಲ ಊರಿನ ಬದುಕಿನ ಒಂದು event ಕೂಡ ಹೌದು. ಉಳಿದ ಸುಗ್ಗಿ, ನಾಟಿ, ಇಂಥವುಗಳ ಹಾಗೆ. ಇದರ ಜತೆಗೆ ಕಾವ್ಯದ ಈ ಸಂಧಿ ಹೇಳುವವರ, ಕೇಳುವವರ, ಕಾವ್ಯದ ಸಂಲಗ್ನವಾಗುವ ಸಂಧಿಸ್ಥಿತಿ (junction) ಕೂಡ ಹೌದು.

ಶಂಬಾ ಜೋಷಿ ಸಂದರ್ಶನ

○ ಡಾ. ಶಿವರಾಮ ಕಾರಂತ, ಮಹಿಷಿ ಮತ್ತು ಮಿತ್ರರು

ಶಂಬಾ : ಕುತಗೊಳಿ ಸ್ವಾಮಿ ಬರ್ರಿ... ನನ್ನನ್ನಾ ಗೇಲಿಮಾಡಿ ಬರೆಯೋರಿದಾರೆ–ಬರೆ ದ್ದಾರೆ. ಪಿ.ಎಚ್.ಡಿ ಪ್ರೊಫೆಸರ್. ವೇಣುಗೋಪಾಲಂತ ಹೆಸರು ಸರಿ ಅದೆನೊ. ಪ್ರಜಾವಾಣಿಯಲ್ಲಿ ಬಂದಿದೆ.

ಮಹಿಷಿ : ನಮ್ಮೂರಿನವರು. ಶಿವಮೊಗ್ಗದವರು.

ಶಂಬಾ : ಇವರಿಗೇನು ಯೂನಿವರ್ಸಿಟಿ ಎಜುಕೇಶನ್ನೊ?....ಏನು ಉದ್ಧಟನ್ನಾಗೆ ಮಾತಾಡ್ತಾರವರು ಮತ್ತೆ ಹೀಗೆ ಚೇಷ್ಟೆ ಮಾಡಿದವ್ರು ಇದ್ದಾರೆ ನನ್ನನ್ನ. ನನ್ನ ಮಿತ್ರರಲ್ಲಿ ನಮ್ಮ ಗೌರೀಶ ಕಾಯ್ಕಿಣೀನೆ. ಭಾಳ....ವಿಲಕ್ಷಣ ಪ್ರತಿಭೆ ಅವರ್ದು. ಅದು ನೋಡಿ ನಂಗೆ ಆಶ್ಚರ್ಯ. ಆ ಮನುಷ್ಯ ಸಾರ್ಕೇಯಿಸಂ (Sarcasm) ಭಾಳ ಛಂದ ಮಾಡ್ತಾರೆ ಕಾರಂತರ್ನೂ ಮೀರುಸ್ತಾನೊ ಏನೊ ಗೊತ್ತಿಲ್ಲ. [ಉಳಿ ವರ ನಗು]

ಮಹಿಷಿ : ಏನ್ ಕಾಂಪ್ಲಿಮೆಂಟೊ ಏನೂಂತ ಅರ್ಥವಾಗ್ತಿಲ್ಲ.

ಶಂಬಾ : ಮಾಲ್‌ಪ್ರಾಪಿಸಂ. ಇದು..ಇವೆಲ್ಲಾನು ಭಾಳ ಅವರಲ್ಲಿ. ಅವರು ... ನಿಮಗೆ ಈ ... ಸಾಹಿತ್ಯ ಪರಿಷತ್ತಿನ ಅಧ್ಯಕ್ಷರ್ನ ಮಾಡಿದವ್ರು ಯಾರು ಅಂದ್ರು ನಾ ಅಂದೆ ನೀವೂ ಕಾರಣರು. ಮಾಡಿದವ್ರು. ಇಲ್ದಿದ್ರೆ ನಾ ಆಗ್ತಿದ್ದಿಲ್ಲ.... ನನಗೂ ಆಶ್ಚರ್ಯ. ನಾನ್ ಹೇಳ್ದೆ ನಾ ಸಾಹಿತಿ ಅಲ್ಲ ಸಾಹಿತಿಗಳು ಜೀವ ನವನ್ನ ಕುರಿತು ಬರೀತಿರ್ತಾರೆ. ಜೀವನ ಏನದೇಂತ ತಿಳುಕೊಳ್ಳೋದಕೆ ನಾ ಹೊರಟೀನಿ. ಇಬ್ರು ದಿಕ್ಕೂ ಭಾಳ ಬೇರೆ. ಸಾಹಿತ್ಯದ ಮೂಲಕ ಜೀವನ ವನ್ನ ಚಿತ್ರಿಸೋದಕ್ಕೆ ನೀವು ಹೊರಟೀರಿ. ನಾವು ಪ್ರತ್ಯಕ್ಷ....ಜೀವನಾಂ ದ್ರೇನು? ಮಾನವಾಂದ್ರೆ ಯಾರು? ಈ ಪ್ರಶ್ನೆಗೆ ಉತ್ತರ ಹುಡಕಾಕ ನಾನು ಹೊರಟೀನಿ. ಅದು ದಾರಿ ಸರಿಯೊ ತಪ್ಪೊ ಗೊತ್ತಿಲ್ಲ. ಆದ್ರೆ ಈ ದಾರಿಯಲ್ಲಿ ಹೊರಟಿದ್ದು ಮಾತ್ರ ನಿಜ. ಅದರ ಸಂಗಡಾ ಇದೂ ಒಂದ್ ಮಾತು ನಿಜ....ನನ್ನದೆ ಕೇವಲ ಅನ್ನೊ ಅಭಿಪ್ರಾಯ ನಾನು ಹಿಡೀಲಿಕ್ಕೆ ಹೋಗ್ಲಿಲ್ಲ. ಹೋಗಿಲ್ಲ ಇವತ್ತಿಗು, ನನದೆ ಅಭಿಪ್ರಾಯ....ನನ್ನ ವೈಶಿಷ್ಟ್ಯ

ಅಂತಾರಲ್ಲ... ...... ಕರೊಬರೇಷನ್ ಮತ್ತು ಕಂಪ್ಯಾರಿಸನ್ ಸಿಗದೇ ಇದ್ರೆ ನಾ ಮುಂದ ಹೊರಟಿಲ್ಲ. ನನಗೆ ಹೆಚ್ಚು ವಿಶ್ವಾಸ ಕೊಟ್ಟಿದ್ದು ಕ್ರಾಸ್ ಕಲ್ಚರಲ್ ಕರೊಬರೇಷನ್ ಅದೇ, ನಮ್ ದೇಶ್ದಲಿದ್ದದ್ದು. ಇನ್ನೊಂದು ಕಡೆ ಎಷ್ಟು ಹೆಚ್ಚಾಗಿ–ಗ್ರೀಸ್ ದೇಶದಲ್ಲಿ....ಸಾಧಾರಣ ನೋಡಿ ನಾನು ಬೆಪ್ಪ ಆದೆ. ಆ ಹುಚ್ಚು....ಹುಚ್ಚೆ ಇತ್ತು ನಂಗೆ. ನಮ್ಮಲ್ಲಿ ಇದ್ದುದ್ದು ಅಲ್ಲಿ ಇದ್ದುದು ಯಾಕಿರಬುಕು? ನಮ್ಮಲ್ಲಿ ಪ್ರಜ್ಞಾ ಅನ್ನೊದಕ್ಕ ಮಹತ್ವ. ನೌವ್ಸ್‌ಮೈಂಡ್ (Nousmind) ಅಂತಲ್ಲಿ ಇನ್ನೂ ಹೇಳ್ತಾನೆ. ಅರಿಸ್ಟಾಟಲ್. ನೌವ್ಸ್‌ಮೈಂಡ್ ಇಸ್ ದಿ ಫಸ್ಟ್ ಪ್ರಿನ್ಸಿಪಲ್. ಫಸ್ಟ್ ಪ್ರಿನ್ಸಿಪಲ್ ಅಂದ್ರೇನು....ಕಾರಣವೆ ಕಾರ್ಯ ಆಗ್ತಿತ್ತು...ಇವತ್ತು ನಾವು ಕಾರ್ಯಕಾರಣ ಸಂಬಂಧದ ಸ್ಥಿತಿಯಲ್ಲಿದ್ದೇವೆ. ಸ್ಪೇಸ್ ಟೈಂದಲ್ಲಿ ಕಾರ್ಯವೇ ಕಾರಣ ವಿನಾ ಕಾರಣವೆ ಕಾರ್ಯ ಆಗೂದುಲ್ಲ. ಕಾರಣವೇ ಕಾರ್ಯ ಆಗೋದು....ಮೊದಲ್ನೆ ಆದಿ ಕಾರಣದಲ್ಲಿ. ಆದಿ ಕಾರಣವೆ ಅದೃಶ್ಯ ಆಗಿರೋದರಿಂದ ನಾವು ಕಾರ್ಯಕಾರಣ ಸಂಬಂಧದಲ್ಲಿದ್ದೇವೆ. ನೌವ್ಸ್‌ಮೈಂಡ್ ಇಸ್ ದಿ ಫಸ್ಟ್ ಪ್ರಿನ್ಸಿಪಲ್. ಫಸ್ಟ್ ಪ್ರಿನ್ಸಿಪಲ್ ಲಕ್ಷಣವೇನು? ಅನ್‌ಮೂವ್ಡ್ ಮೂವರ್ [ಹೌದ ಹೀಗೇನೊ ಹೇಳ್ತಾನವ]... ತಾನು ಓಡ್ಯಾಡೊದಲ್ಲ. ಅದಿದ್ದಲ್ಲೆ ಇರ್ತದ ಇದ್ದು ನಮ್ಮನ್ನ ಓಡಾಡಿಸ್ತದ.ನಮ್ಮಲ್ಲಿ ಹೀಗೇನೊ ಆಗ್ಬೇಕೂಂತ ಬಂತು.ಆ ಅನ್‌ಮೂವ್ಡ್‌ಮೂವರ್ ನಮ್ಮಿಂದ ಮಾಡಿಸಿಬಿಡ್ತಾನೆ. ಇವತ್ತುನಾವು ಒಂದು ರೀತಿಯಿಂದ ಈ ಅನ್‌ಮೂವ್ಡ್‌ಮೂವರ ದುಡಿಸಿಕೊಂಡು ನಮ್ಮನ್ನ ದುಡಿಸಿಕೊಳ್ತಇದ್ದಾಗ ನಾವು ದುಡಿದಿದ್ದೇವೆ. ನಾವು ಅವನದಾಸರು ಈ ಅನ್‌ಮೂವ್ಡ್‌ಮೂವರ್ ಅಲ್ಲಿ ಅವ ನೌವ್ಸ್‌ಮೈಂಡ್ ಅಂಥೇಳದ ನಮ್ಮಲ್ಲಿ ಪ್ರಜ್ಞಾಯುಕ್ತ ಮನಸ್ಸು. ಮನಯೋರ್ಮನುಷ್ಯಾಣಾಂ ಕಾರಣಂ ಬಂಧಮೋಕ್ಷಯೋಃ ಆದ್ರ (ಇದನ್ನ) ನಾ ನಂಬ್ಲಿಲ್ಲ. ಮನಸ್ಸೆ ಆದಿ ಕಾರಣ ನಾನು ಇದ್ನ ನಂಬ್ಲಿಲ್ಲ. ಆದ್ರೆ ಅಲ್ಲಿ ಅನ್‌ಮೂವ್ಡ್ ಮೂವರ್ ಅಂತ ಹೇಳದ. ಇಲ್ಲಿ ಅನ್‌ಮೂವ್ಡ್ ಮೂವರ್ ನಮ್ ಮನ್ಸನೆ ಇರೋದ್ರಿಂದ....ಇದೆ ಅನ್‌ಮೂವ್ಡ್ ಮೂವರ್ ಅದ–ಅದೆ ದೇವ್ರು. ಅದನ್ನಾನು ಪೂಜಿಸ್ತ ಇರೋದು. ಪ್ರಕಾಶ ತತ್ವವೇ ದೇವರು....ಇವರು (ಕಾರಂತರು) ಎಂದೊ ಹೇಳ್ಯಾರೆ. ಬಾಳ್ವೆಯೆ ಬೆಳಕೂಂತ. ಆ ರೀತಿಯಿಂದ ಹೊರಟಾಗ ನನಗೆ ಇನ್ನೊಂದು ವಿಚಿತ್ರ ಕಂಡದ್ದು. ನಮ್ಮ ಸಂಸ್ಕೃತಿಯಲ್ಲಿ ಕೇವಲ ಸಿಂಬಾಲಿಸಂ ರಕ್ತ ಮಾಂವ್ಸದ ವ್ಯಕ್ತಿ ಶಿಗೊದೆ ಇಲ್ಲ. ಭಾಳ ದುರ್ದೈವದ ಸಂಗತಿ. ಅಲ್ಲಿ ಅರಿಸ್ಟಾಟಲ್ ಸಿಗತಾನೆ. ಪೈಥಾಗೊರಸ್ ಸಿಗತಾನೆ. ಮತ್ತೊಬ್ಬರ್ಯಾರಾದ್ರು ಸಿಗ್ತಾರೆ. ಮನುಷ್ರು ಅಲ್ಲಿ ಇದನ್ನ ಮಾಡ್ಯಾರೆ ಅನ್ನೊಹಾಗೆ ಕಾಣಸ್ತದೆ. ಈ ವ್ಯತ್ಯಾಸ ಯಾಕಾಯ್ತು ನನಗಿವತ್ತಿಗು ಗೊತ್ತಿಲ್ಲ

ನಮ್ಮಲ್ಲಿ ವಿಶ್ವಾಮಿತ್ರ ಅನ್ನೋದು ಸಿಂಬ್ಲಾಲಿಕ್ಕೆ ಹೊರತು ಪ್ರತ್ಯಕ್ಷ ವ್ಯಕ್ತಿಯಿಂದ ಅವನ ಮಾಡ್ಯಾರಂತ ಅನುಸೂದುಲ್ಲ. ನಮ್ ಸಂಸ್ಕೃತಿ ಅಂತನ್ನೊ ಅಭಿಮಾನೇನೊ ಉಂಟು ನನಗ. ಆದ್ರ ಈ ಅಭಿಮಾನ ನನಗೆ ಹೆದರ್ಕಿ ತರ್ತದೆ. .... ವೇದದ ವಾಕ್ಯಗಳನ್ನ ಉಪನಿಷತ್ತಿನ ವಾಕ್ಯಗಳನ್ನ ನಾ ಉಪಯೋಗ ಮಾಡೀನಿ. ಅದರ ಆಶಯು ಅರಿತುಕೊಳ್ಳೋ ಪ್ರಯತ್ನ ಪಡತಿರತೀನಿ ಆದ್ರು ಆದ್ರ ಅದರೊಳಗೆನೆ ನಂಬಿಲ್ಲ ನಾನು. ಮಾನವ ಶಾಸ್ತ್ರದಿಂದ ಅದಕ್ಕೆ ಬೆಂಬಲ ಸಿಕ್ಕಾಗ ಆವೇದ ವಾಕ್ಯಕ್ಕೆ ಏನೋಅರ್ಥ ಇರಬುಕು ಅಂತ ನಾ ತಿಳುಕೊಂಡೀನಿ. [ಯಾಕಂದ್ರರೆ ವೇದವೇ! mutilated ಆಗಿದ್ವ.] ಇವತ್ತು ನಮ್ ಮೊದ ಮೊದಲ್ನೇ ರೂಪದಲ್ಲಿ ಉಳುದಿಲ್ಲ. ಅಂದ್ರೇನು ! ಮೂಲದಲ್ಲಿ ಪ್ರಕಾಶ ತತ್ವವೇನಿತ್ತು. ಇವತ್ತು ಜೆನೆಟಿಕ್ ಅಪ್ರೋಚದೆ ವೇದದೊಳಗೆ ಮಾನವನಿಗೆ ಜೆನಿಟಿಕ್ ಅಪ್ರೋಚ್ ಇಸ್ ಲೇಟರ್. ಪಾಶ್ಚಾತ್ಯರೊಳಗು ಹೇಳಾತಾರೆ ನಾಗರೀಕತೆಯೊಳಗೆ ಮೊದಲು ಜೆನಿಟಿಕ್ ತತ್ವದಿಂದ ಮಾನವ ತಿಳಿದಿಲ್ಲ. ಮಾನವ್ ಇದ್ದಾನೆ. ಪ್ರಕಾಶ ತತ್ವಾ ಪ್ರಜ್ಞಾಯುಕ್ತ ಮನಸ್ಸು ಉಂಟು. ಸ್ವ ಉಪಜ್ಞ ಇದ್ದಾನೆ ಈ ಮನುಷ್ಯ ಈ ಸ್ವಉಪಜ್ಞತೆ ಪಶುಗಳಲ್ಲಿಲ್ಲ. ಈ ಸ್ವಉಪಜ್ಞತೆಯು ವೈಶಿಷ್ಟ ನನ್ನನ್ನ ಹುಚ್ಚನ್ನ ಮಾಡಿದೆ ಇವತ್ತಿಗು ಸ್ವಉಪಜ್ಞತೆಯು ಬೆಂಬಲ ಇದೇಂತೇನಾದರು ಅನ್ನಿದರೆ.......ಅಲ್ಲಿ ನಾನು ಹೇಳಬಿಡ್ತೀನಿ. ಅಥವ ಹೇಳೋ ಸಾಹಸ ಮಾಡ್ತೀನಿ. ಈ ನನ್ನ ಸಾಹಸ ದುಸ್ಸಾಹಸ ಆಗಿದೇನೊ ಒಂದ್ ರೀತಿಯಲ್ಲಿ. ಯಾಕಂದ್ರೆ ನಾನು ಪ್ರಾರಂಭದಲ್ಲಿ...ಬಹಾಳ ದುಃಖದಿಂದ ಈ ಸಂಶೋಧನ ಪ್ರಾರಂಭ ಮಾಡಿದೆ. ಭಾಳ ದುಃಖದಿಂದ ಕಳವಳದಿಂದ ಏನೊಂತ ಕೇಳಭೌದು. ನನಗೆ ವೇದದಲ್ಲಿಯ ಅದಿತಿ ಪಾತ್ರ... ಸಂದೇಹ ತಂತು. ಯಾಕೆಂದರೆ ಅವಳು ಜಲಸ್ವರೂಪಿಣೀಂತ ಹೇಳ್ತಾರೆ. ಯದ್ದೇವಾ ಸಲಿಲ....ಸಲಿಲೇರಹಾ ಸೋರಬಾಃ ಅತಿಷ್ಯತಿ . ನೀರಿನ ಹೊಟ್ಟೆಯೊಳಗಿದ್ದಾಗ ಭಾಳ ಸುಖದಿಂದ್ದಾರಪ ... ಹೀಗೇಳ್ಯಾರೆ .... ಅವಳು ಸೂರ್ಯನನ್ನ ಬಸುರಾದಳೂಂತಿದೆ ...ಸೂರ್ತ್ಯನ್ನಹಡೀತಾಳೆ. ಸೂರ್ಯನ್ನ ಆಕಿ ಹಡೀತಾಳಂದ್ರು.... ನನಗೆ ನಂಬ್ಲಿಕಾಗಲಿಲ್ಲ. ವೇದಾ ಪುಸ್ಸಿಸ್ತೀನಿಂತ ನನಗೆ ಹೆದರ್ಕಿ ಬಂತು. ಹಾಗಾದ್ರೆ ಏನು ಮಾಡ್ಬುಕು ? ಯಾರಾಗು ತಿಳಿದವ್ರೂಂತ್ಯಾರಿದ್ದಾರೆ ಅವ್ರಕಡೀಗೆ ಹೋಗಬುಕೂಂತ. ನಾ ಹೊರಟೆ ಇಲ್ಲೀ ಪಾಠಶಾಲೆಯಲ್ಲೆ—ಅವ್ರ ಹೆಸ್ರೆ ತೊಗೊಂಡು ಹೇಳತೀನಿ -ಅ.... ನಾಗೇಶಶ್ಯಾಸ್ತ್ರಿಗಳ ಮಕ್ಕಳು ಮಹಾ ಪ್ರಕಾಂಡ ಪಂಡಿತ ಬಾಲ್ಚಂದ್ರು ಶಾಸ್ತ್ರಿಯಂತಿದ್ದಾರೆ. ಅವರಲ್ಲಿ ಹೋದೆ. ನನಗೊಬ್ಬವ್ ನಿಗೆ ಹೋಗಲಿಕ್ಕೆ ಧೈರ್ಯ ಸಾಲದೆ ಎಂ.ಎ.

ಪಿ.ಎಚ್.ಡಿ. ಆದವ್‌ರೊಬ್ರು ದೇಶಪಾಂಡೆ ಅಂತಿದ್ದಾರೆ. ನಡ್ರಿಹೋಗ್ಗೋಣಾಂದೆ.... ಹೋದ ಕೂಡಲೆ ಭಾಳ ಮಂದಹಾಸ .... ಬರ್‍ರಿ ಕುತುಗೊಳ್ರಿ .. ....ಒಂದು ಪ್ರಶ್ನೆ ಕೇಳಬೇಕು .... ಏನು ? ಅದಿತಿ ಜಲಸ್ವರೂಪಿಣಿ ಸೂರ್ಯನನ್ನ ಹಡೀತಾಳೆ ? ಅವ ಚಂದ್ರನೆ ಇದ್ದಾನು ಹೊರ್‍ತು ಸೂರ್ಯ.... ಇರೋದಕ್ಕ ಸಾಧ್ಯಿಲ್ಲ. ಸೂರ್ಯನ . ಮಾರ್ತಾಂಡ ನಾಮಾನಂ ಸೂರ್ಯಂ ಅಂತಲ್ಲಿ ಕೊಟ್ಟಾರೆ. ಸಾಯಣನು .... ನಾಮಾನಂ ಅನ್ನೋದರೊಳಗೆ.... ಹೆಸರಿನ ಸೂರ್ಯ. ಅನ್ನೋದ್ರಲ್ಲಿ ಭಾಳ ಛಂದದೆ ಅಂತಂದೆ. ಸೂರ್ಯ ಲ್ಲಂವಾ. ಮಾರ್ತಾಂಡ ಹೆಸರಿನ ಸೂರ್ಯ. ಹೀಗೆ ನನಗ ನಿಸ್ತ್ಯ.... ನಾ ಮತ್ತ ಹತ್ಸಲ ಅವ್ರಿಗೆಹೋಗಿ .. ನಾ ಅವ್ರಿಗೆ ಇಷ್ಟೆ ಹೇಳಿದೆ.... ಮತ್ತ ಸೂರ್ಯ ನೀರೊಳಗಿಂದ ಹುಟ್ಟಿದ್ದು ಎಲ್ಯಾದರು ಕಥೆ ಪವಾಡಕಥೆ ಎಲ್ಲಾದರೂ ಇದ್ರೆ ನನಗೆ ಹೇಳಬುಕು .... ಒಳ್ಳೇದು ನೋಡ್ತೀನಿ ಅಂಥೇಳದ್ರು. ನಾಲ್ಕಾರು ಸರಿ ಅವರ ಕಡೀಗೆ ಹೋಗಿ ಕೂತು ಕೂತು ಬ್ಯಾಸರ್‍ಕಿ ಬಂತು. ಭಾಳ ಸಿಟ್ಟೂ ಬಂತು. ಇವ್ರು ತ್ರಿಳ್ದೂ ತ್ರಿಳ್ದೂ ವೇದದ ಅರ್ಥ ಬ್ಯಾರೇನೆ ಹೇಳ್ಲಿಕ್ಕೆ ಹಟಾ ಹಿಡೀತಾ ಇದ್ದಾರೆ. ಏನಿದು ಹಣೇಬರಾ.... ಅಂತಂದು ನಾನು ಹೇಳದೆ ಅವ್ರಿಗೆ. ನನಗ.... ಅನಿಸಿದ್ದನ್ನು ನಾ ಇನ್ನ ಹೇಳ್ಲಿಕ್ಕ ಸುರು ಮಾಡ್ತನೀಂತಂದು. ತಪ್ಪೋ ಒಪ್ಪೋ ನನಗೆ ಗೊತ್ತಿಲ್ಲ. ಆದ್ರೆ ಇಲ್ಲಿ ಹೀಗಿದೆ .... ವೇದ ಒಂದು ಸುಳ್ಳು ಹೇಳ್ತಾ ಇದೆ ಅಂಥೇಳಿದ್ದು ಅನೇಕರಿಗೆ ಸಹನಾಗಲಿಲ್ಲ. ಅದು ಇದ್ದುದು ಸುಳ್ಳೇ ಅಲ್ಲಾ ಸೂರ್ಯ ನೀರೊಳಗಿಂದ ಹುಟ್ಟಿದ .... ಇದಕ್ಕಿಂತ ಅಪ್ಪಟ ಸುಳ್ಳು ಏನೂ ಇಲ್ಲ. ಈ ಕಾರಣದಿಂದ ವೇದಗಳು ಇವತ್ತಿಂದಿನ್ನ ವಿಕೃತವಾಗಿದ್ದು ಮೂಲದ್ದು ಉಳದಿಲ್ಲ. ಆದ್ರಿಂದ ವೇದದಲ್ಲಿ ನನ್ನ ನಂಬಿಕೆಹೋಯ್ತು- ವೇದಡದಲ್ಲಿ ನಂಬಿಕಾಲ್ಲಿಂದ್ರೆ ವೇದದ ವಾಕ್ಯಗಳಆಶಯ ಗೊತ್ತಾಡಿಬೇಕಾಗಿದ್ರೆ ಅದಕ್ಕೇನು? ಮಾನವಶಾಸ್ತ್ರ. ಮಾನವ ಶಾಸ್ತ್ರದ ಕಡಿಂದ ಸಾಧ್ಯ.... ಅದರಲ್ಲಿ ಕ್ರೋಬರ್ kroeber ಎಂಬವ ಬಹಳ ಮೆರದಾನೆ ಆ ಕ್ರೋಬರನ ಪುಸ್ತಕ್ದಲ್ಲಿ ಅದಂತ ಅದೇಂತ ಒಮ್ಮೆ ಹಿಂದ ನೋಡಿದ್ದು— ಇವತ್ತು ನನಗ ಭರ್ವಸಿ ಇಲ್ಲ .... ಇಲ್ಲಿ ಇದ್ದ ಮಾನವಶಾಸ್ತ್ರಜ್ಞರು ಹೇಳಬುಕು. ದೈವ........ ಅವನ ಪ್ರಕಾರ ಸೂಪರಾಗ್ಯಾನಿಕ್ ಲೆವೆಲ್ ಮೇಲೆ.... ಮಾನವ ಸಂಸ್ಕೃತಿ ... ಸೂಪರ್ ಆಗ್ಯಾರ್ನಿಕ್ ಈ ಸೂಪರ್ ಆಗ್ಯಾನಿಕ್‌ದು ಸ್ಪೇಸ್‌ಟೈಮ್‌ದ ಹೊರಗೆ. ಎಲಾ ಇವನ.. ಅವಂಗೆ ಸಾಹೇಬಗೆ ಕಾಣಿಸ್ತ್ಯ ನಮಗ್ ಕಾಣ್ಸೆಲ್ಲ.... ಹ್ಲು ಏನಿದು ? ಅಂದ್ರೆ .... ದೃಷ್ಟಿ ನಮಗ ಅದ ಉಳದವ್ರಿಗ್ಯಾರಿಗು ಇಲ್ಲ.... ಈ ಅಹಂಕಾರೇನು ?........ ಹೀಗೆ ಪೆಟ್ಟು ತಿನ್ನಕೋತ... ನನ್ನನ್ನ ನಾ ಸುಟಗೋತ

ಹೊರಟಿದ್ದೀನೆ ಯಾಕೇಂತ ಕೇಳಿದರೆ ಈಗಿನ್ನು ಆನ್ದವೇ. ಆದ್ರಅದು ಇರ್ಲಿಲ್ಲ ಒಂದು ಕಾಲಕ್ಕ. ಆದ್ರ ಹುಚ್ಚು ನನ್‌ತಲಿ ಬಿಡವಲ್ದು. ನನ್ ಹೆಂಡತಿ ಸಹ ನವೂಡಿದ್ಲೂಂತ ಸಾಬದುಕಿದೆ ಇತ್ತೀಚೆಗೆ ನನಗೆ ಮತ್ತತಿಳಿದದ್ದು ಮಾನವನು ಪತಿತನಾಗ್ಯಾನೆ ಫಾಲ್‌ಆಫ್‌ಮ್ಯಾನ್–ಅಂಬೋದು ಆಪುಸ್ತಕ್ದಲ್ಲಿ ನೋಡಿದ ಮೇಲೆಹಾಗಾದ್ರೆ ನಾ ತಪ್ ಇದ್ದೇನೆ ಅಂತ ನನಗೆ ಅನಸವಲ್ದು. ಫಾಲ್‌ಆಫ್ ಮ್ಯಾನ್ ಇದು ನಿಜ. ಇಲ್ಲಿ ಫಾಲ್ ಆಫ್ ಮ್ಯಾನ್ .. ಮನ .... ಮಾನವ ....ನರ ಆಗ್ಯಾನ ಅಂತ ಹೇಳೋದ್ರೊಳಗೆ ಫಾಲ್‌ಆಫ್‌ಮ್ಯಾನ್ ಅಂತ್ಹೇಳಿ ತಿಳತದ. ಆಮೇಲೆ ಹಂಗಾದ್ರ ಮಾನವ ಫಾಲಾಗೂದಕ್ಕ ಕಾರಣೇನು ? ಒರ್ಜಿನಲಿ ಅಂದ್ರು ದೇವ್ರು ಅಂಬೋ ಶಬ್ದ ಉಪಯೋಗ ಮಾಡ್ಲಿಕ್ಕ ಪರ್ವಾನಗಿ ಕೊಡ್ರಿ— ಆ ದೇವ್ರುಅಂಬವಾ ನವುಗದೃಷ್ಟಿಯನ್ನ ಕೊಟ್ಟಿದ್ದ. ಪ್ರಜ್ಞಾನೇತ್ರ ಕೊಟ್ಟಿದ್ದ. ನಾವ್ಸ್ ಮೈಂಡ್ ಕೊಟ್ಟಿದ್ದ. ನಾವು ಅದಕ್ಕೆರವಾಗೇವಿ ನಾವು ನಮ್ ಬುದ್ಧಿಯಿಂದ ನೋಡ್ತಾ ಇದ್ದೇವಿ. ಬುದ್ಧಿ ಅಲ್ಲ .. ನಮಗೆ ಕಾಣ್ತಾ ಇರೋದು, ನಮ್ ಒಳಗಿನ ಆ ಪ್ರಜ್ಞಾನೇತ್ರದ ಮೂಲಕ ನಮಗ ಕಾಣ್ತದ. ನಮ್ಮಲ್ಲಿ ಒಂದು ಬಹಾಳ ದೊಡ್ಡ ಶಬ್ದ ಅದ....ಶಬ್ದಾಂದ್ರ ಸಂಕೇತ .... ಜಾತವೇದ ಅಗ್ನಿ....ಅದು ನನ್ನನ್ನ ಮುಗ್ಧನನ್ನಾಗಿ ಮಾಡಿದೆ. ಮ್ಯಾಜಿಕ್ಲ್ ಶಬ್ದ. ಜಾತವೇದ ಅಗ್ನಿಯೊಡನೆ ನಾವು ಹುಟ್ಟಿದ್ದೇವಿ. ಅಗ್ನಿ ಜಾತ ವೇದ ಹುಟ್ಟಿದಾಗಲೆ ನಮ್ ಹತ್ರ ಅದೆ ಅದು. ಅದೆ ಪ್ರಜ್ಞಾ. ಪ್ರಜ್ಞಾಯುಕ್ತ ಮನಸ್ಸು. ಇದನ್ನ ನಮಗ ದೇವರು ಕೊಟ್ಟಾನೆ. ಆದ್ರ ನಾವು ಕಳಕೊಂಡೀವಿ. ಮತ್ತು ಅದರ್ಮೆಲೆ ವಿಶ್ವಾಸ ಇಡೋದೂ ಕಷ್ಟ ಬಂತು. ಅದರ ಕಾರಣಾಂದ್ರೆ ನಾವು ...ಸ್ಥಳ ಕಾಲದ.... ಸಾನಿಧ್ಯದೊಳಗ ಬಂದು ಕೂತೇವಿ. ನಮ್ಮನ್ನ ಬಂಧಿಸೋದೆ ಈ ಸ್ಥಳಕಾಲ ಅಂದ್ರ ....ನಾವು.... ಭೂಮಿ ಪುತ್ರರು ... ಭೌಮಾಸುರರಾಗೇವಿ. ಹಾಗಾದ್ರೆ ಇದಕ್ಕೇನು ? ಇಲ್ಲಿ ನೌವ್ಸ್‌ಮೈಂಡ್ ಅಂದ್ರೇನು ಅನ್ನೊದೊಂದು ನನಗ ಪ್ರಶ್ನೆ ಬಂತು. ನಾವ್ಸ್‌ಮೈಂಡ್ ಖಾತ್ರಿಯಾಗಿ ಮಾಡಿಕೊಳ್ಳಕ್ಕೆ ಈ ಪುಸ್ತಗಾ ಉಪಯೋಗ ಬಿದ್ವು. ನಮ್ಮ ಇದರಲ್ಲಿ. ನಾಲ್ಕನೆ ವಾಲ್ಯೂಮ್. ಕೊಡಿಲ್ಲಿ........ಅದರಲ್ಲಿ ನಾವ್ಸ್‌ಮೈಂಡ್ ಅಂದ್ರೇನು ಅನ್ನೊದರದ್ದು ವಾಖ್ಯಾನ.......ಇಲ್ಲಿ ಅವ ಕೊಡ್ತಾನ....... ಮೆಂಟ್ಲ್‌ಸೀನ್ ಆರ್ ಸೀನ್ ಇಸ್ ನೋಯಿಂಗ್. ಮೆಂಟ್ಲ್‌ಸೀನ್ ಆರ್ ಸೀನ್ ಇಟ್ಸೆಲ್ಫ್ ಇಸ್ ನೋಯಿಂಗ್. ಕಾಣಿತ್ಯು....ಕಾಣುವುದರ ಮೂಲಕ ಆಗೊ ಜ್ಞಾನ. ಹೌದೊ ಅಲ್ಲೊ ? ....ಪೋರ್ತ್ ವ್ಹಾಲ್ಯುಮ್........ ಈ ಪೋರ್ತ್ ವ್ಹಾಲ್ಯುಮ್‌ದೊಳಗೆ ನನಗ ನೋಡೋ ಮುಂದ ಒಂದು ಆಶ್ಚರ್ಯನಿಸ್ತು. ಅಂದ್ರ ಇವು ಪೈಥಾಗೊರಸ್ ಅನ್ನೊವ್ನಿಗೆ ಸೆಚ್ಚು!

ಸೆಡೆವು ಇದ್ದಾರೆ. ಮೆಂಟ್ಲ್ ಸೀಯಿಂಗ್ ಅದ್ನೇನು ಹುಡುಕ್ಲಿಕ್ಕೆ ಹೊರಟಿಲ್ಲ. ಇವ್ರಿಗೆ ಸೈಕೆ ಆರ್ ಸೈಕಾಲಜಿ ಅನ್ನೋ ಶಬ್ದ ಹೋಮರ್‌ನಲ್ಲಿದೆ ಅದು ಏನೂಂತ ಹುಡುಕ್ಲಿಕ್ಕೆ ಹೊರಟಾರ.ಹೋಮರ್‌ನಲ್ಲಿ ಸೈಕೆ ಅದ. ಆದ್ರ....ಸೈಕಾಲಜಿ ಅನ್ನೊ ಸಂಪೂರ್ಣ ಶಬ್ದಿಲ್ಲ. ಹಾಗಾದರ ಏನದ ಹೋಮರ್‌ನಲ್ಲಿ ? ನೋಡುವಾಗ ಹೋಮರ್‌ನಲ್ಲಿ ನೌವ್ಸ್‌ಮೈಂಡ್ ಇದೇಂತ ಕಂಡಿತು....ಈ ನೌವ್ಸ್‌ಮೈಂಡ್ ಇದ್ದದ್ದು ...ನಮ್ಮಲ್ಲಿ ಪ್ರಜ್ಞಾನೇತ್ರಾಂತ ಇದ್ದದ್ದು ಇವು ಎರಡೂ ಸಮಾನಾರ್ಥದ್ದು ಅಂತ ನನ್ನ ತಿಳುವಳಿಕಿ. ನೌವ್ಸ್‌ಮೈಂಡ್ ಆರ್ ಮೆಂಟ್ಲ್‌ಸೀಯಿಂಗ್ ಮತ್ತು ಪ್ರಜ್ಞಾನೇತ್ರ ಈ ಸಮಾನತೆ ಯಾಕೆ ಎಲ್ಲಿಂದ್ ಬಂತು. ಇದು ನನಗೂ ಗೊತ್ತಿಲ್ಲ. ಹೀಗಿದೆ. ಈ ಶಬ್ದಗಳನ್ನೇನು ನಾವು ಮಾಡಿದ್ದಲ್ಲ. ಅವಶ್ಯಕತೆಗಾಗಿ ಒಂದು ಕಾಲದಿಂದ ಬಂತು. ಅನ್ನೋದಲ್ಲ. ಆದ್ರ ಇಲ್ಲಿ....ಒಂದು ಗಿಫ್ಟ್ ಅಂತ್ಹೇಳ ತಿಳಕೊಬೌದು. ಹ್ಞಾ....ಒಂದು ರೀತಿಯಿಂದ ನಾನು ಕ್ರೋಬರನ್ನ ಬಾಯಲ್ಲಿ ಹಾಕ್ತ ಇದ್ದೀನಿ. ನನಗೆ ಧೈರ್ಯಿಲ್ಲ. ನಾ ನೋಡೇನೊ ಇಲ್ಲೊ... ಲಾಂಗ್ವೇಜ್ ಆ್ಯಂಡ್ ಕಲ್ಚರ್ ಆರ್ ಟು ಗಿಫ್ಟ್ಸ....ಗಿಫ್ಟ್ಸ ಅಂತಂತಾನ ...ಹೌದೇನು ನಂಗೊತ್ತಿಲ್ಲ....ಅವ್ರು ಹೇಳಬೇಕು........ಸೂಪರ್ ಆರ್ಗ್ಯಾನಿಕ್ ಲೆವೆಲ್ ಮೇಲದೆ.

ರುದ್ರಪ್ಪ : ಅದ ಕರೆಕ್ಟ....ಸೂಪರಾರ್ಗ್ಯಾನಿಕ್ ಲೆವೆಲ್ ಮೇಲದಂತ ಹೇಳ್ತಾನೆ

ಶಂಬಾ : ಹಾಗಾದರ ಅಲ್ಲಿಂದ ಎಲ್ಲಿಗೆ ಬಂತು ? ಅನ್ನೊ ಡಿಸ್ಕಷನ್‌ದೊಳಗನೊ ಏನೊ ಅವಂತಾನ ಆ ಫಾರ್ಮ್ ಆಫ್ ಥಾಟ್ ಏನದ .. ಅದೆ ತತ್ವ ಇದ್ದದ್ದು. ಅಂದ್ರ ಜಗತ್ತಿನಲ್ಲಿ....ಮಾನವನಿಗೆ ಇದ್ದ ದೃಷ್ಟಿ....ಒಂದೆ ಸ್ವರೂಪದ್ದದ ನಮ್ಮಲ್ಲಿ ಪ್ರಜ್ಞಾನೇತ್ರ ಇದ್ರ ಅಲ್ಲಿ ನಾವ್ಸ್‌ಮೈಂಡದ.ನೌವ್ಸ್‌ಮೆಂಡ್ ಅಂದ್ರೇನು? ಸೀಯಿಂಗ್ ಇಸ್ ನೋಯಿಂಗ್. ಅಥವ ಮೆಂಟ್ಲ್ ಸೀಯಿಂಗ್....... ನಾವು ಮೆಂಟ್ಲ್ mentally ತಿಳಿಕೊಳ್ತಿವಿ ಆದ್ರು ಬುದ್ಧಿಗೆ ಅದ್ರ ಕೆಡಿಟ್ ಕೊಡ್ತಿವಿ. ಇವ್ರಿಗೆ ಸಹಾ. ನಿಮಗೆಷ್ಟೊ ಸಲ ಹೌದೂಂತ ಅನ್ನಿಬಿಡ್ತದ. ಹೌದೂಂತನ್ನಿದ್ದು ಬುದ್ಧಿ....ಈ ರೀಸನ್ನಿಂದ ಹೇಳ್ಲಿಕ್ಕ ಹೋಗ್ತಿವಿ. ರೀಸನ್ ಕಡಿಂದ ಆಗ್ತದ. ಯಾಕೇಂದ್ರ ರೀಸನ್ ಇಸ್ ಸಿಚುಯೇಷನಲ್ ಲಾಜಿಕ್. ಸ್ಪೇಸ್ ಟೈಂ .. ಇದರೊಳಗೆನೆ ಬರ್ತದೆ. ಬರ್ಗ್‌ಸನ್ ಬಹಳ....ಸಮಯು ಅನ್ನೋದರ ಮೇಲೆ ಹೇಳ್ತಾನ. ಅಂದ್ರ ನಮಗೆ ಅನಿಸಿದ್ದ ಇದೆ ಖರೇವು ಅಂತಿವಿ ಎಷ್ಟೋ ಸಲ....ಅದು ಈಗ ಅವಗ ಅನಿಸಿದ್ದಾಂತ ಅದಕ್ಕಂತೀನಿ ...ಅದು ಒಂದು ಪ್ರಜ್ಞಾ ನೇತ್ರದ ಸಾಮರ್ಥ್ಯ ಹೀಗಿರೋದು. ಈ ರೀತಿ ತಿಳ್ಕೊಳ್ಳೊ ಪ್ರಯತ್ನದೊಳಗ

ನಾನೇನೊ ಸಾಯ್ಕೋತಿಲ್ಲಿ ಬಂದೀನಿ. ನಿಮ್ಮಂಥೋರು ಬಂದಾಗ ಮತ್ತ ಹೆದರ್ಕಿ ಹುಟ್ತದ ನನಗ. ನಾ ಎಷ್ಟ್ ಸಣ್ಣಂವ ಅಂತನ್ನೋದು ವನಗ್ ಗೊತ್ತದ....ನನ್ನಲ್ಲಿ ಎಷ್ಟು ಅಲ್ಪತ್ವ ಅದಂತಂಬೋದು ತಿಳಿದಿದ್ದರಿಂದೆ ಆ ಕೀಳರಿವೆ ನಾ ಹಿಡಕೊಂಡೆ ಹೊರಟೀನಿ. ನಾನು ತಿಳಿದದ್ದು ಸರಿಯೇನೊಂತ. ನಾಲ್ಕ ಮಂದಿ ಹೌದೂಂತ ಅನ್ನದಿದ್ರು ಅದು ಅಲ್ಲಾಂತ ನಾ ಬಿಟ್‌ಬಿಡ್ಲಿಕ್ಕ ತಯಾರಿದ್ದೀನಿ. ಆದಕ್ಕಂಟಿಗೊಂಡು ಕೂದ್ತೀನಿ. ಆದ್ರ ಅಲ್ಲಾಂತ ಹೇಳಿದ್ರು ಬಿಟ್‌ಬಿಡ್ಲಿಕ್ಕು ತಯಾರಿದ್ದೀನಿ. ಆದ್ರೆಆ ರೀತಿಯಿಂದ ಯಾರೂ ಅಲ್ಲಾಂತ ಘಟ್ಸಿ.... ಅಲ್ಲಾಂತನ್ಲಿಕ್ಕ ಹೋಗ್ಲಿಲ್ಲ. ಈಗ ಮಾನವ ನರ ಆಗ್ಯಾನೆ ಅಂತ್ಹೇಳಿದ ಮೇಲೆ.... ಬಹಾಳ ಮಂದಿ ಮೂಗು ಮುರು ಕೊಂಡ್ರು. ಆದ್ರ ಅಲ್ಲಾಂತ ಯಾರೂ ಹೇಳ್ಲಿಕ್ಕ ಹೋಗ್ಲಿಲ್ಲ. ಯಾಕಂದ್ರ ಪ್ರಮಾಣ ಸುಳ್ಳಾಗ್ತಿತ್ತು. ತತ್ ಪುರುಷಾ ಅಮಾನವಾ. ಉಪನಿಷತ್ ನಲ್ಲಿ ಇದೆ. ತತ್‌ಪುರುಷಾಅಮಾನವಾಂತ. ಉಪನಿಷತ್‌ನಲ್ಲಿ ಇದೆ. ತತ್‌ಪುರುಷಃ ಅಮಾನ್ವಾಂತ ಪುರುಷಾಂದ್ರ ಯಾರು ? ಅಲ್ಲಿಸಿಗ್ತದ. ಪುರಿಶಯತೆ ಇತಿ ಪುರುಷಃ ಇದೂ ಉಪನಿಷತ್ತಿನಲ್ಲಿರೊ ಅರ್ಥ. ಪುರದೊಳಗೆ ಮಲಕೊಳ್ತಾನೆ.

ಶಂಬಾ : ಪುರದಲ್ಲಿ ಇದ್ದಾನೆ. ಪುರ ಅಂದ್ರ ಯಾವ್ದು ? ಪುರಿ.... ಶಯತೆ. ಆ ಪುರ್ದೊಳಗೆ ಮಲಕೊಂಡವ ಇವಾ ಯಾರು? ಲಿಂಗಪ್ಪನೆ. ಅನ್ನೋ ಅರ್ಥಾಗ್ತದ ಪಾಶ್ಚಾತ್ಯರು .. ಪುರ ವೇದದೊಳಗೆ ಎಷ್ಟುಕಡಿ ಬಂದದ ಹುಡುಕಿ ಅದಕ್ಕೊಂದು ನಿಶ್ಚಿತಾರ್ಥ ಹೇಳಿದ್ರು ಇದೊಂದು ಹಾಂವುಗಳರೊ ಗುದ್ದು. ಊರವಾಸೀಲ ....ಅಂದ್ರ ಈ ಅಹಿವೃತ್ತ ಇರೊ ಜಾಗ ಆದು. ಇದಕ್ಕ ಹೆಸುರು ಅಹಿಹುತ್ತ.

ಮಹಿಷಿ : ಹುತ್ತ ...ಗುತ್ತ .. ವೃತಾ or ಹುತ್ತ ?

ಪತ್ರಕರ್ತರು : ಹುತ್ತು ಹುತ್ತು....ಸಣ್ಣಜಾಗ. ಹಾವು ಹಾವು. ಹುತ್ತು

ಶಂಬಾ : ಅಂತ ಹೇಳತಾರೆ ಇದನ್ನ ನಾನು ಹೇಳಿದೆ. ಮುಂದಿಗೆ ಸಿಟ್ಟೇನೊ ಬಂತು. ಆದ್ರ ಅಲ್ಲ ಅಂತ್ಯಾರೂ ಅನ್ಲಿಲ್ಲ. ಆದ್ರೆ ಇದರಿಂದೆ ಹೌದೂಂತ ಅರ್ಥಾಗೊದುಲ್ಲ. ಅಲ್ಲ ಅಂತ್ಯಾರೂ ಅನ್ನದಿದ್ರು ಅದ್ಕ ಹೌದೂಂತ ಹೇಳ್ಲಿಕ್ಕಾಗೂದುಲ್ಲ. ಅದಕ್ಕ ಹೆದರ್ಕಿ ನನಗ.... ಭಾರತೀಯ ಸಂಸ್ಕೃತಿ ಕೀಳಲ್ಲ .. ಭಾಳದೊಡ್ಡದು ಇದಕ್ಕ ನಾವು... ಉತ್ತರಾಧಿಕಾರಿಗಳಿದ್ದೇವಿ ಆದರೆ ಈ ಉತ್ತರಾಧಿಕಾರತ್ವದೊಳಗೆ ಕೊರತೆ ಒಂದೆ ಅಂದ್ರ ಸಂಸ್ಕೃತಿ

ಮಾಡಿದವ....ರೂಪಿಸಿದವ.... ರಕ್ತಮಾಂಸದ ಮನುಷ್ಯ ಯಾರು ತಿಳಿಯೋದಿಲ್ಲ. ಕೆಲವಟ್ಟಿಗಾದರು ಯಾರು ಅನ್ನೋದು ತಿಳಿಯೋದಿಲ್ಲ.

ಪತ್ರಕರ್ತ : ನೀವು ಮಡಿಕೇರಿ ಸಾಹಿತ್ಯ ಸಮ್ಮೇಳನದ ಭಾಷ್ಣಾ ಮಾಡ್ತಿರುವಾಗ ಸಾಂಸ್ಕೃತಿಕ ಸತ್ಯವನ್ನು ಕಂಡು ಹಿಡಿಲಿಕೆ ಹೊರಟೆ ಅಂತ ಹೇಳಿದ್ರಿ. ಅದರಲ್ಲಿ ನೀವು ಎಷ್ಟರವಟ್ಟಿಗೆ ಯಶಸ್ವಿಯಾಗಿದ್ದೀರಿ? ಇನ್ನ ಎಷ್ಟಾಗ ಬೇಕಾಗೇದ ?

ಶಂಬಾ : ಹೌದೌದು ಹೇಳಿದ್ದೆ....ಕೆಲಸ ಭಾಳ ಆಗಬೇಕಾಗೇದ.

ಕಾರಂತ : ಸಂಸ್ಕೃತಿ ಅಂತಂದ್ರೆ ಒಂದೇ ಗಂಟು ಹುಡುಕೋದಂತರ್ಥವೋ ? ಸಂಸ್ಕೃತಿಯಲ್ಲಿ ಎಷ್ಟು ವಿಷ್ಯ ಸೇರಿದೆ. ಯಾವುದೋ ಒಂದು ಚೂರು, ಒಂದು ಭಾಗ ನೀವು ತಿಳೀಲಿಕ್ಕೆ ಪ್ರಯತ್ನ ಮಾಡ್ತೀರಿ. ಅದು ಇಡೀ ಜಗತ್ತಿನ ನಡವಳಿಕೆಯನ್ನೆ, ಥಾಟನ್ನೆ ವ್ಯಾಪಿಸಿದ್ದು. ಯಾವ ವಿಷಯದ್ದು ನಿಮಗೆ ಬೇಕು? ಅದು ಸ್ಪಷ್ಟ ಇನ್ನೊಂದು ವಿಷಯ ತಕ್ಕೊಂಡಾಗ ಗೊತ್ತಾಗತ್ತೇ ಹೊರ್ತು, ಒಟ್ಟಿಗೊಂತಕೊಂಡು ಅದರಲ್ಲೇನಾಯ್ತೂಂತ ಕೇಳಿದ್ರೆ....

ಶಂಬಾ : ಲಿವಿ ಸ್ಟ್ರಾಸ್ ಅಂತೊಬ್ಬ ಫ್ರೆಂಚ್ ಸ್ಕಾಲರ್ರು... ಅವ್ನ ನೆನಪಿಗೆ ಬರ್ತಿದ್ದಾನೆ ಅವನು....ಮಾನವಾಂಬೊ ಪ್ರಾಣಿ ಸಮಾನಿದ್ದಾನೆ ಜಗತ್ತಿನಲ್ಲಿ ಪ್ರಪಂಚದಲ್ಲಿ ಅಂತ್ಹೇಳಿದ್ದರಿಂದ ನಂಗೂ ಒಂದ್ಸ್ವಲ್ಪ ಧೈರ್ಯ ಬಂತು. ಯಾಕ್ರಂದ್ರು ಅವ್ನ ಜಗತ್ತು ನೋಡಿಕೊಂಡು ಹೇಳ್ತಾ ಇದ್ದಾನೆ .ಗ್ರೇಟ್ ಸ್ಕಾಲರ್....ನಾನು ಅದನ್ನೂ ಗಟ್ಟಿಹಿಡಕೊಂಡು 'ಮಾನವಾ' ಅನ್ನೋದು ... ಮಾನವನ ಬಗ್ಗೇನೆ ಒಮ್ಮೆ ಪ್ರಶ್ನಿ ಬಂತು. ನನ್ನ ಒಬ್ಬ ಪ್ರೊಫೆಸರು....ಐಯಂಗಾರ್ ಅಂತಿಲ್ಲ....ಅಗ್ರಿಕಲ್ಚರ್ ಕಾಲೇಜದೊಳಗೆ ಪ್ರೊಫೆಸರಿದ್ರು....ಅವರು ಷೇಕ್ಸ್ಪೀಯರರನ್ನ ಪಾತ್ರಗಳನ್ನ ಮಾಡೋದ್ರುಲ್ಲು ಗಟ್ಟಿಗರು ನಂದೂ ಅವರ್ದೂ ಪರಿಚಯಾಗಿತ್ತು. ನೀವು ಮಾನವಾ ಮಾನವಾ ಅಂತೀರಲ್ಲಾ....ಎಲ್ಲಿದ್ದಾನೆ ಈ ಮಾನವಾ ? ನನಗೆ ಕಾಣ್ತಿರೋದು ವ್ಯಕ್ತಿಗಳು. ಮಾನವಾಂದ್ರೇನು? ಅಂತ ಕೇಳಿದ್ರು ಇದೆ ನನಗೂ ಗುಂಗು ಬಿತ್ತು ಹಾಗಾದ್ರೆ ಮಾನವಾನ್ನೋದು ನಮ್ಮ ಕಲ್ಪನೆಯೋ? ಎಂದು ಮಾಡಿದ್ರಿ? ಈ ಮಾನವಾಂದ್ರೆ ಯಾರು? ಎಲ್ಲಿದ್ದಾನೆ? ಮಾನವಾಂದ್ರ್ಯಾರು? ನಾವಿವತ್ತು ವ್ಯಕ್ತಿಗಳೆ, ಇಷ್ಟ್ ಕೊನೆಗೆ ಗೊತ್ತಾದದ್ದು. ಈ ಮಾನವಾಂಬೋವ ಸ್ಥಳ ಕಾಲದ ಪರಿಸರದಲ್ಲಿಲ್ಲ. ಇಲ್ಲಿರೋವ ನರನೆ. ಹಾಗಾದ್ರೆಲ್ಲಿದ್ದಾನೆ!

ಐನ್‌ಸ್ಟೀನರ ಪರಿಭಾಷೆಯಲ್ಲಿ ಹೇಳೋದಾದರೆ ಎಕ್ಸ್ಟ್ರಾ ಪರ್ಸನಲ್ ಲೆವೆಲ್ ಮೇಲೆ....ರಿಯಲಿಟಿ ಇದೆ. ಮತ್ತೆ ಕ್ಯೂಬರ್ ಸುಪರಾರ್ಗ್ಯಾನಿಕ್ ಲೆವಲ್ಲನೆ ಬಂತು. ಎಕ್ಸ್ಟ್ರಾ ಪರ್ಸನಲ್ ಲೆವೆಲ್ ಮೇಲೆ .. ಮಾನವಿದ್ದಾನೆ. ಇದನ್ನ ಮಾಡಿ ಮಾಡಿಸುವ ಸಮರ್ಥನೂ ಅಲ್ಲಿದ್ದಾನೆ.... ಹೀಗೇನೊ ನಂಬಿಕೊಂಡೇನ್ರಪಾ........

ಮಹಿಷಿ : ಇದೂ ....ಅರವಿಂದರ ತತ್ವಕ್ಕೆ ಹೋಲತ್ತೊ ಅದು?

ಶಂಬಾ : ಶಿವ ಶಿವಾ....ಅರವಿಂದರ ಬಗ್ಗೆ ನನಗೆ ತುಂಬಾ ಆದರ.ನೋಡಿದೆ.ಆದರೆ....

ಮಹಿಷಿ : ಸೂಪರ್ ಮ್ಯಾನಂತ ಹೇಳ್ತಾರಲ್ಲ ...ಸುಪ್ರಾಕಾಂಶಸ್........

ಶಂಬಾ : ಆದರಲ್ಲಿ ಸೂಪರ್‌ಮ್ಯಾನ್ ಬಗ್ಗೆ ಹೇಳ್ತಾನಲ್ಲವಾ....ದೈತ್ಯ....ಯಾರದು? ನೀಷೆ....ಫ್ರೆಡರಿಕ್ ನೀಷೆ. ಅವನಿಗೆ... ಸಂಸ್ಕೃತದ್ದು ಎಲ್ಲೊ ತ್ತಟ್ಟಿಂದ ಸ್ವಲ್ಪ ಗೊತ್ತಾಗಿರಬೌದು....ಹೇಳ್ತಾನೆ....ದೈತ್ಯ ಅವಾ ಅಲ್ಲ....ಸೂಪರ್ ಮ್ಯಾನ್ ಇತ್ಯಾದಿ ಸುಮ್ನೆ ನಾವು ಅಂತೀವಿ. ಮ್ಯಾನನೆ ನರ ಆಗ್ಯಾನೆ ಅಂತನ್ರಿ. ನರರು ಸುಪರ್ ಇದ್ರೆ ಅವ್ನ ಮಾತು ಖರೆ. ನಾವಿವತ್ತು ಮನುಷ್ಯತ್ವಕ್ಕನೆ ಎರವಾಗೇವಿ. ನಮಗೆ ಪ್ರಜ್ಞಾನೇತ್ರ ಹೋಯ್ತು. ನಾವ್ಸೆ ಮೈಂಡ್ ಇಲ್ಲ. ಇಂದ್ರಿಯಗಳೆ....ಇವತ್ತು ಇಂದ್ರಿಯದ ಪಾತ್ರಗಳಿಗೆ ಮೀರಿದ್ದಿಲ್ಲ. ಈ ಎಂಪೆರಿಕಲ್ ಲೆವೆಲ್ ಮೆಚ್ಚಿಗೊಳ್ಳಿದ್ದೀವಿ. ಹಾಗಾದ್ರೆ ಇದನ್ನ ಬಿಟ್ಟು ಮುಂದೆ ಗತಿಯೇನು ? ಅದು ತಿಳೀದು ನನಗೆ. ನಾನಿಷ್ಟೆ ಹೇಳಭೌದು ..ಒಂದು ಹೊಸ ರೀತಿಯಲ್ಲಿ ಫಾಲ್‌ಆಫ್ ಐಡಿಯಲ್ಸ್. ನಾವು ಆದರ್ಶದ ಹತ್ತರಿರೊ ಖಟಪಿಟಿ ಮಾಡತಿರ್ತೇವೆ. ನಾಟ್ ಫೇಲ್ಯೂರು, ಬಟ್ ಲೋ ಏಮ್ ಇಸ್ ಕ್ರೈಮ್... ಅಂತ ಒಬ್ಬ ಪಾಶ್ಚಾತ್ಯಕವಿ....ಭಾಳ ದೊಡ್ಡಕವಿ ಹೇಳ್ತಾನೆ. ಆದ್ರೆ ಇವತ್ತು ಲೋ ಏಮ್ ಕ್ರೈಮ್ ಅಂದ್ರೆ ...ಹಾಗಾದ್ರೆ ...ಆಕಾಶ ನೋಡ್ಕೊಂಡು ನಡಿ .. ಅಂತ ಚೇಷ್ಟೆ ವಿಷಯದ ಮಾತು. ಅದ್ರೆ ಹಾಗಲ್ಲ. ನಾವು ನಮ್ಮ ಆದರ್ಶವನ್ನೆ ಮೇಲಿಡದಿದ್ರೆ, ಫಸ್ಟ್ ಕ್ಲಾಸ್‌ದಲ್ಲಿ ಬರ ಬುಕೂಂದ್ರೆ ಥರ್ಡ್‌ಕ್ಲಾಸೆ ಆಗ್ತದ.... ನಾನ್ ಥರ್ಡ್‌ಕ್ಲಾಸ್‌ನೊಳಗನೆ ಇದ್ದೇನೆ ಅಂತಂದ್ರೆ ಮುಗಧೋತು ....ಅಂದ್ರು ಮತ್ತೆ ರೀ ಇನ್‌ಸ್ಟೇಟ್ ಆಗಬಕಾಗಿದ್ರೆ ಶಕ್ಯ ಇದ್ದಷ್ಟು ಆದರ್ಶದ ಮಟ್ಟವನ್ನ ಎತ್ತರಿಸ್ಲಿಕ್ಕೆ ಖಟಪಿಟಿ ಮಾಡಬೇಕು. ಸಾಧ್ಯನೊ ಇಲ್ಲೊ ಗೊತ್ತಿಲ್ಲ. ಯಾಕಂದ್ರು ನಾವು ಸ್ಪೇಸ್ ಟೈಂದ ಹೊರಗೆ ಇಲ್ಲಿ ಬಂದು

ಬಿಟ್ಟೇವಿ....ನಮಗ ಪ್ರಕಾಶ ತತ್ವದ ಲೆವೆಲ್‌ದಲ್ಲಿಯೆ ವಿಚಾರ ಮಾಡೋದು ಆಗ್ತಾ ಇಲ್ಲ. ಯಾಕಂದ್ರ....ಒಬ್ನೆ ಏನು ವಿಚಾರ ಮಾಡ್ತಾನೆ? ಸಮಾಜದಲ್ಲಿ ಬೆರತರ ಅದು ಸಾಧ್ಯ.....ಮಾನವಾ ಸಮಾಜದ ಅಂಗ.... ವ್ಯಕ್ತಿ ಅಂಬೋದಕ್ಕೆ ಸ್ವತಂತ್ರ ಅಸ್ತಿತ್ವ ಇಲ್ಲ...ಸಮಾಜದಂಂತ ವಕ್ತಿ ಇದ್ದಾನೆ. ಆದ್ರು ನಾ ಇದ್ದೀನೀಂತ ಸಮಾಜದೇಂತ ಇವತ್ತು ನಾವು ಹೊರಟೇವಿ. ಎಲ್ಲಿದೆ ಸಮಾಜಂಬೋದು ? (ನಗುತ್ತಾ) ಕಾಲ್ಪನಿಕ. ನಾ ಹಾಗನ್ನಿಕ್ಕ ತಯಾರಿಲ್ಲ. ಈ ವ್ಯಕ್ತಿ ಮತ್ತು ಸಮಾಜ, ಮಾತು ಮತ್ತು ಇದು....ಇನ್ನೊಂದು....ಏನಾದ್ರು ಒಂದು ಹೊಸದು ಅನ್ಸ್‌ನೇಕು ಅದರ ಬೆನ್ನ ಹತ್ತಿ ಹೋಗೋದು. ನನ್ ಲೇಖನಗಳೆ ನನಗೆ ಬೂಸಾ ....ಬಾಯ್ತುಂಬುಲಕೆ ಕೈಯಾನುವರೆ....ಅಂತಂದು ಕುಮಾರವ್ಯಾಸನ ಭಾರತ ದೊಳಗ ಬರ್ತದ....ನಾನು ಹಚ್ಚಿದರ್ಥಾಂದ್ರು....ಬಾಯ್ತುಂಬುಲ.... ಇದನ್ನ ತೊಗೊಂಡು ತಿನ್ನಿದ್ರು. ಅನ್ನೊ ಅರ್ಥ ನನಿಗನ್ನಿಸ್ತು. ಆದ್ರು ಬೆಟಗೇರಿಯವ್ರಿಗೆ ಅಂಜುಳಿಯೊಳಗಿತ್ತು ಅಂತ ಬಂದಕೂಡ್ಲೆ...ಅಂಜುಳಿ ಅಂದ್ರು ಪೀಕದಾನಿ. ಪೀಕದಾನಿಯೊಳಗ ಚೆಲ್ತಿದ್ರು. ಆದರೆ....ಮರಾಠಿ ತುಲನೆಯಲ್ಲಿ. ನನಗ ಅದು....ಅಸಲ್ ತಿಳೀತು. ಅಲ್ಲಿ (ಮರಾಠಿಯಲ್ಲಿ) ಚಕ್ರಧರ ಭಾಳ ದೊಡ್ಡವ...ಅಂವ ಬರಿತಾನೆ....ಚಕ್ರಧರ ಸ್ವಾಮಿ ಅವತಾರಿ ಅಂತ ಅವ್ರು ತಿಳಿತಾರೆ.... ಮಹಾನುಭಾವ ಸಂಪ್ರದಾಯಂತ ಒಂದದ.. ಆ ಮಹಾನುಭಾವ ಸಂಪ್ರದಾಯದವ್ರು.... ಅವರು. ....ತಮ್ಮ ಗುರುವಿನ ಬಗ್ಗೆ ಬರೀತಾ ಇದ್ದಾರೆ. ಇದರಲ್ಲಿ ಆ ಸ್ವಾಮಿ ಪೀಕ್‌ಕೊಡ್ತಾನೆ..... ಇದೂ ಮತ್ತೆ ಒಂದ್ರೀತಿದ ಅಂತ್ರೊಪೊಲಜಿಕಲ್ ಅಪ್ರೋಚನೆ....ಯಾವ್ಯಾವ ಸ್ಟೇಜ್ನೊಳಗೂ ಈ ಮಾನವಾ....

ಕಾರಂತ : ನಿಮ್ಮಲ್ಲಿ ಸಿದ್ಧಾರೂಡ ಸ್ವಾಮಿಗೆ ಭಕ್ತಿಯಿಂದ ತೆಗೆದು ಬಾಯಿಗೆ ಹಾಕಿ ಅದನ್ನ ತೆಗೆದು ಬಾಯಿಗೆ ತಿನ್ಸೋದು ನೋಡಿದ್ದೇನೆ ನಾನು.

ಶಂಬಾ : ಹೌದು ಖರೆ

ಮಹಿಂಪಿ : ಪ್ರಸಾದಾಂತ್ಹೇಳಿ.

ಶಂಬಾ : ಅದನ್ನ ನಾವು ಹಿಂದಾಗಡಿಗೆ ಪವಿತ್ರ ಮಾಡೋದಕ್ಕೆ ಹೇಳಿದ್ದು. ನಾವು ಮುಂಜಿವಿ ಒಳಗ ತಾಯಿಂ ಕೂಡಿಶಿಕೊಂಡು....ಕೊಡ್ತಾ ಇರ್ತೇವಿ. ಅದೇನೊ....ಅಂತೂ ಪೀಕ್ ಕೊಡೋದು ಉಳುದು ಬಂತು....ಅದು ನಮ್

ಭಕ್ತಿ... ಬಸವಣ್ಣಂದ್ರೊಳಗು ಬರ್‍ತದ.... ಬಾಯ್ತುಂಬುಲವ ಮೆಲುವೆ ... ನಿನ್ನ ಬೀಳುಡುಗೆಯ ಉಡುವೆ.... ಶೇಷವಸ್ತ್ರಾಂತ ನಮ್ಮಲ್ಲಿ ತೊಗೋತಾ ಇದ್ದಾರೆ. ಎಲ್ಲೀ ತಂಕಾ ಅಲ್ಯದೆ ಹಳೆ ಸಂಪ್ರದಾಯ ಮರಾಠಿವಳಗೂನು ಅಂದ್ರೆ.... ಒಬ್ಬವಾಂ ಪರಂಪರೆಯಲ್ಲಿ ನಂಬಿಗಿದ್ಧವಾ ಸರ್ವಸ್ವ ಅರ್ಪಣ ಮಾಡಿ ತಾನು ತೊಗೊಬುಕು. ನನಗೆ ಸ್ವಂತಕ್ಕ ತೊಗೊಳ್ಳಕ್ಕ ಅಧಿಕಾರಿಲ್ಲ. ದೇವರಿಗಿಟ್ಟು ಹಿಂದಗಡಿ ಪ್ರಸಾದಾಂತ ತೊಗೊಬುಕು. ಚಕ್ರಧರನಿಗೆ ಬರ್‍ತಾನೆ.... ನನ್ನ ಹೆಂಡ್ತಿನ್ನ ಅರ್ಪಣ ಮಾಡಬೇಕೂಂತ. ಅಂವಾ ಶ್ಯಾಣ್ಯಾ ಇದ್ದ. ಬಹಾಳಾ (shrewd) ಶ್ರೂಡಿದ್ದ. ಅವನೇನಂದಾ... ಒಳ್ಳೇ ದಪಾಂತಂದ, ಹ್ಣೂ ಆಯ್ತು. ತೊಗೊಂಡ್ಹೋಗು.... ಗುರೂ ಮುಟ್ಟಿದ ಮೇಲೆ ಅಕಿ.... ಪ್ರಸಾದಾದಳು. ಅಂದ್ರ ಇವಗೆ ರೈಟ್ ಇಲ್ಲ ...

ಕಾರಂತ : ರಾಜಪುತಾನದಲ್ಲಿ ಕಷ್ಟಮ್ಮ ಇದೆ. ಇವತ್ತೂ ಲಿವಿಂಗ್ ಕಸ್ಟಮ್. ಹೆಂಡತಿಯನ್ನ ಮೊದಲು ಗುರು ಸನ್ಯಾನರಿಗೆ ಅರ್ಪಿಸಿ ನಂತರ ತಾನು ಅನುಭವಿಸೋದು.

ಮಹಿಷಿ : ಈ ಕೇರಳದಲ್ಲಿಲ್ವೇನದು ?

ಕಾರಂತ : ಕೇರಳದಲ್ಲಿಲ್ಲ ...

ಶಂಬಾ ; ನಂಬೂದರಿಗಳದ್ದು ಅದು ಬೇರೆ. ಅದರ ಸ್ವರೂಪ ಬೇರೆ.

ಕಾರಂತ : ಕೇರಳದಲ್ಲಿ ಯಾವ ಕಮ್ಯುನಿಟಿ ?

ಮಹಿಷಿ : ಪ್ರಥಮ ರಾತ್ರಿ ಒಬ್ಬ ಬ್ರಾಹ್ಮಣನ ಸಹವಾಸ ಆಗಬೇಕು ಅನ್ನೋದು....

ಶಂಬಾ : ಹೌದ್ಹಾದು.... ಅದ್ರ ಸ್ವರೂಪ ಬೇರೆ.

ಕಾರಂತ : ಅಲ್ಲಿ ಒಂದು ಕಮ್ಯುನಿಟಿಗೆ ಮದುವೆಯೆ ಇಲ್ಲ.

ಶಂಬಾ : ಹೌದು.... ಅಳಿಯ ಸಂತಾನದ್ದು.

ಕಾರಂತ : ಅಲ್ಲಿ, ನಾಯರ್‍ರಿಗೆ ಮೊದ್ಲು ಮದುವೆಯೆ ಇರ್‍ಲಿಲ್ಲ. (ದನಿ ತಗ್ಗಿಸಿ ನಂಬೂದರೀಸ್ ಇಟ್ಟುಕೊಂಡಮ್ಯಾಲೆ.... ಅವರೆ.... ಅದೂ ನಂಬೂದರಿ ಇಟ್ಕೊಳ್ಳೋದಂದ್ರೆ ಆ್ಯಕ್ಚುಯಲಿ ಅವರ ವೈಫ್ನ ಹಾಗೇ ... ಅವರಿದ್ದಾಗೆ

ಅಂತಿಟ್ಕೊಳ್ಳಿ. ಆಮೇಲೆ ರೆಗ್ಯುಲರ್ ಮದುವೇ ಅನ್ನೊ ಕಸ್ಟಂ....ಅದು ಶುರುವಾಯ್ತು ಈ ಸಂಬಂಧದಲ್ಲಿ.

ಮಹಿಷಿ : ಮೊದಲು ಆಫರ್‌ಮಾಡಿ ಆಮೇಲೆ ತೊಗೊಳ್ಳೊ ಕಾನ್ಸೆಪ್ಟೆ ಅಲ್ವೆ ಅದೂ?

ಕಾರಂತ : ಅಲ್ಲಲ್ಲಲ್ಲಲ್ಲ....ಇಲ್ಲವೇ ಇಲ್ಲ. ಹೆಚ್ಚಾಗಿ ನಾಯರ್ಸ್ ಅವರಿಗೇ ಹುಟ್ಟಿದವಂತ್ಲೆ ಇದೆ....ಹಿಂದೂಸ್ಥಾನದಲ್ಲಿಯೆ ವೇದ ಹುಟ್ಟಿತಾ ?.... ಅದರ ಐಡಿಯಾಸ್ ಎಲ್ಲಿ ಹುಟ್ಟಿತು? ಅದ್ರು ಭಾಷೆ ಎಲ್ಲಿ ಹುಟ್ಟಿತು? ಅದು ಯಾವ ಪ್ರದೇಶದಿಂದ ಬಂತೊ ಅಲ್ಲಿ ಎಲ್ಲ ಅದರ ಪೀಳಿಗೆಗೆ ಕಾಮನ್‌ಐಡಿಯಾಸ್ ಇವತ್ತು ಉಳಕೊಂಡಿದ್ರು ಉಳಕೊಂಡಿರಬಹುದು.... ಈಗ ಗ್ರೀಕ್ ಉಳೀತೂಂತ ಹೇಳಿದರೆ ಹಿಟ್ಟೈಟ ಲ್ಯಾಂಡಿಂದ ಅಲ್ಲಿಂದ ಇಲ್ಲೀವರೆಗೆ ಬಂದಾಗ ಬ್ಲ್ಯಾಂಕಾಗಿ ಇಲ್ಲಿ ತೊಡಗಿದ್ದಲ್ಲಲ್ಲ. ಮನುಷ್ಯನ ಸೋರ್ಸ್ಸಲ್ಲಿದೆಯೊ ....ಸೊ ನ್ಯಾಚುರಲಿ ದೇರ್ ಆರ್ ಸೋ ಮೆನಿ ಕಾಮನ್ ಎಲಿಮೆಂಟ್ಸ್ ಮಚ್‌ಅರ್ಲಿಯರ್. ಸರ್ವೈವ್ ಆಗ್ಬಹುದು. ಆಗ್ದೆ ಇರಬಹುದು.

ಶಂಬಾ : ಗೀತೆ ನನ್ನನ್ನ ಕೆರಳಿಸಿದ್ದು ಒಂದು .. ಅದು ಎಲ್ಲಾ ತಿಳದೂಂತಲ್ಲ. ಸಂಶಯಾತ್ಮಾ ವಿನಶ್ಯತಿ. ಆ್ಯಬ್ಸಲೂಟ್ ಸೆಂಟೆನ್ಸ್. ಎಲ್ಲಿ ಸಂಶಯಾ ಯಾವ ಸಂಶಯಾ ಇದೇನು ಪ್ರಶ್ನಿ....ಸಂಶಯಾತ್ಮಾ ವಿನಶ್ಯತಿ. ಇವ ಜ್ಞಾನದ ಶತೃ ಇರಬೇಕು ಅಂತ ನನಗನಿಸೇದ. ಜ್ಞಾನದ ಶತೃ .. ಸಂಶಯಾತ್ಮಾ ವಿನಶ್ಯತಿ. ಆದರೆ ಗುರು ಶರಣು ಹೋಗು ಏನು ಹೇಳ್ತಾನೆೊ ಅದ್ನ ಕೇಳು ಹೋಗು. ಉಚ್ಚಿಷ್ಟ ಮಾರ್ಗ ಅಂತ. ಈ ಉಚ್ಚಿಷ್ಟ ಮಾರ್ಗ ನಮ್ಮಲ್ಲಿ ಆದ ವ್ಯಾಸೋಚ್ಛಿಷ್ಟಂ ಜಗತ್ಸರ್ವಂ....ಈ ವ್ಯಾಸರ ಬಗ್ಗೆನೆ ನನಗೆ ದೊಡ್ಡ ಸಂಶಯ ಅದೆ ... ನರ–ನಾರಾಯಣನ ಸ್ವತ್ತು ಆಪೊ ನಾರಾಯಿತಿ ಪ್ರೋಕ್ತಾ.... ಅಂದ್ರು ಈ ಪರಂಪರೆಯೆ ಭಾಳ ಬೇರೆ ಅದೆ. ನಮ್ಮಲ್ಲಿ ವೇದ ಅನ್ನೋದು ಮೂಲ ರೂಪದಲ್ಲಿ ಅದೇನಿತ್ತೋ ಅದಿಲ್ಲ. ಮಾನವ ಸಮಸ್ಯೆ.... ಇದು ಜಾಗತಿಕ ಸಮಸ್ಯೆ. ಭಾರತಕ್ಕ ಮಾತ್ರ ಸೀಮಿತವಲ್ಲ. ಆದ್ರ ಭಾರತೀಯರಿಗೆ ಆದ ಸಾಕ್ಷಾತ್ಕಾರ ದರ್ಶನ ಸುಮಾರಾಗಿ ಪುರಾತನ ಗ್ರೀಕ್ ಸಂಸ್ಕೃತಿಯಲ್ಲಿಯೂ ಆಗಿದ್ದನ್ನ ಕಾಣುವಾಗ ನನಗ ತುಂಬಾ ಸೋಜಿಗ.

ಕಾರಂತ : ದಿ ಸೇಮ್ ಆರ್ಯನ್ ರೇಸ್....ಅಲ್ಲಿಂದ ಹಿಟ್ಟೈಟಿ ಹ್ಯೂಮನ್‌ರೇಸ್ .. ಆಫ್ರಿಕದಿಂದಂತ ಒಪ್ಪಿದರೆ, ಮುಂದೆ ಅಲ್ಲಿಂದ ಹೊದಂಥಾ ಪರಂಪರೆ

ಕಂಟಿನ್ಯೂ ಆಕ್ಕೊಂಡ್ ಹೋಗತ್ತೆ ಇನ್ನೊಂದ್ ತುದಿವರೆಗೆ. ಬ್ಲ್ಯಾಂಕ್ ಮೈಂಡಿನಿಂದ ಹೋಗೋದಿಲ್ಲ.

ಮಹಿಷಿ : ಈ ಗೀತಾದಲ್ಲಿ, ಚಾತುರ್ವರ್ಣ್ಯಂ ಮಯಾ ಸೃಷ್ಟಂ ಗುಣಕರ್ಮ ವಿಭಾಗಶಃ ಇದೆಯಲ್ಲ....ಇದು ಭಾರತಕ್ಕೆ ಮಾತ್ರ ಸೀಮಿತವೊ ಪ್ರಪಂಚಕ್ಕೆಲ್ಲ ಸೀಮಿತವೊ ಹ್ಯಾಗೆ ?

ಶಂಬಾ : ಇಲ್ಲ ಇದು ಟ್ರಿಕಿ ಅದೆ.

ಕಾರಂತ : ಅದರ ಡೇಟ್ ಯಾವಾಗಿಂದು? ಮಹಾಭಾರತ ಯಾವ ಕಾಲಕ್ಕಾಯ್ತು? ಇದನ್ನ ಗುರ್ತಿಸಿದ್ದು ಯಾವಾಗ? ವರ್ಣದ ಕಲ್ಪನೆ ಇದ್ದದ್ದು ಎಲ್ಲಿ ? ವರ್ಣದ ಕಲ್ಪನೆಯ ಆರ್ಯರಲ್ಲಿ. ಆದಿವಾಸಿಗಳಲ್ಲಿ ಇರ್ಲಿಲ್ಲ. ಆವಾಗ ಅಷ್ಟು ಲೇಟ್ ಇಂಟ್ರಪೊಲೇಷನ್ ಅದರಲ್ಲಿ ತುರ್ಕಿದ್ದು ಲೇಟರ್. ಆವಾಗ ನಾವದನ್ನ ಕೃಷ್ಣಂದು ಹೇಳಿದ್ದೂಂತ ತಕ್ಕೊಂಡು ಅಲ್ಲಿಂದ ತೊಡಗಿದ್ರೆ ತಪ್ಪಾಗತ್ತೆ ಆಥಂಟಿಸಿಟಿ.

ಶಂಬಾ : ನನಗನಸ್ತಾ ಇರೋದು....ಇದೂ....ಚಾತುರ್ವರ್ಣ್ಯ.... ಇದು ಕೇವಲ ಥಿಯೊರೆಟಿಕಲ್ ಅದ....

ಕಾರಂತ : ಆರ್ಯರಲ್ಲಿಯು ಕೂಡ ಥಿಯೊರೆಟಿಕಲ್ಲಾಗೆ ಇದೆ....ಕ್ಷತ್ರಿಯ-ಬ್ರಾಹ್ಮಣ ಎಂಬೊ ಸ್ಥಾನ ಥಿಯೋರೆಟಿಕಲ್ಲಾಗೆ ಇದೆ. ಬರವಣಿಗೇಲಿತ್ತು ಅಷ್ಟೆ.

ಶಂಬಾ : ಹ್ಞಾ ಹೌದು. ಹಾಗೇ ಅದ....ಆದರ ಏನೂ ಪ್ರಿಸೈಸ್ ಆಗಿ ಹೇಳ್ಲೋದು ಕಷ್ಟ....ಈಗ ವಿಶ್ವಮಿತ್ರ....ನಾನು ವಿಶ್ವಮಿತ್ರ ಅಂತೇನಿ. ಕ್ಷಮಿಸಿ ಅವನ್ನ ಕೆಳಗೆ ತರೋದಕ್ಕಾಗಿ....ವಸಿಷ್ಠನನ್ನ ಹೆಚ್ಚಿಸೋದಕ್ಕಾಗಿ ಒಂದು ಕಥೆ ಇದೆ. ವಿಶ್ವಮಿತ್ರ....ಗೋವನ್ನ ಅಪೇಕ್ಷೆ ಮಾಡಿದ....ಅಂವ ಕೊಡೂದಿಲ್ಲಾಂತಂದ ಕಾಮಧೇನುವನ್ನ.... ಅದಕ್ಕಾಗಿ ಯುದ್ಧ ಮಾಡಿದ. ಇದು ಮೆಲಿಶಿಯೆಸ್ ಒಂದ್ರೀತಿಂದ. ಅವ್ನು ಜ್ಞಾನಿಯಿದ್ದದ್ದು ನಿಜಾ ಇದ್ರೆ, ವಿಶ್ವಮಿತ್ರ....ಮತ್ತು ವಿಶ್ವಮಿತ್ರ ಜ್ಞಾನಿನೆ ಇರಬೇಕಾಗ್ತದ. ಅವ ಆ ಗೋವು ಬೇಡಿದಾಂತ. ಅಲ್ಲ....ಆ ಗೋವು ಯಾವ ಆಕಾರದಲ್ಲದ.... ಅನ್ನೋದುಕ್ಕು ನಾನು ಸ್ವಲ್ಪ ಹುಡಕೋ ಪ್ರಯತ್ನಮಾಡೋ ಖಟ್ಪಿಟಿ ಮಾಡ್ತೀನಿ. ವಸಿಷ್ಠನು ಗೋಪೂಜಿ ಇಟ್ಟಿದ್ದ . ಗೌಃ ...ವಸಿಷ್ಠಂದು

ದೋಷ ಎಲ್ಲರಿಗು....ಅನ್ನಾ ಹಾಕತಿತ್ತು. ಹಾಕತಿತ್ತು. ಬೇಡಿದ್ದನ್ನ ಕೊಡತಿತ್ತು. ಶತ್ರುಗಳ ಮೇಲೆ ಏರಿ ಹೋಗತಿತ್ತು. ಇದೆಲ್ಲಾನೂ ಫಿಕ್ಷಿಶಿಯಸ್ ಎಫಿಜಿ. ಆ ವಿಶ್ವಾಮಿತ್ರನನ್ನ ಕೆಳಗೆ ತರೊ ಪ್ರಯತ್ನವಾಡಿ ಇಲ್ಲಿ ಹಾಗೆ ಮಾಡಿದ್ದಾರೆ. ನಮಗ್ಯಾವುದು ಬ್ಯಾಡೋ ಅದನ್ನ....ಅದಕ್ಕ ಮಾರಿಗೆ ಮಸಿ ಹಚ್ಚೊ ಕೆಲಸಾ ಭಾರತೀಯರು ಭಾಳ ಚೆನ್ನಾಗಿ ಮಾಡ್ಯಾರೆ

ಕಾರಂತ : ಪ್ರತಿ ಪಂಥದವರು ಇನ್ನೊಬ್ರನ್ನ....ಭಿನ್ನ. .ಪಂಥದವರ್ನ..ಹಾಗೆನೂಡ್ಕೊಂಡೆ ಬಂದಿದ್ದಾರೆ. ಅದರಲ್ಲಿ ಆಶ್ಚರ್ಯಪಡ್ತಕಂಥದ್ದೇನೂ ಇಲ್ಲ....ಹಿಂದಿದು ಕೇಳ್ಲಿಕ್ಕೆ ಬರೋದಿಲ್ಲ.ಆದ್ರಿಂದ ಈ ಉಪಾಯ ಒಳ್ಳೇದಊಂತ....ಹೇಳಿ.....

ಮಹಿಂಪಿ : ಹಾಗೆ ನೀವು ಹೇಳೋದಾದರೆ, ಅವರು ಪೂಜ್ಯರಾಗೋದು ಹೇಗೆ?

ಕಾರಂತ : ನಮಗೆ....ಕಲ್ಲಿಂದ ಹಿಡಿದು ಕೊಲೆಗಡುಕನವರೆಗು ಪೂಜೆ ಮಾಡತಕ್ಕಂತಾ ಶಕ್ತಿ ಇದೆ. ಏನೂ ವ್ಯತ್ಯಾಸ ಇಲ್ದೆ ಮಾಡ್ತೀವಿ. ಆ ಪೂಜೆ ಭಕ್ತಿಯೂ ಅದೆ ತೂಕದ್ದೆ. ಬುದ್ಧಿಯು ಅದೇ ತೂಕದ್ದೆ. ವಿಶೇಷ ಏನಿಲ್ಲ. ನಮಸ್ಕಾರ ಮಾಡ್ಲಿಕ್ಕೆ ಭಾಳ ಹುಶಾರಿದ್ದೇವೆ. ಯಾವದನ್ನ ಪೂಜೆ ಮಾಡ್ಲಿಲ್ಲ ನಾವು?

ಮಹಿಂಪಿ : ಅವರನ್ನೆಲ್ಲಾ ನಾವು ಆದರ್ಶ ಜೀವಿಗಳೂಂತ ಇಟ್ಟುಕೊಂಡು ಹೊರಟಿದ್ದೇವಲ್ಲ....

ಕಾರಂತ : ಎಲ್ಲೀವರೆಗೆ ಅನುಸರಿಸುವಂತ ಅವಶ್ಯಕತೆಯಿದೆಯೊ....ಅವಾಗೇನು ತೊಂದ್ರೆ ಇಲ್ಲಾನ್ನಬಹುದು.

ಶಂಬಾ : ಅವನು ವ್ಯಕ್ತಿನೊ....ಕೇವಲ ಸಾಂಕೇತಿಕ ಹೆಸರೋ? ಕಾಮ ಅಂಬೊ ವ್ಯಕ್ತಿ ಇದ್ದಾ....ಅಂದ್ಹಾಗೆನೆ....ರತಿ ...ಅನ್ನೋದು....

ಕಾರಂತ : ಎಲ್ಲಾ ಹೆಸರು ನೋಡುವಾಗಲೆ ಸಾಂಕೇತಿಕ ಅನ್ನೋದು....ಕೂಡಲೆ ಗೊತ್ತಾಗತ್ತೆ.

ಪತ್ರಕರ್ತ : ವ್ಯಾಸ....ಇವೆಲ್ಲವೂ ಸಂಕೇತವೆ ಆಗಿಬಿಡ್ತವೆ .. ಮನು........

ಶಂಬಾ : ಮನೂಗನ್ಲಿಕ್ಕ ನಾನು ತಯಾರಿಲ್ಲ. ವ್ಯಾಸಗಂತೀನಿ....ಮನು ಅಂದ್ರೆ ಮಾನವಾ ಅಂಬೋ ಶಬ್ದನೆ ಮನು ಅಂತ ನಾನು ಅಂತೀನಿ.

ಕಾರಂತ : ವ್ಯಾಸ ಮನು ಅಂತ ಅನ್ನುವಾಗ ಅವನಿಗೆ ಎಷ್ಟು ಆಯುಷ್ಯ ಕೊಡ ತೀರಿ ? ಎಷ್ಟು ತಲೆಮಾರಿನಲ್ಲಿ? ಆದರಿಂದ ಅದು ಜಾಯಿಂಟ್ ನೇಮ್ ಫಾರ್ ಎ ಟ್ರೈಬ್ ಅಫ್ ಪೀಪಲ್ಸ್. ಒಬ್ಬರೇನಲ್ಲ. ಯಾರ್‍ಯಾರು ಗ್ರಂಥ ಬರ್‍ದದ್ದೆಲ್ಲ. ಒಬ್ಬನ ಕೊರಳಿಗೆ ಕಟ್ಟಿ ಅವ ಚಿರಂತನ ಕಾಲಕ್ಕೂ ದಶರಥ ನಿಗೆ ಹತ್ತು ಸಾವಿರ ಕೊಟ್ಟಾಗೆ ಇವ್ನಿಗು ಹತ್ತು ಸಾವಿರ ಕೊಟ್ಟು ಅಪ್ಪನು ಅವನೆ ಮಗನೂ ಅವನೆ ಮೊಮ್ಮಗನೂ ಅವನೇಂತ ಹೇಳೋದು ಆ ಕಾಲದ ದೃಷ್ಟಿಯೆ ಇಲ್ದೆ ಹೇಳೋ ಮಾತುಗಳು.

ಮಹಿಷಿ : ಈ ವೇದ ಅಪೌರುಷೇಯದ ವಿಷಯದಲ್ಲಿ ತಮ್ಮ ಅಭಿಪ್ರಾಯ ಏನು?

ಶಂಬಾ : ನನ್ನ ಅಭಿಪ್ರಾಯ ಅನ್ನೋದಕ್ಕಿಂತ....ನಾನು ಆ ಇದಕ್ಕ ಕಂಪೆಲ್ಲಾಗ್ತ ಇದ್ದೀನಿ. ಅಪೌರುಷೇಯ ಅಂದ್ರ ನಾನಾ ಅರ್ಥ ಇರತ್ತವ. ಪುರುಷ ಬರ್‍ದದ್ದಲ್ಲ. ಯಾರು ಬರದೋರು ? ಇಲ್ಲಿ ಸಾಯಣ ಭಾಷ್ಯದಲ್ಲಿ ಭಾಳ ಕಷ್ಟದ್ದಿದು.... ...ನಾವು ಉಪ್ಯೋಗ ಮಾಡೊ ಶಬ್ದನೆ ನಮ್ಮನ್ನ ಊಹೆಗೆ ತಳ್ಳೋದು ಪುರುಷಾಂದ್ರೆ ಯಾರು ಮತ್ತೆ ?

ಮಹಿಷಿ : ಪರಮಾತ್ಮ ಅಂತ ಹೇಳ್ತೇವಿ.

ಕಾರಂತ : ಹೇಳದಕ್ಕಾಗೊದಿಲ್ಲ....ಪರಮಾತ್ಮನ ಲಾಂಗ್ವೇಜ್ ಯಾವುದು? ಹ್ಲ ?

ಮಹಿಷಿ : ಪರಮಾತ್ಮೇತ್ಯುದಾಹೃತಃ ಅಂತ ನಾವೆ ಹೇಳ್ತೇವಲ್ಲ ಪುರುಷ ಶಬ್ದ ಕ್ಕೆ ಅವನೆ ವಾಚ್ಯ ಅಂತ.

ಶಂಬಾ : ಪುರುಷ ಶಬ್ದ ಎಂದು ರೂಢಿಯೊಳಗ ಬಂತೋ ಅವತ್ತೆ ನಾವು ಮೋಸ ಹೋಗೇವಿ. ಅಂಗಕ್ಕನೆ ಪುರುಷಾಂತೇವಿ.

ಮಹಿಷಿ : ತಮ್ಮ ಈ ಪುಸ್ತಕದಲ್ಲಿ ಅದೆ ಅಭಿಪ್ರಾಯ ಇದೆ ಅದು.

ಶಂಬಾ : ನನ್ನ ಅಭಿಪ್ರಾಯ ಅಲ್ಲದ ಐಯಾಮ್ ಕಂಪೆಲ್ಡ್ ಟು ಮೇಕ್ ದ್ಯಾಟ್ ಮೀ ನಿಂಗ್. ಅಕ್ಸೆಪ್ಟ್ ದ್ಯಾಟ್ ಮೀನಿಂಗ್.

ಮಹಿಷಿ : ಅಲ್ಲ ಕೊನೇಗೆಲ್ಲ ಸೇರ್‍ಸಿ ಸರ್ವ ಶಬ್ದ ವಾಚ್ಯ ಪರಮಾತ್ಮ ಅಂದು ಬಿಡ್ತಾರಲ್ಲ?

ಶಂಬಾ : ಅದೆ ಅದೆ ಅದೆ. ಎಲ್ಲನು ಗತ್ತುಗಾರಿಕೆ ಅದು....ಈಗ ನಮ್ ಮಾರ್ತಾಂಡ ಶಾಸ್ತ್ರಿಗಳಿಗೆ ಕೇಳಿದರೆ ಒಂದು ಪ್ರಶ್ನಿಗೆ ಅವ್ರು ಉತ್ರಾ ಕೊಟ್ರು....ಎದ್ನೇವಾ ಸಲಿಲೇರಹಾ ಸುಸಂರಬ್ದಾ : ಆತಿಷ್ಯತಿ. ನೀರೊಳಗೆ ಎಲ್ಲಾರು ಇದ್ದಾಗ ಭಾಳ ಸುಖದೊಳಗಿದ್ರು. ಹೊರಗ ಬರೋತ್ಲೆ ಈ ರೋರೇಣು ಅಪಾಪೆ. ಇದೊಂದು ಉಲುಕೋಚಿ ಜೀವ ಹೊರಗ ಬಂತು. ಸ್ಪೇಸ್–ಟೈಮ್ ಇದ್ರೊಳಗ ಸಿಕ್ಕು ದುಃಖದೊಳಗ ಬಿತ್ತು ಅಂತ.

ಅಣತಿ : ಒಂದು ಪ್ರಶ್ನೆ ಕೇಳ್ತಾ ಇದಾರೆ. ವೇದಗಳು ದ್ರಾವಿಡ ಸಂಸ್ಕೃತಿಯ ಮೇಲೆ ಯಾವ್ ರೀತಿಯ ಪ್ರಭಾವ ಬೀರಿದ್ವು?

ಕಾರಂತ : ವೇದಗಳಲ್ಲಿ ಸಂಸ್ಕೃತ ಇದೆ....ಸಂಸ್ಕೃತ ನೋಡಿದ ಕೂಡ್ಲೆ ತಮಿಳ್‌ನವ್ರು ಬೈತಾರೆ. ಅಷ್ಟು ಪ್ರಭಾವ ಸಾಕು ನಿಮಗೆ. [ಉಳಿದವರ ಗಹಗಹಿಕೆ]

ಪತ್ರಕರ್ತ : ಐ ಡೋಂಟ್ ಮೀನ್ ದಟ್ ಈಗ ಇರೋದು....ಆರ್ಯನ್ ಕಲ್ಚರ್ರು. (ದ್ರವಿಡಿಯನ್)

ಕಾರಂತ : ನೀವು ದ್ರಾವಿಡ ಸಂಸ್ಕೃತಿ ಯಾವ್ದಂತ ಲೊಕೇಟ್ ಮಾಡಿದ ಮೇಲೆ ಪ್ರಶ್ನೆ ಕೇಳಿ. ಅವಾಗ....ಇರಬಹುದು ಪ್ರಧಾನವಾಗಿ ಒಂದು ಜನಾಂತೆ ಇದ್ರೆ ಅವರ ಸಂಸ್ಕೃತೀಂತ ಇದ್ದೆ ಇರುತ್ತೆ........ಆ ಕಲ್ಚರು ಇವತ್ತು ಎಷ್ಟು ಉಳಕೊಂಡದ್ದು? ಅದು ಹುಟ್ಟಿದ್ದು ಯಾವಾಗ ? ಇವತ್ತು ಎಲ್ಲಾ ಬೆರಕೆ. ಇವತ್ತು ಬೆರಕೆ ಆದ ಮೇಲ ಇನ್ನು ಅದು ಪ್ರತ್ಯೇಕ ತೆಗದು ನೀವು ಆ ಮಾತಾಡೋದರಲ್ಲಿ ಏನರ್ಥ ಇದೆ? ಒಂದು ಸಾವಿರ ಎರಡು ಸಾವಿರ ವರ್ಷ ಒಟ್ಟಿಗೆ ಬದುಕಿದ್ದಾರೆ. ಯಾರದ್ದು ಎಷ್ಟು ತೆಕ್ಕೊಂಡಿದ್ದಾರೆ ? ಯಾವುದು ದ್ರಾವಿಡ ? ಯಾವುದು ಆರ್ಯಂತ ಮಾರ್ಕ್ ಮಾಡ್ಲಿಕ್ಕ ಬರ್ತದೊ ? ಇಲ್ಲಿ ಆದಿವಾಸಿ ಜನಗಳಿರ್ಲಿಲ್ಲವ ? ಅವಾಗ ನಾವು ಅದು ಪೂರ ತೆಕ್ಕೊಂಡು ಒಂದು ಜಗಳ ಮಾಡಬಹುದು ಹೊರ್ತು ಇಟ್ ವೊಂಟ್ ಕ್ಲಾರಿಫೈ ಎನಿಥಿಂಗ್. ಕಲ್ಚರ್ ಏನನ್ನೋದು ಸ್ಪೆಸಿಫೈ ಆಗಿ ಯಾವ ಯಾವ ಐಟಮ್ಸಿಗೆ ತಕೋಳ್ತೀವೆ. ಅಂತಾದ ಮೇಲೆ ಮಾತಾಡೋದು. ಆ ಕಲ್ಚರ್ ಅನ್ನೋದು ಎಲ್ಲವ್‌ದಕ್ಕು ಅಗ್ತದೆ. ಇಡ್ಲಿ–ಸಾಂಬಾರದಿಂದ ಹಿಡದು ದೇವ್ರ ಪೂಜೆವರೆಗೆ.

ಮಹಿಷಿ : ಕಾರಂತ್ರೆ....ನಾವು ಅರ್ಥ ಮಾಡ್ಕೊಳ್ಳೋದು ಹಾಗ್‌ಮಾಡಿಲ್ಲ. ಕಲ್ಚ

ರ್ ವಿಚ್ ಹ್ಯಾಸ್ ಇಟ್ಸ್ ರೂಟ್ ಇನ್ ಸ್ಯಾಂಸ್ಕೃಟ್ ಇಸ್ ಆರ್ಯನ್ ಅಂತ್ಹೇಳ್ತೀವೆ.... ಅಷ್ಟೆ.

ಕಾರಂತ : ಕಲ್ಚರ್ ವಿಚ್ ಹ್ಯಾಸ್ ಇಟ್ಸ್‌ರೂಟ್ ಇನ್ದ ಪೀಪಲ್ಸ್ ಮೈಂಡ್ ಅಂಡ್ ಥಾಟ್.. ಬಟ್ ವಿಚ್ ಇಸ್ ಎಕ್ಸ್‌ಪ್ರೆಸ್ಡ್ ಇನ್ದಿ ಲಾಂಗ್ವೇಜ್.... ಲಾಂಗ್ವೇಜ್ ಇಸ್.ಎ ಸಿಂಬಲ್ ದಟ್ ಎಕ್ಸ್‌ಪ್ರೆಸೆಸ್ ಸೊಮೆನಿ ಥಿಂಗ್ಸ್, ಪ್ರೊಡ್ಯೂಸ್ಡ್ ಬೈ ಕಲ್ಚರ್. ಆದ್ದರಿಂದ ಭಾಷೆಯಿಂದ ಕಲ್ಚರ್ ಹುಟ್ಟಿದ್ದಲ್ಲ. ಕಲ್ಚರನ್ನ ಹೇಳ್ಲಿಕ್ಕೆ ಭಾಷೆ ಪ್ರಯತ್ನ ಮಾಡಿದೆ.

ಮಹಿಷಿ : ಆದ್ರೆ ಅದು ಬೆಳಕೊಂಡು ಬಂದಿದ್ದು ಭಾಷೆಯಿಂದಲೆ ಅಲ್ವೆ ?

ಕಾರಂತ : ಬೆಳಕೊಂಡು ಬಂದದ್ದು ಆಚರಣೆಯಿಂದ. ಕಲ್ಚರ್ ಟ್ರೆಡಿಷನ್ನಿಂದ ಆಚರಣೆಯಿಂದ ಬೆಳಕೊಂಡು ಬಂದದ್ದು. ಆಚರಣೆ ನಂಬಿಕೆಯಿಂದ ಊಹೆಯಿಂದ ಬೆಳಕೊಂಡು ಬಂದದ್ದು. ಅದನ್ನ ವಿವರಿಸ್ಲಿಕ್ಕೆ ಭಾಷೆ ಚಲಾಯ್ಸಿದ್ದು.. ....ತಲೆ ಒಳಗೆ ಏನೇನು ವಸ್ತು ಇದೆಯೊ ಅದನ್ನ ಬಾಯಿಯಿಂದ ಹೇಳ್ಲಿಕ್ಕೆ ತೊಡಗಿದ್ದು. ಇತ್ತೀಚಿನ ಪ್ರಶ್ನೆಯೆ ಇಲ್ಲ. ಹತ್ತು ಸಾವಿರವೊ ಐದು ಸಾವಿರವೊ (ವರ್ಷ) ನಿಮ್ಮ ಸಂಸ್ಕೃತ ಹುಟ್ಟೋಕೆ ಮೊದಲು....ಇಟ್ ಮೇ ಬಿ ಈವನ್ ಹಾಫ ಮಿಲಿಯನ್ ಇಯರೋಲ್ಡ್.... ದಸ್ಯುಗಳೂ ರಿಕಾರ್ಡ್‌ನಲ್ಲಿರೋದು. ನಮಗೆ ಬ್ಯಾಡದೇದ್ದವರ ಇತಿಹಾಸ....ಗೊತ್ತಾಯ್ತೊ ....ಇನ್ನು ಎಲಬು ಸಿಕ್ಕಿಲ್ಲ. ಎಲುಬು ಸಿಕ್ಕಿದರ ಮೇಲೆ ನಾವು ದಸ್ಯುಗಳನ್ನ ಐಡೆಂಟಿಫೈ ಮಾಡಿಕೊಡ್ತೇವೆ.

ಪತ್ರಕರ್ತ : ಹಂಗಾದರೆ ಈ ದ್ರವಿಡಿಯನ್ ಕಲ್ಚರ್ರೆ ಇಲ್ಲಾಂತೀರಾ ನೀವು ?

ಕಾರಂತ : ಪ್ರತ್ಯೇಕ ಮಾಡುವಂಥಾ ಸಾಮಾನಿಲ್ಲ.

ಪರ್ತಕರ್ತ : ದ್ರವಿಡಿಯನ್ ಕಲ್ಚರ್ ಇನಿಟ್ಸ್ ಪ್ಯೂರ್ ನೇಚರ್ ಯಾವ್ದೂಂತ ಹೆಳ್ಲಿಕೆ ಆಗೊಲ್ಲವ ?

ಶಂಬಾ : ದ್ರವಿಡಿಯನ್ ಅಂದ್ರು ಯಾರೂ ...ಇದೆ ಪ್ರಶ್ನಿ ಬೀಳ್ತದೆ.

ಕಾರಂತ : ಆಗೋದಿಲ್ಲ....ಆರ್ ಯೂ ಎ ದ್ರವಿಡಿಯನ್ ? ಯಾಮ್ ಐ ಎ ದ್ರವಿ

ಐಹ್ಯಾವ್ ನೋ ಆರ್ಯನ್ ಫೀಚರ್ ಯು ಹಾವ್ ನೊ ಆರ್ಯನ್ ಫೀಚರ್.

ಪತ್ರಕರ್ತ : ಬಟ್ ಐ ಕನ್ಸಿಡರ್ ಮೈ ಸೆಲ್ಫ್ ಆ್ಯಸ್ ಎ ದ್ರವಿಡಿಯನ್.

ಕಾರಂತ : ಐ ಕನ್ಸಿಡರ್ ಮೈಸೆಲ್ಫ್ ಆ್ಯಸ್ ಎ ಟೋಟಲ್ ಮಿಕ್ಸೆಡ್ ರೇಷ್ಯಲ್ ಬೀಯಿಂಗ್....ಎರಡೇ ರೇಷಿಯಲ್ ಬೀಯಿಂಗ್ಸ್ ಹಿಂದೂಸ್ಥಾನದಲ್ಲಿ ಇಲ್ಲ. ಎವೆರಿ ಫೇಸ್ ಶೋಸ್ ಎ ಮಿಕ್ಸ್ಚರ್ ಆಪ್ ಮಂಗೋಲ್ ದ್ರವಿಡಿಯನ್ ಪ್ರೊಟೊ ಆಸ್ಟ್ರಲೈಟ್ ಅಂಡ್ ಎವೆರಿ ಬ್ಲೆಸ್ಡ್ ಥಿಂಗ್. ಸೋ ಇಟ್ ಕ್ಯಾರೀಸ್ ದಿ ಇನ್‌ಹೆರಿಟೆನ್ಸ್ ಆಫ್ ಆಲ್ ಇಟ್ಸ್ ಕಲ್ಚರ್ಸ್. ಅಂಡ್ ಇಟ್ ಇಸ್ ಎ ಬ್ಲೆಂಡ್. ಯು ಕಾಂಟ್ ಸೆಪ್ರೇಟ್ ಇಟ್ ಟುಡೆ.

ಮಹಿಂಪಿ : ತಮಗೆ ದೇವರಲ್ಲಿ ನಂಬಿಕೆ ಇದೆಯೋ ? ಇದ್ರೆ ಯಾವ ದೇವರದು ?

ಶಂಬಾ : ಪ್ರಕಾಶ ತತ್ವವೇ ದೇವರು. ಇಲ್ಲಿ ಅರ್ಥ ಆಗ್ತದ. ಅದು ಅರ್ಥಾದದ್ದೂ ದೇವರೆ. ಪ್ರಕಾಶ ತತ್ವಾ ಅಂಥೇಳೊ ಮಾತು ಇನ್ನೊಂದು ರೀತಿಯಿಂದ ಹೇಳ್ತಿನಿ. ಅದೆಷ್ಟರ ಮಟ್ಟಿಗೆ ಸಮ್ಮತ ಆಗ್ತದೊ ಗೊತ್ತಿಲ್ಲ. ನಾವು ಕತ್ತಲೆಯನ್ನ ಹಂಚಿಕೊಳ್ಳಬಹುದು. ಪ್ರಕಾಶವನ್ನ ಹಂಚಿಕೊಳ್ಳಲಿಕ್ಕ ಆಗೊದುಲ್ಲ. ನಿಮ್ಮ ನಮ್ಮ ಮಾತು ಟ್ಯಾಲಿ ಆದ್ರು ಅದು ಪ್ರಕಾಶಗ್ತದ. ಅಂತರ್ ವಿಸಂಗತಿ ಕತ್ತಲು. ಅಂತರ್ ಸಂಗತಿ ಪ್ರಕಾಶ. ಇನ್ನೊಂದು ನನ್ನ ರೀತಿಯಲ್ಲಿ ..ನಾ ಇದಕ್ಕ ಭಾಳ ಮಹತ್ವ ಕೊಡ್ತೀನಿ. ಇಲ್ಲಿ ಸ್ಪೇಸ್ ಟೈಮ್‌ದಲ್ಲ ಅಂತರ್ ವಿಸಂಗತೀನೆ ಸ್ಥಾಯಿ ಇರೋದ್ರಿಂದ. ....ಇಲ್ಲ ಸತ್ಯ ಅರ್ಥ ಅನ್ನೋದು ಏನೂ ಇಲ್ಲ. ಅದ್ರಿಂದನೆ ಇವ್ರು ಹೇಳೊ ಅಂತ ನಿಮ್ಮ ಅರ್ಥ ನಿಮಗ ನನ್ನ ಅರ್ಥ ನನಗ. ಅಂದ್ರ ಕತ್ಲನೆ. ನನಗೆ ಕಾಣ್ತದ್ಯಂತ ನಾ ತಿಳಕೋಽನೆ ಹೊರ್ತು ಇರೋದಿಲ್ಲ.... ಅರ್ಥನೆ ಇಲ್ಲದರಾಗ. ವ್ಯಕ್ತಿಶಃ ಸತ್ಯ ....ಇದು ವೈಯಕ್ತಿಕ ಅದ ಮೇಲೆ ಸತ್ಯ ಇದ್ರು ಸತ್ಯ ಇಲ್ಲ. ಸತ್ಯನೂ ಕಾಲ್ಪನಿಕನೆ. ಆದ್ದರಿಂದ ಒಂದ್ ರೀತಿಯಿಂದ ಲಾಜಿಕಲ್ ಇನಿಮಿಟಬಿಲಿಟಿ ಏನೊಂದ್ರೆ ಈ ಸತ್ಯ,ಅರ್ಥ,ಪ್ರಕಾಶ ವ್ಯಕ್ತಿ ಪಾತಳಿಯ ಆಚೆಗಿರುವ ಪ್ರಕಾಶ ತತ್ವದ ಪಾತ್ರದವಿದ್ದದ್ದನ್ನೆ ಹೇಳದೆ. ಅಪ್ರಕಾಶ ತತ್ವದ ನೆರವಿನಿಂದ ನಾವು ಇಂದು ತಿಳಕೊಳೊದಕ್ಕೆ ಹತ್ತೀವಿ. ಅದು ಅದ್ಯಂತ ತಿಳುಕೊಂಡು ನಾವಿನ್ನೂ ಮಾಡಬಲ್ಲವಿ. ನನಗ ಒಮ್ಮೊಮ್ಮೆ ಈ ವಿದ್ಯುತ್ತಿಗೆ ಹಚ್ಚಿದ ತಂತಿ....ಅದು ಕರೆಂಟ್ ಇರೊವರಿಗು ನಡಿತದೆ. ಆ ಕರೆಂಟ್ ತಪ್ಪ್ಯಾ (ತಗಿತ್ಯ) ಬಿದ್‌ಬಿಡ್ತದ.

ನಾನು ಅನ್ನೋವಾ ಒಂದ್ರೀತಿಂದ ಆ ಕರೆಂಟ್ ಸಂಗ್ತಿಲೆ ಜೀವಂತ ನಮ್ಮಂಥ ಇರೊವರಿಗ ಮಾತ್ರ. ಉಳಧೊತ್ತಿನೊಳಗೆ ನಾನೆ ನಾನು. ನರ. ವ್ಯಕ್ತಿ. ನಾ ಮನಷ್ಯ ಊನವಾಂತ ಯಾವಾಗಾಗಬಹುದೂಂದ್ರೆ ಆ ಕರೆಂಟ್ ಸಂಗ್ತಿಲೆ ನನ್ ಸಂಬಂಧ ಸಮರ್ಥನವಾಗುವಾಗ. ಅಂಥಾ ಕ್ಷಣಗಳು ಮಿಂಚಿ ಹೋಗೋವಾಗ ಯಾವಾಗಲು ನನ್ ಸಂಗ್ತೀಲೆ ಅಂಥ ಕ್ಷಣಗಳು ಇಲ್ಲ. ಆದ್ದರಿಂದ ನಾನು ಬರ್ದದ್ರಲ್ಲಿ ಸೆನ್ಸ್ ಮತ್ತು ನಾನ್ಸೆನ್ಸ್ ಕೂಡಿರೋದು. ನಾನಾಗ ಒಂದ್ ಕಾಲಕ್ಕ ನಾ ಎಲ್ಲಾ ಸೆನ್ಸನೆ ಬರ್ದೀನಿ ಅಂತ (ಗ್ರಹಿಸಿದ್ದೆ.) ಆದರಿವತ್ತು ಝಳ ಝಳಾ ಹೇಳ್ತೀನಿ. ನಾನ್‌ಸೆನ್ಸಿನ ಪಾತ್ರನು ಬಹಳಷ್ಟದ. ....ನೀವು ಅಷ್ಟು ನಸುಕ್ನಾಗೆದ್ದು ಅಷ್ಟು ದೂರದಿಂದ ಯಾಕ ಬರಬುಕು ? ನೆನಿಸ್ಕೊಂಡ್ರೆ ವೈ ಜುಂ ಅಂತದ. ಮತ್ತೆ ಯಾಕೆ ಬರಬುಕು ? ಯಾರು ಹೇಳ್ಯಾರೆ ? [ಅವರೆ ಹೃತ್ಪೂರ್ವಕ ನಗುತ್ತಾರೆ] ಇಲ್ಲಿ ಏನೋ ಒಂದು ಋಣಾನುಬಂಧ ಅದ....ನಮ್ಮನ್ನೂ ನಿಮ್ಮನ್ನೂ ಎಲ್ಲರ್ನೂ ಇಡಿ ಸಮಾಜ ಸಮಷ್ಟಿ ಶಕ್ತಿ. ಆ ಸಮಾಜ ಸಮಷ್ಟಿಯಲ್ಲಿ ನನ್ನ ವಿಶ್ವಾಸದ. ಸಮಾಜ ಸಮಷ್ಟಿನೆ ದೇವರು ನಮ್ಮಲ್ಲಿ ಈ ಸಮಾಜ ಸಮಷ್ಟಿನೆ ಪುಣ್ಯಾಹ ವಾಚನಾದಿಗೂಳಂತೇವಿ. ಕರದು ಅವರಿಗೆನೆ ನಮಸ್ಕಾರ ಮಾಡೋ ಪದ್ಧತಿ ಅದ. ಈ ವಿವಸ್ವತ ಸಂಪ್ರಾದಾಯದಲ್ಲಿ. ವೈವಸ್ವತ ಮನೊಂತಾರೆ ... ಅಂತನ್ನುವ ಮಾತು ನನಗೆ ಹುಚ್ಚು ಹಿಡಿಸಿತು. ಆ ಹುಚ್ಚು ಇನ್ನೂ ಪೂರಾ ಬಿಟ್ಟಿಲ್ಲ. ಅದಕ್ಕಾಗಿ ಕೆಲವು ದುಡ್ಡನ್ನು ಕಳಕೊಂಡೆ ಕಳಕೊಂಡೆಂದ್ರೇನು ? ಈ ಸಂಪ್ರದಾಯನ್ನು, ಎಲ್ಲ್ಯಾರು ಒತ್ತಟ್ಟಿಗೆ ಉಳಿಯೋದು ಅನ್ನೊಸಲುವಾಗಿ. ಹೆಸರುಳಿಬೇಕು ಅಂತಂದು, ನಾನು ಒಂದು ಈ ಬಿ ಎಂ ಶ್ರೀ ಪ್ರತಿಷ್ಠಾನಕ್ಕೆ ಒಂದು ನನ್ನ-ಏಳು ಸಾವಿರ ರುಪಾಯಿ ಹಿಂಗೇನೊ ಇಟ್ಟು........ಇನ್ನೊಂದು ಹಾಕಿ ಮೂರು ಸಾವಿರ ಮಾಡೋಣ. ಹತ್ತು ಸಾವಿರ ಮಾಡಬುಕೂಂತ ನಾಡೇನಿ. ಆದ್ರು ಇದು ಪ್ಯೂರ್ ಮೆಥಮೆಟಿಕ್ಸ್ ಲಾ. ಎರಡೂ ಎರಡೂ ಕೂಡಿದ್ರು ನಾಲ್ಕೆ ಅಂತ ಯಾಕ್ಹೇಳ್ತಿರಿ ನೀವು ಅಂತ ಕೇಳಿದ್ರು........ನಾನು ಬೆಪ್ಪಾಗಿ ಹೋದೇನು.... ನಾ ಹೇಳಿದ್ನೆಲ. ಈ ತಂತಿ ವಿದ್ಯುತ್ತಿನ ಸಂಗ್ತಿ ನಮ್ಮಂಥ ಇರೋತನಕಾ ಆಗ್ತದ. ಸೆನ್ಸ್ ಅಂಡ್ ನಾನ್ಸೆನ್ಸ್. ಹಿಂಗ ಮಿಕ್ಸ್ ಅದನ್ದು........ಅದರೊಳಗೆ ಸೆನ್ಸ್ ಉಳದು ನಾನ್ಸೆನ್ಸ್ ಬಿಟ್ಟುಬಿಡಬುಕು.

ಪತ್ರಕರ್ತ : ಅಂದ್ರ........ ನಾವು ಬರಿ ನರಪಾತಳಿ ಮೇಲೆ ಬದುಕ್ತೇವಿ ಮಾನವತ್ವ

ಇಲ್ಲಾಂತ್ಹೇಳಿ...... ನೀವು ಊಹಿಸಿದ ಸ್ಥಿತಿ ಒಂದು ಯಾವಾಗರೆ ಇತ್ತ ನಿಜವಾಗಲು ? ಮಾನವ ಮಾನವನಪಾತಳಿಯ ಮೇಲೆ ಬದುಕಿದ್ದನೇನು? ಯಾವಾಗಾದರು ಅದು ಇತ್ತ ? ಆ ಧ್ಯೇಯಗಳನ್ನ ಇಟ್ಟುಗೊಂಡು ಮಾನವ ಉನ್ನತ ಸ್ಥಿತಿಯೊಳಗ ಇದ್ದದ್ದು ಯಾವಾಗಾದರೂ ಇತ್ತ ?

ಶಂಬಾ : ನೀವು ತಿಳಕೊಳ್ಳಿಲ್ಲಾಂತ ಕಾಣ್ತದ. ಈ ಸ್ಥಳ ಕಾಲದ ಸಂದರ್ಭದಲ್ಲಿ ಮಾನವ ಇಲ್ಲ. ಸ್ಥಳ ಕಾಲದ ಆಚೆಗಿನ ಪಾತಳಿ ಮೇಲೆ ಮಾನವ ಇದ್ದಾನೆ. ಇದೂ ಐನ್‌ಸ್ಟೀನನ ವಾಕ್ಯನು ಹೌದು. ಆ್ಯಟಂ ಹ್ಯಾಗೆ ಸಿಕ್ಕಾಂಗೆ ತಿರುಗಾಡ್ತವೊ ಹಾಗೆ ನಾವೆಲ್ಲಾ ನಮ್ ಮನ್ಸಿಗ ಬಂಧಂಗ ತಿರುಗ್ಯಾಡ್ತ ಇದ್ದೇವಿ. ನಮ್ ವ್ಯವಸ್ಥೆ ಏನೇನೂ ವ್ಯವಸ್ಥಾ ಇಲ್ಲ.

ಮಹಿಷಿ : ಮಾನವಾ ಕೇವಲ ನರನಲ್ಲದೆ ಮಾನವಾ ಆಗಿಯೆ ಬದುಕಿದ್ದಂಥಾ ಒಂದು ಚಾರಿತ್ರಿಕ ಸಂದರ್ಭ ಇತ್ತೇಂತ ಪ್ರಶ್ನೆ.

ಶಂಬಾ : ನಾವು ಹಾಗೆ ಭಾವಿಸ್ಬಹುದು. ಮನು ಎಂಬವಾ ಎಂದೊ ಇದ್ದ. ಮನು ಸ್ಮೃತಿ ಅಂತ ನಮ್ಮಲ್ಲಿ ಹೇಳ್ತಿವಿ. ಮನುಸ್ಮೃತಿ ಹೊಡದು ಹಾಕೋ ದಕ್ಕೆನೆ ಸ್ವಯಂಭೂ ಮಾನವನ ಕಲ್ಪನೆ ಬಂದುದ್ದದ ನಮ್ಮಲ್ಲಿ. ಈ ಸ್ವಯಂಭೂ ಮಾನವಾ ಅಂಬೊ ಕಲ್ಪನೆ ಮಾನವನನ್ನ ಹೊಡದು ಹಾಕೇದ. ವೈವಸ್ವತ ಮನೂನೂ ಹೊಡ್ದು ಹಾಕೇದ. ನಮ್ಮಲ್ಲಿ ದುಷ್ಟ ತನ....ಅದೆ ಮನುಷ್ಯನಲ್ಲಿ... ದುರ್ಬುದ್ಧಿನೂ ಸಾಕಷ್ಟದ. ಅವ ತಾನಾಗಿ ಈ ಕಲಿಯುಗ ಆಮಂತ್ರಿಸ್ಯಾನೆ. ಇದಕ್ಕೇನು. ಒಂದು ಟರ್ನ್ ಸಿಕ್ಕ ದ್ದದ ಅದು ಮಾನವಂದೆ ಹೊರ್ತು ಮತ್ಯಾರದ್ದೂ ಅಲ್ಲ .. ಮನುಸ್ಮೃತಿ ಈ ಹೆಸರು ಐತಿಹಾಸಿಕ ರೂಪದ್ದೂಂತ ನನಗನ್ನಿಸೇದ.... ಸ್ವಯಂಭೂ ಮಾನವನ ಕಲ್ಪನೆ ಅದನ್ನ ಹೊಡೆದು ಹಾಕೋದಕ್ಕ ಬಂದದ್ದದೆ. ಈ ಸ್ವಯಂಭೂ ಮಾನವ ಯಾರು ಅಂತ ಕೇಳಿದರೆ ಅವನು ಹಿರಣ್ಯಗರ್ಭ ನ ಮಗ. ಅಂತ್ಹೇಳ್ತಾರೆ. ಷುರುವಾಯ್ತಲ್ಲಿ. ಹಿರಣ್ಯಗರ್ಭ ಸಮವರ್ತ ತಾಗ್ರೇ ಭೂಪಸ್ಯ ಜಾತಃ ಪತಿ ಏಕ ಆಸ ......ಹಿರಣ್ಯಗರ್ಭ ಸೂಕ್ತ. ಇದು ಜೆನೆಟಿಕ್ ಅಪ್ರೋಚದೆ. ಜೆನೆಟಿಕ್ ಅಪ್ರೋಚ್ ಇಸ್ ಲೇಟರ್ ಅಂತಾಯ್ತು. ನಮ್ಮಲ್ಲಿನು ಕಾಣ್ತವೆ. ಜೆನೆಟಿಕ್ ಅಪ್ರೋಚದಿಂದನೆ ಎಲ್ಲಾ ಪ್ರಶ್ನೆಗಳು ಕೂಡಿವರಿದಿದ್ದಾವೆ. ಈ ಋಷಿಯಮುನಿಯ ಕಲ್ಪನೆ ಅಂತ ತಿಳಿಸಿದ್ರುಲ್ಲಾ ನೀವು .... ಅದ್ರ ಆಧಾರದ ಮೇಲೆ........ಪ್ರಕಾಶ ತತ್ವ ಋಷಿಗಳದ್ದೂ.............

ಶಂಬಾ : ಹೌದಪ್ಪ.........ಅದಕ್ಕ ....ನಾನು ಮ್ಯಾಕ್‌ಡೊನೆಲ್ ಮತ್ತು ಕೀತ್ .... ಇವರ ಕೋಶ ಓದಿದಾಗೆ ಅವ್ರು ಅಲ್ಲಿ ಋಷಿ ಸಂಪ್ರದಾಯ ಮತ್ತು ಮುನಿ ಸಂಪ್ರದಾಯ ಬೇರೆ ಇರಬಹುದೆಂತ ಅದಾದ್ರಲ್ಲಿ. ನಾನು ಅದನ್ನ ಹೌದನೂಂತ ಹೊರಟಿದ್ದೆ. ಅದು ತೀರ ಸುಳ್ಳು ಇದ್ರೆ ಭಾಷೆಯಲ್ಲಿ ಬರತಿತ್ತಿಲ್ಲಿ. ಭಾಷೆ ಬರೀಬೇಕಾಗಿದ್ರೆ ತೀರ ಸ್ಯೂಡೊ ಶಬ್ದಗಳನ್ನ ಹಾಕಲಿಕ್ಕ ಬರೂದುಲ್ಲ. ಟ್ಯಾಸಿಟ್ ಕನ್ಸೆಂಟ್ ಆಫ್ ದ ಸೊಸೈಟಿ ಇರ್ತದ. ಆ ಕನ್‌ಸೆಂಟ್ ತಕ್ಕೋತಾರೆ ಆದ್ರ ಆ ಟ್ಯಾಸಿಟ್ ಕನ್ಸೆಂಟಿನ ಕಾಲದಲ್ಲಿ....ವೈವಸ್ವತ ಮನು ಅಂಬೋನು ಇದ್ದಾನೆ. ಆ ಮನುವಿನ ಸಂತಾನ ಮಾನವರು ಅನ್ನೋದರಿಂದ ಬಂತು. ಆದ್ರ ಮನ ಅಂಬೋದು ಶಬ್ದ ....ಪಾಶ್ಚಾತ್ಯ ಪರಂಪರೆಯಲ್ಲಿ ಅಷ್ಟು ಸ್ಪಷ್ಟವಾದಂಥ ಪರಿಭಾಷೆ ಇಲ್ಲ. ಅವರ ಪರಿಭಾಷೆಯಲ್ಲಿ ಕೊರತೆ..........ಪ್ರಕಾಶ ತತ್ವದ ಸಾಕ್ಷಾತ್ಕಾರ, ಜ್ಯೋತಿಯ ಸಾಕ್ಷಾತ್ಕಾರ ನಮ್ಮಲ್ಲಿ ಉಂಟು. ಸಾಕ್ಷಾತ್ಕಾರ ಜ್ಯೋತಿ ಸ್ವರೂಪದಲ್ಲಿ ಯಾವಾಗಲು. ಅಂದ್ರ ಕಣ್ಣೀವಳಗೆ ವ್ಯಾಲ್ಯೂ ಕಂಡ ಹಾಗೆ. ಪ್ರಕಾಶ ತತ್ವಾಂದ್ರೆ....ಅಲ್ಲಿ ಕರಾಬೊರೇಷನ್ ಅಲ್ಲಾ ಕಂಪ್ಯಾರಿಸನ್ ಕೊಡೋದು. ಪ್ರಕಾಶತತ್ವದ ಪಾತಳಿ ಒಂದು ಕಾಲಕ್ಕಿತ್ತು. ...ಅವರು ಏನು ಪುಣ್ಯವಂತ್ರಿದ್ರೊ ಗೊತ್ತಿಲ್ಲ. ನಾ ನೋಡಿಲ್ಲ. ನಾನು ಇತಿಹಾಸಕಾರ ಒಂದು ರೀತಿಯಲ್ಲಿ. ಇತಿಹಾಸ ಅನ್ನೋದದ. ಇತಿಹಾಸನೆ ಸುಳ್ಳು ಅನ್ನೋ ಅಂಥಾವರು ಇದ್ದಾರೆ. ಇತಿ ಹ ಆಸ. ಹೀಗೆ ಇತ್ತು ಅಂತ ಅನ್ನುವಂಥಾ ಮಾತುಗಳವ. ಆ ಮಾತುಗಳ ಕರಬೊರೇಷನ್ ಬೇರೆ ಬೇರೆ ಕಡಿಂದ ಸಿಕ್ಕರೆ ಅಲ್ಲಾಂತ ಯಾಕನ್ಬೇಕು ? ನಾನೆ ಕಲ್ಪಿಸಿದ್ರೆ ನಂದನೇ ಇದ್ರೆ ಅಲ್ಲಾಂತನ್ಬಹುದು. ಅದ್ರ ಒಂದು ಕಡಿಗಲ್ಲ. ಹತ್ತು ಕಡಿಗೆ ಬೇರೆ ಬೇರೆ ಕ್ರಾಸ್‌ಕಲ್ಚರಲ್ ಕರಬರೇಷನ್ ಇಸ್ ಮೋಸ್ಟ್ ಬಿಲಿವಬಲ್ ಅಂತ ನಾ ಅಂದ್ಕೊಂಡೇನಿ. ಹಾಗೆ ಗ್ರೀಕ್ ಮತ್ತು ಈ ಸಂಸ್ಕೃತಿ ನಡುವೆ ನನಗೇನೂ ಆ ವಿಶ್ವಾಸ ಹುಟ್ಟಿಧಾಂಗ ಅನಿಸ್ತೈ.

ಮಹಿಷಿ : ತಾವು ಹೇಳೋಣಾಯ್ತಲ್ಲಾ. ದೇಶಾತೀತ ಕಲಾತೀತ ಅವಸ್ಥಾ ಇದೆ ಮನುಷ್ಯನಿಗೇಂತ, ಅದು ದೇಹ ಸಂಬಂಧ ಇರುತ್ತೊ ಆವಾಗ ? ಅವ ಬಾಡಿಲಿ ಇರಧೊರ್ತು ಅನುಭವಿಸ್ತಾನೆ ಹ್ಯಾಗೆ ?

ಶಂಬಾ : ಮನು ಅಂಬೊವ ಕಾಲ್ಪನಿಕ ಅಂದೇನಿ ನಾನು.... ಮನ ಅಂಬವಾ ಕಾಲ್ಪನಿಕ

ಅಂದೀನಿ ನಾನು. ಅವನ್ನ ನಾವು ಮರತೀವಿ. ಆ ಮಾತು ಬೇರೆ. ವೈವಸ್ವತೊ ಮನುರ್ನಾಮೋ ಘಾಸವೀಯೊ ಮನೀಷಣಾಂ ಅಂತ ಹೇಳ್ತಾನೆ. ಆ ಕಾಲಿದಾಸನೆ ಏನ್ಮಾಡಿದಾ ಓಂಕಾರಕ್ಕ ಹಚ್ಚಿದ ಈ ಮನುವನ್ನ. ಓಂಕಾರ ಮತ್ತು ಮನು ಇವು ಒಂದಕ್ಕೊಂದು ತೀರಾ ಅಸಂಬದ್ಧ. ಓಂಕಾರದೊಳಗೆ ಜೆನೆಟಿಕ್ ಅಪ್ರೋಚದ. ಎಲ್ಲಾನು ಓಂಕಾರ ನಿರ್ಮಾಣ ಮಾಡಿದ್ದಲ್ಲಿ ಓಂಕಾರದಿಂದನೆ ಎಲ್ಲ ಸೃಷ್ಟಿಯಾಯ್ತು ಇಲ್ಲಿ ಜೆನೆಟಿಕ್ ಅಪ್ರೋಚ್ ಬಂದು ನಮ್ಮ ಶುದ್ಧ ತಿಳುವಳಿಕಿಗೆ ಬಾಧಕಾಗ್ತ ಅದೆ ಓಂಕಾರಾದ್ಯೇವ ಖಲುಮಾನಿ ಭೂತಾನಿ ಜಾಯಂತೆ. ಈ ಓಂಕಾರ ಧ್ಯಾನ ಪ್ರಣವ ಅಂತ ಹೆಸರದ. ಪ್ರಣವೋಪಾಸಕರ ಪ್ರಾಣೋಪಾಸಕರು. ಇವರು ಈ ಓಂಕಾರ ನಿರ್ಮಾಣ ಮಾಡಿದರು. ಪ್ರಣವೋಪಾಸಕರು - ಪ್ರಾಣೋಪಾಸಕರು ಪ್ರಾಣದೇವರ ಉಪಾಸನ ಮಾಡೋವರು ಅಂದ್ರೆ ನಾವೂ ಹಚ್ಕೋತೀರು ಇಲ್ಲಿ ಅಧಿಕೃತ ಇದ್ದರೂ ನಾ ಅವರ್ನ ಅನ್ನೂದಿಲ್ಲ. ತತ್ವಶಃ ಏನಾಗ್ತದೊ ಅದು. ಈಗ ವೈವಸ್ವತ ಮನುವನ್ನ ಹೊಡದು ಹಾಕೋದಕ್ಕೆ ಬೆಂಗಳೂರಲ್ಲಿ ಮುಂದೆ ಬಂದವರು ರಿಟೈರ್ಡ್ ರಾಮಚಂದ್ರರಾಯರು. ಅವರು ಬಂದು ಉಪನ್ಯಾಸ ಕೊಡ್ತೀನೀಂತ ಹೇಳಿದ್ರು. ವೈವಸ್ವತ ಮನುವಿನ ಕಲ್ಪನೆ ಅವರು ತೊಗೊಂಡ್ರು. ನಂದು ರಾಮಚಂದ್ರರಾಯರದ್ದು ಪತ್ರ ವ್ಯವಹಾರ ಇತ್ತು. ಆ ಪತ್ರ ವ್ಯವಹಾರದಲ್ಲಿ ಅವರು ನೋಡಿದ್ರು ನನಗ ತುಂಬಾ ವಿಶ್ವಾಸ ಹುಟ್ಕೊಹಂಗೇನೆ ಮಾತಾಡಿದ್ರು. ಆದ್ರೆ ಅವರ ವ್ಯಾಖ್ಯಾನ ....ನಾನು ಒಂದು ಬೇರೆ ಕೊಡ್ತೀನೀಂತ ಹೇಳಿದ್ರು. ಕೊಡಭೌದು ಅಂದೆ. ಆದ್ರೆ ಕೊಟ್ಟ ವ್ಯಾಖ್ಯಾನ ಅಧ್ವಾನ. ಯಕೇಂತ ಕೇಳಿದ್ರೆ ಅವರು ಶಾಕ್ತ ಸಂಪ್ರದಾಯವನ್ನ ಹೇಳ್ತಾರೆ. ನನ್ನ ಮಾತೆ ಸಿದ್ಧಾಂತ....ಈ ಜೆನೆಟಿಕ್ ಅಪ್ರೋಚ್....ಈ ಶಾಕ್ತ ಸಂಪ್ರದಾಯ ನಮ್ಮ ಮಾನವ ಸಂಪ್ರದಾಯವನ್ನ ಪ್ರಕಾಶತತ್ವವನ್ನ ಹೊಡಿತದ. ರಾತ್ರಿ ಹೆಚ್ಚೊ ಹಗಲು ಹೆಚ್ಚೊ? ಇವತ್ತು ನಮ್ ಪಾಲಿಗೆ ರಾತ್ರಿ ಹೆಚ್ಚಾಗೇದ. ರಾತ್ರಿಯ ಪೂರ್ವಸಿದ್ಧತೆಗಾಗಿ ನಾವೆಲ್ಲಾ ದುಡಿತಾ ಇದ್ದೇವೀಂತ ನನ್ನ ಭಾವನೆ. ಸಮಾಜ ಸಮಷ್ಟಿಗೆ ಹಿತ...... ಅಂದ್ರ ಯಾರ ಹಿತ ಅಂತ ಕೇಳ್ತಾರೆ. ನಮಗೆ ವಿಶ್ವಾಸೇ ಇಲ್ಲ. ಓಹ್ಮನಃ ಅಂತನ್ನೊ ಒಂದ್ ಕಾನ್ಸೆಪ್ಟ್ ಅದ. ಅದನ್ನ ತಾರಾಪೂರ್‌ವಾಲಾ ಅಂನೋನು ಭಾಷಾಂತರ ಮಾಡ್ತಾನೆ. "ಒಹ್ಮನಃ ಇಸ್ ಎ ರೇ ಆಫ್ ಎ

ಪಾರ್ಟ್ ಆಫ್ ಅಹುರಮಜ್ದ. ನಮ್ಮಲ್ಲಿ ವಿವಸ್ವನ್ ಮತ್ತು ಅ ಹೊಂದಿಕೆಯಾಗೋದು ನೋಡಿ ನನಗೆ ಭಾಳ ಆಶ್ಚರ್ಯಾಗಿ ನಂಬ್ಲಿ ಹಚ್ಚಿತು. ವಿವಸ್ವನ್ ಇವಾ ಆ ವೈವಸ್ವತನ.... ಆ ಮನು ವೈ ಸ್ವತನ ಅಂಶ. ನಾವೆಲ್ಲ ವೈವಸ್ವತನ ಅಂಶರು ಅಂದ್ರೆ ಪ್ರಕಾಶತತ್ವ ಮಕ್ಕಳಿ. ಅದನ್ನ ನಾನು ಮನುಜ ಅಂದ್ಕೊಳ್ಳೊದಕ್ಕಿಂತ ತನುಜ ಅಂದ್ಕೊಳ್ಳೊದ್ರೊಳಗೆ ಹೆಚ್ಚು ಸುಲುಭ ಅನಿಸ್ತದೆ. ಮಾನವ ಸಮಸ್ಯೆ ಅಂದ್ರ........ಅದರ ಇತಿಮಿತಿಗಳು..........ಮಾನವ ಸಮಸ್ಯೆ ಭಾರತಕ್ಕೆ ಮಾತ್ರ ಸೀಮಿತವಲ್ಲ. ಹೀಗೆ ಹೊರಗಿಂದೂ ಅದ ನನಗೆ ಇನ್ನೊಂದ ಸಿಗ್ತಆದೆ........ .....ಅದ್ನ ನಾನು ಹಿಂದ ಮಡಿಕೇರಿ ಉಪನ್ಯಾಸದೊ ಳಗ ಹೇಳೀನಿ. ಪಾಶ್ಚಾತ್ಯರು.. ... ಗ್ರೀಕ್ ತತ್ವಜ್ಞಾನಿ.... ಝುಲರ್ ಎಂಬವ.......ಪೈಥಾಗೊರಸ್ಸನ ಪಕ್ಷಪಾತಿಯಾಗಿ ಬರೀತಾನೆ. ಏನು... ....ಮಾನವರಿಗೆ ಹೆಚ್ಚು ಹಿತಕಾರಕ ಆಗೋದಕ್ಕೆ ಇವ ಖಟಿಪಿಟಿ ಮಾ ಡ್ತಾನೆ. ಪ್ರಕಾಶ ತತ್ವದ ಪಾತಳಿ ಮೇಲೆ ಸೈಯನ್ಸ್ ಹುಟ್ಟೋದ ಸಾಧ್ಯವಿಲ್ಲ. ಸಾಯನ್ಸ್ ಆಗ ಬೇಕಾದರೆ ಸ್ಪೇಸ್ ಟೈಮ್‌ದಲ್ಲೆ ಸಾಧ್ಯ ....ಲಾಭ ಏನೂಂತ ಕೇಳಿದರೆ ಈ ಶೋಧಾತು ಆ ಶೋಧಾತು ಈ ಯುದ್ಧಾತು ಆ ಯುದ್ಧಾತು. ದುಃಖ ತಿಕ್ಕಾಟ ... ಇದ ಕಾಸ್ಮಾಸ್ ಅನ್ನೊ ಶಬ್ದನೆ ಪೈಥಾಗೊರಸ್ಸಂದು. ಅವನೇ ಇದು ಮಾಡಿದ್ದ. ನಾವಿ ವತ್ತು ಕಾಸ್ಮಿಕ್ ಇದರಲ್ಲೆ ಇದ್ದೇವಿ.... ಕಾಸ್ಮಾಸ್ ಅಂದ್ರೆ ಸ್ಪೇಸ್ ಟೈಂ.. ನಿಜವಾದ ಮಾನವ ಅಥವ ಮನುಷ್ಯ ಇರೋದು. ಆ ಪ್ರಕಾ ಶ ತತ್ವದಲ್ಲಿ—ಸ್ಪೇಸ್ ಟೈಮ್‌ದಲ್ಲಿಲ್ಲ. ಅದರ ಆಚೆಗೆ ಅಂದ್ರ ಹೀಗ ಮಾನವ ತನ್ನನ್ನ ತಾನೆ ಮೋಸಗೊಳಿಸಿಕೊಳ್ಳಲಿಕ್ಕೆ ..ಸಿದ್ಧನಾಗಿರುವಾ ಯಾರೇನು ಮಾಡ್ಯಾರು!

ಮಹಿಪಿ : ನಿಮ್ಮ ಸಂಶೋಧನೇನ ಇನ್ನೂ ಮುಂದುವರೆಸಬೇಕೊಂತಿದೋರೊ! ಅ ಥವಾ ನಿಮ್ಮ ಶೋಧನೆಯನ್ನ ಬೇರೆಯವರು ನಿಮ್ಮ ಸಂಶೋಧನೆಯನ್ನ ಬೇರೇಯವ್ರು ಮುಂದುವರ್‍ಸಿಕೊಂಡು ಹೋಗ ಬೇಕೊಂತ ಅಪೇಕ್ಷೆನೊ ?

ಶಂಬಾ : ಇದೂ ಸಮಾಜದ ಹೊಣೆ. ಅದ್ರೊಳಗ ತಥ್ಯಾಂಶ ಏನು ಸಿಗ್ತದ ಅದನ್ನ ನೋಡೋಣ. ಇದೇರಿ ಸಾಮೂಹಿಕವಾಗೆನೆ ಮಾಡಬೇಕು ಪ್ರಯತ್ನ ಪಡಬೇಕು. ಆದ್ರಿವತ್ತು ನಂದು ಕೈ ನಿಂತದ. ದೀರ್ಘಾಯುಷ್ಯ

ಅನ್ನೊ ಶಾಪ ಅನ್ನೊ ಮಾತಿಗು ನಾನು ಬರ್ತಿನಿ. ಯಾಕಂದ್ರೆ ಯಾ
ರು ಬರುದುಲ್ಲ ನೀವೆ ಇವತ್ತು ನನಗಿವತ್ತು ಇಷ್ಟು ದೊಡ್ಡ ಕಂಪನಿ
ಕೊಟ್ಟದ್ದು........ನೀವು ಇಷ್ಟು ದೂರದಿಂದ ಬಂದ್ರಿ. ತೀರಾ ಹುಚ್ಚನಾಂಗೆ
ನೀನು ಮಾಡಿಲ್ಲ ಅಂತ ವಿಶ್ವಾಸ ಕೊಟ್ರಿ. ಶಾಂತನಾಗಿದ್ದುದ್ದು ಕಣ್ಣು
ಮುಚ್ಚಬೇಕು.

ನಾರಾಯಣರಾವ್ : ಕಣ್ಣು ಮುಚ್ಕೊ ಧ್ಯಾನ ಯಾಕೆ ಮಾಡ್ತೀರಾ ?

ಶಂಬಾ : ಒಂದಿನ್ಸ ಕಣ್ಣು ಮುಚ್ಚಲೇಬೇಕಲಾ ......ಅಮೇರಿಕದ ಒಬ್ಬಾಂವ
ಭಾಷೆ ಬಗ್ಗೆ ಬರ್ದದ್ದು ಲ್ಯಾಂಗ್ವೇಜ್ ಆಫ್ ಲೈಟ್ ಅಂಡ್ ಲ್ಯಾಂಗ್ವೇಜ್
ಆಫ್ ನೈಟ್ ಅಂತ. ಏ ಲಾ ಲ್ಯಾಂಗ್ವೇಜ್ ಆಫ್ ನೈಟ್. ಸಾಹಿತಿ
ಗಳೆಲ್ಲ ಮಾಡ್ತಾ ಇರೋದು ಅಂದ್ರ ಸಾಹಿತಿಗಳು ಸಿಟ್ಟಾಗ್ತಾರ.
ಲೈಟ್ ಕೊಟ್ರೆ ಯಾರಿಗೆ ಬೇಕಾಗೇದಿಲ್ಲಿ ? ಕಾರಂತ್ರಿಗೊಬ್ಬರಿಗೆ........
ಅಲ್ಲಲ್ಲ ಕಾರಂತ್ರ ಮೇಲೆ ಬೈಗಳವೆ. ನಿಮಗೊತ್ತಿಲ್ಲ. ಮಹಾರಾಷ್ಟ್ರ
ದೊಳಗೆ ಖಾಂಡೇಕರ್ ಅಂತಿದ್ರು. ಖಾಂಡೇಕರ್ ಮತ್ತು ಕಾರಂತರ
ನಡುವೆ ಸ್ವಲ್ಪ ಹೋಲಿಕಿ ಅದ. ಏನು ? ಜೀವನ ಮೌಲ್ಯಗಳ ಎ
ಚ್ಚರಾ ಇಟ್ಟು ಬರೀತಾರಲ್ಲ, ಇವರು ಸಾಹಿತಿಗಳೆ ? [ಉಳಿದವರ ನಗು]
ಖಾಂಡೇಕರ್ ಸಾಹಿತಿನೆ ಅಲ್ಲಾ ಅಂದವರಿದ್ದಾರೆ ಅಲ್ಲಿ. ನಮ್ಮಲ್ಲಿ ಅಷ್ಟು
ಗಟ್ಟಿಗರಿಲ್ಲ. ಮಹಾರಾಷ್ಟ್ರದೊಳಗೆ ಖಾಂಡೇಕರ್‌ಗೆ ....ಏನು ಜ್ಞಾನ
ಪೀಠ ಪ್ರಶಸ್ತಿ ಸಿಗ್ತು. ಸಿಗಲಿಕ್ಕೆ ಕಾರಣೆಲ್ಲ. ಯಾಕಂದ್ರ ಸಾಹಿತಿನೆ
ಅಲ್ಲ ಅಂತ ಅಂದರು. ಆದ್ರ ಕಾರಂತರ ಬಗ್ಗೆ ಹಿಂಗ ಹೇಳೋರು ಯಾರೂ
ಇಲ್ಲ. ಇದ್ರೂ ಧೈರ್ಯಿಲ್ಲ. ಸಾಹಿತಿ ಅನ್ನಬೇಕೋ ಅಂತ ಕೇಳೋರು
ಇದ್ದಾರೆ ನಂಗೊತ್ತದೆ.......... ಮೈಮರಸಿ ಕೈ ಬಿಡೂದು. ರಸಂ ಒಸ
ರ್ವಂತೆ ! ಮೈಮೇಲೆ ಎಚ್ಚರಿರೋಹಾಂಗೆ ಬರದ್ರೆ ಅದು ಮನುಷ್ಯತ್ವ ಕಡಿ
ಮ್ಯಾಗ್ತದಂತೆ ತಿಳಿತಾರೆ.

ಡಾ. ಶಿವರಾಮ ಕಾರಂತರ ನೇತೃತ್ವದಲ್ಲಿ ಶಿವಮೊಗ್ಗೆಯ ಕರ್ನಾಟಕ ಸಂಘದ ಅಧ್ಯಕ್ಷ ಮಹಿಷಿ, ನರಸಿಂಹಮೂರ್ತಿ, ಪ್ರಗತಿ ಪ್ರಿಂಟರ್ಸ್ ಮಾಲೀಕರಾದ ನಾರಾಯಣರಾಯರು, ಸತ್ಯನಾರಾಯಣ ರಾವ್ ಅಣಿ ಮತ್ತಿತರ ಗೆಳೆಯರು ದಿನಾಂಕ 1-3-87 ರಂದು ಡಾ. ಶಂಬಾ ಜೋಷಿಯವರನ್ನು ಧಾರವಾಡದ ಅವರ ಮನೆಯಲ್ಲೆ ಸನ್ಮಾನಿಸಿ ಸಂದರ್ಶಿಸಿದರು. ಹುಬ್ಬಳ್ಳಿ ಧಾರವಾಡದ ಕೆಲವು ಪತ್ರಕರ್ತರೂ ಅಲ್ಲಿದ್ದರು. ಆ ಸಂದರ್ಶನದ ಮುಖ್ಯ ಭಾಗಗಳು ಇಲ್ಲಿ ಪ್ರಕಟವಾಗಿವೆ.

ಚಂದ್ರಗುತ್ತಿಯಲ್ಲಿ ನಡೆದದ್ದೇನು ?

○ ಬಿ. ಕೃಷ್ಣಪ್ಪ

ಬೆತ್ತಲೆ ಸೇವೆ ಅನಾಗರಿಕ—ಅಮಾನುಷ ಎಂದು ಈ ಹಿಂದೆ ಅನೇಕರು ಪತ್ರಿಕೆಗಳಲ್ಲಿ ಲೇಖನಗಳನ್ನು ಬರೆದು ಪ್ರಕಟಿಸಿದ್ದು ಉಂಟು. ಆದರೆ ಸರ್ಕಾರವೇ ಆಗಲೀ, ಜನಸಾಮಾನ್ಯರೇ ಆಗಲೀ ಆ ಬಗ್ಗೆ ಗಮನಹರಿಸಲೇ ಇಲ್ಲ. ಆದರೆ 1984 ವರ್ಷ ನಾನು ನನ್ನ ದಲಿತ ಸಂಘರ್ಷ ಸಮಿತಿ ಗೆಳೆಯರೊಂದಿಗೆ ಬೆತ್ತಲೆ ಸೇವೆಯನ್ನು ಕಣ್ಣಾರೆ ಕಂಡು, ಕೆಲವು ಚಿತ್ರಗಳನ್ನು ಹಿಡಿದು ಲಂಕೇಶ್ ಪತ್ರಿಕೆಯಲ್ಲಿ ಚಿತ್ರಗಳೊಂದಿಗೆ ಲೇಖನ ಬರೆದು ಪ್ರಕಟಿಸಿದೆ. ಬೆತ್ತಲೆ ಚಿತ್ರ,ಗಳನ್ನು ಕಂಡು ಜನರಿಗೆ ಮತ್ತು ಸರ್ಕಾರಕ್ಕೆ ನಿಜ ಸ್ಥಿತಿಯ ಅರಿವಾಯಿತು. ಈ ಬಗ್ಗೆ ರಾಜ್ಯ ವಿಧಾನ ಸಭೆಯಲ್ಲಿ ದೊಡ್ಡ ಗಲಾಟೆಯೇ ನಡೆಯಿತು. ರಾಜ್ಯ ಮುಖ್ಯಮಂತ್ರಿ, ಗೃಹಮಂತ್ರಿ ಹಾಗೂ ಜೆ. ಹೆಚ್. ಪಟೇಲರು ವಿಧಾನ ಸಭೆಯಲ್ಲಿ ಬೆತ್ತಲೆ ಸೇವೆ ನಿಲ್ಲಿಸಲು ಸೂಕ್ತ ಕ್ರಮ ತೆಗೆದುಕೊಳ್ಳುವುದಾಗಿ ಹೇಳಿಕೆ ಕೊಟ್ಟರು. ಸ್ಥಳೀಯ ಶಾಸಕ ಬಂಗಾರಪ್ಪ ಈ ಬಗ್ಗೆ ವಿಧಾನ ಸಭೆಯಲ್ಲೇ ಆಗಲಿ ಬಹಿರಂಗವಾಗಿಯೇ ಆಗಲಿ ಯಾವ ಹೇಳಿಕೆಯನ್ನೂ ವ್ಯಕ್ತಪಡಿಸಲಿಲ್ಲ.

1985 ಬಂತು. ಸರ್ಕಾರ ಈ ಬಗ್ಗೆ ಏನನ್ನೂ ಮಾಡಲಿಲ್ಲ. ದಲಿತ ಸಂಘರ್ಷ ಸಮಿತಿ ಕರ ಪತ್ರ ಹಾಕಿ, ಬೆತ್ತಲೆ ಸೇವೆಯಂಥ ಬರ್ಬರ ಪದ್ಧತಿಯನ್ನು ಕೈ ಬಿಡಬೇಕೆಂದು ಜನರಲ್ಲಿ ಮನವಿ ಮಾಡಿಕೊಂಡಿತು. ಬೃಹತ್ ಮೆರವಣಿಗೆ ನಡೆಸಿ ಬರ್ಬರ ಪದ್ಧತಿಯನ್ನು ಖಂಡಿಸಿತು. ಆದಾಗ್ಯೂ ಜನ ದ. ಸಂ. ಸ. ಮನವಿಗೆ ಸೊಪ್ಪು ಹಾಕಲಿಲ್ಲ. ಬೆತ್ತಲೆ ಸೇವೆ ಮಾಡಿಯೇ ಮಾಡಿದರು. ಬಂಗಾರಪ್ಪ ದೇವಿ ಭಕ್ತರೆಂದೂ, ಜಾತ್ರೆಗೆ ಮುನ್ನಾದಿನ ದೇವಿ ಪೂಜೆ ಮಾಡುತ್ತಾರೆಂದೂ ತಿಳಿಯಿತು. ಸಮಾಜವಾದಿಯಾಗಿದ್ದ ಆತ ಈ ಬಗ್ಗೆ ಏನನ್ನೂ ವ್ಯಕ್ತಪಡಿಸಲಿಲ್ಲ.

1986 ಬಂತು. ನಾವು ಪೂರ್ವಭಾವಿ ಸಿದ್ಧತೆ ನಡೆಸಿದೆವು. ಬೆತ್ತಲೆ ಸೇವೆ

ವಿರೋಧಿ ಸಮಿತಿ ರಚಿಸಿದೆವು. ಈ ಹೊತ್ತಿಗೆ ಸರ್ಕಾರವೂ ಕೂಡ ಬೆತ್ತಲೆ ಸೇವೆ ನಿಲ್ಲಿಸಲು ಸೂಕ್ತ ಕ್ರಮ ತೆಗೆದುಕೊಳ್ಳುವುದಾಗಿ ಪ್ರಕಟಿಸಿತು. ನಾವು ಗೃಹಮಂತ್ರಿಗಳು, ಶಿವಮೊಗ್ಗ ಡಿ. ಸಿ. , ಎಸ್. ಪಿ. ಇವರನ್ನು ಭೇಟಿ ಮಾಡಿದೆವು. ಡಿ.ಸಿ.ಯವರು ಶಿವಮೊಗ್ಗೆಯಲ್ಲಿ ಎಲ್ಲ ಸಮಾಜ ಕಾರ್ಯಕರ್ತರ ಸಭೆ ಕರೆದು ಚರ್ಚಿಸಿದರು. ಎಸ್. ಪಿ.ಯವರು ಸೂಕ್ತ ರಕ್ಷಣೆ ಬಂದೊ ಬಸ್ತ್ ಮಾಡುವುದಾಗಿ ಆಶ್ವಾಸನೆ ಕೊಟ್ಟರು. ಜಾತ್ರೆಗೆ ಒಂದು ತಿಂಗಳು ಮುಂಚೆ ಸೊರಬ ತಾಲ್ಲೂಕು ಗ್ರಾಮಾಂತರ ಪ್ರದೇಶಗಳಲ್ಲಿ ಬೆತ್ತಲೆ ಸೇವೆಗೆ ಸಂಬಂಧಿಸಿದಂತೆ ಜನ ಸಂಪರ್ಕ ಸಭೆ—ಕಾರ್ಯಕ್ರಮ ಮಾಡಬೇಕೆಂದು ತೀರ್ಮಾನವಾಯಿತು. ಸಮಾಜಕಲ್ಯಾಣ ಇಲಾಖೆ, ಕನ್ನಡ ಸಂಸ್ಕೃತಿ ಇಲಾಖೆ ದಲಿತ ಸಂಘರ್ಷ ಸಮಿತಿ, ಬೆತ್ತಲೆ ವಿರೋಧಿ ಸಮಿತಿ, ಒಟ್ಟಿಗೆ ಸೇರಿ ಕಾರ್ಯಕ್ರಮ ರೂಪಿಸಿದರು ಬೆತ್ತಲೆಸೇವೆಗೆ ಸಂಬಂಧಿಸಿದಂತೆ, ವಿಚಾರ ಸಂಕಿರಣಗಳು, ಜನ ಸಂಪರ್ಕ ಸಭೆಗಳು, ಕರಪತ್ರಗಳು, ಭಿತ್ತಿ ಪತ್ರಗಳು, ರೇಡಿಯೋ ಪ್ರಕಟಣೆ ದಲಿತ ಕಲಾ ಮಂಡಲಿ ಎರಡು ನಾಟಕ ತಂಡಗಳು, ಒಂದು ಹಾಡಿನ ತಂಡ, ಹೀಗೆ ವ್ಯಾಪಕವಾಗಿ ತಾಲ್ಲೂಕಿನ ಉದ್ದಗಲಕ್ಕೂ ಕಾರ್ಯಕ್ರಮಗಳನ್ನು ಜಾತ್ರೆಗೆ 15 ದಿನಗಳ ಮುಂಚೆ ನಡೆಸಲಾಯಿತು. ಸಮಾಜ ಕಾರ್ಯಕರ್ತರು, ಸ್ಥಳೀಯ ಮುಖಂಡರು, ಸರ್ಕಾರಿ ಅಧಿಕಾರಿಗಳು, ಮತ್ತು ಗ್ರಾಮಾಂತರ ಜನ ಸಾಮಾನ್ಯರು ಈ ಕಾರ್ಯಕ್ರಮಗಳಲ್ಲಿ ಭಾಗ ವಹಿಸಿದರು. ಎಲ್ಲರೂ ಬೆತ್ತಲೆ ಸೇವೆ ಅನಾಗರಿಕ ನಿಲ್ಲಲೇ ಬೇಕು, ಎಂದರು.

ಇಷ್ಟಾದರೂ ತಾ : 20-3-1986 ರಂದು ಗಲಭೆ ಏಕೆ ನಡೆಯಿತು ? ಎಂಬುದು ಮುಖ್ಯ ಪ್ರಶ್ನೆ. ನಿಜಕ್ಕೂ ಹೇಳಬೇಕೆಂದರೆ ಭಕ್ತಾದಿಗಳು ಈ ಗಲಭೆ ಮಾಡಿದವರಲ್ಲ. ಭಕ್ತರ ಹೆಸರಿನಲ್ಲಿ ಕೆಲವು ಹಿತಾಸಕ್ತರು ಈ ಗಲಭೆ ನಡೆಸಿದರೆಂಬುದು ಮುಖ್ಯವಾದ ಅಂಶ. ಅವರನ್ನು ಹೀಗೆ ಪಟ್ಟಿ ಮಾಡಬಹುದು.

(1) ಚಂದ್ರಗುತ್ತಿ ರೇಣುಕಾಂಬ ಧರ್ಮದತ್ತಿ ಸಂಸ್ಥೆಯ ಸದಸ್ಯರು.

(2) ಜೋಗಮ್ಮಗಳು.

(3) ವಿಶ್ವ ಹಿಂದೂ ಪರಿಷತ್ತಿನವರು.

ಬೆತ್ತಲೆ ಸೇವೆ ನಿಂತರೆ, ಜಾತ್ರೆ ನಿಂತಂತೆಯೇ. ಜಾತ್ರೆ ನಿಂತರೆ ಚಂದ್ರಗುತ್ತಿ ಮಹತ್ವವೇ ಹಾಳಾಗುತ್ತದೆ. ಅಲ್ಲದೆ ಜಾತ್ರೆ ಹೆಸರಿನಲ್ಲಿ ಧರ್ಮದರ್ಶಿ ಸದಸ್ಯರಿಗೆ ಸಣ್ಣ ಪುಟ್ಟ ಲಾಭಗಳು, ಉಂಟು. ಅವನ್ನು ಕಳೆದುಕೊಳ್ಳಲು ಅವರು ತಯಾರಿಲ್ಲ. ರೇಣುಕಾಂಬ ಪೂಜಾ ಪಟ್ಟಿಯಲ್ಲಿ ಬೆತ್ತಲೆ ಸೇವೆಯನ್ನು ಬಹಳ ಹಿಂದೆಯೇ ಕಿತ್ತು ಹಾಕಲಾಗಿದೆ. ಆದರೆ ಬೆತ್ತಲೆ ಸೇವೆ ನಮ್ಮ ಪೂಜಾ ಪಟ್ಟಿಯಲ್ಲಿ ಇಲ್ಲ, ಆದ್ದರಿಂದ

ಭಕ್ತಾದಿಗಳು ಯಾರೂ ಬೆತ್ತಲೆ ಸೇವೆ ಮಾಡಕೂಡದು ಎಂದು ಬಹಿರಂಗವಾಗಿ ಹೇಳುವುದೇ ಆಗಲಿ, ಕರ ಪತ್ರ ಹಾಕುವುದೇ ಆಗಲೀ ಮಾಡಲು ಅವರು ತಯಾರಿಲ್ಲ. ಆ ಬಗ್ಗೆ ಕೇಳಿದರೆ ಅವರು ಉಪಾಯವಾಗಿ ಜಾರಿಕೊಳ್ಳುತ್ತಾರೆ. ಚಂದ್ರುಗುತ್ತಿ ಇತಿಹಾಸ ಬದಲಾಯಿಸಲು ಸಾಧ್ಯವಿಲ್ಲ ಎನ್ನುತ್ತಾರೆ.

ಧರ್ಮದರ್ಶಿಯಾದ ಕೆಂಡಪ್ಪಗೌಡ, ಸ್ವಾದಿ ಬಸವಣ್ಣೆಪ್ಪ, ಪೂಜಾರಿ ಇವರು ಸಮಾಜ ಕಾರ್ಯಕರ್ತರನ್ನು ಅತಿ ಗುಮಾನಿಇಂದ ನೋಡುತ್ತಿದ್ದರು. ತಾ: 18-3-1986 ರ ಸಂಜೆ, ಬೆತ್ತಲೆ ಸೇವೆ ನಾಟಕದಲ್ಲಿ ಗೌಡರನ್ನು ಬೈಯ್ದಿದ್ದೀರಲ್ಲ ಎಂದು ನನ್ನೊಡನೆ ಮಾತಿನ ಘರ್ಷಣೆ ನಡೆಸಿದರು. ಕೆಂಡಪ್ಪ ಗೌಡರ ಮಗನೆ ಗಲಭೆ ನಾಯಕತ್ವ ವಹಿಸಿದ್ದುದಾಗಿ ದಟ್ಟವಾದ ವದಂತಿ ಇದೆ. ದಲಿತ ಸಂಘರ್ಷ ಸಮಿತಿ ಕಾರ್ಯಕ್ರಮದ ವಿರುದ್ಧವಾಗಿ ತಾ: 18-3-1986ರ ಸಂಜೆ ಸೊರಬ ಲಿಂಗಾಯತ ಗೌಡರು ಸಭೆ ನಡೆಸಿದ್ದುದಾಗಿ ತಿಳಿದು ಬಂದಿದೆ ಜಾತ್ರೆಯಿಂದಲೆ ಜೋಗುಮ್ಮಗಳ ಹೊಟ್ಟೆ ಪಾಡು ಆದ್ದರಿಂದ ಅವರಿಗೆ ಜಾತ್ರೆ ನಿಲ್ಲುವುದು, ಬೆತ್ತಲೆ ಸೇವೆ ನಿಲ್ಲುವುದು ಎರಡೂ ಅಪಾಯ. ವಿಶ್ವಹಿಂದೂ ಪರಿಷತ್ತಿನವರು ಈ ಹಿಂದೆ ಜಾತ್ರೆಯಲ್ಲಿ ಮೊಸರನ್ನ, ಚಿತ್ರಾನ್ನ, ಮಾರುತಿದ್ದರು ಬೆತ್ತಲೆ ಸೇವೆಯಂಥ ಅನಾಗರಿಕ ಪದ್ಧತಿಗಳನ್ನು ಘೋಷಿಸುತ್ತ, ಚಿತ್ರಾನ್ನ ಮೊಸರನ್ನ ಮಾರುವುದು ಅಸಹ್ಯ ಮತ್ತು ಅಪಮಾನ ಎಂದು ಪತ್ರಿಕೆಗಳು ವಿಶ್ವಹಿಂದೂ ಪರಿಷತ್ತನ್ನು ಅಪಮಾನಗೊಳಿಸಿದ್ದವು. ಈ ಅಪಮಾನ ಸೇಡು ಒಂದು ಕಡೆ. ಈ ಹೊತ್ತು ಬೆತ್ತಲೆ ಸೇವೆ ನಿಲ್ಲಿಸಿ ಎನ್ನುತ್ತಾರೆ. ನಾಳೆ ದೇವರ ಪೂಜೆ ನಿಲ್ಲಿಸಿ ಎಂದು ಹೇಳುತ್ತಾರೆ. ಇಂಥ ಜನರನ್ನು ಬಲಿಹಾಕಬೇಕು ಎಂಬುದು ಮತ್ತೊಂದು ಉದ್ದೇಶ. ಅಲ್ಲದೆ ಬೆತ್ತಲೆ ಸೇವೆ ನಿಲ್ಲುವುದಾದರೆ ನಮ್ಮ ಸಂಘಟನೆಯಿಂದಲೇ ನಿಲ್ಲಲಿ. ಬೇರೆಯವರು ನಿಲ್ಲಿಸಿ ಅವರಿಗೇಕೆ ಈ ಹೆಸರು ಬರಬೇಕು, ಎಂಬ ಗುರಿ ಇನ್ನೊಂದು ಕಡೆ. ಹೀಗಾಗಿ, ವಿಶ್ವಹಿಂದೂ ಪರಿಷತ್ತಿನವರು ನಾಮಕಾವಸ್ತೆ ಕರಪತ್ರ ಹಾಕಿದ್ದರೂ ಹಂಚದೆ, ಹಂಚಿದರೂ ಕೆಲವನ್ನು ಹಂಚಿ, ಹಿಂದಿನಿಂದ ಬೆತ್ತಲೆ ಸೇವೆ ಭಕ್ತರನ್ನು ಎತ್ತಿ ಕಟ್ಟಿದರು.

ಸಮಾಜ ಕಾರ್ಯಕರ್ತರು, ಮಹಿಳಾ ಪೋಲೀಸರು, ದ. ಸಂ. ಸ, ದವರು ಬೆತ್ತಲೆ ಹೋಗುವವರಿಗೆ ಬೆತ್ತಲೆ ಹೋಗಬೇಡಿರೆಂದು ಬೆತ್ತಲೆ ಸೇವೆ ಕಾನೂನು ಬಾಹಿರವೆಂದು ಬೆತ್ತಲೆ ಹೋಗುವವರ ಸುತ್ತ ಕೈ ಹಿಡಿದು ಕೊಂಡು ಹೊಳೆ ದಂಡೆಯಲ್ಲಿ ಬಟ್ಟೆ ಉಟ್ಟುಕೊಂಡು ಹೋಗುವಂತೆ ಪ್ರಾರ್ಥಿಸಿ ಕೊಳ್ಳುತ್ತಿದ್ದೆವು. ಅಕ್ಕ ತಂಗಿಯರೆ, ಅಣ್ಣ ತಮ್ಮಂದಿರೆ, ಬೆತ್ತಲೆ ಸೇವೆ ಅನಾಗರಿಕ, ಬಟ್ಟೆ ತೊಟ್ಟು ದೇವಿ ಪೂಜೆ ಮಾಡಿರೆಂದು ವಿನಂತಿಸಿಕೊಳ್ಳುತಿದ್ದೆವು. ನಮ್ಮ ಮನವಿಗೆ ಒಪ್ಪಿ

ತಾ: 19-3-1986ರ ಅಂದು ಸುಮಾರು 300—400 ಜನ ಹೋಗುವ ಕಡೆ ಕೇವಲ 11 ಜನ ಮಾತ್ರ ಬೆತ್ತಲೆ ಹೋದರು. ಬೆತ್ತಲೆ ಸೇವೆ ವಿರೋಧಿಸಿದರೆ ಜೇನು ಹುಳುಗಳು ಅಟ್ಟಿಸಿಕೊಂಡು ಕಡಿಯುತ್ತವೆ ಎಂಬ ಪ್ರತೀತಿ ಅಲ್ಲಿದೆ. ಆದರೆ ಜೇನು ಹುಳುಗಳು ಆ ಹೊತ್ತು ಏಳಲೇ ಇಲ್ಲ. ಇದರಿಂದ ಜನ "ತಾಯಿ ಬೆತ್ತಲೆ ಪೂಜೆ ವಿರೋಧ" ವನ್ನು ಒಪ್ಪಿದ್ದಾಳೆ. ಎಲ್ಲರೂ ಬಟ್ಟೆ ಉಟ್ಟುಕೊಂಡು ಹೋಗೋಣ ಎಂದು ತೀರ್ಮಾನಿಸಿದರು. ಇದರಿಂದ ಬೆತ್ತಲೆ ಭಕ್ತರಿಗೆ ತುಂಬಾ ಆಘಾತವಾಯಿತು.

ತಾ: 19-3-1986 ಮಧ್ಯಾಹ್ನ 1 ಗಂಟೆಯ ನಂತರ 2 ಘಟನೆಗಳು ನಡೆದವು.

(1) ಕೆಲವು ಖೋಜಾ ಜೋಗಮ್ಮಗಳು ಪೋಲೀಸು ಠಾಣೆಯನ್ನು ಬೆತ್ತಲೆ ನುಗ್ಗಿ ಸರ್ಕಲ್ ಇನ್ಸ್‌ಪೆಕ್ಟರ್ ಶಿವಣ್ಣನವರನ್ನು ಹಿಡಿದುಕೊಂಡಿದ್ದು.

(2) ಬಸವಂತಪ್ಪ, ಹರಿಜನ, ಬ್ಯಾಡಗಿ, ಈತ ಬೆತ್ತಲೆ ತ್ರಿಶೂಲ ತಿರುಗಿಸುತ್ತ ಜಾತ್ರೆ ಮಧ್ಯ ನುಗ್ಗಿ ಬಂದಿದ್ದು.

ಶಿವಣ್ಣ, ಸರ್ಕಲ್ ಇನ್ಸ್‌ಪೆಕ್ಟರ್ ಬೆತ್ತಲೆ ಖೋಜಾ—ಜೋಗಮ್ಮಗಳ ಮೇಲೆ ಕ್ರಮ ತೆಗೆದು ಕೊಳ್ಳದೆ ಹೆದರಿ "ಬೆತ್ತಲೆ ಸೇವೆಯನ್ನು ಪೋಲೀಸರು ವಿರೋಧಿಸುತ್ತಿಲ್ಲ, ನೀವು ಬೆತ್ತಲೆ ಸೇವೆ ಮಾಡಿಕೊಳ್ಳಿ" ಎಂದು ಹೇಳಿದ್ದು.

ಬಸವಂತಪ್ಪ ಕುಡಿದಿದ್ದ. ಬಾಯಿಂದ ನೊರೆ ಬರುತ್ತಿತ್ತು. ಅವನನ್ನು ದ. ಸಂ. ಸ. ಕಾರ್ಯಕರ್ತರು ಹಿಡಿದರು. ಬಸವಂತನ ದೊಡ್ಡಪ್ಪ ಫಕ್ಕೀರಪ್ಪ ಮತ್ತು ಬಸವಂತ ಇವರು 20-3-86 ರಂದು ನಡೆದ ಘಟನೆಯ ಮುಖ್ಯ ಪಾತ್ರಧಾರಿಗಳಲ್ಲಿ ಇಬ್ಬರಾಗಿದ್ದರು. "ಫೋಟೋ ಏಕೆ ತೆಗೀತೀರಿ, ಬೆತ್ತಲೆ ಹೋಗಬೇಡಿ ಎಂದರೆ ಬಟ್ಟೆ ಕೊಡಿ, ಜೈನ ಸನ್ಯಾಸಿಗಳನ್ನೇಕೆ ತಡೆಯುತ್ತಿಲ್ಲ ? ಕ್ಯಾಬರೆ ಏಕೆ ತಡೆಯಬಾರದು ? ಗೋವಾ ಬೀಚಿನ ಹಿಪ್ಪಿಗಳನ್ನು ಹಿಡಿಯಿರಿ" ಎಂದು ಮೇಲೆ ಹೇಳಿರುವ ಹಿತಾಸಕ್ತಿಗಳು ಭಕ್ತರಿಗೆ ಜೋಗಮ್ಮಗಳಿಗೆ ಪ್ರಚೋದಿಸಿದರು. ಇಂತಹ ಪ್ರಚೋದನೆಗಳು ತಾ : 20-3-1986 ರ ಘಟನೆಗೆ ಮೂಲವಾದವು.

2. ತಾ : 20-3-86ರ ಗಲಭೆಯನ್ನು ತಡೆಯಲು ಸ್ಥಳೀಯ ಅಧಿಕಾರಿಗಳು ಯಾವ ಮುಂಜಾಗ್ರತಾ ಕ್ರಮವನ್ನು ತೆಗೆದುಕೊಂಡಿರಲಿಲ್ಲ. 70—80 ಸಾವಿರ

ಜನ ಸೇರುವ ಜಾತ್ರೆಯನ್ನು ನಿಯಂತ್ರಿಸಲು ಕೇವಲ ಮೂರು ಪೋಲೀಸು ವ್ಯಾನುಗಳು ಇದ್ದವು. ಒಂದು ವ್ಯಾನ್‌ನಲ್ಲಿ ಕನಿಷ್ಟ 20-25 ಜನ ಪೋಲಿಸರು ಕೂರಬಹುದಾಗಿತ್ತು. ಗಲಭೆ ಸೂಚನೆ ಕಾಣುತ್ತಿದ್ದಂತೆ ಪೋಲೀಸರು ಸ್ಥಳದಿಂದ ನಿರ್ಗಮಿಸತೊಡಗಿದರು. ಕಾರ್ಯಕರ್ತರಿಗೆ ರಕ್ಷಣೆ ಇಲ್ಲದಂತಾಯಿತು. ಡಿವೈ. ಎಸ್. ಪಿ. ಬೆತ್ತಲೆ ಪೋದರು. ಸರ್ಕಲ್ ಇನ್ಸ್‌ಪೆಕ್ಟರ್‌ಗಳು ಕಾಡಿನಲ್ಲಿ ರಕ್ಷಣೆ ಪಡೆದರು. ಅಸಿಸ್ಟೆಂಟ್ ಕಮಿಷನರ್ ಮೂರ್ತಿಯವರು ಕಾಡು ಬಿದ್ದು ಪಾರಾದರು ತಹಶೀಲ್ದಾರರು ಏಟು ತಿಂದರು. ಕಾರ್ಗಲ್ ಎಸ್. ಐ. ಅವರಿಗೆ ಪೆಟ್ಟು ಬಿದ್ದಿರುವುದಾಗಿ ತಿಳಿಯಿತು. ಪರಿಸ್ಥಿತಿಯನ್ನು ನಿಯಂತ್ರಿಸಲು ಯಾರೂ ಸ್ಥಳದಲ್ಲಿರಲಿಲ್ಲ. ಸರ್ಕಲ್ ಇನ್ಸ್‌ಪೆಕ್ಟರ್ ಶಿವಣ್ಣನವರು ಪೋಲೀಸ್ ಪಡೆ 250 ಇದೆ ಎಂದು ಹೇಳುತ್ತಿದ್ದರು. ಆದರೆ, ಸ್ಥಳದಲ್ಲಿ ಪೋಲೀಸರ ಸಂಖ್ಯೆ ನೂರಕ್ಕಿಂತ ಕಡಿಮೆ ಇತ್ತೆಂಬುದು ಸ್ಪಷ್ಟ.

ತಾ : 20-3-1986ರ ಬೆಳಿಗ್ಗೆ ಸುಮಾರು 10-30ರ ಸಮಯದಲ್ಲಿ ನಾನು ಮತ್ತು ವಿಜಿಲೆನ್ಸ್ ಅಧಿಕಾರಿ ದೇಸಾಯಿ ಹೊಳೆ ದಂಡೆಯಿಂದ ಗಲಭೆ ವಿಚಾರ ತಿಳಿಸಲು ಧರ್ಮದರ್ಶಿ ಕಛೇರಿಗೆ ಬಂದೆವು ಅಷ್ಟು ಹೊತ್ತಿಗಾಗಲೇ ಸಮಾಜ ಕಲ್ಯಾಣ ಇಲಾಖೆ ಜೀಪನ್ನು ಆಕ್ರಮಿಸಿಕೊಂಡಿದ್ದ ಬೆತ್ತಲೆ ಭಕ್ತರು ವಿಕಾರವಾಗಿ ಕುಣಿಯುತ್ತ ಮೆರವಣಿಗೆ ಹೊರಟಿದ್ದರು. ನಾವು ಕಛೇರಿಯ ಒಳಗೆ ಹೋದಾಗ ಸಾಗರದ ಎಸ್. ಐ. ವೀರಭದ್ರೇಗೌಡರು ಮೈಕಿನಲ್ಲಿ "ಭಕ್ತಾದಿಗಳು ಬೆತ್ತಲೆ ಸೇವೆ ಮಾಡಬಹುದು. ಪೋಲೀಸರು ಬೆತ್ತಲೆ ಸೇವೆ ತಡೆಯುವುದಿಲ್ಲ" ಎಂದು ಕೂಗಿ ಹೇಳುತ್ತಿದ್ದರು. ಅವರ ಸುತ್ತ ಗುಂಪಾಗಿ ಜನ ನೆರೆದಿದ್ದರು. ಪೋಲೀಸ್ ಪ್ರಕಟಣೆ ನನಗೆ ಹೆದರಿಕೆ ಉಂಟು ಮಾಡಿತು. ಇದಾದ ಕೆಲವೇ ನಿಮಿಷಗಳಲ್ಲಿ ತೆಳ್ಳನೆಯ ಬೆಳ್ಳನೆಯ ವ್ಯಕ್ತಿಯೊಬ್ಬ ಮೈಕಿನಲ್ಲಿ "ಬೆತ್ತಲೆ ಸೇವೆಗೆ ಜಯವಾಗಲಿ" ಎಂದು ಕೂಗುತ್ತಿದ್ದ. ನಾನು ಅವನನ್ನು ಹಿಡಿದುಕೊಂಡೆ. "ನೀನು ಯಾರು" ಎಂದು ಪ್ರಶ್ನಿಸಿದೆ. ಅವನ ನಾಲಿಗೆ ಒಣಗಿತು. ತೊದಲುತ್ತಿದ್ದ. ಬೆತ್ತಲೆ ಸೇವೆಗೆ ಜಯವಾಗಲಿ ಎಂದು ಹೇಳಲು ನೀನು ಯಾರು ಎಂದು ಕೇಳಿದೆ. ಆತ ತನ್ನ ಎದೆಯ ಮೇಲೆ ಧರ್ಮದರ್ಶಿಗಳ ಬ್ಯಾಡ್ಜನ್ನು ಧರಿಸಿದ್ದ. ನಾನು ಆತನನ್ನು ಎಳೆದು ಆಫೀಸಿನ ಒಳಗೆ ಕುಳಿತ್ತಿದ್ದ ಸಾಗರದ ಎ. ಸಿ. ಮೂರ್ತಿ ಅವರ ಹತ್ತಿರ ಎಳೆದು ತಂದೆ. ಆತ ತನ್ನ ಹೆಸರು ಕೃಷ್ಣರಾವ್ ಎಂದೂ ತಾನು ಸಾಗರದವನೆಂದೂ ಮತ್ತು ತಾನು ಸಾಗರ ಶಾಖೆ ವಿಶ್ವಹಿಂದೂ ಪರಿಷತ್‌ನ ಸದಸ್ಯನೆಂದೂ ತಿಳಿಸಿದ. ನನ್ನ ಜೊತೆಯಲ್ಲಿ ಆಗ ವಿಜಿಲೆನ್ಸ್ ಅಧಿಕಾರಿ ದೇಸಾಯಿ ಇದ್ದರು. ಆಗ ಅಲ್ಲಿ ಕೆಲವು ಧರ್ಮದರ್ಶಿಗಳಿದ್ದರು. "ನಾವು ಬೇಡಾಂತ ನಿಮಗೆ ಎಷ್ಟು ಹೇಳಿದೆವು ಕೇಳಿದಿರಾ ? ಈಗ ಅನುಭವಿಸಿ" ಎಂದರು. ನಾನು ಧರ್ಮದರ್ಶಿ ಕಛೇರಿ ಬಿಟ್ಟು ದೇಸಾಯಿ ಅವರೊಂದಿಗೆ ಕೆಳಗೆ ಇಳಿದು ಬಂದೆ. ನಾವು ರಸ್ತೆಗೆ ಬರುತ್ತಿದ್ದಂತೆ ಅಂಗಡಿಗಳ ಲೂಟಿ ನಡೆಯು

ತ್ತಿತ್ತು. ಕೆಲವರು ಬಲವಂತವಾಗಿ ಸಿಕ್ಕ ಸಿಕ್ಕವರನ್ನು ಬೆತ್ತಲೆ ಮಾಡುತ್ತಿದ್ದರು. ಲೂಟಿಯಾದ ಅಂಗಡಿಯವರು ಗೋಳೋ ಎಂದು ಅಳುತ್ತಿದ್ದರು. ನಾನು ದೇಸಾಯಿಯವರ ಸ್ಕೂಟರ್ ಹಿಂದೆ ಕುಳಿತು ಹೊಳೆ ದಂಡೆಯತ್ತ ಹೊರಟೆ. ನಾವು ಹೋಗುತ್ತಿದ್ದಂತೆ ಒಂದು ಗುಂಪು ಅದೋ ಕೃಷ್ಣಪ್ಪ ಹಿಡಿಯಿರಿ, ಕೊಲ್ಲಿರಿ ಎನ್ನುತ್ತಾ ದೊಣ್ಣೆ—ಮಚ್ಚುಗಳನ್ನು ಹಿಡಿದು ಬೆನ್ನಟ್ಟಿದರು. ನಾನು ದೇಸಾಯಿ ಅವರ ಸ್ಕೂಟರ್ ಇಳಿದು ಕೂಡಲೆ ಪೋಲೀಸ್ ವ್ಯಾನ್‌ನಲ್ಲಿ ರಕ್ಷಣೆಪಡೆದೆ. ಜನರ ಗುಂಪು ಪೋಲೀಸ್ ವ್ಯಾನಿಗೆ ಮುತ್ತಿಗೆ ಹಾಕಿತು. ಚೂಪಾದ ತ್ರಿಶೂಲಗಳಿಂದ ವ್ಯಾನ್‌ನ ಟೈರ್‌ಗಳನ್ನು ಚುಚ್ಚಿ ಹೊಡೆದು ಹಾಕಿದರು. ಈ ಮಧ್ಯೆ ಹಾಸನದ ಪತ್ರಿಕೋದ್ಯಮಿ ಜಯರಾಮ ಹೆಗ್ಗಡೆಯನ್ನು ಕೆಲವರು ಹಿಡಿದು ಥಳಿಸುತ್ತಿದ್ದರು. ಜಯರಾಮ ಹೆಗ್ಗಡೆ ಜೀವಭೀತಿಯಿಂದ ಕಂಗಾಲಾಗಿದ್ದ. ಪೋಲೀಸರು ಅವನನ್ನ ವ್ಯಾನಿನ ಒಳಗೆ ಎಳೆದುಕೊಂಡು ಬಾಗಿಲು ಮುಚ್ಚಿದರು. ಜನರ ಮಧ್ಯದಲ್ಲಿ ಕೆಲವು ಗೂಂಡಾಗಳು ವ್ಯಾನ್ ಬಿಟ್ಟು ಇಳಿಯುವಂತೆ ಪೋಲೀಸರಿಗೆ ಒತ್ತಾಯಿಸುತ್ತಿದ್ದರು. ಬಂದೂಕುಧಾರಿ ಪೋಲೀಸರು ನಿಸ್ಸಹಾಯಕರಾಗಿ ಒದ್ದಾಡುತ್ತಿದ್ದರು. ಜನಸಂದಣಿಯ ಮಧ್ಯೆ ನೀರಿನ ಲಾರಿಗಳು ನೀರು ಸರಬರಾಜು ಮಾಡಲು ಓಡಾಡುತ್ತಿದ್ದವು. ಒಂದು ಲಾರಿಯಲ್ಲಿ ಸಾರಾಯಿ ಬ್ಯಾರಲ್ ಇದ್ದು ಕೆಲವರು ಕುಡಿದು ಬೆತ್ತಲೆ ಸೇವೆಗೆ ಜಯವಾಗಲಿ ಎಂದು ಕೂಗುತ್ತಿದ್ದರು. ನಮ್ಮ ವ್ಯಾನ್ ಹಿಂದೆ ಜೀಪೊಂದು ಬರುತ್ತಿತ್ತು. ಅದರಲ್ಲಿ ಜನ ತುಂಬಿಕೊಂಡಿದ್ದರು. ಅದರಲ್ಲಿ ಮುದುಕನೊಬ್ಬ ಜನರಿಗೆ ಕೂಗಿ ಹೇಳುತ್ತ ಕೈ ಮುಗಿಯುತ್ತ, ಪೋಲೀಸರೇ ಹೊರಟು ಹೋಗಿ ಜನರೇ ಗದ್ದಲ ಮಾಡಬೇಡಿ, ಬೆತ್ತಲೆ ಸೇವೆ ಮಾಡಿ ಎಂದು ಕೈ ಮುಗಿದು ಬೇಡಿಕೊಳ್ಳುತ್ತಿದ್ದ. ಕೆಲವು ಪೋಲೀಸರನ್ನು ಬೆತ್ತಲೆ ಮಾಡಲಾಗುತ್ತಿತ್ತು. ಕೆಲವರು ಕಾಡು ಬಿದ್ದು ಓಡುತ್ತಿದ್ದರು. ರಕ್ಷಣೆ ಮಾಡುವ ಪೋಲೀಸರಿಗಲ್ಲಿ ರಕ್ಷಣೆ ಇರಲಿಲ್ಲ. ಅಂದ ಮೇಲೆ ಉಳಿದ ಜನರ ಗತಿ ಹೇಗೆ ? ಸುಮಾರು 11-00ರ ಹೊತ್ತಿಗೆ ಪೋಲೀಸರು ಎರಡು ಟಿಯರ್ ಗ್ಯಾಸ್‌ಗಳನ್ನು ಹೊಡೆದರು. ಜನ ರಸ್ತೆ ಬಿಟ್ಟು ಕಾಡು ಬಿದ್ದು ಓಡತೊಡಗಿದರು. ನಾನು ಮಿಂಚಿನಂತೆ ತಪ್ಪಿಸಿಕೊಂಡು ಸರ್ಕಾರಿ ಬಸ್ಸಿನಲ್ಲಿ ಕುಳಿತುಕೊಂಡೆ. ಗೂಂಡಾ ಒಬ್ಬ ಬಸ್ಸಿನಲ್ಲಿ ನುಗ್ಗಿ ನನ್ನ ಮೇಲೆ ಹಲ್ಲೆ ನಡೆಸಿದ. ತಕ್ಷಣವೇ ಬಸ್ಸು ಹೊರಟಿದ್ದರಿಂದ ಅವನು ಬಸ್ಸಿನಿಂದ ಜಿಗಿದು ಓಡಿದ.

19-3-1986ರ ಸಂಜೆ ನಾವು ಡಿ.ಸಿ. ಮತ್ತು ಎಸ್.ಪಿ. ಯವರಿಗೆ ತಾ|| 29-3-1986 ರಂದು ದೊಡ್ಡ ತೇರು ಇರುವುದರಿಂದ ಹೆಚ್ಚು ಪೋಲೀಸ್ ಕಳಿಸುವಂತೆ ಕೇಳಿಕೊಂಡೆವು. ಇಬ್ಬರೂ ಸೊರಬದಲ್ಲಿ ಮೊಕ್ಕಾಂ ಮಾಡುವಂತೆ ಬೇಡಿಕೊಂಡೆವು. ಇಬ್ಬರೂ ನಾಳೆಗೆ ಹೆಚ್ಚು ಪೋಲೀಸ್ ಕಳಿಸಿಕೊಡುವುದಾಗಿ ಹೇಳಿದರು. ಜೊತೆಗೆ ಹೋಂ ಗಾರ್ಡ್ಸ್ ಕಳಿಸುವುದಾಗಿ ತಿಳಿಸಿದರು. ಆದರೆ ಯಾರನ್ನೂ

ಕಳಿಸಲಿಲ್ಲ. ಜೊತೆಗೆ ಸೊರಬದಲ್ಲಿ ಅವರು ಮೊಕ್ಕಾಂ ಮಾಡಲೂ ಇಲ್ಲ. ಚಂದ್ರಗುತ್ತಿಯಲ್ಲಿ ಗಲಭೆ ನಡೆಯುತ್ತಿದ್ದಾಗ ಎಸ್.ಪಿ. ಯವರು ಸ್ನೇಹಿತರೊಬ್ಬರ ಮದುವೆಗೆ ಬಂದಿದ್ದರೆಂದು ವದಂತಿ. ಮತ್ತು ಆಗ ಶಿವಮೊಗ್ಗೆಗೆ ಬಂದಿದ್ದ ಲಿಂಗಾನಂದ ಸ್ವಾಮಿಗೆ ವಂತಿಗೆ ಹಣ ಸಂಗ್ರಹಿಸುವುದರಲ್ಲಿ ಇದ್ದರೆಂದು ಸುದ್ದಿ. ಎಸ್.ಪಿ. ಯವರು ಬಹಿರಂಗ ಸಭೆಗಳಲ್ಲಿ, ರೇಡಿಯೋಗಳಲ್ಲಿ ಬೆತ್ತಲೆ ಸೇವೆ ನಿಲ್ಲಿಸಲು ಸಾಧ್ಯವಿಲ್ಲ. ಎಂದು ಹೇಳುತ್ತಿದ್ದರು. ಒಬ್ಬ ಮತ್ತೊಬ್ಬನನ್ನು ಕೊಂದರೆ ಅದು ಅಪರಾಧ. ಅಂತಹ ಅಪರಾಧಕ್ಕೆ ಶಿಕ್ಷೆ ವಿಧಿಸಬಹುದು. ಆದರೆ 100 ಜನ 100 ಜನರನ್ನು ಕೊಂದರೆ ಅದು ಯುದ್ಧ ಅನಿಸಿಕೊಳ್ಳುತ್ತದೆ. ಅದಕ್ಕೆ ಏನೂ ಮಾಡಲು ಬರುವುದಿಲ್ಲ. ಅದೇ ರೀತಿ ನೂರಾರು ಜನ ಬೆತ್ತಲೆ ಹೋದರೆ ಏನೂ ಮಾಡಲು ಬರುವುದಿಲ್ಲ ಅನ್ನುತ್ತಿದ್ದರು. ನಾವು ಅವರನ್ನು ಅವರ ಕಛೇರಿಯಲ್ಲಿ ಭೇಟಿಯಾದಾಗ ನಾನು ನಿಮಗೆ ಎಲ್ಲಾ ರಕ್ಷಣೆ ಕೊಡುತ್ತೇನೆ. ನಾವು ಕೆರೆ ಇದ್ದ ಹಾಗೆ, ನೀವು ಬೊಗಸೆಯಲ್ಲಾದರೂ ನೀರು ತೆಗೆದುಕೊಳ್ಳಿ ಇಲ್ಲ ಬಕೆಟ್ಟಿನಲ್ಲಾದರೂ ತುಂಬಿಕೊಳ್ಳಿ ಎನ್ನುತ್ತಿದ್ದರು. ಆದರೆ ಗಲಭೆ ನಡೆದ ಸನ್ನಿವೇಶದಲ್ಲಿ ಅವರು ನಡೆದುಕೊಂಡ ರೀತಿ ಮಾತ್ರ ಯಾವ ಜವಾಬ್ದಾರಿಯುತ ಅಧಿಕಾರಿಗೂ ಶೋಭೆ ತರುವಂತಹದ್ದಾಗಿರಲಿಲ್ಲ.

ಪೋಲೀಸ್ ನಿಷ್ಕ್ರಿಯತೆ ಮತ್ತು ಬೇಜವಾಬ್ದಾರಿತನದಿಂದಾಗಿ ನಿಲ್ಲಿಸಬಹುದಾಗಿದ್ದ ಬೆತ್ತಲೆ ಸೇವೆ ಪುನರ್ಜೀವ ಪಡೆದುಕೊಂಡಂತಾಗಿದೆ. ಅವೈಜ್ಞಾನಿಕ ಕಂದಾಚಾರ ಮೂಢನಂಬಿಕೆಗೆ ಜಯ ದೊರೆತಂತಾಗಿದೆ. ಈ ಮೌಢ್ಯದ ಹಿನ್ನೆಲೆಯಲ್ಲಿ ಅಸಂಖ್ಯ ಕೆಳವರ್ಗದ ಹೆಣ್ಣು ಗಂಡುಗಳ ಮಾನ ಬಹಿರಂಗವಾಗಿ ಹರಾಜಾಗುತ್ತಿದೆ. ಇದು ಯಾವ ನಾಗರೀಕ ಸಮಾಜಕ್ಕೂ ಶೋಭೆ ತರುವ ವಿಚಾರವಲ್ಲ. ಕೆಲವು ಬಾರಿ ಮಾತಿನಿಂದ ಸರಿಪಡಿಸಲಾಗದಿರುವುದನ್ನು ಕಾನೂನಿನಿಂದ ಸರಿಪಡಿಸಬೇಕಾಗುತ್ತದೆ. ಪಟ್ಟಭದ್ರಹಿತಾಸಕ್ತಿಗಳನ್ನು ಹತ್ತಿಕ್ಕಬೇಕಾಗುತ್ತದೆ. ಔಷಧಿ ನುಂಗಲು ಹಟ ಮಾಡುವ ಮಗುವಿಗೆ ತಾಯಿ ಮೂಗು ಹಿಡಿದು ಸ್ವಲ್ಪ ಹಿಂಸೆಯಾದರೂ ಔಷಧಿ ಕುಡಿಸುವಂತೆ ಕಠಿಣವಾದರೂ ಕಾನೂನಿನ ಕ್ರಮವನ್ನು ಜರುಗಿಸಿ ಈ ಅನಿಷ್ಟ ಪದ್ಧತಿಯನ್ನು ನಿಲ್ಲಿಸಲೇ ಬೇಕು. ತಾತ್ಕಾಲಿಕವಾಗಿಯಾದರೂ ಪ್ರಥಮ ಹಂತವಾಗಿ ಜಾತ್ರೆಯನ್ನು ಕೆಲವು ವರ್ಷಗಳವರೆಗೆ ರದ್ದು ಗೊಳಿಸಬೇಕೆಂದು ಒತ್ತಾಯಿಸುತ್ತೇನೆ ಮತ್ತು ಬೇರೆ ಬೇರೆ ಜಿಲ್ಲೆಗಳಿಂದ ಬೆತ್ತಲೆ ಸೇವೆಗೆ ಬರುವ ಜನರಿಗೆ ತಿಳುವಳಿಕೆ ನೀಡಲು ಸರ್ಕಾರ ಆಯಾ ಜಿಲ್ಲೆಗಳಲ್ಲಿ ತೀವ್ರ ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಧಾರವಾಡ, ಚಿತ್ರದುರ್ಗ ಜಿಲ್ಲೆಗಳಿಂದಲೂ ಭಕ್ತಾದಿಗಳು, ಚಂದ್ರಗುತ್ತಿಗೆ ಬರುತ್ತಾರೆ. ನಾವು ನಾಗರೀಕರು, ಸುಸಂಸ್ಕೃತರು ಎಂದು ತಲೆ ಎತ್ತಿ ನಡೆಯಬೇಕಾದರೆ ಮೊದಲು ಇಂತಹ ಅನಾಗರೀಕ ಪದ್ಧತಿಗಳನ್ನು ಬುಡಸಹಿತ ಕಿತ್ತು ಹಾಕಬೇಕು. ಅದು ಜನರ ಜವಾಬ್ದಾರಿ ಆಗಿರುವಂತೆ ಸರ್ಕಾರದ ಹೊಣೆಯೂ ಹೌದು.

ಸಿನಿಮಾದ ಕತ್ತಲೆ ಬೆಳಕು

○ ವಿ. ಎನ್. ಲಕ್ಷ್ಮೀನಾರಾಯಣ

ಸಿನಿಮಾ ಎಂಬುದು ದೃಶ್ಯ, ಚಿತ್ರಕಲೆ, ಛಾಯಾಚಿತ್ರ, ಧ್ವನಿ ಮತ್ತು ಸಂಗೀತ ಕಲೆಗಳ ಸಂಮಿಳಿತ ಮಾಧ್ಯಮ. ದೃಶ್ಯಕಲೆಯಾಗಿ ಅದು ಮನುಷ್ಯ ಪ್ರಾಣಿಜೀವನದ ಭಂಗಿಗಳು (ನಟನೆ, ನಾಟ್ಯ)ಮತ್ತು ಪ್ರಕೃತಿ ಸೌಂದರ್ಯ, ಶಿಲ್ಪ, ವಾಸ್ತುಶಿಲ್ಪಗಳನ್ನು ಛಾಯಾ ಚಿತ್ರಗಳಲ್ಲಿ ಮೂರ್ತೀಕರಿಸುವುದರ ಮೂಲಕ ಮೈದಾಳುತ್ತದೆ. ಅದರ 'ಧ್ವನಿ'ಯ ಭಾಗ ಸಾಹಿತ್ಯದೊಂದಿಗೆ ವಾಸ್ತವ ಹಾಗೂ ಭಾವನಾ ಪ್ರಪಂಚದ ನಿಜ ಹಾಗೂ ಕಲ್ಪಿತ ಶಬ್ದಗಳಲ್ಲಿ ವ್ಯಕ್ತವಾಗುತ್ತದೆ. ಸಂಗೀತದ ಅಂಶ ತನ್ನ ಅಮೂರ್ತ ಗುಣವನ್ನು ಹಾಗೇ ಉಳಿಸಿಕೊಂಡು ಮೊದಲ ಎರಡು ಕಲೆಗಳೊಂದಿಗೆ ಬೆರೆತು ರೂಪ ಪಡೆಯುತ್ತದೆ.

ಸಿನಿಮಾ ನಮಗೆ ಪ್ರಿಯವಾಗಿರುವುದು ಮೂಲತಃ ಒಂದು ಲಲಿತ ಕಲೆಯಾಗಿ. ಅದರಿಂದ ಸಿಗುವ ಕನಿಷ್ಠತಮ ಪ್ರಯೋಜನ ಬದುಕಿನ ಜಂಜಾಟಗಳಿಂದ ನೋಡುವವರ ಮನಸ್ಸನ್ನು ಸದ್ಯಕ್ಕೆ ಮರೆಸುವುದು ಅದರ ಅತ್ಯುನ್ನತ ಪ್ರಯೋಜನ. ಉಳಿದ ಕಲಾ ಪ್ರಕಾರಗಳಲ್ಲಾಗುವಂತೆ ಆತ್ಮ ಪರಿವೀಕ್ಷಣೆ ಅಥವಾ ಬಯಲಾಗುವುದು ಅಥವಾ ತನಗೆ ತಾನೆ ಬೆತ್ತಲೆ ಯಾಗುವುದು.

ಅಂದರೆ ಸಿನಿಮಾ ಅಭಿವ್ಯಕ್ತಿ, ವಾಸ್ತವವನ್ನು ಮರೆಸುವುದು ಮತ್ತು ಬೆತ್ತಲೆಯಾಗುವುದು ಈ ಮೂರನ್ನೂ ಒಟ್ಟಿಗೆ ಸಾಧಿಸುತ್ತದೆ. ಇದಕ್ಕಾಗಿ ಅದು ಇತರ ಕಲಾ ಮಾಧ್ಯಮಗಳು ಬಳಸುವ ಮೂಲಭೂತ ಕಲಾತಂತ್ರಗಳನ್ನೇ ಹೆಚ್ಚು ಪರಿಣಾಮಕಾರಿಯಾಗಿ ಬಳಸುತ್ತದೆ. ಅವೆಂದರೆ:

1. ಉತ್ಪ್ರೇಕ್ಷೆ (exaggeration)

2. ಕಾಲ–ದೇಶಗಳ ಕುಗ್ಗು–ಹಿಗ್ಗು (compression and expansion of time and space)

3. ವೈಭವೀಕರಣ (glorification)

4. ಉದಾತ್ತೀಕರಣ (ideailigation), ಮತ್ತು

5. ತುಚ್ಛೀಕರಣ (condemnation)

ಕನಿಷ್ಟತಮ ಪ್ರಯೋಜನ ಒದಗಿಸುವಲ್ಲಿ ಸಿನಿಮಾ ಲೌಕಿಕ ಮರೆಸು ತಂತ್ರಗಳಾದ ಸಿಗರೇಟು, ಮಾದಕವಸ್ತುಗಳು, ಮತ್ತು ಧಾರ್ಮಿಕ ಮರೆಸುತಂತ್ರಗಳಾದ ಭಜನೆ, ಪುರಾಣ ಶ್ರವಣ ಧ್ಯಾನ ಮತ್ತು ಕನಸುಗಳಿಗೆ ಸಂವಾದಿಯಾಗಿದೆ.

ಉಳಿದ ಕಲಾ ಪ್ರಕಾರಗಳಿಗಿಂತ ಸಿನಿಮಾ ಮಾತ್ರ ಹಗಲುಗನಸಿಗೆ ಹೆಚ್ಚು ಹತ್ತಿರವಾಗಿದೆ.

ಅತ್ಯುನ್ನತ ಪ್ರಯೋಜನ ಒದಗಿಸುವಲ್ಲಿ ಸಿನಿಮಾ ಆತ್ಮ ಜಾಗರಣ ತಂತ್ರಗಳಾದ ಚಿಂತನೆ, ಚರ್ಚೆ, ಒಳ್ಳೆಯ ಪುಸ್ತಕದ ಓದು, ದೃಶ್ಯವೀಕ್ಷಣೆ, ಮತ್ತು ಅರಿವನ್ನ ಹೆಚ್ಚಿಸುವ ಯಾವುದೇ ಬೌದ್ಧಿಕ ಕ್ರಿಯೆಗೆ ಸಂವಾದಿಯಾಗಿದೆ.

ಒಂದು ಸಿನಿಮಾದ ಅತ್ಯುನ್ನತ ಅಥವಾ ಕನಿಷ್ಠತಮ ಪ್ರಯೋಜನ ಒದಗಿಸುವ ಯೋಗ್ಯತೆ ಸಿನಿಮಾ ಮಾಡುವವರ ವ್ಯಕ್ತಿ ಸಾಮರ್ಥ್ಯದ ಮೇಲೆ ನಿರ್ಧಾರಿತವಾಗುತ್ತದೆ. ಇದರಲ್ಲಿ ನಿರ್ಮಾಪಕ, ನಿರ್ದೇಶಕರ ಪ್ರತಿಭೆ ಮತ್ತು ದೊಡ್ಡತನ ನಟ ನಟಿಯರ ನೈಪುಣ್ಯ ಹಾಗೂ ಪ್ರತಿಭೆ, ತಂತ್ರಜ್ಞಾನ ಸಂವೇದನೆ ಮತ್ತು ಕುಶಲತೆ ಹಾಗೂ ಯಂತ್ರಗಳ ಶಿಷ್ಟತೆಗಳೂ ಸೇರಿವೆ. ಅಂದರೆ ಸಿನಿಮಾ ಮಾಡುವವರ ಯೋಗ್ಯತೆ, ತಾಂತ್ರಿಕ ಪರಿಣತಿಯ ಜೊತೆಗೆ ಮೌಲಿಕವಾಗಿ ಉನ್ನತವೂ ಆಗಿದ್ದರೆ ಗರಿಷ್ಟ ಪ್ರಯೋಜನದ ಸಿನಿಮಾಗಳೂ (film classics) ಹಾಗಿಲ್ಲದಿದ್ದರೆ ಕಳಪೆಯಾದ ಕನಿಷ್ಠ ಪ್ರಯೋಜನದ ಸಿನಿಮಾಗಳು (commercial films) ತಯಾರಾಗುತ್ತವೆ.

ನೋಡುವವರ ದೃಷ್ಟಿಯಿಂದ ಸಿನಿಮಾ ರುಚಿಸುವುದು ರುಚಿಸದಿರುವುದು, ಅವರವರ ಮಟ್ಟದ ಸಿನಿಮಾ ಮಾಧ್ಯಮದ ಪರಿಜ್ಞಾನ, ಸಂವೇದನೆ ಮತ್ತು ಅನುಭವವನ್ನು ಅವಲಂಬಿಸಿರುತ್ತದೆ.

ಉಳಿದ ಕಲಾ ಪ್ರಕಾರಗಳಲ್ಲಿರುವಂತೆ, ಸಿನಿಮಾಕ್ಕೂ—ಹಗಲುಗನಸು, ಕನಸುಗಳಿಗೂ, ಮತ್ತು ಸಿನಿಮಾಕ್ಕೂ–ತನಗೆ ತಾನೇ ಬತ್ತಲಾಗಬೇಕೆನ್ನುವ ಸಹಜ ಪ್ರವೃತ್ತಿಗೂ ಸಂಬಂಧವಿದೆಯೆಂದು ಈ ಮೊದಲೇ ಹೇಳಲಾಗಿದೆ. ನಮ್ಮನ್ನ ನಾವು ಅಭಿವ್ಯಕ್ತಿಗೊಳಿಸಿಕೊಳ್ಳಬೇಕೆಂಬ ಸಹಜ ಪ್ರವೃತ್ತಿಗೆ ನಮ್ಮ ಸಾಮಾಜಿಕ ಆವರಣ, ಶಿಷ್ಟಾಚಾರ, ಮತ್ತು

ಸ್ವೀಕೃತ ನಡವಳಿಕೆಗಳು ಎಷ್ಟೋಸಲ ಅಡ್ಡಿಯೊಗುತ್ತವೆ. ಆಗೆಲ್ಲಾ ನಾವು ಧಾರ್ಮಿಕ ಕ್ರಿಯೆಗಳನ್ನ ಇಲ್ಲವೆ ಕಲಾಪ್ರಕಾರಗಳನ್ನ ಮೊರೆಹೋಗುತ್ತೇವೆ. ಇವುಗಳ ತಂತ್ರಗಳಲ್ಲಿನ ವಿಶೇಷತೆಗೂ ಕನಸು, ಹಗಲುಗನಸಿನ ತಂತ್ರಗಳ ವಿಶೇಷತೆಗೂ ಸಾಮ್ಯವಿದೆ. ಅದೆಂದರೆ ನಮ್ಮ ಬೆತ್ತಲಾಗುವ ಪ್ರವೃತ್ತಿಗೆ ಈ ಎರಡೂ ರೀತಿಯ ತಂತ್ರಗಳಲ್ಲಿ ಸಾಮಾಜಿಕ ನಡವಳಿಕೆಯ ಕಟ್ಟಳೆಗಳನ್ನು ಮೀರದಂತೆ ಕಂಡೂ, ಮೀರಿ ಅಭಿವ್ಯಕ್ತಿಯನ್ನೊದಗಿಸುವುದು.

ಮಾನಸಿಕವಾಗಿ ದೈಹಿಕವಾಗಿ ಬೆತ್ತಲಾಗುವುದು, ಮೈಮರೆಯುವಂತೆ ಹುಚ್ಚುಹುಚ್ಚಾಗಿ ಕುಣಿಯುವುದು, ಮುಕ್ತವಾಗಿ ಬಾಯಿ ತೆರೆದು ಕೂಗುವುದು ಹಾಡುವುದು, ಮುಂತಾದ ಅನಿರ್ಬಂಧಿತ ಕ್ರಿಯೆ ಪ್ರವೃತ್ತಿಗಳು ಉಳಿದಂತೆ ಸಾಮಾಜಿಕ ನೈತಿಕ ಕಟ್ಟುಪಾಡುಗಳಿಂದ ನಿರ್ಬಂಧಿತವಾಗಿದ್ದರೂ,ಸಿನಿಮಾ–ನಾಟಕ ಚಿತ್ರಕಲೆ ಛಾಯಾ ಚಿತ್ರ ನೃತ್ಯಗಳಲ್ಲಿ, ಸಂಗೀತ ಕಛೇರಿಗಳಲ್ಲಿ, ಧಾರ್ಮಿಕ ಉತ್ಸವ–ಆಚರಣೆಗಳಲ್ಲಿ ನಾನಾ ಸ್ತರಗಳಲ್ಲಿ ನಾನಾ ರೂಪಗಳಲ್ಲಿ ಅಭಿವ್ಯಕ್ತಿ ಪಡೆದು ಸ್ವೀಕೃತವಾಗುತ್ತವೆ. ಸದ್ಯಕ್ಕಂತೂ ಮನುಷ್ಯನ ಮುಕ್ತ ಅಭಿವ್ಯಕ್ತಿಗೆ ಸಿನಿಮಾದಷ್ಟು ಸುಲಭವಾಗಿ ಸಿಕ್ಕುವ ಕಲಾ ಪ್ರಕಾರ ಇನ್ನೊಂದಿಲ್ಲ.

ಇಷ್ಟಪಟ್ಟೋ ಅನಿವಾರ್ಯವಾಗೋ ನಾನಾ ಬಗೆಯ ಗೋಡೆಗಳ ಮರೆಯಲ್ಲಿ ಬದುಕುವ ನಮಗೆ ಸಿನಿಮಾ ಗೋಡೆ ಬೀಳಿಸುವ ಸಾಧನ. ಸಿನಿಮಾ ಶುರುವಾಗುವ ಮೊದಲು, ಪರದೆ ಮೇಲೇರುವುದನ್ನೇ, ಲೈಟುಗಳು ಆರುವುದನ್ನೇ ತವಕದಿಂದ ಕಾಯುತ್ತೇವೆ. ಅಸಹನೆ ಕಾತರ, ಅನಿರ್ವಚನೀಯ ಕಂಪನಗಳನ್ನು ಅನುಭವಿಸುತ್ತೇವೆ. ಸಿನಿಮಾದಲ್ಲಿ ನಮ್ಮನ್ನು ನಾವೇ 'ಇನ್ನೊಬ್ಬ'ರ ವೇಷದಲ್ಲಿ ನೋಡಿ ಸ್ಪಂದಿಸುತ್ತೇವೆ. ನಮ್ಮಂಥವರೊಂದಿಗೆ (ಇತರೆ ಪ್ರೇಕ್ಷಕರು) ಕುಳಿತು–ಕುಳಿತೇ ಕುಣಿಯುತ್ತೇವೆ, ಹಾಡುತ್ತೇವೆ, ಕಿರುಚುತ್ತೇವೆ, ಪಿಸುಗುಟ್ಟುತ್ತೇವೆ, ಅಳುತ್ತೇವೆ, ಬೆತ್ತಲಾಗುತ್ತೇವೆ. ಸಿನಿಮಾ ನೋಡುವವರ ಕಾಮಧೇನು. ಯಾರ್ಯಾರಿಗೆ ಏನೇನು ಮಾಡುವುದು ಇಷ್ಟವೋ ಅವನ್ನ ಮಾಡಿ 'ಎಲ್ಲರೂ ಇದ್ದು' ಇಲ್ಲದಂತೆ ಭಾವಿಸಿ ಸಿನಿಮಾದ ಕನಿಷ್ಠಗರಿಷ್ಠ ಪ್ರಯೋಜನಗಳನ್ನು ಪಡೆಯುತ್ತಾರೆ. ಸಿನಿಮಾ ಒಂದು ಮುಕ್ತ ಕನಸು. ಯಾರೂ ಯಾರನ್ನೂ ಪ್ರಶ್ನಿಸುವುದಿಲ್ಲ. ನಾಯಕನೆ, ನಾಯಕಿಯನ್ನು 'ಶಿನ್ನುವಂತೆ' ಯಾಕೆ ನೋಡುತ್ತಿದ್ದೀಯೇ ಎನ್ನುವುದಿಲ್ಲ. ಸಿನಿಮಾ ಮಕ್ಕಳಿಗೆ ಚಲಿಸುವ ವಸ್ತುಗಳ ಜಾತ್ರೆ, ದೊಡ್ಡವರಿಗೆ ಕನಸಿನ ಪ್ರಪಂಚ ಇಲ್ಲವೆ ವಾಸ್ತವದ ವಿಜೃಂಭಣೆ (celebration) ಸಿನಿಮಾ ಜನಪ್ರಿಯವಾಗಿರುವುದಕ್ಕೆ ಇದಕ್ಕಿಂತ ಒಳ್ಳೆಯ ಕಾರಣ ಬೇಕೆ?

ಹಿಂದಿನ ಕಾಲದಲ್ಲಿ ನಮ್ಮ ಪೂರ್ವಿಕರು ಬದುಕಿನ ಜಂಜಾಟವನ್ನು ಮರೆಯಲು ಇಲ್ಲವೆ ಅಧ್ಯಾತ್ಮಿಕ-ಬೌದ್ಧಿಕ ಅನುಭವವನ್ನು ಸಾಧಿಸಲು ಆಚರಿಸುತ್ತಿದ್ದ ಎಷ್ಟೊ ಧಾರ್ಮಿಕ-ಸಾಮಾಜಿಕ ಕ್ರಿಯೆಗಳನ್ನು ಹಿಂದಕ್ಕೆ ಹಾಕಿ ಆಧುನಿಕ ಜೀವನದ ಅಂಗವಾದ ಸಿನಿಮಾ ಅವುಗಳ ಸ್ಥಾನವನ್ನು ಆಕ್ರಮಿಸಿಕೊಂಡಿದೆ. ಧಾರ್ಮಿಕ ಆಚರಣೆಗಳು ಮತ್ತು ಸಿನಿಮಾ ಎರಡೂ ಸಾಮೂಹಿಕ ಕ್ರಿಯೆಗಳಾಗಿರುವುದೂ, ಸಿನಿಮಾಕ್ಕೆ ಧಾರ್ಮಿಕ ಕ್ರಿಯೆಗಳನ್ನು ಒಳಗೊಳ್ಳುವ ಶಕ್ತಿ ಇರುವುದೂ ಇದಕ್ಕೆ ಮುಖ್ಯ ಕಾರಣ.

ಮೊದಲು ಧಾರ್ಮಿಕ ಆಚರಣೆಗಳನ್ನು ಪಟ್ಟಿ ಮಾಡೋಣ.

1. ಪೂಜೆ-ಬಲಿವಿಧಾನಗಳು, ಯಜ್ಞ-ಯಾಗ ಇತ್ಯಾದಿ.
2. ವ್ರತ-ಇಷ್ಟ ಸಿದ್ಧಿಗಾಗಿ ಆಚರಿಸುವ ಸಾಮೂಹಿಕ ಧಾರ್ಮಿಕ ಕ್ರಿಯೆಗಳು ಸತ್ಯನಾರಾಯಣ ವ್ರತ, ಗೌರೀ ವ್ರತ, ಶನಿದೇವರ ವ್ರತ ಇತ್ಯಾದಿ
3. ತೀರ್ಥಯಾತ್ರೆ-ದೇವರ ಹೆಸರಿನಲ್ಲಿ ಕೈಗೊಳ್ಳುವ ಪ್ರಯಾಣ.
4. ಹರಿಕಥೆ-ಪುರಾಣ ಶ್ರವಣ, ಇತ್ಯಾದಿ.
5. ಸಂಗೀತೋತ್ಸವಗಳು, ರಾಮೋತ್ಸವ, ಗಣೇಶ ಸಂಗೀತ, ತ್ಯಾಗರಾಜ ಆರಾಧನೆ ಪುರಂದರ ಆರಾಧನೆ ಇತ್ಯಾದಿ.
6. ನೃತ್ಯ ಕಾರ್ಯಕ್ರಮಗಳು ಇತ್ಯಾದಿ.

ಈಗ ಸಿನಿಮಾದ ಸಾಮೂಹಿಕ ಕ್ರಿಯೆಗಳನ್ನು ಗಮನಿಸೋಣ:

1. ಸಿನಿಮಾ ತಯಾರಿಕೆ-ತಾಂತ್ರಿಕ ವರ್ಗ
2. ಷೂಟಿಂಗ್ ನೋಡಬಯಸುವ ಜನ
3. ಸಿನಿಮಾ ತಾರೆಯನ್ನು ನೋಡಲು ಸೂಕುನುಗ್ಗಲು
4. ಸಿನಿಮಾ ನೋಡುವ-ಕ್ಯೂ ನಿಲ್ಲುವ ಕ್ರಿಯೆಗಳು-ಪ್ರದರ್ಶನ
5. ಫಿಲ್ಮೋತ್ಸವಗಳು, ಸೆಮಿನಾರ್ ಇತ್ಯಾದಿ.

ಸಿನಿಮಾದ ಕನಿಷ್ಟತಮ ಪ್ರಯೋಜನಕ್ಕಾಗಿ ಸಿನಿಮಾವನ್ನು ಆಶ್ರಯಿಸುವವರಿಗೂ ಧಾರ್ಮಿಕ ಕ್ರಿಯೆಗಳಲ್ಲಿ ತಮ್ಮನ್ನು ತಾವು ಮರೆಯಬಯಸುವ ಜನರಿಗೂ ಸಮಾನ ಮನೋಧರ್ಮವಿದೆ. ಸಿನಿಮಾ ಪ್ರಪಂಚದಲ್ಲಿರುವ ಭಕ್ತಿಯ ಹುಂಬತನ ಇದಕ್ಕೆ ಒಳ್ಳೆಯ ಉದಾಹರಣೆ. ಎಷ್ಟೋಸಲ ಎರಡೂ ಕ್ರಿಯೆಗಳಲ್ಲಿ ಪ್ರಧಾನಪಾತ್ರವಹಿಸುವವರು ಒಬ್ಬರೇ ಆಗಿರುತ್ತಾರೆ. ಅಯ್ಯಪ್ಪ ಸ್ವಾಮಿಯ ಮೆರವಣಿಗೆ ತೆಗೆಯುವವರು ನಕ್ಷತ್ರ ಮೆರವಣಿಗೆ ಮಾಡುವ ಜನರು ಒಂದೇ ಆಗಿರುವುದು ಆಕಸ್ಮಿಕವೇನಲ್ಲ.

ಸಿನಿಮಾ ಪ್ರಾರಂಭದ ದಿನಗಳಿಂದ ಹಿಡಿದು ಮೊನ್ನೆ ಮೊನ್ನೆಯತನಕ ಪುರಾಣ ಜಾನಪದ ವಸ್ತುಗಳನ್ನೇ ಆಧರಿಸಿ ತಯಾರಾಗುತ್ತಿದ್ದುದೂ ಸಿನಿಮಾದ 'ಧಾರ್ಮಿಕ ಕತೆ'ಯನ್ನು ವಿಶದಪಡಿಸುತ್ತದೆ. ಮೂಢನಂಬಿಕೆಯನ್ನು ಆಧರಿಸಿ ಜನಪ್ರಿಯವಾಗುವ ಸಿನಿಮಾ ತಯಾರಿಕೆಯಲ್ಲಿ ಧಾರ್ಮಿಕ ಸಂಸ್ಥೆಗಳು ಹಣಹಾಕುವುದು ಕೇವಲ ಹಣದ ಲಾಭಕ್ಕಾಗಿ ಅಲ್ಲ.

ದುಡಿಯುವ ಸಾಧನಗಳ ಒಡೆತನ ಕ್ರಮಗಳು ಬದಲಾದಂತೆ ಅದಕ್ಕನುಗುಣವಾಗಿ ಸಾಮಾಜಿಕ ಮೌಲ್ಯಗಳು, ಬದುಕಿನ ಕ್ರಮಗಳೂ, ಅವನ್ನನುಸರಿಸಿ ಕಲಾಮಾಧ್ಯಮಗಳು ಬದಲಾಗುತ್ತ ಬಂದಿವೆ. ಅಲೆಮಾರಿ ಜೀವನದಿಂದ ಬುಡಕಟ್ಟು ವ್ಯವಸಾಯ, ಯಜಮಾನ ಗುಲಾಮ ಪದ್ಧತಿ, ರಾಜ-ಪ್ರಜೆ ಪದ್ಧತಿ, ನಿರ್ಗತಿಕ ಜನಸಾಮಾನ್ಯರ ವಿವಿಧ ಜೀವನ ಪದ್ಧತಿಗಳು ಬಂದಂತೆ, 'ಹಾಹೂ' ನೃತ್ಯಗಳಿಂದ ಹಿಡಿದು, ಋಕ್ಕುಗಳು, ಜಾನಪದ ಗೀತೆ, ಲಾವಣಿಗಳು, ಚಂಪೂ ವೃತ್ತ, ಷಟ್ಪದಿ ಸಾಂಗತ್ಯ, ಗದ್ಯ, ಕಥಾನಕಗಳು, ಕಾದಂಬರಿ ಕಥೆಗಳು, ಗೀತರೂಪಕ, ನೃತ್ಯರೂಪಕ, ಗದ್ಯನಾಟಕಗಳು, ಪುರಾಣ ಸಿನಿಮಾಗಳು, ಜಾನಪದ, ಸಾಮಾಜಿಕ, ಚಾರಿತ್ರಿಕ ಸಿನಿಮಾಗಳೂ, ಸಂಗೀತ ನೃತ್ಯಗಳ ಸಿನಿಮಾಗಳೂ, ವೀಡಿಯೋ ಸುರುಳಿಗಳು ಹೀಗೆ ಮಾಧ್ಯಮಗಳ ಮಾರ್ಪಾಡು ನಿರಂತರವಾಗಿ ನಡದೇ ಇದೆ. ಚಾತುರ್ಮಾಸದ ಬೆಳಗಿನ ಜಾವ ಸ್ನಾನ ಮಾಡುವ ಧಾರ್ಮಿಕ ಮನುಷ್ಯನಿಗೆ ಊಟದ ಡಬ್ಬಿಯೊಂದಿಗೆ ಸಿನಿಮಾ ಕ್ಯೂನಲ್ಲಿ ನಿಲ್ಲುವ ಸಿನಿಮಾ ಪ್ರೇಮಿಯನ್ನು ಕಂಡರೆ ನಗು ಬರುತ್ತದೆ. ಆದರೆ ಬದುಕಿನ ಜಂಜಾಟದಿಂದ ದೂರವಾಗುವ ಪ್ರಯತ್ನದಲ್ಲಿ ಇಬ್ಬರದೂ ಸಮಾನ ಮನೋಧರ್ಮ. ದಾರಿಗಳೂ ಅಂಥ ಭಿನ್ನವೇನಲ್ಲ.

ಮನುಷ್ಯನ ಅತ್ಯುನ್ನತ ಭಾವನೆಗಳನ್ನು ಅನುಭವಗಳನ್ನು ಜೀವನ ದೃಷ್ಟಿಗಳನ್ನು ಬರವಣಿಗೆಯ ರೂಪದಲ್ಲಿ ವ್ಯಕ್ತ ಪಡಿಸುವಂಥ ಪ್ರಯತ್ನವೇ ಸಿನಿಮಾ ಮಾಧ್ಯಮದಲ್ಲಿ ನಡೆದಿದೆ. ಧಾರ್ಮಿಕ, ಆಧ್ಯಾತ್ಮಿಕ ಕ್ರಿಯೆ ಆಚರಣೆಗಳಿಗೆ ಉನ್ನತ ಆಶಯ ಪ್ರಯೋಜನಗಳಿದ್ದಂತೆ ಅವುಗಳಿಗೆ ಸಂವಾದಿಯಾದ, ಅವುಗಳ ಆಧುನಿಕ ರೂಪವಾದ ಸಿನಿಮಾ ಮಾಧ್ಯಮಕ್ಕೂ ಅತ್ಯುನ್ನತ ಆಶಯ ಪ್ರಯೋಜನಗಳಿವೆ. ಈ ಎರಡೂ ಪ್ರಕಾರಗಳ ಮೂಲ ಸ್ವರೂಪವನ್ನು ತಿಳಿಯದವರು ಮಾತ್ರ ಸಿನಿಮಾದ ಬಗ್ಗೆ ಲಘುವಾಗಿ ಮಾತನಾಡಬಲ್ಲರು.

ಸಿನಿಮಾ ಇಷ್ಟು ಗಂಭೀರವಾದ ಕಲಾಮಾಧ್ಯಮವೆಂದು ಒಪ್ಪಿಕೊಂಡರೆ ಶಿಕ್ಷಣದ ಹಂತದಲ್ಲಿ ಎಲ್ಲರಿಗೂ ಏಕೆ ಇದು ಇತರ ಕಲಾ ಪ್ರಕಾರಗಳಷ್ಟೇ ಸುಲಭವಾಗಿ ಸಿಗು

ತ್ತಿಲ್ಲ ಎಂಬ ಪ್ರಶ್ನೆ ಎದುರಾಗುತ್ತದೆ. ನಾವು ನಮ್ಮ ವಿದ್ಯಾರ್ಥಿಗಳಿಗೆ ಭಾಷೆ ಹೇಳಿಕೊಡುತ್ತೇವೆ. ನಾಟಕ ಓದಲು ಹೇಳುತ್ತೇವೆ. ಸಾಹಿತ್ಯವನ್ನು ಆಸ್ವಾದಿಸುವುದನ್ನು ಕಲಿಸುತ್ತೇವೆ. ಚಿತ್ರ ಬರೆಯಲು ಬಂದರೆ ಮೆಚ್ಚುತ್ತೇವೆ. ಕಾವ್ಯ ಬರೆಯಲು ಉತ್ತೇಜಿಸುತ್ತೇವೆ. ಆದರೆ ಸಿನಿಮಾ ನೋಡಲು ಹೇಳುವುದಿಲ್ಲ. ಸಿನಿಮಾ ಮಾಡಲು ಹೇಳಿದರಂತೂ ಖಂಡಿತ ಹಾಸ್ಯಾಸ್ಪದರಾಗುತ್ತೇವೆ.

ಇದಕ್ಕಿರುವ ಮುಖ್ಯ ಕಾರಣಗಳು ಎರಡು :

1) ಸಾಹಿತ್ಯ ಬರೆಯಲು–ಓದಲು ಹೆಚ್ಚು ಹಣ ಬೇಕಿಲ್ಲ. ಪುಸ್ತಕ, ಪೆನ್ನಿಗಾಗುವಷ್ಟು, ಕುಂಚ ಬಣ್ಣ ಕೊಂಡ ಕೊಳ್ಳುವಷ್ಟು ಸಾಕು, ಎರವಲು ಪಡೆಯುವುದು ಅಷ್ಟೊಂದು ಕಷ್ಟವಲ್ಲ. ಆದರೆ ಸಿನಿಮಾ ಮಾಡಲು ಫಿಲ್ಮ್ ಕ್ಯಾಮರಾ ಸಾಕು. ಎಂದು ಹೇಳಲಾಗುವುದಿಲ್ಲ. ಅಷ್ಟೇ ಅಲ್ಲ, ಕ್ಯಾಮರಾ ಕೊಳ್ಳುವುದು ಹಾಗಿರಲಿ ಬಾಡಿಗೆಗೆ ತರಲೂ ಸಾಕಷ್ಟು ಹಣ ಕೊಡಬೇಕು.

ಅಂದರೆ, ಪೆನ್ನು, ಪುಸ್ತಕ, ಬ್ರಷ್ಷು, ಕುಂಚ, ಬಣ್ಣಗಳ ಮೇಲೆ ಇರುವ ವ್ಯಾಪಾರಿಗಳ ಹಿಡಿತ ಕಲಾಸೃಷ್ಟಿಯನ್ನು ನಿಯಂತ್ರಿಸುವಷ್ಟಾಗಲೀ ತಡೆಯುವಷ್ಟಾಗಲೀ ಇಲ್ಲ. ಆದರೆ ಕ್ಯಾಮರಾ, ಫಿಲ್ಮುಗಳ ವಿಷಯದಲ್ಲಿ ಹಾಗಿಲ್ಲ.

2) ಸಿನಿಮಾವನ್ನುಳಿದು ಇತರ ಕಲಾ ಪ್ರಕಾರಗಳ ಸಾಧನಗಳ ಮೇಲೆ ವ್ಯಾಪಾರಿಗಳಿಗಿರುವ ಹಿಡಿತ ಆಯಾ ಕಲಾಸೃಷ್ಟಿಯ ಗುಣಮಟ್ಟವನ್ನು ನಿರ್ಧರಿಸುವುದಿಲ್ಲ. ಅಥವಾ ಲೇಖಕ ಆ ಹಿಡಿತದಿಂದ ದೂರ ಉಳಿಯಬಲ್ಲ. ತನ್ನ ಜೀವನ ದೃಷ್ಟಿಯನ್ನು ವ್ಯಾಪಾರಿಯ ಜೀವನದೃಷ್ಟಿಯಿಂದ ಬೇರ್ಪಡಿಸಿಕೊಳ್ಳಬಲ್ಲ.

ಆದರೆ ಸಿನಿಮಾದಲ್ಲಿ–ಸಿನಿಮಾ ತಯಾರಿಕೆಯಲ್ಲಿ ಹಾಗಾಗುವುದಿಲ್ಲ. ವ್ಯಾಪಾರಿಯ ಜೀವನ ದೃಷ್ಟಿ ನೇರವಾಗಿ ಸಿನಿಮಾ ತಯಾರಿಕೆಯ ಸಾಧ್ಯತೆಯನ್ನು, ಗುಣಮಟ್ಟವನ್ನು ನಿರ್ಧರಿಸುತ್ತದೆ.

ಅಂದರೆ ಪುಸ್ತಕ ಪಡೆಯುವುದು ಸುಲಭ. ಆಸ್ವಾದಿಸುವುದು ಕಷ್ಟ. ಸಿನಿಮಾ ತಯಾರಿಸುವುದು ಕಷ್ಟ. ನೋಡುವುದು. ಸುಲಭ. ಎಲ್ಲಕ್ಕಿಂತ ಮುಖ್ಯವಾಗಿ ಸಿನಿಮಾ ಕನಿಷ್ಟತಮ ಪ್ರಯೋಜನ ಬಯಸುವವರ ಹಿಡಿತದಲ್ಲೆ ಹೆಚ್ಚಾಗಿದೆ. ಉನ್ನತ ಪ್ರಯೋಜನ ಬಯಸುವವರು ಈ ಸಿನಿಮಾಗಳ ದೊಂಬಿಯಲ್ಲಿ ಬದುಕಿ ಉಳಿಯುವುದೇ ದುಸ್ತರ.

ವ್ಯಾಪಾರಿ ದೃಷ್ಟಿಯೆ ಸಿನಿಮಾ ದೃಷ್ಟಿಯೆಂಬ ತಪ್ಪು ಗ್ರಹಿಕೆ, ಸಾಕಷ್ಟು

ಳ್ಳ ವಿದ್ಯಾರ್ಥಿಗಳು, ತೋರಿಕೆಯ ಹುಸಿ ನಿರ್ದೇಶಕರನ್ನು ಅಭಿನಯದ ಹೆಸರನ್ನು ಆಶ್ರಯಿಸುವಂತಾಗಲು ಕಾರಣವಾಗಿದೆ. ಸಿನಿಮಾದ ಎಲ್ಲ ಗಂಭೀರ ಉದ್ದೇಶಗಳನ್ನೂ ಮೂಲೆ ಗುಂಪಾಗಿಸಿ, 'ಸುಂದರ'ವಾಗಿರುವುದೇ ಅಭಿನಯದ ಬಂಡವಾಳ ಎಂದು ನಂಬಿದ, ಹೇಳಿದಾಗ ಕಣ್ಣೀರ್ಗರೆಯಬಲ್ಲ, ಕರುಣಾರಸವನ್ನು ಇಷ್ಟು ಬಿಡಬಲ್ಲ, ಚುಂಬನಕ್ಕೆ ಸಿದ್ಧವಾಗಿರುವ, ಬಟ್ಟೆಬಿಚ್ಚಲು ಹೆದರದ ಹುಂಬ ಜನ ನಟ ನಟಿಯರ ಹೆಸರನ್ನು ವಿಜೃಂಭಿಸುತ್ತಾರೆ.

ಪಕ್ಷ ರಾಜಕೀಯವನ್ನೇ ಜನ ಜೀವನವೆಂದು ನಮ್ಮ ಪತ್ರಕರ್ತರು ಮುಂದಿಡುವಂತೆ ಅವರ ಸೋದರರಾದ 'ಸಿನಿಪತ್ರಕರ್ತ'ರು ಬಣ್ಣದುಡುಗೆಗಳನ್ನು ಮೂಗು, ಮೈಮಾಟಗಳನ್ನು ಸಿನಿಮಾದ ಹೆಸರಿನಲ್ಲಿ ನಮ್ಮ ಮುಂದಿಡುತ್ತಾರೆ.

ಸಿನಿಮಾದ ನಿಜವಾದ ಸ್ವರೂಪ ನಮಗೆ ಗೋಚರವಾದರೆ, ಕಲಾಮಾಧ್ಯಮವಾಗಿ ಅದರ ಸಾಧ್ಯತೆಗಳನ್ನು ಅರ್ಥಮಾಡಿಕೊಂಡರೆ ಕೇವಲ ಫಿಲ್ಮ್ ಇನ್‌ಸ್ಟ್ಯೂಟ್‌ಗಳು ಮಾತ್ರವಲ್ಲದೆ ಎಲ್ಲಾ ಶಾಲಾ ಕಾಲೇಜುಗಳಲ್ಲಿ ಸಿನಿಮಾ ಬಗ್ಗೆ ಪಠ್ಯಕ್ರಮಗಳನ್ನು ರೂಪಿಸಬಹುದು. ಸಿನಿಮಾ ತಯಾರಿಕೆಗೆ ವಿಶೇಷ ಪರಿಶ್ರಮ ತರಪೇತಿಗಳು ಬೇಕೆನ್ನುವುದು ಎಷ್ಟು ಸರಿಯೋ, ಒಂದು ಕಲಾಪ್ರಕಾರವಾಗಿ ಸಿನಿಮಾದ ಪರಿಚಯ–ಅಧ್ಯಯನ ಬೇಕೆನ್ನುವುದು ಅಷ್ಟೇ ಸರಿ. ಪ್ರೊಜೆಕ್ಟರ್, ಮಸೂರಗಳು, ಕ್ಯಾಮರಾ, ಫಿಲ್ಮ್‌ನ ರಾಸಾಯನಿಕ ಸ್ವರೂಪ ಎಲ್ಲವನ್ನು ಅರೆಬರೆಯಾಗಿ ನಮ್ಮ ವಿದ್ಯಾರ್ಥಿಗಳಿಗೆ ಹೇಳಿ ಕೊಡಲಾಗುತ್ತಿದೆ. ಆದರೆ ಸಿನಿಮಾ ಒಂದು ಭಾಷೆಯಾಗಿ, ಕಲಾಮಾಧ್ಯಮವಾಗಿ ಎಲ್ಲಿಯೂ ಕಲಿಸಲ್ಪಡುತ್ತಿಲ್ಲ. ಆದ್ದರಿಂದಲೇ ತರಗತಿ ತಪ್ಪಿಸಿ ಸಿನಿಮಾಕ್ಕೆ ಹೋಗುವ ಹುಡುಗರು ತಾವು ತಪ್ಪು ಮಾಡುತ್ತಿದ್ದೇವೆಂಬ ಭಾವನೆಯನ್ನಿಟ್ಟುಕೊಂಡೇ ಹೋಗುತ್ತಾರೆ. ಅಂಥವರನ್ನು ಕಂಡರೆ ನಮಗೂ ತಿರಸ್ಕಾರ.

ನಮಗೆ ಕನಸು ಆಕರ್ಷಕವಾಗಿ ಕಂಡಷ್ಟು ವಾಸ್ತವ ಆಕರ್ಷಕವಾಗುವುದಿಲ್ಲ. ತುಂಬಾ ಜನಕ್ಕೆ ಬದುಕಿನ ಜಂಜಾಟ ಮರೆಯಲು ಭ್ರಮೆಗಳು ಬೇಕು. ಹಗಲುಗನಸು ಬೇಕು ಇವನ್ನು ಸಿನಿಮಾ ಹೆಚ್ಚು ಕಷ್ಟವಿಲ್ಲದೆ ಒದಗಿಸುತ್ತದೆ. ಆದ್ದರಿಂದ ಸಿನಿಮಾ ಕೇವಲ ಭ್ರಮೆಯ ಮಟ್ಟದಲ್ಲೇ ಹೆಚ್ಚು ಜನಪ್ರಿಯವಾಗಿದೆ. ಹೆಚ್ಚು ಜನಪ್ರಿಯವಾಗಿರುವುದರಿಂದ ಹೆಚ್ಚು ಹಣ ತಂದು ಕೊಡುತ್ತದೆ. ಆದ್ದರಿಂದ ಒಂದು ಲಾಭದಾಯಕ ಉದ್ಯಮವಾಗಿದೆ. ವ್ಯಾಪಾರಿಗಳ ಹಿಡಿತದಲ್ಲಿ ಸಿಕ್ಕಿ ವ್ಯಭಿಚಾರಕ್ಕೊಳಗಾಗಿದೆ.

'ಸಿನಿಮಾ ಒಂದು ಅತ್ಯಂತ ಪ್ರಭಾವೀ ಮಾಧ್ಯಮ' ನಮ್ಮ ಎಲ್ಲಾ ಶಾಲಾ ಕಾಲೇಜುಗಳಲ್ಲಿ ಒಂದೊಂದು ಫಿಲ್ಮ್ ಕ್ಲಬ್ ಆಗಬೇಕು, ಚಲನಚಿತ್ರ ಸಹೃದಯ ಶಿಬಿರಗಳು

ಹಳ್ಳಿಹಳ್ಳಿಯಲ್ಲೂ ನಡೆಯ ಬೇಕು ಎಂದೆಲ್ಲಾ ಹೇಳುವುದು ಸುಲಭ. ಎಷ್ಟೋ ಸಲ ಲಾಭದಾಯಕವುಕೂಡ. ಸಿನಿಮಾ ಎಂದ ತಕ್ಷಣ ಜನರೇನೋ ಬರುತ್ತಾರೆ. ಆದರೆ ಅಲ್ಲಿ ಭ್ರಮೆಗಳನ್ನು ಹಗಲುಗನಸುಗಳನ್ನು ಹಂಚುವುದಿಲ್ಲ ಎಂದು ಗೊತ್ತಾದ ತಕ್ಷಣ ಮತ್ತೆ ಆ ಕಡೆ ಸುಳಿಯುವುದಿಲ್ಲ. ಆದ್ದರಿಂದ ಪ್ರಾಭರಂದಿಂದಲೂ ತನ್ನ ಉನ್ನತ ಪ್ರಯೋಜನದ ಪ್ರಚಾರದಿಂದ ವಂಚಿತವಾಗೇ ಬಂದಿರುವ ಸಿನಿಮಾದ ಗಂಭೀರ ಮುಖವನ್ನು ಹೆಚ್ಚುಹೆಚ್ಚಾಗಿ ಪರಿಚಯಿಸ ಬೇಕು. ಈ ಲೇಖನ ಅಂಥ ಒಂದು ಪ್ರಯತ್ನ ಎಂದು ನನ್ನ ನಂಬಿಕೆ. ○

ಒಂದಿಷ್ಟು ಹಾಯಿಕುಗಳು

೧

ಚಳಿಗಾಳಿಯ ಹೊಡೆತಕ್ಕೆ
ಎಲ್ಲರಿಗಿಂತ ಮೊದಲು
ಕೆಳಗುರುಳುವ ಧೀರರೆಂದರೆ
ಈ ಬೆದರು ಬೊಂಬೆಗಳು
(–ಕ್ಯೊರೋಕು)

೨

ಬನ್ನಿ ! ಬನ್ನಿ ! ಎಂದು ಕರೆಯುತ್ತೇನೆ
ಆದರೆ ಈ ಮಿಣುಕು ಹುಳಗಳು
ಮಿಂಚಿ ಮರೆಯಾಗುತ್ತವೆ
ಗಾಢ ಕತ್ತಲೆಯೊಳಗೆ
(–ಒನಿತ್ಸುರಾ)

೩

ಚಿಟ್ಟೆಗಳೆ !
ಈ ಬಿರುಗಾಳಿಯಲ್ಲಿ
ದೇವದಾರು ಮರದ ಮೊನಚು
ಸೂಜಿಗಳ ಬಗ್ಗೆ ಹುಷಾರಾಗಿರಿ
(—ಶುಸೇನ್)

ಎಚ್. ಡುಂಡಿರಾಜ್

ಧ್ಯಾನ

○ ಸವಿತಾ ನಾಗಭೂಷಣ

ಎಷ್ಟೋ ವರುಷಗಳಿಂದ
ಧ್ಯಾನದೊಳಗೆ
ಲೀನವಾದಂತಿತ್ತು ಬೆಟ್ಟ.

ನಾನು ಕುತೂಹಲದಿಂದ
ಹತ್ತಿಹೋದೆ. ತುತ್ತ-
ತುದಿಗೇರಿದಾಗ ಮೈ-ಮನ
ಹಗುರಾದಂತೆ ಅನಿಸಿತು.

ನೋವುಗಳು ತಂತಾನೆ
ಕಳಚಿ ಕೊಂಡವು.
ದುಃಖ ಹೆಬ್ಬಂಡೆಯಾಗಿ
ಉರುಳಿ ಹೋಯಿತು.

ಉಲ್ಲಾಸದ ನಗೆನಕ್ಕು
ಹೂವು-ಹುಲ್ಲು ಪೊದೆಗಳಿಗೆ
ಕೂಗಿ ಹೇಳಿದೆ-
ನನಗೀಗ ಬದುಕುವ
ಮನಸ್ಸಾಗಿದೆ.

ಬೆಟ್ಟ ಪಿಸುಗುಟ್ಟಿತು.
ನನಗೀಗ ಜ್ಞಾನೋದಯವಾಗಿದೆ.

ಶಿಲಾಯೋಗ

○ ಎಂ. ರಾಜು

ಕಣ್ಣಿಗೌತಣ ಈ ಯಾಣ
ಸಾವಿನ ಕನಸು ಧುತ್ತನೆ ಹಾದಂತೆ
ಭೂಮಿ ಬಾಯ್ಬಿರಿದು
ಯಾವುದೋ ಯುಗದ ರಾಕ್ಷಸ ಹಸ್ತ
ಮೇಲೊತ್ತಿ ಬಂದಂತೆ
ಬೆಟ್ಟಕ್ಕೆ ಕೋಡು ಮೂಡಿದಂತೆ
ಈಟಿ ರಾಶಿಯು ಮೆದೆಯೊಟ್ಟಿದಂತೆ
ಆದಿಶೇಷ ಹೆಡೆ ನೂರ್ಮಡಿಸಿ ನಿಂತಂತೆ
ಸುಪ್ತ ಬಯಕೆಗಳು ಚೂಪು ಶಿಲೆಯಾಗಿ
ರೂಪು ತಳೆದಂತೆ ನಿಂತಿದ್ದಾವೆ
ಕಾರ್ಗತ್ತಲೆ ಹೆತ್ತ ಕೂರ್ಗಲ್ಲುಗಳು.

ನಿರಂತರ
ಕಟೆಯುತ್ತ ಅಳಿಸುತ್ತ
ಚೆಲ್ಲಾಟವಾಡುವ ಚಳಿಮಳೆಗಾಳಿಗೆ
ಮೈಯೊಡ್ಡಿದ ಶಿಲಾಸ್ಕಂಧವರ
ಅಸಂಖ್ಯ ವಿನ್ಯಾಸಗಳಲ್ಲಿ
ಸೃಷ್ಟಿ ಅದ್ಭುತ ಕೊರೆದ ಸಂಕೇತಗಳಲ್ಲಿ
ತೃಣ ಮಾತ್ರ ಚಲಿಸಿದರೂ
ಸಿಡಿಲು ಬಡಿದಂತೆ ಜರಿದು ಬೀಳುವ
ಸೂಕ್ಷ್ಮದಲಿ ಹೊಂದಿನಿಂತ ಕೋಡುಗಲ್ಲುಗಳಲ್ಲಿ
ನಿಂತ ನೆಲವನ್ನೇ ಸ್ಫೋಟಕ ಮಾಡಿ
ನೆತ್ತಿಯಲಿ ನಕ್ಷತ್ರ ಸಮರ ಹೂಡಿ
ಸರ್ವನಾಶದ ರಣ ಕುಣಿತ
ಕುಣಿವ ಭಸ್ಮಾಸುರನ ನೆರಳು.

ತುಟಿ ಪಿಟ್ಟೆನ್ನದೆ
ಪಟ್ಟ ಕಾನನದಲ್ಲಿ
ಯುದ್ಧ ಶಾಂತಿ ಕಥೆಗಳ ಮಥಿಸುತ್ತ
ಅನಂತ ಕಾಲದ ತಪಸ್ಸಿನಲಿ
ನಿಂತಿದ್ದಾವೆ
ಯುಗ ಯುಗದ ದ್ರಷ್ಟಾರ ಶಿಖರಗಳು
ಎಂಥ ಪುಸಲಾವಣೆಗೂ ಪಿಸು ನುಡಿಯದ
ಹಠಯೋಗದಲ್ಲಿ.

ಇನ್ನೆರಡು ಹಾಯಿಕುಗಳು

೪

ಅಂದ ಹಾಗೆ ಯಾರಲ್ಲಿ ಕೆಳಗೆ ?
ಓಹೋ ! ಗೆಳೆಯ ಬಸವನ ಹುಳ !
ಯಾವಾಗ ಬಂದೆಯಪ್ಪ
ಇಷ್ಟೊಂದು ಅವಸರದಿಂದ ?

(–ಇಸ್ಸಾ)

೫

ಋತು ವಸಂತ
ಹೋಯಿತು ಅಂತ
ಯಾರೂ ವಟಗುಟ್ಟುವುದಿಲ್ಲ
ಈ ಕಪ್ಪೆಗಳಷ್ಟು ಜೋರಾಗಿ

(–ಯಾಯು)

ಎಚ್. ಡುಂಡಿರಾಜ್

ಹೊಸ ಓದು

ನನ್ನ ರಸಯಾತ್ರೆ :

○ ಲೇಖಕ : ಮಲ್ಲಿಕಾರ್ಜುನ ಮನಸೂರ್
ನಿವೇದಿತಾ ಪ್ರಕಾಶನ, ಮಾನಸ ಗಂಗೋತ್ರಿ, ಮೈಸೂರು

ಮನ ಸೂರರ ಜೀವನ ಯಾತ್ರೆ ಸಂಗೀತ ರಸಿಕರ ಮನಸೂರೆಗೊಳ್ಳುವ ರಸಯಾತ್ರೆ. ಹಳ್ಳಿಗಾಡಿನ ಈ ಹೈದನ ಎದೆಯಲ್ಲಿ ಸಂಗೀತದ ಗೀಳನ್ನು ಯಾರು ಬಿತ್ತಿದರೋ ? ಈಳೆ ನಿಂಬೆ ಮಾವು ಮಾದಲಕ್ಕೆ ಹುಳಿ ನೀರ ನೆರೆದವನು, ಕಬ್ಬು ಬಾಳೆ ಹಲಸು ನಾರಿಕೇಳಕ್ಕೆ ಸಿಹಿ ನೀರ ನೆರದವನೇ, ಇರಬೇಕು ! ತಾಯಿ ನೀಲಮ್ಮ ನಿಗೆ ಹಾಡಿನ ಗೀಳು, ಹಾಲನುಂಡ ಮಗ ಹಾಡಿನ ಗೀಳನ್ನು ಉಂಡಿರಬೇಕು. ತಂದೆ ಭೀಮರಾಯಪ್ಪನವರಿಗೆ ಮಗ ಓದಿ ದೊಡ್ಡ ಮನುಷ್ಯನಾಗಬೇಕೆಂಬ ಆಸೆ. ಅಕ್ಕ ಮಹಾದೇವಿಯನ್ನ ಒತ್ತಾಯವಾಗಿ ಕೌಶಿಕನಿಗೆ ಕೊಟ್ಟಂತೆ, "ಜ್ಞಾನದ ಬೆಳಕಿರಲಿ, ಗಾಳಿ ಬೆಳಕೂ ಸುಳಿಯದ" ಶಾಲೆಗೆ ಅಟ್ಟಿದರು (ನಮ್ಮ ಶಿಕ್ಷಣ, ಶಾಲೆ ಕಾಲೇಜುಗಳನ್ನ ಕುರಿತ ಮೊನಚಾದ ವಿಮರ್ಶೆ) ಅಷ್ಟರಲ್ಲೇ ಮನಸೂರರನ್ನು ಅವರ ಮನ ಸೂರೆಗೊಂಡ ಸಂಗೀತದ ರಾಜಮಾರ್ಗಕ್ಕೆ ಸೆಳೆಯುವ ಸಂದರ್ಭ ಒದಗಿ ಬಂದಿತು. ಅಪ್ಪಯ್ಯ ಸ್ವಾಮಿಗಳ ನಾಟಕದ ಹಾಡುಗಳ ತಾಲೀಮು ಉಕ್ಕಿಸುಗುವನ್ನು ಶುಷ್ಕ ಶಿಕ್ಷಣದ ಮರಳು ಗಾಡಿನಿಂದ ಭಾವುಕ ಪ್ರಪಂಚದ ಸಂಗೀತದ ನಂದನದೆಡೆಗೆ ಕರೆದೊಯ್ದಿತು. ಈ ಕಣ್ಣು ತೆರೆಯದ ಕೋಗಿಲೆ ಮರಿಗೆ ವಿಶ್ವಗುಣಾದರ್ಶದ ರಾಮಚಂದ್ರಪ್ಪ 'ಮಾವನ' ವಾಗಿ ಬಂದರು.

ಪ್ರಹ್ಲಾದ, ಧ್ರುವ, ನಾರದನಾಗಿ ವಿಶ್ವಗುಣಾದರ್ಶದ ರಂಗಮಂಚದ ಮೇಲೆ ಆಡಿ ಹಾಡಿ ಪ್ರೇಕ್ಷಕರಿಂದ ಒನ್ಸಮೋರ್ ಹೊಡೆಸಿಕೊಂಡ ಹುಡುಗನ ಅಂತರಂಗದ ಮೂಕ ವೇದನೆ ಯಾರಿಗೂ ಕೇಳದಾಗಿತ್ತು. ಆದನ್ನು ಕೇಳಿಸಿಕೊಂಡು ಆ ವೇದನೆಗೆ ತಂಪನ್ನೆರೆಯುವ ಚೇತನದ ದರ್ಶನ ಆಕಸ್ಮಿಕ. ಮುಂದಿನದೆಲ್ಲ, ಯೋಗಾಯೋಗ ಸಂಬಂಧಿಯಾದ ಆಕಸ್ಮಿಕ ಘಟನೆಗಳೇ ! ಗಚ್ಚಿನ ಮಠದ ಶ್ರೀ ಶಿವ ಬಸವ

ಸ್ವಾಮಿಗಳ ಅಂತರ್ ದೃಷ್ಟಿಗೆ ಈ ಬಾಲಕನ ಎದೆಯಲ್ಲಿ ಅಡಗಿರುವ ಮಹಾನ್ ಗಾಯಕನ ದರ್ಶನವಾಗಿರಬೇಕು. ಅವರ ಕರುಣಾ ಪ್ರಸಾದದಿಂದಲೇ ಮನಸೂರರಿಗೆ ನೀಲಕಂಠಬುವಾ ರವರಲ್ಲಿ ಶಿಷ್ಯ ವೃತ್ತಿ ಪ್ರಾಪ್ತವಾಯಿತು. ಅಲ್ಲಿಂದ ಈ ಮಹಾನ್ ಗಾಯಕನ ರಸಯಾತ್ರೆಯು ಆರಂಭ.

ಸಂಗೀತಗಾರನ ಬೋಧೀವೃಕ್ಷ ತಂಬೂರದಡಿಯಲ್ಲಿ ಬೆಳಗ್ಗೆ ನಾಲ್ಕು ತಾಸು ಸಂಜೆ ನಾಲ್ಕು ತಾಸಿನ ಅಭ್ಯಾಸ, ಛೋಟಾಖ್ಯಾಲ್, ಬಡಾಖ್ಯಾಲ್, ಚೀಸ್‌ಗಾಯಕಿ, ಗಮಕಮೀಂಡ, ಖಟಕಾ, ಅಲಂಕಾರ, ವಾದಿ ಸಂವಾದಿ ಸ್ವರ ಸಾಧನೆ, ತಾಳ, ಲಯ ಸಾಧನೆ ಶ್ರುತಿ ನಿಯತಿಯ ಅಭ್ಯಾಸ, ಸಾಗಿತು. ಮುಂದೆ ಬರಲಿರುವ ಮಹಾನ್ ಗಾಯಕನ ಕೋಶಾವಸ್ಥೆಯ ದಿನಗಳವು.

ಕೋಶಾವಸ್ಥೆ ಕಳೆದು ಚಿಟ್ಟೆ ಹೊರ ಬರುವ ದಿನಗಳು ಬಂದವು. ಹುಬ್ಬಳ್ಳಿಯ ಸ್ನೇಹಿತರಾದ ಈಶ್ವರಪ್ಪಾ ಮಾನ್ವಿ, ವೀರಭದ್ರಪ್ಪ ಬಳ್ಳಾರಿ ಇವರ ಪ್ರೇರಣೆಯಿಂದ ಗದಗಿನಲ್ಲಿ ಚೊಚ್ಚಲ ಮಹಫೀಲು, ಜನ ತಲೆದೂಗಿದರು, ಮನಸೂರರು "ಸಂಗೀತ ರತ್ನ"ರಾದರು. ಅಲ್ಲಿ ಹೆಚ್. ಎಂ. ವಿ. ರೂಪಸಜಿಯವರ ಪರಿಚಯು. ಮನಸೂರರ ಹಾಡುಗಳ ರೆಕಾರ್ಡಿಂಗ್, ಬಿಸಿ ಕೇಕುಗಳಂತೆ ಅವುಗಳ ಮಾರಾಟ, ಕರ್ಣಾಟಕದ ಸೀಮೆ ದಾಟಿ ಮನಸೂರರ ಜನಪ್ರಿಯತೆ, ಮಹಾರಾಷ್ಟ್ರ, ಬೊಂಬಾಯಿ, ಅದರಾಚೆ ಬೀಸಿತು. ನಾಗಪುರ ಕಾಲೆಜೀನಲ್ಲಿ ನಡೆದ ಸಭೆ ಅದ್ಭುತ ಜನಪ್ರಿಯತೆಯುನ್ನು ತಂದಿತು. ಆದರೂ ಈ ಸಂಗೀತ ರತ್ನಕ್ಕೆ ಇನ್ನು ಸಾಣೆ ಹಿಡಿಯಬೇಕಾದ್ದಿತ್ತು.

ಉಸ್ತಾದ್ ಮಂಜೀ ಖಾನರು ಮನಸೂರರ ಬದುಕಿನೊಳಗೆ ಪ್ರವೇಶಿಸಿದರು. ಅಲೌಕಿಕ ಶಾರೀರ ಗುಣ, ಎಲ್ಲಿಯೂ ಭಂಗವಾಗದ ಸ್ವರಗಳ ಸಂಮಿಳನ, ತಾನಾಗಿ ಹೂವರಳಿ ಬಾಗಿ ಬೀಸಿ ತಾನಾಗಿ ತೊಟ್ಟು ಕಳಚಿ ಉದುರುವಂತೆ ಸಮಕ್ಕೆ ಎರಗುವ ತಾನುಗಳು. ಮಂದ್ರ ಸಪ್ತಕದಿಂದ ತಾರ ಸಪ್ತಕದ ಒರೆಗೆ ಲೀಲಾಜಾಲವಾಗಿ ಸಮುದ್ರದ ಏರಿಳಿತದಂತಹ ಕಂಠದ ಏರಿಳಿತಗಗಳು. ಸ್ವರ ಸ್ಥಾನಗಳನ್ನು ಸ್ಪಷ್ಟವಾಗಿ ಮುಟ್ಟುವ ನಿಖರತೆ, ಎಲ್ಲಿಯೂ ಶುಷ್ಕವಲ್ಲದ, ಚಮತ್ಕಾರವೆನಿಸದ ಸರಾಗವಾದ ಹಾಡುಗಾರಿಕೆ. ಶಾಸ್ತ್ರದ ಚೌಕಟ್ಟಿನ ಮೇಲೆ, ಭಾವುಕತೆ, ರಸ ಮಾಧುರ್ಯದ ತೋರಣ ಅಲಂಕಾರದಿಂದ ಹೃದಯಂಗಮವೆನ್ನಿಸುವ ಸಂಗೀತವನ್ನು ಮಂಜೀಖಾನರು ನಿರ್ವಂಚನೆಯಿಂದ ಧಾರೆ ಎರೆದರು. ಅವರ ತಮ್ಮ ಬುರ್ಜೀಖಾನ್, ತಂದೆ ಉಸ್ತಾದ್ ಅಲ್ಲಾದಿಯಾ ಖಾ್ಂರ ಕೃಪೆ, ಮಾರ್ಗದರ್ಶನ ಲಭ್ಯವಾಯಿತು, ಜಾತಿ ಮತ ಧರ್ಮಗಳ ಎಲ್ಲೆ ಕಟ್ಟುಗಳನ್ನು ಮೀರಿದ್ದು ಸಂಗೀತ ಸಂಸಾರ. ಬದುಕಿನ ಕಷ್ಟ ನಿಷ್ಠೂರಗಳ

ಏರು ಪೇರುಗಳೆಲ್ಲ ಸಂಗೀತದ ಆರೋಹಣ ಮಾರ್ಗದಲ್ಲಿ ಮರೆಯಾದವು. ಮನಸೂರರ ಮಾರ್ಗ ಸಂಗೀತದ ಗೌರೀ ಶಂಕರವನ್ನು ಹಾಯುವ ಆರೋಹಣದ ಮಾರ್ಗ, ಅದರಲ್ಲಿ ಬಡತನ, ಕಷ್ಟ ನಿಷ್ಠುರಗಳು ಸಾವು ನೋವುಗಳು, ರೋಗ ರುಜಿನ ಗಳು ಎಲ್ಲವೂ ಶಿವಾರ್ಪಣವಾದವು. ಸಂಗೀತ ತಪವಾಯಿತು ಹೃದಯ, ಮನಸ್ಸು, ಇಂದ್ರಿಯ, ನರ ನಾಡಿಗಳೆಲ್ಲ ರಾಗ ತಾಳ ಲಯ ರಸ ವಾಹಿನಿಗಳಾಗಿದ್ದವು. ಉಸಿರಾಟ, ಎದೆಬಡಿತ, ನಾಡಿಮಿಡಿತ ಹೆಜ್ಜೆಯ ಗತಿ ಎಲ್ಲವೂ ತಾಳ, ಎಲ್ಲವೂ ಲಯ, ಏಕ, ತ್ರಿ, ಝಂಪವೋ, ಅಡಾಣ ತೋಡಿ, ನಾಲಕೌಂಸ, ಮಾರವಾ, ಭೈರವಿ, ಶಂಕ ರಾಗಳೇ ಆಗಿದ್ದವು. ಕರುಣ, ಶೃಂಗಾರ ಶಾಂತಗಳೇ ಆಗಿದ್ದವು. ಕಾಯ ದಂಡಿ ಗೆಯಾಗಿ ಶಿರ ಸೋರೆಯಾಗಿ, ನರ ನಾಡಿಗಳೇ ತಂತಿಗಳಾಗಿ, ನಡೆದದ್ದು ನುಡಿದದ್ದು ಎಲ್ಲದರಲ್ಲಿಯೂ ಬತ್ತೀಸ ರಾಗಗಳು ಹೊರ ಹೊಮ್ಮುವಂತಾಗಿತ್ತು. ಪು. ಲ. ದೇಶ ಪಾಂಡೆ. ಅನಕೃ. ಕಾರಂತರಂತಹ ನೂರಾರು ಮಿತ್ರರ ನಿರ್ವ್ಯಾಜ ಸ್ನೇಹ ಈ ಸಂಗೀತಕ್ಕೆ ಅಲಂಕಾರವಾಗಿತ್ತು. ಧಾರವಾಡ ವಿಶ್ವ ವಿದ್ಯಾನಿಲಯದ ಸಂಗೀತ ವಿಭಾ ಗದ ನಿರ್ದೇಶಕ, ಆಕಾಶವಾಣಿಯ ಸಂಗೀತ ಸಲಹೆಗಾರ ಪದವಿಗಳು, ನೂರಾರು ಮೆಹಫಿಲ್‌ಗಳು ಸಹಸ್ರಾರು ಅಭಿಮಾನಿಗಳು, ಈ ಸಂಗೀತ ಪ್ರವಾಹಕ್ಕೆ ಒದಗಿಬಂದ ಜನಾದರಣೆಯ ಮಳೆನೀರು. ಪದ್ಮಶ್ರೀ, ಪದ್ಮಭೂಷಣ ರಾಷ್ಟ್ರಪ್ರಶಸ್ತಿಗಳು ಇಡೀ ರಾಷ್ಟ್ರವೇ ಈ ಮಧುರ ಕಂಠಕ್ಕೆ ಮಾರು ಹೋದ ಸಂಕೇತ, "ಕಾಳಿದಾಸ" ಪುರ ಸ್ಕಾರ ಭಾರತೀಯ ಸಾಂಸ್ಕೃತಿಕ ಸಿಂಹಾಸನವನ್ನೇರಿ ಕುಳಿತ ಚಕ್ರವರ್ತಿ ಪದವಿ. ಮನಸೂರರು ಏರಿದ ಗೌರಿ ಶಂಕರ ಶಿಖರ.

ಬಸವಣ್ಣನವರು "ಎನ್ನ ಕಾಯವ ದಂಡಿಗೆಯ ಮಾಡಯ್ಯ ತಂದೆ" ಎಂದು ಬೇಡಿದರೆ ಮನಸೂರರು ದಂಡಿಗೆಯೇ ಆಗಿ, ವಚನಗಳನ್ನು ಬತ್ತೀಸರಾಗಗಳಲ್ಲಿ ಹಾಡಿ, ಶಿವನ ಎದೆಗೆ ಸಮೀಪವಾದರು. ಶುದ್ಧ ಶಾಸ್ತ್ರೀಯ ಸಂಗೀತಗಾರರಾದರೂ, ಜಾ ನಪದ, ಹಳ್ಳಿ ಹಾಡುಗಳು, ಲಘು ಸಂಗೀತಕ್ಕೆ ಆಕಾಶವಾಣಿಯಲ್ಲಿ ವಿಶೇಷ ಸ್ಥಾನ ದೊರಕಿಸಿಕೊಟ್ಟರು. ಮನಸೂರರ ಸಂಗೀತ, ಜಾತಿ, ಮತ, ಧರ್ಮ, ದೇಶಗಳ ಮೊಡಕು ಮೂಲೆಗಳನ್ನು ಮೀರಿದ ಸಂಗೀತ, ದೇಶ ದೇಶಗಳನು ಮೀರಿ ಅನಿಕೇತನ ವಾಗುವ ಸಂಗೀತ. ಒಂದು ಮಾತು. ಮನಸೂರರು ತಾವು ಕೇಳಿದ ಉದ್ದಾಮ ಗಾಯಕರ ಬಗೆಗೆ ಅವರ ಗುಣದೋಷಗಳ ಬಗೆಗೆ ನಿರ್ಲಿಪ್ತರಾಗಿ ಹೇಳಿದ್ದಾರೆ, ಆದರೆ ತಮ್ಮ ಸಮಕಾಲೀನ, ಕನ್ನಡದ, ಗಂಗೂಬಾಯಿ, ಭೀಮಸೇನಜೋಷಿ, ಬಸವರಾಜರಾಜ ಗುರು ಇವರ ಬಗೆಗೆ ತಮ್ಮ ಅಭಿಪ್ರಾಯವನ್ನು ಮುಚ್ಚಿಯೇ ಇಟ್ಟಿದ್ದಾರೆ. ರಸಯಾತ್ರೆ ಯ ಆರಂಭದ ಭಾಗಗಳು ಒಬ್ಬ ಹುಟ್ಟು ಕಥೆಗಾರನ ಬದುಕಿನ ಹಿನ್ನೋಟವಾಗಿ ಮನಮೂ ರೆಗೊಳ್ಳುವ ನಿರೂಪಣೆಯಾಗಿದೆ, ಮುಂದೆ ಬಂದಂತೆ ಬೀಗಿದ ಬಾಳೆಯಂತೆ ಸೌಜನ್ಯ

ಮೂರ್ತಿಯಾದ ಮನಸೂರರಿಗೆ ತಮ್ಮ ಸಾಧನೆ ದಿಗ್ವಿಜಯಗಳ ಬಗೆಗೆ ಹೇಳಿಕೊಳ್ಳು ವುದು ಆತ್ಮಪ್ರಶಂಸೆ ಎನ್ನಿಸೀತೋ ಎಂಬ ಸಂಕೋಚದಿಂದ "ನನ್ನ ಮಹಫೀಲು ಗಳು" ಇತ್ಯಾದಿ ಭಾಗಗಳು ಸ್ವಲ್ಪ ತೇಲಿಸಲ್ಪಟ್ಟಿವೆ.

ಮನಸೂರರು ಬದುಕನ್ನೇ ಸಂಗೀತಕ್ಕೆ ಅರ್ಪಿಸಿಕೊಂಡರು. ಹರಿಶ್ಚಂದ್ರ ನಿಗೆ "ಸತ್ಯವೆಂಬುದೆ ಹರನು ಹರನೆಂಬುದೆ ಸತ್ಯ" ವಾದಂತೆ ಮನಸೂರರಿಗೆ ಸಂಗೀತ ವೇ ಶಿವಗೀತ, ಸಂಗೀತವೇ ಶಿವಪಥ.

ಸಂಗೀತದ ಬದುಕಿನಲ್ಲೂ ಮನಸೂರರು ಸಾಕಷ್ಟು ಉಂಡಿದ್ದು ನೊಂದಿದ್ದು ಉಂಟು. ಶ್ರೀ ಶೈಲದ ಯಾತ್ರೆಗೆ ಹೋದಾಗ ಗಂಟೇ ಮುಳುಗಿ ಹೋಯಿತು. ಅದು ಹೋದರೆ ಹೋಗಲಿ, ಮನಸೂರರ ಇಹ ಪರದ ನಿಧಿಯಾಗಿದ್ದ ತಾಯಿ ಯೇ ಶಿವನ ಪಾದ ಸೇರಿದರು. "ಶಿವನೇ ಕರೆಸಿಕೊಳ್ಳಪ್ಪಾ" ಅಂತ ಬೇಡಿದ್ದೇ ಸರಿ, ಬಸವನೇ ಗಾಡಿ ಎಳೆದು ಎದೆಯನೇರಿ ಕರೆದುಕೊಂಡೇ ಹೋದ. ಈ ದಾರುಣ ಸನ್ನಿವೇಶ ಹೃದಯ ವಿದ್ರಾವಕ. ಮನಸೂರರ ಸಂಸಾರ ಸಂಗೀತದಂತಹ ಮಧುರ ರಾಗ ಸಂಯೋಗ, ಅಲ್ಲಿಯೂ ಒಮ್ಮೊಮ್ಮೆ ಎಚ್ಚರ ತಪ್ಪಿ ಅಪಸ್ವರ ಹೊರಡು ವುದುಂಟಲ್ಲ! ಮಗ ರಾಜಶೇಖರನ ಮದುವೆಯ ಸಂದರ್ಭ, ಸಂಯಮ ಮೂರ್ತಿ ಮನಸೂರರನ್ನು ತಾಳತಪ್ಪುವಂತೆ ಮಾಡಿತ್ತು.

ಹಾಡುತ್ತಾ ಹಾಡುತ್ತಾ ಮೈಮರೆಯುವುದು, ಸ್ವರ, ತಾಳ, ಲಯ, ರಾಗ, ಭಾವದಲ್ಲಿ ಲೀನವಾಗಿ ಹೋಗುವುದು, ಕೇಳುಗನನ್ನ ಯಾವುದೋ ಅಮೂರ್ತ ಮಧುರ ಅನುಭವದ ಆನಂದದಲ್ಲಿ ಮುಳುಗಿಸುವುದು ಮನಸೂರರ ಸಂಗೀತ. ಯಾರು ಬಂದರು ಯಾರು ಹೋದರು ಗೊತ್ತಾಗುವಂತಿಲ್ಲ. ಬಂದವನಿಗೆ ತುರ್ತಿನ ಕೆಲಸವಿ ದ್ದರೂ ಎದ್ದುಹೋಗಲು ಮರೆತೇ ಹೋಗಬೇಕು. ಲೋಕದ ಜಂಜಡವೆಲ್ಲ ಮಾಯ ವಾಗ ಬೇಕು. ಬೇಂದ್ರೆ ಹೇಳುವಂತೆ "ಮನ ಮೀರಿ ನಾ ನಿಂತೆ ಕಳಚಿ ಬಿದ್ದಿತು ಗೆಳೆಯ ಜಗದ ಚಿಂತೆ" ಎಂಬಂತಹ ಅನುಭವ, ಅಮೂರ್ತ ಕಲ್ಪನೆ ಭಾವನೆಗಳಲ್ಲಿ ಮಧುರಾನುಭವದಲ್ಲಿ ಮೂರ್ತೀಕರಿಸುವ ಅನುಭವ. ಡಾ॥ ಭೈರಪ್ಪನವರು ಮನಸ್ಸಿ ನಲ್ಲಿ ಅಸ್ಪಷ್ಟ ಅಮೂರ್ತ ಕಲ್ಪನೆಗಳನ್ನು ಸ್ಪಷ್ಟೀಕರಿಸಿಕೊಳ್ಳಲು ಸಂಗೀತವನ್ನು ಕೇಳಿ ಮೈಮರೆಯುತ್ತಾರಂತೆ- ಅಂತಹ ಅನುಭವ.

ಸಂಗೀತ ಶಾಸ್ತ್ರದ ಸಾರ ಒಪ್ಪಿಸಿ ಕೈ ತೊಳೆದುಕೊಳ್ಳುವ ಕ್ರಿಯೆಯಲ್ಲ. ಒಂದು ಕಾಲದಲ್ಲಿ ದಕ್ಷಿಣಾದಿ ಸಂಗೀತಕ್ಕೆ ಮಾರು ಹೋಗಿದ್ದವನು, ಈಗ ಉತ್ತರಾ

ದಿಯ ಸ್ವರ ಲಯ ರಾಗ ಭಾವಗಳ ಲೀಲಾಟಕ್ಕೆ ಮನಸೋತಿದ್ದೇನೆ. ಕಾರಣವಿಷ್ಟೆ. ದಕ್ಷಿಣದವರಿಗೆ ಶಾಸ್ತ್ರ ಪಾಠವನ್ನು ಲೆಕ್ಕಾಚಾರವಾಗಿ ಒಪ್ಪಿಸಿ ಬಿಡುವ ಅವಸರ. ಒಂದು ರಾಗಕ್ಕೆ ಆಕಾಶದ ವಿಸ್ತಾರ, ಸಮುದ್ರದ ಆಳ ಇರುತ್ತದೆ. ಭಾವ, ರಸಗಳ ಉದ್ದಗಲಕ್ಕೆ ಮಿತಿ ಎಲ್ಲಿ? ಉತ್ತರಾದಿಯಲ್ಲಿ ಒಂದು ರಾಗದ ಆಲಾಪ್‌ನಿಂದ ಪ್ರಾರಂಭಿಸಿ ಫಿರತ್‌ಗೆ ಎರಗಿ, ವಿಲಂಬಿತ, ಧೃತ, ಅತಿಧೃತ ಮೆಟ್ಟಿಲುಗಳನ್ನು ಏರಿ ಏರಿ, ಸಂಗೀತದ ಗಂಧ ಗಾಳಿ ಇಲ್ಲದ ನನ್ನಂಥವರನ್ನು ಯಾವುದೋ ಭಾವಾವೇಶದ ಶಿಖರಕ್ಕೇರಿಸಿ, ಸಮಕ್ಕೆ ಎಳೆತರುವ ಆ ಅನುಭವ, ದಕ್ಷಿಣಾದಿಗಿಂತ ಭಿನ್ನ. ತಾಳದ ಗಣನೆ ಬುದ್ಧಿ ಗಮ್ಯವಾದರೆ, ರಾಗ, ಭಾವ, ರಸ ಹೃದಯ ಗಮ್ಯ. ದಕ್ಷಿಣಾದಿ ತಾಳ ಪ್ರಧಾನವಾದರೆ ಉತ್ತರಾದಿ ಸಂಗೀತ ಶೃತಿ, ಭಾವ ಪ್ರಧಾನ. "ತಾಲ್ ಗಯಾತೋ ಬಾಲ್ ಗಯಾ, ಸುರ್ ಗಯಾತೋ ಸಿರ್ ಗಯಾ" ಉತ್ತರದವರ ಹೇಳಿಕೆ. ನಮ್ಮ ದೈನಂದಿನ ಜಂಜಾಟದಿಂದ ಒಂದಷ್ಟು ಹೊತ್ತು ನಮ್ಮನ್ನು ರಾಗಲಹರಿಯು, ಸಮುದ್ರಯಾನ ಮಾಡಿಸಿ, ಆ ಮಧುರಾನುಭವವನ್ನು ಕೆಲವು ದಿನದ ತನಕ ಮನಸ್ಸಿನಲ್ಲಿ ಗುಂಗುನಿಸಿ–ರಮಿಸುವ ಸಂಗೀತ, ಸರಸ್ವತಿಯ ಕೃಪೆ. ದಕ್ಷಿಣಾದಿಯ ಅನುಭವ ಈಜುಕೊಳದ ಈಜಾಟ. ಉತ್ತರಾದಿಯ ಅನುಭವ ಸಮುದ್ರದಲ್ಲಿ ಈಜಿದಂತೆ. ಎಂದ ಮಾತ್ರಕ್ಕೆ ದಕ್ಷಿಣಾದಿ ಕಳಪೆ ಎಂಬರ್ಥವಲ್ಲ. ದಕ್ಷಿಣಾದಿಯಲ್ಲಿಯೂ ಮಧುರ ಗಾಯಕರಿದ್ದಾರೆ. ಆದರೆ ಅವೆರಡರ ಅನುಭವದಲ್ಲಿ ಸ್ಪಷ್ಟವಾದ ಅಂತರ ಅನುಭವದಿಂದ ಅರಿವಿಗೆ ಬಂದೀತು. ಮನಸೂರರ ಸಂಗೀತ ಅಂತಹ ಮನ ಸೂರೆಗೊಳ್ಳುವ ಸಂಗೀತ.

—ಪಾಂಡುರಂಗ ಉಡುಪ

ಸಂಚಿಕೆ ೪

ಮೇ–ಜೂನ್ 1987

ಸಂವಾದ

ಖಾಸಗೀ ಪ್ರಸಾರಕ್ಕಾಗಿ

ಸಂವಾದ ಪ್ರಕಾಶನ ಮಲ್ಲಾಡಿಹಳ್ಳಿ ಚಿತ್ರದುರ್ಗ ಜಿಲ್ಲೆ

ಈ ಸಂಚಿಕೆಯ ಲೇಖಕರು :

ರಾಜಾರಾಂ ತೋಳ್ಪಾಡಿ, ರಾಜಕೀಯ ವಿಜ್ಞಾನ ವಿಭಾಗ, ಮಂಗಳಗಂಗೋತ್ರಿ, ಕೊಣಾಜೆ, ದಕ್ಷಿಣಕನ್ನಡ ಜಿಲ್ಲೆ.

ಭರತ್ ಡೋಗ್ರ,

ಯಶವಂತ ಡೋಂಗ್ರೆ, ವಾಣಿಜ್ಯಶಾಸ್ತ್ರ ವಿಭಾಗ, ಮಂಗಳಗಂಗೋತ್ರಿ, ಕೊಣಾಜೆ, ದಕ್ಷಿಣಕನ್ನಡ ಜಿಲ್ಲೆ.

ಚಂದ್ರಭಾಗಾದೇವಿ, "ಮಹಾಮಾಯಾ", 7/2, ಪ್ಯಾಲೇಸ್ ಕ್ರಾಸ್ ರೋಡ್, ಬೆಂಗಳೂರು–560020

ಗುಂಟೂರು ಶೇಷೇಂದ್ರ ಶರ್ಮ

ಸ. ರಘುನಾಥ, ಅಧ್ಯಾಪಕ, ಗೌನಿಪಲ್ಲಿ–563135, ಶ್ರೀನಿವಾಸಪುರ ತಾ॥ ಕೋಲಾರ ಜಿಲ್ಲೆ.

ಡಾ॥ ಪುರುಷೋತ್ತಮ ಬಿಳಿಮಲೆ, ಕನ್ನಡ ಉಪನ್ಯಾಸಕ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ–574199. ದಕ್ಷಿಣಕನ್ನಡ ಜಿಲ್ಲೆ

ಅಲ್ವಿನ್ ಟಾಫ್ಲರ್,

ಸಿ. ಆರ್. ಅಣಾಜಿ, ಆಂಗ್ಲಭಾಷಾ ಉಪನ್ಯಾಸಕ, ಜೂನಿಯರ್ ಕಾಲೇಜು, ಮಲ್ಲಾಡಿಹಳ್ಳಿ–577531

ಮುಳ್ಳೂರ್ ನಾಗರಾಜ್, IV ಕ್ರಾಸ್, ಶ್ರೀರಾಮಪುರ, ನಂಜನಗೂಡು–571301

ಡಾ॥ ಬಿ. ಎನ್. ಸುಮಿತ್ರಾಬಾಯಿ, ಸಂಸ್ಕೃತ ಉಪನ್ಯಾಸಕರು, ಎ. ವಿ. ಕೆ. ಕಾಲೇಜು, ಹಾಸನ.

ಪ್ರಭುಸ್ವಾಮಿ ಮಠ, ಕನ್ನಡ ಅಧ್ಯಾಪಕರು, ಲಾಲ್‌ಬಹದ್ದೂರ್, ಕಾಲೇಜು, ಸಾಗರ–577401

ಸ. ಉಷಾ, ಕನ್ನಡ ಉಪನ್ಯಾಸಕಿ, ಹೊಯ್ಸಳೇಶ್ವರ ಪ್ರಥಮ ದರ್ಜೆ ಕಾಲೇಜು, ಅರಸೀಕೆರೆ.

ಸಂವಾದ ೪

ಈ ಸಂಚಿಕೆಯ ಸಂಪಾದಕರು :

ಸ. ಉಷಾ

Printed Published and Edited for Samvada Prakshana.
Malladihalli Post, Chitradurga Dist. 577531.

Printed at :

Sri Maruthi Printers,
Channagiri-577213
Shimoga Dist.

ಗಾಂಧಿ ಗ್ರಹಿಸಿದ ಧರ್ಮ ಮತ್ತು ರಾಜಕಾರಣ

● ರಾಜಾರಾಂ ತೋಳ್ಪಾಡಿ

ಬಿ. ಆರ್. ನಂದಾರವರ Gandhi and his critics ಎನ್ನುವ ಬರಹವನ್ನು ಓದಿದ ಹಿನ್ನೆಲೆಯಲ್ಲಿ ಗಾಂಧಿ ಬಗೆಗಿನ್ನ ನನ್ನ ಯೋಚನೆಗಳನ್ನು ಕ್ರೋಢೀಕರಿಸುವುದು ಮತ್ತು ಪುನರ್ವ್ಯವಸ್ಥೆಗೊಳಿಸುವುದು ಈ ಲೇಖನದ ಉದ್ದೇಶವಾಗಿರುತ್ತದೆ. ಆದ್ದರಿಂದ ಮೇಲೆ ಹೇಳಿದ ಪುಸ್ತಕದ ದಟ್ಟವಾದ ಪ್ರಭಾವ ಲೇಖನದುದ್ದಕ್ಕೂ ಕಾಣಿಸಿಕೊಳ್ಳುವುದು ಅನಿವಾರ್ಯವಾಗುತ್ತದೆ. ಜೊತೆಯಲ್ಲಿಯೇ ಶಂಕರ್ ಘೋಶ್‌ರ 'From Reneissance to Militant Nationalism' ಪುಸ್ತಕದ ಕೆಲವು ಭಾಗಗಳು ಮತ್ತು ಡಾ॥ ಲೋಹಿಯಾರ ಗಾಂಧಿ ವಾದದ ಪುನರ್ವ್ಯಾಖ್ಯಾನದ ಕೆಲವು ತುಣುಕುಗಳು ಅಲ್ಲಲ್ಲಿ ವ್ಯಕ್ತವಾಗುವುದನ್ನು ತಪ್ಪಿಸಲಾಗುವುದಿಲ್ಲ. ಒಟ್ಟಿನಲ್ಲಿ ಈ ಲೇಖನವನ್ನು ಗಾಂಧಿಯ ವ್ಯಕ್ತಿತ್ವ ವಿಚಾರಗಳ ಕುರಿತಾದ ಒಂದು ಸಂಕ್ಷಿಪ್ತ ಟಿಪ್ಪಣಿಯೆಂದಷ್ಟೇ ಸ್ವೀಕರಿಸಬೇಕಾಗುತ್ತದೆ.

ಗಾಂಧಿ ಬದುಕು ಬರೆಹಗಳನ್ನು ಸೂಕ್ಷ್ಮವಾಗಿ ಗಮನಿಸುವಾಗ ನಮಗೆ ಮೊದಲು ಗೋಚರವಾಗುವುದು ಅವರ ಆಳವಾದ ಅಚಲವಾದ ನೈತಿಕ – ಧಾರ್ಮಿಕ ಜೀವನ ದೃಷ್ಟಿ. ಅವರ ಬದುಕಿನ ನಿರ್ದಿಷ್ಟ ಸಂದರ್ಭಗಳಲ್ಲಿ ರೂಪುಗೊಂಡ ಈ ನೈತಿಕ ಧಾರ್ಮಿಕ ಜೀವನ ದೃಷ್ಟಿ ಅವರ ಚಿಂತನೆಯಲ್ಲಿ ಎಷ್ಟು ಆಳವಾಗಿ ಹಾಸುಹೊಕ್ಕಂತಿದೆ ಎಂದರೆ ಅವರ ಬದುಕಿನ ಕೇಂದ್ರವಾದ ರಾಜಕಾರಣವೂ ಅವರನ್ನು ಇದಿರಾಗುವುದು ಈ ನೈತಿಕ ಧಾರ್ಮಿಕ ಆಯಾಮಗಳಲ್ಲಿಯೇ. ಆದುದರಿಂದಲೇ ಗಾಂಧಿ ರಾಜಕಾರಣವನ್ನು ಸಾಮಾನ್ಯವಾಗಿ ಪಾರಮಾರ್ಥಿಕ ರಾಜಕಾರಣ ಎಂದು ವಿವರಿಸಲಾಗುತ್ತದೆ. ಗಾಂಧಿಯ ವಿಚಾರ ವ್ಯವಹಾರಗಳಲ್ಲಿ ಮೂಲಭೂತ ಪ್ರಾಧಾನ್ಯ ಪಡೆಯುವ ಈ ನೈತಿಕ ಧಾರ್ಮಿಕತೆ ತನ್ನ

ಸಂಕೀರ್ಣ ಸ್ವಭಾವದಿಂದಾಗಿ ಅವರನ್ನು ವಿಶಿಷ್ಟ ನಿರ್ಣಯಗಳನ್ನು ತೆಗೆದುಕೊಳ್ಳುವಂತೆ ಪ್ರೇರೇಪಿಸಿದೆ. ಮತ್ತು ಆ ನಿರ್ಣಯಗಳು ಅವರಿಗೆ ರಾಜಕಾರಣದಲ್ಲಿ ಮಹತ್ವದ ತಿರುವುಗಳನ್ನು ತಂದುಕೊಟ್ಟಿವೆ. ಗೋಪಾಲಕೃಷ್ಣ ಗೋಖಲೆಯವರನ್ನು ತನ್ನ ರಾಜಕೀಯ ಜೀವನದ ಗುರುವನ್ನಾಗಿ ಸ್ವೀಕರಿಸುವುದರಿಂದ ಪ್ರಾರಂಭಿಸಿ ಅಸ್ಪೃಶ್ಯತೆಯ ವಿರುದ್ಧದ ಸಾಮಾಜಿಕ ಹೋರಾಟದವರೆಗೂ ವ್ಯಾಪಕವಾಗಿ ಆಕ್ರಮಿಸಿರುವ ಗಾಂಧಿಯ ಈ ನೈತಿಕ ಧಾರ್ಮಿಕ ನಿಲುವಿನ ಸ್ವರೂಪವನ್ನು ಮತ್ತು ಅವರ ಅರ್ಥವ್ಯಾಪ್ತಿಯನ್ನು ಕೆಲವು ಉದಾಹರಣೆಗಳೊಂದಿಗೆ ವಿವರಿಸಲು ಪ್ರಯತ್ನಿಸುತ್ತೇನೆ.

ಬಹುಜನ ಬಹುಸುಖವಾದಿ ಮನೋಭಾವದ ಉದಾರವಾದಿ ವೈಚಾರಿಕತೆಯ ಗೋಖಲೆಯವರನ್ನು ಪ್ರಖರವಾದ ವೈಚಾರಿಕ ಭಿನ್ನಮತದ ನಡುವೆಯೂ ತನ್ನ ರಾಜಕೀಯ ಗುರುವನ್ನಾಗಿ ಸ್ವೀಕರಿಸಿದ ಸಂದರ್ಭದಲ್ಲಿ ಗಾಂಧಿ ಆಡಿದ ಮಾತುಗಳನ್ನು ಕೇಳಿ ಗೋಖಲೆಯವರನ್ನು ಉದಾರವಾದಿ ನಾಯಕ ಫಿರೋಜ್ ಷಾಹ ಮೆಹತಾ ಮತ್ತು ಉಗ್ರವಾದಿ ನಾಯಕ ಬಾಲಗಂಗಾಧರ ತಿಲಕರೊಂದಿಗೆ ಹೋಲಿಸುತ್ತಾ ಗಾಂಧಿ ಹೀಗೆ ಹೇಳುತ್ತಾರೆ. ''ಮೆಹತಾ ನನಗೆ ಹಿಮಾಲಯದ ಹಾಗೆ ಉನ್ನತವಾಗಿ ಕಾಣುತ್ತಾರೆ. ತಿಲಕ ಸಾಗರದ ಹಾಗೆ ಅಗಾಧವಾಗಿ ಕಾಣುತ್ತಾರೆ. ಆದರೆ ಗೋಖಲೆ ಗಂಗೆಯ ಹಾಗೆ ಪವಿತ್ರವಾಗಿ ಕಾಣುತ್ತಾರೆ. ಹಿಮಾಲಯದ ಔನ್ನತ್ಯ ಮತ್ತು ಸಾಗರದ ಅಗಾಧತೆ ನನ್ನನ್ನು ವಿಸ್ಮಿತಗೊಳಿಸುತ್ತದೆ. ಆದರೆ ಗಂಗೆಯಲ್ಲಿ ದೀರ್ಘ ಸ್ನಾನ ನನ್ನನ್ನು ಪವಿತ್ರಗೊಳಿಸುತ್ತದೆ.''

ಗೋಖಲೆಯವರ ಉಜ್ವಲವಾದ ನೈತಿಕ ವ್ಯಕ್ತಿತ್ವ ಸರಳ ಜೀವನ ಮತ್ತು ಅಹಿಂಸೆಯ ಬಗೆಗಿನ ಅವರ ಅಚಲವಾದ ನಿಷ್ಠೆ ಇವುಗಳಿಂದ ಪ್ರೇರಿತರಾಗಿ ಗಾಂಧಿ ಅವರನ್ನು ಅವರೆಲ್ಲ ವೈಚಾರಿಕ ಮಿತಿಗಳ ಮಧ್ಯೆಯೂ ತನ್ನ ಗುರುವನ್ನಾಗಿ ಸ್ವೀಕರಿಸುತ್ತಾರೆ. ತಿಲಕರ ಪ್ರಜ್ವಲವಾದ ಪುನರುತ್ಥಾನವಾದಿ ರಾಷ್ಟ್ರೀಯತೆ ಗಾಂಧಿಯನ್ನು ಅಷ್ಟಾಗಿ ಆಕರ್ಷಿಸಲಿಲ್ಲ ಎನ್ನುವುದು ಇಲ್ಲಿ ಗಮನಿಸಬೇಕಾದ ಸಂಗತಿ.

ಆಶ್ಚರ್ಯ ಎಂದರೆ ರಾಜಕಾರಣದಲ್ಲಿ ಗಾಂಧಿಗೆ ಧಾರ್ಮಿಕತೆಯ ಪ್ರಥಮ ಪಾಠ ದೊರೆತದ್ದು ಧರ್ಮ ನಿರಪೇಕ್ಷ ಗೋಖಲೆಯವರಿಂದಲೇ. ಗೋಖಲೆಯವರ ಅತ್ಯಂತ ಕಟು ಟೀಕಾಕಾರನೂ ಅವರ ಧರ್ಮ ನಿರಪೇಕ್ಷ ದೃಷ್ಟಿಯ ಸಾಚಾತನವನ್ನು ಪ್ರಶ್ನಿಸಲಾರನಾದರೂ ಇಂಡಿಯಾದಲ್ಲಿ ಪ್ರಥಮ ಬಾರಿಗೆ ರಾಜಕಾರಣದ ಆಧ್ಯಾತ್ಮೀಕರಣ (Spiritualisation of Politics) ದ ಕುರಿತು ಮೊದಲು ಮಾತನಾಡಿದವರು ಗೋಖಲೆಯವರೇ. ಧರ್ಮವನ್ನು ಧರ್ಮ ಸಂಘಟನೆ ಮತ್ತು ಧರ್ಮಾಚರಣೆಗಳಿಂದ

ಬೇರ್ಪಡಿಸಿ, ಅದನ್ನು ಕೇವಲ ನೈತಿಕತೆಯನ್ನಾಗಿ ಅರ್ಥೈಸಿಕೊಳ್ಳುವ ಗೋಖಲೆ ಈ ಆಧ್ಯಾತ್ಮೀಕರಣದ ಉದ್ದೇಶಕ್ಕಾಗಿಯೇ **Servants of India Society** ಎನ್ನುವ ಸಂಸ್ಥೆಯನ್ನು ಸ್ಥಾಪಿಸಿದರು ಮತ್ತು ಅದಕ್ಕೆ ಯುವಕ ಮೋಹನದಾಸನ ಸಹಕಾರವನ್ನು ಕೋರಿದ್ದರು. 'ಮೋಹನದಾಸನ ವಿಚಾರಗಳನ್ನು ನಾನು ಒಪ್ಪುವುದಿಲ್ಲವಾದರೂ ಭಾರತದ ರಾಜಕಾರಣದ ದಿಗಂತದಲ್ಲಿ ಈತ ಉದಯಿಸುತ್ತಿರುವ ಸೂರ್ಯನ ಹಾಗೆ ಪ್ರಕಾಶಮಾನನೂ ಉಲ್ಲಸಿತನೂ ಆಗಿ ಕಾಣುತ್ತಾನೆ.' ಎಂದು ನುಡಿದ ಗೋಖಲೆ ಗಾಂಧಿಯ ಪ್ರತಿಭೆಯನ್ನು ಆಗಲೇ ಗುರುತಿಸಿದ್ದರಾದರೂ ಅವರ**Servants of India Society** ಯಲ್ಲಿ ಗಾಂಧಿಗೆ ರಾಜಕೀಯ ಕಾರಣಕ್ಕಾಗಿಯೇ ಪ್ರವೇಶ ನಿರಾಕರಿಸಲಾಯಿತು. ಎನ್ನುವುದು ನಿಜಕ್ಕೂ ಕುತೂಹಲಕಾರಿಯಾದ ಸಂಗತಿಯಾಗಿದೆ. ಈ ಪ್ರವೇಶ ನಿರಾಕರಣೆಗೆ ಕಾರಣ ಬಹಳ ಸರಳವಾದದ್ದು. ಸಂವಿಧಾನವಾದಿ, ಉದಾರವಾದಿ, ಸಮಿತಿವಾದಿ ಗೋಖಲೆ ಮತ್ತು ಸಮುದಾಯವಾದಿ ರಾಷ್ಟ್ರೀಯವಾದಿ, ಸತ್ಯಾಗ್ರಹವಾದಿ ಗಾಂಧಿ ಪರಸ್ಪರರನ್ನು ಭೇಟಿಯಾಗುವುದು ರಾಜಕಾರಣದಲ್ಲಿ ಅಲ್ಲ. ಆಧ್ಯಾತ್ಮಿಕತೆಯಲ್ಲಿ.

ಗಾಂಧಿಯ ಆಧ್ಯಾತ್ಮಿಕತೆಯ ಗುಂಗನ್ನು ಗೇಲಿ ಮಾಡಿದವರಲ್ಲಿ ಮೊದಲಿಗರು ತಿಲಕ. 1918 ರಲ್ಲಿ ಅವರೊಮ್ಮೆ ಗಾಂಧಿಗೆ ಹೇಳಿದರು.: ರಾಜಕಾರಣ (ನಿನ್ನಂತಹ) ಸಾಧುಗಳಿಗೆ ಹೇಳಿಸಿದ್ದಲ್ಲ; ರಾಜಕಾರಣವನ್ನು 'ಉದ್ದೇಶಗಳನ್ನು ಪೂರೈಸಿಕೊಳ್ಳುವ ಕಲೆ' ಎಂದು ತಿಳಿಯುವವರಿಗೆ ಅದನ್ನು ಗೆಲ್ಲಲೆಂದೇ ಆಡುವ ಆಟ ಎಂದು ಭಾವಿಸುವವರಿಗೆ ಸಹಜವಾಗಿ ನೈತಿಕ ಪ್ರಶ್ನೆಗಳು ಗೌಣವಾಗಿ, ಉಪಯುಕ್ತತೆಯ ಪ್ರಶ್ನೆ ಪ್ರಧಾನವಾಗುತ್ತದೆ. ಆದ್ದರಿಂದಲೇ ಪುನರುತ್ಥಾನವಾದಿ ತಿಲಕರಿಂದ ಪ್ರಾರಂಭಿಸಿ ಕ್ರಾಂತಿಕಾರಿ ಸಮಾಜವಾದಿ ಎಂ. ಎನ್. ರಾಯ್‌ರ ತನಕ ಎಲ್ಲರಿಗೂ ಗಾಂಧಿಯಂತೂ ಅತಿರೇಕದ ಆದರ್ಶ ಎಂದೆನಿಸಿತ್ತು. ಹಾಗೆ ನೋಡಿದರೆ ಧರ್ಮವನ್ನು ರಾಜಕೀಯಕ್ಕೆ ಎಳೆದುತಂದವರಲ್ಲಿ ತಿಲಕರೇ ಪ್ರಮುಖರು. ಹಿಂದೂ ದೇವಾಲಯಗಳು ರಾಜಕೀಯ ಕರಾಮತ್ತಿನ ರಹಸ್ಯ ಕೇಂದ್ರಗಳಾದದ್ದು, ಹಿಂದೂ ಧಾರ್ಮಿಕ ಉತ್ಸವಗಳು ರಾಜಕೀಯ ಮೆರವಣಿಗೆಗಳಾಗಿ ಪರಿವರ್ತಿತವಾದದ್ದು ತಿಲಕರ ಕಾಲದಲ್ಲಿಯೇ. ಜನರ ಧರ್ಮ ಶ್ರದ್ಧೆಯನ್ನು ಅಷ್ಟು ವ್ಯಾಪಕವಾಗಿ ರಾಜಕೀಯಕ್ಕೆ ಬಳಸಿಕೊಂಡ ತಿಲಕರಿಗೆ ಗಾಂಧಿಯ ಪಾರಮಾರ್ಥಿಕ ರಾಜಕಾರಣ ಗಂಡಾಂತರಕಾರಿಯೆಂದೂ ಮತ್ತು ಅಂತಿಮ ಪರಿಣಾಮದಲ್ಲಿ ನಿರುಪಯುಕ್ತ ಎಂದೂ ಅನಿಸಿತ್ತು. ಗಾಂಧಿ ಮತ್ತು ತಿಲಕರ ಮಧ್ಯೆ ಇದ್ದ ದೃಷ್ಟಿಕೋನಗಳ ವೈಪರೀತ್ಯವೇ ಈ ಪರಸ್ಪರ ನಿರಾಕರಣೆಗೆ ಅಪನಂಬಿಕೆಗೆ ಕಾರಣವಾಯಿತು ಎನ್ನಬಹುದು. ತಿಲಕರು ರಾಜಕಾರಣಕ್ಕಾಗಿ ಧರ್ಮವನ್ನು ಬಳಸಿಕೊಂಡರೆ ಗಾಂಧಿ ಧಾರ್ಮಿಕತೆಗಾಗಿ ರಾಜಕಾರಣವನ್ನು ಉಪಯೋಗಿಸಿಕೊಂಡರು. ತಿಲಕರಿಗೆ ರಾಜಕಾರಣ ತನ್ನಲ್ಲಿಯೇ

ಒಂದು ಧರ್ಮವಾಗಿದ್ದರೆ ಗಾಂಧಿಗೆ ಅದು ಧರ್ಮ ಸ್ಥಾಪನೆಯ ಒಂದು ಪ್ರಧಾನ ಅಸ್ತ್ರವಷ್ಟೇ. ಗಾಂಧಿ ಮತ್ತು ತಿಲಕರ ದೃಷ್ಟಿಕೋನದ ಈ ಮೂಲಭೂತ ವ್ಯತ್ಯಾಸವೇ ಅವರನ್ನು ಬೇರೆಯಾಗಿಸಿತ್ತು. ಆದ್ದರಿಂದಲೇ ಗಾಂಧಿ ತನ್ನ ಅಹಿಂಸಾತ್ಮಕ ಸತ್ಯಾಗ್ರಹದ ಪರಿಕಲ್ಪನೆ ತಿಲಕರ Passive Resistance ಗಿಂತ ಮೇಲ್ನೋಟದ ಸಾಮ್ಯದ ಹೊರತಾಗಿಯೂ ಸಂಪೂರ್ಣವಾಗಿ ಬೇರೆಯಾದದ್ದು ಎಂದು ಸಾರ್ವಜನಿಕವಾಗಿ ಮತ್ತೆ ಮತ್ತೆ ಸ್ಪಷ್ಟ ಪಡಿಸಬೇಕಾಯಿತು. ತನ್ನ ಆಧ್ಯಾತ್ಮಿಕ ಸೆಳೆತಗಳ ಬೇರುಗಳನ್ನು ಗಾಂಧಿ ವಿಭಿನ್ನ ಮೂಲಗಳಲ್ಲಿ ಕಂಡುಕೊಳ್ಳುತ್ತಾರೆ. ಹಿಂದೂ ಹಿನ್ನೆಲೆಯ ತನ್ನ ತಾಯಿಯ ಅನೌಪಚಾರಿಕ ಧರ್ಮ, ಭಗವದ್ಗೀತೆಯ ಕ್ರಿಯೆಯನ್ನು ಪ್ರಚೋದಿಸುವ ಧರ್ಮ ದೃಷ್ಟಿ, ಕ್ರಿಶ್ಚಿಯಾನಿಟಿಯ ಸಮಾಜ ಧರ್ಮ, ಟಾಲ್‌ಸ್ಟಾಯ್, ರಸ್ಕಿನ್ ಮೊದಲಾದವರ ಮಾನವತಾವಾದಿ ಧಾರ್ಮಿಕತೆ ಇವು ಗಾಂಧಿ ಧರ್ಮದ ಪ್ರಧಾನ ಪ್ರೇರಣೆಗಳು ಎನಿಸಿಕೊಳ್ಳುತ್ತವೆ. ಆದ್ದರಿಂದಲೆ ಸಮುದಾಯ ಸೇವೆ ಮತ್ತು ಮಾನವತಾವಾದಗಳ ಮೂಲ ಆಶಯಗಳಲ್ಲಿ ರೂಪುಗೊಳ್ಳುವ ತನ್ನ ಧರ್ಮವನ್ನು ಗಾಂಧಿ ಸಂವೇದನೆಯಲ್ಲಿ ಅದು ಹೆಚ್ಚು ಕ್ರಿಶ್ಚಿಯನ್ ಆಗಿದೆ ಎಂದು ಗ್ರಹಿಸಿಕೊಂಡದ್ದು. ಹಾಗಾಗಿಯೇ ಆತ್ಮ ನಿಷ್ಠ ಅನುಭಾವಿ ರಮಣ ಮಹರ್ಷಿ ಗಾಂಧಿ ಸಾಮುದಾಯಿಕತೆಯಲ್ಲಿ ಕರಗಿ ಹೋದ ಹತಭಾಗ್ಯ ಎಂದು ವಿಷಾದಿಸಿದ್ದು; ಆದರೂ ಬಿ. ಆರ್. ನಂದಾ ಬರೆಯುವ ಹಾಗೆ ಗಾಂಧಿ ಕಾವಿ ತೊಟ್ಟು, ಗಡ್ಡ ಬಿಟ್ಟು ಹಿಮಾಲಯದ ಕಡೆ ಮುಖ ಮಾಡಿ ನಿಲ್ಲುವ ಭಾರತದ ಸಂತ ಪರಂಪರೆಯಲ್ಲಿ ಒಂದು ಸುಂದರ ಅಚ್ಚರಿಯಾಗಿ ಕಾಣುತ್ತಾರೆ.

ಧರ್ಮ ಮತ್ತು ರಾಜಕೀಯ ಗಾಂಧಿಯ ದೃಷ್ಟಿಯಲ್ಲಿ ಒಂದೇ ಅಸ್ತಿತ್ವದ ಎರಡು ಬೇರ್ಪಡಿಸಲಾಗದ ಪ್ರಕ್ರಿಯೆಗಳು. ಧರ್ಮ ದೀರ್ಘ ಕಾಲದಲ್ಲಿ ತನ್ನ ವೈಶಾಲ್ಯದಲ್ಲಿ ಸಾಧಿಸುವುದನ್ನು ರಾಜಕೀಯ ಅಲ್ಪಕಾಲದಲ್ಲಿ, ತನ್ನ ಸಂಕುಚಿತತೆಯಲ್ಲಿ ಸಾಧಿಸುತ್ತದೆ. ಅಂದರೆ ಒಂದೇ ನೈತಿಕ ಹೊಣೆಗಾರಿಕೆಯನ್ನು ಧರ್ಮ ಮತ್ತು ರಾಜಕೀಯ ಎರಡು ವಿಭಿನ್ನ ಸ್ತರಗಳಲ್ಲಿ ನಿರ್ವಹಿಸುತ್ತವೆ. ಧರ್ಮ ಒಳ್ಳೆಯದನ್ನು ಮಾಡುವ, ಒಳ್ಳೆಯದನ್ನು ಪ್ರಚೋದಿಸುವ ಪ್ರಕ್ರಿಯೆಯಾದರೆ. ರಾಜಕೀಯ ಕೆಟ್ಟದ್ದನ್ನು ವಿರೋಧಿಸುವ, ಮತ್ತು ಕೆಟ್ಟದ್ದನ್ನು ನಿಗ್ರಹಿಸುವ ಪ್ರಕ್ರಿಯೆ. ಅಂದರೆ ಲೋಹಿಯಾ ವ್ಯಾಖ್ಯಾನಿಸುವಂತೆ ಗಾಂಧಿಗೆ ಧರ್ಮ ದೀರ್ಘಕಾಲದ ರಾಜಕೀಯ ಮತ್ತು ರಾಜಕೀಯ ಅಲ್ಪ ಕಾಲದ ಧರ್ಮವಾಗಿರುತ್ತದೆ. ಗಾಂಧಿ ಧರ್ಮದ ಈ ತರಹದ ಸೂಕ್ಷ್ಮ ರಾಜಕೀಯ ಅಂಶಗಳನ್ನು ತನ್ನ ನಂತರದ ದಿನಗಳಲ್ಲಿ ಗುರುತಿಸಿಕೊಂಡ ಎಂ. ಎನ್. ರಾಯ್ "ಗಾಂಧಿಯನ್ನು ನಾನು ತಪ್ಪಾಗಿ ಅರ್ಥಮಾಡಿಕೊಂಡಿದ್ದೆ. ಅವರದು ನಿಜಕ್ಕೂ ಒಂದು ಮಾನವತಾವಾದಿ ಜಾಗತಿಕ ದೃಷ್ಟಿಕೋನವಾಗಿದೆ." ಎಂದು ಉದ್ಗರಿಸುತ್ತಾರೆ.

ಗಾಂಧಿ ದೃಷ್ಟಿಯಲ್ಲಿ ಪರಕೀಯ ಆಳ್ವಿಕೆ ರಾಜಕೀಯ, ಆರ್ಥಿಕ ಸಾಮಾಜಿಕ ಮತ್ತು ಸಾಂಸ್ಕೃತಿಕ ದಬ್ಬಾಳಿಕೆ ಎನ್ನುವುದಕ್ಕಿಂತಲೂ ಮುಖ್ಯವಾಗಿ ಅದು ಒಂದು ಅಧಾರ್ಮಿಕ ಸ್ಥಿತಿ. ಗಾಂಧಿಯಲ್ಲಿ ಅಧಾರ್ಮಿಕವಾದದ್ದು ಅನೈತಿಕ ಎಂದೆನಿಸಿಕೊಳ್ಳುತ್ತದೆ. ಅನೈತಿಕವಾದದ್ದು ಅಸತ್ಯ ಎಂದೆನಿಸಿಕೊಳ್ಳುತ್ತದೆ. ಆದ್ದರಿಂದಲೇ ಗಾಂಧಿಯ ರಾಜಕಾರಣ ಪರಕೀಯ ಆಳ್ವಿಕೆಯ ಅಸತ್ಯದ ಸ್ಥಿತಿಗೆ ವಿರುದ್ಧವಾಗಿ ಸತ್ಯವನ್ನು ಆಗ್ರಹಿಸುವಂತಾದ್ದು. ಅಸತ್ಯದ ವಿರುದ್ಧ ಸತ್ಯಕ್ಕಾಗಿ ಆಗ್ರಹ ಅಂದರೆ ಸತ್ಯಾಗ್ರಹ. ಇಲ್ಲಿ ಎದುರಾಳಿಯನ್ನು ಸದೆ ಬಡಿಯುವ ಉದ್ದೇಶವಿಲ್ಲ. ಅವನನ್ನು ನೈತಿಕವಾಗಿ ಗೆದ್ದುಕೊಳ್ಳುವ, ಸಾಧ್ಯವಾದರೆ, ಅವನ ಮನವನ್ನು ಪರಿವರ್ತಿಸುವ ಉದ್ದೇಶವಿದೆ. ಇಲ್ಲವಾದರೆ ಆತ್ಮಾಹುತಿಯ ಧಾರ್ಮಿಕ ಫಲವಿದೆ. ಗಾಂಧಿ ಹೋರಾಟದ ಗರ್ಭದಿಂದ ಉದಿಸಿದ ಹಿಂದೀ ಹಾಡೊಂದು ಬ್ರಿಟಿಷ್ ಅಧಾರ್ಮಿಕ ಆಳ್ವಿಕೆಯ ವಿರುದ್ಧ ಸೆಟೆದು ನಿಂತು ಹೀಗೆ ಹಾಡುತ್ತದೆ: "ನಿನ್ನ ಛಡಿ ಏಟುಗಳು ನನ್ನನ್ನು ಬಾಗಿಸುತ್ತಿವೆ. ದಯವಿಟ್ಟು ತಪ್ಪು ತಿಳಿಯಬೇಡ. ನಾನು ನಿನಗೆ ಬಗ್ಗಿ ವಂದಿಸುತ್ತಿದ್ದೇನೆ ಎಂದು; ನಿನ್ನ ರಾಕ್ಷಸ ಹೊಡೆತಗಳು ನನ್ನ ದೇಹವನ್ನು ಕಂಗೆಡಿಸುತ್ತಿರುವುದು ನಿಜವಾದರೂ ನನ್ನ ಆತ್ಮದ ಪ್ರತಿಯೊಂದು ಕಣವೂ ನೀನು ನೈತಿಕವಾಗಿ ಹಂತ ಹಂತವಾಗಿ ಕುಸಿಯುತ್ತಿರುವುದನ್ನು ಕಂಡು ಮರುಕಗೊಳ್ಳುತ್ತಿದೆ." ಸತ್ಯಾಗ್ರಹ ಹೋರಾಟದ ಈ ಹಾಡು ಗಾಂಧಿ ರಾಜಕಾರಣದ ಧಾರ್ಮಿಕ ಸ್ವರೂಪವನ್ನು ಸುಂದರವಾಗಿ ಅನಾವರಣಗೊಳಿಸುತ್ತದೆ.

ಗಾಂಧಿಯ ಈ ನೈತಿಕ–ಧಾರ್ಮಿಕ ರಾಜಕಾರಣದ ಪರಿಕಲ್ಪನೆಗೆ ಇನ್ನೊಂದು ಮಹತ್ವದ ಆಯಾಮವಿದೆ. ಅದು ರಾಜಕಾರಣದಲ್ಲಿ ಸಮುದಾಯದ ಭಾಗವಹಿಸುವಿಕೆಗೆ ಸಂಬಂಧಿಸಿದ್ದು. ಗುರು ಗೋಖಲೆಗೆ ರಾಜಕಾರಣ ಅಂತಿಮವಾಗಿ ನೈತಿಕವಾಗುವುದು ಅದು ಸಮಿತಿ ನಿಷ್ಠವಾಗಿದ್ದಾಗ; ಗಾಂಧಿಗೆ ರಾಜಕಾರಣ ನೈತಿಕವಾಗುವುದು, ಸಮುದಾಯದ ನೇರ ಹಾಗೂ ನಿರ್ಣಯದ ಭಾಗವಹಿಸುವಿಕೆಯಿಂದ. ಗಾಂಧಿ ರಾಜಕಾರಣ ಕಾಂಗ್ರೆಸ್ ರಾಷ್ಟ್ರೀಯ ಹೋರಾಟದ ಚರಿತ್ರೆಯಲ್ಲಿ ವೈಶಿಷ್ಟ್ಯಪೂರ್ಣ ಸ್ಥಾನ ಪಡೆದುಕೊಳ್ಳುವುದು, ಅವರ ಈ ಸಾಮುದಾಯಿಕ ಆಯಾಮದಿಂದಲೇ. ತಿಲಕ್ ಮತ್ತು ಅವರ ಉಗ್ರಗಾಮಿ ಸ್ನೇಹಿತರು ಸಮುದಾಯದ ಭಾಗವಹಿಸುವಿಕೆಯ ಕುರಿತಂತೆ ಉತ್ಸುಕತೆಯ ಮಾತುಗಳನ್ನಾಡಿದ್ದರೂ ಕಾಂಗ್ರೆಸ್ ರಾಷ್ಟ್ರೀಯ ಹೋರಾಟ ಉಗ್ರಗಾಮಿಗಳ ಕೇಂದ್ರ ಸ್ಥಾನಗಳಾದ ಮಹಾರಾಷ್ಟ್ರ ಮತ್ತು ಬಂಗಾಲಗಳಲ್ಲಿಯೂ ಮೇಲು ಜಾತಿಯ, ಮೇಲು ವರ್ಗದ ಕೂಡುವಿಕೆಯಾಗಿಯೇ ಉಳಿದಿತ್ತು. ಈ ಸೀಮಿತ ಹೋರಾಟವನ್ನು ಗಾಂಧಿ ತನ್ನ ನಿರ್ಣಾಯಕ ಮಧ್ಯಪ್ರವೇಶದಿಂದಾಗಿ ಹೆಚ್ಚು ಹೆಚ್ಚು ಸಾಮುದಾಯಿಕಗೊಳಿಸಿದರು. ತನಗೆ ನೈತಿಕವಾಗಿ ಸರಿ ಕಂಡದ್ದನ್ನು ತತ್‌ಕ್ಷಣದ ತುರ್ತಿನಲ್ಲಿ ಪರಿಪಾಲಿಸುವ ಆದರ್ಶವಾದಿ ಕನಸುಗಾರ ಗಾಂಧಿ ಸಮುದಾಯದ ಭಾಗವ

ಹಿಂಸೆಯ ಪ್ರಶ್ನೆ ಬಂದಾಗ ಆಶ್ಚರ್ಯಕರವಾದ ರೀತಿಯಲ್ಲಿ ವಾಸ್ತವವಾದಿ ಎನಿಸಿಕೊಳ್ಳುತ್ತಾರೆ. ಸತ್ಯಾಗ್ರಹದ ನೇರ ಹೋರಾಟದಲ್ಲಿ ಭಾಗವಹಿಸಲಾರದ, ಸೆರೆಮನೆಯ ಕರಾಳ ಬದುಕನ್ನು ಎದುರಿಸಲಾರದ, ಪೋಲೀಸರ ಬೂಟಿನ ಒದೆತಗಳನ್ನು ತಾಳಿಕೊಳ್ಳಲಾರದ ಅಸಂಖ್ಯಾತ ಭಾರತೀಯರಿಗೆ ಗಾಂಧಿ ಹೇಳಿದರು, 'One step enough for me' ಎಂದು. ಅಪಾರವಾದ ಮಿತಿಗಳ ಮಧ್ಯೆ ಬದುಕುವ ಭಾರತೀಯರ ಸಂಕಷ್ಟಗಳನ್ನು ಅರ್ಥಮಾಡಿಕೊಂಡಿದ್ದ ಗಾಂಧಿ, ಅವರಿಂದ ಬಯಸಿದ್ದು ಅವರ ಸೀಮಿತ ಬದುಕಿನಲ್ಲಿ ಅವರಿಗೆ ಸಾಧ್ಯವಾಗಬಹುದಾದ ಒಂದೇ ಒಂದು ಹೆಜ್ಜೆಯನ್ನು. ಆದುದರಿಂದಲೇ ಗಾಂಧಿ ರಾಜಕಾರಣದಲ್ಲಿ ಸತ್ಯಾಗ್ರಹದ ನೇರ ಭಾಗವಹಿಸುವಿಕೆಯಷ್ಟೇ ಪ್ರಮುಖವಾದದ್ದು, ಖಾದಿ ತೊಡುವುದು, ಚರಕದಿಂದ ನೂಲು ತೆಗೆಯುವುದು, ಅಹಿಂಸೆಯನ್ನು ಆಚರಿಸುವುದು ಇತ್ಯಾದಿ. ಇದು ಅಶಕ್ತರಾದ ಜನರನ್ನು ಬೇರೆ ಬೇರೆ ಸ್ತರಗಳಲ್ಲಿ ಹೋರಾಟದ ರಾಜಕಾರಣದಲ್ಲಿ ಭಾವುಕವಾಗಿ ಒಂದುಗೂಡಿಸುವ ಗಾಂಧಿ ರಾಜಕಾರಣದ ವೈಖರಿ.

ಗಾಂಧಿ ರಾಜಕಾರಣದ ಬೇರ್ಪಡಿಸಲಾಗದ ಭಾಗದಂತಿರುವ ಅಸ್ಪೃಶ್ಯತೆಯ ವಿರುದ್ಧದ ಸಾಮಾಜಿಕ ಹೋರಾಟವು ಗಾಂಧಿ ವಾದದ ಪಾರಮಾರ್ಥಿಕ ಸೆಳೆತಗಳನ್ನು ಸ್ಪಷ್ಟವಾಗಿ ಬಿಂಬಿಸುತ್ತದೆ. ಗಾಂಧಿ ಒಮ್ಮೆ ಪ್ರಸಿದ್ಧ ಸಂಸ್ಕೃತ ವಿದ್ವಾಂಸರನ್ನು ಕೇಳಿದರು. 'ಧರ್ಮಶಾಸ್ತ್ರಗಳು ಅಸ್ಪೃಶ್ಯತೆಯನ್ನು ಮಾನ್ಯ ಮಾಡುತ್ತವೆಯೇ' ಎಂದು. ಅದಕ್ಕೆ ಆತ ಹೀಗೆ ಉತ್ತರಿಸಿದ. 'ಧರ್ಮಾಚರಣೆಯ ಸಾಮಾಜಿಕ ಹಿನ್ನೆಲೆಯನ್ನು ಗಣನೆಗೆ ತೆಗೆದುಕೊಳ್ಳುವುದಾದರೆ ಅಸ್ಪೃಶ್ಯತೆ ಹಿಂದೂ ಧರ್ಮದ ಅವಿಭಾಜ್ಯ ಅಂಗವಾಗಿರುತ್ತದೆ.' ತನ್ನನ್ನು ಯಾವತ್ತೂ ಹಿಂದೂ ಎಂದು ಕರೆದುಕೊಳ್ಳಲು ಹೆಮ್ಮೆ ಪಡುವ ಗಾಂಧಿ ಆಗ ಹೀಗೆ ನಿರ್ಧರಿಸುತ್ತಾರೆ. 'ಧರ್ಮ ಶಾಸ್ತ್ರಗಳು ಅಸ್ಪೃಶ್ಯತೆಯನ್ನು ಮಾನ್ಯ ಮಾಡುವುದಿಲ್ಲ ಎಂದಾದರೆ ನಾನು ನನ್ನ ಹೋರಾಟಕ್ಕೆ ಅವುಗಳ ಸಹಾಯವನ್ನು ಪಡೆದುಕೊಳ್ಳುತ್ತೇನೆ. ಹಾಗಲ್ಲವೆಂದಾದರೆ ಧರ್ಮ ಶಾಸ್ತ್ರಗಳ ಸಹಾಯವಿಲ್ಲದೆಯೇ ನನ್ನ ಹೋರಾಟವನ್ನು ಮುಂದುವರಿಸುತ್ತೇನೆ.' ಅಂದರೆ ಗಾಂಧಿಯಲ್ಲಿ ಧಾರ್ಮಿಕತೆ ಮತ್ತು ನೈತಿಕತೆಯ ನಡುವೆ ಸಂಘರ್ಷವಿರಲು ಸಾಧ್ಯವಿಲ್ಲ. ಸಂಘರ್ಷವಿದೆ ಎಂದಾದರೆ ಗಾಂಧಿ ನೈತಿಕತೆಗಾಗಿ ಧಾರ್ಮಿಕತೆಯನ್ನು ತ್ಯಜಿಸುತ್ತಾರೆ.

ರಾಜಕೀಯ ಸ್ವಾತಂತ್ರ್ಯ ಮತ್ತು ಸಾಮಾಜಿಕ ನ್ಯಾಯದ ಆಶಯಗಳನ್ನು ತನ್ನ ಪಾರಮಾರ್ಥಿಕ ರಾಜಕಾರಣದಲ್ಲಿ ಒಳಗೊಳಿಸುವ, ದಮನಕಾರಿಯಾಗಿ ಬೆಳೆಯುತ್ತಿರುವ ಪ್ರಭುತ್ವದ ಶಕ್ತಿಯ ವಿರುದ್ಧ ವಿಕೇಂದ್ರೀಕರಣದ ಸ್ವರಾಜ್ಯ, ಔದ್ಯೋಗೀಕರಣದ ಕೇಂದ್ರೀಕೃತ ಉತ್ಪಾದನಾ ವ್ಯವಸ್ಥೆಯ ವಿರುದ್ಧ ಗ್ರಾಮ ಸ್ವರಾಜ್ಯ ಮತ್ತು

ಗ್ರಾಮೋದ್ಯೋಗಗಳ ಕನಸು ಕಾಣುವ, ಯಂತ್ರ ನಾಗರೀಕತೆಯ ಲೋಲುಪತೆಗೆ ಮಾನವ ಕೇಂದ್ರೀಕೃತ ನಾಗರಿಕತೆಯತ್ತ ಕಣ್ಣು ಹಾಯಿಸುವ ಅರಾಜಕತಾವಾದಿ ಗಾಂಧಿ ಯಾಕೆ ಇವತ್ತು ನಮಗೆ ಅಪ್ರಸ್ತುತರೆನಿಸಿಕೊಳ್ಳುತ್ತಾರೆ.? ಈ ಕುರಿತು ಕೆಲವು ವಿವರಣೆಗಳನ್ನು ಮಾತ್ರ ಕೊಡಬಹುದು. ಗಾಂಧಿಯ ಆದರ್ಶ ರಾಜ್ಯದ ಕಲ್ಪನೆ ತನ್ನೆಲ್ಲ ಸಂಕೀರ್ಣತೆಯ ಹೊರತಾಗಿಯೂ ಚಾರಿತ್ರಿಕ ಪ್ರಕ್ರಿಯೆಯ ಅರಿವಿಲ್ಲದೆ ನಿರ್ವಾತದಲ್ಲಿ ಕಲ್ಪಿಸಲ್ಪಟ್ಟಿತ್ತು. ಸ್ವಾತಂತ್ರ್ಯ ಹೋರಾಟದ ರಾಜಕಾರಣವನ್ನು ವಾಸ್ತವವಾದಿ ಆದರ್ಶದ ಸೆರೆಯಲ್ಲಿ ರೂಪಿಸಿಕೊಂಡ ಗಾಂಧಿ ತನ್ನ ರಾಮರಾಜ್ಯದ ಕಲ್ಪನೆಯಲ್ಲಿ ಸಂಪೂರ್ಣವಾಗಿ ಯುಟೋಪಿಯನ್ (Utopian) ಎಂದೆನಿಸಿಕೊಳ್ಳುತ್ತಾರೆ. ಪರಿಪೂರ್ಣತೆಯ ಬಗೆಗಿನ ಅವರ ಅಪಾರವಾದ ಮಮತೆಯೇ ಅವರನ್ನು ಸದ್ಯದ ಬದುಕಿನ ಕಟು ವಾಸ್ತವಿಕತೆಗೆ ಬೆನ್ನು ಹಾಕುವಂತೆ ಮಾಡಿದೆ. ಕೊನೆಗೂ ಬಂಡವಾಳಶಾಹಿಯ ಪುರೋಭಿವೃದ್ಧಿ ನಡಿಗೆಯ ಕುರಿತಾದ ಕಾರ್ಲ್‌ಮಾರ್ಕ್ಸ್‌ನ ಭವಿಷ್ಯವಾಣಿ ನಿಜವಾಗಿ ಗಾಂಧಿಯಂತಹ ಆದರ್ಶವಾದಿಗಳ ಯಂತ್ರನಾಗರೀಕತೆಯ ವಿರುದ್ಧದ ಹೋರಾಟ 'ವಾಸ್ತವ'ದ ಸ್ಪರ್ಶವಿಲ್ಲದೆ ಚಾರಿತ್ರಿಕವಾಗಿ ದುರ್ಬಲ ಎನಿಸಿಕೊಳ್ಳುತ್ತದೆ. ನೆಹರೂರವರ 'ವಾಸ್ತವ ಪ್ರಜ್ಞೆ' ಗಾಂಧಿಯ ಆದರ್ಶ ಪ್ರಜ್ಞೆಯನ್ನು ಗೆದ್ದು ಮುನ್ನಡೆದದ್ದು ಅತ್ಯಂತ ಕಟುವಾದ ಚಾರಿತ್ರಿಕ ಸತ್ಯ. ಆದ್ದರಿಂದ ಗಾಂಧಿಯನ್ನು ನಮ್ಮ ಕಾಲಕ್ಕೆ ಸಂಗತಗೊಳಿಸಬೇಕಾದರೆ ಅವರ ತತ್ವ ಚಿಂತನೆಗಳನ್ನು ಅತ್ಯಂತ ವ್ಯಾಪಕವಾದ ಕಟು ವಿಮರ್ಶೆಗೆ ಒಳಪಡಿಸಬೇಕಾಗುತ್ತದೆ. ಗಾಂಧಿವಾದದ ಸೋಲನ್ನು ನೆಹರೂವಾದದ 'ಗೆಲುವಿ'ನೊಂದಿಗೆ ಮುಖಾಮುಖಿಗೊಳಿಸುವ ಮೂಲಕ ಚರಿತ್ರೆಯ ಬೆಳಕಿನಲ್ಲಿ ಗಾಂಧೀ ವಾದದ ಅರ್ಥವಂತಿಕೆಯನ್ನು ನಿಷ್ಕರ್ಷಿಸುವ ಮೂಲಕ ಬದಲಾದ ಪರಿಸ್ಥಿತಿಯಲ್ಲಿ ಹೊಸ ಗ್ರಹೀತಗಳನ್ನು ಅವರ ಚಿಂತನ ಪ್ರಪಂಚದೊಂದಿಗೆ ಬೆಸೆಯುವ ಮೂಲಕ ನಾವು ಗಾಂಧಿಯನ್ನು ನಮಗೆ ಪ್ರಸ್ತುತ ಪಡಿಸಿಕೊಳ್ಳಬೇಕಾಗಿದೆ.

'ಬಸ್ತಾರ್' ನ ಅರಣ್ಯಾಭಿವೃದ್ಧಿ ಕಾರ್ಯಕ್ರಮ.

● ಭರತ್ ಡೋಗ್ರ/ಯಶವಂತ ಡೋಂಗ್ರೆ

ಜಾಗತಿಕ ಬ್ಯಾಂಕಿನ ಅಭಿವೃದ್ಧಿ ಕಾರ್ಯಕ್ರಮಗಳ ದೃಷ್ಟಿಕೋನ ಮತ್ತು ಅಂತಹ ಕಾರ್ಯಕ್ರಮಗಳಿಂದಾಗಬಹುದಾದ ಪರಿಣಾಮದ ಪರಿಚಯ ಮಾಡಿಕೊಳ್ಳಲು ನಾವೀಗ ಮಧ್ಯಪ್ರದೇಶದ ಬಸ್ತಾರ್ ಜಿಲ್ಲೆಯತ್ತ ಗಮನಹರಿಸೋಣ. ಈ ಪ್ರದೇಶದಲ್ಲಿನ ಜನಸಂಖ್ಯೆಯು ಬಹುಭಾಗ ನೈಸರ್ಗಿಕ ಅರಣ್ಯಗಳನ್ನೇ ಅವಲಂಬಿಸಿ ಬದುಕುತ್ತಿರುವ ಬುಡಕಟ್ಟು ಜನಾಂಗದವರದ್ದಾಗಿದ್ದು, ಇಲ್ಲಿಯ ಸಾಲ್ (Sal) ಮರದ ಅರಣ್ಯಗಳು ನಾಶವಾಗದೇ ಉಳಿದುಕೊಂಡು ಬಂದದ್ದರಿಂದ, ಅಭಿವೃದ್ಧಿ ಪರಿಣಿತರೆಲ್ಲ ಇಲ್ಲಿಯ ಬೆಳವಣಿಗೆಗಳನ್ನು ಆಸಕ್ತಿಯಿಂದ ಗಮನಿಸುತ್ತ ಬಂದಿದ್ದಾರೆ.

ತಮ್ಮ ಪಾಡಿಗೆ ತಾವಿದ್ದ ಜನ ಮತ್ತು ಅರಣ್ಯಗಳ ಮೇಲೆ ಸರಕಾರ ಮತ್ತು ಅಂತರ ರಾಷ್ಟ್ರೀಯ ಅಭಿವೃದ್ಧಿ ಸಂಸ್ಥೆಗಳ ಗೃಧ್ರದೃಷ್ಟಿ ಬೀಳುವುದು ತಡವಾಗಲಿಲ್ಲ. ಭಾರತ ಸರಕಾರದ ಬೇಡಿಕೆಯನ್ವಯ 1973 ರಲ್ಲಿ FAO/SIDA ದ ತಂಡವೊಂದು ಈ ಪ್ರದೇಶಕ್ಕೆ ಭೇಟಿ ನೀಡಿತು. ಈ ತಂಡವು ತನ್ನ ಸಮೀಕ್ಷೆಯಲ್ಲಿ ಬಸ್ತಾರ್‌ನ ಜಗದ್‌ಪುರದ ಆಸುಪಾಸಿನ ಮುನ್ನೂರ ಐವತ್ತು ಚದರ ಕಿ. ಮೀ. ಪ್ರದೇಶವು, ನಿತ್ಯಹಸುರಿನ ಪೈನ್ (Pine - ಪೀತದಾರು) ಮರಗಳನ್ನು ಬೆಳೆಯಲು ಎಲ್ಲ ರೀತಿಯಿಂದಲೂ ಉತ್ಕೃಷ್ಟವಾದುದು ಎಂದು ಅಭಿಪ್ರಾಯ ಪಟ್ಟಿತು. ಈ ಸಮೀಕ್ಷೆಯ ಆಧಾರದ ಮೇಲೆ ಮಧ್ಯಪ್ರದೇಶ ಸರಕಾರದ ಅರಣ್ಯ ಇಲಾಖೆ 'ಅಭಿವೃದ್ಧಿ ಯೋಜನೆ'ಯೊಂದನ್ನು ಸಿದ್ಧಪಡಿಸಿ ಜಾಗತಿಕ ಬ್ಯಾಂಕಿಗೆ ಸಲ್ಲಿಸಿತು. 1974 ರಲ್ಲಿ ಈ ಸ್ಥಳವನ್ನು ಸಂದರ್ಶಿಸಿದ ಜಾಗತಿಕ ಬ್ಯಾಂಕಿನ ಸಮೀಕ್ಷಾ ತಂಡ ಹಾಗೂ 1975 ರಲ್ಲಿ ಭೇಟಿ ಇತ್ತ ಪೂರ್ವಭಾವೀ ನಿಯೋಗಗಳು, ಬಸ್ತಾರ್ ಪ್ರದೇಶದಲ್ಲಿನ ನೈಸರ್ಗಿಕ ಸಾಲ್ ಅರಣ್ಯಗಳ

ಜಾಗದಲ್ಲಿ Pine ಮರಗಳನ್ನು ಬೆಳೆಯುವ, ರಫ್ತು ಉದ್ದೇಶ ಹೊಂದಿದ Pulp ಮತ್ತು Timber ಕಾರ್ಖಾನೆಗಳನ್ನು ಸ್ಥಾಪಿಸುವ ಮತ್ತು ಆ ಪ್ರದೇಶದ ಇತರ ಕೈಗಾರಿಕಾ ಸಾಧ್ಯತೆಗಳ ಸಮಗ್ರ ಅಧ್ಯಯನವೊಂದನ್ನು ನಡೆಸುವ ಶಿಫಾರಸು ಮಾಡಿದವು. ಈ ಶಿಫಾರಸುಗಳ ಆಧಾರದಲ್ಲಿ ಅಭಿವೃದ್ಧಿ ಯೋಜನೆಯೊಂದನ್ನು ಸಿದ್ಧಪಡಿಸಿ ಅದಕ್ಕೆ "ಮಧ್ಯಪ್ರದೇಶ ಅರಣ್ಯ ತಾಂತ್ರಿಕ ಸಹಾಯ ಯೋಜನೆ" (Madhya Pradesh Forestry Technical Assistance Project – MPFTAP) ಎಂದು ನಾಮಕರಣ ಮಾಡಲಾಯ್ತು. 1975 ರ ಡಿಸೆಂಬರ್‌ನಲ್ಲಿ ಅಂತರರಾಷ್ಟ್ರೀಯ ಅಭಿವೃದ್ಧಿ ಸಂಸ್ಥೆ (IDA) ಈ ಯೋಜನೆಗೆ ಧನ ಸಹಾಯ ನೀಡಲು ಸಮ್ಮತಿಸುವುದರೊಂದಿಗೆ, ಇದು ಜಾಗತಿಕ ಬ್ಯಾಂಕಿನ ನೆರವು ಪಡೆದ ಭಾರತದ ಪ್ರಥಮ ಅರಣ್ಯಯೋಜನೆಯಾಯ್ತು. 'ಸ್ಥಳೀಯ ಅರಣ್ಯ ಸಂಪನ್ಮೂಲಗಳ ಸಮಗ್ರ ಬಳಕೆ ಸಾಧ್ಯವಾಗಬಲ್ಲ' ಕೈಗಾರಿಕೆಗಳನ್ನು ಸ್ಥಾಪಿಸುವ ಸಾಧ್ಯತೆಗಳ ಸಮೀಕ್ಷೆ ನಡೆಸುವ ಕೆಲಸವನ್ನು Sandwell Management Consultants Ltd. (Canada) ಎಂಬ ವಿದೇಶಿ ಕಂಪನಿಯೊಂದಕ್ಕೆ ವಹಿಸಿಕೊಡಲಾಯ್ತು.

Pine ತೋಟಗಳನ್ನು ಬೆಳೆಸುವಲ್ಲಿನ ಸಮಸ್ಯೆಗಳು ಮತ್ತು ಅದರ ಪರಿಣಾಮಗಳತ್ತ ಗಮನಹರಿಸುವ ಮೊದಲು ನಾವು, ಸ್ಥಳೀಯ ಬುಡಕಟ್ಟು ಜನಾಂಗದವರು ಹೇಗೆ ನೈಸರ್ಗಿಕ 'ಸಾಲ್' ಅರಣ್ಯಗಳನ್ನು ಅವಲಂಬಿಸಿ ಬದುಕುತ್ತಿದ್ದಾರೆಂದು ಗಮನಿಸೋಣ.

ಮಧ್ಯಪ್ರದೇಶ ಸರಕಾರದ ಹರಿಜನ ಗಿರಿಜನ ಕ್ಷೇಮಾಭಿವೃದ್ಧಿ ವಿಭಾಗವು ಹೊರತಂದ "The Impact of Bastar Forestry Project on the Tribal Economy" ಎಂಬ ಹೊತ್ತಗೆಯಲ್ಲಿ ಈ ವಿಷಯಗಳನ್ನು ಸ್ಪಷ್ಟವಾಗಿ ವಿವರಿಸಲಾಗಿದೆ. ಇಲ್ಲಿಯ ಜನ ನೈಸರ್ಗಿಕ ಕಾಡುಗಳಿಂದ ಪಡೆಯುತ್ತಿರುವ ಉಪಯೋಗಗಳನ್ನು ಹಣದ ರೂಪದಿಂದ ಅಳೆಯುವುದು ಸಾಧ್ಯವಿಲ್ಲದ ಮಾತು ಎಂದು ವರದಿ ಹೇಳುತ್ತದೆ. ಎಂದರೆ ಈ ಉಪಯೋಗಗಳು ಅರ್ಥಶಾಸ್ತ್ರಜ್ಞರು ಮತ್ತು ಅಭಿವೃದ್ಧಿ ಪರಿಣಿತರು ಸುಲಭವಾಗಿ ಕಡೆಗಣಿಸಿಬಿಡಬಹುದಾದ ವಿಷಯಗಳು.

ಸ್ಥಳೀಯ ನೈಸರ್ಗಿಕ ಅರಣ್ಯಗಳಿಂದ ಮತ್ತು ವಿಶೇಷತ: ಸಾಲ್ ಮರಗಳ ಅರಣ್ಯದಿಂದ ದೊರಕುವ ಆಹಾರ ಪದಾರ್ಥಗಳು ಈ ಜನರಿಗೆ ಲಭ್ಯವಾಗುವ ಮೊದಲ ಉಪಯೋಗ. ಅಗತ್ಯಬಿದ್ದಾಗ ಹೋಗಿ ಹುಡುಕಿ ತರಬಹುದಾದ ಹಲವು ಹತ್ತು ಬಗೆಯ ಹಣ್ಣುಗಳು ಬೇರು ನಾರುಗಳಿಗೆ ಈ ಅರಣ್ಯಗಳು ಮೂಲಸ್ಥಾನವಾಗಿವೆ. ವಿಶೇಷವೆಂದರೆ ಈ ಆಹಾರ ಪದಾರ್ಥಗಳು ಜನರಿಗೆ ಹೆಚ್ಚಿನ ಕೆಲಸ ಮತ್ತು ಆದಾಯ ದೊರೆಯದ ಸಮಯದಲ್ಲಿ

ಅಂದರೆ ಮಾರ್ಚ್/ಏಪ್ರಿಲ್‌ನಿಂದ ಆಗಸ್ಟ್‌ನವರೆಗಿನ ಅವಧಿಯಲ್ಲಿಯೇ ಹೆಚ್ಚಾಗಿ ದೊರೆಯುವುದು. ಮೂಲ ಆಹಾರವಾಗುವುದರ ಜೊತೆಗೆ, ಈ ಜನರ ಆಹಾರದ ಪೋಷಕಾಂಶಗಳನ್ನು ವೃದ್ಧಿಸುವುದರಲ್ಲಿಯೂ ಈ ಪದಾರ್ಥಗಳು ಪ್ರಮುಖಪಾತ್ರ ವಹಿಸುತ್ತವೆ. ನೈಸರ್ಗಿಕ ಅರಣ್ಯದಿಂದ ಮಾತ್ರವೇ ದೊರೆಯುವ ಇಂತಹ ಸುಮಾರು 22 ಬಗೆಯ ಹಣ್ಣುಗಳು, 8 ಬಗೆಯ ಹೂವು, 14 ರೀತಿಯ ಎಲೆಗಳು, 29 ಬೇರುಗಳು ಮತ್ತು 11 ಬೀಜಗಳನ್ನು ವರದಿ ಪಟ್ಟಿ ಮಾಡಿದೆ. ಇಲ್ಲಿಯ ಜನರು ಸಾಂಪ್ರದಾಯಿಕವಾಗಿ ಬೇಟೆಯಾಡುವ ಹಲವಾರು ಪ್ರಾಣಿಗಳೂ ಈ ಅರಣ್ಯಗಳಲ್ಲಿ ಮಾತ್ರ ಕಾಣಸಿಗುತ್ತವೆಯಲ್ಲದೆ, ಜನರ ಅವಿಭಾಜ್ಯ ಅಂಗವಾದ ಸಾಕುಪ್ರಾಣಿಗಳಿಗೆ ಮೇವಿನ ಕೇಂದ್ರವೂ ಇದೇ ಆಗಿದೆ. ಸ್ಥಳೀಯರು ಮಾರಾಟಕ್ಕೆ ಮತ್ತು ಇತರ ವಸ್ತುಗಳಿಗೆ ಬದಲಾಯಿಸಿಕೊಳ್ಳಲು ಉಪಯೋಗಿಸುವ 5 ಬಗೆಯ ಹಣ್ಣು ಮತ್ತು ಹೂವುಗಳು, ನಾಲ್ಕು ರೀತಿಯ ಬೇರುಗಳು, ನಾಲ್ಕು ಬೀಜಗಳು ಮತ್ತು ಮೂರು ಎಲೆಗಳನ್ನೂ ವರದಿ ಪಟ್ಟಿ ಮಾಡಿದೆ. ಸರ್ವೇ ಸಾಧಾರಣವೆಂಬಂತೆ ಇಲ್ಲಿಯ ಜನರು ನೈಸರ್ಗಿಕ ಅರಣ್ಯಗಳಿಂದ ಪಡೆಯುತ್ತಿರುವ ವಸ್ತುಗಳಲ್ಲಿ ಫೆಲ್‌ವುಡ್, ಅಂಟು, ಬಿದಿರು, ಧೂಪ, ಸಿಲ್ಯಾರಿ (Silyari) ಮತ್ತು ಹಲವು ಬಗೆಯ ಹುಲ್ಲುಗಳೂ ಸೇರಿವೆ.

ಇದೇ ವಿಷಯದ ಇನ್ನೊಂದು ಮುಖ್ಯವಾದ ಆದರೆ ಅಭಿವೃದ್ಧಿ ಪರಿಣಿತರು ಸಾಧಾರಣ ಕಡೆಗಣಿಸುವ ಮುಖವಿದೆ. ಕಾಡುಗಳಿಂದ ಮೇಲೆ ಹೇಳಿದ ವಸ್ತುಗಳನ್ನೆಲ್ಲ ಸಂಗ್ರಹಿಸುವವರು ಕೇವಲ ಶಕ್ತ ಹದಿವಯಸಿಗರು ಮಾತ್ರವಾಗಿರದೆ ಮಕ್ಕಳು, ಮುದುಕರು ಮತ್ತು ಅಶಕ್ತರೂ ಇದರಲ್ಲಿ ಪಾಲ್ಗೊಳ್ಳುತ್ತಾರೆ. ಇದರಿಂದಾಗಿ ಕುಟುಂಬದ ದೈನಂದಿನ ಬೇಡಿಕೆಗಳಿಗೆ ತಮ್ಮ ಯಥಾನುಶಕ್ತಿ ಸಹಾಯ ಮಾಡುವುದು ಎಲ್ಲರಿಗೂ ಸಾಧ್ಯವಾಗುತ್ತದೆ. ಮೇಲೆ ಹೇಳಿದ ವರದಿಯ ಪ್ರಕಾರ, ಇಬ್ಬರು ವಯಸ್ಕರು, ಒಂದು ಮಗು ಮತ್ತು ಒಬ್ಬ ಮುದಿವಯಸ್ಸಿನವರು ಇರಬಹುದಾದ ಒಂದು ಸಾಧಾರಣ ಕುಟುಂಬವು ಸರಾಸರಿ ರೂ. 1500 ರಷ್ಟು ಬೆಲೆಬಾಳುವ ಉತ್ಪನ್ನಗಳನ್ನು ಸುಲಭವಾಗಿ ಸಂಗ್ರಹಿಸಬಹುದು. ಈ ಪ್ರದೇಶಗಳಲ್ಲಿ ಇದು ದೊಡ್ಡ ಮೊತ್ತವೆಂದೇ ಎನಿಸಿಕೊಳ್ಳುತ್ತದೆ. ಸಾಮಾಜಿಕ ಮತ್ತು ಮಾನಸಿಕ ದೃಷ್ಟಿಕೋನದಿಂದ ನೋಡುವುದಾದರೆ ಮಕ್ಕಳು, ಮುದುಕರು ಮತ್ತು ಅಶಕ್ತರು ನೀಡುವ ಈ ಕೊಡುಗೆ, ಹಣದ ಮೊತ್ತಕ್ಕಿಂತಲೂ ಬಹಳ ದೊಡ್ಡದಾಗಿರುತ್ತದೆ. ಕುಟುಂಬದ ಪ್ರತಿ ಸದಸ್ಯರೂ ತನ್ನ ಮತ್ತು ಇಡೀ ಕುಟುಂಬದ ಒಳಿತಿಗಾಗಿ ದುಡಿಯುತ್ತಿರುವ ಭಾವನೆ ಹುಟ್ಟಿಸುತ್ತದೆ. ಇದು ತನ್ನೊಳಗೇ ಸಾಮಾಜಿಕ ಭದ್ರತೆಯ ತಳಹದಿಯೊಂದನ್ನು ರೂಪಿಸುತ್ತದಲ್ಲದೆ, ಕುಟುಂಬದ ಸದಸ್ಯರಿಗೆ ಮಾನಸಿಕ ಸಂತೋಷವನ್ನೂ, ಗ್ರಾಮೀಣ ಸಮಾಜದಲ್ಲಿ ಗೌರವದ ಸ್ಥಾನವನ್ನೂ ಕೊಡುತ್ತದೆ.

ಈಗಿನ ಅರಣ್ಯ ಸ್ಥಳೀಯರಿಗೆ ಒದಗಿಸುತ್ತಿರುವ ಇನ್ನೊಂದು ಪ್ರಮುಖ ಸೌಕರ್ಯವೆಂದರೆ, ಮನೆಗಳ ನಿರ್ಮಾಣಕ್ಕೆ ಅಗತ್ಯವಾದ ಪರಿಕರಗಳು. ಬಸ್ತಾರ್ ಪ್ರದೇಶದ ಗುಡ್ಡಗಾಡು ಜನಗಳಿಗಂತೂ ಈ ಪರಿಕರಗಳು ಲಭ್ಯವಾದರೆ ಮಾತ್ರ ಮನೆಗಳ ನಿರ್ಮಾಣ ಸಾಧ್ಯ. ಮನೆಗಳ ನಿರ್ಮಾಣದಲ್ಲಿ ಉಪಯೋಗವಾಗುತ್ತಿದ್ದ 21 ಬಗೆಯ ಮರ, 10 ರೀತಿಯ ಹುಲ್ಲು ಮತ್ತು 11 ಇತರೆ ಅರಣ್ಯ ಸಾಮಗ್ರಿಗಳನ್ನು ಹಿಂದೆ ಹೇಳಿದ ವರದಿಯಲ್ಲಿ ಉಲ್ಲೇಖಿಸಲಾಗಿದೆ. ಕಂಭಗಳನ್ನು ಕಟ್ಟುವ ಮತ್ತು ಭದ್ರಪಡಿಸುವ ಕೆಲಸಕ್ಕೂ ಮರದ ತೊಗಟೆ ಮತ್ತು ನಾರುಗಳಿಂದ ಮಾಡಿದ ದಾರಗಳನ್ನೇ ಉಪಯೋಗಿಸಲಾಗುತ್ತದೆ. ಚೆಂದನ್‌ಪುರದ ಆಸುಪಾಸಿನಲ್ಲಿ ಎರಡು ದಶಕಗಳ ಹಿಂದೆ ಕಾಡುಗಳನ್ನು ಕಡಿದಾಗಿನಿಂದ ಈವರೆಗೆ ಒಂದು ಹೊಸ ಮನೆಯನ್ನು ಕಟ್ಟಲಾಗಿಲ್ಲವೆಂದರೆ, ಅರಣ್ಯ ಪರಿಕರಗಳ ಪ್ರಾಮುಖ್ಯತೆ ಅರಿವಾಗಬಹುದು. ವರದಿಯ ಪ್ರಕಾರ ಒಂಬತ್ತು ಬಗೆಯ ಮರಗಳು ಈ ಜನರ ವ್ಯವಸಾಯ ಉಪಕರಣಗಳ ತಯಾರಿಕೆಯಲ್ಲೂ ಮತ್ತು ಹದಿನೇಳು ಬಗೆಯ ಇತರೆ ಅರಣ್ಯ ವಸ್ತುಗಳು ಒಂದಿಲ್ಲೊಂದು ತತ್ಸಂಬಂಧಿ ಆರ್ಥಿಕ ಚಟುವಟಿಕೆಗಳಲ್ಲೂ ಉಪಯೋಗವಾಗುತ್ತವೆ.

ಈ ನೈಸರ್ಗಿಕ ಅರಣ್ಯಗಳು ಇಲ್ಲಿಯ ಜನರ ಸಾಮಾಜಿಕ ಮತ್ತು ಮತೀಯ ಅಗತ್ಯಗಳನ್ನೂ ಸಹ ಪೂರೈಸುತ್ತಿವೆ. ಮದುವೆಯ ಮಂಟಪಗಳನ್ನು ಸಾಲ್ ಮರದ ಕಾಂಡಗಳಿಂದಲೇ ಕಟ್ಟುವುದು. ತಳಿರು ತೋರಣಗಳನ್ನು ಈ ಮರದ ಕಾಂಡಗಳಿಂದಲೇ ಮಾಡುವುದು. ಎಲ್ಲ ಸಾಮಾಜಿಕ/ಧಾರ್ಮಿಕ ಆಚರಣೆಗಳಲ್ಲಿ ಧೂಪವನ್ನು ಉರಿಸುವುದು. ಪೂಜಾಸ್ಥಳಗಳನ್ನು ಈ ಕಾಡುಗಳಲ್ಲಿ ಬೆಳೆಯುವ ಬಾಜ (Baja) ವೃಕ್ಷಗಳ ಅಡಿಯಲ್ಲಿಯೇ ನಿರ್ಮಿಸುವುದು, ಸಾಂಪ್ರದಾಯಿಕ ಸಂಗೀತ ವಾದ್ಯಗಳನ್ನು ಸಾಲ್ ಮತ್ತು ಖಾಮರ್ ಮರಗಳ ಟೊಳ್ಳು ಕಾಂಡಗಳಿಂದ ತಯಾರಿಸುವುದು. ಇವು ಕೆಲವು ಉದಾಹರಣೆಗಳು ಮಾತ್ರ. ಸ್ಥಳೀಯರು ಯಾವುದೇ ಮರವನ್ನು ಕಡಿಯುವ ಮೊದಲು ಅವನ್ನು ಪೂಜಿಸಿ ವಂದಿಸುತ್ತಾರೆನ್ನುವುದು ಅವರಿಗೆ ಕಾಡುಗಳ ಬಗೆಗಿರುವ ಸಂಬಂಧ ಮತ್ತು ಗೌರವದ ದ್ಯೋತಕ.

ಈ ಕಾಡುಗಳನ್ನು ಕಡಿಯಲಾರಂಭಿಸಿದ ದಿನದಿಂದ, ಮೇಲೆ ಹೇಳಿದ ಯಾವುದೇ ಅಗತ್ಯಗಳನ್ನು ಪೂರೈಸಿಕೊಳ್ಳುವುದು ಸ್ಥಳೀಯರಿಗೆ ಕಷ್ಟವಾಗುತ್ತಿದೆ. ಇದನ್ನು ಈ ಮೊದಲು ತಿಳಿಸಿದ ವರದಿ ಸ್ಪಷ್ಟಮಾತುಗಳಲ್ಲಿ ಉಲ್ಲೇಖಿಸಿದೆ. ಯುವಕರು ಮತ್ತು ಮಧ್ಯವಯಸ್ಕರು ಹೊಸ ಪೈನ್ ತೋಟಗಳಲ್ಲಿ, ಲಭ್ಯವಿದ್ದಾಗ ಕೆಲಸ ಪಡೆದುಕೊಳ್ಳಬಹುದಾದರೂ, ಬಹುತೇಕ ಅವರೂ ನಿರುದ್ಯೋಗಿಗಳಾದಂತೆಯೇ. ಮಕ್ಕಳು, ಮುದುಕರಿಗಂತೂ ಯಾವ ಉದ್ಯೋಗದ ನೆಲೆಯೂ ದೊರಕಲಾರದು. ತಮ್ಮ ಕುಟುಂಬಕ್ಕೆ ಯಾವ ಕೊಡುಗೆ

ನೀಡುವುದೂ ಇವರಿಗೆ ಸಾಧ್ಯವಾಗದ್ದರಿಂದ, ಒಮ್ಮೆ ಲಭ್ಯವಿದ್ದ ಸಾಮಾಜಿಕ ಮತ್ತು ಮಾನಸಿಕ ಸಮಾಧಾನದಿಂದ ವಂಚಿತರಾಗುತ್ತಾರೆ. ಗ್ರಾಮೀಣ ಸಮಾಜದಲ್ಲಿನ ಇವರ ಗೌರವ ಕಡಿಮೆಯಾಗುತ್ತಾ ಹೋಗುವುದಲ್ಲದೆ, ಇಡೀ ಕುಟುಂಬದ ರಚನೆಯೇ ಕುಸಿಯುವ ಸಾಧ್ಯತೆ ಇದೆ. ಅಂತೆಯೇ ಈಗಿನ ಮರಗಳನ್ನು ಕಡಿದು ವೇಗವಾಗಿ ಬೆಳೆಯುವ (ಮತ್ತು ಕೈಗಾರಿಕಾ ಅಗತ್ಯಗಳನ್ನು ಮಾತ್ರ ಪೂರೈಸುತ್ತ ವಿದೇಶಿವಿನಿಮಯ ಗಳಿಕೆಗೆ ಸಹಾಯಕವಾಗುವ) ಪರದೇಶೀ ಮರಗಳನ್ನು ಬೆಳೆಯಲಾರಂಭಿಸಿದರೆ, ಸ್ಥಳೀಯ ನಿವಾಸಿಗಳು ತಮ್ಮ ಆಹಾರದ ಅಗತ್ಯಗಳಿಂದ ಮಾತ್ರ ವಂಚಿತರಾಗುವುದಲ್ಲದೆ, ತಮ್ಮ ವ್ಯವಸ್ಥಿತ ಸಾಂಪ್ರದಾಯಿಕ ಬದುಕಿನ ಬಹುತೇಕ ಎಲ್ಲ ಅಗತ್ಯಗಳಿಂದಲೂ ವಂಚಿತರಾಗುತ್ತಾ ಬಂದು, ಒಂದು ಸಾಮಾಜಿಕ ವ್ಯವಸ್ಥೆಯೇ ನಿರ್ನಾಮವಾದಂತಾಗುತ್ತದೆ.

ಬುಡಕಟ್ಟು ಜನಾಂಗದವರಿಗಂತೂ, ಜೀವನಕ್ರಮ ಮತ್ತು ಅರಣ್ಯದ ನಡುವಿನ ಸಂಬಂಧ ತೀರ ನಿಕಟವಾದುದು. ಅರಣ್ಯವಿಲ್ಲದ ಜೀವನದ ಕಲ್ಪನೆಯೇ ಬಹುಶಃ ಇವರಿಗೆ ಸಾಧ್ಯವಿಲ್ಲ. ಕಾಡುಗಳು ಹೆಚ್ಚು ಇಲ್ಲದ ಪ್ರದೇಶಗಳಲ್ಲಿಯೂ ಈ ಜನ ತಮ್ಮ ಸಾಂಪ್ರದಾಯಿಕ ಅಗತ್ಯಗಳಿಗಾಗಿ ದೂರದ ಕಾಡುಗಳಿಗೆ ಹೋಗಿ ಬರುವುದನ್ನು ಕಾಣಬಹುದು. ಪಶ್ಚಿಮದ ಶ್ರೀಮಂತ ಸಮಾಜದಲ್ಲಿಯೇ (ಅಥವ ಅವುಗಳ ಆದರ್ಶದಲ್ಲಿಯೇ) ಬೆಳೆದ ನಮ್ಮ ಅರ್ಥಶಾಸ್ತ್ರಜ್ಞರು ಮತ್ತು ಅಭಿವೃದ್ಧಿ ಪಂಡಿತರುಗಳಿಗೆ ಈ ಅಂಶಗಳು ತೀರ ಗೌಣವೆನಿಸುವುದು ಆಶ್ಚರ್ಯದ ವಿಷಯವೇನಲ್ಲ.

ಮೇಲೆ ಚರ್ಚಿಸಿದ ಎಲ್ಲ ಮಾಹಿತಿಗಳೂ ಸಹ, ಜಾಗತಿಕ ಬ್ಯಾಂಕು ಮತ್ತು ಅದರ ಸಹ ಸಂಸ್ಥೆಗಳಲ್ಲಿ ಅಭಿವೃದ್ಧಿ ಪರಿಣಿತರಾಗಿ ಕೆಲಸ ಮಾಡುತ್ತಿರುವವರೂ ಸೇರಿದಂತೆ, ಅಪೇಕ್ಷಿಸುವ ಯಾರಿಗಾದರೂ ಲಭ್ಯವಾಗುವಂತಹವುಗಳೇ. ಅವರು ಈ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳದಿರಲು ಕಾರಣ, ಅವರ ಕಾರ್ಯನೀತಿಯಿಂದಾಗಿ ಭಾರತದಂಥ ದೇಶದ ಜನರ ಬಡತನ ಮತ್ತು ನ್ಯೂನ ಪೋಷಣೆಯ ಸಮಸ್ಯೆಗಳು ವೃದ್ಧಿಸುತ್ತಿರುವುದರ ಅರಿವೇ ಇಲ್ಲದಿರುವುದಲ್ಲ. ಬದಲಿಗೆ, ಅವರ ನೈಜ ಉದ್ದೇಶಗಳು ಬೇರೆಯದೇ ದಿಕ್ಕಿನಲ್ಲಿದ್ದು, ಬೇರೆಯದೇ ಶ್ರೇಣಿಗೆ ಸೇರಿರುವುದು ಮತ್ತು ಆ ಉದ್ದೇಶ ಸಾಧನೆಗೆ ಈ ಅಂಶಗಳ ಪರಿಗಣನೆ ಅವರಿಗೆ ಅಸಂಬದ್ಧವೆನಿಸುವುದು.

ಭರತನಾಟ್ಯ ನಡೆದು ಬಂದ ದಾರಿ

● ಚಂದ್ರಭಾಗಾದೇವಿ

ಮಾನವನು ಅನಾದಿಕಾಲದಿಂದಲೂ ಅಂಗಚೇಷ್ಟೆಯಿಂದ ಅಥವಾ ದೇಹದ ಚಲನ ವಲನಗಳಿಂದ ತನ್ನ ಆಸೆ ಆಕಾಂಕ್ಷೆಗಳನ್ನು ಕಲಾತ್ಮಕವಾಗಿ ತಿಳಿಯಪಡಿಸುತ್ತಿದ್ದಿರಬೇಕು. ಆಗ ಅಂತರಂಗದ ಹಿಗ್ಗು ಕುಣಿತವಾಯಿತು. ಮಾನವನ ನರ್ತನಕ್ಕೆ ಇದೇ ಹುಟ್ಟು ಎನ್ನಬಹುದು. ನಾಗರಿಕತೆ ಅಭಿವೃದ್ಧಿ ಹೊಂದಿದಂತೆ ಭಾಷೆಯ ಸಂಪರ್ಕವಾಯಿತು. ಮಾನವನ ಕ್ರಿಯಾಶಕ್ತಿಯನ್ನು ವ್ಯಕ್ತಪಡಿಸಲು ಲಲಿತಕಲೆಗಳು ಸೃಷ್ಟಿಯಾದವು. ಕಲೆ ಒಂದು ಪ್ರಕಾರವಾಗಿ ಬೆಳೆದು ಕಲಾಭಿರುಚಿ ಬೆಳೆದಂತೆ ಕಲಾವಿದರು ಅಪರೂಪದ ವ್ಯಕ್ತಿಗಳೆನಿಸತೊಡಗಿದರು.

ಭಾರತದಲ್ಲಿ ಶಿಲ್ಪಗಳಾಗಲೀ, ಚಿತ್ರಗಳಾಗಲೀ ಪುರಾತನ ಸಾಹಿತ್ಯವೇ ಆಗಲಿ, ನೃತ್ಯ ಕಲೆಯಾಗಲೀ, ಸಂಗೀತವಾಗಲೀ ವಸ್ತುವಿಗಾಗಿ ಹಿಂದೂ ಧರ್ಮದಲ್ಲಿರುವ ಪುರಾಣ ಮತ್ತು ಇತಿಹಾಸಗಳನ್ನು ಆಧರಿಸಿವೆ. ಕಲೆಯನ್ನು ಸೃಷ್ಟಿಸುವ ಕಲಾವಿದ ಮತ್ತು ಪರಿಭಾವಿಸುವ ಕಲಾರಸಿಕ ಇಬ್ಬರೂ ಸೌಂದರ್ಯೋಪಾಸಕರು. ಭೀಕರ ಪ್ರಸಂಗಗಳಲ್ಲಿ ಕೂಡಾ ಒಂದು ತೀಕ್ಷ್ಣವಾದ ಸೌಂದರ್ಯವನ್ನು ಕಾಣುವ ಅಭಿಜ್ಞಾನ ಅವರಲ್ಲಿರುತ್ತದೆ. ಪ್ರಾಚೀನ ಪಠ್ಯಗಳಲ್ಲಿ ಚತುರ್ವೇದ, ಉಪನಿಷತ್ತುಗಳು, ರಾಮಾಯಣ ಮಹಾಭಾರತಗಳ ಜೊತೆಗೆ ನಾಟ್ಯವನ್ನೂ ನಾಟ್ಯವೇದ – ಐದನೇ ವೇದ ಎಂದು ಕರೆದಿರುವುದುಂಟು. ಆನಂದ ಮೂಲವಾದ, ಮತ್ತು ಆನಂದವನ್ನೇ ಫಲವಾಗಿ ಉಳ್ಳ ಈ ಕಲೆಯನ್ನು ವೇದ ಎಂದು ಕರೆದಿರುವುದು ಅಂತರಂಗದ ಸಂತಸಕ್ಕೆ ಬದುಕಿನಲ್ಲಿರುವ ಪ್ರಾಮುಖ್ಯತೆಯನ್ನು ಸೂಚಿಸುತ್ತಿರಬಹುದೇನೋ.

ನಾಟ್ಯದ ಮೂಲಗಳನ್ನು ಬೋಧಿಸುತ್ತ ಹೋದರೆ ನಾಟ್ಯವನ್ನು ಬ್ರಹ್ಮನೇ ಸೃಷ್ಟಿಸಿದ ಎಂದು ನಾಟ್ಯಶಾಸ್ತ್ರದಲ್ಲಿಯೂ 'ಅಭಿನಯ ದರ್ಪಣ' ದಲ್ಲಿಯೂ ಹೇಳಲಾಗಿದೆ. ಇಂದ್ರಾದಿ ದೇವತೆಗಳು ತಮ್ಮ ಬಿಡುಸಮಯವನ್ನು ಕಳೆಯಲು ಯಾವುದಾದರೂ ಒಂದು ವಿಧಾನವನ್ನು ತಮಗೆ ಹೇಳಿಕೊಡಬೇಕೆಂದು ಬ್ರಹ್ಮನಿಗೆ ಮೊರೆ ಹೊಕ್ಕರಂತೆ. ಅಂತೆಯೇ ಬ್ರಹ್ಮನು ಋಗ್ವೇದದಿಂದ ಶಬ್ದಗಳನ್ನೂ, ಸಾಮವೇದದಿಂದ ಸಂಗೀತವನ್ನೂ, ಯಜುರ್ವೇದದಿಂದ ಅಭಿನಯವನ್ನೂ, ಅಥರ್ವವೇದದಿಂದ ರಸವನ್ನೂ ಜೋಡಿಸಿ 'ನಾಟ್ಯವೇದ' ಎಂಬ ಐದನೇ ವೇದವನ್ನು ರಚಿಸಿ ತನ್ನ ಮಗನಾದ ಭರತನಿಗೆ ಕೊಟ್ಟ ನಂತೆ. ಭರತನು ಇದನ್ನು ಶಾಸ್ತ್ರರೂಪವಾಗಿ ಬರೆದು ಅದಕ್ಕೆ ನಾಟ್ಯಶಾಸ್ತ್ರ ಎಂಬ ಹೆಸರನ್ನು ಕೊಟ್ಟು ತನ್ನ ನೂರು ಮಂದಿ ಮಕ್ಕಳಿಗೆ ಪಠಿಸಿದನು. ಅಲ್ಲದೆ ಈ ವಿದ್ಯೆ ಯನ್ನು ಗಂಧರ್ವರಿಗೂ ಅಪ್ಸರೆಯರಿಗೂ ಹೇಳಿಕೊಟ್ಟನು. ಆಗ ಶಿವನು ತನ್ನ "ವಿಶ್ವನೃತ್ಯ"ವನ್ನು ನೆನಪಿಸಿಕೊಂಡು ಭರತನಿಗೆ ಈ ಕಲೆಯನ್ನು ಗಣಗಳಿಗೆ ಖಚಿತವಾಗಿ ಪಠಿಸಲು ಹೇಳಿದನು. ಪಾರ್ವತಿದೇವಿಯು ಭರತನಿಗೆ ಲಾಸ್ಯನೃತ್ಯವನ್ನು ಹೇಳಿಕೊಟ್ಟಳು. ಅನಂತರ ಬಾಣಾಸುರನ ಮಗಳಾದ ಉಷೆಗೂ ಪಠಿಸಿದರು. ಕ್ರಮೇಣ ಈ ದೈವಿಕ ವಿದ್ಯೆ ಭೂಲೋಕಕ್ಕೆ ಇಳಿದು ಬಂದು ನಮ್ಮ ಭರತಖಂಡವನ್ನೆಲ್ಲಾ ಪಸರಿಸಿ ಭರತನಾಟ್ಯ ಎಂಬುದಾಗಿ ಮೆರೆಯಿತು ಎಂಬುದು ಪ್ರಾಚೀನರ ನಂಬಿಕೆ.

ಭರತನ ನಾಟ್ಯಶಾಸ್ತ್ರವು ಭಾರತದಲ್ಲಿ ನೃತ್ಯದ ಮೇಲೆ ಬರೆದಿರುವ ಪ್ರಮುಖ ಗ್ರಂಥ. ಸುಮಾರು ಎರಡು ಸಾವಿರ ವರ್ಷಗಳ ಹಿಂದೆ ಬರೆದ ಈ ಗ್ರಂಥವನ್ನು ಅನುಸರಿಸಿ ಅಂದಿನ ಕಲಾವಿದರು ಯಾವ ರೀತಿಯಲ್ಲಿ ಕಲೆಯನ್ನು ಪ್ರದರ್ಶಿಸುತ್ತಿದ್ದರು ಎಂಬುದನ್ನು ನಾವು ಪ್ರಾಚೀನ ಶಿಲ್ಪ ಮತ್ತು ಬರಹಗಳಿಂದ ಊಹಿಸಬೇಕಾಗಿದೆ.

ಸುಮಾರು ಸಾವಿರ ವರ್ಷಗಳ ಹಿಂದೆ ನೃತ್ಯಕಲೆ ಉಪರೂಪಕವೆಂದು ರೂಢಿಯಲ್ಲಿತ್ತು. ಪ್ರಸ್ಥಾ, ಕಾವ್ಯ, ಭಾಣ, ಶ್ರೀಗಧಿತ, ನರ್ತನಕ, ರಾಸಕ, ನಾಟ್ಯರಾಸಕ, ಹಲ್ಲೀಶ, ಗೋಷ್ಠಿ, ಪ್ರೇಕ್ಷಣಕ, ಇತ್ಯಾದಿ. ದಾಮೋದರ ವಿರಚಿತ ಸಂಗೀತ ದರ್ಪಣದಲ್ಲಿ ಯತಿನೃತ್ಯ, ಮುಖಚರಿ, ಶಬ್ದಚರಿ, ಉಡುಪ, ಗೊಂಡಲಿ ಎಂಬ ಸ್ತ್ರೀನರ್ತನಗಳನ್ನೂ ಕೆಲವು ಪುರುಷರ ನೃತ್ಯಾಭ್ಯಾಸಗಳನ್ನು ವಿವರಿಸಿದ್ದಾರೆ. ದೇವೇಂದ್ರನು 'ಸಂಗೀತ ಮುಕ್ತಾವಳಿ'ಯಲ್ಲಿ ಪುಷ್ಪಾಂಜಲಿ, ಶುದ್ಧ ಯತಿ ನೃತ್ಯ, ರಾಗಾನುರಾಸ ನೃತ್ಯ, ಶಬ್ದ ನೃತ್ಯ, ರೂಪನೃತ್ಯ, ಎಂಬ ನೃತ್ಯಾಭಿನಯಗಳನ್ನೂ, ದ್ವಂದ, ಶಬ್ದಚರಿ, ಶುದ್ಧಗೀತ, ಗೀತಪ್ರಬಂಧ ಮುಂತಾದ ನೃತ್ಯಗೀತೆಗಳನ್ನೂ, ದರು, ಚಿಂದು, ದ್ರುಪದ ಎಂಬ ನೃತ್ಯಗಳನ್ನು ವಿವರಿಸಿದ್ದಾರೆ. ಇವುಗಳಿಗನುಸಾರವಾಗಿ ಭರತನಾಟ್ಯ ಕಾರ್ಯಕ್ರಮಗಳು ಪ್ರದರ್ಶಿಸಲ್ಪಡುತ್ತಿದ್ದವು.

18 ನೇ ಶತಮಾನದ ಅಂತ್ಯದಲ್ಲಿ ಮತ್ತು 19 ನೇ ಶತಮಾನದ ಆದಿಯಲ್ಲಿ ಭರತ ನಾಟ್ಯ ಪ್ರದರ್ಶನಗಳಲ್ಲಿ ಗೀತ, ಪ್ರಬಂಧ, ಜತಿ, ಹಂಸನಂದನ, ಗಜನಂದನ ಎಂಬ ಕಾರ್ಯಕ್ರಮವಿತ್ತು. ಅನಂತರ ಭರತನಾಟ್ಯ ಕಾರ್ಯಕ್ರಮಗಳು ಬಹಳ ಬೇರೆ ರೀತಿ ಯಲ್ಲಿ ಮಾರ್ಪಾಟಾದವು. ಅನಂತರ ಪಂದನಲ್ಲೂರು ಸಹೋದರರಾದ ಚಿನ್ನಯ್ಯ, ಪೊನ್ನಯ್ಯ, ಶಿವಾನಂದಂ ಮತ್ತು ವಡಿವೇಲು ಇವರು ಇಂದಿನ ಭರತನಾಟ್ಯ ಕಾರ್ಯ ಕ್ರಮಕ್ಕೆ ಅಂದರೆ ಅಲಾರಿಪು, ಜತಿಸ್ವರ, ಶಬ್ದಂ, ವರ್ಣಂ, ಪದಂ, ಜಾವಳಿ, ಶ್ಲೋಕ ತಿಲ್ಲಾನಕ್ಕೆ ಕಾರಣಪುರುಷರಾದರು. 60 ವರ್ಷಗಳ ಹಿಂದೆ ಭರತನಾಟ್ಯವು 'ಸದಿರ್‌ನಾಚ್' ಅಥವಾ ದಾಸೀ ಅಟ್ಟಂ ಎಂದು ಹೆಸರುಪಡೆದಿತ್ತು. ಕಲೆಯ ಪುನ ರುತ್ಥಾನದ ಸಮಯ ಈ ನಾಟ್ಯವನ್ನು ಭರತನಾಟ್ಯ ಎಂಬ ನಾಮಾಂಕಿತದಿಂದ ಕರೆಯಲಾಯಿತು.

ನೃತ್ಯಕಲೆಯ ಮಹತ್ವವನ್ನು ಅರಿತು ಹಿಂದಿನ ಕಾಲದ ರಾಜ ಮಹಾರಾಜರುಗಳು ತಮ್ಮ ಆಸ್ಥಾನದಲ್ಲಿ ಈ ವಿದ್ಯೆಗೆ ಬೇಕಾದಷ್ಟು ಪ್ರೋತ್ಸಾಹ ಕೊಟ್ಟರು. ಇದಕ್ಕೆ 2--3ನೇ ಶತಮಾನಗಳ ಆರಂಭಕಾಲದ್ದೆಂದು ಹೇಳಲಾದ ದೇವಾಲಯಗಳು, ಶಿಲ್ಪಕಲೆ, ಹಿಂದಿನ ಸಾಹಿತ್ಯ ಕೃತಿಗಳು ಮತ್ತು ಶಾಸನಗಳು ಸಾಕ್ಷಿಯಾಗಿವೆ. ಭಾರತದಾದ್ಯಂತ ದೇವಾಲ ಯಗಳಲ್ಲಿ ಒಂದಲ್ಲ ಒಂದು ರೀತಿಯ ನೃತ್ಯಭಂಗಿಗಳು ಕಂಡುಬರುತ್ತವೆ. ಗುಹಾಚಿತ್ರಗಳಲ್ಲಿ ಕೂಡ ನೃತ್ಯದ ಹಲವು ಭಂಗಿಗಳನ್ನು ಗುರುತಿಸಬಹುದು. ನಾಲ್ಕನೇ ಶತಮಾನದಿಂದ ಆರನೇ ಶತಮಾನದವರೆಗೆ ಕದಂಬರೂ, ಹನ್ನೊಂದನೇ ಶತಮಾನದವರೆಗೆ ತಲಕಾಡಿನ ಗಂಗರೂ, ಆಮೇಲೆ ಪಲ್ಲವ, ಚಾಳುಕ್ಯ, ರಾಷ್ಟ್ರಕೂಟ ಅರಸುಗಳು ನೃತ್ಯಕಲೆಯನ್ನು ಮೆಚ್ಚಿ ಪ್ರೋತ್ಸಾಹಿಸುತ್ತಿದ್ದರು. ಪಂಪಕವಿಯು ಬನವಾಸಿಯ ಪುರಜನರ ವಿದ್ಯಾ ಸಂಪತ್ತು, ಸಂಗೀತಜ್ಞಾನ ಅಲ್ಲದೆ ಲಲಿತಕಲಾ ಪ್ರೌಢಿಮೆಯನ್ನೂ ವರ್ಣಿಸಿದ್ದಾನೆ. ಅಲ್ಲಿನ ಸ್ತ್ರೀಯರಂತೂ ನೃತ್ಯಸಂಗೀತಗಳಲ್ಲಿ ಪಾಂಡಿತ್ಯ ಪಡೆದಿದ್ದರಂತೆ. 'ಆದಿಪುರಾಣ' ದಲ್ಲಿ ಆತನು ಬಣ್ಣಿಸಿರುವ 'ನೀಲಾಂಜನೆಯ ನೃತ್ಯ' ಆ ಕಾವ್ಯದ ರಸ ಘಟ್ಟ ಗಳಲ್ಲೊಂದಾಗಿದೆ.

ಕ್ರಿ.ಶ. 965 - 1014 ರಲ್ಲಿ ತಂಜಾವೂರಿನ ರಾಜನಾದ ಚೋಳನು ಶ್ರೀ ಬೃಹದೀಶ್ವರ ದೇವಾಲಯದ ಸಭಾಂಗಣದಲ್ಲಿ ಈಶ್ವರ ಪೂಜೆಗೋಸ್ಕರ ಸುಮಾರು 400 ಮಂದಿ ನರ್ತಕಿಯರನ್ನು ನೇಮಿಸಿದ್ದನು. ದಕ್ಷಿಣ ಭಾರತದ ದೇವಾಲಯಗಳ ಹೊರಭಾಗದಲ್ಲಿ ನೃತ್ಯಪ್ರತಿಮೆಗಳು ಕೆತ್ತಲ್ಪಟ್ಟಿವೆ. ಚಿದಂಬರಂ ದೇವಾಲಯದ ದ್ವಾರಗಳಲ್ಲಿ ಕೆತ್ತಲ್ಪಟ್ಟ ನಾಟ್ಯದ 108 ಕರಣಗಳು, ಮತ್ತು ಹಳೇಬೀಡು ಬೇಲೂರು ದೇವಾಲಯಗಳ ಶಿಲ್ಪಶ್ರೀ ಹಾಗೂ ಮದನಿಕಾ ವಿಗ್ರಹಗಳು, ನಾಟ್ಯಭಂಗಿಗಳು ಪ್ರಸಿದ್ಧವಾಗಿವೆ.

ವಿಜಯನಗರದ ಕೃಷ್ಣದೇವರಾಯನ ಕಾಲವೂ ಲಲಿತಕಲೆಗಳಿಗೆ ಪ್ರೋತ್ಸಾಹದಾಯಕವಾಗಿತ್ತು. ಎಂದು ತಿಳಿದು ಬರುತ್ತದೆ. ಕ್ರಿ.ಶ. 1520 ರಲ್ಲಿ ಬಂಥಂ ಲಕ್ಷ್ಮೀನಾರಾಯಣ ಎಂಬ ನೃತ್ಯ ಗುರುಗಳು ಸಂಗೀತ ಸರ್ವೋದಯ ಎಂಬ ಕಾವ್ಯವನ್ನು ಬರೆದರು. ಆ ರಾಜರ ಅರಮನೆಗೆ ಸಂಬಂಧಿಸಿದ ನೃತ್ಯ ಸಭಾ ಗೃಹವೊಂದನ್ನು ಪೇಯಸ್ ಎಂಬ ಪೋರ್ಚುಗೀಸ್ ಪ್ರವಾಸಿಯು ತನ್ನ ಬರಹಗಳಲ್ಲಿ ವರ್ಣಿಸಿದ್ದಾನೆ. ಅಲ್ಲಿ ಭರತನಾಟ್ಯದ 108 ಕರಣಗಳನ್ನು ಚಿತ್ರಿಸಿರಬೇಕೆಂಬ ಊಹೆ ಇದೆ. 'ಊಹೆ' ಏಕೆಂದರೆ ಆ ಸಭಾ ಗೃಹ ಈಗ ಕಣ್ಮರೆಯಾಗಿರುವುದರಿಂದ.

ಚಿದಂಬರಂನಲ್ಲಿರುವ ನಟರಾಜ ದೇವಾಲಯದ ಗರ್ಭಗುಡಿಯಲ್ಲಿರುವ ನಟರಾಜ ಶಿವನ ವಿಗ್ರಹ ಮತ್ತು ಗರ್ಭಗುಡಿಯ ಸುತ್ತಲೂ ಇರುವ ನೃತ್ಯಸಭಾ - ರಾಜಸಭಾ - ದೇವ ಸಭಾ ಚಿತ್‌ಸಭಾ ಎಂಬ ಐದು ಸಭಾಂಗಣಗಳು ಪ್ರಸಿದ್ಧವಾಗಿವೆ. ಈ ದೇವಾಲಯದ ಪೂರ್ವದ ಗೋಪುರದಲ್ಲಿ ನಾಟ್ಯಶಾಸ್ತ್ರದ ನಾಲ್ಕನೇ ಅಧ್ಯಾಯದಲ್ಲಿ ವಿವರಿಸಲ್ಪಟ್ಟ 108 ಕರಣಗಳ ಕೆತ್ತನೆಯನ್ನು ಕಾಣಬಹುದು. ಈ ದೇವಾಲಯದ ಪ್ರಾಚೀನತೆ ಸುಮಾರು 6 ಶತಮಾನದಷ್ಟು ಹಿಂದಕ್ಕೆ ಹೋಗುತ್ತದೆ.

ತಮಿಳಿನ ಪ್ರಾಚೀನ ಕಾವ್ಯವಾದ 'ಶಿಲಪ್ಪದಿಗಾರಂ' ಒಂದು ನೂಪುರದ ಕಳವಿನ ಮೇಲೆ ಹಬ್ಬಿದ ಕತೆಯಾಗಿದೆ. ಶಿಲಂಬು ಎಂದರೆ ನೂಪುರ ಅಥವಾ ಗೆಜ್ಜೆ.
16 ನೇ ಶತಮಾನದಲ್ಲಿದ್ದ ಮಾಗಡಿ ಕೆಂಪೇಗೌಡನು ಬೆಂಗಳೂರು ನಗರವನ್ನು ನಿರ್ಮಾಣ ಮಾಡಿದುದಲ್ಲದೆ ಯಕ್ಷಗಾನ ಕಲೆಯಲ್ಲಿಯೂ ಬಲ್ಲಿದನಾಗಿದ್ದನು. 16 ನೇ ಶತಮಾನದಲ್ಲಿದ್ದ ಕನ್ನಡದ ಶ್ರೇಷ್ಠ ಕವಿಗಳಲ್ಲೊಬ್ಬನಾದ ರತ್ನಾಕರವರ್ಣಿಯು ನೃತ್ಯದ ಹಲವು ವಿಧಗಳನ್ನು ತನ್ನ ಭರತೇಶವೈಭವದಲ್ಲಿ ವರ್ಣಿಸಿದ್ದಾನೆ.

ನಮಗೆ ನೃತ್ಯಕಲೆ ಸಾಗಿಬಂದ ದಾರಿಯಲ್ಲಿ ಸಿಗುವ ಇನ್ನೊಂದು ಮಹತ್ವದ ಕೃತಿ 17 ನೇ ಶತಮಾನದ 'ಸಿಂಹಭೂಪಾಲ' ಎಂಬ ಅರಸನು ಬರೆದ 'ಲಾಸ್ಯರಂಜ' ಎಂಬ ಗ್ರಂಥ. ಇದರಲ್ಲಿ ಆತನು ನೃತ್ಯಕಲೆಯ ಶಾಸ್ತ್ರ ವಿನಿಯೋಗ ಆಚರಣೆ ಮುಂತಾದವುಗಳ ಕಟ್ಟು ನಿಟ್ಟುಗಳನ್ನು ಕೂಲಂಕಷವಾಗಿ ತಿಳಿಸಿದ್ದಾನೆ. ಮುಂದಿನ ದಿನಗಳಲ್ಲಿ ಕೇರಳ - ತಂಜಾವೂರು ಮತ್ತು ಮಹಾರಾಷ್ಟ್ರಗಳ ಅರಸರು ನೃತ್ಯ ಮತ್ತು ಸಂಗೀತ ಕಲೆಗಳಿಗೆ ಉತ್ತೇಜನ ಕೊಡುತ್ತಾ ಬಂದರು.

19 ನೇ ಶತಮಾನದ ಮಧ್ಯಭಾಗದಲ್ಲಿ ನೃತ್ಯಕಲೆಯಲ್ಲಿ ತಮಿಳುನಾಡಿನಲ್ಲಿ ಹೆಸರುವಾಸಿಯಾದ ಪಂದನಲ್ಲೂರು ಸಹೋದರರಲ್ಲಿ ಹಿರಿಯರಾದ ಚಿನ್ನಯ್ಯಪಿಳ್ಳೆಯವರನ್ನು

ಮೈಸೂರಿನ ಅರಸರಾಗಿದ್ದ ಮುಮ್ಮಡಿ ಕೃಷ್ಣರಾಜ ಒಡೆಯರವರು ತಮ್ಮ ಆಸ್ಥಾನಕ್ಕೆ ಬರಮಾಡಿ ಕೊಂಡು ಅವರಿಂದ ಅನೇಕ ಗುರುಗಳಿಗೂ ಶಿಷ್ಯಂದಿರಿಗೂ ನೃತ್ಯಾಭ್ಯಾಸ ಮಾಡಿಸಿದರು. ಅವರ ಕಾಲದಲ್ಲಿ ನೃತ್ಯಕಲೆಗೆ ಬಹಳ ಪ್ರೋತ್ಸಾಹ ಸಿಕ್ಕಿತು. 1860 ರಿಂದ 1881 ರಲ್ಲಿ ಶ್ರೀ ಚಾಮರಾಜ ಒಡೆಯರ ಕಾಲದಲ್ಲಿ ಕೊಂಚಕಾಲ ಪ್ರೋತ್ಸಾಹ ಕಡಿಮೆಯಾಗಿದ್ದರೂ ಅವರು ಸಿಂಹಾಸನನೇರಿದ ಮೇಲೆ ಮೊದಲಿನಂತೆ ಮುಂದುವರಿಸಿದರು.

19 ನೇ ಶತಮಾನದ ಕೊನೆ ಹಾಗೂ 20 ನೇ ಶತಮಾನದ ಆದಿಯಲ್ಲಿನ ಲಲಿತಕಲೆಗಳ ಚರಿತ್ರೆಯನ್ನು ನಾವು ಇಂದೂ ಬದುಕಿರುವ ಹಿರಿಯರಿಂದ ತಿಳಿಯಬಹುದು. ಬೆಂಗಳೂರು, ಮುಳಬಾಗಿಲು, ಕುಡೂರು, ಟಿ. ನರಸೀಪುರ ಮುಂತಾದ ಸ್ಥಳಗಳಲ್ಲಿನ ದೇವಾಲಯಗಳ ಸುತ್ತಲೂ ದೇವದಾಸಿಯರು ವಾಸವಾಗಿದ್ದು ಅವರಲ್ಲಿ ಕೆಲವರು ನೃತ್ಯಕಲೆಯಲ್ಲಿ ಪ್ರವೀಣರಾಗಿ ಬಹಳ ಹೆಸರುವಾಸಿಯಾಗಿದ್ದರಂತೆ.

ಕಾಲ ಸರಿದಂತೆ ಆ ಕಾಲದ ಪರಿಸ್ಥಿತಿಗಳಿಗನುಗುಣವಾಗಿಯೋ ಏನೋ ಜೀವನವನ್ನು ಕಲೆಗಾಗಿ ಎಂದು ತಿಳಿಯದೆ ಜೀವನೋಪಾಯಕ್ಕಾಗಿ ನರ್ತಿಸಿ ಶ್ರೀಮಂತರನ್ನು ವಶಪಡಿಸಿ ಅವರ ಆಶ್ರಯದಲ್ಲಿ ಬಾಳತೊಡಗಿದ ಕಾರಣದಿಂದ ನೃತ್ಯಕಲೆ ಕ್ರಮೇಣ ದುಸ್ಥಿತಿಗೆ ಇಳಿಯಿತು. ಕ್ರಿ. ಶ. 1930 ರಲ್ಲಿ ಬ್ರಿಟಿಷ್ ಸರಕಾರವು ಹಲವಾರು ಸಾಮಾಜಿಕ ಕಾರಣಗಳಿಂದ ದೇವಸ್ಥಾನಗಳಲ್ಲಿ ನೃತ್ಯಕಲೆಯನ್ನು ನಿಷೇಧಿಸಿತು. ಆನಂತರ ಈ ಕಲೆ ಕೆಲವು ನೃತ್ಯೋಪಾಸಕರ ಮನೆಗಳಲ್ಲಿ ಮಾತ್ರ ಅಡಗಿತ್ತು. ಅಂತಹ ಮನೆತನಗಳಲ್ಲಿ ನೃತ್ಯಕಲೆಯು ವಂಶಪಾರಂಪರ್ಯವಾಗಿ ಗೂಢಿಗೆ ಬಂದಿದ್ದರೂ ಕಲೆಯು ಬಹಿರಂಗವಾಗದೆ ಗುಪ್ತವಾಗಿ ಪ್ರದರ್ಶಿಸಲ್ಪಟ್ಟಿತು. ಅರಸರ ಆಶ್ರಯದಲ್ಲಿ ಸುಖವಾಗಿ ಕಲಾಸೇವೆ ಸಲ್ಲಿಸುತ್ತಿದ್ದ ದೇವದಾಸಿಯರ ಜೀವನವೂ ಕಷ್ಟಕರವಾಯಿತು. ನರ್ತನವು ದುರಾಚಾರವೆಂದೂ ನರ್ತಕಿಯು ಕೀಳುದರ್ಜೆಯ ಅಶ್ಲೀಲ ಸ್ತ್ರೀಯೆಂದೂ ಜನರ ಅಭಿಪ್ರಾಯವಾಗಿ ನೃತ್ಯಕಲೆಯು ತನ್ನ ಗೌರವವನ್ನು ಕಳೆದುಕೊಂಡಿತು. ಆದರೆ ಯಾವುದೇ ಶ್ರೇಷ್ಠಕಲೆ ಹೀನವೆಂದೆನಿಸಿಕೊಂಡು ಸತತ ಮರೆಯಾಗಿರಲು ಸಾಧ್ಯವಿಲ್ಲ ಎಂಬ ಸತ್ಯ ಕಾಲಕ್ರಮೇಣ ಸ್ಥಾಪಿತವಾಯಿತು.

ಕ್ರಿ. ಶ. 1930 ರ ನಂತರ ಅನೇಕ ಸುಸಂಸ್ಕೃತ ಮನೆತನದವರು ಭರತನಾಟ್ಯವನ್ನು ಮೆಚ್ಚಿ ಅಭ್ಯಸಿಸಿ ಪ್ರದರ್ಶಿಸಿ ನೃತ್ಯಕಲೆಯ ಪುನರುತ್ಥಾನದ ಕಾರ್ಯವನ್ನು ಕೈಗೊಂಡರು. ನೃತ್ಯಕಲೆಗೆ ಪುನರ್ಜನ್ಮ ಬಂತು. ಭಾರತಕ್ಕೆ ಸ್ವಾತಂತ್ರ್ಯ ಬಂದ ಮೇಲೆ ಈ ಕಲೆಗೆ ಸರಕಾರದ, ಸಮಾಜದ ಮೆಚ್ಚುಗೆ ಬೆಂಬಲ ಸಿಕ್ಕಿತು. ಭರತನಾಟ್ಯ

ಎಂಬ ಹೆಸರು ಪಡೆದ ಮೇಲೆ ಮೈಸೂರು ಸಂಪ್ರದಾಯ, ತಂಜಾವೂರು ಸಂಪ್ರದಾಯ, ಮದ್ರಾಸು ಸಂಪ್ರದಾಯ ಎಂದು ಬೇರೆ ಬೇರೆ ವಿಧವಾಗಿ ಆಯಾ ಪ್ರಾಂತ್ಯಗಳಲ್ಲಿ ರೂಢಿಗೆ ಬಂದವು. 19 ನೇ ಶತಮಾನದ ಅಂತ್ಯದವರೆಗೆ ಎಂಬಂತೆ ಮೈಸೂರು ಸಂಸ್ಥಾನದ ಮುಖ್ಯ ಪಟ್ಟಣಗಳಲ್ಲಿ ದೇವಾಲಯಕ್ಕೆ ಸಂಬಂಧಿಸಿದ ಅನೇಕ ದೇವದಾಸಿಯರು ಕಲೆಯನ್ನು ಕಾಪಾಡಿಕೊಂಡು ಬಂದಿದ್ದರು. ಮೈಸೂರು ರಾಜ್ಯದ ಭೂಷಣಪ್ರಾಯ ಕಲಾವಿದೆ ಶ್ರೀಮತಿ ಜಟ್ಟಿತಾಯಮ್ಮನವರು ಆ ಕಾಲದ ಹಿರಿಯ ನರ್ತನ ವಿದುಷಿ. ಅರಮನೆಯಿಂದ ಪ್ರೋತ್ಸಾಹ ಪಡೆದ ಹಾಗೂ ದೇವಾಲಯಕ್ಕೆ ಸಂಬಂಧಪಟ್ಟ ದೇವದಾಸಿಯರು ಮತ್ತು ಅವರ 'ನಟುವನಾರ್' ಪಂಗಡಕ್ಕೆ ಸೇರಿದ ಕಲಾವಿದರಿಂದಾಗಿ ಮೈಸೂರು ಸಂಸ್ಥಾನದಲ್ಲಿ ಸುಮಾರು 200 ವರ್ಷಗಳ ಹಿಂದಿನಿಂದಲೂ ಭರತನಾಟ್ಯ ಅಭಿವೃದ್ಧಿ ಪಡೆದಿದೆ. ನಾಟ್ಯ ಸರಸ್ವತಿ ಶ್ರೀಮತಿ ಜಟ್ಟಿತಾಯಮ್ಮನವರ ಶಿಷ್ಯಂದಿರಾದ ಶ್ರೀಮತಿ ವೆಂಕಟಲಕ್ಷ್ಮಮ್ಮನವರು ಸುಮಾರು ಏಳು ದಶಕಗಳ ಕಾಲ ಶಿಕ್ಷಣ ಪಡೆದು ಇಂದಿಗೂ ಕಲಾಸೇವೆ ಮಾಡುತ್ತಲಿದ್ದಾರೆ. ಮೈಸೂರು ಭರತನಾಟ್ಯ ಸಂಪ್ರದಾಯದ ಪರಂಪರೆಗೆ ಅವರ ಕಾಣಿಕೆ ಹಿರಿಯದು.

ವಿದ್ವಾನ್ ಕೋಲಾರ ಪುಟ್ಟಪ್ಪನವರು ಬೆಂಗಳೂರು ನಗರದಲ್ಲಿ ಪ್ರಖ್ಯಾತ ನಾಟ್ಯ ಗುರುಗಳಾಗಿದ್ದರು. 1945 ರವರೆಗೆ ಇವರಿಂದ ಪ್ರಸಿದ್ಧ ಕಲಾವಿದರಾದ ರಾಮಗೋಪಾಲ್‌ರವರೂ ಅನಂತರ ಶ್ರೀ ಯು. ಎಸ್. ಕೃಷ್ಣರಾಯರೂ ಭರತನಾಟ್ಯ ಹೇಳಿಸಿಕೊಂಡರು. ಮದ್ರಾಸಿನಲ್ಲಿ ಶ್ರೀ ಈ. ಕೃಷ್ಣಅಯ್ಯರ್ ಮತ್ತು ಶ್ರೀಮತಿ ರುಕ್ಮಿಣಿದೇವಿ ಇವರು ನೃತ್ಯಕಲೆಯ ಪುನರುತ್ಥಾನದ ಕಾರ್ಯದಲ್ಲಿ ತೋರಿದ ಆಸಕ್ತಿ ಮತ್ತು ನಿರಂತರ ಪರಿಶ್ರಮದ ಫಲವಾಗಿ ಕುಲೀನ ಮನೆತನದವರ ಕಣ್ತೆರೆದಂತಾಯಿತು. ಬೆಂಗಳೂರಿನಲ್ಲಿ ರಾಮಗೋಪಾಲ್‌ರವರು ನಾಟ್ಯ ಸಂಸ್ಥೆಯನ್ನು ಸ್ಥಾಪಿಸಿದರು. ಕ್ರಮೇಣ ಶಿಕ್ಷಿತ ಜನ ನಾಟ್ಯಕ್ಕಾಗಿ ಅದರ ಪ್ರಸಾರಕ್ಕಾಗಿ. ಅಭಿವೃದ್ಧಿಗಾಗಿ ನೃತ್ಯದ ಕ್ಷೇತ್ರದಲ್ಲಿ ಕೆಲಸ ಕೈಗೊಂಡರು. ಈಗ ನಮ್ಮ ನಾಡಿನಲ್ಲಿ ನೃತ್ಯಕ್ಕೆ ಪ್ರೋತ್ಸಾಹ ಬೆಂಬಲಗಳಿವೆ. ಅಕಾಡೆಮಿಗಳ ಪ್ರಶಸ್ತಿಗಳು, ವಿದ್ಯಾರ್ಥಿ ವೇತನಗಳು, ನೃತ್ಯಕಲೆಯಲ್ಲಿ ಬೇರೆ ಬೇರೆ ಪರೀಕ್ಷೆಗಳನ್ನು ನಡೆಸುವ ವ್ಯವಸ್ಥೆಗಳು, ಲಲಿತಕಲಾ ಕಾಲೇಜುಗಳು, ನೃತ್ಯದಲ್ಲಿ ಪದವಿಯನ್ನು ಕೂಡ ಪಡೆಯುವ ವ್ಯವಸ್ಥೆ ಇವುಗಳೆಲ್ಲ ಇರುವುದರಿಂದ ಕಲೆಯ ಕಲಿಕೆ ಮತ್ತು ಮುಂದುವರಿಯುವಿಕೆಗೆ ಒಂದು ಪ್ರೋತ್ಸಾಹಕರ ವಾತಾವರಣ ಉಂಟಾಗಿದೆ. ನೃತ್ಯ ಕಲಾವಿದರು ಪರದೇಶಗಳಿಗೆ ಹೋಗಿಬರುವುದರ ಮೂಲಕ ಒಂದು ಬಗೆಯ ಸಾಂಸ್ಕೃತಿಕ ವಿನಿಮಯವೂ ಸಾಧ್ಯವಾಗಿದೆ. ಯಾವುದೇ ಕಲೆ ಕೆಲವು ಸವಾಲುಗಳನ್ನು ಸ್ವೀಕರಿಸಿ ಬೆಳೆಯುತ್ತ ಹೋಗುವುದು. ಇಂತಹ ಕಲೆ ಮತ್ತು ಸಂಸ್ಕೃತಿಯ ವಿನಿಮಯವಾದಾಗ ಬದಲಾದ ವಾತಾವರಣದಲ್ಲಿ ತಾನು ಬೆಳೆಯಬೇಕಾದ ಸವಾಲನ್ನು

ಎದುರಿಸಿದಾಗ ಇಂತಹ ಸವಾಲುಗಳನ್ನು ಎದುರಿಸಿ ನೃತ್ಯಕಲೆಯನ್ನು ಇಂದಿನ ವೇದಿಕೆಗಳಲ್ಲಿ ಜನಪ್ರಿಯಗೊಳಿಸಿದ ಕಲಾವಿದರು ಅನೇಕರಿದ್ದಾರೆ.

ನೃತ್ಯಕಲೆಯ ಪುನರುತ್ಥಾನಕ್ಕೆ ಮೂಲಭೂತ ವ್ಯಕ್ತಿಗಳಲ್ಲಿ ರವೀಂದ್ರನಾಥ ಠಾಕೂರ್ ಉದಯಶಂಕರ್–ಮೇನಕಾ, ರಾಂಗೋಪಾಲ್, ಇ. ಕೃಷ್ಣಅಯ್ಯರ್--ರುಕ್ಮಿಣೀದೇವಿ ಮುಂತಾದ ಕೆಲವರನ್ನು ಸ್ಮರಿಸಬೇಕು. ನೃತ್ಯಕಲೆಯನ್ನು ಜನಪ್ರಿಯ ಮಾಡಲು ಅವರು ಯೋಚಿಸಿದ ಪ್ರಯೋಗಗಳನ್ನು ಇಂದಿಗೂ ಇಂದಿನ ಕಲಾವಿದರು ಕುತೂಹಲದಿಂದ ಗಮನಿಸುತ್ತಾರೆ.

ಉದಯಶಂಕರ್ ಅವರು ಪೌರಾಣಿಕ ವಿಷಯಗಳೊಂದಿಗೆ ಆಧುನಿಕ ವಿಷಯಗಳನ್ನು ನೃತ್ಯಕಲೆಯ ಮೂಲಕ ಪ್ರದರ್ಶಿಸಿ ಜನರ ಮನ ರಂಜಿಸುತ್ತಿದ್ದರು. ನೃತ್ಯಸಂಗೀತದಲ್ಲೂ ವಿಶೇಷ ಬದಲಾವಣೆಗಳನ್ನು ಮಾಡಿ ರಸಿಕರನ್ನು ದಂಗುಪಡಿಸಿದರು. ಹಾಗೂ ದೀಪಾಲಂಕಾರ, ರಂಗವ್ಯವಸ್ಥೆ ಇತ್ಯಾದಿಗಳಿಂದ ನೃತ್ಯಕಲೆಗೆ ಅಪರೂಪದ ಸಂಭ್ರಮವನ್ನಿತ್ತರು.

ಮೇನಕಾರವರೂ ಅವರು ಕಥಕ್ ಶೈಲಿಯ ಮೂಲಕ ನೃತ್ಯನಾಟಕಗಳನ್ನು ರಚಿಸಿದರು.

ಶ್ರೀಮತಿ ರುಕ್ಮಿಣೀದೇವಿ ಅರುಂಡೇಲ್ ಅವರು ಕಲಾಕ್ಷೇತ್ರವನ್ನು ಸ್ಥಾಪಿಸಿ ಕಲೆಗೆ ಸ್ಥಾನಮಾನವನ್ನು ದೊರಕಿಸಿಕೊಟ್ಟರು. ಅನೇಕ ಪೌರಾಣಿಕ ನೃತ್ಯನಾಟಕಗಳನ್ನು ರಚಿಸಿದರು. ಅವರ ನೃತ್ಯನಾಟಕಗಳ ಪ್ರಭಾವವನ್ನು ಇಂದಿನ ಕಲಾವಿದರ ನೃತ್ಯರಚನೆಗಳಲ್ಲೂ ಕಾಣಬಹುದು.

ಗುಜರಾತಿನ ಶ್ರೀಮತಿ ಮೃಣಾಲಿನಿ ಸಾರಾಭಾಯ್ ಅವರು ಆಧುನಿಕ ವಿಷಯಗಳನ್ನು ಆರಿಸಿ ಸಮಾಜ ಸುಧಾರಣೆಗಾಗಿ ನೃತ್ಯನಾಟಕಗಳನ್ನು ರಚಿಸಿ ಪ್ರೇಕ್ಷಕರ ಮನಸೆಳೆದರು.

ಮಣಿಪುರಿಯಲ್ಲಿ ಬಿ. ಎನ್. ಸಿನ್ಹ ಮತ್ತು ಝವೇರಿ ಸೋದರಿಯರು ಸತತ ಪರಿಶ್ರಮದಿಂದ ಅನೇಕ ನೃತ್ಯ ರಚನೆಗಳನ್ನು ಪ್ರದರ್ಶಿಸಿ ಮಣಿಪುರಿ ಶೈಲಿಯ ಅದ್ವಿತೀಯ ಸೌಂದರ್ಯವನ್ನು ತೋರಿಸಿಕೊಟ್ಟರು. ಕಥಕ್ಕಳಿ ಶೈಲಿಯಲ್ಲಿ ಗೋಪಿನಾಥ್ ಅವರು ತಮ್ಮ ಶ್ರೀಮತಿ ತಂಕಮಣಿಯೊಂದಿಗೆ ವಿವಿಧ ಜೋಡಿ ನೃತ್ಯಗಳನ್ನು ರಂಗಸ್ಥಳಕ್ಕೆ ತಂದು ಕಲೆಗೆ ಕಳೆ ತಂದರು. ರವೀಂದ್ರನಾಥ ಠಾಕೂರ್‌ರವರು ಶಾಂತಿ ನಿಕೇತನದಲ್ಲಿ ತಮ್ಮದೇ ಆದ ಸ್ವತಂತ್ರ ಶೈಲಿಯಲ್ಲಿ ನರ್ತನವನ್ನು ಅಳವಡಿಸಿಕೊಂಡಿದ್ದಾರೆ.

ಈಗ ಶಾಸ್ತ್ರೀಯ ಶೈಲಿಗಳಲ್ಲದೆ ನೃತ್ಯ--ನಾಟಕಗಳನ್ನು ಬೇರೆ ಬೇರೆ ಶೈಲಿಗಳಲ್ಲಿ ಪ್ರದರ್ಶಿಸುವುದು ಜನಪ್ರಿಯವಾಗಿದೆ. ಭಾರತದ ಹಲಕೆಲವು ಮರೆಯಾದ ನೃತ್ಯಗಳನ್ನು ಬೆಳಕಿಗೆ ತರುವ ಪ್ರಯತ್ನ ನಡೆಯುತ್ತಿದೆ. ಭಾರತದಲ್ಲಿ ನೃತ್ಯಕಲೆ ಅನೇಕ ಶೈಲಿಗಳ ಅನೇಕ ಸಂಪ್ರದಾಯಗಳ ವೈವಿಧ್ಯಮಯವಾದ ಮಿಶ್ರಣವಾಗಿದೆ. ಯಾವುದೇ ರಚನಾತ್ಮಕ ಕಲೆ ತನ್ನ ಕಾಲದ ರೀತಿ ನೀತಿಗಳಿಂದ ಸ್ಫೂರ್ತಿ ಪಡೆದು ಪರಂಪರೆಯ ಒಳ್ಳೆಯ ಅಂಶಗಳನ್ನು ಉಳಿಸಿಕೊಂಡು ಸಹೃದಯನ ಮನಸ್ಸಿಗೆ ಸಾತ್ವಿಕ ಆನಂದವನ್ನು ಕೊಡಬೇಕಾಗುತ್ತದೆ. ಆ ನಿಟ್ಟಿನಲ್ಲಿ ನೃತ್ಯಕಲೆ ಕಾಲಕ್ಕೆ ತಕ್ಕ ಮಾರ್ಪಾಡುಗಳನ್ನು ಪಡೆಯುತ್ತ ಅಭಿವೃದ್ಧಿ ಪಥದಲ್ಲಿ ಸಾಗುತ್ತಿದೆ ಎಂಬುದು ಆಶೆಗೆ ಎಡೆಕೊಡುವಂಥ ವಿಷಯವಾಗಿದೆ.

ನಾನು ಮತ್ತು ನನ್ನ ನವಿಲು

● ಗುಂಟೂರು ಶೇಷೇಂದ್ರಶರ್ಮ/ಸ. ರಘುನಾಥ

ಆ ಮನೆಯಲ್ಲಿ ಒಂದು ತೋಟ – ಅದರಲ್ಲೊಂದು ನವಿಲು - ಆ ನವಿಲಿನಲ್ಲಿ ಒಂದು - ಅಲ್ಲ - ನನ್ನ ಹೃದಯದಲ್ಲೊಂದು ಮನೆ - ಆ ಮನೆಯಲ್ಲೊಂದು ತೋಟ- ಆ ತೋಟದಲ್ಲೊಂಸು ನವಿಲು. ಆ ನವಿಲಿನಲ್ಲೊಂದು ಎಂಥದೊ........ ಹೇಳುವೆ - ಆ ನವಿಲು ಬರುತ್ತದೆ, ನಾನಿದ್ದಲ್ಲಿಗೆ. ನಾನು ಬರೆಯುತ್ತಲೊ, ಓದುತ್ತಲೊ ಅದನ್ನು ಗಮನಿಸಲಿಲ್ಲವೆ, ನನ್ನ ಪೈಜಾಮವನ್ನು ತನ್ನ ಕೊಕ್ಕಿನಿಂದ ಹಿಡಿದು ಎಳೆಯುತ್ತದೆ, ನನ್ನ ಕಾಲಬೆರಳನ್ನು ನವಿರಾಗಿ ಕುಕ್ಕುತ್ತದೆ. ನಾನು ತಲೆ ಎತ್ತಿ ನೋಡಿದರೆ ಕೊರಳು ಚಾಚಿ, ಮೋರೆ ಎತ್ತಿ ತನ್ನ ಪುಟಾಣಿ ಕಣ್ಣುಗಳಿಂದ ನೋಡುತ್ತದೆ. ಎಳೆ ಮಗು ತಾಯ ಬಳಿ ಮಾಡಿದಂತೆ ಮುಸು ಮುಸು ಮಾಡಿ ತಿಂಡಿಗಾಗಿ ಕಾಡುತ್ತದೆ: ಕೊಕ್ಕೊಕ್ಕೊ ಅಂತ.

ಜೋಳವನ್ನೊ ಅಕ್ಕಿಯಕಾಳನ್ನೊ ನೆಲದಮೇಲೆ ಚೆಲ್ಲಿದರೆ ತಿನ್ನುವುದಿಲ್ಲ. ಕೊಕ್ಕೊಕ್ಕೋ ಅಂತ ಹಿಂದೆ ಹಿಂದಕ್ಕೆ ಹೆಜ್ಜೆಗಳನ್ನು ಹಾಕುತ್ತದೆ; ಕಾಳನ್ನು ಅಂಗೈಯಲ್ಲಿ ಹಿಡಿದರೆ ಖುಷಿಯಿಂದ ತಿನ್ನುತ್ತದೆ. ಹೊಟ್ಟೆ ತುಂಬಿದ ಮೇಲೆ ನಾನು ಬರೆಯುತ್ತಿದ್ದರೆ ಅಲ್ಲಿಯೆ ನಿಲ್ಲುತ್ತದೆ. ಅಲ್ಲೆಲ್ಲ ಓಡಾಡುತ್ತ, ಆಗಾಗ ಕೊಕ್ಕೊಕ್ಕೋ ಅಂತ, ತಾನಿಲ್ಲೆ ಇರುವೆನೆಂದು ನೆನಸಿಸುತ್ತ.

ನಾನು ಬೆಳಲಿ ಮನೆಗೆ ಬಂದಕೂಡಲೆ ನವಿಲು ಎಲ್ಲಿಂದಲೊ ಬರುತ್ತದೆ. ನನ್ನ ಹತ್ತಿರಕ್ಕೆ ನಡೆದು ಬರುವ ಆ ಬಣ್ಣದ ಮೆರವಣಿಗೆ, ಮೇಘದಡವಿಗೆ ಕಾಮನಬಿಲ್ಲು ಬಂದಂತೆ ಪಾಪ ಮಾತನಾಡಲಿಲ್ಲ. ತನ್ನ ಭಾವನೆಗಳನ್ನು ಪ್ರಕಟಪಡಿಸಲಿಲ್ಲ.

ಒಂದು ಸಾಗರ ತನ್ನಲ್ಲಿ ಘೋಷಿಸುತ್ತಿದೆ. - ಬಂಧನಗಳ ಹರಕೊಂಡು ಹೊರಬೀಳಲು ವಿಫಲವಾಗಿ, ಉದ್ರೇಕಗೊಳ್ಳುತ್ತದೆ. ಆ ಜೀವವೆಷ್ಟು ನೊಂದಿದೆಯೋ ಒಳ ಒಳಗೇ, ಬ್ರಹ್ಮನನ್ನು ಅದೆಷ್ಟು ನಿಂದಿಸುವುದೊ ತನ್ನ ವೈಕಲ್ಯಕ್ಕೆ.

ಒಂದು ದಿನ ನಾನು ಸತ್ತು ಹೋದೆ. ನನ್ನ ಕೋಣೆಯಲ್ಲಿ ಎಲ್ಲರೂ ಅಳುತ್ತಿದ್ದಾರೆ. ಅದೋ ನವಿಲು. ನಿಧಾನವಾಗಿ ಬೆದರುತ್ತ ಬರುತ್ತಿದೆ. ಮನುಷ್ಯರು ಗುಂಪುಗುಂಪುಗಳಾಗಿ ನೆರೆದ ಆ ಕೋಣೆಯೊಳಕ್ಕೆ, ಎಲ್ಲ ದಿಕ್ಕುಗಳಿಗೂ ಮುಖ ತಿರುವುತ್ತ, ಪ್ರಾಣಭಯದಿಂದ ಬರುತ್ತಿದೆ. ಎಷ್ಟೇ ಪ್ರಾಣಭಯವುಂಟಾದರೂ ಕೋಣೆಯೊಳಕ್ಕೆ ಏನೋ ತನ್ನನ್ನು ಸೆಳೆಯುತ್ತಿರುವಂತೆ ನನ್ನತ್ತ ಬರುತ್ತಿದೆ. ಆ ಸೆಳೆತ ಎಂಥಹುದೊ ನಾನು ಬಲ್ಲೆ; ಬಹಳ ಮಂದಿಗೆ ತಿಳಿದಿಲ್ಲ. ಅದೇ ಈ ಜಗತ್ತಿನ ದುರದೃಷ್ಟ ! ಮೃತ್ಯುಭಯ ಅದನ್ನು ತಡೆಯ ದಾಗಿದೆ; ನಾನು ಸತ್ತಿರುವೆ ! ಆದರೆ ಈ ವಿಚಿತ್ರವನ್ನು ಮಾತ್ರ ನೋಡುತ್ತಿರುವೆ. ಅನೇಕರು ನನ್ನ ದೇಹದ ಮೇಲೆ ಬಿದ್ದುಗೋಳಾಡುತ್ತಿದ್ದಾರೆ.

ತಟಕ್ಕೆಂದು ಮೊಪಾಸಾನ ಕಥೆ 'ಪ್ರೇಮ' ನನ್ನ ಮನದಲ್ಲಿ ಮಿಂಚಿನಂತೆ ಮಿಂಚಿತು. ಆ ಕಥೆಯಲ್ಲಿ ಬೇಟೆಗಾರನು ಒಂದು ಜೋಡಿ ಹಕ್ಕಿಯಲ್ಲಿ ಹೆಣ್ಣು ಹಕ್ಕಿಗೆ ಗುಂಡಿಕ್ಕು ತ್ತಾನೆ. ಅದು ನೆಲದ ಮೇಲೆ ಉರುಳಿ ಬೀಳುತ್ತದೆ. ಆಗ ಗೆಳೆಯನೊಂದಿಗೆ ಹೇಳು ತ್ತಾನೆ, "ಬಂದೂಕಿನ ಗುರಿ ನೋಡುತ್ತಿದ್ದರೂ ಕೂಡ ಎರಡನೇ ಹಕ್ಕಿ ತಪ್ಪದೆ ನನ್ನ ಬಂದೂಕಿನ ಪರಧಿಯೊಳಕ್ಕೆ ಬರುತ್ತದೆ. ಇಂತಹ ಜೋಡಿಯಲ್ಲಿ ಒಂದನ್ನು ಕೊಂದರೆ ಎರಡನ್ನೂ ಕೊಂದಂತೆಯೆ." ಹಾಗೇ ಆಕಾಶದಲ್ಲಿ ವಲಯಾಕಾರದಲ್ಲಿ ಸುತ್ತುತ್ತ ಹೃದಯ ಒಡೆಯುವಂತೆ ರೋಧಿಸುತ್ತ, ನೆಲದ ಮೇಲೆ ನೆತ್ತರ ಪ್ರವಾಹದಲ್ಲಿ ಬಿದ್ದಿರುವ ಹೆಣ್ಣು ಹಕ್ಕಿಯತ್ತ ಬರುತ್ತದೆ, ಆ ಗಂಡು ಹಕ್ಕಿ. ಭಯವೆಂಬುವನ್ನೆ ಮರೆತು ಬಂದೂಕಿನ ಗುರಿಗೆ ಬರುತ್ತದೆ. ಕೂಡಲೆ ಬೇಟೆಗಾರ ಗುಂಡು ಹಾರಿಸಿದ 'ಢಮಾರ್'

ಆ ಕೂಡಲೇ ನನಗೆ ಕೇಳಿಸಿತು - ಕಠೋರವಾಗಿ ಶಪಿಸುತ್ತಿರುವ ಒಂದು ಪುರಾತನ ಕಂಠ - ವಾಲ್ಮೀಕಿ. ಆ ಕೊರಳು ಮೊಪಾಸಾನ ಬೇಟೆಗಾರನನ್ನು ಬೈಯುತ್ತಿದೆ. ವಾಲ್ಮೀಕಿ ಒಂದು ಚೆಡ್ಡಿ ಬೂಟು ಧರಿಸಿದ್ದಾನೆ. ತಲೆಯಲ್ಲೊಂದು ಆಂಗ್ಲ ಟೋಪಿ ಯಿದೆ; ಮುಖದಲ್ಲಿ ನಿಶಿತ ಬಾಧೆಯ ರೇಖೆಗಳು ಮೂಡಿವೆ. ಪಕ್ಕದ ಗೆಳೆಯನ ಕೈಯ ಬಂದೂಕು ಹೊಗೆ ಉಗುಳುತ್ತಿದೆ. ನಾನು ನನ್ನ ಸಾವಿನ ವಿಷಯ ಮರೆತು ದಿಗ್ಭ್ರಾಂತನಾದೆ. ಇದೇ ಕಂಠವೇ ಹಿಂದೊಬ್ಬ ಬೇಟೆಗಾರನನ್ನು ಶಪಿಸಿತ್ತು. ಈಗ ಮತ್ತೊಬ್ಬನನ್ನು. ಈ ಕೊರಳು ಯಾವಾಗಲೂ ಹೀಗೆ ಶಪಿಸುತ್ತಿರುವುದೇ ಎಲ್ಲ ಕಾಲದ ಬೇಟೆಗಾರನನ್ನು. ಮಾನವೀಯತೆಗೆ ಗಾಯ ಮಾಡುವವರನ್ನು ..... ಕಾಲದ ಹಾದಿ

ಗಳಲ್ಲಿ ದಾಳಿ ಮಾಡುವ ದರೋಡೆಕೋರರಿಂದ ಮಾನವೀಯತೆಯನ್ನು ರಕ್ಷಿಸಲು ಅಹರ್ನಿಶಿ ಪಹರೆ ಕಾಯುವ ಪೋಲೀಸನೇನು ಈ ಕೊರಳು !

ಜಗತ್ತಿನಲ್ಲಿ ಮಾನವೀಯತೆ ಶಬ್ದವಾಗಿ ಮಾರ್ಪಡುತ್ತದೆ. ಆ ಶಬ್ದ ಚಿರವಾಗಿ ಲೋಕವಲ್ಲೆಲ್ಲ ಪರಿಭ್ರಮಿಸುತ್ತಿರುತ್ತದೆ; ಯುಗದಿಂದ ಯುಗಕ್ಕೆ, ದೇಶದಿಂದ ದೇಶಕ್ಕೆ ಭಾಷೆಯಿಂದ ಭಾಷೆಗೆ, ಅನಂತವಾಗಿ........

ಒಂದು ಇಪ್ಪತ್ತೊಂದನೆ ಶತಮಾನದ ಸಾಯಂಕಾಲ - ನಾನು, ಆಲ್ಬರ್ಟ್ ಕಾಮೂ ಒಂದು ಉದ್ಯಾನದ ಈಜು ಕೊಳದಲ್ಲಿ ಈಜುತ್ತಿದ್ದೇವೆ. ಆ ನೆತ್ತರಿನಲ್ಲಿ ನೆನೆದ ನಾವು ಒಂದೇ ಬಾಗೆ ಹುಟ್ಟಿದ ಎರಡು ಅರುಣ ಬಿಂಬಗಳಂತೆ ಇದ್ದೇವೆ. ನಾನೆಂದರೆ- ''ಕಾಮೂ, ಹಿಂಸೆ ದ್ವೇಷಗಳಿಂದ ಯಾವ ಮಹಾ ಕಾವ್ಯವೂ ಹುಟ್ಟದೆಂದೆ. ಮತ್ತೆ ಈಗ ನಾವು ಈಜುತ್ತಿರುವ ಈ ನೆತ್ತರ ಪೂರವೇನು ? ಮಾನವನ ಮೇಲಿನ ಪ್ರೇಮ ದಿಂದಲೆ ತಾನೆ ಈ ನೆತ್ತರು ಹರಿದುದು ? ನೆತ್ತರು ಹರಿಯದೇ ಹೋದರೆ, ಅದೋ ಆ ಎಳೆ ಕಂದಮ್ಮಗಳು ಹಾಗೆ ಆ ಹುವ್ವುಗಳಲ್ಲಿ ಆಡಿಕೊಳ್ಳುತ್ತಿರಲಿಲ್ಲ. ಉದಯಾಸ್ತ ಮಯಗಳು ಎಲ್ಲರಿಗೂ ಇಷ್ಟು ರಂಗುಗಳನ್ನು ಚೆಲ್ಲುತ್ತಿರಲಿಲ್ಲ.'' ಕಾಮೂ ಮಾತನಾ ಡುವ ಮೊದಲೆ, ದಡದ ಮೇಲೆ ಹೂವರಳಿಸಿದ ಬಳ್ಳಿ ಪೊದೆಯ ಪಕ್ಕದಲ್ಲಿ ಕುಳಿತಿದ್ದ ಕಾಫ್ಕ ಹೇಳಿದ- ''ಈ ರಕ್ತ ಪ್ರವಾಹ ಬೇಕು. ಆದರೆ ಅದರಲ್ಲಿ ಕೆಲವರು ದೋಣಿ ಗಳಲ್ಲಿ ಪಯಣ ಮಾಡುತ್ತಿದ್ದಾರೆ- ಕೀರ್ತಿ ಶಿಖರಗಳಿಗೆ. ಅವರ ಗುರಿ ಕೀರ್ತಿ ಶಿಖರಗಳೆ ಹೊರತು ಈ ನೆತ್ತರು ಯಾರದೊ, ಯಾರಿಗಾಗಿ ಹರಿಯಿತೊ ಅವರ ಕ್ಷೇಮವಲ್ಲ. ಅವರು ತಮ್ಮ ನೆತ್ತರ ಒಂದೂ ಹನಿಯನ್ನು ಸುರಿಸರು. ಪರರ ರಕ್ತ ಹರಿದರೆ ಕವಿತೆ ಗಳು ಬರೆಯುತ್ತಾರೆ.

ಭವಭೂತಿಯೊಂದಿಗೆ ಪ್ಲೇಟೊ ಯಾವುದೊ ಚಿತ್ರವನ್ನು ವೀಕ್ಷಿಸುತ್ತಿದ್ದಾನೆ. ''ಇದು ಥಾಯಾಲೆಂಡಿನಲ್ಲಿ ರಚಿಸಿದ ಚಿತ್ರ'' ಅಂದ ಭವಭೂತಿ. ''ಇದು ಕಾಲಕಡಲನ್ನು ಈಜಿ ಬರುವ ಮಾನವತಾ ಸಂದೇಶ'' ಅಂದ ಪ್ಲೇಟೋ. ಅಷ್ಟರಲ್ಲಿ ಕಾಫ್ಕಾ ಅಂದ ಮಾತಿದು- ಫ್ರಾಂಜ್, ಈ ಕಡಲ್ಗಳ್ಳರು ಯಾವಾಗಲೂ ಇದ್ದಾರೆ. ನಮ್ಮ ಗುರುವಿನ ಕೈಲಿ ವಿಷಕುಡಿಸಿದವರು ಇವರೆ, ಅವನು ಸತ್ತ ನಂತರ ಅವನ ಮತಕ್ಕೆ ಗುರುಗಳಾಗಿ ಕುಳಿತ ವರೂ ಇವರೆ. ಚಿತ್ತ ಶುದ್ಧಿ ಇರದವರು ಎಂದಿಲ್ಲ ? ಅವರಲ್ಲಿಯವನೇ ಹೋದ ವರ್ಷ ಸಿಸ್ಟೀನ್ ಚಾಪೆಲ್‌ನಲ್ಲಿನ ಪಿಯೆಟಾ ಮಾತೃ ಮೂರ್ತಿಕೆಯ ಮೂಗು ಕೈಗಳನ್ನು ತುಂಡರಿಸಿಬಿಟ್ಟ. ವಿಷಕುಡಿಯುವ ಮೊದಲು ನಮ್ಮ ಗುರುಗಳು ನುಡಿದ ನುಡಿಗಳು

ಈಗಲೂ ಪ್ರತಿಧ್ವನಿಸುತ್ತಿದೆ.

''ಓ ನ್ಯಾಯಾಧಿಕಾರಿಗಳೇ ! ನೀವು ಸಂತಸದಿಂದಿರಿ....... ನಾನು ಹೋಗುವ ಕಾಲ ಹತ್ತಿರಾದಂತೆ ನನಗೆ ಸ್ಪಷ್ಟವಾಗಿ ಗೋಚರಿಸುತ್ತಿದೆ. ನಾನಿನ್ನು ಸಾಯುವುದೇ ಲೇಸು. ಈ ಬಾಧೆಯಿಂದ ವಿಮುಕ್ತನಾಗುತ್ತೇನೆ........ ನನ್ನ ಮೇಲೆ ಅಪರಾಧ ಹೊರೆಸಿದವರ ಮೇಲಾಗಲಿ, ನನಗೆ ಶಿಕ್ಷೆ ವಿಧಿಸಿದವರ ಮೇಲಾಗಲಿ ನನಗೆ ಸ್ವಲ್ಪವೂ ಮುನಿಸಿಲ್ಲ. ಪಾಪ ಅವರು ನನಗೆ ಯಾವ ಅಪಕಾರವನ್ನೂ ಮಾಡಲಿಲ್ಲ; ಉಪಕಾರ ಮಾಡುವ ಮನಸ್ಸು ಇರದಿರಬಹುದು.

ಅವರನ್ನು ನನಗೊಂದು ಉಪಕಾರ ಮಾಡಿರೆಂದು ಕೋರುತ್ತಿದ್ದೇನೆ. ನನ್ನ ಮಕ್ಕಳು ದೊಡ್ಡವರಾದ ಮೇಲೆ ಅವರನ್ನೂ ಹೀಗೆ ಶಿಕ್ಷಿಸಿರೆನ್ನುತ್ತೇನೆ. ನಾನು ನಿಮ್ಮನ್ನು ವಿಮರ್ಶಿಸಿದಂತೆ ಅವರ ಬೂಟಕದ ಮೌಲ್ಯಗಳನ್ನು ಅವರ ಮಿಥ್ಯ ಸ್ವರೂಪಗಳನ್ನು ಖಂಡಿಸಿರಿ. ನೀವು ನಿಜವಾಗಿಯೂ ಈ ಕೆಲಸ ಮಾಡಿದರೆ ನಿಮ್ಮ ಕೈಗಳಿಂದ ನನಗೆ, ನನ್ನ ಮಕ್ಕಳಿಗೆ ನ್ಯಾಯ ಭಿಕ್ಷೆ ನೀಡಿದವರಾಗುತ್ತೀರಿ.'' ನಮ್ಮ ಗುರುಗಳು ಕುಡಿದದ್ದು ವಿಷವಲ್ಲ- ಅದು ಚಿತ್ತಶುದ್ಧಿಗೆ ನಿಷೋಸಲ,''

ತದೇಕ ಧ್ಯಾನದಿಂದ ಆಲಿಸುತ್ತಿದ್ದ ಇಕ್ಬಾಲ್ ಅಂದ-

''ಕಾಲಕ್ಕೆ ಮೊದಲು ಹುಟ್ಟಿ ಕಾಲಕ್ಕೆ ಬಲಿಯಾಗಿ ಹೋದನು.
ಎಷ್ಟೋ ಅಸಂಖ್ಯಾತ ತಾರೆಗಳು
ಗತಿಸಿದ ನಂತರವೆ ಲೋಕಕ್ಕೆ ಒಂದು
ಅರುಣೋದಯವಾಗುವುದು.''

500 ವರ್ಷಗಳ ನಂತರ ಅವನೇ ಕ್ರಿಸ್ತನೆಂಬುವ ಹೆಸರಿನಲ್ಲಿ ಹುಟ್ಟಿದ. ಕ್ರಿಸ್ತನಾಗಿ ಹುಟ್ಟುವ ಶತಮಾನಕ್ಕೆ ಮುಂಚೆ ಮಹಾಕವಿ ವರ್ಜಿಲ್ ಮನಸ್ಸಿನಲ್ಲಿ ಕೋಲ್ಮಿಂಚಿನಂತೆ ಮಿಂಚಿದ. ಆ ಮಹಾಕವಿ ತನ್ನ ಇಕೊಲೋಗ್ಸ್‌ನಲ್ಲಿ ''ಆ ದಿವ್ಯ ಜ್ಞಾನ ಗೀತೆಯಲ್ಲಿ ಚರಮಘಟ್ಟ ಈಗ ಬರುತ್ತದೆ. ಮಹಾಶಕೆಗಳ ಪರಂಪರೆ ಮತ್ತೆ ಉದಯವಾಗುತ್ತದೆ. ಆ ಕನ್ಯೆ ಮತ್ತೆ ಹಿಂತಿರುಗಿ ಬರುತ್ತಾಳೆ........ ಈಗ ಒಂದು ನವ ಜಾತಿ ಸುವರ್ಲೋಕ ದಿಂದ ಭುವರ್ಲೋಕಕ್ಕೆ ಅವತರಿಸುತ್ತದೆ. ಓ ನಿರ್ಮಲ ದೇವತೆ ಲ್ಯೂಸಿನಾ, ಈ ನವ ಜಾತ ಶಿಶುವಿನ ಮೇಲೆ ನಿನ್ನ ಕರುಣಾಮಯ ಮಂದಹಾಸವನ್ನು ಸಿಂಚಿಸು, ಈ ಮಗುವಿನ ಕಾಲದಲ್ಲಿ ಕಬ್ಬಿಣದ ಜಾತಿ ಅಂತವಾಗುತ್ತದೆ, ಸುವರ್ಣಜಾತಿ ಅವತರಿಸುತ್ತದೆ, ಜಗತ್ತೆಲ್ಲ

ವ್ಯಾಪಿಸುತ್ತದೆ ...... '' ಎಂದು ಗಾನ ಮಾಡಿದ. ಆದ್ದರಿಂದಲೇ ಅವನನ್ನು ಇಂದು ಕ್ರಿಸ್ತನಿಗೆ ಹಿಂದೆ ಹುಟ್ಟಿದ ಕ್ರಿಶ್ಚಿಯನ್ ಅನ್ನುವರು.

ಒಂದು ದಿನ ದೂರದರ್ಶನದಲ್ಲಿ ಮೆಕ್‌ಡಯಾರ್ಮಿಡ್ ಮುಖ- ಅವನು ತನ್ನ 'ಥರ್ಡ್ ಹಿಂಟು ಲೆಲಿನ್' ಹಾಡುತ್ತಿದ್ದಾನೆ.

''ಮೈಕೇಲ್ ರಾಬರ್ಟ್ಸ್, ಇನ್ನೂ ಇತರ ದೇವದೂತರು, ಓಡೆನ್, ಸ್ಪೆಂಡರ್....... ಇವರಾರಿಗೂ ಕಾರ್ಲಯಿಲ್‌ಗಿದ್ದ ಧೈರ್ಯದಲ್ಲಿ, ನೀತಿಯಲ್ಲಿ ಹತ್ತರಲ್ಲೊಂದು ಭಾಗವಿಲ್ಲ. ಆ ವಂಚಕರಂತೆ ಅಲ್ಲದೆ ನಾನು ಶ್ರಮಿಕ ವರ್ಗದಲ್ಲಿಯವನು; ಶ್ರಮಿಕರಿಗಾಗಿ ಶ್ರಮಿಸುತ್ತಿದ್ದೇನೆಂದು ಬೀಗುವವರಲ್ಲಿ ಒಬ್ಬನಲ್ಲ, ಶ್ರಮಿಕನೇ ......''

ನಾನು ಹೇಳಿದೆ- ''ಅಯ್ಯಾ ತುಂಬಾ ಯೋಗ್ಯವಾಡಿದೆ. ಸೊಗಸಿದೆ. ಒಂದು ಪುಟ್ಟ ಸಂಘಟನೆ ಹೇಳುವೆ- ಮೊನ್ನೆ '19 ನೇ ಶತಮಾನದ ಫ್ರೆಂಚ್ ಕವಿತೆ' ಅನ್ನುವ ನನ್ನದೊಂದು ಪುಸ್ತಕ ಪುಸ್ತಕಗಳ ಅಲಮಾರಿನಿಂದ ಕಾಣೆಯಾಗಿತ್ತು. ಯಾವನೊ ಹೇಳದೆ ಹೊತ್ತೊಯ್ದನೇ ಕತ್ತೇಭಡವನೆಂದು ಕೆಲ ದಿನ ಗೊಣಗಿಕೊಂಡೆ. ಆದರೊಂದು ದಿನ ಅದು ಕಂಡಿತು- ನಮ್ಮವನೇ ಆದ ಆಧುನಿಕ ಕುಕವಿಯೊಬ್ಬನ ಹೊಸ ಕವಿತೆಯಲ್ಲಿ!''

''ಯಾರವನು, ನಿಮ್ಮ ಕನ್ನಡಿಗನೇನು?'' ಅಂದ ಪೂರ್ ಮೆಕ್ ಡಯಾರ್ಮಿಡ್-

ರಾತ್ರಿ ಬಂದಿತೊಂದು ಕನಸು, ಟೆಕ್ನಿಕನಸು- ಅಂತರಂಗದಲ್ಲಿ ಮಲ್ಟಿ ಡೈಮೆನ್ಷನ್ ಪರದೆಯ ಮೇಲೆ ದೃಶ್ಯಗಳು. ಷ್ಯಾಂಕೋಕ್ತೋ, ನಾನೂ ಕುಳಿತು ಗಾಂಜಾ ಹೊಡೆಯುತ್ತಿದ್ದೆವು. ''ವೃಕ್ಷ ಜಾತಿ ಪದಾರ್ಥಗಳಲ್ಲಿ ಗಾಂಜಾವೊಂದೆ ನಮಗೆ ವೃಕ್ಷ ಸ್ಥಿತಿಯನ್ನು ಸಿದ್ಧಪಡಿಸಿ ತೋರಿಸುವುದು.

ಅದರ ಮೂಲದಿಂದಲೆ ವೃಕ್ಷ ಜಾಲದಲ್ಲಿರುವೊಂದು ಅವ್ಯಕ್ತ ವೇಗ ನಮಗೆ ತಿಳಿಯುತ್ತದೆ. ವೃಕ್ಷಗಳು ಮಾಮೂಲಾಗಿ ನಿಶ್ಚಲವಾಗಿ ಕಾಣಿಸುತ್ತವೆ. ಆದರೆ ಅವಕ್ಕಿರುವ ವೇಗವನ್ನು ನಮ್ಮ ಅಸಮರ್ಥ ಇಂದ್ರಿಯಗಳು ಅನುಮಾನಿಸುವುದು ಕೂಡ ಇಲ್ಲ'' ಅಂದ ಕೋಕ್ತೋ. ಪಕ್ಕದಲ್ಲಿ ಇದ್ದ ಪಿಕಾಸೋ ಅಂದ, ''ಗಾಂಜಾ, ವಾಸನಾ ಪ್ರಪಂಚದಲ್ಲಿ ಬಹಳ ಕಡಿಮೆ ಅಸಹ್ಯತೆಯಿರುವ ವಾಸನೆ. ಆ ವಾಸನೆಯೊಂದಿಗೆ ಹೋಲಿಸಬಲ್ಲಂತಹುದು- ಸರ್ಕಸ್ಸು ವಾಸನೆಯಾಗಲಿ ಇಲ್ಲವೆ ಬಂದರು ವಾಸನೆಯಾಗಲಿ.''

ಕೋಕ್ತೋ- ಆ ವಾಸನೆ ಎಷ್ಟು ಇಂದ್ರ ಜಾಲವನ್ನು ಹರಡುವುದೋ ಹೇಳಲಾರೆ. ಸೊಣಗಳು ನಾಲ್ಕು ದಿಕ್ಕುಗಳಿಂದ ಮುತ್ತಿಕೊಳ್ಳುತ್ತವೆ. ಅವುಗಳ ತಲೆಗಳಲ್ಲಿ ಕನಸುಗಳು ಕವಿಯುತ್ತವೆ. ಹಲ್ಲಿಗಳು ಗೋಡೆಗಳಿಗೆ ಕಚ್ಚಿಕೊಂಡು ಮೂರ್ಛೆ ಹೋಗುತ್ತವೆ. ರಾತ್ರಿಯ ಆಗಮನಕ್ಕಾಗಿ ಕಾಯುತ್ತವೆ.”

ನಾನು ಹೇಳಿದೆ- “ಗಾಂಜಾವನ್ನು ನಮ್ಮ ಖಂಡದಿಂದ ನೀವು ತರಿಸಿಕೊಂಡಿರಿ. ಆದರೆ ಅದರ ಮರ್ಮ ನಿಮಗೆ ತಿಳಿದಷ್ಟು ನಮಗೆ ತಿಳಿಯದು.” ಕೋಕ್ತೋ ಅಂದ- “ಯುವ ಏಷಿಯಾ ಅದರ ಹೊಗೆಯನ್ನೀಗ ಸೇವಿಸುವುದಿಲ್ಲ. ಏಕೆಂದರೆ ಅದರ ತಾತ ಸೇದಿದ್ದರಿಂದ ! ಯುವ ಯುರೋಪು ಸೇವಿಸುತ್ತದೆ, ಏಕೆಂದರೆ ಅದರ ತಾತ ಸೇವಿಸಿರಲಿಲ್ಲ. ದುರಾದೃಷ್ಟವೆಂದರೆ ಯುವ ಏಷಿಯಾ, ಯುವ ಯೂರೋಪನ್ನು ಅನುಕರಿಸುತ್ತಿದೆ. ಆದ್ದರಿಂದ ಗಾಂಜಾ ನಮ್ಮ ಮೂಲಕ ಮತ್ತೆ ತನ್ನ ಜನ್ಮ ಸ್ಥಾನವನ್ನು ಸೇರಿಕೊಳ್ಳುತ್ತದೆ.”

ಹೀಗೆ ಸಂಭಾಷಣೆ ಸಾಗುತ್ತಿದ್ದರೆ ನನ್ನ ಮನಸ್ಸು ಕರ್ಪೂರ ಪರಾಗವಂತೆ ಗಾಳಿಯಲ್ಲಿ ಲೀನವಾಗುತ್ತಿದೆ. ಹೀಗೇಕೆ ಅಂದೆ-

ಕೋಕ್ತೋ– “ಎಚ್ಚರಗೊಳಿಸಲು ಪ್ರಯತ್ನಿಸಬೇಡ. ಅದರ ಮೃದು ಬೆರಳ ಲಾಲನೆಗೆ ವಶನಾಗು. ಒಮ್ಮೆ ಕವಿ ಎಚ್ಚೆತ್ತನೆಂದರೆ ಅವನು ಮೂರ್ಖ– ಅಂದರೆ ಮೇಧಾವಿ. ನಾನೆಲ್ಲಿರುವೆ ಅನ್ನುತ್ತಾನೆ. ಮೂರ್ಛೆ ತಿಳಿದೆದ್ದ ಹೆಂಗಸಿನಂತೆ. ಎಚ್ಚರಗೊಂಡಿರುವ ಕವಿ ಬರೆಯುವ ಬರಹಗಳನ್ನು ಓದುವುದು ನಿಷ್ಪ್ರಯೋಜನ.”

ನಾನೆಂದೆ– “ಮತ್ತೆ ಕನಸಿನಲ್ಲಿ ತಲೆದೂರಿಸಿದ ಕವಿ ಬರೆಯುವ ಬರಹಗಳು ಯಾರಿಗೆ ಅರ್ಥವಾಗುತ್ತವೆ.”

“ರಾಜಕೀಯವಾದಿಯಾದರೆ ಹೊರತು ಕವಿಯಾದವನು ತನ್ನನ್ನು ಅರ್ಥಮಾಡಿಕೊಳ್ಳುವ ಓದುಗರ ಸಂಖ್ಯೆಯ ಮೇಲೆ ಆಧಾರಗೊಳ್ಳಬೇಕು. ತನ್ನ ಭಾಷೆಯ ಧ್ವನಿಯನ್ನು ಹೋಲಿಸಿಕೊಳ್ಳಬಲ್ಲವರು, ತನ್ನ ಭಾಷೆಯ ಅಂತರಾತ್ಮವನ್ನು ಗುರುತಿಸಬಲ್ಲವರು ಓದುಗರನ್ನಾಗಿ ಹೆಚ್ಚು ಮಂದಿಯನ್ನು ಅಪೇಕ್ಷಿಸುವುದು ಕವಿಯ ಲಕ್ಷಣವಲ್ಲ.” ಅಂದ ಕೋಕ್ತೋ.

ಇಲಿಯಟ್ ಕೂಡಿಕೊಂಡು– “ನಾನು ನಿನ್ನೊಂದಿಗೆ ಏಕೀಭವಿಸುತ್ತೇನೆ. ರಾಜಕೀಯ ಸಂಬಂಧ ಕಾವ್ಯಕ್ಕೆ ಕೂಡಲೆ ಗುರುತು ತಂದುಕೊಡಬಲ್ಲದು. ಆದರೆ ನಾಳೆಯೂ ನವ

ಆ ಕವಿತೆ ಓದಲ್ಪಟ್ಟಿತೆಂದರೆ ರಾಜಕೀಯ ಸಂಬಂಧವಿರುವುದೆಂದಲ್ಲ. ಇಲ್ಲವಾದರೂ ಓದಲ್ಪಡುವುದು, ಅದು ನಿಜವಾಗಿಯೂ ಕವಿತ್ವವಾದರೆ. ಏಕೆಂದರೆ ರಾಜಕೀಯ ಪದಾರ್ಥವೂ ಸಹ ಮಾನವೀಕರಿಸಲ್ಪಟ್ಟ ಕವಿತೆಯಾಗಿ ಮಾರ್ಪಡಿಸದಾದರೆ ಅದು ಓದಿ ಮರೆಯಲು ಮಾತ್ರವೇ ಅರ್ಹವಾಗುತ್ತದೆ'' ಅಂದ.

''ಸರಿ ಇಲಿಯಟ್, ನೀನು ಇಡಿಯಟ್ ಆಗದ ಹೊರತು ಕವಿತ್ವ ಹೇಳುವುದಿಲ್ಲ. ಗಾಂಜಾ ಹೊಡೆದರೆ ನೀನು ನಿನ್ನಲ್ಲಿರೊಲ್ಲ. ನಿನ್ನ ಬಾಹುಗಳಲ್ಲಿ ನಿನ್ನ ತಲೆ ಮರೆಸಿಕೊ, ಭುಜಗಳಿಗೆ ಕಿವಿ ಜೋಡಿಸು; ಇನ್ನು ನೋಡು- ಭೂಕಂಪಗಳು, ಕ್ರಾಂತಿಗಳು, ಕಮರ್ಾಗಾರಗಳ ಆಸ್ಫೋಟ, ಸೈನ್ಯಗಳು ಸೈನ್ಯಗಳೇ ಪಲಾಯನ, ಮಹಾಪ್ರವಾಹಗಳ ಮುಸ್ಸುಮುಕುವಿಕೆ, ಎಷ್ಟೋ ವಿಚಿತ್ರಗಳು ನಿನ್ನ ಶರೀರಾಂತರ್ಗತ ಸೀಮೆಗಳಲ್ಲಿ ನಕ್ಷತ್ರ ಗಳು ಕಿಕ್ಕಿರಿದ ರಾತ್ರಿಯಲ್ಲಿ ನಿನ್ನ ಕಿವಿ ದರ್ಶಿಸುತ್ತದೆ.

ಆಗ್ಗೇ ನನ್ನಲ್ಲಿ ಕಾಲವೂ ದೂರವೂ ಅದೃಶ್ಯವಾದವು. ಶಬ್ದಗಳು, ಸಮುದ್ರಗಳು, ಅವುಗಳ ಸಂಗೀತ ವಿಜೃಂಭಿಸಿತು, ಆ ಅವ್ಯಕ್ತ ಮಾನಸಿಕ ಸಮುದ್ರ ತರಂಗಗಳಲ್ಲಿ ತನ್ನ 'ಕೆಚ್ಚಿನ' ಕವಿತೆಗಳನ್ನು ಹಿಡಿದು ಪಾಬ್ಲೊ ನೆರೂಡ ಉದಯಿಸಿದ. ''ಉದಿಸು ತಮ್ಮ, ನನ್ನೊಡನೆ ಮತ್ತೊಮ್ಮೆ ಉದಿಸು'' ಎಂದು ಕೇಕೆ ಹಾಕಿದ. ಮತ್ತೊಮ್ಮೆ ತೆರೆಗಳ ಮೇಲೆ ಕಾಲನ್ನು ಅಪ್ಪಳಿಸುತ್ತ, ''ನೀನಿಲ್ಲಿ ಹುಟ್ಟಿಟ್ಟ ಆ ಗುಲಾಮನ ಕರಚೊಳ್ಳಲುಬಿಡು ನನ್ನನ್ನು. ದಲಿತ ಜೀವಿಗಳ ರೊಟ್ಟಿಯನ್ನು ಈ ಭೂಮಿಯಿಂದ ಹಿರಿದುಕೊಳ್ಳಲುಬಿಡು'' ಎಂದು ಆಕ್ರೋಶಿಸಿದ.

ಗಾಂಜಾದ ಹೊಗೆ ಕೋಣೆಯ ತುಂಬ ಕವಿದಿದೆ. ಗೋಡೆಗಳ ಮೇಲೆ ಹಲ್ಲಿಗಳು, ನೊಣ ಗಳು, ಸೊಳ್ಳೆಗಳು, ಕನಸುಗಳ ಗುಂಗಿನಲ್ಲಿ ಮುಳುಗಿ ಹೋಗಿವೆ: ಹಳದಿ ಬಣ್ಣದ ಕನಸುಗಳು ಕವಿಯುತ್ತಿವೆ. ಬಿಳಿರಂಗಿನ ಜಾತಿಯ ಧ್ವನಿಗಳು ಕೇಳಿಬರುತ್ತಿವೆ. 'ಇಷಿ ಕವಾಟಕು ಜೊಕು' ತನ್ನ ಆಳವಾದ ಸ್ವರದಲ್ಲಿ ಹಾಡುತ್ತಿದ್ದಾನೆ .... ''ನಾನೊಬ್ಬ ದುಃಖ ಭಾಜಕನು. ನಾನು ಬಲಹೀನನು ಆದರೆ ನನ್ನ ಕೈಯಲ್ಲೊಂದು ಅದ್ವಿತೀಯ ಭಯಂಕರ ಖಡ್ಗವಿದೆ. ನಾನು ಯುದ್ಧ ಮಾಡದಿದ್ದರೆ ಅದು ನನ್ನನು ಸಹಿಸುವುದೆ, ಆದರೂ ನಾನು ವಿಜಯಿಯಾಗುತ್ತಿಲ್ಲ ಅಂದರೆ ನಾನಿನ್ನು ಮರಣಕ್ಕೆ ಶರಣ. ಆದರೆ ನನಗೆ ಸಾವೆಂದರೆ ಪರಮ ಅಸಹ್ಯ. ನನಗಿಷ್ಟವಿಲ್ಲ ಸಾಯುವುದು. ಮತ್ತೆ ಬದು ಕುವುದು ಹೇಗೆ ?''

ಯಾವ ಪ್ರೇಮ ಮಾನವೀಯತೆಗೆ ರೂಪಾಂತರವೊ, ಚಿತ್ತಶುದ್ಧಿಗೆ, ನೈತಿಕತೆಗೆ

ಧೈರ್ಯಕ್ಕೆ ಬದಲಿ ಹೆಸರೊ, ಅಜ್ಞಾತ ವ್ಯಕ್ತಿಗಳನ್ನು ಪರಸ್ಪರ ಕೂಡಿಸಿ ಸೃಷ್ಟಿಯ ಅನಂತ ಪ್ರೇಮವನ್ನು ಆವಿಷ್ಕರಿಸುವುದೊ, ಎಲ್ಲ ಮಾನವ ಜಾತಿಗಳನ್ನು ಹಿಂಪೆ ಚರಿತ್ರೆಯ ಮೂಸೆಯಲ್ಲಿ ಸುರಿದು ಮಾನವತಾ ಹಿರಣ್ಯವನ್ನಾಗಿ ಮಾಡುವುದೊ,'

ಯಾವ ಪ್ರೇಮದಿಂದ ಮಾನವನು ಸಹ–ಮಾನವನ ನೋವುಗಳಿಗೆ ದ್ರವಿಸುವನೊ, ಯಾವ ಪ್ರೇಮದಿಂದ ಮಾನವ ಅನ್ಯಾಯದ ಮೇಲೆ, ದೌರ್ಜನ್ಯದ ಮೇಲೆ ತನ್ನ ಉಕ್ಕಿನ ಮುಷ್ಟಿಯನ್ನೆತ್ತುವನೊ, ಮಾನವ ನ್ಯಾಯವನ್ನು ಕಸಿಯುವ ಶಕ್ತಿಗಳನ್ನು ತನ್ನ ಪವಿತ್ರ ಕರ್ಕಶ ಪರಶುವಿಗೆ ಬಲಿಗೊಡುತ್ತಾನೋ, ಗಾಯಗೊಂಡ ಮಾನವೀಯ ತೆಗೆ ನೆತ್ತರ ಮುಲಾಮು ಲೇಪಿಸುವನೊ, ಅವನ ಯುಗಯುಗಗಳ ಶ್ರಮದ ಫಲವಾಗಿ ಮಾನವನು ಸಾಧಿಸಿ ರಕ್ತದ ಕಣಕಣದಲ್ಲಿ ನಿಕ್ಷಿಪ್ತಗೊಳಿಸಿದ ಸಿರಿಯನ್ನು ಕಾಲಿನಿಂದ ಒದೆಯುವವರು ಇಂದು ಕವಿಗಳಾಗಿ ನಾಯಕರಾಗಿ ಬೆಳೆಯುತ್ತ ಮಾನವನ ನೆತ್ತರನ್ನು, ಬೆವರನ್ನು ಕಿರೀಟ ಮಾಡಿಕೊಂಡು ತಲೆಗೆ ಅಲಂಕರಿಸಿಕೊಳ್ಳುತ್ತಿರುವ ಈ ದಿನಗಳಲ್ಲಿ,

ಗಗನ ಚುಂಬಿತ ಶಿಖರಗಳು, ವಿಮಲ ಪವನ ವಿಹರಿಸುವ ಬಾನು, ಕುಸುಮ ಭಾಷೆ ಯನ್ನಾಡುವ ಅಮಾಯಕ ಗಾಳಿ, ಕಿರಾತರ ಮೇಲೆ ಪ್ರಜ್ವಲಿಸುವ ರಂಗುಗಳು, ಧೂಕರಿಸುವ ಹೂಗಳು, ಮಾನವೀಯತೆಯೊಡನೆ ಕಣ್ಣಾಮುಚ್ಚಾಲೆಯಾಡುವ ವರ್ಣ ಗಳು, ಕಾಂತಿ ಕೋಮಲತೆಯನ್ನು ಜನಾಂಗಕ್ಕೆ ಸಮನಾಗಿ ಹಂಚಿಕೊಡಲೆಂದು ಆಕ್ರೋಶಿಸುವ ಮಾನವೀಯತೆ- ಇವು ಯಾರ ಹೃದಯದಲ್ಲಿ ಬೆಳದಿಂಗಳ ಜಾತ್ರೆ ನಡೆಸುತ್ತವೆಯೊ, ಅವನು ಸಾಯುವುದು ಒಳಿತು. ನಾನು ಮರಣಿಸಿದ್ದು ಒಳ್ಳೆಯದೆ ಆಯಿತು. ಸತ್ತರೆ ಈ ನೀಚರ ಕುಶಾಲುಗಳ ನೋಡಬಹುದು.

ಇನ್ನು ನನಗೇನು ಬೇಕು- ನನ್ನ ಹಾಡುಗಳನ್ನು ಹೂಗಳು, ಹಕ್ಕಿಗಳು ಹಾಡುತ್ತಲಿವೆ. ಗಾಳಿ ಆಕಾಶಗಳು ದೂರತೀರಗಳಿಗೆ ಹೊತ್ತು ಸಾಗುತ್ತಲಿವೆ. ಪರ್ವತಗಳು ಅರಣ್ಯಗಳು ಧ್ವನಿಸುತ್ತಿವೆ. ನದಿಗಳು ಸಾಗರಗಳು ಘೋಷಿಸುತ್ತಿವೆ. ಸಂಧ್ಯೆಗಳು ಪ್ರತಿಫಲಿಸುತ್ತಿವೆ. ಧ್ವನಿಗಳು ಜನರು ಜೀವನಾಡಿಗಳೊಡನೆ ಮೇಳೈಸುತ್ತಿದ್ದಾರೆ. ಆದುದರಿಂದ ಇನ್ನು ಕಾಗದಕ್ಕೆ ಲೇಖನಿಗೆ ಗುಡ್ ಬೈ—

ಓ ಶೇಷಣ್ಣ ಪಿಳ್ಳಂಗೋವಿಯ ಹಿಡಿದು
ಬಂದೆ ಈ ಲೋಕಕ್ಕೆ ತಾಯಗರ್ಭದಿಂದ.
ಹಾಡುತ್ತಿರುವೆ ನಿನ್ನ ಸ್ವರವನ್ನೆಲ್ಲ ಅದರಲ್ಲಿ ತುಂಬಿ
ಕೇಳಲೆಂದು ದೂರದೂರದ ನದಿಕಿನಾರೆಯಲ್ಲಿ
ಗೋವಳರು ಬೆಟ್ಟಕಣಿವೆಗಳಲ್ಲಿ ಕೊಳಲು ಹಿಡಿದವರು

ರಾಟೆಗಳ ಸಂಗೀತದಲ್ಲಿ ನೂಲು ತೆಗೆಯುವವರು
ಮುಂಜಾವಿನಲ್ಲಿ ಹಾಲು ಕರೆಯುವವರು.
ನಿನ್ನ ಪೊರೆ ಆಲಿಸಲೆಂದು ಹಾಡುತ್ತಿರುವೆ
ನಿನ್ನ ಕನಸುಗಳು ಫಲಿಸುತ್ತವೆ.
ನಿನ್ನ ಹಾಡುಗಳಲ್ಲಿ ಜನ ತಮ್ಮ ಧ್ವನಿಗಳ ಗುರುತಿಸಿಕೊಳ್ಳುತ್ತಾರೆ.
ನಿನ್ನ ಹಾಡು ಬಜಾರುಗಳಲ್ಲಿ
ಬಂದರುಗಳಲ್ಲಿ ಹೊಲಗಳಲ್ಲಿ
ಸಾಹಸದ ಬೀಜ ಬಿತ್ತುತ್ತದೆ.
ನಿನ್ನ ಹಾಡುಗಳನ್ನು ಕಾರ್ಮಿಕರು, ರೈತರು
ಸೈನಿಕರು ನಾವಿಕರು ಹಾಡುತ್ತಾರೆ-
ಗಿಡಬಳ್ಳಿಗಳು ಹೂವರಳಿಸುವಂತೆ
ಗಾಳಿ ಪಕ್ಷಿಗಳ ತೂಗುವಂತೆ.
ನಿನ್ನ ಸ್ವರಗಳು ಫಲಿಸುತ್ತವೆ
ನಿನ್ನ ಕವಿತೆಗಳು ಉಳಿಯುತ್ತವೆ.

ದಲಿತ ಸಾಹಿತ್ಯ : ಹಿನ್ನೆಲೆ.

● ಪುರುಷೋತ್ತಮ ಬಿಳಿಮಲೆ

ಇಂದು ಕನ್ನಡದಲ್ಲಿ ಬರೆಯುತ್ತಿರುವ ದಲಿತ ಬರಹಗಾರರು ಹುಟ್ಟಿ ಬಂದಿರುವ 'ಅಸ್ಪೃಶ್ಯ' ಸಮಾಜಕ್ಕೂ, ಅವರಿಂದ ನಿರ್ಮಾಣವಾದ ಸಾಹಿತ್ಯದ ಸ್ವರೂಪಕ್ಕೂ ಇರುವ ಸಂಬಂಧವನ್ನು ಅರ್ಥಮಾಡಿಕೊಳ್ಳುವ ದೃಷ್ಟಿಯಿಂದ ದಲಿತ ಸಾಹಿತ್ಯದ ಹಿನ್ನೆಲೆಯನ್ನು ಪರಿಶೀಲಿಸಬೇಕಾಗುತ್ತದೆ. ಸದ್ಯದ ಕನ್ನಡ ವಿಮರ್ಶೆಯಲ್ಲಿ ಇವೆರಡರ ಸಂಬಂಧವನ್ನು ತುಂಬ ಸರಳ ಎಂದು ಭಾವಿಸಲಾಗಿದೆ. ದೇವನೂರು ಮಹಾದೇವ, ಸಿದ್ಧಲಿಂಗಯ್ಯ, ಕುಂ. ವೀರಭದ್ರಪ್ಪ, ಮುಳ್ಳೂರ್ ನಾಗರಾಜ್, ಹಂಪಣ್ಣ, ಮುನಿವೆಂಕಟಪ್ಪ, ಚೆನ್ನಣ್ಣ ವಾಲೀಕಾರ, ಕೆ.ಬಿ. ಸಿದ್ದಯ್ಯ, ಇಂದೂಧರ ಹೊನ್ನಾಪುರ ಮೊದಲಾದವರ ಕೃತಿಗಳನ್ನು ಓದಿದ ಮೇಲೆ ವ್ಯಕ್ತವಾಗುವ ಪ್ರತಿಕ್ರಿಯೆಯ ಸಾಮಾನ್ಯ ಬಗೆಯೆಂದರೆ 'ಇವರ ಬರಹಗಳಲ್ಲಿ ದಲಿತ ಲೋಕವೊಂದು ಪ್ರತ್ಯಕ್ಷವಾಗಿದೆ' ಎಂಬುದು. ಈ ಲೋಕ ಇದುವರೆಗೆ ಕಾಣೆಯಾಗಿತ್ತಾದ್ದರಿಂದ ಅದು ದಲಿತನಲ್ಲದ ಓದುಗನಿಗೆ ರೋಮಾಂಚನವುಂಟು ಮಾಡುವಷ್ಟು ಪ್ರಬಲವಾಗಿರುತ್ತದೆ. ಇಂಥ ಪ್ರತಿಕ್ರಿಯೆ ಮತ್ತು ರೋಮಾಂಚನಗಳ ಹಿಂದೆ 'ಸಾಹಿತ್ಯವು ಸಮಾಜದ ಪ್ರತಿಬಿಂಬ' ಎಂಬ ಪೂರ್ವಗ್ರಹೀತ ವಿಚಾರವೊಂದು ಕೆಲಸ ಮಾಡುತ್ತದೆ. ದಲಿತ ಸಾಹಿತ್ಯದ ಶ್ರೇಷ್ಠತೆಯನ್ನು ಸಾರುವ ವಿಮರ್ಶಾ ವಿಧಾನಗಳ ಹಿಂದೆ ಇಂಥ ನಂಬುಗೆಗಳೇ ತಳಮುಟ್ಟು ಕೆಲಸ ಮಾಡಿವೆ. ಉದಾಹರಣೆಗೆ:

'ದಲಿತ ಸಾಹಿತ್ಯ'ದ ಬಗ್ಗೆ ಬರೆದ ಎಸ್. ಆರ್. ವಿಜಯಶಂಕರ್ :

"ಕನ್ನಡ ಸಾಹಿತ್ಯದಲ್ಲಿ ಈ ತನಕ ಇರದಿದ್ದ ಒಂದು ಕತ್ತಲಿನ ಲೋಕದಿಂದ ಬಂದ ದಲಿತ ಲೇಖಕರು ಬಹಳ ಒರಟಾಗಿ

ಬರೆಯುತ್ತಾರೆ. ನಾಜೂಕು ಅವರಿಗೆ ಬೇಡ.. ಅವರ
ಅನುಭವವೂ ನಾಜೂಕಿನದಲ್ಲ"
(ಸಂಕ್ರಮಣ, ಸಂ. 17. ಸಂಚಿಕೆ 4 ; 1981: ಪುಟ ; 29)

'ಹಂಪಣ್ಣ' ಅವರ ಬಗ್ಗೆ ಬರೆದ ಆರ್. ವಿ. ಭಂಡಾರಿ :

"ವಾಚ್ಯವೂ ದಲಿತ ಧ್ವನಿಯ ಒಂದು ಸ್ಪಷ್ಟ ಲಕ್ಷಣವೇ ಆಗಿದೆ.
ಆದ್ದರಿಂದ ಇಲ್ಲಿ ವಾಚ್ಯವೂ ಮಾನ್ಯ"
(ಸಂಕ್ರಮಣ ; 1981)

ಸಿದ್ದಲಿಂಗಯ್ಯನವರ ಬಗ್ಗೆ ಬರೆದ ಯಲಗುಡಿಗೆ ಮಂಜಯ್ಯ :

"ದಲಿತ ಸಾಹಿತ್ಯದಲ್ಲಿ ಸಿಟ್ಟು ರೋಷ ಪ್ರತಿಭಟನೆಯ ಧ್ವನಿಗಳು
ಎದ್ದು ಕಾಣುತ್ತವೆ ಇದು ಅವರ ನೋವಿನ ಪ್ರತೀಕ"
(ಮಂಗಾರು ದೈನಿಕ ; 3-2-1985)

ದೇವನೂರ ಮಹಾದೇವ ಅವರ 'ಒಡಲಾಳ'ದ ಬಗ್ಗೆ ಬರೆಯುವ ಸದಾಶಿವ ಎಣ್ಣೆಹೊಳೆ :

"ಅದುವರೆಗೆ ಶೂದ್ರಾತಿ ಶೂದ್ರರೆನಿಸಿಕೊಂಡ ದಲಿತರ ಬದುಕು ಬವಣೆಗಳನ್ನು ಇಷ್ಟು ಸಮರ್ಪಕವಾಗಿ ಅಭಿವ್ಯಕ್ತಿಸಿದ ಉದಾಹರಣೆ ಮತ್ತೊಂದಿರಲಿಲ್ಲ... ದಲಿತರಾಗಿ ಹುಟ್ಟಿ ದಲಿತರ ಸಂಕಟ ಬೇನೆಗಳನ್ನು ತುಂಬ ಹತ್ತಿರದಿಂದ ಬಲ್ಲವರಾಗಿದ್ದ ಮಹಾದೇವ ಅವರು ಬದುಕಿನ ಕಠೋರ ಸತ್ಯವನ್ನು ತುಂಬ ಸಮರ್ಥವಾಗಿ ಅನಾವರಣ ಮಾಡಿದರು... ದಲಿತ ಕುಟುಂಬವೊಂದರ ಒಳಜೀವನ ಇಷ್ಟು ಸಮರ್ಥವಾಗಿ ಹಿಂದೆಂದೂ ಸಾಹಿತ್ಯದಲ್ಲಿ ಒಡಮೂಡಿಲ್ಲ."
(ಗ್ರಂಥ ಲೋಕ ; ಏಪ್ರಿಲ್ 1985)

ಇಂಥ ಅನೇಕರ ಹೇಳಿಕೆಗಳನ್ನು ಸಂಗ್ರಹಿಸಿದರೂ ಅವೆಲ್ಲದರ ಹಿಂದಿನ ಧ್ವನಿ ಒಂದೇ ಆಗಿದೆ: 'ದಲಿತರ ಹಸಿವು', 'ದಲಿತರ ಒರಟುತನ', 'ದಲಿತರ ವಾಚ್ಯತನ'– ಇವೇ ದಲಿತ ಲೋಕದ ಸಾಮಾನ್ಯ ಸಂಗತಿಗಳಾಗಿಬಿಟ್ಟು ಇದುವೇ ಅವರ ಸಾಹಿತ್ಯಕ್ಕೆ ಹಿನ್ನೆಲೆಯಾಗಿರುವಂಥವು; ಎಂದು ಭಾವಿಸಲಾಗಿದೆ. ಶ್ರೀ ಎಲ್. ಹನುಮಂತಯ್ಯ ಅವರು ಹೀಗೆ ಬರೆಯುತ್ತಾರೆ.

"ಜಾತೀಯ ಅಸಮಾನತೆಯಿಂದ ಉಂಟಾದ ಅವಮಾನ. ಬಡತನದಿಂದ
ಬದುಕು ಬರ್ಬರಗೊಂಡ ರೀತಿಯನ್ನು ಸಮರ್ಪಕವಾಗಿ ಮನಸ್ಸುಗಳಿಗೆ

ನಾಟುವಂತೆ ಚಿತ್ರಿಸಬಲ್ಲವರಾದರೆ ಅದು ಯಶಸ್ವಿ ಕಾವ್ಯವಾಗುತ್ತದೆ."
(ಅನ್ವೇಷಣೆ. ಸಂ 1. ಸಂಚಿಕೆ 3. 1985 : ಪುಟ ; 50)

ಇಂಥ ಮಾತುಗಳು ಬಹಳ ಅರ್ಥವತ್ತಾಗಿಯೂ ಕೂಡಾ ನಮ್ಮ ಕಾಲದ ದಲಿತ ಬರಹಗಳ ಬಗ್ಗೆ ಯಾವುದೆ ಗಂಭೀರ ಪ್ರಶ್ನೆಗಳನ್ನು ಕೇಳಲು ಸಮರ್ಥವಾಗಿಲ್ಲ. ಜೊತೆಗೆ ಸದ್ಯದ ನಮ್ಮ ದಲಿತ ಸಾಹಿತ್ಯದ ಸ್ವರೂಪವನ್ನು ಕುರಿತಂತೆ ಇವು ಯಾವ ಬಗೆಯ ತೀರ್ಮಾನವನ್ನೂ ಕೊಡಲಾಗದಂತೆ ಮಾಡಿವೆ. ದೇವನೂರರ ಬಗ್ಗೆ ಬರೆದ ಮನಜರು 'ಹಸಿವಿನಂತ ಒಂದೇ ಭಾವ ಅವರ ಬಹುತೇಕ ಕತೆಗಳಲ್ಲಿ ಪ್ರಧಾನ ವಸ್ತುವಾಗಿದ್ದು.... ಅದು ಏಕಮುಖವಾಗಿ ಬಂದಿದೆ' ಎಂಬ ತೀರ್ಮಾನಕ್ಕೆ ಬಂದಿದ್ದಾರೆ. (ಅನ್ವೇಷಣೆ 11–12 ; ಪುಟ : 27, 1985) ಸಿದ್ದಲಿಂಗಯ್ಯನವರ ಬಗ್ಗೆ ಬರೆದ ಮನಜರು ಕೊಡುವ ತೀರ್ಮಾನ ಇದು: "ಈ ಕವಿಯ ವಸ್ತು ಹಿಂದಿನ ರೊಚ್ಚು, ರಭಸಗಳಿಂದ ಹೊರತಾಗಿ ಕೇವಲ ಮಾರ್ದವತೆಯ ಅಥವಾ ಪೇಲವವೆನಿಸುವ ಭಾವಗಳನ್ನು ಬಿಡಿ ಚಿತ್ರಗಳಲ್ಲಿ ಬಿಡಿಸುತ್ತಾ ಹೋಗಿರುವುದನ್ನು ಕಾಣಬಹುದಾಗಿದೆ."(ಅದೇ: ಪುಟ : 29) ಈ ಇಬ್ಬರೂ ದಲಿತ ಬರಹಗಾರರಲ್ಲಿಯೇ ಇಂಥ ವ್ಯತ್ಯಾಸಗಳು ಯಾಕೆ ಕಂಡುಬರುತ್ತವೆ.? ಅಥವಾ ಕೇವಲ ಹಸಿವು- ಒರಟುತನ- ವಾಚ್ಯತನ- ನೋವು– ಇವೇ ದಲಿತ ಸಾಹಿತ್ಯದ ವಸ್ತುವಾಗಿ ಏಕೆ ಕಾಣಿಸಿಕೊಳ್ಳುತ್ತವೆ-? ಎಂಬ ಬಗ್ಗೆ ಮನಜರೂ ಸೇರಿದಂತೆ ಬಹುತೇಕ ವಿಮರ್ಶಕರು ಮೌನವಾಗಿದ್ದಾರೆ. ನಮಗೆಲ್ಲರಿಗೂ ತಿಳಿದ ಹಾಗೆ, ಈಗ ಅಭಿವ್ಯಕ್ತಿಯಾಗಿರುವುದಷ್ಟೇ ದಲಿತ ಜಗತ್ತು ಅಲ್ಲ. ದಲಿತ ಜಗತ್ತು ತನ್ನೊಳಗೇ ಒಂದು ಜೀವನ ಸಮಗ್ರತೆಯನ್ನು ಸಾಧಿಸಿಕೊಂಡು ವಿಶ್ವದ ಬಗೆಗೆ ಅತ್ಯಂತ ಅಮೂಲ್ಯವಾದ ದೃಷ್ಟಿಕೋನವನ್ನು ಹೊಂದಿದೆ. ಅವರಲ್ಲಿನ ಒರಟುತನ ಅವರಿಂದ ದೂರ ಇರುವ ನಮಗೇ ಹೊರತು ಅವರಿಗೇ ಅಲ್ಲ. ಪ್ರಾಣಿವರ್ಗ- ಸಸ್ಯವರ್ಗ ಮತ್ತು ಮನುಕುಲ ಒಟ್ಟು ಸೇರಿಕೊಂಡು ಸೃಷ್ಟಿಯಾದ ದಲಿತರ ತಾತ್ವಿಕತೆಯೊಂದು, ಪ್ರಗತಿಪರತೆಯನ್ನು ಗರ್ಭೀಕರಿಸಿಕೊಂಡಿದೆ. ದಲಿತ ಹೆಣ್ಣೊಬ್ಬಳು ಮಗುವನ್ನು ಹೆತ್ತರೆ, ಆ ಮಗುವಿನ ಬಳಿಯಲ್ಲಿ ಅರೆಕ್ಷಣ ಮಲಗಿ ತಾಯ್ತನದ ಅನುಭವವನ್ನು ಪಡೆಯಲು ನಮ್ಮೂರಿನ ಕೊರಗರು ಪ್ರಯತ್ನಿಸುತ್ತಿರುತ್ತಾರೆ. ಇಲ್ಲಿ ಗಂಡು, ತಾನೆಷ್ಟೆ ಪ್ರಬಲನಾದರೂ, ಗರ್ಭಧಾರಣೆಗೆ ಹೆಣ್ಣು ಮಾತ್ರ ಶಕ್ತಳಾದರೆ, ಆಗ ಆ ಹೆಣ್ತನವನ್ನು ತಾನು ಅನುಭವಿಸಿ ಸಂತೋಷಪಡುವುದರ ಮೂಲಕ ಹೆಣ್ಣಿಗೆ ಪೂರ್ಣ ಗೌರವವನ್ನು ಸಲ್ಲಿಸುತ್ತಾನೆ.

ಇಂಥ ಜೀವನ ಸಮಗ್ರತೆಯು ಮುಂದುವರೆದುಕೊಂಡು ಬರಲು ಏರ್ಪಾಡು ಮಾಡಿಕೊಂಡ 'ಮದುವೆ' ಸಂಪ್ರದಾಯದಲ್ಲಿ ದಲಿತರು ಜಾತಿಯ ಮೌಲ್ಯಗಳಿಗಿಂತ ಹೆಚ್ಚಾಗಿ ಕೌಟುಂಬಿಕ ಮತ್ತು 'ಬಳಿ' ಗಳಿಗೇ ಹೆಚ್ಚು ಮಹತ್ವ ಕೊಡುವುದರ ಮೂಲಕ ಜಾತಿ

ರಹಿತವಾದ ಜೀವನ ಕ್ರಮವನ್ನು ತನ್ನೊಳಗೇ ರೂಢಿಸಿಕೊಂಡಿದ್ದಾರೆ. ತಾವು ಬೆಳೆಯುವ ಅಕ್ಕಿ ಮತ್ತು ಸಂತಾನಾಭಿವೃದ್ಧಿಗೆ ಸೃಷ್ಟಿಸಿಕೊಂಡ ಮದುವೆ, ಇವೆರಡನ್ನೂ ಅದ್ವೈತಗೊಳಿಸಿದ ಮಹಾನ್ ಕಲೆಗಾರಿಕೆ ದಲಿತರಲ್ಲಿದೆ. ಡಾ. ಪೋಲಂಕಿ ರಾಮಮೂರ್ತಿ ಇವನ್ನು ಸರಿಯಾಗಿಯೇ ಗುರುತಿಸಿದ್ದಾರೆ. "ಕಲೆ ದಲಿತ ಜೀವನದಲ್ಲಿ ಸ್ವಾಭಾವಿಕವಾಗಿಯೇ ಹಾಸುಹೊಕ್ಕಾಗಿದೆ. ನಮ್ಮೆಲ್ಲರ ಜವಾಬ್ದಾರಿ ಎಂದರೆ ದಲಿತ ಕಲೆಯನ್ನು ರೂಢಿಸಿಕೊಂಡು ವಿವೇಚನೆ ಸಾಧಿಸುವಲ್ಲಿ ಹೋರಾಟ ಮಾಡಬೇಕಾಗಿರುವುದು." (ಪಂಚಮ : 5-6-1983) ದಲಿತರ ಜೀವನ ಕ್ರಮದ ಶ್ರೇಷ್ಠತೆ ನಮಗರಿವಾಗಬೇಕಾದರೆ ಅವರನ್ನು ನಾವು ವೈದಿಕರೊಡನೆಯೇ ಹೋಲಿಸಿ ನೋಡಬೇಕು. ನಾವು ಅಸ್ಪೃಶ್ಯ ಅಂದದ್ದು ಎಷ್ಟೊಂದು ಆಪ್ಯಾಯಮಾನವಾದ್ದು ಮತ್ತು ನಾವು ಶ್ರೇಷ್ಠ ಎಂದದ್ದು ಎಷ್ಟೊಂದು ಕ್ಷುಲ್ಲಕ ಎಂಬುದು ನಮಗೆ ಇನ್ನಷ್ಟೇ ತಿಳಿಯಬೇಕಾಗಿದೆ.

ಈ ಮಾತುಗಳನ್ನು ಬಹಳ ಎಚ್ಚರದಿಂದಲೇ ಹೇಳುತ್ತಿದ್ದೇನೆ. ನಮ್ಮ ದಲಿತ ಸ್ನೇಹಿತರ ಬರಹಗಳಲ್ಲಿ ಅವರ ಬದುಕಿನ ಅತ್ಯಂತ ಮುಖ್ಯ ಭಾಗಗಳೇ ಯಾಕೆ ಕಾಣೆಯಾಗಿಬಿಟ್ಟವೆ ? ಮತ್ತು ಕೇವಲ ಬಿಡಿ ಬಿಡಿ ಅಂಶಗಳು ಮಾತ್ರ ನಿರ್ದಿಷ್ಟ ಆಕೃತಿಯಲ್ಲಿ ವಿಜೃಂಭಿಸಲು ಕಾರಣಗಳೇನೆಂಬುದನ್ನು ನಾವು ಈ ಶತಮಾನದಲ್ಲಾದ ಚೇತರ ಎಚ್ಚರದ ಹಿನ್ನೆಲೆಯಲ್ಲಿ ವಿಮರ್ಶಿಸಿಕೊಳ್ಳಬೇಕು. ಈ ಕೆಲಸ ಅಕ್ಷರಸ್ಥ ದಲಿತರ ಜೀವನ ಕ್ರಮದ ಸಾಂಸ್ಕೃತಿಕ ವಿಮರ್ಶೆಯೇ ಆಗಿಬಿಡುತ್ತದೆ; ದಲಿತ ಬರಹಗಾರನ ಆಲೋಚನಾ ವಿಧಾನದ ಮಿತಿಯ ಗ್ರಹಿಕೆ ಕೂಡಾ ಇಲ್ಲಿ ಸಾಧ್ಯ. ಅಂದರೆ ದಲಿತ ಸಾಹಿತ್ಯದ ಹಿನ್ನೆಲೆಯಲ್ಲಿರುವ ರಾಜಕೀಯ–ಸಾಮಾಜಿಕ–ಆರ್ಥಿಕ–ಸಾಂಸ್ಕೃತಿಕ ಚಿತ್ರವನ್ನು ನಾವು ಸಾಕ್ಷಾತ್ಕರಿಸಿಕೊಳ್ಳಬೇಕಾಗಿದೆ. ಎಸ್. ಆರ್. ವಿಜಯಶಂಕರ ಅವರು ಹೀಗೆ ಬರೆಯುತ್ತಾರೆ:

> "ಇನ್ನೂ ಬೆಳಕು ಕಾಣದ ತನ್ನ ಜನರಿಗೆ ಸಾಮಾಜಿಕವಾಗಿ
> ಏನಾದರೂ ಮಾಡುವ ಮತ್ತು ತನ್ನೊಳಗಿನ ನೋವಿನ ಅನುಭವವನ್ನು
> ಅಭಿವ್ಯಕ್ತಗೊಳಿಸುವ ಅವಶ್ಯಕತೆ ಸಂವೇದನಾ ಶೀಲನಾದ ದಲಿತನಿಗೆ
> ಇದ್ದೇ ಇದೆ. ಆದ್ದರಿಂದಲೇ ದಲಿತ ಸಾಹಿತ್ಯಕ್ಕೆ ಬಹಿರಂಗ ಸಂಸ್ಕೃತಿ
> ಮತ್ತು ಅಂತರಂಗದ ಅಭಿವ್ಯಕ್ತಿ ಎರಡರಲ್ಲೂ ನಿಜವಾಗುವ
> ಅನಿವಾರ್ಯತೆ ಇದೆ"
>
> (ಸಂಕ್ರಮಣ 116. 1981 ಪು: 29)

ದಲಿತರು ತನ್ನೊಳಗೆ ನೋವನ್ನೇ ಇಟ್ಟುಕೊಂಡಿದ್ದಾರೆ ಎಂಬ ಪೂರ್ವಗ್ರಹೀತ ಅಂಶ ಇಲ್ಲಿ ಕೆಲಸ ಮಾಡಿದೆ. ಇದರಿಂದಾಗಿ ಬಹುತೇಕ ವಿಮರ್ಶಕರು "ದಲಿತ ಬರಹಗಾರ

ತಾನು ಬದುಕಿದ ಸಮಾಜದ ಅನುಭವಗಳನ್ನು ಮಂಡಿಸುತ್ತಲೇ ತಾನು ಚಿತ್ರಿಸುತ್ತಿರುವ ಸಮಾಜದೊಂದಿಗೂ ತನ್ನ ವಿರೋಧವನ್ನು ವ್ಯಕ್ತಪಡಿಸಬೇಕಾಗುತ್ತದೆ. ಇದು ದಲಿತ ಬರಹಗಾರರ ಮುಂದಿರುವ ಸವಾಲು'' ಎಂದು ಬರೆಯುತ್ತಾರೆ. ಇಂಥ ಮಾತುಗಳು ದಲಿತರಿಂದ ತುಂಬಾ ಎತ್ತರದಲ್ಲಿ ನಿಂತಾಗ (VieW from the top) ಹುಟ್ಟಿಕೊಂಡವುಗಳಾಗಿವೆ. ಆದರೆ ಆಗಬೇಕಾದ್ದು ಇದಕ್ಕೆ ವಿರುದ್ಧವಾದ ಕ್ರಿಯೆ. ದಲಿತರ ನೆಲೆಯಲ್ಲಿ ನಿಂತು (View from the bottom) ಬರಹಗಾರನೊಬ್ಬ ಆ ಜೀವನಕ್ರಮದ ಸಮಗ್ರತೆಯನ್ನು ಮತ್ತು ಉತ್ಕೃಷ್ಟ ಮೌಲ್ಯಗಳನ್ನು ಎತ್ತಿ ಹಿಡಿಯುತ್ತ ಅದಕ್ಕೆ ಬಾಧಕ ತರುವ ಎಲ್ಲ ಅಂಶಗಳನ್ನು ಖಂಡಿಸಬೇಕಾಗುತ್ತದೆ. ದಲಿತರಿಗೆ ಇದು ಅಸಾಧ್ಯವಾಗುವ ಹಾಗೆ ಮಾಡಿದ ತಾತ್ವಿಕತೆ ರೂಪುಗೊಂಡದ್ದು ಈ ಶತಮಾನದಲ್ಲಿ ಅದಕ್ಕೆ ಕಾರಣವಾದ ಅಂಶಗಳು ಹಲವು ಇವೆ.

ದಲಿತರ ಎಚ್ಚರಕ್ಕೆ ಕಾರಣವಾದ ಅಂಶಗಳು :

ಈ ಸಂಬಂಧಿಯಾದ ವಿವರಗಳೆಲ್ಲ ಈಗಾಗಲೇ ಅಲ್ಲಲ್ಲಿ ಪ್ರಕಟವಾಗಿರುವುದರಿಂದ, ಅವುಗಳ ವಿವರಣೆಗೆ ಹೋಗದೆ, ಅವುಗಳನ್ನು ಕೇವಲ ಪಟ್ಟಿ ಮಾಡಿ ಕೊಡುತ್ತಿದ್ದೇನೆ.

ಸಾಹಿತ್ಯಿಕವಾದವು

1. ಮಹಾರಾಷ್ಟ್ರದಲ್ಲಿ ಹೆಚ್ಚು ಕ್ರಾಂತಿಕಾರಕವಾಗಿ ಕಾಣಿಸಿಕೊಂಡ ದಲಿತ ಸಾಹಿತ್ಯ ಚಳುವಳಿ ಮತ್ತು ದಲಿತ ಪ್ಯಾಂಥರ್‌ನ ಕ್ರಾಂತಿಕಾರಿಗಳು. ಇವರಲ್ಲಿಯು ರಾಜಧಾಳೆ, ವಾಮದೇವಢಸಾಳೆ, ಲತೀಫ್ ಕಾರ್ತಿಕ್, ಜೆ. ಎ. ಪವಾರ್ ಕೇಶವಮೆಶ್ರನ್, ವಾಮನ್ ನಿಂಬಾಳ್ಕರ್, ದಯಾಪವಾರ್, ಅರುಣ್ ಕಾಂಬ್ಳೆ ಬಾಗುಲ್, ಪಂಥವಾನೆ, ಮೊದಲಾದವರು ನಡೆಸಿದ ಜನಪರ ಹೋರಾಟಗಳು. (ವಿವರಗಳಿಗೆ ನೋಡಿರಿ : Joseph Mathew : 1983)
2. ಆಂಧ್ರದಲ್ಲಿ ಬಿರುಗಾಳಿ ಎಬ್ಬಿಸಿದ ದಿಗಂಬರ ಕಾವ್ಯಪಂಥ ಮತ್ತು ದಲಿತ ಮಹಸಭಾ: ಅದರಲ್ಲಿದ್ದ ಶ್ರೀ ಶ್ರೀ ಚೆರಬಂಡರಾಜು ಬೊಜ್ಜ ತಾರಕಂ ಮೊದಲಾದವ ನಿಲುವುಗಳು– ಇವರಿಗೆ ಹಿನ್ನೆಲೆಯಾಗಿದ್ದ ನಕ್ಸಲೈಟ್ ಚಳುವಳಿಗಳು.
3. ಹಿಂದಿಯಲ್ಲಿ ಜನಪ್ರಿಯವಾಗುತ್ತಿರುವ ಜನವಾದೀ ಸಾಹಿತ್ಯ.
4. ಕನ್ನಡದಲ್ಲಿ ನವ್ಯ ಸಾಹಿತ್ಯ ಸ್ಥಗಿತವಾದದ್ದು ಮತ್ತು ಬಂಡಾಯ ಕಾ ಹುಟ್ಟಿಕೊಂಡದ್ದು.

ಪ್ರಭಾವ ಬೀರಿದ ವ್ಯಕ್ತಿತ್ವಗಳು

1- ಬಾಬಾ ಸಾಹೇಬ್ ಅಂಬೇಡ್ಕರ್
2- ಮಹಾತ್ಮ ಗಾಂಧಿ
3. ಡಾ. ರಾಮಮನೋಹರ ಲೋಹಿಯಾ
4. ಮಹಾತ್ಮ ಫುಲೆ (ವಿವರಗಳಿಗೆ ; OMVEDIT GAIL ; 1971)
5. ಪೆರಿಯಾರ್ ರಾಮಸ್ವಾಮಿ ನಾಯ್ಕರ್
6. ನಾರಾಯಣ ಗುರು ಮತ್ತು ಕುದ್ಮಲ್ ರಂಗರಾಯರು

ಪ್ರಭಾವ ಬೀರಿದ ಸಂಘಟನೆಗಳು

1. ಕರ್ನಾಟಕ ಬರಹಗಾರರ ಮತ್ತು ಕಲಾವಿದರ ಒಕ್ಕೂಟ.
2. ದಲಿತ ಸಂಘರ್ಷ ಸಮಿತಿ.
3. ಕನ್ನಡ ಸಾಹಿತ್ಯಪರಿಷತ್ತು.
4. 18–19 ನೇ ಶತಮಾನದಲ್ಲಿ ಕೆಲಸ ಮಾಡಿದ ಆರ್ಯಸಮಾಜ, ಬ್ರಹ್ಮಸಮಾಜ ಇತ್ಯಾದಿ ಸಂಘಟನೆಗಳು.

ಇತರ

1 ಸರಕಾರ ವಿದ್ಯೆಯನ್ನು ಸಾರ್ವತ್ರಿಕಗೊಳಿಸಿದ್ದು.
2. ಮೀಸಲಾತಿ ಕಾರ್ಯಕ್ರಮ ಜಾರಿಗೆ ಬಂದದ್ದು
3. ಕಾಂಗ್ರೆಸ್‌ನ ಬೂರ್ಶ್ವಾ ಉದಾರವಾದಿತ್ವ ಮತ್ತು ಜನತಾದ ಪುರೋಹಿತಶಾಹೀ ಉದಾರವಾದಿತ್ವ–5 ರಿಂದ 20 ರವರೆಗೆ ವಿವಿಧ ಅಂಶಗಳ ಕಾರ್ಯಕ್ರಮ.
4. ಬಂಡವಾಳಶಾಹಿ ಬೆಳವಣಿಗೆಯ ಪರಿಣಾಮವಾಗಿ ಕಾಣಿಸಿಕೊಂಡ ಭೂಮಿ ಸಂಬಂಧಿ ಮತ್ತು ವೃತ್ತಿ ಸಂಬಂಧಿ ಬದಲಾವಣೆಗಳು
5. ಮತಾಂತರದ ಪ್ರಜ್ಞೆ ರೂಪುಗೊಂಡದ್ದು
6. ಹಿಂದೂ ಸಂಘಟನೆಗಳು ದಲಿತರನ್ನು ಒಳಸೇರಿಸಿಕೊಳ್ಳಲು ಮಾಡಿದ ಯತ್ನಗಳು
7. ಬಸವಲಿಂಗಪ್ಪ ಪ್ರಕರಣ
8. ಜಾತಿ ಸಂಘಟನೆಗಳ ಪ್ರಾಬಲ್ಯ
9. ಪಾಶ್ಚಾತ್ಯ ವೈಚಾರಿಕತೆಯ ಲಭ್ಯತೆ
10. ಕಮ್ಯುನಿಷ್ಟರ ಚಳುವಳಿಗಳು

11. 'ಬ್ಲ್ಯಾಕ್ ಲಿಟರೇಚರ್' ನ ಪರಿಚಯ
12. ಕರ್ನಾಟಕದಲ್ಲಿ ಹೆಚ್ಚಿದ ಜಾನಪದ ಅಭ್ಯಾಸ
13. ಜೆ. ಪಿ. ಚಳುವಳಿ
14. ದಲಿತರು ರಾಜಕೀಯ ಮಹತ್ವವನ್ನು ಕನಿಷ್ಠಪಕ್ಷ ಚುನಾವಣೆಯ ಸಂದರ್ಭದಲ್ಲಾದರೂ ಪಡೆದುಕೊಂಡದ್ದು
15. ಈ ಶತಮಾನದ ಆರಂಭದಲ್ಲಿ ನಡೆದ ಕ್ರಿಶ್ಚಿಯನ್ ಮಿಶನರಿಗಳ ಕೆಲಸ (ನೋಡಿ : Hardgraw, 1969 ; 42)
16. ತಮಿಳುನಾಡಿನ ಡಿ.ಎಂ.ಕೆ. ಚಳುವಳಿಗಳು
17. ದೇವರಾಜ್ ಅರಸ್ ಅವರ ಕಾರ್ಯಕ್ರಮಗಳು

ಇತ್ಯಾದಿ

ಇಂಥ ಅನೇಕ ಕಾರಣಗಳನ್ನು ಪಟ್ಟಿ ಮಾಡಿದರೂ ಅನೆಲ್ಲವೂ ಸರ್ವ ತಂತ್ರ ಸ್ವತಂತ್ರ ಸಂಗತಿಗಳಲ್ಲ. ಬದಲಾಗಿ ಅವಕ್ಕೆಲ್ಲ ಒಳ ಸಂಬಂಧ ಇದೆ. ಇವೆಲ್ಲದರ ವಿಸ್ತೃತ ವಿವೇಚನೆಯನ್ನು ಈಗಾಗಲೇ ಹಲವರು ಮಾಡಿದ್ದಾರೆ. ಅದರಲ್ಲಿ ಮುಖ್ಯರಾದವರೆಂದರೆ; ದೇವಯ್ಯ ಹರವೆ (1982), ಡಾ. ವಿ. ಲಕ್ಷ್ಮೀನಾರಾಯಣ (1981–82), ಅನಂತಮೂರ್ತಿ (1983), ಹನುಮಂತ (1981), ಚನ್ನಣ್ಣವಾಲೀಕರ (1981), ಆರ್. ವಿ. ಭಂಡಾರಿ (1981), ಆರ್ಕೆ ಮಣಿಪಾಲ (1981), ಬೊಳಬಂಡೆಪ್ಪ (1986), ಕೆ. ರಾಮದಾಸ (1981), ಗುಣಶೀಲನ್ (1981), ವಿ. ಟಿ. ರಾಜಶೇಖರಶೆಟ್ಟಿ (1982), ಡಾ. ಸಿ. ಪಾರ್ವತಮ್ಮ (1972-81), ಗಂಗಾಧರ ಲೋಖಂಡೆ (1981), ಮಧುಕರ ಡೋಂಗ್ರೆ (1981), ಭಗವಾನ್‌ದಾಸ್ (1981), ಮುಳ್ಳೂರ್ ನಾಗರಾಜ್ (1981), ಜೆ. ಆರ್. ಕಾಂಬ್ಳೆ (1979), ಮನೋರಂಜನ್ ಮೊಹಂತಿ (1977), ಜೋಸೆಫ್ ಮಾಥ್ಯೂ (1983), ಕಾಲ್ಮನ್ (1985), ಜೀಲಿಯೆಟ್ (1972) ಇವರುಗಳು ಉಪಲಬ್ಧವಿರುವ ಎಲ್ಲ ಮಾಹಿತಿಗಳನ್ನು ಉಪಯೋಗಿಸಿಕೊಂಡ ಈ ಬರಹಗಾರರು, ಭಾರತದಲ್ಲಿ ಎಡಪಂಥೀಯ ಚಳುವಳಿಗಳು ಹೇಗೆ ಕ್ರಿಯಾಶೀಲವಾದುವು ಎಂಬುವನ್ನು ವಿಶ್ಲೇಷಿಸಿದ್ದಾರೆ. ಅವುಗಳನ್ನು ನಾನಿಲ್ಲಿ ಸಂಗ್ರಹಿಸಿಕೊಡುತ್ತಿಲ್ಲ. ಬದಲಾಗಿ ಈ ಎಡಪಂಥೀಯ ಚಳುವಳಿಗಳು ಕರ್ನಾಟಕದಲ್ಲಿ ಉಂಟುಮಾಡಿದ ಎಚ್ಚರದ ವಿವಿಧ ಹಂತಗಳ ಸ್ವರೂಪವನ್ನು ಮಾತ್ರ ಗಮನಿಸುತ್ತಿದ್ದೇನೆ. ಬಹಳ ಸ್ಥೂಲವಾಗಿ ಹೇಳುವುದಾದರೆ, ಮೇಲಿನ ಘಟನೆಗಳಿಂದ ಇಡೀ ಕರ್ನಾಟಕದಲ್ಲಾದ ಮುಖ್ಯ ಘಟನೆ ಎಂದರೆ ಬ್ರಾಹ್ಮಣೇತರರು ಕೊಂಚವಮಟ್ಟಿಗೆ ಮೈಕೊಡವಿ ಎದ್ದು ನಿಂತು ಪ್ರತಿಭಟನೆಗೆ ಸಜ್ಜಾದದ್ದು. ಈ ಪ್ರತಿಭಟನೆಯಲ್ಲಿ ಕನಿಷ್ಠ ಮೂರು ಹಂತಗಳಿವೆ.

ಒಂದನೆಯದು : ಬ್ರಾಹ್ಮಣರ ವಿರುದ್ಧ ಶ್ರೀಮಂತ ಬ್ರಾಹ್ಮಣೇತರರು ಸಿಡಿದೆದ್ದು ವಿದ್ಯೆ ಮತ್ತು ಸಾರ್ವಜನಿಕ ಉದ್ಯೋಗ ಇಲಾಖೆಗಳಲ್ಲಿ ತಮ್ಮ ಪ್ರವೇಶ ದೊರಕಿಸಿ ಕೊಂಡದ್ದು. ಇವರು ಬ್ರಾಹ್ಮಣರ ಧಾರ್ಮಿಕ ಆಚರಣೆಗಳನ್ನು ಖಂಡಿಸಿದ್ದಲ್ಲದೆ, ರಾಜಕೀಯದಲ್ಲೂ ಕಾಣಿಸಿಕೊಂಡು ಸಾರ್ವಜನಿಕ ಜೀವನದಲ್ಲಿ ಪ್ರಬಲ ಶಕ್ತಿಗಳಾದರು. ಇರುವ ವ್ಯವಸ್ಥೆಯಲ್ಲಿಯೇ ಪ್ರಬಲರಾದ ಇವರು ಮೂಲತ: ಸುಧಾರಣಾವಾದಿ (Reformatory) ಗಳಾಗಿದ್ದಾರೆ. ಇದರ ಅಂತಿಮ ಪರಿಣಾಮವೆಂದರೆ ಹಳ್ಳಿಯಲ್ಲಿ ಸುಖವಾಗಿದ್ದ ಬ್ರಾಹ್ಮಣರು ಪೇಟೆ-ಪಟ್ಟಣಗಳ ಕಡೆಗೆ ದಾಪುಗಾಲು ಹಾಕಿದ್ದು.

ಎರಡನೆಯದು : ಕೆಳವರ್ಗದ ಬಡ ಬ್ರಾಹ್ಮಣೇತರರು, ಮೇಲ್ವರ್ಗದ ಬ್ರಾಹ್ಮಣೇತರ ರೊಡನೆ ಘರ್ಷಣೆಗೆ ಇಳಿದದ್ದು. ಇದು ಅಧಿಕಾರದ ಮತ್ತು ಭೂಮಿಯ ವರ್ಗಾವಣೆ ಯೊಂದಿಗೆ ಕೊನೆಗೊಂಡದ್ದರಿಂದ ಕೇವಲ ವರ್ಗಾವಣಾ (Transformative) ನೀತಿ ಸಂಹಿತೆಯಾಗಿ ಬಿಟ್ಟಿತು. ಅರಸು ಜಾರಿಗೆ ತಂದ ಭೂ ಮಸೂದೆಯಿಂದಾಗಿ ಈ ಘರ್ಷಣೆ ಕೊನೆಗೊಂಡಿತು.

ಮೂರನೆಯದು : ಅಸ್ಪೃಶ್ಯರಿಗೂ, ಸವರ್ಣೀಯರಿಗೂ ಮಧ್ಯೆ ನಡೆದ ಘರ್ಷಣೆಗೆ ಸಂಬಂಧಿಸಿದೆ. ಅಸ್ಪೃಶ್ಯರು ಮೇಲ್ವರ್ಗದ ಸವರ್ಣೀಯ ಬ್ರಾಹ್ಮಣೇತರರನ್ನು, ಮತ್ತು ಬ್ರಾಹ್ಮಣರನ್ನು ಇಡಿಯಾಗಿ ಎದುರಿಸಬೇಕಾದ್ದರಿಂದ ಮೂಲತಃ ಕ್ರಾಂತಿಕಾರಕ (Revolutionary) ತಾತ್ವಿಕತೆಯನ್ನು ರೂಢಿಸಿಕೊಳ್ಳಬೇಕಾಯಿತು. ಮೇಲೆ ಹೇಳಿದ ಒಂದನೆಯ ವರ್ಗ ಮತ್ತು ಎರಡನೆಯ ವರ್ಗದ ಹೋರಾಟಗಾರರೂ ಕೂಡಾ ಇವರಿಗೆ ವಿರೋಧಿಗಳೇ ಆಗಿದ್ದಾರೆ. ಕೆಳಗಿನದ್ದಕ್ಕಿಂತ ಮೇಲಿನದು ಹೆಚ್ಚು ಮಡಿ ಎಂಬ ಹೈರಾರ್ಕಿಕಲ್ ಜೀವನ ಪದ್ಧತಿಯ ಭಾರತೀಯ ಸಮಾಜದಲ್ಲಿ, ಎಲ್ಲರಿಗೂ ಮೈಲಿಗೆ ಯಾಗಿರುವ ದಲಿತರು ಕ್ರಾಂತಿಕಾರಕವಾಗದೇ ಇರುವುದೂ ಸಾಧ್ಯವಿಲ್ಲ.

ಆದರೆ ನಮಗೆಲ್ಲ ತಿಳಿದ ಹಾಗೆ ದಲಿತರಲ್ಲಿ ಉಂಟಾದ ಎಚ್ಚರ ಯಾವ ಕ್ರಾಂತಿಯನ್ನೂ ಮಾಡಿಲ್ಲ. ಅಥವಾ ಕರ್ನಾಟಕದ ರಾಜಕೀಯ ವಲಯವನ್ನು ಅಲ್ಲಾಡಿಸುವಷ್ಟು ಅವು ಗಟ್ಟಿಯಾಗಲೇ ಇಲ್ಲ. ಇದಕ್ಕೆ ಕಾರಣಗಳನ್ನು ಹುಡುಕಬೇಕಾಗುತ್ತದೆ-

ಸದ್ಯದ ಎಲ್ಲ ದಲಿತ ಬರಹಗಾರರೂ ಎಡಸಂಥೀಯ ವಿಚಾರಗಳಿಗೆ ಬದ್ಧರಾದವರೇ ಆಗಿದ್ದಾರೆ; ಮತ್ತು ಹೀಗೆ ಬದ್ಧರಾದವರ ಚಿಂತನೆಯಲ್ಲಿ ಗಾಂಧಿ, ಮಾರ್ಕ್ಸ್, ಲೆನಿನ್ ಮಾವೋ, ಲೋಹಿಯಾ, ಅಂಬೇಡ್ಕರ್ ಮೊದಲಾದವರಿರುತ್ತಾರೆ. ಹೀಗೆ ಎಚ್ಚರ ಗೊಂಡ ದಲಿತರದ್ದೇ ಒಂದು ಪ್ರತ್ಯೇಕ ವರ್ಗ ನಿರ್ಮಾಣವಾಗಿ, ಆ ವರ್ಗ ತನ್ನ

ಅಸ್ತಿತ್ವಕ್ಕಾಗಿ ತಡಕಾಡುವ ಚಿತ್ರ ನನ್ನ ಕಣ್ಣ ಮುಂದೆ ಇದೆ. ಈ ಎಚ್ಚರಗೊಂಡ ದಲಿತರ ಕಣ್ಣೆದುರು ಅವರನ್ನು ನಿರ್ಮಾಣ ಮಾಡಿದ ಸಮಾಜ ವ್ಯವಸ್ಥೆ ಇಷ್ಟು, ಇಂದು ಅಂತರರಾಷ್ಟ್ರೀಯ ಮಟ್ಟದಲ್ಲಿ ತನ್ನ ಜಾಲವನ್ನು ಹರಡಿಕೊಂಡು ಸಂಕೀರ್ಣವಾಗಿದೆ. ಈ ದಲಿತ ನಾಯಕರ ಹಿಂದುಗಡೆಯಲ್ಲಿ ಅವರು ಬಿಟ್ಟು ಬಂದ ದಲಿತ ಜೀವನ ಕ್ರಮವಿದೆ. ಇಂಥ ಸಂದರ್ಭದಲ್ಲಿ ಆಧುನೀಕರಣಗೊಂಡ (Modernise) ಶ್ರೀಮಂತಿಕ ನೆಲೆಯ ಪ್ರತಿಷ್ಠಿತನಾದ ದಲಿತ (Dalit Elite) ತನ್ನನ್ನು ಎಲ್ಲಿ ಗುರುತಿಸಿಕೊಳ್ಳಬೇಕೆಂಬ ಸಮಸ್ಯೆಯಲ್ಲಿ ತಡಕಾಟ ನಡೆಸುತ್ತಿದ್ದಾನೆ. ಅತಂತ್ರನಾಗಿ ಹೋಗಿರುವ ತನ್ನ ಜೀವನ ಕ್ರಮಕ್ಕೆ ಹೊಸದಾದ ಅರ್ಥ ಬರುವಂತಾಗಲು ಆತ ಏನನ್ನಾದರೂ ಮಾಡಿಕೊಳ್ಳಲೇಬೇಕಾದ ಚಾರಿತ್ರಿಕ ಅನಿವಾರ್ಯತೆ ಆತನ ಮುಂದಿದೆ. ಈ ಅನಿವಾರ್ಯತೆಯ ಹಿಂದೆ ನಿರ್ಮಾಣವಾದ ಶೂನ್ಯತ್ವವನ್ನು (Peculiar Vaccum) ತುಂಬಿಕೊಳ್ಳಲು 'ಮಾರ್ಕ್ಸ್–ಫುಲೆ–ಅಂಬೇಡ್ಕರ್' ವಾದವೋ 'ದಲಿತ ಸಂಘರ್ಷ ಸಮಿತಿ' ಯಂಥ ಸಂಘಟನೆಯೋ, 'ದಲಿತ ಸಾಹಿತ್ಯ ಸಮಾವೇಶವೋ' 'ಸುದ್ದಿ ಸಂಗಾತಿ'ಯಂಥ ಪತ್ರಿಕೆಯೋ' ಅತ್ಯಂತ ತುರ್ತಿನ ಅಗತ್ಯವಾಗುತ್ತದೆ. ಇವರಲ್ಲಿರುವ ಬಹುತೇಕ ಜನರಿಗೆ 'ದಲಿತ ಜೀವನದಲ್ಲಿ ನಿಜವಾಗಿಯೂ ಏನಿದೆ ?' ಎಂದು ಗೊತ್ತಿಲ್ಲ. ಏಕೆಂದರೆ ಇವರ್ಯಾರೂ ದಲಿತರ ಸಾಂಸ್ಕೃತಿಕ ಜೀವನವನ್ನೋ, ದಲಿತ ಜನಪದವನ್ನೋ ಗಾಢವಾಗಿ ಅಭ್ಯಾಸ ಮಾಡಿದವರಲ್ಲ. (1) ಹಾಗಂತ ಈಗಾಗಲೇ 'ಮಹಾತ್ಮ'ರು ತಿಳಿಸಿ ಹೇಳಿದಂತೆ ಅನ್ಯಾಯ ಆಗಿದೆ ಎಂದೂ ಗೊತ್ತಿದೆ. ಇದಕ್ಕೆ ಪ್ರತಿಕ್ರಿಯೆ ಎಂದರೆ ಅಂಬೇಡ್ಕರ್ ಅವರನ್ನು 'ದೇವರು ಸಮ' ಎಂದು ಭಾವಿಸಿ ಆರಾಧಿಸುವುದು, 'ನಮಗೆ ಅನ್ಯಾಯ ಆಗಿದೆ' ಎಂದು ಕಿರುಚುವುದು ಮತ್ತು ತನ್ನ ನೋವನ್ನು ಹೇಳಿಕೊಳ್ಳುವುದು. ಈ ಯಾವ ಅಂಶಗಳೂ ದಲಿತರ ಜೀವನ ಕ್ರಮದ ಅತ್ಯುನ್ನತ ಮೌಲ್ಯಗಳಲ್ಲ ಎಂಬುದನ್ನು ನಾವು ಇನ್ನಾದರೂ ಅರ್ಥಮಾಡಿಕೊಳ್ಳಬೇಕು. ಹೀಗೆ ತನ್ನೊಳಗನ್ನು ತಾತ್ವಿಕವಾಗಿ ಅರ್ಥಮಾಡಿಕೊಳ್ಳದ ವಿದ್ಯಾವಂತ ದಲಿತರ ಒಕ್ಕೂಟ ಗಂಭೀರವಾದ ಪ್ರಶ್ನೆಗಳನ್ನು ಎತ್ತಲಾಗದೆ ತಡವರಿಸುತ್ತದೆ. ಯಲಗುಡಿಗೆ ಮಂಜಯ್ಯ ಬರೆಯುವುದು ನೋಡಿ :

> "ಕಳೆದ ಎರಡು ವರ್ಷಗಳಿಂದ ದಲಿತ ಸಂಘರ್ಷ ಸಮಿತಿ ಹೇಳಿಕೊಳ್ಳುವಂಥ ರಾಜ್ಯಮಟ್ಟದ ಕಾರ್ಯಕ್ರಮ ರೂಪಿಸಿಲ್ಲ. ಇಂದು ದಲಿತ ಸಂಘರ್ಷ ಸಮಿತಿಯ ಕಾರ್ಯಕರ್ತರೆಂದರೆ ಗ್ರಾಮೀಣ ಭಾಗದ ಜನರಿಗೆ ಬರಿಯ ಅರ್ಜಿ ಬರೆದುಕೊಡುವುದು. ಅಥವಾ ಸರ್ಕಾರಿ ಕಛೇರಿಗಳಿಗೆ ತಮ್ಮೊಂದಿಗೆ ಬಂದು ವ್ಯವಹರಿಸುವುದು ಎಂದು ತಿಳಿದುಕೊಂಡಿದ್ದಾರೆ. ಈಚಿನ ದ. ಸಂ ಸ. ದ ಕಾರ್ಯಕರ್ತರು ಕೂಡಾ ತಮ್ಮ ಕೆಲಸ 'ಇಷ್ಟೇ' ಎಂದು ಅವರೇ ಮಿತಿ ಹೇರಿ

ಕೊಂಡಿದ್ದಾರೆ. ಇದಕ್ಕೆ ದ. ಸಂ. ಸ. ದ ಮುಂಚೂಣಿಯಲ್ಲಿದ್ದವರೆ
ಸೇರ ಹೋದೆ. ಅಲ್ಲದೆ ಏಡನೇ ಹಂತದ ಮುಖಂಡತ್ವವನ್ನು
ಕೂಡಾ ಹುಟ್ಟು ಹಾಕಲಿಲ್ಲ."
(ಮುಂಗಾರು ; 14-9-1986)

ದಲಿತರಲ್ಲಿನ ಅಕ್ಷರಸ್ಥ ವರ್ಗ ತ್ರಿಶಂಕು ಸ್ಥಿತಿಯನ್ನು ಅನುಭವಿಸುತ್ತ ಇರುವಲ್ಲಿಯವರೆಗೆ ಇದು ಸಹಜ ಬೆಳವಣಿಗೆಯಾಗಿದೆ. ಸದ್ಯದ ನಮ್ಮ ರಾಜಕಾರಣವೂ ಕೂಡಾ ದಲಿತರನ್ನು ಅವರ ಲೋಕದಿಂದ ಬೇರ್ಪಡಿಸಿ, 'ಪರಕೀಯ'ರನ್ನಾಗಿಸುವುದರತ್ತಲೇ ಹೆಚ್ಚಿನ ಉತ್ಸಾಹವನ್ನು ಪ್ರಕಟಿಸಿದೆ, ಮತ್ತು ಪ್ರಪಂಚದ ಯಾವುದೇ ಆಳುವ ವರ್ಗ ಉಕ್ಕುತ್ತಿರುವ ಪ್ರತಿಭಟನೆಯನ್ನು ತಡೆಯಲು ಶೋಷಿತರ ಪೊಣಕ್ಕೆ ಗಂಟಿಗೆ ತುಪ್ಪ ಲೇಪಿಸುವ ಕೆಲಸವನ್ನು ಮಾಡಿಯೇ ತೀರುತ್ತದೆ. ಹೋರಾಟದಿಂದ ವ್ಯವಸ್ಥೆಗೆ ಬೆಂಕಿ ಹಚ್ಚಬೇಕಾದ ದಲಿತರು ಮೀಸಲಾತಿಗಾಗಿ ಹೋರಾಡುವುದು, ಕಾಂಗ್ರೆ, ಜನತಾ ಟಿಕೆಟ್ಟಿಗಾಗಿ ಒದ್ದಾಡುವುದು, ಆರ್.ಎಸ್.ಎಸ್.ಗಳೊಂದಿಗೆ ಸೇರಿಕೊಂಡು ದೇಶ ಸೇವೆ ಮಾಡುವುದು, ದೇಶದ ಏಕತೆ ಮತ್ತು ಸಮಗ್ರತೆಗಾಗಿ ಕರೆಕೊಡುವುದು ಅವರ ಬದುಕಿನ ಮಹಾನ್ ದುರಂತಗಳ ದಾಖಲೆಗಳಾಗಿವೆ. ಆದರೆ ದಲಿತ ಸಾಹಿತ್ಯದುದ್ದಕ್ಕೂ;

"..... ಇದೆಲ್ಲ ಕಂಡೂ ಸುಮ್ಮನೆ ಒಳಗೆ ಕುದಿ ಕುದಿದು
ದಹಿಸುತ್ತ ಕೂರಲಾರೆ
ನನ್ನ ಜನರ ಕಿಚ್ಚು ತುಂಬಿಕೊಂಡವ ನಾನು.
ನನ್ನವರು ಬದುಕಬೇಕು
ನಿಜ ಬದುಕ ಬದುಕಬೇಕು
ಆದ್ದರಿಂದಲೇ ಸುಮ್ಮನೆ ಕೂರುವುದೆಂತು
ನನ್ನಿಂದ ಖಂಡಿತಾ ಸಾಧ್ಯವಿಲ್ಲ."
(ರಾಮುದೇವರಾಕೆ : 'ಕಪ್ಪು ಚಿರತೆಯ ಡಂಗುರ')

ಎಂಬ ಡಂಗುರ ಸಾರಲಾಗಿದೆ. ಇಂಥ ರೊಚ್ಚಿನ, ಆವೇಶದ ನುಡಿಗಳು ಅಂತಿಮವಾಗಿ ಆಳುವ ವರ್ಗಕ್ಕೆ ತನ್ನನ್ನು ಗಟ್ಟಿಮಾಡಿಕೊಳ್ಳಲು ಸಹಾಯ ಮಾಡುತ್ತವೆ; ಅಂಬೇಡ್ಕರ್ ಅವರ ಪೂರ್ಣ ಪ್ರಯೋಜನ ಪಡೆದ ಕಾಂಗ್ರೆಸಿನವರಂತೆ. !

ತಮ್ಮ ಸ್ವಂತ ಜನರಿಗೇ ಪರಕೀಯರಾಗಿಬಿಟ್ಟ ದಲಿತ ನಾಯಕರು, ತಾವು ನಿರ್ಮಾಣ ಮಾಡಿಕೊಂಡ ತಾತ್ವಿಕತೆಯನ್ನಾಗಲೀ ಸಾಹಿತ್ಯವನ್ನಾಗಲೀ ದಲಿತರ ಹತ್ತಿರ ಕೊಂಡೊಯ್ಯಾಗ, ಸದ್ಯ ಇದು ವಿಧದ ಮೂಲಭೂತ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಈ ಸಮಸ್ಯೆ ಪರಿಹಾರವಾಗದೆ ಇವರ ಸಾಹಿತ್ಯ ದಲಿತ ವರ್ಗದಲ್ಲಿ ನಿಜವಾದ ಎಚ್ಚರವನ್ನು

ಉಂಟುಮಾಡಲಾರದು.

ಮೊದಲನೆಯದು : ಮೀಸಲಾತಿ, ಕಠಿಣ ದುಡಿಮೆಯೇ ಮೊದಲಾದ ಅನೇಕ ವಿಧದ ತಂತ್ರಗಾರಿಕೆಯಿಂದ ಮೇಲೆ ಬಂದ ದಲಿತರು ತಮ್ಮ ವೈಯಕ್ತಿಕ ನೆಲೆಯಲ್ಲಿ ಮಾತ್ರ ಕ್ರಾಂತಿಕಾರಿಗಳಾಗಿರುವುದು. ದಲಿತರ ಬಗ್ಗೆ ಒಂದೆರಡು ಪತ್ರಿಕಾ ಹೇಳಿಕೆ, ಅಥವಾ ವರ್ಷಕ್ಕೆ ನಾಲ್ಕು ಭಾಷಣ ಮಾಡಿ ಇವರು ತಮ್ಮ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳುತ್ತಾರೆ. ಸಾಹಿತ್ಯಕ್ಕೆ ಅಗತ್ಯವಾದ ವಿಸ್ತೃತ ಸಾಮಾಜಿಕ ಹಿನ್ನೆಲೆ ಇವರಿಗಿಲ್ಲ. ಅಥವಾ ಇವರ ಸಾಹಿತ್ಯ ವಿಸ್ತೃತ ಸಮಾಜವನ್ನು, ಮುಟ್ಟದೇ ಹೋಗುತ್ತಿದೆ.

ಎರಡನೆಯದು : 'ಅಸ್ಪೃಶ್ಯತೆ' ಯನ್ನೇ ಮಾನದಂಡವಾಗಿಟ್ಟುಕೊಂಡ ಕಾರಣ ದಲಿತರಿಗೆ ಕಮ್ಯುನಿಸ್ಟರು ಅಸ್ಪೃಶ್ಯರಾಗಿದ್ದಾರೆ. ಭಾರತೀಯ ಪಕ್ಷ ರಾಜಕೀಯದ ಕಮ್ಯುನಿಸ್ಟರಿಗೆ ಪ್ರತಿಕ್ರಿಯಿಸುವ ರಭಸದಲ್ಲಿ ದಲಿತರು ಮಾರ್ಕ್ಸ್‌ವಾದವನ್ನೇ ತಪ್ಪಾಗಿ ಗ್ರಹಿಸಿ, ವರ್ಗ ಹೋರಾಟವನ್ನು ಪ್ರತಿಪಾದಿಸುವ ರೈತ–ಕಾರ್ಮಿಕರ ಸಂಘಟನೆಗಳಿಗಿಂತ ದೂರ ಹೋಗಿಬಿಟ್ಟಿದ್ದಾರೆ. ಇದರಿಂದಾಗಿ ದಲಿತ ಸಂಘಟನೆಗಳ ಶಕ್ತಿ ಕಡಿಮೆ ಆಗಿದೆ.

ಮೂರನೆಯದು : ಮತ್ತು ಅತಿ ಮುಖ್ಯವಾದದು, ದಲಿತ ಬರಹಗಾರರ ತಾತ್ವಿಕತೆಗೂ ದಲಿತರ ಜೀವನ ವಿಧಾನದ ಸಂದರ್ಭದಲ್ಲಿಯೇ ಹುಟ್ಟಿಕೊಂಡ ತಾತ್ವಿಕತೆಗೂ ಏರ್ಪಟ್ಟಿರುವ ಬಲವಾದ ಬಿರುಕು. ಈ ಬಿರುಕು ದಲಿತರೊಳಗೇ ವ್ಯತ್ಯಾಸವನ್ನುಂಟುಮಾಡಿದೆ. ಸಂವಹನ ಸಾಧ್ಯವಾಗದ ಸ್ಥಿತಿಯೊಂದು ಇದರಿಂದ ಸೃಷ್ಟಿಯಾಗಿದೆ. ಸದ್ಯ ದಲಿತ ನಾಯಕರು 'ತಾವು ಮೇಲೆ' ಎಂದು ಭಾವಿಸಿ 'ಮೇಲೆತ್ತುವ' ಕೆಲಸದಲ್ಲಿ ಮಗ್ನರಾಗಿದ್ದಾರೆ. 'ಮೇಲೆ' ಇರುವವರು 'ಕೆಳಗೆ' ಇರುವವರನ್ನು ಸೃಜನಾತ್ಮಕವಾಗಿ ಪ್ರಭಾವಿಸುವುದು ಅತ್ಯಂತ ಕಷ್ಟದ ಕೆಲಸ. ಸಾಮಾನ್ಯವಾಗಿ 'ಮೇಲೆ' ಇರುವವರಿಗೆ ವಿರೋಧ ಸೂಚಿಸುವ ಆಕೃತಿ (Structure) ಯೊಂದು ಕೆಳಗೆ ಇರುವವರಲ್ಲಿ ರೂಪುಗೊಳ್ಳುತ್ತಾ ಹೋಗುವುದುಂಟು. ಶೋಷಿತರ ಜೀವನ ವಿಧಾನದ ಒಳರಚನೆ (Intrastructure) ಯ ಅಭ್ಯಾಸದಿಂದ ಇದು ಸ್ಪಷ್ಟವಾದ ಅಂಶ. ಇಲ್ಲಿನ ಗತಿ ತಾರ್ಕಿಕತೆಯನ್ನು ಆಳವಾಗಿ ಅಭ್ಯಾಸಮಾಡಬೇಕಾಗಿದೆ. ದಲಿತ ವಿದ್ಯಾವಂತರು ಬಾಯಿ ಬಿಡುತ್ತಲೇ ತಮ್ಮ ಪರಂಪರಾಗತ ನೆಲೆಯಿಂದ ಬೇರ್ಪಡುತ್ತಾರೆ, ಮತ್ತು ಅದೇ ಹೊತ್ತಿಗೆ ತಮ್ಮ ಪೂರ್ವ ಸ್ಥಿತಿಯ ಮತ್ತು ವರ್ತಮಾನದ ಸ್ಥಿತಿಗೆ ಕಾರಣವಾದ ರಾಜಕೀಯ ವ್ಯವಸ್ಥೆ ಕೊಡುವ ಸವಲತ್ತುಗಳಿಗಾಗಿ ಆಸೆಯಿಂದ ಬೇಡಿಕೆ ಸಲ್ಲಿಸುತ್ತಾರೆ. ಆಳುವ ವ್ಯವಸ್ಥೆಯಲ್ಲಿರುವ ಕೊಬ್ಬಿದ ದಲಿತರನ್ನು 'ಕೊನೆಗೂ ತಮ್ಮವನೆಂದು' ಉದಾರವಾಗಿ ನೋಡಿ,

ಅವರು ತಮ್ಮ ಸಮಸ್ಯೆಗಳ ಪರಿಹಾರಕ್ಕೆ ಮುಂದೆ ಬರಬೇಕೆಂದು ಆಗ್ರಹ ಮಾಡುತ್ತಾರೆ. ದಲಿತ ಸಂಘಟನೆಗಳು ಹುಟ್ಟಿಕೊಂಡದ್ದೇ ಇಂಥ ವೈರುಧ್ಯಗಳ ಹಿನ್ನೆಲೆಯಲ್ಲಿ. ಆದುದರಿಂದ ಇದು ಸಹಜ ಬೆಳವಣಿಗೆಯಾಗಿದೆ. ಆದರೆ ಈ ಹಂತದಲ್ಲಿ 'ದಲಿತ ಸಂಘರ್ಷ ಸಮಿತಿ'ಯಲ್ಲಿನ 'ಸಂಘರ್ಷ'ವು ದಲಿತ ನಾಯಕರ ಮತ್ತು ಇತರ ಅನಕ್ಷರಸ್ಥ ಪ್ರಾಮಾಣಿಕ ಬಡ ದಲಿತರ ಮಧ್ಯದ ಸಂಘರ್ಷವೇ ಆಗಿ ಬಿಡುತ್ತಿರುವುದು ಅತ್ಯಂತ ನೋವಿನ ಸಂಗತಿ.

ನಾಲ್ಕನೆಯದಾಗಿ : ಬೂರ್ಶ್ವಾ ರಾಜಕೀಯ ವ್ಯವಸ್ಥೆಯ ಒಂದು ಅಂಗವಾಗಿರುವ ದಲಿತ ರಾಜಕಾರಣಿಗಳು ಇತರ ದಲಿತರ ಉದ್ಧಾರಕ್ಕೆ ಶ್ರಮಿಸುವಾಗ ತಮ್ಮ ರಾಜಕೀಯ ಹಿತಾಸಕ್ತಿಗಳನ್ನು ಕಾಯ್ದುಕೊಳ್ಳುವ ಸ್ವಾರ್ಥವನ್ನು ದಲಿತರು ಅರಿಯದೇ ಹೋಗುವುದು. ಇಂಥ ಗ್ರಹಿಕೆಗಳ ಮಿತಿಯಿಂದಾಗಿ ಕ್ರಾಂತಿಕಾರಕ ಚಟುವಟಿಕೆಗಳಿಗೆ ಚಾಲನೆ ದೊರೆಯದೇ ಹೋಗಿದೆ. ಇದು ದಲಿತ ಕಾರ್ಯಕರ್ತರ ಕೊರತೆಯಿಂದ ಉಂಟಾದುದಲ್ಲ, ಬದಲಾಗಿ ನಮ್ಮ ಕಾಲದ ರಾಜಕೀಯ ಕುತಂತ್ರಗಳಿಂದುಂಟಾದುದು.

ಐದನೆಯದು : ಮತ್ತು ಕೊನೆಯದು ರಾಜ್ಯಮಟ್ಟದಲ್ಲೋ ರಾಷ್ಟ್ರೀಯ ಮಟ್ಟದಲ್ಲೋ ರೂಪುಗೊಂಡ ದಲಿತ ಮುಖಂಡರ ತಾತ್ವಿಕತೆಯ ಅನ್ವಯಿಕತೆಗೆ ಸಂಬಂಧಿಸಿದೆ. ಇದು ದಲಿತರ ಗಾಢ ಸ್ಥಳೀಕರಣ (Localisation) ದ ಗುಣದೊಂದಿಗೆ ಸಂಬಂಧ ಹೊಂದಿದೆ. ದಲಿತರ ಸಮಸ್ಯೆಗಳೆಲ್ಲವೂ ಮೊನೋಲಿಥಿಕ್ ಸ್ಥಿತಿಯನ್ನು ಮುಟ್ಟುವವರೆಗೆ ಇದು ಇದ್ದೇ ಇದೆ. ಸುತ್ತಲಿನ ಪ್ರಾಣಿವರ್ಗ ಮತ್ತು ಸಸ್ಯವರ್ಗದೊಂದಿಗೆ ತನ್ನ ಸಂಸ್ಕೃತಿಯ 'ಶಿಷ್ಟ'ವನ್ನು ಸೃಷ್ಟಿಸಿಕೊಂಡ ದಲಿತರು, ಪ್ರದೇಶದಿಂದ ಪ್ರದೇಶಕ್ಕೆ ಭಿನ್ನ ಭಿನ್ನವಾದ ಆಚಾರವುಳ್ಳವರಾಗಿದ್ದಾರೆ. ನನ್ನೂರಿನಲ್ಲಿ 'ಮ್ಯಾಲರು' ಮತ್ತು 'ಮನ್ಸರು' ವಾಸವಾಗಿದ್ದು, ಅವರಲ್ಲಿ 'ಮನ್ಸರು' ಸತ್ತ ದನದ ಮಾಂಸವನ್ನು ತಿನ್ನುತ್ತಿರಾದ್ದರಿಂದ 'ಮಾಯಿಲ' ರಿಂದ ಕೆಳಗಿನವರು ಎಂದು ಭಾವಿಸಲಾಗಿದೆ. ಆದರೆ ನನ್ನ ಪಕ್ಕದ ಊರಿನಲ್ಲಿ 'ಮನ್ಸರೇ' ಇಲ್ಲದ್ದರಿಂದ ಸತ್ತ ಪ್ರಾಣಿಯನ್ನು ಎತ್ತುವ ಕೆಲಸ ಮಾಡುವ 'ಮಾಯಿಲ'ರು, ದನದ ಮಾಂಸ ತಿನ್ನುತ್ತ, 'ಮೇರ' ರಿಂದ ಕೆಳಗಿನವರು ಎಂದು ಗುರುತಿಸಿಕೊಳ್ಳುತ್ತಿದ್ದಾರೆ. ಇಲ್ಲಿಯ ಶ್ರೇಣೀಕೃತ ವ್ಯವಸ್ಥೆಯ ಮೇಲ್ತುದಿಯಲ್ಲಿ ಮೇರರಿದ್ದರೆ- ಅವರ ಕೆಳಗೆ ಮಾಯಿಲರು ಮತ್ತು ತೀರಾ ಕೆಳಗಡೆಯಲ್ಲಿ ಮನ್ಸರಿದ್ದಾರೆ. ಆದರೆ ಊರಿನ ಇತರ ಮುಂದುವರಿದ ಜಾತಿಗಳವರನ್ನು ಕೇಳಿದರೆ, ಬೇಸಾಯಕ್ಕೆ ಮನ್ಸರು ಸರ್ವ ಶ್ರೇಷ್ಠರಾದರೆ, ಮಾಯಿಲರೇ ಅತಿ ಕನಿಷ್ಠರು ಎಂದು ಮನ್ಸರನ್ನು ಎತ್ತಿಕಟ್ಟುತ್ತಾರೆ. ಹೀಗೆ ದಲಿತರ ಸಮಸ್ಯೆ ಸುತ್ತಲಿನ ಸಮಾಜದೊಂದಿಗೆ ನಿಕಟ ಸಂಬಂಧ ಹೊಂದಿದ್ದು, ಅತ್ಯಂತ ಸಂಕೀರ್ಣವಾಗಿರುವುದಲ್ಲದೆ, ಊರಿಂದ ಊರಿಗೆ

ಬದಲಾಗುತ್ತಾ ನಡೆದಿದೆ. ಇದರಿಂದಾಗಿ ಯಾವುದೇ ಪೂರ್ವ ಯೋಜಿತ ಚೌಕಟ್ಟಿನಿಂದ ಇವರನ್ನು ವಿಶ್ಲೇಷಿಸುವುದು ಸಾಧ್ಯವಾಗಲಾರದು. ಬದಲಾಗಿ ಸ್ಥಳೀಯ ಮಟ್ಟದಲ್ಲಿಯೇ ಥಿಯರಿಗಳನ್ನು ರೂಪಿಸಿಕೊಳ್ಳುತ್ತಾ ಹೋರಾಟದ ವಿಧಾನಗಳನ್ನು ಕಂಡುಕೊಳ್ಳಬೇಕಾಗುತ್ತದೆ. ಯಾವುದೇ ಕೇಂದ್ರೀಕೃತ ವ್ಯವಸ್ಥೆ ದಲಿತರ ಸಾಂಸ್ಕೃತಿಕ ಬದುಕನ್ನು ಅನಾವರಣಗೊಳಿಸಲಾರದು. ಪರಿವರ್ತಿಸಲಾರದು. ದ.ಸಂ.ಸ.ದ ಸಂಗಾತಿಗಳು 'ಗಾಂಧಿ' ಚಿತ್ರವನ್ನು ಬಹಿಷ್ಕರಿಸಿದಾಗ, ದೇವನೂರು ಮಹಾದೇವ ಅವನ್ನು ನೋಡಿ ಬಂದು ಲೇಖನ ಬರೆದದ್ದು (ಲಂಕೇಶ್ ಪತ್ರಿಕೆ; ಸೆಪ್ಟೆಂಬರ್ 25, 1983) ಈ ಹಿನ್ನೆಲೆಯಲ್ಲಿ ಅತ್ಯಂತ ಸಹಜವಾದ ಪ್ರಕ್ರಿಯೆಯಾಗಿ ಕಾಣುತ್ತದೆ.

ಇಂಥ ವೈರುದ್ಧ್ಯಾತ್ಮಕ ಸಂದರ್ಭದಲ್ಲಿ ಹುಟ್ಟಿಕೊಂಡ ದಲಿತರ ಬರಹಗಳು ಅತ್ತ ಪೂರ್ಣ ಕ್ರಾಂತಿಕಾರಕವಾಗುವ ಶಕ್ತಿಯನ್ನು ಪಡೆಯದೆ, ಇತ್ತ ಪೂರ್ಣ ಅಧ್ಯಯನ ಶೀಲವೂ ಆಗದೆ ಉಳಿದುಬಿಟ್ಟಿದೆ. ದಲಿತರಲ್ಲದವರೆಲ್ಲ ದಲಿತರ ಬಗ್ಗೆ ಹೇಳಿದ ಮಾತುಗಳಿಗೆ ಪ್ರತಿಕ್ರಿಯಿಸುವುದರಲ್ಲಿಯೇ ಇವರ ಶಕ್ತಿ ಹ್ರಾಸವಾಗುತ್ತಿದೆಯಾದ್ದರಿಂದ ಅವರ ಬರಹಗಳಲ್ಲಿ ಕೇವಲ ಆಕ್ರೋಶ–ನೋವು ಕಾಣಿಸಿಕೊಳ್ಳುತ್ತಿದೆ. ಈಗ ತಮ್ಮ ಗತಿಯನ್ನು ಬದಲಿಸಿಕೊಂಡು, ಒಟ್ಟು ಸಾಮಾಜಿಕ ಹೋರಾಟದಲ್ಲಿ ತನ್ನನ್ನು ಗುರುತಿಸಿಕೊಳ್ಳುತ್ತ, ಗಂಭೀರ ಅಧ್ಯಯನದ ಹಿನ್ನೆಲೆಯಲ್ಲಿ ತನ್ನ ಸಂಸ್ಕೃತಿಯ ಶ್ರೇಷ್ಠತೆಯನ್ನು ಜಗತ್ತಿಗೆ ಹಂಚಿಕೊಡುತ್ತಾ, ಇದಕ್ಕೆ ಅಡ್ಡಬಂದ ಅಂಶಗಳನ್ನು ನಿರ್ದಾಕ್ಷಿಣ್ಯವಾದ ಹೋರಾಟದಲ್ಲಿ ಬದಿಗೆ ಸರಿಸುತ್ತ ಇವರಿಲ್ಲಿ ಬರೆಯಬೇಕಾಗಿದೆ. ಈ ಅರ್ಥದಲ್ಲಿ ದಲಿತರಿಗೆ ಯಾರ ಅನುಕಂಪೆಯೂ ಬೇಡ. ಅವರಿಗಿಂತ ಮೇಲೆ ಇದ್ದೇವೆಂದು ಭಾವಿಸುತ್ತಿರುವ ಜನವರ್ಗವನ್ನು ತನ್ನ ಮಟ್ಟಕ್ಕೆ ಎಳೆದುಕೊಂಡು, ಅವರೆಲ್ಲರನ್ನೂ ವೈಚಾರಿಕಗೊಳಿಸಬೇಕಾಗಿದೆ. ಡಾ. ಯು. ಆರ್. ಅನಂತಮೂರ್ತಿ ಅವರು ಇದನ್ನು ಸ್ವಲ್ಪ ಬೇರೆಯಾಗಿ ಆದರೆ ಅತ್ಯಂತ ಖಚಿತವಾಗಿ ಗುರುತಿಸಿದ್ದಾರೆ:

> "ಎಂಥ ಸ್ಥಿತಿಯಲ್ಲೂ ಹರಿಜನರು ಎಷ್ಟು ಜೀವಂತರಾಗಿದ್ದಾರೆ ಎಂದು ನಮಗೆ ಅನಿಸುತ್ತಿರುವಂತೆಯೇ ಅವರನ್ನು ಅವುಕಿರುವ ದಾರಿದ್ರ್ಯ ಮಾಯವಾದಲ್ಲಿ ಅವರ ಶಕ್ತಿ ಎಷ್ಟು ಅಪಾರ ಸಾಧ್ಯತೆಗಳನ್ನು ಪಡೆದಿರುವಂಥದ್ದು ಎಂದು ನಮಗೆ ಅನ್ನಿಸುವಂತೆ ಕಥಾನಕ (ದೇವನೂರು ಅವರ 'ಒಡಲಾಳ') ನಮ್ಮ ಗಮನವನ್ನು ಪ್ರಚೋದಿಸುತ್ತದೆ. ನಮ್ಮ ಚೈತನ್ಯ ಹೀಗೆ ಹೆಚ್ಚದ ಹೊರತು ಕ್ರಾಂತಿಕಾರಕತೆ ಹೇಗೆ ತಾನೆ ಸಾಧ್ಯವಾದೀತು ?"
>
> [ಸಾಹಿತ್ಯ ವಿಮರ್ಶೆ (ಸಂ; ಟಿ. ಪಿ. ಅಶೋಕ) : 1983 ಪು. 110]

ಈ ಹಿನ್ನೆಲೆಯಲ್ಲಿ ನನ್ನ ಪ್ರಬಂಧದ ಆಶಯವನ್ನು ಸಮರ್ಥವಾಗಿ ಸಾಕ್ಷಾತ್ಕರಿಸುವ ಪಾಬ್ಲೋನೆರೂದನು ಲೆನಿನ್ ಬಗ್ಗೆ ಬರೆದ ಕವನವೊಂದನ್ನು ಉದಾಹರಿಸಿ ಪ್ರಬಂಧವನ್ನು ಮುಗಿಸುತ್ತಿದ್ದೇನೆ :

"ನೀರು ಹನಿಗಳ ಸದ್ದನ್ನು
ಪಾರಿವಾಳಗಳ ಹಾರುವಿಕೆಯನ್ನು
ನಿರ್ಮಲ ವನದ ಮಹಾ ಎದೆಗುಂಡಿಯ ಬಡಿತವನ್ನು
ಲೆನಿನ್ ಆಲಿಸುತ್ತಿರುವುದು ಕಾಣಿಸುತ್ತದೆ ನನಗೆ
ಕಾಡಿಗೆ, ಬದುಕಿಗೆ
ಗಾಳಿಯ ಹೆಜ್ಜೆಗೆ
ಇತಿಹಾಸದ ದೊಡ್ಡ ಹೆಜ್ಜೆಗೆ
ಶ್ರದ್ಧೆಯಿಂದ ಲೆನಿನ್ ಕಿವಿಗೊಡುತ್ತಾನೆ
ಪ್ರಕೃತಿಯ ಗಂಭೀರ ಪರಿಸರದಲ್ಲಿ."
[ಅನುವಾದ : ತೇಜಸ್ವಿನಿ ನಿರಂಜನ]

ಅಡಿಟಿಪ್ಪಣಿಗಳು :

1 ತೀರ ಇತ್ತೀಚೆಗೆ ದಲಿತ ವರ್ಗದಿಂದ ಬಂದವರು ತಮ್ಮ ಜನಾಂಗದ ಬಗ್ಗೆಯೇ ಸಂಶೋಧನೆ ನಡೆಸುವುದಕ್ಕಾಗಿ ವಿಶ್ವವಿದ್ಯಾನಿಲಯದಲ್ಲಿ ಓಡಾಡುತ್ತಿರುವುದು ತುಂಬ ಸಂತಸದ ವಿಚಾರ. ಕರ್ನಾಟಕದಲ್ಲಿ ನಡೆದ ಜಾನಪದ ಸಂಶೋಧನೆಗಳಲ್ಲಿ ಇವರು ಆಸಕ್ತಿ ತೋರುವಂಥದ್ದು ಮುಂದಿನ ದಿನಗಳಲ್ಲಿ ಕ್ರಾಂತಿಕಾರಕವಾದದ್ದನ್ನು ಸಾಧಿಸುತ್ತದೆ. ಎಂಬ ನಂಬಿಕೆ ನನಗಿದೆ. ಇದರ ಜೊತೆಯಲ್ಲಿ ಈ ದಲಿತ ಸಂಶೋಧಕರು ತಮ್ಮ ಸಂಶೋಧನೆಯ ವಿಧಿವಿಧಾನಗಳನ್ನು ಹೊಸದಾಗಿ ರೂಪಿಸಿಕೊಳ್ಳಬೇಕಾಗುತ್ತದೆ. ಎಂಬುದೂ ಗಮನಾರ್ಹ.

ಗ್ರಂಥಋಣ :

1. ಅನಂತಮೂರ್ತಿ ಯು. ಆರ್., "ದೇವನೂರು ಮಹಾದೇವರ ಒಡಲಾಳ", ಸಾಹಿತ್ಯ ವಿಮರ್ಶೆ–1983 (ಸಂ. ಟಿ. ಪಿ. ಅಶೋಕ), ಬೆಂಗಳೂರು : ಕರ್ನಾಟಕ ಸಾಹಿತ್ಯ ಅಕಾಡೆಮಿ. 1983.
2. ಲಕ್ಷ್ಮೀನಾರಾಯಣ, "ಹಿನ್ನಡಿ" (ಕತ್ತಲಾಳದ ಕಿರಣಗಳು : ದೇವಯ್ಯಹರವೆ ಮೈಸೂರು : ನೆಲಮನೆ ಪ್ರಕಾಶನ, 1982.

3. ವಿಜಯ ಶಂಕರ ಎಸ್.ಆರ್., "ಕಿರುಸಂಸ್ಕೃತಿಯ ಚಿಗುರು" ಕನ್ನಡದಲ್ಲಿ ದಲಿತ ಸಾಹಿತ್ಯ "(ಸಂಕ್ರಮಣ ೧೧೬ (ಸಂ) ಚಂದ್ರಶೇಖರಪಾಟೀಲ) ಧಾರವಾಡ : ಸಂಕ್ರಮಣ ಪ್ರಕಾಶನ, 1981.

4. Hardgrawe R. L "The Nadars of Tamilnadu ; The political centre of a community in change Berkly : University of California Press. 1969

5. Mathew Joseph "Dalit panthers of Maharastra; Untouchables protest movement", State and Society Vol 4, Number 4 (Ed ; D. N Varghese), Kottayam : Indian Institute for Regional Devolpment Studies, 1983.

6, Moffatt Michael, "An Untouchable community in South India, New Jersey : princeton University press. 1979

7 Omvedit Gail., "Jotirao phule and Ideology of Social revolution in India", Economic and political weekly, Vol 6. No, 39, Sept 1971.

ವರದಿಗಳು 1 ಪತ್ರಿಕೆಗಳು

1. ಅನ್ವೇಷಣೆ (ಸಂ : ನಾಗರಾಜಹಳ್ಳಿ ಆರ್- ಜಿ.) ಬೆಂಗಳೂರು : ಅನ್ವೇಷಣೆ ಪ್ರಕಾಶನ.
2. ಗ್ರಂಥಲೋಕ (ಸಂ. ಅನಂತರಾಮಯ್ಯ ಆರ್. ಎಲ್.) ಮೈಸೂರು.
3, ಮುಂಗಾರು (ಸಂ : ರಘುರಾಮಶೆಟ್ಟಿ ವಡ್ಡರ್ಸೆ) ಮಂಗಳೂರು : ಮುಂಗಾರು ಪ್ರಕಾಶನ.
4. ರುಜುವಾತು (ಸಂ : ಅನಂತಮೂರ್ತಿ ಯು. ಆರ್.) ಮೈಸೂರು.
5 ಸಂಕ್ರಮಣ (ಸಂ ; ಚಂದ್ರಶೇಖರ ಪಾಟೀಲ) ಧಾರವಾಡ. ಸಂಕ್ರಮಣ ಪ್ರಕಾಶನ.
6 Reports of the committe on untouchability (Ed : Elayaperumal), New-Delhi

ಭವಿಷ್ಯದ ನಮ್ಮ ಬದುಕು.

● ಅಲ್ವಿನ್ ಟಾಫ್ಲರ್/ಸೀಆರ್ ಅಣಜಿ.

ಸಾಮಾಜಿಕ ಭವಿಷ್ಯವಾದದ ವ್ಯೂಹ

ನಿಯಂತ್ರಣಕ್ಕೆ ಹೊರತಾದ ಸಮಾಜದಲ್ಲಿ ಒಬ್ಬರು ಬದುಕಬಹುದೇ ? ಮುಂದಿನ ತಲ್ಲಣದ ಕಲ್ಪನೆಯು ನಮ್ಮೆದುರಿಗಿಡುವ ಪ್ರಶ್ನೆ ಇದು; ಏಕೆಂದರೆ ನಮ್ಮ ಪರಿಸ್ಥಿತಿ ಹಾಗಿದೆ. ತಂತ್ರಜ್ಞಾನ ಮಾತ್ರವೇ ಸ್ವೈರವಾಗಿದ್ದರೂ ಸಮಸ್ಯೆಗಳು ಸಾಕಷ್ಟು ಗಂಭೀರವಾಗಿರುತ್ತಿದ್ದವು. ಅತಿ ಅಪಾಯಕಾರಿ ವಿಷಯವೇನೆಂದರೆ ಅದರೊಡನೆ ಇನ್ನೂ ಹಲವು ಸಾಮಾಜಿಕ ಪ್ರಕ್ರಿಯೆಗಳು ಸ್ವತಂತ್ರಗೊಂಡು ಭಯಂಕರವಾಗಿ ತೂಗಾಡುತ್ತ ಗತಿ ನಿರ್ದೇಶನದ ನಮ್ಮ ಅತ್ಯುತ್ತಮ ಪ್ರಯತ್ನಗಳನ್ನೂ ವಿರೋಧಿಸುತ್ತಿವೆ.

ನಗರೀಕರಣ. ಕುಲಸಂಘರ್ಷ, ವಲಸೆ, ಜನಸಂಖ್ಯೆ, ಅಪರಾಧ–ನಿಯಂತ್ರಿಸಲು ನಮ್ಮ ಪ್ರಯತ್ನಗಳು ಅಸಮಂಜಸ, ವ್ಯರ್ಥವೆನಿಸುವ–ಇಂಥ ಸಾವಿರಾರು ವಿಷಯಗಳು ನಮ್ಮ ಮನಸ್ಸಿಗೆ ಬರುತ್ತವೆ. ಇವುಗಳಲ್ಲಿ ಕೆಲವು ತಂತ್ರಜ್ಞಾನದ ಸ್ವೈರತೆಗೆ ಸಂಬಂಧಿಸಿದವು, ಉಳಿದವು ಅದರಿಂದ ಭಾಗಶಃ ಮುಕ್ತವಾದವು. ಅಸಮವಾಗಿ ಕ್ಷಿಪಣಿಗತಿಯಲ್ಲಿ ಮೇಲೇರುತ್ತಿರುವ ಬದಲಾವಣೆ, ಗತಿಯ ಕ್ಷಣ ಕ್ಷಣದ ಭಿನ್ನತೆ, ಅದರ ಕಿರಿಕಿರಿ, ಇವು ನಮ್ಮನ್ನು ಸ್ವೀಡನ್ ಬೆಲ್ಜಿಯಂ ನಂಥ ಚಿಕ್ಕ ತಾಂತ್ರಿಕ ಸಮಾಜಗಳು ಸಹ–ನಿರ್ವಹಿಸಲಾಗದ ವೇಗ ಹೊಂದಿಲ್ಲವೇ ? ಎಂಬ- ಪ್ರಶ್ನೆ ಕೇಳಲು ಒತ್ತಾಯಿಸುತ್ತವೆ.

ಅತ್ಯುತ್ತಮ ಉದ್ದಿಶ್ಯಗಳ ಸರಕಾರಗಳು ಸಹ ಬದಲಾವಣೆಯ ಗತಿಯನ್ನು ನಿರ್ದೇಶಿಸಲಾರದ ಸ್ಥಿತಿಯಲ್ಲಿರುವಾಗ, ಅದರ ಲಯವನ್ನು ಆಯ್ದು ಆಯ್ದು ಹೊಂದಿಸುತ್ತ, ಪ್ರಚೋದನೆಯ ಸಮತಲಗಳನ್ನು ಏರಿಸುತ್ತ ಇಳಿಸುತ್ತ ಭವಿಷ್ಯದ ತಲ್ಲಣವನ್ನು ನಾವು ಹೇಗೆ ತಡೆಗಟ್ಟಬಹುದು ?

ಅಮೇರಿಕದ ಪ್ರಮುಖ ನಗರಶಾಸ್ತ್ರಜ್ಞರೊಬ್ಬರು ಮುಕ್ತ ಜಿಗುಪ್ಸೆಯಿಂದ ಹೀಗೆ ಬರೆಯುತ್ತಾರೆ. "ಮೂರು ಬಿಲಿಯನ್ ಡಾಲರ್‌ಗಳಿಗೂ ಹೆಚ್ಚು ವೆಚ್ಚದಲ್ಲಿ ನಗರಗಳ ವಸತಿ ನವೀಕರಣ ಸಂಸ್ಥೆಯು ಅಮೇರಿಕದಲ್ಲಿ ಸುಲಭ ವಸತಿ ಸೌಕರ್ಯವನ್ನು ವಸ್ತುತಃ ತೊಡೆದು ಹಾಕುವುದರಲ್ಲಿ ಯಶಸ್ವಿಯಾಗಿದೆ. ಇಂಥ ಹಿನ್ನಡೆಯನ್ನು ಒಂದು ಡಜನ್ ಕ್ಷೇತ್ರಗಳಲ್ಲಿಯಾದರೂ ಹೇಳಬಹುದು. ಅಭಿರುಚಿಯ ವಿಷಯದಲ್ಲಿ ಅತಿಲಾಲಿತರೆಂಬ ಕಾಲೇಜು ವಿದ್ಯಾರ್ಥಿಗಳು ಸಹ ದಂಗೆ ಶಾಂತಿಭಂಗಗಳಿಗೇಕೆ ಮನಸ್ಸು ಮಾಡುತ್ತಾರೆ? ಅತಿ ವೇಗದ ಹೆದ್ದಾರಿಗಳು ಪ್ರಯಾಣದ ಒತ್ತಡವನ್ನು ನಿವಾರಿಸುವ ಬದಲು ಸಂಚಾರ ಸಂದಣಿಸುವಂತೇಕೆ ಮಾಡುತ್ತವೆ? ಸ್ವಲ್ಪದರಲ್ಲಿ ಅಷ್ಟು ಸಂಖ್ಯೆಯ ಸದುದ್ದೇಶದ ಉದಾರ ಕಾರ್ಯವಿಧಾನಗಳು ತಮ್ಮ ಕೇಂದ್ರೋದ್ದೇಶ್ಯಗಳನ್ನೇ ನಿಷ್ಕ್ರಿಯಗೊಳಿಸುವ ಉಪಪ್ರಯೋಜನಗಳನ್ನು ಸೃಷ್ಟಿಸಿ ಶೀಘ್ರವಾಗಿ ಹಿಂದೆ ಬೀಳುವುದೇಕೆ?" ಬ್ರಿಟನ್‌ನ ಪಾರ್ಲಿಮೆಂಟ್ ಸದಸ್ಯ ರೇಮಂಡ್ ಫ್ಲೆಚರ್ ಆಶಾಭಂಗದಿಂದ ಇತ್ತೀಚೆಗೆ ದೂರಿದ್ದು ಆಶ್ಚರ್ಯವಿಲ್ಲ- "ಸಮಾಜವು ಗೊತ್ತುಗುರಿ ಇಲ್ಲದ್ದಾಗಿದೆ."

ಇದರ ಅರ್ಥ, ವಿನ್ಯಾಸದ ಅಕ್ಷರಶಃ ಗೈರುಹಾಜರಿ ಎಂದಾದರೆ ಆತನ ಮಾತು ನಿಜಕ್ಕೂ ಅತ್ಯುಕ್ತಿಯಾದೀತು. ಆದರೆ ಗೊತ್ತುಗುರಿಯಿಲ್ಲ ಎಂಬುದರ- ಅರ್ಥ "ಸಾಮಾಜಿಕ ವಿಧಾನಗಳ ಹೇಳಲು ಬಾರದಂಥ ಗೋಜಲು" ಎಂದಾದರೆ ಆತ ಖಚಿತವಾಗಿಯೇ ಮಾತಾಡುವನೆನ್ನಬಹುದು. ಭವಿಷ್ಯದ ತಲ್ಲಣದ ರಾಜಕೀಯ ಅರ್ಥ ಇಲ್ಲಿದೆ. ಬದಲಾವಣೆಯೊಡನೆ ಹೊಂದಿಕೊಳ್ಳುವ ಅಸಾಮರ್ಥ್ಯದಿಂದ ವೈಯಕ್ತಿಕ ತಲ್ಲಣ ಹೇಗೆ ಉಂಟಾಗುತ್ತದೆಯೋ ಹಾಗೆ ಸರ್ಕಾರಗಳು ಸಹ- ತೀರ್ಮಾನ ಸಾಮರ್ಥ್ಯದ ವಿನಾಶದಿಂದ- ಒಂದು ರೀತಿಯ ಭವಿಷ್ಯ ತಲ್ಲಣದಿಂದ ಪೀಡಿತವಾಗುತ್ತವೆ.

ಬ್ರಿಟನ್ನಿನ ಉನ್ನತ ಸಮಾಜ ವಿಜ್ಞಾನಿ ಸರ್ ಜಿಯೋಫ್ರೆ ವಿಕರ್ಸ್ ಸಮಸ್ಯೆಯನ್ನು ಮೈಹೆಪ್ಪುಗಟ್ಟಿಸುವ ಸ್ಪಷ್ಟತೆಯೊಡನೆ ಗುರುತಿಸುತ್ತಾರೆ: "ಬದಲಾವಣೆಯ ತೀವ್ರತೆಯು ತತ್ಸಮಾನ ಪ್ರತಿಕ್ರಿಯೆಗೆ ಮೀರಿದ ಒಂದು ವೇಗೋತ್ಕರ್ಷ: ಇದು ನಮ್ಮನ್ನು ನಿಯಂತ್ರಣದ ಕೊನೆ ಹಂತದ ಸಮೀಪಕ್ಕೆ ತರುತ್ತದೆ."

ತಾಂತ್ರಿಕ ಪ್ರಭುತ್ವದ ಸಾವು.

ನಾವೀಗ ಕಾಣುತ್ತಿರುವುದು ಕೈಗಾರಿಕಾ ವಾದದ ಅಂತಿಮ ಒಡೆಯುವಿಕೆಯ ಪ್ರಾರಂಭ ಮತ್ತು ಅದಕ್ಕೆ ಹೊಂದಿದ ತಾಂತ್ರಿಕ ಪ್ರಭುತ್ವ ಯೋಜನೆಯ ಕುಸಿತ. ತಾಂತ್ರಿಕ ಪ್ರಭುತ್ವಯೋಜನೆ ಎಂದರೆ; ಇತ್ತೀಚಿನವರೆಗೂ ರಷ್ಯಾದಲ್ಲಿ ಜಾರಿಗೊಳಿಸಲ್ಪಟ್ಟಿದ್ದ

ವಂತಪ ಹಾಗೂ ಎಲ್ಲಾ ಉನ್ನತ ತಂತ್ರಜ್ಞಾನ ರಾಷ್ಟ್ರಗಳಲ್ಲಿ ರಾಜಕೀಯ ಒತ್ತಾಯಗಳಿಂದ ಮುಕ್ತ ಹಾಗೂ ಔಪಚಾರಿಕವಾದ ಬದಲಾವಣೆಯ ನಿರ್ವಹಣೆ.

ಸಮಾಜ ವಿಮರ್ಶಕ ಮೈಕಲ್ ಹ್ಯಾರಿಂಗ್ಟನ್- ನಮ್ಮಲ್ಲಿ ವ್ಯಕ್ತಯೋಜನೆ ಇದೆ ಎಂದು- ಹೇಳುತ್ತ ನಮ್ಮದನ್ನು ಕಾರ್ಯಕಾರಣಹೀನ ಶತಮಾನವೆನ್ನುತ್ತಾನೆ.ಆದರೂ ಗಾಲ್‌ಬ್ರೈತ್ ತೋರಿಸಿಕೊಡುವಂತೆ ಬಂಡವಾಳಷಾಹಿ ಆರ್ಥಿಕತೆಯ ಸಂದರ್ಭದಲ್ಲಿ ಯೂ ಸಹ ಅತಿ ದೊಡ್ಡ ನಿಗಮಗಳು ಉತ್ಪಾದನೆ- ಹಂಚಿಕೆಗಳ ವಿಷಯದಲ್ಲಿ ವಿವೇಚನೆ ತರಲು ಯತ್ನಿಸುತ್ತವೆ. ಅವುಗಳ ಭವಿಷ್ಯವನ್ನು ತಮಗೆ ಸಾಧ್ಯವಾದಷ್ಟು ಉತ್ತಮವಾಗಿ ರೂಪಿಸಲು ಬಹು ದೊಡ್ಡ ಪ್ರಯತ್ನ ಮಾಡುತ್ತ, ಯೋಜನಾ ಕಾರ್ಯಗಳಲ್ಲಿ ಆಳವಾಗಿ ಪ್ರಯತ್ನ ಹಾಕುತ್ತಿವೆ. ಯುದ್ಧಾನಂತರದ ಆರ್ಥಿಕತೆ ಅಸರಿಪೂರ್ಣವಿರಬಹುದು, ಆದರೆ ಆಕಸ್ಮಿಕವಲ್ಲ. ಫ್ರಾನ್ಸ್‌ನಲ್ಲಿ ಸಹ ಯೋಜನೆಯು ರಾಷ್ಟ್ರ ಜೀವನದ ಕ್ರಮಬದ್ಧ ಲಕ್ಷಣ. ಸ್ವೀಡನ್, ಇಟಲಿ, ಜರ್ಮನಿ, ಜಪಾನ್ ಸರ್ಕಾರಗಳು ಆರ್ಥಿಕ ವೃತ್ತಖಂಡದಲ್ಲಿ ಕೆಲವು ಕೈಗಾರಿಕೆಗಳನ್ನು ರಕ್ಷಿಸಲು ಮುಂದೆ ಬರುತ್ತವೆ. ಬಂಡವಾಳವಾಗಿ ಮಾಡಿಕೊಳ್ಳುವ ಮತ್ತು ಬೆಳವಣಿಗೆ ವರ್ಧಿಸುವ ದೃಷ್ಟಿಯಿಂದ ಮಧ್ಯಸ್ಥಿಕೆ ವಹಿಸುವ ಚಟುವಟಿಕೆ ತೋರುತ್ತವೆ. ಸಂಯುಕ್ತ ಸಂಸ್ಥಾನ, ಬ್ರಿಟನ್‌ಗಳಲ್ಲಿ ಸ್ಥಳೀಯ ಸರ್ಕಾರಗಳು ಸಹ ಪ್ಲಾನಿಂಗ್ 'ನಂತಹ' ಇಲಾಖೆಗಳನ್ನು ಹೊಂದಿರುತ್ತವೆ.

ಈ ಎಲ್ಲಾ ಪ್ರಯತ್ನಗಳಿದ್ದೂ ವ್ಯವಸ್ಥೆಯು ಹಿಡಿತವನ್ನು ಮೀರಬೇಕೇಕೆ? ನಮ್ಮಲ್ಲಿ ಯೋಜನೆ ಕಡಿಮೆಯಲ್ಲ; ಯೋಜನಾ ಪದ್ಧತಿ ಬಡಕಲಾದುದು. ತೊಂದರೆಯ ಸ್ವಲ್ಪ ಭಾಗ ನಮ್ಮ ಯೋಜನೆಯ ಪರಿಕಲ್ಪನೆಗಳಲ್ಲೇ ಇರುವುದು ಕಂಡುಬರುತ್ತದೆ.

ಮೊದಲನೆಯದು, ಉದ್ಯಮ ಪ್ರಭುತ್ವದ ಯೋಜನಾ ಪದ್ಧತಿಯು ಕೈಗಾರಿಕಾವಾದದ ಉತ್ಪನ್ನ; ಅದು ತ್ವರಿತವಾಗಿ ನಶಿಸುತ್ತಿರುವ ಯುಗ ಮೌಲ್ಯಗಳನ್ನು ಪ್ರತಿಫಲಿಸುತ್ತದೆ. ಕೈಗಾರಿಕಾವಾದವು ತನ್ನ ಬಂಡವಾಳಷಾಹಿ ಹಾಗೂ ಸಮಾಜಸತ್ತಾವಾದಗಳೆಂಬ ಎರಡೂ ಪ್ರಕಾರಗಳಲ್ಲಿ ಐಹಿಕ ಕಲ್ಯಾಣದ ಮೇಲೆ ಕೇಂದ್ರೀಕೃತವಾದ ವ್ಯವಸ್ಥೆ. ಆದ್ದರಿಂದ ಡೆಟ್ರಾಯಿಟ್‌ನಂತೆಯೇ ಕೀವ್‌ನ ತಾಂತ್ರಿಕ ಪ್ರಭುವಿಗೂ ಆರ್ಥಿಕ ಪ್ರಗತಿಯೇ ಪ್ರಾಥಮಿಕ ಗುರಿ; ತಂತ್ರಜ್ಞಾನವು ಪ್ರಾಥಮಿಕ ಉಪಕರಣ. ಒಂದರಲ್ಲಿ ಪ್ರಗತಿಯು ಖಾಸಗಿ ಅನುಕೂಲವಾಗಿ ಪರಿಣಮಿಸುವುದೂ, ಇನ್ನೊಂದರಲ್ಲಿ ಅದು 'ತಾತ್ವಿಕವಾಗಿ' ಸಾರ್ವಜನಿಕ ಅನುಕೂಲವಾಗುವುದೂ, ಅವುಗಳಿಗೆ ಸಾಮಾನ್ಯವೆನಿಸುವ ಮುಖ್ಯ ಭಾವನೆಗಳನ್ನು ಬದಲಿಸುವುದಿಲ್ಲ. ತಾಂತ್ರಿಕ ಪ್ರಭುತ್ವದ ಯೋಜನೆಯು ಅರ್ಥಕೇಂದ್ರೀಕೃತವಾದುದು.

ಎರಡನೆಯದು, ತಾಂತ್ರಿಕ ಪ್ರಭುತ್ವ ಯೋಜನಾ ಪದ್ಧತಿಯು ಕೈಗಾರಿಕಾವಾದದ ಕಾಲಪೀಡೆಯನ್ನು ಪ್ರತಿಫಲಿಸುತ್ತದೆ. ಹಿಂದಿನ ಸಮಾಜಗಳ ಸಂಕುಚಿತ ಪ್ರಯೋಜನ ಮೂಲಗಳಿಂದ ಸ್ವತಂತ್ರವಾಗಲು ಶ್ರಮಿಸುತ್ತ ವರ್ತಮಾನದ ಮೇಲೆಯೇ ದೃಷ್ಟಿಯನ್ನು ತೀವ್ರಗೊಳಿಸಿದ್ದ ಕೈಗಾರಿಕಾವಾದ ಎಂದರೆ ಅದರ ಪರಿಕಲ್ಪನೆಯು ಸಮೀಪದ ಭವಿಷ್ಯ ಹಾಗೂ ಕ್ಷಣಿಕತೆಯ ದೃಷ್ಟಿಯೊಡನೆ ಪ್ರವೃತ್ತವಾಯಿತು. ಸೋವಿಯೆತ್‌ಗಳು 1920 ರ ದಶಕದಲ್ಲಿ ಮುಂದಿಟ್ಟ ಪಂಚವಾರ್ಷಿಕ ಯೋಜನೆಯ ಕಲ್ಪನೆಯು ಹುಚ್ಚೆನಿಸುವಷ್ಟು ದೀರ್ಘಕಾಲಿಕವೆಂದು ಕಂಡಿತು ಪ್ರಪಂಚಕ್ಕೆ. ಇಂದು ಸಹ ಆದರ್ಶದ ಎರಡೂ ಬದಿಗಳಲ್ಲಿ, ಅತಿ ಮುಂದುವರಿದ ಕೆಲವು ಆಡಳಿತಗಳನ್ನು ಬಿಟ್ಟರೆ ಉಳಿದಂತೆ ಒಂದೆರಡು ವರ್ಷಗಳ ಯೋಜನೆ ಸಹ ದೀರ್ಘಕಾಲಿಕವೆನಿಸುತ್ತದೆ. ಬೆರಳೆಣಿಕೆಯಷ್ಟು ನಿಗಮಗಳು, ಸರ್ಕಾರದ ಪ್ರತಿನಿಧಿ ಸಂಸ್ಥೆಗಳು ಮಾತ್ರ ಹತ್ತು, ಇಪ್ಪತ್ತು, ಕೊನೆಗೆ ಐವತ್ತು ವರ್ಷಗಳ ಭವಿಷ್ಯವನ್ನಿಟ್ಟು ಕೆಲಸಮಾಡುವುದನ್ನು ಕಾಣುತ್ತೇವೆ. ಆದರೆ ಹೆಚ್ಚು ಪಾಲು ಸಂಸ್ಥೆಗಳು ಯಾವುದೇ ಯೋಜನೆ ಇಲ್ಲದೆ ಮುಂದಿನ ಸೋಮವಾರದವರೆಗಿನ ಚಿಂತೆ ಮಾತ್ರ ಮಾಡುತ್ತವೆ. ತಾಂತ್ರಿಕ ಪ್ರಭುತ್ವಯೋಜನೆಯು ಹ್ರಸ್ವಕಾಲಿಕ.

ಮೂರು, ಕೈಗಾರಿಕಾ ಪ್ರಭುತ್ವ ಅಧಿಕಾರ ಶಾಹಿಯನ್ನು ತಾಂತ್ರಿಕ ಪ್ರಭುತ್ವದ ಯೋಜನೆ ಪ್ರತಿಫಲಿಸುತ್ತದೆ; ಅದೇ ಅಧಿಕಾರ ಸರಣಿಯ ತತ್ವಾಧಾರ. ಅದರ ಪ್ರಕಾರ ಪ್ರಪಂಚದ ವಿಭಾಗಗಳೆಂದರೆ ನಿರ್ವಾಹಕ ಮತ್ತು ಕಾರ್ಮಿಕ. ಇವೇ, ಯೋಜಕ ಮತ್ತು ಯೋಜ್ಯರು; ಒಬ್ಬನಿಂದ ಇನ್ನೊಬ್ಬನಿಗಾಗಿ ತೀರ್ಮಾನಗಳು. ಕೈಗಾರಿಕೆ ವಿಕಾಸಗೊಳ್ಳುತ್ತಿದ್ದ ಕಾಲಕ್ಕೆ ಅದು ಯೋಗ್ಯ ಪದ್ಧತಿಯಾಗಿತ್ತು. ಈಗ ಅತ್ಯುದ್ಯಮದೆಸೆಗೆ ಸಾಗಿರುವ ಹಂತದಲ್ಲಿ ಅದು ಸಾಕಾಗುವುದಿಲ್ಲ. ಕೈಗಾರಿಕಾ ಪರಿಸರವೀಗ ಹೆಚ್ಚುತ್ತಿರುವ ಅನಿಶ್ಚಿತತೆ ಹೊಂದಿದ್ದು, ಅದು ಕೆಳಗಿನ ಹಂತಗಳಲ್ಲಿ ಯೋಜನೇತರ ಕಾರ್ಯನಿಶ್ಚಯಗಳನ್ನು ಬಯಸುತ್ತದೆ. ಕಾಲಿಕವಾದ ಪರಸ್ಪರ ಪೂರಕವ್ಯವಸ್ಥೆಯ ಅವಶ್ಯಕತೆ ಅಧಿಕಾರ ಸರಣಿ ಮತ್ತು ಕಾರ್ಮಿಕರ ಸಂಬಂಧೀ ಮರ್ಯಾದೆಯನ್ನು ಮಸುಕುಗೊಳಿಸುತ್ತದೆ. ಬಹುದೂರದಲ್ಲಿರುವ ಯೋಜಕರು ಪರಿ'ಸ್ಥಿತಿ'ಯ ಕಲ್ಪನೆ ಹೊಂದಿಲ್ಲದವರು ಬದಲಾವಣೆಗೆ ಪ್ರತಿಕ್ರಿಯೆ ತೋರುವಲ್ಲಿ ಬಹುನಿಧಾನರು. ಮೇಲಿನ ಹತೋಟಿಯು ಕ್ರಿಯಾಶೀಲವಾಗಿಲ್ಲವೆಂಬ ಅನುಮಾನ ಹುಟ್ಟುತ್ತದೆ. ಯೋಜಕರು ಕೈಗೊಳ್ಳುವ ನೀತಿ ನಿರೂಪಣೆಯಲ್ಲಿ ಭಾಗದ ಹಕ್ಕಿಗಾಗಿ ಯೋಜ್ಯರು ಬೊಬ್ಬೆಇಡತೊಡಗುತ್ತಾರೆ ಯೋಜಕರು ಸಹಜವಾಗಿ ವಿರೋಧಿಸುತ್ತಾರೆ. ಹೀಗೆ ಅಧಿಕಾರ ಶಾಹಿಯಂತೆ ತಾಂತ್ರಿಕ ಪ್ರಭುತ್ವವೂ ಪ್ರಜಾಧಿಕಾರ ವಿರೋಧಿಯಾದುದು.

ಈಗಾಗಲೇ ಕೈಗಾರಿಕಾಯುಗ ಭ್ರಷ್ಟವಾದದು. ಅತ್ಯುದ್ಯಮದೆಸೆಗೆ ಏರುತ್ತಿರುವ

ಬಲಗಳನ್ನು ಉಪಯುಕ್ತವಾಗಿ ಬಳಸಿಕೊಳ್ಳಲು ಅವರ ಕಾರ್ಯ ವಿಧಾನ ಅನಿಯೋಜ್ಯ ವಾಗಿದೆ. ಸಮಾಧಾನ ನಟಿಸುತ್ತ ಅವು ಕೊಂಚಕಾಲ ಕೈಗಾರಿಕೆ ಮತ್ತು ಸಮೂಹಗ ಳನ್ನು ಜೋಳೈಸಬಹುದು. ಆದರೆ ಉನ್ನತ ಕೈಗಾರಿಕೆಗಳು, ವಿಶ್ವವಿದ್ಯಾಲಯಗಳು, ನಗರಗಳಂಥ ತ್ವರಿತ ಬದಲಾವಣೆಯ ಕ್ಷೇತ್ರಗಳಲ್ಲಿ ಭಯಂಕರ ಓಲಾಟ, ದಿಕ್ಕೆಟ್ಟ ಭಾವದಿಂದ ಕೂಡಿದ್ದ ಅಭಪ್ರತಿಗಳನ್ನು ದಪ್ಪೈಸದೆ ಇರಲಾರವು. ವೈಫಲ್ಯದ ದಾಖಲೆ ಹೇರಿಸಲ್ಪಟ್ಟಂತೆ ಅಪಾಯಕಾರಿ- ರಾಜಕೀಯ, ಸಾಂಸ್ಕೃತಿಕ, ಹಾಗೂ ಮಾನಸಿಕ- ಬಲಗಳು ಕಟ್ಟುಹರಿದಂತೆ ಬಿಡುಗಡೆಯಾಗುತ್ತವೆ.

ಬೌದ್ಧಿಕತೆಗೆ ವಿರೋಧಿನಿಲುವು ಅನಿಯಂತ್ರಿತ ಸ್ಥಿತಿಯ ಒಂದು ಉದಾಹರಣೆ. ವಿಜ್ಞಾನವು ಮನುಷ್ಯನಿಗೆ ಪರಿಸರದ, ಆದ್ದರಿಂದ ಭವಿಷ್ಯದ ಮೇಲೆ ಪ್ರಭುತ್ವದ ತೋ ರಿಕೆ ತಂದುಕೊಟ್ಟಿತು. ಭವಿಷ್ಯವೆಂಬುದು ಪರಿವರ್ತನೀಯವೆಂದು ತೋರಿ, ಕ್ರಿಯಾಹೀ ನತೆ, ಅನುಭಾವಗಳನ್ನು ಬೋಧಿಸುವ ಉನ್ಮಾದಕಾರಿ ಮತಗಳನ್ನು ಪುಡಿಮಾಡಿತು. ಸಮಾಜವು ನಿಯಂತ್ರಣ ಮೀರಿದೆ ಎಂಬ ಬಗ್ಗೆ ಹೆಚ್ಚುತ್ತಿರುವ ಮಾಹಿತಿ ನಮಗೆ ಭ್ರಮೆ ಬಿಡಿಸುತ್ತಿದೆ. ಆದ್ದರಿಂದ ಪರಿಣಾಮವಾದದ ಪುನರುಜ್ಜೀವನ ಪ್ರಯತ್ನಗಳನ್ನು ನೋಡುತ್ತೇವೆ. ಇದ್ದಕ್ಕಿದ್ದಂತೆ ಜ್ಯೋತಿಷ್ಯ ಒಂದು ಹುಚ್ಚಾಗಿದೆ. ಜೆನ್, ಯೋಗ, ಪ್ರೇತವ್ಯವಹಾರ ಸಭೆಗಳು, ಮಾಟ ಇವು ಜನಪ್ರಿಯ ಹವ್ಯಾಸಗಳಾಗುತ್ತಿವೆ. ಡಯೊನೀಷಿಯದಂಥ ಮಾತಿಲ್ಲದ, ನೇರವಲ್ಲದ ಸಂಪರ್ಕಕೇಂದ್ರಿತ ಗುಂಪುಗಳು ಸೇರು ತ್ತವೆ. ಆಲೋಚಿಸುವುದಕ್ಕಿಂತಲೂ, ಅನುಭವಹೊಂದುವುದು- ಅವೆರಡೂ ಪರಸ್ಪರ ವಿರೋಧಿಭಾವಗಳೋ ಎನ್ನುವಂತೆ ಮುಖ್ಯವೆಂದು ನಮಗೆ ಹೇಳಲಾಗುತ್ತದೆ. ವೈಜ್ಞಾ ನಿಕತೆ ಹಾಗೂ ವೈಚಾರಿಕತೆಗೆ ಎದುರಾಗಿ ಭಾವೋದ್ದೀಪನ ಹಾಗೂ ಮಾಯಾವಾದ ಗಳನ್ನು ಸ್ಥಿರೀಕರಿಸುವುದಕ್ಕೆ ಅಸ್ತಿತ್ವವಾದಿಕರಿಗಳು ಕ್ಯಾಥೊಲಿಕ್ ಅನುಭಾವಿಗಳೊಡನೆ, ಯೂಂಗಿಯನ್ ಮನೋವಿಶ್ಲೇಷಕರೊಡನೆ, ಹಾಗೂ ಹಿಂದೂ "ಗುರು" ಗಳೊಡನೆ ಒಂದಾಗುತ್ತಾರೆ.

ಈ ವಿಜ್ಞಾನಪೂರ್ವ ಮನೋಧರ್ಮದೊಡನೆ ಸಮಾಜದ ಹಿಂದಿನ ನೆನಪಿನ ಒಂದು ಅದ್ಭುತ ಅಲೆ- ಏನೂ ಆಶ್ಚರ್ಯವಿಲ್ಲದೆ- ಬೀಸುತ್ತದೆ. ಹಳೆ ಮಾದರಿ ಪೀಠೋಪಕ ರಣಗಳು, ಕಳೆದುಹೋದ ಯುಗವೊಂದರ ಭಿತ್ತಿ ಪತ್ರಗಳು, ಹಿಂದಿನ ಚಿಕ್ಕಪುಟ್ಟದರ ನೆನಪಿನ ಮೇಲೆ ನಿರ್ಮಿತವಾದ ಆಟಗಳು, ಹೊಸ ಕಲೆಯ ಪುನರ್ಜೀವನ, ಎಡ್ವರ್ಡಿಯನ ಕಾಲದ ರೀತಿ ನೀತಿಗಳು, ಹಂಫ್ರಿ ಬೊಗಾರ್ಟ್, W.C. ಫೀಲ್ಡ್ಸರಂಥ ಪಾಪ್ ಮುಖ್ಯರ ಬಗ್ಗೆ ಆದರ, ಇವೆಲ್ಲ ಕಡಿಮೆ ಘೋರಗರ್ಜಿತದ ಭೂತಕಾಲದ ಬಗ್ಗೆ ಮಾನಸಿಕ ತುಡಿ ತವನ್ನು ತೋರುತ್ತವೆ. ಈ ಹಸಿವಿನ ಬಂಡವಾಳದ ಮೇಲೆ ಲಾಭ ಸಂಪಾದಿಸಲು

ಭಾವಯಂತ್ರಗಳು ಕಾರ್ಯಪ್ರವೃತ್ತವಾಗುತ್ತವೆ. ಭೂತ ಕಾಲದ ನೆನಪಿನ ವ್ಯಾಪಾರವು ಪ್ರವರ್ಧಮಾನ ಕೈಗಾರಿಕೆಯಾಗುತ್ತದೆ.

ತಾಂತ್ರಿಕ ಪ್ರಭುತ್ವ ಯೋಜನೆಯು ಸಹಜ ಪರಿಣಾಮವೇ ಖಚಿತ ಕಳೆದುಕೊಂಡಂಥ ಭಾವನೆ. ಅದು ಇಂದಿನ ತಾತ್ವಿಕತೆಯ ಬೆಂಬಲಕ್ಕಿದೆ. "ಇಂದಿ"ನ ಬರವನ್ನು ಹಾಡುಗಳು ಜಾಹೀರಾತುಗಳು ಹಾಡಿಹೊಗಳುತ್ತವೆ. ಬಹುಸ್ಕೃತ ಮನೋವೈದ್ಯರು ಮನಸ್ಸಿನ ದಮನದ ಅಪಾಯಗಳ ಬಗ್ಗೆ ಹೇಳುತ್ತ ನಿಮ್ಮ ಅತೃಪ್ತಿಗಳನ್ನು ಸಂತೃಪ್ತಿಗೊಳಿಸುವುದರಲ್ಲಿ ತಡವಾಗದಿರಲೆಂದು ಸಲಹೆ ಮಾಡುತ್ತಾರೆ. ತತ್‌ಕ್ಷಣದ ಪ್ರತಿಫಲಗಳಿಗೆ ಸ್ವಾಗತ ನೀಡಲಾಗುತ್ತದೆ. ಪ್ರಚಂಡ ಉಡ್‌ಸ್ಟಾಕ್ ರಾಕ್ ಮೇಳದ ನಂತರ ಹದಿಹರಯದ ಹುಡುಗಿಯೊಬ್ಬಳು ಒಬ್ಬ ಪತ್ರಕರ್ತನಿಗೆ "ನಾವು ಇಂದಿನೆಡೆಗೆ ದೃಷ್ಟಿಬದ್ಧರಾಗಿದ್ದೇವೆ." ಎಂದು ಹೇಳುತ್ತಾಳೆ. "ಈಗ ಏನುಮಾಡಬೇಕೆನ್ನುವಿರೋ ಅದನ್ನು ಮಾಡು. ಎಲ್ಲಾದರೂ ನಿಂತರೆ ಯೋಜನೆಯೊಂದಕ್ಕೆ ಸಿಕ್ಕಿಬೀಳುವೆ. ಆದ್ದರಿಂದ ಮುಂದೆ ಹೋಗುತ್ತಿರು........ಎಂಬಂತೆ." ಸಾಮಾಜಿಕ ನಿರ್ಯೋಜನೆಗೆ ವೈಯಕ್ತಿಕ ಸಂವಾದಿಯಾಗುವ ಕ್ಷಣ ಪ್ರವೃತ್ತಿಯು ಸಂಪನ್ನ ಮನೋವ್ಯಾಪಾರದ ಮೌಲಿಕ ಸದ್ಗುಣವೆಂದು ಪದೋನ್ನತಿ ಹೊಂದುತ್ತದೆ.

ಇದೆಲ್ಲಕ್ಕೂ ರಾಜಕೀಯ ಅನ್ಯಾಪದೇಶವೊಂದಿದೆ. ಬಲಪಂಥೀಯರು ಹಾಗು ಹೊಸ ಎಡಪಂಥಿಗಳು ಒಟ್ಟಾಗಿ ರೂಪಿಸಿರುವ- ಭವಿಷ್ಯದ ಬಗೆಗಿನ- ಮನೋಧರ್ಮ ತೀರ ಜಾಳು. ಹಾಗೆಯೇ ಪ್ರತಿಯೋಜನೆ ಅಥವಾ ನಿರ್ಯೋಜನೆಯನ್ನು ಸಜೀವ ಪ್ರಗತಿ ಎಂದು ಹೇಳಲಾಗುತ್ತಿದೆ. ಹೊಸ ತೀವ್ರ ಸುಧಾರಕರು ಕೆಲವರಲ್ಲಿ ಇದು ಅರಾಜಕ ವರ್ಣಛಾಯೆ ಪಡೆಯುತ್ತದೆ. ದೀರ್ಘ ಕಾಲೀನ ಯೋಜನೆಯು ಅನವಶ್ಯಕ ಅಥವಾ ದಡ್ಡತನವಷ್ಟೇ ಅಲ್ಲ, ಮುಂದಿನ ಘಂಟೆಯ ಸಭೆಯ ಯೋಜನೆಯು ಸಹ ಕೀಳು ಅಭಿರುಚಿ ಎನ್ನಲಾಗುತ್ತದೆ. ನಿರ್ಯೋಜನೆಯು ವೈಭವೀಕರಿಸಲ್ಪಡುತ್ತದೆ.

ಯೋಜನೆಯು ಭವಿಷ್ಯದ ಮೇಲೆ ಮೌಲ್ಯಗಳನ್ನು ಹೇರುತ್ತದೆ. ಎಂದರೆ ತನ್ನ ವಿಧಾನ ಕೂಡ ಆ ಪರಿಣಾಮವನ್ನೇ ಉಂಟುಮಾಡುವುದೆಂಬುದನ್ನು ಪ್ರತಿಯೋಜಕರು ಮರೆಯುತ್ತಾರೆ. ಹಲವು ಬಾರಿ ಅತಿ ಕೆಟ್ಟ ಪರಿಣಾಮವೂ ಇರುತ್ತದೆ. ತಾಂತ್ರಿಕಶಾಹೀ ಯೋಜನೆಯು ಅರ್ಥಮೂಲ ಸಂಕೋಚಗಳಿಂದ ಕುಸಿತಗೊಂಡ ರಚನಾ ವಿಶ್ಲೇಷಣೆ. ಇದರಿಂದ ಲಾಭದಾಯಕ ಉತ್ಪಾದನಾ ಗಣನೆಯಂಥ ಪದ್ಧತಿಗಳು ತುಚ್ಛೀಕರಿಸಲ್ಪಡುತ್ತವೆ. ಸರಿಯಾಗಿ ಬಳಸಿದಾಗ ಅವೇ ವಿಧಾನಗಳು ಭವಿಷ್ಯವನ್ನು ಮಾನವೀಯವಾಗಿಸಬಲ್ಲವೆಂಬ ವಾಸ್ತವತೆಯು ನಗಣ್ಯವಾಗುತ್ತದೆ.

ತನ್ನ ಆರ್ಥಿಕ ಲಾಭವನ್ನು ಅತ್ಯುನ್ನತಿಗೆ ಒಯ್ಯುವ ಭರದಲ್ಲಿ ತಾಂತ್ರಿಕ ಯೋಜನೆಯು ಸಾಮಾಜಿಕ, ಸಾಂಸ್ಕೃತಿಕ ಹಾಗೂ ಮನೋವೈಜ್ಞಾನಿಕ ಮೌಲ್ಯಗಳನ್ನು ಕಡೆಗಣಿಸುತ್ತದೆ. ಹೀಗೆ ಹೇಳುವಲ್ಲಿ ಅದು ಪ್ರತಿ ಮಾನವೀಯವೆನ್ನುವ ವಿಮರ್ಶಕರ ಆರೋಪವು ಸಾಮಾನ್ಯವಾಗಿ ಸರಿ. ಅದು ಹ್ರಸ್ವದೃಷ್ಟಿಯದು, ಪ್ರಜಾಪ್ರಭುತ್ವ ವಿರೋಧಿ, ಎನ್ನುವಾಗ ಅವರು ಸಾಮಾನ್ಯವಾಗಿ ಸರಿ. ಅದು ಅಸಮಂಜಸವೆನ್ನುವಾಗ ಅವರು ಸರಿ.

ಆದರೆ ಅತಾರ್ಕಿಕತೆ, ಅವೈಜ್ಞಾನಿಕ ಮನೋಧರ್ಮ. ಹಿಂದಿನ ನೆನಪಿನ ರೋಗ ಇಂದಿನ ವೈಭವೀಕರಣ ಇವುಗಳಲ್ಲಿ ಮುಳುಗಿದಾಗ ಅದೇ ವಿಮರ್ಶಕರು ತಪ್ಪು; ಅಷ್ಟೇ ಅಲ್ಲ, ಅಪಾಯಕಾರಿಗಳು. ಅವರು ಉದ್ಯಮೀಕರಣದ ಸಂಸ್ಥಾ ಪೂರ್ವತೆಯನ್ನು ಬೆಂಬಲಿಸುತ್ತಾರೆ. ಹಾಗೆಯೇ ತಾಂತ್ರಿಕ ಪ್ರಭುತ್ವದ ಬದಲು ಅವರು ಆರಿಸುವುದು ತಾಂತ್ರಿಕೋತ್ತರವಲ್ಲ, ತಾಂತ್ರಿಕಪೂರ್ವ ಪ್ರಭುತ್ವ.

ಇದಕ್ಕಿಂತ ಅಯೋಜ್ಯ ಅಪಾಯ ಯಾವುದೂ ಆಗಲಾರದು. ಶಾಸ್ತ್ರೀಯವಾದಗಳೇನೇ ಇರಲಿ, ಪ್ರಪಂಚದಲ್ಲಿ ಪಾಶವೀಬಲಗಳು ಅನಿಯಂತ್ರಿತವಾಗಿವೆ. ಭವಿಷ್ಯದ ತಲ್ಲಣದ ಪ್ರತಿರೋಧವಿರಲಿ, ಜನನ ನಿಯಂತ್ರಣವಿರಲಿ, ಮಾಲಿನ್ಯ ಪ್ರತಿಬಂಧವಿರಲಿ, ಅಥವಾ ಶಸ್ತ್ರೋತ್ಪಾದನೆಯ ಪಂದ್ಯವನ್ನು ನಿಶೋಕಗೊಳಿಸುವುದೇ ಇರಲಿ; ಭೂಮಿಯನ್ನು ಅದುರಿಸುವಂತಹ ತೀರ್ಮಾನಗಳನ್ನು ಎಚ್ಚರಿಕೆ, ಬುದ್ಧಿವಂತಿಕೆ ಮತ್ತು ಯೋಜನೆ ಇಲ್ಲದೆ ತೆಗೆದುಕೊಳ್ಳಲಾಗದು. ಜವಾಬ್ದಾರಿ ಇಲ್ಲದೆ ತಿರುಗಾಡುವುದೆಂದರೆ ಸಾಮೂಹಿಕ ಆತ್ಮಹತ್ಯೆ ಮಾಡಿಕೊಂಡಂತೆ.

ಪ್ರಾಚೀನ ಅತಾರ್ಕಿಕತೆಗೆ ಹಿಂದಿರುಗುವುದು ನಮಗೆ ಬೇಕಿಲ್ಲ. ನಿರಾಶೆ, ನಾಸ್ತಿಕ್ಯ, ಅಥವಾ ವಿರೋಧವಿಲ್ಲದ ಬದಲಾವಣೆಯ ಸ್ವೀಕರಣೆ ನಮಗೆ ಅವಶ್ಯಕವಿಲ್ಲ. ಬದಲಾಗಿ ನಮಗೊಂದು ಹೊಸ ಕಾರ್ಯವಿಧಾನ– ಕೌಶಲ್ಯ ಬೇಕು. ಸ್ಪಷ್ಟವಾಗಲಿರುವ ಕಾರಣಗಳಿಗಾಗಿ ಈ ಕೌಶಲ್ಯವನ್ನು "ಸಾಮಾಜಿಕ ಭವಿಷ್ಯವಾದ" ಎನ್ನುತ್ತೇನೆ. ಈ ಕೌಶಲ್ಯದಿಂದ ಸಜ್ಜುಗೊಂಡನಾವು ಭವಿಷ್ಯದ ತುಮುಲದ ನಿರ್ವಹಣೆಯಲ್ಲಿ ಸಾಮರ್ಥ್ಯದ ಒಂದು ಹೊಸ ಮಟ್ಟಕ್ಕೆ ಬರಬಹುದು. ಇದುವರೆಗಿನ ಯಾವುದೇ ಪದ್ಧತಿಗಿಂತ ಹೆಚ್ಚು ಮಾನವೀಯ, ಹೆಚ್ಚು ದೂರದರ್ಶಿ ಹಾಗೂ ಹೆಚ್ಚು ಸ್ವತಂತ್ರ ಯೋಜನಾ ಕ್ರಮಕ್ಕೆ ಬರಬಹುದು. ಸ್ವಲ್ಪದರಲ್ಲಿ, ನಾವು ತಾಂತ್ರಿಕ ಪ್ರಭುತ್ವವನ್ನು ಅತಿಕ್ರಮಿಸಬಹುದು.

ಯೋಜಕನ ಮಾನವೀಕರಣ.

ತಾಂತ್ರಿಕ ಪ್ರಭುಗಳು ಆರ್ಥಿಕ ಚಿಂತೆಯಿಂದ ಪೀಡಿತರು. ಅತಿ ತುರ್ತಿನ ಅಥವಾ ಸಮರಕಾಲಗಳನ್ನು ಬಿಟ್ಟರೆ ಉಳಿದಂತೆ ಅವರು ಆರ್ಥಿಕೇತರ ಸಮಸ್ಯೆಗಳಿಗೆ ಸಹ ಆರ್ಥಿಕ ಪರಿಹಾರಗಳಿರುವುವೆಂದು ಭಾವಿಸುವರು.

''ಸಾಮಾಜಿಕ ಭವಿಷ್ಯವಾದ''ವು ಮಾರ್ಕ್ಸಿಸ್ಟ್ ಮತ್ತು ಕೇನೇಷಿಯನ್ ನಿರ್ವಾಹಕರಿಬ್ಬರ ಈ ಮೌಲಿಕ ಭಾವಕ್ಕೆ ಸವಾಲು ಹಾಕುತ್ತದೆ. ಐತಿಹಾಸಿಕ ಸಂದರ್ಭ- ಕಾಲ ಹಾಗೂ ಸ್ಥಾನ-ದಲ್ಲಿ ಕೈಗಾರಿಕಾ ಸಮಾಜವು ಒಮ್ಮನಸ್ಸಿನಿಂದ ಭೌತಿಕ ಪ್ರಗತಿಯನ್ನೇ ಅನುಸರಿಸಿದ್ದರಿಂದ ಮಾನವ ಕುಲಕ್ಕೆ ಒಳ್ಳೆಯದೇ ಆಯಿತು. ಈಗ ಅತ್ಯುದ್ದಿಮೆ ಎಡೆಗೆ ನಾವು ಉರುಳುತ್ತಿರುವಾಗ ಒಂದು ಹೊಸ ನೀತಿ ಹುಟ್ಟುತ್ತದೆ. ಅದರ ಇತರ ಗುರಿಗಳು ಆರ್ಥಿಕ ಕಲ್ಯಾಣದಿಂದ ಭಿನ್ನವಷ್ಟೇ ಅಲ್ಲ, ಉಪಾಯಾಂತರಗಳಿಂದ ಅದನ್ನೇ ಉರುಳಿಸುವಂಥವು. ಐಹಿಕ ಸಾಫಲ್ಯದೆಡೆಗೆ ಬರ್ಬರಧಾವತಿಯೊಡನೆ ವ್ಯಕ್ತಿನಿಷ್ಠ ಸುಖ ಮತ್ತು ಗುರಿಸಾಧನೆ, ಸಾಮಾಜಿಕ ಜವಾಬ್ದಾರಿ, ಕಲಾವಂತಿಕೆ ಮುಂತಾದವು ಸ್ಪರ್ಧಿಸುತ್ತವೆ. ಸಮೃದ್ಧಿಯು ನಂತರದ ವೈವಿಧ್ಯಪೂರ್ಣ ಪ್ರಯತ್ನಕ್ಕೊಂದು ಆಧಾರವಷ್ಟೇ.

ಇದೇ ಕಾಲಕ್ಕೆ ಅತ್ಯುದ್ದಿಮೆ ಮುಖವಾಗಿ ಧಾವಿಸುತ್ತಿರುವ ಸಮಾಜಗಳಲ್ಲಿ ಕೂಲಿ, ವೇತನ-ಬಾಕಿ, ಉತ್ಪಾದಕತೆ ಮುಂತಾದ ಆರ್ಥಿಕ ಚರಾಂಶಗಳು ಪರಿಸರದಲ್ಲಿನ ಆರ್ಥಿಕೇತರ ಬದಲಾವಣೆಗೆ ಸ್ಪಂದಿಸುತ್ತವೆ. ಬೇಕಾದಷ್ಟಿರುವ ಆರ್ಥಿಕ ಸಮಸ್ಯೆಗಳ ಮಧ್ಯೆಯೂ ಈ ದ್ವಿತೀಯ ಸರಣಿ ಎದ್ದು ಕಾಣತೊಡಗುತ್ತದೆ. ಕುಲಛಲ, ತಲೆಮಾರುಗಳ ಸಂಘರ್ಷ, ಅಪರಾಧ, ಸಾಂಸ್ಕೃತಿಕ ಸ್ವಾಯತ್ತತೆ, ಕ್ರೌರ್ಯ ಇವೆಲ್ಲಕ್ಕೂ ಆರ್ಥಿಕ ಆಯಾಮಗಳಿವೆ: ಆದರೂ ಅರ್ಥ ಕೇಂದ್ರಿತ ಕ್ರಮ ಒಂದರಿಂದಲೇ ಇವುಗಳಲ್ಲಿ ಯಾವೊಂದಕ್ಕೂ ಪರಿಣಾಮಕಾರಿಯಾಗಿ ಚಿಕಿತ್ಸೆ ಮಾಡಲು ಸಾಧ್ಯವಿಲ್ಲ.

ತಂಡಾರಿಕೆ: ಅದರಿಂದ ಸೇವಾ ಉತ್ಪಾದನೆ, ಸಾಮಾನು ಹಾಗೂ ಸೇವೆಗಳ ಮನೋವೈಜ್ಞಾನೀಕರಣ, ಮತ್ತು ಅಂತಿಮವಾಗಿ ಪ್ರಾಯೋಗಿಕ ಉತ್ಪಾದನೆಯೆಡೆಗೆ ಸ್ಥಳಾಂತರ, ಇವು ಆರ್ಥಿಕ ವೃತ್ತಖಂಡವನ್ನು ಇತರ ಬಲಗಳಿಗಿಂತಲೂ ಹೆಚ್ಚು ಬಿಗಿಯುತ್ತವೆ. ಬಳಕೆದಾರರ ಬದಲುವ ಜೀವನ ಶೈಲಿಯೊಡನೆ ಕ್ಷಿಪ್ರ ಬದಲಾವಣೆ ಹೊಂದುತ್ತಾ ಹೋಗುತ್ತದೆ. ಬರುವ, ಹೋಗುವ ಉಪಪಂಥಗಳ ಎರಡೂ ತುಮುಲಗಳು ಆರ್ಥಿಕವಾಗಿ ಪ್ರತಿಫಲನ ಹೊಂದುತ್ತವೆ. ಅತ್ಯುದ್ಯಮ ಕೈಗಾರಿಕಾ ಉತ್ಪಾದನೆಯು ಸಂಜ್ಞಾವಿನ್ಯಾಸ ಚತುರ ಕಾರ್ಮಿಕರನ್ನು ಬಯಸುತ್ತದೆ. ಅವರ ಪರಿಭಾವನೆಗಳು ಹಿಂದಿನದಕಿಂತ

ಬಹುಪಾಲು ಹೆಚ್ಚಿನ ಪ್ರಾಮುಖ್ಯತೆ ಪಡೆದು ಅವರ ವಿಚಾರಗಳು ಮುಖ್ಯವಾಗು ತ್ತವೆ. ಏಕೆಂದರೆ ಅವು ಸಾಂಸ್ಕೃತಿಕ ಅಂಶಗಳ ಮೇಲೆಯೇ ಹೆಚ್ಚು ಆಧಾರಿತವಾದವು.

ಆರ್ಥಿಕ ಪದ್ಧತಿಯು ಸಾಮಾಜಿಕ, ಮನೋವೈಜ್ಞಾನಿಕ ಒತ್ತಡಗಳಿಗೆ ಸ್ಪಂದಿಸುತ್ತದೆಂಬುದಕ್ಕೆ ಆಧಾರ ಕೂಡ ಇದೆ. ಅತ್ಯುದ್ವಿಮೆಯ ಹಾದಿಯಲ್ಲಿರುವ ಒಂದು ಸಮೃದ್ಧ ಸಮಾಜವಲ್ಲಿ ಮಾತ್ರ ಬಂಡವಾಳ ಹೂಡಿಕೆಯ ವಿಧಾನಗಳ ಆವಿಷ್ಕಾರ ಕಾಣುತ್ತೇವೆ. ಪರಸ್ಪರವೇಣಿಗೆ ಮೊತ್ತದಂಥ ಕ್ರಮಗಳು ಆರ್ಥಿಕೇತರ ಲೆಕ್ಕಾಚಾರಗಳಿಂದಲೇ ಪ್ರಚೋದಿತವಾದವು. ವ್ಯಾಂಡರ್‌ಬಿಲ್ಟ್ ಮ್ಯೂಚುವಲ್ ಮತ್ತು ಪ್ರಾವಿಡೆಂಟ್ ಫಂಡ್‌ಗಳು ಮದ್ಯ ಅಥವಾ ತಂಬಾಕಿನ ಷೇರುಗಳಲ್ಲಿ ಹಣ ತೊಡಗಿಸಲು ನಿರಾಕರಿಸುತ್ತವೆ. ದೈತ್ಯ ಪ್ರಮಾಣದ ಪೇಂಟ್ಸ್‌ಫಂಡ್, ಯಾವುದೇ ಯುದ್ಧ ಸಾಮಗ್ರಿ ಉತ್ಪಾದನೆಯ ಸ್ಟಾಕನ್ನು ಧಿಃಕರಿಸುತ್ತದೆ. ಪುಟ್ಟದಾದ ವ್ಯಾಂಟೇಜ್ 10/90 ಫಂಡ್; ಅಭಿವೃದ್ಧಿ ಹೊಂದುತ್ತಿರುವ ಯಾದೇವು ರಾಷ್ಟ್ರದ ಆಹಾರ ಅಥವಾ ಜನಸಂಖ್ಯಾ ಸಮಸ್ಯೆಯ ನಿವಾರಣೆಯಲ್ಲಿ ತೊಡಗಿರುವ ಕೈಗಾರಿಕೆಗಳಲ್ಲಿ; ತನ್ನ ಸ್ಥಿರಾಸ್ತಿಯ ಸ್ವಲ್ಪಭಾಗವನ್ನು ತೊಡಗಿಸುತ್ತದೆ. ಬುಡಕಟ್ಟುಗಳ ಸಮರಸ ಜೀವನದ ವಸತಿಯೋಜನೆಗೆ ಮಾತ್ರ ತೊಡಗಿಸಲಾಗುವಂಥ ನಿಧಿಗಳಿವೆ. ಫೋರ್ಡ್ ಫೌಂಡೇಷನ್ ಮತ್ತು ಪ್ರೆಸ್‌ಬಿಟೇರಿಯನ್ ಚರ್ಚ್ ಎರಡೂ ಸಹ ತಮ್ಮ ಸಾಕಷ್ಟು ದೊಡ್ಡ ಮೊತ್ತದ ಸ್ವಲ್ಪ ಭಾಗವನ್ನು- ಆರ್ಥಿಕ ಪ್ರತಿಮೌಲ್ಯಕ್ಕಷ್ಟೇ ಅಲ್ಲ, ಕಂಪೆನಿಗಳು ನಗರ ಸಮಸ್ಯೆಗಳಿಗೆ ದೊರಕಿಸಿಕೊಡುವ ಕ್ರಿಯಾಕೀಲ ಸೇವೆಗೆ- ತೊಡಗಿಸುತ್ತವೆ. ಈಗ ಇನ್ನೂ ಕಮ್ಮಿ ಸಂಖ್ಯೆಯಲ್ಲಿರುವ ಇಂಥ ಬೆಳವಣಿಗೆಗಳು ಬದಲಾವಣೆಯ ಖಚಿತ ಸೂಚಿಗಳಾಗಿವೆ.

ನಿಶ್ಚಿತ ನಗರ ಕೇಂದ್ರಗಳನ್ನುಳ್ಳ ಅಮೆರಿಕೆನ್ ನಿಗಮಗಳು ತಮ್ಮನ್ನೇ ಮೀರಿ ತಾವು- ಬದಲಾವಣೆಗಳ ತುತ್ತತುದಿಗೆ ಸೆಳೆಯಲ್ಪಡುತ್ತವೆ. ನೂರಾರು ಕಂಪನಿಗಳು- ಗಂಭೀರ ನಿರುದ್ಯೋಗ ಅನುಭವಿಸುತ್ತಿರುವ ತಂಡಗಳಿಗೆ ಕೆಲಸ ಒದಗಿಸಲು; ಸಾಕ್ಷರತೆ ಮತ್ತು ಉದ್ಯೋಗ ತರಬೇತಿ ಕಾರ್ಯಕ್ರಮಗಳಿಗೆ; ಅಂಥ ಬಹುಸಂಖ್ಯೆಯ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿವೆ. ಈ ಕಾರ್ಯಗಳ ಪ್ರಾಮುಖ್ಯತೆ ಎಷ್ಟೆಂದರೆ ಪ್ರಪಂಚದ ಅತಿ ವಿಶಾಲ ನಿಗಮವಾದ ಅಮೆರಿಕನ್ ದೂರವಾಣಿ ಮತ್ತು ಟೆಲಿಗ್ರಾಫ್ ಕಂಪೆನಿಯು ಇತ್ತೀಚೆಗೆ ಪರಿಸರ ವ್ಯವಹಾರದ ಒಂದು ವಿಭಾಗವನ್ನೇ ಸ್ಥಾಪಿಸಿದೆ. ಇದೊಂದು ನವೀನ ಸಾಹಸ. ಈ ವಿಭಾಗವು ವಾಯು ಮತ್ತು ಜಲಮಾಲಿನ್ಯ, ಕಂಪೆನಿಯ ವಾಹನ ಮತ್ತು ಉಪಕರಣ ವಿನ್ಯಾಸವನ್ನು ಕಲಾತ್ಮಕಗೊಳಿಸುವಿಕೆ. ನಗರದ ಕತ್ತಲು ಕೊಂಪೆಗಳ ಶಾಲಾಪೂರ್ವ ಶಿಕ್ಷಣದ ಪ್ರಾಯೋಗಿಕ ಕಾಯಕಲ್ಪ; ಇಂಥವುಗಳ ಬಗೆಗೆ ಚಿಂತನ ಮಾಡುವುದೂ ಸೇರಿದಂತೆ ಒಂದು ಕಾರ್ಯ ಸರಣಿಯನ್ನೇ

ಹೊಂದಿದೆ. ಇದಾವುದೂ- ದೊಡ್ಡ ಉದ್ಯಮಗಳು ಪ್ರಯೋಜನಕಾರಿಯಾಗುತ್ತಿವೆ ಎಂದು- ತೋರುವುದಿಲ್ಲ; ಆರ್ಥಿಕ ವೃತ್ತ ಖಂಡ ಮತ್ತು ಸಕ್ತ ಸಾಂಸ್ಕೃತಿಕ ಮನೋ ವೈಜ್ಞಾನಿಕ ಮತ್ತು ಸಾಮಾಜಿಕ ಬಲಗಳ ನಡುವೆ ಹೆಚ್ಚುತ್ತಿರುವ ಸಹಯೋಗವನ್ನು ಆಂತರಿಕವಾಗಿ ಸಹಜವೋ ಎಂಬಂತೆ ಗಣಿಸುತ್ತ ಹೋಗುತ್ತದೆ. ಅಷ್ಟೇ ಇವೆಲ್ಲದರಂಥ ಬಲಗಳು ನಮ್ಮ ಕದಗಳನ್ನು ತಟ್ಟುತ್ತಿರುವಾಗ ತಾಂತ್ರಿಕ ಯೋಜನೆಯ ಪ್ರಭುಗಳು—ಯೋಜಕರು, ನಿರ್ವಾಹಕರು- ಏನೂ ಆಗಿಲ್ಲವೇನೋ ಎಂಬಂತೆ ವರ್ತಿಸುವರು. ಆರ್ಥಿಕ ವೃತ್ತ ಖಂಡವು ಸಾಮಾಜಿಕ, ಮನೋವೈಜ್ಞಾನಿಕ, ಹಾಗೂ ಸಾಂಸ್ಕೃತಿಕ ಪರಿಣಾಮಗಳಿಂದ- ಬೇರ್ಪಟ್ಟಿರುವಂತೆ ತಮ್ಮ ಕಾರ್ಯ ಮುಂದುವರಿಸುತ್ತಾರೆ. ನಿಜ, ಬಂಡವಾಳಶಾಹಿ ಹಾಗೂ ಸಮಾಜವಾದಿ ರಾಷ್ಟ್ರಗಳಲ್ಲಿ ಅರ್ಥಕೇಂದ್ರಿತ ಕಲ್ಪನಾಮೂಲಗಳು ಎಷ್ಟು ಆಳ ವಿಸ್ತಾರಗಳಲ್ಲಿ ಬೇರೂರಿವೆ ಎಂದರೆ ಅವು ಪರಿವರ್ತನ ನಿರ್ವಹಣೆಗೆ ಬೇಕಾದ ವಾರ್ತಾಮೂಲಗಳನ್ನೇ ಕಂಗೆಡಿಸುತ್ತವೆ.

ಉದಾಹರಣೆಗೆ- ಎಲ್ಲ ಆಧುನಿಕ ರಾಷ್ಟ್ರಗಳೂ ತಮ್ಮ ಆರ್ಥಿಕ ಕಾರ್ಯವಿಧಾನ ಗಣನೆಗಾಗಿ ವಿಸ್ತಾರ ಯಂತ್ರ ಯೋಜನೆಯೊಂದನ್ನು ಹೊಂದಿರುತ್ತವೆ. ಹೆಚ್ಚು ಕಡಿಮೆ ಪ್ರತಿದಿನದ ಉತ್ಪಾದ್ಯತೆ, ಬೆಲೆ, ಬಂಡವಾಳ ಹೂಡಿಕೆಯಂಥವುಗಳ ಗತಿ ವ್ಯತ್ಯಾಸ ನಮಗೆ ಗೊತ್ತಿರುತ್ತದೆ. ಕೆಲವು "ಆರ್ಥಿಕ ದರ್ಶಕ" ಗಳ ಮೂಲಕ ದೇಶದ ಒಟ್ಟಿನ- ಆರ್ಥಿಕತೆಯ ಆರೋಗ್ಯ, ಬದಲಾವಣೆಯ ವೇಗ ಮತ್ತು ದಿಶೆಗಳ ಮಾಪನ ಮಾಡುತ್ತೇವೆ. ಈ ಕ್ರಮಗಳಿಲ್ಲದೆ ಆರ್ಥಿಕತೆಯ ಮೇಲಿನ ನಮ್ಮ ಹತೋಟಿ ತೀರ ಕಡಮೆ ಫಲೋತ್ಪಾದಕವಾಗುತ್ತದೆ.

ಇದಕ್ಕಿಂತ ಬೇರೆಯಾಗಿ- ಆರ್ಥಿಕತೆಯಿಂದ ಸ್ಪಷ್ಟವಾಗಿ ಭಿನ್ನವೆನಿಸುವ; ಸಮಾಜವು ಸಹ ಆರೋಗ್ಯವಾಗಿದೆಯೋ ಎಂಬುದನ್ನು ನಮಗೆ ತಿಳಿಸುವ- "ಸಾಮಾಜಿಕ ದರ್ಶಕ" ಸಮೂಹವಿಲ್ಲ. ಮನುಷ್ಯರು ಪರಸ್ಪರ ದೂರವಾಗಿದ್ದಾರೆಯೋ ಅಥವಾ ಎಷ್ಟು ಸಮೀಪ ಬಂದಿದ್ದಾರೆ; ಕಲೆ ಸಂಗೀತ ಸಾಹಿತ್ಯಗಳು ವಿಕಾಸ ಹೊಂದುತ್ತಿವೆಯೇ; ಸೌಜನ್ಯ ಔದಾರ್ಯ ಕರುಣೆಗಳು ಹೆಚ್ಚುತ್ತಿವೆಯೇ; ಎಂದು ಹೇಳಬಲ್ಲ ಕ್ರಮಬದ್ಧ ಸೂಚ್ಯಾಂಕಗಳಿಲ್ಲ. ಸಂಯುಕ್ತ ಸಂಸ್ಥಾನಗಳ ಹಿಂದಿನ ಸಂಸ್ಥಾನ ಕಾರ್ಯದರ್ಶಿ ಸ್ಟುವಾರ್ಟ್ ಉಡಾಲ್ "GNP ಎಂಬುದೊಂದು ಪವಿತ್ರ ವಿಭಾಜಕ. ಅದು ವಿಷಯಗಳನ್ನು ಪ್ರತ್ಯೇಕವಾಗಿ ಸೇರಿಸಿ ತೋರಿಸುತ್ತದೆ. ಆದರೆ ವರ್ಷದಿಂದ ವರ್ಷಕ್ಕೆ ನಮ್ಮ ದೇಶವು ಹೆಚ್ಚು ಜೀವನ ಯೋಗ್ಯವಾಗುತ್ತಿದೆಯೋ ಎಂಬುದನ್ನರಿಯಲು ನಮ್ಮ ಬಳಿ ಪರಿಸರ ಹಾಗೂ ಜನಗಣತಿ ಅಂಕಿಅಂಶಗಳಿಲ್ಲ.

ಮೇಲ್ನೋಟಕ್ಕೆ ಇದು- ಅಂಕಿ ಅಂಶ ತಜ್ಞರ ಚರ್ಚೆಗೆ ಸಂಬಂಧಿಸಿದಂಥ- ಶುದ್ಧ

ಶಾಸ್ತ್ರೀಯ ವಿಷಯವಾಗಿ ತೋರುತ್ತದೆ: ಆದರೆ ಅತ್ಯಂತ ಗಂಭೀರ ರಾಜಕೀಯ ಪ್ರಾಮುಖ್ಯತೆ ಹೊಂದಿದ ವಿಷಯವಿದು. ಏಕೆಂದರೆ- ಸಾಮಾಜಿಕ ದರ್ಶಕಗಳ ಯೋಜನೆಯಂಥ- ಕ್ರಮಗಳ ಕೊರತೆಯಾದಲ್ಲಿ ಸ್ಥಳೀಯ ನೀತಿಗಳನ್ನು ದೀರ್ಘಕಾಲಿಕ ಸಾಮಾಜಿಕ ಗುರಿಗಳೊಡನೆ ಹೊಂದಿಸುವುದು ಕಷ್ಟವಾಗುತ್ತದೆ. ಸೂಚ್ಯಂಕಗಳ ಗೈರು ಹಾಜರಿಯು ಅಸಭ್ಯ ತಾಂತ್ರಿಕ ಪ್ರಭುತ್ವವನ್ನು ನಿರಂತರಗೊಳಿಸುತ್ತದೆ. ಜನತೆಗಿನ್ನೂ ಹೆಚ್ಚು ಪರಿಚಿತವಾಗಿಲ್ಲದ, ಸೌಜನ್ಯಪೂರ್ಣವಾದ, ಆದರೆ ಕ್ರಮೇಣ ಕಹಿಯಾಗುತ್ತಿರುವ ಚರ್ಚೆಯೊಂದು ವಾಷಿಂಗ್‌ಟನ್‌ನಲ್ಲಿ ಪ್ರಾರಂಭವಾಗಿದೆ. ಸಾಮಾಜಿಕ ದರ್ಶಕಗಳ ಕಲ್ಪನೆಯಲ್ಲಿ ತಾಂತ್ರಿಕ ಯೋಜನೆಯ ಪ್ರಭುಗಳು ಮತ್ತು ಅರ್ಥತಜ್ಞರು- ರಾಜಕೀಯ ನೀತಿ ನಿರೂಪಕರ ಕಿವಿಯ ಬಳಿಯ ತಮ್ಮ ನೆಲೆಗೆ ಅಪಾಯಕಾಣುತ್ತಿದ್ದಾರೆ. ಇವರಿಗೆದುರಾಗಿ- ಸಮಾಜ ವಿಜ್ಞಾನಿಗಳಾದ ವೆಯಿನ್ ಸ್ಟೇಟ್ ವಿಶ್ವವಿದ್ಯಾಲಯದ ಬರ್ಟ್ರಮ್ ಎಮ್ ಗ್ರಾಸ್, ರಸೆಲ್‌ಸೇಜ್ ಫೌಂಡೇಷನ್‌ನ ವಿಲ್ಬರ್ಟ್‌ಮೂರ್ ಮತ್ತು ಎಲಿನಾರ್ ಷೆಲ್ಡನ್, ಹಾರ್ವರ್ಡ್‌ನ ಡೇನಿಯಲ್ ಬೆಲ್ ಮತ್ತು ರೈಮಂಡ್ ಬಾಯರ್ ಇವರು ''ನಾವು ಸಾಮಾಜಿಕ ದರ್ಶಕ''ಗಳ''ಪರ''ವಾಗಿ ವಾದಿಸುತ್ತಿದ್ದಾರೆ. ಗ್ರಾಸ್ ಹೇಳುತ್ತಾರೆ ''ಸಂಯುಕ್ತ ಸಂಸ್ಥಾನಗಳ ಸರ್ಕಾರದ ಇಂದಿನ ಅಂಕಿ ಅಂಶ ಕೇಂದ್ರದ ಆರ್ಥಿಕ ದೌರ್ಜನ್ಯದ ವಿರುದ್ಧ ವ್ಯಾಪಕದಂಗೆಯನ್ನು ಕಾಣುತ್ತಿದ್ದೇನೆ.''

ಈ ಬಂಡಾಯವು ತಾಂತ್ರಿಕ ಪ್ರಭುತ್ವೋತ್ತರ ಸಾಮಾಜಿಕ ವಿಷಯ ಸಂಗ್ರಹ ಪದ್ಧತಿಯೊಂದರ ನಮ್ಮ ಅವಶ್ಯಕತೆಯನ್ನು ಗುರುತಿಸುತ್ತದೆ. ರಾಜಕಾರಣಿಗಳು ಮತ್ತು ಸರ್ಕಾರಿ ಅಧಿಕಾರಿಗಳ ಚಿಕ್ಕಗುಂಪೊಂದು ತನ್ನ ಸಶಕ್ತ ಬೆಂಬಲವನ್ನು ಕೊಡಮಾಡಿದೆ- ಈ ಚಳುವಳಿಗೆ. ಇದರಲ್ಲಿ ಶ್ವೇತಭವನದ ಮಹತ್ವಪೂರ್ಣ ಸಲಹೆಗಾರರಾದ ಡೇನಿಯಲ್ ಪಿ, ಮೋಯ್ನಿಹಾನ್, ಸೆನೇಟರುಗಳಾದ ವಾಲ್ಟರ್‌ಮಾಂಡೇಲ್ (ಮಿನ್ನಿಸೋಟ) ಫ್ರೆಡ್‌ಹ್ಯಾರಿಸ್ (ಓಕ್ಲೆಹಾಮಾ) ಮತ್ತು ಇತರ ಮಾಜೀ ಸಂಪುಟದ ಅಧಿಕಾರಿಗಳಿದ್ದಾರೆ. ತಾಂತ್ರಿಕ ಪ್ರಭು ಹಾಗೂ ಪ್ರಭುತ್ವೋತ್ತರರನ್ನು ವಿಭಾಗಿಸುವ ಇದೇ ಬಂಡಾಯ ಪ್ರಪಂಚದ ಇತರ ರಾಜಧಾನಿಗಳಲ್ಲೂ ಪ್ರಾರಂಭವಾಗುವುದನ್ನು ಕ್ಷಿಪ್ರದಲ್ಲಿ ಕಾಣಬಹುದು.

ತೀವ್ರವಾಗಿ ಬೆಳೆಯುತ್ತಿರುವ- ಸಾಮಾಜಿಕ ದರ್ಶಕ ವಿಷಯಕವಾದ ಸಾಹಿತ್ಯದಲ್ಲಿ ಇದುವರೆಗೂ ಸೂಚಿಸಿಲ್ಲದಂಥ ಕ್ರಮಗಳ ಬಗ್ಗೆ ಭವಿಷ್ಯದ ತಲ್ಲಣದ ಅಪಾಯವೇ ಸೂಚಿಸುತ್ತದೆ. ಉದಾಹರಣೆಗೆ ವಿವಿಧ ಜನ ಸಮುದಾಯ ಮತ್ತು ಸಮಾಜಗಳಲ್ಲಿ ಅಲ್ಲದೇ ವೈಯುಕ್ತಿಕ ಅನುಭವದಲ್ಲಿ ಉನ್ನತಿಯ ಮಟ್ಟ ಅಳೆಯುವ ತಂತ್ರಗಳು ನಮಗೆ ಅತಿ ಬೇಗನೆಬೇಕಾಗಿದೆ. ತಾತ್ವಿಕವಾಗಿ; ನಮ್ಮ ಪರಿಸರದ ಸ್ಥಳ, ಜನಗಳು, ಸಂಸ್ಥೆಗಳು

ಮತ್ತು ವಾರ್ತಾ ಮೂಲಗಳೊಡನೆ ಸಂಬಂಧ ರಚನೆ ಅಥವಾ ಕಪಿತನ ಗತಿಯನ್ನು ತಿಳಿಸಬಲ್ಲ "ಅಸ್ಥಿರತೆಯ ಸೂಚ್ಯಂಕ" ಒಂದನ್ನು ರಚಿಸಲು ಸಾಧ್ಯವಿದೆ.

ಅಂಥದೊಂದು ಸೂಚ್ಯಂಕವು ಸಮಾಜದ ಬೇರೆ ಬೇರೆ ಸಮುದಾಯಗಳ ಅನುಭವದಲ್ಲಿ ಅದ್ಭುತ ವ್ಯತ್ಯಾಸಗಳನ್ನು; ಬಹುದೊಡ್ಡ ಸಂಖ್ಯೆಯ ಜನರ ಜೀವನಗಳಲ್ಲಿ ಸ್ಥಗಿತ ಹಾಗೂ ಬೇಸರವನ್ನೂ; ಇತರರ ಜೀವನದಲ್ಲಿ ಭ್ರಾಂತಿಯುತ ವ್ಯವಹಾರವನ್ನೂ ಬೆಳಕಿಗೆ ತಂದೀತು. ಇವರೆಲ್ಲರೊಡನೆ ಒಂದೇ ಬಗೆಯಾಗಿ ವ್ಯವಹರಿಸಿದರೆ ಒಂದು, ಅಥವಾ ಇನ್ನೊಂದು, ಅಥವಾ ಎರಡೂ ಗುಂಪುಗಳಿಂದ ಸರ್ಕಾರವು ರೋಷದ ಪ್ರತಿಕ್ರಿಯೆ ಎದುರಿಸಬೇಕಾದೀತು.

ಹಾಗೆಯೇ ಮನುಷ್ಯ ಪರಿಸರದಲ್ಲಿ ನವೀನತೆಗೆ ಸೂಚ್ಯಂಕಗಳು ನಮಗೆ ಅವಶ್ಯವಾಗಿ ಬೇಕು. ಗುಂಪು, ಸಂಸ್ಥೆ, ಅಥವಾ ವ್ಯಕ್ತಿಗಳು ಎಷ್ಟು ಬಾರಿ ಪ್ರಥಮ ಶ್ರೇಣಿಯ ಪರಿಸ್ಥಿತಿಯನ್ನು 'ನಿರ್ವಹಿಸಬೇಕಾಗುತ್ತದೆ. ಸರಾಸರಿ ನೌಕರ ವರ್ಗದ ಕುಟುಂಬದ ಮನೆಯೊಂದರಲ್ಲಿರುವ ವಸ್ತುಗಳು- ನೋಟಕ್ಕೆ ಅಥವಾ ಕೆಲಸದಿಂದ- ಎಷ್ಟು ಸಾಂಪ್ರದಾಯಿಕವಾದವು ? ಅಥವಾ ಎಷ್ಟು ನವೀನವಾದವು ? ವಸ್ತು, ಜನ ಅಥವಾ ಇನ್ನಾವುದೇ ಸಾರ್ಥ ಆಯಾಮದಲ್ಲಿ ಅತಿ ಪ್ರಚೋದನೆ ಇಲ್ಲದೆ ಪ್ರಚೋದನೆ ತರಲು ಯಾವ ಮಟ್ಟದ ನವೀನತೆ ಅವಶ್ಯ ? ಮಕ್ಕಳು ನವೀನತೆಯಿಂದಾದರೆ ಅವರು ತಮ್ಮ ತಂದೆ–ತಾಯಿಯರಿಗಿಂತ ಎಷ್ಟು ಹೆಚ್ಚು ನಾವೀನ್ಯವನ್ನಳವಡಿಸಿಕೊಳ್ಳಬಲ್ಲರು ? ವಯಸ್ಸಾಗುವಿಕೆಗೆ ನವೀನತೆಯೊಡನೆ ಕಡಿಮೆ ಸಹನೆ ಹೇಗೆ ಸಂಬಂಧಿಸಿದೆ ? [ವಯಸ್ಸಾಗುವುದು, ಆಧುನಿಕತೆ, ತಾಳ್ಮೆ ಕಳೆದುಕೊಳ್ಳುವುದು ಇವುಗಳಿಗಿರುವ ಸಂಬಂಧ.] ಅಂಥ ವ್ಯತ್ಯಾಸಗಳು ರಾಜಕೀಯ ಮತ್ತು ಈಗಿನ ತಾಂತ್ರಿಕ ಸಮಾಜಗಳನ್ನು ಹರಿದು ತಿನ್ನುತ್ತಿರುವ- ತಲೆಮಾರುಗಳ ಪರಸ್ಪರ ಸಂಘರ್ಷಕ್ಕೆ ಹೇಗೆ ಸಂಬಂಧಿಸಿರುತ್ತವೆ ? ಹೊಸತನದ ದಾಳಿಯ ಅಧ್ಯಯನ ಮಾಪನಗಳಿಂದ ನಮ್ಮ ಸಾಮಾಜಿಕ ರಚನೆ ಹಾಗೂ ವೈಯುಕ್ತಿಕ ಜೀವನದಲ್ಲಿ ಬದಲಾವಣೆಯ ಪ್ರವಾಹವನ್ನು ಪ್ರಾಯಶಃ ನಿಯಂತ್ರಿಸಲು ಪ್ರಾರಂಭಿಸಬಹುದು.

ಇನ್ನು, ಆಯ್ಕೆ ಹಾಗೂ ಅತ್ಯಾಯ್ಕೆಯ ಬಗ್ಗೆ ಏನು ? ವೈಚಿತ್ರ್ಯಪೂರ್ಣ ಆಯ್ಕೆಯ ವಿಧಾನಗಳನ್ನು ನಾವು ರಚಿಸಬಲ್ಲೆವೆ ? ಪ್ರಜಾಪ್ರಭುತ್ವವೆಂದುಕೊಳ್ಳುವ ಯಾವುದೇ ಸರ್ಕಾರವು ಅಂಥ ಸಮಸ್ಯೆಯ ಬಗ್ಗೆ ಸಂಬಂಧ ಹೊಂದಲು ಸಾಧ್ಯವೇ ? ಆಯ್ಕೆಯಲ್ಲಿ ಸ್ವಾತಂತ್ರ್ಯದ ಬಗ್ಗೆ ಎಲ್ಲ ಇಲಾಖೆಗಳೂ ಮಾತುಗಾರಿಕೆ ಹೊಂದಿರುತ್ತವೆ. ಆದರೆ ಯಾವುದೇ ಸರ್ಕಾರೀ ಇಲಾಖೆ ಅದನ್ನು ಅಳತೆ ಮಾಡಲು ಪ್ರಯತ್ನಿಸಿದ್ದೇನೆಂದು

ಹೇಳಿಕೊಳ್ಳಬಹುದೇ? ಈ ಪ್ರಶ್ನೆಗೆ ಹೇಳಿಕೊಳ್ಳಲಾರವು- ಎಂಬುದೇ ಉತ್ತರ. ಇಲ್ಲಿನ ಭಾವಿಸೋಣವೆಂಪರೆ ಹೀಗೆ- ಹೆಚ್ಚಿನ ಆದಾಯ ಅಥವಾ ಸಂಪತ್ತು ಎಂದರೆ ಆಯ್ಕೆಯಲ್ಲಿ ಹೆಚ್ಚಿನ ವೈವಿಧ್ಯ- ಈ ವೈವಿಧ್ಯವೇ ಸ್ವಾತಂತ್ರ್ಯವೆಂದು ಅರ್ಥ, ಇಷ್ಟೆ. ನಮ್ಮ ರಾಜಕೀಯ ವ್ಯವಸ್ಥೆಗಳ ಈ ಮೂಲಭಾವವನ್ನು ಪರೀಕ್ಷಿಸಲು ಇದು ಕಾಲವಲ್ಲವೇ?

ಪರಿಸರ- ತಂತ್ರಜ್ಞಾನ ಇವುಗಳ ಬೆಳವಣಿಗೆಯ ಮುಂದಿನ ಹಂತವನ್ನು ಯಶಸ್ವಿಯಾಗಿ ಸಾಧಿಸುವ ಮೊದಲು ಯಾವುದೇ ಸಮಾಜವು ಹೊಂದಿರಬೇಕಾದ ತಾಂತ್ರಿಕ ಸಲಕರಣೆ ಎಂದರೆ; ನಾವು ಭವಿಷ್ಯದ ತಲ್ಲಣವನ್ನು ತಡೆಗಟ್ಟಿ, ಅತ್ಯುದ್ಯಮಿಯಾದರೂ ಮಾನವೀಯ ಸಮಾಜವನ್ನು ಕಟ್ಟಬೇಕೆಂದರೆ; ತಾಂತ್ರಿಕ ಪ್ರಭುತ್ವೋತ್ತರ ಯೋಜನಾ ವಿಧಾನವು ಖಚಿತವಾಗಿ ಇಂಥ ವಿಚಾರಗಳಲ್ಲಿಯೇ ವ್ಯವಹರಿಸಬೇಕು.

ಸಾಮಾಜಿಕ ಹಾಗೂ ಸಾಂಸ್ಕೃತಿಕ ಗುರಿ ಸಾಧನೆಯ ಬಗ್ಗೆ ವಿಚಾರಬದ್ಧವಾದ ಮತ್ತು ಆರ್ಥಿಕ ಸೂಚಕಗಳೊಡನೆ ಸಾಮರಸ್ಯ ಹೊಂದಿದ; ಸೂಕ್ಷ್ಮ ಸಂವೇದನೆಯ "ಸಾಮಾಜಿಕ ದರ್ಶಕ" ಗಳ; ವ್ಯವಸ್ಥೆಯು ತಾಂತ್ರಿಕ ಪ್ರಭುತ್ವೋತ್ತರ ಯೋಜನಾ ಪದ್ಧತಿಯ ಮತ್ತು ಬದಲಾವಣೆಯ ನಿರ್ವಹಣೆಯ, ಅತ್ಯವಶ್ಯ- ಪೂರ್ವಕರಾರು.

ಈ ಯೋಜನಾ ಪದ್ಧತಿಯ ಮಾನವೀಕರಣವು ಎಲ್ಲಕ್ಕಿಂತ ಹೆಚ್ಚಾಗಿ ನಮ್ಮ ರಾಜಕೀಯ ಯಂತ್ರ ರಚನೆಯಲ್ಲಿಯೂ ಪ್ರತಿಫಲಿತವಾಗಬೇಕು. ಅತ್ಯುದ್ಯಮೀ ಸಾಮಾಜಿಕ ಚಿಂತನವನ್ನು ಸಮಾಜದ ನಿರ್ಣಯ ಕೇಂದ್ರಗಳೊಡನೆ ಸಂಪರ್ಕಿಸುವಂತೆ ನಾವು ಭವಿಷ್ಯದ ಜೀವನದ ಗುಣಮಟ್ಟದ ಬಗೆಗಿನ ಕಳಕಳಿಯನ್ನು ಸಂಸ್ಥಾಕರಿಸಲೇಬೇಕು. ಹಾಗೆ ಈ ದಿಶೆಯಲ್ಲಿ ಬರ್ಟ್ರಮ್ ಗ್ರಾಸ್ ಮತ್ತಿತರರು ತಮ್ಮ "ಸಾಮಾಜಿಕ ದರ್ಶಕ"ಚಳುವಳಿಯಲ್ಲಿ ಸಂಯುಕ್ತ ಸಂಸ್ಥಾನಗಳ ಅಧ್ಯಕ್ಷರಿಗೆ ಸಲಹಾ ಮಂಡಳಿಯೊಂದರ ರಚನೆಯನ್ನು ಸೂಚಿಸಿದ್ದಾರೆ. ಅದಕ್ಕೆ ಮಾದರಿ- ಈಗಾಗಲೇ ಇರುವ ಆರ್ಥಿಕ ಸಲಹಾ ಮಂಡಳಿ. ಸೂಚಿತವಾದ ಸಾಮಾಜಿಕ ಮಂಡಳಿಯು ಆರ್ಥಿಕ ಕ್ಷೇತ್ರಕ್ಕೆ ಸಮಾಂತರವಾದ ಸಾಮಾಜಿಕ ಕಾರ್ಯವಿಧಾನವನ್ನು ನಿರ್ವಹಿಸುತ್ತದೆ. ಕೇಂದ್ರ ಆರ್ಥಿಕ ಮಂಡಲಿ ಆರ್ಥಿಕ ದರ್ಶಕಗಳ ಮೇಲೆ ಕಣ್ಣಿಟ್ಟು ಬದಲಾವಣೆಗಳನ್ನು ಅಧ್ಯಕ್ಷರಿಗೆ ಅರ್ಪಿಸುವಂತೆ ಸಾಮಾಜಿಕ ಮಂಡಲಿಯೂ ತನ್ನ ಕೆಲಸ ನಿರ್ವಹಿಸುತ್ತದೆ. ಅದು ಜೀವನದ ಗುಣಮಟ್ಟದ ಮೇಲೆ, ನಮ್ಮ ಸಾಮಾಜಿಕ ಪ್ರಗತಿ ಅಥವಾ ಅದರ ಕೊರತೆಯನ್ನು ನಿರ್ದಿಷ್ಟಪಡಿಸಿದ ಗುರಿಗಳ ದೃಷ್ಟಿಯಿಂದ ಗಮನವಿಟ್ಟು, ವಾರ್ಷಿಕವಾಗಿ ತನ್ನ ವರದಿ ಸಲ್ಲಿಸುತ್ತದೆ. ಅದು ವಾರ್ಷಿಕ ಆರ್ಥಿಕ (CEA) ವರದಿಗೆ ಸಂತುಲನೆ ಮತ್ತು ಕಾರ್ಯಕ್ಷಮತೆಯ ಶಕ್ತಿ ನೀಡುವಂತೆ ಯೋಜಿತವಾದುದು.

ಅಂಥ ಮಂಡಲಿಗಳನ್ನು ಕೇಂದ್ರ ಸಮತಲದಲ್ಲಿ, ಅಲ್ಲದೆ ರಾಜ್ಯ ಸಮತಲ, ನಗರ ಸಭೆಗಳ ಮಟ್ಟದಲ್ಲಿ ಸಹ ಸ್ಥಾಪಿಸುವುದು ನಮ್ಮ ಸಮಸ್ಯೆಗಳನ್ನು ಪರಿಹರಿಸುವುದಿಲ್ಲ; ಸಂಘರ್ಷವನ್ನು ನಿವಾರಿಸುವುದಿಲ್ಲ. ಸ್ವಲ್ಪದರಲ್ಲಿ ಎಂದರೆ ಅದು ನಮ್ಮ ರಾಜಕೀಯ ಜೀವನದಲ್ಲಿನ ರಾಜಕೀಯವನ್ನು ತೆಗೆದುಹಾಕುವುದಿಲ್ಲ: ಆದರೆ,

ಪ್ರಗತಿಯ ಗುರಿ ಆರ್ಥಿಕ ಜೀವನದಾಚೆಗೂ ಚಾಚಿದೆ ಎಂಬ ಪರಿಭಾವನೆಗೆ ಮಾನ್ಯತೆ, ರಾಜಕೀಯ ಬೆಂಬಲಗಳನ್ನು ದೊರಕಿಸಿಕೊಡುತ್ತದೆ. ಜೀವನದ ಗುಣಮಟ್ಟದಲ್ಲಿ ಸಾಮಾಜಿಕ ಬದಲಾವಣೆಗಳ ದರ್ಶಕಗಳ ಮೇಲೆ ನಿಗಾ ಇಡುವ ಸಂಸ್ಥೆಗಳ ಸ್ಥಾಪನೆಯು ನಮ್ಮನ್ನು ಅತ್ಯುದ್ಯಮೋತ್ತರ ಯೋಜಕನ ಮಾನವೀಕರಣದ ದಿಶೆಯಲ್ಲಿ ಬಹುದೂರ ಒಯ್ಯುತ್ತದೆ. ಇದೇ ಸಾಮಾಜಿಕ ಭವಿತವ್ಯವಾದದ ವ್ಯೂಹ ರಚನೆಯಲ್ಲಿ ಮೊದಲನೆಯ ಹಂತ ಸಹ.

[ಈ ಲೇಖನದಲ್ಲಿ Indicator ; ದರ್ಶಕ ಎಂದೂ
Index ; ಸೂಚಕ, ಸೂಚ್ಯಂಕ ಎಂದೂ
ಭಾವಿಸಲಾಗಿದೆ.]

ಹರಿವ ನೆರಳ ಬೆನ್ನೇರಿ.

● ಮುಳ್ಳೂರ್ ನಾಗರಾಜ್

ಅಗ್ನಿಪರ್ವತಗಳ ಎದೆಯಲ್ಲಿ ಹರಳುಗಟ್ಟಿದೆ ಕವಿತೆ.
ನೋವು ತುಂಬಿದ ಅಲ್ಲಿ ಪ್ರತಿಸಾಲು ಮೂಕ
ಅಧೋಲೋಕದ ಹಕ್ಕಿಯ ಕಂಗಳಲ್ಲಿ ನಗುತಿದೆ ಬೆಂಕಿಗೋಲ
ನನ್ನೆದೆಯ ಕುಲುಮೆಯಲ್ಲಿ ಚಿಗುರಿದ ಮಹಾಪ್ರಲಯದಲ್ಲಿ
ವಿಲೀನ ವಾಗಿದೆ ನನ್ನ ಕವಿತೆ
ಕತ್ತಲೆಯ ಇತಿಹಾಸ ಚಕ್ರ ಕೈಕಾಲು ಕಳಕೊಂಡು ತೆವಳಿದಲ್ಲಿ
ಉದುರಿಹೋದವು ಶತಮಾನಗಳು ಕೇವಲ ತರಗೆಲೆಗಳಂತೆ

ಎದೆಯ ಹಾಡಿನ ತಲ್ಲಣಕ್ಕೆ ಪರ್ವತಗಳು ತುಟಿ ತೆರೆದು
ಚೆಲ್ಲಿ ನೆಲದ ಮೇಲಾ ಲಾವಾ ಬೆಂಕಿಗೂ ಬಂತಲ್ಲ ಜೀವಾ
ಯಾರು ಯಾರೋ ಯಾರು ಯಾರನ್ನೋ ಕೊಂದರು
ಪ್ರತಿಯೊಬ್ಬರೂ ಭೂಮಿಯ ಗಂಡರು

ಕೋಟೆ ಕೊತ್ತಲಗಳನು ಕಟ್ಟಿ ಜೀವ ಜೀವಗಳನು ಒಟ್ಟೆ
ನರಮೇಧಯಾಗಕ್ಕೆ ಸಜ್ಜಾಗಿ ನಿಂತರು ಸಮಸ್ತರು
ಯಾರು ಗೆದ್ದರೊ ಯಾರು ಸೋತರೊ ಕಾಣೆನಲ್ಲಾ

ಹುಡುಕಿದೆ ನಾನು ಇತಿಹಾಸದ ಬೇರುಗಳನ್ನು
ತಿಳಿಯದಾಳದ ಗರ್ಭದೊಳಗೆ ಹಬ್ಬಿವೆ ಬೆಟ್ಟಸಾಲು

ಜೀವನ ಗಿಳಿ ನುಡಿಯುತಿದೆ ನಿಜವನ್ನ
ನಗುವ ಕತ್ತಲೆಯಲ್ಲಿ ನಾನು ಕಂಡೆನು
ನೆಲದಾಳದ ಎಲುಬು ಪಂಜರಗಳಲ್ಲಿ
ಕೊಳೆತ ಮಾನವ ರೂಪವನ್ನ
ಬಸಿಯುವಕ್ಷರ ಲೋಕದಲ್ಲಿ ಸಾವು ನೋವುಗಳ
ದಾಖಲೆ ನರಳುವುದ ಕಂಡೆ.

ತಲೆಯಿಂದ ತಲೆಗೆ ತಲೆಮಾರು ಚಲಿಸಿ
ಇಂತು ನಿಂತಿದೆ ಗೂಢ ಬದುಕಿನ ದಾಖಲೆ
ಮಗಳು ಬಿಂಕದ ಸೂಳೆ ಅಪ್ಪ ಹಾದರದ ಹಂದಿ
ಕೂಡಿದರು ಕತ್ತಲೆಯಲ್ಲಿ ಮಕ್ಕಳು ರೆಕ್ಕೆ ಪುಕ್ಕ
ಬಲಿತ ಹಕ್ಕಿಗಳು ಹಾರಿದವು ದಿಗಂತದಾಚೆ
ಹಾರಿ ಹಾರಿ ಹರಿವ ನೆರಳಿನ ಬೆನ್ನೇರಿ
ದಿಕ್ಕಿಲ್ಲದೆ ನಿಂತೊ ಕಪ್ಪು ದ್ವೀಪದಲ್ಲಿ

ಕತ್ತಲಲ್ಲೂ ನಡೆಯುತಿದೆ ಹತ್ಯಾಕಾಂಡ
ಪ್ರತಿ ಎದೆಯ ಮೇಲೂ ಬೂಟುಗಾಲುಗಳ ಸದ್ದು
ಕಣ್ಣೀರಿನ ಚರಿತೆ ಸಾರುತಿದೆ 'ಸಾವುಬದುಕಿಗೆ ಮದ್ದು'
ಕಣ್ಣು ಕುಕ್ಕಿದರೂ ಕಬ್ಬಿಣದ ಕಾಗೆಗಳು
ನಿಲ್ಲದೆ ಅಲೆದಿದ್ದೇನೆ ಮರಳು ಗಾಡುಗಳಲ್ಲಿ
ನಕ್ಕ ಹೂಸುಳಿಗಳಲ್ಲಿ ಸಿಕ್ಕು ಸೆರೆಯಾಗಿದ್ದೇನೆ
ಘೋರ ಏಕಾಕಿತನದ ಪ್ರಪಾತಗಳಲ್ಲಿ

ಯಾರು ನನ್ನವರಿಲ್ಲ ಯಾರು ನನ್ನವರಿಲ್ಲ
ಯಾಕೆ ಚೀರುವೆ ಮನವೆ
ಘೋರಾರಣ್ಯಗಳಲ್ಲಿ ದಾರಿ ತಪ್ಪಿದ ಮಗುವೆ
ಕಾಡುದಾರಿಗಳಲ್ಲಿ ಜಾಡು ಹುಡುಕುತ
ಅಲೆವ ನಿನ್ನ ಪರಿಯೇನು ?
ದಾರುಣಕೆ ಕೊನೆಯಿಲ್ಲಿ ಮೊದಲಿಲ್ಲಿ
ಹಂತಕರ ನೆರಳಿಲ್ಲಿ ಬಲ್ಲೆಯೇನು ?
ತನುವಿರದ ವನಿತಬ್ಬಿ ಕರೆಯಿತೆನ್ನನು ಕಾಡಿಗೆ

ಇರಿವ ಶೂಲಗಳು ಹೊಕ್ಕಿವೆ ಒಡಲಿನೊಳಗೆ
ಹೊನ್ನ ಗರಗಸವು ಹರಿದು ಹಬ್ಬಿವೆ ಕೊರಲನೇರಿ
ಹೂ ಗುಲಾಬಿ ಕನ್ನೆಯರು ಮರಣಿಸಿವರು ಕಪ್ಪುದ್ವೀಪದಲ್ಲಿ
ಹೊನ್ನ ದೋಣಿಗಳಲ್ಲಿ ಚಲಿಸುತ್ತಿರುವೆ ನಾನು
ಆಸರೂ ಹರಿವ ನೆರಳನು ಹಿಡಿವ ಪರಿಯೆಂತು ?

೧ ಗಾಂಧಾರಿ ಕುಲ.

ಮಂಜು ತಬ್ಬಿದ ಕನಸ
ಹೊನ್ನ ಜೀಕಲ್ಲಿ
ಬದುಕು ಅರಳುವ ಹೊತ್ತು.
ಕಂಡ ಕನಸುಗಳನ್ನ
ನೆಲಮಾಳಿಗೆಗೆ ದೂಡಿ
ಹಡೆದವರ ನಿಯತಿಗೆ
ತೆತ್ತುಕೊಂಡಾಕೆ
ಕಟ್ಟಿಕೊಂಡದ್ದು
ಕಣ್ಣುಪಟ್ಟಿ.

ಏನಿದ್ದೀತು ಇಂಥ ಚರ್ಯೆಗೆ ಮೂಲ?
ರೂಪು-ರಂಗಿನ ಶೃಂಗಾರದುದ್ಯಾನ
ಬಣ್ಣ ಕರಗುವ ಭೀತಿ ?
ಕಂಡಿರದ ಭವಿಷ್ಯದ ವಾಸ್ತವ
ಭರಿಸಲಾರದ ಅಳುಕು ?
ಲೋಕದ ಕ್ರೂರ ಸ್ವಾರ್ಥ ಕಂಡ
ಕ್ರೋಧೋನ್ಮತ್ತ ನಿರ್ಧಾರ ?

ಏನೇ ಇರಲಿ, ಪರಿಣಾಮ ಒಂದೇ

ಕಣ್ಣ ಹಸಿಗಳ ಹಾಗೆ
ಕಣ್ಣ ಕಿಡಿಗಳೊ
ಅಡಗಿದವು ಬಟ್ಟೆ ಪದರಗಳಲ್ಲಿ.

ಅಂತಃಪುರದೊಳಗೆ
ಕಾಲಂದುಗೆ ಕೈಬಳೆನಾದ
ಪನ್ನೀರ ಗಮಗಮದ
ಅಡಿಯಲ್ಲಿ ಹುದುಗುವ
ಸ್ವಂತದ ಪ್ರೇತಗಾಳಿ.

ಹರಯದ ಮೂಲೆಗಳ ಮೇಲೆ
ಚಂದ್ರಕಾಂತದ ಹಾಸು
ಬೆಳಕು ಕಾಣದ ಯಾತನೆ
ವಾಸನೆ ಹರಡದಿರಲೆಂದು
ಊದುಬತ್ತಿಯ ಕಂಪು.

ಕಂಬಗಳು ಪಲ್ಲಕ್ಕಿ ಗೋಪುರ
ಗಳೊಳಗೆ ಪಟ್ಟದರಸಿಯ ಯೋಗ
ರಾಜತ್ವ, ಮಂತ್ರಕೂಟದ ಸಂಚು ಸನ್ನೆ ನಡುವೆ
ಕುಡಿಗಳಿಗೆ ಗದ್ದುಗೆ ದಕ್ಕಿದ ಹಿಗ್ಗು
ವರಿಸಿದವನ ಕುರುಡು
ದ್ವೈಯ ಪ್ರೀತಿಯ ಫಲ
ನೂರು ಹಡೆದರು
ದಕ್ಕಿತೆ ಅಮೃತ ಬಿಂದು ?

ಹಡೆದ ಒಡಲಿಗೆ
ಫಲವೆ ವಿಷವಾಗಿ ಉರಿಸಿ
ಮುಸ್ಸಂಜೆಯಲ್ಲಿ
ಬಟ್ಟೆ ಹಿಂದೆಯೇ ಬಿಳುಪೇರಿದ ಕಣ್ಣು
ದಾರಿ ಕಾಣದಾಗಿ
ತಬ್ಬಿದ್ದು ವಾನಪ್ರಸ್ಥದ ಕಾಡುಗಿಚ್ಚನ್ನ

ತಿರಿಪೇ ಹುಟ್ಟಿದ ಕಣ್ಣಿಗೆ
ತಾನೆ ಪಟ್ಟಿ ಕಟ್ಟಿ
ಯಾತನೆಗೆ ಮೈ ಕೊಡುವ
ಗಾಂಧಾರಿ ಕುಲಕ್ಕೆ
ಪಾತಿವ್ರತ್ಯದ ಪ್ರಶಸ್ತಿ,
ಮಮತೆ–ಮರುಕವೆ
ಊರುಗೋಲಾಗಿ
ಹೊಸದಾಗಿ ಕಲಿತ
ಕುಸುಡು ನಡಿಗೆಯ ಹಿಗ್ಗು.

೨ ರಸವಾಗದ ಹನಿಗಳು.

ಸಿಡಿವ ನೆತ್ತಿ, ಬಿರಿವ ಬೊಬ್ಬೆ
ಯೊಡೆದಂಗಾಲು, ನಡುವೆ
ಉರಿವ ಅಗ್ನಿ ಕುಂಡ.
ಕೂಗಲೂ ತೆರೆಯಲಾಗದ ಬಾಯಿ.
ಕಣ್ಣು- ಮುಚ್ಚಿದರು ತೆರೆದರು
ಒಂದೇ ಸ್ಥಿತಿ- ಬತ್ತಿದೆ ಬೆಳಕು.

ವೈಟಮಿನ್ನು ಟಾನಿಕ್ಕು
ರಾಶಿಬಾಟಲು ರಕ್ತ
ತಂದು ತುಂಬಿಸಿದರೂ
ಇನ್ನು ಅರಳಲಾರದ ಮೈಗಳು
ತುಡಿಯಲಾರದ ಎದೆಗಳ ಸುತ್ತ
ಸುರಿದಿದೆ ಹರಿದಿದೆ
ಕೊನೆಯೆ ಕಾಣದ ಮಳೆ.

ಕಟವಾಯ ತೂಸೊಗೆಪ
ಪಂತದಾಘಾಟ ಗುಡುಗು
ಮಿಂಚುನಾಲಿಗೆ ಹರಿತ ಹೊಳಪು.
ಭರ್ಜರಿ ಶಬ್ದದ ಡೋಲು ಬಡಿಯುತ್ತಿದೆ
'ಎಚ್ಚರಾಗಿ' ಜನರೆ 'ಎಚ್ಚರಾಗಿ'

ಹಸಿವು ಮುಚ್ಚಿ, ಕಣ್ಣು ಮುಚ್ಚಿ
ಪೈಮರೆತ ಜೋಮನಿಗೆ
ಕಿವಿಯ ತುಂಬಿತು ಶಬ್ದ
'ರಾಗಿ' 'ರಾಗಿ' !

ಅಂಬಲಿ, ಮುದ್ದೆ, ರೊಟ್ಟಿ
ರಾಶಿಯೊಟ್ಟಿದ ಚಿತ್ರ
ಕನಸು ಕಣ್ಣಲಿ ಕಟ್ಟಿ
ಬಿಡಲಾರದೆ ಬಿಟ್ಟ ಕಣ್ಣು.

ಮೊಳಕೈ ನೆಲಕ್ಕೆ ಆಸರೆ ಕೊಟ್ಟು
ಹೇಗೋ ತಲೆಯೆತ್ತಿದ್ದಾಗ
ಕಂಡಿತು ಮೈಕ್ರೋಫೋನು.
ಮುಂದೆ ನೆರೆದ ಬಾಯ್ಗಳ ಜಾತ್ರೆ
ಮತದ ಭಿಕ್ಷಾಪಾತ್ರೆ
ಹಿಡಿದ ಹಿಂಡಿನ ಯಾತ್ರೆ.

ಹಳಸಿದುಗುಳಿನ ಎರಚು
ಬಿಟ್ಟ ಬಾಯಿಗಳ
ನೆನೆಯದಂಗುಳದೊಳಗೆ
ಸಿಡಿಸುವ ರಸವಾಗದ ಹನಿಗಳು.

● ಸುಮಿತ್ರ

ಹೊಸ ಓದು

"ಅವಧ"

● ಲೇ : **ಕೆ. ವಿ. ತಿರುಮಲೇಶ್**
ಅಕ್ಷರ ಪ್ರಕಾಶನ, ಸಾಗರ

'ಅವಧ' ತಿರುಮಲೇಶ್ ಅವರ ಐದನೆಯ ಕವನ ಸಂಕಲನ, ಈಗಾಗಲೇ "ಮುಖವಾಡಗಳು" "ವಠಾರ" "ಮಹಾಪ್ರಸ್ಥಾನ" ಮತ್ತು "ಮುಖಾಮುಖಿ" ಕವನ ಸಂಕಲನಗಳನ್ನು ಪ್ರಕಟಿಸಿದ್ದಾರೆ. ಅವಧ ೧೬೫ ಪದ್ಯಗಳ, ೨೪೦ ಪುಟಗಳ ವ್ಯಾಪ್ತಿಯುಳ್ಳ ಕವನ ಸಂಕಲನ. ಬಹುಶಃ ಹೊಸಗನ್ನಡ ಕವಿಗಳಲ್ಲಿ ಅಖಂಡಕಾವ್ಯಗಳನ್ನು ಬಿಟ್ಟರೆ, ಸ್ವರಚಿತ ಬಿಡಿ ಕವನಗಳನ್ನು ಒಬ್ಬನೇ ಕವಿ ಒಂದೇ ಕಾಲಕ್ಕೆ ಇಷ್ಟು ದೊಡ್ಡ ಗಾತ್ರದಲ್ಲಿ ತಂದಂತಿಲ್ಲ. ಆ ದೃಷ್ಟಿಯಿಂದ ಇದೊಂದು ವಿಶೇಷ ಪ್ರಯತ್ನವಾಗಿದೆ.

ವಿಷಯ ವೈವಿಧ್ಯ, ಅಭಿವ್ಯಕ್ತಿಯ ರೀತಿಗಳಲ್ಲಿ, ಅನೇಕ ಕಡೆ ಹೊಸ ಪ್ರಯೋಗಗಳ ಪ್ರಯತ್ನ ಕಂಡುಬರುತ್ತದೆ. 'ಅವಧ' ಕವನ ಸಂಕಲನ ಬರುತ್ತಿರುವ ಸಾಹಿತ್ಯಿಕ ಸಂದರ್ಭವೂ ಕನ್ನಡಕಾವ್ಯ ಪರಂಪರೆಯಲ್ಲಿ ಒಂದು ವಿಶಿಷ್ಟ ಸನ್ನಿವೇಶವಾಗಿದೆ. ಒಂದು ಕಡೆ ಅಡಿಗರಿಂದ ರೂಪುಗೊಂಡ ನವ್ಯ ಸಂಪ್ರದಾಯ ಪ್ರಸ್ತುತದಲ್ಲಿ ಪುರಾಣದ ಬೇರುಗಳನ್ನು ಶೋಧಿಸುತ್ತ ಸಾವಯವ ಸಮಗ್ರೀಕರಣವುಳ್ಳ ಕಲಾತ್ಮಕ ಪ್ರತಿಮಾ ನಿರ್ಮಾಣದಲ್ಲಿ ತೊಡಗಿ ಒಂದು ನಿಲುಗಡೆಗೆ ನಿಂತಾಗ, ಇನ್ನೊಂದು ಕಡೆ ಸಮೂಹದ ಮೇಲೆ ಹೆಚ್ಚು ಒತ್ತುಕೊಟ್ಟು ಹಿಂದೆಂದೂ ಕೇಳದ ಹೊಸ ದನಿಗಳಿಗೆ ನುಡಿಗೊಡುವ ಬಂಡಾಯದ ಪ್ರಯತ್ನ ಮುಂದುವರಿಯುತ್ತಿರುವುದು ಕಂಡುಬರುತ್ತದೆ. ಇಂಥ ಸಂದರ್ಭದಲ್ಲಿ ನಿಂತು ತಿರುಮಲೇಶ್ ಅವರ "ಅವಧ" ಅಂಥ ಯಾವುದೇ ಘೋಷಿತ ನಿಲುವಿಗೆ ಬದ್ಧವಾಗದೆ 'ನಿರ್ಲಿಪ್ತ' ನಿರುದ್ವಿಗ್ನ ನೆಲೆಯಲ್ಲಿ ನಿಂತು ತನ್ನ ಅನುಭವಗಳನ್ನು ಹಿಡಿಯಲು ಪ್ರಯತ್ನಿಸುತ್ತದೆ.

ಇಷ್ಟು ದೊಡ್ಡ ಸಂಖ್ಯೆಯ ಬಿಡಿ ಕವನಗಳ ಆಳದಲ್ಲಿ ಕನ್ನಡ ಕಾವ್ಯಕ್ಕೇ ಹೊಸದಾದ ಅಂಶಗಳೇನಾದರೂ ಇದೆಯೇ ? ಅಥವಾ ಕನ್ನಡ ಕಾವ್ಯ ಪರಂಪರೆಗೆ ಈ ಕವಿಯ ಹೊಸ ಸೇರ್ಪಡೆ ಏನೆಂಬುದನ್ನು ಕುರಿತು ಯೋಚಿಸುವುದು ಕೂತೂಹಲಕರವಾಗುತ್ತದೆ. ಮುಖ್ಯವಾಗಿ ಇಲ್ಲಿ ಕಂಡು ಬರುವ ಅಂಶಗಳೆಂದರೆ:

೧) ಗತಿಸಿಹೋಗುತ್ತಿರುವ ಕಾಲದ ಚಲನೆಯನ್ನು ಗುರುತಿಸುವುದು.
೨) ಇಂದ್ರಿಯಗಳಿಗೆ ಎಟುಕದೆ ಉಳಿಯುವ ಅಂಶಗಳನ್ನು ಕುರಿತ ಬೆರಗು.
೩) ರತಿಭಾವದ ಪರಿವೀಕ್ಷಣೆ ಮತ್ತು ತಲ್ಲಣಗಳು.
೪) ಪ್ರಸ್ತುತದಲ್ಲಿ– ಪರಂಪರೆಯನ್ನು ಮುಖಾಮುಖಿಯಾಗಿಸಿ ಅರ್ಥೈಸಿಕೊಳ್ಳುವ ಪ್ರಯತ್ನ ಮುಂತಾದವು.

ಕಾಲದ ಚಲನೆಯನ್ನು ತಿರುಮಲೇಶ್ ಅವರು ಗುರುತಿಸುವ ರೀತಿ ಎರಡು ಬಗೆಯದಾಗಿದೆ. ಒಂದು ; ನಿಸರ್ಗದಲ್ಲಾಗುವ ಋತು ಬದಲಾವಣೆಗಳಿಂದ. ಎರಡು : ಜೀವನದ ಸಂದರ್ಭಗಳಲ್ಲಿ ಕಂಡುಬರುವ ವ್ಯತ್ಯಾಸ, ವೈರುಧ್ಯಗಳ ಹೋಲಿಕೆಯಿಂದ.

"ಮಳೆಗೊಮ್ಮೆ ಪ್ರಳಯ ಬೇಸಿಗೆಗೊಮ್ಮೆ ಕ್ಷಾಮ
ಚಲಿಸುತಲಿತ್ತು ಹೀಗೆ ಕಾಲಕ್ರಮ
ತತ್ತರಿಸುತಲಿತ್ತು ಗ್ರಾಮ" (ಒಂದು ಗ್ರಾಮದ ಮುಖಗಳು)

"ಆದರೂ ಮುಂದಿನ ವರ್ಷ
ಚಿನಾರ್ ಮರಗಳ ತುಂಬ
ಮತ್ತೆ ಹೂ ಬಿಡುವುವು
ಇನ್ನೊಮ್ಮೆ ಹಿಮದಿಂದ ಮುಚ್ಚುವುವು
ಆಗ ನೀನಿರುವುದಿಲ್ಲ" (ಪ್ರಿಯದರ್ಶಿನಿ)

"ಚಳಿಗಾಲದಲ್ಲಿ ಹಾರಿಹೋದ ಹಕ್ಕಿಗಳು
ವಸಂತದಲ್ಲಿ ಮರಳುವುವು
ಆಗ ಮರಗಳು ಇಷ್ಟು ಕಾಲದ
ಮೌನ ಮುರಿಯುವುವು" (ಮರಗಳು)

"ಈ ಸೇತುವೆ, ಈ ನೀರು, ಇಲ್ಲಿ ಈ ನಿಮಿಷ

ಒಟ್ಟಿಗೆ ಬಂದು ನಿಂತ ಈ ಸಾವು
ಖಾಲಿ ಬೀಯರು ಡಬ್ಬದ ಹಾಗೆ
ಕೆಳಗಿನ ಇಳುಕಲಿನಲ್ಲಿ ಮರೆಯಾದರೆ
ಎಷ್ಟು ಖುಷಿ !
– ಎಂದಳು ಅವಳು. (ಥೇಮ್ಸ ನದಿಯ ಮೇಲೆ)

ಇಂಥ ಉದಾಹರಣೆಗಳಲ್ಲದೆ "ಆನೆಗಳು ಎರಡು ವಿಧ" ಕವನದಲ್ಲಿ ಕಾಡಾನೆ- ನೀರಾದಗಳ ಸಂಕೇತದಲ್ಲಿ ಕಾಲದ ಚಲನೆಯಿಂದ ವಿಕಾಸಗೊಂಡ ಜೀವಿಗಳ ಪರಿ, ಜಡಗೊಂಡು ಸ್ಥಾವರವಾಗುವ ಬಗೆಯನ್ನು ಚಿತ್ರಿಸಿದ್ದಾರೆ.

'ರೂಪಮಹಲಿನ ರಾಣಿ' 'ಭಾಗ್ಯ ನಗರ'ದ ನರ್ತಕಿ' 'ಸೋಮವಾರದಗಾಡಿ' ಮೊದಲಾದ ಕವನಗಳಲ್ಲಿ ಗೋಲ್ಕೊಂಡ- ಫಲಕ್‌ನುಮಾದ ಮೇಲಿಂದ ಬೀಸಿ ಬರುವ ಗಾಳಿಯಲ್ಲಿ ಅಂದಿನ ಸುಲ್ತಾನರ ದರ್ಬಾರು, ಕೋಟಿಕೊತ್ತಲ ಬುರುಜು, ತೋಪಖಾನೆ, ಸೇನೆ ಅಂತಃಪುರಗಳ ನೆನಪಿನಿಂದ ಆ ಕಾಲವನ್ನು ಪುನಃಸೃಷ್ಟಿಸಲು ಪ್ರಯತ್ನಿಸುವ ಕವಿ ಮೆಸೋಪೊಟೆಮಿಯಾದ ದೊರೆ 'ಅಖಿಟೋಪ', ಕೈರೋದ ತುತಂಖಮುನ್, ಬಾಬರ್ ತುಘ್ಲಕ್ ಮೊದಲಾದ ದೊರೆಗಳ ಇತಿಹಾಸವನ್ನು ನೆನೆದು, ಕಾಲದ ಚಲನೆಯಲ್ಲಿ ಇಂಥ ಸುಲ್ತಾನರ ಸಾಮ್ರಾಜ್ಯಗಳ ಪಾಡೇನೆಂದು ಚಿಂತಿಸಲು ತೊಡಗುತ್ತಾರೆಃ

"ಮತ್ತೆ ಬೆಳಗಾಯಿತು ?
ವರ್ಷಗಳು ಉರುಳಿದುವೆ ?
ಕೆತ್ತಿರುವುದೇ ಚರಿತ್ರೆ ?
ಹೇಳೀಗ ನಮ್ಮ ಮೆಚ್ಚಿನ ಅಖಿಟೋಪನೆಲ್ಲಿ ?" (ಅಖಿಟೋಪ)

"ಬಯಲ ನಡುವೆ ನಿಂತು
ಕಲ್ಪಿಸುವೆನು ನಾನು
ನನ್ನ ಪೂರ್ವಜರು ನಡೆದ
ಕೆಂಪು ಮಣ್ಣಿನ ದಾರಿ
ಕಾಯುವುದು ನನ್ನ ಸರದಿ" (ಗ್ರಾಮ : ಒಂದು ಭೇಟಿ)

ಇಂಥ ಕವನಗಳಲ್ಲಿ ಕವಿ ಕಾಲದ ಅನಂತವಾದ, ಅದ್ಭುತವಾದ ಪ್ರವಾಹಗತಿಯಲ್ಲಿ ಮನುಷ್ಯನ ಬದುಕಿನ ಅನಿತ್ಯತೆಯನ್ನು ಗುರುತಿಸಿ ವಿಸ್ಮಯ ಪಡುವಂತಿದೆ. ತಿರುಮಲೇಶರ ಅನೇಕ ಕವನಗಳಲ್ಲಿ ಒಂದು ಬಗೆಯ ಬೆರಗು ಅಥವಾ ವಿಸ್ಮಯ ಆಳದಲ್ಲಿ ಲಾಳಿಯನ್ನು ಹಾಕುವಂಥ ಅನುಭವವಾಗುತ್ತದೆ. ಆದರೆ ಈ ಬೆರಗು ನಮ್ಮ

ಅನುಭಾವಿ ಕವಿಗಳು ಅನುಭವಿಸಿದ ನಿಬ್ಬೆರಗಲ್ಲ; ಅಥವ ಬೇಂದ್ರೆ, ಮಧುರಚೆನ್ನ ವನಾಪ್ತಿ, ಎಕ್ಕುಂಡಿಯಂಥವರ ಬೆರಗೂ ಅಲ್ಲ. ಇದು ಕವಿಯ ಪಂಚೇಂದ್ರಿಯಗಳ ಪರಿಧಿಯಲ್ಲೇ ತತ್ಕ್ಷಣದ ಮಾಂತ್ರಿಕತೆಯಲ್ಲಿ ಉಂಟಾಗುವ ವಿಸ್ಮಯ. ಆದರೆ ಇದೇ, ಕವಿಯ ಕಥು ವರ್ಣನಕ್ಕೆ ದಾರಿ ಮಾಡಿಕೊಟ್ಟಾಗ ಏನಾಗುತ್ತದೆ ನೋಡಬೇಕು.

ಇದು ಬಾಲ್ಯದಲ್ಲಿ ಕುತೂಹಲ ಕೆರಳಿಸಿ ಕತೆ ಹೇಳುತ್ತಿದ್ದ ಫಕೀರಪ್ಪನೆಂಥವನ ನಿಗೂಢ ಸಾವು, ಕಲೀಜ ಎಂಬ ಸಣ್ಣ ಹುಡುಗಿ ಮೀನು ತರಲು ಪೇಟೆಗೆ ಹೋಗಿ ಕೊನೆಗೂ, ಮನೆಗೆ ಬಾರದೆ ತಂದೆಗೆ ಉಂಟು ಮಾಡಿದ ವ್ಯಾಕುಲತೆ. ಹೈದರಗುಡ್ಡದಲ್ಲಿದ್ದ ಪೈದ ಬೈರಾಗಿಯ ರಾಗಿಯಿಂದ ಮೌನ ಮುರಿದದ್ದು, ಸಿಕಂದರಬಾದಿನಲ್ಲಿ ಮೂಟೆ ಹೊರುವವ ಕಣ್ಮರೆಯಾದದ್ದು, ಅಖ್ತರ್ ಹುಸೇನನ ಇಚ್ಛಾಮರಣ ಶಕ್ತಿ, ಖರ್ಬೂಜದ ಗಾಡಿ ಜನನಿಬಿಡ ಬೀದಿ ತಿರುವಿನಲ್ಲಿ ಕಣ್ಮರೆಯಾದ ನೆನಪು, ಎಂದೆಂದೂ ಮುಗಿಯದ ಕತೆ. ಎಲ್ಲಿ ಹೋದಳು ನಮ್ಮ ಅಡಗೋಲಜ್ಜಿ, ಮುಂತಾದ ಕವನಗಳು ಕವಿಯ ಮನಸ್ಸಿನ ಒಳತಳದಲ್ಲಿರುವ ವಿಸ್ಮಯಕರ ಬಾಲ್ಯದ ಅನುಭವಗಳನ್ನು ಬೆರಗಿನಲ್ಲಿ ಶೋಧಿಸುವಂತಿವೆ. ಬಹುಶಃ ತಿರುಮಲೇಶ ಅಂಥ ಕವಿಗಳ ಮೂಲಕ, ನವ್ಯೋತ್ತರಕಾವ್ಯ ತಾನು ಕಳೆದು ಕೊಂಡಿದ್ದ ನವೋದಯ ಕಾಲದ ಮಾಂತ್ರಿಕತೆಯನ್ನು ಮತ್ತೆ ಪಡೆದುಕೊಳ್ಳಲು ಪ್ರಯತ್ನಿಸುವಂತಿದೆ.

ತಿರುಮಲೇಶ್ ಅವರ ಕವನಗಳಲ್ಲಿ ರತಿಭಾವ, ಅಥವ ಪ್ರಣಯದ ಅನುಭವ, ಅದೊಂದು ಆಳದಲ್ಲಿ ಕಲಕುವ ಅದಮ್ಯಶಕ್ತಿಯಾಗಿ ಕಾಡದೆ, ನವುರಾದ ನೆನಪಿನ ಪರಿವೀಕ್ಷಣೆ ಯಾಗಿ ಕಾಣಿಸಿಕೊಳ್ಳುತ್ತದೆ. ಆದರೆ ಅದು ವ್ಯಕ್ತವಾಗುವ ರೀತಿ ಯಾವುದೇ ಸಂಕೋಚ ಮುಜುಗರಗಳಿಲ್ಲದೆ ಸಹಜ ಗತಿಯಲ್ಲಿವೆ. ಅದು ಮಂಡಿಯಲ್ಲಿ ಕಂಡ ಯಾವುದೋ ಹೆಣ್ಣಾಗಿರಬಹುದು, (ಮಂಡಿಯಲ್ಲಿ ಕವಿ) ಬ್ರೈಟನ್‌ನಲ್ಲಿ ಸ್ನೇಹಿತನೊಂದಿಗೆ ಮದ್ಯಪಾನ ಮಾಡುತ್ತ ಹೆಣ್ಣನ್ನು ಇನ್ನೊಂದು ಪಾರ್ಶ್ವದಲ್ಲಿ ನೋಡುವ ಕುತೂಹಲವಾಗಬಹುದು (ಕವಿತೆ) ಶನಿವಾರದ ಸಂತೆಯಲ್ಲಿ ಗಿರಾಕಿಗೆ ಕಾಯುತ್ತ ನಿಂತ ಬಲಿತ ಮೊಲೆಯ ತರುಣಿ ಯಾಗಿರಬಹುದು (ಶನಿವಾರ ಸಂತೆ: ರೀಡಿಂಗ್) ತಿರುವನಂತಪುರದಲ್ಲಿ ಮಳೆ ಸಂಜೆ ಮೊಳಕಾಲವರೆಗೆ ಸೀರೆ ಎತ್ತಿ ಚರ್ಚಿಸುತ್ತಿದ್ದ ಹೆಣ್ಣಿನ ನೆನಪು ಹೈದ್ರಾಬಾದಿನಲ್ಲಾಗ ಬಹುದು. (ನಿಕರಾಗುವಾ: ಪಾಪ ಜೋಥೆ) ಅಹಲ್ಯೆ, ರಾಜಾರವಿವರ್ಮನ ಹೆಂಗಸರು, ನಟಿ ಮೂನ್ ಮೂನ್‌ಸೇನ್. ತಾನು ಪ್ರೀತಿಸಿದ ಹುಡುಗಿಯರು, ಕ್ಲಬ್‌ನಲ್ಲಿ ನಗ್ನ ಳಾಗಿ ಮಲಗಿರುವ 'ವಿವಿಯನ್' ಮೊದಲಾದ ಕವನಗಳಲ್ಲಿ ಝಳವನ್ನು ತಾಗಿಸಿಕೊಳ್ಳದೆ "ಸುಂದರ ನಿಮಿಷಗಳಲ್ಲಿ ರೆಪ್ಪೆ ಮುಚ್ಚದೆ" ಪರಿವೀಕ್ಷಿಸುವ ಬಗೆಯದಾಗಿದೆ.

ಪುರಾಣವನ್ನು, ಪರಂಪರೆಯನ್ನು ಮುಖಾಮುಖಿಯಾಗಿಸಿ ಅರ್ಥೈಸಿಕೊಳ್ಳುವ ಪ್ರಯತ್ನ ತಿರುಮಲೇಶರ ಕೆಲವು ಕವನಗಳಲ್ಲಿ ಕಂಡುಬರುತ್ತದೆ. ಅವುಗಳ ಹಿಂದೆ ನವುರಾದ ಹಾಸ್ಯ ವಿಡಂಬನೆ ಕ್ರಿಯಾಶೀಲವಾಗಿರುವಂತೆ ಕಂಡುಬರುತ್ತದೆ. 'ಹೃಷಿಕೇಶಕ್ಕೆ' 'ಭೋಟಿವಾಲ' 'ಹರಿದ್ವಾರ' ಮುಂತಾದುವುಗಳಲ್ಲಿ ನಮ್ಮ ಋಷಿಪರಂಪರೆ, ತೀರ್ಥಯಾತ್ರೆಗಳನ್ನು ವಿಮರ್ಶೆಗೆ ಗುರಿಪಡಿಸಿ ಆತ್ಮ ವ್ಯಂಗದಲ್ಲಿ ಪರಿಭಾವಿಸುತ್ತಾರೆ;

"ಎಲಲ ಯಾರಿವನ ವಲಲ ! ಇವನೆ ಭೋಟಿವಾಲ
ಕುಳಿತಿರುವವನು ನೋಡಿ ಹಾಕಿ ಜನರಿಗೆ ಮೋಡಿ
ಮೈಯೆಲ್ಲ ಬಣ್ಣದ ಹಿಟ್ಟು ಸೆಟೆದು ನಿಂತಿದೆ ಜುಟ್ಟು
ಸೊಂಟದಲ್ಲಷ್ಟೇ ಬಟ್ಟೆ ಉಳಿದುದೆಲ್ಲವೂ ಹೊಟ್ಟೆ
ಜೀವಂತ ಜಾಹೀರು ಖಾನಾವಳಿ ಎದುರು"

(ಹೃಷಿಕೇಶಕ್ಕೆ)

"ಅವಧೂತನೆ ದೇವರ ಅತಿಕೊನೆಯ ದೂತನೆ
ಮಹಾತ್ಮನೆ ಸಾಕ್ಷಾತ್ ಪರಮಾತ್ಮನೆ ನಮಸ್ಕಾರ
ದಾಟಿಸುವೆಯ ನನ್ನ ಗಂಗಾನದಿಯ ಪಾರ ?

(ಭೋಟಿವಾಲ)

ಮುಂತಾದ ಕವನಗಳನ್ನು ಹೆಸರಿಸಬಹುದು.

ಈ ಸಂಕಲನದ 'ಅವಧ' ದಂಥ ಕೆಲವು ಗಂಭೀರ ಪದ್ಯಗಳ ಮಧ್ಯೆ ನಿಜವಾಗಿಯೂ ತಿರುಮಲೇಶ್ ಅವರ ಕಾವ್ಯದ ಸಹಜಗತಿಯನ್ನು ತೋರಿಸುವ ಪದ್ಯಗಳೆಂದರೆ: ಫಕೀರಪ್ಪನ ಕತೆ, ಮರಿಕಿಶಾಚಿ ಪದ್ಯ, ಈಚಲಮರದಡಿ, ಎಂದೆಂದೂ ಮುಗಿಯದ ಕತೆ, ಎಲ್ಲಿ ಹೋದಳು ನಮ್ಮ ಅಡಗೋಲಜ್ಜಿ, 'ಭೂತವೂ ಬಡಗಿಯೂ' ಆಗಿವೆ. ಮೇಲುನೋಟಕ್ಕೆ ಅವು ಮಕ್ಕಳ ಪದ್ಯಗಳಂತೆ ಕಂಡರೂ ಸಹಜ ಕವನಗಳಾಗಿವೆ. ಇವು ಗಳ ಆಳದಲ್ಲಿ ನಮ್ಮ ಅನೇಕ ನವೋದಯ ಕಾವ್ಯದ ಜನಪ್ರಿಯಲಯಗಳು ಸುಳಿ ಯುವುದು ಕಂಡುಬರುತ್ತವೆ.

ಭಾಷೆಯ ದೃಷ್ಟಿಯಿಂದ ತಿರುಮಲೇಶ್ ಅವರ 'ಗದ್ಯಲಯ' ಅನೇಕಸಾರಿ ತುಂಬ ಸರಳತೆಯ ಚಲನೆಯನ್ನು ತಂದುಕೊಂಡು ಕಾವ್ಯದ ಅನುಭವವನ್ನು ಕೊಡುವಲ್ಲಿ ಸೋಲುವಂತೆ ಕಂಡುಬರುತ್ತದೆ. ಹವ್ಯಾಸಕ್ಕಾಗಿ ಬರೆದಂತಿರುವ ಕೆಲವು ಕವನಗಳೂ ಈ ಸಂಕಲನದಲ್ಲಿ ಸೇರಿ ಅವರ ಉತ್ತಮ ಕವನಗಳ ಗುಣಮಟ್ಟವನ್ನು ಸಂಪಾದನೆ

ಯ ಮೂಲಕ ಕೆಳಗಿಳಿಸುತ್ತವೆ.

ಇಂಥ ಕೆಲವು ಅಡಚಣೆಗಳ ನಡುವೆಯೂ 'ಅವಧ'ದ ಮೂಲಕ ತಿರುಮಲೇಶ್ ಅವರು ಕನ್ನಡ ಕಾವ್ಯವು ತಾನು ಕಳೆದುಕೊಂಡಿದ್ದ ವಿಸ್ಮಯದ ಸೆಲೆಯನ್ನು ಪಡೆದುಕೊಳ್ಳುವಂತೆ ಮಾಡಿದ್ದಾರೆ. ಇನ್ನೊಂದು ವಿಶೇಷವೆಂದರೆ: ಹೈದರಾಬಾದು, ಮತ್ತು ಉತ್ತರ ಹಿಂದುಸ್ಥಾನದ, ಇಸ್ಲಾಂ ಸಂಸ್ಕೃತಿಯ ಪಟ್ಟ ಅನುಭವವನ್ನು ಕನ್ನಡ ಕಾವ್ಯಕ್ಕೆ ಹೊಸದಾಗಿ ತಂದಿರುವುದಾಗಿದೆ.

ಪ್ರಭುಸ್ವಾಮಿ ಮಠ.

ಸಂಪಾದಕರ ಟಿಪ್ಪಣಿಗಳು

ಜೀವ ಪರಿಸರದ ಪುಟಗಳು.

ಜೀವವುಳಿಸುವ ನೀರು.

ಈ ಸೌರವ್ಯೂಹದಲ್ಲಿ ನೀರು ಗಮನಾರ್ಹ ಪ್ರಮಾಣದಲ್ಲಿರುವ ಗ್ರಹವೆಂದರೆ ಭೂಮಿಯೊಂದೇ. ಭೂಗ್ರಹದ ಹತ್ತನೇ ಏಳು ಭಾಗವನ್ನು ನೀರು ಆವರಿಸಿದೆ. ಆದರೆ ಯಾವ ನೀರಿನಲ್ಲಿ ಮೊದಲು ಜೀವವುದಿಸಿತೋ ಯಾವ ನೀರಿನ ಮೇಲೆ ಎಲ್ಲ ಪ್ರಾಣಿಗಳ ಅಸ್ತಿತ್ವವೂ ನಿಂತಿದೆಯೋ ಆ ನೀರು ನಮಗೆ ಒಂದು ಬಾರಿ ಮಾತ್ರ ಕೊಡಲ್ಪಟ್ಟಿದೆ. ಮತ್ತೆ ಬೇಕೆಂದರೆ ಇಲ್ಲ.

ಎಲ್ಲ ಕಲ್ಮಷಗಳ ಉತ್ಪಾದನೆಗೆ ಕಾರಣನಾದ ಮನುಷ್ಯನು ಇಂಥ ಜೀವವುಳಿಸುವ ಸಮುದ್ರವನ್ನು ತನ್ನ ಸುತ್ತಲಿನ ಇಡೀ ವಾತಾವರಣವನ್ನು ವಿನಾಶದ ಅಂಚಿಗೆ ತಂದ ಕಾಲವೆಂದು ಇತಿಹಾಸ ನಮ್ಮ ಯುಗವನ್ನು ಗುರುತಿಸಲಿದೆ. ಕೈಗಾರಿಕೆಗಳು ತಮ್ಮ ಕಶ್ಮಲದಿಂದ ನದಿ ಮತ್ತು ಸಾಗರಗಳನ್ನು ವಿಷಮಯವಾಗಿ ಮಾಡುತ್ತಿವೆ. ಮೀನುಗಾರಿಕೆಯ ಹಕ್ಕುಗಳ ಬಗೆಗೆ ಖಚಿತವಾದ ಅಂತರಾಷ್ಟ್ರೀಯ ನಿಯಂತ್ರಣಗಳಿಲ್ಲ. ಇದೆಲ್ಲದರಿಂದ ನಾವು ಮುಂಬರುವ ತಲೆಮಾರುಗಳ ಹುಟ್ಟು ಹಕ್ಕುಗಳನ್ನು ಹಿಚುಕಿಹಾಕುತ್ತಿದ್ದೇವೆ.

ಈ ಹುಟ್ಟು ಹಕ್ಕುಗಳ ಪಟ್ಟಿಯಲ್ಲಿ ಮೋಹಕವಾದ ಅದ್ಭುತ ದ್ವೀಪಗಳಿವೆ. ಶತ ಶತಮಾನಗಳಿಂದ ಸಾಮಾನ್ಯವಾದ ಮತ್ತು ಅಪೂರ್ವವಾದ ಸಸ್ಯಗಳು, ಪ್ರಾಣಿಗಳು ಪಕ್ಷಿಗಳು ಮತ್ತು ಜಲಚರಗಳಿಗೊಂದು ಆಶ್ರಯಸ್ಥಾನವಾಗಿ ಸಮುದ್ರದಲ್ಲಿದ್ದ ಈ ಹೆಮ್ಮೆಯ ಜೀವದಾಣಗಳೂ ಈಗ ವಿನಾಶದ ಅಂಚಿನಲ್ಲಿದ್ದು ಅವುಗಳ ರಕ್ಷಣೆಗೆ ಗಮನ ಕೊಡಬೇಕಾಗಿದೆ.

ಹೇಗಿದ್ದೂ ಈ ಎಲ್ಲ ಸಂಕಷ್ಟಗಳಿಗೆ ನಾವು ಯಾವ ತಂತ್ರಜ್ಞಾನವನ್ನು ಹೂಡುತ್ತೇ

ವೆಂಬುದೇ ಆ ತಂತ್ರಜ್ಞಾನವೇ ಪರಿಸರ ಮಾಲಿನ್ಯವನ್ನು ತಡೆಗಟ್ಟುವ ಅತ್ಯುತ್ತಮ ಆಯುಧವಾಗಿದೆ. ಯಾಕೆಂದರೆ ಮನುಷ್ಯನನ್ನೂ ಪ್ರಕೃತಿಯನ್ನೂ ಸಂಕಷ್ಟಕ್ಕೊಡ್ಡಿರುವುದು ಕೇವಲ ವಿಜ್ಞಾನ ಮತ್ತು ಕೈಗಾರಿಕೆಗಳ ಬೆಳವಣಿಗೆಯಲ್ಲ. ಆದರೆ ಆ ಬೆಳವಣಿಗೆಯ ಹಿನ್ನೆಲೆಯಲ್ಲಿರುವ ಅಡ್ಡಾದಿಡ್ಡಿ ಚಿಂತನಾರಹಿತ ಮನಸ್ಸು.

ಕ್ಯಾಪ್ಟನ್ ಜಾಕ್ವೆಸ್ ಯೆವ್ಸ್ ಕೂಸ್ಟ್ಯೂ
ಸಾಗರದಾಳದ ಸಂಶೋಧಕ
ಕೃತಕ ಉಸಿರಾಟ ಉಪಕರಣದ ಜನಕರಲ್ಲೊಬ್ಬ
ನಿಸರ್ಗದ ಲಯಕ್ಕೆ ಜೀವದ ತಾಳ

ಸಮುದ್ರ ತೀರದಲ್ಲಿ ವಾಸಿಸುವ ಜೀವಿಗಳಲ್ಲಿ ಅಲೆಗಳ ಏರಿಳಿತಕ್ಕೆ ತಕ್ಕಂತೆ ತಮ್ಮ ಬದುಕಿನ ಎಲ್ಲ ಆಗು ಹೋಗುಗಳನ್ನು ಒಗ್ಗಿಸಿಕೊಳ್ಳುವ ಪ್ರಾಕೃತಿಕ ಸ್ವಭಾವವಿರುತ್ತದೆ. ಕ್ಯಾಲಿಫೋರ್ನಿಯಾದ ಸಮುದ್ರ ತೀರಗಳಲ್ಲಿ ವಸಂತ ಕಾಲದಲ್ಲಿ ಇಂಥದೊಂದು ಅದ್ಭುತ ವೈಚಿತ್ರ್ಯ ಕಾಣುತ್ತದೆ. ಗ್ರುನಿಯನ್ ಎಂಬ ಬೆಳ್ಳಿ ಹೊಳಪಿನ ಐದರಿಂದ ಎಂಟಿಂಚು ಉದ್ದ ಮೀನೊಂದು ಅಲೆಗಳ ಲಯಕ್ಕೆ ತನ್ನ ಜೀವಸೃಷ್ಟಿಯ ಲಯವನ್ನು ಕೂದಲೆಳೆಯಷ್ಟು ವ್ಯತ್ಯಾಸವಿಲ್ಲದೆ ಹೊಂದಿಸಿಕೊಂಡಿರುವುದನ್ನು ಕಾಣಬಹುದು.

ಮಾರ್ಚ್ ತಿಂಗಳಿನಿಂದ ಆಗಸ್ಟ್ ತಿಂಗಳವರೆಗೆ ಪ್ರತಿ ಹುಣ್ಣಿಮೆಯ ನಂತರದ ಎರಡನೇ ಮೂರನೇ ಮತ್ತು ನಾಲ್ಕನೇ ರಾತ್ರಿಗಳಂದು ಭರತವು ಬರತೊಡಗಿದಂತೆ ಗ್ರುನಿಯನ್ ಮೀನುಗಳು ಸಾವಿರ ಸಾವಿರ ಸಂಖ್ಯೆಯಲ್ಲಿ ದಂಡೆಗೆ ಬರತೊಡಗುತ್ತವೆ. ಪ್ರತಿಯೊಂದು ಹೆಣ್ಣು ಮೀನು ತನ್ನ ಗಂಡಿನೊಂದಿಗೆ ಮರಳ ದಂಡೆಯಲ್ಲಿ ತೇಲುತ್ತಾ ಎಷ್ಟು ದೂರ ಸಾಧ್ಯವೋ ಅಷ್ಟು ದೂರ ಹೋಗಿ ಮರಳಿನಲ್ಲಿ ತನ್ನ ಬಾಲವನ್ನು ಹೂಳಿ ಅಂಡಗಳನ್ನು ಬಿಡುಗಡೆ ಮಾಡುತ್ತದೆ. ಗಂಡು ಮರಳಿನಲ್ಲಿ ನಿಂತ ಹೆಣ್ಣಿನ ಸುತ್ತಲೂ ಸುರುಳಿ ಸುತ್ತಿಕೊಂಡು ಅಂಡಗಳ ಮೇಲೆ ಮತ್ತು ಸುತ್ತಲೂ ವೀರ್ಯವನ್ನು ಸುರಿಸಿ ತಕ್ಷಣವೇ ಮರಳನ್ನು ತೊರೆದು ಮರಳಿ ಹೋಗುವ ಅಲೆಗಳೊಡನೆ ನೀರಿಗೆ ನುಸುಳಿಕೊಂಡು ಬಿಡುತ್ತದೆ. ಕೆಲವು ಕ್ಷಣಗಳ ನಂತರ ಹೆಣ್ಣು ಕೂಡ ಗಂಡನ್ನು ಹಿಂಬಾಲಿಸಿ ಸಮುದ್ರದೊಳಗೆ ಹೊರಟು ಹೋಗುತ್ತದೆ. ಈ ಇಡೀ ಪ್ರಕ್ರಿಯೆ ಕೇವಲ ಮೂವತ್ತು ಸೆಕೆಂಡುಗಳಲ್ಲಿ ಮುಗಿಯುತ್ತದೆ.

ಹಸಿಯ ಮರಳಿನಲ್ಲಿನ ಫಲಿತ ಅಂಡಗಳು ಸುಮಾರು ಹತ್ತು ದಿನಗಳವರೆಗೆ ಬೆಚ್ಚಗೆ ಕಾಯುತ್ತವೆ. ಮರಳೇ ಅವುಗಳನ್ನು ಮಾಂಸಾಹಾರಿಗಳಿಂದಲೂ ಕಾಪಾಡುತ್ತದೆ.

ಹತ್ತು ದಿನಗಳ ನಂತರ ಅಮಾವಾಸ್ಯೆಯ ಸನಿಹದಲ್ಲಿ ಕಡಲಿಗೆ ಉಬ್ಬರ ಬಂದಾಗ ಅಲೆಗಳೊಡನೆ ಕೊಚ್ಚಿಕೊಂಡು ಸಮುದ್ರದ ಒಡಲನ್ನು ಸೇರುತ್ತಿರುವಾಗಲೇ ಮೊಟ್ಟೆಗಳೊಡೆದು ಗ್ರುನಿಯನ್ ಮರಿಗಳು ಹೊರಬರುತ್ತವೆ.

ಇದರಲ್ಲಿ ಅದ್ಭುತವಾದ ವಿಷಯವೆಂದರೆ ಕೊನೆಯ ಸೆಕೆಂಡಿನವರೆಗೆ ಪರಿಪೂರ್ಣವಾದ ಗಡಿಯಾರದ ಮುಳ್ಳಿನ ಹಾಗೆ ಚಲಿಸುವಂತೆ ಕಡಲುಬ್ಬರದ ಗತಿಗೆ ಹೊಂದಿಕೊಂಡ ಈ ಮೀನಿನ ಲಯಗತಿಯ– ಸಮಯದ ಪ್ರಜ್ಞೆ; ಇದು ಎಷ್ಟು ಅಚ್ಚುಕಟ್ಟಾಗಿದೆ ಯೆಂದರೆ ಇದರಲ್ಲಿ ಸ್ವಲ್ಪ ಹೆಚ್ಚುಕಡಿಮೆಯಾದರೂ ಈ ಮೀನಿನ ಸಂತಾನವೇ ನಾಶವಾಗಬಹುದು. ಅಲೆಗಳು ಇಳಿಯುತ್ತಿರುವಾಗ ಸಮುದ್ರದಲ್ಲಿ ಮೊಟ್ಟೆಯಿಟ್ಟರೆ ಅವು ಸಮುದ್ರದಲೆಗಳೊಡನೆ ಕೊಚ್ಚಿಕೊಂಡು ಹೋಗುತ್ತವೆ. ಹುಣ್ಣಿಮೆಯ ಭರತಕ್ಕೆ ಬದಲಾಗಿ ಅಮಾವಾಸ್ಯೆಯ ಭರತದಲ್ಲಿ ಮೊಟ್ಟೆಯಿಟ್ಟರೆ ಮತ್ತೆ ಸಮುದ್ರ ಸೇರಲು ಒಂದು ತಿಂಗಳ ಕಾಲ ಕಾಯಬೇಕಾಗುತ್ತದೆ. ಏಕೆಂದರೆ ಅಮಾವಾಸ್ಯೆಯ ಭರತವು ಹುಣ್ಣಿಮೆಯ ಭರತಕ್ಕಿಂತ ಹೆಚ್ಚು ಶಕ್ತಿ ಪೂರ್ಣವಾಗಿರುವುದರಿಂದ ಅಲೆಗಳು ಹೆಚ್ಚು ದೂರ ಹೋಗುತ್ತವೆ.

ಈ ಮೀನಿಗೆ ಇಷ್ಟು ಸೂಕ್ಷ್ಮವಾಗಿ ಕಾಲವನ್ನು ನಿರ್ಧರಿಸುವ ಶಕ್ತಿ ಹೇಗೆ ಬಂತು ಎಂಬ ಬಗ್ಗೆ ಸಂಶೋಧಿಸಿದರೂ ವಿಜ್ಞಾನಿಗಳು ಇದರ ರಹಸ್ಯಭೇದನ ಮಾಡಲು ಶಕ್ತರಾಗಿಲ್ಲ. ಲಕ್ಷಾಂತರ ವರ್ಷಗಳಿಂದ ಕಡಲ ಉಬ್ಬರವಿಳಿತಗಳು ಗ್ರುನಿಯನ್‌ಗಳ ಬದುಕಿನ ಒಂದು ಭಾಗವಾಗಿ, ಪ್ರತಿಯೊಂದು ತಲೆಮಾರೂ ತನ್ನ ಮುಂದಿನ ತಲೆಮಾರಿಗೆ ಈ ತಿಳುವಳಿಕೆಯನ್ನು ಪ್ರಜ್ಞೆಯ ಮಟ್ಟದಲ್ಲಿ ದಾಟಿಸುತ್ತಿರಬಹುದೇನೋ.

ಉತ್ತರ ಅಮೆರಿಕಾದ ಪೂರ್ವತೀರಗಳಲ್ಲಿ ಗ್ರುನಿಯನ್‌ಗಳಿಗಿಂತಲೂ ಪ್ರಾಚೀನ ಸಮುದ್ರ ಜೀವಿಗಳಾದ ಲಾಳಏಡಿಗಳು (Horseshoe Crabs) ಇಂಥದೇ ನಡವಳಿಕೆಯನ್ನು ಪ್ರದರ್ಶಿಸುತ್ತವೆ. ಈ ಲಾಳ ಏಡಿಗಳನ್ನು ಏಡಿ ಎಂದು ಕರೆಯುವುದು ಕೇವಲ ಔಪಚಾರಿಕ. ಇವು ವಾಸ್ತವವಾಗಿ ಜೇಡ ಮತ್ತು ಚೇಳುಗಳ ವರ್ಗಕ್ಕೆ ಸೇರಬಹುದಾದ ಅವುಗಳ ದೂರ ಸಂಬಂಧಿಗಳು. ಇವುಗಳ ಆಕಾರ ಕುದುರೆಲಾಳದಂತಿದ್ದು ಉದ್ದವಾದ ಕತ್ತಿಯಂಥ ಬಾಲವಿರುತ್ತದೆ.

ಮೇ ಮತ್ತು ಜೂನ್ ತಿಂಗಳ ಭರತದ ರಾತ್ರಿಗಳಲ್ಲಿ ಇವು ಗುಂಪು ಗುಂಪಾಗಿ ದಡಕ್ಕೆ ತೆವಳಿಕೊಂಡು ಬರುತ್ತವೆ. ಗಂಡುಗಳು ತಮಗಿಂತ ದೊಡ್ಡ ದೇಹದ ಹೆಣ್ಣುಗಳೊಡನೆ ಅಂಟಿಕೊಂಡಿರುತ್ತವೆ. ಹೆಣ್ಣುಗಳು ಮರಳಿನಲ್ಲಿ ಬಿಲದಂತೆ ಮಾಡಿ ಮೊಟ್ಟೆಗಳನ್ನಿಟ್ಟರೆ

ಗಂಡುಗಳು ವೀರ್ಯಾಣುಗಳನ್ನು ಬಿಡುಗಡೆ ಮಾಡುತ್ತವೆ ವೀರ್ಯಾಣುಗಳು ಅಲೆಗಳೊಡನೆ ಹೋಗಿ ಮೊಟ್ಟೆಗಳನ್ನು ಸೇರುತ್ತವೆ. ಇಳಿಯುವ ಭರತವು ಮರಳಿನಲ್ಲಿ ಮೊಟ್ಟೆಗಳನ್ನು ಮುಚ್ಚಿ ಹಾಕುತ್ತಿದ್ದಂತೆ ಗಂಡುಹೆಣ್ಣುಗಳು ಸಮುದ್ರ ಸೇರಿಬಿಡುತ್ತವೆ.

ಕೆಲವೇ ದಿನಗಳಲ್ಲಿ ಹಸಿರು ಛಾಯೆಯ ಈ ಮೊಟ್ಟೆಗಳು ತಮ್ಮ ಮೊದಲಿನ ಆಕಾರಕ್ಕಿಂತ ಎಷ್ಟೋಪಟ್ಟು ದೊಡ್ಡದಾಗಿ ಬೆಳೆದಿರುತ್ತವೆ. ಸುಮಾರು ಎರಡು ವಾರಗಳಲ್ಲಿ ಕಡಲ ಹಕ್ಕಿಗಳು ಏಡಿಗಳು ಮತ್ತು ಇತರ ಮಾಂಸಾಹಾರಿಗಳಿಗೆ ಆಹಾರವಾಗಿ ಉಳಿದ ಮೊಟ್ಟೆಗಳು ಭರತದ ಉಬ್ಬರದೊಡನೇ ಒಡೆದು ಸಮುದ್ರ ಸೇರಿಕೊಳ್ಳುತ್ತವೆ.

ಹವಳದ ಅದ್ಭುತ ವಿಶ್ವ.

ಒಂದು ಹವಳದ ದಂಡೆಯ ಮೇಲೆ ಪ್ರಕೃತಿ ತೋರುವಂಥ ವೈವಿಧ್ಯಮಯವಾದ ಆಕಾರಗಳು ಮತ್ತು ಬಣ್ಣದ ವೈಭವವನ್ನು ಬೇರೆ ಕಡೆಗಳಲ್ಲಿ ಕಾಣುವುದು ಸುಲಭವಲ್ಲ. ಹವಳಗಳು ನೀರಿನಡಿಯಲ್ಲಿನ ಮಾಯಾನಗರಿಗಳು ಅದರೊಳಗೆ ಅನೇಕ ಬಗೆಯ ವೈವಿಧ್ಯ ಮಯ ಜೀವಗಳು ಕಿಕ್ಕಿರಿದು ಬಾಳುತ್ತವೆ.

ಈ ಹವಳದಂಡೆಯ ಪ್ರಾಣಿಗಳು ಆಹಾರಕ್ಕೋಸ್ಕರ ಉಳಿದ ಪ್ರಾಣಿಗಳೊಡನೆ ಸ್ಪರ್ಧಿಸುತ್ತಾ, ಕೆಲವೊಮ್ಮೆ ಆಹಾರಕ್ಕೋಸ್ಕರವೇ ಸಹಕರಿಸುತ್ತಾ, ಮಾಂಸಾಹಾರಿಗಳಿಂದ ರಕ್ಷಿಸಿಕೊಳ್ಳುತ್ತಾ, ಸಂತಾನಾಭಿವೃದ್ಧಿ ಮಾಡುತ್ತಾ ಕಣ್ಣಿಗೆ ಹಬ್ಬವಾಗುವಂಥ ವೈವಿಧ್ಯಮಯ ರೂಪ ಮತ್ತು ವರ್ಣಗಳಲ್ಲಿ ಬೆಳೆದಿವೆ. ಹೆಣ್ಣು ಹವಳದ ಸುತ್ತ ಹವಳದ ಕೋಶದ ರಕ್ಷಣೆ ಇರುತ್ತದೆ. ಅದನ್ನು ಮಾಂಸಾಹಾರಿಗಳು ತಿನ್ನಲಾರವು. ಈ ರಕ್ಷಣೆಗೆ ಹೆಣ್ಣು ಹವಳ ತೆರಬೇಕಾದ ಬೆಲೆಯೆಂದರೆ ಅದು ತನ್ನ ಜೀವಮಾನ ಪೂರ್ತಿ ಕೋಶದೊಳಗೇ ಇರಬೇಕು. ಕೋಶದಿಂದಾಚೆಗೆ ಚಲಿಸಲಾರದು. ನಮ್ಮ ಎರೆಹುಳವನ್ನು ತನ್ನ ಮಣ್ಣು ತಿನ್ನುವ ಕ್ರಿಯೆಯಲ್ಲಿ ಹೋಲುವ ಫ್ಯಾನ್‌ವರ್ಮ್ ಎಂಬ ಸಮುದ್ರದಡಿಯ ಹುಳ ತನ್ನ ಹಕ್ಕಿಯ ಗರಿಯಂಥ ಟೆಂಟಕಲ್‌ಗಳಿಂದ ನೀರಿನೊಳಗಿರುವ ಆಹಾರ ಕಣಗಳನ್ನು ಜಾಲಿಸಿ ಜಾಲಿಸಿ ಪಡೆದುಕೊಳ್ಳುತ್ತದೆ. ತನ್ನ ಸುತ್ತ ಮುತ್ತ ಒಂದು ಸಣ್ಣ ನೆರಳು ಸುಳಿದರೂ ತನ್ನ ಇಡೀ ದೇಹವನ್ನು ತನ್ನ ಕೋಶದೊಳಗೆಳೆದುಕೊಂಡು ಬಿಡುತ್ತದೆ. ಕೆಲವು ಮೀನುಗಳ ಹಲ್ಲುಗಳು ಹಕ್ಕಿಯ ಕೊಕ್ಕಿನ ಹಾಗೆ ಗಟ್ಟಿಯಾಗಿರುತ್ತವೆ. ಇವು ತನ್ನ ಗಟ್ಟಿಕೊಕ್ಕಿನಿಂದ ಹವಳ ದಂಡೆಯ ಮೇಲೆ ಗಟ್ಟಿಯಾಗಿ ಕಟ್ಟಿಕೊಂಡಿರುವ ಆಲ್ಗಿ (Algae) ಎಂಬ ಪಾಚಿಯನ್ನು ಮೇಯುತ್ತವೆ. ಕೆಲವು ದೈತ್ಯ ಚಿಪ್ಪುಗಳು (Giant Clams) ಕಾಲು ಟನ್‌ನಷ್ಟು ಭಾರವಿದ್ದು ಆಹಾರಕ್ಕಾಗಿ ತನ್ನ ದೇಹಮೊ

ಹಾಗೇ ಬೆಳೆಯುವ ಸೂಕ್ಷ್ಮ ಸಸ್ಯಗಳನ್ನು ಅವಲಂಬಿಸಿರುತ್ತವೆ.

ಹವಳದಂಡೆಯ ಮೇಲೆ ಎಲ್ಲೆಲ್ಲೂ ಬಣ್ಣಗಳ ಸಂತೆ. ಹೂವಿನಂತೆ ಅರಳಿರುವ ಅನಿಮೋನ್‌ಗಳು, ಪಂಚಬಾಹುವಿನ ನಕ್ಷತ್ರಮೀನುಗಳು, ವಿವಿಧ ಬಣ್ಣಗಳ ಆಕಾರಗಳ ಸಹಾಯದಿಂದ ಶತ್ರುವನ್ನು ಹೆದರಿಸಿ ಓಡಿಸುವಂಥ ಅಥವಾ ಸಂಗಾತಿಯನ್ನು ಆಕರ್ಷಿಸುವಂಥ ದೇಹ ರಚನೆಯನ್ನು ಬೆಳೆಸಿಕೊಂಡಿರುವ ಬಗೆಬಗೆಯ ಜಲಚರಗಳು, ತಮ್ಮ ತಮ್ಮ ಪರಿಸರದಿಂದ ತಮ್ಮನ್ನು ಬೇರ್ಪಡಿಸಲು ಸಾಧ್ಯವಾಗದಂಥ ದೇಹದ ಬಣ್ಣವನ್ನು ಹೊಂದಿರುವ ಕ್ಷಣಕ್ಕೊಂದು ಬಣ್ಣದ ಜಲಚರಗಳು, ವಲ್ಕವಂತಗಳು, ಮೃದ್ವಸ್ಥಿಗಳು, ಕೋಶಜೀವಿಗಳು ಈ ಎಲ್ಲ ಜೀವಜಾಲ ಸೇರಿ ಹವಳದ ದಂಡೆಯನ್ನು ಕಟ್ಟಿವೆ.

ವಾಸ್ತವವಾಗಿ ಹವಳದಂಡೆಯೆನ್ನುವುದು ಈ ಎಲ್ಲ ಜಲಚರಗಳು ಒಟ್ಟಿಗೆ ಬಾಳುವುದರಿಂದ ಹುಟ್ಟಿದ ಒಂದು ಸಾಮೂಹಿಕ ರಚನೆಯಾಗಿದೆ. ಹವಳದಂಡೆಯ ಪ್ರಾಣಿಗಳು ಸಮುದ್ರದ ನೀರಿನಲ್ಲಿ ಕರಗಿದ ಖನಿಜಾಂಶಗಳನ್ನು ಹವಳದಂಡೆಯಲ್ಲಿ ಕಂಡು ಬರುವ ಗಟ್ಟಿಯಾದ ಸುಣ್ಣ ಕಲ್ಲಾಗಿ ಪರಿವರ್ತಿಸುತ್ತವೆ. ಹೀಗೆ ಮಾಡುವಾಗ ಬಿಡಿಬಿಡಿಯಾಗಿರುವ ಹವಳ ಶಿಲೆಗಳನ್ನು ಸೇರಿಸಿ ಒಂದು ಹವಳದ ದಿಬ್ಬವನ್ನು ನಿರ್ಮಿಸುತ್ತವೆ. ಚಿಪ್ಪು ಮೀನುಗಳು, ಕಪ್ಪೆ ಚಿಪ್ಪುಗಳು, ಜೊಳ್ಳೆ ಹುಳಗಳು, ಸಾಯುವಾಗ ತಮ್ಮ ಗಟ್ಟಿಯಾದ ಚಿಪ್ಪುಗಳನ್ನು ಹವಳದಂಡೆಯ ಒಂದು ಭಾಗವಾಗಿ ಬಿಟ್ಟುಹೋಗುತ್ತವೆ. ಹವಳದ ಶೈವಲಗಳು (Caralline algae) ಸುಣ್ಣಕಲ್ಲನ್ನು ವಿಸರ್ಜಿಸಿ ಬಿಡಿಬಿಡಿಯಾದ ಭಾಗಗಳನ್ನು ಬೆಸೆಯುತ್ತವೆ. ಏಕಕೋಶ ಜೀವಿಗಳ ಪಳೆಯುಳಿಕೆಗಳು ಅಳಿದುಳಿದ ಅತ್ಯಂತ ಸಣ್ಣ ಬಿರುಕುಗಳಲ್ಲಿ ಗಟ್ಟಿಯಾಗಿ ಕುಳಿತು ಶಿಥಿಲವಾಗಬಹುದಾಗಿದ್ದ ಈ ಹವಳದ ದಿಬ್ಬವನ್ನು ಗಟ್ಟಿಗೊಳಿಸುತ್ತವೆ.

ಈ ಹವಳದ ದಿಬ್ಬಗಳು ಇಂದು ನಿನ್ನೆ ಹುಟ್ಟಿದುವಲ್ಲ. ಅನೇಕ ಶತಮಾನಗಳಿಂದ ಬೆಳೆಯುತ್ತಾ ಬಂದಿರುವುವು. ಪ್ರತಿ ವರ್ಷವೂ ತನ್ನಲ್ಲಿ ಬಾಳುವ ಜೀವಿಗಳ ಬದುಕಿನ ಫಲವಾಗಿಯೇ ಒಂದೋ ಎರಡೋ ಇಂಚಿನಷ್ಟು ಹಿಗ್ಗುತ್ತವೆ. ಈ ಹವಳದ ದಿಬ್ಬಗಳಲ್ಲಿ ಎಲ್ಲಕ್ಕಿಂತ ದೊಡ್ಡದಾದ ಆಸ್ಟ್ರೇಲಿಯಾದ 'ದಿ ಗ್ರೇಟ್ ಬ್ಯಾರಿಯರ್‌ರೀಫ್' ಆಸ್ಟ್ರೇಲಿಯಾದ ಸಮುದ್ರ ತೀರದಲ್ಲಿ ಸುಮಾರು 1300 ಮೈಲಿಗಳುದ್ದ ಹಬ್ಬಿದೆ. ಒಂದು ಹಳೇ ಲೆಕ್ಕಾಚಾರದ ಪ್ರಕಾರ ಇದರಲ್ಲಿ ಈಜಿಪ್ಟಿನ ಅತ್ಯಂತ ದೊಡ್ಡ ಪಿರಮಿಡ್ಡಿನ ಎಂಟು ಮಿಲಿಯನ್ ಪ್ರತಿರೂಪಗಳನ್ನು ಮಾಡುವಷ್ಟು ಸುಣ್ಣಕಲ್ಲಿದೆಯಂತೆ!

ಈ ಹವಳದ ದಿಬ್ಬಗಳು ಸದಾ ಬೆಳೆಯುತ್ತಾ ಕರಗುತ್ತಾ ಇರುವಂಥವು. ಒಂದು

ಸಾರಿ ಕಟ್ಟಿ ಮುಗಿಸಿರುವ ಸಿಮೆಂಟಿನ ಕಟ್ಟಡದಂತೆ ಅಲ್ಲ. ಕೆಲವು ಜೀವಿಗಳು ಇದನ್ನು ಸತತವಾಗಿ ಕಟ್ಟುವ ಕೆಲಸ ಮಾಡಿದರೆ ಇನ್ನು ಕೆಲವು ಸತತವಾಗಿ ಇದನ್ನು ಕೊರೆದೋ ತಿಂದೋ ಕರಗಿಸುತ್ತಿರುತ್ತವೆ. ಈ ನಿರಂತರ ಪ್ರಕ್ರಿಯೆಯ ಫಲವಾಗಿ ಹವಳದ ದಿಬ್ಬದಲ್ಲಿ ಪದುಗಳು- ತಗ್ಗುಗಳು- ಕೊರೆತಗಳು- ಕಾಲುವೆಗಳು ಸುರಂಗ ಮಾರ್ಗಗಳು ಉಂಟಾಗಿ ಅದೊಂದು ಅದ್ಭುತ ವಿಸ್ಮಯವೇ ಆಗಿರುತ್ತದೆ.

ಹವಳಗಳು ಬೆಳೆಯುವ ರೀತಿ ಕೂಡ ಕುತೂಹಲಕಾರಿಯಾಗಿದೆ. ಒಣಗಿ ಬಣ್ಣ ಕಳೆದುಕೊಂಡ ಹವಳದ ಭೌತಿಕ ದೇಹದ ತುಂಬ ಸಣ್ಣ ಸಣ್ಣ ಬಟ್ಟಲಿನಾಕಾರದ ಕುಳಿಗಳಿರುತ್ತವೆ. ಈ ಪ್ರತಿಯೊಂದು ಕುಳಿಯೂ ಒಂದು ಕಾಲದಲ್ಲಿ ಒಂದು ಜೀವಂತ ಹವಳದ ಮನೆಯಾಗಿದ್ದು ತನ್ನ ಒಣಗಿಹೋದ ಸ್ಥಿತಿಯಲ್ಲಿ ಹವಳದ ದಿಬ್ಬದ ಪ್ರಮುಖ ವಾಸ್ತುವಾಗಿದೆ. ಜೀವಂತ ಹವಳವನ್ನು 'ಪಾಲಿಪ್' (Polyp) ಎಂದು ಕರೆಯುತ್ತಾರೆ. ಒಂದು ಹವಳದಂಡೆಯ ಹವಳ ಕಾಲೋನಿಯಲ್ಲಿ ಒಂದೇ ಹವಳದಿಂದ ಹುಟ್ಟಿ ಬೆಳೆದ ಸಾವಿರಾರು ಪಾಲಿಪ್‌ಗಳಿರಬಹುದು. ಪೇರ್ ಹಣ್ಣಿನ ಆಕಾರದ ಲಾರ್ವಾಗಳು ಹವಳದ ಫಲಿತ ಅಂಡಗಳಿಂದ ಹೊರಬಿದ್ದು ನೀರಿನಲ್ಲಿ ಸ್ವತಂತ್ರವಾಗಿ ಈಜುವಂತಿರುತ್ತವೆ. ಇದರಲ್ಲಿ ದೊಡ್ಡದೆನಿಸಿಕೊಳ್ಳುವ ಲಾರ್ವದ ಉದ್ದ $\frac{1}{25}$ ಇಂಚು ಇರಬಹುದಷ್ಟೆ. ಪ್ರತಿಯೊಂದು ಲಾರ್ವವೂ ಒಂದು ಗಟ್ಟಿಯಾದ ತಳವನ್ನು ಹುಡುಕಿಕೊಂಡು ತನ್ನ ಅಗಲ ಮುಖವನ್ನು ಮೇಲು ಮಾಡಿಕೊಂಡು 'ಕುಳಿತುಕೊಳ್ಳುತ್ತದೆ' ನಂತರ ತನ್ನ ಅಗಲ ಕಿರಿದಾದ ತಳವನ್ನು ತಾನು 'ಕುಳಿತ' 'ಗಟ್ಟಿ ನೆಲ'ಕ್ಕೆ ಅಂಟಿಸುತ್ತದೆ. ಹೆಚ್ಚಿನ ಸಂದರ್ಭದಲ್ಲಿ ಈ 'ಗಟ್ಟಿನೆಲ' ಅದರ ಪೂರ್ವಜರ ದೇಹಗಳ ಅವಶೇಷವೇ ಆಗಿರುತ್ತದೆ. ಹೀಗೆ ಬುಡ ಭದ್ರ ಮಾಡಿಕೊಂಡ ಮೇಲೆ ಆ ಹವಳದ ಲಾರ್ವಾ ತನ್ನ ಸುತ್ತಲೂ ತನ್ನ ದೇಹದಿಂದಲೇ ಸುಣ್ಣಕಲ್ಲನ್ನು ಸ್ರವಿಸಿ ಒಂದು ಬಟ್ಟಲಿನಾಕಾರದ ಗೂಡನ್ನು ಮಾಡಿಕೊಂಡು ತನ್ನ ಶೇಷಾಯುಷ್ಯವನ್ನೆಲ್ಲ ಅದರಲ್ಲಿ ಕಳೆಯಲು ಸಿದ್ಧವಾಗುತ್ತದೆ. ಈ ಗಟ್ಟಿಯಾದ ಗೂಡಿನೊಳಗೆ ಹವಳದ ಹುಳುವಿನ ಮೃದು ದೇಹ ನೆಲಸುತ್ತದೆ. ಇದರ ಬಾಯಸುತ್ತ ಅತ್ಯಂತ ಸೂಕ್ಷ್ಮವಾದ ಆಹಾರವನ್ನು ಸಂಗ್ರಹಿಸುವಂಥ ಟೆಂಟಕಲ್‌ಗಳಿರುತ್ತವೆ. ಇವು ನೀರಿನಿಂದ ಪ್ಲಾಂಕ್‌ಟನ್‌ಗಳನ್ನು ಸಂಗ್ರಹಿಸುತ್ತವೆ. (ಪ್ಲಾಂಕ್‌ಟನ್ ಎಂಬುದು ಸಮುದ್ರದ ನೀರಿನಲ್ಲಿ ಧಾರಾಳವಾಗಿರುವ- ತನ್ನ ದೇಹದಲ್ಲಿರುವ ಹರಿತ್ತಿನಿಂದ ದ್ಯುತಿಸಂಶ್ಲೇಷಣೆ ಮಾಡುತ್ತ ಅನೇಕ ಜೀವಗಳಿಗೆ ಆಹಾರವನ್ನೊದಗಿಸುವ ಸಸ್ಯವರ್ಗದ ಏಕಕೋಶ ಜೀವಿ)

ಹೀಗೆ ನೆಲೆಗೊಂಡ ಪಾಲಿಪ್ ಸಣ್ಣ ಸಣ್ಣ ರೆಂಬೆ ಕೊಂಬೆಗಳಂಥ 'ಮೊಗ್ಗು'ಗಳಾಗಿ ಒಡೆದುಕೊಳ್ಳುತ್ತವೆ. ಇವು ಮತ್ತೆ ವಿಭಜನೆಗೊಂಡು ಮೂಲ ಪಾಲಿಪ್‌ಗೆ ಅಂಟಿ

ಕೊಂಡೇ ಉಳಿದು ವೃದ್ಧಿಸತೊಡಗುತ್ತವೆ. ಹೀಗೆ ಒಂದು ಪಾಲಿಪ್‌ಗಳ ನಗರ ಸ್ಥಾಪಿತವಾಗುತ್ತದೆ. ಈ ಹವಳನಗರಿಯ ಬಣ್ಣಗಳು ಕಂದು, ಹಳದಿ, ಹಸಿರು, ನೇರಳೆ, ಗುಲಾಬಿ ಹೀಗೆ ಕೊನೆಯಿಲ್ಲದವು. ಇವುಗಳು ಬೆಳೆಯುತ್ತಾ ಹೋದಂತೆ ಇವುಗಳ ಆಕಾರ ಕೂಡ ತನ್ನ ಜಾತಿಗೆ ವಿಶಿಷ್ಟವಾದ ಒಂದು ನಿರ್ದಿಷ್ಟತೆಯನ್ನು ತಾಳುತ್ತದೆ. ಆ ಹವಳದ ಹೆಸರೇ ಅದರ ಆಕಾರವನ್ನೂ ಸೂಚಿಸುವಂತಿರುತ್ತದೆ. ಸ್ಟ್ಯಾಗ್‌ಹಾರ್ನ್ (ಜಿಂಕೆ ಕೊಂಬು), ಎಲ್ಕ್‌ಹಾರ್ನ್ (ಕಡವೆ ಕೊಂಬು), ಬ್ರೈನ್ (ಮಿದುಳು), ಫಿಂಗರ್ (ಬೆರಳು), ಫ್ಲವರ್ (ಪುಷ್ಪ), ಸ್ಟಾರ್ (ನಕ್ಷತ್ರ), ಕ್ಯಾಕ್ಟಸ್ (ಕಳ್ಳಿ). ಹವಳವು ಆಹಾರ ಸಂಗ್ರಹಿಸದಿದ್ದಾಗ ತನ್ನ ಗೂಡಿನೊಳಗೆ ಮುದುಡಿಕೊಂಡಿರುತ್ತದೆ. ಇವು ತನ್ನ ಗೂಡಿನಲ್ಲಿ, ತನ್ನ ದೇಹದೊಳಗೆಯೇ ಡಿನೋ ಫ್ಲಾಜೆಲ್ಲೇಟ್ಸ್ ಎಂಬ ಸೂಕ್ಷ್ಮ ಜೀವಿಗಳಿಗೆ ಆಶ್ರಯಕೊಟ್ಟಿರುತ್ತವೆ. ವಿಜ್ಞಾನಿಗಳು ಈ ಡಿನೋ ಫ್ಲಾಜೆಲ್ಲೇಟ್‌ಗಳು ಹವಳಗಳು ಬಿಡುಗಡೆ ಮಾಡುವ ಇಂಗಾಲದ ಡೈಆಕ್ಸೈಡ್‌ಅನ್ನು ಬಳಸಿಕೊಂಡು ದ್ಯುತಿಸಂಶ್ಲೇಷಣ ಕ್ರಿಯೆ ನಡೆಸುತ್ತಿರಬಹುದೆಂದೂ ಸುಣ್ಣಕಲ್ಲನ್ನು ಸ್ರವಿಸುವುದರಲ್ಲಿ ಸಹಾಯ ಮಾಡುತ್ತಿರಬಹುದೆಂದೂ ಊಹಿಸುತ್ತಾರೆ.

ಒಂದೇ ಕಡೆಯಲ್ಲಿ ನೆಲೆ ನಿಂತು ಅಲ್ಲೇ ಆಹಾರ ಸಂಗ್ರಹಿಸಿ ಅಲ್ಲೇ ಗೂಡು ಕಟ್ಟಿ ತನ್ನ ದೇಹದ ಗೂಡನ್ನೂ ತಾನು ಹುಟ್ಟಿದ ನೆಲದ ಗಟ್ಟಿತನಕ್ಕೆ ತೆತ್ತು ಮುಂದಿನ ಜನಾಂಗದ ಜೀವನಕೆಗೆ ನೆಲೆಗಟ್ಟಾಗುವ ಹವಳ ಸಮುದ್ರದ ಒಂದು ಅದ್ಭುತವಾಗಿದೆ.

ಮಹಾ ಯಾತ್ರಿಕರು.

ಅನೇಕ ಬಗೆಯ ಮೀನುಗಳು ಮೊಟ್ಟೆಯಿಟ್ಟು ಮರಿ ಮಾಡುವುದಕ್ಕೋಸ್ಕರ ಸಮುದ್ರದಿಂದ ಹೊರಟು ಸಿಹಿನೀರಿನ ಆಕರಗಳಿಗೆ ಹೆಚ್ಚಾಗಿ ನದಿ ಮತ್ತು ಸರೋವರಗಳಿಗೆ ವಲಸೆ ಹೋಗುತ್ತವೆ. ಹೀಗೆ ವಲಸೆ ಹೋಗುವ ಮೀನುಗಳ ಜಾತಿಯಲ್ಲಿ ಪಟ್ಟೆಪಟ್ಟೆಯ ಬಾಸ್ ಮೀನು, ಶಾಡ್ ಮೀನುಗಳಿದ್ದರೂ ಇವು ಸ್ವಲ್ಪ ದೂರ ಮಾತ್ರ ವಲಸೆ ಹೋಗುವಂಥವು. ಸಾಲ್ಮನ್ ಎಂಬ ಜಾತಿಯ ಮೀನು ಸಮುದ್ರದಲ್ಲಿ ತಾನು ವಾಸಿಸುವ ಆಹಾರ ಸಮೃದ್ಧವಾದ ಸ್ಥಳದಿಂದ ಸಿಹಿನೀರಿನ ನದಿ ಸರೋವರಗಳಿಗೆ ಸುಮಾರು ಮೂರು ಸಾವಿರ ಮೈಲಿಗಳಷ್ಟು ಗರಿಷ್ಠ ಅಂತರವನ್ನು ಕ್ರಮಿಸುತ್ತದೆ.

ಪೆಸಿಫಿಕ್ ಸಾಗರದಲ್ಲಿ ವಾಸಿಸುವ ಐದು ಬಗೆಯ ಸಾಲ್ಮನ್ ಮೀನುಗಳು ಅಲಾಸ್ಕಾ ಕೊಲ್ಲಿಯ ಆಹಾರ ಸಮೃದ್ಧ ಜಲವನ್ನು ಎರಡರಿಂದ ನಾಲ್ಕು ವರ್ಷ ವಯಸ್ಸಾಗುತ್ತಿದ್ದಂತೆಯೇ ತೊರೆದು ಉತ್ತರ ಕೊರಿಯಾದಿಂದ ಸೈಬೀರಿಯಾದವರೆಗೆ, ಮಧ್ಯ

ಕ್ಯಾಲಿಫೋರ್ನಿಯಾದಿಂದ ಅಲಾಸ್ಕಾದವರೆಗೆ ಸಿಹಿನೀರಿನ ಆಕರಗಳನ್ನು ಹುಡುಕಿಕೊಂಡು ಹೋಗುತ್ತವೆ. ಅವರ ಪ್ರಯಾಣ ದೀರ್ಘವೂ ಆಯಾಸಕರವೂ ಆಗಿದ್ದು, ಒಮ್ಮೆ ಸಿಹಿನೀರನ್ನು ಸೇರಿಕೊಂಡ ಸಾಲ್ಮನ್ ಆಹಾರ ತೆಗೆದುಕೊಳ್ಳುವುದನ್ನು ನಿಲ್ಲಿಸಿ ತನ್ನ ದೇಹದ ಕೊಬ್ಬಿನಿಂದಲೇ ಜೀವಧಾರಣೆ ಮಾಡಿಕೊಂಡು ಮುಂದುವರಿಯಬೇಕಾಗುತ್ತದೆ. ಕೆಲವು ವೇಳೆ ಅವು ವಾರಗಟ್ಟಲೆ ಪ್ರವಾಹದ ವಿರುದ್ಧ ಈಜಬೇಕಾಗುತ್ತದೆ. ಮರಿ ಮಾಡಲು ಹೊರಟ ಸಾಲ್ಮನ್ ತನ್ನ ಹಾದಿಯಲ್ಲಿ ಬರುವ ಯಾವ ಅಡೆತಡೆಯನ್ನು ಲೆಕ್ಕಿಸದೆ ಮುಂದುವರಿಯುತ್ತದೆ. ಸೆಳವಿನಿಂದ ಕೂಡಿದ ನೀರಿನ ಕಡಿವಿಳಿತಗಳು, ರಭಸದ ಇಳಿಜಾರು ಪ್ರವಾಹಗಳು, ಜಲಪಾತಗಳು ಇವೆಲ್ಲದರ ವಿರುದ್ಧ ಯಾವುದೋ ವೀರಾವೇಶದಿಂದ ಅವು ಈಜುತ್ತವೆ. ಮೃತ್ಯುವೊಂದರ ಹೊರತು ಬೇರಾವುದೂ ಅವರ ದಾರಿಯನ್ನು ತಡೆಯಲಾರದು. ಕೆಲವು ಮೀನುಗಳು ಜಲಪಾತಗಳನ್ನು, ಅಣೆಕಟ್ಟುಗಳನ್ನು ದಾಟಲು ಯತ್ನಿಸುವ ಪ್ರಯತ್ನದಲ್ಲಿ ಮೃತ್ಯುವನ್ನಪ್ಪುವುದೂ ಉಂಟು. ಈ ಹಾದಿಯ ಕೊನೆಯಲ್ಲಿ ಅವನ್ನು ಕಾದಿರುವುದೂ ಮೃತ್ಯುವೇ. ಬಹಳ ಅಪರೂಪವಾಗಿ ಎಲ್ಲೋ ಒಂದೊಂದು ಸಾಲ್ಮನ್ ಮೀನು ಮರಿ ಹಾಕಿದ ಮೇಲೂ ಬದುಕುಳಿಯುವುದುಂಟು. ಅಂಥವು ಮತ್ತೆ ಸಮುದ್ರ ಸೇರಿಕೊಳ್ಳುತ್ತವೆ.

ಸಮುದ್ರ ಬಿಡುವಾಗ ಹೊಳಪಾಗಿ ಮೈತುಂಬಿಕೊಂಡು ಕೊಬ್ಬಿನಿಂದ ಪುಷ್ಟವಾಗಿದ್ದ ಸಾಲ್ಮನ್‌ಗಳು ಮೊಟ್ಟೆಯಿಡುವ ಸಿಹಿನೀರಿನ ತಾಣಕ್ಕೆ ಬರುವ ವೇಳೆಗೆ ಕ್ಷಯಿಸಿ ಕೃಶವಾಗಿರುತ್ತವೆ. ಅವುಗಳ ಮೈತುಂಬಾ ತರಚುಗಾಯಗಳು, ಜಜ್ಜುಗಾಯಗಳು, ಹರಿದು ಹೋದ ಈಜುರೆಕ್ಕೆಗಳು ಕಿವಿರುಗಳಲ್ಲಿ ಬೂಷ್ಟು ಮತ್ತು ಇತರ ಪರಾವಲಂಬಿಗಳು ತುಂಬಿಕೊಂಡಿರುತ್ತವೆ. ನದೀತಳದ ಮರಳಿನಲ್ಲಿ ಹೆಣ್ಣು ಮೀನು ತತ್ತರಿಸುತ್ತಾ ಒಂದು ಕುಳಿಯನ್ನು ಅಗೆದು ಅದರಲ್ಲಿ ಮೊಟ್ಟೆಗಳನ್ನಿಡುತ್ತದೆ. ಗಂಡು ಅವುಗಳ ಸುತ್ತ, ವೀರ್ಯಾಣುಗಳನ್ನು ಸುರಿಸಿದಂತೆ, ಹೆಣ್ಣು ಮೀನು ಮೊಟ್ಟೆಗಳನ್ನು ಮರಳಿನಿಂದ ಮುಚ್ಚಿಬಿಡುತ್ತದೆ. ಈ ಕ್ರಿಯೆಯ ನಂತರ ಕಾಯುತ್ತಿರುವ ಮೃತ್ಯುವಿಗೆ ತಮ್ಮನ್ನು ತಾವು ಒಪ್ಪಿಸಿಕೊಳ್ಳುತ್ತವೆ. ದಡದಲ್ಲಿ ತೇಲುವ ಈ ಮೀನುಗಳ ಹೆಣಗಳು ಕಾಯುತ್ತಿರುವ ಮಾಂಸಾಹಾರಿ ಪಕ್ಷಿ ಮತ್ತು ಜಲಚರಗಳಿಗೆ ಆಹಾರವಾಗುತ್ತವೆ.

ಮರಳಿನಲ್ಲಿ ಹೂತ ಮೊಟ್ಟೆಗಳು ಒಡೆದು ಮೂರರಿಂದ ಹನ್ನೆರಡು ವಾರಗಳಲ್ಲಿ ಸಾಲ್ಮನ್ ಮರಿಗಳು ಹೊರಬರುತ್ತವೆ. ಸುಮಾರು ಮೂರು ವಾರಗಳ ಕಾಲ ತನ್ನ ದೇಹಕ್ಕೆ ಇನ್ನೂ ಅಂಟಿಕೊಂಡಿದ್ದ ಯೋಕ್ ಚೀಲದಿಂದ ಆಹಾರ ಪಡೆದು ಬೆಳೆಯುತ್ತ ಇದ್ದು ನಂತರ ಸ್ವತಂತ್ರವಾಗಿ ಈಜತೊಡಗುತ್ತವೆ ಈ ಮರಿಗಳು. ಮೀನಿನ ಜಾತಿ ಯಾವುದೋ ಅದಕ್ಕನುಸಾರವಾಗಿ ಒಂದು ತಿಂಗಳಿನಿಂದ ಎರಡು ವರ್ಷಗಳವರೆಗೆ ಸಿಹಿನೀರಿ

ನಲ್ಲಿ ಬಿಳಿನ ಮೇಲ್ರಿ ಮರಳಿ ಸಾಗರದ ಮನೆಗೆ ಮರಿಯ ಯಾತ್ರೆ ಪ್ರಾರಂಭವಾಗುತ್ತದೆ. ಯಾವಾಗಲೂ ವಸಂತಕಾಲದಲ್ಲೇ ಪ್ರಾರಂಭವಾಗುವ ಈ ಯಾತ್ರೆಯನ್ನು ಚೋದಿಸುವ ಅಂಶಗಳಲ್ಲಿ ಸೂರ್ಯನ ಬೆಳಕೂ ಒಂದಿರಬಹುದೆಂದು ಊಹಿಸಲಾಗಿದೆ. ದೀರ್ಘವಾದ ದಿನ ಮತ್ತು ಬಿಸಿಲಿನ ಕಾವಿನಿಂದ ಮರಿಯ ದೇಹದಲ್ಲಿ ಹಾರ್ಮೋನುಗಳ ಉತ್ಪಾದನೆಯು ಅಧಿಕವಾಗಿ ಅದು ಹೆಚ್ಚು ಚುರುಕಾಗುತ್ತದೆ. ಹಗಲಿನಲ್ಲಿ ಮರಳಿನಲ್ಲಿ ದಡದ ಬಂಡೆಗಳ ನಡುವೆ ಅಡಗಿಕೊಳ್ಳುತ್ತ ನಸುಕು ಬೆಳಕಿನಲ್ಲಿ ಕತ್ತಲಿನಲ್ಲಿ ಪ್ರಯಾಣ ಮಾಡುತ್ತ ಮರಿಮೀನು ಸಮುದ್ರದ ಕಡೆಗೆ ಸಾಗುತ್ತದೆ. ದಾರಿಯುದ್ದಕ್ಕೂ ಆಹಾರ ಸ್ವೀಕರಿಸುವುದು, ದೇಹದ ಬೆಳವಣಿಗೆ ಸಾಗುವುದರ ಜೊತೆಗೆ ಮುಂದೆ ಸಮುದ್ರದ ಉಪ್ಪುನೀರಿನಲ್ಲಿ ಬದುಕಲು ಬೇಕಾಗಿರುವ ಮಾರ್ಪಾಡುಗಳೂ ಅವರ ದೇಹದಲ್ಲಿ ಆಗುತ್ತ ಹೋಗುತ್ತವೆ.

ವಯಸ್ಕ ಮೀನುಗಳು ಮರಿಹಾಕುವ ತಾಣಗಳನ್ನು ಮುಟ್ಟಲು ಯಾವ ಪ್ರವಾಹದ ವಿರುದ್ಧ ಈಜಿ ಬಂದವೋ ಅದೇ ಪ್ರವಾಹ ಈಗ ಅವುಗಳ ಸಂತಾನವನ್ನು ಸಮುದ್ರದ ವೈಶಾಲ್ಯ ಮತ್ತು ಆಹಾರ ಸಮೃದ್ಧಿಯತ್ತ ಕರೆದೊಯ್ಯುವ ಕೆಲಸವನ್ನು ವಹಿಸಿಕೊಳ್ಳುತ್ತವೆ. ಕೆಲವೊಮ್ಮೆ ಪ್ರವಾಹದ ಸಹಾಯ ದೊರೆಯದಿದ್ದಾಗ ಇನ್ನುಳಿದ ಪ್ರಾಕೃತಿಕ ಮಾರ್ಗಸೂಚಿಗಳನ್ನನುಸರಿಸಿ ಮುನ್ನಡೆದು ತನ್ನ ಬಾಳಿನ ಅನುಕೂಲವಾದ ಸಮುದ್ರ ಜಲವನ್ನು ಸೇರಿಕೊಳ್ಳುತ್ತವೆ.

ಅಟ್ಲಾಂಟಿಕ್ ಜಲಪ್ರದೇಶದಲ್ಲಿರುವ ಸಾಲ್ಮನ್‌ಗಳು ಇದೇ ರೀತಿ ಯುರೋಪ್, ಗ್ರೇಟ್‌ಬ್ರಿಟನ್, ಅಮೆರಿಕ ಸಂಯುಕ್ತ ಸಂಸ್ಥಾನಗಳು ಪೂರ್ವ ಕೆನಡಾ ಜಲಪ್ರದೇಶಗಳಲ್ಲಿ ಸಂಚರಿಸುತ್ತವೆ. ಅಟ್ಲಾಂಟಿಕ್ ಸಾಲ್ಮನ್‌ಗಳ ಒಂದು ವೈಶಿಷ್ಟ್ಯವೆಂದರೆ ಅವುಗಳಲ್ಲಿ ಕೆಲವು ಜಾತಿಗಳು ಮರಿಹಾಕಿದೊಡನೆ ಸಾಯದೆ ಮತ್ತೆ ಪುಷ್ಟಿಗೊಂಡು ಸಮುದ್ರಕ್ಕೆ ಮರಳಿ ಇನ್ನೊಮ್ಮೆ- ಮತ್ತೊಮ್ಮೆ ಸುಮಾರು ಮೂರು ನಾಲ್ಕು ಬಾರಿ ಸಂತತಿಯನ್ನು ಅಭಿವೃದ್ಧಿ ಪಡಿಸುವ ಈ ದೀರ್ಘ ಪ್ರಯಾಣವನ್ನು ಕೈಗೊಳ್ಳುತ್ತವೆ.

ಈ ಮೀನುಗಳ ಜೀವನದಲ್ಲಿ ಒಂದು ಅತ್ಯಂತ ಆಶ್ಚರ್ಯ ವಿಷಯವೆಂದರೆ ತಾನು ಹುಟ್ಟಿದ ಸ್ಥಳಕ್ಕೆ ಚಾಚೂ ತಪ್ಪದಂತೆ ಈ ಮರಿಮೀನುಗಳು ಹೇಗೆ ಹಿಂದಿರುಗುತ್ತವೆ, ಯಾವ ಪ್ರಜ್ಞೆ ಅವುಗಳನ್ನು ಬರಿಯ ಸಿಹಿನೀರಿಗಲ್ಲ ತಾನು ಹುಟ್ಟಿದ ಪ್ರದೇಶದ ಸುತ್ತಮುತ್ತಲ ಪರಿಸರಕ್ಕಲ್ಲ ತಾನು ಯಾವ ಮೀನು ತೊಟ್ಟಿಯಲ್ಲಿ ಹುಟ್ಟಿದೆನೋ ಆ ಮೀನು ತೊಟ್ಟಿಗೇ ಹಿಂದಿರುಗುವಂತೆ ಮಾಡುತ್ತವೆ ಎಂಬುದು. ಈ ಕುರಿತು ಮಾಡಿದ ಸಂಶೋಧನೆಗಳಲ್ಲಿ ಮೀನಿನ ಪಥವನ್ನು ಗುರುತಿಸಲಾಗುವಂತೆ ಅದಕ್ಕೆ

ಗುರುತುಹಚ್ಚಿ ಬಿಟ್ಟಾಗ ವರ್ಷಗಳು ಕಳೆದರೂ ಖಂಡಗಳನ್ನೇ ದಾಟಿ ಪ್ರವಾಸ ಮಾಡಿದರೂ ತಾನು ಹುಟ್ಟಿದ ಸ್ಥಳಕ್ಕೆ ತಪ್ಪದೇ ಸಾಲೋಮನ್ ಹಿಂದಿರುಗುವುದೆಂದು ಖಚಿತವಾಗಿ ಗುರುತಿಸಲಾಯಿತು. ತನ್ನ ಮೂಗಿನ ಸೊಳ್ಳೆಯಿಂದ ನೀರನ್ನು ಸೋಸುವ ಮೂಲಕ ನೀರಿನಲ್ಲಿರುವ ಅಂಶಗಳನ್ನು ವಿಶ್ಲೇಷಿಸಿ ಸಾಲೋಮನ್ ತನ್ನ ದಿಕ್ಕನ್ನು ಕಂಡುಕೊಳ್ಳುವ ಸಾಧ್ಯತೆ ಇದೆಯೆಂದು ವಿಜ್ಞಾನಿಗಳು ನಿರ್ಧರಿಸಿದರು. ಮೀನಿನ ಘ್ರಾಣ ಶಕ್ತಿಯು ಮನುಷ್ಯನಿಗಿಂತ ಐನೂರು ಪಟ್ಟು ಹೆಚ್ಚಾಗಿದ್ದು ಅದು ವಾಸನೆಯ ಮೂಲಕ ದಿಕ್ಕನ್ನು ಗುರುತಿಸುತ್ತಿರಬಹುದು.

1950ರಲ್ಲಿ ವಿಸ್‌ಬಿ ಮತ್ತು ಹ್ಯಾಸ್‌ಲರ್ ಎನ್ನುವ ವಿಜ್ಞಾನಿಗಳಿಬ್ಬರು ಸುಮಾರು ಮುನ್ನೂರು ಸಾಲ್‌ಮನ್‌ಗಳನ್ನು ಪ್ರತ್ಯೇಕಿಸಿ ಅವುಗಳಲ್ಲಿ ಎರಡು ಗುಂಪು ಮಾಡಿ ಒಂದು ಗುಂಪಿನ ಮೀನುಗಳ ಮೂಗಿನ ಸೊಳ್ಳೆಯನ್ನು ಹತ್ತಿಯಿಂದ ತುಂಬಿಸಿದರು. ನದಿಯ ದಾರಿ ಕವಲೊಡೆಯುವ ಸ್ಥಳದಲ್ಲಿ ಈ ಮೀನುಗಳನ್ನು ಬಿಟ್ಟಾಗ ಸ್ವತಂತ್ರ ಮೀನುಗಳು ಅಬಾಧಿತವಾಗಿ ತಮ್ಮ ಗುರಿಯ ಕಡೆಗೆ ಮುಂದುವರಿದುವು. ಮೂಗು ಮುಚ್ಚಿಕೊಂಡ ಮೀನುಗಳಲ್ಲಿ ಕಾಲುಭಾಗಕ್ಕೂ ಕಡಿಮೆ ಮೀನುಗಳು ಮಾತ್ರ ಸರಿಯಾದ ದಾರಿಯನ್ನು ಹಿಡಿದವು.

ಒಂದು ವರ್ಷದ ಜೆಲ್ಲಿ ಸಾಲ್ಮನ್ ಮರಿಯೊಂದನ್ನು ಕ್ಯಾಲಿಫೋರ್ನಿಯಾದ ಹಂಬೋಲ್ಟ್ ಕಂಟ್ರಿಯ ಪ್ರೈರೀ ಕ್ರೀಕ್ ಎಂಬ ಮೀನು ಸಾಕಣೆ ಕೇಂದ್ರದಿಂದ ಬಿಡುಗಡೆ ಮಾಡಲಾಯಿತು. ಒಂದು ವರ್ಷದ ನಂತರ ಅದು ಸಮುದ್ರದಿಂದ ಮರಳಿ ಬಂದು ರೆಡ್‌ವುಡ್ ಮತ್ತು ಪ್ರೈರೀ ಕೊಲ್ಲಿಗಳನ್ನು ಹಾದು ಈಜಿ ಬಂದು ಇನ್ನೇನು ಒಣಗುವಂತಿದ್ದ ಝರಿಯೊಂದರಲ್ಲಿ ಹಾದು ಬಂದು ಹೆದ್ದಾರಿಯ ಅಡಿಯಲ್ಲಿದ್ದ ನೀರಿನ ಕೊಳವೆಯೊಳಗೆ ನುಸುಳಿಬಂದು, ಮಳೆ ನೀರು ಹೊರಹೋಗುವ ಚರಂಡಿಯೊಳಗಡೆಯಿಂದ ಹಾದು ಬಂದು 'ಎಲ್' ಆಕಾರದ ನಾಲ್ಕಿಂಚಿನ ಕೊಳವೆಯೊಳಗೆ ಹಾದು ಬಂದು ಅದರ ಬಾಯಿಗೆ ಬಿಗಿದ ತಂತಿಯ ಮುಚ್ಚಳವನ್ನು ಹಾರಿಸಿ ಕೆಡವಿ ದಾಟಲಸಾಧ್ಯವೇನೋ ಎಂಬಂತಿದ್ದ ತಂತಿ ಬಲೆಯೊಂದರ ಮೇಲೆ ಹಾರಿ ತಾನು ಹುಟ್ಟಿದ ಮೀನಿನ ತೊಟ್ಟಿಯೊಳಗೆ ಬಸವಳಿದು ಬಂದು ಬಿದ್ದಿತಂತೆ. ಇದು ಸಾಲೋಮನ್ನಿನ ಮಹಾಯಾತ್ರೆಯಲ್ಲಿ ಮನುಷ್ಯನ ಕಣ್ಣಿಗೆ ಕಂಡ ಒಂದು ತುಣುಕು ಅಷ್ಟೇ. ಕಾಣದಿರುವುದೆಷ್ಟೋ ಬಲ್ಲವರಾರು ?

ಪ್ರಿಯ ಓದುಗರೆ,

ಇಡಿಯ ಸಂಚಿಕೆ ಹೇಳಲಾಗದ್ದನ್ನು ಟಿಪ್ಪಣಿ ಏನು ಹೇಳೀತು.

ಬದುಕಿರುವ ಎಲ್ಲ ಪ್ರಾಣಿ–ಪಕ್ಷಿ ಜಲಚರ ಸಂಕುಲ ತನ್ನ ಮುಂದಿನ ಜನಾಂಗದ ಉಳಿವಿನ ಕಡೆಗೆ ತನಗರಿಯದ ಹಾಗೆ ಒಂದು ಕಣ್ಣಿಟ್ಟಿರುತ್ತದೆ. ಪ್ರಕೃತಿಯೊಡನೆ ಸಮರಸದಿಂದ ಬಾಳುತ್ತದೆ.

ಹವಳದ ಹುಳುಗಳು ತಮ್ಮ ಪರಿಸರವನ್ನು ಗಟ್ಟಿಗೊಳಿಸಲು ತಮ್ಮ ದೇಹವನ್ನೇ ಕೊಡುತ್ತವೆ.

ಮನುಷ್ಯ ತನ್ನ ಮುಂದಿನ ಜನಾಂಗಕ್ಕೆ ಶುದ್ಧಗಾಳಿ, ಶುದ್ಧ ನೀರೂ ಕೂಡ ಸಿಕ್ಕದ ಹಾಗೆ ಭೂಮಿಯನ್ನು ವಿಷಮಯವಾಗಿಸುತ್ತಿದ್ದಾನೆ.

ಗ್ರುನಿಯನ್‌ಗಳು ಸಮುದ್ರ ಉಕ್ಕುವುದನ್ನು ಇಳಿಯುವುದನ್ನು ತಮ್ಮ ದೇಹದೊಳಗಿನ ಪ್ರಜ್ಞೆಯಿಂದ ಗುರುತಿಸಬಲ್ಲವು.

ಮನುಷ್ಯನಿಗೆ ಬೆಳಗಾದುದನ್ನು ತಿಳಿಸಲು ಅಲಾರಂ ಗಡಿಯಾರ ಬೇಕು.

ಸಾಲ್ಮನ್‌ಗಳು ತಾನು ಹುಟ್ಟಿದ ಸ್ಥಳವನ್ನು ನೆನಪಿಟ್ಟುಕೊಂಡು ಅದನ್ನು ಮತ್ತೆ ಸೇರಲು ಪ್ರಾಣವನ್ನೇ ಪಣವಾಗಿಟ್ಟು ಗುರಿ ಮುಟ್ಟುತ್ತವೆ.

ಮನುಷ್ಯ ಇಂದಿನ ಸಂಪತ್ತಿನ ಮತ್ತಿನಲ್ಲಿ ಹಿಂದಿನದನ್ನು ಮರೆಯುತ್ತಾನೆ. ಇಂದಿನ ತಂತ್ರಜ್ಞಾನದ ಅಮಲಿನಲ್ಲಿ ಪ್ರಕೃತಿಯಿಂದ ದೂರಾಗುತ್ತಾನೆ. ತಾನು ಸಂಪತ್ತನ್ನು ಕೂಡಿಟ್ಟುಕೊಳ್ಳುವಾಗ ಇತಿಹಾಸ ಕಲಿಸಿದ ಪಾಠಗಳನ್ನು ಮರೆಯುತ್ತಾನೆ.

ತನ್ನ ಎಳೆಯರಿಗೆ ಈ ಪ್ರಪಂಚವನ್ನು ಬಾಳಲು ಸುಂದರವಾಗಿ ಮಾಡಿಟ್ಟು ಹೋಗುವುದು ಇಡೀ ಜನಾಂಗದ ಹೊಣೆ. ಆ ನಿಟ್ಟಿನಲ್ಲಿ ಕನಿಷ್ಠ ಚಿಂತನೆಯನ್ನಾದರೂ ಮಾಡಬೇಕಿದೆ. ಬದುಕನ್ನು ಸಹ್ಯವಾಗಿಸುವ ದಿಕ್ಕಿನಲ್ಲಿ ಚಿಂತನ ಮೊದಲ ಹೆಜ್ಜೆ.

ಇದು ಸಂವಾದದ ನಾಲ್ಕನೆ ಸಂಚಿಕೆ ನಮ್ಮ ಅನಿಯತ ಕಾಲಿಕತೆಯ ಬಗೆಗೆ ನಾವು ಹೇಳಿಕೊಳ್ಳಬಹುದಾದ ಕಾರಣಗಳು ಮಾಮೂಲಿಯಾಗಿವೆ. ಬಹುಶಃ ಪತ್ರಿಕೆಗಳನ್ನು ಮಾಡಿದವರಿಗೆಲ್ಲ ಅವು ಗೊತ್ತಿವೆ. ಸಂವಾದಕ್ಕೆ ಆರ್ಥಿಕ ಮತ್ತು ಹಾರ್ದಿಕ ಸಹಕಾರ ನೀಡಿದ ನಿಮ್ಮೆಲ್ಲರಿಗೆ ನಾವು ಋಣಿಗಳು.

ಇದರ ಜೊತೆಗೆ ನಾವು ಮಾಡಬಹುದಾದುದೇನಾದರೂ ಇದೆ ಎಂದು ನಿಮಗನಿಸಿದರೆ ದಯವಿಟ್ಟು ಸಂಪಾದಿಸಿ. ಸಂವಾದ ತಲುಪದಿರುವ ಚಂದಾದಾರರು ದಯವಿಟ್ಟು ಆ ಬಗ್ಗೆ ಬರೆಯಿರಿ.

— ಸ. ಉಷಾ

ಖಾಸಗೀ ಪ್ರಸಾರಕ್ಕಾಗಿ

ಸಂವಾದ

(೫)

ಈ ಸಂಕಲನದ ಸಂಪಾದಕರು :

ಜಿ. ಎಲ್. ರಾಮಪ್ಪ

ಸಂವಾದ ಪ್ರಕಾಶನ ಮಲ್ಲಾಡಿಹಳ್ಳಿ, ಚಿತ್ರದುರ್ಗ ಜಿಲ್ಲೆ

'ಸಂವಾದ'ದ ಲೇಖಕರು :

- **ಜಿ. ಪಿ. ಬಸವರಾಜು,** ಡಿ–14, ವ್ಯಾಸನಗರ ಹೌಸಿಂಗ್ ಕಾಂಪ್ಲೆಕ್ಸ್, ಕರ್ನಾಟಕ ಪಾಲಿಟೆಕ್ನಿಕ್ ಹಿಂಭಾಗ, ಬಿಜೈ ಅಂಚೆ. ಮಂಗಳೂರು 575004
- **ಆರ್. ವಿಜಯರಾಘವನ್, ಕೋಲಾರ** ಗ್ರಾಮೀಣ ಬ್ಯಾಂಕ್, ಪ್ರಧಾನ **ಕಚೇರಿ, ಕೋಲಾರ** 563101
- **ರಾಮಗಿರಿ ರವೀಂದ್ರ,** ಬೆರಳಚ್ಚುಗಾರ, ರೇಷ್ಮೆ ಸಹಾಯಕ ನಿರ್ದೇಶಕರ **ಕಚೇರಿ, ಚಳ್ಳಕೆರೆ** 577522
- **ರಾಘವೇಂದ್ರ ಪಾಟೀಲ,** ಮಲ್ಲಾಡಿಹಳ್ಳಿ ಅಂಚೆ, ಚಿತ್ರದುರ್ಗ ಜಿಲ್ಲೆ 577531.
- **ಡಾ|| ಎಂ. ಎ. ರವೀಂದ್ರ,** ಎಂ.ಬಿ.ಬಿ.ಎಸ್., ಮಾರುತಿ ಕ್ಲಿನಿಕ್, **ಹೊಸದುರ್ಗ, ಚಿತ್ರದುರ್ಗ ಜಿಲ್ಲೆ**
- **ಡಾ|| ಭ. ನಾಗರಾಜ್,** ಎಂ.ಬಿ.ಬಿ.ಎಸ್., ಗುರು ಚಿಕಿತ್ಸಾಲಯ ಮತ್ತು ಪ್ರಯೋಗಶಾಲೆ, ಗುಂಡ್ಲುಪೇಟೆ ಮೈಸೂರು ಜಿಲ್ಲೆ. 571111
- **ಎನ್. ಎಸ್. ಚಿದಂಬರರಾವ್,** ಬಸವನಗುಡಿ ಬೀದಿ, ಚನ್ನಗಿರಿ. 577213.
- **ಡಿ. ತಿಮ್ಮಪ್ಪ,** ಮುಖ್ಯೋಪಾಧ್ಯಾಯ, ಶ್ರೀ ಲಕ್ಷ್ಮೀರಂಗನಾಥ ಪ್ರೌಢಶಾಲೆ, ದೇವರಹಳ್ಳಿ ಅಂಚೆ, ಚನ್ನಗಿರಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.
- **ಡಾ|| ಹೆಚ್. ಎಸ್. ವೆಂಕಟೇಶಮೂರ್ತಿ,** 101, ಗಣೇಶ ಮಂದಿರ ರೋಡ್, 2 ನೇ ಬ್ಲಾಕ್, ತ್ಯಾಗರಾಜನಗರ, ಬೆಂಗಳೂರು 560028
- **ನರಹಳ್ಳಿ ಬಾಲಸುಬ್ರಮಣ್ಯ,** 76, ಎರಡನೇ ಕ್ರಾಸ್, ನಾಗಪ್ಪ ಬ್ಲಾಕ್. ಶ್ರೀರಾಮಪುರಂ, ಬೆಂಗಳೂರು–560021
- **ಚಂದ್ರಶೇಖರ ತಾಳ್ಯ,** ತರ್ಕಶಾಸ್ತ್ರದ ಉಪನ್ಯಾಸಕರು, ಕೆ. ಎನ್. ಪದವಿ ಪೂರ್ವ ಕಾಲೇಜು, **ಹೊಳಲ್ಕೆರೆ, ಚಿತ್ರದುರ್ಗ ಜಿಲ್ಲೆ**
- **ಜಿ. ಎಲ್. ರಾಮಪ್ಪ,** ಮಲ್ಲಾಡಿಹಳ್ಳಿ ಅಂಚೆ, ಚಿತ್ರದುರ್ಗ ಜಿಲ್ಲೆ– 577531.

ಒಂದು ಹಕ್ಕಿ - ಒಂದು ಮರ

● ಜಿ. ಪಿ. ಬಸವರಾಜು

"ನಿಂದೆ ಸುಖ" – ಅಂತು ಹಕ್ಕಿ.

ಮರ ನಕ್ಕು ಹೇಳಿತು–
"ಬಾ, ಕುಂತ್ಕೊ, ಅದೇನು ಸರಿಯಾಗಿ ಹೇಳು"

ಗರಿ ಮಡಿಚಿ
ಕೊಂಬೆಯ ಮೇಲೆ ಆರಾಮಾಗಿ ಕುಂತು
ಹಕ್ಕಿ ಹೇಳಿತು–

"ನೋಡು,
ಹೊಟ್ಟೇ ನೀರು
ಅಲ್ಲಾಡದಂತೆ ನಿಂತಿರುತ್ತಿ ನೀನು
ಅನ್ನ – ನೀರು ಎಲ್ಲ
ನೀನಿದ್ದಲ್ಲಿಗೇ ಬರುತ್ತೆ,
ನಿನ್ನ ದೇಹ ಬೆಳೆಯುತ್ತೆ;

ನಾನೋ –
ಆಕಾಶದಲ್ಲಿ ಅಲೆಯುವ
ಪರದೇಶಿ;

ಅಲ್ಲಿಂದ ಇಲ್ಲಿಗೆ
ಇಲ್ಲಿಂದ ಅಲ್ಲಿಗೆ
ಒಂದಿಂಚೂ ಇಲ್ಲದ ಹೊಟ್ಟೆಗೆ
ಎಷ್ಟೊ ಅಂತ ತಿರುಗೋದು
ಎಷ್ಟು ದಿನಾ ಅಂತ ಏಗೋದು''

ಮರ
ಉದ್ದ ಉಸಿರೆಳೆದು
ಹೇಳಿತು–

''ಅಯ್ಯೋ ! ಸಂಜೇನ್ ಹೇಳ್ತಿ ಬಿಡು,
ನಿಂತಲ್ಲೆ ನಿಂತು
ನನ್ನ ಮೈ ಮರಗಟ್ಟಿದೆ
ಮನಸ್ಸು ಹಸಗೆಟ್ಟಿದೆ
ನನ್ನ ಎಲೆಗಳು ಓಕಿಸಿ
ನಗ್ತವೆ ಅನ್ನೋದನ್ನ ಬಿಟ್ರೆ
ನನ್ನ ಮೈ ನೋಡಿದೀಯಾ ?''

ಹಕ್ಕಿ ಇಷ್ಟಗಲ ಕಣ್ಬಿರೆಯಿತು
ಮರ 'ನೋಡು ನೋಡು'
ಎಂದು ಮೈದೆರೆಯಿತು:

ಮೈ ತುಂಬ ಗಾಯ
ಮೈ ತುಂಬ ಕಲೆ

ಸೊರ ಸೊರ ಮೂಗೊರೆಸಿಕೊಂಡ
ಮರ ಮತ್ತೆ ಹೇಳಿತು–

''ಎಂತೆಂಥವರು ಬರ್ತಾರೆ
ಅಂತೀಯ, ಹತ್ತಾರೆ,
ತುಳಿತಾರೆ, ಎಲೆ ಎಲೆ

ಕೇಳ್ತಾರೆ, ಮರಕೋತಿ
ಆಡ್ತಾರೆ, ಹೆಸರು ಕೆತ್ತಾರೆ

"ಉಗೀತಾರೆ ಗೀಚ್ತಾರೆ
ಉಚ್ಚೆ ಹೊಯ್ತಾರೆ
ಇಷ್ಟಿಷ್ಟೆ ಕೊಚ್ತಾರೆ
ಕೈಕಾಲು ಕಡೀತಾರೆ

"ನಾನು ಓಡೋ ಹಂಗಿಲ್ಲ
ಹೊಡಿಯೋ ಹಂಗಿಲ್ಲ
ಝಾಡಿಸೋ ಹಂಗಿಲ್ಲ
ಜಿಗಿಯೋ ಹಂಗಿಲ್ಲ
ಕೂಗೋ ಹಂಗಿಲ್ಲ
ಕೊಸರೋ ಹಂಗಿಲ್ಲ
ಯಾವನ ಹಂಗಿಲ್ಲಿದ್ರೂ
ಸ್ವತಂತ್ರ ಬದುಕೋ ಹಂಗಿಲ್ಲ"

ಹಕ್ಕಿ ಮುಸ ಮುಸ ಅಂತು.
ಮರ ಬಿಕ್ಕುತ್ತ ಬಿಕ್ಕುತ್ತ
ಕೇಳಿತು–

"ಎಷ್ಟು ಕಾಲ ಆಯ್ತು
ಹಿಂಗೇ ನಿಂತು.
ನಿಂತೇ ಇದ್ದೀನಲ್ಲಾ
ನಂದು ಸುಖಾನಾ ?"

ಹಕ್ಕಿ
ಗರಿಗಳ ಚಾಮರ ಬೀಸಿ
ಗಲ್ಲ ಸವರಿ, ಕಣ್ಣು ವರೆಸಿ
ಮರಕ್ಕೆ ಸಮಾಧಾನ ಮಾಡಿ
ಕೇಳ್ತು–

"ಭೂಮಿ ಒಳಗೆ ಹೆಂಗಿದೆ?"

ಮರ ಅರಳಿತು;
ಸಗ್ತಾ ಹೇಳಿತು–

"ಆಹಾ! ಆ ಸುಖ
ಹೆಂಗೆ ಹೇಳ್ಲಿ. ನನ್ನ
ನಗು ಉಕ್ಕೋದು ಅಲ್ಲಿಂದ
ಉಸಿರು ಹರಿಯೋದು ಅಲ್ಲಿಂದ
ಅಲ್ಲಿ ಬೆಚ್ಚಗೆ, ಥಣ್ಣಗೆ
ಸುಖಾಂದ್ರೆ ಸುಖ"

ಹಕ್ಕಿ ಕಕ್ಕಾವಿಕ್ಕಿಯಾಯ್ತು.

ಮರ ಮತ್ತೆ ಹೇಳಿತು–

"ನೋಡು, ಹೀಗೇ ನನ್ನ
ಎದೆ ಪೊಟರೆ ಮುಖ ಇಟ್ಟು
ಮಲಕ್ಕೋ,
ಎಂಥ ನಾದ ಕೇಳುತ್ತೆ
ಎಂಥ ಸಂಗೀತ ಹೊಮ್ಮುತ್ತೆ
ಎಂಥ ಸುಖ ಕಟ್ಟುತ್ತೆ"

ಹಕ್ಕಿ ಮುಖವಿಟ್ಟಿತು
ಹಿಗ್ಗಿನಲಿ ಮೈಮರೆಯಿತು.

ಮರ ತಟ್ಟಿ ಎಬ್ಬಿಸ್ತು.

"ನೋಡು, ದಿನವೂ ಬಂದು
ಇಲ್ಲೇ ಮಲಗು ನನ್ನ
ಅಭ್ಯಂತರ ಇಲ್ಲ. ಆದ್ರೆ

ಒಂದು ಮಾತು- ನೀನು
ಕಾಡು ಮೇಡು ಗುಡ್ಡ ಬಯಲು
ಅಲೆದು ಬರ್ತೀಯಲ್ಲ, ಅಲ್ಲಿ
ಕಂಡದ್ದನ್ನೆಲ್ಲ ನನಗೆ ಹೇಳಬೇಕು.”

ಮುಖ ಮೇಲೆತ್ತಲು
ಇಷ್ಟವಿಲ್ಲದ ಹಕ್ಕಿ ಹೇಳಿತು-

“ಅದ್ಕೇನಂತೆ, ಇಡೀ ರಾತ್ರಿ
ಅದೇ ಕತೆ ಹೇಳ್ತೀನಿ.
ಇಲ್ಲಿಂದ ಮಾತ್ರ
ನನ್ನ ಎಬ್ಬಿಸಬೇಡ.”

ಮೋಜಿಗಾಗಿ ಮೀನು ಹಿಡಿದ ದಿನ.

● ಆರ್. ವಿಜಯರಾಘವನ್

ತಾನೆ ಉದುರಿದ ಹಣ್ಣು, ಆಘಾತಕ್ಕುರುಳಿ
ನೆಲಸೇರಿದ ಹಸಿರು ಒಂದಾಗಿ ಕೊಳೆತ
ಹಸಿಮಣ್ಣು ತೇವದಲ್ಲಲೆವ ಹುಳ ಕೆದರಿ

ಹೆಕ್ಕಿ ಖಾಲಿ ಚೀಲದಲ್ಲಿಟ್ಟು ಕೋಲು
ತುದಿಗೊಂದಷ್ಟು ಉದ್ದದ ದಾರ ಮತ್ತೆ ತುದಿ
ಯಲಿ ಕೊಂಡಿ, ಫಳಫಳ ಬಿಸಿಲು

ಎಲ್ಲೋ ಅವಿತಿರುವ ಥಂಡಿ, ಆಡುವ ಮೋಡ

ಬಿಸಿಲಿನಮಲಿಗೆ ಸೊಕ್ಕಿದವನತ ಸೋರೆ
ಗಿಡಬಳ್ಳಿ ನೀರ ಬಿಂದಿಗೆ ಬಿಂಕ ಹೊತ್ತ ನೀರೆ.

ನಡು ಹಗಲ ಬಿಸಿಲಲ್ಲಿ ಥಳಥಳ ಹೊಳೆವ
ಕೊಳವ ಯಾವಂಚಿನಲಿ ಜೊಂಡು
ಹುಳುಗಳ ಹುಡುಕಿ ತಿನ್ನುವ ತೊಂಡು

ಮೀನಧಿಕ ಆಡುವ ಜಾಗ ಹುಡುಕಿ ಬದಿಗೆ
ಕರಿಕಲ್ಲು ಬಂಡೆ ಇದ್ದರೆ ಲೇಸು ಕೂತು ಚೂರು
ಚೂರಾಗಿ ಹೆಚ್ಚಿ ಎರೆಹುಳಕೆ ಬಾಯಿಲ್ಲ ಚೀರಿ

ಬೊಬ್ಬಿಡಲು: ಸಿಕ್ಕಿ ಕೊಕ್ಕೆಯತುದಿಗೆ
ಇನ್ನಷ್ಟು ಸ್ತಬ್ಧ ನೀರಿನ ಮೈಗೆ
ಇಳಿಸಿ ಒದ್ದಾಡುವ ಎರೆಹುಳಕೆ

ಆಡಲೆಷ್ಟೊಂದವಕಾಶ ಸುತ್ತ ಆಕಾಶ ನೀರು
ಅಲ್ಲಿ ಮೀನಿನ ಸಾಲು ಅನ್ನಕ್ಕಲೆಯುವ ಅವ
ಸುತ್ತಿ ಮುತ್ತನಿಕ್ಕುವುದು ಅಲೆಯ ಪಾಲು

ಸ್ಫಟಿಕ ಶುಭ್ರ ತಳಕಾಣಿಸಿದ ನೀರಲ್ಲಾಡುವ
ಮೀನು ಕೊಂಡಿ ಹಿಡಿದೆಳೆದು ತಂವ ಮುದ
ಕೈ ಪಟಕ್ಕನೆ ಚಿಮ್ಮಿ ಕೋಲನು ವಿಲಿವಿಲಿ ಒದ್ದಾಡಿದ್ದ

ಈಗಷ್ಟೆ ಆಡಿಕೊಂಡಿದ್ದ ಮೀನ ಕಂದನ ಬಾಯಿ
ಕೊಂಡಿಯ ಬಿಡಿಸಿ ಪಕ್ಕದಲ್ಲಿದ್ದ ಬುಟ್ಟಿ
ತುಂಬುವಾಗ ಹಿಂತಿರುಗಿ ಬಿಟ್ಟಬಾಯಿ

ಬಿಟ್ಟಂತೆಯೇ ಕಣ್ಣಗಲಿಸಿ ಕೂತ ಮುದ್ದಿನ ನಾಯಿ
ರೆಕ್ಕೆ ತನ್ನಗಲ ಬಿಡಿಸಿ ಗಿರಕಿ ಹೊಡೆಯುವ ಹದ್ದು
ಜೊಂಡು ಹೊದರಲಿ ಮೀಸೆ ಸವರುವ ಪೂಳಬೆಕ್ಕು

ಬಡವರು ಕಣ್ಣೊಳಗೆ ನಿಲ್ಲಬೇಕು.

● ರಾಮಗಿರಿ ರವೀಂದ್ರ

ಗಕ್ಕನೆ ನಿಂತ ಚಕ್ರಕ್ಕೆ ಕತ್ತು
ಸಿಕ್ಕರೆ ಅಪಾಯವಿಲ್ಲ; ಮೊನ್ನೆ ಹೀಗೇ
ಕತ್ತಿಗೆ ಕುತ್ತಿಗೆ ಸಿಕ್ಕಾಗ ಮಗುವಿನ
ಅಳುವ ಹಾಡಿತ್ತು ಊರೊಳಗೆ.

ಬೋಳು ಮರಕ್ಕೆ ಹೂವ ಸಿಕ್ಕಿಸಿದರೆ
ನವ್ಯ ಕಲೆಯ ಪ್ರಗತಿ; ದಿಕ್ಕು ತಪ್ಪಿದ
ಬಾಳಿಗೆ ಒಳಗೇ ಬೆಂಕಿ ಹಚ್ಚುವ ಜನರು
ನಾಳೆಗೆ ಬೆಳಕು ಬಂದರೆ ಇವರು ಯಾರು ?

ನಾವಿರುವ ಭೂಮಿಗೆ ಸುರಿವ
ಚಳಿಗೆ, ಬರಿಯ ಮೈಗೆ ಗಾಯ ಮಾಯ–
ಬೇಕು; ಸಾಕು ರಕ್ತ ಸುರಿಸುವ–
ಕೆಲಸ ಬಡವರು ಕಣ್ಣೊಳಗೆ ನಿಲ್ಲಬೇಕು.

ನೀರು, ಅನ್ನಗಳೇನು ಚಿನ್ನವೇ ಸ್ವಾಮಿ ?
ಗಳಿಗೆ ಗಳಿಗೆಗೂ ತೆರೆಯಬೇಕು;
ಹೃದಯ ಬೇಕು ಕಷ್ಟದ–
ಚಿತ್ರ ಬಿಡಿಸಿ ಹಾಡ ಬರೆಯಬೇಕು.

ಇನ್ನೂ ನೋಟಬುಕ್ಕಿನೊಳಗಿರುವ ಪುಟಗೋಳು.

● ರಾಘವೇಂದ್ರ ಪಾಟೀಲ

೧

ಅಂವ ಇದ್ದಕಿದ್ದಂಗೇ ಗಪ್ಪಗಡದ್ದಾಗಿ ಬಿಟ್ಟಿದ್ದ.

ಯಾರಿಗೂ ಹೇಳಿಲ್ಲ ಬಿಟ್ಟಿಲ್ಲ ... ಬೆಳಗ್ಗೆ ಎದ್ದು ಯಥಾ ಪ್ರಕಾರ ಹೊರ ಬಿದ್ದಿದ್ದ. ಹೊತ್ತು ಮುಣಗಿದರೂ ಮನಿಗೆ ಬರಲಿಲ್ಲ. ಕಲ್ಲವ್ವ ಮಗನಿಗೆ ಅಂದಳು– 'ಎಪ್ಪಾs ಅಜ್ಜ ಯಾಕೋ ಮನಿಗೆ ಬಂದೇ ಇಲ್ಲಾ. ಯಾವಾಗ ಹರ್‍ಯಾಗ ಹೊರ ಬಿದ್ದಾಂವಾs........ಮದ್ಯಾನದ ಊಟಕ್ಕೂ ಮನೀಕಡೆ ಹಾದಿಲ್ಲ. ಏನು ಘನಾಪಗದ ಇದ್ದೀತು ಈ ಮುದಕಂದೂ ಅಂತ ಹಾಂ ಚಾವಡೀ ಕಟ್ಟೆಗೆ ಇಲ್ಲಾಂತಂದರ ಈಸೂರದೇವರ ಗುಡೀ ಕಟ್ಟೆಗೆ ಕುಂತಿರತಾನು... .ಹೋಗಿ ಕರದ ಬರತೀ ಎಪ್ಪಾ... ?' ಹುಡಗ ಹಾಂ–ಹೂಂ... ಅನದs ಬಾಗಲಹೊರಗ ನೋಡಿ ಅಡಿಗಿಯ ಮನಿಯೊಳಗ ದೃಷ್ಟಿ ಹಾಯಿಸಿಕೋತ ಕುಂತಾಗ ಕಲ್ಲವ್ವ– ಇನs ರೊಟ್ಟಿ ಆಗಬೇಕ ಹೋಗು ... ಮುದಕ ಮನಶಾ ಹರ್‍ಯಾಗಿಂದ ಊಟ ಆಗಿಲ್ಲ ... ಹೋಗ ಎಪ್ಪಾ ಹೋಗು .ಬಂದ ಗಳಸೇ ನಿಂಗ ಬೆಲ್ಲಾ ಕೊಡತನ ಹೋಗು ....

ಕಲ್ಲವ್ವ ಬೆಳಗಿನ ದಗದಗಳನ್ನೆಲ್ಲಾ ಗಡಿಬಿಡಿಯಿಂದ ಬಗಿಹರಿಸಿದಳು. ಹೆಂಡಕಸಾ–ಹಿಂಡೂದು ಕಡ್ಯೂದು ... ಬೆಣ್ಣೀ ತೆಗದು ಮಗನ್ನ ಎಬಿಸಿ ಅವನ ಮಕ ತೊಳದು ಬೆಲ್ಲದ ಕರಣೀ ಒಂದು ಕೊಟ್ಟು ಸಾಲಿಗೆ ಅಟ್ಟಿದಳು. ಒಂದು ಕೊಡಾ ನೀರು ತಂದಿಟ್ಟು ಜಳಕಾ ಬಗೀಹರಿಸಿಕೊಂಡು ಮಡಿಮಾಡಿದ ಸೀರೀ ಉಟಗೊಂಡು, ಕುಬಸದ ಖಣ ಹೂಬತ್ತಿ ಮತ್ತ ಉಡಿ ತುಂಬುವ ಸಾಮಾನು ತಗೊಂಡು ನೆಟ್ಟಗs ಲಕ್ಕವ್ವನ ಗುಡಿಗೆ ಬಂದಳು. ಮಂದಿ ಕೂಡಲಿಕ್ಕೆ ಸುರುವಾಗಿತ್ತು. ಪರಊರಿನ ಮಂದಿಯೂ ಬಂದಿತ್ತು........ಅಲ್ಲೇ ಗುಡಿಯ ಹೊರಗ ಪರಊರಿನ ಒಂದು ಮುದುಕನಿಗೆ ದಮ್ಮು ಬಂದು ಗುರು–ಗುಡು ಅಂತ ಗೂರಿಕೋತ ಚಾದರ ಹೊತಗೊಂಡು ಕಾಲ ಮಡಿಚಿ

ಡಬ್ಬು ಬಿದ್ದಿತ್ತು, ಕಲ್ಲವ್ವನಿಗೆ ಆ ಮುದುಕನ್ನ ನೋಡಿದಾಗ ಕಲ್ಲಯ್ಯನ ನೆನಪು ಬಂದು ಉಸ್.. ಅಂತ ಉಸರು ಬಿಟಗೋತs ಅದರ ತುದಿಗೇ–ಸ್ವಾs... ಅಂತ ಅನಕೋತ ಗಂಟೀ ಬಾರಿಸಿ ಗರ್ಭಗುಡಿಯ ಹೊಸ್ತಿಲಕ್ಕ ತಲಿ ಹಚ್ಚಿ ನಮಸ್ಕಾರ ಮಾಡಿ ತನ್ನ ಗುರುತಿನ ಮಂದಿ ಇಲ್ಲದ ಒಂದ ಮೂಲೀ ಹಿಡಿದು ಕುಂತಳು.

ಇನs ಪೂಜಾರಿ ಬಂದಿರಲಿಲ್ಲ...ಈಗ ಒಂದ ವರ್ಷದಿಂದಲೂ ಈ ಗುಡಿಯೊಳಗ ಲಕ್ಕವ್ವ ಜಾಗೃತಳಾಗಿಬಿಟ್ಟಾಳ. ಪೂಜಾರಿಯ ಮೈಯಾಗ ಬಂದು ಭಕ್ತಾದಿಗಳ ಪ್ರಶ್ನೆಗಳನ್ನ– ತ್ರಾಸು ತಾಪತ್ರಯಗಳನ್ನ ಬಗಿಹರಸಲಿಕ್ಕತ್ಯಾಳೆ....ಗುಡೀ ವಾರದಿಂದ ವಾರಕ್ಕೆ ಸಿಂಗಾರವಾಗುತ್ತಿದೆ.. ಯಾವ ಭಕ್ತ ತಾಯಿಯ ಗುಡಿಗೆ ಗ್ವಾಡಿಗೆ ಬಡೀಲಿಕ್ಕೆ ಗಡಿಯಾರ ಕೊಟ್ಟ– ಯಾವ ಭಕ್ತ ಗ್ವಾಡಿಗೆ ಬಣ್ಣಾ ಹಚ್ಚಿಸಿದ....ಮತ್ಯಾವ ಭಕ್ತ ಗರ್ಭಗುಡಿಯ ಬಾಗಲಕ್ಕ ಬೆಳ್ಳೀ ತಗಡು ಬಡಿಸಿದ...ಮನುಷ್ಯಮಾತ್ರರ ತ್ರಾಸು ತಾಪತ್ರಯಗಳನ್ನ ಕಳೆಯುವ ಜಾಗೃತ ತಾಯಿಗೆ ಹರಕೆಯನ್ನ ಒಪ್ಪಿಸುವ ಮಂದಿಯ ತಾಪತ್ರಯವೇ ! ಅದರೊಳಗೂ- ಈ ತಾಯಿ- ಲಕ್ಕವ್ವ ಅಂದರ ರೊಕ್ಕದ ದೇವರು. ಭಕ್ತರ ಬಡತನ ಬಂದೀತೇ ಗುಡಿಯ ಸಿಂಗಾರ ನೋಡಿ ಕಲ್ಲವ್ವನಿಗೆ ತಾಯಿಯ ಬಗೆಗಿನ ಭಕ್ತಿ ಇನಷ್ಟು ಉಕ್ಕಿ ಬಂತು...ನನ ತಾಯಿ ಮನಸ ಮಾಡಿದರ ನಮ್ಮ ತರಾಸು ಯಾವ ಮೂಲೀದು ?... ನಮ್ಮವ್ವ ಮನಸ ಮಾಡೇ ಮಾಡತಾಳು.. ಉಡೀ ತುಂಬೇ ತುಂಬತಸಲಾ...ಅಂತ ಮನಸಿನೊಳಗ ಭಕ್ತಿಯಿಂದ ಲೆಕ್ಕಾ ಹಾಕ್ಕೋತ ತನ್ನಂಗs ಕುದಕೋತ ಕುಂತ ಮಂದಿಯ ನಡವೆ ಪೂಜಾರಿಯ ಹಾದೀ ನೋಡಿಕೋತ ಕುಂತಳು.

ಬಲಗೈಯಾಗ ಬೆಳ್ಳೀ ಛಡೀ, ಎಡಗೈ ಮುಂಗೈಗೆ ಬಂಗಾರದ ಖಡೇ ವಸ್ತ್ರಿಯ ವಲ್ಲಿಯನ್ನ ಉಟಗೊಂಡು ಪೂಜಾರಪ್ಪ ಬಂದ. ಇದೇ ಈಗ ಜಳಕಾ ಮಾಡಿದ ಅವನ ವದ್ದಿಯಾದ ಉದ್ದ ಜಡಿಗಟ್ಟಿದ ಕೂದಲು ಬೆನ್ನ ಮ್ಯಾಲೆ ಹರಡಿಬಿದ್ದು- ಅದರಿಂದ ತಟ ತಟ ಅಂತ ನೀರು ಬಸಿಯಲಿಕ್ಕತ್ತಿತ್ತು. ಕುಂತ ಮಂದಿ ಬಂದಾ ..ಬಂದ ಅಂತ ಪಿಸಿ ಪಿಸಿ ಮಾತಾಡಿಕೊಂಡು– ಎವ್ವಾ ನೀನs ತಾಯೀ ಅಂತಂದು ನೆಲಕ್ಕೆ ಕೈ ಹಚ್ಚಿ ನಮಸ್ಕಾರ ಮಾಡಿದರು... ಪೂಜಾರಿ ಥಗ್ ಅಂತ ಗರ್ಭಗುಡಿಯ ಬಾಗಿಲಿಗೆ ತಲಿಹಾಯಿಸಿ- 'ಹಾss ...' ಅಂತ ಒಂದು ಥರ ವಿಕಾರವಾಗಿ ಒದರಿ- ಬಗ್ಗಿ ಒಳಗ ಹೊಕ್ಕು- ಹಂಬಾs .. ಅಂತ ಆಕಳ ಕರ ಒದರಿಧಂಗ ಒದರಿಕೋತ ತಾಯಿಯ ಮುಂದ ಉದ್ದಕs ಬಿದ್ದ. ಗುಡಿಯೊಳಗ ಕುಂತ ಮಂದಿ ಬುದು ಬುದೂ ಅಂತ ಎದ್ದು ಓಡಿ ಬಂದು ಗರ್ಭಗುಡಿಯ ಬಾಗಲಮುಂದ ತಾವೂ ಉದ್ದಕs ಬಿದ್ದರು. ಪೂಜಾರಿ

ಮುಸುಮುಸೂ ಅಂತ ತೇಕಿಕೋತ ಪ್ಯಾಲಕ ಎದ್ದ ಆವನ ಕಣ್ಣಗೋಳು ಗುಲ ಗಂಜಿಯು ಹಂಗ ಕೆಂಪಗs ಉರಿಯುತ್ತಿದ್ದವು. ಉಪ್ಪಬಿದ್ದ ಮಂದಿ ಎದ್ದು ಕೈ ಮುಗಿದು ತಾಯಿಯ ಕೆಂಡದಂತಹ ಕೆಂಪುಗಣ್ಣಿನ ರೇಸು ನೋಡಿ ಇನಷ್ಟು ಭಕ್ತಿಯಿಂದ ಮುದ್ದಿಯಾದರು.

....ಎರಡನೂರದಸರತೇ ಗುಕ್... ಗುಕ್ ಅಂತ ಬಿಕ್ಕಿದ ಅಂದ ಆದ್ಯಾಲ ಯಾರಿಗೋ ಓ ಕೊಡುವವಸಂಗ ಹಾಂ....ಅಂತ ಚೀರಥಂಗ ಒದರಿದ ಆದ್ಯಾಲ- 'ಇಂದ ಬಂದ್ಯಾ! ತಾಯೀ ನೆಪ್ಪಇಂದ ಆತೂ ಮಗಳs .. ನೀನು .. ನೀ- ಹೊಳೀ ಕಡೀ ಬಾಗಿಲಿನ ಮನಿಯಾಕಿ....ಬಾ ಮಗಳs ಬಾ....' ಅಂತಂದಾಗ ಅಲ್ಲಿನ ಹೆಂಗಸೂರು ತಮ್ಮ ತಮ್ಮ ಮನೀ ಬಾಗಲ ಯಾವ ದಿಕ್ಕಿಗೆ ಅಂತ ನೆನಪು ಮಾಡಿಕೋಲಿಕ್ಕೆ ಸುರುಮಾಡಿ ದಳು. ಕಲ್ಲವ್ವಗ- ಹಾ .. ತಾಯಿ ನನ್ನs ಮದಲ ಕರದಳು .. ಅಂತ ಮನಸಿಗೆ ಸಮಾ ಧಾನ ಆಸಿಸಿತು. ಯಾಕಂದರ ಒಮ್ಮೊಮ್ಮೆ ಮೂರನಾಕವಾರ ತಾಯಿಯ ನುಡಿಗೆ ಕಾದುಕುಂತರೂ ಆಕಿ ಕರಿಯುದದೇ ಇಲ್ಲ . ಸಂತೋಷದ ಜೋಡೀನೇ ಕಲ್ಲವ್ವಗ ಅಂಜಿಕೆನೂ ಬಂತು. ಯಾಕಂದರ- ತಾಯಿ ಇಂದ ಬಂದ್ಯಾ ಅಂದಳು . ಎದ್ದು ಬಾಗಲಕಡೇ ಬರುತ್ತಿದ್ದರ ಇನೊಂದ ಮೂಲಿಂದ ಇನೊಬ್ಬಾಕಿ ಎದ್ದು ಬಂದು ಆಕೆನೂ ಹೊಸ್ತಲಕ್ಕ ತಲೀ ಹಚ್ಚಿ ನಮುಸ್ಕಾರ ಮಾಡಿದಳು. ಕಲ್ಲವ್ವ ಎಲಾ ಇಕಿನ....ಅಂತ ಮನಸ್ಸಿನ್ಯಾಗ ಅನಕೋತ ತಾನೂ ಸ್ವಾಮಿ ಮಾಡಿದಳು ...ಈಗ ತಾಯಿ ಇನೊಂದು ಗುರುತು ಹೇಳಿದಳು ನೀನು... ಮಗಳs ನೀನು... ಬಾಗಲ ಮುಂದ ರಗತದ ಬಣ್ಣದ ಪುಸ್ಪದ ಗಿಡ ಇರಾಕಿ ಅಂತಂದಾಗ ಕಲ್ಲವ್ವ ಗೆಲುವಿನಿಂದ ಆ ಇನೊಬ್ಬಾಕಿನ್ನ ನೋಡಿದಳು. ಆಕಿ-'ನಾ ಅಲ್ಲs ! ... ನೀ ಕರದಾಗ ಬರತನ ತಾಯೀ. ನಿನ್ನ ಬಿಟ್ಟ ಏನಅsತೇ ?....ನನ್ನೂ ಲಗೂಟs ಕರದರ ಪಾಡ ಆಗತತೆದಾ....' ಅಂತಂದು ಎದು ತನ್ನ ಜಾಗಿಕ್ಕ ಹೋದಳು.

....ಕಲ್ಲವ್ವ ತನ್ನನ್ನೆ ಮೊದಲು ಕರೆದದ್ದಕ್ಕೆ ಇನಷ್ಟು ಭಕ್ತಿ ಭಾವ ಹೊಂದಿದವಳಾಗಿ ಉಪ್ಪಕೇ ಬಿದ್ದು ಎದ್ದು ತಾಯಿಯ ಮಕದ ಕಡೆ ನೋಡಿದರೆ ಪೂಜಾರಪ್ಪನ ಕಣ್ಣ ಗೋಳು ಗಿರಿ-ಗಿರಿ-ಗಿಮಿ-ಗಿಮಿ ಅಂತ ತಿರುಗುತ್ತಿವೆ. ಇಕಿ ತಲಿ ಬಗ್ಗಿಸಿ ಕೈ ಮುಗದು ಕುಂತಳು .. ತಾಯಿಯ ನುಡಿ ಸುರುವಾತು....'ಮಲೀ ಕುಡಿಸಿದ ಆಕಳಾ ಮರತ ಕರಾ ಬಂದಂಗ ಬಂದ್ಯಾ ಮಗಳs... ನಿನ್ನ ತತಲಾಸಲಾಕ (ತತಾಸ್ತು ಹೇಳಲಿಕ್ಕೆ) ನಾ ಇದ್ದರೂ ನಿನಗ ಇಸಲಾಸ (ವಿಶ್ವಾಸ ?) ಇರಾಕಿಲ್ಲ... ನಾ ಮಶಾನದಾಗಿನ ಪುಸ್ಪ ಆದಿನಲs ಮಗಳ ನಿನಗ ? .. ಇರಲೆದಾ ಮಗಳs ಇರಲಿ.... ತತಲಾಸಿಕೋ ತತಲಾ ಸಿಕೋ ...' ಅಂತಂದಾಗ ಕಲ್ಲವ್ವನ ಮೈಯಾಗ ಥಂಡಿ ತುಂಬಿದಂಗಾಗಿ ಗಡಗಡ

ಅಂತ ನಡಗಿದಳು, ಅವಳಿಗೆ ತಾಯಿಯ ಕಾಡಾಟದಿಂದಲೇ ತನ್ನ ಮಾವನು ಮನಿ ಬಿಟ್ಟು ಹೋಗಿರುವನು ಅಂತ ಮನಸಿಗೆ ಖಾತ್ರೀ ಆದಂಗಾಗಿ, ಗರ್ಭಗುಡಿಯ ಹೊಸ್ತಿಲವ್ಯಾಲ ಹಣಿ ಊರಿ- 'ನನ ತಪ್ಪ ಆಗೇತಿ ತಾಯೀ .. ಹೊಟ್ಯಾಗ ಹಾಕ್ಕೋ ನಿನ್ನ ಉಡ್ಯಾಗ ಬಿದ್ದಾಕಿ ನಾ... ನಿನ್ನ ಬಿಟ್ಟ ನಾ ಎಲ್ಲಿ ಹೋದೀನು... !' ಅಂತ ಅನತಿರಬೇಕಾದರೆ ತಾಯಿ ತನ್ನ ನುಡಿಯನ್ನ ಮತ್ತ ಮುಂದುವರಿಸಿದಳು....

....ಮದ್ವಿನ ತಿರಿಗಿತು. ಸೂರ್ಯ ನೆತ್ತಿಗೆ ಬಂದು ಹೊತ್ತು ಮುಳುಗುವ ಕಡೆಗೆ ಜಾರಲಿಕ್ಕೆ ಸುರುಮಾಡಿ ಕಾಲೊಳಗಿನ ನೆಳ್ಳು ಉದ್ದವಾಗಲಿಕ್ಕೆ ಸುರುಮಾಡಿದವು. ಅಡ್ಯಾಡಿ ಅಡ್ಯಾಡಿ ಬಸವಣ್ಣಿ ಬಸವಳಿದ. ಜಾಪನ ಚಾದಂಗಡಿಯ ಆಚೆಗಿನ ಬಸರೀಗಿಡದ ಕಟ್ಟಿಗೆ ಉಶ್ ಅಂತ ಕೂತ. ಕೂತರೇನು– ಮನಸ್ಸು ಸುಮ್ಮನೇ ಕೂಡಗೊಟ್ಟೇತೇ ? ಮತ್ತ ತಿನಗಾಮರಗಾ ಎಳದಾಡಿ ಅವನ್ನ ಘಾಸಿಗೊಳಿಸಲಿಕ್ಕೆ ಸುರುಮಾಡಿತು. ಇನ್ನ ಮನಸಿನ್ಯಾಗs ಇಟಗೊಂಡು– ಅವನ್ನ ಇಲಪಲ್ಲಿ ಹುಡಿಕ್ಯಾಡಿಕೋತ ಅಡ್ಯಾಡುವದು ಉಪಯೋಗವಿಲ್ಲ ಅಂತ ಅನಕೊಂಡು, ಮಂದಿಯ ಮುಂದ ಹೇಳಲಿಕ್ಕೆ ಮನಸ್ಸನ್ನ ತಯಾರು ಮಾಡಿಕೊಂಡ. ಮತ್ತ ಯಾಕೋ ಅನುಮಾನ... ಅನುಮಾನ....ಹೇಳಲ್ಯೋ ಬ್ಯಾಡೋ ಅಂತ ತಳಮಳಕ್ಕ ಸಿಕ್ಕ ಅವನಿಗೆ ಒಮ್ಮೆಗೆಲೇ ಗುರಯ್ಯಸ್ವಾಮಿಗಳ ನೆನಪು ಬಂದು– ಹೊತ್ತಗೀನನೇ ತಗಿಸಿನೋಡಬೇಕು . ಅಂತ ಅನಕೊಂಡು ಸಟಕ್ಕನೇ ಎದ್ದು ಗುರಯ್ಯಸ್ವಾಮಿಗಳ ಮನಿಗೆ ಬಂದ ...

....ಏನೇನೋ ಬರದು– ಲೆಕ್ಕಾಮಾಡಿ ...'ಹೂಂ ...' ಅಂತ ಉಸರು ಬಿಟಗೋತ ಗುರಯ್ಯನವರು ಪಾಟೀ ಡಬ್ಬು ಹಾಕಿದರು. ಬಸವಣ್ಣಿ ತಳಮಳಿಸಿಕೋತ ಅವರ ಮಕ ನೋಡಿದ. ಅವರು ಕಣ್ಣು ಕಿವಿಚಿ ಸಣ್ಣಗಾಗಿಸಿಕೊಂಡು ಬಸವಣ್ಣಿನ್ನ ತೀಕ್ಷ್ಣವಾಗಿ ದಿಟ್ಟಿಸಿ ನೋಡಿ ಇನೊಮ್ಮೆ ಹೂಂ ಅಂತ ಉಸರು ಬಿಟ್ಟವರೇ....ಅರಶಿಣ ಬಳದು ಹಳದೀ ಆಗಿದ್ದ ಬಿಳಿಯ ಅರಿವಿಯೊಳಗ ಸುತ್ತ ಕಟ್ಟಿ ಇಟ್ಟಿದ್ದ ಕವಡಿಗಳನ್ನ ಬಿಚಿಗೊಂಡು ಐದು ಕವಡಿಗಳನ್ನ ಆರಿಸಿಕೊಂಡರು ಅಂಗೈಯೊಳಗ ಇಟಗೊಂಡು ಎರಡೂ ಅಂಗೈಗಳ ನಡುವ ತಿಕ್ಕತೊಡಗಿದರು .. ಕವಡಿಗೋಳು ಕಲ ಕಲ ಅಂತ ಒಂದಕ್ಕೊಂದು ತಿಕ್ಕಿ ಸಪ್ಪಳಾ ಮಾಡತಿದ್ದರೆ ಗುರಯ್ಯನವರು ಅವುಗಳ ತಿಕ್ಕಾಟದ ಸಪ್ಪಳಕ್ಕ ಹೊಂದುವಹಂಗ ಶಿವ-ಶಿವ ಅಂತಲೋ ಬಸವ–ಬಸವ ಅಂತಲೋ ಮಣ ಮಣ ಅಂತ ತುಟಿಯೊಳಗs ಅನಕೋತ ಒಮ್ಮೆ ಕಣ್ಣು ಮುಚ್ಚುವದು ಒಮ್ಮೆ ಕಣ್ಣು ತೆಗಿಯುವದೂ ಮಾಡುವರು ಇವ ಅಂಗೈಯೊಳಗ ಜೀವಾ ಹಿಡಕೊಂಡು ಅವರ ಮೋತಿ ಮತ್ತ ಗಸ ಗಸ ಅಂತ ಕವಡಿಗಳನ ತಿಕ್ಕುತ್ತಿದ್ದ ಕೈಗಳನ ಆಸೆಯಿಂದ ನೋಡಿಕೋತ ಕೂತ ಚಕ್ಕಂತ ಕೈ ಬಿಚ್ಚಿ–ಚೊಚಕ್ ಅಂತ ನೆಲಕ್ಕ ಬೀಳುವ ಕವಡಿಗಳು– ಮುಂದಕ ಇಲ್ಲೇ

ಇದ್ದಾನ- ಇಂಥ ನಾಳೆ ಬರತಾನ . ಅಂತನ್ನೂನ ಮಾತು ಹೇಳುವ ಹಂಗ ಬಿತ್ತ್ಯ ಡಬ್ಬು ಬಿದ್ದಾವು ಅಂತ ನಿರೀಕ್ಷೆಯಿಂದ- ಅವರ ಕೈಗಳನ್ನ- ಆಸೆ ಕಣ್ಣಾ ದಂಗೆ-ತದೇಕ ನೋಡಿಕೋತ ಕುಂತಿದ್ದ ..

....ಸಟಕ್ಕನಽ ಬೆನ್ನು ನೆಟ್ಟಗಾಗಿಸಿ- ಸಂದಿಗ್ಧ ದೃಷ್ಟಿಯಿಂದ ಬಸವಣ್ಣನ್ನ ಪಿಳಿಪಿಳಿ ಅಂತ ನೋಡುತ್ತ- ಹಾಂ .. ಅಂತ ಮರತದ್ದನ್ನ ನೆನಪು ಮಾಡಿಕೊಂಡವನಂಗ ಮಾಡಿ ಹೇಳಲಿಕ್ಹತ್ತಿದ ...'ಹಿಂಗ ಹೇಳೆತತಿ .. ಒಂಟಿಕಾಗಿ ನೀರ ಮುಟ್ಟಲಿಲ್ಲ ನುಚ್ಚ ಮುಟ್ಟ ಲಿಲ್ಲಾ. ಕಾಽ ....ಅಂತ ಒಂದಸರತೇನೂ ಒದರದಽ ಬಿಡದಽ ಪಕ್ಕಾ ಬೆಚ್ಚೇತಿ. ಹಿ ಹೋಳೀದಿಕ್ಕಿಗೆ- ಬಡಗಣಕ್ಕ ಹ್ಯಾದರ ಹೋಳೀ ತುಂಬಿ ಹರೀತಿತ್ತು. ತುಂಬಿದ ಹೊಳಿ ದಾಟಾಣ ಆಗಲಾರದಽ ತೆಂಕಣಕ್ಕ ಹೊಳ್ಳಿತು....ಮುಗಲ ನೋಡಿದರ ಮುಗಲ ತುಂಬ ಮಾಡ ತುಂಬ್ಯಾವು. ಮಳೀ ಬಿದ್ದಲ್ಲಿ ಮಳಕಿ ಒಡೀಬಹುದು. ತೆಂಕಣ ದಿಕ್ಕಿಗೆ ಬೀಸೂಗಾಳಿ, ಮಾಡ ಎಲ್ಲಾ ಎಳಕೊಂಡ ಹೊಂಟೈತಿ .. ಕಾಗಿ ಕಾಽ ಅನದಽ ಕೊರಾ ಅನದಽ ಮಳೀಗೆ ಸಿಗಬೇಕಂತ ಹಾರಿದ್ದೇಹಾರಿದ್ದು-ಹಾರಿದ್ದೇಹಾರಿದ್ದು.... ಮಳೀಗೆ ತೊಯ್ಯತೈತಿ. ನೆನದ ತಪತಪಾ ಅಂತಾ ಬಸೀತೈತಿ... ಒಡದೀತು. ತನ್ನಾ ಇನ್ನೇನು ಮಳಕಿ ಒಡದೀತು ಬ್ರಹ್ಮಾಂಡದ ಒಂದು ಅಂಡ ಪಿಂಡ ಆಗೂಯಾಳೀ ಬಂದಾಗ ಅದು ತಟ್ಟನಽ ಬಿರದು ಮುಗಳು ಬಿಟ್ಟೀತು ...ಸದ್ದೇಕ್ಕ ಮಾತ್ರ ಇನ್ನೂ ಗುಡಗಿನ್ಯಾಗ ಮಿಂಚಿನ್ಯಾಗ ಸಿಕೊಂಡೈತಿ ...' ಒಮ್ಮೆ ತನ್ನ ಪಾಟಿಯ ಮ್ಯಾಲಿನ ಲೆಕ್ಕಾ ಇನ್ನೊಮ್ಮೆ ತನ್ನ ಯಾವುದೋ ಹಳೇ ಪುಸ್ತಕಾ ನೋಡಿಕೋತ ಏನೋ ಧೇನಿಸುವವನಂಗೆ ಕಾಣುತಿದ್ದ ಗುರಯ್ಯನವರು ಇಷ್ಟು ಹೇಳಿ ಮತ್ತೊಂದು ಮಾತಾ ಡದೇ ಬಸವಣ್ಣನ ಕಣ್ಣೊಳಗ ಕಣ್ಣಿಟ್ಟು ನೋಡಿದರು ...

ಸ್ವಾಮಿಗೋಳು ಹೇಳಿದ್ದನ್ನ ಅರ್ಥಾಮಾಡಿಕೋಬೇಕಾದರ ಬಸವಣ್ಣಗೆ ಮದಲು ಗುರಯ್ಯಸ್ವಾಮಿಗಳ ದೃಷ್ಟಿಯಿಂದ ತನ್ನ ದೃಷ್ಟಿಯನ್ನು ಬ್ಯಾರೇಮಾಡಿಕೊಳ್ಳಬೇಕು ಅನಿಸಿತು. ಭಾರವಾದದ್ದೊಂದನ್ನ ಎತ್ತುವವನಂಗೆ ಕಷ್ಟಪಡುತ್ತ ಕಣ್ಣುಗಳನ್ನ ಚಲಿಸಿ ನಿಧಾನಕ್ಕೆ ಎಡ-ಬಲ ನೋಡಿ ಆಮೇಲೆ ನೆಲದಕಡೆ ನೋಡಿಕೋತ ಸ್ವಾಮಿಗಳ ಜೋತಿಶಾಸ್ತ್ರಕ್ಕ ಅರ್ಥಹಚ್ಚುವ ಕಾಯಕಕ್ಕ ತೊಡಗಿದ...

....ಬೆಳಗಿನಿಂದ ಒಂದಽ ಸವನಽ ಅಡ್ಡ್ಯಾಡಿ ದಣಿದ ಅವನ ಕಣ್ಣುಗೋಳು ಗಟ್ಟಿಯಾಗಿ ಮುಚಿಗೊಂಡ ಬಿಟ್ಟವು. ನೋಡ ನೋಡುವದರೊಳಗೇ ನಿದ್ದಿ ಹತ್ತಿತು ಕನಸಿನ್ಯಾಗ ಎಲ್ಲ್ಯೋ ದೂರದೊಳಗ- ತನಗ ಗುರ್ತು ಇಲ್ಲದ- ಹಿಂದ ಎಲ್ಲ್ಯೋ ನೋಡಿದ ಒಬ್ಬ ಮುದಕ ಮನಶಾ ಸಂಗ್ಯಾ ಆಗಿ ಗಂಗೀ ಜೋಡೀ ಕುಣಿಯೂದು ಕಾಣಿಸಿತು.

ಆ ಮನಶಾನ ಗುರ್ತು ಹಿಡಿಯಲಿಕ್ಕೆ ನೋಡಿದರ ಎಳ್ಳಿಲ್ಲೂ ನೆನಪೇ ಆಗವಲ್ಲದು ... ಮುಂದ .. ಚುಕೂಬುಕೂ ಅಂತ ಅಗ್ಗಿನಗಾಡೇದೊಳಗ ಹೊಂಟಾನೆ. ಬರೇ ಸಪ್ಪಳಾಗತದ. ಇಂಜನ್ನು ಮುಂದ ಹೋಗಬೇಕಲ್ಲದು .. ತುಯ್ದಾಟ ಇದೆ .. ಕೂs ಅಂತ ಕೂಗತದೆ. ಏನು ಮಾಡಿದರೇನು– ಗಾಡೀ ಮಾತ್ರ ಒಂದ ಇಂಚೂ ಮುಂದ ಸರಿಯವಲ್ಲದು ಹಾs ...ಅಂದ–ಹೋ . ಅಂದ. ಮುಂದ ನಡೀ ಅಂದ. ಊಂಹೂಂ !.... ಚಲ್ ಅಂದ ಚಾಲ್... ಅಂದ. ಬುಲ್‌ಬುಲ್ ಅಂದ. ಗಾಡಿಯನ್ನ ಮುಂದಕ ನಡಸುವ ಮಂತ್ರ ಮರೆತುಹೋಗಿದೆ ಹಳಿಯ ಮ್ಯಾಲ ಒಂದಿಂಚೂ ಸರಿಯವಲ್ಲದು. ಹೋsss .. ಅಂತ ಗೋಳ್ಯಾಡಿ ಅಳಲಿಕ್ಕೆ ಹತ್ತಿದರೆ ಕುಂತ ಅಗ್ಗಾಡಿಯೇ ಮಾಯವಾಗಿ ಸುತ್ತಲೆಲ್ಲಾ ಉಸುಕು ಹರಡಿದ ಮರಳುಗಾಡಿನೊಳಗೆ ಏಕಾಂಗಿಯಾಗಿ ಕೂತಿದ್ದಾನೆ .. ಒಂದ ಗಿಡಾ ಇಲ್ಲಾ ಕಂಟಿ ಇಲ್ಲಾ .. ಕಾs ಅನ್ನುವ ಕಾಗಿ ಇಲ್ಲಾ ಗೂs ಅನ್ನುವ ಗೂಗಿ ಇಲ್ಲಾ ! ...ಅಖಂಡ ಉಸುಕಿನ ಆ ಬಯಲಿನೊಳಗೆ ಒಂದು ಅಸಂಬದ್ಧ ಸಂಗೆ– ಉಸುಕಿನ ಮ್ಯಾಲಬಿದ್ದ ಒಂದು ಮೀನಿನಂಗ–ಯೋಜನ ಯೋಜನ ನೆಳ್ಳು ಚಾಚಿಕೊಂಡು ಸೂರ್ಯೋದಯಕ್ಕೋ ಸೂರ್ಯಾಸ್ತಕ್ಕೋ- ಯಾವದಕ್ಕೋ ಕಾದು ಕೊಂಡವನಂಗೆ– ಉಸಲು ಬಿಡದೇ ನಿಶ್ಚಲನಾಗಿ ಕುಂತುಬಿಟ್ಟದ್ದಾನೆ....ಅಥವಾ ನಿಂತಿದ್ದಾನೋ ಹಿಂಗೆ ಅಂತ ತಿಳಿಯದಂತ ಸ್ಥಿತಿಯೊಳಗ....

೨

... ಅವ ಏಕತಾರಿಯನ್ನ ಹಿಡಕೊಂಡು ಒಂದೆs ಸವನs ಟುಂಯ್ .. ಟುಂಯ್ ಅಂತ ಮೀಟಿಕೋತ ಕುಂತಿದ್ದ ಒಮ್ಮೆ ಮೀಟಿದ ತಂತಿಯ ಧನಿ ತನ್ನ ತರಂಗಗಳನ್ನು ಗಾಳಿಯೊಳಗೆ ತೆಳ್ಳಗs ಹಾಸಿ ಕರಗುವಕಿಂತ ಮದಲs ಇನ್ನೊಂದು ತಂತಿಯಮೀಟು.... ಮೊದಲಿನದರ ಹಾಸಿನೊಳಗ ಇದು ಹೊಕ್ಕು..ಸಮನಾಗಿ ಏರೀ..ಇಳದೂ-ಏರೀ..ಇಳದೂ ಅವನ್ನ ಕೇಂದ್ರ ಮಾಡಿಕೊಂಡು ಆ ತರಂಗದ ವೃತ್ತಗಳು ಸುತ್ತಲೂ– ಮೂರ್ತಗೊಂಡು ನಿಂತುಬಿಟ್ಟವೆ ಸುತ್ತಲೂ ಚಾವಡಿಯ ಗ್ವಾಡಿಗಳು ಅತ್ತಇತ್ತ ಗಾಳಿ ಆಡದೇ ಒಳಗಿನ ಹವಾ ತನ್ನೊಳಗ ತಾನs ಕುದಿಯಲಿಕ್ಹತ್ತದೆ ಹ್ಹುಂ!....ಅಂಥದ್ದರೊಳಗ ಈ ನಾದದ–ತರಂಗದ ಸುತ್ತುಗಳು ಬ್ಯಾರೇ ! ಸುತ್ತುಗಳ ಹೊರಗೆ ಸುತ್ತು--ಸುತ್ತುಗಳ ಹೊರಗೆ ಸುತ್ತು . ಸುತ್ತಿನೊಳಗೆ ಸುತ್ತಿ ಸುತ್ತಿ ಮತ್ತೆ ಸುತ್ತುಗಳಿಗೆ ಸುತ್ತಿಕೊಳ್ಳುವ ಈ ಏಕತಾರಿಯ ಧನಿ ಜೇಜ್ಜೈನು ! ಕಲ್ಲಯ್ಯಗ ಯಾಕೋ ಏನೋ ಜೇಜ್ಜೈನು ಮೂಡಿತು. ಮೈಯು ಬೆವರಿ ಧೋತರದಿಂದ ತಿರತಿರಗಿ ಒರೆಸಿದಷ್ಟೂ ಬೆವತು....ಆಹಾs! ಏನು ಬೆವರು ಏನು ಬೆವರು!....ಹರಿದು ಹೊರಗ ಹೋದೀತಂದರೆ ಸುತ್ತುಗಳ ಕೋಟೆ.

...ಬೆವರು ತುಂಬಿ ಮುಳಿಗಿ ಹೋದೀನೆಂಬ ಅಂಜಿಕೆ ಮೂಡಿಥಂಗಾತು. ಕಲ್ಲಯ್ಯನ ಜೇಜ್ಜೈನು ಸಟಕ್ಕನೇ ಬೆಪೆಹರಿದ ಬಿಲ್ಲಿನ ಹಂಗೆ ನಿಮಿರಿ ನೆಟುಗಾಗಿ– ಅವ ಒಮ್ಮೆಗೇಲೇ

ಎಷ್ಟು ನಿಂತ. ಮಲೆತುನಿಂತ ಬೆವರಿನೊಳಗೆ ಕಾಲು ಎತ್ತಿ ಇಟಗೋತS ಸುತ್ತಿನ ಒಂದು ಬಿಂದುವಿನ ಕಡೆ ಹೊಂಟ....ಹಾಂ ಅದು- ಆ ಬಿಂದು ಕರಗಿತು. ಆಗ ಸುತ್ತು ಅಲ್ಲಿ ಇಷ್ಟಿಷ್ಟೇ ಇಷ್ಟಿಷ್ಟೇ ಕರಗಿ ಇವ ಹೋಗುವಷ್ಟು ಇಷ್ಟಗಲ ಕಿಂಡಿಯಾತು. ಒಂದೊಂದು ಪದರಗಳನ್ನು ದಾಟಿಕೋತ ದಾಟಿಕೋತ- ಆವನ್ಯಾಲ ಚಾವಡಿಯ ಗ್ವಾಡಿಯನ್ನೂ ದಾಟಿ ಹೊರಗೆ ಬಂದು ನೋಡತಾನೆ- ಆಹಾ ! ... ಹೊರಗೆ ಪೈಯ್ಯು ತೊಯ್ಯುವಹಂಗೆ–ವ್ಯಾಲಿ--ಆಕಾಶದೊಳಗೆ–ಕೊಡಾ ಒಂದು ಹೊಳ್ಳಿ ಬಿದ್ದು ಬದಬದಾ ಅಂತ ಬೆಳದಿಂಗಳು ಸುರಿಯುತ್ತಿದೆ.. ಕಲ್ಲಯ್ಯ ಅಂದಾ- ಇದೇನಪ್ಪಾ ? .. ಒಳಗ ನೋಡಿದರ ಹಂಗ ಆಕ್ಯೊಂಡ ಕುಂತತಿ- ಇಲ್ಲಿ ಹೊರಗ ನೋಡಿದರ ಹಿಂಗ ಆಕ್ಯೊಂಡ ಕುಂತತಿ ? ಹೆಂಗ ಮಾಡೂದೂ ...? . ಗೂಢದೊಳಗೆ ಬಿದ್ದ ಅವ ಯಾವದೋ ದ್ಯಾನದೊಳಗ ತನಗೇ ಗೊತ್ತಿಲ್ಲಧಂಗ ಬಲಗೈಯ್ಯ ತೋರುಬೆರಳಿನಿಂದ ಏಕತಾರಿಯ ತಂತಿಯನ್ನ ಮೀಟಿ-ಗುಂಯ್ ಅಂತ ಬಂದ ಧನಿಗೆ ಗಾಬರಿಗೊಂಡು ಬೆರಳು ಮುಡಿಚಿಕೊಂಡ.

ಕಾಲುಕಿತ್ತಿದ ಕಿತ್ತಿ ಎತ್ತಿ ಎತ್ತಿ ಇಟ್ಟು ಕಲ್ಲಯ್ಯ ದಳದಳ ಅಂತ ನಡದಾಗ ಅವನ ನೆರಳು ಬೆಳದಿಂಗಳ ಸಮುದ್ರವನ್ನ ಸೀಳಿ ಹಾದೀ ಮಾಡಿತು. ಖುಶೀ ಅನಿಸಿತು.... ಪೈಮುಟ್ಟಿ ನೋಡಿಕೊಂಡ .. ವ್ಯಾಲಿನಿಂದ ಬೆಳದಿಂಗಳು ಯಥಾರೀತಿಯಾಗಿ ಬದಬದ ಅಂತ ಸುರೀತಿದ್ದರೂ ಒದ್ದಿಯಾಗಿಲ್ಲ. ಆದರೂ ತಣ್ಣೀರ ಜಳಕಾ ಮಾಡಿಧಂಗೆ-- ಒಳಗಿನೊಳಗಿಂದ ಒಮ್ಮಿಗೆಲೇ ಥಂಡಿ ಉಕ್ಕಿ ಬಂದಂಗಾಗಿ ಗದಗದ ಅಂತ ನಡುಗಿದ.... ಹಸಿರು ಬೈಲಿಗೆ ಬಂದ... ಮಕಮಲ್ಲಿನ ಹುಲ್ಲು ಕಾಲಕೆಳಗೆ ಮೆತ್ತಗೇ ಮುದುಡಿ ಕಾಲೆತ್ತಿದ ಕೂಡಲೇ ಗರಿಬಿಚ್ಚುವದು .. ಮಜಾ ಅನಿಸಿತು ...ನಡದ . ಓಡಿದ. ಆ ಪೈದಾನದೊಳಗ ಸುತ್ತುಹೊಡದ. ಓಡಿ ದಣಿದು ತೇಕಹತ್ತಿತು ದಸ್‌ದಸ್... ಅಂತ ತೇಕಿದ.... ಕೂಡಬೇಕನಿಸಿತು.....ಕಲ್ಲಯ್ಯನ ಮನಸಿಗೆ ಕೂಡಬೇಕೆಂದು ತೋರಿದ್ದು ನೊದಲೋ– ಇಲ್ಲಾ ಅಲ್ಲೇ ಅವನ ಸನೇದೊಳಗೆ ಒಂದು ಮಂಚದಂಥಾ ಹಾಸುಗಲ್ಲು ಇದ್ದದ್ದು ನೊದಲೋ ಯಾವನಿಗೆ ಗೊತ್ತು ! ಕಲ್ಲಯ್ಯ ಹೋಗಿ ಕಾಲು ಇಳಿಬಿಟ್ಟು ಕುಂತ.

ಅದು ಚಂದ್ರಕಾಂತ ಕಲ್ಲು .. ಬೆಳದಿಂಗಳಿಗೆ ಕರಗಲಿಕ್ಕಹತ್ತಿತ್ತು. ಇವ ಹೋದಕೂಡಲೇ ಇವನ ನೆರಳು ಬಿದ್ದು–ನೆರಳು ಬಿದ್ದಲ್ಲಿ ಕಲ್ಲು ಹೆಪ್ಪುಗಟ್ಟಿ ಕಲ್ಲಾದಲ್ಲಿ ಇವ ಕೂತ ... ಆSS ಅಂತ ಆಕಳಿಸಿ-ವ್ಯಾಲಿ ಚಂದ್ರನ್ನ ನೋಡಿದಾಗ ಕೈಯಲ್ಲಿಯ ಏಕತಾರಿಯ ನೆನಪು ಬಂದಂಗಾತು ಆSS ಅಂತ ನಾಭಿಯ ಮೂಲದಿಂದ ಆಲಾಪ ಎಳದು ಅದರ ಬೆನ್ನ ಹಿಂದಿಂದS ಏಕತಾರಿಯ ತಂತಿಯನ್ನು ಮೀಟಿ--ಆಲಾಪದ ಧನಿಗೆ ಇದರ ನಾದದ ಜಾಯಿಂಟು ಹಾಕಿದ. ಹುಲ್ಲು ಗರಿಕೆಗಳು ತಲೀ ಎತ್ತಿ, ಕಿವಿ ಚಾಚಿ. ಮುಗ್ಧನಾಗಿ- ಕಾಲು ಚಾಚಿ ಕುಂತು ಕೇಳತೊಡಗಿದವು ...ಧನಿಗೆ ಧನಿ ತಿಕ್ಕಿ- ಮಿಂಚು

ಮೂಡಿ-ಕಾವು ಹುಟ್ಟಿ ...ಕಲ್ಲಯ್ಯನ ನೆರಳಿನಿಂದ ಹೆಪ್ಪುಗಟ್ಟಿ ಗಟ್ಟಿಯಾದ ಇವನ ಕುಂಡಿಯ ಬುಡುಕನ ಕಲ್ಲು ಸಣ್ಣಗೇ ಬೆವತು ಕರಗಲಿಕ್ಕೇ ಸುರುಮಾಡಿತು.. ಇತ್ತ– ಇವನ ಓಂಕಾರದ ಧನಿ ಮತ್ತ ಏಕತಾರಿಯ ಠೇಂಕಾರದ ಧನಿಗೆ ಚಂದ್ರ ಎಚ್ಚತ್ತು ನೆಟ್ಟಗSS ಕೂತ ...ಸುರಿಯುತ್ತಿದ್ದ ಬೆಳದಿಂಗಳು ಬತ್ತಿ ಬಯಲಾಗಲಿಕ್ಕೆ ಹತ್ತಿದಾಗ ಕಲ್ಲಿನ ಹನಿಹನಿಗಳು ಕಣಕಣವಾಗಿ ಹೆಪ್ಪುಗಟ್ಟಿ ಘನವಾಗತೊಡಗಿದಾಗ ಕಲ್ಲಿನಮ್ಯಾಲೆ ಊರಿದ ಎಡಗೈ ಮತ್ತು ಮೊಳಕಾಲು ಮಡಿಚಿ ಊರಿದ ಬಲಗಾಲು ಇಷ್ಟಿದ್ದ ಕಲ್ಲಿನೊಳಗೆ ಹುಕ್ಕೊಂಡು ಬಿಟ್ಟಿದ್ದವು !

ಕಲ್ಲಯ್ಯನಿಗೆ ಗಾಬರಿಯಾತು. ಗಡಬಡಿಸಿ ಕೈಯುಕಾಲು ಹಿರದು ಹೊರಗ ತಕ್ಕೋಲಿಕ್ಕೆ ಅಂತ ಎಳದಾಡಿದ. ಎಳದಷ್ಟು ಮತ್ತಷ್ಟು ಒಳಗ ಹುಕ್ಕೊಂಡಾಂಗಾಗಿ–ಮೊಳಕಾಲು ಮೊಳಕೈಗಳ ಸಂದುಗಳಲ್ಲಿ ನೋವು ಮೂಡಿತು ...ಯಾರಾದರು ಇದ್ದು ತನ್ನನ್ನು ಎಳದು ಹೊರಗ ತಗದಾರೆಂದು ಆಸೆಗಣ್ಣಾಗಿ ದಿಟ್ಟಿಸಿದರೆ ಒಣಗುತ್ತಿದ್ದ ಆ ಬೆಳದಿಂಗಳಿನ ಕೆರೆಯಲ್ಲಿ ಯಾರೆಂಬೋ ಯಾರಿಲ್ಲ... ಹಾಂ... ತಕೋ. ಅಲ್ಲೊಬ್ಬಳು ಹೆಂಗಸು! ಇವನನ್ನೇ ನೋಡಿ ಇಷ್ಟಗಲ ಹಲ್ಲು ಕಿಸಿಯುತ್ತ ...ಇವನತ್ತಲೇ ಬರುತ್ತಿದ್ದಾಳೆ ...ತನ್ನತ್ತ ಸಾಗಿ ಬರುವ ಆ ಹಸರು ಸೀರಿಯವಳನ್ನ ಆಸೆಯಿಂದ ನಿರೀಕ್ಷಿಸುತ್ತ ಕೂತ ...ಆಕೆ ಹತ್ತರ ಹತ್ತರ ಬಂದಾಂಗೆ ಆಕೆಯ ಆಕಾರ ಸ್ಪಷ್ಟವಾಗುತ್ತ ಬಂತು . ಕೆಳತುಟಿ ದಾಟಿ ಹೊರಚಾಚಿದ ಹಲ್ಲುಗಳಿಂದ ಆಕಿ ನಕ್ಕಾಂಗೆ ಕಂಡಿತ್ತು. ಕಣ್ಣುಗಳ ನೆತ್ತರಿನಂತಹ ಕೆಂಪು. ಬೆರಳುಗಳ ಇಷ್ಟುದ್ದ ನಖಗಳು .. ಎದೆಯ ಮೇಲೆ ಅಸ್ವಾಭಾವಿಕ ಅನ್ನುವಷ್ಟು ದೊಡ್ಡದಾದ ಮೊಲೆಗಳು... ಆ ವಿರೂಪದ ಹೆಂಗಸು ಇವನನ್ನು ಹೆದರಿಸೇನೆಂದುಕೊಂಡು ಹತ್ತರ ಹತ್ತರ ಬರುತ್ತಿದ್ದರೆ ಕಲ್ಲಯ್ಯನ ಆ ಹೆಂಗಸಿನದು ಅಗದೀ ಸಹಜರೂಪ.ಅನ್ನುವವನಂಗೆ ಯಾವ ಭಾವ ವಿಕಾರವೂ ಇಲ್ಲದೇ ಅವಳಿಗಾಗಿ ಕಾದುಕೂತಿದ್ದ .. ಆಕಿ ಬಂದು ಇವನ ಮೃದು ಮಾಂಸದೊಳಗೆ ತನ್ನ ನಖಗಳನ್ನು ಹೆಟ್ಟಿದರೆ ಹನಿ ಹನಿ ರಕ್ತ ಬಸಿದು- ಹಾSS....ಅಂತ ಸುಖದ ನೋವಿನಿಂದ ನರಳುವವನಂಗೆ ನೆಳ್ಳಿದ....ಕಲ್ಲಿನಿಂದ ಕಿತ್ತು ಅಂತ ಹೇಳಾದಾಗ ಆಕಿ ನಿರಾಸೆಯಿಂದ ಮುಖ ಬತ್ತಿಸಿಕೊಂಡು–ಇವನ ಕೈ ಹಿಡದು ಎಳೆಯಲಿಕ್ಕೆ ಸುರುಮಾಡಿದಳು........

ಚಕ್ಕಂತ ಹಾಸಿಗಿಯ ಮ್ಯಾಲ ಎದ್ದುಕೂತ ಕಲ್ಲಯ್ಯ. ಗಾಬರಿಯಿಂದ ಸುತ್ತಲೂ ನೋಡಿದ... ಅದS ಮನಿಯ ಹೊರಗಿನ ಕಟ್ಟಿಯ ಮ್ಯಾಲಿನ ಹಾಸಿಗಿಯ ಮ್ಯಾಲ ಕೂತಾನೆ. ಇನ್ನೇನು ಮೂಡಲು ಬಿರಿದು ಸೂರ್ಯ ಮೂಡಲಿಕ್ಕೆ ಅಲ್ಲೆಲ್ಲ ನೆತ್ತರಿನ ಕೆಂಪು ಹೆಪ್ಪುಗಟ್ಟಿಕೊಂಡು ಕುಂತಿದೆ ....

ದಿನಾ ಎದ್ದು ತನ್ನ ಕೋಲಿ– ಚಾಪರಗಳನ್ನು ಮಡಿಚಿ ಒಳಗ ತಂದಿಟ್ಟು ಚರಿಗೀ ತಗೊಂಡು ದಮ್ಮ್ರಹಳ್ಳದ ಕಡೆ ಹೊಂಡಬೇಕು. ಇಂದ ಎದ್ದವ ಭಾಳೊತ್ತು ಅಲ್ಲೇ ಕಟ್ಟೇವ್ಯಾಲಽ ಕುಂತು ಕುಂತು- ಯಾವದೋ ವಾಯಡೊಳಗ ಎದ್ದು ಇತ್ತ ಊರ ಮುಂದಿನ ಹಳ್ಳದಕಡೆ ಬಂದುಬಿಟ್ಟ ಚರಗಿ ಇಲ್ಲಾ ಏನಿಲ್ಲ ಎಲಾ ಇವನಽ. ಅನ ಕೊಂಡು ಹೊಳ್ಳಿಮನೀಕಡೆ ನಡೆದ.......ಇಲ್ಲಿ ಕಲ್ಲವ್ವ ಹೊರಗಬಂದು ನೋಡಿದರ ಕಟ್ಟಿವ್ಯಾಲಿನ ಹಾಸಿಗೀ ಹಂಗೇ ಬಿದ್ದಿದೆ. ಆಕಿ ಒಮ್ಮಿಗೆಲೇ ನಾಚಿಕೊಂಡವಳಂಗ ಅಯ್ಯಽ. ಅಂತ ಉದ್ಗರಿಸಿ ಭರಾಭರಾ ಹಾಸಿಗೀ ಎತಿಗೊಂಡು ಒಳಗತಂದು ಮಡಿಚಿ ಇಡಲಿಕ್ಹತ್ತಿದ್ದಳು ದಿನಾ ಮಡಿಚಿ ಒಳಗೆ ತಂದ ಇಡಾಂವ ...ಮನೀ ಒಳಗೂ ಬಂದಿಲ್ಲ ಬೈಲಕಡೇ ಹೋಗಬೇಕಾರ ಚೆರಗೀ ಒಯ್ಯತಿದ್ದಾ ಹೊರಗಿಂದ ಹೊರಗಽ ಬೈಲಕಡೇ ಹೋಗಿದ್ದಾನು. ಹೊಟ್ಟಿಗಿಟ್ಟಿ ಬರಾಬ್ಬರೀ ಐತಿಲ್ಲೋ ಯಾಂಬಾಲ... ಅಂತ ಮನಸಿ ನೊಳಗ ಅನತಿರಬೇಕಾದರ ಕಲ್ಲಯ್ಯ ಒಳಗ ಬಂದು ಚರಿಗೀ ತಗೊಂಡು ಹೊಂಟ.... ಕಲ್ಲವ್ವ ಬಾಗಿಲಿಗೆ ಬಂದು ನೋಡಿದಾಗ ಇಂವ ದಮ್ಮ್ರಹಳ್ಳದ ಹಾದೀ ಹಿಡಿದಿದ್ದ....

ಕಲ್ಲಯ್ಯಗ ಕಾಲಮರಿ ಬಿಗಘಂಗಾದವು ಕಾಲಿಗೆ ಒತ್ತಿಧಂಗ ಅನಿಸಿ ನೋಡಿಕೊಂಡರ ಕಾಲಮರೀನಽ ಹಾಕೊಂಡಿಲ್ಲ. ಮಕಾ ಕಿಂವಿಚಿ ಮುಂದನಡದ ಯಾತಕ್ಕ ಹೊಂಟೀನು ಅನ್ನುವ ಖಬರು ಇಲದವನಂಗ ಮಡ್ಡೀ ದಾಟಿ–ದಮ್ಮ್ರಹಳ್ಳಾ ದಾಟಿಽ ...ಹಾದೀ ಬಸಪ್ಪನ ಗುಡೀ ಹಂತೇಕ ಬಂದಾಗ ಎಚ್ಚರಾದಂಗಾಗಿ–ಎಲಾ ಇವನೌನ.. ಅನಕೊಂ ಡು ಗುಡೀ ಮುಂದ ದೀಪದಕಂಬ ನಿಂತಂಗ ನಿಂತ ಬಿಟ್ಟ.. ಯಾಕೋ ಹರ್‍ಯಾಗ ಎದ್ದಾಗಿಂದ ಎದೀ ಜಡಾ ಆದಂಗಾಗಿದೆ. ನೋವು ತುಂಬಿಕೊಂಡಂಗ- ಹುಣ್ಣಿನೊಳಗ ಕೀವು ತುಂಬಿಕೊಂಡು ಚುಟುಚುಟು ಅಂದಂಗ ಆಕಳಿಸುವ ರೀತಿಯೊಳಗ ಆಽ.... ಅಂತ ಕಣ್ಣು ಮುಚ್ಚಿ ಇಷ್ಟಗಲ ಬಾಯಿತಗದು ಹ್ಹಾ ಅಂತ ಸದ್ದುಮಾಡಿ ಎದಿ ಯ ತಳದೊಳಗಿಂದ ಬಂದ ದಟ್ಟವಾದ ಉಸರನ್ನ ಉದ್ದಕೇ ಹೊರಗಬಿಟ್ಟ. ಎದೀ ಒಂದಿಷ್ಟು ಹಗರಾಧಂಗಾತು, ಆಕಡೇ ಈಕಡೇ ನೋಡಿ ಗುಡಿಯ ಹಿಂದಿನ ಕಂಟಿ ಗೋಳಿ ಗುಂಪಿನಕಡೇ ಹತ್ತ ಹೆಜ್ಜೀ ಹೋಗೂವರೊಳಗಽ ಬೇಚೈನಿನ ಸೆಲಿಗೋಳು ಒ ದು ಕಲ್ಲಯ್ಯನ ಎದಿಯಭಾಂವಿ ಮತ್ತ ತುಂಬಿಧಂಗಾತು . ಇನೊಂದು ಉಸರು ಬಿಟ್ಟ....

... ಒಂದ ಚರಿಗೀ ತಗೊಂಡ ಹೋಗಿ ಬರಾಕ ಇಷ್ಟೊತ್ಯಾಕ ಬೇಕು ಅಂತ ಹೋಗಿ ಭಾಳೊತ್ತಾದರೂ ತಿರಿಗಿ ಬರಲಿಲ್ಲಲಾ ಅಂತ ಕಲ್ಲಯ್ಯನ ಬಗ್ಗೆ ಕಲ್ಲವ್ವ ಕಾಳಜೀ ಮಾಡತಿರಬೇಕಾದರ ಕಾಲಿಗೆ ಕಬ್ಬಿಣದ ಗುಂಡು ಕಟಿಕೊಂಡವನಧಂಗ ಕಾಲು ಎಳದು ಹಾಕುತ್ತ ಅವ ತಿರಿಗಿ ಬಂದ....ಕೈಗೆ ನೀರು ಹಣಿಸಿ ಕಾಲು ತೊಳಕೋಲಿಕ್ಕೆ ನೀರು

ಕೊಟ್ಟು- 'ನೀರ ಕಾದಾವು .. ಎದ್ದು ಜರಿಗೀ ಜಳಕಾ ಮಾಡಿ ಬಿಡತಿಯೇನು ?' ಅಂತ ಕೇಳಿದಳು. ಕಲ್ಲಯ್ಯ ಗೋಣುಹಾಕಿದ. ಮುಂಜಾನೆ ಎದ್ದಾಗಿಂದ ಗೋಲೀಗುಂಡಾ ಎಣಿಸಿಕೋತಕೂತಿದ್ದ ಮಗನಿಗೆ– 'ಎಪ್ಪಾ ಹಗ್ಗದಮ್ಯಾಗ ಅಜ್ಜನ ಧೋತ್ರ ಐತಿ. ತಗೊಂಡಬಾ....' ಅಂತ ಹೇಳಿಕೋತ ಗಂಗಾಳಕ್ಕ ಬಿಸಿನೀರು ತೋಡಿ ಬಚ್ಚಲಕಟ್ಟಿಗೆ ತಂದಿಟ್ಟಳು ...ಬಿಸಿ ಬಿಸಿ ನೀರು ತಲಿಯಮ್ಯಾಲ ಸುರುವಿಕೊಂಡಂಗೆ ಕಲ್ಲಯ್ಯನ ಎದಿಯೊಳಗಿನ ನಿರಾಕಾರ ತಳಮಳ ಇನಷ್ಟು ಹೆಚ್ಚಾದಂಗಾತು....

ನ್ಯಾರೇಕ್ಕ ಕುಂತ....ರೊಟ್ಟಿ–ಖಾರಾ–ಮಸರಾ....ಕಲ್ಲವ್ವ ಹಂಚಿನ ಮ್ಯಾಗ ಬುರು ಬುರು ಅಂತ ಉಬ್ಬಿಸಿ ಸುಟ್ಟು ಇವನ ತಾಟಾಣಿಗೆ ಒಗೆದ ಎರಡು ರೊಟ್ಟಿಗಳನ್ನು ತಿನ್ನುವವರೊಳಗೆ ಬಗಿಹರಿಸಿದ ...ರೊಟ್ಟಿಯ ಒಂದೊಂದು ತುತ್ತು ಹೊಟ್ಟೆಗೆ ಇಳಧಂಗೆ ಇವನ ಎದಿಯೊಳಗೆ ತುಂಬಿದ ತಳಮಳದ ನೀರು ಇಂಚಿಂಚು ಹೆಚ್ಚಾಧಂಗೆ- ಉಸಲು ಕಟ್ಟಿಧಂಗೆ ಆಗಲಿಕ್ಕೆ ಸುರುವಾತು ಒಮ್ಮಿಗೆಲೀ ಒಡಲಿನ ಆಳದೊಳಗ- ನಾಭಿಮೂಲ ದೊಳಗ ಏನೋಧನಿ ಸ್ವರ ಒಡೆಧಂಗಾತು . ಮಕತಗ್ಗಿಸಿ ನ್ಯಾರೀ ಮಾಡತಿದ್ದವ ಸಟಕ್ಕನs ಮಕ ಮ್ಯಾಲಕೆತ್ತಿ ದಣದಣ ಅಂತ ಉರಿಯುವ ಒಲಿಯೊಳಗಿನ ಉರಿ ನೋಡಲಿಕ್ಕತ್ತಿದ. ರೊಟ್ಟೀ ತಿನ್ನೂದುಬಿಟ್ಟು ಒಲಿಯುರಿ ನೋಡತಿದ್ದ ಮಾವನನ್ನ ನೋಡಿ ಕಲ್ಲವ್ವ-'ಯಾಕಾs ....ಹೊಗೀ ಬರಾಕತ್ತತೇನು ...' ಅಂತ ಕೇಳಿ ಉರಿಯುವದಂಟು ಒಳಗ ನುಗಿಸಿ ಇದ್ದ ಉರಿ ಆರಿ ಹೋಗುವಹಂಗ ಮಾಡಿ- ಖರೇನs ಹೊಗೀ ಹಿಡಿಸಿದಳು ...ಉದಗೊಳವಿಗಾಗಿ ತಡಬಡಿಸಿ-ತಗೊಂಡು ಊದಿ ಉರಿಮಾಡಿ ಇತ್ತ ಮಕ ತಿರಗಸುವಷ್ಟೊತ್ತಿಗೆ ಕಲ್ಲಯ್ಯ ತಾಟಾಣಿನೊಳಗೆ ಕೈ ತೊಳಕೋಲಿಕತ್ಯಾನೆ !.... 'ಅಯ್ಯs....ಇನೊಂದ ರೊಟ್ಟೀ ಹಾಕತಿನ್ನೆಲಾs....?' ಅಂತ ಅನತಿದ್ದಂಗೇ ಕಲ್ಲಯ್ಯ ಎದ್ದು ಹೊರಗೆ ಹೊಂಟುಬಿಟ್ಟಿದ್ದ....

---

* ಇನ್ನೂ ಬರೆದು ಮುಗಿಸದ ರಾಘವೇಂದ್ರ ಪಾಟೀಲರ ಕಾದಂಬರಿಯ ಕೆಲವು ಪುಟಗಳು.

ಗ್ರಾಮೀಣ ಆರೋಗ್ಯ ಸಮಸ್ಯೆಗಳು ಮತ್ತು ಪರಿಹಾರ

● ಡಾ. ರವೀಂದ್ರ, ಎಂ.ಎ.

"ಈ ಜಗತ್ತಿನಲ್ಲಿ ರೋಗಗಳಿಂತಲೂ ಹೆಚ್ಚು ಅಂತರರಾಷ್ಟ್ರೀಯ ವಾಪವಿಚಾರಗಳು ಯಾವೂ ಇರಲಾರವು," ಎಂದು ಪಾಲ್‌ರಸೆಲ್ ಹೇಳಿದ್ದಾನೆ. ಅವುಗಳಿಗೆ ರಾಜಕೀಯ ಭೌಗೋಳಿಕ ಇತಿಮಿತಿಗಳಿಲ್ಲ. ಆದಾಗ್ಯೂ ಗ್ರಾಮಾಂತರ ಪ್ರದೇಶದಲ್ಲಿ ತಮ್ಮದೇ ಆದ ಆರೋಗ್ಯಸಮಸ್ಯೆಗಳಿವೆ. ಇವುಗಳಲ್ಲಿ ಮುಖ್ಯವಾದವುಗಳೆಂದರೆ,

ಬಡತನ ಮತ್ತು ಅಜ್ಞಾನ :

ಇವೆರಡೂ ನೋವಿನ ಎರಡು ಮುಖಗಳು. ಬಡತನವು ಪರೋಕ್ಷವಾಗಿ ಹಾಗೂ ಪ್ರತ್ಯಕ್ಷವಾಗಿ ಅನೇಕ ರೋಗಗಳನ್ನುಂಟುಮಾಡುತ್ತದೆ. ಮರಣ ಪತ್ರಗಳಲ್ಲಿ ಬಡತನವ ದಾಖಲೆ ಇಲ್ಲದಿದ್ದರೂ ಅದು ಅನೇಕ ಸಾವುಗಳಿಗೆ ಕಾರಣವಾಗಿದೆ.

ಬಡತನವು ರೋಗಗಳನ್ನು ಆಹ್ವಾನಿಸುತ್ತದೆ. ಗುಣಪಡಿಸುವಿಕೆಯನ್ನು ಕುಂಠಿತಗೊಳಿಸುತ್ತದೆ. ಬದುಕು--ಸಾವಿನ ನಡುವಣ ಗೆರೆಯನ್ನು ಕ್ಷೀಣಗೊಳಿಸುತ್ತದೆ. ಮನುಷ್ಯನ ಆರೋಗ್ಯಕ್ಕೂ ಆರ್ಥಿಕ ಸ್ಥಿತಿಗತಿಗಳಿಗೂ ನೇರ ಸಂಬಂಧವಿದೆ. ಉತ್ತಮ ಆರ್ಥಿಕ ಪರಿಸ್ಥಿತಿಯಿಂದ ಆರೋಗ್ಯದ ಮಟ್ಟವು ಸುಧಾರಿಸುತ್ತದೆ.

ಅನಾರೋಗ್ಯಕ್ಕಿಂತಲೂ ಬಡತನ ಬೇರೊಂದಿಲ್ಲ. ಆರೋಗ್ಯವೇ ಭಾಗ್ಯ. ಸಾಕಷ್ಟು ಸಮತೋಲ ಆಹಾರವಿಲ್ಲದಿದ್ದಲ್ಲಿ ಅನೇಕ ರೋಗಗಳುಂಟಾಗುತ್ತದೆ. ಮುಖ್ಯವಾದವುಗಳೆಂದರೆ ಜೀವಸತ್ವಗಳ ಕೊರತೆ, ರಕ್ತಹೀನತೆ, ಕ್ವಾಶಿಯಾರ್‌ಕರ್ ಮತ್ತು ಮರಾಸ್ಮಸ್. ದೇಹದ ರೋಗ ನಿರೋಧಕ ಶಕ್ತಿಯು ಕುಂಠಿತಗೊಳ್ಳುತ್ತದೆ ದಿನೇ ದಿನೇ ಹೆಚ್ಚುತ್ತಿರುವ ಜನಸಂಖ್ಯೆಯು ಬಡತನವನ್ನು ಉಲ್ಬಣಗೊಳಿಸುತ್ತದೆ.

ಭಾರತದ ಜನಸಂಖ್ಯೆಯು ಈಗ ಸುಮಾರು 78 ಕೋಟಿ ಇದೆ. ಕ್ರಿ. ಶ. 2000 ದಲ್ಲಿ 100 ಕೋಟಿಯಾಗುವ ನಿರೀಕ್ಷೆ ಇದೆ. ಭಾರತೀಯನ ತಲಾ ಆದಾಯವು 1985–86 ರಲ್ಲಿ 2596 ರೂಪಾಯಿಗಳು.

ಕಠಿಣ ಪರಿಶ್ರಮ, ಬುದ್ಧಿಯ ಸದುಪಯೋಗ, ಶಿಸ್ತು, ವೃತ್ತಿಯಲ್ಲಿ ನಿಷ್ಠೆ, ಪ್ರಾಮಾಣಿಕತೆ, ಹೃದಯವಂತಿಕೆ ಇವುಗಳಿಂದ ಮಾತ್ರ ಬಡತನದ ವಿರುದ್ಧ ಸೆಣೆಸಲು ಸಾಧ್ಯ.

ನಮ್ಮ ದೇಶದಲ್ಲಿ ಶೇಕಡಾ (36%) 36 ಜನ ಮಾತ್ರ ಅಕ್ಷರಸ್ತರಿದ್ದಾರೆ. ಜನರ ಅನಕ್ಷರತೆ ಹೋಗುವವರೆಗೂ ಜನತೆಯ ಆರೋಗ್ಯವನ್ನು ಸುಧಾರಿಸುವುದು ಕಷ್ಟಸಾಧ್ಯ.

ಒಂದೆರಡು ಉದಾಹರಣೆಗಳಿಂದ ಬಡತನದ ಕೀಳ್ನೋಟವನ್ನು ಅರಿಯಬಹುದು.

ರೋಗವು ಬಡತನವನ್ನು ಬಡತನವು ರೋಗವನ್ನು ಉಲ್ಬಣಗೊಳಿಸುತ್ತದೆ. ದೀರ್ಘ ಕಾಯಿಲೆಗಳಾದ ಕ್ಷಯ, ಹೊಟ್ಟೆಯಹುಣ್ಣು, ಅಸ್ತಮಾ, ಇನ್ನೂ ಮುಂತಾದ ರೋಗಗಳಲ್ಲಿ ಇದು ಅಕ್ಷರಶಃ ಸತ್ಯ. ಉದಾಹರಣೆಗೆ ಒಬ್ಬ ಕ್ಷಯ ರೋಗಿಯು 90 ದಿನ ಸ್ಟ್ರೆಪ್ಟೋಮೈಸಿನ್ ಇಂಜಕ್ಷನ್‌ಗಳನ್ನು ಮತ್ತು ಸತತ ಒಂದು ವರ್ಷದವರೆಗೆ ರೈಪಾಂಪಿಸಿನ್ ಮತ್ತು ಐ ಎನ್. ಹೆಚ್. ಮಾತ್ರೆಗಳನ್ನು ನುಂಗಬೇಕು. ಒಂದು ಮಾತ್ರೆಯ ಬೆಲೆ 4 ರೂಪಾಯಿಗಳು. ಒಂದು ಇಂಜಕ್ಷನ್ನಿನ ಬೆಲೆ 3–50 ರೂಪಾಯಿಗಳು. ಅಲ್ಲದೆ ಈ ರೋಗ ವಾಸಿಯಾಗಲು ಕೆಲವು ತಿಂಗಳುಗಳ ವಿಶ್ರಾಂತಿಯೂ ಅಗತ್ಯ.

ಬೆಳಗ್ಗಿನಿಂದ ಸಂಜೆಯವರೆಗೆ ಧಗಧಗ ಉರಿಯುವ ಬಿಸಿಲಿನಲ್ಲಿ ನೆಲ ಅಗೆದಾಗ ಸಿಗುವ ಕೂಲಿ 8 ರಿಂದ 10 ರೂಪಾಯಿಗಳು. ಈಗ ನೀವು ಬಡರೋಗಿಯ ಪಾಡನ್ನು ಊಹಿಸಬಹುದೆಂದು ಭಾವಿಸುತ್ತೇನೆ. ಅಲ್ಲದೆ ಹಳ್ಳಿಯಲ್ಲಿದ್ದರೆ ಪ್ರತಿನಿತ್ಯ ಇಂಜಕ್ಷನ್‌ಗಾಗಿ ಪಟ್ಟಣಕ್ಕೆ ಓಡಾಡಬೇಕಾಗುತ್ತದೆ ...

ರೋಗ ಗ್ರಸ್ತ ಗಂಡನನ್ನು, ಮಕ್ಕಳನ್ನು ಕೂಲಿಮಾಡಿ ಸಾಕುತ್ತಿರುವ ಅನೇಕ ಮಹಿಳೆಯರನ್ನು ಕಂಡು ಕಣ್ಣು ತೇವಗೊಂಡಿದ್ದುಂಟು. ಕಷ್ಟಕಾಲದಲ್ಲಿ ಆರ್ಥಿಕ ಸಹಾಯದ ಯೋಜನೆ ಬಹಳ ಮುಖ್ಯ.

ಧೂಮಪಾನ, ಮದ್ಯಪಾನ ಮುಂತಾದ ದುಶ್ಚಟಗಳು ಪರೋಕ್ಷ ಹಾಗೂ ಪ್ರತ್ಯಕ್ಷವಾಗಿ ಬಡತನ ಹಾಗೂ ರೋಗಗಳನ್ನು ಹುಟ್ಟುಹಾಕಿವೆ. ಧೂಮಪಾನ ಹಾಗೂ ಮದ್ಯಪಾನ ನಿಷೇಧವು ಕಡ್ಡಾಯವಾಗಿ ಜಾರಿಗೆ ಬರಬೇಕು.

ಮೂಢ ನಂಬಿಕೆಗಳು :

1. ದೇವತೆಗಳ ಕೋಪ : ಜನರು ಅಮ್ಮ, ಪಡಾರ, ಸಿಡುಬು, ಇವುಗಳು ದೇವತೆಗಳ ಕೋಪದಿಂದ ಬರುತ್ತವೆ ಎಂದು ಭಾವಿಸಿ, ದೇವತೆಗೆ ಪೂಜೆ ಮಾಡಿಸುತ್ತಾರೆ. 'ದೇವರನ್ನು ಕಳಿಸಿದೆವು' ಎನ್ನುತ್ತಾರೆ.
2. ಹರಕೆಗಳನ್ನು ಈಡೇರಿಸದಿದ್ದರೆ, ದೇವರ ಕೋಪದಿಂದ ಕೆಲವು ಖಾಯಿಲೆಗಳು ಬರುತ್ತವೆ ಎಂದು ನಂಬಿದ್ದಾರೆ.
3. ಕುಷ್ಟ, ತೊನ್ನು ಮುಂತಾದ ರೋಗಗಳು ಪೂರ್ವ ಜನ್ಮದ ಪಾಪದಿಂದ ಬರುತ್ತವೆ ಎಂದೂ ನಂಬಿದ್ದಾರೆ.
4. 'ದೃಷ್ಟಿ'ಯಾಗಿದೆ ಎಂದು ಕೆಲವರು ದೃಷ್ಟಿ ತೆಗೆಯುತ್ತಾರೆ. ಉದಾಹರಣೆಗೆ ಮುಟ್ಟಾದ ಹೆಂಗಸಿನ ನೆರಳುಬಿದ್ದರೆ ಮಕ್ಕಳು ಬಡವಾಗುತ್ತಾರೆ ಎಂಬ ನಡವಳಿಕೆ ಇದೆ.
5. ದೆವ್ವ, ಪಿಶಾಚಿಗಳಿಂದಲೂ ರೋಗಗಳು ಬರುತ್ತವೆ ಎಂದು ಭಾವಿಸಿದ್ದಾರೆ ಕೆಲವರು ದೇವರ ಕಾಟವೆಂದು ಕುರಿ, ಕೋಳಿ ಬಲಿಕೊಡುತ್ತಾರೆ. ಇನ್ನು ಕೆಲವರು ವಾಂತಿ ಬೇಧಿಯಾದಾಗ 'ಬಾಲಗ್ರಹ' ಎಂದು ಯಂತ್ರ, ತಾಳಿ ಕಟ್ಟಿಸಿಕೊಳ್ಳುತ್ತಾರೆ.

ಮಗು ಜನಿಸಿದ ಕೂಡಲೇ ಹೊಕ್ಕಳ ಬಳ್ಳಿಯನ್ನು ಮಚ್ಚು ಅಥವಾ ಕುಡುಗೋಲಿನಿಂದ ಕತ್ತರಿಸುವುದು, ಮತ್ತು ಸಗಣಿಯನ್ನು ಹಚ್ಚುವುದು ಇನ್ನು ಮುಂತಾದ ಮೂಢನಂಬಿಕೆಗಳು ಜನರಲ್ಲಿ ಬೇರೂರಿವೆ.

ಮೂಢನಂಬಿಕೆಗಳು ಮೂಢರಲ್ಲೇ ಅಲ್ಲದೆ ವಿದ್ಯಾವಂತರಲ್ಲೂ ಮನೆಮಾಡಿವೆ.

ರೋಗಾಣು ಶಾಸ್ತ್ರದ ಪ್ರಾಧ್ಯಾಪಕರೂ ಸಹ ತಮ್ಮ ಮಗುವಿಗೆ ಪಡಾರ ಎದ್ದಾಗ ದೇವಿಪೂಜೆಯನ್ನು ಮಾಡಿದ ನಿದರ್ಶನಗಳಿವೆ.

ಇಂತಹ ಮೂಢನಂಬಿಕೆಯ ಕಗ್ಗತ್ತಲನ್ನು ಹೊಡೆದೋಡಿಸಲು ಜನರಿಗೆ ರೋಗದ ನಿಜವಾದ ಕಾರಣವನ್ನು ತಿಳಿಸಬೇಕು.

ತುರ್ತು ಪರಿಸ್ಥಿತಿ : (Medical emergency)

ಗ್ರಾಮಾಂತರ ಪ್ರದೇಶದ ಇನ್ನೊಂದು ಸಮಸ್ಯೆ ಎಂದರೆ ತುರ್ತು ಸಮಸ್ಯೆಗಳು. ಸಾಮಾನ್ಯ ರೈತನ ತೊಂದರೆ ಎಂದರೆ, ಮನೆಯಲ್ಲಿ ಸಾಕಷ್ಟು ಧಾನ್ಯಗಳಿದ್ದಾಗ್ಯೂ ಹಣ

ಒದಗದಿರುವುದು. ಇನ್ನೊಬ್ಬರಿಂದ ಹಣವನ್ನು ಕಡ ಪಡೆದು ರೋಗಿಯನ್ನು ವೈದ್ಯರಲ್ಲಿಗೆ ಕರೆತರಬೇಕಾಗುತ್ತದೆ. ಸಕಾಲದಲ್ಲಿ ವಾಹನ ಸೌಕರ್ಯಗಳು ದುರ್ಲಭ. ಆದ್ದರಿಂದ ಸಾರಿಗೆ ಸಂಪರ್ಕವನ್ನು ಅಭಿವೃದ್ಧಿಗೊಳಿಸಬೇಕು.

ಕೆಲವೊಮ್ಮೆ ರೋಗಿಯ ಹಾಗೂ ಹತ್ತಿರದ ಸಂಬಂಧಿಕರ ಅಲಕ್ಷ್ಯ, ಅಜ್ಞಾನವೂ ಕಾರಣವಾಗಬಲ್ಲದು.

ತುರ್ತು ಸಮಸ್ಯೆಗಳಲ್ಲಿ ಮುಖ್ಯವಾದವುಗಳೆಂದರೆ, ವಾಂತಿ ಭೇದಿ, ಅಸ್ತಮಾ, ಗರ್ಭಕೋಶದ ರಕ್ತಸ್ರಾವ, ಯಾವುದೇ ಭಾಗದ ಅತಿಯಾದ ನೋವು, ಅಪಸ್ಮಾರ, ಹೃದ್ರೋಗ, ಪ್ರಜ್ಞೆತಪ್ಪುವುದು, ವಿಷ ಜಂತುಗಳು ಕಡಿದಾಗ, ಅಪಘಾತ, ವಿಪರೀತ ಜ್ವರ ಇನ್ನೂ ಮುಂತಾದವು. ಇಂತಹ ಸಂದರ್ಭಗಳಲ್ಲಿ ತುರ್ತು ಚಿಕಿತ್ಸೆ ಅಗತ್ಯ.

ಇಂತಹ ಸಂದರ್ಭಗಳಲ್ಲಿ ಪ್ರತಿಯೊಂದು ತಾಲ್ಲೂಕು ಕೇಂದ್ರಗಳಲ್ಲಿಯೂ 'ತುರ್ತು ವೈದ್ಯಕೀಯ ದಳ'ದ ಸೌಲಭ್ಯ ಕಲ್ಪಿಸಬೇಕು.

ಹಳ್ಳಿಯ ಕೆಲವು ಯುವಕರಿಗೆ ಪ್ರಥಮ ಚಿಕಿತ್ಸೆ ಮತ್ತು ಆರೋಗ್ಯ ಸಂರಕ್ಷಣೆ ವಿಧಾನದ ಬಗ್ಗೆ ತರಬೇತಿ ಕೊಡಬೇಕು.

ನಕಲಿ ವೈದ್ಯರು :

ಇವರು ಭೂಲೋಕದ ಯಮರಾಜರು. ಹಳ್ಳಿಯ ಜನರ ಅಜ್ಞಾನ, ಮುಗ್ಧತೆ ಹಾಗೂ ಮಾನವನ ಸಹಜದೌರ್ಬಲ್ಯಗಳನ್ನು ದುರುಪಯೋಗ ಪಡಿಸಿಕೊಂಡು ಜನರನ್ನು ಶೋಷಿಸುತ್ತಾರೆ. ಔಷಧ ಹಾಗೂ ರೋಗಗಳ ಬಗ್ಗೆ ಸಾಕಷ್ಟು ತಿಳಿಯದೆ ಬಡಜನರಿಗೆ ತೊಂದರೆ ಕೊಡುತ್ತಾರೆ. ನಮ್ಮ ದೇಶದ ಅಧಃಪತನಕ್ಕೆ ನಿಸ್ಸಂಶಯವಾಗಿ ಕಾರಣರಾಗಿದ್ದಾರೆ. ಜನರನ್ನು ಮಾತಿನಲ್ಲಿ ಬೆಣ್ಣೆ ಸವರಿ, ಗಿಲೀಟುಮಾಡಿ ರೋಗಿಗಳನ್ನು ತಮ್ಮೆಡೆಗೆ ಎಳೆದುಕೊಳ್ಳುತ್ತಾರೆ. ನೀತಿ, ನಿಯತ್ತು, ವೃತ್ತಿಧರ್ಮ ಎಲ್ಲದಕ್ಕೂ ತರ್ಪಣಕೊಟ್ಟು ಧನಸಂಪಾದನೆಯನ್ನೇ ತಮ್ಮ ಮುಖ್ಯ ಗುರಿಯನ್ನಾಗಿಸಿಕೊಂಡಿರುತ್ತಾರೆ.

ಇವರಿಂದ ಸಣ್ಣ ಖಾಯಿಲೆಗಳು ಬಹಳ ದಿನ ಎಳೆಯಲ್ಪಟ್ಟು ಬಲಿಯುತ್ತವೆ. ದೊಡ್ಡ ಖಾಯಿಲೆಗಳು ಎಳಕಿನಲ್ಲಿ ಅಲಕ್ಷಿಸಲ್ಪಡುತ್ತವೆ.

ಸರ್ಕಾರವು ಇವರ ವಿರುದ್ಧ ಕಟ್ಟುನಿಟ್ಟು ಕ್ರಮ ಕೈಗೊಂಡು ಅಂತಹ ವೈದ್ಯರು

ಪ್ರಾಕ್ಟೀಸ್ ಮಾಡುವುದನ್ನು ನಿಷೇಧಿಸಬೇಕು ಮತ್ತು ಶಿಕ್ಷಿಸಬೇಕು.

ತಾಯಂದಿರು ಮತ್ತು ಮಕ್ಕಳ ಆರೋಗ್ಯ :

ಗರ್ಭಿಣಿಯರ ಆರೋಗ್ಯದ ಬಗ್ಗೆ ಮತ್ತು ಅವರ ಹೆರಿಗೆ ಸಮಯದಲ್ಲಿ ಮತ್ತು ನಂತರ ಸೂಕ್ತ ಗಮನವಹಿಸಬೇಕು. ಇದಕ್ಕಾಗಿ ಪ್ರತಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿಯೂ 8 ಉಪಕೇಂದ್ರಗಳಿರುತ್ತವೆ. ಆರೋಗ್ಯ ಕಾರ್ಯಕರ್ತರು ಗರ್ಭಿಣಿಯರ ಹೆಸರನ್ನು ನೊಂದಾಯಿಸಿಕೊಂಡು, ಅವರನ್ನು ಆಗಿಂದಾಗ್ಗೆ ಪರೀಕ್ಷಿಸಿ, ಸೂಕ್ತವಾದ ಚಿಕಿತ್ಸೆಯನ್ನು ಕೊಡುತ್ತಾರೆ. ಮಕ್ಕಳಿಗೆ ಪೋಲಿಯೋ ಡ್ರಾಪ್ಸ್ ಮತ್ತು ಟ್ರಿಪಲ್ ಆಂಟಿಜನ್ ಹಾಕುವುದು, ಬಿ.ಸಿ.ಜಿ. ಲಸಿಕೆ ಹಾಕುವುದು, ಇನ್ನೂ ಮುಂತಾದ ದೇಹ ಸಂರಕ್ಷಣ ಕ್ರಮಗಳನ್ನು ಕೈಗೊಳ್ಳುತ್ತಾರೆ. ಅಲ್ಲದೆ ಗರ್ಭಿಣಿಯರಿಗೆ ಧನುರ್ವಾಯು ನಿರೋಧಕ ಇಂಜಕ್ಷನ್‌ಗಳನ್ನೂ, ರಕ್ತಪುಷ್ಟಿಯ ಗುಳಿಗೆಗಳನ್ನೂ ಕೊಡುತ್ತಾರೆ. ಗರ್ಭಿಣಿಯರು ತಪ್ಪದೆ ವೈದ್ಯರಲ್ಲಿ ತೋರಿಸಬೇಕು.

ಹೆರಿಗೆಯ ಸಂದರ್ಭದಲ್ಲಿ ಅನಿರೀಕ್ಷಿತ ಸಮಸ್ಯೆಗಳು ಕಾಣಿಸಿಕೊಂಡು ರಕ್ತಸ್ರಾವ, ಎಕ್ಲಾಂಪ್ಸಿಯಾ, ಹೆರಿಗೆ ತಡವಾಗುವುದು ಮುಂತಾದ ತೊಂದರೆಗಳುಂಟಾಗುತ್ತವೆ. ಕೆಲವೊಮ್ಮೆ ಶಸ್ತ್ರಕ್ರಿಯೆಯ ಅವಶ್ಯಕತೆ ಇರುತ್ತದೆ. ಇಂಥ ಸಂದರ್ಭಗಳಲ್ಲಿ ತಜ್ಞರ ಸೇವೆಯು ಕೂಡಲೇ ಒದಗುವಂತೆ ಸಾಕಷ್ಟು ಅನುಕೂಲತೆಗಳಿಲ್ಲ.

ಇದಕ್ಕಾಗಿಯೇ ಪ್ರತಿಯೊಂದು ತಾಲ್ಲೂಕು ಕೇಂದ್ರಗಳಲ್ಲಿಯೂ 'ಪ್ರಸೂತಿದಳ' ಯಾವಾಗಲೂ ಸಿದ್ಧವಿರುವಂತೆ ಏರ್ಪಾಡು ಮಾಡುವುದು ಸೂಕ್ತ.

ಇದೇ ರೀತಿ ಶಾಲಾ ಮಕ್ಕಳ ಆರೋಗ್ಯವೂ ಬಹುಮುಖ್ಯವಾದುದು. ಶಾಲಾ ಮಕ್ಕಳಿಗೆ ಸತ್ವಯುತ ಆಹಾರ ಒದಗಿಸುವ ಏರ್ಪಾಟಿದೆ. ಆದರೆ ಪರಿಣಾಮ ನಿರೀಕ್ಷೆಯ ಮಟ್ಟಕ್ಕೆ ಏರಿಲ್ಲ. ಆಗಿಂದಾಗ್ಗೆ ಶಾಲಾ ಮಕ್ಕಳ ಆರೋಗ್ಯವನ್ನು ಪರೀಕ್ಷಿಸುತ್ತಿರಬೇಕು. ಇದರಿಂದ 1) ರೋಗ ಬರದಂತೆ ತಡೆಗಟ್ಟುವುದು 2) ಎಳೆಕಿನಲ್ಲಿಯೇ ಸೂಕ್ತ ಚಿಕಿತ್ಸೆ 3) ಮಕ್ಕಳಲ್ಲಿ ಆರೋಗ್ಯ ಪ್ರಜ್ಞೆಯನ್ನುಂಟುಮಾಡಲು ಸಹಾಯವಾಗುತ್ತದೆ.

ಶಾಲೆಗಳಲ್ಲಿ ಮಕ್ಕಳಿಗೆ ಪುಷ್ಟಿಕಾಂಶಗಳನ್ನು ಒದಗಿಸುವುದರಿಂದ ಅನೇಕ ರೋಗಗಳನ್ನು ತಡೆಗಟ್ಟಬಹುದು.

ಆರೋಗ್ಯ :

ಬಡತನ ಮತ್ತು ಅಜ್ಞಾನ ಇವೆರಡೂ ಕೂಡ ವೈಯುಕ್ತಿಕ ಹಾಗೂ ಪರಿಸರ ಸ್ವಚ್ಛ

ಲ್ಯಕ್ಕೆ ಧಕ್ಕೆ ಉಂಟುಮಾಡುತ್ತವೆ. ಪ್ರತಿನಿತ್ಯ ಸ್ನಾನ ಮಾಡಿ ಶರೀರವನ್ನು ಶುಚಿಯಾಗಿಟ್ಟುಕೊಳ್ಳುವುದು, ಹಲ್ಲು ಮತ್ತು ಒಸಡುಗಳ ರಕ್ಷಣೆ, ಉಗುರುಗಳನ್ನು ಕತ್ತರಿಸಿಕೊಳ್ಳುವುದು, ಶುಭ್ರವಾದ ಬಟ್ಟೆಗಳನ್ನು ಧರಿಸುವುದು ಇವೆಲ್ಲವೂ ಆರೋಗ್ಯಕ್ಕೆ ಮೆಟ್ಟಿಲುಗಳು. ತಂಬಾಕು, ಹೊಗೆಸೊಪ್ಪು ಅಗಿಯುವುದು ಮತ್ತು ಧೂಮಪಾನ ವರ್ಜಿಸಲ್ಪಡಬೇಕು.

ಧೂಮಪಾನದಿಂದ ಶ್ವಾಸಕೋಶಗಳ ಕ್ಯಾನ್ಸರ್, ಕ್ರಾನಿಕ್ ಬ್ರಾಂಕೈಟಸ್, ಎಂಫೈಸಿಮಾ, ಹೃದಯಾಘಾತ, ಹೃದಯರೋಗಗಳು, ಬಾಯಿ, ಗಂಟಲು, ಧ್ವನಿಪೆಟ್ಟಿಗೆಯ ಹಾಗೂ ಅನ್ನನಾಳದ ಕ್ಯಾನ್ಸರು, ಮೂತ್ರಕೋಶದ ಕ್ಯಾನ್ಸರು ಇವು ಉಂಟಾಗುತ್ತವೆ.

ಅಲ್ಲದೆ ಶ್ವಾಸಕೋಶದ ಕ್ಷಯದ ಸಂಭವ ಹೆಚ್ಚುತ್ತದೆ.

ನೈರ್ಮಲ್ಯತೆ :

ಮನೆಯ ಸುತ್ತಲೂ ಕೊಳಚೆ ಪ್ರದೇಶಗಳು, ಬಚ್ಚಲ ನೀರು ಮನೆಯ ಮುಂದೆ ಹರಿಯುವುದು ಮುಂತಾದವುಗಳಿಂದ ಅನೇಕ ಸಾಂಕ್ರಾಮಿಕ ರೋಗಗಳು ಹರಡಲು ಕಾರಣವಾಗುತ್ತದೆ. ಹಳ್ಳಿಗಳಲ್ಲಿ ಸಾಮಾನ್ಯವಾಗಿ ಜನ ಹಾಗೂ ದನಕರುಗಳು ಒಂದೇ ಸೂರಿನಲ್ಲಿ ವಾಸಿಸುತ್ತಾರೆ. ಊರಿನ ಜನರೆಲ್ಲಾ ಒಂದೇ ಭಾವಿಯಿಂದ ನೀರನ್ನು ಬಳಸುವುದು, ಅಲ್ಲಿಯೇ ಬಟ್ಟೆ ಒಗೆಯುವುದು, ಮುಂತಾದ ಕ್ರಿಯೆಗಳಿಂದ ನೀರು ಮಲಿನಗೊಂಡು ಸಾಂಕ್ರಾಮಿಕ ರೋಗಗಳು ಹರಡಲು ಕಾರಣವಾಗುತ್ತದೆ. ಉದಾಹರಣೆಗೆ ಮುಖ್ಯವಾಗಿ ಕಾಮಾಲೆ (ಜಾಂಡೀಸ್), ಟೈಫಾಯಿಡ್, ವಾಂತಿಬೇಧಿ ಮತ್ತು ಕಾಲರಾ. ಶೇಕಡಾ 60 ರಷ್ಟು ರೋಗಗಳು ನೀರಿನ ದೋಷದಿಂದ ಉಂಟಾಗುತ್ತವೆ.

ನಗರಗಳಲ್ಲಿನ ಅತಿ ಔದ್ಯಮೀಕರಣದಿಂದ, ವಾಯು ಮಾಲಿನ್ಯ, ಜಲಮಾಲಿನ್ಯ ಉಂಟಾಗಿ, ಹಳ್ಳಿಯ ಜನರ ಆರೋಗ್ಯದ ಮೇಲೆ ಘೋರ ಪರಿಣಾಮ ಉಂಟುಮಾಡುತ್ತದೆ.

ಮನೆಯ ಸುತ್ತ ಬಚ್ಚಲು ನೀರು ಹರಿಯುವುದರಿಂದ, ಸೊಳ್ಳೆಗಳ ಹಾವಳಿ ಹೆಚ್ಚಾಗಿ ಅನೇಕ ರೋಗಗಳು ಹರಡಲು ಕಾರಣವಾಗುತ್ತದೆ. ಮನೆಯ ಒಳಗೆ ಹಾಗೂ ಸುತ್ತಮುತ್ತಲಿನ ಪರಿಸರವನ್ನು ನಿರ್ಮಲವಾಗಿ ಇಟ್ಟಿರಬೇಕು.

ಮನೆಯ ಕಸಕಡ್ಡಿ, ಕೊಳೆಯ ನೀರನ್ನು ದೂರಸಾಗಿಸಲು ಸರಿಯಾದ ವ್ಯವಸ್ಥೆ ಇರಬೇಕು.

ಸಾಮಾನ್ಯವಾಗಿ ಹಳ್ಳಿಗರು, ಬಯಲಿನಲ್ಲಿ ಮಲ ವಿಸರ್ಜನೆಗೆ ಹೋಗುತ್ತಾರೆ. ಲೆಟ್ರಿನ್‌ಗಳ ಬಳಕೆ, ರಚನೆ ಮತ್ತು ಅವುಗಳ ಸೂಕ್ತ ಉಪಯೋಗಗಳ ಬಗ್ಗೆ ಜನರಲ್ಲಿ ಅರಿವು ಮೂಡಿಸಬೇಕು.

ಶುದ್ಧವಾದ ಕುಡಿಯುವ ನೀರಿನ ಪೂರೈಕೆ, ಮಲವಿಸರ್ಜನೆಗೆ ಶೌಚಾಲಯ ಹಾಗೂ ಮಲಸಾಗಾಣಿಕೆಯ ವ್ಯವಸ್ಥೆ ಮತ್ತು ವಾಸಯೋಗ್ಯವಾದ ಮನೆಗಳನ್ನು ಒದಗಿಸುವುದರಿಂದ ಈ ಸಮಸ್ಯೆಗಳನ್ನು ನಿವಾರಿಸಬಹುದು.

ಕುಟುಂಬ ಯೋಜನೆ ಮತ್ತು ಜನಸಂಖ್ಯೆ :

ಜನಸಂಖ್ಯಾ ಸ್ಫೋಟವು ಒಂದು ಜ್ವಲಂತ ಸಮಸ್ಯೆ. ಜನಸಂಖ್ಯೆಯಲ್ಲಿ ಭಾರತವು ಎರಡನೆಯ ಸ್ಥಾನದಲ್ಲಿದೆ (ಚೀನದ ನಂತರ) ಮತ್ತು ವಿಸ್ತೀರ್ಣದಲ್ಲಿ ಏಳನೆಯದು. ಕೇವಲ ಶೇಕಡಾ 2.4 ಭೂವಿಸ್ತೀರ್ಣದಲ್ಲಿ ಪ್ರಪಂಚದ ಜನಸಂಖ್ಯೆಯ ಶೇಕಡಾ 15 ರಷ್ಟನ್ನು ಪೋಷಿಸುತ್ತಿದೆ. ಭಾರತದ ಜನಸಂಖ್ಯೆಯು ಅಮೇರಿಕಾ, ರಷ್ಯಾ, ಜಪಾನ್ ಈ ಮೂರೂ ದೇಶಗಳ ಜನಸಂಖ್ಯೆಯ ಮೊತ್ತಕ್ಕೆ ಸಮನಾಗಿದೆ.

ಮೇಲಿನ ಹೇಳಿಕೆಯಿಂದ ಜನಸಂಖ್ಯಾ ಸ್ಫೋಟದ ಸಮಸ್ಯೆಯನ್ನು ಊಹಿಸಬಹುದು. ಈ ಸಮಸ್ಯೆಯನ್ನು ಕುಟುಂಬ ಯೋಜನೆಯ ಮೂಲಕ ಹತೋಟಿಗೆ ತರಬಹುದು. ಆದರೆ ಗ್ರಾಮೀಣ ಜನರು ಸಂತಾನ ನಿರೋಧ ಶಸ್ತ್ರಚಿಕಿತ್ಸೆಗೆ ಹೆದರುತ್ತಾರೆ. ಶಸ್ತ್ರಚಿಕಿತ್ಸೆಯಿಂದ ಅನೇಕ ತೊಂದರೆಗಳುಂಟಾಗುತ್ತವೆ ಎಂದು ಭಾವಿಸಿದ್ದಾರೆ. ಮುಖ್ಯವಾದುವೆಂದರೆ ನಿಶ್ಶಕ್ತಿ. ಬೆನ್ನಿನ ಮತ್ತು ಕತ್ತಿನ ನರಗಳು ಸೇದುವುದು, ಹೊಟ್ಟೆನೋವು, ಮುಟ್ಟಾದಾಗ ಹೆಚ್ಚು ರಕ್ತಸ್ರಾವ, ಇನ್ನೂ ಮುಂತಾದ ತೊಂದರೆಗಳುಂಟಾಗುತ್ತವೆ ಎಂದು ಭಾವಿಸಿದ್ದಾರೆ.

ಆ ವಯಸ್ಸಿಗೆ ಸಹಜವಾದ ಯಾವುದೇ ರೋಗಉಂಟಾದರೂ ಅದು ಶಸ್ತ್ರಚಿಕಿತ್ಸೆಯಿಂದಲೇ ಉಂಟಾಗಿದೆ ಎಂದು ಭಾವಿಸುತ್ತಾರೆ. ಇಂತಹ ತಪ್ಪುಸಂಶಿಕೆಗಳನ್ನು ದೂರಮಾಡಬೇಕು.

ಜಾತಿ ಮತ ಧರ್ಮಗಳ ಪರಿಧಿ ಮೀರಿ, ಕುಟುಂಬ ಯೋಜನೆ ಒಂದು ರಾಷ್ಟ್ರೀಯ

ಕರ್ತವ್ಯವೆಂದು ಭಾವಿಸಿ, ಅನುಸರಿಸಬೇಕು. ಅದರಿಂದ ದೇಶದ ಅಭ್ಯುದಯಕ್ಕೆ ಕಾರಣ ರಾಗಬೇಕು. ಇದು ಒಂದು ಆರ್ಥಿಕ, ಸಾಮಾಜಿಕ ಹಾಗೂ ರಾಷ್ಟ್ರೀಯ ಕರ್ತವ್ಯ ವಾಗಿದೆ.

ಪ್ರತಿಯೊಬ್ಬ ಅರ್ಹ ದಂಪತಿಗಳಿಗೂ ಕುಟುಂಬ ಯೋಜನೆಯ ಅವಶ್ಯಕತೆಯನ್ನು ತಿಳಿಸಿಕೊಡುವುದು ಕರ್ತವ್ಯ. ಮನೆಯಲ್ಲಿ ಮಕ್ಕಳು ಹೆಚ್ಚುವುದರಿಂದ ಬಡತನ, ಆಹಾರದ ಕೊರತೆ, ಮುಂತಾದ ಸಮಸ್ಯೆಗಳುಂಟಾಗಿ ಬೌದ್ಧಿಕ ಹಾಗೂ ದೈಹಿಕ ಬೆಳವಣಿಗೆ ಕುಂಠಿತವಾಗುತ್ತದೆ.

ಜನತೆಗೆ ವಿವಿಧ ರೀತಿಯ ಕುಟುಂಬ ಯೋಜನೆಗಳ ಬಗ್ಗೆ ತಿಳುವಳಿಕೆ ಕೊಡಬೇಕು, ನಂಕಿ, ಕಾಪರ್ T ಮತ್ತು ಶಸ್ತ್ರಚಿಕಿತ್ಸೆಗಳು ಭಾರೀ ಜನಪ್ರಿಯತೆಗಳಿಸಿವೆ.

ಸರ್ಕಾರವು ಅರ್ಹ ದಂಪತಿಗಳಿಗೆ ಕುಟುಂಬ ಯೋಜನೆಯನ್ನು ಹೆಚ್ಚು ಆಕರ್ಷಕವಾಗಿ ಮಾಡಲು ಅನೇಕ ಧನಸಹಾಯಗಳನ್ನು ಒದಗಿಸಿದೆ. ಜೊತೆಗೆ ಇತ್ತೀಚಿಗೆ 'ಅದೃಷ್ಟ ಬಹುಮಾನ' ಯೋಜನೆಯನ್ನೂ ಜಾರಿಗೊಳಿಸಿದೆ.

ಪರಿಹಾರ :

ಸಮಸ್ಯೆಗಳೊಡನೆ ಅವರ ಜೊತೆಯಲ್ಲಿಯೇ ಕೆಲವಕ್ಕೆ ಪರಿಹಾರಗಳನ್ನು ಸೂಚಿಸಲಾಗಿದೆ. ಇವುಗಳಲ್ಲಿ ಅತಿಮುಖ್ಯವೂ ಮತ್ತು ಜಟಿಲವೂ ಆದುದೆಂದರೆ ''ಆರೋಗ್ಯ ಶಿಕ್ಷಣ''

ಆರೋಗ್ಯ ಸುಧಾರಣೆ, ರೋಗಗಳಿಂದ ರಕ್ಷಣೆ, ಮುಂಚಿತವಾಗಿ ಚಿಕಿತ್ಸೆ. ಇವು 'ಆರೋಗ್ಯ ಶಿಕ್ಷಣ'ದ ಮೂಲ ಉದ್ದೇಶಗಳು.

ಆರೋಗ್ಯದ ಮೂಲ ಸೇವೆಗಳು :

ಇವುಗಳನ್ನು ಸರಿಯಾಗಿ ಅಳವಡಿಸಿದಲ್ಲಿ ಅನೇಕ ಗ್ರಾಮೀಣ ಸಮಸ್ಯೆಗಳನ್ನು ಪರಿಹರಿಸ ಬಹುದು. ಬುದ್ಧಿವಂತಿಕೆಯೊಡನೆ ಹೃದಯವಂತಿಕೆಯೂ ಬೆರೆತಲ್ಲಿ ಯಾವುದೂ ಕಷ್ಟ ವಾಗಲಾರದು.

1) ರೋಗದ ಸೂಕ್ತ ಔಷಧೋಪಚಾರ
2) ತಾಯಿ ಹಾಗೂ ಮಗುವಿನ ಆರೋಗ್ಯ ಮತ್ತು ಕುಟುಂಬ ಯೋಜನೆ.
3) ಶಾಲಾಮಕ್ಕಳ ಆರೋಗ್ಯ.

4) ನೈರ್ಮಲ್ಯ.
5) ಆರೋಗ್ಯ ಶಿಕ್ಷಣ
6) ಸಾಂಕ್ರಾಮಿಕ ರೋಗಗಳ ನಿಯಂತ್ರಣ.
7) ಅಂಕಿ–ಅಂಶಗಳ ಸಂಗ್ರಹ.

ಇಷ್ಟಲ್ಲದೆ ರಾಷ್ಟ್ರೀಯ ಸಮಸ್ಯೆಗಳಾಗಿರುವ ಮಲೇರಿಯಾ, ಫೈಲೇರಿಯಾಸಿಸ್ (ಆನೆ ಕಾಲು ರೋಗ), ಕ್ಷಯ, ಕುಷ್ಟರೋಗ, ಕ್ಯಾನ್ಸರ್, ಮೇಹರೋಗಗಳು ಮುಂತಾದ ರೋಗಗಳಿಗೆ ಎಳಕಿನಲ್ಲಿಯೇ ಸೂಕ್ತ ಚಿಕಿತ್ಸೆ ದೊರಕಬೇಕು. ಇವುಗಳಲ್ಲದೆ,

1) ಅಂಗಗಳ ರಚನೆ ಮತ್ತು ಕ್ರಿಯೆ ಬಗ್ಗೆ ವಿವರಣೆ, ಪ್ರಥಮಚಿಕಿತ್ಸೆ, ಆರೋಗ್ಯ ಕ್ಕೆ ಅವಶ್ಯಕವಾದ ವ್ಯಾಯಾಮಗಳು, ಧೂಮಪಾನ, ಕುಡಿತ ಮುಂತಾದವುಗಳಿಂದ ಉಂಟಾಗುವ ದುಷ್ಪರಿಣಾಮಗಳ ಬಗ್ಗೆ ಮಾಹಿತಿ ಕೊಡುವುದು.

2) ಆಹಾರ : ಸಮತೋಲ ಆಹಾರದ ಅವಶ್ಯಕತೆ ಬೆಳವಣಿಗೆ ಮತ್ತು ಆರೋಗ್ಯಕ್ಕೆ ಬೇಕಾದ ಪೌಷ್ಠಿಕಾಂಶಗಳ ಬಗ್ಗೆ ತಿಳಿಸುವುದು.

3) ಆರೋಗ್ಯ : (ವೈಯಕ್ತಿಕ) ಸ್ನಾನ ಮಾಡುವುದು, ಶುಭ್ರವಸ್ತ್ರಗಳನ್ನು ಧರಿಸು ವುದು, ಕೈಗಳನ್ನು ತೊಳೆಯುವುದು, ಉಗುರು ಮತ್ತು ಹಲ್ಲುಗಳ ಆರೋಗ್ಯ, ಉಗು ಳುವಾಗ, ಸೀನುವಾಗ ಅನುಸರಿಸಬೇಕಾದ ಆರೋಗ್ಯ ನಿಯಮಗಳು.

ಪರಿಸರ ನೈರ್ಮಲ್ಯ :

1) ಗೃಹ ; ಸೋಪಿನ ಬಳಕೆ, ಶುದ್ಧವಾದ ನೀರು, ಗಾಳಿ, ಬೆಳಕಿನ ಅವಶ್ಯಕತೆ, ಸರಿಯಾದ ಆಹಾರದ ರಕ್ಷಣೆ, ಕಸ, ಕೊಳೆ, ಮಲವನ್ನು ದೂರ ಸಾಗಿಸುವುದು. ಮುಂತಾದವುಗಳ ಬಗ್ಗೆ ಮಾಹಿತಿ ಒದಗಿಸುವುದು.

2) ಪರಿಸರ ; ಒಳಚರಂಡಿ ವ್ಯವಸ್ಥೆ, ಶುದ್ಧವಾದ ನೀರು, ಒಳ್ಳೆಯ ಮನೆ, ನಗರ ಯೋಜನೆ ಮುಂತಾದವುಗಳ ಬಗ್ಗೆ ಅರಿವು ಮೂಡಿಸುವುದು.

3) ತಾಯಂದಿರು ಮತ್ತು ಮಕ್ಕಳ ಆರೋಗ್ಯ ರಕ್ಷಣೆ.

4) ಸಾಂಕ್ರಾಮಿಕ ರೋಗಗಳ ನಿಯಂತ್ರಣ :
ರೋಗಗಳು ಯಾವುದರಿಂದ ಉಂಟಾಗುತ್ತವೆ ಅಂದರೆ, ಬ್ಯಾಕ್ಟೀರಿಯಾ, ವೈರಸ್ಸು ಮುಂತಾದ ಏಕಾಣುಜೀವಿಗಳ ಬಗ್ಗೆ, ಹರಡುವ ರೀತಿ, ಅದರಿಂದ ರಕ್ಷಣೆಗೆ ಬೇಕಾದ 'ರೋಗ ನಿರೋಧಕ'ಗಳ ಬಗ್ಗೆ ಮಾಹಿತಿ ಒದಗಿಸುವುದು.

5) ಮಾನಸಿಕ ಆರೋಗ್ಯ :
ಮಾನವೀಯ ಸಂಬಂಧಗಳು ದುರ್ಬಲಗೊಳ್ಳುತ್ತಿವೆ. ಮಾಲಿಕ–ಕಾರ್ಮಿಕರ ನಡುವಣ

ಸಂಬಂಧ, ತಾಯಿಮಗು, ಉಪಾಧ್ಯಾಯ ಮತ್ತು ವಿದ್ಯಾರ್ಥಿಗಳ ನಡುವಿನ ಸಂಬಂಧಗಳು ಮುಖ್ಯವಾದವು. ಸಾಮಾಜಿಕ ಪರಿಸರಕ್ಕೆ ಜನರು ಹೊಂದಿಕೊಳ್ಳುವಂತೆ ಜನರಿಗೆ ಮಾರ್ಗದರ್ಶನ ನೀಡುವುದು. ಮಾನಸಿಕ ಆಘಾತಗಳು ಉಂಟಾಗದಂತೆ ಜನರಿಗೆ ಸಾಧ್ಯವಾದಷ್ಟು ತರಬೇತಿ ನೀಡುವುದು ಆರೋಗ್ಯ ಕೇಂದ್ರಗಳನ್ನು ಪೂರ್ಣಪ್ರಮಾಣದಲ್ಲಿ ಸದುಪಯೋಗ ಪಡಿಸಿಕೊಳ್ಳುವಂತೆ ಜನರನ್ನು ಪ್ರೇರೇಪಿಸುವುದು. ಜನರು ಕುಟುಂಬ ಯೋಜನೆಯಲ್ಲಿ ತೊಡಗುವಂತೆ ಉತ್ತೇಜಿಸುವುದು.

ನಮ್ಮ ಬಡತನ ಹಾಗೂ ರೋಗರುಜಿನಗಳು ಆಮೂಲಾಗ್ರವಾಗಿ ನಿರ್ಮೂಲನವಾಗಬೇಕಾದರೆ ಸರ್ಕಾರ ಹಾಗೂ ಜನತೆಯ ನಡುವೆ ಸಹಕಾರ ಅಗತ್ಯ: ತತ್ವಗಳು ತತ್ವಗಳಾಗಿಯೇ ಉಳಿದಲ್ಲಿ ಉದ್ದೇಶ ಸಾರ್ಥಕವಾಗಲಾರದು.

ಎಷ್ಟುದ್ದ ?

ಹಿಗ್ಗಿ ಉದ್ದವಾಗುತ್ತಾರೆ
ಕುಗ್ಗಿ ಗಿಡ್ಡವಾಗುತ್ತಾರೆ
ಹಿಗ್ಗುತ್ತಾ ಕುಗ್ಗುತ್ತಾ
ಮರೆತು ಬಿಟ್ಟಿದ್ದಾರೆ
''ಇದ್ದದ್ದು ಎಷ್ಟುದ್ದ ?''

— ಭ. ನಾಗರಾಜ್

ವಾನರ ನರನಾಗುವಲ್ಲಿ 'ಶ್ರಮ'ದ ಪಾತ್ರ

● ಫ್ರೆಡೆರಿಕ್ ಏಂಗೆಲ್ಸ್/ಎನ್. ಎಸ್. ಚಿದಂಬರರಾವ್

ಇಡೀ ಸಂಪತ್ತಿನ ಸೃಷ್ಟಿಯ ಮೂಲ- "ಶ್ರಮ". ಹೌದು.. ಇದು ಅರ್ಥ ಶಾಸ್ತ್ರಜ್ಞರೆಲ್ಲರ ಸ್ಪಷ್ಟ ಅಭಿಮತ. ನಿಜವಾಗಿಯೂ, ಮಾನವನ "ಶ್ರಮ"ವೇ ಎಲ್ಲಾ ಸಂಪತ್‌ಸೃಷ್ಟಿಯ ಮೂಲ; ಪ್ರಾಕೃತಿಕ ಸಂಪನ್ಮೂಲಗಳನ್ನೇ ಹೊರತುಪಡಿಸಿ. ಪ್ರಕೃತಿಯು ಒದಗಿಸುವ ವಸ್ತುವಿಶೇಷಗಳನ್ನು ಶ್ರಮವು ಸಂಪತ್ತನ್ನಾಗಿ ಪರಿವರ್ತಿಸುತ್ತದೆ. ಆದರೆ, "ಶ್ರಮ"ವು ಮಾಡುವುದಿಷ್ಟೇ ಅಲ್ಲ, ಇದಕ್ಕಿಂತಲೂ ಗುರುತರವಾದುದನ್ನು ಮಾಡುತ್ತದೆ: ಮಾನವನ ಅಸ್ತಿತ್ವಕ್ಕೇ ಈ "ಶ್ರಮ"ವು ಒಂದು ಮೂಲಭೂತ ಅಗತ್ಯವಾಗಿದೆ: ಇದರ ಅಗತ್ಯ,-"ಶ್ರಮವೇ ಮಾನವನನ್ನು ಸೃಷ್ಟಿಸಿದೆ"-ಎಂದು ಹೇಳುವಷ್ಟುಮಟ್ಟಿಗಿದೆ.

ಅನೇಕ ಸಹಸ್ರ ವರ್ಷಗಳಿಗೆ ಮುನ್ನ, ಸ್ಪಷ್ಟವಾಗಿ ಇನ್ನೂ ನಿಗದಿಪಡಿಸಲಾರದಂಥ ಯುಗದಲ್ಲಿ-(ಆ ಕಾಲವನ್ನು ಭೂಗರ್ಭ ಶಾಸ್ತ್ರಜ್ಞರು "ತೃತೀಯ ಹಂತದ ಕಾಲ"-ಎಂದು ಗುರುತಿಸುತ್ತಾರೆ)-ಬಹುಶಃ ಆ ಯುಗದ ಕೊನೆಯ ಭಾಗದಲ್ಲಿರಬೇಕು, ಉಷ್ಣವಲಯದ ಪ್ರದೇಶದಲ್ಲಿ, ತುಂಬಾ ಬುದ್ಧಿ ಶಕ್ತಿಯುಳ್ಳ ಮಾನವಾಕೃತಿಯ ಮಂಗಗಳು ವಾಸಿಸುತ್ತಿದ್ದವು- ಈ ಪ್ರದೇಶ ಈಗ ಹಿಂದೂ ಮಹಾಸಾಗರದ ತಳದಲ್ಲಿ ಮುಳುಗಿದೆ. ನಮ್ಮ ಪೂರ್ವಜರೆನಿಸುವ ಈ ಪ್ರಾಣಿಗಳ ಬಗ್ಗೆ ಚಾರ್ಲಸ್ ಡಾರ್ವಿನ್ ಒಂದು ಅಂದಾಜಿನ ವರ್ಣನೆಯನ್ನು ನೀಡಿದ್ದಾನೆ.- ಇವುಗಳ ಮೈತುಂಬಾ ರೋಮಗಳು; ಗಡ್ಡ ಮತ್ತು ಚೂಪಾದ ಕಿವಿಗಳು- ಇಂಥ ಪ್ರಾಣಿಗಳು ಮರಗಳಲ್ಲಿ ಗುಂಪು ಗುಂಪಾಗಿ ವಾಸಿಸುತ್ತಿದ್ದವು.

ಮರ ಹತ್ತುವಾಗ ಈ ಪ್ರಾಣಿಗಳು ತಮ್ಮ ಕೈಕಾಲುಗಳನ್ನು ಒಂದು ವಿಶಿಷ್ಟಕ್ರಮದಲ್ಲಿ

ಬಳಸುತ್ತಿದ್ದವು. ಕಾಲಕ್ರಮದಲ್ಲಿ ಅವುಗಳ ಜೀವನ ಪದ್ಧತಿ ಬದಲಾಗಿ, ನೆಲದ ಮೇಲೆ ನಡೆಯಲಾರಂಭಿಸಿದಾಗ, ಮುಂದಿನ ಎರಡು ಕಾಲುಗಳನ್ನು ಉಪಯೋಗಿಸುವ ಅಭ್ಯಾಸವನ್ನು ಕ್ರಮೇಣ ಬಿಡುವಂತಾಯಿತು. ಆಗ ಈ ಪ್ರಾಣಿಗಳ ನಿಲುವು ನೇರವಾಗ ತೊಡಗಿತು. ಹೀಗೆ, ಬಾಗಿ ನಡೆಯುತ್ತಿದ್ದ ಪ್ರಾಣಿ ನೇರ ನಿಲುವಿಗೆ ಪರಿವರ್ತನೆ ಹೊಂದಿದುದು, ವಾನರ ನರನಾಗಿ ಬದಲಾಯಿಸಿದುದರ ಖಚಿತ ಹೆಜ್ಜೆಯೇ ಸರಿ.

ಪ್ರಸ್ತುತ ಈಗಿರುವ ಎಲ್ಲಾ ನರವಾನರಗಳೂ ನೇರವಾಗಿ ನಿಲ್ಲಬಲ್ಲವು. ತಮ್ಮ ಕಾಲುಗಳ ಮೇಲೆಯೇ ನಡೆಯಬಲ್ಲವು. ಆದರೆ ಈ ಓಡಾಟವೇನಿದ್ದರೂ ತುರ್ತುಬಿದ್ದಾಗ- ಅದೂ ತೀರಾ ಅಷ್ಟಾವಕ್ರ ರೀತಿಯಲ್ಲಿ. ಅವುಗಳ ಸಹಜ ನಡೆ ಏನಿದ್ದರೂ ಅರ್ಧನೇರ ಭಂಗಿ. ಈ ಭಂಗಿಯಲ್ಲಿ ಅವು ತಮ್ಮ ಕೈಗಳನ್ನೂ ಉಪಯೋಗಿಸುತ್ತವೆ. ಬಹುಪಾಲು ವಾನರಗಳು ತಮ್ಮ ಕೈಬೆರಳ ಗಿಣ್ಣುಗಳನ್ನು ನೆಲದ ಮೇಲೂರಿ, ಕಾಲುಗಳನ್ನೆಳೆದುಕೊಂಡು, ತಮ್ಮ ಉದ್ದನೆಯ ತೋಳಿನಾಧಾರದ ಮೇಲೆ ತಮ್ಮ ದೇಹವನ್ನು ತೂಗಾಡುತ್ತಾ ಸಾಗುತ್ತವೆ. ಈ ದೃಶ್ಯ– ಒಬ್ಬ ಕುಂಟ ತನ್ನ ಊರೆಗೋಲುಗಳ ಸಹಾಯದಿಂದ ನಡೆದಾಡುವಂತೆ ಕಂಡೀತು. ಒಟ್ಟಿನಲ್ಲಿ ಹೇಳುವುದಾದರೆ, ಇಂದಿನ ಎಲ್ಲಾ ನರವಾನರಗಳಲ್ಲಿಯೂ, ನಾಲ್ಕು ಕಾಲುಗಳ ಮೇಲಿನ ಓಡಾಟದಿಂದ ಹಿಡಿದು ಎರಡು ಕಾಲಿನ ಓಡಾಟದವರೆಗಿನ ಬದಲಾವಣೆಗಳ ಎಲ್ಲ ವಿವಿಧ ಹಂತಗಳನ್ನೂ ಕಾಣಬಹುದಾಗಿದೆ. ಆದರೆ, ಎರಡು ಕಾಲಿನ ಈ 'ಆಧುನಿಕ' ನಡಿಗೆ ಆ ಪ್ರಾಣಿಗಳಿಗೆ ಕೇವಲ ತಾತ್ಕಾಲಿಕ ಏರ್ಪಾಟು ಮಾತ್ರವಾಗಿದೆ.

ಅಂದರೆ, ನಮ್ಮ ರೋಮಭರಿತ ಪೂರ್ವಜರಿಗೆ, ನೆಟ್ಟಗೆದ್ದು ನಡೆದಾಡುವುದು ಪ್ರಥಮತಃ ಒಂದು ನಿಯಮವಾಗಿದ್ದು, ನಂತರ ಅದೊಂದು ಅನಿವಾರ್ಯ ಅವಶ್ಯಕತೆಯಾದಾಗ, ನಮ್ಮ ತರ್ಕಬದ್ಧ ಕಲ್ಪನೆಗೆ ತಟ್ಟನೆ ಹೊಳೆಯುವ ಅಂಶವೆಂದರೆ,–ಕೆಲಸವಿಲ್ಲದ ಮುಂದಿನ ಎರಡು ಕೈಗಳು ವಿವಿಧ ರೀತಿಯ ಚಟುವಟಿಕೆಗಳಲ್ಲಿ ತೊಡಗಿದ್ದಿರಬೇಕು. ನರವಾನರಗಳಲ್ಲಿ, ತಮ್ಮ ಕೈಗಳ ಉಪಯೋಗವು, ಕಾಲುಗಳ ಉಪಯೋಗಕ್ಕಿಂತ ಸ್ವಲ್ಪ ಭಿನ್ನವಾಗಿದೆ. ಮರವನ್ನು ಹತ್ತುವುದರಲ್ಲಿಯೇ ತೆಗೆದುಕೊಳ್ಳಿ– ಕೈಗಳ ಪಾತ್ರವೇ ಬೇರೆ, ಕಾಲುಗಳದ್ದೇ ಬೇರೆ. ಕೆಳವರ್ಗದ ಸಸ್ತನಿಗಳು ತಮ್ಮ ಮುಂಗಾಲುಗಳಿಂದ ಆಹಾರ ಪದಾರ್ಥಗಳನ್ನು ಹಿಡಿದುಕೊಳ್ಳುವಂತೆ, ನರವಾನರನ ಕೈಗಳು ಮುಖ್ಯವಾಗಿ ಆಹಾರವನ್ನು "ಹಿಡಿದುಕೊಳ್ಳಲು" ಬಳಕೆಯಾಗತ್ತಿದ್ದವು. ಬಹುತೇಕ ವಾನರಗಳು ತಮ್ಮ ಕೈಗಳಿಂದ ಮರಗಳಲ್ಲಿ ಗೂಡುಗಳನ್ನು ನಿರ್ಮಿಸುತ್ತವೆ- ಹಾಗೂ, ಪ್ರಕೃತಿಯ ವೈಪರೀತ್ಯಗಳಿಂದ ತನ್ನನ್ನು ರಕ್ಷಿಸಿಕೊಳ್ಳಲು, ಚಿಂಪಾಂಜಿಯಂತೆ, ರೆಂಬೆಗಳ ಮೇಲೆ ತಮ್ಮ ಕೈಗಳಿಂದ ಮುಚ್ಚಿಗೆಯನ್ನು ನಿರ್ಮಿಸುತ್ತವೆ. ಶತ್ರುಗಳಿಂದ ತನ್ನನ್ನು ರಕ್ಷಿಸಿಕೊಳ್ಳಲು ತಮ್ಮ ಕೈಗಳಿಂದ ಕೋಲನ್ನು ಹಿಡಿದುಕೊಳ್ಳುತ್ತವೆ. ಶತ್ರುಗಳ ಮೇಲೆ ಕಲ್ಲುಗಳನ್ನಾಗಲೀ, ಹಣ್ಣುಗಳ

ನ್ನಾಗಲೀ ಎಸೆಯಲು ತಮ್ಮ ಕೈಗಳನ್ನೇ ಉಪಯೋಗಿಸುತ್ತವೆ. ಅವುಗಳನ್ನು ಸೆರೆಯಲ್ಲಿಟ್ಟಾಗ, ಮಾನವನಿಂದ ತಾವು ಅನುಕರಿಸಲು ಕಲಿತ ಹಲವಾರು ಸರಳ ಚಟುವಟಿಕೆಗಳನ್ನು ತಮ್ಮ ಕೈಗಳಿಂದಲೇ ನೆರವೇರಿಸುತ್ತವೆ. ಆದರೆ, ಈ ವಿಷಯದಲ್ಲಿ ನರವಾನರಗಳ ಅಸಕ್ತ ಕೈಗಳಿಗೂ, ಸಹಸ್ರಾರು ವರ್ಷಗಳಿಂದ ಪಳಗಿದ ಮಾನವರ ಕೈಗಳಿಗೂ ಇರುವ ವ್ಯತ್ಯಾಸ ಸುಸ್ಪಷ್ಟವಾಗಿ ಗೋಚರಿಸುತ್ತದೆ. ಎರಡೂ ಬಗೆಯ ಕೈಗಳ ರಚನೆ, ಅವುಗಳಲ್ಲಿರುವ ಎಲುಬುಗಳ ಸಂಖ್ಯೆ ಮತ್ತು ಜೋಡಣೆ ಒಂದೇ ಆಗಿವೆ. ಆದರೂ, ಅತ್ಯಂತ ಅನಾಗರಿಕನೆನಿಸಿದ ಮಾನವನ ಕೈಗಳು, ಯಾವುದೇ ಕಪಿಯ ಕೈಗಳೂ ಅನುಕರಿಸಲಾಗದ ನೂರಾರು ಬಗೆಯ ಕೆಲಸಗಳನ್ನು ನೆರವೇರಿಸಬಲ್ಲವು. ಯಾವುದೇ ಕೋತಿಯ ಕೈಗಳೂ ಈವರೆವಿಗೆ ಒಂದೇ ಒಂದು ಒರಟುಕಲ್ಲಿನ ಚೂರಿಯನ್ನೂ ರೂಪಿಸಿಲ್ಲ.

ನರವಾನರನಿಂದ ನರಮಾನವನಾಗಿ ಪರಿವರ್ತನೆ ಹೊಂದುವ ಈ ಕ್ರಿಯೆಯಲ್ಲಿ ನಮ್ಮ ಪ್ರಾಚೀನ ಪೂರ್ವಜರು ತಮ್ಮ ಕೈಗಳನ್ನು ಬಳಸುವಾಗ ತುಂಬ ಸರಳವಾದ ಚಟುವಟಿಕೆಗಳಿಂದ ಪ್ರಾರಂಭಿಸಿರಬೇಕು. ಮಾನವರೂಪದಿಂದ ಪ್ರಾಣಿರೂಪಕ್ಕೆ ಹಿನ್ನಡೆಯ ಬಹುದಾದಂಥ ದೈಹಿಕ ಹಾಗೂ ಮಾನಸಿಕ ಮಟ್ಟವನ್ನು ಪಡೆದ ಅತ್ಯಂತ ಕೀಳುಮಟ್ಟದ ಕಾಡು ಮನುಷ್ಯನೂ ಸಹ, ಈ ಪರಿವರ್ತನ ಶೀಲ ಜೀವಿಗಳಿಗಿಂತ 'ಉತ್ತಮ'ನೆಂದೇ ಹೇಳಬೇಕು, ಮಾನವನ ಕೈಗಳಿಂದ ಪ್ರಪ್ರಥಮವಾಗಿ "ಚಕಮಕಿ ಕಲ್ಲೊಂದು" ಆಯುಧವಾಗಿ ಮೂಡಿಬರುವಲ್ಲಿ, ಅದೆಷ್ಟೋ ಶತಮಾನಗಳೇ ಗತಿಸಿ ಹೋಗಿರಬಹುದು- ಈ ದೀರ್ಘಾವಧಿಯೊಡನೆ ನಮ್ಮ "ಐತಿಹಾಸಿಕ ಯುಗ"ವನ್ನು ಹೋಲಿಸಿದರೆ, ಇದು ತೀರಾ ಕ್ಷುಲ್ಲಕ ಅವಧಿ ಎನ್ನಿಸಿಬಿಡುತ್ತದೆ. ಆದರೆ ಒಂದು ಅಂಶವಂತೂ ಸ್ಪಷ್ಟ- ಹಸ್ತವು ಖಂಡಿತವಾಗಿಯೂ ಮುಕ್ತವಾಗಿತ್ತು- ತನ್ಮೂಲಕ ಹೆಚ್ಚಿನ ಕೌಶಲ್ಯವನ್ನು ಗಳಿಸಿಕೊಳ್ಳುವ ಸಾಧ್ಯತೆ ಇತ್ತು, ಅಂತೆಯೇ. ತಲೆಮಾರಿನಿಂದ ತಲೆಮಾರಿಗೆ ಈ ಮಾನವ ಹಸ್ತ ಹೆಚ್ಚು ಹೆಚ್ಚು ಸಲಿಲವಾಗುತ್ತ ಹೋಯಿತು. ಹೇಗೆ ಬೇಕೆಂದರೆ ಹಾಗೆ ಬೆರಳುಗಳನ್ನೂ. ಕೈಗಳನ್ನೂ ತಿರುಗಿಸಿ, ಕೆಲಸ ಮಾಡುವ ರೀತಿ ಬೆಳೆಯುತ್ತಾ ಬಂತು.

ಅಂದರೆ, ಈ "ಹಸ್ತ" ಮಾನವನ ಶ್ರಮಕ್ಕಾಗಿಯೇ ಇರುವ ಅಂಗವಷ್ಟೇ ಅಲ್ಲ. ಅವನ ಶ್ರಮದ "ಸೃಷ್ಟಿ"ಯೂ ಹೌದು. ಹೊಸ ಹೊಸ ಕ್ರಿಯೆಗಳಿಗೆ ಹೊಂದಿಕೊಳ್ಳುವುದು, ಆ ಚಟುವಟಿಕೆಗಳಿಗೆ ತಕ್ಕಂತಹ ಮಾಂಸ ಖಂಡಗಳು, ಕೀಲುಗಳು, ಹಾಗೂ ಕೆಲಕಾಲಾ ನಂತರ ವಿಶೇಷ ರೀತಿಯಲ್ಲಿ ಬೆಳೆದ ಎಲುಬುಗಳೂ, ಹೆಚ್ಚು ಹೆಚ್ಚು ಸಂಕೀರ್ಣಗೊಂಡ ಉತ್ಪಾದನಾ ಕ್ರಿಯೆಗಳೂ, ಹೊಸ ರೀತಿಯಲ್ಲಿ ತೊಡಗುವುದು- ಇದನ್ನೇ ಶ್ರಮವೆಂದು ನಾವು ಪರಿಗಣಿಸುವುದಾದರೆ, ಈ ಶ್ರಮವು ಮಾನವನ ಹಸ್ತಕ್ಕೆ ಪರಿಪೂರ್ಣತೆಯ ಉನ್ನತ ಮಟ್ಟವನ್ನು ಕ್ರಮೇಣ ತಂದುಕೊಟ್ಟಿತು- ಆ ಉನ್ನತಮಟ್ಟದ

ಪರಿಪೂರ್ಣತೆಯೇ ಮುಂಪೆ, ರಾಫೇಲನ ಚಿತ್ರಕಲೆಯಲ್ಲಿ ಒಡಮೂಡವಷ್ಟುಮಟ್ಟಿಗೆ, ಥಾರ್‌ವ್ಯಾಲ್ಡ್‌ಸನ್‌ನ ವಿಗ್ರಹಗಳಲ್ಲಿ ಎಷ್ಟು ಕಾಣುವಷ್ಟು ಮಟ್ಟಿಗೆ, ಪೆಗಾನಿನಿಯ ಸಂಗೀತದಲ್ಲಿಯೂ ಅಭಿವ್ಯಕ್ತಿಗೊಳ್ಳುವಷ್ಟು ಮಟ್ಟಿಗೆ–ಬೆಳೆಯಿತು.

ಆದರೆ, ಈ ''ಹಸ್ತ''ವೊಂದೇ ಒಂಟಿಯಾಗಿರಬಲ್ಲುದೆ ? ಇದು ಒಂದು ಸಂಕೀರ್ಣ, ಸಂಯುಕ್ತ ಅಂಗರಚನಾವ್ಯೂಹದ ಒಂದು ಭಾಗವಷ್ಟೆ. ಹೀಗಾಗಿ ಈ ಹಸ್ತಕ್ಕೆ ಯಾವ ಯಾವ ಪ್ರಯೋಜನಗಳು ಲಭಿಸಿದವೋ, ಅವೆಲ್ಲವೂ ಇಡೀ ಶರೀರಕ್ಕೂ ಲಭ್ಯವಾದವು ಇದು ನಡೆದದ್ದು ಎರಡು ರೀತಿಗಳಲ್ಲಿ.

ಪ್ರಪ್ರಥಮವಾಗಿ, ಡಾರ್ವಿನ್ ಪ್ರತಿಪಾದಿಸಿರುವ ''ಬೆಳವಣಿಗೆಯ ಪರಸ್ಪರಾನುಬಂಧ'' ನಿಯಮದಂತೆ, ಶರೀರಕ್ಕೆ ಪ್ರಯೋಜನವಾಯಿತು. ಈ ನಿಯಮ ಹೇಳುವುದಿಷ್ಟು- ''ಒಂದು ಜೀವಿಯಲ್ಲಿ, ವಿಶಿಷ್ಟ ರೀತಿಯಲ್ಲಿ ರೂಪುಗೊಂಡ ಪ್ರತ್ಯೇಕ ಅಂಗವೂ, ಅದರೊಡನೆ ಯಾವ ಸಂಬಂಧವೂ ಇಲ್ಲದ ಬೇರೆ ಅಂಗಾಂಗಗಳೊಂದಿಗೂ ಸಹ ಸುಸಂಬದ್ಧ ಸಂಪರ್ಕವನ್ನು ಹೊಂದಿರುತ್ತದೆ.'' ಇದಕ್ಕೆ ಕೆಲವು ಉದಾಹರಣೆಗಳನ್ನು ಕೊಡಬಹುದು- ಕೆಂಪುರಕ್ತಕಣಗಳನ್ನೊಳಗೊಂಡ, ಕೋಶಕೇಂದ್ರವಿರದ ಹಾಗೂ ಜೋಡಿ ಅಸ್ಥಿಶಿರಗಳ ಮೂಲಕ ತಲೆಯು ಪ್ರಥಮ ಕಶೇರು ಖಂಡಕ್ಕೆ ಹೊಂದಿಸಲ್ಪಟ್ಟಿರುವ ಎಲ್ಲಾ ಪ್ರಾಣಿಗಳಿಗೂ ಯಾವುದೇ ಅಪವಾದವಿಲ್ಲದಂತೆ, ಕ್ಷೀರಗ್ರಂಥಿಗಳಿವೆ- ತನ್ಮೂಲಕ ಅವು ತಮ್ಮ ಮರಿಗಳಿಗೆ ಮೊಲೆಯೂಡಿಸುತ್ತವೆ. ಇದೇ ರೀತಿಯಲ್ಲೇ, ಸೀಳುಗೊರಸುಗಳಿರುವ ಸಸ್ತನಿಗಳೆಲ್ಲವಕ್ಕೂ ಮೆಲಕುಹಾಕಲು ಅನುಕೂಲಿಸುವಂಥ ಉದರ ವ್ಯವಸ್ಥೆ ಇವೆ. ಯಾವುದೋ ಒಂದು ಅಂಗಾಂಗದ ಆಕಾರದಲ್ಲುಂಟಾಗುವ ಬದಲಾವಣೆಯು ದೇಹದ ಇನ್ನಿತರ ಭಾಗಗಳನ್ನೂ ಬದಲಿಸಿಬಿಡುತ್ತದೆ- ಏಕೆಂದು ನಮಗೆ ಗೊತ್ತಿರದಿದ್ದರೂ ಸಹ. ನೀಲಿಕಣ್ಣುಗಳಿರುವ ಬಿಳಿಯ ಬೆಕ್ಕುಗಳೆಲ್ಲವೂ ಬಹುಮಟ್ಟಿಗೆ ಕಿವುಡಾಗಿರುತ್ತವೆ. ಅಂತೆಯೇ ಮಾನವ ಹಸ್ತದ ಕ್ರಮಿಕ ಬೆಳವಣಿಗೆ ಮತ್ತು ಅದಕ್ಕೆ ಸಂವಾದಿಯಾಗಿ ನೇರನಿಲುವಿಗೆ ಬೇಕಾದ ಕಾಲುಗಳ ಹೊಂದಾಣಿಕೆ- ಇವುಗಳು ನಿಸ್ಸಂದೇಹವಾಗಿ, ಈ ಪರಸ್ಪರಾನುಬಂಧದ ನಿಮಿತ್ತ, ಶರೀರದ ಇತರ ಭಾಗಗಳ ಮೇಲೂ ಪರಿಣಾಮವನ್ನುಂಟು ಮಾಡಿವೆ. ಏನೇ ಆಗಲಿ, ಈ ಕ್ರಿಯೆಯ ಬಗ್ಗೆ ಹೆಚ್ಚಿನ ಸಂಶೋಧನೆ ಇನ್ನೂ ನಡೆದಿಲ್ಲ- ಹೀಗಾಗಿ ಈ ಬಗ್ಗೆ ನಾವು ಹೆಚ್ಚಿಗೆ ವಿವರಿಸಲಾರೆವು.

ಶರೀರದ ಇತರ ಅಂಗಾಂಗಳ ಮೇಲೆ ಹಸ್ತದ ಬೆಳವಣಿಗೆಯ ಪ್ರಭಾವ ನೇರವಾದುದು ಹಾಗೂ ತೋರಿಸಲು ಸಾಧ್ಯವಾಗುವಂಥಾದ್ದು- ಎಂಬುದು ತುಂಬಾ ಮುಖ್ಯ ವಿಷಯ. ನಮ್ಮ ವಾನರ ಪೂರ್ವಜರು ಗುಂಪುಗಳಲ್ಲಿ ವಾಸಿಸುತ್ತಿದ್ದವೆಂದು ಈಗಾಗಲೇ ಹೇಳಿದೆ.

ಮಾನವಸಂಘ ಸಂಘಜೀವಿಯ ಉದಯ, ಮಾನವನ ಉಗಮಕ್ಕಿಂತ ಸ್ವಲ್ಪಹಿಂದಿನ ಸಂಘಜೀವಿಗಳಲ್ಲದ ಪ್ರಾಣಿಗಳಿಂದ ಖಂಡಿತ ಸಂಭವಿಸಿಲ್ಲ ಎಂಬುದು ಸುಸ್ಪಷ್ಟ. ಪ್ರಕೃತಿಯ ಮೇಲಣ ಮಾನವನ ಹತೋಟಿ ಅವನ ಕೈಗಳ ಬೆಳವಣಿಗೆಯೊಂದಿಗೆ ಪ್ರಾರಂಭವಾಯಿತು– ಅಂದರೆ. 'ಶ್ರಮ'ದ ಬೆಳವಣಿಗೆ ತನ್ನ ಪ್ರತಿ ಹೆಜ್ಜೆಗೂ ಮಾನವನ ತಿಳುವಳಿಕೆಯ ದಿಗಂತಗಳನ್ನು ವಿಸ್ತರಿಸಿತು. ಮಾನವ ಪ್ರಾಕೃತಿಕ ವಸ್ತುಗಳಲ್ಲಿ ಇದುವರೆವಿಗೂ ಗುರುತರಿಯದ ಹೊಸ ಹೊಸ ಗುಣ ಸ್ವಭಾವಗಳನ್ನು ಎಡಬಿಡದೆ ಸಂಶೋಧಿಸುತ್ತಾ ನಡೆದ. ಮತ್ತೊಂದು ಕಡೆ, 'ಶ್ರಮ'ದ ಬೆಳವಣಿಗೆಯು ಪರಸ್ಪರಾವಲಂಬನೆ ಹಾಗೂ ಒಗ್ಗೂಡಿ ಮಾಡುವ ಕೆಲಸಗಳ ಅವಕಾಶಗಳನ್ನು ಹೆಚ್ಚಿಸುತ್ತ, ಸಮಾಜದ ಸದಸ್ಯರೆಲ್ಲರನ್ನೂ ಒಟ್ಟುಗೂಡಿಸಲು ತುಂಬಾ ಸಹಾಯ ಮಾಡಿತು– ಅಷ್ಟೇ ಅಲ್ಲ, ಈ ಒಗ್ಗೂಡಿ ಮಾಡುವ ಕೆಲಸಗಳ ಪ್ರಯೋಜನದ ಅರಿವನ್ನು ಪ್ರತಿಯೊಬ್ಬನಿಗೂ ಸ್ಪಷ್ಟಪಡಿಸಿತು. ಸಂಕ್ಷಿಪ್ತವಾಗಿ ಹೇಳಬೇಕೆಂದರೆ, ಮಾನವತೆಯನ್ನು ನಿಧಾನವಾಗಿ ಗಳಿಸುತ್ತಿದ್ದ ಈ ಜೀವಿಗಳು ಪರಸ್ಪರ ಏನನ್ನೋ ಹೇಳಿಕೊಳ್ಳಲೇಬೇಕೆಂಬ ಅನಿವಾರ್ಯ ಸ್ಥಿತಿಯನ್ನು ತಲುಪಿದರು. ಅವರ ಈ ಅನಿವಾರ್ಯ, ಅಗತ್ಯಗಳೇ ಅವರಲ್ಲಿ ಮತ್ತಷ್ಟು ಅಂಗಾಂಗಗಳನ್ನು ಸೃಜಿಸಿದವು. ವಾನರಗಳಲ್ಲಿ ಇನ್ನೂ ಚೆನ್ನಾಗಿ ಬಲಿಯದ ಧ್ವನಿಪೆಟ್ಟಿಗೆಯು ನಿಧಾನವಾಗಿ, ಆದರೆ ಸುಸ್ಪಷ್ಟವಾಗಿ, ಶೃತಿಬದ್ಧವಾಗಿ ಮಾರ್ಪಾಟಾಯಿತು, ಇದರಿಂದ ಹೆಚ್ಚು ಹೆಚ್ಚು ನಿಖರವಾದ ಶೃತಿಗಳನ್ನು ಹೊರಡಿಸಲು ಸಾಧ್ಯವಾಯಿತು. ಬಾಯಿಯ ಎಲ್ಲಾ ವಿಶಿಷ್ಟಭಾಗಗಳೂ ಒಂದೊಂದಾಗಿ ಸ್ಫುಟವಾದ ಉಚ್ಚಾರಣೆಗಳನ್ನು ಧ್ವನಿಸುವುದನ್ನು ಕ್ರಮೇಣ ಕಲಿತವು.

"ಶ್ರಮದಿಂದ, ಅಥವಾ ಶ್ರಮಪಡುವಾಗಲೇ ಭಾಷೆ ಜನ್ಮ ತಾಳಿತು"- ಭಾಷೆಯ ಉಗಮದ ಬಗ್ಗೆ ನೀಡಲಾದ ಈ ವಿವರಣೆ, ಪ್ರಾಣಿಗಳೊಂದಿಗೆ ಹೋಲಿಸಿ ನೋಡಿದಾಗ, ಅತ್ಯಂತ ಸಮಂಜಸ ವಿವರಣೆಯಾದೀತು. ಅತ್ಯಂತ ವಿಶಿಷ್ಟವಾಗಿ ಬೆಳವಣಿಗೆ ಹೊಂದಿದ ಪ್ರಾಣಿಯೂ ಸಹ, ತನ್ನ ಸಹಜೀವಿಗೆ ತಿಳಿಸಬೇಕಾದ ಪುಟ್ಟವಿಷಯಕ್ಕೂ "ಭಾಷೆ"ಯನ್ನು ಬಳಸುವುದಿಲ್ಲ. ಪ್ರಕೃತಿಯ ರಾಜ್ಯದಲ್ಲಿ ಯಾವುದೇ ಪ್ರಾಣಿಯೂ ತನಗೆ ಭಾಷೆ ಬಾರದ ಬಗ್ಗೆ, ಅಥವಾ ಮಾನವ ಭಾಷೆಯನ್ನು ಅರ್ಥೈಸಿಕೊಳ್ಳಲಾರದ ಬಗ್ಗೆ, ತನಗೆ ಏನೋ ಮಹಾ ತೊಂದರೆಯಾಗಿಬಿಟ್ಟಿದೆ ಎಂದು ಭಾವಿಸುವುದೇ ಇಲ್ಲ. ಮಾನವನು ಈ ಪ್ರಾಣಿಗಳನ್ನು ಪಳಗಿಸಿಕೊಂಡಾಗ ಮಾತ್ರ ಪರಿಸ್ಥಿತಿ ಬೇರೆಯಾಗುತ್ತದೆ. ನಾಯಿ, ಕುದುರೆಗಳು ಮಾನವನ ಸಹವಾಸ ಸಂಪರ್ಕಗಳಿಂದಾಗಿ, ಸ್ಫುಟವಾದ ಉಚ್ಚಾರಣೆಯುಳ್ಳ ಭಾಷೆಗೆ ತಮ್ಮ ಕಿವಿಗಳನ್ನು ಬಹು ಚೆನ್ನಾಗಿ ಹೊಂದಿಸಿಕೊಂಡಿರುತ್ತವೆ. ಹಾಗೂ ತಮ್ಮ ಪರಿಮಿತ ಕಲ್ಪನೆಯ ಪರಿಧಿಯಲ್ಲಿ ಬರುವ ಯಾವುದೇಯನ್ನು ಪರಿಸುವಾರಾಗಿ ಅರ್ಥಮಾಡಿಕೊಳ್ಳುವನ್ನೂ ಕಲಿತುಬಿಡುತ್ತವೆ. ಇಷ್ಟೇ

ಅಲ್ಲದೆ, ಅವು ಕೆಲವು ಭಾವನಾವಿಶೇಷಗಳನ್ನು ರೂಢಿಸಿಕೊಂಡಿರುತ್ತವೆ. ಉದಾಹರಣೆಗೆ ತನ್ನ ಯಜಮಾನನ ಬಗ್ಗೆ ಪ್ರೀತಿ, ಕೃತಜ್ಞತೆ ಉಂಟಾಗಿ ಈ ಯಾವ ಭಾವನೆಗಳೂ ಯಾವ ಪ್ರಾಣಿಯಲ್ಲೂ ಮೊದಲು ಇರಲಿಲ್ಲ. ಈ ಪ್ರಾಣಿಗಳ ಬಗ್ಗೆ ವಿಶೇಷ ಪ್ರೀತ್ಯಾದರಗಳನ್ನು ಹೊಂದಿರುವ ಅದೆಷ್ಟೋ ಜನರು ಹೀಗೆ ಭಾವಿಸಿದ್ದಾರೆ- ''ಪ್ರಾಣಿಗಳು ಕೆಲವೊಂದು ಸಂದರ್ಭಗಳಲ್ಲಿ ತಮ್ಮ ಮೂಕತನವನ್ನು ಒಂದು ಬಹುದೊಡ್ಡ ಕೊರತೆ ಎಂದುಕೊಳ್ಳುತ್ತವೆಯಂತೆ'' ದುರ್ದೈವದಿಂದ, ಅದು ಸರಿಪಡಿಸಲಾಗದ ಕೊರತೆ. ಏಕೆಂದರೆ, ಅವುಗಳ ಧ್ವನಿಪೆಟ್ಟಿಗೆಯ ಅಂಗಾಂಗಗಳು ತುಂಬ ವಿಶಿಷ್ಟ ರೀತಿಯಲ್ಲಿ ರಚಿತವಾಗಿವೆ. ಆದರೂ ಕೆಲವೊಂದು ಪ್ರಾಣಿಗಳಲ್ಲಿರುವ ಧ್ವನಿಪೆಟಿಗೆಯ ರಚನೆಯು ಈ ಮೂಕತನವನ್ನು ಇಲ್ಲದಂತೆ ಮಾಡಿದೆ. ಪಕ್ಷಿಯ ಕೆನ್ನೆಯ ಅಂಗಾಂಗಗಳು, ಮಾನವನ ಕೆನ್ನೆಯ ಅಂಗಾಂಗಗಳಿಗಿಂತ ಭಿನ್ನವಾಗಿವೆ. ಆದರೂ ಪಕ್ಷಿಗಳು ಮಾತ್ರ ಮಾನವನಂತೆ ಮಾತನಾಡುವುದನ್ನು ಕಲ್ಲಿಯಬಲ್ಲವು- ಹೌದು–ಗಿಣಿಯೂ ಪಕ್ಷಿಯೇ ತಾನೆ ? ಅತ್ಯಂತ ವಿಕಾರಧ್ವನಿಯಲ್ಲಾದರೂ ಅದು ಮಾನವನಂತೆ ಮಾತನಾಡುತ್ತದೆ. ಅದು, ತಾನೇನು ಮಾತನಾಡುತ್ತಿರುವೆನೆಂದು ಅರ್ಥಮಾಡಿಕೊಳ್ಳಲಾರದಲ್ಲ- ಎಂಬ ಟೀಕೆಯನ್ನು ಮಾಡಬೇಡಿ. ಗಿಣಿ ಮಾನವನ ಸಂಪರ್ಕವನ್ನು ಹೊಂದಿದೆ ಎಂಬುದನ್ನು ತೋರಿಸಲಿಕ್ಕಾಗಿಯೇ, ಬರೀ ಮಾತನಾಡುವ ಆನಂದಕ್ಕಾಗಿಯೇ, ತಾನು ಕಲಿತ ಎಲ್ಲ ಶಬ್ದಜಾಲವನ್ನೂ ಗಂಟಿಗಟ್ಟಲೆ, ಒಂದೇ ಸಮನೆ ವಟಗುಟ್ಟುತ್ತದೆ. ಆದರೆ, ಅದರ ಸೀಮಿತ ಚಿಂತನಾ ಸಾಮರ್ಥ್ಯದ ಪರಿಧಿಯೊಳಗೆ ಅದು, ತಾನೇನು ಹೇಳುತ್ತಿದ್ದೇನೆಂದು ಕೆಲಮಟ್ಟಿಗೆ ಅರ್ಥಮಾಡಿಕೊಳ್ಳುವುದನ್ನು ಕಲಿಯಬಲ್ಲದು. ಗಿಣಿಗೆ ಬೈಯುವುದನ್ನು ಅರ್ಥವತ್ತಾಗಿ ಹೇಳಿಕೊಡಿ. (ಇದು ಉಷ್ಣದೇಶಗಳಿಂದ ಹಿಂದಿರುಗಿ ಬರುವ ನಾವಿಕರ ದೊಡ್ಡಮನೋರಂಜನೆಗಳಲ್ಲೊಂದು) ಗಿಣಿಯನ್ನು ರೇಗಿಸಿ- ಅದು ತಾನು ಕಲಿತ ಬೈಗುಳನ್ನು ಹೇಗೆ ಉಪಯೋಗಿಸುವುದೆಂದು ನಿಮಗೇ ಗೊತ್ತಾಗುತ್ತದೆ. ಬರ್ಲಿನ್ ನಗರದ ತಳ್ಳುಗಾಡಿಯ ವ್ಯಾಪಾರಿ ಕೂಗುವಷ್ಟು ಅರ್ಥವತ್ತಾಗಿಯೇ ಅದು ನಿಮ್ಮನ್ನು ಬೈಯುತ್ತದೆ. ನಿಮ್ಮಿಂದ ಚೂರುಪಾರು ತಿನಿಸನ್ನು ಬೇಡುವಾಗ ಅದು ಅಷ್ಟೇ ಸಹಜವಾಗಿ ಗೋಗರೆಯುತ್ತದೆ.

ನರವಾನರನ ಮಿದುಳು ಕ್ರಮೇಣ ಮಾನವನ ಮಿದುಳಾಗಿ ಪರಿವರ್ತನೆ ಹೊಂದುವಲ್ಲಿ ಪ್ರಪ್ರಥಮವಾಗಿ ''ಶ್ರಮ'' ಹಾಗೂ ''ಮಾತನಾಡುವ'' ಶ್ರಮ- ಈ ಎರಡೂ ಅಂಶಗಳು ಪ್ರಧಾನ ಪ್ರೇರಕಗಳಾಗಿವೆ ಮಾನವನ ಮಿದುಳು, ವಾನರನ ಮಿದುಳಿನಂತೆಯೇ ಇದ್ದರೂ, ಅದಕ್ಕಿಂತ ದೊಡ್ಡದೂ, ಹೆಚ್ಚು ಪರಿಪೂರ್ಣವೂ ಆಗಿದೆ ಎಂಬ ಅಂಶವನ್ನು ಗಮನಿಸಿ. ಮಿದುಳಿನ ಬೆಳವಣಿಗೆಯ ಜೊತೆ ಜೊತೆಯಾಗಿಯೇ, ಅದಕ್ಕೆ ನೇರವಾಗಿ ಸಂಬಂಧಿಸಿದ ಉಪಕರಣಗಳಾದ ಜ್ಞಾನೇಂದ್ರಿಯಗಳೂ ಬೆಳೆದವು- ಯಾವ ರೀತಿ ''ಮಾತು'' ಕ್ರಮೇಣ ಬೆಳೆದಂತೆಲ್ಲ, ತತ್ಸಂಬಂಧವಾದ ''ಶ್ರವಣ''ವೂ ಬೆಳೆಯುತ್ತಾ

ಹೋಯಿತೋ, ಅದೇ ರೀತಿಯಲ್ಲಿ ಮಿದುಳಿನ ವಿಕಾಸವಾದ ಹಾಗೆಲ್ಲ, ಜ್ಞಾನೇಂದ್ರಿಯಗಳೂ ಹೆಚ್ಚು ಸೂಕ್ಷ್ಮವಾಗುತ್ತಾ ಹೋದವು. ಹದ್ದಿನ ಕಣ್ಣುಗಳು ಮಾನವನ ಕಣ್ಣುಗಳಿಗಿಂತಲೂ ಹೆಚ್ಚು ದೂರವನ್ನು ನೋಡಬಲ್ಲವು- ಆದರೆ ಮಾನವನ ಕಣ್ಣುಗಳ ಹದ್ದಿನ ಕಣ್ಣಿಗಿಂತ ಹೆಚ್ಚು ವಿವೇಚನೆಯಿಂದ ವಸ್ತುಗಳನ್ನು ನೋಡಬಲ್ಲವು. ನಾಯಿಗೆ ಮಾನವನಿಗಿಂತ ಚುರುಕಾದ ಆಘ್ರಾಣ ಶಕ್ತಿ ಇದೆ- ಆದರೆ, ಮಾನವನು ಹೇಗೆ ಪ್ರತಿ ಸೂಕ್ಷ್ಮ ವಾಸನೆಯನ್ನೂ ಒಂದೊಂದು ವಸ್ತುವಾಗಿ ಗುರುತಿಸುತ್ತಾನೋ ಆ ರೀತಿಯಲ್ಲಿ ಅಷ್ಟೇಕೆ, ಆ ರೀತಿಯ ನೂರರಲ್ಲೊಂದು ಪಾಲಿನಷ್ಟೂ ನಾಯಿ ಗುರುತಿಸಲಾರದು. ನರವಾನರರಲ್ಲಿ ಸ್ವಲ್ಪವೂ ಇರದಿದ್ದ ಸ್ಪರ್ಶಜ್ಞಾನ, ಶ್ರಮದ ಮೂಲಕ ಮಾನವನ ಕೈಗಳಲ್ಲಿ ಹೆಚ್ಚು ಹೆಚ್ಚು ಸೂಕ್ಷ್ಮವಾಗಿ ಬೆಳೆಯುತ್ತಾ ಬಂದಿದೆ.

ಶ್ರಮ ಮತ್ತು ಮಾತು- ಇವುಗಳ ಪ್ರತಿಕ್ರಿಯೆಯಾಗಿ ಮಿದುಳಿನ ಹಾಗೂ ಅದರ ಆಜ್ಞಾಧಾರಕ ಜ್ಞಾನೇಂದ್ರಿಯಗಳ ಬೆಳವಣಿಗೆ, ತನ್ಮೂಲಕ ಪ್ರಜ್ಞೆಯ ಸ್ಪಷ್ಟತೆ, ಅಮೂರ್ತ ಕಲ್ಪನೆಯ ಶಕ್ತಿ, ವಿವೇಚನಾ ಶಕ್ತಿ-ಇವುಗಳು ಅದೇ ''ಶ್ರಮ'' ಮತ್ತು ''ಮಾತು''ಗಳ ಉನ್ನತ ಬೆಳವಣಿಗೆಗೆ ಉತ್ತಮ ಪ್ರೇರಕಗಳಾದವು. ಮಾನವ ಕೊನೆಗೆ ವಾನರನಿಂದ ಪ್ರತ್ಯೇಕಿಸಲ್ಪಟ್ಟರೂ. ಈ ಬೆಳವಣಿಗೆ ಮಾತ್ರ ಕೊನೆಗೊಳ್ಳಲಿಲ್ಲ. ಆದರೆ. ಒಟ್ಟಾರೆ ಮತ್ತಷ್ಟು ಅಭಿವೃದ್ಧಿಗೆ, ಬೆಳವಣಿಗೆಗೆ ದಾರಿಯಾಯಿತು. ಈ ಬೆಳವಣಿಗೆಯ ಪ್ರಮಾಣ ಹಾಗೂ ದಿಕ್ಕುಗಳು ದೇಶದಿಂದ ದೇಶಕ್ಕೆ, ಕಾಲದಿಂದ ಕಾಲಕ್ಕೆ ಸ್ಪಷ್ಟ ವ್ಯತ್ಯಾಸಗಳನ್ನು ತೋರಿಸುವಷ್ಟು (ಹಾಗೂ ಆಗಾಗ್ಗೆ ಅಲ್ಲಲ್ಲಿ ಸ್ಥಳೀಯವಾಗಿ ತಾತ್ಕಾಲಿಕ ಹಿನ್ನಡೆಯನ್ನೂ ಕಾಣಿಸುವಷ್ಟು) ತೀವ್ರವಾಗಿ ಬೆಳೆದವು. ಈ ವಿಕಾಸವನ್ನು ಒಂದುಕಡೆ ಮುನ್ನಡೆಸುತ್ತಾ, ಮತ್ತೊಂದು ಕಡೆ, ನಿರ್ದಿಷ್ಟ ಸೂಚನೆಗಳೊಂದಿಗೆ ಮಾರ್ಗದರ್ಶನ ಮಾಡಿಸುತ್ತಾ ಸಾಗಿದ ಹೊಸತೊಂದು ಅಂಶ- ಅದೇ ಸಮಾಜ- ಬೆಳಕಿಗೆ ಬಂತು. ಪರಿಪೂರ್ಣ ಬೆಳವಣಿಗೆಯ ಹಂತವನ್ನು ತಲುಪಿದ ಮಾನವನ ಉಗಮವಾಗುತ್ತಿದ್ದ ಹಾಗೆಯೇ ಅಸ್ತಿತ್ವಕ್ಕೆ ಬಂತು ಈ ಸಮಾಜ.

ಮರ ಹತ್ತುವ ಮಂಗಗಳ ಸಮೂಹ ಮಧ್ಯದಿಂದ ಮಾನವ ಸಮಾಜ ಹುಟ್ಟುಪಡೆಯುವಲ್ಲಿ, ಇಂದಿನ ಮಾನವ ಜೀವನದ ಒಂದೇ ಒಂದು ಕ್ಷಣವನ್ನೂ ಸರಿಗಟ್ಟಲಾಗದ ಸಹಸ್ರಾರು ವರ್ಷಗಳೇ ಇತಿಹಾಸದಲ್ಲಿ ಗತಿಸಿಹೋಗಿರಬೇಕು ಅಂತೂ ಕೊನೆಗೊಮ್ಮೆ ಈ ಮಾನವ ಸಮಾಜ ಕಾಣಿಸಿಕೊಂಡಿತು. ಹಾಗಾದರೆ ಇದೀಗ ಮರ ಹತ್ತುವ ಮಂಗಗಳ ಗುಂಪಿಗೂ, ಮಾನವ ಸಮಾಜಕ್ಕೂ ನಡುವೆ ಎದ್ದುಕಾಣುವ ಸ್ಪಷ್ಟ ವ್ಯತ್ಯಾಸ ಯಾವುದರಲ್ಲಿವೆ ?- ನಿಸ್ಸಂದೇಹವಾಗಿ ಈ ವ್ಯತ್ಯಾಸವಿರುವುದು ''ಶ್ರಮ''ದಲ್ಲೇ. ವಾನರಸಮೂಹ, ಭೌಗೋಳಿಕ ಪರಿಸ್ಥಿತಿಗಳಿಂದಲೂ, ಅಕ್ಕಪಕ್ಕದ ಪ್ರಾಣಿಗಳ ವಿರೋ

ಧವಿಂಪಲೂ, ನಿರ್ಧರಿಸಲ್ಪಟ್ಟಷ್ಟು ಪ್ರದೇಶವನ್ನು ಮಾತ್ರ ತನ್ನ ಆಹಾರಕ್ಕಾಗಿ ಉಪಯೋಗಿಸಿಕೊಂಡು ತೃಪ್ತಿಪಡಬೇಕಾಯಿತು. ಬೇರೆ ಹೊಸದೊಂದು ಆಹಾರ ಪ್ರದೇಶ ಬೇಕೆನಿಸಿದಲ್ಲಿ ಅವಕ್ಕಾಗಿ ಈ ಗುಂಪು ಹೋರಾಡಬೇಕಾಯಿತು. ಸ್ಥಳಾಂತರ ಮಾಡಬೇಕಾಯಿತು- ಏನೇ ಮಾಡಿದರೂ. ಆ ಪ್ರದೇಶಗಳಲ್ಲಿ ಪ್ರಕೃತಿ ಸಹಜವಾಗಿ ದೊರೆತಷ್ಟನ್ನಲ್ಲದೆ, ಹೆಚ್ಚಿನ ಆಹಾರ ಪಡೆಯಲು ಅದಕ್ಕೆ ಸಾಧ್ಯವಾಗಲಿಲ್ಲ. ಆದರೆ ವಾನರಗಳ ಅರಿವಿಲ್ಲದೆಯೇ, ಅವುಗಳ ಮಲದಿಂದ ಆ ಪ್ರದೇಶ ಹೆಚ್ಚು ಫಲವತ್ತಾಯಿತು. ಎಲ್ಲ ಆಹಾರ ಪ್ರದೇಶಗಳೂ ಹೀಗೆ ವಾನರರಿಂದ ತುಂಬಿಹೋದಾಗ, ವಾನರ ಸಂತತಿಯ ಸಂಖ್ಯೆ ಮತ್ತಷ್ಟು ಏರಲು ಸಾಧ್ಯವಾಗಲಿಲ್ಲ–ಈ ಸಂಖ್ಯೆ ತಟಸ್ಥವಾಗಿ ನಿಂತಿತು. ಆದರೆ, ಸಾಮಾನ್ಯವಾಗಿ ಎಲ್ಲಾ ಪ್ರಾಣಿಗಳೂ ಆಹಾರವನ್ನು ಹಾಳುಮಾಡುತ್ತವೆ. ತಾವು ತಿನ್ನುವುದರ ಹತ್ತರಷ್ಟು ಹಾಳು ಮಾಡುತ್ತಾ, ಮುಂದಿನ ಪೀಳಿಗೆಗೆ ಆಹಾರ ಪೂರೈಕೆಯ ಬೀಜಗಳನ್ನೇ ಇಲ್ಲವಾಗಿಸಿಬಿಡುತ್ತವೆ. ತೋಳ ತನ್ನ ಕೈಗೆ ಸಿಕ್ಕ ಹೆಣ್ಣು ಜಿಂಕೆಯನ್ನು– ಅದು ತನಗೆ ಮರುವರ್ಷ ಮತ್ತೊಂದು ಮರಿಯನ್ನು ನೀಡುವುದೆಂಬುದರ ಪರಿವೆಯೇ ಇಲ್ಲದೆ–ಕೊಂದು ಹಾಕುತ್ತದೆ; ಆದರೆ, ಒಬ್ಬ ಬೇಟೆಗಾರ ಹೀಗೆಂದೂ ಮಾಡಲಾರ. ಗ್ರೀಸ್‌ನಲ್ಲಿ ಮೇಕೆಗಳು ಚೆನ್ನಾಗಿ ಬಲಿಯದ ಪೊದೆಗಳನ್ನು ಮೇದು ಅಲ್ಲಿಯ ಗುಡ್ಡಗಳನ್ನೆಲ್ಲಾ ಬೋಳಾಗಿಸಿ ಬಿಟ್ಟವೆ. ಹೀಗೆ, ಪ್ರಾಣಿಗಳ ಈ ಆಹಾರಸಂಹಾರ ಪ್ರವೃತ್ತಿಯೇ ಪ್ರಾಣಿವರ್ಗಗಳ ಕ್ರಮಿಕ ರೂಪಾಂತರದಲ್ಲಿ ಪ್ರಧಾನ ಪಾತ್ರ ವಹಿಸುತ್ತದೆ. ಎಂದಿನ ಆಹಾರ ಪದ್ಧತಿಗಿಂತ ಭಿನ್ನವಾದ ಆಹಾರಕ್ಕೆ ಹೊಂದಿಕೊಳ್ಳುವಾಗ, ಅವುಗಳ ರಕ್ತದ ರಾಸಾಯನಿಕ ರಚನೆಯೇ ಬೇರೆಯಾಗಿ, ತನ್ಮೂಲಕ ಅವುಗಳ ಇಡೀ ಶರೀರ ರಚನೆಯೇ ಕ್ರಮೇಣ ಬದಲಾವಣೆ ಹೊಂದುತ್ತದೆ. ಈ ರೀತಿ ಹೊಸ ಆಹಾರ ಪದ್ಧತಿಗಳಿಗೆ ಹೊಂದಿಕೊಳ್ಳಲಾರದ ತಳಿಗಳು ನಶಿಸಿಹೋಗುತ್ತವೆ. ಆದುದರಿಂದ, ಪ್ರಾಣಿಗಳ ಈ ಆಹಾರ ಸಂಹಾರ ಪ್ರವೃತ್ತಿಯೇ, ಕಪಿಯಿಂದ ಮನುಜರಾಗಿ ನಮ್ಮ ಪೂರ್ವಿಕರು ಹೊಂದಿದ ರೂಪಾಂತರಕ್ಕೆ ಪ್ರಬಲ ಕಾರಣವಾಗಿದೆ ಎನ್ನಲು ಯಾವ ಸಂದೇಹವೂ ಇಲ್ಲ. ಬುದ್ಧಿವಂತಿಕೆ, ಹಾಗೂ ಹೊಂದಿಕೊಳ್ಳುವ ಸ್ವಭಾವದಲ್ಲಿ ಇತರ ಕಪಿಗಳಿಗಿಂತಲೂ ಉತ್ತಮವಾಗಿದ್ದ ಒಂದು ಜಾತಿಯ ಕಪಿಗಳು ತಾಳಿದ ಈ ಆಹಾರ ಸಂಹಾರ ಪ್ರವೃತ್ತಿಯು ಆಹಾರವಾಗಿದ್ದ ಗಿಡಗಳ ಸಂಖ್ಯೆಯನ್ನು ಹಾಗೂ ಆ ಗಿಡಗಳಲ್ಲಿರುವ ಆಹಾರ ಭಾಗಗಳ ಬಳಕೆಯನ್ನೂ ಹೆಚ್ಚಿಸಿರಬೇಕು. ಒಟ್ಟಿನಲ್ಲಿ ''ಆಹಾರ''ವು ತುಂಬಾ ವೈವಿಧ್ಯಮಯವಾಯಿತು. ಹಾಗೆಯೇ, ಆಹಾರ ರೂಪದಲ್ಲಿ ದೇಹದೊಳಗೆ ಪ್ರವೇಶಿಸುವ ಆಹಾರ ವಸ್ತುಗಳು ವೈವಿಧ್ಯಮಯವಾದವು. ಈ ವಸ್ತುವಿಶೇಷಗಳೇ ಮುಂದೆ ಮಾನವನನ್ನಾಗಿ ಪರಿವರ್ತಿಸಲು ಬೇಕಾದ ರಾಸಾಯನಿಕ ಪೀಠಭೂಮಿಯಾದವು. ಆದರೆ ಇವೆಲ್ಲವೂ ನಿಜವಾದ ಅರ್ಥದಲ್ಲಿ ''ಶ್ರಮ'' ಅಥವಾ ''ಮಾನವಶ್ರಮ'' ಎನ್ನಿಸಲಾರವು. ಮಾನವ ಶ್ರಮ ಆರಂಭವಾಗುವುದು ಉಪಕರಣಗಳ ತಯಾರಿಕೆಯ

ಪಂತದಿಂದ. ಹಾಗಾದರೆ, ಪೂರ್ವೇತಿಹಾಸಿಕ ಜನಾಂಗಗಳ, ಮತ್ತು ಸಮಕಾಲೀನ ಕಾಡು ಜನಾಂಗಗಳಲ್ಲಿಯೇ ಅತ್ಯಂತ ಒರಟಾದ ಜನಗಳ ಜೀವನಕ್ರಮವನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ, ಇತಿಹಾಸಪೂರ್ವ ಮಾನವನ ಆನುವಂಶೀಯ ಲಕ್ಷಣಗಳ ಆಧಾರದ ಮೇಲೆ, ನಮಗೆ ಕಂಡುಬಂದಿರುವ ಅತ್ಯಂತ ಪುರಾತನ ಉಪಕರಣಗಳು ಯಾವುವು ? ಅವುಗಳೆಂದರೆ, ಬೇಟೆ ಹಾಗೂ ಮೀನುಗಾರಿಕೆಯ ಉಪಕರಣಗಳು. ಇವುಗಳಲ್ಲಿ ಮೊದಲನೆಯವು ಆಯುಧಗಳೂ ಹೌದು. ಈ ಬೇಟೆ ಹಾಗೂ ಮೀನುಗಾರಿಕೆ ವೃತ್ತಿಗಳು ಮಾನವನ ಸಸ್ಯಾಹಾರದ ಜೊತೆಜೊತೆಯಾಗಿಯೇ, ಹೊಸಕ್ರಮವಾದ ಮಾಂಸಹಾರದತ್ತ ಬೊಟ್ಟುಮಾಡುತ್ತವೆ. ವಾನರನು ನರನಾಗಿ ಪರಿವರ್ತನೆ ಹೊಂದುವಲ್ಲಿ ಇದು ಮತ್ತೊಂದು ಖಚಿತ ಹೆಜ್ಜೆ. ಮಾಂಸಾಹಾರವು ದೇಹದ ಜೀವ ಭಾಗವಾಗುವ ಕ್ರಿಯೆಯಲ್ಲಿ, ಶರೀರಕ್ಕೆ ಅತ್ಯಗತ್ಯವಾದ ಘಟಕಗಳೆಲ್ಲವನ್ನೂ ಸಿದ್ಧ ರೂಪದಲ್ಲಿಯೇ ಹೊಂದಿತ್ತು. ಹೀಗೆ ಮಾನವ ದೇಹದಲ್ಲಾಗುವ ಜೀರ್ಣಕ್ರಿಯೆಗಾಗಿ ಈ ಮೊದಲೇ ಬೇಕಾಗಿದ್ದ ಅವಧಿಯೂ ಕಡಿಮೆಯಾಯಿತು. ಅಲ್ಲದೇ ಸಸ್ಯಾಹಾರಿ ಶರೀರದಲ್ಲಿ ಸಸ್ಯಜೀವನವನ್ನು ಹೋಲುವಂಥ ಅನೇಕ ಸಸ್ಯ ಸಂಬಂಧೀ ಕ್ರಿಯೆಗಳಿಗೆ ಬೇಕಾಗುತ್ತಿದ್ದ ಸಮಯವೂ ಉಳಿಯಿತು. ಪ್ರಾಣಿಜೀವನದ ಸ್ಪಷ್ಟ ಅಭಿವ್ಯಕ್ತಿಗೆ ಬೇಕಾದ ಮತ್ತಷ್ಟು ಸಮಯ, ಸಾಮುಗ್ರಿ ಹಾಗೂ ಅಪೇಕ್ಷೆಗಳನ್ನು ಮಾಂಸಾಹಾರವು ಪಡೆದುಕೊಂಡಿತು. ಮಾನವನು ಹೀಗೆ ಸಸ್ಯ ಸಾಮ್ರಾಜ್ಯದಿಂದ ಮುಂದೆ ಸಾಗುತ್ತಾ ಹೋದಂತೆಲ್ಲ, ಪ್ರಾಣಿಗಳಿಗಿಂತಲೂ ಮೇಲ್ಮಟ್ಟವನ್ನು ಪಡೆಯುತ್ತಾ ಹೋದನು. ಹೀಗೆ ಮಾಂಸದೊಡಗೂಡಿದ ಸಸ್ಯಾಹಾರಕ್ಕೆ ಹೊಂದಿಕೊಂಡಿದ್ದ ರೀತಿಯು ಕಾಡುಬೆಕ್ಕುಗಳನ್ನೂ ಕಾಡುನಾಯಿಗಳನ್ನೂ ಮಾನವನ ಪರಿಚಾರಕರನ್ನಾಗಿ ಪರಿವರ್ತಿಸಿತು. ಸಸ್ಯಾಹಾರದ ಜೊತೆಜೊತೆಯಾಗಿಯೇ ಮಾಂಸಾಹಾರ ಕ್ರಮಕ್ಕೆ ಒಗ್ಗಿಕೊಂಡ ರೀತಿ, ಬೆಳೆಯುತ್ತಿರುವ ಮಾನವನಿಗೆ ಅಗತ್ಯವಾದ ಶಕ್ತಿಸ್ವಾತಂತ್ರ್ಯಗಳನ್ನು ತಂದು ಕೊಡುವಲ್ಲಿ ತುಂಬಾ ಸಹಾಯಕವಾಯಿತು. ಮಾಂಸಾಹಾರ ಕ್ರಮವು ಮಾನವನ ಮಿದುಳಿನ ಮೇಲೆ ವಿಶೇಷ ಪರಿಣಾಮ ಬೀರಿತು. ಏಕೆಂದರೆ ಇದೀಗ ಮಿದುಳಿನ ಬೆಳವಣಿಗೆ ಹಾಗೂ ಪೋಷಣೆಗೆ ಅಗತ್ಯವಾದ ವಸ್ತುಗಳು ಸಿಗತೊಡಗಿದವು. ಆದುದರಿಂದಲೇ ತಲೆಮಾರಿನಿಂದ ತಲೆಮಾರಿಗೆ ಮಿದುಳು ಹೆಚ್ಚು ಶೀಘ್ರವಾಗಿ ಹಾಗೂ ಪರಿಪೂರ್ಣವಾಗಿ ರೂಪುಗೊಳ್ಳತೊಡಗಿತು. ''ಮಾಂಸಾಹಾರ ಕ್ರಮವಿಲ್ಲದಿದ್ದಲ್ಲಿ ಮಾನವ ಎಂದಿಗೂ ಅವತರಿಸುತ್ತಿರಲಿಲ್ಲ''– ಎಂಬ ಹೇಳಿಕೆ ಸಸ್ಯಾಹಾರಿಗಳ ಬಗ್ಗೆ ಅವಹೇಳನಕಾರಿಯಾದ ಹೇಳಿಕೆಯೇನಲ್ಲ. ಏಕೆಂದರೆ ಇದೇ ಮಾಂಸಾಹಾರಕ್ರಮವೇ ಕೆಲವು ಜನಾಂಗಗಳನ್ನು ನರಭಕ್ಷಕರನ್ನಾಗಿ ಮಾಡಿದೆ (ಇದು ನಮಗೆ ಅಷ್ಟು ಪ್ರಾಮುಖ್ಯವಲ್ಲ. ಹತ್ತನೇ ಶತಮಾನದಷ್ಟು ಇತ್ತೀಚೆಗೆ ಬರ್ಲಿನರ್ ಜನಾಂಗದ ಪೂರ್ವಜರೂ ವೆಲಿಟೇಬಿಯನ್ನರೂ ಅಥವಾ ವಿಲ್ಷಿಯನ್ನರೂ ತಮ್ಮ ಹೆತ್ತವರನ್ನೇ ಭಕ್ಷಿಸುತ್ತಿದ್ದರು)

ಮಾಂಸಾಹಾರಕ್ರಮವು ಮತ್ತೆರಡು ಖಚಿತ ಹೊಸಹೆಜ್ಜೆಗಳಿಗೆ ಎಡೆಮಾಡಿಕೊಟ್ಟಿತು. ಒಂದು, ಬೆಂಕಿಯ ಉಪಯೋಗ, ಇನ್ನೊಂದು, ಪಶುಪಾಲನೆ. ಬೆಂಕಿಯ ಉಪಯೋಗ ಜೀರ್ಣಕ್ರಿಯೆಯನ್ನು ಇನ್ನಷ್ಟು ಸುಲಭವಾಗಿಸಿತು- ಏಕೆಂದರೆ, ಬೆಂದ ಆಹಾರ ಸುಮಾರು ಅರ್ಧಕ್ಕರ್ಧದಷ್ಟು ಜೀರ್ಣಿಸಲ್ಪಟ್ಟು ಬಾಯಿಗೆ ಸಿಕ್ಕತೊಡಗಿತು. ಬೇಟೆಯ ಜೊತೆ ಜೊತೆಯಾಗಿ ಪಶುಪಾಲನೆಯು ನಿರಂತರವಾದ ಹೊಸ ಮಾಂಸದ ವಿಪುಲಪೂರೈಕೆಯನ್ನು ಸಾಧ್ಯವಾಗಿಸಿತು. ಇದೂ ಅಲ್ಲದೆ, ರಾಸಾಯನಿಕ ರಚನೆಯಲ್ಲಿ ಮಾಂಸದಷ್ಟೇ ಪುಷ್ಟಿದಾಯಕವಾದ ಹಾಲು ಮತ್ತು ಹೈನುಪದಾರ್ಥಗಳೂ ಪಶುಪಾಲನೆಯಿಂದ ದೊರೆತವು. ಈ ಎರಡೂ ಹೊಸಹೆಜ್ಜೆಗಳೂ ಮಾನವನ ಅಭಿವ್ಯಕ್ತಿಗೆ ಹೊಸ ಸಾಧನಗಳಾದವು. ಮಾನವನ ಹಾಗೂ ಸಮಾಜದ ಬೆಳವಣಿಗೆಯಲ್ಲಿ ಈ ಎರಡೂ ಮುನ್ನಡೆಗಳೂ ತುಂಬ ಪ್ರಧಾನವಾದವುಗಳು–ಆದರೆ, ಅವುಗಳ ಪರೋಕ್ಷ ಪ್ರಭಾವಗಳನ್ನೆಲ್ಲ ವಿವರಿಸಹೊರಟರೆ, ನಾವು ವಿಷಯಾಂತರವನ್ನೇ ಮಾಡಿದಂತಾಗುತ್ತದೆ.

ಮಾನವ ತಿನ್ನಬಹುದಾದ ವಸ್ತುಗಳೆಲ್ಲವನ್ನೂ ತಿನ್ನಲು ಕಲಿತ; ಯಾವುದೇ ಹವಾಮಾನದಲ್ಲಿಯೂ ಬದುಕಲು ಕಲಿತ. ಬದುಕನ್ನು ಸಾಧ್ಯವಾಗಿಸಬಹುದಾದ ಪ್ರದೇಶಗಳಲೆಲ್ಲಾ ತನ್ನಷ್ಟಕ್ಕೆ ತಾನೇ ಬದುಕಬಲ್ಲ ಏಕೈಕ ಪ್ರಾಣಿ ತಾನಾದುದರಿಂದ, ಮಾನವ ವಿಶ್ವವ್ಯಾಪಿಯಾದ. ಸಾಕು ಪ್ರಾಣಿಗಳೂ, ಕ್ರಿಮಿಕೀಟಾದಿಗಳೂ ವಿಶ್ವದ ಎಲ್ಲಾ ಹವಾಮಾನಗಳಿಗೂ ಸರಿಸುಮಾರಾಗಿ ಒಗ್ಗಿವೆಯಾದರೂ, ಅವು ತಮ್ಮಷ್ಟಕ್ಕೆ ತಾವೇ ಹಾಗೆ ಮಾಡಲಾರವು- ಮಾನವನ ಅಧೀನಕ್ಕೊಳಪಟ್ಟು ಹೀಗೆ ಒಗ್ಗಿಕೊಂಡಿವೆ. ಮಾನವನ ಉಗಮದ ಮೂಲಸ್ಥಾನ ಸಂಪೂರ್ಣ ಉಷ್ಣವಲಯ ಪ್ರದೇಶ; ಇಲ್ಲಿಂದ ಅವನು ಚಳಿಗಾಲ, ಬೇಸಿಗೆ ಮುಂತಾದ ವಾರ್ಷಿಕ ವಿಭಾಗಗಳಿದ್ದ ಶೀತಪ್ರದೇಶಗಳಿಗೆ ಸ್ಥಳಾಂತರಿಸುವಾಗ, ಅನೇಕ ಹೊಸ ಹೊಸ ಅಗತ್ಯಗಳ ಸೃಷ್ಟಿಯಾಯಿತು. ಚಳಿ ಹಾಗೂ ಆರ್ದ್ರತೆಯಿಂದ ರಕ್ಷಣೆ ಪಡೆಯಲು ವಸತಿ, ಉಡುಪುಗಳು ಬೇಕಾದುದರಿಂದ ಅವುಗಳ ಉತ್ಪಾದನೆಗಾಗಿ ಹೊಸ ಹೊಸ ಶ್ರಮವಲಯಗಳು, ಹೊಸರೀತಿಯ ಚಟುವಟಿಕೆಗಳು ರೂಪುಗೊಳ್ಳುತ್ತಾ, ಮಾನವನನ್ನು ಪ್ರಾಣಿಗಳಿಂದ ಮತ್ತಷ್ಟು ಪ್ರತ್ಯೇಕಿಸಿದ.

ಹಸ್ತಗಳು. ವಾಗಿಂದ್ರಿಯಗಳು ಮತ್ತು ಮಿದುಳು-ಇವುಗಳ ಸಂಯುಕ್ತ ಕ್ರಿಯೆಯಿಂದಾಗಿ ಮನುಷ್ಯರು ಹೆಚ್ಚು ಹೆಚ್ಚು ತೊಡಕಾದ ಸಂಕೀರ್ಣ ಚಟುವಟಿಕೆಗಳನ್ನು ಕೇವಲ ವೈಯುಕ್ತಿಕವಾಗಿಯೇ ಅಲ್ಲದೆ, ಸಾಮಾಜಿಕವಾಗಿಯೂ, ನೆರವೇರಿಸಲು ಶಕ್ತರಾದರು. ಹೆಗ್ಗುರಿಗಳನ್ನಿಟ್ಟುಕೊಂಡು ಸಾಧಿಸುವ ಸಾಮರ್ಥ್ಯ ಅವರದಾಯಿತು. ಪ್ರತಿಯೊಂದು ತಲೆಮಾರಿನ ಮಾನವ ಸೃಷ್ಟಿಯೂ ಹೆಚ್ಚು ಹೆಚ್ಚು ಪರಿಪೂರ್ಣವೂ ವೈವಿಧ್ಯಮಯವೂ ಹಾಗೂ ವಿಶೇಷವೂ ಆಗತೊಡಗಿತು. ಬೇಟೆ ಮತ್ತು ಪಶುಪಾಲನೆಗಳೊಡನೆ ಕೃಷಿಯೂ ಸೇರಿಕೊಂಡಿತು. ನೂಲುವುದು, ನೇಯುವುದು, ಲೋಹಗೆಲಸ, ಮಡಿಕೆ ಕುಡಿಕೆಗಳ ತಯಾರಿಕೆ, ಜಲಯಾನ– ಇವು ಕೃಷಿಯನ್ನು ಹಿಂಬಾಲಿಸಿ ಬಂದ ಚಟುವಟಿಕೆಗಳು.

ವಾಣಿಜ್ಯ ಮತ್ತು ಕೈಗಾರಿಕೆಗಳ ಜೊತೆಗೇ ಕೊನೆಯಲ್ಲಿ ಗೋಚರಿಸಿದ ಅಂಶಗಳು—ಕಲೆ ಹಾಗೂ ವಿಜ್ಞಾನ. ಜನಾಂಗಗಳು ರಾಜ್ಯಗಳಾಗಿ, ರಾಷ್ಟ್ರಗಳಾಗಿ ಬೆಳೆದವು. ನ್ಯಾಯ ಮತ್ತು ರಾಜನೀತಿಗಳು ಜನ್ಮತಾಳಿದವು. ಇವುಗಳೊಡನೆಯೇ ಹುಟ್ಟಿದ್ದು ಮಾನವನ ಅದ್ಭುತ ಚಿಂತನಲಹರಿಯಾದ ಮತಧರ್ಮ. ಈ ಎಲ್ಲಾ ಭಾವನಾತ್ಮಕ ಅಮೂರ್ತ ಸಂಗತಿಗಳು ಮಾನವನ ಬುದ್ಧಿಯಿಂದಲೇ ಜನ್ಮ ಪಡೆದುದರಿಂದ, ಇವುಗಳು ಮಾನವ ಸಮಾಜವನ್ನು ಪ್ರಧಾನವಾಗಿ ಆಕ್ರಮಿಸಿರುವ ಹಾಗೆ ತೋರಿತು; ಇವುಗಳೆದುರು, ದುಡಿಯುವ ಕೈಗಳಿಂದ ತಯಾರಾದ ಅತ್ಯಂತ ಸಾಮಾನ್ಯ ದರ್ಜೆಯ ವಸ್ತುಗಳೆಲ್ಲವೂ ಕೀಳ್ಪದಾರ್ಥಗಳಂತೆ ಹಿನ್ನೆಲೆಗೆ ಸರಿದುಹೋದವು. ಇದೂ ಅಲ್ಲದೆ, ಶ್ರಮವನ್ನು ವ್ಯವಸ್ಥೆಗೊಳಿಸಿದ ಈ ಬುದ್ಧಿ, ಸಮಾಜದ ಬೆಳವಣಿಗೆಯ ಪ್ರಾರಂಭಿಕ ಹಂತದಲ್ಲೇ, ತಾನೇ ವ್ಯವಸ್ಥೆಗೊಳಿಸಿದ ಶ್ರಮವನ್ನು, ತನ್ನದಲ್ಲದ ಕೈಗಳಿಂದ ಮಾಡಿಸತೊಡಗಿತು- (ತೀರಾ ಅನಾಗರಿಕ ಕುಟುಂಬದಲ್ಲೂ ಇದು ಕಂಡು ಬರುತ್ತದೆ.) ನಾಗರಿಕತೆಯ ಕ್ಷಿಪ್ರಪ್ರಗತಿಗೆ ಬುದ್ಧಿಯೇ ಕಾರಣವೆಂದೂ, ಮಿದುಳಿನ ಬೆಳವಣಿಗೆ ಹಾಗೂ ಅದರ ಚಟುವಟಿಕೆಗಳೇ ಪ್ರಧಾನವೆಂದೂ ಪರಿಗಣಿಸಲಾಯಿತು. ತಮ್ಮ ಎಲ್ಲಾ ಕ್ರಿಯೆಗಳಿಗೂ, ತಮ್ಮ ಆಲೋಚನೆಗಳು ಕಾರಣವೇ ವಿನಾ, ತಮ್ಮ ಅಗತ್ಯಗಳಲ್ಲ ಎಂದು ವಿವರಿಸುವುದೇ ಮನುಷ್ಯರಿಗೆ ಅಭ್ಯಾಸವಾಗಿ ಹೋಯಿತು. (ಆಲೋಚನೆ ಹಾಗೂ ಅಗತ್ಯಗಳೆರಡರಲ್ಲೂ ಮಿದುಳಿನ ಪಾತ್ರವಿದ್ದೇ ಇದೆ.) ಆದುದರಿಂದಲೇ, ಕಾಲಕ್ರಮೇಣ, ಆದರ್ಶ ಭಾವನಾತ್ಮಕ ದೃಷ್ಟಿಕೋಣ ಉದ್ಭವಿಸಿತು; ಪುರಾತನ ಪ್ರಪಂಚ ಕೊನೆಗೊಂಡಂತಾಗಿ, ಈ ನೂತನ ದೃಷ್ಟಿಕೋಣ ಮಾನವನ ಮನಸ್ಸನ್ನಾಕ್ರಮಿಸಿ ಬಿಟ್ಟಿತು. ಇಂದಿಗೂ ಈ ಬೌದ್ಧಿಕ ದೃಷ್ಟಿಕೋಣವೇ ನಮ್ಮ ಮಿದುಳನ್ನು ಸವಾರಿ ಮಾಡುತ್ತಿದೆ. ಇದು ಎಷ್ಟರಮಟ್ಟಿಗೆ ಎಂದರೆ- ಡಾರ್ವಿನಿಯನ್ ತತ್ವದ ಅನುಯಾಯಿಗಳೂ, ಅತ್ಯಂತ ಭೌತವಾದಿಗಳೂ ಆದ ವಿಜ್ಞಾನಿಗಳೂ ಸಹ ಮಾನವನ ಉಗಮದ ಮೂಲ ಯಾವುದೆಂಬ ಸ್ಪಷ್ಟ ಕಲ್ಪನೆಯನ್ನೂ ಹೊಂದಲು ಅಸಮರ್ಥರಾಗಿದ್ದಾರೆ- ಏಕೆಂದರೆ, ಈ ಬೌದ್ಧಿಕ ಆದರ್ಶ ದೃಷ್ಟಿಕೋನದ ಪ್ರಭಾವದಿಂದಾಗಿ ಅವರು, ಮಾನವ ನಿರ್ಮಾಣದಲ್ಲಿ "ಶ್ರಮ"ವು ವಹಿಸಿದ ಪಾತ್ರವನ್ನು ಗುರುತಿಸಲಾರರು.

ಈಗಾಗಲೇ ಹೇಳಿರುವಂತೆ, ಪ್ರಾಣಿಗಳೂ ಸಹ ಇದೇ ರೀತಿಯಲ್ಲಿ ತಮ್ಮ ಚಟುವಟಿಕೆಗಳಿಂದ ಪರಿಸರವನ್ನು, ಮಾನವನಷ್ಟಲ್ಲದಿದ್ದರೂ, ಕೆಲಮಟ್ಟಿಗಾದರೂ ಬದಲಾಯಿಸುತ್ತವೆ. ಈಗಾಗಲೇ ನಮಗೆ ತಿಳಿದಿರುವಂತೆ, ಈ ಬದಲಾವಣೆಗಳು ಪರಸ್ಪರ ಪ್ರತಿಕ್ರಿಯೆಗಳಿಗೊಳಗಾಗಿ, ಇವುಗಳನ್ನುಂಟು ಮಾಡಿದವರನ್ನೇ ಬದಲಾಯಿಸಿ ಬಿಡುತ್ತವೆ. ಪ್ರಕೃತಿಯಲ್ಲಿ ಯಾವುದೂ ತನ್ನಷ್ಟಕ್ಕೆ ತಾನೇ ಘಟಿಸುವುದಿಲ್ಲ. ಪ್ರತಿಘಟನೆಯೂ ಮತ್ತೊಂದರ ಮೇಲೆ ಪ್ರಭಾವ ಬೀರುವುದೇ ಅಲ್ಲದೆ ತಾನೂ ಸಹ ಬೇರೆಲ್ಲ ಘಟನೆಗಳಿಂದ ಪ್ರಭಾ

ನಿತವಾಗುತ್ತದೆ. ಬಹುಮಟ್ಟಿಗೆ ಈ ಅಸಂಖ್ಯಾತ ಚಲನಾತ್ಮಕವಾದ ಕ್ರಿಯೆಪ್ರತಿಕ್ರಿಯೆಗಳ ಜಾಲ ನಮ್ಮ ಸ್ಮೃತಿಯಿಂದ ಅಳಿಸಿಹೋಗುತ್ತದೆ- ಇದರಿಂದ ನಮ್ಮ ವಿಜ್ಞಾನಿಗಳು ತೀರಾ ಸರಳ ವಿಚಾರಗಳಲ್ಲೂ ಸ್ಪಷ್ಟ ಒಳದೃಷ್ಟಿಯನ್ನು ಪಡೆಯಲಾರರು. ಗ್ರೀಸ್‌ನಲ್ಲಿ ಮೇಕೆಗಳು ಹೇಗೆ ಕಾಡುಗಳ ಬೆಳವಣಿಗೆಗೆ ಮಾರಕವಾದವೆಂಬುದನ್ನು ಈಗಾಗಲೇ ನೋಡಿದ್ದೇವೆ; ಸೇಂಟ್ ಹೆಲೀನಾ ದ್ವೀಪದಲ್ಲಿ ಮೇಕೆ ಮತ್ತು ಹಂದಿಗಳು ಪ್ರಪ್ರಥಮವಾಗಿ ಅಲ್ಲಿಗೆ ಬಂದಾಗ, ಅಲ್ಲಿನ ಹಳೆಯ ಸಸ್ಯವರ್ಗವನ್ನು ಹೇಗೆ ಪೂರ್ಣವಾಗಿ ನಾಶಮಾಡಿದವೆಂಬುದನ್ನು ತಿಳಿದಿದ್ದೇವೆ; ಇದರಿಂದ ಆ ದ್ವೀಪಕ್ಕೆ ಬಂದ ನಾವಿಕರು ಹಾಗೂ ವಸಾಹತುಗಾರರು ತಮ್ಮೊಡನೆ ತಂದಂತಹ ಹೊಸ ಗಿಡಗಳ ಬೆಳವಣಿಗೆಗೆ ಆ ಪ್ರಾಣಿಗಳು ಹೇಗೆ ತಳಹದಿ ಹಾಕಿದವೆಂಬುದನ್ನು ಈಗಾಗಲೇ ಅರ್ಥಮಾಡಿಕೊಂಡಿದ್ದೇವೆ. ಆದರೆ, ಪ್ರಾಣಿಗಳು ತಮ್ಮ ಪರಿಸರದ ಮೇಲೆ ಬೀರುವ ಶಾಶ್ವತ ಪರಿಣಾಮ ಯಾದೃಚ್ಛಿಕವಾದುದು ಹಾಗೂ ತೀರಾ ಆಕಸ್ಮಿಕವಾದುದು. ಪ್ರಾಣಿಗಳಿಂದ ಮಾನವ ವಿಭಿನ್ನನಾಗುತ್ತಾ ಸಾಗಿದಂತೆಲ್ಲ, ಪ್ರಕೃತಿಯ ಮೇಲಿನ ಆತನ ಪ್ರಭಾವ ಈ ಮುಖ್ಯ ಗುಣವನ್ನು ಹೆಚ್ಚಾಗಿ ಪಡೆದುಕೊಳ್ಳುತ್ತದೆ- ನಿರ್ದಿಷ್ಟವಾದ ಪೂರ್ವ ನಿಶ್ಚಿತ ಗುರಿಗಳೆಡೆಗೆ, ಯೋಜಿತ ಹಾಗೂ ವ್ಯವಸ್ಥಿತ ಪೂರ್ವ ಚಿಂತನೆಯಿಂದ ಕಾರ್ಯಪ್ರವೃತ್ತನಾಗುವುದು. (ಗುರಿ ಮತ್ತು ಸಾಧನ ಎರಡರಲ್ಲೂ ಕ್ರಮಬದ್ಧತೆಯಿರುವುದು) ಪ್ರಾಣಿಯೊಂದು ತಾನೇನು ಮಾಡುತ್ತಿದ್ದೇನೆಂಬ ಅರಿವಿಲ್ಲದೆಯೇ, ಒಂದು ಪ್ರದೇಶದ ಸಸ್ಯಗಳನ್ನು ಹಾಳುಮಾಡಿಹಾಕುತ್ತದೆ. ಮನುಷ್ಯನೂ ಹೀಗೇ ನಾಶಪಡಿಸಿದರೂ, ಹೀಗೆ ದೊರೆತ ಭೂಮಿಯಲ್ಲಿ ಆಹಾರ ಬೆಳೆಗಳನ್ನೇ ಬಿತ್ತುತ್ತಾನೆ, ಇಲ್ಲವೇ ದ್ರಾಕ್ಷಿ ಬಳ್ಳಿಗಳನ್ನೋ, ಮರಗಳನ್ನೋ ಬೆಳೆಸುತ್ತಾನೆ- ಏಕೆಂದರೆ, ಈ ಸಸ್ಯಗಳೆಲ್ಲ ಅತ್ಯಧಿಕ ಪ್ರಮಾಣದಲ್ಲಿ ಇಳುವರಿ ನೀಡುತ್ತವೆಂದು ಮನುಷ್ಯನಿಗೆ ಗೊತ್ತಿದೆ. ಅಷ್ಟೇ ಅಲ್ಲ- ಅವನು ಉಪಯುಕ್ತ ಸಸ್ಯಗಳನ್ನೂ ಸಾಕುಪ್ರಾಣಿಗಳನ್ನೂ ಒಂದು ದೇಶದಿಂದ ಮತ್ತೊಂದು ದೇಶಕ್ಕೆ ಸ್ಥಳಾಂತರಿಸಿ, ಇಡೀ ಭೂಖಂಡಗಳ ಸಸ್ಯವರ್ಗ ಪ್ರಾಣಿವರ್ಗಗಳನ್ನೇ ಬದಲಾಯಿಸಿಬಿಡುತ್ತಾನೆ–ಅಷ್ಟೇಕೆ, ಇದಕ್ಕೂ ಹೆಚ್ಚಿನದನ್ನೂ ಮಾಡಬಲ್ಲ. ಕೃತಕ ಗರ್ಭಧಾರಣೆಯ ಮೂಲಕ, ಸಸ್ಯ ಹಾಗೂ ಪ್ರಾಣಿ ಈ ಉಭಯತ್ರರನ್ನೂ ಮಾನವನ ಕೈಗಳು, ಅದೆಷ್ಟು ಅದ್ಭುತವಾಗಿ ಬದಲಾಯಿಸುತ್ತವೆಯೆಂದರೆ, ಈ ಹೊಸ ತಳಿಗಳ ಮೂಲ ಸ್ವರೂಪ ಸ್ವಲ್ಪವೂ ಪತ್ತೆಯಾಗುವುದಿಲ್ಲ. ನಮ್ಮ ಆಹಾರಧಾನ್ಯಗಳೆಲ್ಲವೂ ಯಾವ ಯಾವ ಕಾಡುಗಿಡಗಳಿಂದ ಒಡಮೂಡಿ ಬಂದಿರಬಹುದೆಂದು ಇನ್ನೂ ಶೋಧನೆ ಮಾಡುತ್ತಲೇ ಇದ್ದಾರೆ– ಆದರೆ ಫಲ ಸಿಕ್ಕಿಲ್ಲ ನಮ್ಮ ಒಡನಾಡಿಗಳಾದ ಹಲವು ಜಾತಿಯ ನಾಯಿಗಳೂ, ಅಸಂಖ್ಯಾತ ತಳಿಗಳಲ್ಲಿ ಕಂಡುಬರುವ ಕುದುರೆಗಳೂ ಯಾವ ಕಾಡುಪ್ರಾಣಿಗಳಿಂದ ಅವತರಿಸಿವೆ ಎಂಬ ಬಗ್ಗೆ ಈಗಲೂ ಭಿನ್ನಾಭಿಪ್ರಾಯಗಳಿವೆ.

ಪ್ರಾಣಿಗಳೂ ಸಹ ಪೂರ್ವನಿಶ್ಚಿತ ಕ್ರಮಕ್ಕನುಸಾರವಾಗಿ ಕೆಲಸ ಮಾಡಬಲ್ಲವು. ಈ ಬಗ್ಗೆ ಭಿನ್ನಾಭಿಪ್ರಾಯಪಡುವುದು ನಮಗೆ ತರವಲ್ಲ ಎಂದು ಪ್ರತ್ಯೇಕವಾಗಿ ಹೇಳಬೇಕೆ? ಇದಕ್ಕೆ ವಿಪರೀತವಾಗಿ, ಜೀವದ್ರವ್ಯ ಮತ್ತು ಸಸಾರಜನಕ ಪದಾರ್ಥಗಳಿರುವ ಭ್ರೂಣ ದಲ್ಲಿ ಒಂದು ವ್ಯವಸ್ಥಿತ ಕಾರ್ಯಪದ್ಧತಿಯುಂಟು. ಈ ವ್ಯವಸ್ಥೆಯು ನಿರ್ದಿಷ್ಟವಾದ ಬಾಹ್ಯ ಪ್ರೇರಣೆಗಳಿಗೆ ತಕ್ಕ ನಿರ್ದಿಷ್ಟ ಕ್ರಿಯೆಗಳನ್ನು- ಅವು ಎಷ್ಟೇ ಸರಳವಾಗಿರಲಿ– ನೆರವೇರಿಸುತ್ತದೆ. ಇಂಥಾ ಪ್ರತಿಕ್ರಿಯೆ, ಜೀವಕೋಶವಿಲ್ಲದಿದ್ದಾಗ್ಯೂ, ಅಥವಾ ಅದಕ್ಕೂ ಚಿಕ್ಕದಾದ ನರಕೋಶವೇ ಇಲ್ಲದಿದ್ದಾಗ್ಯೂ ನಡೆಯುತ್ತಲೇ ಇರುತ್ತದೆ. ಕೀಟಾಹಾರೀ ಸಸ್ಯಗಳು ತನ್ಮಗರಿವಿಲ್ಲದಂತೆಯೇ ತಮ್ಮ ಬೇಟೆಯನ್ನು ವಶಪಡಿಸಿಕೊಳ್ಳುವಾಗ, ಯಾವು ದೋ ಒಂದು ಪೂರ್ವನಿಶ್ಚಿತಯೋಜನೆಯೊಂದು ಇದ್ದೇ ಇದೆ. ಪ್ರಾಣಿಗಳಲ್ಲಿ ಈ ಪ್ರಜ್ಞಾಪೂರ್ವಕ ಪೂರ್ವನಿಯೋಜಿತ ಕ್ರಿಯಾ ಸಾಮರ್ಥ್ಯವು, ಅವುಗಳ ನರಮಂ ಡಲದ ಬೆಳವಣಿಗೆಯ ಪ್ರಮಾಣಕ್ಕನುಗುಣವಾಗಿದೆ. ಸಸ್ತನಿಗಳಲ್ಲಿ ಈ ಸಾಮರ್ಥ್ಯ ಮತ್ತಷ್ಟು ಉನ್ನತಮಟ್ಟದಲ್ಲಿರುತ್ತದೆ. ಇಂಗ್ಲೆಂಡ್‌ನಲ್ಲಿ ನರಿಯೊಂದು ಬೇಟೆಗೆ ಹೊರ ಟಾಗ ನಿತ್ಯವೂ ಎಲ್ಲರ ಗಮನಕ್ಕೆ ಬರುವ ಅಂಶಗಳೆಂದರೆ, - ನರಿಯು ತನ್ನನ್ನು ಹಿಂಬಾಲಿಸುವ ಮನುಷ್ಯರಿಂದ ತಪ್ಪಿಸಿಕೊಳ್ಳಲು ತನ್ನ ಪ್ರಾದೇಶಿಕ ಜ್ಞಾನವನ್ನು ಸ್ವಲ್ಪವೂ ತಪ್ಪಿಲ್ಲದೆ ಉಪಯೋಗಿಸಿಕೊಳ್ಳುತ್ತದೆ; ತನ್ನ ವಾಸನೆಯು ಇತರರಿಗೆ ಪತ್ತೆ ಯಾಗದಂತೆ ನೆಲದಲ್ಲಿರುವ ಸೌಲಭ್ಯಗಳನ್ನೂ ಬಲ್ಲದು- ಅವುಗಳನ್ನು ತನಗನುಕೂಲಿ ಸುವಂತೆ ಉಪಯೋಗಿಸಿಕೊಳ್ಳುತ್ತದೆ. ಬೌದ್ಧಿಕವಾಗಿ ತುಂಬಾ ಬೆಳೆದಿರುವ ಸಾಕು ಪ್ರಾಣಿಗಳಲ್ಲೂ, ಮಕ್ಕಳಲ್ಲಿರುವಂತಹ ತಂತ್ರಗಾರಿಕೆ ಕಂಡುಬರುತ್ತದೆ. ಮಾನವನ ಸಹವಾಸವೇನು ಸಾಮಾನ್ಯವೆ? ಹೌದು- ಮಾನವನ ಭ್ರೂಣ ತಾಯಿಯ ಗರ್ಭ ದಲ್ಲಿ ವಿಕಾಸಹೊಂದುವ ವಿವಿಧ ಹಂತಗಳು, ಕ್ರಿಮಿಯಿಂದ ಪ್ರಾರಂಭವಾಗಿ, ನಮ್ಮ ಪೂರ್ವಜ ಪ್ರಾಣಿಗಳ ಆಂಗಿಕ ವಿಕಾಸವನ್ನೊಳಗೊಂಡ ಲಕ್ಷಾಂತರ ವರ್ಷಗಳ ಇತಿ ಹಾಸದ- ಸಂಕ್ಷಿಪ್ತ ಪುನರಾವರ್ತನೆಯಾಗಿದೆ ಹಾಗೆಯೇ ಮಾನವ ಶಿಶುವಿನ ಬೌದ್ಧಿ ಕವಿಕಾಸವೂ ಸಹ, ಅದೇ ಪೂರ್ವಜರ ಬೌದ್ಧಿಕವಿಕಾಸದ ಸಂಕ್ಷಿಪ್ತ ಪುನರಾವರ್ತನೆ ಯಾಗಿದೆ.-(ಇತ್ತೀಚಿನ ಪೂರ್ವಜರ ಬೌದ್ಧಿಕ ವಿಕಾಸ ಎಂದಿಟ್ಟುಕೊಳ್ಳೋಣ.) ಆದರೆ, ಯಾವುದೇ ಪ್ರಾಣಿಯ ಯಾವ ಪೂರ್ವನಿಶ್ಚಿತ ಕಾರ್ಯವೂ ಈ ಭೂಮಿಯ ಮೇಲೆ ತನ್ನ ಅಚ್ಚಳಿಯದ ಸಂಕಲ್ಪವನ್ನು ಯಶಸ್ವಿಯಾಗಿ ಮೂಡಿಸಿಲ್ಲ. ಈ ಹೊಣೆಗಾರಿಕೆ ಮಾತ್ರ ಮಾನವನಿಗೇ ಮೀಸಲಾಗುಳಿಯಿತು.

ಒಟ್ಟಿನಲ್ಲಿ ಹೇಳುವುದಾದರೆ, ಪ್ರಾಣಿಯೊಂದು ತನ್ನ ಪರಿಸರವನ್ನು ಕೇವಲ 'ಉಪ ಯೋಗಿಸಿ' ಕೊಳ್ಳುತ್ತದೆ. ಕೇವಲ ತನ್ನ ಇರುವಿಕೆಯಿಂದ ಪರಿಸರವನ್ನು ಬದಲಾಯಿ ಸುತ್ತದೆ. ಮಾನವನಾದರೋ, ಈ ಪರಿಸರದಲ್ಲಿ ತನ್ನ ಅಪೇಕ್ಷೆಗಳನ್ನು ಪೂರಯಿಸು

ವಂತಹ ಬದಲಾವಣೆಗಳನ್ನು ಮಾಡಿಕೊಂಡು, ಪರಿಸರದ ಮೇಲೆ ತನ್ನ 'ಪ್ರಭುತ್ವ' ವನ್ನು ಸ್ಥಾಪಿಸುತ್ತಾನೆ; ಮಾನವನಿಗೂ ಇತರ ಪ್ರಾಣಿಗಳಿಗೂ ಇರುವ ಬಹುಮುಖ್ಯ ಹಾಗೂ ಅಂತಿಮ ವ್ಯತ್ಯಾಸವಿಷ್ಟೇ. ಈ ವ್ಯತ್ಯಾಸಕ್ಕೆ ಪ್ರಧಾನ ಕಾರಣವೇ "ಶ್ರಮ".

ಪ್ರಕೃತಿಯ ಮೇಲೆ ನಾವು ಸಾಧಿಸಿದ ವಿಜಯಗಳ ಬಗ್ಗೆ ನಾವೇ ತೀರಾ ಹೆಮ್ಮೆಯಿಂದ ಹೊಗಳಿಕೊಳ್ಳುವುದು ಬೇಡ ಏಕೆಂದರೆ ಇಂಥ ಪ್ರತಿಯೊಂದು ಗೆಲುವಿನ ವಿರುದ್ಧವಾಗಿ ಯೂ, ಪ್ರಕೃತಿ ನಮ್ಮೊಂದಿಗೆ ಸೇಡು ತೀರಿಸಿಕೊಳ್ಳದೆ ಬಿಟ್ಟಿಲ್ಲ. ನಿಜವಾಗಿಯೂ ಒಂದೊಂದು ಗೆಲುವೂ ಮೊದಲು ನಾವು ನಿರೀಕ್ಷಿಸಿದ ಫಲವನ್ನೇ ಕೊಡುತ್ತಾ ಬಂದಿದೆ. ಆದರೆ, ಆನಂತರ, ಮೊದಲು ದೊರೆತ ಗೆಲುವನ್ನೇ ಹೊಸಕಿಹಾಕುವಂತಹ ಅನಿರೀಕ್ಷಿತ ಪರಿಣಾಮಗಳನ್ನುಂಟುಮಾಡಿದೆ ಮೆಸಪೊಟೇಮಿಯಾ, ಗ್ರೀಸ್, ಏಷ್ಯಾ ಮೈನರ್ ಮುಂತಾದ ಪ್ರದೇಶಗಳಲ್ಲಿ ವಾಸಿಸುತ್ತಿದ್ದ ಜನ, ಉಳುಮೆಗಾಗಿ ಹೆಚ್ಚು ಭೂಮಿ ಬೇಕೆಂದು ಅಲ್ಲಿದ್ದ ಕಾಡುಗಳನ್ನೆಲ್ಲ ನಾಶಮಾಡಿದರು. ಆದರೆ, ಆ ಕಾಡುಗಳಾದರೋ, ತೇವಾಂಶವನ್ನು ಸಂಗ್ರಹಿಸಿ, ಶೇಖರಿಸಿಟ್ಟುಕೊಳ್ಳುವ ಭಂಡಾರಗಳಾಗಿದ್ದವು; ಇಂಥ ಕಾಡುಗಳ ನಾಶದಿಂದ, ಆ ದೇಶಗಳ ಇಂದಿನ ದಯನೀಯ ಸ್ಥಿತಿಗೆ ತಾವೇ ತಳಪಾಯ ಹಾಕುತ್ತಿದ್ದೇವೆಂದು ಅಂದಿನ ಜನ ಕನಸಿನಲ್ಲೂ ಎಣಿಸಿರಲಿಲ್ಲ. ಆಲ್ಪ್ಸ್ ಪ್ರದೇಶದ ನಿವಾಸಿಗಳಾದ ಇಟಾಲಿಯನ್ನರು, ಉತ್ತರದ ಕಣಿವೆಗಳಲ್ಲಿ ಹಾಗೂ ದಕ್ಷಿಣದ ಇಳುಕಲಿನಲ್ಲಿ ಹುಲುಸಾಗಿ ಬೆಳೆದಿದ್ದ ಪೈನ್ ಮರಗಳನ್ನು ನಾಶಮಾಡಿದರು; ಆದರೆ, ತಮ್ಮ ಈ ಕೃತಿಯಿಂದ ತಮ್ಮ ಪ್ರಾಂತ್ಯದಲ್ಲಿ ಹೈನುಗಾರಿಕೆ ಉದ್ಯಮದ ಬುಡಕ್ಕೇ ಕೊಡಲಿ ಪೆಟ್ಟು ಹಾಕುತ್ತಿದ್ದೇವೆಂದು ಅವರು ಕಿಂಚಿತ್ತೂ ಭಾವಿಸಿರಲಿಲ್ಲ. ಇಷ್ಟೇಅಲ್ಲ- ಇದರಿಂದ ತಾವು, ವರ್ಷವಿಡೀ ಉಕ್ಕುವ ಪರ್ವತಜಲ ಚಿಲುಮೆಗಳನ್ನೇ ಬತ್ತಿಸುತ್ತಿದ್ದೇವೆಂಬ ಸುಳಿವೂಅವರಿಗೆ ಇರಲಿಲ್ಲ. ಮಳೆಗಾಲದಲ್ಲಿ ಭಯಂಕರ ಪ್ರವಾಹದಂತೆ, ಮೈದಾನಗಳ ಮೇಲೆ ಸುರಿಯುವ ಮಳೆಯನ್ನೂ ಹಾಳುಮಾಡಿದೆವೆಂಬ ಕಲ್ಪನೆಯೂ ಅವರಿಗಿರಲಿಲ್ಲ. ಯೂರೋಪಿನಲ್ಲೆಲ್ಲಾ ಆಲೂಗಡ್ಡೆಯನ್ನು ವ್ಯಾಪಕವಾಗಿ ಹರಡಿದ ಜನಕ್ಕೆ, ಈ ಪಿಷ್ಟಾಂಶಗಳಿಂದ ತುಂಬಿದ ಗೆಡ್ಡೆ ಮುಂದೆ ಗಂಡಮಾಲೆ ಎಂಬ ಭಯಂಕರ ರೋಗಕ್ಕೆಡೆಮಾಡಿ ಕೊಟ್ಟೀತೆಂಬ ಅರಿವೇ ಇರಲಿಲ್ಲ. ಹೀಗೆ, ವಿಶ್ವವಿಜೇತನೊಬ್ಬ ಮತ್ತೊಂದು ಅನ್ಯದೇಶವನ್ನು ಆಳುವಂತೆ, ನಾವು ಪ್ರಕೃತಿಯನ್ನು ಖಂಡಿತಾ ಆಳಲಾರೆವು; ಪ್ರಕೃತಿಯಿಂದ ಹೊರಗೆ ಸಿಡಿದು ನಿಂತು, ಅದರ ಮೇಲೆ ಹತೋಟಿಯನ್ನಿಡಲಾರೆವು. ಹೌದು. ನಾವೆಲ್ಲರೂ ನಮ್ಮ ರಕ್ತ ಮಾಂಸ ಮಿದುಳುಗಳ ಸಮೇತ ಇದೇ ಪ್ರಕೃತಿಯ ಸ್ವತ್ತಾಗಿದ್ದೇವೆ- ಅದರ ನಡುವೆಯೇ ಬಾಳುತ್ತಿದ್ದೇವೆ ಈ ಪ್ರಕೃತಿಯ ನಿಯಮಗಳನ್ನು ಕಲಿತು, ಅವುಗಳನ್ನು ಸರಿಯಾಗಿ ಪ್ರಯೋಗಿಸುವುದಷ್ಟೇ, ನಮಗಿರುವ, ಬೇರೆಲ್ಲ ಪ್ರಾಣಿಗಳಿಂತ ಭಿನ್ನವಾದ ಹೆಚ್ಚುಗಾರಿಕೆ ಪ್ರಕೃತಿಯ ಮೇಲಣ ನಮ್ಮ ಯಜಮಾನಿಕೆ ಇಷ್ಟೇ- ಮುಂತಾದ

ಅಂಶಗಳು ಚಿತಗೊಳ್ಳುತ್ತವೆ.

ವಾಸ್ತವವಾಗಿ, ಕಾಲಸರಿದಂತೆಲ್ಲಾ, ಪ್ರಕೃತಿ ನಿಯಮಗಳ ಅರಿವು ಹೆಚ್ಚು ಹೆಚ್ಚಾಗಿ ನಮಗುಂಟಾಗುತ್ತಿದೆ. ಪ್ರಕೃತಿಯ ಈ ಸಾಂಪ್ರದಾಯಿಕ ನಡೆಯಲ್ಲಿ ನಾವು ಪದೇಪದೇ ಮಧ್ಯಪ್ರವೇಶ ಮಾಡುತ್ತಿದ್ದೇವೆ, ಇದರ ತಕ್ಷಣದ ಹಾಗೂ ದೀರ್ಘಕಾಲಾ ನಂತರದ ಪರಿಣಾಮಗಳನ್ನೂ ಗ್ರಹಿಸುತ್ತಿದ್ದೇವೆ. ವಿಶೇಷತಃ, ಈ ಶತಮಾನದಲ್ಲುಂಟಾಗಿರುವ ಪ್ರಾಕೃತಿಕ ವಿಜ್ಞಾನದ ಅದ್ಭುತ ಪ್ರಗತಿಯ ನಂತರ, ನಾವು ಹಿಂದೆಂದಿಗಿಂತಲೂ ಚೆನ್ನಾಗಿ ಈ ಅಂಶವನ್ನು ಅರ್ಥಮಾಡಿಕೊಳ್ಳಬಲ್ಲೆವು; ನಮ್ಮ ದಿನನಿತ್ಯದ ಉತ್ಪಾದನಾ ಚಟುವಟಿಕೆಗಳು, ಬಹುಕಾಲದ ನಂತರ ಉಂಟುಮಾಡಬಹುದಾದಂತಹ ಸಹಜ ಪರಿಣಾಮಗಳನ್ನೂ ಹತೋಟಿಯಲ್ಲಿಟ್ಟುಕೊಳ್ಳಬೇಕು. ಈ ತಿಳುವಳಿಕೆ ಹೆಚ್ಚಿದಂತೆಲ್ಲಾ, ಮಾನವನಿಗೂ ಪ್ರಕೃತಿಗೂ ಯಾವ ವ್ಯತ್ಯಾಸವೂ ಇಲ್ಲ ಎಂಬ ಭಾವನೆ ಬಲಿಯತೊಡಗುತ್ತದೆ. ಆಗ, ಚೇತನ–ಜಡ, ಮನುಷ್ಯ– ಪ್ರಕೃತಿ, ಆತ್ಮ–ದೇಹ, ಮುಂತಾದ ಅರ್ಥಹೀನ, ಅಸಹಜ ದ್ವಂದ್ವಗಳು ಇಲ್ಲವಾಗುತ್ತವೆ. ಯೂರೋಪಿನಲ್ಲಿ, ಪುರಾತನ ಯುಗದ ಅಂತ್ಯವಾಗಿ. ಕ್ರೈಸ್ತಧರ್ಮ ತನ್ನ ಪರಾಕಾಷ್ಠೆಯನ್ನು ತಲುಪಿದಾಗ ಹೀಗೇ ಆಯಿತು.

ಉತ್ಪಾದನಾ ಕ್ಷೇತ್ರದಲ್ಲಿನ ನಮ್ಮ ಚಟುವಟಿಕೆಗಳಿಗೆಲ್ಲ, ಬಹುದೀರ್ಘ ಕಾಲಾವಧಿಯ ನಂತರ ಉಂಟಾಗಬಹುದಾದ "ಪ್ರಾಕೃತಿಕ ಪರಿಣಾಮಗಳನ್ನು ಲೆಕ್ಕಾಚಾರ ಹಾಕಿ, ಹೇಗೆ ಸ್ವಲ್ಪಮಟ್ಟಿಗೆ ತಿಳಿಯಬಹುದು ಎಂಬುದನ್ನು ಕಲಿಯಲು, ನಮಗೆ ಸಹಸ್ರಾರು ವರ್ಷಗಳ ಶ್ರಮವೇ ಬೇಕಾಯಿತು. ಆದರೆ, ಪ್ರಾಕೃತಿಕ ಪರಿಣಾಮಗಳನ್ನು ತಿಳಿಯುವುದಕ್ಕಿಂತ ಕಠಿಣವಾದುದೆಂದರೆ, ದೀರ್ಘಕಾಲಾವಧಿಯ ನಂತರದ 'ಸಾಮಾಜಿಕ' ಪರಿಣಾಮಗಳನ್ನು ತಿಳಿಯುವುದು. ನಾವೀಗಾಗಲೇ, ಆಲೂಗಡ್ಡೆ ಹಾಗೂ ತತ್ಪರಿಣಾಮವಾದ ಗಂಡಮಾಲೆ ರೋಗದ ಬಗ್ಗೆ ಹೇಳಿದ್ದೇವೆ. ಆದರೆ, ಆಲೂಗಡ್ಡೆ ಬೆಳೆಯಲ್ಲಿ ಉಂಟಾದ ಕೆಲಸಗಾರರ ಕೊರತೆ, ಇಡೀ ದೇಶದ ಜನಸಮುದಾಯದ ಸ್ಥಿತಿಗತಿಗಳ ಮೇಲೆ ಬೀರಿದ ದುಷ್ಪರಿಣಾಮಗಳಿಗೆ ಹೋಲಿಸಿದರೆ, ಈ ಗಂಡಮಾಲೆ ರೋಗದಿಂದಾದ ದುಷ್ಪರಿಣಾಮ ಯಾವ ಲೆಕ್ಕ? ಹೀಗೆಯೇ 1847 ರಲ್ಲಿ ಐರ್ಲೆಂಡಿನಲ್ಲಿ ಆಲೂಗಡ್ಡೆ ಪೈರಿಗೆ ರೋಗ ಬಿದ್ದು, ಇಡೀ ದೇಶದಲ್ಲೇ ಕ್ಷಾಮ ಬಂತು; ಆಗ ಇದೇ ಆಲೂಗಡ್ಡೆಯನ್ನೇ ಉಪಯೋಗಿಸುವ ಹತ್ತು ಲಕ್ಷ ಐರಿಷ್‌ಮನ್ನರು ಸಾವಿಗೀಡಾದರು. ಇನ್ನೂ ಇಪ್ಪತ್ತು ಲಕ್ಷ ಜನ ದೇಶವನ್ನು ಬಿಟ್ಟು ಸಮುದ್ರದಾಚೆ ವಲಸೆ ಹೋದರು. ಈ ಜನ ನಷ್ಟದ ಮುಂದೆ ಗಂಡಮಾಲೆಯ ರೋಗ ಯಾವ ಮೂಲೆ? ಇದೇ ರೀತಿ, ಅರಬ್ಬೀ ಜನಗಳು ತೈಲ ಶೋಧನೆಯಲ್ಲಿ ತೊಡಗಿದಾಗ- ಅದುವರೆಗೆ ಯಾರೂ ಕಂಡು ಹಿಡಿಯದ ಅಮೆರಿಕಾ

ಖಂಡಗಳ ಮೂಲ ನಿವಾಸಿಗಳ ವಿನಾಶಕ್ಕೆ ತಾವು ಪ್ರಬಲ ಆಯುಧವೊಂದನ್ನು ಸೃಷ್ಟಿ ಮಾಡುತ್ತಿದ್ದೇವೆಂಬ ಅಂಶ- ಅವರ ತಲೆಗೇ ಹೋಗಲಿಲ್ಲ. ಕೊಲಂಬಸನು ಅಮೆರಿಕಾ ಪತ್ತೆ ಮಾಡಿದಾಗ, ತಾನು ಮುಂದೆ ನಡೆದ ನೀಗ್ರೋ ಗುಲಾಮರ ವ್ಯಾಪಾರಕ್ಕೆ ತಳ ಹದಿ ಹಾಕುತ್ತಿದ್ದೇನೆಂದು ಆತ ಭಾವಿಸಲೇ ಇಲ್ಲ. ಹದಿನೇಳು ಹದಿನೆಂಟನೇ ಶತಮಾನ ಗಳಲ್ಲಿ ಉಗಿಯಬಂಡಿಯನ್ನು ಕಂಡುಹಿಡಿದ ವ್ಯಕ್ತಿಗಳಿಗೆ- ತಾವು ಇಡೀ ಪ್ರಪಂಚದಲ್ಲೆ ಲ್ಲಾ ಮುಂದೆ ಸಾಮಾಜಿಕ ಸಂಬಂಧಗಳನ್ನು ಬೆಳೆಸುವ ಪ್ರಬಲವಾದ ಸಲಕರಣೆಯೊಂ ದನ್ನು ತಯಾರಿಸುತ್ತಿದ್ದೇವೆ- ಎಂಬ ಅಂಶ ಹೊಳೆದೇ ಇರಲಿಲ್ಲ. ಈ ಉಗಿಬಂಡಿ ಸಲಕರಣೆ, ವಿಶೇಷವಾಗಿ ಯೂರೋಪಿನಲ್ಲಿ, ಅಲ್ಪಸಂಖ್ಯಾತರ ಕೈಲಿ ಸಂಪತ್ತನ್ನು ಕೇಂದ್ರೀಕರಿಸಿ, ಬಹುಸಂಖ್ಯಾತರನ್ನು ರಿಕ್ತಹಸ್ತರನ್ನಾಗಿಸಿ, ಮಧ್ಯಮವರ್ಗ ಎಂಬ ಎಂಬ ಸಾಮಾಜಿಕ ವರ್ಗಕ್ಕೆ ಸಾಮಾಜಿಕ ಹಾಗೂ ರಾಜಕೀಯ ಪ್ರಾಧಾನ್ಯವನ್ನು ನೀಡಿತು. ಆದರೆ, ಇದೇ ಸಲಕರಣೆ, ಕಾಲಕ್ರಮೇಣ ಮಧ್ಯಮವರ್ಗ ಹಾಗೂ ಜನ ಸಾಮಾನ್ಯ ವರ್ಗದ ನಡುವೆ ಒಂದು ರೀತಿಯ ವರ್ಗ ಕಲಹವನ್ನುಂಟುಮಾಡಿತು. ಈ ಕಲಹ, ಮಧ್ಯಮ ವರ್ಗದವರನ್ನು ಸೋಲಿಸಿದ್ದರೆ, ಎಲ್ಲಾ ರೀತಿಯ ವರ್ಗಭೇದಗಳು ನಿರ್ಮೂಲಗೊಳ್ಳುತ್ತಿದ್ದವು. ಆದರೆ, ಇದರಿಂದ ಇಷ್ಟಂತೂ ನಿಜ- ನಮ್ಮ ಉತ್ಪಾದನಾ ಚಟುವಟಿಕೆಯು ದೀರ್ಘಕಾಲಾ ನಂತರ, ಪರೋಕ್ಷವಾಗಿ ಸಾಮಾಜಿಕ ಪರಿಣಾಮಗಳನ್ನು ಬೀರುತ್ತದೆ. ಇದನ್ನು ನಾವು ಕಲಿತದ್ದು ಹೇಗೆಂದರೆ, ನಮ್ಮ ಬಹುಕಾಲದ ಕಟು ಅನುಭವಗಳು, ಐತಿಹಾಸಿಕ ಸಾಮಗ್ರಿಯ ಶೇಖರಣೆ ಹಾಗೂ ವಿಶ್ಲೇಷಣೆ,- ಈ ಅಂಶ ಗಳಿಂದ. ಇದರಿಂದ ನಮಗೆ ಇನ್ನೂ ಒಂದು ಸದವಕಾಶವಿದೆ- ಈ ಸಾಮಾಜಿಕ ಪರಿ ಣಾಮಗಳನ್ನು ನಿಯಂತ್ರಿಸಿ, ಕ್ರಮಗೊಳಿಸಲೂಬಹುದು.

ಈ ನಿಯಂತ್ರಣ ಮತ್ತು ಕ್ರಮಬದ್ಧತೆಗಳನ್ನು ಗಳಿಸಲು ಬೇಕಾದುದು ಕೇವಲ ಜ್ಞಾನವಷ್ಟೇ ಅಲ್ಲ- ಕ್ರಾಂತಿ. ಇದುವರೆಗೂ ನಡೆದುಬಂದ ನಮ್ಮ ಉತ್ಪಾದನಾ ರೀತಿಯಲ್ಲೇ ಒಂದು ಮಹಾಕ್ರಾಂತಿಯಾಗಬೇಕು. ಇದರ ಜೊತೆ ಜೊತೆಯಾಗಿಯೇ ಇಡೀ ನಮ್ಮ ಸಮಕಾಲೀನ ಸಾಮಾಜಿಕ ವ್ಯವಸ್ಥೆಯಲ್ಲೂ ಕ್ರಾಂತಿಯಾಗಬೇಕು,

ಇದುವರೆಗೂ ಅಸ್ತಿತ್ವದಲ್ಲಿದ್ದ ಉತ್ಪಾದನಾ ವಿಧಾನಗಳೆಲ್ಲವಕ್ಕೂ ಇದ್ದ ಏಕೈಕ ಗುರಿ ಎಂದರೆ, ''ಶ್ರಮ''ದ ನೇರ ಪ್ರಯೋಜನವನ್ನು ಸಾಧಿಸುವುದು ಮಾತ್ರ. ಆದರೆ, ಈ ನೇರ ಪ್ರಯೋಜನದ ನಂತರ ಪದೇ ಪದೇ ಪುನರಾವರ್ತಿಸುವ ದೀರ್ಘ ಕಾಲಿಕ ಪರಿಣಾಮಗಳನ್ನು ಪೂರ್ಣವಾಗಿ ಅಲಕ್ಷಿಸಲಾಯಿತು. ಸಾರ್ವತ್ರಿಕವಾಗಿ ದೊರೆವ ವಸ್ತು ಗಳೆಲ್ಲವನ್ನೂ ತಮ್ಮದಾಗಿಸಿ ತೃಪ್ತಿಪಟ್ಟುಕೊಳ್ಳುವ ಮಟ್ಟ ಮಾನವರಿಗೆ ಪ್ರಾರಂಭ ದಲ್ಲಿತ್ತು. ಭೂಮಿಯ ಸಾರ್ವತ್ರಿಕ ಒಡೆತನವು ಮೂಲಭೂತವಾಗಿ ಮಾನವನ ಈ

ಮಟ್ಟವನ್ನೇ ನಿರ್ದೇಶಿಸುತ್ತದೆ. ಈ ಪ್ರಾರಂಭಿಕ ಆರ್ಥಿಕ ವ್ಯವಸ್ಥೆಯ ದೋಷಗಳನ್ನು ಸರಿಪಡಿಸಿಕೊಳ್ಳಲು, ಸ್ವಲ್ಪಮಟ್ಟಿನ ಮುಕ್ತಭೂಮಿಯೂ ಇರಲೇಬೇಕಲ್ಲವೆ ? ಈ ಸಾರ್ವತ್ರಿಕವಲ್ಲದ ಜೌಗುನೆಲವನ್ನೂ ಹಂಚಿಕೊಳ್ಳುವಾಗಲೇ ಸಾರ್ವತ್ರಿಕ ಒಡೆತನವೂ ನಾಶವಾಯಿತು. ಇದೇ ರೀತಿ, ಉನ್ನತಮಟ್ಟದ ಉತ್ಪಾದನಾ ಚಟುವಟಿಕೆಗಳು ಜನ ಸಮುದಾಯವನ್ನು ಭಿನ್ನ ಭಿನ್ನ ವರ್ಗಗಳಲ್ಲಿ ಹಂಚಿಬಿಟ್ಟವು; ಈ ವಿಭಜನೆ ಮುಂದುವರಿದು, ಆಳುವ ವರ್ಗ ಮತ್ತು ಶೋಷಕ ವರ್ಗ–ಎಂಬ ದ್ವಂದ್ವವಾಗಿ ಪರಿಣಮಿಸಿತು. ಆಳುವ ವರ್ಗದ ಪ್ರಬಲ ಆಸಕ್ತಿಯೇ ಉತ್ಪಾದನೆಗೆ ಮುಖ್ಯ ಪ್ರೇರಣೆಯಾಯಿತು. ಆದುದರಿಂದಲೇ, ಉತ್ಪಾದನೆ ಎಂದರೆ, ಶೋಷಿತ ಜನಗಳ ಜೀವಿತಕ್ಕೆ ಬೇಕಾದ ಕನಿಷ್ಠ ಅಗತ್ಯಗಳ ಉತ್ಪಾದನೆಗಷ್ಟೇ ಸೀಮಿತವಾಗಿರಲಿಲ್ಲ. ಇಂದು ಪಶ್ಚಿಮ ಯೂರೋಪಿನಲ್ಲಿ ಸಂಪೂರ್ಣವಾಗಿ ಜಾರಿಗೆ ಬಂದಿರುವ ಉತ್ಪಾದನಾ ವಿಧಾನ ಇಂಥ "ಬಂಡವಾಳ ಶಾಹಿ ಪದ್ಧತಿ" ಯದು. ಪ್ರತಿಯೊಬ್ಬ ಬಂಡವಾಳಗಾರನೂ ಉತ್ಪಾದನೆ ಹಾಗೂ ವಿನಿಮಯಗಳನ್ನು ತನ್ನ ವಜ್ರಮುಷ್ಟಿಯಲ್ಲಿರಿಸಿಕೊಂಡು, ತನ್ನ ಉತ್ಪಾದನಾ ಚಟುವಟಿಕೆಗಳಿಗೆ ನೇರ ಹಾಗೂ ಪ್ರತ್ಯಕ್ಷಫಲ ಪಡೆಯಲು ಆಸಕ್ತನಾಗಿದ್ದಾನೆ- ಈ ಪ್ರತ್ಯಕ್ಷ ಫಲಕ್ಕಾಗಿ ತಯಾರಾದ ವಸ್ತು ಬಳಕೆದಾರನಿಗೆ ಎಷ್ಟುಮಟ್ಟಿಗೆ ಉಪಯುಕ್ತವಾಗಿದೆ ಎಂಬ ಮುಖ್ಯ ಪ್ರಶ್ನೆಯನ್ನೊಳಗೊಂಡಿದ್ದರೂ, ಬಂಡವಾಳಗಾರನ ಲಾಭಾಸಕ್ತಿಯ ಮುಂದೆ, ಆ ಪ್ರಶ್ನೆ ಹಿನ್ನೆಲೆಗೆ ಸರಿದು ಅದೃಶ್ಯವಾಗಿಬಿಡುತ್ತದೆ.

(ಏಂಗಲ್ಸ್ ಹಸ್ತಪ್ರತಿ ಇಲ್ಲಿಗೆ ನಿಲ್ಲುತ್ತದೆ: ಆತನ ಪ್ರಬಂಧದ ಕೊನೆಯ ಭಾಗ ಎಂಬ ಟಿಪ್ಪಣಿಯೊಂದಿಗೆ ಮುಂದಿನ ಕೆಲವು ಮಾತುಗಳು ಬೇರೊಬ್ಬರ ಕೈಬರಹದಲ್ಲಿ, ಬೇರೊಂದು ಹಾಳೆಯಲ್ಲಿ ದೊರೆತವು):

ಸಾಂಪ್ರದಾಯಿಕ ಅರ್ಥಶಾಸ್ತ್ರ ಎಂಬುದು ಮಧ್ಯಮವರ್ಗದ ಸಮಾಜಶಾಸ್ತ್ರ. ಹೀಗಾಗಿ, ಇದು ತನ್ನ ಧ್ಯೇಯಕ್ಕನುಸಾರವಾಗಿ, ಉತ್ಪಾದನೆ ಹಾಗೂ ವಿನಿಮಯ ಕ್ಷೇತ್ರಗಳಲ್ಲಿ ಮಾನವನ ಚಟುವಟಿಕೆಗಳನ್ನೂ, ಅವುಗಳ ಸಾಮಾಜಿಕ ಪರಿಣಾಮಗಳನ್ನು ಮಾತ್ರ ಪರಿಶೀಲಿಸುತ್ತದೆ. ಏಕೆಂದರೆ, ಈ ಶಾಸ್ತ್ರ, ಯಾವ ಸಾಮಾಜಿಕ ವ್ಯವಸ್ಥೆಯ ಅಂಗವಾಗಿದೆಯೋ, ಆ ವ್ಯವಸ್ಥೆಯ ಸೈದ್ಧಾಂತಿಕ ಅಭಿವ್ಯಕ್ತಿ ಮಾತ್ರವಾಗಿದೆ. ಪ್ರತಿ ಬಂಡವಾಳಗಾರನೂ ತಕ್ಷಣದ ಲಾಭಕ್ಕಾಗಿಯೇ ಉತ್ಪಾದನೆ ಮತ್ತು ವಿನಿಮಯಗಳಲ್ಲಿ ತೊಡಗಿರುತ್ತಾನೆ. ಆದುದರಿಂದಲೇ ಆತ, ಕೇವಲ ತಕ್ಷಣದ, ಸಮೀಪದ, ಪ್ರತ್ಯಕ್ಷ ಅಂಶಗಳನ್ನು ಮಾತ್ರ ಪರಿಗಣಿಸಬೇಕಾಗುತ್ತದೆ– ಒಬ್ಬ ಉತ್ಪಾದಕನೋ, ವರ್ತಕನೋ ತಾನು ತಯಾರಿಸಿದ ಅಥವಾ ಕೊಂಡ ವಸ್ತುವನ್ನು ಆಕರ್ಷಕ ಲಾಭಕ್ಕೆ ಮಾರಿಕೊಳ್ಳುತ್ತಾನೆನ್ನೋಣ: ಆಗ ಅವನು ಅಷ್ಟಕ್ಕೆ ತೃಪ್ತ. ನಂತರ, ಆ ವಸ್ತುವಿನ ಬಗೆಗಾಗಲೀ,

ಅವನ್ನು ಕೊಂಡವನ ಬಗೆಗಾಗಲೀ ಅವನು ತಲೆಕೆಡಿಸಿಕೊಳ್ಳುವುದೇ ಇಲ್ಲ. ಇದೇ ರೀತಿಯ ಚಟುವಟಿಕೆ ಹಾಗೂ ಅವುಗಳ ಸಹಜ ಪರಿಣಾಮುಗಳೆಲ್ಲವಕ್ಕೂ ಇದೇ ಸಿದ್ಧಾಂತವೇ ಅನ್ವಯಿಸುತ್ತದೆ. ಕ್ಯೂಬಾ ದ್ವೀಪದಲ್ಲಿ, ಸ್ಪೇನಿನ ಕಾಫಿ ಬೆಳೆಗಾರರು ತಮ್ಮ ಯಾವುದೋ ಲಾಭದಾಯಕ ಕಾಫಿ ಬೀಜದ ತಳಿಯೊಂದರ ಗೊಬ್ಬರಕ್ಕಾಗಿ, ಪರ್ವತದ ಇಳಿಜಾರುಗಳಲ್ಲಿ ಸೊಂಪಾಗಿ ಬೆಳೆದಿದ್ದ ಕಾಡುಗಳನ್ನೆಲ್ಲಾ ಸುಟ್ಟು ಬೂದಿ ಮಾಡಲು ಸ್ವಲ್ಪವೂ ಹಿಂದೆಗೆಯಲಿಲ್ಲ; ಅನಂತರ ಬಿದ್ದ ಭಾರೀ ಮಳೆ ಆ ಪ್ರದೇಶದ ಅರಕ್ಷಿತ ಭೂಸಾರವನ್ನೆಲ್ಲಾ ಕೊಚ್ಚಿಕೊಂಡೊಯ್ದು, ಬರೀ ಹೆಬ್ಬಂಡೆಗಳನ್ನು ಬಿಟ್ಟಾಗಲೂ ಅವನು ಲೆಕ್ಕಿಸಲಿಲ್ಲ. ಇಂದಿನ ಉತ್ಪಾದನಾ ಪದ್ಧತಿಯು, ಪ್ರಕೃತಿಯೊಂದಿಗೆ ಹೇಗೋ ಹಾಗೆಯೇ ಸಮಾಜದೊಂದಿಗೂ ತಕ್ಷಣದ ಪ್ರತ್ಯಕ್ಷ ಫಲಗಳ ಬಗ್ಗೆ ಮಾತ್ರ ಗಮನ ಕೊಡುತ್ತದೆ. ಅನಂತರ, ಈ ಫಲಗಳ ಪ್ರಾಪ್ತಿಗಾಗಿ ತಾವು ಮಾಡಿದ ಕಾರ್ಯಗಳ ಪರಿಣಾಮ, ಅದೆಷ್ಟೋ ಕಾಲಾವಧಿಯ ನಂತರ ಬೇರೇನೋ ಆದಾಗ, ಅಷ್ಟೇಕೆ. ತಮ್ಮ ಮೂಲ ಉದ್ದೇಶಗಳಿಗೇ ತದ್ವಿರುದ್ಧವಾದಾಗ, ಆಶ್ಚರ್ಯದ ಉದ್ಗಾರಗಳು ಹೊರಡುತ್ತವೆ. ಬೇಡಿಕೆ ಹಾಗೂ ಪೂರೈಕೆಗಳಲ್ಲಿ ಒಂದು ರೀತಿಯ ಹೊಂದಾಣಿಕೆ ಇರುತ್ತದೆ- ಇದು ಕಾಲಕ್ರಮದಲ್ಲಿ ಸಂಪೂರ್ಣ ತದ್ವಿರುದ್ಧವಾಗಿಬಿಡುತ್ತದೆ. ''ದಶವಾರ್ಷಿಕ ಕೈಗಾರಿಕಾ ಚಕ್ರ''- ಗಳಲ್ಲಿ ಇದನ್ನು ಸ್ಪಷ್ಟವಾಗಿ ಗುರುತಿಸಬಹುದು. 1873-74 ರಲ್ಲಿ ಸಂಭವಿಸಿದ ''ಆರ್ಥಿಕ ಹಿನ್ನಡೆ''ಯ ಸಂದರ್ಭದಲ್ಲಿ, ಜರ್ಮನಿಗೂ ಇಂಥ ಅನುಭವವಾಗಿತ್ತು- ಸ್ವಂತ ಶ್ರಮದ ಮೇಲೆಯೇ ಅವಲಂಬಿತವಾದ ಖಾಸಗಿ ಒಡೆತನವು, ಕೆಲಸಗಾರರು, ಶ್ರಮಜೀವಿಗಳೆಲ್ಲರನ್ನೂ ಉಚ್ಚಾಟಿಸಿತು; ಸಂಪತ್ತೆಲ್ಲವೂ ಶ್ರಮಜೀವಿಗಳಲ್ಲದವರ ಬಳಿ ಕೇಂದ್ರೀಕೃತವಾಯಿತು. ಹಾಗೂ...............

(ಇಲ್ಲಿಗೆ ಈ ಹಸ್ತ ಪ್ರತಿಯೂ ಅರ್ಧಾಂತಿಕ)

ದೇವರಹಳ್ಳಿಯ ಸೊಪ್ಪಿನ ಬೆಳೆಗಾರರು

● ಡಿ. ತಿಮ್ಮಪ್ಪ

ದೇವರಹಳ್ಳಿ ಶಿವಮೊಗ್ಗ ಜಿಲ್ಲೆಯ ಚನ್ನಗಿರಿ ತಾಲ್ಲೂಕಿನ ಒಂದು ಗ್ರಾಮ. ಉಡುಗಿರಿಯ ತಡಿಯಲ್ಲಿರುವ ಒಂದು ಹಳ್ಳಿ. ಇಲ್ಲಿ ಉಡಮರಡಿ ರಂಗನಾಥಸ್ವಾಮಿಯ ದೇವಸ್ಥಾನವು ಭವಿಷ್ಯೋತ್ತರ ಪುರಾಣೋಕ್ತವೂ, ಇತಿಹಾಸ ಪ್ರಸಿದ್ಧವೂ ಆದುದು. ಈ ಹಳ್ಳಿಯು ಹೆಸರು ಪಡೆದ ಕ್ಷೇತ್ರಗಳಲ್ಲಿ ಸೊಪ್ಪು ಮತ್ತು ತರಕಾರಿ ಬೆಳೆಯೂ ಒಂದು. ಸೊಪ್ಪಿನ ಬೆಳೆಗೆ ಈ ಊರು ಸುತ್ತಮುತ್ತಿಗೆ ಹೆಸರಾಗಿ ಹತ್ತಿರದ ಯಾವ ಸಂತೆ ಮತ್ತು ಹಳ್ಳಿಗಳಲ್ಲಾಗಲೀ ಸೊಪ್ಪು ಮಾರುವವರು ಎಂದರೆ ದೇವರಹಳ್ಳಿಯವರೆಂದು ಪ್ರತೀತಿ ಇದೆ. ಸೊಪ್ಪು ಬೆಳೆಯುವುದು ಇಲ್ಲಿ ನೂರಾರು ವರ್ಷಗಳಿಂದ (ಸುಮಾರು ಮೂರು ತಲೆಮಾರುಗಳಿಗೆ) ಬೆಳೆದು ಬಂದಿರುವ ಕಸುಬು ಈ ಊರಲ್ಲಿ ಅಧಿಕ ಸಂಖ್ಯೆಯಲ್ಲಿ ನೆಲೆಸಿರುವ ಉಪ್ಪಾರ (ಉಪವೀರ, ಮೇಲುಸಕ್ರೆ) ಕೋಮಿನವರ ಮುಖ್ಯ ಕಸುಬು– ಕೈತೋಟಗಳನ್ನು ಮಾಡಿ ತರಕಾರಿಗಳನ್ನು ಬೆಳೆಯುವುದಾಗಿದೆ. ಇದು ಮಲೆನಾಡಿನ ಜಿಲ್ಲೆಯ ಬಯಲುಸೀಮೆ. ನೀರಾವರಿ ಪ್ರದೇಶ ಇಲ್ಲಿ ಆಗಿಲ್ಲ.

ಈ ಉದ್ಯಮ ಇಲ್ಲಿ ರೂಢಿಸಲ್ಪಡಲು ಕಾರಣ ಹತ್ತಿರ ಹರಿಯುತ್ತಿರುವ ಹರಿದ್ರಾವತಿ ನದಿ (ಹಿರೇಹಳ್ಳ- ಚನ್ನಗಿರಿ ಬೀರೂರು ಸಾಲಿನ ಬೆಟ್ಟಗಳ ಕಡೆ ಇಂದ ಬರುವ ತುಂಬ್ರಿ ಹಳ್ಳ ಚಿಕ್ಕದು) ರಾಮಗಿರಿ ಆಚೆ ಗಂಗಸಮುದ್ರದ ಕೋಡಿಯಲ್ಲಿ ಹುಟ್ಟಿ ಶಾಂತಿಸಾಗರಕ್ಕೆ ಸೇರುವ (ಸುಮಾರು 30 ಮೈಲು) ಈ ನದಿ ಅನೇಕ ಹಳ್ಳಿಗಳ ಕಡೆಯಿಂದ ಹರಿದುಕೊಂಡು ಬಂದು ಮೆಕ್ಕಲು ಒದಗಿಸಿದೆ. ಈ ನದಿ ಹರಿವಿನ ಯಾವ ಭಾಗದಲ್ಲೂ ಕಂಡುಬರದ ಕೈ ತೋಟಗಾರಿಕೆ ದೇವರಹಳ್ಳಿಯಲ್ಲಿ ಕಂಡುಬರುತ್ತವೆ. ಇದಕ್ಕೆ ಕಾರಣ ಮೇಲೆ ಹೇಳಿದ ಜನಾಂಗ. ಈ ಜನರು ನದಿ ದಡದ ಮೇಲೆ ಎರಡು ಗುಂಟೆ, ನಾಲ್ಕು ಗುಂಟೆ, ಹೀಗೆ ಕೈ ತೋಟಗಳನ್ನು ಮಾಡಿಕೊಂಡಿದ್ದಾರೆ. ಇಂದಿಗೂ ಈ ನದಿ ದಡದಲ್ಲಿ

ನೂರಾರು ತೋಟಗಳನ್ನು ಕಾಣಬಹುದು.

ದೇವರಹಳ್ಳಿಯ ಅಚ್ಚುಕಟ್ಟು ಸುಮಾರು 2500 ಎಕರೆ. ಅದರಲ್ಲಿ ಸುಮಾರು 500 ಎಕರೆ ದೇವರ (ಮುಜರಾಯಿ) ಜಮೀನು. ಜನಸಂಖ್ಯೆ ಸುಮಾರು 4000 ಎಂದು ಕೊಳ್ಳಬಹುದು. ಕೈ ತೋಟ ಮಾಡುವ ಜನರು ಹಳ್ಳದ ನೀರನ್ನು ಏತದಿಂದ ಎತ್ತಿ ಅನಂತರ ಕೊಡಗಳಿಂದ ಸಸಿಗಳಿಗೆ ನೀರು ಉಣಿಸುತ್ತಾರೆ. ಇಲ್ಲಿ ಇಂದಿಗೂ ವಿದ್ಯುತ್ ಇಲ್ಲವೆ ಎಣ್ಣೆಯನ್ನು ಬಳಸಿ ನೀರೆತ್ತುವ ಯಂತ್ರಗಳು ಬಳಕೆಗೆ ಬಂದಿಲ್ಲ: ಸಾಂಪ್ರದಾಯಿಕವಾದ ತೋಟದ ಕೆಲಸವೇ ನಡೆಯುತ್ತದೆ. ಹಿಂದೆ ಈ ನದಿಯ ನೀರು ವರ್ಷವೆಲ್ಲ ಸಿಕ್ಕುತ್ತಿತ್ತು. ಈಗ ಮಳೆಯ ಅಭಾವ, ಮೇಲ್ಭಾಗದ ಕೆರೆಗಳು, ಇದರಿಂದ ಹೆಚ್ಚು ಪ್ರವಾಹ ಬಾರದೆ ಜನರು ಕಂಗಾಲಾಗಿದ್ದಾರೆ. ಹಳ್ಳದಲ್ಲಿಯೇ ಸಣ್ಣ ಸಣ್ಣ ಭಾವಿ ತೋಡಿ ನೀರೆತ್ತಿ ತರಕಾರಿ– ಸೊಪ್ಪು ಬೆಳೆಯುತ್ತಿದ್ದಾರೆ. ಬೆಳೆದು ಬಂದ ವೃತ್ತಿ ಬಿಡಲು ಮನಸ್ಸಿಲ್ಲ.

ವೈವಿಧ್ಯ :

ಹಿಂದೆ ಕೇವಲ ಸೊಪ್ಪು, ನೀರುಳ್ಳಿ, ಬೆಳ್ಳುಳ್ಳಿ ಬೆಳೆ ತೆಗೆಯುತ್ತಿದ್ದ ಈ ತೋಟಗಾರರು ಈಗ ಕ್ಯಾರೆಟ್, ಮೂಲಂಗಿ, ಬದನೆ, ಬೆಂಡೆ, ತಿನ್ನಲು ಸಾಕಾಗುವಷ್ಟು ಕಬ್ಬು ಕಲ್ಲಂಗಡಿ ಬೆಳೆಯುವುದನ್ನು ರೂಢಿಸಿಕೊಂಡಿದ್ದಾರೆ ಈಗ ಕೆಲವಾರು ವರ್ಷಗಳಿಂದ ಅದರಲ್ಲಿ ಹಾಗಲ, ಮೆಣಸಿನಕಾಯಿ, ಕೋಸುಗಳನ್ನು ಬೆಳೆಯುತ್ತಾರೆ. ಅವು ಅಧಿಕ ಇಳುವರಿ ಹಾಗೂ ಆದಾಯ ಹೆಚ್ಚಿಸುವ ಬೆಳೆಗಳಾಗಿವೆ. ಈ ಬೆಳೆ ಸರಿಯಾಗಿ ಬಂದರೆ ಎಕರೆಗೆ 10000 ದ ವರೆಗೆ ಆದಾಯ ತರುವುದು. ರಾಜ್ಯಮಟ್ಟದಲ್ಲಿಯೋ ಜಿಲ್ಲಾಮಟ್ಟದಲ್ಲಿಯೋ ಮೆಣಸಿನಕಾಯಿ ಬೆಳೆಗೆ ಬಹುಮಾನ ಪಡೆದು ''ರೇಡಿ''ಯಲ್ಲಿ ಮಾತಾಡಿದವರಿದ್ದಾರೆ. ಅದೇ ರೇಡಿಯಲ್ಲಿ ಖಾಯಂ ಆಯ್ಕೆ ಪಡೆದು ಜನಪದಗೀತೆಗಳನ್ನು ಆಗಾಗ್ಗೆ ಹಾಡುವ ನಾಲ್ಕಾರು ಕಲಾವಿದರೂ ಇದ್ದಾರೆ. ಅಂದ ಹಾಗೆ ಒಣ ಮೆಣಸಿನಕಾಯಿಯ ದೊಡ್ಡ ಪ್ರಮಾಣದ ಬೆಳೆಯು ದೇವರಹಳ್ಳಿಯ ಒಂದು ಲಕ್ಷಣ. ಆದರೆ ತರಕಾರಿ ವ್ಯವಸಾಯವನ್ನು ಸ್ವಲ್ಪ ಸ್ವಲ್ಪ ಮಾಡುವುದರಿಂದ ಸಾವಿರ ಎರಡು ಸಾವಿರದ ಬೆಳೆ ಸಾಮಾನ್ಯವಾಗಿದೆ

ಆರ್ಥಿಕತೆ : ಕುಟುಂಬ–ಸಮೂಹ;

ಹಿಂದೆ ಈ ತೋಟಗಾರರು ಬಂಡವಾಳಕ್ಕೆ ಹೆಚ್ಚು ಬಳಸದೆ ತಾವೇ ತಯಾರಿಸುವ ಬೀಜ ಮತ್ತು ಕೊಟ್ಟಿಗೆ ಗೊಬ್ಬರದಿಂದ ಬೆಳೆಯುತ್ತಿದ್ದರು. ಈಗಲೂ ಸಹ ಇಲ್ಲಿಯ ಮೆಣಸಿನ ಸಸಿ ಟೊಮೆಟೋ ಸಸಿಗಳು ವಿಶ್ವಾಸಾರ್ಹವಾದವು. ಆದರೆ ಈಗ ಬೀಜವನ್ನು

ಹೆಚ್ಚು ಹಣಕೊಟ್ಟು ತರಬೇಕು; ಇಲ್ಲದೆ ರಾಸಾಯನಿಕ ಗೊಬ್ಬರಗಳು, ಕೀಟನಾಶಕಗಳನ್ನು ಅಧಿಕವಾಗಿ ಬಳಸಬೇಕು. ಹೀಗಾಗಿ ಪ್ರಸಕ್ತ ಸನ್ನಿವೇಶದಲ್ಲಿ ಖರ್ಚು ಹೆಚ್ಚು. ನಿರೀಕ್ಷಿತ ಇಳುವರಿ ಬಂದರೆ ಅನುಕೂಲ, ಇಲ್ಲದೆ ಹೋದಲ್ಲಿ ಅನಾನುಕೂಲವೂ ಉಂಟು.

ಈ ಕಸುಬನ್ನು ಅವಲಂಬಿಸಿದ್ದ ಹಿಂದಿನವರ ಮಾತನ್ನು ಕೇಳಿದರೆ ಅವರು ಸಂತೃಪ್ತಿಯಿಂದ ಇದ್ದರೆಂದು ತಿಳಿಯುತ್ತದೆ. ಅವರಲ್ಲಿ ಯಾವಾಗಲೂ ನಗದಿ ಹಣ ಇರುತ್ತಿತ್ತೆಂದು ಹೇಳುವರು. ವ್ಯಾಪಾರ ಮಾಡುವವರಿಗೆ ತರಕಾರಿ ಹೆಣ್ಣು ಮಕ್ಕಳಿಂದ ಚಿಲ್ಲರೆ ಹಾಗೂ ಗಟ್ಟಿ ವಿನಿಮಯ ಯಾವಾಗಲೂ ನಿರೀಕ್ಷಿಸಬಹುದಿತ್ತೆಂದು ಹೇಳುತ್ತಾರೆ. ಇದಕ್ಕೆ ಕಾರಣ ಅವರಿಗೆ ಇತರೆ ಖರ್ಚುಗಳು ಕಡಿಮೆಯಾಗಿದ್ದವು. ಬೆಳೆದ ವಸ್ತುಗಳನ್ನು ಹಳ್ಳಿಗಳಲ್ಲಿ ಆಹಾರ ಧಾನ್ಯಗಳಿಗೆ ವಿನಿಮಯ ಮಾಡಿಕೊಳ್ಳುತ್ತಿದ್ದುದರಿಂದ ಅದು ಊಟಕ್ಕೆ ಆಗುತ್ತಿತ್ತು. ಬಂದ ಹಣ ಹಾಗೇ ಮಿಗುತ್ತಿತ್ತು. ಆದರೆ ಇಂದು ಜೀವನ ವೆಚ್ಚ ಹೆಚ್ಚಾಗಿದ್ದು ಆರ್ಥಿಕ ಸ್ಥಿತಿ ಕಷ್ಟಕರವಾಗಿದೆ. ಕೇವಲ ವ್ಯವಸಾಯ ಅವಲಂಬಿಸಿದವರಿಗೆ ಹೋಲಿಸಿದರೆ ಸೊಪ್ಪಿನ ಬೆಳೆಗಾರರ ಸ್ಥಿತಿ ಉತ್ತಮವೆನ್ನಬಹುದು.

ಒಂದು ಸ್ಯಾಂಪಲ್ : ಸೊಪ್ಪಿನ ಬೆಳೆಗಾರ ತನ್ನ ರಾಗಿ ಬೆಳೆಯನ್ನು ಮುಟ್ಟದೆ ಹಾಗೆಯೇ ದಾಸ್ತಾನು ಮಾಡಬಲ್ಲ. ವಿನಿಮಯದ ರಾಗಿಯನ್ನು ಸಹ ''ವಾತ''ಕ್ಕೆ ಕೊಡುವ ಒಂದು ಚೀಲ ವಾತದ ರಾಗಿ 25 ಸೇರು ಹೆಚ್ಚಿನ ಕಾಳನ್ನು ಮುಂದಿನ ಸುಗ್ಗಿಗೆ ತರುತ್ತದೆ. ಹಾಗೇ ಬಡ್ಡಿಗೆ ಕೊಟ್ಟ ಹಣ. ಈ ಅಂತರಿಕ ವ್ಯವಸ್ಥೆಗಳು ಪರಸ್ಪರ ಹಾಗೂ ನಂಬಿಕೆಯ ಮೂಲಕ ನಡೆಯುವ ವ್ಯವಹಾರ.

ಸಾರಿಗೆಯ ಉಪಯೋಗ :

ಹಿಂದೆ ಸಾರಿಗೆ ವ್ಯವಸ್ಥೆ ಇಲ್ಲದಾಗ ಈ ತೋಟದ ಬೆಳೆಗಳನ್ನು ಗಂಡಸರು ತಲೆಯ ಮೇಲೆ ಹೊತ್ತು 15 ರಿಂದ 20 ಮೈಲು ದೂರದ ಸಂತೆಗಳಿಗೆ ಒಯ್ಯುತ್ತಿದ್ದರು (ಶಾಮಗಿರಿ, ಜಾಜೂರು, ದುಮ್ಮಿ, ಸಂತೆಬೆನ್ನೂರು, ಚನ್ನಗಿರಿ, ನಲ್ಲೂರಿನ ಸಂತೆಗಳಲ್ಲಿ ಮಾರಾಟ). ಹೆಣ್ಣು ಮಕ್ಕಳು ಹಳ್ಳಿಗಳಿಗೆ ತೆಗೆದುಕೊಂಡು ಹೋಗಿ ವಸ್ತು ವಿನಿಮಯ ಮಾಡಿಕೊಂಡು ಬರುತ್ತಿದ್ದರು. ಆದುದರಿಂದಲೇ ಈ ಹೆಣ್ಣುಮಕ್ಕಳನ್ನು ಕುರಿತು ''ಹರಕು ಸೀರೆ ಉಟ್ಟುಕೊಂಡು/ ತಲೆಗವಲೆ ಬಿಟ್ಟುಕೊಂಡು/ ಬೆರಕೆ ಸೊಪ್ಪು ಮಾರ ತಾರಪ್ಪ ದೇವರಳ್ಳೀರು /'' ಎಂದು ಹಾಡಿದ್ದಾರೆ. ಆದರೆ ಇಂದು ಇದು ಕಣ್ಣು ಮರೆಯಾಗಿದೆ. ಈಗೀಗ ಇಲ್ಲಿನ ಸೊಪ್ಪು ಮತ್ತು ತರಕಾರಿಗಳು ದಾವಣಗೆರೆ, ಭದ್ರಾವತಿ, ಶಿವಮೊಗ್ಗ, ಚಿತ್ರದುರ್ಗ, ಚಳ್ಳಕೆರೆ ಮುಂತಾದ ಮಾರುಕಟ್ಟೆಗಳಿಗೆ ಬಸ್ಸು, ಟ್ರಾಕ್ಟರ್‌ಗಳ ಮೂಲಕ ದಿನಂಪ್ರತಿ ಸಾಗಿಸಲ್ಪಟ್ಟು ಅಲ್ಲಿ ಮಾರಾಟವಾಗುತ್ತವೆ. ಮಾರು

ಕಟ್ಟೆ ವಿಸ್ತಾರವಾದಂತೆ ಈ ಜನರ ಖರ್ಚು ಮತ್ತು ಆಡಂಬರ ಜೀವನವು ಹೆಚ್ಚುತ್ತಿದ್ದು, ತೋಟಗಾರಿಕೆಯಲ್ಲಿದ್ದ ಶ್ರದ್ಧೆ ಹಾಗೂ ಶ್ರಮ ಜೀವನ ಇಂದಿನ ಯುವಕ ಯುವತಿಯರಲ್ಲಿ ಮಾಯವಾಗುತ್ತಿವೆ. ಇಂದೂ ಸಹ ದುಡಿಯುತ್ತಿರುವ ಹಳೆಯ ಜನಗಳು ಮಾತ್ರ ಶ್ರದ್ಧೆಯಿಂದ ಈ ಕಸುಬನ್ನು ಮುಂದುವರಿಸಿಕೊಂಡು ಹೋಗುತ್ತಿದ್ದಾರೆ.

ವರ್ಷವೆಲ್ಲಾ–ಸೊಪ್ಪಿನಿಂದ 'ಕೊರಟ'ನ ವರೆಗೆ :

ಕೈತೋಟದ ಕಸುಬು ವರ್ಷವೆಲ್ಲಾ ಇರುತ್ತದೆ. ವ್ಯವಸಾಯವನ್ನು ಅವಲಂಬಿಸಿರುವ ಜನರು ಬೇಸಗೆಯಲ್ಲಿ ಬೇಸಾಯದ ಕೆಲಸವಿಲ್ಲದಾಗ ಈ ಕೆಲಸಕ್ಕೆ ಅಂಟಿಕೊಂಡಿರುತ್ತಾರೆ. ತೋಟದ ಈ ಬೆಳೆಗಳು ಬಿದ್ದು ವ್ಯವಸಾಯದ ಬಿತ್ತನೆ ಕಾಲದ ಹೊತ್ತಿಗೆ ಫಲಕೊಟ್ಟು ಆಗಿರುತ್ತದೆ. ಇದರಿಂದ ರೈತ ಬೀಜ–ಗೊಬ್ಬರ ಕೊಳ್ಳಲು ಮತ್ತು ರೈತ ಕಾರ್ಮಿಕರ ಕೂಲಿಗೆ ಹಣದ ನೆರವು ಈ ತೋಟದ ಬೆಳೆಗಳಿಂದ ದೊರೆಯುತ್ತದೆ.

ಸೊಪ್ಪು ಬೆಳೆಯುವ ಕಾಲ ಡಿಸೆಂಬರ್‌ನಿಂದ ಮೇ ತಿಂಗಳು. ಈ ಅವಧಿಯಲ್ಲಿ ಬೆಳೆಗಾರರು ಅನೇಕ ವಿಧದ ಸೊಪ್ಪು ಬೆಳೆಯುತ್ತಾರೆ - ಸಬ್ಬಸಿಗೆ, ಪಾಲಕ, ಹರಿವೆ, ಕೊತ್ತಂಬರಿ. ಇವುಗಳಲ್ಲಿ ಬಹುಪಾಲು ಒಮ್ಮೆ ಕಿತ್ತು ಮಾರಿದರೆ ಆದಂತೆಯೇ. ಆದರೆ ಹೆಚ್ಚು ಕಡಿಮೆ ನಿರಂತರವಾದುದು "ಕೊಯ್‌ಹರಿವೆ". ಹದಿನೈದು ದಿನಗಳಿಗೊಮ್ಮೆ ಕೊಯ್ದು ಮಾರುವ ಈ ಗಿಡಗಳಿಗೆ ನಿತ್ಯ ಕೊಡಗಳಿಂದ ನೀರು. ಮುಂಗಾರು ಹನಿಗಳು ಬೀಳುವವರೆಗೆ ಈ ಮಡಿಗಳು (2×2 ಮತ್ತು ಇಂಥ 2 ಸಮಾಂತರ ಮಡಿಗಳ ನಡುವೆ ಒಂದು ಡಬಲ್‌ಒಡ್ಡು.) ಕೊಡುವ ಸೊಪ್ಪಿಗೆ ದೇವರಹಳ್ಳಿ ಪ್ರಸಿದ್ಧವಾಗಿದೆ. ಇದರ ಕೊನೆಯಾಗಿ ಬೇರು ಬಗಿದು ತೊಳೆದು ಮಾರಾಟ ಮಾಡಿದರೆ ಅದು ಸಹ ಹಣ ಕೊಡುತ್ತದೆ. ಆ ಬೇರೇ ಕೊಳ್ಳು (ಕೊರಟು) ಎಂದು ಪ್ರಸಿದ್ಧವಾದ ಒರಟು – ಆದರೆ ಮಸಾಲೆಯೊಡನೆ ರುಚಿಕಟ್ಟಾಗಿ ಸಿದ್ಧಪಡಿಸಬಹುದಾದ–ಪಲ್ಯದ ಸಾಮಗ್ರಿ.

ಕಣದ ಭಾವಿ – ಆರ್ಟೀಸಿಯನ್ ಮಾದರಿ:

ಕೊಯ್‌ಹರಿವೆ. ಇದನ್ನು ಬೆಳೆಯಲು ಜನ ಹಳ್ಳಿಯ ಹತ್ತಿರ ಮಾತ್ರವಲ್ಲ ಊರಲ್ಲಿಯ ಖಾಲಿ ಜಾಗವನ್ನೂ ಉಳಿಸುವುದಿಲ್ಲ; ಕಣಗಳಲ್ಲಿ ಒಂದು ಮೂಲೆ, ಬಾವಿಯ ಪಕ್ಕಗಳು, ದೊಡ್ಡಿಯ ಸುತ್ತಲ ಜಾಗ, ಹೀಗೆ. ಊರಿನ ವಾಯವ್ಯದ ಪಾಳುಗಳಲ್ಲಿ ಕೋರಿ ಖಣವೆಂದು ಪ್ರಸಿದ್ಧವಾದ ಮೂಲೆ ಹಾಗೂ ಕೋಟೆ ಮನೆಯ ಪಾಳುಗಳಿವೆ. ಇಲ್ಲಿಯ ಆಸರೆಗಳಲ್ಲಿ ಆಂಜನೇಯನ ಗುಡಿಯ ಬಾವಿ, ಅಚ್ಛೋದ ಸರೋವರದಂತೆ ಕಂಗೊಳಿಸುವ ಒಂದು ದೊಡ್ಡ ಗುಂಡಿ ಅಥವಾ ಕಿರು ಸರೋವರ ಮತ್ತು ಕಣದ ಭಾವಿ ಎಂದು

ಪ್ರಸಿದ್ಧವಾದ ಕೋಟೆಯ ಪಾಳು ಸೇರುತ್ತವೆ. ಈ ಕಣದ ಬಾವಿ ಸುಮಾರು 30 × 40 ಆಯತವಾಗಿದ್ದು ಸುಮಾರು 50 ಅಡಿ ಆಳಕ್ಕೆ ಇಳಿಯಬಲ್ಲ ಸಾಮರ್ಥ್ಯ ಹೊಂದಿದ್ದು ಹೂಳಿನಿಂದ ತುಂಬಿದ ಒಂದು ದೊಡ್ಡ ಜಲಾಶಯ. ಇದಕ್ಕೆ ನಾಲ್ಕೂ ಕಡೆಗಳಲ್ಲಿ ಕಲ್ಲು ಕಟ್ಟಡವಿದೆ. ಇದರ ಹೂಳೆತ್ತಿ, ಸಿಮೆಂಟ್ ಪಾಯಿಂಟಿಂಗ್ ಮಾಡಿ, ಬೋರ್‌ವೆಲ್ ಸೌಕರ್ಯ ಕೊಟ್ಟರೆ ಸುತ್ತಲ ಸುಮಾರು ಜಾಗಕ್ಕೆ ನೀರಾವರಿ ಸೌಲಭ್ಯವಾಗಬಲ್ಲುದು. ಈ ಸೌಲಭ್ಯ ಸೊಪ್ಪಿನ ಬೆಳೆಗಾರರಿಗೆ ದೊರೆತು ಅವರನ್ನು ನಿರ್ದೇಶಿಸಿದರೆ ರಂಗನಬೆಟ್ಟದ ಸೋಪಾನಗಳನ್ನೇ ಸವೀಕರಿಸಬಹುದು. ಕಣದ ಬಾವಿಯನ್ನು ಇಂದಿನ ಮಾನದಲ್ಲಿ ಸುಮಾರು 10,000 ರೂ.ಗಳ ಆಸ್ತಿ ಎನ್ನಬಹುದು. ಕಲ್ಲಿನ ಕಟ್ಟಡ, ಮೆಟ್ಟಿಲು, ದುಸ್ಥಿತಿಯಲ್ಲಿವೆ. ಈ ಕಣದ ಭಾವಿ ಕೆರೆಯ ಹಿಂಬದಿಯಲ್ಲಿ ಏರಿಗೆ ಒತ್ತಿ ಇದೆ. ಕೆರೆಗೆ ಬಂದ ನೀರನ್ನು ಗದ್ದೆಗಳಿಗೆ ಹಾಯಿಸಲು ತೂಬೆತ್ತುವ ಭೂಪರಿಗೆ ಕೈಕೊಟ್ಟು ಸೊಪ್ಪಿನ ಮಡಿಗಳವರು ಹೊಸಲು ತಮ್ಮ ಭಾವಿ ತುಂಬಿಟ್ಟುಕೊಂಡು, ಕೆರೆಯಿಂದ ನೀರು ಹೊತ್ತು; ಗದ್ದೆಗಳವರು ಕಣ್ಣು ಬಿಡುವಾಗ ಇವರು ಮಡಿಗಳಿಗೆ ನೀರು ಹಾಕುತ್ತಿರುತ್ತಾರೆ.

ಹಾಗೆಯೇ ಕೆರೆ ಖಣದಲ್ಲಿ ದೆವ್ವದ ಸಂಚಾರ. ಈ ಸುದ್ದಿ ಹೊರಟಿತೆಂದರೆ ರಾತ್ರಿ ಜನಸಂಚಾರ ಕಡಮೆ. ಬೆಳಗಾಗುವುದರೊಳಗೆ ಸೊಪ್ಪಿನ ನೀರು ಮುಗಿದಿರುತ್ತದೆ. ಇದನ್ನೇ ಮುಂದುವರಿಸಿ ಇಂಥವನ ಸೊಪ್ಪಿನ ತುಂಡುಗಳಿಗೆ ದೆವ್ವಗಳೇ ನೀರು ಹಾಕುತ್ತವೆಯಂತೆ, ಅವನಲ್ಲಿ ವಶೀಕರಣ ಮಂತ್ರವಿದೆ ಎಂದು ಸುದ್ದಿ ಮಾಡಬಹುದು. ಸುಳ್ಳು ಹೇಳಿದರೂ "ಅಮ್ಮನೋರ ಆಣೆ" ಮಾಡಿ ಗೆದ್ದುಕೊಳ್ಳುವ ಧೀರರಿಗೆ ಕಡಿಮೆ ಇಲ್ಲ.

ಸುತ್ತಲಿರುವ ಕಣಗಳಲ್ಲಿ ಸುಗ್ಗಿಯಾದ ಕೂಡಲೇ ಆ ಜಾಗವನ್ನು ಸ್ವಚ್ಛಮಾಡಿ ಸೊಪ್ಪು ಹಾಕುವರು. ಸುಮಾರು 50–60 ಕುಟುಂಬಗಳು ಈ ಕಣದ ಭಾವಿಯಿಂದ ಸೊಪ್ಪು ಬೆಳೆದು ಬದುಕುವುದುಂಟು. ಕಣಗಳ ಜೈವಿಕ ಪರಿಸರದಲ್ಲಿ ಮುಂಗುಸಿ, ಸಂಬರಗಾಗೆ (ರತ್ನಪಕ್ಷಿ), ಹೇದಿ ಬಣ್ಣದ ಗುಬ್ಬಿ, ಮರಕುಟಿಗ ಮತ್ತು ಸಾಕಷ್ಟು ಗಿಳಿಗಳು ಇರುತ್ತವೆ. ಈ ಇಡೀ ಊರಿನ ಅಚ್ಚುಕಟ್ಟು ಉಡಗಳಿಗೆ ಅಭಯ ಸ್ಥಾನ.

ವರಮಾನ :

ಇಂದಿನ ದಿನಗಳಲ್ಲಿ ಈ ಸೊಪ್ಪು ಮತ್ತು ತರಕಾರಿಗಳ ವರಮಾನವನ್ನು ನಿಗದಿಯಾಗಿ ಹೇಳಲಾಗುವುದಿಲ್ಲ. ಕಾರಣ, ಮಾರುಕಟ್ಟೆ ಏಳು ಬೀಳು ಮತ್ತು ಬೆಳೆಗಳಿಗೆ ಬರುವ ಅನೇಕರೋಗಗಳು ಸೊಪ್ಪಿನ ಬೆಳೆಗಾರರಿಗೆ ತೊಂದರೆ ಉಂಟುಮಾಡುತ್ತವೆ. ಈ ಜನ

ಸ್ವಲ್ಪ ವಿಸ್ತೀರ್ಣದಲ್ಲಿ ಮಾಡುವ ತೋಟಗಳು ಹೋಲಿಕೆಯಿಂದ ಎಕರೆಗೆ ಸುಮಾರು 10,000ದ ವರಮಾನ ತರುತ್ತವೆ. ಕಾಲು ಭಾಗ ಖರ್ಚು, ಕಾಲು ಭಾಗ ಸಾಗಾಣಿಕೆ ವೆಚ್ಚವೆಂದುಕೊಂಡರೆ ಉಳಿದ $\frac{1}{2}$ ಭಾಗ ಅವರಿಗೆ ಉಳಿಯುತ್ತದೆ. ಅಂತೂ ಇತ್ತೀಚಿಗೆ ಅವರ ಜೀವನ ಪ್ರಕೃತಿಯ ಕೈಯಲ್ಲಿದೆ ಎನ್ನಬಹುದು. ಉಳಿದ ತರಕಾರಿಗಳಿಗಿದ್ದರೂ ಸೊಪ್ಪಿಗೆ ಮಾತ್ರ ಯಾವ ರೋಗವೂ ಇರುವುದಿಲ್ಲ. ಕಣದ ಭಾವಿಯ ನೀರು $\frac{1}{4}$, $\frac{1}{2}$, ಒಂದು ಒಂದೂವರೆ ಕೆಜಿ ಚಿಲ್ಲರೆಯಾಗಿ ಕೊಳ್ಳುವ ರಸಗೊಬ್ಬರ ಬಳಸಿ ಸುಖವಾಗಿ ಸೊಪ್ಪು ಬೆಳೆಯಬಹುದು. ಶನಿವಾರ ನಡೆಯುವ ಸಂತೆಯಲ್ಲಿ ಸೊಪ್ಪಿನ ಬೆಲೆಯನ್ನು ಬೆಂಗಳೂರು, ಭದ್ರಾವತಿ ಹರಿಹರ ಮುಂತಾದ ಕೈಗಾರಿಕೆ ನಗರಗಳ ರೇಟಿಗಿಂತ ಕಡಿಮೆ ಇಡುವುದು ಅವಶ್ಯಕ. ಹಾಗೆ ಇಟ್ಟಾಗಲೂ ಸೊಪ್ಪಿನ ಬೆಳೆ ಹಾಗೂ ಮಾರಾಟಗಾರರಿಗೆ ತಮ್ಮ ಕುಟುಂಬ ಸಾಗಿಸಲು ತೊಂದರೆಯಾಗುವುದಿಲ್ಲ. ಸರಿಯಾಗಿ ಕೈತೋಟ ಮಾಡಿದರೆ ಸಂತೃಪ್ತಿಯ ಜೀವನ ನಡೆಸಬಹುದು. ಇಂದಿಗೂ ದೇವರಹಳ್ಳಿಯ ಸೊಪ್ಪು ಸುತ್ತಿನ ಸಂತೆಗಳಲ್ಲಿ ಹೆಸರುವಾಸಿ.

ಯೋಜನೆಯ ಚಾಚುಗಳು (Projections)

ಒಬ್ಬ ತೋಟಗಾರಿಕೆ ನಿರ್ದೇಶಕರ (ಶ್ರೀ ಕೋದಂಡರಾಮಯ್ಯ) ಪ್ರಕಾರ ಚನ್ನಗಿರಿ ತಾಲ್ಲೋಕಿನ ಮಣ್ಣು ಹಾಗೂ ಹವಾಮಾನ ತರಕಾರಿಯಂತೆಯೇ ಹೂವಿನ ಬೆಳೆಗೂ ತುಂಬ ಅನುಕೂಲವಾದದ್ದು. ಈ ದೃಷ್ಟಿಯಿಂದ ನೋಡಿದಾಗ ದೇವರಹಳ್ಳಿಯಲ್ಲಿ ಉಳಿದವಕ್ಕಿಂತಲೂ ಹೆಚ್ಚು ಆದಾಯ ಹೂವಿನ ವ್ಯವಸಾಯದಿಂದ ಬಂದೀತು ಅದು ಹೆಚ್ಚು ಹತ್ತಿರದ ಮತ್ತು ಆಪ್ತ ವ್ಯವಸಾಯವೆನಿಸೀತು. - ದೇವರಹಳ್ಳಿಗೆ. ಇದರ ಸಾಧಕ ಬಾಧಕಗಳು, ಸರ್ಕಾರದ ಕಾರ್ಯವಿಧಾನ ಇತ್ಯಾದಿಗಳು ಕೆಲಸಗಾರರಿಗೆ ಸೇರಿದ ವಿಷಯ.

ವಿಚಾರ ವಿನಿಮಯ : ಕಾರ್ಯಕರ್ತರು - ದೇವರಹಳ್ಳಿ ಮಂಡಲ.

(ಕ್ಷೇತ್ರಕಾರ್ಯ, ಅಂಕಿ ಅಂಶಗಳಿಗೆ ನೆರವು ಶ್ರೀ ಸಿ. ಬೈರಪ್ಪ ದೇವರಹಳ್ಳಿ. ಸಂಕಲನಕಾರ್ಯ – ಸಿ. ಆರ್. ಅಣಜಿ)

ಕೆ. ಎಸ್. ನರಸಿಂಹಸ್ವಾಮಿ ಅವರ ಕಾವ್ಯ

● ಎಚ್. ಎಸ್. ವೆಂಕಟೇಶಮೂರ್ತಿ

ಇಪ್ಪತ್ತನೇ ಶತಮಾನದ ಕನ್ನಡ ಕಾವ್ಯ ಸಂದರ್ಭದಲ್ಲಿ ಕೆ.ಎಸ್. ನರಸಿಂಹಸ್ವಾಮಿ ಅವರದ್ದು ಬಹು ಮುಖ್ಯ ಹೆಸರು. 1943 ರಲ್ಲಿ ಇವರ ಮೊದಲ ಕವಿತಾ ಸಂಗ್ರಹ 'ಮೈಸೂರು ಮಲ್ಲಿಗೆ' ಪ್ರಕಟವಾಯಿತು. ಈಗಾಗಲೇ ಹದಿನೆಂಟನೇ ಮುದ್ರಣ ಕಂಡಿರುವ ಈ ಕೃತಿಯ ಜನಪ್ರಿಯತೆಯನ್ನು ಮೀರಿಸುವ ಇನ್ನೊಂದು ಕಾವ್ಯಕೃತಿ ಪ್ರಾಯಶಃ ಕನ್ನಡದಲ್ಲಿ ಇಲ್ಲ. ತಮ್ಮ ಮೊದಲ ಸಂಗ್ರಹದಿಂದಲೇ ಹೀಗೆ ಕನ್ನಡ ಜನ ಮನದಲ್ಲಿ ಬೆರೆತುಹೋದ ಕವಿಯೂ ಕನ್ನಡದಲ್ಲಿ ಬೇರೊಬ್ಬನಿಲ್ಲ. 'ಮೈಸೂರು ಮಲ್ಲಿಗೆ'ಯಿಂದ ಇತ್ತೀಚಿನ 'ನವಪಲ್ಲವ' (1983) ದ ವರೆಗೆ ಕೆ. ಎಸ್. ನ. ನಡೆದು ಬಂದಿರುವ ಹಾದಿ ಬಹು ದೀರ್ಘವಾದುದು. ಮಹತ್ವದ ಅನೇಕ ತಿರುವುಗಳನ್ನು ಹೊಂದಿರುವಂಥದು. ಕನ್ನಡದಲ್ಲಿ ಕಾಲ ಕಾಲಕ್ಕೆ ಆದ ಕಾವ್ಯಕ್ರಾಂತಿಗಳಲ್ಲಿ, ಫೀನಿಕ್ಸ್‌ನಂತೆ ತಮ್ಮನ್ನು ನವೀಕರಿಸಿಕೊಂಡು ಹೊಸ ಹುಟ್ಟು ಪಡೆಯುತ್ತಾ ಘನವಾದ ಕಾವ್ಯ ರಚಿಸುತ್ತಾ ಹೋದದ್ದು ಕೆ. ಎಸ್. ನ. ಅವರ ಹೆಗ್ಗಳಿಕೆ. ನವೋದಯ ಕಾವ್ಯ ಸಂದರ್ಭದಲ್ಲಿ 'ಮೈಸೂರು ಮಲ್ಲಿಗೆ' ಬಹು ಮುಖ್ಯವಾದ ಒಂದು ಕಾವ್ಯ ಸಂಗ್ರಹವಾಗಿರುವಂತೆಯೇ, ನವ್ಯ ಸಂದರ್ಭದಲ್ಲಿ 'ತೆರೆದ ಬಾಗಿಲು' ಬಹು ಮುಖ್ಯವಾದ ಒಂದು ಕಾವ್ಯ ಸಂಗ್ರಹವಾಗಿರುವುದು ಇದನ್ನು ಸ್ಪಷ್ಟಪಡಿಸಬಲ್ಲದು. ಒತ್ತಾಯಕ್ಕೆ ಹಣ್ಣಾಗದೆ ಬದುಕಿನೊಂದಿಗೆ ಸಹಜವಾಗಿ ಮಾಗುತ್ತಾ ಬಂದ ಈ ಕವಿಯ ಕಾವ್ಯ ಈಗ ಕನ್ನಡ ಸಂಸ್ಕೃತಿಯ ಬಹು ಮುಖ್ಯ ಆಸ್ತಿಯಾಗಿ ಪರಿಣಮಿಸಿದೆ.

ಕೆ. ಎಸ್. ನ. ಮಂಡ್ಯ ಜಿಲ್ಲೆಯ ಕಿಕ್ಕೇರಿಯಲ್ಲಿ 1915 ರ ಜನವರಿ 26 ರಂದು ಜನಿಸಿದರು. ತಂದೆ ಕಿಕ್ಕೇರಿ ಸುಬ್ಬರಾಯರು. ತಾಯಿ ಹೊಸಹೊಳಲು ನಾಗಮ್ಮನವರು. ಮೈಸೂರಿನ, ಮೈಸೂರು ಟ್ರೇನಿಂಗ್ ಕಾಲೇಜಿನ ಸಂಸ್ಥೆಗಳಲ್ಲಿ ಈ ಕವಿ ಆರಂಭದ

ಶಿಕ್ಷಣವನ್ನೂ, ಮುಂದೆ ಮಹಾರಾಜ ಹೈಸ್ಕೂಲಿನಲ್ಲಿ ಪ್ರೌಢ ಶಿಕ್ಷಣವನ್ನೂ ಪಡೆದರು. ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಜೂನಿಯರ್ ಬಿ.ಎ. ಮುಗಿಸುವಲ್ಲಿ ಇವರ ಓದು ಅಪೂರ್ಣವಾಗಿ ಮುಕ್ತಾಯವಾಯಿತು. 1936 ರಲ್ಲಿ ವೆಂಕಮ್ಮನವರೊಂದಿಗೆ ತಿಪಟೂರಿನಲ್ಲಿ ಇವರ ವಿವಾಹವಾಯಿತು. 1937 ರಲ್ಲಿ ಸರ್ಕಾರಿ ನೌಕರಿ ಸೇರಿ, ಮೈಸೂರು, ನಂಜನಗೂಡು, ಬೆಂಗಳೂರಿನಲ್ಲಿ ತಮ್ಮ ಸೇವಾವಧಿ ಮುಗಿಸಿ 1970ರಲ್ಲಿ ನೌಕರಿಯಿಂದ ನಿವೃತ್ತರಾಗಿ, ಸದ್ಯ ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ಕೆ ಎಸ್.ನ. ದಂಪತಿಗಳಿಗೆ ನಾಲ್ವರು ಗಂಡು ಮಕ್ಕಳು, ನಾಲ್ವರು ಹೆಣ್ಣು ಮಕ್ಕಳು. ಜೀವನದ ಉದ್ದಕ್ಕೂ ಆರ್ಥಿಕ ಕ್ಲೇಶ, ಸಾಂಸಾರಿಕ ತಾಪತ್ರಯಗಳಲ್ಲಿ ಬದುಕನ್ನು ತೇಯುತ್ತ ಬಂದರೂ ತಮ್ಮ ಮನಸ್ಸನ್ನು ಎಂದೂ ಕಹಿ ಮಾಡಿಕೊಂಡು ಬದುಕಿನ ರುಚಿ ಕೆಡಿಸಿಕೊಂಡವರಲ್ಲ ಈ ಕವಿ.

ವೈಯಕ್ತಿಕ ಬದುಕಿನ ಕಾರ್ಪಣ್ಯವೇನೇ ಇರಲಿ, ಸಾಂಸ್ಕೃತಿಕವಾಗಿ ಕೆ. ಎಸ್. ನ. ಅವರಿಗೆ ಕನ್ನಡ ಜನತೆ ತೋರುತ್ತ ಬಂದಿರುವ ಪ್ರೀತಿ ಗೌರವ ಅಪಾರ. ಮೈಸೂರು ಮಲ್ಲಿಗೆಗೆ ದೇವರಾಜ ಬಹದ್ದೂರ್ ಬಹುಮಾನ, ಶಿಲಾಲತೆಗೆ ಮೈಸೂರು ರಾಜ್ಯದ ಸಂಸ್ಕೃತಿ ಪ್ರಸಾರ ಇಲಾಖೆಯ ಬಹುಮಾನ, 1970 ರಲ್ಲಿ ಚಂದನ ಸಂಭಾವನಾ ಗ್ರಂಥ, ತೆರೆದ ಬಾಗಿಲು ಸಂಗ್ರಹಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಮೊದಲಾದುವು ಕೆ.ಎಸ್.ನ. ಪಡೆದ ಗೌರವ ಪ್ರಶಸ್ತಿಗಳಲ್ಲಿ ಕೆಲವು ಮಾತ್ರ.

ಕೆ.ಎಸ್.ನ. ಅವರು ಈವರೆಗೆ ಒಂಬತ್ತು ಕವಿತಾ ಸಂಗ್ರಹಗಳನ್ನು ಪ್ರಕಟಿಸಿದ್ದಾರೆ. ಮೈಸೂರು ಮಲ್ಲಿಗೆ ಅವರ ಅತ್ಯಂತ ಜನಪ್ರಿಯ ಕೃತಿಯಾಗಿರುವಂತೆ, ತೆರೆದ ಬಾಗಿಲು ಈ ಶತಮಾನದ ಕನ್ನಡ ಕಾವ್ಯದ ಮಹತ್ವದ ಕಾವ್ಯ ಸಂಗ್ರಹವಾಗಿದೆ. ನವೋದಯದ ಕಾವ್ಯ ಸಂದರ್ಭದಲ್ಲಿ ಹೆಸರು ಮಾಡಿದ್ದ ಈ ಕವಿ ತಮ್ಮ ಸುಕುಮಾರ ಜಗತ್ತಿನಿಂದ ನಿಷ್ಠುರವಾದ ಬದುಕಿನ ಸಂದರ್ಭಕ್ಕೆ ಹೊರಳಿದ್ದು 'ಶಿಲಾಲತೆ' ಯಲ್ಲಿ. ಆದ್ದರಿಂದ ಆ ಸಂಗ್ರಹಕ್ಕೆ ಒಂದು ಐತಿಹಾಸಿಕ ಮಹತ್ವವಿದೆ ತಮ್ಮ ಕಾವ್ಯ ಜೀವನದ ಮುಖ್ಯ ಘಟ್ಟಗಳಲ್ಲಿ ಕನ್ನಡದ ಸಾಹಿತ್ಯ ಲೋಕದ ಮುಖ್ಯ ವ್ಯಕ್ತಿಗಳನೇಕರ ಸಂಪರ್ಕ, ಸ್ನೇಹವನ್ನು ಕೆ ಎಸ್. ನರಸಿಂಹಸ್ವಾಮಿ ಪಡೆದದ್ದು ಬಹು ಮುಖ್ಯವಾದ ಸಂಗತಿ.

ತಮ್ಮ ಕಾವ್ಯ ಜೀವನದ ಮೊದಲ ಘಟ್ಟದಲ್ಲಿ ಎ. ಆರ್. ಕೃಷ್ಣಶಾಸ್ತ್ರಿ, ಕುವೆಂಪು, ತೀ. ನಂ. ಶ್ರೀ. ಮೊದಲಾದವರ ನಿಕಟ ಸಂಪರ್ಕ ಕೆ. ಎಸ್. ನ. ಅವರಿಗೆ ಇತ್ತು. ತಮ್ಮ ಕಾವ್ಯ ಜೀವನದ ಎರಡನೇ ಘಟ್ಟದಲ್ಲಿ ವಿ. ಸೀ., ಅಡಿಗ ಮೊದಲಾದವರ

ಸ್ನೇಹ ಕೆ.ಎಸ್.ನ. ಅವರದಾಗಿತ್ತು. ಅವರ ಕಾವ್ಯದ ಬೆಳವಣಿಗೆಯಲ್ಲಿ ಸ್ವಂತ ಪ್ರತಿಭೆ, ಮಾಧ್ಯಮ ನಿಷ್ಠೆ, ಜೀವನ ಪ್ರವೃತ್ತಿಗಳು ಮುಖ್ಯವೆನ್ನಬಹುದಾದರೂ, ಅವರು ಕಾಲ ಕಾಲಕ್ಕೆ ಪಡೆದ ಸ್ನೇಹ ಸಂಪರ್ಕದ ಪ್ರಭಾವವನ್ನೂ ಕಡೆಗಣಿಸಲಿಕ್ಕೆ ಬರುವುದಿಲ್ಲ.

ಕೆ. ಎಸ್. ನ. ಪ್ರಧಾನವಾಗಿ ಕವಿಯೆಂದು ಗುರುತಿಸಲ್ಪಡುವರಾದರೂ ಅವರ ಅನುವಾದಿತ ಕೃತಿಗಳ, ಗದ್ಯಕೃತಿಗಳ ಮೌಲಿಕತೆಯನ್ನು ಕಡೆಗಣಿಸುವಂತೆ ಇಲ್ಲ. ಮಾರಿಯ ಕಲ್ಲು (ಕಿರುಗತೆಗಳು), ಉಪವನ (ಪ್ರಬಂಧ-ವಿಮರ್ಶೆ), ದಮಯಂತಿ (ಗದ್ಯರೂಪದಲ್ಲಿ ಕತೆ) ಅವರ ಸ್ವತಂತ್ರ ಗದ್ಯ ಕೃತಿಗಳು.

ಯೂರಿಪಿಡಿಸ್‌ನ "ಮೀಡಿಯಾ" ಮಾರ್ಕ್‌ಟ್ವೈನ್‌ನ ಹಕಲ್‌ಬರಿ ಫಿನ್ನನ ಸಾಹಸಗಳು ಅವರ ಮುಖ್ಯ ಅನುವಾದ ಕೃತಿಗಳು. ಅವರ ಅನೇಕ ಕನ್ನಡ ಕವಿತೆಗಳು ಇಂಗ್ಲೀಷ್, ಹಿಂದಿ, ಉರ್ದು ಭಾಷೆಗಳಿಗೆ ಅನುವಾದಗೊಂಡಿರುವುದನ್ನು ಇಲ್ಲಿ ನೆನೆಯಬಹುದು. ತಮ್ಮ ಗಂಭೀರ ಕಾವ್ಯದ ಜೊತೆಜೊತೆಗೆ ಚೆಲುವಾದ ಗೀತೆಗಳನ್ನು (Songs) ಬರೆದುಕೊಂಡು ಬಂದಿರುವುದು ಕೆ. ಎಸ್. ನ. ಅವರ ಕಾವ್ಯದ ಇನ್ನೊಂದು ವಿಶೇಷ. ಅವರ ಪ್ರಮುಖ ನವ್ಯ ಕೃತಿ ತೆರೆದ ಬಾಗಿಲುವಿನಲ್ಲಿ ಕೂಡ ಚೆಲುವಾದ ಹಾಡುಗಳ ಒಂದು ಪ್ರತ್ಯೇಕ ವಿಭಾಗವಿದೆ, ಅವರ ಇತ್ತೀಚಿನ ನವಪಲ್ಲವದಲ್ಲೂ ಸೊಗಸಾದ ಗೀತೆಗಳಿವೆ ಕೆ. ಎಸ್. ನ. ಅವರ ಗೀತೆಗಳನ್ನು ಮೈಸೂರು ಮಲ್ಲಿಗೆಯ ಭಾವಗೀತೆಗಳನ್ನು ಅನೇಕ ಗಾಯಕರು ದಶಕಗಳಿಂದ ಹಾಡುತ್ತ ಬಂದಿದ್ದು ಅವು ಕಾವ್ಯವನ್ನು ಓದದ ಜನತೆಗೂ ತಲಪುವುದು ಸಾಧ್ಯವಾಗಿದೆ ಅವರ ಜನಪ್ರಿಯ 'ಮೈಸೂರು ಮಲ್ಲಿಗೆ' ಈಗ ಸಿ. ಅಶ್ವತ್ಥರ ರಾಗ ಸಂಯೋಜನೆಯಲ್ಲಿ ಧ್ವನಿಮುದ್ರಿಕೆಯಾಗಿಯೂ ಹೊರಬಂದು ಅಪಾರ ಜನಪ್ರೀತಿಯನ್ನು ಸೂರೆಮಾಡುತ್ತಿದೆ

***

ಕೆ. ಎಸ್. ನ. ಕವಿಯೆಂದೇ ಪ್ರಮುಖರಾದುದರಿಂದ ಸವಿವರವಾದ ವಿಶ್ಲೇಷಣೆಗೆ ಅವರ ಕಾವ್ಯವನ್ನು ಈ ಭಾಗದಲ್ಲಿ ಮುಖ್ಯವಾಗಿ ಗಮನಿಸುತ್ತಿದ್ದೇವೆ

1943 ರಲ್ಲಿ ಪ್ರಕಟವಾದ 'ಮೈಸೂರು ಮಲ್ಲಿಗೆ' ಕನ್ನಡ ಪ್ರೇಮ ಕಾವ್ಯದಲ್ಲಿ ಅತಿ ಮುಖ್ಯವಾದದು, ಅನನ್ಯವಾದುದು ಎಂಬುದು ನಿಜವಾದರೂ ಇದರ ಮೊದಲ ಎಳೆಗಳು ಕಾಣಿಸಿಕೊಳ್ಳುವುದು ಆಚಾರ್ಯ ಬಿ. ಎಂ. ಶ್ರೀ ಅವರ ಇಂಗ್ಲೀಷ್ ಗೀತೆಗಳಲ್ಲಿ, ಆ ಐತಿಹಾಸಿಕ ಮಹತ್ವದ ಕೃತಿಯಲ್ಲಿ Burns ಕವಿಯ Duncan Gray (ಮಾದ ಮಾದಿ) O my Love's Like a red red Rose (ನನ್ನ ಪ್ರೇಮದ ಹುಡುಗಿ) Ac Fond Kiss (ಒಂದು ಮುತ್ತು) Bonnie Doon (ಬಿಟ್ಟ ಹೆಣ್ಣು) Landor

ಕವಿಯ Rosa My Imer (ಪದುಮ) ಮೊದಲಾದ ಅನುವಾದಿತ ಕೃತಿಗಳನ್ನು ನೋಡಿದರೆ ಮೈಸೂರು ಮಲ್ಲಿಗೆಯ ಕವಿತೆಯ ಭಾಷೆ, ವಸ್ತು, ಲಯಗಳ ಮೇಲೆ ಇಂಗ್ಲಿಷ್ ಗೀತೆಗಳ ಪ್ರಭಾವವನ್ನು ಗುರುತಿಸಲಿಕ್ಕೆ ಬರುತ್ತದೆ.

ನನ್ನ ಪ್ರೇಮದ ಹುಡುಗಿ ತಾವರೆಯ ಹೊಸ ಕೆಂಪು
ತಾವರೆಯ ಹೊಸ ಅರಳ ಹೊಳೆವ ಕೆಂಪು
ನನ್ನ ಪ್ರೇಮದ ಹುಡುಗಿ ಕೊಳಲ ಮೆಲುನುಡಿಯಿಂಪು
ಕೊಳಲು ಮೋಹಿಸಿ ನುಡಿವ ಗಾನದಿಂಪು
(ನನ್ನ ಪ್ರೇಮದ ಹುಡುಗಿ : ಇಂಗ್ಲೀಷ್ ಗೀತೆಗಳು)

ಅರಸಿನ ಕುಲವೋ, ಏನಿದ್ದೇನು
ಸುರವಧು ರೂಪೋ, ಏನಿದ್ದೇನು
ಗುಣವೋ ಸೊಬಗೋ, ಏನಿದ್ದೇನು
ಪದುಮಾ ಇದ್ದುವು ನಿನಗೆಲ್ಲಾ (ಪದುಮ : ಇಂಗ್ಲಿಷ್ ಗೀತೆಗಳು)

–ಮೇಲಿನ ಸಾಲುಗಳನ್ನು ಓದುವಾಗ ಕೆ. ಎಸ್. ನ. ಅವರ ಸ್ಫೂರ್ತಿಯ ಮೂಲವನ್ನು ಸ್ಪಷ್ಟವಾಗಿಯೇ ಗುರುತಿಸಲಿಕ್ಕೆ ಬರುತ್ತದೆ.

ಪಯಣಿಸುವ ವೇಳೆಯಲಿ ಬಂದು ಅಡಿಗೆರಗಿ
ಮುಂದೆ ನಿಂದಳು ನನ್ನ ಕೈ ಹಿಡಿದ ಹುಡುಗಿ
ಇನ್ನೆಂದು ಬರುವಿರೆಂದೆನ್ನ ಕೇಳಿದಳು
ಇನ್ನೊಂದು ತಿಂಗಳಿಗೆ ಎಂದು ಹೇಳಿದೆನು
(ತಿಂಗಳಾಯಿತೆ ; ಮೈಸೂರು ಮಲ್ಲಿಗೆ)

ಚಪ್ಪರಗಾಲಿನ ಮಂಚದ ಮೇಗಡೆ
ಮೆತ್ತನೆ ಹಾಸಿತ್ತು
ಅಪ್ಪಟ ರೇಸಿಮೆ ದಿಂಬಿನ ಅಂಚಿಗೆ
ಚಿತ್ರದ ಹೂವಿತ್ತು – ಪದುಮಳು
ಹಾಕಿದ ಹೂವಿತ್ತು
(ಮಾವನ ಮನೆಯಲ್ಲಿ : ಮೈಸೂರು ಮಲ್ಲಿಗೆ)

ತಿಳಿಗನ್ನಡದ ಆಡು ನುಡಿಯ, ದಿನಬಳಕೆಯ ಮಾತಿನ ಪ್ರಯೋಗ, ಲಯಗಳ ಸ್ಫೂ

ರ್ತಿ ಇವನ್ನು ಕೆ. ಎಸ್. ನ. 'ಇಂಗ್ಲಿಷ್ ಗೀತೆ' ಗಳಿಂದ ಪಡೆದದ್ದು; ಈಗ ಸ್ಪಷ್ಟ. ಮೈಸೂರು ಮಲ್ಲಿಗೆಯ 'ಪದುಮ' ಕೂಡ ಹೀಗೆ ಶ್ರೀ ಅವರ ಕಾವ್ಯದ ನೆಲೆಯಿಂದ ಹೊರಬಂದವಳು. ಶ್ರೀ ಕಾವ್ಯ ಪ್ರಯೋಗ 'ದೇಸಿ' ಮತ್ತು 'ಮಾರ್ಗ' ಈ ಎರಡೂ ನಿಟ್ಟಿನಲ್ಲೂ ಪ್ರಯೋಗ ನಿರತವಾಯಿತಷ್ಟೆ ? 'ಮಾರ್ಗ' ವನ್ನು ನಮ್ಮ ಶ್ರೇಷ್ಠ ಕವಿ ಕುವೆಂಪು ರೂಢಿಸಿದರೆ, 'ದೇಸಿ' ಯನ್ನು ಕೆ. ಎಸ್. ನ. ರೂಢಿಸಿದರು ಎನ್ನಬಹುದು. ಅಶ್ವತ್ಥಾಮನ್, ಪಾರಸಿಕರು, ಪ್ರಗಾಥಗಳ ಪ್ರಭಾವವನ್ನು ಕುವೆಂಪುವಲ್ಲಿ ಗುರುತಿಸ ಲಿಕ್ಕೆ ಬರುವಂತೆ, ಅಚ್ಚಗನ್ನಡದ ಭಾಷಾಲಯಗಳ ಶ್ರೀ ಅವರ ಕೃತಿಗಳ ಪ್ರಭಾವವ ನ್ನು ಕೆ. ಎಸ್. ನ. ಅವರ ಆರಂಭಿಕ ಕವಿತೆಗಳಲ್ಲಿ ಗುರುತಿಸಲಿಕ್ಕೆ ಬರುತ್ತದೆ.

ಇಂಗ್ಲಿಷ್ ಗೀತೆಗಳಲ್ಲಿ ಕಾಣಿಸಿಕೊಂಡ ಪ್ರೇಮ ಕವಿತೆಗಳ ಪ್ರಭಾವ, ಕೆ. ಎಸ್. ನ. ಅವರ ಮೈಸೂರು ಮಲ್ಲಿಗೆಗೂ ಮೊದಲು ಕಾಣಿಸಿಕೊಂಡಿರುವುದು ತಿ. ನಂ. ಶ್ರೀ. ಅವರ 'ಒಲುಮೆ' ಸಂಗ್ರಹದಲ್ಲಿ (1932). ಈ ಸಂಗ್ರಹ ಕೂಡ ಕೆ. ಎಸ್. ನ. ಅವರನ್ನು ಪ್ರಭಾವಿಸಿದ ಹಾಗಿದೆ.

ಪಶ್ಚಾತ್ತಾಪ

ಮರುಹಗಲು ತೆರಳುವೆನು ನಾನೆಂದು ತಿಳಿದು
ಹಿರಿಯರೆದುರಿಗೆ ಬೀಳಕೊಳುವುದಕೆ ನಾಚಿ
ನನ್ನೆಡೆಗೆ ರಾತ್ರಿಯಲಿ ಹೆರರರಿಯದಂತೆ
ಚೆನ್ನ ನವವಧುವಂದು ಶಂಕಿಸುತ ಬಂದು
ಅಡಿಗೆರಗಿ ಹೋಗುವೆನು ಎನುತ ನಿಟ್ಟುಸಿರು
ಬಿಡಲು ಬೆಪ್ಪಾದಂತೆ ನಾನೇಕೆ ನಿಂತೆ ?

ಮಣಿದವಳ ಹಿಡಿದೆತ್ತಿ ಮುಂಗುರುಳ ತಿದ್ದಿ
ಅಣಿಯಾಗಿ ತುಟಿ ಕೆನ್ನೆ ಕಣ್ಣ ಮುತ್ತಿಟ್ಟು
ಸೆಳೆದಪ್ಪಿ ನಲ್ನುಡಿಯನೇ ಕಾಡಲಿಲ್ಲ ?
ಕುಲದ ಕಟ್ಟಳೆಗಂಜಿ ಮೋಸವಾಯ್ತಲ್ಲ !
ಆರೀತಿ ಮನ್ನಿಸಿದ ಕುಲದ ಕಟ್ಟಳೆಯೆ
ದೂರವಿರಿಸಿಹುದೀಗ ನಮ್ಮಿಬ್ಬರನು ! (ಪಶ್ಚಾತ್ತಾಪ : ಒಲುಮೆ)

ತೀ. ನಂ. ಶ್ರೀ. ಅವರ ಒಲುಮೆ ಸಂಗ್ರಹದ ಈ ಕವಿತೆಯನ್ನು ಕೆ ಎಸ್ ನ ಅವರ ಮೈಸೂರು ಮಲ್ಲಿಗೆ ಸಂಗ್ರಹದ ಪಶ್ಚಾತ್ತಾಪ ಎಂಬ ಕವಿತೆಯೊಂದಿಗೆ ಹೋಲಿಸಿ

ನೋಡಬಹುದು.

ಪಶ್ಚಾತಾಪ

ಸಂಜೆಗೆನ್ನ ಪಯಣವೆಂದು
ತಿಳಿದಳೆನ್ನ ಸುಂದರಿ
ನನ್ನ ಮುಂದೆ ಬಂದು ನಿಂದು
ತಡೆದಳಿಂತು ವಿನಯದಿ

ಕೆಂಪು ತುಟಿಗಳಿಂದ ಹರಸಿ
ನುಡಿಯಲಿಲ್ಲ ನಿಜವನು
ತೆರೆದ ಕಂಗಳುದಕ ಸುರಿಸಿ
ತೊಳೆದುವೆನ್ನ ಮನವನು

....

....

ಇರುಳಿನಲ್ಲೆ ಕಳೆಯಲಿಲ್ಲ
ಅಪ್ಪಿ ಮುತ್ತ ಸೊತ್ತಲಿಲ್ಲ
ಕಣ್ಣನೀರನೊರಸಲಿಲ್ಲ
ಒರಟನಾದೆನೇತಕೆ ?

ಸರಸ ವಿರಸವಾಯಿತಲ್ಲ
ಹೊರಟು ಬಂದೆನೇತಕೆ ? (ಪಶ್ಚಾತ್ತಾಪ : ಮೈಸೂರು ಮಲ್ಲಿಗೆ)

ಎರಡು ಕವಿಗಳ ಸಂದರ್ಭ ಒಂದೇ. ಪತಿಯ ಪಶ್ಚಾತ್ತಾಪದ ಧಾಟಿ ಒಂದೇ. ಕೆ. ಎಸ್. ನ, ತಮ್ಮ ಕವಿತೆಯಲ್ಲಿ ತೀ. ನ. ಶ್ರೀ. ಪ್ರಭಾವವನ್ನು ಅರಗಿಸಿಕೊಂಡು, ಚೆಲುವಾದ ಸಾಲುಗಳಿಂದ ಕವಿತೆಯನ್ನು ಇನ್ನೂ ಹೃದಯಂಗಮಗೊಳಿಸಿದ್ದಾರೆ ನಿಜ. ಆದರೆ ಕವಿತೆಯ ಮೂಲ ಎಳೆ ತಿ.ನಂ.ಶ್ರೀ. ಯಲ್ಲಿ ಇದೆ. ಹೀಗೆ ಮೊದಲು ಬಿ.ಎಂ. ಶ್ರೀ. ಯವರ ಇಂಗ್ಲಿಷ್ ಗೀತೆಗಳಲ್ಲಿ ಕಾಣಿಸಿ, ತಿ. ನಂ. ಶ್ರೀ. ಅವರ ಒಲುಮೆಯಲ್ಲಿ ಒಂದು ಹದಕ್ಕೆ ಬಂದ ಪ್ರೇಮ ಕಾವ್ಯ, ಕೆ ಎಸ್ ನಂ ಅವರ ಮೈಸೂರು ಮಲ್ಲಿಗೆ ಯಲ್ಲಿ ಕೃತಕೃತ್ಯವಾಯಿತೆಂದು ಭಾವಿಸಬಹುದು, ಕುವೆಂಪು ಮತ್ತು ಬೇಂದ್ರೆ ಅವರ ಪ್ರೇಮ ಕಾವ್ಯವೂ ಪ್ರಸಿದ್ಧವಾಗಿದೆ. ಬೇಂದ್ರೆಯವರ ಪ್ರೇಮಕಾವ್ಯ ವಿವಾಹೇತರ ಸಂಬಂಧಗಳನ್ನು ಒಳಗೊಂಡು ಬದುಕಿನ ದುರಂತವನ್ನೂ ಒಳಮಾಡಿಕೊಂಡು ಪ್ರಬುದ್ಧ

ಕಾವ್ಯವಾಗಿ ಬೆಳೆದಿವೆ. ಹೆಚ್ಚಾಗಿ ವಿವಾಹಪೂರ್ವ ಮತ್ತು ಹೊಸ ದಾಂಪತ್ಯದ ಹರಯದ ಹೆಣ್ಣು ಗಂಡುಗಳ ಒಲವು ವಿರಹಗಳ ಸುಕುಮಾರ ಜಗತ್ತನ್ನು ಕನ್ನಡಕ್ಕೆ ತಂದು ಮನ್ನಣೆ ಗಳಿಸಿದವರು ಕೆ ಎಸ್ ನ ಮಾತ್ರ ಎನ್ನಬೇಕು.

ತಮ್ಮವು ಪ್ರೇಮ ಕವಿತೆಗಳಲ್ಲ, ದಾಂಪತ್ಯ ಕವಿತೆಗಳೆಂದು ಕೆ ಎಸ್ ನ ಈಚೆಗೆ ಹೇಳಿದ್ದು ಅರ್ಥಪೂರ್ಣ. ಮೈಸೂರು ಮಲ್ಲಿಗೆಯ ಬಹಳಷ್ಟು ಕವಿತೆ ದಾಂಪತ್ಯ ಗೀತೆಗಳೇ ಆಗಿವೆ. ದಶಕಗಳ ಹಿಂದಣ ಸಾವಧಾನದ ಬದುಕಿನ ಚಿತ್ರಣ ಇಲ್ಲಿದೆ. ಮಧ್ಯಮ ವರ್ಗ. ಕೆಳವರ್ಗದ ಸಮಾಜವೇ ಇಲ್ಲಿ ಕಾಣಿಸತಕ್ಕದ್ದು. ಹೆಚ್ಚಾಗಿ ಕವಿತೆಗಳ ಉದ್ದಕ್ಕೂ ಒಂದು ಗ್ರಾಮೀಣ ಪರಿಸರದ ಚಿತ್ರಣವಿದೆ. ನವಿಲೂರು, ಹೊನ್ನೂರು, ಮೊದಲಾದವು ಈ ಗ್ರಾಮೀಣ ಜಗತ್ತಿನ ಪ್ರಾತಿನಿಧಿಕ ನೆಲೆಗಳು. ಮೈಸೂರು ಮಲ್ಲಿಗೆಯ ಕವಿತೆಗಳು ಎಷ್ಟರಮಟ್ಟಿಗೆ ಈ ನೆಲದವಾಗಿದೆಯೆಂದರೆ ಅವುಗಳ ಹಿಂದೆ ಬರ್ನ್ಸ್ ಕವಿಯ ಪ್ರಭಾವವಿದೆ. ಎಂದು ಹೇಳಲಿಕ್ಕೇ ಆಗುವುದಿಲ್ಲ. ಡಿ. ವಿ. ಜಿ. ಅವರು ಮೈಸೂರು ಮಲ್ಲಿಗೆಯ ಮುನ್ನುಡಿಯಲ್ಲಿ ಗುರುತಿಸಿರುವಂತೆ ಸ್ವಾಭಾವಿಕತೆ, ಸರಳತೆ ಋಜುತೆಗಳೇ ಈ ಕಾವ್ಯದ ಮುಖ್ಯ ಲಕ್ಷಣಗಳಾಗಿವೆ. ಮಾವನ ಮನೆಯಲ್ಲಿ, ಹೂವಾಡಗಿತ್ತಿ, ಹೆಂಡತಿಯ ಕಾಗದ, ಶ್ಯಾನುಭೋಗರ ಮಗಳು, ಪ್ರಶ್ನೆ ಉತ್ತರ, ಬಳೆಗಾರನ ಹಾಡು ಮೊದಲಾದ ಈ ಸಂಗ್ರಹದ ಮಹತ್ವದ ಕವಿತೆಗಳು ಕಟ್ಟಿಕೊಡುವ ಸಂದರ್ಭ, ಅಚ್ಚ ದೇಸಿಯವಾದುದಾಗಿದೆ. ಜೀವನದ ಚೆಲುವಾದ ಮುಖವನ್ನೇ ಮೈಸೂರು ಮಲ್ಲಿಗೆಯ ಹೆಚ್ಚಿನ ಕವಿತೆಗಳು ಚಿತ್ರಿಸುವುದಾದರೂ. ಬದುಕಿನ ದಾರುಣತೆಯ ಅರಿವು ಕವಿಗಿಲ್ಲ ಎನ್ನುವಂತಿಲ್ಲ. ಕೆರೆಯ ದಾರಿಯಲ್ಲಿ ಎಂಬ ಕವಿತೆಯಲ್ಲಿ ಮುದುಕನನ್ನು ಮದುವೆಯಾದ ತರುಣಿಯ ನೋವು ಚಿತ್ರಿತವಾಗಿದೆ.

ಬದುಕು ನೆಳಲು ಬಿಸಿಲ ಹಾದಿ
ಮತ್ತು ಕಳ್ಳ ಬೆಕ್ಕಿನಂತೆ ಹೊಂಚುತಿಹುದು
(ಬಾರೆ ನನ್ನ ಶಾರದೆ : ಮೈಸೂರು ಮಲ್ಲಿಗೆ)

–ಎಂಬಂಥ ಸಾಲುಗಳೂ ಅಲ್ಲಲ್ಲಿ ಬಂದಿವೆ. ಜಟ್ಟದ ಗೌರಿ ಮತ್ತು ಕಂಬನಿ ಎಂಬ ಎರಡು ಅನುವಾದಿತ ಕವಿತೆಗಳೂ ಬದುಕಿನ ದಾರುಣತೆಯನ್ನು ಬಿಂಬಿಸುವ ಕವಿತೆಗಳು. ಒಟ್ಟಾರೆ ನಮ್ಮಲ್ಲೇ ಇದ್ದ ಜಾನಪದ ಕಾವ್ಯ ಮತ್ತು ಪಾಶ್ಚಾತ್ಯ ಪ್ರೇಮ ಕಾವ್ಯದ ಪ್ರಭಾವದಿಂದ ವಿಶಿಷ್ಟವಾದ, ಈ ಮಣ್ಣಿನ ಮಲ್ಲಿಗೆಯ ವಾಸನೆ ಕೊಡುವ ಚೆಲುವಾದ ಕವಿತೆಯನ್ನು ಕೆ. ಎಸ್. ನ. ನಿರ್ಮಿಸಿದರು ಎನ್ನಬಹುದು.

ಮೈಸೂರು ಮಲ್ಲಿಗೆಯ ನಂತರ ಸುಮಾರು ಒಂದು ದಶಕದ ಕಾಲ ಕೆ. ಎಸ್. ನ.

ಇದೇ ಬಗೆಯ ಕಾವ್ಯವನ್ನು ರಚಿಸುತ್ತಾ ಹೋದರು. ಐರಾವತ (1945), ದೀಪದ ಮಲ್ಲಿ (1947), ಉಂಗುರ (1949), ಇರುವಂತಿಗೆ (1952) ಗಳಲ್ಲಿ ಮೈಸೂರು ಮಲ್ಲಿಗೆಗಿಂತ ತೀರ ಭಿನ್ನವಾದ ಕವಿತೆಗಳನ್ನೇನೂ ನಾವು ನೋಡುವುದಿಲ್ಲ. ಆದರೆ ಈ ಕವಿತೆಯಲ್ಲಿ ಮುಂದೆ ಕಾಣುವ ಕೆಲವು ವಿಶಿಷ್ಟ ಕಾಳಜಿಗಳಿಗೆ ಸೂಚನೆ ಈ ಸಂಗ್ರಹಗಳಲ್ಲಿ ಇದೆ ಎಂಬುದು ಮುಖ್ಯ ಸಂಗತಿ. 'ಹೀಗಾಯಿತು' ಕವಿತೆಯಲ್ಲಿ ಇವರನ್ನು ವಿಚಾರಿಸಿಕೊಂಡು ಹೋದ ವ್ಯಕ್ತಿಯೊಬ್ಬನ ಬಗೆಗಿನ ಚಿಂತನ ಇದೆ. ನಮ್ಮ ಕ್ಷೇಮವನ್ನು ಚಿಂತಿಸುವ ಈ ಶುಭದ ಕಲ್ಪನೆ ತೆರೆದ ಬಾಗಿಲು ಸಂಗ್ರಹದ ಕವಿತೆಗಳಲ್ಲಿ ಇರುವುದು ನೋಡಬಹುದು. ದೀಪದ ಮಲ್ಲಿ ಸಂಗ್ರಹದಲ್ಲಿರುವ 'ಕಾವೇರಿ ಸ್ನಾನ' ಎಂಬ ಕವಿತೆಯಲ್ಲಿ ಮಾಸ್ತಿಯವರ ಕಥನದ ಧಾಟಿ, ನವುರು ಹಾಸ್ಯ, ಸರಳ ರಗಳೆಯ ನಡೆ, ಆಡು ಮಾತಿನ ಸೊಗಸಾದ ಬಳಕೆ ಕಾಣುತ್ತದೆ.

ರಾಮಯ್ಯ ಮೀಯಲೊಲ್ಲರು, ನೀರು ಅಣಿಯಿಲ್ಲ ಎನ್ನುವ ಬಹಿರಂಗ ಕಾರಣ. ಜೊತೆಗೆ
ನೀರಿನಲ್ಲಿ ಮಿಂದು ಬಂದಾಗೆದೆಯ ಮೇಲೆ ನಿಲ್ಲುವ ಹನಿಗೆ ತಂಗಾಳಿ ಬಡಿದರಾರೋಗ್ಯ
ಮುರಿಯುವುದೆನುವ ಪ್ರಬಲ ಸಂಶಯ ಜೀವದೊಳಗೆ (ಕಾವೇರಿ ಸ್ನಾನ : ದೀಪದ ಮಲ್ಲಿ)

1949ರ ಉಂಗುರದಲ್ಲಿ ಅವಿಭಕ್ತ ಕುಟುಂಬಗಳ ವಿಭಜನೆಯಂತಹ ಸಂಧಿಕಾಲದ ಆಧುನಿಕ ವಸ್ತು ಕಾಣಿಸಿಕೊಂಡಿದೆ. ಸಂಸಾರ ರಾಜ್ಯಾಂಗ ಈ ದೃಷ್ಟಿಯಿಂದ ಮುಖ್ಯ ಕವಿತೆ. ಹಾಗೇ ರಾಜಕೀಯ ಆಸಕ್ತಿ ತೋರುವ ಕೆಲವು ಕವಿತೆಗಳಿವೆ. ಡೊಮಿನಿಯನ್ ಜನನ, ಗಾಂಧೀಜಿಯ ಪಾದಕ್ಕೆ, ಇದೇ ನಾಡು, ಮಾತು ಬೇಸರವಾಗಿದೆ ಕವಿತೆಗಳಲ್ಲಿ ಹೊಸ ಸಮಾಜದ ಬಗ್ಗೆ ಆಸೆ–ಆತಂಕ–ಆಕ್ರೋಶಗಳು ವ್ಯಕ್ತವಾಗುತ್ತ ಕವಿಯ ಸಂದಿಗ್ಧ ಮನಃಸ್ಥಿತಿಯನ್ನು ಚಿತ್ರಿಸುತ್ತದೆ ಕೆ.ಎಸ್.ನ. ಅವರ ಇನ್ನೊಂದು ಮುಖ್ಯ ವಸ್ತು 'ದೇವರು, ಸೃಷ್ಟಿ, ಜೀವಿ' ಯ ಸಂಬಂಧದ ಆಸಕ್ತಿ ಕೂಡಿ ಕೆಲವು ಕವಿತೆಗಳಲ್ಲಿ ಕಾಣಿಸಿಕೊಂಡಿದೆ. ಪ್ರಥಮ ರಾಜನಿಗೆ ಅಹೋರಾತ್ರಿಗಳಲ್ಲಿ ಬಿಡದು ನನ್ನ ಬಿಡದು ನಿನ್ನ ದನಿ ಆ ಬಗೆಯ ಕವಿತೆಗಳು

ಮುಪ್ಪಿಯಲ್ಲಿ ಎಂಬ ಕಥನ ಧಾಟಿಯ ಕವಿತೆ ಬಿ.ಎಂ.ಶ್ರೀ. ಅವರ ಕಾರಿ ಹೆಗ್ಗಡೆಯ ಮಗಳನ್ನು ನೆನಪಿಸಿದರೆ, ಅನ್ನದ್ ತಪ್ಲೆ, ನನ್ ಲಚ್ಚಿ, ಜೆ. ಪಿ. ರಾಜರತ್ನಂ ಅವರ 'ರತ್ನನ ಪದಗಳ' ನೆನಪು ತರುತ್ತದೆ. ಹಿಂದೆಯೇ ಪ್ರಸ್ತಾಪಿಸಿದಂತೆ ಕಾವೇರಿ ಸ್ನಾನ ಮಾಸ್ತಿಯವರ ಕಥನ ಕವನಗಳ ನೆನಪು ತರುತ್ತದೆ. ಒಟ್ಟಾರೆ ಮೈಸೂರು ಮಲ್ಲಿಗೆಯ ಅಭೂತಪೂರ್ವ ಯಶಸ್ಸಿನ ನಂತರ ಕೆ. ಎಸ್. ನ. ಒಂದು ಕಡೆ ತಮ್ಮನ್ನೇ ತಾವು ಅನುಕರಿಸತೊಡಗಿದರೆ ಇನ್ನೊಂದು ಕಡೆ ಬೇರೆ ಧಾಟಿ ಧೋರಣೆಗಾಗಿ ಹುಡುಕಾಟದಲ್ಲಿ

ಇದ್ದರು ಎಂಬುದು ಮುಖ್ಯ. ಛಂದಸ್ಸಿನ ದೃಷ್ಟಿಯಿಂದಲೂ ಸಾಂಗತ್ಯ, ಸಾನೆಟ್, ಬ್ಲಾಂಕವರ್ಸ್‌ಗಳನ್ನು ಶೋಧಿಸತೊಡಗಿದ್ದರು. ಜೊತೆಗೆ ಫ್ರೀವರ್ಸ್‌ನ ಪ್ರಯೋಗಗಳೂ ನಡೆಯತೊಡಗಿದ್ದವು. ಈ ಎಲ್ಲ ಪ್ರಯೋಗಗಳು ಒಂದು ಸಾಫಲ್ಯ ಕಂಡದ್ದು 1958 ರ ಶಿಲಾಲತೆ ಸಂಗ್ರಹದಲ್ಲಿ ಎನ್ನಬೇಕು. ತಮ್ಮ ಸುಕುಮಾರ ಜಗತ್ತಿನಿಂದ ಬದುಕಿನ ವಾಸ್ತವ ನೆಲೆಗೆ ಬಂದು, ಜೀವನದೊಂದಿಗೆ ನೇರ ಮುಖಾಮುಖಿಗೆ ತೊಡಗುವುದನ್ನು ಈ ಸಂಗ್ರಹದಲ್ಲಿ ಕಾಣುತ್ತೇವೆ.

ದೇವರು–ಸೃಷ್ಟಿ–ಜೀವಿಯ ಸಂಬಂಧ, ಕಾಲದ ವಸ್ತು, ರಾಜಕೀಯ, ಸಾಮಾಜಿಕ ವಸ್ತು, ಶಿಲಾಲತೆ ಸಂಗ್ರಹದಲ್ಲಿ ಕಾಣಿಸಿಕೊಳ್ಳುತ್ತದೆ. ಸಾರ್ವಕಾಲಿಕ ಎನ್ನಬಹುದಾದ ಸಂಗತಿಗಳ ಜೊತೆಜೊತೆಗೆ ಸಮಕಾಲೀನ ಎನ್ನಬಹುದಾದ ಸಂಗತಿಗಳ ಬಗ್ಗೆಯೂ ಕವಿ ಇಲ್ಲಿ ಆಸಕ್ತಿಯನ್ನು ತೋರತೊಡಗುತ್ತಾನೆ. ಪ್ರೀತಿಯ ಬಗ್ಗೆ ಇಲ್ಲಿ ಕವಿತೆಗಳು ಇವೆ. ಆದರೂ ರಮ್ಯತೆ, ಕನಸುಗಾರಿಕೆಗೆ ಕಮ್ಮಿಯಾಗಿ, ಪ್ರೀತಿಯ ದುರಂತದ ಮುಖವನ್ನು ಈ ಸಂಗ್ರಹದಲ್ಲಿ ಕಾಣಿಸಲಾಗಿದೆ. ಅಘ್ರೇದಿತೆ, ರಾತ್ರಿಯಲ್ಲಿ ದೂರದಲ್ಲಿ ಎಲ್ಲೋ ಓಲಗ, ನಲವತ್ತರ ಚೆಲುವೆ, ನೀನಿಲ್ಲದ ಮನಸ್ಸು, ಕೇಳಬೇಡ ಎಲ್ಲಿಗೆ, ಈ ಮಾದರಿಯ ಕವಿತೆಗಳು.

ದೇಶ ಮತ್ತು ಸ್ವಾತಂತ್ರ್ಯದ ಬಗೆಗಿನ ಈ ಸಂಗ್ರಹದ ಕವಿತೆಗಳು ಮುಖ್ಯವಾಗಿ ವಿಡಂಬನೆಯ ಧಾಟಿಯನ್ನು ಪಡೆಯುತ್ತವೆ. ಬರಿಗೊಡಗಳಿಗೆ ಸಮಾಧಾನ ಈ ದೃಷ್ಟಿಯಿಂದ ಬಹು ಮುಖ್ಯ ಕವಿತೆ. ಅಮೂರ್ತವಾದ ಕಾಲದ ಬಗ್ಗೆ ಚಿಂತಿಸುವ ಗಡಿಯಾರದಂಗಡಿಯ ಮುಂದೆ, ಸೃಷ್ಟಿ – ಜೀವಿ – ದೈವದ ಬಗ್ಗೆ ಚಿಂತಿಸುವ ಬಿಳಿಯ ಹೂಗಳ ಕವಿತೆ, ಗೋರಿಗಳ ಮೇಲೆ, ಇಡದಿರು ನನ್ನ ನಿನ್ನ ಸಿಂಹಾಸನದ ಮೇಲೆ, ಬೆಳಗಿನ ಮಂಜು, ಚಿರಂತನವೆನ್ನಬಹುದಾದ ವಸ್ತುವನ್ನು ಶೋಧಿಸುವ ಕವಿತೆಗಳು. ಈ ಕವಿತೆಗಳಲ್ಲಿ ಪ್ರತಿಮಾ ಮಾರ್ಗ ಮುಖ್ಯವಾಗುತ್ತದೆ. ಕೆ.ಎಸ್.ನ. ಕಾವ್ಯದ ವಿಶಿಷ್ಟ ಶಕ್ತಿ ಎನ್ನಿಸುವ ಚಿತ್ರಕ ಶಕ್ತಿ ವರ್ಣನೆಗೆ ಬರದೆ, ಪ್ರತಿಮಾ ನಿರ್ಮಿತಿಗೆ ಒದಗತೊಡಗುತ್ತದೆ. ಚೆಲುವಾದ ಚಿತ್ರಗಳಿಗೂ ಹಾಗೂ ಅವು ಹೊಮ್ಮಿಸಬೇಕಾದ ದಾರುಣತೆಗೂ ಒಂದು ಆಂತರಿಕ ಸಂಘರ್ಷ ಏರ್ಪಡುತ್ತದೆ. ಈ ಸಂಗತಿಯನ್ನು ವಿಮರ್ಶಕರು ಚರ್ಚಿಸಿದ್ದಾರೆ. ಕೀರ್ತಿನಾಥ ಕುರ್ತಕೋಟಿ ಅವರ ಪ್ರಕಾರ 'ಕೆ. ಎಸ್. ನ. ಅವರಲ್ಲಿ ವಸ್ತುಪ್ರಜ್ಞೆ ಹಾಗೂ ಕಲಾಪ್ರಜ್ಞೆಗಳೆರಡೂ ದೂರ ಸಿಡಿದು ನಿಂತಿವೆ. ಈ ವಾದವನ್ನು ಒಪ್ಪದ ವಿಮರ್ಶಕರೂ ಇದ್ದಾರೆ. ಲಕ್ಷ್ಮೀನಾರಾಯಣ ಭಟ್ಟರು ಈ ವಾದವನ್ನು ಅಲ್ಲಗಳೆದು ಒಂದು ಲೇಖನ ಬರೆದಿದ್ದಾರೆ. ಮೈಸೂರು ಮಲ್ಲಿಗೆಯ ಸುಕುಮಾರ ಲೋಕದಿಂದ ಕೆ. ಎಸ್. ನ. ಶಿಲಾಲತೆಯ ಕಾವ್ಯದ ನೆಲೆಗೆ ಬರಲೇ ಬಾರದಿತ್ತೆಂದು ವಾದಿ

ಸುವ ವಿಮರ್ಶೆಯೂ ಇದೆ. ಶಿಲಾಲತೆಯ ಮುನ್ನುಡಿಯಲ್ಲೇ ಡಿ. ಎಲ್. ನರಸಿಂಹಾಚಾರ್ಯರು ಬರಿಯ 'ನವ್ಯತೆ'ಯನ್ನೇ ಕಾವ್ಯವೆಂದು ಕರೆಯಲಾದೀತೇ ? ಎಂದು ಅನುಮಾನದ ದನಿ ಎತ್ತಿದ್ದಾರೆ. ಹೀಗೆ ಕನ್ನಡ ವಿಮರ್ಶಾಲೋಕದಿಂದ ಶಿಲಾಲತೆಗೆ ಒಂದು ಬಗೆಯ ಮಿಶ್ರ ಪ್ರತಿಕ್ರಿಯೆ ಬಂದುದು ನಿಜವಾದರೂ. ಈ ಕವಿಯ ಕಾವ್ಯ ಮಾರ್ಗದಲ್ಲಿ ಶಿಲಾಲತೆ ಬಹು ಮುಖ್ಯ ಸಂಗ್ರಹವೆಂಬುದರಲ್ಲಿ ಸಂಶಯವಿಲ್ಲ. ಮೈಸೂರು ಮಲ್ಲಿಗೆಯ ನಂತರ ಹೆಚ್ಚಿನ ಚರ್ಚೆ, ವಿಶ್ಲೇಷಣೆಗೆ ಒಳಪಟ್ಟ ಪುಸ್ತಕವೂ ಇದೇ. ಶಿಲಾಲತೆ ಕೆ.ಎಸ್.ನ. ಅವರ ಕಾವ್ಯ ಇತಿಹಾಸದಲ್ಲಿ ಒಂದು ಪ್ರಮುಖವಾದ ಘಟ್ಟ ಎನ್ನುವ ಜಿ ಎಸ್. ಸಿದ್ಧಲಿಂಗಯ್ಯನವರು ಶಿಲ್ಪ, ಪ್ರತಿಮೆ, ಭಾಷೆ, ವಸ್ತು ಹಾಗೂ ಜೀವನ ದರ್ಶನಗಳ ದೃಷ್ಟಿಯಿಂದ ಶಿಲಾಲತೆಯಲ್ಲಿ ಹೊಸತನ ಕಾಣಿಸಿಕೊಂಡಿರುವುದನ್ನು ತಮ್ಮ ಲೇಖನವೊಂದರಲ್ಲಿ ವಿವರವಾಗಿ ಪರಿಶೀಲಿಸಿದ್ದಾರೆ (ಕೆ.ಎಸ್.ನ. ಅವರ ಕಾವ್ಯದ ಬೆಳವಣಿಗೆ : ಜಿ ಎಸ್. ಸಿದ್ಧಲಿಂಗಯ್ಯ – ಚಂದನ – ಪುಟ – 29).

ನವ್ಯಕಾವ್ಯ ಸಂದರ್ಭದ ಹಿನ್ನೆಲೆಯನ್ನಿರಿಸಿಕೊಂಡು ಕೆ.ಎಸ್.ನ. ಅವರ ಕಾವ್ಯ ನೋಡಿದಾಗ ಇವರ ಕಾವ್ಯದ ಸಾಂಸ್ಕೃತಿಕ ಮಹತ್ವ ಸ್ಪಷ್ಟವಾದೀತು. ಅನಂತಮೂರ್ತಿ ಅದನ್ನು ಹೀಗೆ ಗುರುತಿಸಿದ್ದಾರೆ. 'ಭೂಮಿಗೀತ ಸಂಕಲನದ ದೃಷ್ಟಾರ ಶಕ್ತಿಯ ಎದುರು ವೈಯಕ್ತಿಕ ಆಸೆ, ನಿರಾಸೆಗಳ ಕಾವ್ಯವೆಲ್ಲವೂ ಸಪ್ಪೆ ಎನಿಸಿಬಿಟ್ಟಿತು ಹೀಗೆ ಅಡಿಗರು ಭೂಮಿಗೀತ ಸಂಕಲನದ ಮುಖೇನ ನಮ್ಮಲ್ಲಿ ಹಲವರ ಕಾವ್ಯಾಪೇಕ್ಷೆಯನ್ನೇ ಬದಲು ಮಾಡಿಬಿಟ್ಟ ಸಂದರ್ಭದಲ್ಲಿ ಹಿರಿಯರಾದ ಬೇಂದ್ರೆ, ಬಹು ಸೂಕ್ಷ್ಮ ಸಂವೇದನೆಯ ನರಸಿಂಹಸ್ವಾಮಿಯಂಥವರೂ ತಮ್ಮ ಕಾವ್ಯದಲ್ಲೇ ಈ ಬದಲಾದ ಸಂದರ್ಭಕ್ಕೆ ಉತ್ತರ ಕೊಟ್ಟರು. ಕಾವ್ಯಪ್ರೇಮಿಗಳು ತಮ್ಮಲ್ಲಿ ದೋಷವೆಂದು ಪರಿಗಣಿಸಲು ತೊಡಗಿದ್ದನ್ನೇ ತಾತ್ವಿಕವಾಗಿಯೂ ಕಾವ್ಯದ ಧರ್ಮವಾಗಿಯೂ ಇವರು ಸಮರ್ಥಿಸಿಕೊಂಡರು. ಈ ವಾಗ್ವಾದದಲ್ಲೂ ಬಹಳ ಉತ್ತಮ ಕಾವ್ಯ ಬಂದಿದೆ. ಅಡಿಗರ ಭೂತ ಕವನದ 'ಅಗೆವಾಗ್ಗೆ ಮೊದಲು ಕೋಶಾವಸ್ಥೆ ಮಣ್ಣು ಕೆಳಕ್ಕೆ, ತಳಕ್ಕೆ ಗುದ್ದಲಿಯೆತ್ತಿ ಕುಕ್ಕಿದರೆ ಕಂಡೀತು ಗೆರೆ ಮಿರಿವ ಚಿನ್ನದದಿರು' ಎಂಬ ಸಾಲುಗಳ ವಾದನಿಯೆಂಬಂತೆ ನರಸಿಂಹಸ್ವಾಮಿಗಳು ತಮ್ಮ ಕುಂಕುಮ ಭೂಮಿಯನ್ನು ಹೀಗೆ ಪ್ರಾರಂಭಿಸುತ್ತಾರೆ. 'ಅಗೆವಾಗ್ಗೆ ನಕ್ಕದ್ದು ನುಣುಪು ಕುಂಕುಮ ಭೂಮಿ. ಗುದ್ದಲಿಯ ಕೆಲಸ ಅಲ್ಲಿಗೆ ನಿಂತಿದೆ' ಒಂದು ಗಣಿಯಾದರೆ, ಇನ್ನೊಂದು ಬೇಸಾಯಗಾರನ ಸಾಮಾನ್ಯ ಅಗೆತ. ಕೋಶಾವಸ್ಥೆ ಮಣ್ಣನ್ನು ಇನ್ನೂ ಆಳಕ್ಕೆ ಅಗೆಯಬೇಕು–ಚಿನ್ನ ಬೇಕಿದ್ದರೆ. ಬೇಸಾಯಗಾರನಾದರೋ ಫಲವತ್ತಾದ ಮಣ್ಣನ್ನು ಕಂಡೊಡನೆಯೇ ತೃಪ್ತ. ನಿತ್ಯಜೀವನದ ಸಾಮಾನ್ಯ ಸುಖ ದುಃಖಗಳನ್ನು ಮಾತ್ರ ಬರೆಯುವ ಕವಿ ಆಳಕ್ಕೆ ಅಗೆಯುವುದಿಲ್ಲ. ಎಂದು ದೂರುವ 'ಗಹನ'ದ ಪ್ರೇಮಿಗೆ ನರಸಿಂಹಸ್ವಾಮಿ ಹೀಗೆ ಉತ್ತರಿಸುತ್ತಿದ್ದಾರೆ.

ಜೀಸಾಯಗಾರನಾಗಿ ಭೂಮಿಯನ್ನು ಬಗೆಯುವವನಿಗೆ ಫಲವತ್ತಾದ ಕುಂಕುಮ ಭೂಮಿಗಿಂತ ಆಳವಾದ್ದು ಬೇಕಿಲ್ಲ; ಹಾಗಾಗಿ ಗುದ್ದಲಿಯ ಕೆಲಸ ಅಲ್ಲಿಗೆ ನಿಂತಿದೆ ಎನ್ನುತ್ತಾರೆ. ಅಡಿಗರ ಕಾವ್ಯ ಕ್ರಿಯೆಯಾದರೋ ಬಂಗಾರವನ್ನು ಇಷ್ಟದೇವತಾ ವಿಗ್ರಹಕ್ಕೊಗ್ಗಿಸುವ ಅಸಲು ಕಸಬು: ನರಸಿಂಹಸ್ವಾಮಿಯವರದು ಬಿತ್ತಿದ್ದರಲ್ಲಿ ಎಷ್ಟು ಎಷ್ಟು ಬೆಳೆದೀತೋ ಅಷ್ಟಕ್ಕೆ ಕೃತಾರ್ಥವಾಗುವುದು. (ರಾಮಚಂದ್ರ ಶರ್ಮರ 'ಅರವತ್ತು ಕವನಗಳು' ಸಂಗ್ರಹದ ಮುನ್ನುಡಿಯಲ್ಲಿ ಯು. ಆರ್. ಅನಂತಮೂರ್ತಿ) ಮೇಲಿನ ಮಾತು ಹೇಳುವಾಗ ಬಹು ಮುಖ್ಯ ಸಂಗತಿಯೊಂದರ ಕಡೆ ಅನಂತಮೂರ್ತಿ ನಮ್ಮ ಗಮನ ಸೆಳೆಯುತ್ತಿದ್ದಾರೆ. ಅಡಿಗರ ಕಾವ್ಯ ಸಂದರ್ಭಕ್ಕೆ ಕೆ. ಎಸ್. ನ. ತಮ್ಮದೇ ರೀತಿಯ ಉತ್ತರ ನೀಡುವ ಮೂಲಕ ತಮ್ಮ ಕಾವ್ಯದ ಅನನ್ಯತೆ ಸಾಧಿಸುತ್ತಿದ್ದುದು ಮಾತ್ರವಲ್ಲ, ಅಡಿಗರ ಊರ್ಧ್ವಮುಖತೆಗೆ ಕೆ ಎಸ್ ನ ಅವರ ದೈನಿಕದ ಬನಿ ಪಡೆದ ಕಾವ್ಯ ಎದುರಾಗುತ್ತ ಆಲ್ಟರ್‌ನೇಟಿವ್ ಆದ ಸಮತೋಲನವನ್ನು ತರುತ್ತಿತ್ತು ಎಂಬುದು ಮುಖ್ಯ. ವೈವಿಧ್ಯಮಯ ದನಿಗಳು ಸಾಂಸ್ಕೃತಿಕ ಅರಕೆಯನ್ನು ತುಂಬುವ ಮಹತ್ಕಾರ್ಯ ನಿರ್ವಹಿಸುತ್ತವೆ ಎಂಬ ಕಾರಣದಿಂದ ಕನ್ನಡ ನವ್ಯ ಸಂದರ್ಭದಲ್ಲಿ ಕೆ ಎಸ್ ನ ಕಾವ್ಯ ಬಹು ಮುಖ್ಯ ಸ್ಥಾನ ಪಡೆಯುತ್ತದೆ. ತಮ್ಮ ಮಿತಿಯಲ್ಲಿ ಜಿ. ಎಸ್. ಶಿವರುದ್ರಪ್ಪ, ಚನ್ನವೀರ ಕಣವಿ, ರಾಮಚಂದ್ರ ಶರ್ಮ, ಗಂಗಾಧರ ಚಿತ್ತಾಲ, ರಾಮಾನುಜನ್‌ರ ಕಾವ್ಯಗಳು ಈ ಕಾರ್ಯನಿರ್ವಹಿಸಿದವು ಎಂಬುದನ್ನು ಇಲ್ಲಿ ಕೃತಜ್ಞತೆಯಿಂದ ನೆನೆಯಬಹುದು.

ಭಾಷೆ, ಲಯ, ಧಾಟಿಯಲ್ಲಿ ಮಾತ್ರವಲ್ಲ, ಧೋರಣೆಯಲ್ಲೂ ಅಡಿಗರಿಗಿಂತ ಸ್ಪಷ್ಟವಾಗಿ ಭಿನ್ನವಾಗುವ ಮೂಲಕ ನರಸಿಂಹಸ್ವಾಮಿ ಬದುಕಿನ ಇನ್ನೊಂದು ಸಾಧ್ಯತೆಯನ್ನು ತೋರಿಸುತ್ತಾರೆ. ಅವರದು ಬದುಕಿಗೆ ಬದ್ಧವಾದ ಜೀವನ ದೃಷ್ಟಿ. ಅವರೇ ಸಂದರ್ಶನವೊಂದರಲ್ಲಿ ಹೇಳಿದಂತೆ– 'ನಾವು ಸೋಲುಗಳಿಂದ ಮುಂದೆ ಬರ್‍ತಾ ಇದೀವಿ. ಬದುಕನ್ನು ಒಪ್ಕೋಬೇಕು. ಬದುಕಬೇಕು ಚೆನ್ನಾಗಿ. ಭೂಮಿ ಚೆನ್ನಾಗಿದೆ. ಸುಂದರವಾಗಿದೆ. ದೇವ್ರು ಇದ್ರೆ ನೋಡ್ಕೊಳ್ಲಿ ಭೂಮಿ ಸತ್ಯ'

ಮೈಸೂರು ಮಲ್ಲಿಗೆಯಿಂದ ತೆರೆದ ಬಾಗಿಲುವರೆಗೆ ಇದೇ ಅವರ ಜೀವನ ತತ್ವ ಎನ್ನಬಹುದು. ಶಿಲಾಲತೆಯಲ್ಲಿ ಬರುವ 'ಇಡದಿರು ನನ್ನ ನಿನ್ನ ಸಿಂಹಾಸನದ ಮೇಲೆ' ಎಂಬ ಕವಿತೆ ಒಂದು ರೀತಿಯಲ್ಲಿ ಅವರ ಮ್ಯಾನಿಫೆಸ್ಟೋ ಕವಿತೆಯಾಗಿದೆ

ಮಗನ ಕಾಡುವ ತಂದೆ ನೀನಾಗು ಹಗೆಯಾಗು
ಹಣ್ಣಾಗಿಸೆನ್ನ ಸಿರನು

ನಿನ್ನ ಬಂಡೆಯ ಮೇಲೆ ನನ್ನ ನೆತ್ತರ ಹನಿಸುಕಾಣಲ್ಲಿ
ನಿನ್ನ ಹೆಸರಿಸು

ಬಂದ ಬಾಗಿಲು ಮಣ್ಣು; ಬಿಡುವ ಬಾಗಿಲು ಮಣ್ಣು
ನಡುವೆ ಕಾಪಾಡುವುದು ತಾಯ ಕಣ್ಣು
ಈ ಕಣ್ಣ ಸೆರೆಯ ಕಲ್‌ಕೋಟೆಯಲ್ಲಾ ಹೊನ್ನು;
ನನ್ನ ಕೈ ಬಿಡುವುದೇ ನಿನಗೆ ಬೆನ್ನು

ಕಾಣದ ದೈವವನ್ನು ನೆಚ್ಚದೆ, ಕಾಡುವ ಭೂಮಿಯನ್ನು ಒಪ್ಪಿಕೊಳ್ಳುತ್ತ ಬದುಕುವ ಛಲ ಹಿಡಿದ ಈ ಧೋರಣೆ ದೈವಿಕಗಳಿಗೆ ಮೀರದ ಸಾಮಾನ್ಯ ಸ್ತರದ ಬದುಕಿಗೆ ನಿಜವಾದ ಅರ್ಥವಂತಿಕೆಯನ್ನು ನೀಡಬಲ್ಲದು.

ಮನೆಯಿಂದ ಮನೆಗೆ (1960) ಸಂಗ್ರಹದಲ್ಲಿ ಬರುವ ಶಿಲೆಗೆ ಹೂವಿನ ವಂಕಿ, ಹೆಜ್ಜೆ ಗುರುತು ಮೊದಲಾದ ಕವಿತೆಗಳಲ್ಲೂ ಈ ತಾತ್ವಿಕ ಜಿಜ್ಞಾಸೆ ಮುಂದುವರೆದಿದೆ. 'ನೀನಲ್ಲ ಮಾಯೆ' ಎಂದು ಭೂಮಿಗೆ ಹೇಳುವ ಮಾತು ಬಹು ಮುಖ್ಯವಾದದು. ಈ ತಾತ್ವಿಕ ಚಿಂತನೆಯೂ ಕೆ.ಎಸ್.ನ. ಅವರಲ್ಲಿ ತಂದೆ–ತಾಯಿ–ಮಗ ಈ ಮೂಲ ಪ್ರತಿಮೆಗಳನ್ನು ಒಳಗೊಳ್ಳುವ ಕೌಟುಂಬಿಕ ಚಿತ್ರದ ಮೂಲಕವೇ ನಡೆಯುತ್ತದೆ. ಮೈಸೂರು ಮಲ್ಲಿಗೆಯ ಕುಟುಂಬ ಮುಂದಿನ ಸಂಗ್ರಹಗಳಲ್ಲಿ ಇಡೀ ದೇಶಕ್ಕೆ ಅನ್ವಯಿಸುವಂತೆ ಹಿಗ್ಗಿತ್ತು. ಈಗಂತೂ ಅದು ಸೃಷ್ಟಿಯನ್ನು ಆವರಿಸುವಂತೆ ಮತ್ತಷ್ಟು ಹಿಗ್ಗಿದೆ. ಆದರೆ 'ಮನೆ' ಮಾತ್ರ ಈ ಕಾವ್ಯದ ಕೇಂದ್ರ ಪ್ರತಿಮೆಯಾಗಿ ಉಳಿದುಕೊಂಡಿದೆ.

ಕೆ.ಎಸ್.ನ. ಅವರ ಕಾವ್ಯದ ಬೆಳವಣಿಗೆಯ ದೃಷ್ಟಿಯಿಂದ 'ತೆರೆದ ಬಾಗಿಲು' ಇನ್ನೊಂದು ಮಹತ್ವದ ತಿರುವು. ನಿರಲಂಕಾರತೆ, ಸರಳತೆ, ಸಹಜತೆ. ನಾಟಕೀಯತೆ ತೆರೆದ ಬಾಗಿಲು ಕವಿತೆಗಳ ಮುಖ್ಯ ಲಕ್ಷಣವಾಗಿದೆ. ಈ ಕವಿಯ ಕಾವ್ಯದ ಆರಂಭ ದಿಸೆಯಲ್ಲಿ Burns ಪ್ರಭಾವ ಮುಖ್ಯವಾದಂತೆ, ಅವರ ಕಾವ್ಯದ ಪಕ್ವ ಕಾಲದಲ್ಲಿ ಎಸ್ರಾ ಪೌಂಡ್ ಮತ್ತು ಅವನ ಕ್ಯಾಂಟೋಸ್‌ಗಳು ಅವರ ಮೇಲೆ ಗಾಢ ಪ್ರಭಾವ ಬೀರಿದಂತಿದೆ. ಆವರೆಗೆ ಕೆ.ಎಸ್.ನ. ಕಾವ್ಯದ ಮುಖ್ಯ ಲಕ್ಷಣವಾಗಿದ್ದ ಸವಿನುಡಿ ಇಲ್ಲಿ ಕಂಡು ಬರುವುದಿಲ್ಲ. ಪ್ರೀತಿಯ ವಸ್ತು ಕೂಡ ಇಲ್ಲಿ ಚಿಂತನೆಯ ನೆಲದಲ್ಲಿ ಮಂಡಿತವಾಗುತ್ತದೆ; ಭಾವನೆಯ ನೆಲೆಯಲ್ಲಿ ಅಲ್ಲ. ಮುಪ್ಪು, ಒಂಟಿತನ, ಸಾವು ಈ ಸಂಗ್ರಹದಲ್ಲಿ ಮುಖ್ಯ ವಸ್ತುಗಳೆನ್ನಬಹುದು. ಮಾಸ್ತಿಯವರ ಕಾವ್ಯದ ಪ್ರಭಾವವನ್ನು

ಅಚ್ಚರಿ ಹುಟ್ಟಿಸುವಂತೆ ಸ್ವಧರ್ಮಕ್ಕೆ ಒಗ್ಗಿಸಿಕೊಂಡಿರುವುದು ಈ ಸಂಗ್ರಹದ ಇನ್ನೊಂದು ವೈಶಿಷ್ಟ್ಯ. ತೆರೆದ ಬಾಗಿಲು ಸಂಗ್ರಹದ ಬಹಳಷ್ಟು ಕವಿತೆಗಳಲ್ಲಿ ಕಥನವಿದೆ. ಇದೊಂದು ರೀತಿಯ ನಾಟಕೀಯ ಸ್ವಗತದ ಧಾಟಿ. ಕತೆಯನ್ನು ನೆಪಕ್ಕೆ ಇಳಿಸಿ, ಕಥನವನ್ನು ಉಳಿಸಿಕೊಂಡು, ಇಡೀ ಕವಿತೆಯೇ ಒಂದು ರೂಪಕವಾಗುವ, ಪ್ರಬಂಧ ಧ್ವನಿ ನೀಡುವ ಸಹಜ ಕಾವ್ಯ ನಿರ್ಮಾಣವನ್ನು ಕೆ.ಎಸ್.ನ. ಇಲ್ಲಿ ಮಾಡಿದ್ದಾರೆ. ಕನ್ನಡ ಕಾವ್ಯಾಸಕ್ತರು ಮತ್ತು ವಿಮರ್ಶಕರು ಇದನ್ನು ತೆರೆದೆದೆಯಿಂದ ಸ್ವಾಗತಿಸಿದರೆಂಬುದು ಈಗ ಐತಿಹಾಸಿಕ ಸಂಗತಿ.

'ತೆರೆದ ಬಾಗಿಲಿ'ನಲ್ಲಿ ಮನುಷ್ಯನ ಅಸ್ತಿತ್ವದ ಅಂಚಿನಲ್ಲಿ ನಿಂತು ಬದುಕಿನ ಬಾಗಿಲನ್ನೇ ಅಷ್ಟು ಓರೆ ಮಾಡಿ ಅದರಾಚಿನ ರಹಸ್ಯದ ಅನುಭವವಾಗುವಂತೆ ಮಾಡಿದ್ದಾರೆ- (ತೆರೆದ ಬಾಗಿಲು ಮುನ್ನುಡಿಯಲ್ಲಿ ಶೇಷಗಿರಿ ರಾವ್) ಎಂಬುದು ಒಪ್ಪತಕ್ಕ ಮಾತು.

ಕುಂಕುಮ ಭೂಮಿ, ತೆರೆದ ಬಾಗಿಲು, ಆರತಿಯ ಸಂಜೆ, ಸಾಕು ಮಗ, ಕುಶಲಪ್ರಶ್ನೆ, ರೈಲ್ವೆ ನಿಲ್ದಾಣದಲ್ಲಿ, ಸಂಧ್ಯಾರಾಗ, ಇವನ ಹುಟ್ಟಿದ ಹಬ್ಬ–ಈ ಕವಿತೆಗಳು ಸಂಗ್ರಹದ ಬಹು ಮುಖ್ಯ ಕವಿತೆಗಳು. ಸಂಗ್ರಹದ ಏನು, ಕನ್ನಡ ಕಾವ್ಯದ ಬಹು ಮುಖ್ಯ ಕವಿತೆಗಳೂ ಹೌದು.

'ತೆರೆದ ಬಾಗಿಲು ಕವನದಲ್ಲಿ ನರಸಿಂಹಸ್ವಾಮಿ ವೈಯಕ್ತಿಕ ಜಗತ್ತನ್ನು ನುಡಿಕಟ್ಟಿಗೆ ಒಗ್ಗಿಸಿಕೊಳ್ಳುವ ಯತ್ನ ಬೆರಗುಗೊಳಿಸುವಷ್ಟು ಯಶಸ್ವಿಯಾಗಿದೆ '

ಅತ್ಯಂತ ವೈಯಕ್ತಿಕವೆನ್ನಿಸುವ ವಸ್ತು ತನ್ನ ತೀವ್ರ ಸಂವೇದನೆಯ ಮೂಲಕ ಸಾರ್ವತ್ರಿಕತೆ ಪಡೆಯುವುದಕ್ಕಿಂತ ಹಾಸ್ಯ, ಆಚರಣೆ. ಅಸಂಬದ್ಧತೆಯ ಮೂಲಕ ಎಲ್ಲರದಾಗುವುದು ಹೆಚ್ಚು ಕಣ್ಣಿಗೆ ಕಟ್ಟುತ್ತದೆ. ಸಾವಿನ ದುರಂತ, ಸಾವಿನ ತಮಾಷೆ, ಸಾವಿನ ಅಬ್ಸರ್ಡಿಟಿ– ಮೂರನ್ನೂ ತೋರುವ ಈ ಕವನ ಪ್ರೇಮ, ವಿರಹ, ಒಬ್ಬಂಟಿತನದ ಅವರ ವಸ್ತುಗಳನ್ನು ಅನುಭವದ ತುಟ್ಟತುದಿಗೆ ತಂದು ನೋಡುವ ಪ್ರಯತ್ನವಾಗಿಯೂ ನೋಡಬಹುದು. ಮತ್ತೊಂದು ಕುತೂಹಲಕರ ಸಂಗತಿ, ಕವಿಯ ಶೈಲಿ ಮತ್ತು ಚಿತ್ರಾರಕ್ಕಿಂತ ವಸ್ತುವಿನ ಮೇಲೆ ನಮ್ಮ ಗಮನ ನೆಡುತ್ತದೆ' (ಅಕ್ಷರ ಹೊಸಕಾವ್ಯದ ಮುನ್ನುಡಿಯಲ್ಲಿ ಪಿ. ಲಂಕೇಶ್)

> ಸಂಜೆಯೂ ಆಯಿತು, ನೀನೂ ಬಂದೆ–
> ಬಸ್ಸು ಸಿಕ್ಕಿತೆ ನಿನಗೆ ಸಂತೆಯ ದಿನ?

ಇಷ್ಟು ಕತ್ತಲೆ ಮಾಡಿಕೊಂಡು ಬರುವುದೆ ಹೇಳು ?
ನಿನ್ನ ಮಗುವಿಗೆ ಎಂದು ನಾಮಕರಣ ?

–ಹೀಗೆ ಲೋಕಾಭಿರಾಮ ಶೈಲಿಯಲ್ಲಿ ತೆರೆದ ಬಾಗಿಲು ಕವನ ಪ್ರಾರಂಭವಾಗುತ್ತದೆ. ಆಡು ಮಾತು ಮತ್ತು ಧಾಟಿಯನ್ನು ಕಾವ್ಯವಾಗಿಸುವ ಈ ರೀತಿ ಆಶ್ಚರ್ಯ ತರಿಸುತ್ತದೆ.

'ಇರುಳ ಬಾಗಿಲ ಮುಂದೆ ಹಣೆಯೊಡೆದ ಹಗಲಂತೆ ಕೆಂಪಾಗಿ
ಮುಗಿದಿತ್ತು ಒಂದು ಸಂಜೆ'
'ಅನಿಲ ಸೀಮೆಯಲಿ ಉರುಳಿ ಹೋಗುತಿದೆ ಮಣ್ಣಿನೊಂದು ಮುತ್ತು'
'ಹುಚ್ಚಿ ಬೇವಿನ ತಲೆಗೆ ಹಕ್ಕಿ ಹಾಡಿನ ಹೆಡಿಗೆ

–ಮುಂತಾದ ಕೆ. ಎಸ್. ನ. ಅವರ ಚಿತ್ರಮಯವಾದ ಉಜ್ವಲ ಸಾಲುಗಳನ್ನು ಹಿಂದೆ ನೋಡಿದವರಿಗೆ 'ತೆರೆದ ಬಾಗಿಲು' ಕವಿತೆಯ ಅಬ್ಬರವಿಲ್ಲದ, ಕಣ್ಣು ಕುಕ್ಕದ, ನಿರಾಡಂಬರ ಭಾಷೆ, ಆಶ್ಚರ್ಯ ಹುಟ್ಟಿಸೀತು· ಲಂಕೇಶ್ ಗುರುತಿಸುವಂತೆ ಕವಿಯ ಶೈಲಿ ಮತ್ತು ಚಿತ್ತಾರಕ್ಕಿಂತ ವಸ್ತುವಿನ ಮೇಲೆ ನಮ್ಮ ಗಮನ ನೆಡುವಂತಾಗುವುದು ಇದರಿಂದಾಗಿಯೇ.

***

'ನಿರಾಶೆ ಬದುಕಿನ ಅರ್ಥವಲ್ಲ' ಎನ್ನುವ ಕವಿ ಕೆ. ಎಸ್. ನರಸಿಂಹಸ್ವಾಮಿ, ಬದುಕಿನಲ್ಲಿ ಪ್ರೀತಿ ಇಟ್ಟವರು; ಬದುಕಿನಲ್ಲಿ ಪ್ರೀತಿ ಹುಟ್ಟಿಸುವ ಕಾವ್ಯ ಬರೆದವರು. ವಿಕ್ಷಿಪ್ತಗೊಳ್ಳುತ್ತಿರುವ ಆಧುನಿಕ ಮನಸ್ಸಿಗೆ ಇಂಥ ಕಾವ್ಯದ ಅಗತ್ಯವನ್ನು ಒತ್ತಿ ಹೇಳಬೇಕಾದ್ದಿಲ್ಲ.

ಡಿ. ವಿ. ಜಿ. ಅವರ ಕಾವ್ಯಶೈಲಿ

● ನರಹಳ್ಳಿ ಬಾಲಸುಬ್ರಹ್ಮಣ್ಯ

ಡಿ. ವಿ. ಗುಂಡಪ್ಪನವರ ಮೊದಲ ಕವಿತಾ ಸಂಕಲನ 'ವಸಂತ ಕುಸುಮಾಂಜಲಿ' ಪ್ರಕಟವಾದದ್ದು 1922 ರಲ್ಲಿ. 'ಮರುಳ ಮುನಿಯನ ಕಗ್ಗ'– ಅವರ ಕಡೆಯ ಸಂಕಲನ, ಅವರು ದಿವಂಗತರಾದ ನಂತರ 1984 ರಲ್ಲಿ ಪ್ರಕಟವಾಯಿತು. ಈ ನಡುವೆ ಸುಮಾರು ಐದು ದಶಕಗಳ ದೀರ್ಘ ಅವಧಿಯಲ್ಲಿ ಡಿ.ವಿ.ಜಿ.ಯವರ ಈ ಎರಡೂ ಕೃತಿಗಳೂ ಸೇರಿದಂತೆ ಒಟ್ಟು ಹನ್ನೊಂದು ಕವಿತಾ ಸಂಕಲನಗಳು ಪ್ರಕಟವಾಗಿವೆ. ನಿವೇದನ (1924), ಉಮರನ ಒಸಗೆ (1930), ಮಂಕು ತಿಮ್ಮನ ಕಗ್ಗ (1943), ಶ್ರೀ ರಾಮಪರೀಕ್ಷಣಂ (1945), ಅಂತಃಪುರ ಗೀತೆ (1950), ಗೀತ ಶಾಕುಂತಲ (1960), ಶೃಂಗಾರ ಮಂಗಳಂ (1970), ಶ್ರೀ ಕೃಷ್ಣ ಪರೀಕ್ಷಣಂ (1971), ಹಾಗೂ ಕೇತಕೀವನ (1973) – ಇವು ಡಿ.ವಿ.ಜಿ. ಅವರ ಪ್ರಕಟಿತ ಕವಿತಾ ಸಂಕಲನಗಳು. 'ಕಾವ್ಯ ಕುಸುಮಾಂಜಲಿ' – ಎಂಬ ಅವರ ಆಯ್ದ ಕವಿತಾ ಸಂಕಲನ ಇತ್ತೀಚೆಗೆ ಪ್ರಕಟವಾಗಿದೆ.

ಡಿ ವಿ ಜಿ ಯವರ ಮೊದಲ ಸಂಕಲನ 'ವಸಂತ ಕುಸುಮಾಂಜಲಿ' ಪ್ರಕಟವಾಗುವ ಸರಿಸುಮಾರು ವೇಳೆಗೇ ಬಿ.ಎಂ ಶ್ರೀ. ಅವರ 'ಇಂಗ್ಲಿಷ್ ಗೀತೆಗಳು' (1921) ಸಹ ಪ್ರಕಟವಾಯಿತು ಎಂಬುದು ಐತಿಹಾಸಿಕವಾಗಿ ಗಮನಿಸಬೇಕಾದ ಸಂಗತಿ. ಬೇಂದ್ರೆಯವರ 'ಕೃಷ್ಣಾ ಕುಮಾರಿ' (1922), ಮಾಸ್ತಿಯವರ 'ಬಿನ್ನಹ' (1922) – ಸಹ ಇದೇ ಕಾಲಕ್ಕೆ ಪ್ರಕಟವಾದಂಥವು.

ಡಿ ವಿ ಜಿ ಯವರು ತಮ್ಮ ಕಾವ್ಯರಚನೆಯನ್ನು ಆರಂಭಿಸಿದುದು – ಕನ್ನಡ ಸಾಹಿತ್ಯದ ಒಂದು ಸಂಧಿಕಾಲದಲ್ಲಿ. 'ಶ್ರೀ'ಯವರ 'ಇಂಗ್ಲಿಷ್ ಗೀತೆಗಳು'– ಕನ್ನಡ ಕಾವ್ಯ ಹಿಡಿಯಬೇಕಾದ ದಿಕ್ಕನ್ನು ಸೂಚಿಸಿದ ಸಂದರ್ಭದಲ್ಲಿಯೇ ಮಾಸ್ತಿ, ಬೇಂದ್ರೆ–ಮೊದಲಾದವರ

ಸಮಕಾಲೀನರಾಗಿ ಡಿ ವಿ ಜಿ ಯವರು ಕಾವ್ಯರಚನೆ ಆರಂಭಿಸಿದರು. ಡಿ ವಿ ಜಿ 'ಉಮರನ ಒಸಗೆ'–ಪ್ರಕಟಿಸುವ ವೇಳೆಗೆ ಪುಟ್ಟಪ್ಪನವರು, ಪು.ತಿ ನರಸಿಂಹಾಚಾರ್ ಅವರೂ ತಮ್ಮ ಕವಿತಾ ಸಂಕಲನಗಳನ್ನು ಪ್ರಕಟಿಸಿದ್ದರು. ಕನ್ನಡ ಕಾವ್ಯ ಆ ವೇಳೆಗಾಗಲೇ ಒಂದು ಸ್ಪಷ್ಟರೂಪ ಪಡೆದುಕೊಳ್ಳುವ ಹವಣಿಕೆಯಲ್ಲಿತ್ತು.

ಆ ಕಾಲದ ಲೇಖಕರ ಸಮಸ್ಯೆ–ಮುಖ್ಯವಾಗಿ ಪ್ರಾಚೀನಪೂರ್ವ ಮತ್ತು ಆಧುನಿಕ ಪಶ್ಚಿಮಗಳ ನಡುವಿನ ಸಂಘರ್ಷವಾಗಿದ್ದಿತು. ಡಿ ವಿ ಜಿ ಅವರೂ ಸಹ ತಮ್ಮ ಕಾವ್ಯ ರಚನೆಯ ಆರಂಭದಲ್ಲಿ ಈ ಸಮಸ್ಯೆಯನ್ನು ಎದುರಿಸಬೇಕಾಯಿತು. ಬಿ ಎಂ ಶ್ರೀ, ಮಾಸ್ತಿ ಅವರಂತೆ ಡಿ ವಿ ಜಿ ಯವರು ಇದರಲ್ಲಿ ಆರಿಸಿಕೊಳ್ಳಲು ಬಯಸಿದ್ದು 'ಸಮನ್ವಯ ಮಾರ್ಗ'. ಇವೆರಡರ ಅರ್ಥಪೂರ್ಣ ಹೊಂದಾಣಿಕೆ.

ಹೊಸ ಚಿಗುರು ಹಳೆ ಬೇರು ಕೂಡಿರಲು ಮರಸೊಬಗು
ಹೊಸ ಯುಕ್ತಿ ಹಳೆ ತತ್ವದೊಡಗೂಡೆ ಧರ್ಮ ॥
ಋಷಿವಾಕ್ಯದೊಡನೆ ವಿಜ್ಞಾನ ಕಲೆ ಮೇಳವಿಸೆ ।
ಜಸವು ಜನಜೀವನಕೆ – ಮಂಕುತಿಮ್ಮ ।

ಇದು ಡಿ ವಿ ಜಿ ಯವರು ರೂಢಿಸಿಕೊಂಡ ಧೋರಣೆ. ಪ್ರಾಚೀನಪೂರ್ವ ಹಾಗೂ ಆಧುನಿಕ ಪಶ್ಚಿಮಗಳೆರಡನ್ನೂ ತಮ್ಮ ವ್ಯಕ್ತಿತ್ವದಲ್ಲಿ ಮೈಗೂಡಿಸಿಕೊಳ್ಳಲು ಡಿ ವಿ ಜಿ ಶ್ರಮಿಸಿದರು. ಚಿಂತನೆಯಲ್ಲಿ ಡಿ.ವಿ.ಜಿ. ಈ 'ಸಮನ್ವಯ ಮಾರ್ಗ' ವನ್ನು ಅನುಸರಿಸಿದರೂ ಬರವಣಿಗೆಯ ಕ್ರಮದಲ್ಲಿ ಅವರು ಆರಿಸಿಕೊಂಡದ್ದು–ಪ್ರಾಚೀನ ರೂಪವನ್ನೇ. ಅದಕ್ಕೆ ಕಾರಣಗಳನ್ನು ಹುಡುಕುವ ಪ್ರಯತ್ನವನ್ನು ಈ ಲೇಖನದ ವ್ಯಾಪ್ತಿಯಲ್ಲಿ ನಡೆಸಲು ಪ್ರಯತ್ನಿಸಿದ್ದೇನೆ.

ಬಿ.ಎಂ.ಶ್ರೀ. ಮಾಸ್ತಿ ಕುವೆಂಪು- ಮೊದಲಾದವರಂತೆ ಡಿ ವಿ ಜಿ ಅವರಿಗೆ ಕ್ರಮಬದ್ಧ ಕಾಲೇಜು ವಿದ್ಯಾಭ್ಯಾಸ ದೊರಕಲಿಲ್ಲ. ಇವರ ವಿದ್ಯೆಯೆಲ್ಲಾ ಸ್ವಯಾರ್ಜಿತವಾದುದು. ಕನ್ನಡದಲ್ಲಿ ಕಾರಂತರನ್ನು ಮಾತ್ರ ಡಿ ವಿ ಜಿ ಅವರಿಗೆ ಹೋಲಿಸಬಹುದು. ಬಹುಮುಖ ಆಸಕ್ತಿಯ ಈ ಇಬ್ಬರೂ ತಮ್ಮ ಪ್ರತಿಭೆಯನ್ನು ಹತ್ತು ಹಲವು ರೂಪಗಳಲ್ಲಿ- ಮುಖ್ಯವಾಗಿ- ಸಾಮಾಜಿಕ ಆಸಕ್ತಿಗಳಲ್ಲಿ ತೊಡಗಿಸಿದಂಥವರು.

ಡಿ.ವಿ.ಜಿ. ಅವರು- ಕ್ರಮಬದ್ಧವಾಗಿ ಕಲಿತ ವಿದ್ಯೆಯೆಂದರೆ- ಬ್ರಹ್ಮರ್ಷಿ ಹಾನಗಲ್ ವಿರೂಪಾಕ್ಷ ಶಾಸ್ತ್ರಿಗಳಿಂದ ವೇದಾಂತ ಅಧ್ಯಯನ. ಡಿ ವಿ ಜಿ ಅವರಿಗಿದ್ದ ಆಳವಾದ

ಸಂಸ್ಕೃತ ಜ್ಞಾನಕ್ಕೆ ಈ ಹಿನ್ನೆಲೆಯಿದೆ.

ಡಿ ವಿ ಜಿ ಯವರು ತಮ್ಮ ವೃತ್ತಿಯನ್ನಾರಂಭಿಸಿದ್ದು ಪತ್ರಿಕೋದ್ಯಮಿಯಾಗಿ, ಪತ್ರಿಕಾ ಕ್ಷೇತ್ರದಲ್ಲಿ ಅವರ ಸೇವೆ ಸ್ಮರಣೀಯವಾದುದು. ರಾಜಕೀಯ, ಸಾಮಾಜಿಕ, ಆರ್ಥಿಕ ವಿಷಯಗಳ ಮೇಲೆ ಅವರು ಅತ್ಯಂತ ಪರಿಣಾಮಕಾರಿಯಾಗಿ ಲೇಖನ ಬರೆಯಬಲ್ಲ ಪ್ರತಿಭಾವಂತರೆನ್ನಿಸಿದ್ದರು. ಪ್ರಾಂತೀಯ, ರಾಷ್ಟ್ರೀಯ ರಾಜಕೀಯದ ಬಗ್ಗೆ ಅವರ ವಿಮರ್ಶೆ– ಆಡಳಿತಗಾರರಿಗೆ ಮಾರ್ಗದರ್ಶಿ ಬರಹಗಳಾಗಿದ್ದುವು. ಒಂದು ರೀತಿಯಲ್ಲಿ ಪತ್ರಿಕೋದ್ಯಮ ಅವರನ್ನು—ಸಾರ್ವಜನಿಕ ಕ್ಷೇತ್ರದಲ್ಲಿ ಅತ್ಯಂತ ಕ್ರಿಯಾಶೀಲರನ್ನಾಗಿಸಿತು.

ಡಿ ವಿ ಜಿ ಅವರ ಕಾರ್ಯಕ್ಷೇತ್ರ– ಮುಖ್ಯವಾಗಿ ಸಾರ್ವಜನಿಕ ಕ್ಷೇತ್ರ. ಅವರ ಎಲ್ಲ ಬರಹಗಳೂ- ಅದು ವೈಚಾರಿಕ ಲೇಖನವೇ ಆಗಿರಲಿ, ತಾತ್ವಿಕ ಚರ್ಚೆಯೇ ಆಗಿರಲಿ, ಕಾವ್ಯ ರಚನೆಯೇ ಆಗಿರಲಿ- ಅದು ಸಾರ್ವಜನಿಕ ಬದುಕನ್ನು ಹಸನುಗೊಳಿಸುವ ಉದ್ದೇಶ ಪಡೆದಿತ್ತು. ಅವರ ಒಂದು ಮುಖ್ಯ ಕೃತಿಯ ಹೆಸರು 'ಜೀವನ ಸೌಂದರ್ಯ ಮತ್ತು ಸಾಹಿತ್ಯ'. 'ಜೀವನ ಸೌಂದರ್ಯ'– ವಿ ಸೀ ಅವರು ಸರಿಯಾಗಿಯೇ ಗುರುತಿಸಿರುವಂತೆ ಡಿ ವಿ ಜಿ ಅವರ ಸಾಹಿತ್ಯದ ಕೇಂದ್ರ ಆಶಯವೆನ್ನಬಹುದು. ಸಾಹಿತ್ಯವೇ ಆಗಲೀ, ಸಂಗೀತವೇ ಆಗಲೀ, ನೃತ್ಯವೇ ಆಗಲೀ, ಚಿತ್ರಕಲೆಯೇ ಆಗಲೀ, ವಿಜ್ಞಾನವೇ ಆಗಲೀ- ಅದರ ಉದ್ದೇಶ ಜೀವನ ಸೌಂದರ್ಯವನ್ನು ಕಾಪಾಡುವಂಥದಾಗಿರಬೇಕೆಂಬುದು ಡಿ ವಿ ಜಿ ಅವರ ಖಚಿತವಾದ ನಿಲುವಾಗಿತ್ತು. "ಕಾವ್ಯವು ಬರಿಯ ವಿನೋದಕ್ಕೋಸ್ಕರವಲ್ಲ, ಮನಃಪರಿಪಾಕಕ್ಕೋಸ್ಕರ... ಸಾಹಿತ್ಯವೆಂಬುದು ಜನಜೀವನವನ್ನು ಉನ್ನತಿಗೆತ್ತುವುದಕ್ಕೆ ಅವಶ್ಯವಾಗಿರುವ ಆಯುಧ. ದೇಶದಲ್ಲಿಯ ಎಲ್ಲ ಮತಗಳ, ಎಲ್ಲ ವರ್ಗಗಳ ಮತ್ತು ಎಲ್ಲ ಕಸುಬುಗಳ ಜನರಲ್ಲಿಯೂ ಜ್ಞಾನವನ್ನೂ ವಿವೇಕವನ್ನೂ ಬೆಳೆಸಿ ಅವರ ಧ್ಯೇಯಗಳನ್ನು ಉನ್ನತಗೊಳಿಸಿ, ಅವರ ಲೌಕಿಕ ಯೋಗ್ಯತೆಯನ್ನು ಅಭಿವೃದ್ಧಿ ಪಡಿಸುವುದು ಸಾಹಿತ್ಯದ ಕೆಲಸ" (ಜೀವ ಸಾರ್ಥಕ್ಯ ದೀಪಿಗೆ : ಪುಟ 121) 'ತನ್ನ ಜನಕ್ಕೆ ಯಾವುದನ್ನು ತಿಳಿಸಿದರೆ ಅವರ ಜೀವನ ಉತ್ತಮವಾದೀತೋ ಅವರಿಗೆ ಯಾವುದನ್ನು ತಿಳಿಯಪಡಿಸುವುದು ಅವಶ್ಯಕವೋ ಅದನ್ನು ಪ್ರಿಯವಾಗುವ ರೀತಿಯಲ್ಲಿ ತಿಳಿಸುವುದು ಕವಿಯ ಕರ್ತವ್ಯ' (ಶ್ರೀ ಕೃಷ್ಣ ಪರೀಕ್ಷಣಂ)

ಆದ್ದರಿಂದಲೇ ಡಿ ವಿ ಜಿ ಅವರು ಹೀಗೆ ಹೇಳುತ್ತಾರೆ: 'ಸಾಹಿತ್ಯದಲ್ಲಿ ಪ್ರಕಾರ ನವೀನತೆಗಿಂತ ಮುಖ್ಯವಾದದ್ದು ವಿಷಯ ನವೀನತೆ. ವಿಷಯ ನವೀನತೆಯುಂಟಾಗಬೇಕಾದರೆ ಲೇಖಕರ ಮತ್ತು ಬೋಧಕರ ಅಂತಃಕರಣ ಕೋಶದಲ್ಲಿ ಪರಿಪರಿಯ ನೂತನ ಜ್ಞಾನಗ

ಳೂ ನೂತನ ಭಾವಗಳೂ ತುಂಬಿರಬೇಕು.. ಒಂದು ಹೊಸ ಸ್ವತಂತ್ರ ಬುದ್ಧಿ ಸಂಚಾರ, ಒಂದು ಹೊಸ ದೃಷ್ಟಿ ವಿಶಾಲತೆ, ಒಂದು ಹೊಸ ಜೀವನ ಕರ್ತವ್ಯ ಯೋಗ್ಯತೆ, ಒಂದು ಹೊಸ ಪ್ರಪಂಚ ಸಹಾನುಭೂತಿ- ಇವು ನಾವು ಬಯಸುವ ನವೀನತೆಯ ಲಕ್ಷಣಗಳು.' (ಸಾಹಿತ್ಯಶಕ್ತಿ)

ಡಿ ವಿ ಜಿ ಅವರಿಗೆ ವಿಷಯ ನವೀನತೆ ಮುಖ್ಯವೆನ್ನಿಸಿತೇ ಹೊರತು 'ಪ್ರಕಾರ ನವೀನತೆ' ಮುಖ್ಯವೆನ್ನಿಸಲಿಲ್ಲ. ಆದ್ದರಿಂದಲೇ ಅವರು ನಮಗೆ ಒಬ್ಬ ಜ್ಞಾನಪಿಪಾಸುವಿನಂತೆ ಕಾಣಿಸುತ್ತಾರೆಯೇ ಹೊರತು ಪ್ರಯೋಗಶೀಲ ಸಾಹಿತಿಯಂತೆ ಕಾಣಿಸುವುದಿಲ್ಲ. ನವೋದಯದ ಉಳಿದ ಕವಿಗಳಿಗಿಂತ ಡಿ ವಿ ಜಿ ಅವರು ಭಿನ್ನವಾಗುವುದು ಇಲ್ಲಿಯೇ. ಹೇಗೆ ಹೇಳಬೇಕೆಂಬುದಕ್ಕಿಂತ ಏನು ಹೇಳಬೇಕೆಂಬುದೇ ಅವರಿಗೆ ಮಹತ್ವವಾಗಿದ್ದಂತೆ ತೋರುತ್ತದೆ. 'ಸಾಹಿತ್ಯದಲ್ಲಿ ಇದು ಹೊಸದು, ಇದು ಹಳೆಯದು ಎಂಬ ವಿವೇಚನೆ ಚರಿತ್ರಕಾರನಿಗೆ ತಕ್ಕದ್ದೇ ಹೊರತು ರಸಾಭಿಮಾನಿಗೆ ಬೇಕಾದ್ದಲ್ಲ. ಹಾಗೆಯೇ ಕವಿಯ ವಾಕ್ಯವಿಧಾನದ ಪ್ರಶ್ನೆಯೂ ಅಪ್ರಕೃತ. ಕವಿಯು ಮಾತನ್ನು ಹೇಗೆ ಜೋಡಿಸಿದ್ದರೆ ಏನು ? ಅದರಿಂದ ಭಾವ ಸ್ಫೂರ್ತಿಯಾಯಿತೇ ರಸಾನುಭವವಾಯಿತೇ ?–ಎಂಬುದಷ್ಟೇ ಪ್ರಶ್ನೆ.' (ಬಾಹುಬಲಿ ವಿಜಯದ ಮುನ್ನುಡಿ)

ಇದು ಡಿ.ವಿ.ಜಿ. ಅವರಿಗೆ ಅಭಿವ್ಯಕ್ತಿ ಸಾಧ್ಯತೆಗಳ ಬಗ್ಗೆ, ರೀತಿಯ ಬಗ್ಗೆ– ಅಷ್ಟಾಗಿ ಆಸಕ್ತಿಯಿರಲಿಲ್ಲವೆಂಬುವನ್ನು ಸೂಚಿಸುತ್ತದೆ. 'ಪದಗಳಿಗಾಗಿ ಹುಡುಕಾಡುವುದಕ್ಕೆ ಮೊದಲು ಅಭಿಪ್ರಾಯಗಳಿಗಾಗಿ ಚಿಂತಿಸಬೇಕು. ಗ್ರಂಥದಲ್ಲಿ ಗ್ರಂಥಿ ಇರಬೇಕು ಎಂದರೆ ಬುದ್ಧಿಗೆ ಕೆಲಸವಿರಬೇಕು – ಅದು ಒಂದು ಹೊಸ ಜ್ಞಾನವನ್ನು ನೀಡಬೇಕು'

(ಜೀವನ ಸೌಂದರ್ಯ ಮತ್ತು ಸಾಹಿತ್ಯ)

-ಮೇಲಿನ ಡಿ ವಿ ಜಿ ಅವರ ಆಲೋಚನೆಗಳನ್ನು ಗಮನಿಸಿದಾಗ ಅವರು ವಿಷಯ ಪ್ರತಿಪಾದನೆಗೆ ಕೊಟ್ಟ ಮಹತ್ವವನ್ನು ಅದನ್ನು ಹೇಳುವ ರೀತಿಗೆ ಕೊಡಲಿಲ್ಲವೆಂಬುದನ್ನು ನಾವು ಕಾಣಬಹುದು. ಹೇಳುವ ವಿಷಯವು ಹೇಳುವ ರೀತಿಯನ್ನೂ ಒತ್ತಾಯಿಸುತ್ತದೆ-ಎಂಬ ಬಗ್ಗೆ ಅವರು ಚಿಂತಿಸಲಿಲ್ಲವೆಂದಲ್ಲ. ಆದರೆ ಅದಕ್ಕೆ ಅವರು ನೀಡಬೇಕಾದ ಗಮನವನ್ನು ನೀಡಲಿಲ್ಲ.

ಹೀಗಾಗಿ ಡಿ ವಿ ಜಿ ಅವರಿಗೆ ಭಾಷೆ– ಒಂದು ಪಾರದರ್ಶಕ ವಸ್ತು ಅಷ್ಟೇ. ವಿಚಾರಗಳನ್ನು ಸಂವಹನ ಪಡಿಸಲು ಇರುವ ಒಂದು ಸಾಧನ. ಇಲ್ಲಿಯೂ ಒಂದು ಮುಖ್ಯವಾದ ಸಂಗತಿಯನ್ನು ನಾವು ಗಮನಿಸಬೇಕು; ನವೋದಯ ಕಾವ್ಯ ಸಂದರ್ಭದ ಬಹುಜನ

ಲೇಖಕರಲ್ಲಿ 'ಭಾಷೆ ಒಂದು ಪಾರದರ್ಶಕ' ಎಂಬ ಅಭಿಪ್ರಾಯವೇ ಇದ್ದಿತು. ಅವರ ಅನುಭವದ ಸಂವಹನೆಗೆ ಅದು ವಾಹಕವೆಂಬ ರೀತಿಯಲ್ಲಿ ಅವರಲ್ಲಿ ಅದು ಬಳಕೆಯಾಗಿದೆ. ಡಿ ವಿ ಜಿ ಅವರಲ್ಲಿ ಭಾಷೆ ಅನುಭವದ ವಾಹಕವೂ ಅಲ್ಲ– ಅದು ವಿಚಾರ ವಾಹಕ. ಅನುಭವದ ಭಟ್ಟಿಯಿಳಿಸಿದ ಸಾರವನ್ನು ಹೇಳುವ ಒಂದು ಸಾಧನೆ.

ಡಿ ವಿ ಜಿ ಯವರಲ್ಲಿ ಭಾವನೆಗಿಂತ ಬುದ್ಧಿ. ಸಂವೇದನೆಗಿಂತ ಕುಶಾಗ್ರಮತಿ- ಪ್ರಧಾನವಾಗಿ ಕಾಣಿಸುತ್ತದೆ 'ಕಾವ್ಯವನ್ನು ಬರಿಯ ಕಣ್ಣೀರು ಕೇಕೆ ಜೊಲ್ಲುಗಳ ಕೆಸರು ತೊಪ್ಪೆಯಾಗಿಸದೆ, ಅವಕ್ಕೆ ಆಕಾರ ಸ್ಪಷ್ಟತೆಯನ್ನು ಅವಯವ ದೃಢತೆಯನ್ನೂ ಕೊಡುವ ಗಟ್ಟಿ ಯೆಲುಬು ಬುದ್ಧಿ' ಎಂದು ಅವರು ಹೇಳುವಾಗ ಕಾವ್ಯ ಬೌದ್ಧಿಕಾಂಶವನ್ನು ಪಡೆದುಕೊಳ್ಳಬೇಕೆಂಬುದು ಒಪ್ಪತಕ್ಕುದಾದರೂ, ಕಾವ್ಯದಲ್ಲಿನ ಭಾವನಾಂಶವನ್ನು ಅವರು ಲೇವಡಿ ಮಾಡುವ ಕ್ರಮ ಆ ಬಗೆಗೆ ಅವರಿಗಿರುವ ಮನೋಭಾವವನ್ನು ಸೂಚಿಸುತ್ತದೆ. ಆದ್ದರಿಂದಲೇ ಡಿ ವಿ ಜಿ ಅವರಿಗೆ ಅನುಭವಕ್ಕಿಂತ ಅನುಭವದಿಂದ ಕಲಿತಪಾಠ, ಅದರ ಸಾರ ಮುಖ್ಯವಾಯಿತು. 'ಮಂಕುತಿಮ್ಮನ ಕಗ್ಗ'– ಹುಟ್ಟಿಕೊಂಡದ್ದು ಈ ಹಿನ್ನೆಲೆಯಲ್ಲಿ. ನಾನು ಇಲ್ಲಿ ಡಿ ವಿ ಜಿ ಯವರ ಕಾವ್ಯದ ಗುಣದೋಷಗಳನ್ನು ಕುರಿತು ಚರ್ಚಿಸುವುದಕ್ಕಿಂತ ಅವರ ಬರವಣಿಗೆಯ ಕ್ರಮದ ಬಗ್ಗೆ ನನ್ನ ಆಸಕ್ತಿಯಿದೆ.

ಕಾವ್ಯರಚನೆಯಲ್ಲಿ ಅನುಭವದ ಶೋಧ, ಉತ್ಕಟತೆ- ಡಿ ವಿ ಜಿ ಅವರ ಕಾಳಜಿ ಅಲ್ಲವೇ ಅಲ್ಲ. ಅದರ ಸಾರವಷ್ಟೇ ಅವರಿಗೆ ಮುಖ್ಯ. ಆದ್ದರಿಂದಲೇ ಡಿ ವಿ ಜಿ ಅವರಲ್ಲಿ ಉತ್ಕಟವಾದ ಭಾವ ತೀವ್ರತೆಯಾಗಲಿ, ಅದರ ಸಂದಿಗ್ಧತೆ, ಸಂಕೀರ್ಣತೆಗಳಾಗಲೀ ಕಾಣಿಸುವುದಿಲ್ಲ.

ಇದರಿಂದಾಗಿ ಡಿ ವಿ ಜಿ ಅವರ ಕಾವ್ಯಶೈಲಿಯನ್ನು ಈ ಕೆಳಗಿನ ಅಂಶಗಳು ನಿರ್ಧರಿಸಿರುವಂತೆ ನನಗೆ ತೋರುತ್ತದೆ.

1) ಡಿ ವಿ ಜಿ ಅವರ ನಿಶಿತವಾದ ವಿಚಾರ ಶಕ್ತಿ
2) ಅವರ ಸಾಮಾಜಿಕ ಆಸಕ್ತಿ
3) ಅನುಭವಗಳಿಗಿಂತ ಅದರ ಫಲಿತಗಳಿಗೆ ಅವರು ಕೊಡುವ ಪ್ರಾಮುಖ್ಯತೆ
4) ಅವರ ಬೌದ್ಧಿಕ ಪ್ರಖರತೆ
5) ಪತ್ರಿಕೋದ್ಯಮದ ಬರವಣಿಗೆ

ಈ ಜೀವನದ ಸೌಂದರ್ಯವನ್ನು ಕಾಪಾಡಿಕೊಳ್ಳುವುದೇ ಬಹಳ ಮುಖ್ಯವಾದುದು–

ಎಂಬ ನಂಬಿಕೆಯಿಂದ ತನ್ನ ಎಲ್ಲ ಶಕ್ತಿಗಳನ್ನು ಅವನ್ನು 'ತಿಳಿಸಿಕೊಡುವ' ಉದ್ದೇಶಕ್ಕೆ ಡಿ ವಿ ಜಿ ಅವರು ಬಳಸಿಕೊಂಡುದರಿಂದ ಸಹಜವಾಗಿಯೇ ಅವರ ಕಾವ್ಯ ಶೈಲಿ 'ಮಂಕುತಿಮ್ಮನ ಕಗ್ಗ'ದ ಧಾಟಿಯನ್ನು ಹಿಡಿಯಿತು. ಕವಿಯಾಗುವುದಕ್ಕಿಂತ 'ಸಂತ'ನಾಗುವುದು ಅವರಿಗೆ ಪ್ರಿಯವಾಯಿತು.

ಈ ಸಂದರ್ಭದಲ್ಲಿ ಡಿ ವಿ ಜಿ ಅವರೇ ಉಲ್ಲೇಖಿಸುವ ಮಾಥ್ಯೂ ಆರ್ನಾಲ್ಡ್ ಕವಿಯ ಉಪಾಖ್ಯಾನವೊಂದನ್ನು ಸ್ಮರಿಸಿಕೊಳ್ಳಬಹುದು. 'ಇಟಲಿ ದೇಶದ ಕವಿಯೊಬ್ಬನು ಒಂದು ಹಬ್ಬದ ದಿವಸ ಜನರ ವಿನೋದ ಕೂಟವನ್ನು ನೋಡುವುದಕ್ಕೆಂದು ತನ್ನ ಹೆಂಡತಿಯೊಡನೆ ಊರ ಚೌಕಕ್ಕೆ ಬಂದನು. ಆಕೆ ಪ್ರಾಯದವಳು, ಸುಂದರಿ. ಉಡಿಗೆ ತೊಡಿಗೆಗಳೊಡನೆ ಸಿಂಗಾರವಾಗಿ ಬಂದಿದ್ದಳು. ಅವರು ಅಲ್ಲಿದ್ದ ಒಂದು ಮರದ ಹಲಗೆಯ ಜಗುಲಿಯ ಮೇಲೆ ಕುಳಿತುಕೊಂಡರು. ಆದರೆ ಅಕಸ್ಮಾತ್ತಾಗಿ ಆ ಜಗಲಿಯ ಕೆಳ ಗಂಬವೊಂದು ಮುರಿಯಲು ಆ ಹಲಗೆಗಳು ಕುಸಿದು, ಅವುಗಳ ಮೇಲಿದ್ದ ಆ ಸುಂದರಿಯು ಉರುಳಿಬಿದ್ದು ಸತ್ತಳು. ಆಗ ಅಲ್ಲಿ ನೆರೆದ ಜನರು ಶವವನ್ನು ಪರೀಕ್ಷಿಸಿ ನೋಡುತ್ತಾರೆ– ಅದೊಂದು ವಿಚಿತ್ರ! ಆಕೆಯ ಸೊಗಸಾದ ಉಡುಪುಗಳ ಒಳಗಡೆ ಚರ್ಮಕ್ಕಂಟಿಕೊಂಡಿದ್ದುದು ವಿರಕ್ತಿಸೂಚಕವಾದ ನಾರುಡಿ ಅಥವಾ ಕಾವಿ. ಹೀಗಿರತಕ್ಕವಳು ಕಾವ್ಯದೇವಿ. ಮೇಲೆ ಅಲಂಕಾರ ಒನಪು ಒಯ್ಯಾರ; ಒಳಗೆ ಚಿಂತೆ 'ಪ್ರಜ್ಞೆ' ಶಮೆ.

ಇದು ಡಿ ವಿ ಜಿ ಅವರ ಶೈಲಿಯನ್ನು ಸೊಗಸಾಗಿ ಪ್ರತಿಬಿಂಬಿಸುತ್ತದೆ. ಕಾವ್ಯ ಪರಿಕರಗಳನ್ನು ಡಿ ವಿ ಜಿ– ಚೆನ್ನಾಗಿ ಬಲ್ಲರು; ಅವುಗಳನ್ನು ಅವಕಾಶವಿದ್ದಾಗ ಬಳಸಿಕೊಂಡಿಯೂ ಇದ್ದಾರೆ. ಆದರೆ ಅದೆಲ್ಲ– ಅನುಭವದ ಶೋಧಕ್ಕಲ್ಲ; ಜೀವನಾನುಭವದ ಸಾರವನ್ನು ತಿಳಿಯಹೇಳುವುದಕ್ಕಾಗಿ ಮಾತ್ರ. ನಾನು ಮೊದಲೇ ಹೇಳಿದಂತೆ ಅನುಭವ ಡಿ ವಿ ಜಿ ಅವರಿಗೆ ಮುಖ್ಯವಲ್ಲ; ಅದರ ಫಲಿತದ ಬಗ್ಗೆ ಮಾತ್ರ ಅವರ ಆಸಕ್ತಿ. ಆದರೆ ನಿಜವಾದ ಕಾವ್ಯ ಅನುಭವದ ಗುದ್ದಾಟದೊಡನೆ ಮಾತ್ರ ಹುಟ್ಟುತ್ತದೆ.

ಡಿ ವಿ ಜಿ ಅವರ ಈ ಮನೋಭಾವ ಹಾಗೂ ಶೈಲಿಗೆ ಸಂಸ್ಕೃತದ ಅವರ ಆಳವಾದ ತಿಳುವಳಿಕೆಯೂ ನೆರವಿಗೆ ಬಂದಿತು. ಸುಭಾಷಿತ, ನೀತಿಶತಕ, ಅನ್ಯೋಕ್ತಿ– ಈ ಮಾದರಿಗಳನ್ನು ಅವರು ಔಚಿತ್ಯಪೂರ್ಣವಾಗಿ ಬಳಸಿಕೊಂಡರು. ತೆಲುಗಿನ ವೇಮನ. ಕನ್ನಡದ ಸರ್ವಜ್ಞ–ಹಿನ್ನೆಲೆಗಿದ್ದರು. ಈ ಎಲ್ಲವೂ ಹದವಾಗಿ ಕೂಡಿಬಂದು– ಮಂಕುತಿಮ್ಮನ ಶೈಲಿಯೆಂದು ರೂಪುಗೊಂಡಿತು.

ಇಲ್ಲಿ ಇನ್ನೊ ಒಂದು ಅಂಶವನ್ನು ಗಮನಿಸಬೇಕು. ಡಿ ವಿ ಜಿ ಯವರ ಆಸಕ್ತಿ ಸಾಮಾನ್ಯ ಮನುಷ್ಯನ ಬದುಕನ್ನು ಉತ್ತಮಪಡಿಸುವ ಆಶಯವಿದ್ದಂಥದು. ಪಂಡಿತ ಮಂಡಳಿಯಾಗಲಿ, ವಿಮರ್ಶಕ ವೃಂದವಾಗಲೀ ಅವರ ಗಮನದಲ್ಲಿರಲಿಲ್ಲ 'ಮಂಕುತಿಮ್ಮನ ಕಗ್ಗದ' ಮುನ್ನುಡಿಯಲ್ಲಿ ಅವರು ಹೀಗೆ ಹೇಳುತ್ತಾರೆ. 'ಇದು ಪಂಡಿತರನ್ನೂ ಪ್ರಸಿದ್ಧರನ್ನೂ ಪುಷ್ಟರನ್ನೂ ಉದ್ದೇಶಿಸಿದ್ದಲ್ಲ; ಬಹು ಸಾಮಾನ್ಯರಾದವರ ಮನೆಯ ಬೆಳಕಿಗೆ ಒಂದು ತೊಟ್ಟಿನಷ್ಟು ಎಣ್ಣೆಯಂತಾದರೆ ನನಗೆ ತೃಪ್ತಿ' ಈ ಉದ್ದೇಶವೂ ಸಹ ಭಟ್ಟಿಯಿಳಿಸಿದ ಜೀವನಾನುಭವದ ಸಾರವನ್ನು ಸೂಕ್ತಿ ರೂಪದಲ್ಲಿ ಸಂಗ್ರಹವಾಗಿ, ಸರಳವಾಗಿ, ನೇರವಾಗಿ ಹೇಳುವ ವಿಧಾನಕ್ಕೆ ಅನುವು ಮಾಡಿಕೊಟ್ಟಿದೆಯೆನ್ನಿಸುತ್ತದೆ.

'ಮಂಕುತಿಮ್ಮನ ಕಗ್ಗ'- ಡಿ ವಿ ಜಿ ಅವರ ಜನಪ್ರಿಯ, ಪ್ರಾತಿನಿಧಿಕ ಕೃತಿ. ಹೀಗಾಗಿ ಅಲ್ಲಿ ಅವರು ರೂಢಿಸಿಕೊಂಡಿರುವ ಶೈಲಿಯ ಬಗ್ಗೆ ನಾನು ಈವರೆಗೆ ವಿವರವಾಗಿ ಪ್ರಸ್ತಾಪಿಸಿದ್ದೇನೆ. 'ಉಮರನ ಒಸಗೆ' ಯಲ್ಲಿಯೇ ಡಿ ವಿ ಜಿ ಯವರು ಈ ರೀತಿಯ ಪ್ರಯೋಗ ಮಾಡಿದರು. ಅದು 'ಮಂಕುತಿಮ್ಮನ ಕಗ್ಗ'ದಲ್ಲಿ ಅತ್ಯಂತ ಸಮರ್ಥವಾಗಿ ಬಳಕೆಯಾಗಿದೆ. ಉಳಿದ ಅವರ ಕಾವ್ಯವೆಲ್ಲವೂ ಬಹುಪಾಲು ಹಳಗನ್ನಡ, ನಡುಗನ್ನಡ ಛಂದೋರೂಪಗಳಲ್ಲಿಯೇ ರಚಿತವಾಗಿದೆ. ವೃತ್ತ, ಕಂದ, ಸೀಸಪದ್ಯ, ರಗಳೆ, ಷಟ್ಪದಿ- ಈ ಎಲ್ಲ ರೂಪಗಳನ್ನೂ ಡಿ ವಿ ಜಿ ಯವರು ಲೀಲಾಜಾಲವಾಗಿ, ಸಮರ್ಥವಾಗಿ ಬಳಸಿಕೊಂಡಿದ್ದಾರೆ. ಡಿ ವಿ ಜಿ ಅವರ ಭಾಷೆ ಹಳಗನ್ನಡದಿಂದ ಆಧುನಿಕ ಕನ್ನಡದವರೆಗೆ ಓಡಾಡುತ್ತದೆ. 'ರೂಪ' ದ ಬಗ್ಗೆ ಅವರು ಅಷ್ಟು ಪ್ರಾಮುಖ್ಯ ಕೊಟ್ಟಿರಲಿಲ್ಲವೆನ್ನುವುದೇ ಇದಕ್ಕೆ ಕಾರಣವಾಗಿದೆ. 'ವನಸುಮ'– ಆಡುಮಾತಿಗೆ ತೀರ ಹತ್ತಿರವಾಗಿದ್ದು ಆಪ್ತವಾಗಿದ್ದರೆ, 'ಶಿವನ ಸಮುದ್ರ' ಎಂಬ ಕವಿತೆ ವೃತ್ತ ಕಂದ ರಗಳೆಗಳಲ್ಲಿ ರಚಿತವಾಗಿದೆ. ಎರಡು ರೀತಿಯ ಮಾದರಿಗಳನ್ನೂ ನಾವಿಲ್ಲಿ ಗಮನಿಸಬಹುದು:

ಮಾದರಿ 1

ವನಸುಮ.

ವನಸುಮದೊಲೆನ್ನ ಜೀ
ವನವು ವಿಕಸಿಸುವಂತೆ
ಮನವನನುಗೊಳಿಸು ಗುರುವೇ ಹೇ ದೇವ !

ಜನಕೆ ಸಂತಸವೀವ
ಘನನು ತಾನೆಂದೆಂಬ

ಎಣಿಕೆ ತೋರದೆ ಜಗದ ಪೊಗಳಿಕೆಗೆ ಬಾಯ್‌ಬಿಡದೆ

ಕಾನನದಿ ಮಲ್ಲಿಗೆಯು
ಮೌನದಿಂ ಬಿರಿದು ನಿಜ
ಸೌರಭವ ಸೂಸಿ ನಲವಿಂವಂ
ತಾನೆಲೆಯ ಪಿಂತಿರ್ದು
ದೀನತೆಯ ತೋರಿ ಅಭಿ
ಮಾನವನು ತೊರೆದು ಕೃತಕೃತ್ಯತೆಯ ಪಡೆವಂತೆ

ಉಪಕಾರಿ ನಾನು ಎ
ನ್ನುಪ ಕೃತಿಯು ಜಗಕೆಂಬ
ವಿಪರೀತ ಮತಿಯನುಳಿದು ॥
ವಿಪುಲಾಶ್ರಯವನೀವ
ಸುಫಲ ಸುಮ ಭರಿತ ಪಾ
ದಪದಂತೆ ನೈಜವಮಾದೊಳ್ಪಿನಿಂ ಬಾಳ್ವನೊಲು ॥

ಮಾದರಿ 2

ಗತಿಯಿಂದಸ್ಖಲಿತಮಂ । ಜನೋಪಕೃತಿಯಿಂದೌದಾರ್ಯಮಂ । ನಿತ್ಯಶು
ದ್ಧತೆಯಿಂ ಶಾಂತಿಯನು । ಪ್ರಭಾವನ ಶಿಲಾನಿರ್ಭೇದದಿಂ । ಪರ್ವತ
ಚ್ಯುತಿಯಿಂ ರೇಪ್ರವ । ತಣ್ಪಿನಿಂ ಪ್ರಿಯತೆಯಂ । ಗಾಂಭೀರ್ಯಮಂ ಘೋಷದಿಂ।
ಸತತಂ ಬೋಧಿಸುತಿರ್ಪ ದೇವಿ ಸರಸೇ ಕಾವೇರಿ ಕಾವ್ಯಾಶ್ರಯೇ ॥

ಗಿರಿಯ ಕೆಲದಿ ಬನದ ನಡುವೆ ಝರಿಯ ತೆರದಿ ಸುಳಿದು ಬರುತೆ
ತಲದ ಶಿಲೆಯನಿರಿದು ಕೊರೆದು । ಕೆಲದ ನೆಲವನಗೆದು ಮುರಿದು ।
ವಿಮಲ ಜಲದ ವಿಪುಲ ಧಾರೆ । ಯಮೃತ ಲಹರಿಯಂತೆ ತೋರೆ ।
ದಣಿವ ಕಳೆಯುವೆಲರ ಬೀರಿ । ಮೃದುಲ ರವದಿ ಮುಂದೆ ಸಾರಿ ।
ಅತ್ತಲಿತ್ತ ಸುಳಿದು ಸುತ್ತಿ । ಇತ್ತಲಿತ್ತ ಮೆಲ್ಲನೊತ್ತಿ ।
ಅಲ್ಲಿ ಬಳುಕುತಿಲ್ಲಿ ಬಾಗಿ । ಅಲ್ಲಿ ಬಳಸುತಿಲ್ಲಿ ಸಾಗಿ
ನೊರೆಯ ಸೇಸೆಗಳನು ಸೂಸಿ । ತೆರೆಯ ಚವರಗಳನು ಬೀಸಿ ।
ಬಾಲೆಯಂತೆ ನಲಿದು ಕುಣಿದು । ಕಾಳಿಯಂತೆ ಕನಲಿ ಮೊರೆದು ।

....

ಕನ್ನಡ ನಾಡಿನ ಕುತುಕಂ
ಕನ್ನಡಿಗರ ಸಾಹಸಕ್ಕೆ ಕನ್ನಡಿ ಪೋಣೀ
ಕನ್ನಡಿಗರ ಭಾಗ್ಯದ ನಿಧಿ
ಉನ್ನತಿಯಂ ಪಡೆದು ಬಾಳ್ಗೆ ಶಿವನ ಸಮುದ್ರಂ ।

ಕೇತಕೀವನ ಡಿ ವಿ ಜಿ ಅವರ ಕವನಸಂಕಲನಗಳಲ್ಲಿಯೇ ವಿಶಿಷ್ಟವಾದುದು. ಇಲ್ಲಿಯೂ ಅವರು ಹಳಗನ್ನಡ ಹಾಗೂ ನಡುಗನ್ನಡ ಛಂದೋರೂಪಗಳನ್ನೇ ಬಳಸಿದ್ದಾರೆ. ಆದರೆ ಅವರ ಆಸಕ್ತಿ– ವೈಯುಕ್ತಿಕವಾದುದು, ಆಧುನಿಕವಾದುದು. ಉಳಿದ ಸಂಕಲನಗಳಲ್ಲಿ 'ಸಾರ್ವಜನಿಕ ಧ್ವನಿ' ಕಂಡರೆ ಇಲ್ಲಿನ ಪದ್ಯಗಳಲ್ಲಿ ಮೊದಲ ಬಾರಿಗೆಂಬಂತೆ 'ವೈಯಕ್ತಿಕ ಧ್ವನಿ' ಕೇಳಿಸುತ್ತದೆ. ಸಹಜವಾಗಿಯೇ ಕಾವ್ಯಭಾವಗೀತೆಯ ಧಾಟಿ ಪಡೆದಿದೆ. ಹರಿಕಾರನ ರೀತಿಗೆ ಬದಲಾಗಿ ಇಲ್ಲಿ ಮಾನವೀಯ ಸಂಬಂಧಗಳ, ಒಳತೋಟಿಗಳ ಚಿತ್ರಣ ಕಾಣಿಸುತ್ತದೆ.

ಎದೆಯ ಗೂಡಿನೊಳೇನೊ–
ಗಲಭೆಯಾಗಿಹುದು
ವಿಧವಿಧದ ಹಕ್ಕಿಗಳು
ಚಿಲಿಗುಟ್ಟುತಿಹವು

ಹೊರಗೆ ಬಿಡಬೇಕಂತೆ
ಒಳಗೆ ಸೆಕೆಯಂತೆ
ಗರಿಬೀಸಬೇಕಂತೆ
ಕುಳಿರೆ ಜೋಮಂತೆ ।   (ಮೊದಲ ಮಾತು)

ಅಂತರಂಗದ ಒಳಗಿನ ಪಸಿಗಳು ಹೊರಹೊಮ್ಮುವ ತುಡಿತ ಇಲ್ಲಿ ಕಾಣಿಸುತ್ತದೆ. 'ನನಗೆ ಓದಲಿಕ್ಕೂ, ಯೋಚಿಸಲಿಕ್ಕೂ ಕೊಂಚ ಕೊಂಚವಾಗಿಯಾದರೂ ಬಿಡುವು ದೊರೆಯುತ್ತಿದ್ದ ಕಾಲವೊಂದಿತ್ತು. ಆ ಕಾಲದಲ್ಲಿ ಆಗಾಗ ಮನಸ್ಸಿಗೆ ಭಾವನೆಗಳು ಬರುತ್ತಿದ್ದದ್ದೂ ಉಂಟು. ಅವು ಬಂದಾಗ ಅವು ಹಾರಿಹೋಗುವುದಕ್ಕೆ ಮುನ್ನ ಅವುಗಳನ್ನು ಆಗ ತೋಚಿದ ಮಾತುಗಳಲ್ಲಿ, ಆಗ ಕೈಗೆ ಸಿಕ್ಕಿದ ಚೀಟಿಗಳಲ್ಲಿ, ಗುರುತು ಹಾಕುತ್ತಿದ್ದುದುಂಟು. ಅಂಥ ಚೀಟಿಗಳು ಈ ಪುಸ್ತಕವಾಗಿವೆ' (ಮುನ್ನುಡಿ) ಎಂದು ಡಿ ವಿ ಜಿ ಅವರು ಹೇಳಿಕೊಂಡಿದ್ದಾರೆ ಅವರ ಸಾರ್ವಜನಿಕ ಕ್ಷೇತ್ರದ ಆಸಕ್ತಿಯ ನಡುವೆ 'ಬಿಡುವು' ದೊರೆತಾಗ ಈ ಕವಿತೆಗಳು ರೂಪ ತಾಳಿವೆ. ಈ 'ಬಿಡುವು'-ಅವರ

ಸ್ವಂತವು, ಖಾಸಗಿಯಾದುದು. ಆದ್ದರಿಂದಲೇ ಇಲ್ಲಿ ಕವಿತೆ ವೈಯುಕ್ತಿಕ ಧ್ವನಿಯಾಗಿ ಕಾಣಿಸಿಕೊಂಡಿದೆ.

ಸದೆಮು ರಾಗಂಗಳನು
ಕವಿತೆಯನು ಸುಟ್ಟು
ಎದೆಯ ಮಸಣವ ಮಾಡಿ
ತವಸಿಯೆನಿಸಿರಲೆ ?

ಕೆರಳಿ ರಾಗದ ಗಾಳಿ
ಬೀಸಿ ಹೃದಯದೊಳು
ಮುರಿಯೆ ಬಾಳಿನ ಬೇರ
ಗಾಸಿವಡುತಿರಲೆ ? (ಪ್ರಶ್ನೆ)

ಮೊದಲ ಬಾರಿಗೆ ಡಿ ವಿ ಜಿ ಅವರಿಗೆ ಇಂಥ ಸಮಸ್ಯೆ – ವೈಯಕ್ತಿಕ ಸಮಸ್ಯೆ ಕಾಡಿದೆ. ಇಂಥ ಕಡೆ ನಾವು ಕಾಣುವ ತೀವ್ರತೆಗೂ, ಇಲ್ಲಿ ಅವರು ಕೇಳುವ ಪ್ರಶ್ನೆಗೂ, ಮಂಕುತಿಮ್ಮನ ಕಗ್ಗದಲ್ಲಿ ಬರುವ ಪ್ರಶ್ನೆಗಳ ಸರಮಾಲೆಗೂ ಇರುವ ವ್ಯತ್ಯಾಸವೇ ಇಲ್ಲಿಯ ಹಾಗು ಅಲ್ಲಿಯ ಅವರ ಕಾವ್ಯಶೈಲಿಯ ವ್ಯತ್ಯಾಸವೂ ಆಗಿದೆ.'

'ಸದಾಸಂಜೆ'– ಕವಿತೆಯಲ್ಲಿ ಕಾಣುವ ವಿಷಾದ ಡಿ ವಿ ಜಿ ಅವರ ಒಟ್ಟು ಕಾವ್ಯವ ನ್ನೋದಿದಾಗ ವಿಶಿಷ್ಟವೆನಿಸುತ್ತದೆ.

ನೇಸರಿದ್ದೊಡದೇನು ?
ಪಗಲುಮೆನಗಲ್ಲ ;
ಮಬ್ಬು ಕವಿದೊಡದೇನು ?
ಇರುಳುಮೆನಗಲ್ಲ;
ಎಲ್ಲ ವೇಳೆಗಳೆನಗೆ
ಸಂಜೆಯಾಗಿಹವು

ಜಿ.ಎಸ್. ಆಮೂರರು ಇದನ್ನು Miltonic Overtone ಎಂದು ಗುರ್ತಿಸುತ್ತಾರೆ. 'ಒಟ್ಟನಲ್ಲಿ ಈ ಪುಸ್ತಕ ಇಂಗ್ಲೀಷಿನ ಪ್ರಭಾವ ಹೆಚ್ಚಾಗಿರುವವರ ಪ್ರಯತ್ನ. ಮಹಾಜನರು ದಯೆತೋರಬೇಕು' (ಮುನ್ನುಡಿ, ಕೇಶಕೀವನ) ಎಂದು ಡಿ ವಿ ಜಿ ಕ್ಷಮಾಧಾಟಿಯಲ್ಲಿ ಹೇಳಿರುವುದನ್ನು ಗಮನಿಸಿದರೆ ಆಧುನಿಕ ಶೈಲಿಗಿಂತ, ಪ್ರಾಚೀನ ರೂಪಗಳ ಬಗ್ಗೆಯೇ ಅವರ ಒಲವು ಗಾಢವಾಗಿದ್ದಿತು ಎಂದು ನಾವು ಅಭಿಪ್ರಾಯ ಪಡಬೇಕಾಗಿದೆ. ಆಧುನಿಕ ಪ್ರಕಾರಗಳ ಬಗ್ಗೆಯೇ ಅವರಿಗೆ ಒಂದು ರೀತಿಯ ಸಂಕೋ

ಚವಿದ್ದಂತೆ ಕಾಣಿಸುತ್ತದೆ. ಅಂಥ ಪ್ರಯತ್ನ ಮಾಡಿದಾಗಲೂ ಅವರು ಅರಿಮನಸ್ಸಿನಿಂದಲೇ ಪ್ರಯತ್ನಿಸಿದ್ದಿರಬೇಕು.

ಡಿ ವಿ ಜಿ ಯವರು ಕವಿ ಸಹಜ ಮನೋಭಾವವುಳ್ಳವರು ಎಂಬುದಕ್ಕೆ ಅವರ ಕಾವ್ಯದಲ್ಲಿ ನಮಗೆ ಸಾಕಷ್ಟು ಪುರಾವೆಗಳು ಸಿಗುತ್ತವೆ. ಆದರೆ ಅವರು ಅದನ್ನು ಜೀಕೆಂದೇ ಮೀರಿನಿಂತು ಸಮಾಜ ಸುಧಾರಕನ ಪಾತ್ರವನ್ನು, ಸಂತನ ಧಾಟಿಯನ್ನು ತಮ್ಮ ವ್ಯಕ್ತಿತ್ವದ ಪ್ರಧಾನ ಅಂಶವನ್ನಾಗಿ ಮಾಡಿಕೊಂಡದ್ದು ಅವರ ಕಾವ್ಯಶೈಲಿಯನ್ನೂ ರೂಪಿಸಿದಂತೆ ತೋರುತ್ತದೆ. ಆದ್ದರಿಂದಲೇ 'ಮಂಕುತಿಮ್ಮನ ಕಗ್ಗ' ಅವರ ಪ್ರಾತಿನಿಧಿಕ ಸಂಕಲನವಾಗಿ. ಉಳಿದವು ಕಾವ್ಯದಾಖಲೆಗಳಾಗಿ ಮಾತ್ರ ಉಳಿದದ್ದು.

ಡಿ ವಿ ಜಿ ಅವರ ಶೈಲಿಯ ಬಗ್ಗೆ ಮಾತನಾಡುವಾಗ ಗಮನಿಸಲೇಬೇಕಾದ ಮತ್ತೊಂದು ಸಂಗತಿ: ಅವರ ಸಂಗೀತ ಜ್ಞಾನ. ಇದನ್ನು ಪ್ರತ್ಯೇಕವಾಗಿಯೇ ಚರ್ಚಿಸಬಹುದಾದಷ್ಟು ವಿಸ್ತಾರವಾಗಿ ಅವರ ಕಾವ್ಯದಲ್ಲಿ ಇದು ಪ್ರಾಮುಖ್ಯತೆ ಪಡೆದುಕೊಂಡಿದೆ. ಆದರೆ ಇಲ್ಲಿಯೂ ಅವರು 'ಸಾಮಾನ್ಯ'ರನ್ನು ಗಮನದಲ್ಲಿರಿಸಿಕೊಂಡಿದ್ದೇನೆ ಎಂಬ ಬಗ್ಗೆ ಹೆಚ್ಚು ಒತ್ತುಕೊಟ್ಟಿದ್ದಾರೆ ' ಈ ಪುಸ್ತಕದಲ್ಲಿಯ ಹಾಡುಗಳು ಸಾಮಾನ್ಯವಾಗಿ ಎಲ್ಲರೂ ಹಾಡಿಕೊಳ್ಳಬಹುದಾದಂಥವು. ಸಂಗೀತವನ್ನು ಶಾಸ್ತ್ರೀಯವಾಗಿ ಕಲಿಯದವರೂ ಇವನ್ನು ಅಭ್ಯಾಸಮಾಡಿ ಸಾಧಿಸಿಕೊಳ್ಳಬಹುದು' (ಮುನ್ನುಡಿ, ಅಂತಃಪುರ ಗೀತೆ). ಆದರೆ: ಇಲ್ಲಿ ಡಿ ವಿ ಜಿ ಯವರು ಬಳಸಿಕೊಂಡಿರುವ ಭಾಷೆ, ಶೈಲಿ ಸಾಮಾನ್ಯರಿಗೆ ಸುಲಭವಾಗಿ ಎಟುಕುವಂಥದಲ್ಲ ಎಂಬುದನ್ನು ಮಾತ್ರ ಇಲ್ಲಿ ಸೂಚಿಸಬಯಸುತ್ತೇನೆ.

'ಜೀವನ ಸೌಂದರ್ಯ ಮತ್ತು ಸಾಹಿತ್ಯ'- ಕೃತಿಯಲ್ಲಿ ಡಿ ವಿ ಜಿ ಯವರು ಕವಿಗಳನ್ನು ಎರಡು ಗುಂಪು ಮಾಡುತ್ತಾರೆ.

''ಕಾವ್ಯವಿಷಯದ ದೃಷ್ಟಿಯಿಂದ ನೋಡಿದರೆ ಕವಿಗಳಲ್ಲಿ (1) ಸ್ವಾನುಭೂತಿ ಪ್ರೇರಿತರೆಂದೂ, (2) ಲೋಕ ಸಹಾನುಭೂತಿ ಪ್ರೇರಿತರೆಂದೂ ಎರಡು ಜಾತಿಗಳು ಏರ್ಪಡುತ್ತವೆ. ಮುಖ್ಯವಾಗಿ ತಮ್ಮ ಅಂತರಂಗದ ಭಾವಗಳನ್ನು, ಬಾಹ್ಯಪ್ರಪಂಚವನ್ನು, ಗಣನೆಗೆ ತೆಗೆದುಕೊಳ್ಳದೆ– ಹೊರಪಡಿಸುವವರು ಮೊದಲನೆಯ ಜಾತಿಯವರು. ತಮ್ಮೊಳಗಿನ ಭಕ್ತಿಯನ್ನು, ಅಥವಾ ಅನುರಾಗವನ್ನು ಅಥವಾ ಉಲ್ಲಾಸವನ್ನು ಅಥವಾ ಯಾವುದೇ ಒಂದು ಜೀವಿತ ಸಮಸ್ಯೆಯನ್ನು– ಮುಖ್ಯವಾಗಿ ತಮ್ಮ ಸಂತುಷ್ಟಿಗಾಗಿ, ತಮ್ಮೆದೆಯ ಹೊರೆಯನ್ನಿಳಿಸಿಕೊಳ್ಳುವುದಕ್ಕಾಗಿ- ಹಾಡಿಕೊಳ್ಳುವವರು ಇವರು. ತಮ್ಮ ಆಂತರಿಕಾನುಭವಗಳೇನೆಂಬುದರ ಸೆಲೆಯನ್ನು ಅಷ್ಟಾಗಿ ತೋರದೆ ಸಕಲ ಮಾನವರ ಅನುಭವಕ್ಕೂ ದೊರೆಯಬಹುದಾದ ಜೀವಿತ ಚಿತ್ರಗಳನ್ನು ಚಿತ್ರಿಸುವವರು ಎರಡನೆಯ ಜಾತಿಯವರು''

ಡಿ ವಿ ಜಿ ಯವರು ಎರಡನೆಯ ಗುಂಪಿಗೆ ಸೇರುವಂಥವರು.

ಹೊಸ ಓದು

ಖಾಸನೀಸ ಮೂಲಕ ಮೂಗೇಲ ಮತ್ತು ಇತರ ಕತೆಗಳು

● ಚಂದ್ರಶೇಖರ ತಾಳ್ಯ

ಬದುಕನ್ನು ಬಗೆದು ಅದರ ಎಳೆ ಎಳೆಯನ್ನೂ ಅತ್ಯಂತ ತಾಳ್ಮೆಯಿಂದ, ಮನಸ್ಸಿಗೆ ತಟ್ಟುವಂತೆ ಕತೆಯಲ್ಲಿನ ಪಾತ್ರಗಳು ನಮ್ಮೊಡನೇ ಇದ್ದು ನಮಗೇ ತಿಳಿಯದೆ ವಿವರಗಳ ಆಯಾಮಗಳನ್ನು ತಿಳಿಸಿಕೊಡುತ್ತಾ ಒಟ್ಟು ಬದುಕಿನ ಒಳತೋಟಿಗಳನ್ನು ಓದುಗರೆದುರು ಕಲಾತ್ಮಕವಾಗಿ ಬಿಚ್ಚಿಡುವುದು ಖಾಸನೀಸರ ಕಥೆಗಾರಿಕೆಯ ವೈಶಿಷ್ಟ್ಯ.

ಬದುಕಿನ ಯಥಾವತ್ತು ಚಿತ್ರಗಳನ್ನು ಕೊಡುತ್ತಾ ಕೊಡುತ್ತಲೇ ಅಲ್ಲಿಂದ ನೆಗೆದು ಮಾನಸಿಕ ಕಾಲಕ್ಕೆ ಕೊಂಡೊಯ್ದು ಅಲ್ಲಿ ವ್ಯಕ್ತಿಯ ಅತಂತ್ರ ಸ್ಥಿತಿಯನ್ನು ವಿಡಂಬಿಸುವುದಂತೂ ಖಾಸನೀಸರ ಮತ್ತೊಂದು ಮುಖ್ಯ ಅಂಶ. ಹಿಂಗೆ ಮಾನಸಿಕ ಕಾಲಕ್ಕೆ ನೆಗೆಯುವಾಗಲೂ ಅದು ಓದುಗನಿಗೆ ಗೊತ್ತಾಗಿಯೂ ಗೊತ್ತಾಗದಂತೆ ನಿರೂಪಿಸುವುದು ಖಾಸನೀಸರ ಪಳಗಿದ ಕತೆಗಾರಿಕೆಯ ಕೈಕುಸುರಿಯನ್ನು ಎತ್ತಿ ತೋರಿಸುವಂಥದು. 'ತಬ್ಬಲಿಗಳು' ಎಂಬ ಅವರ ಕತೆಯಲ್ಲಿ ಬಸ್ಸು ಕೆಟ್ಟು ನಿಲ್ಲುವಲ್ಲಿಂದ ಸುರುವಾಗುವ ಅದರ ವಿವರಗಳು ಬೆಳೆಯುತ್ತಾ ಬೆಳೆಯುತ್ತಾ ಒಂದು ಧಾರ್ಮಿಕ ಪರಿಸರವನ್ನು ಸೃಜಿಸಿ ಅಲ್ಲಿ ಹರಿಯುವ ನದಿ, ರಾಯರ ಬೃಂದಾವನ, ರಥ ಇವುಗಳೊಟ್ಟಿಗೇ ಪಾತ್ರಗಳನ್ನು ಬೆಸೆದು ಅವುಗಳ ಮಾನಸಿಕ ತೊಳಲಾಟ ಚಿತ್ರಿತವಾಗುತ್ತದೆ. ಹಿಂಗೆ ಮಾಡುವಾಗ ಖಾಸನೀಸರು ಎಲ್ಲೂ ವಾಸ್ತವತೆಯ ವಿವರಗಳಿಂದ ದೂರ ಹೋಗಿದ್ದಾರೆ ಎಂಬ ಗುಮಾನಿ ನಮಗೆ ಬರುವುದೇ ಇಲ್ಲ. ಮೂರ್ತತೆಯ ನೆಲೆಯಿಂದಲೇ ಅಮೂರ್ತತೆಯನ್ನು ಕಟ್ಟಿಕೊಡುತ್ತಲೆ ಅಲ್ಲಿಂದ ಮತ್ತೆ ಮೂರ್ತತೆಯ ನೆಲೆಗೇ ಬಂದು ಮುಟ್ಟುವ ಅವರ ಕಲೆಗಾರಿಕೆ ಅನನ್ಯವಾದ್ದು.

ಈ ಮೇಲಿನ ನನ್ನ ಮನಸ್ಥಿತಿಯಲ್ಲೇ ನಮ್ಮ ರಾಮಚಂದ್ರದೇವರ 'ಮೂಗೇಲ ಮತ್ತು ಇತರ ಕತೆಗಳು' ವನ್ನು ಓದಲು ಪ್ರಾರಂಭಿಸಿದೆ. ಯಾಕೆಂದರೆ ಅವರೇ ತಮ್ಮ

ಪ್ರಸ್ತಾವನೆಯಲ್ಲಿ ಹೇಳಿಕೊಂಡಿರುವಂತೆ "ಮತ್ತೆ ನಾವು ನಮ್ಮ ಭಾರತೀಯ ಸಾಹಿತ್ಯ ಪರಂಪರೆಗೆ. ನಮ್ಮ ಪಂಚತಂತ್ರಕ್ಕೆ, ನಮ್ಮ ಬೇತಾಳ ಕತೆಗಳಿಗೆ, ಮಹಾಭಾರತಕ್ಕೆ, ರಾಮಾಯಣಕ್ಕೆ – ಹಿಂತಿರುಗುವುದು ಅಲ್ಲಿಂದ ನಮ್ಮ ಸಾಹಿತ್ಯಕ ಪ್ರೇರಣೆಗಳನ್ನು ಪಡೆಯುವುದು ಅತ್ಯಂತ ಅಗತ್ಯವಾಗಿದೆ" ಎಂಬ ಮಾತುಗಳು ನನ್ನಲ್ಲಿ ಮೇಲಿನ ಮನಸ್ಥಿತಿಯನ್ನು ಮೂಡಿಸಿದವು.

ನಮ್ಮ ಪರಂಪರೆಯ ಆಳವನ್ನು ನಾವು ಬಗೆಯುತ್ತಲೇ ನಮ್ಮ ವರ್ತಮಾನವನ್ನು ಕಟ್ಟಿಕೊಡುವುದು ಅತ್ಯಂತ ಮುಖ್ಯವಾದ್ದರಿಂದ ರಾಮಚಂದ್ರದೇವ ಹೇಳುವುದೂ ಕೂಡ ಅಷ್ಟೇ ಮುಖ್ಯವಾಗುವುದು. ಈ ಕಾರಣದಿಂದ ಅವರ ಈ ಕಥಾಸಂಕಲನ ಕುತೂಹಲ ಹುಟ್ಟಿಸುತ್ತೆ.

ಈ ಕಥಾ ಸಂಕಲನದಲ್ಲಿ ಒಟ್ಟು ಎಂಟು ಕಥೆಗಳಿವೆ- ಅವೆಲ್ಲವೂ ಅವರ ಮಾತಿನಂತೆ ಯೇ ಪರಂಪರೆಯ ಕಥಾ ತಂತ್ರಗಳನ್ನೊಳಗೊಂಡಿವೆ. ಎಲ್ಲಿಂದಲೋ ಪ್ರಾರಂಭವಾಗಿ ಎಲ್ಲಿಗೋ ಎಳೆದೊಯ್ದು ಎಲ್ಲಿಗೋ ಬಿಡುವಂತೆ ಇಲ್ಲಿನ ಅನೇಕ ಕತೆಗಳಲ್ಲಿ ಕಾಲವನ್ನು ದೇಶವನ್ನು ಬೇಕಂತಲೇ ಧಿಕ್ಕರಿಸಲಾಗಿದೆ. ಹಿಂಗೆ ಧಿಕ್ಕರಿಸುತ್ತಾ ಅದಕ್ಕೆ ಮುಲಾಜೂ ಮಾಡಲಾಗಿದೆ. 'ಎಲ್ಲರ ಜೊತೆ ಕ್ರಿಯೆಯ ಮಾರ್ಗವೋ ಒಬ್ಬನ ಅಜ್ಞಾತದ ತಪ ಸ್ಸಿನ ಮಾರ್ಗವೋ' ಎನ್ನುವ ಅನುಮಾನವನ್ನು ಸ್ಥಾಯಿಯಾಗಿಟ್ಟುಕೊಳ್ಳುವ 'ಯಾತ್ರೆ' ಕತೆಯ ನಾಯಕ ಗೋವಿಂದ ಅಜ್ಞಾತ ತಪಸ್ಸಿನ ಮಾರ್ಗ ಹಿಡಿದು ಗಿರಿ ಗಹ್ವರಗಳ ಕಷ್ಟದ ಜಾಡು ದಾಟಿ, ಸುಖದ, ವಯಸ್ಸೇ ಆಗದ ಹಸಿವೇ ಕಾಣದ ತುದಿ ಯನ್ನು ಮುಟ್ಟಿ ಆ ಸ್ಥಿತಿಯಿಂದ ಹಿಂತಿರುಗಬೇಕೆನಿಸಿದರೂ ತಾನು ಆ ಹಿಂದಿನ ಆರಂ ಭಕ್ಕೆ ಬರಲು ಸಾಧ್ಯವಾಗದೇ ಹೋಗುವುದು, ವಾಸ್ತವತೆಯಿಂದ ಜಾರಿಕೊಳ್ಳುವುದನ್ನು ರೈತರ ಆಚೆನದನ್ನು ಭ್ರಮಿಸುವುದನ್ನು ಈ ಕತೆ ಬಿಟ್ಟುಕೊಡುತ್ತದೆ. ಎಷ್ಟೋ ಸಾವಿರ ಕೋಟಿ ವರ್ಷಗಳಾದ ಮೇಲೂ ಅವನು ಹಿಂತಿರುಗುವುದು ಸಾಧ್ಯವೇಆಗದ್ದು ಯಾಕೆಂ ದರೆ ಅವನ ಮತ್ತು ಅವನಿರುವ ಪರಿಸರಕ್ಕೆ ವಯಸ್ಸೇ ಆಗದೆ ಅವರೆಲ್ಲ ಇದ್ದ ಸ್ಥಿತಿ ಯಲ್ಲೇ ಇದ್ದು ಬಿಡುವುದರಲ್ಲೇ ಇಡೀ ಕತೆಯ ಧ್ವನಿ ಇದೆ. ಇದನ್ನು ಹೇಳುವ ರೀತಿಗೆ ಇಲ್ಲಿ ಪರಂಪರೆಯ ಕತೆಗಾರಿಕೆಯ ತಂತ್ರ ಬಳಸಿಕೊಳ್ಳಲಾಗಿದೆ. ಇದರಂತೆಯೇ 'ಮೂಗೇಲ' 'ನಕ್ಷತ್ರ ಮುಡಿದವಳು' 'ಒಳ್ಳೆಯವನು' ಎಂಬ ಕತೆಗಳಿವೆ.

'ಮೂಗೇಲ'ದಲ್ಲಿ ಮೂಗು ಉದ್ದವಾಗಿ ವಿಲಕ್ಷಣಗೊಂಡ ಮನುಷ್ಯತ್ವಾರೋಪಿತ, ದೇವತ್ವಾರೋಪಿತವೆಂಬಂತೆ ಕಾಣುವ ಮಗುವಿನ ಬೆಳವಣಿಗೆಯ ಮೂಲಕ ಜೀವ-ಮಾಂಸ ಸಂಬಂಧವನ್ನು, ಬದುಕು ವ್ಯಾಪಾರಕ್ಕೆ ತಿರುಗುವುದನ್ನು ಹೇಳುವಲ್ಲಿ ಸಾರ್ಥ ಕವಾಗುತ್ತದೆ. ಅಪ್ಪನ ಕರುಳು ಸಂಬಂಧ ಕೂಡ ಕಡಿದು ಹಾಕುವಂತೆ ಆ ಮಗುವಿನ ಮೂಗು ವ್ಯಾಪಾರೀ ಸಂಬಂಧ ಬೆಳೆಸಿಕೊಳ್ಳುವುದು ಈ ಕತೆಯ ವೈಶಿಷ್ಟ್ಯ.

ಆದರ್ಶವನ್ನು ಹುಗಿದು ಅದರ ಮೇಲೆ ನಾಗರಿಕತೆಯ ಗೋರಿ ಕಟ್ಟಿ ಆದರ್ಶವನ್ನು ತಡ ಕಾಡುವುದಕ್ಕೂ ಪುರುಸೊತ್ತಿಲ್ಲದೆ ಕನಸುಗಾರಿಕೆಯನ್ನು ಹುಚ್ಚು ಎಂದು ಭಾವಿಸುವ, ತೀರಾ Material ಆಗುವ, ಮೇಲ್ಪದರಿನ ಬದುಕನ್ನೇ ನೆಚ್ಚಿರುವ ನಮ್ಮ ಇವತ್ತಿನ ಬದುಕನ್ನು 'ನಕ್ಷತ್ರ ಮುಡಿದವಳು' ಕತೆ ಮಾರ್ಮಿಕವಾಗಿ ಹೇಳುತ್ತದೆ. ಹೆಣ್ಣಿನ ಕೋಮಲತೆ ಮತ್ತು ಆದರ್ಶಗಳನ್ನು ತಳುಕು ಹಾಕಿ ಆ ಕೋಮಲತೆಯನ್ನೂ ಆದರ್ಶವನ್ನೂ ನಾಶಮಾಡುವವರು ಬದುಕನ್ನು ಹೆಂಗೆ ಸಂತೆ ಮಾಡಬಲ್ಲರೆಂಬುದನ್ನು ವಿವರಿಸುತ್ತದೆ. 'ಹೀಗಾಗಿ ಆಕಾಶದ ತಾಪತ್ರಯವಿಲ್ಲದೆ ದಿನನಿತ್ಯದ ಜೀವನದಲ್ಲಿ ಮನುಷ್ಯರು ಈಗ ಬದುಕುವುದು ಸಾಧ್ಯವಾಗಿದೆ' ಎಂಬ ನಿರ್ಲಿಪ್ತ ಮಾತುಗಳೇ ಆ ಇಡೀ ಕತೆಯ ಆಶಯವನ್ನು ಬಿಂಬಿಸುತ್ತವೆ.

ಇದೇ ಥರದಲ್ಲಿ 'ಒಳ್ಳೆಯವನು' 'ಜೀವ ಪಕ್ಷಿಯ ಕತೆ' ಇವೆ. ಈ ಮೇಲಿನ ಈ ಕತೆಗಳಿಗಿಂತ ಕೊಂಚ ಭಿನ್ನವಾಗೇ ಕಾಣುವ 'ಸಂಸಾರ' 'ಕ್ರೌಂಚ' ಎಂಬ ಕತೆಗಳು ಭಾವಗೀತೆಯನ್ನು ಓದಿದಂತೆ ಅನ್ನಿಸುತ್ತವೆ. ಬೆಚ್ಚಗಿನ ಅನುಭವವನ್ನು ನಮಗೆ ಕೊಡುತ್ತವೆ.

ದೆಹಲಿಯಂಥ ಉರಿಯುವ ಊರಿನ ಒಂದು ಕೋಣೆಯಲ್ಲಿ ಪಾರಿವಾಳಗಳು ಸಂಸಾರ ಹೂಡುವುದೇ ಒಂದು ವಿಪರ್ಯಾಸ. ದಿಲ್ಲಿಯ ಕಾಂಕ್ರೀಟನೊಳಗೂ ಜೀವಸೆಲೆ ಹರಿಯುವುದನ್ನು ಕಾಣಿಸುವ ಈ ಕತೆ ದಿಲ್ಲಿಯ ಮನುಷ್ಯರ ಬೇಜವಾಬ್ದಾರಿಯನ್ನು ಅಂದರೆ ಒಟ್ಟಿನ ನಾಗರಿಕ ಮಾನವನ ಬೇಜವಾಬ್ದಾರಿಯನ್ನು ಅಣಕಿಸುತ್ತದೆ. ಆರ್ದ್ರವಾದ ಏನೋ ಒಂದು ಬಂದು ನಮ್ಮ ಮನಸ್ಸನ್ನು ತಟ್ಟುತ್ತದೆ. ಹಂಗೇ 'ಕ್ರೌಂಚ' ಎಂಬ ಕತೆ ಕೂಡ ಇಂಥದೇ ಅನುಭವವನ್ನು ಕಟ್ಟಿಕೊಡುತ್ತೆ. ಕ್ರೌಂಚದ ಮುದಿ ಕ್ರೌಂಚದ ನಿಸ್ಸಹಾಯಕತೆಯ ಮೂಲಕ ಮಾನವ ಕ್ರೌರ್ಯ, ರಕ್ತಸಿಕ್ತ ಜಗತ್ತು, ಅಧಿಕಾರದ ದಾಹ, ಸಾವಿನಂಥ ನಿಗೂಢತೆಯ ಒಡಲಲ್ಲೇ ಇವೆಲ್ಲ ಮೂಡುವುದು ಒಂದು ಗಂಭೀರ ಭಾವಗೀತೆಯಂತೆ ಮನಸ್ಸು ಮುಟ್ಟುತ್ತವೆ.

ಹಿಂಗೆ ಈ ಸಂಕಲನದ ಒಟ್ಟೂ ಕತೆಗಳು ನಮ್ಮ ಪರಂಪರೆಯ ಕಥಾ ತಂತ್ರವನ್ನು ಕೂಡಿಸಿಕೊಂಡು ಕಾಲದೇಶಗಳ ಧಿಕ್ಕಾರದಲ್ಲೇ ವಾಸ್ತವವನ್ನು ಕಟ್ಟಿಕೊಡುವ ಹೊಚ್ಚ ಹೊಸ ಪ್ರಯತ್ನಗಳಾಗಿವೆ. ಆದರೆ ಈ ಕತೆಗಳನ್ನು ನಾನು ಓದುವಾಗ ನನ್ನಲ್ಲಿ ಹುಟ್ಟಿದ ಕೆಲವು ಪ್ರಶ್ನೆಗಳು ನನ್ನನ್ನು ಕಾಡಿವೆ. ವಾಸ್ತವವನ್ನು ವರ್ತಮಾನವನ್ನು ಚಿತ್ರಿಸುವಾಗ ನಾವು ಈ ಹಿಂದಿನ ತಂತ್ರವನ್ನೇ ಯಾಕೆ ಬಳಸಬೇಕು ? ಅಥವಾ ಪರಂಪರೆಯ ಸಹಾಯದಿಂದ ಆಧುನಿಕವನ್ನು ಕಟ್ಟಿಕೊಡುವಾಗ ಅವು ಪರಂಪರೆಯ ತಂತ್ರದಿಂದ

ಮುಂದುವರಿದ ಆಯಾಮವನ್ನು ಪಡಕೊಳ್ಳದೇ ಇಷ್ಟರ ಅದನ್ನೇ ಮತ್ತೀಕಾ ಮಕ್ಕಿ ಇಳಿಸಿದಂತಾಗುವುದಿಲ್ಲವೇ ? ಇದೆಲ್ಲವನ್ನೂ ಬಿಟ್ಟು ನೇರ ಚಿತ್ರಗಳೊಂದಿಗೇ ಒಳತೋಟಗಳ ಒಳಧ್ವನಿಯನ್ನು ಹೊರಡಿಸುತ್ತಾ ಇಡೀ ಬದುಕಿನ ಸಾರ್ಥಕತೆ ನಿರರ್ಥಕತೆಗಳನ್ನು ಬಿಂಬಿಸುವುದು ಸಾಧ್ಯವಿಲ್ಲವೇ ? ಈ ಪ್ರಶ್ನೆಗಳು ನನ್ನಲ್ಲಿ ಹುಟ್ಟಿದ್ದರಿಂದಲೇ ನಾನು ನೆನೆಸಿಕೊಂಡದ್ದು ಖಾಸನೀಸರ 'ತಬ್ಬಲಿಗಳ'ನ್ನು. ಅಲ್ಲಿ ಅವರು ಸೂಕ್ಷ್ಮವಾಗಿ ವಾಸ್ತವಿಕತೆಯನ್ನು ವರ್ತ್ತರಿಸುವ ಮೂಲಕ ವ್ಯಕ್ತಿಯ ಅಸಮತೋಲನವನ್ನು, ವಯಕ್ತಿಕ ವಿವರಗಳನ್ನು ಕೊಡುವುದೂ ಪರಂಪರೆಯ ಮುಂದುವರಿದ ತಂತ್ರದ ಮೂಲಕವೇ ಆದರೆ ಈ ತಂತ್ರವನ್ನೇ ಬಳಸುವುದು ನಮ್ಮ ಮೇಲ್ನೋಟಕ್ಕೆ ಕಾಣುವುದಿಲ್ಲ. ಅಷ್ಟೆ. ದೇವನೂರ ಮಹಾದೇವ ಕೂಡ ಇಂಥ ಪ್ರಯತ್ನವನ್ನು 'ಕುಸುಮ ಬಾಲೆ' ಯಲ್ಲಿ ಮಾಡಿದ್ದಾರೆ. ಮಂಚದ ಆತ್ಮ ಎದ್ದು ವ್ಯಕ್ತಿಯ ಆತ್ಮದ ಜೊತೆ ಸಂಭಾಷಣೆ ನಡೆಸುವುದು, ಜೋತಮ್ಮಗಳು ಅಗಸೆ ಬಾಗಿಲಲ್ಲಿ ನೆರೆದು ಅವರವರ ಸುಖದುಃಖ ಮಾತಾಡುವುದು. ಆ ಮೂಲಕ ಕತೆ ಹೇಳುವುದು, ಇದೆಲ್ಲವೂ ಕತೆಯ ಮೈಯೊಳಗೇ ಹುಟ್ಟಿಕೊಂಡಿವೆ ಎನಿಸುವುದರಿಂದ ಅವೆಲ್ಲ ಪರಂಪರೆಯ ತಂತ್ರವನ್ನು ಮೀರಿ ತಮ್ಮದೇ ತಂತ್ರ ರೂಪಿಸಿಕೊಳ್ಳುತ್ತವೆ. ಈ ಮಾತುಗಳಿಂದ ರಾಮಚಂದ್ರದೇವರ ಕತೆಗಳು ಇದಕ್ಕೆ ಹೊರತಾಗಿವೆಯೆಂದೇನೂ ಅಲ್ಲ. ಆದರೆ ಅದನ್ನು ಸಾಧಿಸುವಾಗ ದೇವ ತಮ್ಮೆಲ್ಲ ಚೈತನ್ಯವನ್ನೂ ಧಾರೆ ಎರೆದಿಲ್ಲ ಎನಿಸುತ್ತೆ. ಫ್ಯಾಂಟಸಿ ಮತ್ತು ಮನೋವೇಗದ ನಡುವಿನ ವ್ಯತ್ಯಾಸವನ್ನು ಅವರು ಇನ್ನಷ್ಟು ದೊಡ್ಡದು ಮಾಡಿದ್ದರೆ ? ಈ ಕತೆಗಳೆಲ್ಲ ಇನ್ನೂ ಸಾರ್ಥಕತೆಯತ್ತ ಹೋಗುತ್ತಿದ್ದುವೇನೋ ? ಆದರೆ ಒಂದು ಮಾತು. ಇವು ಫ್ಯಾಂಟಸಿಯ ಅಪಾಯದಿಂದ ಪಾರಾಗಿರುವುದೇ ದೇವ ಅವರ ಈ ರೀತಿಯ ಕತೆಗಾರಿಕೆಯ ಪ್ಲಸ್ ಅಂಶ. 'ಜೀವ ಪಕ್ಷಿ'ಯ ಕತೆಯಲ್ಲಿ ಬರುವ ಜೀವ ಪಕ್ಷಿಯ ಕಲ್ಪನೆ. ಅದರ ಹುಡುಕಾಟದೊಳಗೇ ಇಡೀ ಬದುಕಿನ ದುರಂತವನ್ನು ನೆಯ್ಯುವಾಗ ಎಳೆಎಳೆಗಳನ್ನೂ ಒತ್ತಾಗಿ ಕೂಡಿಸುವಲ್ಲಿ ದೇವ ಯಾಕೋ ಸೋತಿದ್ದಾರೆ. ವ್ಯಕ್ತಿಯ ತೀರಾ ಅಂತರಂಗದ ಒಳತೋಟಿಯನ್ನು ಅಮೂರ್ತ ಕಲ್ಪನೆಯ ಮೂಲಕ ವಿವರಿಸುವ ಪ್ರಯತ್ನದಲ್ಲಿ ಸೋಲಿದೆ. ಮಾತಿನ ಅಂತರಂಗಕ್ಕೆ ಇಳಿದು ಅಲ್ಲಿಂದ ಚಿಮ್ಮಿದ್ದರೆ ಈ ಕತೆ ಇನ್ನಷ್ಟು ಗಟ್ಟಿಯಾಗುತ್ತಿತ್ತೋ ಏನೋ ? ಆದರೆ ಮೂಗೇಲ ದಂಗಸಿಸುವುದಿಲ್ಲ. ಅದರೊಳಗಿನ ಮೂಗಿನ ವಿಕಾರವೇ ಕತೆಯೊಟ್ಟಿಗೇ ಬೆಳೆಯುತ್ತಾ ಇಡೀ ವಾಸ್ತವತೆಯನ್ನು ಬಿಚ್ಚಿಡುತ್ತದೆ. ಕ್ರೌಂಚದಲ್ಲೂ ಹಂಗೇ ಕ್ರೌಂಚ ಕೇವಲ ಒಂದು ಹಕ್ಕಿಯಾಗುಳಿಯದೇ ವ್ಯಕ್ತಿಯ ನೋವಿನ, ಹತಾಶೆಯ, ಮಿತಿಯ ಒಳಧ್ವನಿಯಾಗುತ್ತದೆ.

ಹಿಂಗಾಗಿ ದೇವರ ಪ್ರಯತ್ನ ಮೆಚ್ಚುವಂಥದು. ಖಾಸನೀಸರ ಮಹಾದೇವರ ಇಂಥ ಪ್ರಯೋಗಗಳನ್ನು ನೆನಪಿಗೆ ತರುವಷ್ಟು ಗಟ್ಟಿಯಾಗಿರುವ ದೇವ ಅವರ ಈ ಕತೆಗಳು

ಮತ್ತೂ ಬೆಳೆವಲ್ಲಿ ಅವರ ಈ ಪ್ರಯತ್ನ ಕನ್ನಡ ಕತೆಗೇ ಒಂದು ಹೊಸ ತಿರುವು ಕೊಡುವ ಸಾಧ್ಯತೆಯನ್ನು ನಾವು ಅಲ್ಲಗಳೆಯಬಾರದು. ಷಹಜಾದೆಗೆ ಕತೆ ಹೇಳಲು ಏನಾದರೂ ದಾರಿ ಸಿಕ್ಕರೂ ಸಿಕ್ಕಬಹುದು.

ಈ ಎಲ್ಲ ಅನಿಸಿಕೆಗಳೂ ನನ್ನ ಮೊದಲ ಓದಿನವಾದ್ದರಿಂದ ಈ ಕತೆಗಳ ಬಗೆಗಿನ ಗ್ರಹಿಕೆ ಕೇವಲ ಮೇಲ್ಪದರಿನದ್ದಾಗಿದ್ದರೂ ಆಗಿರಬಹುದು.

ಸಂಪಾದಕರ ಟಿಪ್ಪಣಿಗಳು

ಒಂದು ವಸ್ತು; ಉದಾಹರಣೆಗೆ ಬೆಟ್ಟವೆಂದಿಟ್ಟುಕೊಂಡರೆ– ದೂರದಿಂದ ನೋಡಿದಾಗ ನಮ್ಮ ದೃಷ್ಟಿಯು ಒಂದೊಂದು ದಿಕ್ಕಿನಿಂದ ಒಂದೊಂದು ವಿನ್ಯಾಸವನ್ನು ತೋರುತ್ತದೆ. ಆದರೆ ಅದರ ಪರಿಪೂರ್ಣ ರೂಪ ಅಥವ ಅಖಂಡ ಅಸ್ತಿತ್ವವು ನಮ್ಮ ದೃಷ್ಟಿಯ ತೆಕ್ಕೆಗೆ ಒಟ್ಟಿಗೆ ಸಿಕ್ಕುವುದಿಲ್ಲ.

ಪಾಶ್ಚಾತ್ಯ ಛಾಯಾಗ್ರಾಹಕನೊಬ್ಬ ಮೋಹನದಾಸ ಗಾಂಧಿಯ ಛಾಯಾಚಿತ್ರ ಹಿಡಿಯಲು ತನ್ನ ಕ್ಯಾಮರಾದೊಂದಿಗೆ ಗಾಂಧೀಜಿಯವರ ಸುತ್ತಲೂ ಸುತ್ತುತ್ತಿದ್ದ ಸನ್ನಿವೇಶವೊಂದು ವಿಲ್‌ಡ್ಯುರಾಂಟ್ ಸಂಪಾದಿಸಿದ 'ಗಾಂಧಿ' ಪುಸ್ತಕದಲ್ಲಿ ಬರುತ್ತದೆ.

ಗಾಂಧೀಜಿಯವರು ಎಂದಿನಂತೆ ತಮ್ಮ ನೂಲು ತೆಗೆಯುವ ಕಾಯಕದಲ್ಲಿ ತೊಡಗಿದ ಒಂದು ಮುಂಜಾವು. ಈ ಛಾಯಾಗ್ರಾಹಕ ಎಲ್ಲೆಲ್ಲಿ ನಿಂತು ವೀಕ್ಷಿಸಿದರೂ ಅವನ ಕಲಾವಿದ ಕಣ್ಣಿಗೆ ತೃಪ್ತಿ ದೊರೆಯುತ್ತಿಲ್ಲ. ಗಾಂಧೀಜಿಯವರ ಸುತ್ತ ತಿರುಗುತ್ತ ಕ್ಯಾಮೆರಾದ ಮೂಲಕ ನೋಡುತ್ತಿದ್ದ ಅವನು ಗಾಂಧೀಜಿಯವರ ಅಖಂಡ ವ್ಯಕ್ತಿತ್ವವನ್ನು ಸೆರೆಹಿಡಿದುಕೊಡುವ ಛಾಯಾಚಿತ್ರಕ್ಕಾಗಿ ಪ್ರಯತ್ನಿಸುತ್ತಿರುವಂತೆ ಕಾಣುತ್ತಾನೆ.

ಕರಮಚಂದ–ಪುತಳಿಬಾಯಿಯ ಮಗನಾದ ಈ ಮೋಹನದಾಸ ಕೇವಲ ಕೌಟುಂಬಿಕ ಹಿನ್ನೆಲೆಯಲ್ಲಿ ಬೆಳೆದು- ಕೌಟುಂಬಿಕ ಅವಶ್ಯಕತೆಗಳ ಹಿನ್ನೆಲೆಯಲ್ಲಿ ಸೀಮೆಗೆ ಹೋಗಿ ದ್ವಿತೀಯ ದರ್ಜೆಯ– ಸುಲಭವಾದ ಬ್ಯಾರಿಸ್ಟರ್ ಪರೀಕ್ಷೆಯನ್ನು ಮುಗಿಸಿಕೊಂಡು ಭಾರತಕ್ಕೆ ಬಂದು ತನ್ನ ಬ್ಯಾರಿಸ್ಟರ್ ಸರ್ಟಿಫಿಕೇಟು, ಕುಟುಂಬವನ್ನು ಸಲಹುವಲ್ಲಿ ಕೈಕೊಟ್ಟದ್ದು ಕಾಣುತ್ತ ಕಣ್ಣುಕಣ್ಣು ಬಿಟ್ಟವನು. ಇಂತಹ ಈ ಸರಳ ಮನುಷ್ಯ ಕ್ಯಾಮರಾದ ಸಮತಲ ಮೇಲ್ಮೈಯ ಫಿಲಂಗೆ ದಕ್ಕದ ಬಹು ಆಯಾಮಗಳ ವ್ಯಕ್ತಿತ್ವವನ್ನು ಸಾಧಿಸಿಕೊಂಡದ್ದು ಹೇಗೆನ್ನುವ ಪ್ರಶ್ನೆ ಎದುರಾಗುತ್ತದೆ. ಗಾಂಧೀಜಿಯ ಈ ಪರಿವರ್ತನೆ ರೇಷ್ಮೆಹುಳದ ಜೀವನ ಚಕ್ರದಂಥದ್ದು. ರೇಷ್ಮೆಯ ಕಂಬಳಿಹುಳವು ತನ್ನ ಮೈಯ ಅಂಗಾಂಶಗಳನ್ನೆಲ್ಲ ಛಿದ್ರ ಛಿದ್ರವಾಗಿ ವಿಭಜಿಸಿಕೊಂಡು ಪತಂಗದ ಶರೀರವನ್ನು ಕಟ್ಟಿ

ಕೊಳ್ಳುತ್ತದೆ. ಗಾಂಧಿಯು ಕೌಟುಂಬಿಕ ಹಿನ್ನೆಲೆಯ ತನ್ನ ವ್ಯಕ್ತಿತ್ವವನ್ನು ಒಡೆದು ಇಡೀ ಭಾರತದ ಜೀವನದ ಅಂಶಗಳೊಂದಿಗೆ ಬಹು ಆಯಾಮಗಳ ತನ್ನ ವ್ಯಕ್ತಿತ್ವ ಕಟ್ಟಿಕೊಂಡವನು. ಹೀಗೆ ತನ್ನ ವ್ಯಕ್ತಿತ್ವವನ್ನು ಇಡೀ ಭಾರತದ ಪರಿಸರದೊಂದಿಗೆ ತಾದಾತ್ಮ್ಯಗೊಳಿಸಿಕೊಂಡದ್ದರಿಂದಲೇ ಗಾಂಧಿಯು ಏಕ ಕಾಲಕ್ಕೆ ಒಬ್ಬ ಧಾರ್ಮಿಕ ಸಂತನಂತೆ, ಶಿಕ್ಷಣತಜ್ಞನಂತೆ, ತುಂಡು ಪಂಚೆಯುಟ್ಟು ತನ್ನ ಸುತ್ತಲಿನವರ ಬಡತನಕ್ಕೆ ಸ್ಪಂದಿಸುತ್ತ ತೀವ್ರ ಮಾನವತಾವಾದಿಯಂತೆ ನೂಲು ತೆಗೆಯುತ್ತ ಅರ್ಥಶಾಸ್ತ್ರಜ್ಞನಂತೆ- ಔದ್ಯೋಗಿಕ ತಜ್ಞನಂತೆ, ಸತ್ಯಾಗ್ರಹದ ವ್ರತಧಾರಿ– ಭಾರತೀಯ ಜೈನ– ಬೌದ್ಧ ಧರ್ಮದ ಅಹಿಂಸಾ ಮಾರ್ಗದ ಹೋರಾಟಗಾರನಾಗಿ ಒಟ್ಟು ಗಾಂಧೀಜಿಯವರು ಸಾಧಿಸುವ ಬಹುಮುಖ ವ್ಯಕ್ತಿತ್ವವು ಆ ಫೋಟೋಗ್ರಾಫರನ ಕ್ಯಾಮರಾದ ಕಣ್ಣಿಗೆ ಮೀರಿದ್ದಾಗುತ್ತದೆ. ಇದು ಬರಿ ಗಾಂಧೀಜಿಯವರ ವೈಯಕ್ತಿಕ ಸಾಧನೆಯ ಕುರಿತ ವಿಚಾರಕ್ಕಿಂತ ಒಂದು ಸಮಾಜಕ್ಕೆ ಪ್ರಯೋಜನಶೀಲವಾಗುವಂತಹ ವ್ಯಕ್ತಿತ್ವದ ನಿರ್ಮಾಣದ ಪ್ರಶ್ನೆಯ ಬಗ್ಗೆ ಹೆಚ್ಚಿನ ಬೆಳಕನ್ನು ಚೆಲ್ಲುವಂಥ ವಿಚಾರವಾಗುತ್ತದೆ. ನಮ್ಮ ಸಮಾಜ ಜೀವನದೊಂದಿಗೆ ತಮ್ಮ ಸಂಬಂಧ ಸ್ಥಾಪಿಸಿಕೊಳ್ಳಲಾರದೆ ಇಡೀ ಸಮಾಜವನ್ನು ವಿಘಟನೆಯ ಅಂಚಿಗೆ ತಂದು ನಿಲ್ಲಿಸುತ್ತಿರುವ, ಕ್ರಮೇಣ ಹೆಚ್ಚು ಪರಕೀಯಗೊಳ್ಳುತ್ತ (alienating) ಹೋಗುತ್ತಿರುವ ಹುಸಿ ವಿದ್ಯಾವಂತ ವರ್ಗದ ಹಿನ್ನೆಲೆಯಲ್ಲಿ ಗಾಂಧೀಜಿಯವರ ಮಾರ್ಗ ನಮಗೆ ಇನ್ನಷ್ಟು ನಿಚ್ಚಳವಾಗಿ ಕಾಣುತ್ತದೆ. ಗಿಡಮರಗಳು ಚಿಗುರುತ್ತ ತಮ್ಮ ವೈಯಕ್ತಿಕ ಸಾಧನೆ ಗೈಯುತ್ತಲೇ ವಸಂತ ಋತುವನ್ನು ನಿರ್ಮಿಸುವಂತೆ ಗಾಂಧೀಜಿಯವರು ತಾವು ಸಾಧಿಸುವ ವೈಯಕ್ತಿಕ ಸಾಫಲ್ಯದೊಂದಿಗೆ ಸಾಮಾಜಿಕ ಸೌಂದರ್ಯವನ್ನು ಸಾಧಿಸುತ್ತಾರೆ. ಆಗ ಡಿ. ಎಚ್. ಲಾರೆನ್ಸ್‌ನ– [illegible]

He is alive like a tree in Spring ಎಂಬ ಮಾತು ತಟ್ಟನೆ ತನ್ನ ಅರ್ಥವನ್ನು ಹೊಳೆಸುತ್ತದೆ.

ಗಾಂಧೀಜಿಯವರ ಬಹುಮುಖ ವ್ಯಕ್ತಿತ್ವದ ಛಾಯಾ ಚಿತ್ರ ಹಿಡಿಯಲು ಪ್ರಯಾಸಪಡುತ್ತಿದ್ದ ಛಾಯಾಚಿತ್ರಗ್ರಾಹಕನ ಬವಣೆಯನ್ನು ನೆನಪಿಸಿಕೊಳ್ಳುತ್ತಿದ್ದಂತೆಯೇ ನನಗೆ ಹುಡುಗನೊಬ್ಬನ ನೆನಪಾಗುತ್ತದೆ. ಫೋಟೋಗೆ ಸಿಕ್ಕದ ಗಾಂಧಿ ವ್ಯಕ್ತಿತ್ವವನ್ನು ಈ ಹುಡುಗ ತನ್ನ ತಲೆ ಬೋಳಿಸಿಕೊಂಡು ಕನ್ನಡಕ ಹಾಕಿ ಕೋಲು ಹಿಡಿದುಕೊಂಡು ಗಾಂಧಿ ಪಾತ್ರದ ಮೂಲಕ ನಮ್ಮ ಮುಂದೆ ತಂದು ನಿಲ್ಲಿಸಲು ಪ್ರಯತ್ನಪಡುತ್ತಿದ್ದನು. ಈ ಹುಡುಗ ಮುಂದೆ ಬಸ್ಸಿಗೆ ಹಣವಿಲ್ಲದೆ ಸೈಕಲ್ಲಿನ ಮೇಲೆ ಇನ್ನೂರು ಮೈಲುಗಳಷ್ಟು ದೂರದ ಬೆಂಗಳೂರಿಗೆ ಓಡಿ ಹೋಗಿ ಟೆಕ್ಸ್‌ಟೈಲ್ಸ್ ಕಾಲೇಜಿಗೆ ಸೇರಿದನಂತೆ.

ಅವನು ಅಲ್ಲಿಂದ ಹೊರಬೀಳುವಾಗ ಪ್ರಥಮ ರ್‍ಯಾಂಕ್ ಪಡೆದವನಾಗಿದ್ದ. ಅಲ್ಲಿಂದ ಬೊಂಬಾಯಿನ ಟೆಕ್ಸ್‌ಟೈಲ್ಸ್ ಸಂಶೋಧನಾ ಸಂಸ್ಥೆಯಲ್ಲಿ ದುಡಿದ.

ಇಂದು ಅವನು ತಾನು ಆಯ್ದುಕೊಂಡ ಫೈಬರ್ ಟೆಕ್ನಾಲಜಿಯಲ್ಲಿ ವಿಶ್ವವಿದ್ಯಾನಿಲಯದಿಂದ ಸ್ನಾತಕೋತ್ತರ ಪದವಿ ಪಡೆದವನಾಗಿದ್ದಾನೆ. ಸುಮಾರು 20,000 ರೂಪಾಯಿಗಳ ಮಾಸಿಕ ವೇತನ ಹಾಗೂ ಅದಕ್ಕೆ ಹೊಂದಿ ಬರುವ ಎಲ್ಲಾ ಸೌಲಭ್ಯಗಳನ್ನು ಒಳಗೊಂಡ ವಿದೇಶಿ ನೇಮಕಾತಿಯನ್ನು ಸ್ನೇಹದಲ್ಲಿಯೇ ಬಿಟ್ಟುಕೊಟ್ಟು ಸ್ವದೇಶಕ್ಕೆ ಮರಳಿದ್ದಾನೆ. ಅವನು ಮದುವೆಯಾಗಿರುವುದು ತನ್ನ ಹಳ್ಳಿಗೆ ಸಮೀಪದ ಒಂದು ಹಳ್ಳಿಯ ಹುಡುಗಿ ಆಕೆ, ಅತಿ ಸಂಪ್ರದಾಯಸ್ಥ ಕುಟುಂಬಕ್ಕೆ ಸೇರಿದ ಇವನ ತಂದೆ ತಾಯಿಗಳು ಒಪ್ಪಬಹುದಾದ ಮತ್ತು ಒಪ್ಪಿರುವ ಹುಡುಗಿ. ಮಕ್ಕಳು ಮೆರಿಟ್ ಸೀಟು ಪಡೆದು ರಾಷ್ಟ್ರಮಟ್ಟದ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತ ತಂದೆಯೊಡನೆ ಬೆಳೆಯುತ್ತಿದ್ದಾರೆ. ಈತನ ತಮ್ಮನೊಬ್ಬನೂ ಸಹ ಒಟ್ಟಿಗೆ ಬಂದಿದ್ದಾನೆ. ಒಟ್ಟಿನ ಮೇಲೆ ಯಾರೂ ಬಯಸಬಹುದಾದ ಒಬ್ಬ ಒಳ್ಳೆಯ ಮನುಷ್ಯನ ನೆಮ್ಮದಿಯ ಕೌಟುಂಬಿಕ ಜೀವನ ಅವನದು. ಸಾಮಾನ್ಯರಿಗೆ ಇದೇ ಅವಕಾಶ ಸಿಕ್ಕಿದ್ದರೆ ಕನಿಷ್ಟಕ್ಕೆ ದೆಹಲಿಯಲ್ಲಿ ಮನೆ ಮಾಡಿ ಸದಾ ಇಂಗ್ಲೀಷಿನಲ್ಲಿಯೇ ಮಾತನಾಡಬಹುದಿತ್ತು. ಆದರೆ ಈ ಹುಡುಗ ತನ್ನ ಕಾರ್ಯಕ್ಷೇತ್ರವಾಗಿ ಆರಿಸಿಕೊಂಡದ್ದು ಬೆಳಗಾವಿಯಂಥ ಪುಟ್ಟ ನಗರ. ನಶಿಸುತ್ತಿದ್ದ ಉದ್ಯಮವೊಂದರ ನೇಕಾರರೊಡನೆ ಒಬ್ಬ ಸಮಾಧಾನಿ ಉದ್ಯಮಿಯಾಗಿ ಇದ್ದಾನೆ. ಒಬ್ಬನಿಗೆ ಒಂದು ದಿನಕ್ಕೆ ನೂರು ರೂಪಾಯಿಗಳಷ್ಟು ಕೂಲಿ ದೊರೆಯುವಂತೆ ಕೆಲಸ ದೊರಕಿಸಿದ್ದಾನೆ. ಅವರಿಗೆ ಅತ್ಯುತ್ತಮ ದರ್ಜೆಯ ನೂಲನ್ನು ಒದಗಿಸುತ್ತಾ ಅವರಿಂದ ಅತ್ಯುತ್ತಮ ಗುಣಮಟ್ಟದ ಉತ್ಪಾದನೆಯನ್ನು ಪಡೆಯುತ್ತಿದ್ದಾನೆ. ದಿನನಿತ್ಯದ ಉತ್ಪಾದನೆಯ ಒಂದು ಸೀರೆಯೂ ಸಹ ನಿಲ್ಲದಂತೆ ನಗದಿ ವ್ಯಾಪಾರವನ್ನು ರೂಢಿಸಿಕೊಂಡಿದ್ದಾನೆ. ತನ್ನ ಉತ್ಪಾದನೆಯನ್ನು ದ್ವಿಗುಣಗೊಳಿಸಿದರೂ ಸಹ ಸ್ಥಿತಿ ಬದಲಾಗದ ವಾತಾವರಣ ಅವನಿಗೆ ದಕ್ಕಿದೆ. ಆದರೂ ಸಹ ಹಬ್ಬದ ದಿನಗಳಲ್ಲಿ ಮಾತ್ರ ಅವನು ತನ್ನ ಉತ್ಪಾದನೆಯನ್ನು ಕೇವಲ 10%ರಷ್ಟು ಹೆಚ್ಚಿಸುತ್ತಾನೆ.

When a man goes out into his work - ಎಂಬುದು ನಮಗಿಲ್ಲಿ ಪ್ರಸ್ತುತವಾಗುತ್ತದೆ. ಕೆಲಸ ಮಾಡುವುದು ಅಷ್ಟೇ ಅಲ್ಲ, ಅದರಲ್ಲಿ ತನ್ಮಯರಾಗುವುದು ಒಂದು ಅದ್ಭುತ ಕೌಶಲ ಎಂದಂತಾಯಿತು. ''ನಾವು ಕೃಷಿ ಮಾಡೋಣ'' ಎಂದ ವೋಲ್ಟೈರ್ ತನ್ನ ಕೊನೇ ದಿನಗಳಲ್ಲಿ ಫ್ರಾನ್ಸ್ ಮತ್ತು ಸ್ವಿಡ್ಜರ್ಲೆಂಡ್ ಗಡಿಗಳ ಸಮೀಪದಲ್ಲಿ ಒಂದು ತೋಟ ಮಾಡಿ ಜೀವಿಸುತ್ತಿದ್ದ ಎಂದರೆ ನಮ್ಮ ಎಲ್ಲ ದರ್ಶನಗಳನ್ನು ಜೀವಂತಗೊಳಿಸುವುದು ಕೆಲಸ ಎಂದಾಯಿತು.

ಗಾಂಧೀಜಿಯವರ ಸಾಧನೆ ಅವರ ವ್ಯಕ್ತಿತ್ವದ ಔನ್ನತ್ಯದಿಂದ ಶ್ರಮಜೀವನದ ಸಮಾನ ತೆಯೆಡೆಗೆ ಬಂದದ್ದು. ಆದರೆ ಈ ಹುಡುಗ ಸಾಧಾರಣತೆಯಿಂದ ಉನ್ನತಿಯನ್ನು ಸಾಧಿ ಸಿದ್ದಾನೆ. ಈ ಎರಡು ವ್ಯಕ್ತಿಗತ ಚಾಲನೆಗಳು ಎಲ್ಲಿಯೋ ಒಂದೆಡೆ ಸಂಧಿಸುತ್ತವೆ. ಎನಿಸುತ್ತದೆ. ಇಂದಿನ ಯುವಕರಿಗೆ ಸಹ ಗಾಂಧೀಜಿ ಹೇಗೆ ಪ್ರಸ್ತುತವಾಗುತ್ತಾರೆಂದು ಈ ಉದಾಹರಣೆ.

ನಮ್ಮ ಯುವಕರು ತಮ್ಮ ಸ್ಥಿತಿಗತಿಯನ್ನು ಒಪ್ಪಿಕೊಂಡು ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡಾಗಲೇ ಉನ್ನತಿ ಸಾಧಿಸುವುದು ಸಾಧ್ಯ. ಅದು ಸುಲಭವೂ ಹೌದು. ಇಲ್ಲಿ ವೇಷಭೂಷಣ ಮುಂತಾದ ಪ್ರಾಥಮಿಕ ಅನುಕರಣಕ್ಕೆ ಗಾಂಧೀಜಿಯೊಡನಾಗಲಿ ಅಥವ ಪ್ರಗತಿಶೀಲ ರಾಷ್ಟ್ರಗಳೊಡನೆಯಾಗಲಿ ತೊಡಗಬೇಕಿಲ್ಲ.

ಕೆಲಸ, ತನ್ಮಯತೆ– ಕೆಲಸದಲ್ಲಿ ತನ್ಮಯತೆ, ಅದಕ್ಕೆ ಬೆಂಬಲವಾದ ಆಂತರಿಕ ತುಡಿತ ಇವುಗಳ ರಸವಿದ್ಯೆ ಮನುಷ್ಯನನ್ನು ಹೇಗೆ ಉನ್ನತಿಗೊಳಿಸುತ್ತದೆ ಎನ್ನುವ ಬಗ್ಗೆ ಇಷ್ಟು ಸಾಕು ಎನಿಸುತ್ತದೆ.

ಸಂವಾದ ತನ್ನ ಸುತ್ತಲಿನವರೆಲ್ಲರ ಜೊತೆಗೆ ತೊಡಗಿಕೊಳ್ಳುತ್ತ, ಸಾಮಾಜಿಕ ಜೀವನ ದೊಂದಿಗೆ ಪ್ರಯೋಜನಶೀಲ ಸಂಬಂಧ ಸ್ಥಾಪಿಸಿಕೊಳ್ಳುವ ಹಂಬಲದೊಂದಿಗೆ ಹೊರ ಬರುತ್ತಿದೆ. ನಿಮ್ಮೆಲ್ಲರ ಪ್ರೀತಿ ಪ್ರೋತ್ಸಾಹಗಳು ಇದನ್ನು ಬೆಳೆಸುತ್ತವೆ. ದಯವಿಟ್ಟು ಸಹಕರಿಸಿರಿ.

ವಂದನೆಗಳೊಂದಿಗೆ,

ನಿಮ್ಮ,

ಜಿ. ಎಲ್. ರಾಮಪ್ಪ

ಚುಕ್ಕಿಗಳು

ಯಾರು ತಿರಿಗಿಸಿ ಬಿಟ್ಟರು
ಕತ್ತಲ ಬೆಳಕಿನ ಗೋಳವ ?

ಯಾರು ತಿಳಿದರು ತಿರುಗಿಸಿ
ಹೊರಗೆಸೆವ ಈ ಆಟವ ?

ಹೇಗೆ ತಿರುಗಿದರೇನು
ಬಿಳಿ ಕಪ್ಪು ತಪ್ಪುವುದೇ ?

ಕಾಲವೆಂಬುದೀಗ ಕಾಲ್ಪನಿಕ
ಮಿದುಳಲ್ಲಿ ಹುಟ್ಟಿ
ಮಿದುಳೊಡನೆ ಸಾಯುವ ಭ್ರಾಮಕ
ಹೆಸರು ಸಾವಿರ
ಬಸಿರು ಒಂದೇ.

— ಭ. ನಾಗರಾಜ್

ಆತ್ಮೀಯರೇ,

ಮನುಷ್ಯಕುಲ ಬದುಕಿರುವವರೆಗೂ ನಾಚಿಕೆ ಪಟ್ಟುಕೊಳ್ಳಬೇಕಾದ ಹೀನ ಕೃತ್ಯ ಈ ಶತಮಾನದಲ್ಲಿ ನಡೆದಿದೆ.

ನಮ್ಮೆಲ್ಲ ಸಾಧನೆಗಳನ್ನು ತೂಗಿ ನೋಡುವ ಮುಂದಿನ ತಲೆಮಾರಿನವರು ಇಂಥದೊಂದು ಘಟನೆಯಿಂದ ನಮ್ಮ ಅಂತರಂಗವನ್ನು ಕಂಡು ಜುಗುಪ್ಸೆಪಟ್ಟುಕೊಳ್ಳಬಹುದು. ಕಾಲ ಹಡೆದ ಈ ವಿಕೃತ ಘಟನೆ ಮನುಷ್ಯಕುಲವಿರುವವರೆಗೂ ತನ್ನ ದುರ್ಗಂಧವನ್ನು ಹರಡುತ್ತಲೇ ಇರುತ್ತದೆ.

ಮನುಷ್ಯರ ಆತ್ಮಗಳು ಕೊಳೆತು ದುರ್ವಾಸನೆಯನ್ನು ಹರಡುತ್ತಿರುವುದು ಈ ಘಟನೆಯಿಂದ ಸ್ಪಷ್ಟವಾಗಿದೆ. ಅವಮಾನವಾದದ್ದು ಹೇಲು ತಿಂದವರಿಗಲ್ಲ, ತಿನ್ನಿಸಿದವರಿಗೆ. ಅವರ ನೀಚ ಮನಸ್ಸುಗಳು ಹೇಲಿಗಿಂತ ಅಸಹ್ಯವಾದದ್ದು ಎನ್ನುವುದನ್ನು ಜಗತ್ತಿಗೆ ತೋರಿಸಿಕೊಟ್ಟಿದ್ದಾರೆ. ನಾಗರೀಕ ಜನ ಅವರನ್ನು ಹೇಗೆ ಕಾಣುತ್ತಾರೆ ಎನ್ನುವುದು ಇನ್ನವರಿಗೆ ಮನವರಿಕೆಯಾಗಬೇಕಿದೆ. ಯಾಕೆಂದರೆ ಕಾನೂನಿನ ಶಿಕ್ಷೆ ಇನ್ನವರಿಗೆ ಏಕಕ್ಕೂ ತಟ್ಟುವುದಿಲ್ಲ. ಜಾತಿ ಹಣ ಅಧಿಕಾರಿಗಳ ರಾಕ್ಷಸರು ಇವರು. ಪ್ರತಿಯೊಬ್ಬ ಮಾನವನೂ ಇವರನ್ನು ಧಿಕ್ಕರಿಸಬೇಕು.

ಚರಿತ್ರೆಯಲ್ಲಿ ದನಿಕಳೆದುಕೊಂಡವರಿಗೆ ದನಿ ಕೊಟ್ಟ, ಮನುಷ್ಯರನ್ನು ಸಮಾನ ನೆಲೆಗೆ ತರಲು ಹೆಣಗಿದ, ದಯವೇ ಧರ್ಮದ ಮೂಲ ಎಂದು ಸಾರಿದ. ಬಸವಣ್ಣನ ಧರ್ಮದವರೆಂದು ಕೊಳ್ಳುವವರು- ಇಂಥ ಹೀನ ಕೃತ್ಯವನ್ನೆಸಗಿದ್ದು ಎಲ್ಲ ಕಾಲಕ್ಕೂ ತತ್ವಕ್ಕೆ ಮಸಿಬಳಿದು, ಸಮಾಜವನ್ನೇ ಅವಹೇಳನ ಮಾಡಿದಂತಾಗಿದೆ. ಪ್ರತಿಯೊಬ್ಬ ಪ್ರಜ್ಞಾವಂತನೂ ಇದನ್ನು ಖಂಡಿಸುವುದು ಮತ್ತು ಇಂಥದಕ್ಕೆ ಆಸ್ಪದ ಕೊಡದ ಎಚ್ಚರವನ್ನೂ ಬೆಳೆಸಿಕೊಳ್ಳುವುದು ನಿಜವಾಗಿ ಬಸವನೊಲಿಸುವ ಪರಿ.

ಮನುಷ್ಯ ದೀರ್ಘವಾದ ಸಂಸ್ಕೃತಿಯ ಶಿಖರವನ್ನು ಏರಲು ಶ್ರಮಿಸುತ್ತಿರುವುದು ಎಷ್ಟು ಸತ್ಯವೋ ಅದರ ವಿರುದ್ಧ ದಿಕ್ಕಿನಲ್ಲಿ ಇದುವರೆಗೆ ಬಾಳಿದ ಮಾನವರು ಕಂಡು ಕೇಳರಿಯದ ಕುಸಂಸ್ಕೃತಿಯ ಅನಾಗರೀಕತೆಯ ಹೀನ ಸ್ಥಿತಿಯ ಕಡೆಗೂ ಇಳಿಯುತ್ತಿದ್ದಾನೆ ಎನ್ನುವುದು ಅಷ್ಟೇ ಸತ್ಯ. ಇದನ್ನು ಬೆಂಡಿಗೇರಿ ರುಜುವಾತು ಪಡಿಸಿದೆ.

ಇಂಥ ಹೀನ ಮನಸ್ಸುಗಳನ್ನು ಸಮಸ್ತ ಮಾನವ ಕುಲ ಪ್ರತಿಭಟಿಸಬೇಕಿದೆ ಇಂಡಿಯಾದಲ್ಲಿ ಎಲ್ಲದಕ್ಕೂ ಮೊದಲು ಮನುಷ್ಯರನ್ನು ಮನುಷ್ಯರಂತೆ ಕಾಣುವ ಪ್ರಾಥಮಿಕ ಪ್ರಜ್ಞೆಯನ್ನು ಮೂಡಿಸುವ ಆಂದೋಲನದಲ್ಲಿ ಸಮಾಜದ ಪ್ರತಿಯೊಬ್ಬ ನಾಗರೀಕನೂ ತನ್ನನ್ನು ತೊಡಗಿಸಿಕೊಳ್ಳಬೇಕಿದೆ.

ವೈ, ಮಂಜಪ್ಪ

'ಸಂವಾದ' ಗೆಳೆಯರ ಪರವಾಗಿ

Printed Published and Edited for SAMVADA Prakashana
Malladihalli Post, Chitradurga Dist. 577531

Printed at :
Sri Maruthi Printers,
Channagiri-577213

ಖಾಸಗೀ ಪ್ರಸಾರಕ್ಕಾಗಿ

ಸಂವಾದ

ಈ ಸಂಕಲನದ ಸಂಪಾದಕರು :

ವೈ. ಮಂಜಪ್ಪ

ಸಂವಾದ ಪ್ರಕಾಶನ ಮಲ್ಲಾಡಿಹಳ್ಳಿ, ಚಿತ್ರದುರ್ಗ ಜಿಲ್ಲೆ.

'ಸಂವಾದ'ದ ಲೇಖಕರು :

ಕೆ. ಎಸ್. ರೋಹಿಣಿ, ದ್ವಿತೀಯ ಬಿ.ಎಸ್ಸಿ.,
ಎ. ವಿ. ಕೆ. ಮಹಿಳಾ ಕಾಲೇಜ್, ಹಾಸನ.

ಚಂದ್ರಶೇಖರ ತಾಳ್ಯ, ತರ್ಕ ಶಾಸ್ತ್ರದ ಉಪನ್ಯಾಸಕರು, ಕೆ. ಎನ್. ಪದವಿಪೂರ್ವ ಕಾಲೇಜು, ಹೊಳಲ್ಕೆರೆ, ಚಿತ್ರದುರ್ಗ ಜಿಲ್ಲೆ.

ಡಿ. ಎಸ್. ನಾಗಭೂಷಣ, ಕಾರ್ಯಕ್ರಮ ನಿರ್ವಹಣಾಧಿಕಾರಿ, ಆಕಾಶವಾಣಿ, ಮಂಗಳೂರು–575004

ಸ. ಶ್ರೀನಿವಾಸ್ ನಟೇಕರ್, ಮೈಸೂರು ಬ್ಯಾಂಕ್, ಗಂಡಸಿ.

ಬಿ. ಎಸ್. ವಿಜಯಲಕ್ಷ್ಮಿ, ಎ. ವಿ. ಕೆ. ಮಹಿಳಾ ಕಾಲೇಜು, ಹಾಸನ.

ಎನ್. ಷಣ್ಮುಖಪ್ಪ, ಎಂ.ಎಸ್ಸಿ., ಎಜಿ., ತೋಟಗಾರಿಕಾ ಇಲಾಖೆ, ಶಿವಮೊಗ್ಗ.

ಡಾ॥ ಎ. ಎನ್. ನಾಗರಾಜ್, 61, 1 ನೇ ಅಡ್ಡ ರಸ್ತೆ, ವಿದ್ಯಾನಗರ, ಶಿವಮೊಗ್ಗ

ಡಾ॥ ಸುನೀತ್, ಶರತ್ ಕ್ಲಿನಿಕ್, ಚನ್ನಗಿರಿ.

ಸಿ. ಆರ್. ಅಣಜಿ, ಮಲ್ಲಾಡಿಹಳ್ಳಿ ಅಂಚೆ, ಚಿತ್ರದುರ್ಗ ಜಿಲ್ಲೆ–577531

ರಾಘವೇಂದ್ರ ಪಾಟೀಲ, ಮಲ್ಲಾಡಿಹಳ್ಳಿ ಅಂಚೆ, ಚಿತ್ರದುರ್ಗ ಜಿಲ್ಲೆ.

ಸ. ಉಷಾ, ಕನ್ನಡ ಉಪನ್ಯಾಸಕಿ, ಹೊಯ್ಸಳೇಶ್ವರ ಪ್ರಥಮ ದರ್ಜೆ ಕಾಲೇಜು, ಅರಸೀಕೆರೆ.

ಎನ್. ಎಸ್. ಶ್ರೀಧರಮೂರ್ತಿ, ಹರಿಹರಪುರ.

ವೈ. ಮಂಜಪ್ಪ, ಉಪನ್ಯಾಸಕರು, ಹೊಯ್ಸಳೇಶ್ವರ ಪ್ರಥಮ ದರ್ಜೆ ಕಾಲೇಜು, ಅರಸೀಕೆರೆ.

ಒಂದು ನೆನಪಿನ ನೆನಪೇ . .

● ಕೆ. ಎಸ್. ರೋಹಿಣಿ

Hunger and Love govern the world and phiolsophy spotls it

— M. Gorky

ಈಗಲೇ ಹೇಳಿಬಿಡುತ್ತಿದ್ದೇನೆ; — ನಾನು ಈ ಕಥೆಯ ನಿರೂಪಕಿಯೇನಲ್ಲ. ಇಂತಹದೇ ಹತ್ತು ಹಲವಾರು ಕತೆಗಳ ಹನ್ನೊಂದನೇ ನಿರೂಪಕಿಯಾಗಬಯಸದ್ದಕ್ಕಾಗಿ ಅಥವಾ ಅಭಿವ್ಯಕ್ತಿಗಾಗಿ ಪದಗಳು ಮುಗಿಬೀಳಲಿಲ್ಲವೆಂದು ಮಾತ್ರವೇ ನಾನು ಹಾಗೆ ಹೇಳುತ್ತಿಲ್ಲ! ಆದರೆ ತಮ್ಮನ್ನು ತಾವೇ ಸ್ಪಷ್ಟವಾಗಿ ಅಭಿವ್ಯಕ್ತಿಸಬಲ್ಲ ವಿಮರ್ಶೆಗೆ ಅಡವಿಟ್ಟುಕೊಳ್ಳಬಲ್ಲ ಪಾತ್ರಗಳಿರುವಾಗ: ಎಲ್ಲಕ್ಕಿಂತ ಮುಖ್ಯವಾಗಿ ಪಾತ್ರಗಳ ಅರಿವಿನೊಂದಿಗೇ ಘಟನೆಗಳ ಉದ್ದಕ್ಕೂ ಅಡಗಿ ಕೂತು ಸಾಕ್ಷಿಯಾದ ಕತೆಗಾರನಿರುವಾಗ ನಾನು ಹೇಗೆ ನಿರೂಪಕಿಯಾಗಲಿ ?

೧

ಆ ಸೌಂದರ್ಯದ ದಿನಗಳು ನೆನಪಾಗುತ್ತವೆ.

ಈವತ್ತೇ ಈವತ್ತು ಸಾವಿನ ದಿಗ್ಭ್ರಮೆ ಕಂಡವರ ಹಾಗೆ, ಹಾಗೆ ಯಾಕೆ ಹೇಳಬೇಕೆನ್ನಿಸುತ್ತದೆ ಎಂದು ಮಾತ್ರ ಅರಿವಾಗುವುದಿಲ್ಲ. ಹೇಳಬೇಕೆಂದರೆ ನಿನ್ನೆಯೂ ಇಷ್ಟೆ,–ನಾಳೆಯ ಹಾಗೆ, ಅನುಭವದ ಫರಕು ಕಳೆದ ವರ್ತಮಾನದ ಹಾಗೆ. ಈ ಎರಡೂವರೆ ವರ್ಷಗಳ ದೀರ್ಘದಲ್ಲಿ ನಾವು ಇತ್ತ ಜೊತೆಯಾಗಿ ಕಾಲು ಹಾಕಿರಲೇ ಇಲ್ಲ ಎನ್ನುವುದನ್ನು ಬಿಟ್ಟರೆ–ದಿನನಿತ್ಯ ನಲುಗುವ ಇಲ್ಲಿಯ ಹುಲ್ಲುಗಳನ್ನು, ನಳನಳಿಸುವ ಗುಲಾಬಿಗಳನ್ನು, ಬಿಸಿಯುಸಿರ ಕಾವಿನಲ್ಲಿ ಕಳೆದುಹೋಗುವ ಮಾತುಗಳನ್ನು, ಈ ಹಾಳು ಪಾರ್ಕಿನ ಅಳಿದುಳಿದ ನಾಜೂಕನ್ನು ಸಮಗಾಗಿ ಕಾಯ್ದಿರಿಸಿಕೊಳ್ಳೋಣವೆಂದು ವರುಷಗಳ ಹಿಂದೆಯೇ ಹೇಳಬೇಕಾಗಿತ್ತು. ಹೇಳಲಿಲ್ಲ.

ಏನನ್ನು ಹುಡುಕುತ್ತಾ ಹೊರಟಿದ್ದೀಯೆ ಕೃಷ್ಣಾ ?–ನಿನ್ನನ್ನು. ನನ್ನನ್ನು ಅಥವಾ ವರುಷಗಳ ಹಿಂದಿನ ನಮ್ಮನ್ನು ? ಒಮ್ಮೆಯು ನಮ್ಮ ನಿತ್ಯದ ಗುರುತ್ತಿದ್ದ ಓಕ್‌ಟ್ರೀ ಇದೀಗ ಓರಿಯಂಟಲ್ ಗೋಪುರಕ್ಕೆ ಪೈಪೋಟಿಯಾಗುತ್ತಿದೆಯಾಗಿ– ವರುಷಗಳ ಕಾಲ ಮುಪ್ಪಿನ ನೆರಿಗೆಗೆ ಸಿಗದೆ ಉಳಿದುಬಿಡುವುದು. ಇವಕ್ಕೆ ಮಾತ್ರವೇ ಸಾಧ್ಯವಿರಬೇಕು. ಏನೂ ಬದಲಾಗುವುದಿಲ್ಲ. ಬಾಬ್ ಕೂದಲನ್ನು ತಳ್ಳುತ್ತಾ ಪಾರ್ಕು ಸುತ್ತುತ್ತಿದ್ದ ಕೆನರಾ ಬ್ಯಾಂಕಿನ ಹುಡುಗಿ. ನನಗೆ ಗೊತ್ತಿಲ್ಲ; ಸೂಕ್ತ ಪ್ರೇಮಿ ಸಿಗದ ಕಾರಣಕ್ಕಾಗಿ ಲಿಪ್‌ಸ್ಟಿಕ್ ಕೋಟಾ ಹೆಚ್ಚಿಸಿರಬೇಕು. ಯಾವತ್ತೂ ನಗು ಮರೆಯದ 'ವಿಲ್ಸ್‌ಫಿಲ್ಟರ್'-ನ ಹುಡುಗಿ, ಬಹುಶಃ ನಿನ್ನೆಗಳ ಯಾವಾದರೊಂದು ರಾತ್ರಿಯಲ್ಲಿ ಯಾವನಾದರೊಬ್ಬ ಹುಚ್ಚನೋ, ಕುಡುಕನೋ ಬಂದು ಧೂಳು ಒರೆಸಿ ಮುದ್ದಿಸಿ ಹೋಗಿದ್ದಿರಬಾರದೇಕೆ? ನಿನ್ನ ಪ್ರೀತಿಯ ಗುಲ್‌ಮೊಹರ್‌ಗಳು; ಅವು ಅತ್ತು, ನಕ್ಕು, ಬಿಕ್ಕುವ ದಿನಗಳ ಲೆಕ್ಕ ವಿಡುವ ಸೂಕ್ಷ್ಮ ಇದೀಗ ಮರೆತಿದೆಯೇನು ? ಮಾತಾಡುವುದಿಲ್ಲ ಯಾಕೆ ಕೃಷ್ಣಾ, ನಿನ್ನ 'ಇಷ್ಟ–ಇಷ್ಟ–ಇಷ್ಟ'ದ ನಟಿ ಶೋಭಾಳ ಸಾವಿನ ಬಗ್ಗೆ ? ಕ್ರಾಂತಿಯಲ್ಲೇ ಗಪಗುಟ್ಟುತ್ತಿದ್ದ ನಿನ್ನ ಮಾರ್ಕ್ಸ್‌ವಾದಿ ಮಿತ್ರ ಮೊನ್ನೆ ತಾನೇ ಸಪ್ತಪದಿ ತುಳಿದು ತಾಳಿ ಬಿಗಿದಿದ್ದರ ಬಗ್ಗೆ ?

ಮಾತು ಬಿಚ್ಚದ, ಮೌನವೂ ಬಿಕ್ಕದ ಈ ಹಾದಿ ಮತ್ತಷ್ಟು ಸುದೀರ್ಘವಾಗುವುದು ಬೇಡವೆಂದುಕೊಳ್ಳುತ್ತೇನೆ. ಇಲ್ಲಿಯೇ ಕುಳಿತುಬಿಡೋಣ; ಪ್ರಿಯ ಕೃಷ್ಣಾ – ಕುಳಿತು ಕೊಳ್ಳು. ಹೆಜ್ಜೆಗಳು ಜೊತೆಯಾದಂತೆಲ್ಲಾ ಮತ್ತೆ ಆತ್ಮೀಯತೆಯಂಥದೇನಾದರೂ ಸಂಭವವಾಗುವ ಭಯ ನನಗೆ.

ದಯವಿಟ್ಟು ಕೂಲಿಂಗ್‌ಗ್ಲಾಸ್ ತೆಗೆದುಬಿಡುತ್ತೀಯಲ್ಲ. ನಿನ್ನ ಬೆದರುವ ಕಣ್ಣುಗಳಲ್ಲಿ ನಮ್ಮ ಸಂಬಂಧದ ಕೊನೆಯ ಅರ್ಥವನ್ನು ಈವತ್ತಿಗಾದರೂ ಹುಡುಕಬೇಕೆಂದೇ ನಿನ್ನನ್ನು ಎಳೆದುತಂದವಳು ನಾನು. ಮಾತ್ರವಲ್ಲ–; ನಮ್ಮನ್ನು ಹಿಂಬಾಲಿಸಿ ಬಂದ ಕತೆಗಾರ ಅವನಿಗೆ ಗೊತ್ತು, ಒಬ್ಬ ಹುಡುಗ–ಹುಡುಗಿ ಸೇರುವಲ್ಲಿ ತನ್ನ ಕತೆಗೆ ದಕ್ಕು-ವ ಏನಾದರೊಂದು ಘಟಿಸುವುದೇ ಇರುತ್ತದೆ ಅಂತ; ಅದಕ್ಕಾಗಿ ಮೌನವಾಗಿ ನಮ್ಮನ್ನು ಹಿಂಬಾಲಿಸಿ ಬಂದವನನ್ನು ಮರೆತು ತನ್ಮಯವಾಗಿ ಹೇಳಬೇಕಿದೆ ನನಗೆ. ಹಾಗೆ–ನಿನ್ನ ಕಣ್ಣುಗಳನ್ನು ದಿಟ್ಟಿಸುತ್ತಲೇ ಹೇಳಬೇಕು. ಇಲ್ಲವಾದರೆ, ಕತೆಗಾರನ ಹಾಜರಿಯಲ್ಲಿ ಚೆಂದದ ಕತೆಯಾಗಬಯಸುತ್ತಾ; ಸುಳ್ಳಾಗಲೀ ಪರಸ್ಪರರನ್ನು ವೈಭವೀಕರಿಸುತ್ತಾ, ಸುಳ್ಳು–ಸುಳ್ಳೇ ನೋವುಗಳನ್ನೂ ವಿರಹಗಳನ್ನು ಸೃಷ್ಟಿಸುತ್ತಾ–ಬೇಡಾ ಕಣೋ.

ಎಲ್ಲಿಂದ ಬಿಚ್ಚಿಕೊಳ್ಳಬೇಕೆಂದಿದೆ ನನಗೆ ? ಪುಟ್ಟ ಅಕ್ಷರದಿಂದಲೇ ಪ್ರಾರಂಭಿಸಬಹುದಿತ್ತು.

ಆದರೆ ನಮ್ಮ ಸಂಬಂಧದ ಕ್ರಿಯೆಯೇ ಪೂರ್ತಿ ಮರಗಟ್ಟಿದ ಬಿಂದು ಅವನೇ ಆದ್ದ ರಿಂದ ಇಷ್ಟು ದೀರ್ಘ ನಡೆದದ್ದು ವ್ಯರ್ಥವಾಗದಿರಲಿ. ಅದಕ್ಕೂ ಮೊದಲು,

ಹೇಳು ಕೃಷ್ಣಾ – ಏನು ಯೋಚಿಸುತ್ತಿದ್ದೀ ಅಂತ. ಯಾಕಿಷ್ಟು ಮೌನವಾಗಿಬಿಡು ತ್ತಿದ್ದೀ ಮಾರಾಯ ? ನಮ್ಮ ನಡುವಿನ ಈ ದೀರ್ಘ, ಪ್ರಗಾಢ ಮೌನವನ್ನು ಹಿಂದೆ ಯಾಗಿದ್ದರೆ ಎಷ್ಟು ಮಾತುಗಳು, ಜಗಳಗಳು ಮತ್ತೆ ಕೆಲವೊಮ್ಮೆ ಮೌನವೇ ತುಂಬಿ ಕೊಳ್ಳುವುದಿತ್ತು ಅಂತ ಯೋಚಿಸುತ್ತಲೇ- ನಾವು ಪರಸ್ಪರ ತಪ್ಪಿಸಿಕೊಳ್ಳುತ್ತಿದ್ದೇವೆ ಯಾಕೆ ಕೃಷ್ಣಾ ? ಮದುವೆಯಲ್ಲೇ ಮುಕ್ತಾಯವಾಗಿಬಿಡುತ್ತಾ ಸಾಮಾನ್ಯವಾಗಿಬಿಡ ಬಹುದಿದ್ದ ಎಲ್ಲಾ ಸಾಂಪ್ರದಾಯಿಕ ಸಂಬಂಧಗಳನ್ನು ಮೀರ ಹೊರಟ ನಾವು ಪರಸ್ಪರ ಮತ್ತೆಷ್ಟು ಗಾಢವಾಗಬಹುದಿತ್ತು, ಅಥವಾ ಮೊದಲಿನಂತೆಯೇ ಉಳಿದುಬಿಡುವ ಇಲ್ಲಾ ಚಿರವಿರಹಿಗಳಂತೆ ಬದುಕಿನಿಂದ ವಿಮುಖರಾಗುವ. ಇಲ್ಲವೇ ಪರಸ್ಪರ ಕದ್ದು ಭೇಟಿಯಾ ಗುತ್ತಲೇ ಸಭ್ಯತೆಯ ಸೋಗು ಹಾಕಿಬಿಡುವ .. ಇತ್ಯಾದಿ ಯಾವ ಸಾಧ್ಯತೆಗಳೂ ಇರದ ಹಾಗೆ ಹೇಮಂತನ ಮೂಲಕ, ನಿನ್ನ ಹೆಂಡತಿಯ ಮೂಲಕ ವ್ಯವಹಾರದ ಬದುಕೊಂದಕ್ಕೆ ಮಗ್ಗುಲಾದೆವಲ್ಲ ಕೃಷ್ಣಾ.

ಇರಲಿ. ನಮ್ಮ ಬದುಕಿನಲ್ಲಿ ಕನಿಷ್ಠ ಈ ವಿದಾಯವಾದರೂ ಪ್ರಾಮಾಣಿಕದ್ದಾಗ ಬೇಕು. ಗೊತ್ತಿರಬೇಕಲ್ಲಾ ನಿನಗೆ- ಹೇಮಂತ ಬಂದಿದ್ದಾನೆ. ಈಗ ರಜೆಯಲ್ಲಿದ್ದೇನೆ. ಆಶ್ಚರ್ಯವಾಗಬಹುದಾ ನಿನಗೆ– ಹೇಮಂತ ಬಂದನಂತರದ ಈ ಭೇಟಿಯಲ್ಲೇನಿರ ಬಹುದು. ? ಅಂತ. ಹೆದರಬೇಡ ಕೃಷ್ಣಾ—ಕನಸುಗಳಲ್ಲೇ ಹಾದರಿಸುತ್ತಾ ಸುಖಿಸು ತ್ತಿದ್ದರೂ, ತರ್ಕ–ಸಿದ್ಧಾಂತಗಳ ನೆರಳಲ್ಲಿ, ಸಭ್ಯತೆ ಸಾದರಪಡಿಸಿದ ನಮ್ಮಲ್ಲಿ— ಕುತೂಹಲಕರವಾದ, ವಾಸ್ತವವಾದ, ಪ್ರಾಮಾಣಿಕವಾದ, ಚೆಂದವಾದ ಏನಾದ ರೊಂದು ಜರುಗುವುದು ಸಾಧ್ಯವೇ ಇಲ್ಲ.

ಬೇಗ ಮುಗಿಸುವುದು ಸಾಧ್ಯವೇ ಆಗುತ್ತಿಲ್ಲ ನೋಡು. ಬಿಚ್ಚಿಕೊಳ್ಳುತ್ತಾ ಹೋದಂತೆ -ಲ್ಲಾ ಎಲ್ಲವೂ ಬತ್ತಲಾಗುತ್ತಾ ದಿಗಿಲು ಹಿಡಿಸುತ್ತಿದೆ. ಅವಸರಿಸಬೇಡ ಕೃಷ್ಣಾ· ಸಂಜೆ ಕಾಲೇಜು ಬಿಡುವ ಹೊತ್ತಿಗೆ, ಹೇಮಂತ ಬರುವಷ್ಟರಲ್ಲಿ ನನಗೂ ಹೋಗ ಬೇಕಿದೆ. ಪ್ರತಿನಿಮಿಷಕ್ಕೆ, ಹಾಗೆ ಒಟ್ಟಾರೆ ಬದುಕಿಗೆ ವಿಧೇಯನಾಗಿಬಿಡುವ ಹೇಮಂತನ ಗೈರು ಹಾಜರಿಯಲ್ಲಿ ನಿನ್ನೊಡನೆ ಮಾತಾಡುವುದು ಈಗ ಮಾತ್ರವೇ ಸಾಧ್ಯವಾದುದರಿಂದ ಹೀಗೆ ಯುವ ಪ್ರೇಮಿಗಳ ಹಾಗೆ, ಇಲ್ಲವೆ ಸಾವಿರದೆಂಟು ಕನಸುಗಳ ಹೊತ್ತು ಏಕಾಂತ ಬಯಸಿ ಹೊರಟ ಹೊಸ ಜೋಡಿಗಳ ಹಾಗೆ ಇಲ್ಲಿ ಭೇಟಿಯಾಗಬೇಕಾಯ್ತು. ಆದರೆ ನಾವು ಯಾವ ಹಂತದಲ್ಲೂ ಇವ್ಯಾವುದೂ

ಆಗಿರಲಿಲ್ಲ; ಆಗಿಷ್ಟರೂ ಹಾಗಲ್ಲದ ಸೋಗು ಹಾಕಿದ ಕಟು ಸತ್ಯ ಮಾತ್ರ ನೋವಿನದು ಕೃಷ್ಣಾ.

ಹೀಗೆ ಹೇಮಂತನಿಗೆ ಅಥವಾ ಆ ಮೂಲಕ ಬದುಕಿಗೆ ಕಾಲಕ್ರಮೇಣ ವಿಧೇಯಳಾಗುತ್ತಿರುವುದು ನಿನಗೆ ಮೋಜು ಅನ್ನಿಸಬಹುದಾ ? ನಿಜ ಹೇಳುತ್ತೇನೆ- ಅವನ ನಿಗೂಢ ಮೌನದಲ್ಲಿ, ಹೃದಯ ತಟ್ಟುವ ಆತ್ಮೀಯತೆಯಲ್ಲಿ: ಅವನದೇ ಮಿಲಿಟರಿ ಶಿಸ್ತು ಬದ್ಧ ಬದುಕಿನಲ್ಲಿ ನೈತಿಕತೆ ಹೆಪ್ಪುಗಟ್ಟಿ ಬಿಟ್ಟಿದೆ. ಅವನು ಅನುಮಾನಗಳ ಸಣ್ಣತನಗಳ ಮೊತ್ತವಿದ್ದರೆ ಅವನೆದುರಿಗೇ ನಿನ್ನೊಂದಿಗೆ ಮತ್ತೆ ಮತ್ತೆ ಗುರುತಿಸಿಕೊಳ್ಳಬಹುದಿತ್ತು, ಆದರೆ ಹೇಮಂತ ಹಾಗೆ ಸಾಧ್ಯವಾಗಗೊಡುವುದಿಲ್ಲ. ಹೇಳಬೇಕೆಂದರೆ ಅವನನ್ನು ಮದುವೆಯಾಗಲೇಬಾರದಿತ್ತು ಎಂದೆನಿಸುತ್ತದೆ ಈಗ. ಆದರೆ ಈ ಮಿಲಿಟರಿ ಮನುಷ್ಯ ನನ್ನ ಆಕಾಶ ಕನಸುಗಳನ್ನು, ಕಟ್ಟುಪಾಡುಗಳ ನಿರಾಕರಣೆಯನ್ನು, ಪೂರ್ತಿ ವೈಯಕ್ತಿಕತೆಯನ್ನು ಹೇಗೆ ಪ್ರೀತಿಸುವುದು ಸಾಧ್ಯ ಎನ್ನುವ ನಂಬಿಕೆಯಲ್ಲಿ ಎಲ್ಲವನ್ನು -ನನ್ನ ಬೇವಾರ್ಸಿ ಅಶಿಸ್ತಿನ ಬದುಕನ್ನು, ಅದೇ ರೀತಿಯಲ್ಲೇ ನನ್ನ ಬದುಕನ್ನು ಪ್ರವೇಶಿಸಿದ ನಿನ್ನನ್ನು, - ಎಲ್ಲವನ್ನೂ ಬಿಚ್ಚಿಡುತ್ತಾ ಹೋದಂತೆಲ್ಲಾ ಮೌನವಾಗಿ ನಗುತ್ತಲೇ ಸ್ವೈಗುಟ್ಟಿದ ಇವನಲ್ಲಿ ಬದುಕನ್ನು ತೊಡಗಿಸಿಕೊಳ್ಳುವುದೂ ಒಂದು ತಮಾಷೆಯ ಸಾಧ್ಯತೆಯೆಂಬಂತೆ ಮದುವೆಯಾಗುವ ಹುಚ್ಚು ನಿರ್ಧಾರವನ್ನು ತೆಗೆದುಕೊಳ್ಳಬಾರದೇ ಇತ್ತು ಎನಿಸುತ್ತಿದೆ. ಯಾಕೆ ಗೊತ್ತಾ ಕೃಷ್ಣಾ ? ಯಾವತ್ತೂ ಯಾರ ಪ್ರಭಾವಕ್ಕೂ ನಿಲುಕದೆ ಉಳಿದುಬಿಡುವ ನನ್ನನ್ನು ಹೇಮಂತ ನಿಧಾನಕ್ಕಾದರೂ ತನ್ನ ಹತೋಟಿಗೆ ತೆಗೆದುಕೊಳ್ಳುತ್ತಿದ್ದಾನೆ.

ನಿರ್ಲಕ್ಷ್ಯದ ಸೋಗು ಹಾಕಬೇಡ ಕೃಷ್ಣಾ. ಕನಿಷ್ಠ ಈ ಭೇಟಿಯ ನಂತರವಾದರೂ ನಿನ್ನ ಹೆಂಡತಿ ಬಿಕ್ಕಿ-ಬಿಕ್ಕಿ ನಗುವಾಗಿನ, ಹಿನ್ನೆಲೆಯ ನೀನು ನೆನಪಾಗುವಾಗಿನ ಸಂದರ್ಭದಲ್ಲೂ ನನ್ನ ಹೃದಯ ನಾಯಿ ನೆಕ್ಕುವ ಹಾಗಾಗಬಾರದು. ಮಾತ್ರವಲ್ಲ, ಹಾದಿಯಲ್ಲಿ ಯಾವತ್ತಾದರೊಮ್ಮೆ ಹೆಂಡತಿಯೊಂದಿಗೆ ನೀನು ಭೇಟಿಯಾಗುವಾಗಲೂ ಸಭ್ಯತೆಯ ಮುಗುಳ್ನಗುವಿನೊಡನೆ ಹಿಂದಿನಂತೆ ಸಂತೋಷದ ಕೈಕುಲುಕುವಿಕೆಯಾದರೂ ಸಾಧ್ಯವಾಗಿಬಿಡಬೇಕು ಅನ್ನುವ ಆಶಯ ನನ್ನದು.

ಮತ್ತೆ-ಭೇಟಿಯ ಕಾರಣವನ್ನು ಜರೂರು ಹೇಳಿಬಿಡುತ್ತೇನೆ ಕೇಳು. ಕೆಲಸಕ್ಕೆ ರಾಜಿನಾಮೆ ನೀಡಿ. ಹೇಮಂತನೊಂದಿಗೆ ಬರೋಡಾದ ಅವನ ಹಳ್ಳಿಗೆ ಹೋಗುತ್ತಿದ್ದೇನೆ. ಅವನೂ ಸದ್ಯದಲ್ಲಿಯೇ ನಿವೃತ್ತನಾಗುವವನಿದ್ದಾನೆ. ಅಲ್ಲಿ ಹೋಗಿ ವ್ಯವಸಾಯ ಮಾಡುವ ನಿರ್ಧಾರ ನಮ್ಮದು. ನಿನ್ನೊಂದಿಗಲ್ಲದಿದ್ದರೂ ನಿನ್ನ ಕನಸುಗಳೊಂದಿಗೆ

ಜೊತೆಯಾಗುತ್ತಿದ್ದೇನೆ ಮಾರಾಯ. ಶುಭ ಹಾರೈಸುವಿಯೇನು ?

ಇನ್ನಾದರೂ, ಹೇಮಂತನೊಂದಿಗೆ ಆತ್ಮೀಯವಾಗಿ ಗುರುತಿಸಿಕೊಳ್ಳುವ ನಿರ್ಧಾರದಲ್ಲಿದ್ದೇನೆ. ನೀನು ಅಂದುಕೊಳ್ಳಬಹುದು–ನಾನು ಭಾವನಾತ್ಮಕವಾಗಿ ಬದ್ಧಳಾಗುತ್ತಿದ್ದೀನಾ ಅಂತ. ಆದರೆ ಆತ್ಮಹತ್ಯೆಗೇ ಆಗಲಿ, ಬದುಕಿಗೇ ಆಗಲಿ ಕಾರಣಗಳನ್ನೇ ಉಳಿಸದಷ್ಟು ನನ್ನನ್ನು ಖಾಲಿಯಾಗಿಸಿದ ಈ ಎಲ್ಲ ತರ್ಕಗಳನ್ನು ಮೀರಿ, ನನಗೆ ಬದುಕು ಬೇಕಿದೆ ಮಾರಾಯ.

ಕೊನೆಯದಾಗಿ –ನನಗೆ, ನಿನಗೆ ಖಂಡಿತವಾಗಿಯೂ ಗೊತ್ತಿದ್ದ, ಹಾಗಿದ್ದೂ ಪರಿಪೂರ್ಣ ಮುಗ್ಧರಂತೆ ನಟಿಸಿದ, ಅಭೂತಪೂರ್ವ ಸತ್ಯವೊಂದನ್ನು ಕತೆಗಾರನ ಕಾರಣಕ್ಕಾದರೂ ಹೇಳಿಬಿಡುತ್ತೇನೆ. ನನ್ನ ಮದುವೆಯ ಹಿಂದಿನ ದಿನದ ಪರಸ್ಪರರ ಆತ್ಮೀಯ ಒಡ –ನಾಟಕ್ಕೆ ಹೇಳಬಯಸಿಸ್ಪ ವಿದಾಯ, ಹೀಗೆ ಅಕ್ಷರನ ಮೂಲಕ ಹೇಮಂತನ ಬದುಕಿಗೆ ಮುಗ್ಗುಲಾಗುವದಿರುತ್ತದೆ ಅಂದುಕೊಂಡಿರಲಿಲ್ಲ. ಹಾಗೆ ಅಕ್ಷರನ ಮೂಲಕವೂ ಹೇಮಂತನೊಂದಿಗೆ ಗುರುತಿಸಿಕೊಳ್ಳಲಾಗದ ಕಾರಣ ನನ್ನ ದಿನನಿತ್ಯದ ನೋವು ಕೃಷ್ಣಾ. ನಿನಗೆ ಗೊತ್ತಿಲ್ಲ - ಪುಟ್ಟ ಅಕ್ಷರನ ಹುಟ್ಟು ಹಬ್ಬದ ದಿನ: 'ಸರಳಾ ಮತ್ತು ಯಾರು' ಅಂತ ಡೈರಿಯಲ್ಲಿ ಬರಕೊಂಡ ಹೇಮಂತ; 'ಹೇಮಂತ' ಅನ್ನಲಾಗದೆ ತೊದಲುವ ಅಕ್ಷರನಿಂದ 'ಅಪ್ಪಾ ಅನ್ನಬೇಕು ಕಣೋ ನೀನು' ಅಂತ ಪ್ರೀತಿಯಿಂದ ನಿರೀಕ್ಷಿಸುವ ಹೇಮಂತ, ಬೆಳಗಿನ ಹೊತ್ತು ಅಕ್ಷರನೊಂದಿಗೆ ಆಡ್ತಾಡುತ್ತಾ ಏಕಕಾಲದಲ್ಲಿ ಅಕ್ಷರನೊಂದಿಗೆ, ಗುಲಾಬಿಗಳೊಂದಿಗೆ ಮಾತಾಡಬಲ್ಲ ಹೇಮಂತ ! -ಚೆಂದ ಕೃಷ್ಣಾ.

ಕ್ಷಮಿಸು; ಹೀಗೆ ಹೇಮಂತನ ಬಗ್ಗೆಯೆಲ್ಲಾ ಹೇಳುತ್ತಾ, ತಾನು ಮಾತ್ರವಲ್ಲದೆ. ನಿನ್ನನ್ನೂ ಕುಬ್ಜವಾಗಿಸುತ್ತಿದ್ದೇನಾ ಎಂದೇನೂ ಅಂದುಕೊಳ್ಳಬೇಡ. ಅಥವಾ ಕತೆಗಾರನ ಮೂಲಕ ಹೇಮಂತನನ್ನು ನಾಯಕನಾಗಿಸುವ ಇಷ್ಟ ನನ್ನದು ಅಂತಲೂ ಅಂದುಕೊಳ್ಳಬೇಡ. ಯಾಕೆಂದರೆ ಯಾರದೆ ಬದುಕಿನ ಅನಿವಾರ್ಯ ನಾಯಕ ಹೇಮಂತನಿರಬಹುದಾದರೂ; ಯಾರೂ ಯಾವತ್ತೂ ನಾಯಕರಲ್ಲದ ನನ್ನ ಬರಡು ಚೈತನ್ಯದ ವ್ಯಕ್ತಿತ್ವದಲ್ಲಿ 'ಕೃಷ್ಣಾ' ಅಲ್ಲದ ಯಾರೂ ಏನೂ ಆಗಲಾರರು ಅನ್ನುವುದು, ನನಗೆ ಸ್ಪಷ್ಟ ಗೊತ್ತು,

ನೀನು ಒಮ್ಮೆ ಬರಬೇಕು ಕೃಷ್ಣಾ. ನಿನ್ನ ಕಣ್ಣುಗಳನ್ನು, ನಗುವನ್ನು ಬಿಂಬಿಸುವ ಪುಟ್ಟ ಅಕ್ಷರನಿಗೆ; ನಮ್ಮದಲ್ಲದ ಬದುಕೊಂದರ ಕಥಾನಾಯಕ ಹೇಮಂತನಿಗೆ ಕೊನೆಗೆ ನಿನ್ನ ಪ್ರೀತಿಯ ನನಗೆ–ಸಫ್ಲದ ವಿದಾಯ ಹೇಳಲಾದರೂ ಹೆಂಡತಿಯೊಂದಿಗೆ ಬರುವುದಿಲ್ಲವೇನು ?

೨

'ಭ್ರಮೆಯದಿತ್ತು ಸಾರ್' ಪ್ರೊ॥ ಅಕ್ಷರ ಹೇಳುತ್ತಿದ್ದ. 'ಮೂವತ್ತಾರು ವರುಷಗಳ ಈ ದೀರ್ಘ ಅವಧಿಯಲ್ಲಿ ಹೂತೇ ಹೋಗಿದ್ದ ಸಂಬಂಧವೊಂದು ನಾನು ಹೋಗಿ ಅಪ್ಪಾ ಅಂದುಬಿಡುವ ಮಾತ್ರಕ್ಕೆ ಚಾಲೂ ಆಗಬಹುದಿದೆ: ಬೆಳದಿಂಗಳ ನಗೆ ನಕ್ಕು ಬಿಡಬಹುದಿದೆ ಎಂದುಕೊಂಡಿದ್ದು ಎಷ್ಟು ತಮಾಷೆಯ ಕನಸಿತ್ತು, ಅಂತ ಇದೀಗ ಅನ್ನಿಸ ತೊಡಗಿದೆ.

'ನಿಮಗೆ ಗೊತ್ತಿರಲಿಲ್ಲ ಸಾರ್', ಸಿಗರೇಟಿನ ಹೊಗೆಯೊಂದಿಗೇ ಆಳಕ್ಕಿಳಿಯುತ್ತಿದ್ದ ಅಕ್ಷರ ಹೇಳತೊಡಗಿದ 'ಜೊತೆಯಾಗಿ ಬದುಕಲಾರದ ಸಹಜಸೋಲಿನ ನಡುವೆಯೂ ಹೇಮಂತ ಅಮ್ಮನ ನೆನಪಿನಲ್ಲಿ ಲಹರಿಯಾಗೇ ಇದ್ದರು. ಹಾಗೆ 'ಹೇಮಂತ' ನನ್ನ ಬದುಕಿನ ನಿತ್ಯದ ಕತೆಯಾಗಿದ್ದರೂ– ಬಹುಶಃ ಅದು ನನ್ನ ಪ್ರೀತಿಯ 'ಅಮ್ಮ' 'ಸರಳಾ'ನ ಮೂಲಕವಾದ ಕಾರಣಕ್ಕೇ ಇರಬೇಕು. -ನಿಜ ಹೇಳುತ್ತೇನೆ. ಯಾವತ್ತು ತಟ್ಟದ ಸಂಬಂಧನೇ ಇತ್ತು.''

ಕತೆಗಾರನ ನಡುಗುವ ಕೈಗಳು ಯಾಕೆ ಸಂತೈಸುವುದಿಲ್ಲ ಎನ್ನುವ ಅಸ್ವಸ್ಥತೆಯಲ್ಲಿ ಪ್ರಯತ್ನಪೂರ್ವಕವಾಗಿ ಗಟ್ಟಿಯಾಗುತ್ತಾ ಅಕ್ಷರ ಹೇಳುತ್ತಿದ್ದ ''ಕತೆಗಾರರಾಗಿ ನಿಮ್ಮ ಅದ್ಭುತ ಪ್ರಜ್ಞೆಯ ಬಗ್ಗೆ ನನಗೆ ಆಶ್ಚರ್ಯವಿದೆ ಸಾರ್. ಇಲ್ಲದಿದ್ದರೆ ಸರಳಾನ ಸಾವಿ ನಲ್ಲಿಯೂ ನೆನಪಾಗದ ಹೇಮಂತನಿಗಾಗಿ ಹಾಗೆ ಹೊರಟುಬಿಡುವವನಿರಲಿಲ್ಲ. ನೀವು ಹೇಳಿದ್ದು ಅರ್ಥವಾಗಿತ್ತು– ತನ್ನ ಜೀವಮಾನದ ಓಘದುದ್ದಕ್ಕೂ 'ಹೇಮಂತ'ನಲ್ಲದ ಮತ್ತೊಂದು ಸಂಬಂಧವನ್ನು ನನ್ನಿಂದಾಗಲೀ, ಸರಳಾನಿಂದಾಗಲೀ ದೃಢನಡಿಸಿಕೊಳ್ಳ ಲಾಗದ ನೋವು ಅವರಿಗಿತ್ತು–ಅಂತ. ಅದಕ್ಕೆಂತಲೇ ಹತ್ತು ವರ್ಷದವನಿದ್ದಾಗಿನ ಅಸ್ಪಷ್ಟ ನೆನಪುಗಳೊಂದಿಗೆ, ನಿರೀಕ್ಷೆಗಳೊಂದಿಗೆ, ಏನೋ ಘಟಿಸಿಬಿಡುವ ಕುತೂಹಲ ದೊಂದಿಗೆ, ಹಳೆಯ ಸಂಬಂಧವನ್ನು ಮತ್ತೆ ಹುಟ್ಟುಹಾಕುತ್ತಿರುವ ಖುಷಿಯೊಂದಿಗೆ ಬರೋಡಾಗೆ ಹೋಗಿದ್ದೆ. ಆದರೆ ಏನಿತ್ತು ಸಾರ್ ?''

''ಸೋಡಾಗ್ಲಾಸಿನ ಆಳದ ನಡುವೆ ಮಿನುಗುತ್ತಿದ್ದ ಆ ಕಣ್ಣುಗಳಲ್ಲಿ ಎದುರಿನಲ್ಲಿದ್ದ ಗೋಧಿ ಹೊಲಗಳಲ್ಲಿಯೇ ಬದುಕನ್ನು ದಕ್ಕಿಸಿಕೊಂಡ ತೃಪ್ತಿಯಿತ್ತೆಂದೇ ? ಮೌನದ ಫಲ ಹೊತ್ತಿದ್ದ ಕಣ್ಣುಗಳ ಬಗ್ಗೆ, ಶೂನ್ಯದಲ್ಲಿ ಅನಾವರಣಗೊಂಡ ಧ್ವನಿಯ ಬಗ್ಗೆ ಜೇಡರ ಬಲೆ ಹೊತ್ತ, ಕದ ತೆರೆಯದ ಅಲ್ಲಿಯ ಕೋಣೆಗಳ ಭೀಕರ ನಿರ್ಜೀವತೆಯ ಬಗ್ಗೆ, ತೊಡರುತ್ತಿದ್ದ ನೆನಪಿನ ಗುರುತುಗಳ ಬಗ್ಗೆ- ನನಗೆ ಏನೂ ಮಾತಾಡುವುದಿಲ್ಲ

ವೆಂದು ವಿಷಾದವೆನಿಸುತ್ತದೆ. ಆದರೆ ಯಾವತ್ತೂ ಕರೆಯದ 'ಅಪ್ಪಾ' ಅನ್ನುವ ಸಂಬೋಧನೆಯೊಂದಿಗೇ ದಿಗ್ಭ್ರಮೆಗೊಳ್ಳುತ್ತಿದ್ದ ನಾನು ! 'ಯೂ, ಅಕ್ಷರ್' ಅಂತ ನರಳುತ್ತಾ, ನನ್ನನ್ನು ಮುಟ್ಟಬೇಕೆನ್ನಿಸಿದರೂ ಮುಟ್ಟಲಾಗದವರಂತೆ, ತಡವರಿಸಬೇಕೆನ್ನಿಸಿದರೂ ಆಗದವರಂತೆ ನಿಷ್ಕ್ರಿಯವಾಗುತ್ತಿದ್ದ ಅವರು ! 'ಸರಳಾ' ಅನ್ನುವ ಕಾಲದ ನೆನಪಲ್ಲಿ ಮುಖವಿಟ್ಟು ಬಿಕ್ಕಿಬಿಡಬೇಕೆನ್ನಿಸಿ ..

ಇನ್ನೂ ಅದೇ ಗಳಿಗೆಯಲ್ಲಿ ಮರಗಟ್ಟಿದವನಂತಿದ್ದ ಅಕ್ಷರ ಮುಂದುವರಿಸುತ್ತಿದ್ದ "ನಿಮಗೆ ಅರ್ಥವಾಗಬೇಕೆಂದಿಲ್ಲ ಸಾರ್. ಆದರೂ ಹೇಳುತ್ತೇನೆ– ಆ ರಾತ್ರಿಯ ನೀರವತೆಯಲ್ಲಿ ಭಯದ ತುಣುಕುಗಳು ಬೆಳೆಯುತ್ತಿದ್ದವು. ಇದೊಂದು ರಾತಿ ಕಳೆದ ನಂತರ ಆ ಆಕೃತಿ ನನ್ನೊಂದಿಗೆ ನಿರಂತರವಾಗಿ ಸಂಬಂಧಿಸುವುದಿದೆ ಎನ್ನುವ ಯೋಚನೆಯೇ ನನ್ನಲ್ಲಿ ನಡುಗುತ್ತಿತ್ತು. ಹಾಗೆ ರಾತ್ರೋರಾತ್ರಿ ಅನಾಗರಿಕನಂತೆ, ಹುಚ್ಚನಂತೆ, ಕೊಲೆಗಡುಕನಂತೆ, ಆ ಪುಟ್ಟ ಹಳ್ಳಿಯ ಹಾದಿಗಳಲ್ಲಿ ತಡವರಿಸುತ್ತಾ, ಹೊರಟುಬಿಡಬೇಕೆನ್ನಿಸಿ: ಹೋಗುವ ಮೊದಲೊಮ್ಮೆ ಹೇಮಂತನ ಕಾಲುಗಳನ್ನು ಮುಟ್ಟಿ ನಮಸ್ಕರಿಸಿಬಿಡಬೇಕು ಅನ್ನುವ ತೀವ್ರ ಅನ್ನಿಸಿಕೆಯನ್ನು ಮೆಟ್ಟಲಾಗದೆ...., ಆದರೆ ಸಾರ್, ಅವರ ಕಾಲುಗಳು ಬರ್ಫವಾಗಿದ್ದವು."

"ನಿಮಗೆ ಕ್ರೂರ ಅನ್ನಿಸಬಹುದು. ಆದರೆ ಆ ಗಳಿಗೆಯಲ್ಲಿ ಮೊತ್ತ ಮೊದಲ ಬಾರಿಗೆ 'ಸ್ವಾತಂತ್ರ್ಯ' ಅನ್ನುವುದನ್ನು ಅನುಭವಿಸುತ್ತಿರುವಂತೆ, ಮತ್ತೆ ಮೊದಲಿಗೇ ಮರಳುತ್ತಿರುವಂತೆ ಅನ್ನಿಸತೊಡಗಿತು."

"ನನಗನ್ನಿಸುತ್ತದೆ– ಹೇಮಂತನಂತಹ ಪರಿಪೂರ್ಣ ವ್ಯಕ್ತಿಯ ಸಾವಿನಲ್ಲಿ, ನನ್ನದು ಮಾತ್ರವಲ್ಲ ನಿಮಗೆ ಗೊತ್ತಿಲ್ಲದ ನಿಮ್ಮ ಸಮಾಧಾನದ ನಿಟ್ಟುಸಿರೂ ಇರಬಹುದು ಒಪ್ಪಿಕೊಳ್ಳಿ ಸಾರ್" ಕತೆಗಾರನ ನಿಸ್ಸೀಮ ತೀಕ್ಷ್ಣತೆಯ ಮೇಲೆ ವಿಜಯ ಸಾಧಿಸಿದ ಅಕ್ಷರ ಹೇಳುತ್ತಿದ್ದ–

"ಎಲ್ಲಾ ಸುಳ್ಳು ಸಮಾಧಾನ ಹಾಗೂ ತರ್ಕಗಳ ನಡುವೆಯೂ ಬದುಕು ನಿರೀಕ್ಷೆಯಲ್ಲಿರುತ್ತದೆ ಸಾರ್. ಈಗ ನೋಡಿ ".

೩

ಯಾರೂ ಹೇಳುವ ಇಲ್ಲಿಯ ಸಂಗತಿಗಳು, ನಿಮ್ಮ ನೆರೆಮನೆಯ ಯಾವುದೇ ಪ್ರೇಮದ ಗಂಡಸಿನದಿರಬಹುದೆಂದು ಮರೆತು ಹೋದ, ನಿಮ್ಮದೇ ಇರಬಹುದೆಂದು: ಇಲ್ಲಿಯ ಸರಳಾ, ಕೃಷ್ಣಾ ಮತ್ತು ಯಾರೂ ಕೂಡಾ ನಿಮ್ಮೊಳಗೇ ಅಡಗಿರಬಹುದೆಂದು ಹೇಳುವ ಮುನ್ನ ನನ್ನದೊಂದು ಮಾತಿದೆ. ಏನೆಂದರೆ, ನನ್ನನ್ನು ದಯವಿಟ್ಟು ಕ್ಷಮಿಸಿ ಅದು ನನ್ನ ಮತ್ತು ಕತೆಗಾರನದಲ್ಲವೆಂದು ಮಾತ್ರ ನನಗೆ ಹೇಳಲಾಗುತ್ತಿಲ್ಲ.

೧ ದಾವಣಗೆರೆಯೆಂಬ ದೇವನಗರಿಯ ಮಾಯೆ.

'ಮನದ ಮುಂದಣ ಆಸೆಯೇ ಮಾಯೆ'
— ಅಲ್ಲಮ

ತೆಂಗು ತಲೆಯೆತ್ತಿ ಆ ಕಡೆಗೆ ಈ ಕಡೆಗೆ
ಮುಂದಗಾಳಿಯ ತಳ್ಳಿ
ಹಸಿರಿನುಯ್ಯಾಲೆಯಲಿ
ಹಾಲು ಬೆಳಕದು ಚಿಮ್ಮಿ
ಕೂಸಾಡಿದಂತೆ ಕಿಲ ಕಿಲವೆ ನಗು.

ನಗುವ ಹೂ ಬತ್ತಿ ಮಿಣಿ ಮಿಣಿ
ದೀಪಗಳುರಿದು ಕಣ್ಣುಗಳ ಮಿಂಚಲ್ಲಿ
ಕಂದ ಕಾಮನಬಿಲ್ಲನಣಕಿಸಿ
ಮಾವು ಮಲ್ಲಿಗೆ ಬೆಳೆದು ಅರಳಿತೋ

ಅಲ್ಲಿ
ಮಂಡಿ ಪೇಟೆಯಲಿ ತೇಜಿ ಮಂದಿಯ
ಓಡಾಟ, ಬಿಸಿಲು ಮೆಲ್ಲಗೆ ಮೈತೆರೆದು
ಗಾಂಧಿ ಸರ್ಕಲ್ಲು ರೆಸ್ಟೋರೆಂಟಿನಲಿ
ದೋಸೆ ಚುಯ್‌ಗುಟ್ಟಿ ಕಂಪು ಸೂಸುವುದು

ಎಲ್ಲಿ
ಸೈರನ್ನು ಅಲ್ಲೊಂದು ಇಲ್ಲೊಂದು ಕೂಗಿ
ಕರುಳ ಕುಡಿ ಕುಡಿಯೊಡೆದು
ಹಸಿವು ನೀರಡಿಕೆಗಳ ನೀಗಿ
ಎದೆ ಬಗೆದು ಪ್ರೇಮ ಉಕ್ಕುವುದು.

ಕುದುರೆ ಪೇಟೆಯಲೊಂದು ಕುದುರೆ
ಕಾಯಿ ಪೇಟೆಯ ಹಾದು, ಬಸವಣ್ಣ
ಜೇವು ಬೆಲ್ಲವ ಹಂಚಿ
ದುಗ್ಗಮ್ಮ ಕುಣಿಯುವಳು ಜಾತ್ರೆಯಲ್ಲಿ

ಸಂಜೆ ಗಾಳಿಯಲೆಲ್ಲೂ ಹಾಡು ತೇಲುವುದಯ್ಯಾ
ಬಂದೂರ ಕ್ಯಾಂಪಿನಲಿ ತಾರೆಗಳು ಮಿನುಗುವುವು
ನೇಯುವುವು ಮುತ್ತುಗಳ ಸರಮಾಲೆ
ಇದು ಯಾವ ಲೋಕದ ಲೀಲೆ.

ತ್ರಿವಳಿ ಮಗು ತೊದಲು ನುಡಿ ಉಲಿದು
ಬೆಳೆ ಬೆಳೆದು ಬಾತಿ ಗುಡ್ಡದ ಶಿಖರ ಮುಟ್ಟುವುದು
ಕೈಲಾಸ ಪೇಟೆಯಲಿ ಶಿವನ ಬೂ[illegible] ನಗೆ ಚಿಮ್ಮುವುದು
ಗಡಿಯಾರ ಕಂಬದಲಿ ಮತ್ತೆ ಚುಮು ಚುಮು ಬೆಳಗು

೨

ಮಳೆ ಬಂದು ಬೆಳೆ ಬೆಳೆದು
ತೊಯ್ದು ಹೊಲಗದ್ದೆ ಸುತ್ತ
ಹಣ್ಣು ಹಂಪಲು ತೊನೆದು
ನಗೆ ಉಕ್ಕಿದೆಡೆಗಳಲಿ

ಮಿಲ್ಲು
ಗುರುಗುಟ್ಟಿದವೆ
ನಾಯಿ ಬೆನ್ನಟ್ಟಿದವೆ
ಏಕಳುವೆ ಮಗುವೆ
ಏಕಳುವೆ ಸೈರನ್ನುಗಳ ಸಂತೆ
—ಯಂತೆ

ಕಿವಿ ಕಣ್ಣು ಮೂಗುಗಳ ಕಿಸಿದು
ಉದ್ದ ಅಷ್ಟುದ್ದ ಇಷ್ಟುದ್ದ
ಚೂಪು ಹಲ್ಲುಗಳ ಮಸೆದು
ಗಡಿಯಾರ ಕಂಬವ ಹತ್ತಿ ಏಕೆ ಹಲ್ಕಿರಿವೆ

ಕೈಯ ಗಸಗಸ ತೀದು
ತೆಗುಗಳ ತಲೆ ತರಿದು
ತುಂಗಭದ್ರೆಯಲಿ ಹೆಂಡ ಹರಿದು
ಹೊಗೆಯುಗುಳಿ, ಹಗೆಯುಗುಳಿ ಗಾಳಿ
ತೊಗಲು ತೊಗಲಿನ ಚೀಲ
ಆಡಿದರೆ ಆಡಿ, ನಕ್ಕರೆ ನಕ್ಕು
ಮುಟ್ಟದ ಮುಳ್ಳಿನಲಿ
ರಸ್ತೆಯಲಿ ಕಾರು ಲಾರಿ
ಭರ್‍ರೆಂದು ಓಡುವುವು.

ಶಿಖರ ಸುತ್ತಿ ಹೊಗೆ ಬತ್ತಿ ಕರುಣಿಪ್ಪವ
ಕರುಳ ಕತ್ತರಿಸಿ ಬೀದಿ ಬೀದಿಯ ಮೇಲೆಸೆದು
ಕತ್ತು ಹಿಚುಕುವ ಕೈಯಿ ಉದ್ದುದ್ದ ಬೆಳೆದು
ಚಾಚುವುದು ದಶದಿಕ್ಕುಗಳ ನುಂಗಿ ನೊಣೆಯಲು

ಬಸುರಿಯರು ಬಾಣಂತಿಯರು
ದಿಕ್ಕು ತಪ್ಪಿದ ಹೆಂಗೆಳೆಯರು
ಚಲ್ಲಾ ಪಿಲ್ಲಿ ಕೆದರಿ ತಲೆ
ಗಂಡುಗಳ ಕಣ್ಣಲ್ಲಿ ಕ್ರೂರ ಬಾಣಗಳು

ಮಂತ್ರ ತಂತ್ರಗಳು ಗೊಣಗಿ
ಮೂಕ ಲಿಂಗಗಳುಲಿದು
ಜಂಗಮರು ಕುದುರೆ ಏರಿದರು
ಪೇಟೆ ಪೇಟೆಯ ಹಾಯ್ದು ಶಿವನ ಮುಚ್ಚಿಟ್ಟದಪು,

ಕತ್ತಿಯಲಗಿನ ಮೇಲೆ ಯಾವ ಜೀವದ ತುಣುಕು
ಎಲ್ಲಿಹುದು ನೇವರಿಸುವ ಕೈಯಿ
ಅಲ್ಲಿಹುದು ಇಲ್ಲಿಹುದು ಮಿಂಚುವುದು
ಮಾಯವಾಗುವುದು ಯಾವುದೀ ಸೂಜಿ ಚುಚ್ಚುವುದು

ಏನು ಮಾಯೆಯಿದು ಗಡಿಯಾರ ಕಂಬ ಹೊಕ್ಕು
ಝಣ ಝಣವೆ ಕುಣಿಯುತಿದೆ, ಕುಕ್ಕುತಿದೆ, ಕುರುಡಾಡುತಿದೆ
ಬೆಳಗಿನ ಬಿಸಿಲೆ ಕಾದು ಮೈ ಚುಚ್ಚಿ
ದೇವನಗರಿಯ ಹೊಕ್ಕು ಹೊರಳಾಡುತಿದೆ........

೨ ಒಂದು ವಿರಹಗೀತೆ.

ಏಕೆ ಕಾಡುವೆ ನನ್ನ ಹೀಗೆ
ಬಳಲಿ ಬೆಂಡಾಗಿದೆ ಮನವು ಹಾಗೇ

ಏಕಾಂತದಲಿ ನೀನಿತ್ತ ಪ್ರೀತಿ ಏನಿಹುದೇನೋ
ಚಂದ್ರಮನ ನೀನೊಮ್ಮೆ ತಂದು ಕೊಟ್ಟಿದ್ದೆ
ಹಣ್ಣುಗಳ ಮೆಲ್ಲುತ್ತ ಹೂವುಗಳ ಮುಡಿಯುತ್ತ
ನದಿಯ ನೀರೊಳಗೆಂಥ ಚಿತ್ರ ಮೂಡಿತ್ತು

ಕಣಿವೆಯಾಳದ ಪ್ರೀತಿ ನನ್ನೆದೆಗೆ ಇಳಿದಿತ್ತು
ಹಸಿರು ಪೈರು ಮುರಿದಂತೆ
ಗಾಳಿ ತೆಳ್ಳಗೆ ಸವರಿ ಗಂಧ ಗಾಳಿಯ ಹಾಡು
ನೀನು ನಾನಾದಂತೆ ಅಂತೆ, ಕಂತೆ,

ಎಲ್ಲಿ ಹೋದೆಯೆ ಗೆಳತಿ ಇಳಿಜಾರಿನಲ್ಲಿ
ಮಾಯವಾದೆಯ ನೀನು ಕಣ್ಣಳತೆಯಲ್ಲಿ
ಕಣ್ಣೋಟ ಮಿಂಚೆಂದು ಹೇಗೆ ಹೇಳಲಿ ಹೇಳು
ತಾರೆಗಳು ಸುಟ್ಟು ಬೂದಿಯಾಗಿರುವಾಗ

ಸುಡುವ ಸೂರ್ಯನು ತಾಗಿ ಚಂದ್ರ ಕರಗಿಹನೀಗ
ಸುತ್ತೆಲ್ಲ ಕತ್ತಲಿನ ಹೂಂಕಾರ ಕೆನೆತ
ನನ್ನೆದುರೆ ನೀನಿರುವೆ, ನಿನ್ನ ನಗುವಿಹುದು ಯಾರ ಜೊತೆ
ಯಾಕೆ ಬೀಗುವೆ ಹೀಗೆ, ನಾನು ಬತ್ತಿದ ಒರತೆ

ನೆನಪುಗಳು ಮರಳುತಿವೆ
ದಂಡೆ ಮೇಲೆರುಳುತಿದೆ ಮರಳು ಜಾರಿ

ನೀರೆಷ್ಟು ಹರಿದಿಹುದೋ
ನದಿಯು ಆಳತೆಯ ಬಲ್ಲವರು ಯಾರೋ

ಏಕೆ ಕಾಡುವೆ ನನ್ನ ಹೀಗೆ
ಬಳಲಿ ಬೆಂಡಾಗಿದೆ ಮನವು ಹಾಗೇ.

೩ ಕತ್ತಲೆ ಮತ್ತು ನಾನು

ಕತ್ತಲೆಯು ಸರಿಸದೆ
ಚಿತ್ತಲೆಯಾಗಿ
ಬೆಳಕಿಗಾಗಿ ಹಂಬಲಿಸುವವ ನಾನು.

ಗಾಢ ಘೋರ ಕಾಳ ರಾತ್ರಿಗಳಲ್ಲಿ
ಹಾವು ಝರಿ ಚೇಳುಗಳಿಗೆ ಹೆದರಿ
ನಿದ್ರೆಯಿಲ್ಲದೆ ಬಿದ್ದವನು ನಾನು.

ಬಣ್ಣವಿಲ್ಲದ ಕನಸುಗಳ ಕಂಡು
ಬೆಚ್ಚಿ ಎಚ್ಚೆತ್ತು ಗದ ಗದ ನಡುಗಿ
ಇಳಿವ ಬೆವರಿನಲಿ ತೊಯ್ದವನು ನಾನು

ರಕ್ತ ಕಾಲುವೆಯಲ್ಲಿ ರುಂಡಗಳು ತೇಲಿ
ಕೆಂಪು ಸಮುದ್ರದಲಿ
ದೋಣಿ ಮುಳುಗುತ್ತಿರುವುದ ಕಂಡವನು ನಾನು

ಮುಳುಗು ದೋಣಿಯಲಿ ಅವರಿವರ
ಮುಟ್ಟದ ಮೂಷಿಕಗಳ ಕಿತ್ತಾಟದಲಿ
ಬೇಸತ್ತವನು ನಾನು

ಅವು ಘುಮುಕುತ್ತವೆ ಸಾಗರದೊಳಗೆ
ಅವು ಸಾಯುತ್ತವೆ ಸಾವಿನೊಳಗೆ
ಆ ಸಾವ ಬಗೆಯ ಅರಿಯದವನು ನಾನು

ನರಿಯಾಟ ಕುರಿಯಾಟಗಳ
ನಿಶಾಚರರ ನೀಚ ಬೊಗಳುವಿಕೆಯಲ್ಲಿ
ನನ್ನತನ ಕಳೆಕೊಂಡವನು ನಾನು

ಕತ್ತಲೆಯ ಬಗೆದು ಕತ್ತಲೆಯ ಕಂಡು
ಬೆಳಕು ಬೆಳಕೆಂದಬ್ಬರಿಸಿದರೂ
ಕತ್ತಲನ್ನೇ ಉಂಡವನು ನಾನು

ಸುತ್ತಲು ಕತ್ತಲು ಮುತ್ತಲು
ಬೆಟ್ಟ ಕಣಿವೆಗಳು, ಹಸಿರು, ಹಕ್ಕಿಗಳು
ಕತ್ತಲಾದುದ ಕಂಡವನು ನಾನು.

೪ ಕನ್ನಡಿಯಲಿ ಕಂಡವಳು

ಕನ್ನಡಿಯಲಿ ಕಂಡವಳು
ಕನ್ನಡಿಯಲೇ ಕಾಡುವಳು

ದಾಸವಾಳದ ನಗೆಯ
ಹೂ ಮುಡಿದವಳು
ಗುಡಿಯ ಪೌಳಿಯ ಹಾದು
ಹೋದಾಗೊಮ್ಮೆ ಮಿಂಚುವಳು ಮಿಂಚಂತೆ

ಊರೆಲ್ಲ ಹೂವರಳಿ
ಹಾಲು ಬೆಳಕನು ತುಂಬಿ

ನಮ್ಮ ಮನೆ ಕತ್ತಲೆಯ
ಕನ್ನಡಿಯಲವಳ ಮುಖ ಫಳ್ ಎಂದಿತು

ಜಾತ್ರೆಯಲಿ ಆ ದೂರ
ಹೆಂಗೆಳೆಯರ ನಡುವೆ
ಅತ್ತಿತ್ತ ನೋಡುವಳು
ದೇವರಿಗೆ ಕೈ ಮುಗಿವಳು

ಬೆಟ್ಟವೇರಿದೆ ನಾನು
ಕೆಳಗಿಳಿಯಿತು ಬಾನು
ಏದುಸಿರ ಮೇಲುಸಿರು
ನನ್ನೆಡೆಗೆ ಹೋಡಳವಳು

ಗೌಡರ ಹುಡುಗನನು
ನೋಡಿ ನಕ್ಕಳು ಅವಳು
ಅಲ್ಲಿ ದೇವರ ಗುಡಿಯು
ಅವನು ಅವಳೊಳಗೆ

ಹಿಂಗ ಬಾರದೆ ಕಣ್ಣು
ಕನ್ನಡಿಯ ಕಾಣದಂತೆ
ಕೊಲ್ಲ ಬಾರದೆ ಮನವ
ಅವಳ ನೆನಪಾಗದಂತೆ

ಕನ್ನಡಿಯು ಚೂರಾಗಿ
ನೂರೊಂದು ಅವಳ ಮುಖ
ಕಾಡುವುದು ನನ್ನನ್ನು
ಏನಾದರೇನಿನ್ನು

ಕನ್ನಡಿಯಲಿ ಕಂಡವಳು
ಕನ್ನಡಿಯಲೇ ಕಾಡಿದಳು.

ಜಾಡು ದಶಕದ ಕನ್ನಡ ಕಾವ್ಯ : ಕೆಲವು ಟಿಪ್ಪಣಿಗಳು

● ಡಿ. ಎಸ್. ನಾಗಭೂಷಣ

ಕಳೆದೊಂದು ದಶಕದ ಕನ್ನಡ ಕಾವ್ಯವನ್ನು ಕುರಿತು ಮಾತನಾಡಲು ನನಗೆ ಹೇಳಿದ್ದಾರೆ. [illegible] ನಿಮ್ಮಲ್ಲಿ ಬಹಳಷ್ಟು ಜನಕ್ಕೆ ಗೊತ್ತಿರಬೇಕು— ಕಳೆದ ದಶಕ ಕಾವ್ಯಕ್ಕೆ ಮಾತ್ರವಲ್ಲ, ಇಡೀ ಕನ್ನಡ ಸಾಹಿತ್ಯಕ್ಕೆ ಒಂದು ಬಿಕ್ಕಟ್ಟಿನ ಕಾಲವಾಗಿತ್ತು: ಏನೂ ಬರೆಯಲಾಗದ ಸ್ಥಿತಿ ಅದು. ಕಾರಣಗಳನ್ನು ಕೇಳಿದರೆ ಒಬ್ಬೊಬ್ಬರು ಒಂದೊಂದು ಹೇಳಿಯಾರು. ಒಂದು ಸಾಹಿತ್ಯ ಮಾರ್ಗದ ಅವನತಿ ಒಂದು ಕಾರಣವಾದರೆ, ದೇಶದಲ್ಲಾದ ರಾಜಕೀಯ ಪಲ್ಲಟಗಳು ಸಾಂಸ್ಕೃತಿಕ ಕ್ಷೇತ್ರದಲ್ಲಿ ಉಂಟುಮಾಡಿದ ಕಂಪನಗಳು ಮತ್ತೊಂದು ಕಾರಣವಾದೀತು. ಬದುಕನ್ನು ಗ್ರಹಿಸುವ ನೋಟದಲ್ಲಿ ಬದಲಾವಣೆಗಳಾದಂತೆ ವಸ್ತುರೂಪ ವಿನ್ಯಾಸಗಳಲ್ಲೂ ಬದಲಾವಣೆಗಳಾದವು. ಕಾವ್ಯದ ಮಟ್ಟಿಗೆ ಹೇಳುವುದಾದರೆ ಕನ್ನಡದಲ್ಲಿ ಈ ಹತ್ತು ವರ್ಷಗಳಲ್ಲಿ ನಿಜವಾದ ಕಾವ್ಯ ಸೃಷ್ಟಿಗಿಂತ ಪ್ರಯೋಗಗಳೇ ಹೆಚ್ಚು. ಕಳೆದ ಎರಡು ಮೂರು ವರ್ಷಗಳಲ್ಲಷ್ಟೇ ಹಿಂದಿನ ಆರೇಳು ವರ್ಷಗಳ ಎಲ್ಲ ತಲ್ಲಣಗಳನ್ನು ಅರಗಿಸಿಕೊಂಡು ಸ್ಪಷ್ಟ ಚಹರೆಯ, ಖಚಿತ ಧ್ವನಿಯ ಒಂದು ಕಾವ್ಯ ಮಾರ್ಗದ ಆಶಯವನ್ನು ಹೊತ್ತ ಕಾವ್ಯ ಬಂದಿರುವುದು. ಹೀಗಿರುವಾಗ ಹತ್ತು ವರ್ಷಗಳ ಕಾವ್ಯದ ಶರೀರ ಸಮೀಕ್ಷೆ ಮಾಡುವುದು ಅಷ್ಟೇನೂ ಉಪಯುಕ್ತವಲ್ಲದ ಕೆಲಸವೆಂದೇ ನನ್ನ ಭಾವನೆ. ಆದುದರಿಂದ ಈ ಹತ್ತು ವರ್ಷಗಳಲ್ಲಿ ಕನ್ನಡ ಕಾವ್ಯ ಎದುರಿಸಿದ ಬಿಕ್ಕಟ್ಟುಗಳು ಹಾಗೂ ಸವಾಲುಗಳು ಮತ್ತು ಇವುಗಳಿಂದ ಅಂತಿಮವಾಗಿ ಹೊಮ್ಮಿರುವ ಆಶಯಗಳನ್ನು ಗುರುತಿಸುವ ಟಿಪ್ಪಣಿಗಳನ್ನಷ್ಟೇ ನಿಮ್ಮ ಮುಂದಿಡುವೆ.

ಮಂಗಳೂರಿನ ಸಾಹಿತ್ಯ ವೇದಿಕೆ 'ಭಾವಗಂಗೋತ್ರಿ'ಯ ದಶಮಾನೋತ್ಸವ ವಿಚಾರ ಸಂಕಿರಣದಲ್ಲಿ ಆಡಿದ ಮಾತುಗಳು (ಡಿಸೆಂಬರ್ 1986)

1

ಕನ್ನಡ ಕಾವ್ಯಕ್ಕೆ ಪಂಪನಿಂದು ಹಿಡಿದು, ಪ್ರಾಸಬದ್ಧವಾಗಿ ಹೇಳುವುದಾದರೆ ಕುವೆಂಪು ವರೆಗೆ, ಪ್ರಾಸಬಿಟ್ಟು ಹೇಳುವುದಾದರೆ ಬೇಂದ್ರೆವರೆಗೆ ಸುಮಾರು ಒಂದು ಸಾವಿರ ವರ್ಷಗಳ ಇತಿಹಾಸವಿದೆ. ಅಂದರೆ ಇನ್ನೊತ್ತಿನ ಕನ್ನಡ ಕಾವ್ಯ ಒಂದು ಸಾವಿರ ವರ್ಷಗಳ ಕಾವ್ಯಶಕ್ತಿ ಹಾಗೂ ಸಂಸ್ಕೃತಿಯನ್ನು ತನ್ನ ಒಡಲಲ್ಲಿಟ್ಟುಕೊಂಡು ಬೆಳೆಯುತ್ತಿದೆ.

ಹೀಗಿರುವಾಗ ಕಳೆದ ಹತ್ತು ವರ್ಷಗಳ ಕನ್ನಡ ಕಾವ್ಯದ ಬೆಳವಣಿಗೆಯನ್ನು ಗಮನಿಸುವ ಕೆಲಸ ವಿಮರ್ಶೆಯ ಸೌಕರ್ಯದ ದೃಷ್ಟಿಯಿಂದ ಕೆಲವು ಮಿತಿಗಳೊಳಗೇ ನಡೆಯಬೇಕಿದೆ. ಈ ಮಿತಿಗಳು ಕಾವ್ಯ ಪ್ರಪಂಚದ ಹೊರಗಿನವೇನೂ ಆಗಬೇಕಿಲ್ಲ. ಹಾಗೆ ನೋಡಿದರೆ ಕಾವ್ಯವೂ ಯಾವ ಅರ್ಥದಲ್ಲೂ ನಿರಪೇಕ್ಷ ವ್ಯುತ್ಪತ್ತಿ ಅಲ್ಲ. ಎಲ್ಲ ಕಲೆಗಳಂತೆ ಅದೂ ತನ್ನ ಕಾಲದ ಮಿತಿಗಳಲ್ಲೇ ಹುಟ್ಟಿ ಆ ಮಿತಿಗಳನ್ನು ಗೆಲ್ಲುವ ಹವಣಿಕೆ ತೋರುತ್ತಿದೆ. ವಾಸ್ತವಾಂಶ ಎಂದರೆ ಕಾವ್ಯದ ಜೀವಾಳ ಇರುವುದೇ ಈ ಹವಣಿಕೆಯಲ್ಲಿ. ಇನ್ನಷ್ಟು ಸಾರ್ವತ್ರಿಕವಾಗಿ ಹೇಳುವುದಾದರೆ ಎಲ್ಲ ಕಲೆಗಳ ಮೂಲವಾದ ಸೌಂದರ್ಯ ಸೃಷ್ಟಿಯ ಮೂಲ ಇರುವುದೇ ತನ್ನ ಹುಟ್ಟಿನ ಮಿತಿಗಳನ್ನು ಒಡೆಯುವುದರಲ್ಲಿ. ಬಹುಶಃ ಕಾಮು ಬರವಣಿಗೆ ಎಂದರೆ ಬಂಡಾಯವೇ ಎಂದದ್ದು ಈ ಅರ್ಥದಲ್ಲೇ. ಹೀಗಾಗಿ ಈ ಹತ್ತು ವರ್ಷಗಳ ಕಾವ್ಯವನ್ನು ನಾವು ಇನ್ನೊತ್ತಿನ ಬದುಕಿನ ಮಧ್ಯೆ ಅದರ ಮಿತಿಗಳ ಮಧ್ಯೆ ನಿಂತು ನೋಡಬೇಕಾಗಿದೆ.

ವಿಮರ್ಶೆಯ ಮಾತಿಗೆ ಬಂದರೆ ಪ್ರತಿಯೊಂದು ಕಾವ್ಯವೂ ತನ್ನ ಸೃಷ್ಟಿಯೊಂದಿಗೆ ತನ್ನ ವಿಮರ್ಶೆಯನ್ನೂ ಸೃಷ್ಟಿಸಿಕೊಂಡಿರುತ್ತದೆ. ಅಂದರೆ ಕಾವ್ಯ ಹೇಗೆ ಒಂದು ಕಾಲದ ಕೂಸೋ ಅದರ ವಿಮರ್ಶೆಯೂ ಆ ಕಾವ್ಯದ ಕಾಲದ ಕೂಸೇ ಆಗಿರುತ್ತದೆ. ಆದ್ದರಿಂದ ಈ ಮಿತಿಗಳನ್ನೂ ಮೀರಿ ಕಾವ್ಯವನ್ನು ಅನುಭವಿಸುವ ಪ್ರಯತ್ನ ಮಹತ್ವಾಕಾಂಕ್ಷೆಯ ಎರಡು ತುದಿಗಳಾದ ಸಿನಿಕತೆ ಅಥವಾ ತತ್ತ್ವಜ್ಞಾನಗಳಾಗಿ ಪರಿಣಮಿಸಬಹುದೇ ಹೊರತು ಕಾವ್ಯ ವಿಮರ್ಶೆ ಆಗುವುದಿಲ್ಲ.

ಈ ಮಾತುಗಳನ್ನು ನಾನು ಯಾಕೆ ಹೇಳಬೇಕಾಯಿತೆಂದರೆ, ಕಾವ್ಯವನ್ನು ಗ್ರಹಿಸುವ ಅಥವಾ ಸ್ವೀಕರಿಸುವ ಬಗೆ ಕುರಿತು ಈಗ ಅನೇಕ ಸಿದ್ಧಾಂತಗಳೂ ಪಂಥಗಳೂ ಚಾಲ್ತಿಯಲ್ಲಿವೆ. ಬುದ್ಧಿಯುಗದ ಫಲಗಳಿವು. ಭಾರತದ ಅಧ್ಯಾತ್ಮ ಆತ್ಮವನ್ನು ಕಾಣಲು ಹೋಗಿ ಅಸ್ಪೃಶ್ಯನ ಮುಖವನ್ನು ಕಂಡಂತೆ ಆಧುನಿಕ ನಾಗರೀಕತೆ

ಅಣುವನ್ನು ಒಡೆಯಲು ಹೋಗಿ ತನ್ನ ಹೃದಯವನ್ನೇ ಒಡೆದುಕೊಂಡಿದೆ. ನಿಸರ್ಗ ರಹಸ್ಯವನ್ನು ಭೇದಿಸಲು ಹೊರಟ ಈ ಬುದ್ಧಿಯುಗದ ಜ್ಞಾನದಾಹ ಟಿಸಿಲು ಟಿಸಿಲುಗಳಾಗಿ ಒಡೆದು ಒಡೆದು ತಾವು ಒಡೆದುಬಂದಿದ್ದಾದರೂ ಎಲ್ಲಿಂದ ಮತ್ತು ಏಕೆ ಎಂಬುದರ ಪರಿವೆಯೇ ಇಲ್ಲದಷ್ಟು ಬೆಳೆದು ಭಿನ್ನ ಭಿನ್ನ ಶಾಸ್ತ್ರಗಳಾಗಿ ನಂಬಿಕೆ-ನಿಷ್ಠೆಗಳಾಗಿ ಹಠಗಳಾಗಿ, ಮನುಷ್ಯ ಪ್ರಜ್ಞೆಯ ಸಮಗ್ರತೆಯನ್ನೇ ಅಸ್ತವ್ಯಸ್ತಗೊಳಿಸಿದೆ. ಇಲ್ಲದೇ ಹೋದರೆ ಈಗ ಪ್ರತಿಯೊಬ್ಬ ಬುದ್ಧಿವಂತನೂ ಹಠಯೋಗಿಯಂತೆ ಕಾಣುವುದಾದರೂ ಯಾಕೆ ? ಮನುಷ್ಯ ಪ್ರಜ್ಞೆಯ ವ್ಯುತ್ಪತ್ತಿ ರೂಪಗಳಲ್ಲಿ ಒಂದಾದ ಕಾವ್ಯ ಕೂಡಾ ಈ ಹಠಯೋಗದ ವಿದ್ಯಮಾನಕ್ಕೆ ಹೊರತಾಗಿಲ್ಲ.

ಕಳೆದ ದಶಕದ ಕಾವ್ಯ ಈ ಹಠಯೋಗ ವಿದ್ಯೆಯ ಬಿಕ್ಕಟ್ಟನ್ನು ಎದುರಿಸಿತು. ಎದುರಿಸಿ ಗೆಲ್ಲುವ ಆಶಯವನ್ನೇ ತೋರಿದೆ- ತನ್ನ ಸಾವಿರ ವರ್ಷಗಳ ಪರಂಪರೆಯ ಬಲದಿಂದ-ಎಂದೇ ನಾನು ಸೂಚಿಸಬಯಸುತ್ತೇನೆ. ಹತ್ತು ವರ್ಷಗಳ ಹಿಂದೆ ಕನ್ನಡ ಕಾವ್ಯದ ಬಗ್ಗೆ ಹರಡಿದ್ದ ನಿರಾಶಾವಾದ ಈಗ ಕ್ರಮೇಣ ಮಾಯವಾಗತೊಡಗಿದೆ. ಮತ್ತೆ ಕಾವ್ಯವನ್ನು ಓದುವ ತುಡಿತ, ಹಂಬಲ ನಮ್ಮೆಲ್ಲರಲ್ಲಿ ಉಂಟಾಗಿದೆ. ಈ ದಶಕದ ಕನ್ನಡ ಕಾವ್ಯದ ಬೆಳವಣಿಗೆ ಎಂದರೆ ನಿಜವಾಗಿ ಇದೇ ಎಂದು ನನಗನ್ನಿಸುತ್ತದೆ.

2

ಕಳೆದ ದಶಕದ ಆರಂಭ ಎಂದರೆ ನವ್ಯ ಕಾವ್ಯ ಮಾರ್ಗದ ಅವನತಿಯ ಆರಂಭವೇ ಆಗಿತ್ತು. ಅವನತಿ ಎಂದರೆ ಎಲ್ಲ ಅರ್ಥಗಳಲ್ಲಿ ನಿಜವಾದ ಅವನತಿ. ಅದು ಹೇಳಲು ಹೊರಟಿದ್ದ ದುರಂತ ಕೇವಲ ಅಳುಮೋರೆತನದಂತೆ. ಅದು ರೂಪಿಸಿಕೊಂಡಿದ್ದ ಪ್ರತಿಮೆ ಸಂಕೇತಗಳು ಕೇವಲ ದುಃಸ್ವಪ್ನಗಳಂತೆ, ಭಾಷೆಯನ್ನು ದುಡಿಸಿಕೊಳ್ಳಲು ಅದು ಸಾಧಿಸಿಕೊಂಡಿದ್ದ ಕೌಶಲ್ಯ ಕೇವಲ ಹೆಣಗಾಟದಂತೆ, ಕವನವನ್ನು ಕಟ್ಟಲು ರೂಢಿಸಿಕೊಂಡಿದ್ದ ಶಿಸ್ತು ಕೇವಲ ಪ್ರಾಣಾಯಾಮದಂತೆ ಕಾಣತೊಡಗಿತ್ತು. ನವ್ಯ ಕಾವ್ಯ ತಾನೇ ಸೃಷ್ಟಿಸಿಕೊಂಡ ಮಿತಿಗಳೊಳಗೆ ಬಂಧಿತವಾಗಿತ್ತು. ನವ್ಯ ಕಾವ್ಯ ಮಾರ್ಗದ ಆರಂಭದಿಂದ ಅಂತ್ಯದವರೆಗೂ ಅದರ ಚಾಲಕರಾಗಿದ್ದ ಪ್ರೊ॥ ಗೋಪಾಲಕೃಷ್ಣ ಅಡಿಗರು ಈ ಬಂಧನದಿಂದ ಬಿಡುಗಡೆ ಬಯಸಿದವರಂತೆ ಧರ್ಮಸ್ಥಳದಲ್ಲಿ ಹಂ. ಪ. ನಾಗರಾಜಯ್ಯನವರಿಗೆ ಶರಣಾಗತರಾದರು. ಎರಡು–ಎರಡೂವರೆ ದಶಕಗಳ ಕಾಲ ತಾನೇ ತಾನಾಗಿ ರಾರಾಜಿಸಿದ ನವ್ಯಕಾವ್ಯ ಮಾರ್ಗ 'ಶ್ರೇಷ್ಠ' ಕವಿ ಅಡಿಗರೊಬ್ಬರೇ ಎನ್ನುವುದು ಅಡಿಗರ ಯಶಸ್ಸನ್ನು ಹೇಳುವುದಕ್ಕಿಂತ ಹೆಚ್ಚಾಗಿ ನವ್ಯಕಾವ್ಯದ ಸೋಲನ್ನು ಹೇಳುತ್ತದೆ ಎಂದು ನನಗನ್ನಿಸುತ್ತದೆ.

ನವ್ಯ ಕಾವ್ಯದ ಸೋಲಿನ ಮೂಲ ಅದರ ಹುಟ್ಟಿನಲ್ಲೇ ಇತ್ತು. ಕಾವ್ಯದ ಒರತೆ ಚಿಮ್ಮುವುದು ಮನುಷ್ಯನೊಳಗಿನ ಸೌಂದರ್ಯ ಸೃಷ್ಟಿಯ ಅಭೀಪ್ಸೆಯಿಂದ ಎಂಬುದು ನಿಜವಾದರೂ, ಈ ಸೌಂದರ್ಯ ಸೃಷ್ಟಿಯ ಅಭೀಪ್ಸೆಯಾದರೂ ಹುಟ್ಟುವುದು ಯಾತರಿಂದ ಎಂಬುದು ಇನ್ನೂ ಮೂಲಭೂತವಾದ ಪ್ರಶ್ನೆ. ಚೂರು ಚೂರಾದಂತೆ ಕಾಣುವ ಬದುಕಿಗೆ ಒಂದು ಒಟ್ಟಂದ ಕೊಡುವ ಮೂಲಕ ನೆಮ್ಮದಿ ಪಡೆವ ಆಸೆಯೇ ಈ ಸೌಂದರ್ಯ ಸೃಷ್ಟಿಯ ಅಭೀಪ್ಸೆ. ಕಾವ್ಯ, ಹೀಗಾಗಿ, ಮೂಲತಃ, ಬದುಕನ್ನು ಗ್ರಹಿಸುವ ಮತ್ತು ಎದುರಿಸುವ ಒಂದು ಬಗೆ. ಆದರೆ ನವ್ಯ ಕಾವ್ಯ ಬದುಕನ್ನು ಗ್ರಹಿಸಿದ ಎದುರಿಸಿದ ಪರಿಯೇ ನಕಾರಾತ್ಮಕವಾದದ್ದು. ಸ್ವಾತಂತ್ರ್ಯೋತ್ತರ ಭಾರತದಲ್ಲಿ ಗಾಂಧಿಯುಗದ ಮೌಲ್ಯಗಳಿಗೆ ಆದ ಆಘಾತದಿಂದ ಮೂಡಿದ ಭ್ರಮನಿರಸನವನ್ನೇ ಮೂಲಸತ್ವವಾಗಿ ಪಡೆದುಕೊಂಡ ನವ್ಯ ಕಾವ್ಯಕ್ಕೆ ಈ ಭ್ರಮನಿರಸನ ಒಂದು ವ್ಯಸನವೇ ಆಯಿತು. ಅಂತರ್ಮುಖಿಯಾದ ನವ್ಯ ಕಾವ್ಯ, ಜಿಗುಪ್ಸೆಯಿಂದ ಸೆರೆಗೆ ಶರಣಾಗುವ ಅವಿವೇಕಿಯಂತೆ ಹೊರಜಗತ್ತಿಗೆ ಕಣ್ಣು ಮುಚ್ಚಿಕೊಂಡಿತು. ಕೊನೆಗೆ ತಾನೇ ಕಣ್ಣು ಮುಚ್ಚಿಕೊಂಡಿತು; ಸಹಜವಾಗಿ.

ಆದರೆ ಈ ದಶಕದ ಕಾವ್ಯದ ಅಧ್ಯಯನ ಮಾಡುವುದಕ್ಕೆ ನವ್ಯ ಕಾವ್ಯದ ಸಾವಿಗಿಂತ ಹೆಚ್ಚಾಗಿ ಆ ಸಾವು ಎಂತಹ ಪರಿಸ್ಥಿತಿಯನ್ನು ಬಿಟ್ಟುಹೋಗಿತ್ತು ಎನ್ನುವುದು ಮಹತ್ವದ್ದು. ನವ್ಯ ಕಾವ್ಯ, ಸಾರತಃ, ಸ್ವಾತಂತ್ರ್ಯೋತ್ತರ ಭಾರತದಲ್ಲಿ ಪ್ರಬುದ್ಧ ಮಾನಕ್ಕೆ ಬಂದ ಮಧ್ಯಮ ವರ್ಗದ ವಿದ್ಯೆಯ ಉನ್ಮಾದ, ಸವಲತ್ತುಗಳ ಧಿಮಾಕು ಹಾಗೂ ವ್ಯಕ್ತಿಕೇಂದ್ರಿತವಾದ ದಟ್ಟ ಪ್ರಜ್ಞೆಯಲ್ಲಿ ಮೂಡಿದ ದಕ್ಷ ಸೃಷ್ಟಿ. ಈ ಮಾತುಗಳು ಕೆಲವರಿಗೆ ಕಟು ಎನ್ನಿಸಬಹುದು. ಆದರೆ ನವ್ಯ ಕಾವ್ಯ ಮಾರ್ಗ ನವೋದಯ ಕಾವ್ಯ ಮಾರ್ಗವನ್ನು ಗೇಲಿ ಮಾಡಿ ಹೊಸಕಿ ಹಾಕುವಲ್ಲಿ ತೋರಿದ ಕ್ರೌರ್ಯ, ತನ್ನ ಬದುಹನ್ನು ಸಾರಲು ನಿರ್ಲಜ್ಜವಾಗಿ ಬಳಸಿಕೊಂಡ ಆಘಾತ ಚಿಕಿತ್ಸೆಗಳ ವೈವಿಧ್ಯ, ಕನ್ನಡ ಕಾವ್ಯ ಸಂಸ್ಕೃತಿ ತನ್ನ ಪರಂಪರೆ ಯುದ್ದಕ್ಕೂ ಕಾಪಿಟ್ಟುಕೊಂಡು ಬಂದಿದ್ದ ಸಹೃದಯನ ಕಡೆ ಅದು ತೋರಿದ ತಿರಸ್ಕಾರ ಅಥವಾ ಓದುಗ ಸಮೂಹವನ್ನು ಕಳೆಕೊಂಡದ್ದೂ ಅದು ಪಡುತ್ತಿದ್ದ ವ್ಯಸನ ಸಂತೋಷ; ಹಾಗೆಯೇ ಇನ್ನೊಂದು ಕಡೆ, ತನ್ನನ್ನು ಬಿಟ್ಟು ಇನ್ನೆಲ್ಲವನ್ನೂ ಮರೆತ ಏಕಾಗ್ರತೆ ಯಿಂದ ಸಾಧಿಸಿಕೊಂಡ ಕಾವ್ಯ ಕಟ್ಟುವ ಕಸುಬುಗಾರಿಕೆ–ಇವೆಲ್ಲಕ್ಕೆ ಇನ್ನಾವ ಕಾರಣಗಳನ್ನು ಹುಡುಕೋಣ? ನೆಹರೂ ಯುಗದ ರಾಜಕಾರಣದಿಂದಾಗಿ ಬದುಕಿಗೇ ಮುಖ ತಿರುಗಿಸಿದ್ದ ನವ್ಯ ಕಾವ್ಯ ನೆಹರೂ ರಾಜಕಾರಣ ಪ್ರಣೀತವಾದ ಯಂತ್ರ ನಾಗರೀಕತೆಯ ಎಲ್ಲ ಲಕ್ಷಣಗಳನ್ನೂ ವಸ್ತು ಮತ್ತು ರೂಪಗಳೆರಡರಲ್ಲೂ –ಮೈಗೂಡಿಸಿಕೊಂಡು ಮೆರೆದದ್ದು * ಹೊರನೋಟಕ್ಕೆ ಒಂದು

* ಒಂದು ಪದ್ಯ ಸ್ವಯಂಚಾಲಿತ ಸಂಕೀರ್ಣಯಂತ್ರದಂತೆ ಕೆಲಸ ಮಾಡುವ ಬೆರಗು ಸೃಷ್ಟಿಯಾದದ್ದು ಆಗಲೇ—

ವಿಪರ್ಯಾಸವಾಗಿ ಕಂಡರೆ, ಒಳನೋಟದಲ್ಲಿ, ಮರುಕಕ್ಕೆ ಮಾತ್ರ ಅರ್ಹವಾದ ಆತ್ಮ ದ್ರೋಹವಾಗಿ ಕಾಣುತ್ತದೆ.

3

ಇದೆಲ್ಲದಕ್ಕೆ ಪ್ರತಿಕ್ರಿಯೆಯಾಗಿ ಮೂಡಿದ್ದು ಹೊಸ ಕಾವ್ಯ. ಅಂದರೆ ಈಚಿನ ಹತ್ತು ವರ್ಷಗಳ ಕಾವ್ಯ. ನಿಖರ ಶಬ್ದಗಳಲ್ಲಿ ಹೇಳಬೇಕೆಂದರೆ, ಹೊಸ ಕಾವ್ಯ ಮೂಡಲಿಲ್ಲ; ಅಬ್ಬರಿಸಿತು. "ಇಕ್ರಲಾ, ವದೀರ್ಲಾ, ನನ್ ಮಕ್ಕ ಚರ್ಮ ಎಬ್ರಲಾ...." ಎಂಬ ಸಿದ್ಧಲಿಂಗಯ್ಯನವರ ಸಾಲುಗಳು ಮೊದಲು ಪ್ರಕಟವಾದಾಗ ತಲ್ಲಣಗೊಂಡದ್ದು ಅದನ್ನು ಓದುವ ಕಾವ್ಯದ ಹೊರಗಿನ ಸಮಾಜಕ್ಕಿಂತ ಹೆಚ್ಚಾಗಿ, ಕಾವ್ಯ ರಚಿಸುವ ಒಳಗಿನ ಸಮಾಜವೇ. ಅಸ್ಪೃಶ್ಯತೆ ಮತ್ತು ಶೋಷಣೆಗಳ ವಿರುದ್ಧ ಹಾಕಿದ ಈ ಕೂಗು ಅಂದಿನ ಸನ್ನಿವೇಶದಲ್ಲಿ ಒಂದೇ ಸಲಕ್ಕೆ ಎರಡೆರಡು ಧ್ವನಿಗಳನ್ನು ಹೊರಡಿಸುತ್ತಿತ್ತೆಂದೇ ನನ್ನ ಭಾವನೆ: ಯಾವ ಅಸ್ಪೃಶ್ಯತೆ, ಯಾವ ಶೋಷಣೆ ಎಂದು ಕಾವ್ಯಕ್ಷೇತ್ರವೂ ತನ್ನ ಒಳ ಹೊರಗನ್ನು ನೋಡಿಕೊಳ್ಳತೊಡಗಿತು. ಆದರೆ ಸಿದ್ಧಲಿಂಗಯ್ಯನವರ ಈ ಕೂಗು ಮುಂದೆ ರಾಜಕೀಯ ಧಣಿಗಳ ಧ್ವನಿವರ್ಧಕಗಳಲ್ಲಿ ಮೊಳಗತೊಡಗಿದಂತೆ, ಕಾವ್ಯ ಸಹಜವಾಗಿ ಹಿಂದೆ ಸರಿಯಿತು. ಸಹಜ ಕವಿಯಾದ ಸಿದ್ಧಲಿಂಗಯ್ಯ ಈ ಆಘಾತದಿಂದ ಸಾವರಿಸಿಕೊಂಡಿದ್ದಾರೆ ಎಂಬುದು ಅವರ ಇತ್ತೀಚಿನ ಕವನಗಳಲ್ಲಿ ತೋರಿಬರುವುದಾದರೂ, ಈ ಹೊಸ ಕಾವ್ಯ ತನ್ನ ಹುಟ್ಟಿನಲ್ಲೇ ಬಾಣಲೆಯಿಂದ ಬೆಂಕಿಗೆ ಬಿದ್ದುದರ ಆಘಾತವನ್ನು ಎದುರಿಸಬೇಕಾಯಿತೆಂಬುದು ನಿಜ. ಕಾವ್ಯ ತನ್ನ ಕಾಲದ ಸೂಕ್ಷ್ಮಗಳನ್ನು ರಾಜಕೀಯ ಧ್ವನಿಗಳೊಂದಿಗೆ ಆವರಿಸಿಕೊಂಡು ಬೆಳೆದು ನಿಲ್ಲುವುದು ಕಾವ್ಯದ ದೃಷ್ಟಿಯಿಂದ ನಿಜವಾಗಿಯೂ ಒಂದು ದೊಡ್ಡ ಘಟನೆಯೇ. ಆದರೆ ಇಲ್ಲಿ ತಿರುವು ಮುಗುವಾಯಿತು. 'ಬಂಡಾಯ ಕಾವ್ಯ' ಆರಂಭವಾಯಿತು. ಅದರೊಂದಿಗೇ ಈ ಹಿಂದೆ ನಾನು ಪ್ರಸ್ತಾಪಿಸಿದ ಹಠಯೋಗ ಮುದ್ರೆಗಳು ಆರಂಭವಾದವು.

ಈ ಎಲ್ಲ ಕಸರತ್ತುಗಳ ಮಧ್ಯೆ ನರಳಿದ್ದು ಕಾವ್ಯವೇ. ಕಾವ್ಯವನ್ನು ಖಡ್ಗ ಮಾಡ ಹೊರಟ ಈ ಜನಕ್ಕೆ ಕವಿದಿದ್ದ ರಾಜಕೀಯ ಮಂಕು, ಕಾವ್ಯ ತನ್ನ ಸಾಂಕೇತಿಕ ಅರ್ಥದಲ್ಲಿ ಕೂಡಾ ಎಂದಿಗೂ ಖಡ್ಗವಾಗಲಾರದು. ಅದು ತನ್ನ ಅತ್ಯುನ್ನತ ಸ್ಥಿತಿಯಲ್ಲಿ ತಾಯಿಯ ಕಣ್ಣುಗಳನ್ನೂ ಕೈಗಳನ್ನೂ ಪಡೆಯುವಂತಹದ್ದು ಎಂಬ ಕಾವ್ಯ ಲೋಕದ ಮೂಲ ಸತ್ಯವನ್ನು ಮರೆಮಾಚಿರಬೇಕು. ಇಲ್ಲದಿದ್ದರೆ ಬಂಡಾಯ ಕಾವ್ಯ ಪ್ರದರ್ಶಿಸುತ್ತಿರುವ ಇಷ್ಟೆಲ್ಲಾ ಉತ್ಸಾಹ, ಚರ್ಚೆ, ಸಿದ್ಧತೆಗಳ ನಂತರವೂ ಕುವೆಂಪು

40-50 ವರ್ಷಗಳ ಹಿಂದೆ ಬರೆದ 'ಕಲ್ಕಿ'ಯೇ ಇಂದಿಗೂ ನಮ್ಮ ಅತ್ಯುತ್ತಮ 'ಬಂಡಾಯಕವನ'ವಾಗಿ ಉಳಿಯುತ್ತಿರಲಿಲ್ಲ. ಬೆಂಕಿ ತುಂಬಿಕೊಂಡಿರುವ ಕಾವ್ಯ ಬೆಳಕನ್ನೂ ಚೆಲ್ಲುತ್ತಿರುತ್ತದೆ; ಗೋವಿಂದಯ್ಯನವರ ಕವನಗಳನ್ನು ಬಂಡಾಯ ಕವನಗಳೆಂದು ಕರೆಯುವುದಾದರೆ ಅವು ಈ ಗುಣವನ್ನು ಪಡೆಯಲು ಹವಣಿಸಿವೆಯಷ್ಟೆ.

ಬಂಡಾಯ ಕಾವ್ಯದ ವೈಫಲ್ಯದ ಬಗ್ಗೆ ಇಷ್ಟೆಲ್ಲಾ ಹೇಳಿದರೂ, ಈ ಪ್ರಯೋಗ ಕನ್ನಡ ಕಾವ್ಯ ಕ್ಷೇತ್ರದಲ್ಲಿ ಹಲವಾರು ಪರಿಣಾಮಗಳಿಗೆ ಕಾರಣವಾಗಿದೆ. ನಾನು ಭಾವಿಸಿದಂತೆ ಇವರ ಅತ್ಯಂತ ದೊಡ್ಡ ಹಾಗೂ ಮಹತ್ವದ ಪರಿಣಾಮ ಎಂದರೆ ಕಾವ್ಯ ಬಹುಮುಖಿ (Democratise) ಆದದ್ದು- ವಸ್ತುರೂಪಗಳೆರಡರಲ್ಲೂ: ಕಾವ್ಯಕ್ಕೆ ಬಹಳ ಕಾಲದಿಂದ ಅಂಟಿಕೊಂಡಿದ್ದ ಖಾಸಗಿ ಸ್ವತ್ತಿನ ಚಹರೆಗಳು ಕರಗಿಹೋಗಿವೆ; ಈವರೆಗೆ ಆಧುನಿಕ ಕನ್ನಡ ಕಾವ್ಯ ಕಂಡರಿಯದಿದ್ದ ಲೋಕಗಳ ಅನುಭವಗಳು ಕಾವ್ಯಕ್ಕೆ ವಸ್ತುಗಳಾಗುತ್ತಿವೆ. ಅಷ್ಟೇ ಅಲ್ಲ, ಇದೇ ಸಂದರ್ಭದಲ್ಲಿ ಗಮನಿಸಬಹುದಾದ ಇನ್ನೊಂದು ಕುತೂಹಲಕರ ಸಂಗತಿ ಎಂದರೆ ಮಹಿಳಾಲೋಕ ಹಿಂದೆಂದೂ ಇಲ್ಲದಷ್ಟು ದೊಡ್ಡ ಪ್ರಮಾಣದಲ್ಲಿ ಕಾವ್ಯ ಕ್ಷೇತ್ರವನ್ನು ಪ್ರವೇಶಿಸಿ [illegible]ರುವುದು. ಗಂಡು–ಹೆಣ್ಣಿನ ವೈಯುಕ್ತಿಕ ಸಂಬಂಧಗಳೊಳಗೆ ಜಗತ್ತಿನ ಭೌತಿಕ ಹಾಗೂ ಆಧ್ಯಾತ್ಮಿಕ ಸೌಂದರ್ಯಗಳೆರಡನ್ನೂ ತೆರೆದಿಡುವಲ್ಲಿ ಇವರಲ್ಲಿ ಕೆಲವರು ನಡೆಸುತ್ತಿರುವ ಪ್ರಯೋಗಗಳು ಹೊಸಗನ್ನಡ ಕಾವ್ಯಕ್ಕೇ ಹೊಚ್ಚ ಹೊಸದೆನ್ನಿಸುವಂಥವು; ವಚನಕಾರ್ತಿಯರು ಸಿದ್ಧಿಸಿಕೊಂಡಿದ್ದ ಆಯಾಮವನ್ನು ನೆನಪಿಸುವಂಥವು.

ಈ ಎಲ್ಲ ಬೆಳವಣಿಗೆಗಳ ಜೊತೆಯಲ್ಲೇ ಸದ್ದಿಲ್ಲದೇ ನಡೆದ ಮತ್ತೊಂದು ವಿದ್ಯಮಾನವೆಂದರೆ ನವ್ಯ ಕಾವ್ಯ ಮಾರ್ಗದಲ್ಲೇ ಪ್ರಬುದ್ಧಮಾನಕ್ಕೆ ಬಂದ ಕವಿಗಳು ಈ ಹೊಸ ವಾತಾವರಣಕ್ಕೆ ತಮ್ಮನ್ನು ಹೊಂದಿಸಿಕೊಂಡ ರೀತಿ. ಸ್ವತಃ ಅಡಿಗರೇ ವ್ಯಂಗ್ಯ, ವಿಡಂಬನೆ, ಹಳಹಳಿಕೆಗಳನ್ನು ಬಿಟ್ಟು ರಚನಾತ್ಮಕ ವಿಷಾದದ ಕಡೆ ತಿರುಗಿದರೆ ಅವರ ಗರಡಿಯಲ್ಲೇ ಪಳಗಿದ ಕೆ. ವಿ. ತಿರುಮಲೇಶ್ ಲೋಕದ ಎಲ್ಲ ಸಣ್ಣ ವಿವರಗಳನ್ನು ಬೆರಗಿನಿಂದ ನೋಡುವ, ಅವುಗಳ ಮಧ್ಯೆ ಸುಸಂಗತ ಸತ್ಯವನ್ನು ಹುಡುಕುವ ಒಂದು ತೆರನ ಅನುಭಾವ ಕಾವ್ಯದಲ್ಲಿ ತೊಡಗಿದ್ದಾರೆ. ಇವರೊಂದಿಗೆ ಜೋಡಿಯಾಗಬಲ್ಲವರು, ಅಷ್ಟೇ ಯಾಕೆ, ಈ ದಿಕ್ಕಿನಲ್ಲಿ ಇವರಿಗಿಂತ ಒಂದು ಹೆಜ್ಜೆ ಮುಂದೆ ಇರುವಂತೆ ಕಾಣುವ ಹೊಸ ಕವಿ ಎಂದರೆ ಎಸ್. ಮಂಜುನಾಥ್. ಆದರೆ ಇದ್ಯಾಕೋ ನೆಲೆಗೆ ಗುರಿಯಿಲ್ಲದ ಪಯಣ ಅನ್ನಿಸುತ್ತದೆ. *

* ಇನ್ನೂ ನಾಟಕದಲ್ಲೇ ಹೆಚ್ಚು ಕಾವ್ಯ ಬರೆಯುತ್ತಿರುವ ಕಂಬಾರರ ಉಳಿದ ಕಾವ್ಯ ತನ್ನ [illegible] ತೊಂದರೆಯನ್ನು ನಿವಾರಿಸಿಕೊಂಡ ನಂತರ ಹೇಗೆ ಬೆಳೆಯುವುದೋ ಕಾದು ನೋಡಬೇಕಾಗಿದೆಯಷ್ಟೆ.

4

ಈ ದಶಕದಲ್ಲಿ ಸಾಕಷ್ಟು ಬರೆದ ಇನ್ನೂ ನಾಲ್ವರು ಗಮನಿಸಬಹುದಾದ ಕವಿಗಳೆಂದರೆ ಸುಬ್ರಾಯ ಚೊಕ್ಕಾಡಿ, ಬಿ. ಆರ್. ಲಕ್ಷ್ಮಣರಾವ್, ಜಯಂತ ಕಾಯ್ಕಿಣಿ ಹಾಗೂ ಎಚ್. ಎಸ್. ವೆಂಕಟೇಶಮೂರ್ತಿ. ಚೊಕ್ಕಾಡಿ ನವ್ಯ ಕಾವ್ಯದ ಹಾಳು ಬಾವಿಯಲ್ಲಿ ಇನ್ನೂ ಜೀವಂತವಾಗಿ ಈಸುತ್ತಿರುವ ಸುಂದರ ಆಮೆಯಂತಿದ್ದರೆ, ಕಾಯ್ಕಿಣಿ ಹಾಗೂ ಲಕ್ಷ್ಮಣರಾವ್ ಚಮತ್ಕಾರಿಕ ಸೌಂದರ್ಯದಲ್ಲಷ್ಟೇ ತಲ್ಲೀನರಾಗಿ ಯಾಕೋ ಅಲ್ಪ ತೃಪ್ತರಾಗಿ ಕಾಣುತ್ತಾರೆ. ವೆಂಕಟೇಶಮೂರ್ತಿಯವರ ಸಮಸ್ಯೆ ಇನ್ನೊಂದು ತೆರನದ್ದು. ಅವರಿಗೆ ಅವರ ಮಹತ್ವಾಕಾಂಕ್ಷೆಯೇ ತೊಂದರೆಯಾಗಿದೆ. ಸೌಂದರ್ಯ ಮೀಮಾಂಸೆಯ ಪರಿಭಾಷೆಯಲ್ಲಿ ಹೇಳುವುದಾದರೆ ಒಮ್ಮೆಗೇ ತಾತ್ವಿಕ ಸೌಂದರ್ಯ ಸೃಷ್ಟಿಸಲೆಣಿಸುವ ಅವರ ಕಾವ್ಯ ಅದಕ್ಕೆ ಮೊದಲು ಇಂದ್ರಿಯ ಹಾಗೂ ಕಲ್ಪನಾ ಸೌಂದರ್ಯಗಳನ್ನು ಸೃಷ್ಟಿಸಿಕೊಳ್ಳಬೇಕಾಗಿದೆ; ಅದಕ್ಕಾಗಿ ಅವರು ಕಾಲದ ಕರೆಗೆ ಕಾವ್ಯದ ಭಾಷೆಯಲ್ಲಿ ಓಗೊಡಬೇಕಾಗಿದೆ. ಆಗ ಅವರಿಂದ ನಿಜವಾದ ಮಹತ್ವಾಕಾಂಕ್ಷೆಯ ಹೊಸ ಕಾವ್ಯ ಹೊರ ಬರಬಹುದು.

ಉಳಿದವರು ಶಿವಪ್ರಕಾಶ್ ಹಾಗೂ ಅವರ ಜೊತೆಯಲ್ಲೇ ಹೆಜ್ಜೆ ಹಾಕುತ್ತಿರುವಂತೆ ಕಾಣುವ ಚಂದ್ರಶೇಖರ ತಾಳ್ಯ. * ವಿರುದ್ಧ ಶಬ್ದ- ಕಲ್ಪನೆಗಳ ಸಂಘರ್ಷದಲ್ಲಿ ಅರ್ಥ ಹೊಳೆಯಿಸುವ ಕಾವ್ಯ ಬರೆಯುತ್ತಿರುವ ತಾಳ್ಯ ತಮ್ಮ ಇಂತಹ ಪ್ರಯೋಗಗಳ ಸಂಕಲನವನ್ನು ಇನ್ನೂ ಪ್ರಕಟಿಸಬೇಕಾಗಿದೆಯಾದರೂ, ಶಿವಪ್ರಕಾಶ್ ನವ್ಯ ಕಾವ್ಯ ಮಾರ್ಗದ ನಂತರ ಬರೆಯಲಾರಂಭಿಸಿದ ಕವಿಗಳಲ್ಲಿ ಅತ್ಯಂತ ಹೆಚ್ಚು ಭರವಸೆ ಮೂಡಿಸಿರುವ ಕವಿಯಾಗಿದ್ದಾರೆ. ವರ್ತಮಾನ ಬದುಕಿನ ಸಂಕಟಗಳನ್ನು, ಆಶಯಗಳನ್ನು ಚರಿತ್ರೆಯ ಭಿತ್ತಿಯ ಹಿನ್ನೆಲೆಯಲ್ಲಿ ದಾರ್ಶನೀಕರಿಸುವ ಹಾಗೂ ಕ್ಷಣದ ಸತ್ಯವನ್ನು ಅನಂತದ ಸತ್ಯದ ಒಂದು ಸಾವಯವ ಅಂಗವಾಗಿಸುವ ಅವರ ಸಾಮರ್ಥ್ಯ ಕವನದಿಂದ ಕವನಕ್ಕೆ ಬೆಳೆಯುತ್ತಿದೆ. ಕಾವ್ಯ ಕಟ್ಟುವಾಗ ನವ್ಯ ಕಾವ್ಯದ ಕಸುಬುಗಾರಿಕೆಯನ್ನೂ ಬಳಸಿಕೊಳ್ಳುವ ಇವರು, ನಮ್ಮ ಒಟ್ಟು ಸಂದರ್ಭದ ಧ್ವನಿಯಾಗಲು ಹಸುತ್ತಿರುವ ತವಕ ಅವರ ಇತ್ತೀಚಿನ ಕವನಗಳಾದ 'ಸಮಗಾರ ಭೀಮವ್ವ', 'ನದಿಗಳ ನಾಡಿನಲ್ಲಿ' 'ಬೆಟ್ಟಗಳ ಮಗಳು' ಹಾಗೂ 'ನಾಗಾರ್ಜುನ'ಗಳಲ್ಲಿ ಕಾಣಬಹುದು.

---

* (ಮುಳ್ಳೂರು ನಾಗರಾಜ ತಮ್ಮ ಮೊದಲ ಕವನಗಳಲ್ಲಿ ಭರವಸೆ ಹುಟ್ಟಿಸಿದರಾದರೂ ಅವರ ಕಾವ್ಯ ಕ್ರಮೇಣ ಗೋಳಿನಲ್ಲಿ ಕಂದಿಹೋಗುತ್ತಿದೆ.)

5

ಕೊನೆಯದಾಗಿ ಇದೇ ಸಂದರ್ಭದಲ್ಲಿ ನಾನು ಪ್ರಸ್ತಾಪಿಸಲಿಚ್ಛಿಸುವ ಇತರ ಮೂವರು ಕವಿಗಳೆಂದರೆ ಕೆ.ಎಸ್.ನ., ಸು. ರಂ. ಎಕ್ಕುಂಡಿ ಹಾಗೂ ಜಿ. ಎಸ್. ಶಿವರುದ್ರಪ್ಪ ಈ ಮೂವರು ಹಿರಿಯ ಕವಿಗಳೂ ಕನ್ನಡ ಕಾವ್ಯದ ಮೂರು ಮಾರ್ಗಗಳನ್ನು ಹಾದು ಬಂದು ಇನ್ನೂ ಜೀವಂತಿಕೆಯನ್ನು ಮೆರೆಯುತ್ತಿರುವವರು. ಕೆ. ಎಸ್. ನ. ನವ್ಯ ಕಾವ್ಯದಿಂದಾಗಿ ಸ್ವಲ್ಪ ವಿಚಲಿತಗೊಂಡಂತೆ ಕಂಡರೂ, ತಮಗೇ ವಿಶಿಷ್ಟವಾದ ಮನ ಮೋಹಕ–ಸುಕೋಮಲವಾದ 'ಕೊರಳು–ಬೆರಳು'ಗಳ ಪಾರದರ್ಶಕ ಸೌಂದರ್ಯವನ್ನು ಇನ್ನೂ ಉಳಿಸಿಕೊಂಡಿರುವವರು. 'ಹಾವಾಡಿಗರ ಹುಡುಗ' ಎಕ್ಕುಂಡಿಯವರು ಈಗ 'ವಿಠ್ಠಲ ಎಂಬುವ ಹೊಳೆಯ ಬಳಿ ಕುಳಿತು ಬದುಕೆಂಬ ಬುತ್ತಿಯನ್ನು ಉಣ್ಣುವೆನು ನಾನು' ಎಂಬ ಪಲ್ಲವಿ- ಅನುಪಲ್ಲವಿಗಳ ಹಾಡುಗಳನ್ನು ಬರೆಯುತ್ತಿರುವರಾದರೂ, ಅವರ ಹರಿಯುವ ಹೊಳೆಯಂತಹ ವಿಠ್ಠಲ ಹಾಗೂ ಈ ದಂಡೆಯಲ್ಲಿ ಕೂತು ಉಣ್ಣುತ್ತಿರುವ ಬದುಕಿನ ಬುತ್ತಿಯಿಂದ ನೀವು ಒಂದು ತುತ್ತು ಪಡೆಯಬಲ್ಲಿರಾದರೆ ಮುಗಿಲ ತುಂಬಾ ಬೀಸುವ, ಕಡಲ ತುಂಬಾ ಈಸುವ ಬಿಳಿರೆಕ್ಕೆಗಳ ಬೆಳ್ಳಕ್ಕಿಗಳ ಸಾಲು–ಸಾಲುಗಳನ್ನೇ ಕಂಡು ಮೈಮರೆಯುವಿರಿ; ಶುಭ್ರರಾಗುವಿರಿ....

ಇನ್ನು ಮೂರು ಮಾರ್ಗಗಳನ್ನೂ ಹಾದು ಇನ್ನೂ ತಮ್ಮದೇ ಆದ ಧೀಮಂತಿಕೆಯನ್ನು ಉಳಿಸಿಕೊಂಡಿರುವ ಜಿ. ಎಸ್. ಎಸ್. ಅವರ ಕಾವ್ಯ ವ್ಯಕ್ತಿತ್ವ ಯಾರನ್ನಾದರೂ ದಂಗುಬಡಿಸುವಂತಹದು. ಯಾವ ಕಾಲಘಟ್ಟದಲ್ಲೂ, ಬಿಕ್ಕಟ್ಟಿನಲ್ಲೂ ಹಿಂಬದಿಗೆ ಸರಿದಂತೆ ಕಾಣದ, ಎಂದೂ ಸೊರಗಿದಂತೆ ತೋರದ, ಯಾವುದೇ ಮಾರ್ಗಕ್ಕೂ ತನ್ನನ್ನು ಒಪ್ಪಿಸಿಕೊಳ್ಳದ ಹಾಗೂ ಯಾವುದೇ ಮಾರ್ಗದಿಂದ ಧಿಕ್ಕರಿಸಲ್ಪಡದ ಮತ್ತು ಬಹುಶಃ ಯಾವ ಸಹೃದಯನಿಂದಲೂ ತಿರಸ್ಕರಿಸಲ್ಪಡದ ಇವರ ಕಾವ್ಯ ವ್ಯಕ್ತಿತ್ವದ ಬೆಡಗನ್ನೂ ಮಹತ್ವವನ್ನೂ ಅರಿಯಲು ನಾವು ಕಾವ್ಯಾಭ್ಯಾಸಕ್ಕೆ ಸಂಬಂಧಿಸಿದಂತೆ ಹತ್ತಿಸಿಕೊಂಡಿರುವ ಕೆಲವು ಕ್ಷಣದ-ಐಲುಗಳನ್ನು ಬಿಡಬೇಕಾಗುತ್ತದೆ. ನಿಜ, ಶಿವರುದ್ರಪ್ಪನವರು ಬರೆದದ್ದೆಲ್ಲವೂ ಶ್ರೇಷ್ಠವಾಗಿಲ್ಲ. ಕೆಲವಂತೂ ತೀರಾ ಸಾಧಾರಣ ಎನ್ನಿಸುವಂತಹವು, ಅಲ್ಲದೆ ಇವರು ಬರೆದಿರುವುದಕ್ಕಿಂತ ಶ್ರೇಷ್ಠವೆನಿಸುವ ಕವಿತೆಗಳನ್ನು ಬರೆದಿರುವ ಹಲವರಿದ್ದಾರೆ. (ಇಂಚುಪಟ್ಟಿ ಇಟ್ಟುಕೊಂಡು ಅಳೆಯುವ ವಿಮರ್ಶಕರಿಗಂತೂ ಇವರ ಕಾವ್ಯ ಆರಕ್ಕೆ ಏರದ ಮೂರಕ್ಕೆ ಇಳಿಯದ ಕಾವ್ಯವಾಗಿ ಕಂಡಿದೆ.) ಆದರೆ ಜಿ.ಎಸ್.ಎಸ್. ಮುವ್ವತ್ತು – ನಲ್ವತ್ತು ವರ್ಷಗಳಷ್ಟು ದೀರ್ಘಕಾಲಮಾನದುದ್ದಕ್ಕೂ ಕಾವ್ಯದಲ್ಲಿ ಸಾಧಿಸಿರುವುದನ್ನು ಮತ್ತು ನಮ್ಮ ಪೀಳಿಗೆಗೆ ಕೊಟ್ಟಿರುವುದನ್ನೂ ಅರ್ಥಮಾಡಿಕೊಳ್ಳಲು ವಿಮರ್ಶಕನ ಸೂಕ್ಷ್ಮಪಾಂಡಿತ್ಯವನ್ನೂ ಸಹೃದಯನ ಏಕಮುಖಿಯಾದ ರಸ ವ್ಯಸನವ

ನ್ನೂ ವಿಶಿಷ್ಟ ಒಟ್ಟಾರೆಯಾದ ಕಾವ್ಯ ವಿವೇಕ ಬೇಕಾಗುತ್ತದೆ.

ಮೂರು ಮಾರ್ಗಗಳಲ್ಲೂ ಹಾದಿ ಸವೆಸಿರುವ ~~ಜಿ. ಎಸ್. ಎಸ್.~~ ಈ ಪಯಣದಲ್ಲಿ ಕಲಿತದ್ದೆಷ್ಟು ಬಿಟ್ಟದ್ದೆಷ್ಟು ? ಈ ಮೂರು ಕಾಲಘಟ್ಟಗಳುದ್ದಕ್ಕೂ ಸಹೃದಯನ ಹೃದಯವನ್ನು ತಟ್ಟಿದ್ದೆಷ್ಟು, ~~ಮುಟ್ಟಿದ್ದೆಷ್ಟು~~ ? ಇವನ್ನರಿಯಲು ಈ ಮೂರು ಮಾರ್ಗಗಳೂ ಸಹೃದಯನೊಂದಿಗೆ ಆಡಿದ ಚೆಲ್ಲಾಟಗಳನ್ನು ಗಮನಿಸಬೇಕಾಗುತ್ತದೆ. ಈ ಎಲ್ಲ ಚೆಲ್ಲಾಟಗಳು ಹಾಗೂ ಸ್ಥಿತ್ಯಂತರಗಳ ಅಲ್ಲೋಲ ಕಲ್ಲೋಲಗಳ ನಡುವೆ ~~ಜಿ. ಎಸ್. ಎಸ್.~~ ತಮ್ಮ ಕಾವ್ಯ ಜೀವನದುದ್ದಕ್ಕೂ ವ್ರತವೆಂಬಂತೆ ಸಹೃದಯನನ್ನು ಆಸ್ಥೆಯಿಂದ, ಅಕ್ಕರೆಯಿಂದ, ಗೌರವದಿಂದ ನಡೆಯಿಸಿಕೊಂಡು ಬಂದಿದ್ದಾರೆ, ~~ಜತನದಿಂದಲೂ~~. ಈ ಸಹೃದಯನಿಲ್ಲದೆ ತನ್ನ ಕಾವ್ಯಕ್ಕೆ ಅಸ್ತಿತ್ವವೇ ಇಲ್ಲ ಎಂಬ ಕಾವ್ಯ ನಮ್ರತೆ ಅವರ ಕಾವ್ಯವನ್ನು ಬೆಳೆಸಿದೆ, ಉಳಿಸಿದೆ. ಮುಂದಿನ ಕನ್ನಡ ಕಾವ್ಯವನ್ನು ಬೆಳೆಸುವ, ಉಳಿಸುವ ~~ಸಹೃದಯ~~ ~~ಜಿ. ಎಸ್. ಎಸ್. ಅವರ~~ ಕಾವ್ಯದೊಂದಿಗೆ ಬೆಳೆದು ಉಳಿದ ಸಾಮಾನ್ಯ ಸಹೃದಯನೇ ಆಗಿರುತ್ತಾನೆಯೇ ಹೊರತು, ~~[illegible]ಯರಿಗೇ ಕಚ್ಚಿಕೊಂಡ, ಅಡಿಗರಿಗೇ ಮುಗುಟಿಕೊಂಡ ಅಥವಾ ಶಿವಪ್ರಕಾಶರಲ್ಲೇ ಮುಳುಗಿಹೋಗಬಹುದಾದ ವ್ಯಸನಿಗಳಲ್ಲ ಎಂದು ಹೇಳಿ ಈ ಟಿಪ್ಪಣಿಗಳನ್ನು ಮುಗಿಸುವೆ.~~

ನನ್ನ ಕನಸಿನ ಹುಡುಗಿ.

● ಸ. ಶ್ರೀನಿವಾಸ್ ನಟೇಕರ್

೧

ಪ್ರತಿ ಇರುಳು
ನನ್ನ ಕನಸಿನ ತುಂಬಾ ತಂಗಾಳಿಯಂತೆ
ಬರುತ್ತಿದ್ದಳು
ಮತ್ತೆ ಸುಡುತ್ತಿದ್ದಳು ನನ್ನ.
ಚಿಕ್ಕ ಮಗುವಿನಂತೆ ಗಲ್ಲಕ್ಕೊಂದು ಕೈಯಕೊಟ್ಟು
ಕೆದಕಿ ಕೆದಕಿ ಹೇಳುತ್ತಿದ್ದಳು:
ತನ್ನ ಭಾವನೆಗಳನ್ನು, ಕನಸುಗಳನ್ನು, ಆಸೆಗಳನ್ನು
ಮಿಂಚುತ್ತಿದ್ದುವು ಅವಳ ಕಣ್ಣುಗಳು ನಕ್ಷತ್ರದಂತೆ
ಕಣ್ಣು ಕನ್ನಡಿಯಾಗುತ್ತಿತ್ತು : ನಾನು ಪ್ರತಿಬಿಂಬವಾಗುತ್ತಿದ್ದೆ.
ನಾನು ಬೆಚ್ಚಿ ಬೆಚ್ಚಿ ಕೇಳುತ್ತಿದ್ದೆ ;
ತಾನು ಮೆಚ್ಚಿದ ಹುಡುಗನ ಬಗ್ಗೆ
ತನ್ಮಯಳಾಗಿ ಹೇಳುವಾಗ.

ನನ್ನ ಯೋಚನೆಗಳೊಂದಿಗೆ ಒಂಟಿಯಾದಾಗ
ಕಿಸಕ್ಕೆಂದು ನಕ್ಕು ಮಾತಾಡಿಸುತ್ತಿದ್ದಳು—
ಮುಂಜಾವಿನ ಮಂಜಿನಂತೆ
ಜಾರಿ ಹೋಗುತ್ತಿತ್ತು ಒಂಟಿತನವು.

ನೆತ್ತಿಯ ಮೇಲೆ ಸುಡುತ್ತಿರುವ
ಸೂರ್ಯ ಬಿಸಿಯಾಗಲಿಲ್ಲ : ಕೆಂಪಾಗಲಿಲ್ಲ
ನಾವು ಕೂತಿರುವ ಕಲ್ಲು ಬೆಚ್ಚಗಾಗಲಿಲ್ಲ
ತುಟಿ, ಕಣ್ಣು, ಬಾಯಿಗೆಲ್ಲಾ ಕೊಟ್ಟ ಮುತ್ತುಗಳು ಬೆಚ್ಚಗಿದ್ದವು.
ಅವಳು ನಾಚಿ ಕೆಂಪಾಗಿದ್ದಳು
ಸುಡುತ್ತಿದ್ದ ಸಮಯಗಳಲ್ಲಿ
ಸಂಕೋಚ, ನಾಚಿಕೆ ಅರ್ಥಕಳಕೊಂಡಿತು:
ಹಾವು ಪೊರೆ ಕಳೆನುಕೊಂಡಂತೆ.
ಕೊಟ್ಟೆ ನಾನು ಮತ್ತೆ ಮತ್ತೆ ಮುತ್ತ
ಮೊಗ್ಗಾಗಿ ಮುದುಡುತ್ತಿದ್ದ ಅವಳು
ನನ್ನ ಬೆಚ್ಚನೆಯ ಅಪ್ಪುಗೆಯಲ್ಲಿ ಹೂವಾಗಿ ಅರಳುತ್ತಿದ್ದಳು:
ಆಗಾಗ ಕನಸಿನಲ್ಲಿ !

೨

ಅವಳಿಲ್ಲದ ಕನಸುಗಳಿರಲಿಲ್ಲ
ಈಗ: ಅವಳಿದ್ದ ಕನಸುಗಳಿಲ್ಲ. !
ನನ್ನ ಕನಸುಗಳಿಂದ ಅವಳು ತಪ್ಪಿಸಿಕೊಂಡಿದ್ದಾಳೆ
ಇಲ್ಲವೇ ಕಳೆದು ಹೋಗಿದ್ದಾಳೆ !

ನಿಮಗ್ಯಾರಿಗಾದರೂ ಎಲ್ಲಾದರೂ
ಸಿಕ್ಕರೆ ದಯವಿಟ್ಟು ತಿಳಿಸಿ.
ಯಾಕೆಂದರೆ;
ಅವಳು ಯಾರದಾದರೂ ಕಾಲಸಪ್ಪಳಕ್ಕೆ ಬೆಚ್ಚಿ ಬೀಳಬಹುದು
ಎಲ್ಲಾದರೂ ಅರಳುತ್ತಿರುವ ಗುಲಾಬಿಯ ಕಂಡು ತನ್ಮಯಳಾಗಿ
ನಿಂತಿರಬಹುದು
ಯಾರದಾದರೂ ಬಣ್ಣ ಬಣ್ಣದ ಮಾತುಗಳಿಗೆ ಕರಗಿ ಹೋಗಬಹುದು.

ಸಿಕ್ಕರೆ ದಯವಿಟ್ಟು ತಿಳಿಸಿ;

ಕಾಯುತ್ತಿರುವನು ನಿನ್ನ ಇನಿಯ !
ಸುಡುತ್ತಿರುವ ನಕ್ಷತ್ರಗಳನ್ನು ಹೃದಯದೊಳಗಿಟ್ಟು ಆ ಸಮಯ !!

"ನಾನಿದ್ದೇನೆ : ನೀನು ನನ್ನನ್ನು ತೊಡೆದುಹಾಕಲಾರೆ"

● ಬಿ. ಎಸ್. ವಿಜಯಲಕ್ಷ್ಮಿ

ಇತ್ತೀಚಿನವರೆಗೂ ಆಫ್ರಿಕದ ಕಪ್ಪು ಬರಹಗಾರ್ತಿಯರು ಎರಡು ಸಾಹಿತ್ಯಕ ಪರಂಪರೆಗಳ ಪರಿಧಿಯಲ್ಲಿ ಗುರುತಿಸಲ್ಪಡುತ್ತಿದ್ದರು. ಅದೆಂದರೆ ಬಿಳಿಯ ಅಮೆರಿಕನ್ ಸಾಹಿತ್ಯ ಪರಂಪರೆ ಮತ್ತು ಕಪ್ಪಾದರೂ ಪುರುಷ ಪರವಾದ ಆಫ್ರೋ‌ಅಮೆರಿಕನ್ ಸಾಹಿತ್ಯ ಪರಂಪರೆ. ಈಗ 200 ವರ್ಷಗಳಿಂದೀಚೆಗೆ 18 ನೇ ಶತಮಾನದ ನಂತರ ಫಿಲ್ಲಿಸ್ ವ್ಹೀಟ್ಲೆ ಎಂಬ ಕವಯಿತ್ರಿಯ ಕಾಲದಿಂದ ಕಪ್ಪು ಬರಹಗಾರ್ತಿಯರು ತಮ್ಮದೇ ಆದ ಸಾಹಿತ್ಯಕ ಪರಂಪರೆಯೊಂದನ್ನು ಸ್ಥಾಪಿಸಿಕೊಂಡಿದ್ದಾರೆ. ಆದರೆ ಇದಕ್ಕೆ ಮೇಲೆ ಹೇಳಿದ ಎರಡೂ ಸಾಹಿತ್ಯಿಕ ಚಳುವಳಿಗಳು ಮನ್ನಣೆ ಕೊಟ್ಟಿರಲಿಲ್ಲ. 1980 ರ ದಶಕದಲ್ಲಿ ತಮಗೇ ಅಚ್ಚರಿಯಾಗುವಂತೆ ಅನಾಮಿಕತೆಯ ಮಬ್ಬಿನಿಂದ ಪ್ರಸಿದ್ಧಿಯ ಬೆಳಕಿನತ್ತ ತಾವು ಸಾಗುತ್ತಿರುವುದನ್ನು ಈ ಕಪ್ಪು ಲೇಖಕಿಯರು ಗುರುತಿಸಿಕೊಂಡಿದ್ದಾರೆ.

1983 ರ ವೇಳೆಗೆ ನಾನು ಓದಿದ ಬರಹಗಾರ್ತಿಯರಲ್ಲಿ ಅನೇಕರು ಸಾಹಿತ್ಯ ಕ್ಷೇತ್ರದಲ್ಲಾಗಲೇ ಹೆಸರುವಾಸಿಯಾಗಿದ್ದರು ಪ್ರಸಿದ್ಧ ಪತ್ರಿಕೆಗಳ ಸಾಹಿತ್ಯ ವಿಭಾಗಗಳಲ್ಲಿ ಸಾಮಾನ್ಯವಾಗಿ ಕಾಣಸಿಗದ ಬರಹಗಾರ್ತಿಯರ ಹೆಸರುಗಳು ಈಗ ಕಂಡುಬರತೊಡಗಿದವು. ಮಾಯಾ ಏಂಜೆಲೊ ಅವರ 'I know why the caged Bird Sings; ಗ್ವೆಂಡೋಲಿನ್ ಬ್ರೂಕ್ಸ್ ಅವರ 'A Street in Bronzeville'; ಟೋನಿ ಮಾರಿಸನ್ ಅವರ 'Song of Soloman' ಮತ್ತು 'Tar Baby'; 'The Color Purple' ಗಾಗಿ ಪುಲಿಟ್ಜರ್ ಪ್ರಶಸ್ತಿ ಪಡೆದ ಆಲಿಸ್ ವಾಕರ್ ಅವರ ಕಾವ್ಯ ಮತ್ತು ಸಣ್ಣ ಕಥೆಗಳು; ಗ್ಲೋರಿಯಾ ನೇಯ್ಲರ್ ಅವರ 'The Women of Brewster Place' (ಅಮೆರಿಕದ ಪ್ರಪ್ರಥಮ ಶ್ರೇಷ್ಠ ಕಾದಂಬರಿಗೆ ನೀಡುವ ಬಹುಮಾನ ಇದಕ್ಕೆ ಲಭಿಸಿದೆ)

ಇವುಗಳನ್ನು ಈ ದಿಸೆಯಲ್ಲಿ ಮುಖ್ಯವಾಗಿ ಹೆಸರಿಸಬಹುದು.

ಅಮೆರಿಕದಾದ್ಯಂತ ಮಹಿಳೆಯರ ಸಾಹಿತ್ಯದ ಅಲೆಯೊಂದು ಹಬ್ಬುತ್ತಿರುವುದನ್ನು ಪುಸ್ತಕ ವಿಮರ್ಶಕರು ಗಮನಿಸಿ ತರಾತುರಿಯಿಂದ ಅದರ ಕಾರಣಗಳನ್ನು ವಿಶ್ಲೇಷಿಸುತ್ತಿದ್ದಾರೆ. ''ಈ ಅಲೆಯಲ್ಲಿ ಒಂದು ಹೊಸ ಪರಂಪರೆಯ ಪ್ರಜ್ಞೆಗೆ ಲೇಖಕಿಯರು ಸಾಕ್ಷಿಗಳಾಗುತ್ತಿದ್ದಾರೆ. ಈ ಪರಂಪರೆಯಲ್ಲಿ ಹೆಣ್ಣು ಹೆಣ್ಣಿನ ಬಗ್ಗೆಯೇ ಬರೆಯುವುದನ್ನು ಹೆಣ್ಣು ಸಾಹಿತ್ಯ ಎಂದು ಪರಿಗಣಿಸಲಾಗಿಲ್ಲ. ಈ ಬರಹಗಾರ್ತಿಯರಿಗೆ ಒಂದು ನವನವೀನ ಬೃಹತ್ ಅನುಭವ ಕ್ಷೇತ್ರವನ್ನು ಶೋಧಿಸಹೊರಟವರೆಂಬ ಅಂತಃಪ್ರಜ್ಞೆಯಿದೆ. ತಾವು ಬರೆದುದನ್ನು ಓದುವ ಗಂಭೀರ ಆಸಕ್ತಿಯುಳ್ಳ ಓದುಗ ವೃಂದವೊಂದಿದೆ ಎನ್ನುವುದೂ ಅವರಿಗೆ ತಿಳಿದಿದೆ'' ಎಂದು ''The Newyork Times'' ನ ಪತ್ರಕರ್ತೆ ಲೀ ಆ್ಯನ್ ಶ್ರೂ್ಯಬರ್ ಬರೆಯುತ್ತಾರೆ.

ಆಕೆಯ ವಿಶ್ಲೇಷಣೆಯನ್ನು ಓದಿದಾಗ ನನಗೆ ಬಿಳಿಯ ಬರಹಗಾರ್ತಿಯರ ಬಗ್ಗೆ ನಾನು ಹೊಂದಿದ್ದ ಅಭಿಪ್ರಾಯದ ನೆನಪಾಯಿತು. ಈ ಬಿಳಿಯ ಬರಹಗಾರ್ತಿಯರಲ್ಲಿ ಅನೇಕರು ತಮ್ಮ ಕೃತಿಗಳಲ್ಲಿ ಮಹಿಳೆಯರಿಗೆ ಸಂಬಂಧಿಸಿದ ವಿಷಯಗಳನ್ನು ಎಷ್ಟು ಪ್ರಮಾಣದಲ್ಲಿ ಹಾಕಬೇಕೆಂಬ ಬಗ್ಗೆ ಬಹಳ ಲೆಕ್ಕಾಚಾರ ಮಾಡುತ್ತಾರೆ. ಇದಕ್ಕೆ ಕಾರಣ ಈ ಪುರುಷ ಪ್ರಧಾನ ಸಮಾಜದಲ್ಲಿ ಮಹಿಳೆಯರ ಬಗೆಗೇ ಹೆಚ್ಚು ಬರೆಯತೊಡಗಿದರೆ ತಮ್ಮನ್ನು ಸಾಹಿತ್ಯದ ಮುಖ್ಯಧಾರೆಯಿಂದ ಪ್ರತ್ಯೇಕಿಸಲಾಗುತ್ತದೆ ಎಂಬ ಭಯ ಅವರಿಗಿರುವುದು.

ಈ ರೀತಿಯ ಸಮಸ್ಯೆ ಕರಿಯ ಲೇಖಕಿಯರಿಗಿರಲಿಲ್ಲ. ಪುಸ್ತಕ ಪ್ರಪಂಚದಲ್ಲಿ ತಮ್ಮ ಸ್ಥಾನ ಎಲ್ಲಿದೆ ಎನ್ನುವುದನ್ನು ಅವರಾಗಲೇ ತಿಳಿದುಕೊಂಡಿದ್ದರು. ಅವರ ಬಗ್ಗೆ ಆ ವೇಳೆಗಾಗಲೇ ಒಂದು ನಿರ್ಧಾರವನ್ನು ಕೈಗೊಂಡಾಗಿತ್ತು. ಅವರ ಬರವಣಿಗೆಗೊಂದು ಹಣೆಪಟ್ಟಿ ಅಂಟಿಸಲಾಗಿತ್ತು. ''ಇದೇನೋ ಬಹಳ ಆಸಕ್ತಿಯುತವಾಗಿದೆ. ಆದರೆ ಇದು ಸಾಹಿತ್ಯವೇ ?'' ಎಂದು ಪ್ರಶ್ನಿಸಲಾಗುತ್ತಿತ್ತು. ಆದ್ದರಿಂದಲೇ ಕಪ್ಪು ಲೇಖಕಿಯರಿಗೆ ವಿಮರ್ಶಕರನ್ನು ಪೂರ್ತಿಯಾಗಿ ಅಲಕ್ಷಿಸುವುದರಲ್ಲಿ ವಿಶೇಷ ಸಂತೋಷವೆನಿಸುತ್ತಿತ್ತು. ಅದರ ಫಲವಾಗಿ ಸಾಹಿತ್ಯಿಕ ಪಂಥಗಳಿಗೆ ಹೊರತಾದ ತಮಗೆ ಬೇಕಾದ ವಸ್ತುಗಳನ್ನಾರಿಸಿಕೊಂಡು ಕೃತಿರಚನೆ ಮಾಡುವ, ಹೊಸ ಕ್ಷೇತ್ರದ ಆಯ್ಕೆಯತ್ತ ದೃಷ್ಟಿ ಹಾಯಿಸುವ ಸ್ವತಂತ್ರ ಅವರಿಗೆ ದಕ್ಕಿತು.

ಸಮಕಾಲೀನ ಕಪ್ಪು ಲೇಖಕಿಯರ ರಚನೆಗಳನ್ನು ಸಮೀಕ್ಷಿಸಿದಾಗ ಅಮೆರಿಕನ್ ಸಾಹಿತ್ಯದಲ್ಲಿ, ಮುಖ್ಯವಾಗಿ ಆಫ್ರೋ-ಅಮೆರಿಕನ್ ಸಾಹಿತ್ಯದಲ್ಲಿರುವ ವಸ್ತುಗಳೇ ಹೆಚ್ಚಾಗಿ

ಕಂಡುಬಂದರೂ ಕೆಲವು ವಿಶಿಷ್ಟವಾದ ವಿಭಿನ್ನ ರಚನೆಗಳು ಮಹಿಳಾ ಕ್ಷೇತ್ರದಲ್ಲಿ ಗೋಚರಿಸುತ್ತವೆ. ಮೊದಲನೆಯದಾಗಿ ವಸ್ತುಗಳಲ್ಲಿ. ಕಪ್ಪು ನಾಯಕಿಯರಲ್ಲಿ ಸ್ವಂತಿಕೆಯ ಅನ್ವೇಷಣೆಯ, ಸಂಪ್ರದಾಯ ಪೂರ್ವಗ್ರಹ ಪೀಡನೆಗಳಿಂದ ಬಿಡುಗಡೆ ಪಡೆಯುವ ತೀವ್ರ ತುಡಿತ ಕಂಡುಬರುತ್ತದೆ. ಎರಡನೆಯದಾಗಿ, ಅನಾಥಪ್ರಜ್ಞೆಯಿಂದಾಗಿ ಬೆಳೆಯುತ್ತಿರುವ ಒಂಟಿತನದಲ್ಲಿಯೇ ಅಸಂಬದ್ಧ ನೀತಿಯ ಪ್ರಪಂಚದಲ್ಲಿಯೇ ಆತ್ಮಗೌರವವನ್ನು ಸಂರಕ್ಷಿಸಿ ಪೋಷಿಸುವ ಎಡಬಿಡದ ಪ್ರಯತ್ನವಿರುವುದನ್ನೂ ಕಪ್ಪು ನಾಯಕಿಯರಲ್ಲಿ ಗುರುತಿಸಬಹುದು.

ಇವರ ಪಾತ್ರದ ಆಯ್ಕೆ ಮೊದಲೇ ನಿಶ್ಚಿತವಾಗಿರುತ್ತಿತ್ತು. ಕಪ್ಪು ಬರಹಗಾರ್ತಿಯರು ಹೆಚ್ಚಾಗಿ ಕಪ್ಪು ನಾಯಕಿಯರನ್ನೇ ಆರಿಸಿಕೊಳ್ಳುತ್ತಿದ್ದರು. ಅವರ ನಿಜಜೀವನದಲ್ಲಿಯಂತೆ ಈ ನಾಯಕಿಯರು ಸಾಮಾಜಿಕ ಅನ್ಯಾಯದ ವಿರುದ್ಧ ಒಂಟಿಯಾಗಿ ಹೋರಾಡುತ್ತಾ ಅದರ ಮೂಲಕವೇ ತಮ್ಮತನವನ್ನು ಕಂಡುಕೊಳ್ಳುತ್ತಾರೆ. ಈ ಕಪ್ಪು ನಾಯಕಿ ರಿಚರ್ಡ್ ರೈಟ್, ರಾಲ್ಫ್ ಎಲಿಸನ್, ಚೆಸ್ಟರ್ ಹೈಮ್ಸ್, ಕ್ಲಾಡ್ ಬ್ರೌನ್ ಮುಂತಾದ ಆಫ್ರಿಕನ್ ಬರಹಗಾರರ ಸಾಂಪ್ರದಾಯಿಕ ಕಪ್ಪು ನಾಯಕರಂತೆ ತನ್ನ ವಿಧಿಯನ್ನು ತಾವೇ ರೂಪಿಸಿಕೊಳ್ಳಲು ಒಂಟಿಯಾಗಿ ಹೊರಹೊರಡುವುದಿಲ್ಲ. ಪ್ರತಿಯಾಗಿ ಅವಳ ಮಹಾ ಪ್ರಸ್ಥಾನ ಮನೆಯ ಹಿತ್ತಲಲ್ಲೇ ನಡೆಯುತ್ತದೆ. ಮಕ್ಕಳನ್ನು ಸಾಕುವ ಬಹು ಮುಖ್ಯ ಹೊಣೆಗಾರಿಕೆ ಅವಳನ್ನು ಬಂಧಿಸಿರುವುದರಿಂದ. ತನ್ನ ಪರಿಸರದೊಂದಿಗೆ ಬಂಧು–ಮಿತ್ರರೊಂದಿಗೆ ತನ್ನ ನೋವುನಲಿವುಗಳನ್ನು ಅನಿವಾರ್ಯವಾಗಿ ಹಂಚಿಕೊಳ್ಳಬೇಕಾಗಿರುವುದರಿಂದ ತನ್ನ ಸಮಾಜದಲ್ಲೇ ಪ್ರತಿಷ್ಠಾಪಿತಳಾಗಿರುತ್ತಾಳೆ. ಆದರೆ ಪ್ರಸಿದ್ಧ ಕಪ್ಪುನಾಯಕರು ಸಂಸಾರ ಮತ್ತು ಗೆಳೆಯರೆಂಬ ವರ್ತುಲದೊಳಗೆ ಈ ರೀತಿ ಪ್ರತಿಬಂಧಿತರಾಗುವುದಿಲ್ಲ. ಈ ನಾಯಕರು ಬದುಕನ್ನೊಂದು ಹಗುರ ಪ್ರಯಾಣವಾಗಿಸಿಕೊಂಡು ತಮ್ಮ ಭವಿಷ್ಯದ ನಿರ್ಣಯವನ್ನು ತಾವೇ ತೆಗೆದುಕೊಳ್ಳುತ್ತಾರೆ.

ಕಪ್ಪು ನಾಯಕಿಯರ ಈ ಆತ್ಮ ಶೋಧನೆ ಮನೆಯೊಳಗೇ ನಡೆಯುವುದರಿಂದ ಯಾವ ಅದ್ಭುತ ಕೃತ್ಯವೂ ಕಥೆಯೊಳಗಿರುವುದಿಲ್ಲ; ಯಾವ ಉದ್ವೇಗಕ್ಕೂ ಅಲ್ಲಿ ಎಡೆಯಿಲ್ಲ. ಇಲ್ಲಿ ಲೇಖಕರಿಯ ಲಕ್ಷ್ಯ ಹೊರಗಿನ ಘಟನೆಗಳನ್ನು ವಿವರಿಸುವುದರ ಕಡೆಗಿಂತ ಹೆಚ್ಚಾಗಿ ಪಾತ್ರದ ವ್ಯಕ್ತಿತ್ವವನ್ನು ನಾಟ್ಯೀಕರಿಸುವ ಉದ್ದೇಶಪತ್ತ. ಒಂದು ಘಟನೆ ಏಕೆ ಮತ್ತು ಹೇಗೆ ಘಟಿಸುತ್ತದೆ ಎನ್ನುವುದನ್ನು ವಿವರಿಸುದರತ್ತ ಇರುತ್ತದೆ. ಇಲ್ಲಿ ಸಂಗತಿಯನ್ನು ಗ್ರಹಿಸುವ ಮತ್ತು ಅರ್ಥೈಸುವ ಜವಾಬ್ದಾರಿಯುತ ಕೆಲಸವನ್ನು ಲೇಖಕಿಯರು ಓದುಗನ ಹೆಗಲ ಮೇಲೇ ಹೊರಿಸಿಬಿಡುತ್ತಾರೆ.

ಉದಾಹರಣೆಗೆ ಟೋನಿ ಮಾರಿಸನ್ ತನ್ನ 'Song of Soloman' ದ ಕೊನೆಯಲ್ಲಿ ಏನಾಯಿತೆನ್ನುವದನ್ನು ಹೇಳುವುದಿಲ್ಲ. ಬದಲು ಪುನರುತ್ಥಾನಗೊಂಡ ಪೌರಾಣಿಕ ಕಲ್ಪನೆಯೊಂದನ್ನು ನಮ್ಮ ಮುಂದಿರಿಸಿ ಕೊನೆಯ ಚಿತ್ರಣದ ಕೆಲಸಕ್ಕೆ ನಮ್ಮನ್ನೇ ಬಿಡುತ್ತಾಳೆ. ಗ್ವೆಂಡೋಲಿನ್ ಬ್ರೂಕ್ಸ್ 'The Mecca' ದಲ್ಲಿ ಕಾಣೆಯಾದ ಹುಡುಗಿಯೊಬ್ಬಳನ್ನು ಕೆಳವರ್ಗದ ಜನರ ವಸತಿಪ್ರದೇಶದಲ್ಲಿ ಹುಡುಕುವುದರ ಚಿತ್ರವನ್ನು ಕೊಡುವಾಗ ಓದುಗರಿಗೆ ಸಾಮಾಜಿಕ ಜವಾಬ್ದಾರಿಯ ಬಗ್ಗೆ ಭಾಷಣ ಬಿಗಿಯುವುದಿಲ್ಲ. ಬದಲಾಗಿ ಮೆಕ್ಕಾದ ಅಪಾರ್ಟ್‌ಮೆಂಟ್‌ಗಳಲ್ಲಿ ವಾಸಿಸುವ ಜನರ ಬಡತನ ಮತ್ತು ಸ್ವೈರಾಚ್ಛದ ಜೀವನವನ್ನು ವರ್ಣಿಸುತ್ತಾಳೆ.

ಕಪ್ಪು ಬರಹಗಾರ್ತಿಯರು ಬರೆಯುವುದು ಮೂಲಭೂತವಾಗಿ ತಮಗೋಸ್ಕರ; ತಮ್ಮ ಅನುಭವ ಮತ್ತು ಅವಲೋಕನಗಳನ್ನು ಅರ್ಥೈಸಿಕೊಳ್ಳುವುದಕ್ಕೋಸ್ಕರ; ತನ್ನತನದ ಹುಡುಕಾಟಕ್ಕೋಸ್ಕರ, ಉದಾ,ಗೆ 'Gorilla, my Love', 'The Sea Birds are Still alive', 'The Salt Eaters' ಮೊದಲಾದ ಕೃತಿಗಳ ಕರ್ತೃವಾದ ಟೋನಿ ಕೇಡ್‌ಬಾಂಬರಾ 'Black Women writers at work' ನಲ್ಲಿ ಹೇಳುವಂತೆ, "ಪ್ರಪ್ರಥಮವಾಗಿ ನಾನು ಬರೆಯುವುದು ನನಗೋಸ್ಕರ. ಬರವಣಿಗೆ ಬಹಳ ದಿನಗಳಿಂದಲೂ ನನ್ನ ವ್ಯಕ್ತಿತ್ವದ ಬೆಳವಣಿಗೆಗೆ ಮುಖ್ಯ ಸಾಧನವಾಗಿದೆ. ಮಾತಿನಲ್ಲಿ ನಾನು ಪ್ರೈಮರಿಯುವುದು ಹೆಚ್ಚು. ಮೋಹಕ ಶೈಲಿಯ ಮಾತುಗಾರಿಕೆಯ ಬಗ್ಗೆ ನನಗೊಂದು ರೀತಿಯ ಆಕರ್ಷಣೆಯಿದೆ. ಭಾವೋದ್ವೇಗದಿಂದ ನಾನು ಉತ್ಪ್ರೇಕ್ಷಿಸುವುದು ಹೆಚ್ಚಾಗಿ ಬಿಡುತ್ತದೆ. ಬಾಯಿ ಮಾತಿನಲ್ಲಿ ನನ್ನನ್ನು ನಾನೇ ನಂಬುವುದಿಲ್ಲ ಬರೆಯಲು ಕುಳಿತಾಗ ಮಾತ್ರ ಈ ರೀತಿಯ ಭಾವೋನ್ಮಾದಕ್ಕೆ ಹೊರತಾದ ಗಾಂಭೀರ್ಯದಿಂದ ನನ್ನ ದೃಷ್ಟಿಕೋನ, ಅನುಭವ, ತಿಳಿವಳಿಕೆಗಳ ಬಗ್ಗೆ ನಾನು ಎಚ್ಚರದಿಂದಿರುತ್ತೇನೆ ನನ್ನೊಳಗನ್ನು ನಾನೇ ತಟ್ಟಿಕೊಳ್ಳಲು, ಯಾವುದನ್ನೂ ಕೈಬಿಡದಿರಲು ಬರೆಯುವ ನನಗೆ ಅದರಿಂದ ಏಕಾಗ್ರತೆಯನ್ನು ಉಳಿಸಿಕೊಳ್ಳಲು ಸಾಧ್ಯವಾಗುತ್ತದೆ. ನನಗೆ ಬರವಣಿಗೆ ಕೊಡುವ ಮತ್ತು ಕೊಳ್ಳುವ ಶಿಸ್ತಿನ ಅಗತ್ಯವಿದೆ. ನನ್ನ ಇರವು ವ್ಯರ್ಥವಾಗುವುದನ್ನಾಗಲೀ ಅಪಾಯಕಾರಿಯಾಗುವುದನ್ನಾಗಲೀ ಒಲ್ಲದ ಕಾರಣ ನಾನು ಬರೆಯುತ್ತೇನೆ."

The Bluest Eye, Sula ಗಳನ್ನು ಬರೆದ ಟೋನಿ ಮಾರಿಸನ್ ತನಗೇ ಓದುವ ಆಸೆಯುಂಟಾದ್ದರಿಂದ ಈ ಕೃತಿಗಳನ್ನು ಬರೆದೆನೆಂದು ಹೇಳುತ್ತಾಳೆ. "ಅಂತಹ ಕೃತಿಗಳನ್ನು ಇದುವರೆಗೆ ಯಾರೂ ಬರೆಯದೇ ಹೋದುದರಿಂದ ನಾನೇ ಬರೆದೆ." "ನನ್ನ ಬರವಣಿಗೆಯ ಸಮಯದಲ್ಲಿ ಪುಸ್ತಕದಲ್ಲಿನ ಜನರೇ ನನ್ನ ಪ್ರೇಕ್ಷಕರಾಗಿರುತ್ತಾರೆ. ಹೊ

ರಗಿನ ಓದುಗರನ್ನು ಕುರಿತು ನಾನು ಯೋಚಿಸುವುದೇ ಇಲ್ಲ'' ಎಂದು ಅವಳು ವಿವರಿಸಿದ್ದಾಳೆ.

ಕಪ್ಪು ಜನಾಂಗದವರಲ್ಲೇ ಪ್ರಪ್ರಥಮವಾಗಿ ಪುಲಿಟ್ಜರ್ ಪ್ರಶಸ್ತಿಯನ್ನು ಗಳಿಸಿದ (1950) ಗ್ವೆಂಡೊಲಿನ್ ಬ್ರೂಕ್ಸ್, ಅಮೆರಿಕದ ಸಮಾಜ ಒಂದು ರೀತಿಯ ತುಮುಲ ಮತ್ತು ಬದಲಾವಣೆಗಳಿಗೆ ಒಳಗಾಗುತ್ತಿದ್ದ ದಶಕದಲ್ಲಿ ನೇರವಾಗಿ ತನ್ನ ಜನರನ್ನೇ ಉದ್ದೇಶಿಸಿ ಬರೆಯುತ್ತಾಳೆ. 'ತಾನು ಅವರಿಗೆ ಹೇಳುವುದು ಬಹಳಷ್ಟಿದೆಯಾದ್ದರಿಂದ ಅವರನ್ನು ಕುರಿತೇ ಬರೆಯುತ್ತೇನೆ' ಎನ್ನುವುದು ಅವಳ ಸ್ಪಷ್ಟನೆ.

''ಬರವಣಿಗೆ ಅಂತಿಮವಾಗಿ ನನ್ನನ್ನು ನಾನೇ ನಿಯಂತ್ರಿಸಿಕೊಳ್ಳುವುದನ್ನು ಕಲಿಸಿತಲ್ಲದೇ ನನ್ನ ವಿಧಿಯನ್ನು ನಾನೇ ರೂಪಿಸಿಕೊಳ್ಳುವ ಯತ್ನದಲ್ಲಿ ತೊಡಗಿಸಿತು. ಇತರೆ ವಸ್ತುಗಳು ತಾವಾಗಿಯೇ ಬಂದುವು'' ಎಂದು The Women of Brewster Place ನ ಲೇಖಕಿ ಗ್ಲೋರಿಯಾನೇಯ್ಲರ್ ತನ್ನ ಪ್ರಜ್ಞಾವಂತಿಕೆಯ ಪರಿಪೂರ್ಣತೆಯನ್ನು ವಿವರಿಸಿದ್ದಾಳೆ

ಅನೇಕ ಕಥೆ ಮತ್ತು ಕವನ ಸಂಕಲನಗಳನ್ನು ಹೊರತಂದಿರುವ The Newyork Head Shop, The Black Unicorn and Zami, A New Spelling of my Name ಗಳ ಕರ್ತೃವಾದ ಆ್ಯಂಡ್ರೆ ಲಾರ್ಡ್ ಸೂಚಿಸುವುದೂ ತಾನು ಬರೆಯುವುದು ತನಗೋಸ್ಕರ ಎಂದೇ. ''ನನಗೋಸ್ಕರ ಎಂದರೆ ಆ್ಯಂಡ್ರೆಗೋಸ್ಕರ ಮಾತ್ರವಲ್ಲ, ಎದ್ದು ನಿಲ್ಲಲು ಒತ್ತಾಯಿಸುವ, 'ನಾನಿದ್ದೇನೆ, ನನ್ನನ್ನು ನೀನು ತೊಡೆದು ಹಾಕಲಾರೆ' ಎಂದು ಮೊಂಡುಹಿಡಿಯುವ ಎಲ್ಲ ಕಪ್ಪು ಲೇಖಕಿಯರಿಗೋಸ್ಕರ. ಯಾರ ದನಿಗಿನ್ನೂ ಜೀವ ಬಂದಿಲ್ಲವೋ ಎಲ್ಲಿ ಕೊರಲದನಿಯನ್ನು ಉಡುಗಿಸಲಾಗಿದೆಯೋ ಅಂತಹ ಸ್ತ್ರೀಯರಿಗೋಸ್ಕರ ನಾನು ಬರೆಯುತ್ತೇನೆ.'' ಎಂದು ಅವಳು ತನ್ನತನದ ವ್ಯಾಪಕತೆಯನ್ನು ಪ್ರಚುರಪಡಿಸಿದ್ದಾಳೆ.

ಈ ಪ್ರತಿಕ್ರಿಯೆಗಳೆಲ್ಲವೂ ಪ್ರಾತಿನಿಧಿಕವಾಗಿದ್ದು ಅನೇಕ ಆಫ್ರಿಕನ್ ಲೇಖಕಿಯರು ತನಗೋಸ್ಕರವೇ ಬರೆಯುತ್ತಾರೆ. ಎನ್ನುವ ವಸ್ತು ಸ್ಥಿತಿಯ ಕಡೆಗೆ ಗಮನ ಸೆಳೆಯುವಂಥದಾಗಿದೆ. ಎಂದ ಮಾತ್ರಕ್ಕೆ ವಿಶೇಷ ಓದುಗರಿಗೋಸ್ಕರವೇ ತಾವು ಬರೆಯಬೇಕೆಂಬ ಆಶಯವೊಂದೇ ಅವರ ಬರವಣಿಗೆಗೆ ಕಾರಣ ಎಂದು ಭಾವಿಸುವಂತಿಲ್ಲ. ತಮ್ಮದೇ ಆದ ಸಾಹಿತ್ಯಿಕ ಪರಂಪರೆಯೊಂದು ಸ್ಥಾಪಿತವಾಗುತ್ತದೆಂಬ ನಂಬಿಕೆಯೂ ಅವರಿಗಿದೆ. ಆದರೂ ಬರವಣಿಗೆಯ ಉದ್ದೇಶ ಈ ನಂಬುಗೆಯೊಂದೇ ಅಲ್ಲ.

ಕಪ್ಪು ಬರಹಗಾರರ ಬರವಣಿಗೆಗಳ ಸಾಮಾನ್ಯ ಸಮೀಕ್ಷೆಯನ್ನು ಮಾಡಿದಾಗ ಅವರು ಮಹತ್ವದ ಪರಂಪರೆಯೊಂದರ ಭಾಗಗಳಾಗಿರುವುದು ಕಂಡುಬರುತ್ತವೆ. ಕಪ್ಪು ಬರಹಗಾರರು (ಪುರುಷರು) ಆತ್ಮಗೌರವದ ಸಂರಕ್ಷಣೆಯಲ್ಲಿ ವಿಜಯವಿಕ್ರಮ ಶಾಲಿಯಾದ ನಾಯಕನೊಬ್ಬನನ್ನು ಚಿತ್ರಿಸುವುದರ ಮೂಲಕ ಕರಿಯರ ಉಳಿವು ಮತ್ತು ಘನತೆಯನ್ನು ಕಾಲದಿಂದ ಕಾಲಕ್ಕೆ ದೃಢಪಡಿಸುತ್ತಾರೆ. ಕಪ್ಪು ಲೇಖಕಿಯರು ಇದೇ ಪರಂಪರೆಗೆ ಬದ್ಧರಾದರೂ ಒಂದು ಮಹತ್ವದ ವ್ಯತ್ಯಾಸವಿದೆ. ಜನಾಂಗಿಕ ಸಂಘರ್ಷದಲ್ಲಿ ಪಾಲ್ಗೊಳ್ಳುವವರಿಗೆ ಹೆಚ್ಚು ಗಮನ ಕೊಡುವ ಅವರು ಸೃಷ್ಟಿಸಿದ ಪಾತ್ರಗಳ ಹೋರಾಟ ವಿಫಲವಾದರೂ ವೀರೋಚಿತವಾಗಿದ್ದು ಆದ್ದರಿಂದಲೇ ಕಲಾತ್ಮಕವಾಗಿರುತ್ತದೆ. ಆಫ್ರೋ-ಅಮೆರಿಕನ್ ಸಾಹಿತ್ಯದಲ್ಲಿ ಕಪ್ಪು ಲೇಖಕಿಯರ ಧ್ವನಿ ಭಿನ್ನವಾಗುವುದು ಈ ರೀತಿಯ ಸೋಲನ್ನೊಪ್ಪಿಕೊಳ್ಳುವುದರಲ್ಲೇ. ಟೋನಿ ಮಾರಿಸನ್‌ಳ 'The Bluest Eye' ದಲ್ಲಿನ ಪೆಕೋಲಾ. ಗ್ವೆಂಡೊಲಿನ್ ಬ್ರೂಕ್ಸ್ ಬರೆದಿರುವ 'A Street in Brozeville' ದಲ್ಲಿ ಡಿವಿಟ್ಟ್ ವಿಲಿಯಂಸ್, ಗೇಯ್ಸ್ ಜೋನ್ಸ್‌ಳ 'Eva's man' ದ ಇವಾ, ನೊಜಾಕೆ ಶಾಂಗೆಯ 'For colored Girls who Consider Suicide when the Rainbow is Enuf' ದಲ್ಲಿನ ಬ್ಯೂವಿಲ್ಲಿ– ಇವರೆಲ್ಲರೂ ಪ್ರತಿಯೊಬ್ಬ ಜಯಶಾಲಿಯ ಹಿಂದೆ ಸೋತವನೊಬ್ಬನ ನಿಟ್ಟುಸಿರು ಇರುತ್ತದೆ ಎನ್ನುವ ಆಗಾಗ ಮರೆಯಲ್ಪಡುವ ಕಾಲಾತೀತ ಸತ್ಯವನ್ನು ನೆನಪಿಸುತ್ತಾರೆ.

ಕಪ್ಪು ಲೇಖಕಿಯರು ಈ ರೀತಿಯಾಗಿ ಸೋಲನ್ನು ದಾಖಲಿಸುವುದು ಓದುಗರಲ್ಲಿ ಸಂಕುಚಿತ ಮನೋಭಾವವನ್ನು ಮೂಡಿಸಲು ಅಲ್ಲ; ಈ ಬಲಿದಾನವನ್ನು ವೈಭವೀಕರಿಸಲೂ ಅಲ್ಲ. ಬದಲಾಗಿ ಪಾತ್ರಗಳನ್ನು ಅವರ ವಿಧಿಯತ್ತ ನಡೆಸುವುದರಲ್ಲಿ ಪರಿಸ್ಥಿತಿಯ ಹಾಗೂ ಸಂಕೀರ್ಣ ಸಮಾಜದ ಸಹಭಾಗಿತ್ವ ಎಷ್ಟರಮಟ್ಟಿನದಾಗಿರುತ್ತದೆ ಎಂಬುದನ್ನು ನಿಶ್ಚಿತವಾಗಿ ತಿಳಿಯುವ ಮತ್ತು ಮೆಚ್ಚುವ ಜಾಣ್ಮೆಯನ್ನು ಓದುಗರಲ್ಲಿ ಉಂಟುಮಾಡುವ ಉದ್ದೇಶದಿಂದಾಗಿರುತ್ತದೆ. ಅದಕ್ಕಿಂತಲೂ ಹೆಚ್ಚಾಗಿ ಕಪ್ಪು ಜನರ ಘನತೆಯ ಪರಿಪೋಷಣೆ ಮತ್ತು ಆತ್ಮಗೌರವದ ಬಲಸಂವರ್ಧನೆಯ ಜವಾಬ್ದಾರಿಯನ್ನು ವರ್ಗಸಂಘರ್ಷ ಕುಂಠಿತಗೊಳಿಸಿಬಿಡುತ್ತದೆ ಎನ್ನುವುದನ್ನು ನಿರಾಕರಿಸುವ ಕಪ್ಪು ಲೇಖಕಿಯರು, ಅದನ್ನು ಪ್ರಕಟವಾಗಿ ಹೇಳುತ್ತಾ, ತಮ್ಮ ಆಗುಹೋಗುಗಳಿಗೆ ಅಂತಿಮವಾಗಿ ತಾವೇ ಜವಾಬ್ದಾರರೆಂದು ಒಪ್ಪಿಕೊಳ್ಳಲು ತಮ್ಮ ಜನರನ್ನು ಒತ್ತಾಯಿಸುತ್ತಾರೆ. ಈ ಹೊಣೆಗಾರಿಕೆಯ ಪರಿಪೂರ್ಣತೆಯೇ ಒಬ್ಬ ವ್ಯಕ್ತಿ ತನ್ನ ಕುಟುಂಬ ಹಾಗೂ ಸ್ನೇಹಿತರನ್ನು ಸಂರಕ್ಷಿಸುತ್ತಾನೋ ಅಥವಾ ಬಲಿಕೊಡುತ್ತಾನೋ ಎನ್ನುವುದನ್ನು ನಿರ್ಧರಿಸುತ್ತದೆ.

ಆಲಿಸ್‌ವಾಕರ್ ಈ ವಿಷಯದಲ್ಲಿ ಎಂದೂ ರಾಜಿ ಮಾಡಿಕೊಳ್ಳದ ಹಟಮಾರಿ. ಆವಳ

'The Third Life of Grange copeland' ಎಂಬ ಕಾದಂಬರಿಯ ಕೊನೆಯಲ್ಲಿ ನಾಯಕನಾದ ಗ್ರೇಂಜ್ ತನ್ನ ಮೊಮ್ಮಗಳ ಜೀವನ ಹಾಳಾಗುವುದನ್ನು ತಡೆಯಲು ತನ್ನ ಮಗನನ್ನೇ ಕೊಂದುಹಾಕುತ್ತಾನೆ. ವಾಕರಳ ಕಥಾಪ್ರಪಂಚದಲ್ಲಿ ಯಾವುದೇ ವ್ಯಕ್ತಿ ತನ್ನ ಬದುಕಿನ ಗುಣಮಟ್ಟವನ್ನು ಕಾಯ್ದುಕೊಳ್ಳುವ ಜವಾಬ್ದಾರಿಯನ್ನು ಒಪ್ಪಬೇಕೆಂಬ ಹಾಗೂ ಬದುಕುವ ಯೋಗ್ಯತೆಯನ್ನು ಹೊಂದಿರಬೇಕೆಂಬ ಒತ್ತಾಯವಿರುತ್ತದೆ.

ಕಪ್ಪು ಲೇಖಕಿಯರ ರಚನೆಗಳಲ್ಲಿ ಎದ್ದುಕಾಣುವ ಮತ್ತೊಂದು ಸಂಗತಿಯೆಂದರೆ ಅವರ ನಾಯಕಿ ತನ್ನ ಆತ್ಮಗೌರವದ ಪೋಷಣೆಗಾಗಿ ನಡೆಸುವ ಹೋರಾಟ. ಎಲ್ಲಿ ತನ್ನ ಹೆಣ್ತನಕ್ಕೆ ಗೌರವವಿಲ್ಲವೋ ಮೆಚ್ಚುಗೆಯಿಲ್ಲವೋ ಬದಲಾಗಿ ತನ್ನ ಆ ಪ್ರಯತ್ನಕ್ಕೆ ಶಿಕ್ಷೆಯನ್ನೇ ಅನುಭವಿಸಬೇಕಾಗುತ್ತದೋ ಅಂತಹ ಸಮಾಜದಲ್ಲಿ ಇವರ ಹೋರಾಟ ಸಾಗುವುದರಿಂದ ಅದು ಮಹತ್ವದ್ದಾಗಿ ತೋರುತ್ತದೆ. ಅವಳ ಸ್ಥಿತಿಯನ್ನು ಅಲಂಕೃತವಾದ ಪಾದಪೀಠವೊಂದರ ಮೇಲೆ ನಿಂತಿರುವಂತೆ ಚಿತ್ರಿಸಲಾಗಿದೆ. ಆ ಚಿತ್ರವನ್ನು ಸಾಂಸಾರಿಕ ಚಟುವಟಿಕೆಗಳಿಂದ ಆಕೆ ಕಳಂಕಿತಳಾಗುವುದನ್ನು ತಪ್ಪಿಸುವುದರ ಚಿಹ್ನೆಯಾಗಿ ಬಳಸಲಾಗಿದೆ. ಯಾರು ಸಾಂಸಾರಿಕ ಬದುಕಿನೊಳಗೆ ಪ್ರವೇಶಿಸಲು ನಿರಾಕರಿಸುತ್ತಾರೋ ಅಂತಹವರಿಗೆ ಈ ಚಿತ್ರದ ಸಾಮಾಜಿಕ ಸ್ಥಾನ ಅಸೂಯೆ ಹುಟ್ಟಿಸುವಂಥದ್ದಾಗಿರುತ್ತದೆ. ಅದರಲ್ಲೂ ತಾವು ವಂಚಿತರೆಂದಂತೆ ಭಾವಿಸುವ ಕಪ್ಪು ಯುವತಿಯರು ಈ ಸ್ಥಾನಕ್ಕಾಗಿ ತೀವ್ರವಾಗಿ ಹಾತೊರೆಯುತ್ತಾರೆ. ಏಕೆಂದರೆ ಅವರ ಪುರುಷರಿಂದ ಅವರ ಹೆಣ್ತನಕ್ಕೆ ಯಾವ ಮರ್ಯಾದೆಯೂ ಸಿಗುತ್ತಿರಲಿಲ್ಲ ಮತ್ತು ಈ ಅಲಂಕೃತ ಪಾದಪೀಠದ ಮೇಲೆ ನಿಲ್ಲುವುದರಿಂದ ಅವರನ್ನು ಪುರುಷರು ನಿರಂತರವಾಗಿ ತಡೆಯುತ್ತಿರುತ್ತಾರೆ.

ಇದರಿಂದಾಗಿ ತಮ್ಮ ಹೆಣ್ತನದ ಕಲ್ಪನೆಯಿಂದಲೇ ನರಳುವ ಈ ಕಪ್ಪುನಾಯಕಿಯರು ಬಿಳಿಯರಾಗಲು ಬಯಸುತ್ತಾರೆ. ತಾವು ಉನ್ನತ ಶಿಖರದ ಮೇಲುಮೇಲಕ್ಕೇರಿ ಪೂಜಾಪೀಠದ ಮೇಲೆ ನಿಲ್ಲುವ ಹಿರಿಯಾಸೆಯನ್ನು ಹೊಂದಿರುತ್ತಾರೆ. ತಮ್ಮ ಕಲ್ಪನಾ ಪ್ರಯಾಣದ ಕೊನೆಯ ಮೆಟ್ಟಿಲ ಮೇಲೆ ನಿಂತು ನೋಡಿದಾಗ ಈ ಬಿಳಿಯರ ಪ್ರಪಂಚದಲ್ಲಿಯೂ ನಿಯಮಾನುಷ್ಠಾನಗಳಿವೆ, ಇದಕ್ಕೂ ಒಂದು ಮಿತಿಯಿದೆ. ಅಲ್ಲದೆ ಇದು ಆತ್ಮನಾಶಿಯಾದದ್ದು ಎನ್ನುವುದನ್ನು ಅರಿತುಕೊಳ್ಳುತ್ತಾರೆ, (ಆ ಮೂಲಕ ತಮ್ಮ ಭ್ರಮಾಲೋಕದಿಂದ ಹೊರಬರುತ್ತಾರೆ.)

ಅಂತಿಮವಾಗಿ ಕಪ್ಪು ನಾಯಕಿಯರು ತಮ್ಮದೇ ಆದ ಸ್ತ್ರೀತ್ವದ ಲಕ್ಷಣಗಳನ್ನು

ಒಪ್ಪಿ, ಪ್ರಥಚಿತ್ರರಾಗಿ, ಯಾರದೋ ನಿರೀಕ್ಷೆಗಳ ಹದ್ದುಬಸ್ತಿನಲ್ಲಿರುವುದನ್ನು ನಿರಾಕರಿಸುವುದರ ಫಲಿತಾಂಶವಾಗಿ ದೊರಕಿದ ಸ್ವಾತಂತ್ರ್ಯವನ್ನು ಮೆಚ್ಚಿಕೊಂಡು ಅದನ್ನೇ ಆಚರಣೆಯಲ್ಲಿ ತಂದುಕೊಳ್ಳುತ್ತಾರೆ. ಮುಂದೆ ಅವರೆಂದೂ ಬಿಳಿಯರಾಗಲು ಅಪೇಕ್ಷಿಸುವುದಿಲ್ಲ; ಬದಲಾಗಿ ತಮ್ಮ ವ್ಯಕ್ತಿ ವಿಶಿಷ್ಟವಾದ ಸೊಗಸನ್ನು ಈಕ್ಷಿಸಿಕೊಳ್ಳುತ್ತಾ ಕಪ್ಪೇ ಸುಂದರ ಎಂದುಕೊಳ್ಳುತ್ತಾ ತಮ್ಮ ಬದುಕನ್ನು ತಾವೇ ರೂಪಿಸಿಕೊಳ್ಳುವ ಛಲಗಾರ್ತಿಯರಾಗುತ್ತಾರೆ. ಬೇರೆ ಯಾರದೋ ಮಹತ್ವಾಕಾಂಕ್ಷೆಗಳಿಗೆ ವಸ್ತುಗಳಾಗದೇ ತಮ್ಮ ಅಸ್ತಿತ್ವದ ಹಾದಿಯನ್ನು ತಾವೇ ಆರಿಸಿಕೊಳ್ಳಲು ಸಂಕಲ್ಪಿಸುತ್ತಾ ಆತ್ಮನಿಷ್ಠರಾಗುತ್ತಾರೆ.

ಪ್ರಾಯಶಃ ಕಪ್ಪುಲೇಖಕಿಯರ ಬರವಣಿಗೆಗಳಲ್ಲಿ ಕಂಡುಬರುವ ಪ್ರಮುಖವಾದ ಲಕ್ಷಣವೆಂದರೆ, ಕಪ್ಪು ನಾಯಕಿ ತನ್ನ ಶಕ್ತಿ ಮತ್ತು ದೌರ್ಬಲ್ಯಗಳನ್ನು ಅರಿಯಲು ಮತ್ತು ಒಪ್ಪಿಕೊಳ್ಳಲು, ತನ್ನ ಆತ್ಮಗೌರವದ ಪೋಷಣೆಗೆ ಮುನ್ನ ಆತ್ಮಾಭಿಮಾನವನ್ನು ಬೆಳೆಸಿಕೊಳ್ಳಲು ಮತ್ತು ತನ್ನನ್ನು ತಾನು ಗುರುತಿಸಿಕೊಳ್ಳಲು ಬೇಕಾದ ಅರ್ಥವತ್ತಾದ ರೂಪುರೇಷೆಗಳನ್ನು ಸಿದ್ಧಪಡಿಸಿಕೊಳ್ಳಲು, ಇತರರಿಗಿಂತ ಮೊದಲು ತನ್ನನ್ನು ತಾನೇ ಪ್ರೀತಿಸುವುದನ್ನು ಕಲಿಯಲು ಒತ್ತಾಯಿಸಲ್ಪಡುತ್ತಾಳೆ.

ಕೆಲವುಬಾರಿ ಇವಳ ಸ್ವಪ್ರೇಮವನ್ನು ಅಪಾರ್ಥಮಾಡಿಕೊಂಡು ಸಂಪೂರ್ಣ ಸ್ವಾರ್ಥವೆಂದು ಪರಿಗಣಿಸಲಾಗುತ್ತಿತ್ತು. ಹೆಣ್ಣಿರುವುದೇ ಇತರರ ಯೋಗಕ್ಷೇಮವನ್ನು ನೋಡಿಕೊಳ್ಳುವುದಕ್ಕಾಗಿ ಎಂದು ನಾವೆಲ್ಲರೂ ನಿಶ್ಚಿತಪಡಿಸಿಕೊಂಡುಬಿಟ್ಟಿದ್ದೇವೆ. ಅವಳಿಗೆ ಎಂದೂ ಪ್ರಾಧಾನ್ಯ ಸಿಕ್ಕಿಲ್ಲ. ತನ್ನ ಕ್ಷೇಮವನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿ ಗಂಡ ಮಕ್ಕಳು ಅಥವಾ ಕುಟುಂಬದ ಯೋಗಕ್ಷೇಮಕ್ಕಾಗಿಯೇ ತೇಯುತ್ತಿದ್ದರೆ ಅದು ಆತ್ಮತ್ಯಾಗವಾಗುತ್ತದೆಯೇ ಹೊರತು ಆತ್ಮಗೌರವವೆನಿಸಿಕೊಳುವುದಿಲ್ಲ. ಈ ಆತ್ಮತ್ಯಾಗ ಆತ್ಮವಿನಾಶಕಾರಿಯಾಗುತ್ತದೆ. ಈ ಸಂಗತಿಯನ್ನು ಕಪ್ಪು ಲೇಖಕಿಯರು ಮತ್ತೆಮತ್ತೆ ತಮ್ಮ ರಚನೆಗಳಲ್ಲಿ ನಾಟ್ಯೀಕರಿಸುತ್ತಿದ್ದಾರೆ. ಹೀಗೆ ಮಾಡುವಾಗ ಅನೇಕ ವಿಮರ್ಶಕರು ಸೂಚಿಸಿರುವಂತೆ ತಾವು ಒಂದು ದ್ವೀಪವಾಗಿ ಬಾಳುವುದನ್ನಾಗಲೀ ಪುರುಷರಿಂದ ದೂರವಾಗಿ ಒಂಟಿಯಾಗಿ ಬಾಳುವುದನ್ನಾಗಲೀ ಅವರು ಪ್ರತಿಪಾದಿಸುವುದಿಲ್ಲ. ಮುಖ್ಯವಾಗಿ ಅವರು ಹೇಳುವುದೇನೆಂದರೆ, ಪ್ರತಿಯೊಬ್ಬ ಪುರುಷನಂತೆಯೇ ಪ್ರತಿಯೊಬ್ಬ ಸ್ತ್ರೀಯೂ ತನ್ನ ಬೆಳವಣಿಗೆಗೆ ತಾನೇ ಕಾರಣಳಾಗಿರುತ್ತಾಳೆ. ತನ್ನತನವನ್ನು ಗುರುತಿಸಿಕೊಳ್ಳುವ ತನ್ನ ಘನತೆಯನ್ನು ಸಂರಕ್ಷಿಸಿಕೊಳ್ಳುವ, ತನ್ನ ವಿಧಿಯನ್ನು ರೂಪಿಸಿಕೊಳ್ಳುವ ಮೂಲಕ ತನ್ನ ಭಾವನಾತ್ಮಕ ಬೆಳವಣಿಗೆಯನ್ನು ಪೋಷಿಸುವ ಸಂಪೂರ್ಣ ಹೊಣೆಗಾರಿಕೆ ಅವಳದೇ ಆಗಿರುತ್ತದೆ. ಸ್ವಾಂತಿಕೆಯ ಈ ಹೊಸ ಕಾಣ್ಕೆಯನ್ನು ಒಲಿಯುವುದು ಸುಲಭ.

ಧೈರ್ಯವಾಗಿ ತನ್ನನ್ನು ತಾನು ಪ್ರೀತಿಸುವುದು ಹೇಗೆ ಎಂಬುದರ ಶೋಧನೆ ಕಪ್ಪು ನಾಯಕಿಗೆ ಬೆಚ್ಚನಂತಹ ಆತ್ಮಜಾಗೃತಿಯ ಅನುಭವವನ್ನು ತಂದುಕೊಡುತ್ತದೆ. ಅದು ಆಧ್ಯಾತ್ಮಿಕ ಆತ್ಮೋದ್ಧಾರದ ಹೋಲಿಕೆಗೆ ಯೋಗ್ಯವಾಗಿದ್ದು ಅನೇಕ ಮಾರ್ಗಗಳಿಂದ ಆತ್ಮೋದ್ಧಾರವೇ ಆಗಿರುತ್ತದೆ. ಕಪ್ಪು ನಾಯಕಿಯ ಈ ಜಾಗೃತಿ– 'For Colored Girls' ನಲ್ಲಿ ನೊಜಾಕೆ ಶಾಂಗೆ ಸೂಚಿಸಿರುವಂತೆ– ಆತ್ಮನಲ್ಲಿ ಪರಮಾತ್ಮನನ್ನು ಗುರುತಿಸಿದಂತಾಗಿ ಆಕೆ ಈ ಆತ್ಮಶೋಧನೆಯ ಮಹೋತ್ಸವವನ್ನಾಚರಿಸುತ್ತಾಳೆ.

[SPAN ಸಂಚಿಕೆಯೊಂದರಲ್ಲಿ (1982) ಪ್ರಕಟವಾಗಿದ್ದ ಕ್ಲಾಡಿಯಾ ಟೇಟ್ ಅವರ ಲೇಖನವೊಂದರ ಅನುವಾದ]

* A man's destination is not his destiny,
Every country is home to one man
And exile to another,
Where a man dies bravely
At one with his destiny, that soil is his.

—T. S. Eliot

ಕಾಂಟೂರ್ ರೇಖೆಗಳು.

● ಎಸ್. ಷಣ್ಮುಖಪ್ಪ, ಎಂ.ಎಸ್ಸಿ.,ಎಜಿ.,

ಒಣಭೂಮಿ ಕೃಷಿಗೊಂದು ವರದಾನ.

ಪರಿಸರದ ಸಮತೋಲನವನ್ನು ನಾಶಪಡಿಸುವುದರಿಂದ, ಮಳೆಯ ಅನಿಶ್ಚಿತತೆಯಿಂದ, ಮಳೆಯಾಗುವ ಪ್ರಮಾಣದಲ್ಲಿ ದಿನೇ ದಿನೇ ಹೆಚ್ಚುತ್ತಿರುವ ಕೊರತೆಯಿಂದ ಇಂಡಿಯಾದ ಸಸ್ಯದ ಪರಿಸ್ಥಿತಿಯಲ್ಲಿ ಅನೇಕ ಗಾಬರಿಗೊಳಿಸುವಂಥ ಸಮಸ್ಯೆಗಳುಂಟಾಗಿವೆ ಎಂಬುದು ಈಚೆಗೆ ಅನೇಕರ ಗಮನಕ್ಕೆ ಬಂದಿದೆ.

ಇದಕ್ಕೆ ಮುಖ್ಯ ಕಾರಣ ಮನುಷ್ಯ ನಾಗರಿಕತೆಯನ್ನು ಬೆಳಸುವ ಭರದಲ್ಲಿ ತನಗೆ ವರದಾನವಾಗಿದ್ದ ಪ್ರಕೃತಿಯ ಬಗ್ಗೆ ದಿವ್ಯ ನಿರ್ಲಕ್ಷ್ಯ ತಾಳಿ ಭವಿಷ್ಯದ ಚಿಂತನೆಯಿಲ್ಲದೆ ಅದಕ್ಕೆ ಮಾರಕವಾದ ಅನೇಕ ಕ್ರಮಗಳನ್ನು ಕೈಗೊಳ್ಳುತ್ತಿರುವುದೇ ಆಗಿದೆ. ಉದಾಹರಣೆಗೆ ಕೈಗಾರಿಕೆ ಮತ್ತು ಬೃಹತ್ ನೀರಾವರಿ ಯೋಜನೆಗಳು, ಅಭಿವೃದ್ಧಿಯ ಹೆಸರಿನಲ್ಲಿ ಪರಿಸರ ಮಾಲಿನ್ಯ, ಪರಿಸರ ಅಸಮತೋಲನಗಳನ್ನುಂಟು ಮಾಡುವಂಥವಾಗಿವೆ. ಅಣೆಕಟ್ಟೆಗಳನ್ನು ನಿರ್ಮಿಸುವುದರಿಂದ ನೂರಾರು ಎಕರೆ ಪ್ರದೇಶದ ಸಸ್ಯಸಂಪತ್ತು ಮುಳುಗಡೆಯಾಗುತ್ತದೆ. ಫಲವತ್ತಾದ ಮಣ್ಣು ಕೊಚ್ಚಿಕೊಂಡು ಬಂದು ಅಣೆಕಟ್ಟೆ ಹೂಳಿನಿಂದ ತುಂಬುತ್ತದೆ. ನೀರಿನ ಒತ್ತಡದಿಂದ ಭೂಕಂಪಗಳೂ ಸಂಭವಿಸಬಹುದು. ಸತತ ನೀರಾವರಿಯಿಂದ ಮಣ್ಣಿನ ಭೌತಿಕ ಹಾಗೂ ರಾಸಾಯನಿಕ ಗುಣಗಳು ಬದಲಾಗಿ ಫಲವಂತಿಕೆ ನಾಶವಾಗುತ್ತದೆ. ಕ್ರಮೇಣ ಭೂಮಿ ನಿರುತ್ಪಾದಕ ಬಂಜರು ಭೂಮಿಯಾಗುತ್ತದೆ. ಅಲ್ಲದೆ ಅಣೆಕಟ್ಟೆ ನಿರ್ಮಿಸಲು ಕೋಟ್ಯಂತರ ರೂಪಾಯಿಗಳ ಬಂಡವಾಳ, ಕಾಲ ಮತ್ತು ಮನುಷ್ಯ ಶಕ್ತಿ ಖರ್ಚಾಗುತ್ತದೆ. ಇಷ್ಟೆಲ್ಲ ಮಾಡಿಯೂ ಸಾಕಷ್ಟು ಭೂಮಿಯನ್ನು ನೀರಾವರಿ ಮಾಡಲು ಸಾಧ್ಯವಿಲ್ಲ. ಭಾರತದಲ್ಲಿ ಇಂಥ ನೀರಾವರಿ ಭೂಮಿ ಒಟ್ಟು ಕೃಷಿ ಭೂ ವಿಸ್ತೀರ್ಣದ ಶೇಕಡ ಹದಿನೈದರಷ್ಟು ಎಂದು

ಹೇಳಲಾಗಿದೆ. ಇಂಥ ಸಂದರ್ಭದಲ್ಲಿ ಪ್ರಕೃತಿಯ ಸಹಯೋಗದಲ್ಲಿಯೇ ಏನಾದರೂ ಪರಿಹಾರ ಸಾಧ್ಯವೇ ಎನ್ನುವ ಬಗ್ಗೆ ಭಾರತೀಯ ವಿಜ್ಞಾನಿಗಳು ಮತ್ತು ಕೃಷಿ ತಜ್ಞರು ನಡೆಸಿರುವ ಆಶಾದಾಯಕ ಪ್ರಯೋಗವೊಂದರ ಬಗ್ಗೆ ಈ ಲೇಖನ.

ನಮ್ಮಲ್ಲಿ ನೀರಾವರಿ ಸೌಲಭ್ಯವಿಲ್ಲದ ಕೇವಲ ಮಳೆಯನ್ನು ಆಶ್ರಯಿಸಿರುವ ಕೃಷಿಭೂಮಿ ಶೇಕಡ 80 ಭಾಗ ಇದೆ. ಒಂದೆರಡು ಇಂಚು ಮಳೆ ಬೀಳುವ ಬರಡು ಭೂಮಿಯನ್ನು ಕೂಡಾ ಸಸ್ಯ ಸಮೃದ್ಧವಾಗುವಂತೆ ಮತ್ತು ಆರ್ಥಿಕವಾಗಿಯೂ ಉಪಯುಕ್ತವಾಗುವಂತೆ ಒಂದು ಸರಳ ತಂತ್ರ ಜ್ಞಾನವನ್ನು ವಿಜ್ಞಾನಿಗಳು ಕಂಡುಕೊಂಡು ರೂಢಿಸುತ್ತಿದ್ದಾರೆ.

ನಾವು ಉಳುಮೆ ಮಾಡುವ ಭೂಮಿಯಲ್ಲಿ ಮಳೆ ಸಕಾಲದಲ್ಲಿ ಬಾರದಿದ್ದರೂ ಕೆಲವು ಪ್ರದೇಶಗಳಲ್ಲಿ ಬೆಳೆ ಹಸಿರಾಗಿರುವುದನ್ನು, ಇನ್ನು ಕೆಲವು ಕಡೆ ಒಣಗಿ ಹೋಗಿರುವುದನ್ನು ಕಾಣುತ್ತೇವೆ. ಬೆಳೆ ಹಸಿರಾಗಿರುವ ಭಾಗದ ರಹಸ್ಯ ಅಡಗಿರುವುದೇ ಈಸ ಮತಲ ನೀರು ಶೇಖರಣೆ ವಿಧಾನದ ತಾಂತ್ರಿಕ ಗುಣದಿಂದಲೇ. ಇದನ್ನೇ ಅಭಿವೃದ್ಧಿ ಪಡಿಸಿ ಎಂಥ ಬರಡು ಪ್ರದೇಶದಲ್ಲೂ ಸಸ್ಯಗಳನ್ನು ಬೆಳೆಸಲು ಸಾಧ್ಯ ಎನ್ನುವುದೇ ಈ ತಂತ್ರ ಜ್ಞಾನ ಇಂಥ ಸಮತಲಗಳನ್ನು ಗುರ್ತಿಸಿ ಬಳಸಿಕೊಳ್ಳಲು ಕಾಂಟೂರ್ ರೇಖೆಗಳು ಸಹಾಯವಾಗುತ್ತವೆ.

'ಕಾಂಟೂರ್' ಎಂದರೆ ಭೂಮಿಯ ಮೇಲ್ಮೈಯಲ್ಲಿ ಸಮಾನ ಎತ್ತರದ ಎರಡು ಬಿಂದುಗಳನ್ನು ಸೇರಿಸುವ ಕಾಲ್ಪನಿಕ ರೇಖೆಗಳು. (Contours are the imaginary lives drawn joining two points of same elevation (Hight) on the surface of the earth)

ಇದರ ತಾಂತ್ರಿಕತೆ ಅಷ್ಟೇನೂ ಗಹನವಾದುದಲ್ಲ. ಸಾಮಾನ್ಯನಿಗೂ ಅರ್ಥವಾಗಬಲ್ಲ ಸರಳ ತಂತ್ರಜ್ಞಾನವಿದು. ಮೊದಲು ಭೂಮಿಯ ಸಮತಲವನ್ನು ಗುರುತಿಸಲು ನಾಲ್ಕು ಮೀಟರ್ ಉದ್ದದ ಪ್ಲಾಸ್ಟಿಕ್ ಪೈಪನ್ನು ತೆಗೆದುಕೊಂಡು ರಸ ಮಟ್ಟದ ತಂತ್ರದಲ್ಲಿ ನೀರು ತುಂಬಿ ಕೊಳವೆಯೊಳಗಿನ ನೀರು ಸಮಸ್ಥಿತಿಯಲ್ಲಿ ನಿಲ್ಲುವ ಎರಡು ಬಿಂದುಗಳನ್ನು ಗುರುತಿಸುವುದು ಆ ಎರಡು ಬಿಂದುಗಳನ್ನೂ ಕೂಡಿಸಿ ಅರ್ಧ ಮೀಟರ್ ಅಗಲ ಅರ್ಧ ಮೀಟರ್ ಆಳ ನಾಲ್ಕು ಮೀಟರ್ ಉದ್ದದ ಕಾಲುವೆಗಳನ್ನು ತೆಗೆಯುವುದು ಹೀಗೆ ನಾವು ಬೆಳೆಸಬೇಕಾಗಿರುವ ಸಸ್ಯದ ಬೆಳವಣಿಗೆಗೆ ಬೇಕಾದ ಅಂತರವನ್ನು ಉಳಿಸಿಕೊಂಡು ಬೇರೆ ಬೇರೆ ಭೂ ಮಟ್ಟದಲ್ಲಿ (ಎತ್ತರದಲ್ಲಿ) ಕಾಲುವೆಗಳನ್ನು ತೆಗೆಯುವುದು

ಇಂಥ ಕಾಲುವೆಗಳನ್ನು ಬೆಟ್ಟಗುಡ್ಡಗಳ ಪ್ರದೇಶದಲ್ಲೂ ಇಳಿಜಾರಾಗಿರುವ ಭೂಮಿಯಲ್ಲೂ ತೋಡಬಹುದು. ಯಾವುದೇ ಭೂ ಮಟ್ಟದ ಕಾಲುವೆ ಪಾತ್ರೆಯಲ್ಲಿ ನೀರು ಹಿಡಿದಿಟ್ಟಂತೆ ಸಮಾನವಾಗಿ ನೀರನ್ನು ಹಿಡಿದಿಟ್ಟುಕೊಳ್ಳುವುದು ನಮ್ಮ ಅನುಭವಕ್ಕೆ ಬರುತ್ತದೆ. ಇಂತಹ ಒಂದೊಂದು ಕಾಲುವೆಯೂ ತನ್ನಷ್ಟಕ್ಕೆ ಪರಿಪೂರ್ಣಗೊಂಡ ಒಂದು ಅಣೆಕಟ್ಟೆ ಇದ್ದಂತೆ. ಆದರೆ ಅಣೆಕಟ್ಟೆ ನಿರ್ಮಿಸಿದಾಗ ಉಂಟಾಗುವ ಸಸ್ಯ ಸಂಪತ್ತಿನ ವಿನಾಶ ಮತ್ತು ಫಲವತ್ತಾದ ಮಣ್ಣಿನ ವ್ಯರ್ಥಗೊಳ್ಳುವಿಕೆಗೆ ಇಲ್ಲಿ ಅವಕಾಶವಿಲ್ಲ. ಬದಲಾಗಿ ಸಸ್ಯಸಮೃದ್ಧಿ ಮತ್ತು ಮಣ್ಣಿನ ರಕ್ಷಣೆ ಸಾಧ್ಯವಾಗುತ್ತದೆ.

ಈ ಕಾಲುವೆಗಳಲ್ಲಿ ಶೇಖರಗೊಂಡ ನೀರು ಮಣ್ಣಿನಲ್ಲಿ ತೇವಾಂಶವು ಅಡಕಗೊಳ್ಳಲು ಅವಕಾಶ ಮಾಡಿಕೊಡುವುದು. ಹೀಗೆ ನೀರನ್ನು ಹೀರಿ ಕೊಳ್ಳುವ ಮಣ್ಣಿನ ಸಾಮರ್ಥ್ಯ ಸಂತೃಪ್ತ ಸ್ಥಿತಿಯನ್ನು ಪಡೆದುಕೊಂಡು ಹೆಚ್ಚುಕಾಲ ತೇವಾಂಶವನ್ನು ಉಳಿಸಿಕೊಳ್ಳುತ್ತದೆ. ಅಲ್ಲದೆ ಮಳೆಯ ನೀರಿನೊಂದಿಗೆ ಕೊಚ್ಚಿಕೊಂಡು ಬರುವ ಭೂಮಿಯ ಮೇಲ್ಪದರದ ಸಾರವತ್ತಾದ ಮಣ್ಣು ಕಾಲುವೆಯಲ್ಲಿ ಸಂಗ್ರಹಗೊಂಡು ಸಸ್ಯಗಳ ಬೆಳವಣಿಗೆಗೆ ಪೋಷಕವಾಗುತ್ತದೆ.

ಈ ಖುಷ್ಕಿ ಭೂ ಅಭಿವೃದ್ಧಿ ತಾಂತ್ರಿಕ ಜ್ಞಾನವನ್ನು ಪ್ರಯೋಗದಲ್ಲಿ ಅಳವಡಿಸಿಕೊಂಡರೆ ಸಧ್ಯದಲ್ಲಿ ಮಾನವನ ಸಮಸ್ಯೆಯಾಗಿರುವ–ಆಹಾರ ಮತ್ತು ಇಂಧನದ ಸಮಸ್ಯೆಯನ್ನು ಬಗೆಹರಿಸಲು ಸಾಧ್ಯವಾಗುತ್ತದೆ. ಕಡಿಮೆ ಮಳೆ ಬೀಳುವ ಪ್ರದೇಶದಲ್ಲೂ ಬೆಳೆಯಬಹುದಾದ ಸೀತಾಫಲ, ಗೋಡಂಬಿ, ಬೋರೆ, ಹುಣಸೆ, ಪೇರಲ, ಅಂಟುವಾಳ, ಹಲಸು ಮತ್ತು ಮಾವಿನಂಥ ಹಣ್ಣಿನ ಮರಗಳನ್ನು ಬೆಳೆಯಬಹುದು. ಇಂಧನಕ್ಕಾಗಿ ಸಿಸ್ಸು, ಅಕೇಶಿಯಾ, ಸರ್ವೆ, ನೀಲಗಿರಿ ಇತ್ಯಾದಿಗಳನ್ನು ಬೆಳೆಸಬಹುದು. ಕೇವಲ ಇಂಧನವಲ್ಲದೆ ಇವು ಮನೆಕಟ್ಟುವ ಮರವಾಗಿಯೂ ಬಳಕೆಗೆ ಬರುತ್ತವೆ. ಇಂಧನದ ಸಮಸ್ಯೆ ಇಲ್ಲದ ಮಲೆನಾಡಿನಲ್ಲಿಯೂ ಬೆಲೆಬಾಳುವ ಮರಗಳನ್ನು ಸೌದೆಗಾಗಿ ಕಡಿಯದಂತೆ ಈ ರೀತಿಯ ನೆಡುತೋಪುಗಳನ್ನು ಬಳಸಬಹುದು. ದನಕರುಗಳ ಮೇವು ಮತ್ತು ಕಾಂಪೋಸ್ಟ್ ಗೊಬ್ಬರಕ್ಕಾಗಿ ಸೂಬಾಬುಲ್, ಹೆಮಟಾ, ಗ್ಲಿರಿಸಿಡಿಯಾ, ಸ್ಟೈಲೋ ಈ ಜಾತಿಯ ಸಸ್ಯಗಳನ್ನು ಬೆಳೆಸಬಹುದು.

ಇಷ್ಟಲ್ಲದೆ ದೀರ್ಘ ಕಾಲದಲ್ಲಿ ಇಂಥ ಯೋಜನೆಗಳಿಂದ ಭೂಮಿಯ ತೇವಾಂಶ ಹೆಚ್ಚುವುದಲ್ಲದೆ ಹುಲ್ಲು ಹಸಿರು ಬೆಳೆದು ಭೂ ಪ್ರದೇಶ ಸಸ್ಯ ಸಮೃದ್ಧಿಯಿಂದ ಕಂಗೊಳಿಸುವಂತಾಗುತ್ತದೆ. ಕಾಲಕ್ರಮೇಣ ಆ ಪ್ರದೇಶಗಳಲ್ಲಿ ನೀರಿನ ಒರತೆಗಳು ಹುಟ್ಟಿಕೊಳ್ಳುತ್ತವೆ.

ಇದೇ ತಂತ್ರ ಜ್ಞಾನವನ್ನು ಬಳಸಿಕೊಂಡು ಕೃಷಿ, ತೋಟಗಾರಿಕೆ, ಮೀನು ಸಾಕಣೆ, ಮತ್ತು ಅರಣ್ಯ ವಿಭಾಗಗಳನ್ನು ಅಭಿವೃದ್ಧಿ ಪಡಿಸಬಹುದು.

ಈ ತಂತ್ರ ಜ್ಞಾನವನ್ನು ಬಳಸಿಕೊಂಡು ಸಾವಿರಾರು ಎಕರೆ ಒಣಭೂಮಿಯನ್ನು ಸಸ್ಯ ಸಮೃದ್ಧವನ್ನಾಗಿ ಮಾಡಲು ಸಾಧ್ಯ ಎನ್ನುತ್ತಾರೆ ಶ್ರೀ ಕೇದಾರ್ (State Co ordinator for dry land Development Board) ಈ ದಿಸೆಯಲ್ಲಿ ಕರ್ನಾಟಕ ಸರ್ಕಾರದ ಪ್ರಯತ್ನಗಳು ಪ್ರಾರಂಭವಾಗಿವೆ. ಕೆಲವೊಂದು ಆಯ್ದ ಜಾಗಗಳಲ್ಲಿ ನೆಡು ತೋಪುಗಳು ತಲೆಯೆತ್ತಿವೆ.

ಮನುಷ್ಯನ ಸಂಸ್ಕೃತಿ ಮತ್ತು ನಾಗರೀಕತೆ ಯಾವಾಗಲೂ ನೀರು ಮತ್ತು ಮಣ್ಣನ್ನು ಆಧರಿಸಿಯೇ ಬೆಳೆದಿವೆ ಮತ್ತು ಬೆಳೆಯ ಬೇಕಾಗಿದೆ. ಆಯಾ ಪ್ರದೇಶದಲ್ಲಿ ಬೀಳುವ ಮಳೆ, ಅಲ್ಲಿನ ಮಣ್ಣಿನ ರಚನೆ ಮತ್ತು ಸತ್ವಗಳು ಆಯಾ ಜನಾಂಗದ ಬದುಕಿಗೆ ಕಾರಣವಾಗುವಂಥವುಗಳು. ಇವುಗಳನ್ನು ಅಲ್ಲಲ್ಲಿ ಸಿಕ್ಕುವ ಕನಿಷ್ಟ ಸ್ಥಿತಿಯಲ್ಲಿ ಗರಿಷ್ಠ ಉಪಯುಕ್ತತೆಗೆ ಬಳಸಿಕೊಳ್ಳುವುದೇ ನಮ್ಮ ಭವಿಷ್ಯದ ಬದುಕಿನ ಮಹತ್ವದ ಹೆಜ್ಜೆ. ನೀರು- ಮಣ್ಣು - ಹಸಿರು- ಮಾನವನ ಬದುಕು ಶಾಂತಿ ಸಮೃದ್ಧಿಗಳಿಂದ ಕಂಗೊಳಿಸುವಂತೆ ಮಾಡುತ್ತವೆ. ನಾಗರಿಕ ಬದುಕಿನ ಯಾಂತ್ರಿಕತೆ ಒಂಟಿತನ ಬೇಸರಗಳನ್ನು ಕಳೆಯುತ್ತವೆ. ಮಾನವ ಬದುಕಿಗೆ ಪ್ರಕೃತಿಯೊಡನೆ ಸಾಮರಸ್ಯವನ್ನು ತಂದುಕೊಡುತ್ತವೆ.

ವಿಜ್ಞಾನ ಮತ್ತು ಮಾನವಕುಲ *

● ಡಾ|| ಎ. ಎನ್. ನಾಗರಾಜ

ಬಹಳಷ್ಟು ಜನರಿಗೆ 'ವಿಜ್ಞಾನವು' ತಂತ್ರಜ್ಞಾನದ ಸಮಾನಾರ್ಥಕ ಪದವಾಗಿ ಬಿಟ್ಟಿದೆ. ಅವರಿಗೆ ವಿಜ್ಞಾನವೆಂದರೆ ಕೈಗಾರಿಕೀಕರಣ, ಯಂತ್ರಗಳು, ಟಿ. ವಿ.. ಸಿನೆಮಾ ಮುಂತಾದವುಗಳ ಆಗಮನವೆನಿಸಿಬಿಡುತ್ತದೆ. ಆದರೆ ಇಂದು ವಿಜ್ಞಾನವು ತನ್ನ ಬಹುಮುಖತೆಯ ಮೂಲಕ ಇನ್ನೂ ವಿಶೇಷವಾದದ್ದೇನನ್ನೋ ಸೂಚಿಸುತ್ತದೆ. ಅನೇಕ ಸಂಶೋಧನೆಗಳು ಮತ್ತು ಆ ಮೂಲಕ ತಲುಪಿದ ನಿರ್ಣಯಗಳು ಮನುಷ್ಯನು ಹೊಂದಿದ್ದ ಮತ್ತು ಇನ್ನೂ ಹೊಂದಿರುವ ಪೌರಾಣಿಕ ಮತ್ತು ಮೂಢ ನಂಬಿಕೆಗಳನ್ನು ಅಲ್ಲಾಡಿಸುತ್ತವೆ ಹೊಸ ಸಂಶೋಧನೆಗಳ ಬೆಳಕಿನಲ್ಲಿ ಪೌರಾಣಿಕ ನಂಬಿಕೆಗಳನ್ನು ಪ್ರಶ್ನಿಸುತ್ತ ಹೊಸ ಮೌಲ್ಯಗಳ ವ್ಯವಸ್ಥೆಯನ್ನು ಕಟ್ಟಲು ಆರಂಭಿಸಬೇಕಿದೆ; ನಿಸರ್ಗದ ಬಗ್ಗೆ, ಮಾನವ ಜೀವನದ ಗಂತವ್ಯದ ಬಗ್ಗೆ ಹೊಸ ಯೋಚನೆಗಳನ್ನು ರೂಪಿಸಿಕೊಳ್ಳಬೇಕಾಗಿದೆ.

ಈ ದಿಕ್ಕಿನಲ್ಲಿ ಕೆಲವು ಸಂಶೋಧನೆಗಳು ಮತ್ತು ಮಾನವ ಜೀವನ ನಂಬಿಕೆಗಳ ಮೇಲೆ ಅವುಗಳು ಉಂಟುಮಾಡಿರುವ ಪರಿಣಾಮಗಳನ್ನು ಪರಿಶೀಲಿಸಬಹುದು. ನಾನೊಬ್ಬ ಜೀವಶಾಸ್ತ್ರದ ವಿದ್ಯಾರ್ಥಿಯಾಗಿರುವುದರಿಂದ, ಮತ್ತು ಅದಲ್ಲದೆ, ನಾವೆಲ್ಲ ಜೈವಿಕ ಒಳತೋಟಿಗಳ, ಜೀವವಿಕಾಸದ ಉತ್ಪನ್ನಗಳಾದ್ದರಿಂದ ಮೊದಲಿಗೆ ಜೀವವಿಜ್ಞಾನ ಕ್ಷೇತ್ರದಲ್ಲಿ ನಡೆದ ಹೊಸ ಸಂಶೋಧನೆಗಳನ್ನು ಗಮನಿಸಬಹುದು.

ಆದಿಮ ಜೀವವಸ್ತುವು ಪ್ರಾಯಶಃ ಎರಡು ಬಿಲಿಯ ವರ್ಷಗಳ ಹಿಂದೆ ಬೆಚ್ಚನೆಯ ಆದಿಮ ಮಹಾಸಾಗರಗಳ ನೀರಿನಲ್ಲಿ ಉಗಮವಾಯಿತು. ಇಬ್ಬರು ಅಮೆರಿಕದ ವಿಜ್ಞಾನಿಗಳು ಜೀವ ಹುಟ್ಟುವ ಕಾಲಕ್ಕಿದ್ದ ಪರಿಸ್ಥಿತಿಯನ್ನು ಪ್ರಯೋಗ ಶಾಲೆಯಲ್ಲಿ ನಿರ್ಮಿಸು

---

* ಗಿಮೋಬಾಟನ್ ಪ್ರಯೋಗ ಕೇಂದ್ರದಲ್ಲಿ ನೀಡಿದ ಡಾ|| ನಾಗರಾಜ್‌ರವರ ಇಂಗ್ಲೀಷ್ ಭಾಷಣದ ಕನ್ನಡ ರೂಪ.

ತ್ತು ಇಂಗಾಲ, ಜಲಜನಕ. ಆಮ್ಲಜನಕ, ಸಾರಜನಕ ಮುಂತಾದ ಮೂಲವಸ್ತುಗಳ ನ್ನು ಪ್ರೇರೈಸಿದಾಗ ಪ್ರೋಟೀನುಗಳ ಘಟಕಗಳಾದ ಅಮೈನೋಆಮ್ಲಗಳು ತಯಾರಾದವು. ಪ್ರೋಟೀನುಗಳೆಂದರೆ ಇಡೀ ಜೀವದ ಕೇಂದ್ರವಿದ್ದಂತೆ. ಆದರೂ ಇವಿಷ್ಟೇ ಸಾಲದು 'ತನ್ನಂಥದ್ದನ್ನು ತಾನೇ ಸೃಜಿಸಲು' (ಸಂತಾನೋತ್ಪತ್ತಿ) ಪ್ರೋಟೀನುಗಳಲ್ಲದೇ ಇನ್ನೂ ಏನೋ ಬೇಕಾಗುತ್ತದೆ. ಇದಕ್ಕಾಗಿ ನ್ಯೂಕ್ಲಿಯಿಕ್ ಆಮ್ಲಗಳಿವೆ. ಈ ನ್ಯೂಕ್ಲಿಯಿಕ್ ಆಮ್ಲಗಳು ಅನುವಂಶೀಯತೆಯ ವಾಹಕಗಳು. ಜೀವಕೋಶಗಳಲ್ಲಿ ನಡೆಯುವ ಎಲ್ಲ ಚಯಾಪಚಯ ಕ್ರಿಯೆಗಳ (metabolism) ಬಗೆಗಿನ ಸೂಚನೆ–ಮಾರ್ಗದರ್ಶಕ ಸಂದೇಶಗಳನ್ನು ನ್ಯೂಕ್ಲಿಯಿಕ್ ಆಮ್ಲಗಳು ಹೊಂದಿರುತ್ತವೆ. ಉದಾಹರಣೆಗಾಗಿ: ಮನುಷ್ಯನ ಅಂಡಾಣು ಮತ್ತು ಶುಕ್ರಾಣುಗಳು ಸೇರಿ ಉಂಟಾಗುವ ಒಂದು ಫಲಿತ ಅಂಡದ ಕೇವಲ ಒಂದು ಜೀವಕೋಶದಲ್ಲಿ ಇಡೀ ಮನುಷ್ಯನ ಎಲ್ಲ ಗುಣಲಕ್ಷಣಗಳೂ-ರಚನೆ(morphology) ಮತ್ತು ಕ್ರಿಯೆ(Physiology) ಎರಡಕ್ಕೂ ಸಂಬಂಧಪಟ್ಟಂತೆ– ಆ ಒಂದು ಜೀವಕೋಶದಲ್ಲಿನ ನ್ಯೂಕ್ಲಿಯಿಕ್ ಆಮ್ಲದಲ್ಲಿ ಸಂಕೇತಗಳ ರೂಪದಲ್ಲಿ ಕ್ರೋಢೀಕರಣಗೊಂಡಿರುತ್ತದೆ.

ಪ್ರೋಟೀನುಗಳಾದ ಮೇಲೆ ನ್ಯೂಕ್ಲಿಯಿಕ್ ಆಮ್ಲಗಳು– ಅನಂತರ ಇವೆರಡನ್ನೂ ಒಳಗೊಂಡಿರುವ ಜೀವಕೋಶಗಳು ಮೂಡಿಬಂದವು. ಈ ಜೀವಕೋಶಗಳು ವಿಕಾಸಗೊಂಡು ಸಂಕೀರ್ಣವಿನ್ಯಾಸದ ಮೀನುಗಳು, ಕಪ್ಪೆಗಳಂತಹ ಉಭಯಜೀವಿಗಳು, ಸರೀಸೃಪಗಳು ಪಕ್ಷಿಗಳು, ಸಸ್ತನಿಗಳು–ಮತ್ತು ಇವೆಲ್ಲವುಗಳ ತುದಿಯಲ್ಲಿ ಮನುಷ್ಯನು ಮೂಡಿಬಂದ್ದು ಕಾಲದ ಗತಿವಿಚಾರ– ಪ್ರಾಯಶಃ ಎರಡು ಬಿಲಿಯ ವರ್ಷಗಳು ಕಳೆದು ಹೋದದ್ದರ ದಾಖಲೆ. ಇದೆಲ್ಲ ಅಲ್ಲದೆ, ಡಾರ್ವಿನ್ ಮಂಡಿಸಿ, ಅನೇಕ ವಿಜ್ಞಾನಿಗಳು ಪುರಸ್ಕರಿಸಿದ ವಿಕಾಸ ತತ್ವವು ಬಹುತೇಕ ಧರ್ಮಗಳು ತಮ್ಮ ಬೆನ್ನಿಗೆ ಕಟ್ಟಿಕೊಂಡಿದ್ದ ಸೃಷ್ಟಿಯ ಬಗೆಗಿನ ಪೌರಾಣಿಕ ನಂಬಿಕೆಯನ್ನು ಅಲ್ಲೋಲ-ಕಲ್ಲೋಲಗೊಳಿಸಿ ಬಿಟ್ಟಿತು. ಸೃಷ್ಟಿಯ ಬಗೆಗಿನ ಇಂಥ ನಂಬಿಕೆಗಳಿಗೆ ಅನುಸಾರವಾಗಿ, ಮಾನವನ ಸೃಷ್ಟಿ ಮೊದಲಿಗೆ; ಆ ನಂತರ, ಮಾನವನ ಉಪಯೋಗಗಳಿಗೆ ಒದಗಿಬರಲೆಂಬಂತೆ ನಕ್ಷತ್ರ ಮಂಡಲ ಇತರ ಪ್ರಾಣಿಗಳು ಇತ್ಯಾದಿ. ವಿಕಾಸ ತತ್ವದ ಮುಂಚಾಚುವು ಸೂಚಿಸುವಂತೆ ಮನುಷ್ಯನ ಮಾನಸಿಕ ವಿಕಾಸವು ಇನ್ನೂ ಅಪೂರ್ಣವಾಗಿದೆ. ಮಾನಸಿಕ ಶಕ್ತಿಗೆ ಪ್ರಚಂಡ ಸಾಧ್ಯತೆಗಳ ಅವಕಾಶವಿದ್ದು ಅವಿನ್ನೂ ಮೂರ್ತಗೊಳ್ಳಬೇಕಾಗಿದೆ.

ಈ ಮನುಷ್ಯನೆಂಬ ಪ್ರಾಣಿ ಮೂಡಿಬರುವವರೆಗಿನ ವಿಕಾಸವು ಬರೀ ಮ್ಯುಟೇಶನ್‌ಗಳು (ಜೀವಿಗಳಲ್ಲಿ ಒಮ್ಮೆಲೇ ಉಂಟಾಗುವ ಅನುವಂಶೀಯವಾದ ಬದಲಾವಣೆಗಳು) ಮತ್ತು ಸೃಷ್ಟಿಯ ಆಯ್ಕೆ (natural selection) ಇವೆರಡರ ಮೂಲಕ ನಡೆಯುತ್ತಿತ್ತು.

ಆದರೆ ವಿಕಾಸದ ದೃಷ್ಟಿಯಲ್ಲಿ ಮಾನವನ ಉಗಮದ ನಂತರದ ವಿಕಾಸವು ಬರೀ ಜೈವಿಕವಾದದ್ದಾಗಿ ಉಳಿಯಲಿಲ್ಲ. ಜೂಲಿಯನ್ ಹಕ್ಸ್ಲೇ ಸೂಚಿಸುವಂತೆ ಅದು ಮಾನಸಿಕ ಸಾಮಾಜಿಕ (Psycho Social) ಆಯಾಮಗಳನ್ನು ಪಡೆದುಕೊಂಡಿತು. ಮಾನವ ಮನಸ್ಸಿಗೆ ನಿರೀಕ್ಷಣೆಯ ಮೂಲಕ ಅನುಭವಗಳನ್ನು ಪಡೆಯುವ ಜ್ಞಾನವನ್ನು ಗಳಿಸುವ ಮತ್ತು ಇವೆಲ್ಲವುಗಳನ್ನು ದಾಖಲಿಸಿಕೊಳ್ಳುವ ಶಕ್ತಿಯಿದ್ದು ಹೀಗೆ ಪಡೆದವುಗಳಿಂದ ಕಲಿಯುತ್ತ, ಹೀಗೆ ಕಲಿತದ್ದನ್ನು ಮುಂಬರುವ ಪೀಳಿಗೆಗಳು ಹೊಸದೊಂದು ಇನ್ನಷ್ಟು ಒಳ್ಳೆಯ ಸಾಮಾಜಿಕ ವ್ಯವಸ್ಥೆಯ ಬೆಳವಣಿಗೆಗಾಗಿ ಉಪಯೋಗಿಸಿಕೊಳ್ಳಬಹುದು. ಇಷ್ಟಿದೆ ಮಾನವನ ಮನಸ್ಸು ನಿಸರ್ಗದ ಮೇಲೆ ಹತೋಟಿ ಸಾಧಿಸಬಲ್ಲದಾಗಿದ್ದು ಇದುವರೆಗಿನ ಮನುಷ್ಯಪೂರ್ವದ ಯಾವ ಪ್ರಾಣಿಗಳಿಗೂ ಸಾಧ್ಯವಾಗದಿದ್ದ ನಿಸರ್ಗವನ್ನು ತನ್ನಿಷ್ಟಕ್ಕೆ ತಕ್ಕಂತೆ ಸಂಸ್ಕರಿಸುವ ಶಕ್ತಿಯನ್ನೂ ಹೊಂದಿದೆ. ಇದು ಕಟ್ಟುವ ಕೆಡುವುವ ಎರಡೂ ಶಕ್ತಿಗಳನ್ನು ಹೊಂದಿದೆ. ಈ ಅಂಶವು ನಮ್ಮೆಲ್ಲರ ಮೇಲೆ ಅಪಾರವಾದ ಜವಾಬ್ದಾರಿಯನ್ನು ಹೊರಿಸುತ್ತದೆ. ಇಂಥ ಹಿನ್ನೆಲೆಯಲ್ಲಿ, ನಾವು ಹಿಂದಿನಂತೆ ಎಲ್ಲವೂ ತನ್ನಷ್ಟಕ್ಕೆ ತಾನು ನಡೆಯುತ್ತದೆಂಬ ನಿರ್ಲಿಪ್ತ ತೃಪ್ತಿಯನ್ನು ಹೊಂದಿರಲಾಗುವದಿಲ್ಲ. ಸಮಾಜದ ಬೆಳವಣಿಗೆ ಬದಲಾವಣೆಗಳ ಬಗ್ಗೆ ಅದರಲ್ಲಿಯೂ ಭೂಮಿಯ ಮೇಲೆ ಮನುಷ್ಯನ ಅಳಿವು ಉಳಿವುಗಳನ್ನೇ ನಿರ್ಧರಿಸಬಲ್ಲಂತಹ ಯುದ್ಧ ಅಥವಾ ಶಾಂತಿಗೆ ಕಾರಣವಾಗಬಲ್ಲಂಥ ವಿಷಯಗಳ ಬಗ್ಗೆ ಪ್ರತಿಯೊಬ್ಬ ವ್ಯಕ್ತಿಯೂ ಕ್ರಿಯಾಶೀಲನಾಗುತ್ತ ಜವಾಬ್ದಾರಿ ವಹಿಸಿಕೊಳ್ಳಬೇಕಾಗಿದೆ.

ಮಾನವ ಶಾಸ್ತ್ರಜ್ಞರು ಜನಾಂಗೀಯ ತಾರತಮ್ಯದ ಒಡಪನ್ನು ಒಡೆದಿದ್ದಾರೆ. ಅನೇಕ ಜನಾಂಗಗಳ ಬಗೆಗಿನ, ಅನೇಕ ಸಂಸ್ಕೃತಿಗಳ ಬಗೆಗಿನ ಅಭ್ಯಾಸಗಳು ಯಾವದೇ ಜನಾಂಗವಾಗಲೀ ಸಂಸ್ಕೃತಿಯಾಗಲೀ ಇನ್ನೊಂದಕ್ಕಿಂತ ತನ್ನಷ್ಟಕ್ಕೇ ತಾನೇ ಉತ್ತಮವಾದದ್ದೆಂದು ಹೇಳುವದಿಲ್ಲ. ಇಂದು ಕೆಲವು ದೇಶಗಳು ಅಭಿವೃದ್ಧಿಗೊಂಡಿದ್ದು ಇನ್ನು ಕೆಲವು ದೇಶಗಳು ಹಿಂದುಳಿದಿದ್ದರೆ ಅದಕ್ಕೆ ಕಾರಣಗಳನ್ನು ಆ ದೇಶಗಳ ಜನಾಂಗಗಳ ವ್ಯತ್ಯಾಸದಲ್ಲಿ ಹುಡುಕಲಾಗದು. ಅಮೆರಿಕದ ಧರ್ಮಶಾಸ್ತ್ರಜ್ಞ ರಿನಾಲ್ಡ್ ನೆಬೂ (Renold Niebuhr) ಅಮೆರಿಕಾ ಇಂದು ಜಾಗತಿಕ ಸಂದರ್ಭದಲ್ಲಿ ಪ್ರಮುಖ ರಾಷ್ಟ್ರವಾಗಿ ರೂಪುಗೊಳ್ಳಲು ಕಾರಣವಾದ ಕೆಲವು ಪ್ರಮುಖ ಅಂಶಗಳನ್ನು ಸೂಚಿಸುತ್ತಾನೆ. ಅವಾವೆಂದರೆ—

1) ಅಮೆರಿಕಾ ವಿಸ್ತಾರಗೊಳ್ಳುವ ಕ್ರಿಯೆಯು ಔದ್ಯೋಗಿಕ ಕ್ರಾಂತಿಯೊಡನೆ ಏಕೀಭವಿಸಿದ್ದು,
2) ಯಾದವೀಕಲಹವು ಅಮೆರಿಕೆಯನ್ನು ಒಂದುಗೂಡಿಸಿದ್ದು, ಮತ್ತು,

3) ನೈಸರ್ಗಿಕ ಸಂಪನ್ಮೂಲಗಳು ಸಮೃದ್ಧವಾಗಿದ್ದು. ಸಂಕ್ಷೇಪವಾಗಿ ಹೇಳುವದಾದರೆ, ಅಮೆರಿಕನ್ನರನ್ನು ತಮ್ಮಷ್ಟಕ್ಕೆ ತಾವೇ ಶ್ರೇಷ್ಠರನ್ನಾಗಿಸುವ ಯಾವ ಜನಾಂಗೀಯ ಅಂಶಗಳೂ ಅವರಲ್ಲಿ ಇಲ್ಲ. ಇದು ಬರೀ ಅಮೆರಿಕನ್ನರ ಬಗೆಗಷ್ಟೇ ಅಲ್ಲ– ಯಾವುದೇ ದೇಶವಾಸಿಗಳ ಬಗೆಗೆ ಈ ಮಾತು ಸರಿ. ನಾವು ಬಹುತೇಕ ಏಶಿಯನ್ನರು ನಮ್ಮ ಬಡತನದ ಮೂಲಕವೋ ನಮ್ಮ ಸಾಮಾಜಿಕ ಹಿಂದುಳಿದಿರುವಿಕೆಯ ಮೂಲಕವೋ ಕೀಳರಿಮೆ (Inferiority complex) ಯನ್ನು ಬೆಳೆಸಿಕೊಳ್ಳುತ್ತೇವೆ. ಒಮ್ಮೆ ಈ ಹಿಂದುಳಿದಿರುವಿಕೆಗೆ ಪರಿಸ್ಥಿತಿಯು- ಸಂದರ್ಭಗಳು ಕಾರಣವೆಂದು ಹೊಳೆದಾಗ ನಾವಾರೂ ಕೀಳರಿಮೆಯ ನಾಚಿಕೆಯಿಂದ ಬಳಲಬೇಕಾಗುವದಿಲ್ಲ. ಹಾಗೆ ನೋಡಿದರೆ, ಈ ಮುಂದುವರಿದ ದೇಶಗಳು ನಮ್ಮ ದೇಶಗಳಲ್ಲಿಯೂ ಅಭಿವೃದ್ಧಿಗೆ ಕಾರಣವಾಗುವ ಪರಿಸ್ಥಿತಿ – ಸಂದರ್ಭಗಳನ್ನು ನಿರ್ಮಿಸಿಕೊಳ್ಳಲು ಸ್ಫೂರ್ತಿಯೊದಗಿಸಬಹುದು.

ಮಾನವ ಶಾಸ್ತ್ರವು ಧರ್ಮ ಮತ್ತು ಧಾರ್ಮಿಕ ವಿಚಾರಗಳ ಬೆಳವಣಿಗೆಯ ಬಗ್ಗೆಯೂ ಸಮೃದ್ಧವಾದ ಜ್ಞಾನವನ್ನು ನೀಡುತ್ತದೆ. ಅಮೂರ್ತವಾದದ್ದರ ಬಗೆಗಿನ ಭಯವು ವಿಕಾಸಗೊಳ್ಳುತ್ತ ಧಾರ್ಮಿಕ ವಿಚಾರಗಳ ಬೆಳವಣಿಗೆ ಸಾಧ್ಯವಾದದ್ದನ್ನು ಕಾಣುತ್ತೇವೆ. ಎಲ್ಲ ಆಧುನಿಕ ಧರ್ಮಗಳೂ ತಮ್ಮ ಮೂಲದಲ್ಲಿ ಇಂಥ ಧಾರ್ಮಿಕ ವಿಚಾರಗಳನ್ನೇ ಇಟ್ಟುಕೊಂಡು ಬೆಳೆದು ಬಂದವುಗಳು. ಸಂಕ್ಷೇಪದಲ್ಲಿ ಇಂದಿನ ಯಾವುದೇ ಧರ್ಮವು ಒಮ್ಮೆಲೇ ಮೇಲ್ಗಡೆಯಿಂದ ನಮ್ಮ ಕೈಗಳಲ್ಲಿ ಇಟ್ಟದ್ದಲ್ಲ. ಇಂದಿನ ಎಲ್ಲ ಪ್ರಮುಖ ಧರ್ಮಗಳೂ ಮೂಲಭೂತವಾದ ಸಾಮ್ಯವನ್ನು ತೋರುತ್ತವೆ. ಈ ವಿಚಾರದ ಮತ್ತು ಧರ್ಮಗಳೆಲ್ಲ ಮೂಡಿಬಂದಿರುವ ವಿಕಾಸದ ಕ್ರಮದ ಬಗೆಗಿನ ಅರಿವು ನಮ್ಮಲ್ಲಿ ಪರ ಧರ್ಮಸಹಿಷ್ಣುತೆ ಬೇರೆ ಧರ್ಮಗಳ ಬಗೆಗಿನ ಸಹಾನುಭೂತಿಪರ ತಿಳುವಳಿಕೆಯನ್ನು ಮೆಚ್ಚುಗೆಯನ್ನು ಉಂಟುಮಾಡಬೇಕು.

ಆಧುನಿಕ ಮನಃಶಾಸ್ತ್ರವು ಕೇಡಿಗಳ ಬಗ್ಗೆ, ಬಾಲಾಪರಾಧಿಗಳ ಬಗ್ಗೆ, ಲೈಂಗಿಕ ಅಪರಾಧಿಗಳ ಬಗ್ಗೆ, ಇಷ್ಟೇಕೆ, ಅತ್ಯಂತ ಕ್ರೂರ ಸಣ್ಣ ದೊಡ್ಡ ಸರ್ವಾಧಿಕಾರಿಗಳ ಬಗ್ಗೆ ನಮ್ಮ ಮನೋಭಾವದ ಮೂಲಭೂತ ಬದಲಾವಣೆಯನ್ನು ಅಪೇಕ್ಷಿಸುತ್ತದೆ. ಅಪರಾಧಿಗಳಾಗಲೀ ಸರ್ವಾಧಿಕಾರಿಗಳಾಗಲೀ ಹುಟ್ಟುವದಿಲ್ಲ- ಆಗಿಸಲ್ಪಡುತ್ತಾರೆ. ಬಹುತೇಕ ಸಂದರ್ಭಗಳಲ್ಲಿ, ಪ್ರೀತಿಯ ಅಭಾವ ಮತ್ತು ಅಸಂತೋಷಕರ ಕೌಟುಂಬಿಕ ಜೀವನ ಮಗುವನ್ನು ಅಪರಾಧಿಯನ್ನಾಗಿಸುತ್ತದೆ. ಇಂಥದೇ ಸಂದರ್ಭ ಅವಾಸ್ತವವಾದ ಅಧಿಕಾರದರ್ಪದ ಬಾಸ್‌ನನ್ನು ಗಂಡಸನ್ನು ರೂಪಿಸುತ್ತದೆ. ಇಂಥ ಬಹುತೇಕ ಸಮಾಜ ಘಾತುಕ ಘಟಕಗಳು ಮಾನಸಿಕ ರೋಗಿಗಳಾಗಿದ್ದು ಅವರನ್ನು ಸರಿಪಡಿಸಬಹುದಾಗಿದೆ.

ಮನಃಶಾಸ್ತ್ರಜ್ಞರು ತಮ್ಮ ವಿಚಾರಗಳನ್ನು ಮನುಷ್ಯನ ಮೆದುಳಿನ ಸಾಧ್ಯತೆಗಳ ಕಡೆಗೂ ಹೊರಳಿಸುತ್ತಿದ್ದಾರೆ. ಅವರ ಅಭಿಪ್ರಾಯದಂತೆ ಮನುಷ್ಯನು ತನ್ನ ಮೆದುಳಿನ ಅನಂತ ಸಾಧ್ಯತೆಗಳಲ್ಲಿ ಒಂದಿನಿತು ಅಂಶವನ್ನು ಮಾತ್ರ ಬಳಸಿ ಕೊಂಡಿದ್ದಾನೆ. ನಮ್ಮ ಬೌದ್ಧಿಕ ಸಾಮರ್ಥ್ಯ, ನಮ್ಮ ಜೀವನದ ಗ್ರಹಿಕೆಯ ಮತ್ತು ಸಂತೋಷಪಡುವ ಸಾಮರ್ಥ್ಯಗಳು ಪೂರ್ಣ ಪ್ರಮಾಣದಲ್ಲಿ ಬಳಕೆಯಾಗೇ ಇಲ್ಲವಂತೆ, ಭಾವ ಶ್ರೀಮಂತಿಕೆಯ ಪ್ರಯೋಜನಶೀಲವಾದ ಬಾಳನ್ನು ಬದುಕುವ ಸಾಮರ್ಥ್ಯದ ಎಲ್ಲ ಸಾಧ್ಯತೆಗಳನ್ನೂ ಇಟ್ಟುಕೊಂಡ ನಾವು ಬಾಳುತ್ತಿರುವದು ಮಾತ್ರ ಯಃಕಶ್ಚಿತ ಬದುಕಾಗಿದೆ. ಒಂದೊಮ್ಮೆ ಟೆಲಿಪಥಿ, ಪರಾಮಾನಸ ದೃಷ್ಟಿ (Clairnoyance) ಮತ್ತು ಅನುಭಾವೀ ಧಾರ್ಮಿಕ ಅನುಭವ ಮುಂತಾದ ಮಾನಸಿಕ ಪ್ರಕ್ರಿಯೆಗಳನ್ನು ತಿರಸ್ಕರಿಸುತ್ತಿದ್ದ ಮನಃಶಾಸ್ತ್ರಜ್ಞರು ಇಂದು ಇವುಗಳನ್ನೆಲ್ಲ ಗಂಭೀರವಾಗಿ ಪರಿಗಣಿಸುತ್ತಿದ್ದಾರೆ. ಪ್ರಾಯಶಃ ಇನ್ನು ಕೆಲವೇ ಕಾಲದಲ್ಲಿ ನಾವೆಲ್ಲ ಈ ಶಕ್ತಿಗಳನ್ನು ಬೆಳೆಸಿಕೊಳ್ಳಬಲ್ಲಂಥ ತಂತ್ರಗಳನ್ನು ರೂಢಿಸಿಕೊಳ್ಳಲು ಸಾಧ್ಯವಾಗಬಹುದು.

ಮನೋ ವಿಶ್ಲೇಷಣಕಾರರು ಇಂದು ತಲುಪುತ್ತಿರುವ ನಿಲುವುಗಳು ಬಹುಕಾಲದ ಹಿಂದೆ ತತ್ವಶಾಸ್ತ್ರಜ್ಞರು ಮತ್ತು ಧಾರ್ಮಿಕ ಸಂತರು ತಾಳಿದ ನಿಲುವುಗಳೇ ಆಗುತ್ತವೆ. ತತ್ವಶಾಸ್ತ್ರಜ್ಞರು ಧಾರ್ಮಿಕ ಸಂತರು ಬೋಧಿಸಿದ್ದು ನೆರೆಹೊರೆಯವರನ್ನು ಪ್ರೀತಿಸಲು, ವ್ಯಕ್ತಿತ್ವದ ಅಖಂಡತ್ವವನ್ನು ಗೌರವಿಸಲು ಮತ್ತು ನಮ್ಮಲ್ಲಿದ್ದುದರಲ್ಲಿ ಸ್ವಲ್ಪ ಇಲ್ಲದವರಿಗೆ ದಾನ ಮಾಡಲು. ನಾವೆಲ್ಲ ಹೀಗೆ ಮಾಡಲು ಪ್ರೇರಿತರಾದದ್ದು ಒಂದು- ಹೀಗೆ ಮಾಡದೇ ಹೋದರೆ ದೇವರು ನಮ್ಮ ಬಗ್ಗೆ ಬೇಸರಗೊಳ್ಳಬಹುದೆಂಬ ಹೆದರಿಕೆ. ಇಲ್ಲವಾದರೆ ಈ ಕ್ರಿಯೆಗಳಲ್ಲಿ ತೊಡಗದವರನ್ನು ಸಮಾಜವೇ ಕೆಟ್ಟವರೆಂದು ಕರೆಯಬಹುದೆನ್ನುವ ಹೆದರಿಕೆ. ಆದರೆ ಇಂಥ ನಿಸ್ವಾರ್ಥ, ಪರೋಪಕಾರೀ ತತ್ವವನ್ನು ಮಾನವಕುಲದ ಬಹುತೇಕ ಭಾಗವು ಅನುಸರಿಸುವದೇ ಇಲ್ಲ. ಏಕೆಂದರೆ ಅವರು ತಮಗೂ ಉಪಯುಕ್ತವಾಗಬಲ್ಲ ಈ ತತ್ವದ ಮೌಲ್ಯವನ್ನು ಅರ್ಥಮಾಡಿಕೊಂಡಿರುವದಿಲ್ಲ. ಎರಿಕ್ ಫ್ರಾಮ್‌ನು ಸೂಚಿಸುವಂತೆ ನಿಜವಾದ ಪ್ರೀತಿ ಮತ್ತು ಇನ್ನೊಬ್ಬರ ಬಗೆಗಿನ ಕಾಳಜಿಗಳು ನಮ್ಮ ಪ್ರಜ್ಞೆಯ ಆಳವನ್ನು ಹೆಚ್ಚಿಸುವದಲ್ಲದೆ ಬದುಕಿನಿಂದ ಸಂತೋಷ ಪಡೆಯುವ ಸಾಮರ್ಥ್ಯವನ್ನು ಹೆಚ್ಚಿಸುತ್ತವೆ. ಪರಸ್ಪರ ಆಳವಾದ ಸಂಬಂಧಗಳಿಂದ ಮನುಷ್ಯನಿಗೆ ಅತೀ ಹೆಚ್ಚಿನ ತೃಪ್ತಿ ದೊರೆಯುತ್ತದೆ. ಇಂಥ ಆಳವಾದ ಸಂಬಂಧ ಸಾಧ್ಯವಾಗುವದು ಪರಸ್ಪರ ಪ್ರೀತಿ ಗೌರವಗಳಿಂದ. ಪ್ರತಿಫಲಾಪೇಕ್ಷೆ ಇಲ್ಲದೇ ಏನನ್ನಾದರೂ ಕೊಡುವದೆಂದರೆ ಬೇರೆಯವರ ಒಳಿತಿಗಾಗಿ ನಾವು ಏನನ್ನೋ ಕಳೆದುಕೊಂಡಂತೆ ಎನ್ನುವದು ಸರಿಯಲ್ಲ. ಇದು ನಾವು ಸಾಮಾನ್ಯ ಅರ್ಥದಲ್ಲಿ ಉಪಯೋಗಿಸುವ 'ತ್ಯಾಗ' ಎಂಬುದೂ ಅಲ್ಲ. ಇದು ನಿಜವಾಗಿಯೂ ಒಂದು ರೀತಿಯ ಬಂಡ

ವಾಳ ಹೂಡಿಕೆ ಇದ್ದಂತೆ. ಇಂಥ ಬಂಡವಾಳ ಹೂಡಿಕೆ ಸಾಮಾನ್ಯಕ್ಕಿಂತ ಹೆಚ್ಚಿನ ಲಾಭಾಂಶವನ್ನು ತಂದುಕೊಡುತ್ತದೆ. ಹೆಸರಿನ ಇಲ್ಲವೆ ಮತ್ತಾವ ಆಕಾಂಕ್ಷೆಯಿಲ್ಲದೆ, ಕೊಡುವುದಕ್ಕಾಗಿಯೇ ಕೊಡಬೇಕೆನ್ನುವ ಹೃತ್ಪೂರ್ವಕ ಕೊಡುಗೆಯು ಪಡೆಯುವವನಲ್ಲಿ ಮೂಡಿಸುವ ತೃಪ್ತಿ ಸಂತೋಷಗಳಿಗಿಂತ ಅಪಾರವಾದ ತೃಪ್ತಿ ಸಂತೋಷಗಳನ್ನು ದಾನಿಯಲ್ಲಿ ಮೂಡಿಸುತ್ತದೆ. ಇಂಥ ದಾನವು ವ್ಯಕ್ತಿತ್ವದ ವಿಸ್ತಾರವನ್ನು ಹೆಚ್ಚಿಸುವ, ಇನ್ನಷ್ಟು ಶ್ರೀಮಂತವಾಗಿಸುವ ಪರಿಣಾಮವನ್ನು ಹೊಂದಿದೆ. ಇದೆಲ್ಲಕ್ಕೆ ಮಿಗಿಲಾಗಿ. ಇಂಥ ಕ್ರಿಯೆಯು ಮನುಷ್ಯನ ಬೆನ್ನಿಗಂಟಿರುವ ಏಕಾಕಿತನದ ಪ್ರಜ್ಞೆಯನ್ನು ದುರ್ಬಲಗೊಳಿಸುತ್ತದೆ. ಕೊಡುಗೆಯು ಕೊಡುವವನನ್ನು ಇತರರ ಸಮೀಪಕ್ಕೆ ತರುತ್ತದೆ. ವ್ಯಕ್ತಿತ್ವಗಳ ಮಿಲನದ ಅವಕಾಶ ಮಾಡಿಕೊಡುತ್ತದೆ.

ಅನೇಕ ಹೊಸ ಸಂಶೋಧನೆಗಳ ಹಿನ್ನೆಲೆಯಲ್ಲಿಯೂ ವಿಜ್ಞಾನವು ಮನುಷ್ಯನ ಅನೇಕ ಸಮಸ್ಯೆಗಳಿಗೆ ಪರಿಹಾರ ಕಂಡುಹಿಡಿಯಲಾಗಿಲ್ಲ. ಅದು ನಮ್ಮ ಸಮಸ್ಯೆಗಳಿಗೆ ಬರೀ ತಾತ್ವಿಕವಾದ ಉತ್ತರಗಳನ್ನು ಹೇಳಲು ಕೂಡ ಶಕ್ತವಾಗಿಲ್ಲ. ಅದು ತನ್ನೆಲ್ಲ ಸಂಶೋಧನೆಗಳನ್ನು ಜೀರ್ಣಿಸಿಕೊಂಡು ನಮಗೊಂದು 'ಕಾಣ್ಕೆ'ಯನ್ನು ನೀಡಲು ವಿಜ್ಞಾನವು ಯೋಗ್ಯವಾದ ಹೊಸ ತಂತ್ರಗಳನ್ನು ಬೆಳೆಸಿಕೊಳ್ಳುವ ಅವಶ್ಯಕತೆ ಇದೆ. ವಿಜ್ಞಾನದ ದುರುಪಯೋಗದಿಂದಾಗುವ ಅನಾಹುತವನ್ನು ತೆಗೆದುಹಾಕಿದರೆ, ವಿವೇಕದಿಂದ ಬಳಕೆಯಾಗುವ ವಿಜ್ಞಾನವು ಒಂದಿಲ್ಲ ಒಂದು ದಿನ ಮನುಷ್ಯಕುಲ ಎದುರಿಸುತ್ತಿರುವ ಎಲ್ಲ ಐಂದ್ರಿಯಕ ತೊಂದರೆಗಳಲ್ಲದೇ ನಮ್ಮ ಎಲ್ಲ ಮಾನಸಿಕ ಕಷ್ಟಕಾರ್ಪಣ್ಯಗಳಿಗೆ ಮತ್ತು ಎಲ್ಲ ಸಾಮಾಜಿಕ ಸಮಸ್ಯೆಗಳಿಗೆ ಪರಿಹಾರ ಒದಗಿಸುತ್ತದೆಂದು ಆಶಾವಾದಿಗಳಾಗಲು ಎಲ್ಲ ಅವಕಾಶಗಳಿವೆ.

ನೂತನ ರಾಷ್ಟ್ರೀಯ ಶಿಕ್ಷಣ ನೀತಿ.

● ಡಾ|| ಸುನೀತ್

ರಷ್ಯಾದ ಜನತೆಯನ್ನು ಅಜ್ಞಾನದಲ್ಲಿಡುವ ಜಾರ್ ದೊರೆಯ ಸನ್ನಾಹವನ್ನು ಕಂಡ ಟಾಲ್‌ಸ್ಟಾಯ್ "ಸರ್ಕಾರದ ಬಲ ಜನತೆಯ ಅಜ್ಞಾನದಲ್ಲಿದೆ. ಹಾಗೂ ಇದು ಸರ್ಕಾರಕ್ಕೂ ತಿಳಿದಿರುವುದರಿಂದಲೇ ಅದು ಜನತೆಯ ನೈಜ ತಿಳುವಳಿಕೆಯನ್ನು ವಿರೋಧಿಸುತ್ತದೆ. ನಾವೀಗ ಈ ವಿಚಾರವನ್ನರಿಯುವ ಕಾಲ ಸನ್ನಿಹಿತವಾಗಿದೆ. ಸರ್ಕಾರವು ಎಲ್ಲೆಡೆ ಕತ್ತಲನ್ನು ಹರಡುತ್ತಾ ಅದೇ ಸಮಯದಲ್ಲಿ ಜ್ಞಾನವನ್ನು ಹರಡುತ್ತಿದೆಯೇನೋ ಎಂಬ ಸೋಗು ಹಾಕಲು ಬಿಡುವುದು ತೀರಾ ಅನಪೇಕ್ಷಣೀಯ" ಎಂದು ಹೇಳಿದರು. ಅಂದು ಅವರು ಈ ಮಾತುಗಳನ್ನು ಜಾರ್ ದೊರೆಯನ್ನು ಕುರಿತು ಆಡಿದ್ದಾದರೂ ದುರದೃಷ್ಟವಶಾತ್ ಇಂದಿಗೂ ನಮ್ಮ ದೇಶದ ಸಂದರ್ಭದಲ್ಲಿ ಈ ಮಾತುಗಳು ಅರ್ಥಪೂರ್ಣವಾಗಿಯೇ ಉಳಿದಿದ್ದು, ನಮ್ಮನ್ನಾಳುವ ಮಂದಿಯ ಮುಖಕ್ಕೆ ಕನ್ನಡಿ ಹಿಡಿದಂತಿವೆ. ಇಂದು ನಮ್ಮಲ್ಲಿಯೂ ಸಹ, ಕತ್ತಲನ್ನು ಹರಡುವ ಸನ್ನಾಹದಲ್ಲಿ ಬೆಳಕನ್ನು ಹರಡುತ್ತಿದೆಯೇನೋ ಎಂಬ ಭ್ರಮೆಯನ್ನು ಸೃಷ್ಟಿಸಲು 'ನೂತನ ಶಿಕ್ಷಣ ನೀತಿ' ಯೆಂಬ ನೂತನ ಭ್ರಮೆಯನ್ನು ಸೃಷ್ಟಿಸಲಾಗಿದೆ. ಅದಕ್ಕೆಂದೇ ಕೋಟ್ಯಾಂತರ ಹಣ ಖರ್ಚು ಮಾಡಿ ಮಾಧ್ಯಮಗಳ ಮೂಲಕ ಅಬ್ಬರದ ಪ್ರಚಾರ ನಡೆಸಿದೆ. ಆದಾಗ್ಯೂ ಈ ದೇಶದ ಶೇ. 99 ಜನಕ್ಕೆ 'ನೂತನ ನೀತಿ' ಏನೆಂದು ತಿಳಿಯದು. ಪ್ರಜಾ ಸತ್ತಾತ್ಮಕವೆಂದುಕೊಳ್ಳುವ ದೇಶವು, ಶಿಕ್ಷಕರು, ವಿದ್ಯಾರ್ಥಿಗಳು, ಪೋಷಕರು. ಹಾಗೂ ಶಿಕ್ಷಣ ತಜ್ಞರು ಪಾಲುಗೊಳ್ಳುವ ರಾಷ್ಟ್ರವ್ಯಾಪಿ ಚರ್ಚೆ ನಡೆದು, ಆ ಮೂಲಕ ಜನಾಭಿಪ್ರಾಯ ಸಂಗ್ರಹಿಸಿ ಆ ಅಭಿಪ್ರಾಯಕ್ಕನುಗುಣವಾದ ಶಿಕ್ಷಣ ನೀತಿಯನ್ನು ರೂಪಿಸಿಕೊಳ್ಳಬೇಕು. ಆದರೆ ನಮ್ಮ ದೇಶದಲ್ಲಿ ಈ ಜನತಾಂತ್ರಿಕ ಪದ್ಧತಿಯನ್ನು ಸಂಪೂರ್ಣವಾಗಿ ತಿರಸ್ಕರಿಸಿ ದೇಶದ ಸಮಗ್ರ ಜನತೆಯನ್ನು ಕಗ್ಗತ್ತಲಲ್ಲಿಟ್ಟು ನೆಪಮಾತ್ರಕ್ಕೆ ತಮ್ಮ ಹೌದಣ್ಣಗಳ ಮೂಲಕ ಎಪ್ಪತ್ತು ಕೋಟಿ

ಜನಸಂಖ್ಯೆಯುಳ್ಳ ಈ ಬೃಹತ್ ರಾಷ್ಟ್ರದಲ್ಲಿ ತಾ॥ 20—8—1985 ರಿಂದ 15-9-1985 ರವರೆಗೆ ಅಂದರೆ ಸುಮಾರು ಒಂದು ತಿಂಗಳಿಗಿಂತಲೂ ಕಡಿಮೆ ಅವಧಿಯಲ್ಲಿ ಚರ್ಚೆಯೆಂಬ ನಾಟಕವನ್ನು ನಡೆಸಿ ಹಾಗೂ ಈ ನಾಟಕ ನಡೆಯುತ್ತಿರುವಾಗಲೇ ನೂತನ ನೀತಿಯ ಅನೇಕ ನಿರ್ಧಾರಗಳನ್ನು ಜಾರಿಗೊಳಿಸಲಾಗಿದೆ. ಇದರಿಂದ ಜನಾಭಿಪ್ರಾಯಕ್ಕೆ ನೀಡಿರುವ ಮನ್ನಣೆ ಎಷ್ಟೆಂಬುದು ಸ್ಪಷ್ಟವಾಗುತ್ತದೆ. ಒಟ್ಟಿನಲ್ಲಿ ಜನತೆಯನ್ನು ಸಂಪೂರ್ಣವಾಗಿ ಬದಿಗಿರಿಸಿ 'ನೂತನ ಶಿಕ್ಷಣ ನೀತಿ' ಯನ್ನು ರೂಪಿಸಲಾಗಿದೆ. ಅಷ್ಟರಿಂದಲೇ ಅವರ ಪ್ರಾಮಾಣಿಕತೆ ಹಾಗೂ ಉದ್ದೇಶಗಳು ಸ್ಪಷ್ಟವಾಗುತ್ತವೆ. ಇರಲಿ ಈಗ ಈ ನೂತನ ಶಿಕ್ಷಣ ನೀತಿ ಏನೆಂಬುದನ್ನು ನೋಡಬಹುದು.

'ನೂತನ ಶಿಕ್ಷಣ ನೀತಿ'ಯನ್ನು ರೂಪಿಸಲು ಅನಿವಾರ್ಯವಾದ ಪರಿಸ್ಥಿತಿಗಳಾವುವೆಂಬುದರ ಬಗ್ಗೆ ಹೇಳುವ ಮಾತುಗಳು ಹೀಗಿವೆ: ('ನೂತನ ನೀತಿಯ ಡಾಕ್ಯುಮೆಂಟ್' ನಲ್ಲಿ ಈ ಕೆಳಗಿನ ಅಂಶಗಳನ್ನು ಈ ಶಿಕ್ಷಣ ನೀತಿಯನ್ನು ಜಾರಿಗೆ ತರಲು ಕಾರಣಗಳೆಂದು ಗುರುತಿಸಲಾಗಿದೆ.') ಮೊದಲನೆಯದಾಗಿ 'ಇಂದು ನಮ್ಮ ರಾಷ್ಟ್ರವು ಆರ್ಥಿಕವಾಗಿ ಮತ್ತು ತಾಂತ್ರಿಕವಾಗಿ ಬೆಳೆದು ಒಂದು ನಿರ್ದಿಷ್ಟ ಹಂತ ತಲುಪಿದೆ, ಮುಂಬರುವ ದಶಕಗಳಲ್ಲಿ ಬದುಕು ಹೊಸ ಕಾತರಗಳನ್ನೂ ಹಾಗೂ ನೂತನ ಅವಕಾಶಗಳನ್ನೂ ಒದಗಿಸುವ ಸಂಭವವಿದೆ. ಇಂತಹ ಸಂದರ್ಭದಲ್ಲಿ ನೂತನ ವಾತಾವರಣದ ಫಲವು ಎಲ್ಲರಿಗೂ ಲಭ್ಯವಾಗಬೇಕಾದರೆ ಅದಕ್ಕೆ ಶಿಕ್ಷಣವು ಹೆದ್ದಾರಿಯಾಗಿದೆ. ಇನ್ನು ಎರಡನೆಯದಾಗಿ ಭಾರತೀಯರ ದೃಷ್ಟಿಯಲ್ಲಿ, 'ವ್ಯಕ್ತಿ ಒಂದು ನಿಶ್ಚಿತ ಆಸ್ತಿ.' ಒಂದು ರಾಷ್ಟ್ರೀಯ ಸಂಪನ್ಮೂಲ. ಆದ್ದರಿಂದ ಅವನನ್ನು ಕೋಮಲತೆ, ಶ್ರದ್ಧೆ ಹಾಗೂ ಕ್ರಿಯಾಶೀಲತೆಯಿಂದ ಪಾಲಿಸಿ, ಪೋಷಿಸಿ ಬೆಳೆಸಬೇಕು' ಅದಕ್ಕೂ ಸಹ ಶಿಕ್ಷಣವೇ ಹೆದ್ದಾರಿ. ಆದರೆ ಇಂದು ನಮ್ಮ ರಾಷ್ಟ್ರದಲ್ಲಿ ಅಸ್ತಿತ್ವದಲ್ಲಿರುವ ಶಿಕ್ಷಣವು ಸಂದರ್ಭದ ಅಗತ್ಯಗಳನ್ನು ಪೂರೈಸಲು ಅಸಮರ್ಥವಾಗಿದೆ. ಆದ್ದರಿಂದ ಶಿಕ್ಷಣವನ್ನು ಹಂತ ಹಂತಗಳಲ್ಲಿ ಪುನರ್ರೂಪಿಸಿ ಜಾರಿಗೊಳಿಸಬೇಕಾಗಿದೆ.''

ಈ ರೀತಿಯಾಗಿ ಸರ್ಕಾರವು ತನ್ನ ನಿಲುವನ್ನು ಸ್ಪಷ್ಟಪಡಿಸಿದ ನಂತರ ಮೊದಲನೆಯದಾಗಿ 1995 ರ ವೇಳೆಗೆ 6 ರಿಂದ 14 ವರ್ಷದವರೆಗಿನ ಎಲ್ಲಾ ಮಕ್ಕಳಿಗೂ ಉಚಿತ ಹಾಗೂ ಕಡ್ಡಾಯ ಶಿಕ್ಷಣವನ್ನು ನೀಡುವುದಾಗಿ ನೂತನ ಶಿಕ್ಷಣ ನೀತಿ ಭರವಸೆ ನೀಡುತ್ತದೆ. ಅದಕ್ಕಾಗಿ ಕೂಲಂಕಷವಾಗಿ ರೂಪಿಸಿರುವ ತಂತ್ರಗಳನ್ನು ಅಂಗೀಕರಿಸಿ ಶಾಲೆ ಬಿಡುವ ಮಕ್ಕಳ ಸಮಸ್ಯೆಯನ್ನು ನಿವಾರಿಸಲು ಹಾಗೂ ಶಾಲೆಯನ್ನು ಬಿಡದಂತೆ ತಡೆಯಲು ಪ್ರಯತ್ನಿಸುವುದಾಗಿ ಘೋಷಿಸುತ್ತದೆ. ಇಂತಹ ಭರವಸೆಗಳು ನಮಗೇನು ಹೊಸವೇ ? ಸಂವಿಧಾನ ಜಾರಿಗೆ ಬಂದ ಹತ್ತು ವರ್ಷಗಳೊಳಗೆ ಪ್ರತಿಯೊಂದು ಮಗು

ವಿಗೂ ಉಚಿತ ಹಾಗೂ ಕಡ್ಡಾಯ ಶಿಕ್ಷಣವನ್ನು 14 ವರ್ಷ ತುಂಬುವವರೆಗೂ ಕೊಡಬೇಕು ಎಂದು ಸಂವಿಧಾನದ ನಿರ್ದೇಶಕ ತತ್ವಗಳಲ್ಲಿಯೇ ಸೂಚಿಸಲಾಗಿದೆ. ಅಂದರೆ ನಾವು 1960 ರಷ್ಟೊತ್ತಿಗೆ ಶಿಕ್ಷಣದ ಸಾರ್ವತ್ರೀಕರಣವನ್ನು ತಲುಪಬೇಕಿತ್ತು. ಆದರೆ ಸಂವಿಧಾನ ನಿರ್ದೇಶಿತ ಅವಧಿಯ ನಂತರ 27 ವರ್ಷಗಳನ್ನು ಕಳೆದರೂ ಯಾವ ಪ್ರಗತಿಯೂ ಸಾಧ್ಯವಾಗಿಲ್ಲ. ಅಷ್ಟೇ ಅಲ್ಲ, ಇಂದು ವಿಶ್ವದ ಒಟ್ಟು ಅನಕ್ಷರಸ್ಥರಲ್ಲಿ ನಮ್ಮ ರಾಷ್ಟ್ರದ ಕೊಡುಗೆ ಶೇ. 50 ! ಇಂದು ರಾಷ್ಟ್ರದಲ್ಲಿ ಒಂದನೇ ತರಗತಿಗೆ ಸೇರಿದ ಶೇ. 77 ಮಕ್ಕಳು 8 ನೇ ತರಗತಿಯನ್ನು ತಲುಪುವುದರೊಳಗೆ ಶಾಲೆ ಬಿಡುತ್ತಿದ್ದಾರೆ. ಇಂಥ ದುಸ್ಥಿತಿಗೆ ಕಾರಣವೇನು ? ಶಿಕ್ಷಣದ ಸಾರ್ವತ್ರೀಕರಣದಲ್ಲಿ ಬಾಧಕವಾಗಿರುವ ಅಂಶಗಳಾವುವು.? ಶಿಕ್ಷಣದ ಸವಾಲಿನಲ್ಲಿಯೇ ಗುರುತಿಸಿರುವಂತೆ 'ಮಕ್ಕಳು ಶಾಲೆಗೆ ಹಾಜರಾಗದೇ ಇರುವುದಕ್ಕೆ ಮತ್ತು ಶಾಲೆಯಿಂದ ಹೊರಬೀಳುವುದಕ್ಕೆ, ಲಿಂಗಭೇದವಿಲ್ಲದ ಪ್ರಮುಖ ಕಾರಣ– 'ಬಡತನ'. ತತ್ಪರಿಣಾಮವಾಗಿ ಇಂದು ಮಕ್ಕಳು ಹೋಟೆಲುಗಳಲ್ಲಿ, ಹೊಲಗಳಲ್ಲಿ, ಗಣಿಗಳಲ್ಲಿ, ಕಾರ್ಖಾನೆಗಳಲ್ಲಿ, ಬಾಲಶ್ರಮಿಕರಾಗಿ ಕೆಲಸ ಮಾಡುತ್ತಿದ್ದಾರೆ. ಈ ಎಳೆಯ ಮಕ್ಕಳು ಯಂತ್ರದ ದುಡಿಯುವ ಭಾಗಗಳಂತಾಗಿದ್ದಾರೆ. ಅಷ್ಟೇ ಅಲ್ಲ. ಬಡತನ ಅವರ ಆರೋಗ್ಯವನ್ನು ಸಂಪೂರ್ಣವಾಗಿ ನಾಶ ಮಾಡಿದೆ. ರಾಷ್ಟ್ರದ ಶೇ. 87 ಮಕ್ಕಳು ಆಹಾರದ ಕೊರತೆಯಿಂದ ಬಳಲುತ್ತಿದ್ದಾರೆ. ಸುಮಾರು 2 ಮಿಲಿಯನ್ ಮಕ್ಕಳು ವಿಟಮಿನ್ 'ಎ' ಕೊರತೆಯಿಂದ ದೃಷ್ಟಿಹೀನರಾಗಿದ್ದಾರೆ. ಅತಿಸಾರ, ಟಿ. ಬಿ. ಇತ್ಯಾದಿ ರೋಗಗಳು ಈ ಮಕ್ಕಳನ್ನು ಬಲಿ ತೆಗೆದುಕೊಳ್ಳುತ್ತಿವೆ. ಒಂದೆಡೆ ಬಡತನ ಮಕ್ಕಳನ್ನು ಇಂತಹ ದುಸ್ಥಿತಿಗೆ ತಳ್ಳಿದ್ದರೆ, ಶೈಕ್ಷಣಿಕ ವ್ಯವಸ್ಥೆಯ ದುರ್ಬಲ ಅಂಗರಚನೆಯು ಶಿಕ್ಷಣದ ಸಾರ್ವತ್ರೀಕರಣಕ್ಕೆ ಬಾಧಕವಾಗಿರುವ ಎರಡನೆಯ ಪ್ರಧಾನ ಅಂಶವಾಗಿದೆ. ಶಿಕ್ಷಣದ ಸವಾಲಿನಲ್ಲಿಯೇ ಗುರುತಿಸಿರುವಂತೆ ನಮ್ಮ ದೇಶದ 1,91,000 ವಾಸಸ್ಥಳಗಳಲ್ಲಿ ಶಾಲೆಗಳೇ ಇಲ್ಲ. ಶೇ. 62 ಶಾಲೆಗಳಲ್ಲಿ ಅಗತ್ಯವಿರುವಷ್ಟು ಶಿಕ್ಷಕರಿಲ್ಲ. ಶೇ. 40 ಶಾಲೆಗಳಿಗೆ ಕಟ್ಟಡಗಳಿಲ್ಲ. ಶೇ. 40 ಶಾಲೆಗಳಲ್ಲಿ ಸೌಲಭ್ಯಗಳ ಕೊರತೆ ಇದೆ, 2937 ಶಾಲೆಗಳಲ್ಲಿ ಶಿಕ್ಷಕರೇ ಇಲ್ಲ !

ಇಂತಹ ದುಃಸ್ಥಿತಿಯಲ್ಲಿ, ಬಡತನದಿಂದಾಗಿ ಶಾಲೆಗೆ ಬರಲಾಗದ ಮಕ್ಕಳು ಶಾಲೆಗೆ ಬರುವಂತೆ ಯೋಜನೆಗಳನ್ನು ರೂಪಿಸಿ ಜಾರಿಗೊಳಿಸಬೇಕು. ಹಾಗೂ ಶೈಕ್ಷಣಿಕ ವ್ಯವಸ್ಥೆಯನ್ನು ಸುವ್ಯವಸ್ಥಿತವಾಗಿ ರೂಪಿಸಬೇಕು. ಶೈಕ್ಷಣಿಕ ವ್ಯವಸ್ಥೆಯನ್ನು ಸುವ್ಯವಸ್ಥಿತಗೊಳಿಸಬೇಕೆಂದರೆ ಎಲ್ಲೆಡೆ ಶಾಲೆಗಳನ್ನು ತೆರೆಯಬೇಕು. ಸೌಲಭ್ಯಗಳಿಲ್ಲದ ಶಾಲೆಗಳಿಗೆ ಸೌಲಭ್ಯಗಳನ್ನು ಒದಗಿಸಬೇಕು. ಶಿಕ್ಷಕರಿಲ್ಲದ ಶಾಲೆಗಳಿಗೆ ಶಿಕ್ಷಕರನ್ನು ನೀಡಬೇಕು ಆಗ ಮಾತ್ರ ಶೈಕ್ಷಣಿಕ ವ್ಯವಸ್ಥೆಯು ಶಿಕ್ಷಣದ ಸಾರ್ವತ್ರೀಕರಣಕ್ಕೆ ಪೂರಕವಾಗುತ್ತದೆ.

ನಿತ್ಯವೂ ಸಮೂಹ ಮಾಧ್ಯಮಗಳ ಮೂಲಕ ‘ಆಪರೇಷನ್ ಬ್ಲಾಕ್ ಬೋರ್ಡ್’
(ಕಪ್ಪು ಹಲಗೆ ಕಾರ್ಯಾಚರಣೆ) ಎಂಬ ಪದ ಸಮುಚ್ಚಯವು ನಮಗೆ ಕೇಳಿ
ಬರುತ್ತಿದೆ ಈ ‘ಆಪರೇಷನ್ ಬ್ಲಾಕ್ ಬೋರ್ಡ್’ ಬೇರೇನೂ ಅಲ್ಲದೆ ಶಿಕ್ಷಣವನ್ನು
ಸಾರ್ವತ್ರಿಕಗೊಳಿಸಲು ನೂತನ ಶಿಕ್ಷಣ ನೀತಿಯು ಪ್ರಕಟಿಸಿರುವ ಯೋಜನೆಯಾಗಿದೆ.
ಈ ಯೋಜನೆಯನ್ವಯ ಪ್ರಾಥಮಿಕ ಶಾಲೆಗಳಿಗೆ ಅಗತ್ಯವಾದ ಎಲ್ಲ ಸೌಲಭ್ಯಗಳ
ನ್ನೂ, ಅಂದರೆ ಎಲ್ಲ ಹವಾಮಾನಗಳಲ್ಲೂ ಉಪಯೋಗಿಸಲು ತಕ್ಕನಾದ ಎರಡು
ದೊಡ್ಡ ಕೊಠಡಿಗಳನ್ನು, ಅಗತ್ಯವಾದ ಆಟದ ಸಾಮಾನುಗಳನ್ನು, ಕಪ್ಪು ಹಲಗೆಗ
ಳನ್ನು, ಪಟ. ನಕ್ಷೆಗಳನ್ನು ಹಾಗೂ ಕಲಿಕೆಗೆ ಅಗತ್ಯವಾದ ಎಲ್ಲಾ ವಸ್ತುಗಳನ್ನೂ
ಒದಗಿಸಲಾಗುವುದು. ಹಾಗೂ ಪ್ರತಿ ಶಾಲೆಗೂ ಕನಿಷ್ಟ ಇಬ್ಬರು ಉಪಾಧ್ಯಾಯರು
ಗಳನ್ನೂ ಅದರಲ್ಲಿ ಒಬ್ಬ ಅಧ್ಯಾಪಕಿಯನ್ನು ನೇಮಿಸಲಾಗುವುದು. ಇದು ಕೇವಲ
ತಾತ್ಕಾಲಿಕವಾಗಿದ್ದು ಕ್ರಮೇಣ ನಿಧಾನವಾಗಿ ಪ್ರತಿ ತರಗತಿಗೊಬ್ಬ ಶಿಕ್ಷಕನನ್ನು
ನೀಡಲಾಗುವುದೆಂದು ಹೇಳಲಾಗಿದೆ. ಈ ಯೋಜನೆಯನ್ನು ಕಾಲವಿಳಂಬವಿಲ್ಲದೆ ಅನು
ಷ್ಠಾನಕ್ಕೆ ತರಬೇಕಾಗಿದೆ. ಆದ್ದರಿಂದ ‘ಆಪರೇಷನ್’ ಎಂಬ ಶಬ್ದವನ್ನು ಬಳಸಲಾಗಿದೆ
ಯೆಂದು ಹೇಳಲಾಗಿದೆ. ಅಂತೂ ಕೊನೆಗಾದರೂ ಸರ್ಕಾರವು ಒಂದು ನಿರ್ದಿಷ್ಟ ಯೋ
ಜನೆಯನ್ನು ಕೈಗೆತ್ತಿಕೊಂಡಿತಲ್ಲ ಎಂದು ನಿಮಗೆ ಅತ್ಯಂತ ಸಂತೋಷವಾಗಿರಬಹುದು.
ಆದರೆ ಅವಸರ ಬೇಡ, ನಿಮ್ಮ ಸಮಾಧಾನ, ಸಂತೋಷಗಳು ಕ್ಷಣಿಕ. ಕೇವಲ
ಯೋಜನೆಗಳನ್ನು ಪ್ರಕಟಿಸುವುದರಿಂದ ಕೆಲ ಕಾಲ ಜನತೆಯನ್ನು ಮೋಸಗೊಳಿಸ
ಬಹುದಲ್ಲದೆ ಬೇರೇನನ್ನೂ ಸಾಧಿಸಲಾಗದು. (ಬಹುಶಃ ಬೇಕಾಗಿರುವುದೂ ಅಷ್ಟೇ!)
ಯೋಜನೆಗಳಿಗಿಂತ ಹೆಚ್ಚು ಅರ್ಥಪೂರ್ಣವಾಗಿ, ದೃಢವಾಗಿ ಮಾತನಾಡುವುದು ಆರ್ಥಿಕ
ಸೌಲಭ್ಯ. ಆದ್ದರಿಂದ ಸರ್ಕಾರದ ನೈಜ ಆಸಕ್ತಿಯನ್ನು ಆರ್ಥಿಕ ಸೌಲಭ್ಯಗಳ ಆಧಾ
ರದ ಮೇಲೆ ತಿಳಿದುಕೊಳ್ಳಬೇಕಾಗುತ್ತದೆ.

ಸ್ವಾತಂತ್ರ್ಯ ನಂತರ ನಮ್ಮ ಸರ್ಕಾರಗಳು ಇದುವರೆಗೂ ಶಿಕ್ಷಣದ ಬೆಳವಣಿಗೆಗೆ ನೀಡಿರು
ಆರ್ಥಿಕ ಸೌಲಭ್ಯಗಳು ಅತ್ಯಂತ ಕಡಿಮೆಯಾಗಿದ್ದು ಶಿಕ್ಷಣವು ಸಂಪೂರ್ಣವಾಗಿ ಕ
ಗಣಿಸಲ್ಪಟ್ಟಿವೆ. ಸರ್ಕಾರವೇ ರಚಿಸಿದ ಬಿ. ಜಿ. ಖೇರ್ ಆಯೋಗವು ಕೇಂದ್ರ ಬಜೆಟ್ಟ
ಕನಿಷ್ಟ ಶೇ. 10 ನ್ನು ಶಿಕ್ಷಣಕ್ಕೆ ಕೊಡಬೇಕೆಂದು ಶಿಫಾರಸು ಮಾಡಿದ್ದಿತು. ಅಲ್ಲ
ಈ ರಾಷ್ಟ್ರದ ವಿದ್ಯಾರ್ಥಿ ಸಮುದಾಯವೂ ಕೂಡಾ ಈ ಬಗ್ಗೆ ಸರ್ಕಾರವನ
ಒತ್ತಾಯಿಸಿದೆ. ಆದರೆ ಈ ವರೆಗೂ **‘No one is so deaf, as he wh
does not hear’** ಎಂಬಂತೆ ಅಧಿಕಾರಕ್ಕೆ ಬಂದ ಎಲ್ಲ ಸರ್ಕಾರಗಳೂ ಕೂಡ
ಕಿವುಡಾಗಿವೆ. ಪ್ರಥಮ ಪಂಚವಾರ್ಷಿಕ ಯೋಜನೆಯಲ್ಲಿ ಶಿಕ್ಷಣಕ್ಕಾಗಿ ಶೇ. 7.
ರಷ್ಟನ್ನು ಮೀಸಲಿಟ್ಟಿದ್ದರೆ ತದನಂತರದ ಯೋಜನೆಗಳಲ್ಲಿ ಪ್ರಮಾಣವು ಕ್ರಮೇ

ಕಡಿಮೆಯಾಗುತ್ತಾ ಆಗುತ್ತಾ ಈ ವರ್ಷ 'ನೂತನ ಶಿಕ್ಷಣ ನೀತಿ'ಯ ಅಬ್ಬರದ ಪ್ರಚಾರದ ನಡುವೆಯೇ ಶಿಕ್ಷಣದ ಭಾಗ ಕೇಂದ್ರ ಬಜೆಟ್ಟಿನಲ್ಲಿ ಕೇವಲ ಶೇ. 1.3 ರಷ್ಟಿದೆ ! ಅಂದರೆ ಕೇವಲ 800 ಕೋಟಿ ರೂಪಾಯಿಗಳು. ಇಷ್ಟು ಕಡಿಮೆ ಮೊತ್ತದಲ್ಲಿ ಪ್ರಾಥಮಿಕ ಶಿಕ್ಷಣ, ಮಾಧ್ಯಮಿಕ ಶಿಕ್ಷಣ, ಪ್ರೌಢ ಶಿಕ್ಷಣ, ಉನ್ನತ ಶಿಕ್ಷಣ, ವೃತ್ತಿ ಶಿಕ್ಷಣ ಹಾಗೂ ವಯಸ್ಕರ ಶಿಕ್ಷಣಗಳ ಬೆಳವಣಿಗೆ ಸಾಧ್ಯವೇ ? ಈ ಚಿಕ್ಕ ಮೊತ್ತದಲ್ಲಿ 'ಆಪರೇಶನ್ ಬ್ಲಾಕ್ ಬೋರ್ಡ್' ಸಾಧ್ಯವೇ ? 'ಆಪರೇಶನ್ ಬ್ಲಾಕ್ ಬೋರ್ಡ್' ಎಂದರೆ ಕಾಲವಿಳಂಬವಿಲ್ಲದೆ ಅತಿಶೀಘ್ರದಲ್ಲಿ ಎಲ್ಲೆಡೆ ಶಾಲೆಗಳನ್ನು ತೆರೆಯಬೇಕು. ಪ್ರತಿ ಶಾಲೆಗೂ ಕಟ್ಟಡಗಳನ್ನೊದಗಿಸಬೇಕು, ಯಥೋಚಿತ ಸೌಲಭ್ಯಗಳನ್ನೊದಗಿಸಬೇಕು. ಅಂದರೆ ಕನಿಷ್ಟ 4000 ಕೋಟಿ ರೂಪಾಯಿಗಳ ಯೋಜನೆ ಇದು. ಆದರೆ ಶಿಕ್ಷಣಕ್ಕಾಗಿ ಮೀಸಲಾಗಿಟ್ಟಿರುವ ಹಣ ಕೇವಲ 800 ಕೋಟಿ ರೂಪಾಯಿಗಳು ಈ ಚಿಕ್ಕ ಮೊತ್ತದಲ್ಲಿ ನವೋದಯ ಶಾಲೆಗೇಗೆ 69 ಕೋಟಿ ರೂಪಾಯಿಗಳನ್ನು. ವೃತ್ತಿಪರ ಶಿಕ್ಷಣಕ್ಕೆ 47 ಕೋಟಿ ರೂಪಾಯಿಗಳನ್ನು, ತಾಂತ್ರಿಕ ಶಿಕ್ಷಣಕ್ಕೆ 170 ಕೋಟಿ ರೂಪಾಯಿಗಳನ್ನೂ, ವಯಸ್ಕರ ಶಿಕ್ಷಣಕ್ಕೆ 75 ಕೋಟಿ ರೂಪಾಯಿಗಳನ್ನೂ ನಿಗದಿಪಡಿಸಲಾಗಿದೆ. ಅಂದರೆ ಬಹು ಅಬ್ಬರದ ಪ್ರಚಾರ ಗಿಟ್ಟಿಸುತ್ತಿರುವ 'ಆಪರೇಶನ್ ಬ್ಲಾಕ್ ಬೋರ್ಡ್' ಯೋಜನೆಗೆ ಉಳಿದ ಹಣವೆಷ್ಟು ? ಕೇವಲ 441 ಕೋಟಿ ರೂಪಾಯಿಗಳು, ಅಂದರೆ ಸರ್ಕಾರದ ಕಾಳಜಿ ಸ್ಪಷ್ಟವಾದೀತು. ಈ ಬಗ್ಗೆ ಕೇಂದ್ರ ಸರ್ಕಾರದ ಮಾಜಿ ಶೈಕ್ಷಣಿಕ ಸಲಹೆಗಾರ ಡಾ॥ ಪ್ರೇಮ್ ಕೃಪಾಲ್ ಹೇಳಿದ ಮಾತು ಗಮನಾರ್ಹ. "ಶಿಕ್ಷಣದ ಬಗ್ಗೆ ಅಬ್ಬರದ ಘೋಷಣೆ ಎತ್ತುತ್ತಲೇ, ಭಾರತದಲ್ಲಿ ಅತ್ಯಂತ ಕೀಳು ಪ್ರಾಮುಖ್ಯತೆಯನ್ನು ಕೊಡಲಾಗಿದೆ ... ಅನಕ್ಷರತೆಯನ್ನು ನಿರ್ಮೂಲನಗೊಳಿಸುವಲ್ಲಿನ ನಮ್ಮ ಶೋಚನೀಯ ಸೋಲಿಗೆ ಬಹುಪಂಶ ಸರ್ಕಾರದ ನಿರಾಸಕ್ತಿಯೇ ಕಾರಣ."

ಇನ್ನು ನೂತನ ಶಿಕ್ಷಣ ನೀತಿಯನ್ನು ಅನುಷ್ಠಾನಕ್ಕೆ ತರುವ ಬಗ್ಗೆ ಶಿಕ್ಷಕರಿಗೆ ಮಾರ್ಗದರ್ಶನ ನೀಡಲು ಕೇಂದ್ರ ಸರ್ಕಾರವು NCERT ಯ ಮೂಲಕ 'ಶಿಕ್ಷಕರ ಕೈಪಿಡಿ' ಯೆಂಬ ಒಂದು ಪುಸ್ತಕವನ್ನು ಪ್ರಕಟಿಸಿದೆ. ಈ ಪುಸ್ತಕವನ್ನು ನೋಡಿದರೆ 'ಆಪರೇಷನ್ ಬ್ಲಾಕ್ ಬೋರ್ಡ್'ನ ಹಿಂದಿರುವ ಔಪಚಾರಿಕತೆಯು ಸ್ಪಷ್ಟವಾಗುತ್ತದೆ. ಮೊದಲನೆಯದಾಗಿ ಓ.ಬಿ.ಬಿ. ಯು ಪ್ರತಿ ಶಾಲೆಗೂ ಕನಿಷ್ಟ ಇಬ್ಬರು ಉಪಾಧ್ಯಾಯರನ್ನು ನೇಮಿಸುವ ಭರವಸೆ ನೀಡಿರುವುದು ನಮಗೆಲ್ಲಾ ತಿಳಿದಿದೆ. ಆದರೆ ಶಿಕ್ಷಕರ ಕೈಪಿಡಿಯಲ್ಲಿ 'ಪ್ರತಿಯೊಬ್ಬ ಉಪಾಧ್ಯಾಯನೂ ಒಂದಕ್ಕಿಂತ ಹೆಚ್ಚು ತರಗತಿಗಳಿಗೆ ಬೋಧಿಸುವ ಸಾಮರ್ಥ್ಯವನ್ನು ಪಡೆದಿರಬೇಕೆಂದು ಸಲಹೆ ನೀಡಲಾಗಿದೆ. ಏಕೆಂದರೆ 'ಭಾರತದಲ್ಲಿ ಬಹು ತರಗತಿ ಶಾಲೆಗಳು ತಪ್ಪಿಸಿಕೊಳ್ಳಲಾಗದ ನೈಜ ಚಿತ್ರಣ'ವೆಂದು ಹೇಳಲಾಗಿದೆ. ಇದು

ಪ್ರತಿ ಶಾಲೆಗೂ ಅಗತ್ಯವಿರುವಷ್ಟು ಉಪಾಧ್ಯಾಯರನ್ನು ನೀಡಲಾಗುವುದಿಲ್ಲವೆಂಬುವರ ಪರೋಕ್ಷ ರೂಪವಷ್ಟೆ! ಹಾಗಾದರೆ 'ಆಪರೇಷನ್ ಬ್ಲಾಕ್ ಬೋರ್ಡ್' ಯೋಜನೆಯಲ್ಲಿ ಪ್ರತಿ ಶಾಲೆಗೂ ಶಿಕ್ಷಕರನ್ನು ನೀಡುವೆವು, ಎಂದು ಹೇಳಿದುದರ ಅರ್ಥವೇನು ? ಇನ್ನು ಎರಡನೆಯದಾಗಿ 'ಭಾರತದಲ್ಲಿ ಶೇ. 75 ಶಾಲೆಗಳು ಹಳ್ಳಿಗಳಲ್ಲಿವೆ. ಸುಮಾರು ವರ್ಷ ವೊಂದಕ್ಕೆ ಈ ಶಾಲೆಗಳಿಗೆ ನೀಡುವ 18–20 ಪೈಸೆ ಸಾದಿಲ್ವಾರು ಹಣದಲ್ಲಿ ಸೀಮೆ ಸುಣ್ಣ, ಒರೆಸುವ ಬಟ್ಟೆ. ಪೊರಕೆ ಇತ್ಯಾದಿಗಳನ್ನು ಕೊಂಡುಕೊಳ್ಳಬೇಕಾಗುವುದು. ಇವರಿಂದ ಪಾಠೋಪಕರಣಗಳು ಇತರೇ ವಸ್ತುಗಳನ್ನು ಖರೀದಿಸಲು ಹಣ ಉಳಿಯುವು ದೇ ಕಷ್ಟವಾಗುವುದು. ಆದ್ದರಿಂದ ಸ್ಥಳೀಯವಾಗಿ ಲಭ್ಯವಿರುವ ವಸ್ತುಗಳನ್ನು ಉಪ ಯೋಗಿಸಿ ಕಡಿಮೆ ವೆಚ್ಚದ ಪಾಠೋಪಕರಣಗಳನ್ನು ಅಂದರೆ ನಿರುಪಯುಕ್ತ ವಸ್ತುಗ ಳಾದ ಸೈಕಲ್‌ನ ಆರೆಗಳು, ಗರಗಸದ ಹಾಕ್ಸ್ ಬ್ಲೇಡ್, ಟೂಥ್‌ಪೇಸ್ಟ್‌ನ ಮುಚ್ಚಳ, ಮೇಣದ ಬತ್ತಿ, ಬೆಂಕಿಕಡ್ಡಿ, ಪೊರಕೆಯ ಕಡ್ಡಿಗಳನ್ನು ಉಪಯೋಗಿಸಿ ಮಕ್ಕಳಿಗೆ ಪಾಠ ಹೇಳಿಕೊಡುವುದನ್ನು ಶಿಕ್ಷಕರು ಕಲಿಯಬೇಕು' ಎಂದು ಶಿಕ್ಷಕರಿಗೆ ಸಲಹೆ ನೀಡಲಾಗಿದೆ. ಅಂದರೆ ಇವರು ಸಾದಿಲ್ವಾರು ಹಣವನ್ನೂ ಹೆಚ್ಚಿಸುವುದಿಲ್ಲ, ಅಗತ್ಯ ಸೌಲಭ್ಯಗಳನ್ನೂ ಪೂರೈಸುವುದಿಲ್ಲ, ಹಾಗಾದರೆ 'ಆಪರೇಶನ್ ಬ್ಲಾಕ್ ಬೋರ್ಡ್'ನಲ್ಲಿ ಕಲಿಕೆಗೆ ಅಗತ್ಯ ವಾದ ವಸ್ತುಗಳನ್ನು ಒದಗಿಸಲಾಗುವುದು ಎಂದು ಹೇಳಿರುವುದರ ಅರ್ಥ ?

ಶಿಕ್ಷಣಕ್ಕೆ ನೀಡಿರುವ ಆರ್ಥಿಕ ಸೌಲಭ್ಯಗಳು ಇಷ್ಟು ಕನಿಷ್ಟವಾಗಿರುವಾಗಲೂ 'ಶಿಕ್ಷಣ ಕ್ಕೆ ಅಗತ್ಯವಾದ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ಕಠಿಣವಾಗುತ್ತಿದೆ. (ಈ ಸಂದರ್ಭ ದಲ್ಲಿ ರವೀಂದ್ರನಾಥ ಟ್ಯಾಗೋರರು ಆಡಿರುವ ಮಾತುಗಳು ಗಮನಾರ್ಹ, "ಈ ದೇಶ ದಲ್ಲಿ ಖಜಾನೆ ಖಾಲಿಯಾಗಿದೆ ಎಂಬ ಕುಂಟು ನೆಪವನ್ನು ಒಡ್ಡಿ, ಕೋಟ್ಯಾಂತರ ಮಂದಿ ರೋಗಿಗಳ ಚಿಕಿತ್ಸೆ ಹಾಗೂ ಆರೋಗ್ಯದ ಬಗ್ಗೆ ಮಾಡುವ ವೆಚ್ಚವನ್ನು ಕಡಿತ ಮಾಡಲಾಗುತ್ತದೆ. ಇಡೀ ದೇಶದುದ್ದಗಲಕ್ಕೂ ದಟ್ಟವಾಗಿ ಹರಡಿರುವ ಅಜ್ಞಾನದ ಅಂಧಕಾರವನ್ನು ಹೋಗಲಾಡಿಸಲು, ಪಾಪ, ಹಣದ ಕೊರತೆಯಂತೆ.! ಆದರೆ, ಈ ದೇಶದ ಆಡಳಿತಕ್ಕಾಗಿ ಮಾಡುತ್ತಿರುವ ದುರ್ವ್ಯಯ ಯಾವುದೇ ಬಡ ರಾಷ್ಟ್ರಕ್ಕೂ ಭರಿಸಲಾಗದಷ್ಟು ಈ ಬಗ್ಗೆ ಈ ದೇಶದ ವೆಚ್ಚ ಪ್ರಮಾಣ, ಯಾವುದೇ ಅತ್ಯಂತ ಶ್ರೀಮಂತ ಪಾಶ್ಚಿಮಾತ್ಯ ರಾಷ್ಟ್ರವನ್ನೂ ಮೀರಿಸಿದೆ.!) ಆದ್ದರಿಂದ ಸ್ಥಳೀಯ ಬೆಂಬ ಲವನ್ನು ಪಡೆದು ಅಂದರೆ ಸ್ಥಳೀಯ ಸಮುದಾಯದ ಮೂಲಕ ಶಿಕ್ಷಣಕ್ಕೆ ಅಗತ್ಯವಾದ ವಂತಿಗೆ, ಭೌತಿಕ ಅನುಕೂಲಗಳು, ಭೂಮಿ ಇತ್ಯಾದಿಗಳನ್ನೂ ಪಡೆದು ಲಭ್ಯವಿರುವ ಅವಕಾಶಗಳ ಹಾಗೂ ಸಂಪನ್ಮೂಲಗಳ ಹಿನ್ನೆಲೆಯಲ್ಲಿ ಆದ್ಯತೆ ಹಾಗೂ ಗುರಿಗಳನ್ನು ನಿಗದಿಪಡಿಸಿ ಅಭಿವೃದ್ಧಿ ಯೋಜನೆಗಳನ್ನು ತಯಾರಿಸಬಹುದೆಂದು ಶಿಕ್ಷಣ ನಿರ್ವಹಣಾ ಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಅಲ್ಲದೆ ಒಂದು ವೇಳೆ ಸಮುದಾಯವು ಆರ್ಥಿಕ

ಸಾಮಾಜಿಕ ಅಥವಾ ಇತರೇ ಕಾರಣಗಳಿಂದಾಗಿ ತನಗಿಚ್ಛೆಯಿರುವಷ್ಟು ಕೊಡುಗೆ
ಯನ್ನು ಸಲ್ಲಿಸಲು ಅಸಮರ್ಥವಾಗಿದ್ದಲ್ಲಿ ಶಿಕ್ಷಣ ನಿರ್ವಹಣಾಧಿಕಾರಿಗಳು ತಮ್ಮ
ನಿರೀಕ್ಷೆಗಳನ್ನು ಸಮುದಾಯದ ಮಟ್ಟಕ್ಕೆ ಸೀಮಿತಗೊಳಿಸಬೇಕೆಂದು ಸಲಹೆ ನೀಡಲಾಗಿದೆ.
ಅಂದರೆ ಸರ್ಕಾರದಿಂದ ಏನನ್ನೂ ನಿರೀಕ್ಷಿಸಬೇಡಿ, ಒಂದು ವೇಳೆ ಕೊಳೆಗೇರಿ ಅಥವಾ
ತಾಂಡದಲ್ಲಿ ಜನತೆ ಏನನ್ನೂ ನೀಡದೇ ಹೋದರೆ (ಸಾಮಾನ್ಯವಾಗಿ ಅವರ ಬಡತನ
ಏನನ್ನು ನೀಡಲೂ ಅವರಿಗೆ ಅವಕಾಶ ನೀಡುವುದಿಲ್ಲ). ಅಂತಹ ಪ್ರದೇಶಗಳಲ್ಲಿ ಏನೂ
ಮಾಡಬೇಡಿ ಎಂದು ಹೇಳಿದಂತೆಯೇ ಅಲ್ಲವೇ ? ಯಾವ ದೇಶದಲ್ಲಿ ಮಕ್ಕಳು ತೀವ್ರ
ಬಡತನದಿಂದಾಗಿ ಒಂದು ಹೊತ್ತಿನ ಕೂಳಿಗೂ ಗತಿಯಿಲ್ಲದೆ ಸಾಯುತ್ತಿದ್ದಾರೋ,
ಬೆಳೆಯುವ ಕುಡಿ ಮೊಳಕೆಯಲ್ಲೇ ತನ್ನ ಬದುಕನ್ನು ಕಳೆದುಕೊಂಡು, ಯಾವುದೋ
ಹೋಟೆಲ್ ಅಥವಾ ಹೊಲಗಳಲ್ಲಿ ಕೂಲಿಗಳಾಗಿ ಜೀವನ ನಿರ್ವಹಿಸುತ್ತಿದ್ದಾರೋ,
ಹೊಟ್ಟೆ ಬಟ್ಟೆಗಳ ಪ್ರಶ್ನೆಯೂ ಹೆಮ್ಮರವಾಗಿ ಅವರೆದುರು ನಿಂತಿರುವ ದೇಶದಲ್ಲಿ ಜನತೆ
ಸ್ವತಃ ಹಣವನ್ನು ಹಾಕಿ ಶಿಕ್ಷಣವನ್ನು ಪಡೆಯಲು ಸಾಧ್ಯವೆ ? ಉಳ್ಳವರು ಹಣ
ನೀಡಿದರೆ ನಷ್ಟವೇನು ಎಂದು ಕೆಲವರು ವಾದಿಸಬಹುದು. ಆದರೆ ಇದುವರೆಗಿನ ಅನು
ಭವದಂತೆ ಶಿಕ್ಷಣವು ಮಠಾಧಿಪತಿಗಳ ಮತ್ತು ಉದ್ಯಮಿಗಳ ವ್ಯಾಪಾರದ ಸರಕಾಗಿಲ್ಲವೆ?
ಸಮುದಾಯದ ಪಾಲ್ಗೊಳ್ಳುವಿಕೆಯ ಹೆಸರಿನಲ್ಲಿ ಕ್ಯಾಪಿಟೇಶನ್ ಮತ್ತು ಡೊನೇಷನ್
ಪದ್ಧತಿಗಳನ್ನು ಕಾನೂನು ಬದ್ಧಗೊಳಿಸಿದಂತಾಗುತ್ತದೆ ಒಟ್ಟಿನಲ್ಲಿ ಶಿಕ್ಷಣದ ಬಗ್ಗೆ
ಸರ್ಕಾರವು ತನ್ನ ಜವಾಬ್ದಾರಿಯನ್ನು ಪೂರ್ತಿಯಾಗಿ ಕಳಚಿಕೊಳ್ಳುವ ಉದ್ದೇಶದಿಂದ
ಈ ಎಲ್ಲಾ ಯುಕ್ತಿಗಳನ್ನೂ ಯೋಚಿಸುತ್ತಿರುವಂತಿದೆ.

ನಾವು ಈಗಾಗಲೇ ಗುರ್ತಿಸಿರುವಂತೆ 1.91,000 ವಾಸ ಸ್ಥಳಗಳಲ್ಲಿ ಶಾಲೆಗಳಿಲ್ಲ.
ಇಂತಹ ಸ್ಥಳಗಳಲ್ಲಿ ಶಾಲೆಗಳನ್ನು ತೆರೆಯುವುದಾಗಿ 'ಆಪರೇಶನ್ ಬ್ಲಾಕ್ ಬೋರ್ಡ್'
ಯೋಜನೆಯಲ್ಲಿ ಘೋಷಿಸಲಾಗಿದೆ. ಆದರೆ ಅದೇ ಧ್ವನಿಯಲ್ಲಿ ನೂತನ ಶಿಕ್ಷಣ
ನೀತಿಯು ಶಿಕ್ಷಣ ಸೌಲಭ್ಯಗಳಿಲ್ಲದ ಪ್ರದೇಶಗಳಲ್ಲಿ ಸಾಂಪ್ರದಾಯಿಕ ಪದ್ಧತಿಯನ್ನು
ಬಿಟ್ಟು ಸಾಂಪ್ರದಾಯೇತರ ಪದ್ಧತಿಯಾದ ಸಮೂಹ ಮಾಧ್ಯಮಗಳ ಮೂಲಕ
ಅಂದರೆ ದೂರದರ್ಶನ, ಆಕಾಶವಾಣಿ ಇತ್ಯಾದಿಗಳ ಮೂಲಕ ಅನೌಪಚಾರಿಕ ಶಿಕ್ಷಣ
ವನ್ನು ನೀಡಲಾಗುವದೆಂದು ಘೋಷಿಸುತ್ತದೆ. ಹಾಗೂ ಈ ಪದ್ಧತಿಯು ಸುಗಮವಾಗಿ
ಮುಂದುವರಿಯಲು ಸ್ಥಳೀಯ ಯುವಕ ಯುವತಿಯರ ಬೆಂಬಲ ಪಡೆಯಲಾಗುವುದೆಂದು
ಹೇಳಲಾಗಿದೆ. ಅಂದರೆ ಹೊಸ ಶಾಲೆಗಳನ್ನು ತೆರೆಯುವ ಅಗತ್ಯವಿಲ್ಲವೆಂದು ಹೇಳಿದಂತಾ
ಯಿತು. ಟಿ. ವಿ., ರೇಡಿಯೋಗಳ ಮೂಲಕ ಸ್ವಲ್ಪ ವಿಷಯ ಸಂಗ್ರಹಣೆ ಮಾಡ
ಬಹುದೇ ವಿನಾ ಮತ್ತೇನು ಕಲಿಯಲು ಸಾಧ್ಯ ? ಬರೀ ವಿಷಯ ಸಂಗ್ರಹಣೆಯೇ
ಶಿಕ್ಷಣವಲ್ಲ. ಶಿಕ್ಷಣದ ಉದ್ದೇಶ ವ್ಯಕ್ತಿತ್ವವನ್ನು ರೂಪಿಸುವುದಾಗಿದೆ. ಈ ಸಂದರ್ಭ

ದಲ್ಲಿ ಸ್ವಾಮಿ ವಿವೇಕಾನಂದರು ಶಿಕ್ಷಣವನ್ನು ಕುರಿತು ಆಡಿರುವ ಮಾತುಗಳು ಗಮನಾರ್ಹ. "ಶಿಕ್ಷಣವೆಂದರೆ ನಿಮ್ಮ ಮೆದುಳಿನಲ್ಲಿ ತುಂಬಿಕೊಂಡು ಗೊಂದಲವೆಬ್ಬಿಸುವ ವಿಷಯಗಳ ಸಂಗ್ರಹಣೆಯಲ್ಲ– ಅದು ವ್ಯಕ್ತಿ ನಿರ್ಮಾಣ, ಶೀಲಸಂವರ್ಧನ ಹಾಗೂ ಚಿಂತನೆಯ ಸಮ್ಮಿಳಿತ ದೃಢೀಕರಣವಾಗಿದೆ. ಬರೀ ವಿಷಯ ಸಂಗ್ರಹಣೆಯೇ ಶಿಕ್ಷಣವೆನ್ನಿಸುವ ಹಾಗಿದ್ದಿದ್ದರೆ ಗ್ರಂಥ ಭಂಡಾರಗಳೆಲ್ಲವೂ ಮಹಾ ಜ್ಞಾನಿಗಳಾಗಿ ಬಿಡುತ್ತಿದ್ದವು: ವಿಶ್ವಕೋಶಗಳೆಲ್ಲವೂ ಮಹಾನ್ ಋಷಿಗಳೇ ಆಗುತ್ತಿದ್ದವು." ಅನೌಪಚಾರಿಕ ಪದ್ಧತಿಯ ಮೂಲಕ ಮಗುವನ್ನು ನೈಜ ಅರ್ಥದಲ್ಲಿ ವ್ಯಕ್ತಿಯನ್ನಾಗಿ ರೂಪಿಸಲು ಸಾಧ್ಯವೇ ? ಅವನನ್ನು ನೀತಿವಂತನನ್ನಾಗಿ, ಸುಸಂಸ್ಕೃತನನ್ನಾಗಿ ಮಾಡಲು ಸಾಧ್ಯವೇ ? ಗುರು–ಶಿಷ್ಯ ನೇರ ಸಂವಾದ ರೂಪದ ಔಪಚಾರಿಕ ಪದ್ಧತಿಯನ್ನು ನಿರಾಕರಿಸಿ ಈ ಅನೌಪಚಾರಿಕ ವಿಧಾನವನ್ನು ಜಾರಿಗೆ ತರುವುದರ ಹಿಂದಿನ ಉದ್ದೇಶ ಬೇರೇನೂ ಆಗಿರದೆ ಶಿಕ್ಷಣದ ಹೆಸರಿನಲ್ಲಿ ಜನತೆಯ ಕಣ್ಣಿಗೆ ಮಣ್ಣೆರಚಿ ಮುಂದಿನ ಪೀಳಿಗೆಯನ್ನು ಮೌಢ್ಯಾಂಧಕಾರದಲ್ಲಿ ಮುಳುಗಿಸುವುದೇ ಆಗಿದೆ.

ಇನ್ನು ಸೆಕೆಂಡರಿ ಮತ್ತು ಉನ್ನತ ಶಿಕ್ಷಣವನ್ನು ಕುರಿತು ವಿಚಾರ ಮಾಡೋಣ. ಈ ಹಂತದಲ್ಲಿ "ವೃತ್ತಿಪರ ಶಿಕ್ಷಣ" ಎಂಬ ಹೊಸ ಲೇಪಿತ ವಿಷಯವನ್ನು ಯೋಚಿಸಲಾಗಿದೆ. ಇಂದಿನ ಸಾಮಾನ್ಯ ಶಿಕ್ಷಣವು ಸಂಪ್ರದಾಯಬದ್ಧವಾಗಿದ್ದು ವಿದ್ಯಾರ್ಥಿಯಲ್ಲಿ ಹುದುಗಿರುವ ವೃತ್ತಿ ಶ್ರದ್ಧೆ ಹಾಗೂ ಅಭಿರುಚಿಗಳನ್ನು ಕಂಡುಕೊಳ್ಳುವಲ್ಲಿ ಯಶಸ್ವಿಯಾಗಿಲ್ಲ. ಬದುಕಿನೊಂದಿಗೆ ಸಂಬಂಧವನ್ನು ಕಳಚಿಕೊಂಡು ಅಸಂಬದ್ಧವಾಗಿದೆ. ಅನಗತ್ಯವಾಗಿ ವೇಳೆ ಮತ್ತು ಹಣ ಸಾಮಾನ್ಯ ಶಿಕ್ಷಣ ಪಡೆಯುವುದರಲ್ಲೇ ವ್ಯರ್ಥವಾಗುತ್ತಿದೆ. ಆದ್ದರಿಂದ ವಿದ್ಯಾರ್ಥಿಗಳನ್ನು ಸಾಮಾನ್ಯ ಪದವಿಗಳ ಹುಚ್ಚಿನಿಂದ ತಪ್ಪಿಸಿ ಜೀವನಕ್ಕೆ ಸಿದ್ಧಗೊಳ್ಳುವ ಪ್ರವೃತ್ತಿಯನ್ನು ಬೆಳೆಸಬೇಕಾಗಿದೆ. ಅದಕ್ಕಾಗಿ ವೃತ್ತಿಪರ ಶಿಕ್ಷಣವು ಅನಿವಾರ್ಯ ಎಂದು ನೂತನ ಶಿಕ್ಷಣ ನೀತಿಯು ಪ್ರತಿಪಾದಿಸುತ್ತದೆ. ವೃತ್ತಿಪರ ಶಿಕ್ಷಣವು ಆರ್ಥಿಕ ಬೆಳವಣಿಗೆ ಮತ್ತು ಉತ್ಪಾದನೆಗೆ ಅನುಕೂಲವಾಗುವ ಶಿಕ್ಷಣವನ್ನು ಕಲಿಸುವುದು. ಬೆಳೆಯುತ್ತಿರುವ ಉದ್ಯಮ ವಲಯಗಳಿಗೆ ಬೇಕಾಗುವ ಕೆಲಸಗಾರರನ್ನು ತಯಾರಿಸುವುದು. ವಿದ್ಯಾರ್ಥಿಗಳನ್ನು ಸ್ವಾವಲಂಬನ ಮತ್ತು ಲಾಭದಾಯಕ ಉದ್ಯೋಗಕ್ಕೆ ತಯಾರು ಮಾಡುವುದು. ತತ್ಫಲವಾಗಿ ನಿರುದ್ಯೋಗ ಸಮಸ್ಯೆ ಹಾಗೂ ನಿರ್ಗತಿಕರ ಸಮಸ್ಯೆಯನ್ನು ಹೋಗಲಾಡಿಸುವುದು. ರಾಷ್ಟ್ರೀಯ ಅಭಿವೃದ್ಧಿಯನ್ನು ಈಡೇರಿಸುವುದು, ಈ ಎಲ್ಲ ಕಾರಣಗಳಿಂದ ವೃತ್ತಿಪರ ಶಿಕ್ಷಣವನ್ನು ವಿವಿಧ ಹಂತಗಳಲ್ಲಿ ಅನುಷ್ಠಾನಕ್ಕೆ ತರಬೇಕೆಂದು ನೂತನ ಶಿಕ್ಷಣ ನೀತಿಯು ಯೋಜಿಸಿದೆ. ಇದರಂತೆ ಪ್ರಾಥಮಿಕ ಹಂತದಲ್ಲಿ ಒಂದರಿಂದ ಐದನೇ ತರಗತಿಯ ಮಕ್ಕಳಿಗೆ ಯಾವುದಾದರೊಂದು ವೃತ್ತಿಯ ಬಗ್ಗೆ ಕಲಿಸಿಕೊಡಬೇಕೆಂದು, ಮಾಧ್ಯಮಿಕ ಹಂತದಲ್ಲಿ ನೇರ

ವಾಗಿ. ಅಥವಾ ಯಾವುದಾದರೊಂದು ಉದ್ಯೋಗದ ತರಬೇತಿಯ ಮೂಲಕ ಮಕ್ಕಳು ವೃತ್ತಿಯನ್ನು ಕಲಿಯುವಂತೆ ಶಿಕ್ಷಣವನ್ನು ಯೋಜಿಸಲು ನೂತನ ಶಿಕ್ಷಣ ನೀತಿಯು ನಿರ್ಧರಿಸಿದೆ. ಹೈಯರ್ ಸೆಕೆಂಡರಿ ಹಂತದ ಶಿಕ್ಷಣವನ್ನು ಕಾಲೇಜು ಶಿಕ್ಷಣಕ್ಕೆ ಅಗತ್ಯವಾದ ಪೂರ್ವ ಸಿದ್ಧತೆಯ ರೂಪದಲ್ಲಿ ನೀಡದೆ ಶಾಲೆಯನ್ನು ಬಿಡುವವರು ಜೀವನದಲ್ಲಿ ಬಗೆ ಬಗೆಯ ವೃತ್ತಿಗಳನ್ನವಲಂಬಿಸಲು ಸಾಧ್ಯವಾಗುವಂತೆ ಯೋಜಿಸಲಾಗಿದೆ. ಆದ್ದರಿಂದ 'ಶಿಕ್ಷಣದ ಸವಾಲಿ'ನಲ್ಲಿ ಈಗಿರುವ ಹೈಯರ್ ಸೆಕೆಂಡರಿ ಶಾಲೆಗಳಲ್ಲಿ 7 ನೆಯ ಪಂಚವಾರ್ಷಿಕ ಯೋಜನೆಯೊಳಗೆ ವೃತ್ತಿ ಶಿಕ್ಷಣವನ್ನು ಅನುಷ್ಠಾನಕ್ಕೆ ತರುವ ಬಗ್ಗೆ ವಿಚಾರ ಮಾಡಲಾಗುತ್ತಿದೆ.

ಈ ವಿಚಾರಗಳು ಮೇಲ್ನೋಟಕ್ಕೆ ಅತ್ಯಂತ ಸಮರ್ಥನೀಯವಾಗಿ ಕಂಡುಬರುತ್ತವೆ. ಆದರೆ ಇಂದು ನಮ್ಮ ದೇಶದಲ್ಲಿ ವೃತ್ತಿಪರ ಶಿಕ್ಷಣ ಪಡೆದಿರುವ ಶಿಕ್ಷಿತರ ಪ್ರಮಾಣ ಕೇವಲ ಶೇ. 2·7 ಆದಾಗ್ಯೂ ಇಂತಹವರು ನಿರುದ್ಯೋಗದಿಂದ ಬಳಲುತ್ತಿದ್ದಾರೆ. ಇದಕ್ಕೆ ನಮ್ಮ ಆರ್ಥಿಕ ವ್ಯವಸ್ಥೆ ಕಾರಣವೇ ಅಥವಾ ನಮ್ಮ ಶೈಕ್ಷಣಿಕ ವ್ಯವಸ್ಥೆಯೇ? ಉದ್ಯೋಗಾವಕಾಶಗಳ ವಿಸ್ತರಣೆಯು ಆರ್ಥಿಕ ಮತ್ತು ಕೈಗಾರಿಕಾ ಬೆಳವಣಿಗೆಗಳಿಂದ ಸಾಧ್ಯವೇ ಅಥವಾ ಶಿಕ್ಷಣವನ್ನು ಪುನರ್ರೂಪಿಸುವುದರಿಂದ ಸಾಧ್ಯವೇ ? ಇಂದು ನಮ್ಮ ದೇಶದಲ್ಲಿ ಕಾರ್ಖಾನೆಗಳು ನಿರಂತರವಾಗಿ ಬೀಗ ಮುದ್ರೆಗೊಳಗಾಗುತ್ತಿವೆ. ಭಾರತದ ರಿಸರ್ವ್ ಬ್ಯಾಂಕಿನ ಒಂದು ವರದಿಯ ಪ್ರಕಾರ 1983 ರ ಒಂದೇ ಒಂದು ವರ್ಷದ ಅವಧಿಯಲ್ಲಿ ಸುಮಾರು 10,000 ಸಣ್ಣ ಕೈಗಾರಿಕೆಗಳು ಮುಚ್ಚಲ್ಪಟ್ಟವೆ. ಹಾಗೂ ಸುಮಾರು 1,00,000 ಸಣ್ಣ ಕೈಗಾರಿಕೆಗಳು ರೋಗಗ್ರಸ್ತವಾಗಿವೆ. ಈ ರೀತಿ ದಿನೇ ದಿನೇ ವೃತ್ತಿ ಮಾರುಕಟ್ಟೆಯು ಸಂಕುಚಿತಗೊಳ್ಳುತ್ತಿರುವಾಗ ವೃತ್ತಿ ಪರ ಶಿಕ್ಷಣ ಪಡೆದ ಮಾತ್ರಕ್ಕೆ ವೃತ್ತಿಗಳು ದೊರೆಯುತ್ತವೆಯೇ ? ಈ ವಿಚಾರವು ನಮ್ಮ ಸರ್ಕಾರಕ್ಕೆ ತಿಳಿದಿಲ್ಲವೆಂದೇನಲ್ಲ. ಈವರೆಗೂ ವೃತ್ತಿಪರ ಶಿಕ್ಷಣವೆಂದರೆ ಕೈಗಾರಿಕೆಗಳಲ್ಲಿ ವೃತ್ತಿ ಕೈಗೊಳ್ಳಲು ಯೋಗ್ಯವಾಗುವಂತಹ ತಾಂತ್ರಿಕ ಶಿಕ್ಷಣವನ್ನು ನೀಡಲಾಗುತ್ತಿತ್ತು. ಆದರೆ ಈಗ ವೃತ್ತಿಪರ ಶಿಕ್ಷಣವು ತನ್ನ ವ್ಯಾಪ್ತಿಯನ್ನು ವಿಸ್ತರಿಸಿಕೊಂಡು ಅಸಂಘಟಿತ ಉತ್ಪಾದನಾ ವಿಭಾಗಗಳಾದ ಬೇಸಾಯ, ಸಾಮಾಜಿಕ ಶಿಕ್ಷಣ ಮುಂತಾದ ಸ್ಥಳೀಯ ಉದ್ಯೋಗಾವಕಾಶಗಳನ್ನು ಗಮನದಲ್ಲಿಟ್ಟುಕೊಂಡು ವೃತ್ತಿ ವಿಷಯಗಳನ್ನು ರೂಪಿಸುವ ಮೂಲಕ ಸ್ವಂತ ಉದ್ಯೋಗವನ್ನು ಕೈಗೊಳ್ಳುವ ಶಿಕ್ಷಣವನ್ನು ಯೋಜಿಸಲಾಗುವುದೆಂದು ನೂತನ ಶಿಕ್ಷಣ ನೀತಿ ಪ್ರತಿಪಾದಿಸುತ್ತದೆ. ಇಲ್ಲಿ ಸ್ಥಳೀಯ ಉದ್ಯೋಗಾವಕಾಶಗಳೆನ್ನುವುದು ಸಂಪೂರ್ಣವಾಗಿ ಆಕ್ರಮಿಸಲ್ಪಟ್ಟಿದ್ದು ತೀವ್ರ ಸ್ಪರ್ಧೆ ಅವುಗಳನ್ನವಲಂಬಿಸಿ ಜೀವನ ನಿರ್ವಹಣೆ ಮಾಡುವವರನ್ನು ಅರೆಹೊಟ್ಟೆ ಅರೆಬಟ್ಟೆಗಳಿಗೆ ತಳ್ಳಿವೆ.

ಇಲ್ಲಿ ಒಂದು ಪ್ರಶ್ನೆ-ಸ್ವಂತ ಉದ್ಯೋಗವನ್ನು ಹೊಂದಲು ನಿರುದ್ಯೋಗಿ ಯುವಕನಲ್ಲಿ ಕನಿಷ್ಟ ಬಂಡವಾಳವಾದರೂ ಬೇಕಲ್ಲವೇ ? ಬಹಳ ಪ್ರಯತ್ನಪಟ್ಟು ಉದ್ಯೋಗವನ್ನು ಆರಂಭಿಸಿದರೂ ಶ್ರೀಮಂತ ಉದ್ಯಮಿಗಳೊಂದಿಗೆ ಅವನು ಸ್ಪರ್ಧಿಸಬಲ್ಲನೇ ? ಇಂದು ರಾಷ್ಟ್ರದಲ್ಲಿ ಮಾರುಕಟ್ಟೆಯು ಕುಸಿತದಿಂದಾಗಿ ಬೃಹತ್ ಕೈಗಾರಿಕೆಗಳೊಂದಿಗೆ ಸ್ಪರ್ಧಿಸಲಾಗದೆ ಅಸಂಖ್ಯಾತ ಕಾರ್ಖಾನೆಗಳು ರೋಗಗ್ರಸ್ತವಾಗಿವೆ; ಮುಚ್ಚಲ್ಪಟ್ಟಿವೆ. ಹೀಗಿರುವಾಗ ಸ್ವಂತ ಉದ್ಯೋಗವನ್ನು ಅವಲಂಬಿಸಿ ಜೀವನ ನಿರ್ವಹಿಸುವುದು ಸಾಧ್ಯವೇ? ಲೆನಿನ್ನರು ಏಕಸ್ವಾಮ್ಯ ಬಂಡವಾಳ ಶಾಹೀ ಪ್ರಭುತ್ವದ ಈ ಯುಗದಲ್ಲಿ ಸ್ವಂತ ಉದ್ಯೋಗವೆಂಬುದು 'ಚಿಕ್ಕ ಬಂಡವಾಳ ಶಾಹಿಗಳ ಕನಸು' ಹಾಗೂ 'ದೊಡ್ಡ ಬಂಡವಾಳ ಶಾಹಿಗಳ ಮೋಸ' ಎಂಬುದನ್ನು ಸರಿಯಾಗಿ ಗುರ್ತಿಸಿದ್ದಾರೆ. ಇಂದು ನಿರುದ್ಯೋಗ ಸಮಸ್ಯೆ ನಿವಾರಣೆಯಾಗಬೇಕಾದರೆ ಮಾರುಕಟ್ಟೆಯ ಕುಸಿತಕ್ಕೆ ಕಾರಣವಾಗಿರುವ ಲಾಭೋದ್ದೇಶಿತ ಉತ್ಪಾದನಾ ವ್ಯವಸ್ಥೆ ನಿರ್ಮೂಲವಾಗಬೇಕು. ಆಗ ಜನತೆಯ ಕೊಳ್ಳುವ ಶಕ್ತಿ ಸಾಪೇಕ್ಷವಾಗಿ ಉತ್ತಮಗೊಳ್ಳುತ್ತದೆ. ತತ್ಫಲವಾಗಿ ಮಾರುಕಟ್ಟೆ ಉತ್ತಮಗೊಂಡು ಬೇಡಿಕೆ ಹೆಚ್ಚಾಗುತ್ತದೆ. ಬೇಡಿಕೆಯನ್ನು ಪೂರೈಸಲು ಔದ್ಯೋಗೀಕರಣ-ತತ್ಪರಿಣಾಮವಾಗಿ ಜನತೆಗೆ ಉದ್ಯೋಗ ದೊರಕುತ್ತದೆ; ನಿರುದ್ಯೋಗ ಸಮಸ್ಯೆ ಕ್ರಮೇಣ ನಿವಾರಣೆಯಾಗುತ್ತದೆ. ಆದ್ದರಿಂದ ಇಂದಿನ ನಿರುದ್ಯೋಗ ಸಮಸ್ಯೆಯ ಕೇಂದ್ರಬಿಂದು ಇಂದಿನ ಆರ್ಥಿಕ ವ್ಯವಸ್ಥೆಯೇ ಹೊರತು ಶೈಕ್ಷಣಿಕ ವ್ಯವಸ್ಥೆಯಲ್ಲ. ಶೈಕ್ಷಣಿಕ ವ್ಯವಸ್ಥೆಯನ್ನು ಮಾರ್ಪಡಿಸಿರುವುದರಿಂದ ನಿರುದ್ಯೋಗ ಸಮಸ್ಯೆ ನಿವಾರಣೆಯಾಗುವುದಿಲ್ಲ. ಇಂತಹ ತರಬೇತಿ ವಿದ್ಯಾರ್ಥಿಗಳನ್ನು ನೈಜ ಶಿಕ್ಷಣದಿಂದ ವಂಚಿಸಿ ಅವರ ಚಿಂತನೆಯನ್ನು ಯಾಂತ್ರಿಕಗೊಳಿಸುತ್ತದೆ. ಕಣ್ಪಟ್ಟಿಗಳನ್ನು ಕಟ್ಟಿದ ಕುದುರೆಯಂತೆ ಸುತ್ತಮುತ್ತಿನದೇನನ್ನೂ ನೋಡಲಾಗದೆ ಕೇವಲ ಒಂದೇ ಒಂದು ನಿರ್ದಿಷ್ಟ ವಿಷಯದಲ್ಲಿ ಸ್ವಲ್ಪ ತಾಂತ್ರಿಕ ಅನುಭವ ಪಡೆದು ಮಿಕ್ಕ ಮೂಲಭೂತ ವಿಷಯಗಳ ಸಂಪೂರ್ಣವಾದ ಅಜ್ಞಾನದಿಂದ ಮಾನವ ಯಂತ್ರಗಳಾಗುತ್ತಾರೆ. ಮಾನವ ಯಂತ್ರವಾದಾಗ ಸುತ್ತಣ ಸಮಾಜಕ್ಕೆ ಸ್ಪಂದಿಸುವ ಗುಣವನ್ನು ಕಳೆದುಕೊಂಡು ಬಿಡುತ್ತಾನೆ. ಹೀಗೆ ವಿದ್ಯಾರ್ಥಿಯು ಶಿಕ್ಷಣ ಹಾಗೂ ಉದ್ಯೋಗ ಎರಡರಿಂದಲೂ ವಂಚಿತನಾಗುತ್ತಾನೆ. ಶಿಕ್ಷಣದಂತಹ ಮಹಾನ್ ವಿಚಾರವನ್ನು ಕೇವಲ ವೃತ್ತಿಗಾಗಿ ಎಂಬ ಕೀಳು ಮಟ್ಟಕ್ಕೆ ಇಳಿಸಲಾಗಿದೆ ಹೇಗಾದರೂ ಮಾಡಿ ಹೊಟ್ಟೆ ಹೊರೆದುಕೊಳ್ಳಲು ಮನುಷ್ಯನನ್ನು ಸಜ್ಜುಗೊಳಿಸುವುದೇ ಶಿಕ್ಷಣದ ಗುರಿಯಲ್ಲ. ಶಿಕ್ಷಣವನ್ನು ಪಡೆದ ಎಲ್ಲರಿಗೂ ವೃತ್ತಿಯನ್ನು ಕಲ್ಪಿಸಿಕೊಡಬೇಕೆಂಬುದು ಪ್ರಜಾತಾಂತ್ರಿಕ ಸರ್ಕಾರದ ಹೊಣೆ. ಆದರೆ ಶಿಕ್ಷಣದ ಉದ್ದೇಶವೇ ವೃತ್ತಿಯಲ್ಲ. ಪುರಾತನ ತತ್ವಜ್ಞಾನಿ ಸಾಕ್ರಟೀಸ್ ಹೇಳುವಂತೆ "ಶಿಕ್ಷಣದ ಉದ್ದೇಶ ದೋಷ ನಿವಾರಣೆ ಮಾಡಿ ಸತ್ಯ ಶೋಧನೆ ಮಾಡುವುದಾಗಿದೆ". ಶಿಕ್ಷಣದ ಉದ್ದೇಶ ಮನುಷ್ಯನನ್ನು ಯಂತ್ರದ ಒಂದು ಭಾಗವನ್ನಾಗಿ ಮಾಡುವುದಲ್ಲ.

ಬದಲಿಗೆ ಸತ್ಯವನ್ನು ಶೋಧಿಸಲು ಸಮರ್ಥವಾದ ಜ್ಞಾನವನ್ನು ನೀಡಿ ಉನ್ನತ ನೈತಿಕ, ಸಾಂಸ್ಕೃತಿಕ ವ್ಯಕ್ತಿತ್ವವನ್ನು ರೂಪಿಸುವುದಾಗಿದೆ.

ಸರ್ಕಾರವು ತನ್ನೆಲ್ಲ ಬುದ್ಧಿ ಬಲವನ್ನು ಒಟ್ಟುಗೂಡಿಸಿ ವೃತ್ತಿ ತರಬೇತಿಯ ಬಗ್ಗೆ ಪ್ರಚಾರ ಮಾಡಿದಾಗ್ಯೂ ಜನತೆಯಲ್ಲಿ ಅಂತಹ ಶಿಕ್ಷಣದ ಬಗ್ಗೆ ಒಲವಿಲ್ಲ. ಸರ್ಕಾರ ಇದನ್ನು ಗುರುತಿಸಿದೆ. ಆದುದರಿಂದಲೇ ವೃತ್ತಿಪರ ಶಿಕ್ಷಣವನ್ನು ಪ್ರಾಥಮಿಕ ಹಂತದಿಂದ ಹಿಡಿದು ಎಲ್ಲ ಹಂತದವರೆಗೂ ವಿದ್ಯಾರ್ಥಿಗಳ ಮೇಲೆ ಹೇರಲು ಯೋಜಿಸಲಾಗಿದೆ. ಉನ್ನತ ಶಿಕ್ಷಣದ ಹಂತದಲ್ಲಿ 'ಪದವಿ ಉದ್ಯೋಗ ನಿಸ್ಸಂಬಂಧೀಕರಣ' ಯೋಜನೆಯನ್ನು ಜಾರಿಗೆ ತರುವುದಾಗಿ ಘೋಷಿಸಲಾಗಿದೆ. ಪದವಿಗೂ, ಉದ್ಯೋಗಗಳಿಗೂ ಇರುವ ಸಂಬಂಧಗಳನ್ನು ಕಡಿದುಹಾಕಿದರೆ ಉನ್ನತ ಶಿಕ್ಷಣವನ್ನು ಪಡೆಯುವ ಹಂಬಲವಿರುವವನೂ ಸಹ ಶಿಕ್ಷಣವನ್ನು ಮುಂದುವರಿಸದೆ ಯಾವುದಾದರೂ ವೃತ್ತಿ ತರಬೇತಿಯನ್ನು ಪಡೆಯಲು ಇಚ್ಛಿಸುತ್ತಾನೆ. ಹೀಗಾಗಿ ಸಾಮಾನ್ಯ ಶಿಕ್ಷಣ ಪಡೆಯುವವರ ಸಂಖ್ಯೆ ಕಡಿಮೆಯಾಗಿ ವೃತ್ತಿಪರ ಶಿಕ್ಷಣ ಪಡೆಯುವವರ ಸಂಖ್ಯೆ ಹೆಚ್ಚಲಿ ಎಂಬುದು ಸರ್ಕಾರದ ಆಶಯ. ಈ ರೀತಿ ಪದವಿ–ಉದ್ಯೋಗ ನಿಸ್ಸಂಬಂಧೀಕರಣದ ಹೆಸರಿನಲ್ಲಿ ವೃತ್ತಿಪರ ಶಿಕ್ಷಣವನ್ನು ಹೇರಲು ಸರ್ಕಾರವು ನಡೆಸಿರುವ ಪ್ರಯತ್ನ ಸ್ಪಷ್ಟವಾಗಿದೆ. ಪದವೀ ಉದ್ಯೋಗಗಳ ನಿಸ್ಸಂಬಂಧೀಕರಣದಿಂದ ವೃತ್ತಿಗಳೇನು ಸೃಷ್ಟಿಯಾಗುತ್ತವೆಯೇ ? ಪದವಿ ಪಡೆಯದೇ ಇರುವವರೂ ಸಹ ವೃತ್ತಿಗಳಿಗೆ ಅರ್ಜಿ ಸಲ್ಲಿಸಿ ನಿರುದ್ಯೋಗಿಗಳು ಸಂತೃಪ್ತಿ ಪಡೆಯಬಹುದು. ಇಷ್ಟೇ ಇದರಿಂದ ಸಾಧ್ಯವಾಗುವದು.

ಹಾಗಾದರೆ ಎಲ್ಲರೂ ಇಂತಹ ಅನೌಪಚಾರಿಕ ಶಿಕ್ಷಣ ಮತ್ತು ವೃತ್ತಿ ತರಬೇತಿಗಳಿಂದಲೇ ತೃಪ್ತಿಪಟ್ಟುಕೊಳ್ಳಬೇಕೇ ? ಹಾಗೇನಿಲ್ಲ, ಇಂತಹ ಶಿಕ್ಷಣ ನಮ್ಮ ಸಮಾಜದ ಕೆಳ್ಳಲಾಗದ, ಹೊಟ್ಟೆಬಟ್ಟೆಗೂ ಕಷ್ಟಪಡುತ್ತಿರುವ ಬಡ ಕಾರ್ಮಿಕ, ರೈತ ಹಾಗೂ ಕೆಳ ಮಧ್ಯಮ ವರ್ಗದವರಿಗೆ ಮಾತ್ರ. ಆದರೆ ಇನ್ನೊಂದೆಡೆ ದೈವದತ್ತ ಪ್ರತಿಭೆಯನ್ನು ಹೊಂದಿರುವ, ವಿಶಿಷ್ಟ ಸಾಮರ್ಥ್ಯ ಹಾಗೂ ಆಸಕ್ತಿ ಹೊಂದಿರುವ ಶ್ರೀಮಂತರ ಮಕ್ಕಳಿದ್ದಾರೆ. ಅಂತಹ ಮಕ್ಕಳು ತಮ್ಮ ಪ್ರತಿಭೆಯನ್ನು, ಸಾಮರ್ಥ್ಯವನ್ನು, ಆಸಕ್ತಿಯನ್ನು ರೂಢಿಸಿ ಬೆಳೆಸಿಕೊಳ್ಳಲು ಅವಕಾಶ ಮಾಡಿಕೊಡಬೇಕು. ಇಲ್ಲವಾದರೆ ಅವರಿಗೆ ಅನ್ಯಾಯ ಮಾಡಿದಂತಾಗುವುದಿಲ್ಲವೇ ! ಸಮಾನತೆಯ ಹೆಸರಿನಲ್ಲಿ ಪ್ರತಿಭೆಯನ್ನು ಕಡೆಗಣಿಸುವುದು ರಾಷ್ಟ್ರದ ಅಭಿವೃದ್ಧಿಗೆ ಮಾರಕ ! ಆದ್ದರಿಂದ ಇಂತಹ ಮಕ್ಕಳಿಗಾಗಿ ರಾಷ್ಟ್ರದ ಪ್ರತಿ ಜಿಲ್ಲೆಗೊಂದು 'ನವೋದಯ ಶಾಲೆ'ಯನ್ನು ತೆರೆಯಲು ಯೋಜಿಸಲಾಗಿದೆ. ಈಗಾಗಲೇ ಕೋಟ್ಯಾಂತರ ರೂಪಾಯಿಗಳ ವೆಚ್ಚದಲ್ಲಿ ಹಲವು ಶಾಲೆಗಳು ಆರಂಭವಾಗಿವೆ. ದೂರದರ್ಶನ, ರೇಡಿಯೋ, ಚಲನಚಿತ್ರ, ಅತ್ಯುತ್ತಮ

ಗ್ರಂಥಾಲಯ, ಪ್ರಯೋಗ ಶಾಲೆ, ಆಸಕ್ತಿಕ ಕ್ರೀಡಾ ಪಠ್ಯೇತರ ಚಟುವಟಿಕೆಗಳ ಸೌಲಭ್ಯ, ಇಡೀ ದೇಶದಿಂದ ಆರಿಸಲಾದ ಶ್ರೇಷ್ಠ ಉಪಾಧ್ಯಾಯರು ಈ ಎಲ್ಲ ಸೌಲಭ್ಯಗಳೂ ಶಾಲೆಯನ್ನು ಅಲಂಕರಿಸಲಿವೆ. ಈ ಶಾಲೆಗಳು ರಾಷ್ಟ್ರೀಯ ಐಕ್ಯತೆಯನ್ನು ಸಾಧಿಸಲು ಸಹಕಾರಿಯಾಗಿವೆಯೆಂದು ಹಾಗೂ ಸಮಾನತೆ, ಸಾಮಾಜಿಕ ನ್ಯಾಯವನ್ನು ಒದಗಿಸುವುದೇ ಇವುಗಳ ಉದ್ದೇಶವೆಂದು ನೂತನ ಶಿಕ್ಷಣ ನೀತಿ ಸಾರುತ್ತದೆ. ಹಾಗಾದರೆ ಸಮಾನತೆಯೆಂದರೇನು ? ರಾಷ್ಟ್ರದ ಬಹು ದೊಡ್ಡ ಸಮೂಹವನ್ನು ಶಿಕ್ಷಣದಿಂದ ಸಂಪೂರ್ಣವಾಗಿ ವಂಚಿಸಿ ಅಷ್ಟೇ ಪ್ರಮಾಣದಲ್ಲಿ ಅದಕ್ಕೆ ತದ್ವಿರುದ್ಧವಾಗಿ ಕೇವಲ ಬೆರಳೆಣಿಕೆಯಷ್ಟು ಜನರಿಗೆ ಶಿಕ್ಷಣ ನೀಡುವುದೆಂದರ್ಥವಾದಲ್ಲಿ ಸಮಾನತೆ, ಸಾಮಾಜಿಕ ನ್ಯಾಯ ಇವುಗಳನ್ನು ಖಂಡಿತಾ ನಮ್ಮ ಸರ್ಕಾರ ಸಾಧಿಸುವುದರಲ್ಲಿದೆ.

ಅತ್ಯುತ್ತಮ ಶಾಲೆಗಳನ್ನು ತೆರೆಯುವುದಕ್ಕೆ ಯಾರ ವಿರೋಧವೂ ಇಲ್ಲ. ಆದರೆ ಈ ಶಾಲೆಗಳು ಕೇವಲ ಬೆರಳೆಣಿಕೆಯಷ್ಟೇ ಏಕಿರಬೇಕು ? ಎಲ್ಲ ಶಾಲೆಗಳೂ ಏಕೆ ನವೋದಯ ಶಾಲೆಗಳಾಗಬಾರದು ? ಕೆಲವೇ ಒಳ್ಳೆಯ ಶಾಲೆಗಳು ಪ್ರಾರಂಭವಾದಲ್ಲಿ ಅದು ಉಳ್ಳವರ ಸೊತ್ತಾಗುವುದಿಲ್ಲವೇ ? ಅಂತೆಯೇ ಈ ಶಾಲೆಗಳ ಬಗ್ಗೆ ರಾಷ್ಟ್ರದ ಎಲ್ಲೆಡೆಯಿಂದಲೂ ತೀವ್ರ ಪ್ರತಿಭಟನೆ ವ್ಯಕ್ತವಾಯಿತು. ಜನತೆಯ ಕಟು ಟೀಕೆಯನ್ನು ಎದುರಿಸಲಾಗದೆ ಸರ್ಕಾರ ಇನ್ನೊಂದು ಆಣಿ ಮುತ್ತನ್ನು ಉದುರಿಸಿದೆ. ಏನೆಂದರೆ ಈ ಶಾಲೆಗಳ ಪ್ರವೇಶ, ಮುಖ್ಯವಾಗಿದ್ದು ವಿದ್ಯಾರ್ಥಿಯ ಬುದ್ಧಿವಂತಿಕೆಯನ್ನೂ ಅವಲಂಬಿಸಿರುತ್ತದೆ. ಆದ್ದರಿಂದ ಪ್ರತಿಭಾವಂತ ಮಗುವು ಮಾತ್ರ ಪ್ರವೇಶವನ್ನು ಪಡೆಯುತ್ತದೆ. ಉಳ್ಳವರು ಬಡವರು ಎಂಬ ಭೇದ ಭಾವವೇ ಉದ್ಭವಿಸದೆಂದು ಸರ್ಕಾರದ ವಾದ. ಹಾಗಾದರೆ ಪ್ರತಿಭೆಯ ವಿಜ್ಞಾನ ಏನು ಹೇಳುತ್ತದೆ? ವಿಜ್ಞಾನ ಹೇಳುತ್ತದೆ- ಪ್ರತಿಯೊಂದು ಮಗುವಿನಲ್ಲೂ ಬೌದ್ಧಿಕ ಅಂತಃಶಕ್ತಿ ಸಮಾನವಾಗಿದ್ದು, ಅತ್ಯುತ್ತಮ ಬೆಳವಣಿಗೆ ಅಥವಾ ಅವನತಿಗೆ ಪರಿಸರವೇ ಕಾರಣ. ಇದರಲ್ಲಿ ಅನುವಂಶೀಯತೆಯ ಪಾತ್ರ ಗುರುತರವಾಗಿರುವುದಿಲ್ಲ. ಅಂದ ಮೇಲೆ ನವೋದಯ ಶಾಲೆಗಳು ನಮ್ಮ ಸಮಾಜದ ಹಣ ವಿದ್ಯೆಗಳನ್ನು ಪಡೆದ ಶ್ರೀಮಂತ ಕುಟುಂಬದ ಮಕ್ಕಳ ಸವಲತ್ತಾಗಿ ಪರಿವರ್ತನೆಯಾಗುತ್ತವೆ. ದಾರಿದ್ರ್ಯ, ಅಜ್ಞಾನಗಳಿಗೆ ಎಳೆತನದಿಂದಲೇ ತುತ್ತಾದ ಮಕ್ಕಳು ಈ ಶಾಲೆಗಳ ಹೊಸ್ತಿಲನ್ನು ಮುಟ್ಟುವುದೂ ಸಹ ಅಶಕ್ಯ. ಇನ್ನು ಎರಡನೆಯದಾಗಿ ಈ ಶಾಲೆಗಳ ಪ್ರವೇಶ ದೊರಕಿಸಿಕೊಳ್ಳುವಲ್ಲಿ, ಸ್ವಜನ ಪಕ್ಷಪಾತ ಉನ್ನತ ಪಾತ್ರ ವಹಿಸುತ್ತದೆ. ಒಂದು ವೇಳೆ ತರ್ಕಕ್ಕಾಗಿ ಪಾತ್ರವಹಿಸುವುದಿಲ್ಲವೆಂದರೂ ನಮ್ಮ ಸಮಾಜದಂತಹ ಶ್ರೇಣೀಕೃತ ಸಮಾಜದಲ್ಲಿ ಈ ಶಾಲೆಗಳಿಂದಾಗುವ ದುಷ್ಪರಿಣಾಮಗಳನ್ನೂ ತಪ್ಪಿಸಲು ಸಾಧ್ಯವಿಲ್ಲ.

ಇನ್ನು ಈ ತಾರತಮ್ಯದ ನೀತಿಯು ಕೇವಲ ನವೋದಯ ಶಾಲೆಗಳಿಗೆ ಮಾತ್ರ ಸೀಮಿತವಾಗಿಲ್ಲ. ಉನ್ನತ ಹಂತದಲ್ಲಿ ಈ ನೀತಿಯು ಮುಂದುವರಿದು ಅಟಾನಮಸ್ (ಸ್ವಾಯತ್ತತಾ) ಕಾಲೇಜುಗಳಲ್ಲಿ ಪರಿಣಿತವಾಗಿದೆ. ಇದಕ್ಕೆ ಅವರು ನೀಡುವ ಕಾರಣಗಳೇನೆಂದರೆ 'ಇಂದು ನಮ್ಮ ವಿಶ್ವವಿದ್ಯಾಲಯಗಳ ಮಟ್ಟ ಹಾಳಾಗಿ ಹೋಗಿದೆ. ತತ್ಪರಿಣಾಮವಾಗಿ ವಿಶ್ವ ವಿದ್ಯಾಲಯಗಳಿಗೆ ಸೇರಿಕೊಂಡಿರುವ ಉತ್ತಮ ಕಾಲೇಜುಗಳು ತಮ್ಮ ಸ್ವಾತಂತ್ರ್ಯವನ್ನು ಕಳೆದುಕೊಂಡು, ನಿಧಾನವಾಗಿ ಇತರೇ ಕಳಪೆ ಕಾಲೇಜುಗಳಂತೆ ತಮ್ಮ ಮಟ್ಟವನ್ನು ಸಹ ಕಳೆದು ಕೊಳ್ಳುತ್ತಿವೆ. ಆದ್ದರಿಂದ ಆ ಕಾಲೇಜುಗಳ ಅವನತಿಯನ್ನು ತಡೆಗಟ್ಟಬೇಕು. ಅದಕ್ಕಾಗಿ ಅವುಗಳನ್ನು ವಿಶ್ವವಿದ್ಯಾಲಯಗಳಿಂದ ಬೇರ್ಪಡಿಸಿ ತನ್ಮೂಲಕ ಪಠ್ಯಕ್ರಮವನ್ನು ರೂಪಿಸುವುದರಿಂದ ಹಿಡಿದು ಪರೀಕ್ಷೆ ನಡೆಸಿ ಪದವಿ ನೀಡುವವರೆಗೂ ಎಲ್ಲಾ ಅಧಿಕಾರಗಳನ್ನೂ ಅಂದರೆ ವಿದ್ಯಾರ್ಥಿಗಳ ಪ್ರವೇಶ, ಅವರ ಬಗೆಗಿನ ಶಿಸ್ತುಕ್ರಮ, ಉಚ್ಚಾಟನೆ ಮತ್ತು ಉಪನ್ಯಾಸಕರುಗಳನ್ನು ನೇಮಿಸಿಕೊಳ್ಳುವ, ಬಡ್ತಿ ನೀಡುವ, ಕಡೆಗೆ ಉಚ್ಚಾಟಿಸುವ ಸರ್ವಾಧಿಕಾರವನ್ನು ಈ ಕಾಲೇಜುಗಳ ಅಧಿಕಾರ ವರ್ಗಕ್ಕೆ ವಹಿಸಿಕೊಡುವ ಮೂಲಕ ಅಟಾನಮಸ್ ಕಾಲೇಜುಗಳನ್ನು ಸ್ಥಾಪಿಸಲಾಗುವುದೆಂದು ನೂತನ ಶಿಕ್ಷಣ ನೀತಿ ಘೋಷಿಸುತ್ತದೆ. ಈಗಾಗಲೇ ರಾಷ್ಟ್ರದಲ್ಲಿ ಇಂತಹ 500 ಕಾಲೇಜುಗಳನ್ನು ಸ್ಥಾಪಿಸಲು ಯೋಜಿಸಲಾಗಿದೆ.

ಇಲ್ಲಿ 'ಅಟಾನಮಸ್ ಕಾಲೇಜು' ಎಂಬ ಹೆಸರು ಸಹ ತಪ್ಪು ದಾರಿಗೆಳೆಯುವಂಥಾದ್ದಾಗಿದೆ. ನಿಜವಾದ ಅಟಾನಮಿಯು ಶೈಕ್ಷಣಿಕ ಸಂಸ್ಥೆಗಳ ಆಡಳಿತ ವಿಚಾರಗಳಿಗೆ ಕೈ ಹಾಕದೆ ಶಿಕ್ಷಣಕ್ಕೆ ಸಂಬಂಧಪಟ್ಟಿರುವ ಎಲ್ಲ ವಿಚಾರಗಳು ಜನತಾಂತ್ರಿಕವಾಗಿ ಚುನಾಯಿಸಲ್ಪಟ್ಟ ವಿದ್ಯಾರ್ಥಿ, ಅಧ್ಯಾಪಕ, ಹಾಗೂ ಪೋಷಕರ ಚುನಾಯಿತ ಪ್ರತಿನಿಧಿಗಳ ಮೂಲಕ ನಿರ್ಧರಿಸಲ್ಪಡಬೇಕು ಮತ್ತು ಶಿಕ್ಷಣಕ್ಕೆ ಸಂಬಂಧಪಟ್ಟ ಸಂಪೂರ್ಣ ವೆಚ್ಚವನ್ನು ಸರ್ಕಾರವು ಭರಿಸಬೇಕು. ಹಣಕಾಸಿನ ಸಂಪೂರ್ಣ ಲೆಕ್ಕಕ್ಕಾಗಿ ಅವರು ಜನರಿಗೆ ಉತ್ತರಿಸಲು ಬಾಧ್ಯರು. ಆದರೆ ಇಂದು ಸರ್ಕಾರವು ಅನುಷ್ಠಾನಕ್ಕೆ ತರಲೆತ್ನಿಸುತ್ತಿರುವ ಈ ಅಟಾನಮಸ್ ಕಾಲೇಜುಗಳಲ್ಲಿ ಚುನಾಯಿತ ಪ್ರತಿನಿಧಿಗಳಿರುವುದಿಲ್ಲ-ಬದಲಿಗೆ ಸರ್ಕಾರವು ಅಧಿಕಾರ ವರ್ಗವನ್ನು ನೇಮಕ ಮಾಡುತ್ತದೆ ಹಾಗೂ ಯು. ಜಿ. ಸಿ. ಯ ನಿರ್ಧಾರಕ್ಕನುಗುಣವಾಗಿ ಪಠ್ಯಕ್ರಮ ಪ್ರಶ್ನೆ ಪತ್ರಿಕೆಗಳನ್ನು ತಯಾರಿಸಬೇಕು. ಮೌಲ್ಯಮಾಪನಗಳನ್ನು ಯೋಜಿಸಬೇಕು. ಅಂತಿಮವಾಗಿ ಸರ್ವ ಅಧಿಕಾರವು ಸರ್ಕಾರದ ಕೈಯಲ್ಲಿ ಕೇಂದ್ರೀಕೃತವಾಗಿರುತ್ತದೆ. ಹೆಸರಿಗೆ ಮಾತ್ರ 'ಅಟಾನಮಸ್ ಕಾಲೇಜು'ಗಳು ಎನಿಸಿಕೊಳ್ಳುತ್ತವೆ.

ಸದ್ಯದ 5 ವರ್ಷಗಳ ಕಾಲ ಈ ಕಾಲೇಜುಗಳಿಗೆ ಯು.ಜಿ.ಸಿ.ಯ ವತಿಯಿಂದ ಯಥೇ

ಚ್ಚು ಆರ್ಥಿಕ ಸಹಕಾರ ನೀಡಲಾಗುತ್ತದೆ. ತತ್ಫಲವಾಗಿ ಈ ಇತರೇ ಸಾಮಾನ್ಯ ಕಾಲೇಜುಗಳಿಗಿಂತ ಹೆಚ್ಚಿನ ಸೌಲಭ್ಯ ಪಡೆದು ಸೆಕೆಂಡರೀ ಹಂತದಲ್ಲಿ ಬಿತ್ತಿದ ತಾರತಮ್ಯದ ಬೀಜವು ಮೊಳಕೆಯೊಡೆದು ಈ ಹಂತದಲ್ಲಿ ಚಿಗುರಿ ಹೆಮ್ಮರವಾಗಿ ಬೆಳೆಯುತ್ತಿದೆ. ಇನ್ನೈದು ವರ್ಷಗಳ ನಂತರ ಈ ಕಾಲೇಜುಗಳು ತಮ್ಮದೇ ಸಂಪನ್ಮೂಲಗಳನ್ನು ಹೊಂದಿಸಿಕೊಳ್ಳಬೇಕೆಂದು ತಾಕೀತು ಮಾಡಿರುವುದರಿಂದ ಖಂಡಿತವಾಗಿ ಈ ಕಾಲೇಜುಗಳ ಅಧಿಕಾರ ವರ್ಗವು ಒಡನೆಯೇ ದುಬಾರಿ ಟ್ಯೂಷನ್ ಫೀ, ಕ್ಯಾಪಿಟೇಶನ್ ಫೀಗಳನ್ನು ವಿದ್ಯಾರ್ಥಿ ಪೋಷಕರ ಮೇಲೆ ಹೇರುತ್ತದೆ. ಹಾಗಾದ ಕೂಡಲೇ ಶಿಕ್ಷಣದ ವ್ಯಾಪಾರೀಕರಣವಾಗುತ್ತದೆ ಉನ್ನತ ಶಿಕ್ಷಣ ಶ್ರೀಮಂತರ ಸೊತ್ತಾಗುತ್ತದೆ. ಜಾತಿ, ಮತ. ಧರ್ಮ, ಆರ್ಥಿಕ ಸ್ಥಾನಮಾನಗಳ ಅಂತರವಿಲ್ಲದೆ, ಶಿಕ್ಷಣ ಪಡೆಯುವ ಅವಕಾಶ ಸಮಾನವಾಗಿರಬೇಕೆಂಬ ಜನತಾಂತ್ರಿಕ ಶಿಕ್ಷಣದ ಪರಿಕಲ್ಪನೆ ನಾಶವಾಗುತ್ತದೆ.

ಇನ್ನು ಈ ಅಟಾನಮಸ್ ಕಾಲೇಜುಗಳಲ್ಲಿ ಪರೀಕ್ಷೆಗಳು ವಿಶ್ವವಿದ್ಯಾಲಯದ ಮಟ್ಟದ್ದಾಗಿರದೆ, ಸ್ಥಳೀಯವಾಗಿ ನಡೆಯುವುದರಿಂದ ಸ್ವಜನಪಕ್ಷಪಾತ, ಭ್ರಷ್ಟಾಚಾರ, ವಿದ್ಯಾರ್ಥಿಗಳನ್ನು ಪರೀಕ್ಷೆಗಳಲ್ಲಿ ಬಲಿ ಹಾಕುವುದು ಇತ್ಯಾದಿ ವ್ಯವಹಾರಗಳು ನಿತ್ಯದ ನಿಯಮವಾಗಿ ಬಿಡುತ್ತವೆ. ತಿರುಚಿಯ ಅಟಾನಮಸ್ ಕಾಲೇಜಿನಲ್ಲಿ ನಡೆದ ಘಟನೆಯು ಹಾಗೂ ಮಧುರೈ ಕಾಲೇಜಿನ ಅನುಭವಗಳು ಇದಕ್ಕೆ ಸಾಕ್ಷಿಯಾಗಿವೆ. ಒಟ್ಟಿನಲ್ಲಿ ಈ ಕಾಲೇಜುಗಳು ಹೆಸರಿಗೆ ಮಾತ್ರ 'ಅಟಾನಮಸ್' ಎನಿಸಿಕೊಂಡು, ವಾಸ್ತವದಲ್ಲಿ ಸಂಪೂರ್ಣ ಸ್ವಾತಂತ್ರ್ಯವನ್ನು ಕಳೆದುಕೊಂಡು ಸರ್ಕಾರದಿಂದ ನೇಮಕಗೊಂಡ ಅಧಿಕಾರ ವರ್ಗದ ಗುಲಾಮಗಿರಿಯಲ್ಲಿ ದಿನ ನೂಕಬೇಕಾಗುತ್ತದೆ. ತಾ॥ 23-1-83 ರಂದು ಕೊಯಮತ್ತೂರಿನ ಗೀತಾಹಾಲ್‌ನಲ್ಲಿ ನಡೆದ ತಮಿಳುನಾಡು ವಿಶ್ವವಿದ್ಯಾಲಯದ ಕಾಲೇಜು ಉಪನ್ಯಾಸಕರ ಸಂಘದ ಸಮಾವೇಶದ ವರದಿಯು ಈ ವಿಶ್ಲೇಷಣೆಯನ್ನು ಸಾಬೀತು ಪಡಿಸುತ್ತದೆ.

ವಿದ್ಯಾರ್ಥಿಗಳ, ಉಪನ್ಯಾಸಕರ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಸಂಪೂರ್ಣವಾಗಿ ಕಬಳಿಸಿ ಸರ್ವ ಅಧಿಕಾರವನ್ನೂ ತನ್ನ ಕೈಯಲ್ಲಿಟ್ಟುಕೊಂಡು ತನ್ನ 'ಹೌದಣ್ಣ'ಗಳ ಮೂಲಕ ಕಾರ್ಯ ನಿರ್ವಹಿಸಲು ಯೋಜಿಸಿರುವ ಸರ್ಕಾರದ ಕುತಂತ್ರ ಕೇವಲ ಅಟಾನಮಸ್ ಕಾಲೇಜುಗಳಿಗೆ ಮಾತ್ರ ಸೀಮಿತವಾಗಿಲ್ಲ. ಅದು ಇಡೀ ಶಿಕ್ಷಣ ಕ್ಷೇತ್ರವನ್ನೇ ವ್ಯಾಪಿಸಲಿದೆ. ಶಿಸ್ತಿನ ಹೆಸರಿನಲ್ಲಿ ಇನ್ನು ಮುಂದೆ ವಿದ್ಯಾರ್ಥಿಗಳಿಗೆ ಹಾಗೂ ಅಧ್ಯಾಪಕರುಗಳಿಗೆ ನೀತಿ ಸಂಹಿತೆಯನ್ನು ರೂಪಿಸಲಾಗುವುದು. ಈ ನೀತಿ ಸಂಹಿತೆಯು "ಸಂಘಾನ ಬದ್ಧವಲ್ಲ, ಅಷ್ಟೇ ಅಲ್ಲ, ಯಾವುದೇ ವೈಯಕ್ತಿಕ ದಾಕ್ಷಿಣ್ಯಗಳಿಂದಾಗಲೀ, ಅಥವಾ ಯಾವುದೇ ಬೇರೊಂದು ವಿಧವಾದ ಸಂಘ ಸಂಸ್ಥೆಯ ಕರಾರುಗಳಿಗೂ

ಬದ್ಧವಾಗಿಲ್ಲ. ಈ ನೀತಿ ಸಂಹಿತೆಯನ್ನು ಪರಿಪಾಲಿಸದೇ ಇದ್ದಲ್ಲಿ ಅದು ಭಯ ಅಥವಾ ಅನುಗ್ರಹಗಳೆರಡರಿಂದಲೂ ಪ್ರಭಾವಿತವಾಗದಂತಹ ಕೆಲವು ಪರಿಣಾಮಗಳಿಗೆ ಅನಿವಾರ್ಯವಾಗಿ ದಾರಿಮಾಡಿಕೊಡಲೇಬೇಕು.'' ಅಂದರೆ ಒಂದು ವೇಳೆ ಸರ್ಕಾರವು ತನ್ನ ಕರ್ತವ್ಯವನ್ನು ಸರಿಯಾಗಿ ನಿರ್ವಹಿಸದೇ ಹೋದರೆ ವಿದ್ಯಾರ್ಥಿಗಳಾಗಲೀ, ಉಪನ್ಯಾಸಕರಾಗಲೀ ಅದರ ವಿರುದ್ಧ ಸೊಲ್ಲೆತ್ತಕೂಡದು. ಒಂದು ವೇಳೆ ಸರ್ಕಾರದ ವಿರುದ್ಧ ನಮ್ಮ ದೂರುಗಳೇನಾದರೂ ಇದ್ದರೆ ಅದಕ್ಕಾಗಿ ಸರ್ಕಾರದಿಂದ ನೇಮಕಗೊಂಡಿರುವ ರಾಜ್ಯ ಹಾಗೂ ಸಾಂಸ್ಥಿಕ ಮಟ್ಟದಲ್ಲಿ ವಿದ್ಯಾರ್ಥಿ ಹಾಗೂ ಅಧ್ಯಾಪಕರ 'Grievance Redressal Machinary' ಯನ್ನು ಸಂಪರ್ಕಿಸಬೇಕೆಂದು ಸೂಚಿಸಲಾಗಿದೆ.ಅಂದರೆ ಯಾರ ವಿರುದ್ಧ ನಾವು ದೂರಬೇಕೋ ಅವರ ಬಳಿಯೇ ನಾವು ನ್ಯಾಯವನ್ನು ಬೇಡಬೇಕೆಂದು ಸೂಚಿಸಲಾಗಿದೆ. ಇದಕ್ಕೆ ಹೊರತಾಗಿ ನಾವೇನಾದರೂ ಸರ್ಕಾರದ ಶಿಕ್ಷಣ ವಿರೋಧೀ ನೀತಿಯನ್ನು ಪ್ರತಿಭಟಿಸಿದ್ದೇ ಆದರೆ ಅದನ್ನು 'Non observance of code of conduct' ಎಂದು ಪರಿಗಣಿಸಿ ನಮ್ಮ ವಿರುದ್ಧ ಕ್ರಮ ತೆಗೆದುಕೊಳ್ಳಲಾಗುತ್ತದೆ. ಇದು ಇಷ್ಟಕ್ಕೆ ಮುಗಿಯಲಿಲ್ಲ. ಇದುವರೆಗೂ ಉಪನ್ಯಾಸಕರ, ಅಧ್ಯಾಪಕರ ಸೇವಾ ಹಿರಿತನದ ಆಧಾರದ ಮೇಲೆ ಮುಂಬಡ್ತಿಯನ್ನು ನೀಡಲಾಗುತ್ತಿತ್ತು. ಆದರೆ ಇನ್ನು ಮುಂದೆ ಅವರ ಸೇವಾ ಹಿರಿತನವನ್ನು ಕಡೆಗಣಿಸಿ ಮೌಲ್ಯಾಂಕನ (Evaluation) ಮಾಡಲಾಗುತ್ತದೆ. ಆ ಮೌಲ್ಯಾಂಕನಕ್ಕನುಗುಣವಾಗಿ ಮುಂಬಡ್ತಿಯನ್ನು ನೀಡಲಾಗುತ್ತದೆಯಂತೆ. ಹಾಗೂ ಅಗತ್ಯವಾದಲ್ಲಿ ಅಸಮರ್ಥ ಅಧಿಕಾರಿಗಳನ್ನು ತೆಗೆದುಹಾಕಿ ಆ ಜಾಗದಲ್ಲಿ ಸಮರ್ಥ ಅಧಿಕಾರಿಗಳನ್ನು ನೇಮಿಸಲಾಗುವುದೆಂದು ಹೇಳಲಾಗಿದೆ. ಇದರ ಅರ್ಥ ಸಂಪೂರ್ಣವಾಗಿ ಇಡೀ ಕಾಲೇಜಿನ ಸಿಬ್ಬಂದಿಯನ್ನು ತಮ್ಮ ಕಪಿ ಮುಷ್ಟಿಯಲ್ಲಿ ಇಟ್ಟುಕೊಳ್ಳುವುದಾಗಿದೆ. ವಿದ್ಯಾರ್ಥಿಗಳ ವಿರುದ್ಧ ಅವರ ಆಕ್ರೋಶವಂತೂ ಹೇಳತೀರದು. 'ಸಾಮಾನ್ಯವಾಗಿ ಎಲ್ಲ ವಿದ್ಯಾರ್ಥಿಗಳು ತಮ್ಮ ವಿದ್ಯಾಭ್ಯಾಸದಲ್ಲಿ ತೊಡಗಲು ಇಷ್ಟಪಡುತ್ತಾರೆ. ಆದರೆ ಕೆಲವೇ ವಿದ್ಯಾರ್ಥಿಗಳು ಶೈಕ್ಷಣಿಕ ವಾತಾವರಣವನ್ನು ಹದಗೆಡಿಸುತ್ತಾರೆ.' 'ವಿದ್ಯಾರ್ಥಿ ಸಂಘದ ಚುನಾವಣೆಗಳು ಹಣ ಬಲದ ಆಟವಾಗಿಬಿಟ್ಟಿವೆ.' ಸಮಾಜ ಘಾತುಕ ಶಕ್ತಿಗಳು ವಿದ್ಯಾರ್ಥಿ ನಿಲಯಗಳಲ್ಲಿ ಆಶ್ರಯ ಪಡೆದು ಶೈಕ್ಷಣಿಕ ವಾತಾವರಣವನ್ನು ಕಲುಷಿತಗೊಳಿಸುತ್ತಿವೆ ಎಂದೂ, ಆದ್ದರಿಂದ ಈ ಅನಿಷ್ಟಗಳನ್ನು ತಡೆಗಟ್ಟಲು ಯೂನಿವರ್ಸಿಟಿ ಹಾಗೂ ಕಾಲೇಜುಗಳು ವಿದ್ಯಾರ್ಥಿ ನೀತಿ ಸಂಹಿತೆಯನ್ನು ರೂಪಿಸುತ್ತವೆಯೆಂದೂ ಹಾಗೂ 'ಕಾನೂನಿನನ್ವಯ ಎಲ್ಲ ತಪ್ಪಿತಸ್ಥರನ್ನೂ ಶಿಕ್ಷಿಸಲಾಗುವುದು' ಮತ್ತು ಯಾವುದೇ ಕಾರಣಕ್ಕೆ ಅಶಿಸ್ತಿನ ವರ್ತನೆಯನ್ನು ಸಹಿಸಲಾಗದೆಂದು ಹೇಳಲಾಗಿದೆ. ಭಯೋತ್ಪಾದನೆ, ಬಲಾತ್ಕಾರ, ಹಿಂಸೆಗಳಿಗೆ ವಿಶ್ವವಿದ್ಯಾನಿಲಯಗಳಲ್ಲಿ ಸ್ಥಳವಿಲ್ಲವೆಂದು ಹೇಳಲಾಗಿದೆ.

ಈ ಹೇಳಿಕೆಗಳು ಮೇಲ್ನೋಟಕ್ಕೆ ಪ್ರಾಮಾಣಿಕ ಹಾಗೂ ಮುಗ್ಧ ಎನ್ನಿಸಿದರೂ ಒಂದು ಪ್ರಶ್ನೆ– ಇಂದು ಶೈಕ್ಷಣಿಕ ವಾತಾವರಣವನ್ನು ಹಾಳುಗೆಡುವುತ್ತಿರುವ ವಿದ್ಯಾರ್ಥಿಗಳು ಯಾರು ? ವಿದ್ಯಾರ್ಥಿ ಸಂಘದ ಚುನಾವಣೆಗಳು ಹಣಬಲದ ಆಟವಾಗಿದ್ದರೆ ಅದಕ್ಕಾರು ಹೊಣೆ ? ಸಮಾಜ ಘಾತುಕ ಶಕ್ತಿಗಳಿಗೆ ಆಶ್ರಯ ನೀಡುತ್ತಿರುವವರಾರು ? ಈ ಪ್ರಶ್ನೆಗೆ ಉತ್ತರ ಹುಡುಕಲು ಕಾಲೇಜು ಹಾಗೂ ಯೂನಿವರ್ಸಿಟಿ ಆವರಣಗಳಲ್ಲಿ ಇದುವರೆಗೂ ನಡೆದಿರುವ ಗಲಭೆ, ಗೂಂಡಾಗಿರಿಗಳ ಹಿಂದೆ ನಮ್ಮ ಸಂಸದೀಯ ರಾಜಕೀಯ ಪಕ್ಷಗಳ, ಅದರಲ್ಲೂ ವಿಶೇಷವಾಗಿ, ಅಧಿಕಾರಾರೂಢ ರಾಜಕೀಯ ಪಕ್ಷಗಳ ಕೈವಾಡವಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಈ ರಾಜಕೀಯ ಪಕ್ಷಗಳ ಮುಖಂಡರು ತಮ್ಮ ಸ್ವಾರ್ಥಕ್ಕಾಗಿ ವಿದ್ಯಾರ್ಥಿ ಯುವಜನತೆಯನ್ನುದ್ರೇಕಿಸಿ ಗಲಭೆಯೆಬ್ಬಿಸುತ್ತಾರೆ. ಅಂದರೆ ಇಂದು ನಮ್ಮ ಸಾಮಾಜಿಕ, ರಾಜಕೀಯ ವಾತಾವರಣವು ಕಲುಷಿತಗೊಳ್ಳಲು ಕಾರಣ ಸ್ವತಃ ಆಡಳಿತ ನಿರ್ವಾಹಕರೇ. ಅಧಿಕಾರದಲ್ಲಿರುವ ರಾಜಕಾರಣಿಗಳೇ. ಸಂಪೂರ್ಣವಾಗಿ ಮೌಲ್ಯಹೀನರಾಗಿದ್ದು ದುರಾಸೆ, ಸ್ವಾರ್ಥ, ವ್ಯಕ್ತಿವಾದ, ಭ್ರಷ್ಟತೆ, ಅವಕಾಶವಾದಿತನಗಳಲ್ಲಿ ಮುಳುಗಿದ್ದಾರೆ ತತ್ಪರಿಣಾಮವಾಗಿ ವಿದ್ಯಾರ್ಥಿ ಯುವಜನರಲ್ಲೂ ಸಹ ಅದೇ ಅಶಿಸ್ತು, ಸ್ವೇಚ್ಛಾಚಾರಗಳು ಕಂಡುಬರುತ್ತಿವೆ. ಆದ್ದರಿಂದ ಕಲುಷಿತ ಸಾಮಾಜಿಕ, ರಾಜಕೀಯ ವಾತಾವರಣವನ್ನು ಬದಲಿಸದೇ ಕೇವಲ 'ನೀತಿ ಸಂಹಿತೆ'ಗಳನ್ನು ರೂಪಿಸುವುದರಿಂದ ವಿದ್ಯಾರ್ಥಿ, ಯುವಜನರಲ್ಲಿ ಶಿಸ್ತನ್ನು ಬೆಳೆಸುವುದು ಅಸಾಧ್ಯ. ಆದರೆ ಅದಕ್ಕೆ ಬದಲಾಗಿ ಅಂತಹ ಒಂದು ಕ್ರಮದಿಂದ ವಿದ್ಯಾರ್ಥಿ, ಉಪನ್ಯಾಸಕರ ಜನತಾಂತ್ರಿಕ ಹಕ್ಕುಗಳು ಹರಣಗೊಂಡು ಸರ್ವ ಅಧಿಕಾರವು ಸರ್ಕಾರದ ಕೈಯಲ್ಲಿ ಕೇಂದ್ರೀಕೃತವಾಗುತ್ತದೆ. ತತ್ಪರಿಣಾಮವಾಗಿ ಸರ್ಕಾರವು ತನ್ನ ಜನವಿರೋಧಿ ನಿಲುವುಗಳನ್ನು ನಿರಾತಂಕವಾಗಿ ಅನುಷ್ಠಾನಕ್ಕೆ ತರಲು ಸಾಧ್ಯವಾಗುತ್ತದೆ.

ಈ ರೀತಿ ಶಿಸ್ತಿನ ಹೆಸರಿನಲ್ಲಿ ಜನತಾಂತ್ರಿಕ ಹಕ್ಕುಗಳನ್ನು ಸಂಪೂರ್ಣವಾಗಿ ಹರಣ ಮಾಡಿ, ನಂತರ ಮೌಲ್ಯಾಧಾರಿತ ಶಿಕ್ಷಣವನ್ನು ನೀಡಲಾಗುವುದೆಂದು ಘೋಷಿಸುತ್ತದೆ. ಭ್ರಷ್ಟಾತಿಭ್ರಷ್ಟ ರಾಜಕಾರಣಿಗಳು ಮೌಲ್ಯ–ಸಂಸ್ಕೃತಿಯ ಬಗ್ಗೆ ಮಾತನಾಡುವುದು ಇತ್ತೀಚೆಗೆ ಪರಿಪಾಠವಾಗಿದೆ. ಇಂದು ಸಮಾಜದಲ್ಲಿ ಪಾರ್ಥೇನಿಯಂ ಕಳೆಯಂತೆ ನಿರಂತರವಾಗಿ ಅಡೆತಡೆಗಳಿಲ್ಲದೆ ಹರಡುತ್ತಿರುವ ಅಶ್ಲೀಲತೆಯನ್ನು ತಡೆಗಟ್ಟಲು ಯಾವ ಕ್ರಮಗಳನ್ನೂ ತೆಗೆದುಕೊಳ್ಳದೆ, ಸ್ವತಃ ಸರ್ಕಾರಿ ನಿಯಂತ್ರಣದ ದೂರದರ್ಶನದಲ್ಲಿಯೂ ಸಹ 'ಮಧ್ಯ ರಾತ್ರಿ ವಯಸ್ಕರ ಸಿನಿಮಾ'ಗಳನ್ನು ಪ್ರದರ್ಶಿಸಲು ಹೊರಟಿದ್ದ ಈ ಜನ ಇಂದು 'ಮೌಲ್ಯಾಧರಿತ ಶಿಕ್ಷಣದ ಬಗ್ಗೆ ಮಾತನಾಡುತ್ತಿರುವುದು ಅವರ ಪ್ರಾಮಾಣಿಕತೆಯನ್ನು ಪ್ರಶ್ನಿಸುವಂತಿದೆ. ಹರಡುತ್ತಿರುವ ಅಶ್ಲೀಲ ಸಿನಿಮಾ ಸಾಹಿತ್ಯಗಳನ್ನು ತಡೆಗಟ್ಟದೆ, ಕೇವಲ ಒಂದು ಘಂಟೆಯ ಕಾಲ ಸಂಸ್ಕೃತಿಯ ಬಗ್ಗೆ

ಭಾಷಣ ಬಿಗಿದರೆ, ವಿದ್ಯಾರ್ಥಿಗಳು ಸುಸಂಸ್ಕೃತರಾಗಲು ಸಾಧ್ಯವೇ ? ಇನ್ನು ಇವರು ನೀಡಲು ಹೊರಟಿರುವ 'ಸಂಸ್ಕೃತಿ'ಯು ಸಹ 'ಸಂಸ್ಕೃತಿ'ಯ ಅಣಕವಾಗಿದೆ.

ಒಟ್ಟಿನಲ್ಲಿ 'ನೂತನ ಶಿಕ್ಷಣ ನೀತಿ'ಯು ಶಿಕ್ಷಣ ವಿರೋಧಿ ನೀತಿಯಾಗಿದೆ. ಇಂತಹ ಪ್ರತಿಗಾಮಿ ಶಿಕ್ಷಣ ನೀತಿಯನ್ನು ರೂಪಿಸಿರುವ ಸರ್ಕಾರದ ಉದ್ದೇಶವೇನೆಂಬುದನ್ನು ಅರಿಯಬೇಕಾದರೆ ಮಾರ್ಕ್ಸ್‌ವಾದಿ ಚಿಂತಕರಾದ ಶ್ರೀ ಶಿಬ್‌ದಾಸ ಘೋಷರ ಚಿಂತನೆಗಳು ನಮಗಿಲ್ಲಿ ಪ್ರಸ್ತುತವಾಗುತ್ತವೆ. ಅವರು, "ಶಿಕ್ಷಣ ಪದ್ಧತಿಯು ನಿರ್ದಿಷ್ಟ ಆರ್ಥಿಕ ಪದ್ಧತಿಯೊಂದರ ಮೇಲೆ ರಚನೆಯಾಗಿರುವುದರಿಂದ ಅದರ ಪಾತ್ರ ತಟಸ್ಥ ಅಥವಾ ವರ್ಗಾತೀತವಾಗಿರುವುದಿಲ್ಲ ಹಾಗೂ ಆಳುವ ವರ್ಗಕ್ಕೆ ಸಹಕಾರಿಯಾಗಿರದೇ ಇರಲು ಸಾಧ್ಯವಿಲ್ಲ....... ಆದ್ದರಿಂದ ನಮ್ಮ ಸಮಾಜದಂತಹ ಬಂಡವಾಳ ಶಾಹಿ ಸಮಾಜದಲ್ಲಿ, ಈಗಾಗಲೇ ಆಕಾರ ತೆಗೆದುಕೊಂಡು ಬಲಗೊಂಡಿರುವ (ಆಕಾರ ತೆಗೆದುಕೊಳ್ಳುತ್ತಿರುವ ಬಲಗೊಳ್ಳುತ್ತಿರುವ) ಶೈಕ್ಷಣಿಕ ಅಭಿಪ್ರಾಯಗಳು, ಶಿಕ್ಷಣ ಪದ್ಧತಿ ಮತ್ತು ಶೈಕ್ಷಣಿಕ ಸಂಸ್ಥೆಗಳು ಶೋಷಿತ ಜನತೆಯ ಯೋಜನಾ ವಿಧಾನ ಮತ್ತು ಕ್ರಾಂತಿಕಾರೀ ವೈಚಾರಿಕತೆಗಳ ಮೇಲೆ ದಾಳಿ ನಡೆಸಲು ಆಳುವ ಬಂಡವಾಳ ಶಾಹೀ ವರ್ಗದ ಕೈಯಲ್ಲಿರುವ ನಿರ್ದಿಷ್ಟ ವರ್ಗ ಅಸ್ತ್ರಗಳಾಗಿವೆ" ಎಂದು ಹೇಳುತ್ತಾರೆ. 'ಶ್ರೀ ಶಿಬದಾಸಘೋಷ್' ರವರ ಈ ಚಿಂತನೆಗಳ ಹಿನ್ನೆಲೆಯಲ್ಲಿ ನಾವು ವಿಶ್ಲೇಷಣೆ ಮಾಡಿದರೆ ನಮಗೆ ತಿಳಿದು ಬರುವುದೇನೆಂದರೆ ಇಂದು ನಮ್ಮ ರಾಷ್ಟ್ರದ ಆಳುವ ಬಂಡವಾಳಶಾಹೀ ವರ್ಗವು ಆಂತರಿಕ ಮಾರುಕಟ್ಟೆಯ ಕುಸಿತದಿಂದಾಗಿ ಹಾಗೂ ಬಾಹ್ಯ ಮಾರುಕಟ್ಟೆಯ ತೀವ್ರ ಸ್ಪರ್ಧೆಯನ್ನು ಎದುರಿಸಲಾರದೆ ಸಂಕಟದಲ್ಲಿ ಮುಳುಗಿದೆ. ತತ್ಪರಿಣಾಮವಾಗಿ ಉತ್ಪಾದನೆಯು ಸಂಪೂರ್ಣವಾಗಿ ಕುಸಿದು. ನಿರುದ್ಯೋಗ ಸಮಸ್ಯೆಯು ಉಲ್ಬಣಗೊಳ್ಳುತ್ತಿದೆ. ಆದರೆ ಬಂಡವಾಳ ಶಾಹೀ ವರ್ಗವು ಸಮಸ್ಯೆಯನ್ನು ಪರಿಹರಿಸಲಾಗದ ಶೋಚನೀಯ ಸ್ಥಿತಿಯಲ್ಲಿದ್ದು, ವಿದ್ಯಾವಂತ ನಿರುದ್ಯೋಗಿಗಳೆಂದರೆ ತೀವ್ರವಾಗಿ ಭಯ ಪಡುತ್ತದೆ. ಆದ್ದರಿಂದ ರಾಷ್ಟ್ರದ ಸಾಮಾನ್ಯ ಜನತೆಗೆ ಶಿಕ್ಷಣ ನೀಡಲೂ ಇಷ್ಟಪಡುವುದಿಲ್ಲ. ಆದರೆ ನೇರವಾಗಿ ಶಿಕ್ಷಣವನ್ನು ನಿರಾಕರಿಸಲಸಾಧ್ಯವಾದ್ದರಿಂದ, 'ಟಾಲ್‌ಸ್ಟಾಯ್'ರವರು ಹೇಳುವಂತೆ ನೈಜ ಕಾಳಜಿ ಇರುವವರಂತೆ ನಟಿಸುತ್ತದೆ. ಅವರಿಗೆ ಬೇಕಿರುವುದು ದುಡಿಯುವ ಕೈಗಳು ಮಾತ್ರ, ಯೋಜಿಸಲು ಸಮರ್ಥವಾದ ಮೆದುಳಲ್ಲ. ಆದ್ದರಿಂದ ತಾಂತ್ರಿಕ ಜ್ಞಾನದ ಹೊರತಾಗಿ ಮೂಲಭೂತ ವೈಜ್ಞಾನಿಕ, ಸೈದ್ಧಾಂತಿಕ ವಿಚಾರಗಳನ್ನು ಅಸಂಬದ್ಧವೆಂದು ಕರೆದು ವಿದ್ಯಾರ್ಥಿಯಲ್ಲಿ ವೈಜ್ಞಾನಿಕ ಚಿಂತನೆಯನ್ನು ಬೆಳೆಸಲಾರದ ವೃತ್ತಿಪರ ಶಿಕ್ಷಣ, ಪದವಿ ಉದ್ಯೋಗ ನಿಸ್ಸಂಬಂಧೀಕರಣ, ಅನೌಪಚಾರಿಕ ಶಿಕ್ಷಣಗಳನ್ನು ನೀಡುವ ಮೂಲಕ ಸಂಪೂರ್ಣವಾಗಿ ಅಜ್ಞಾನದಲ್ಲಿಡಲು ಯತ್ನಿಸುತ್ತದೆ. ಆದರೆ ಅದೇ ಸಂದರ್ಭದಲ್ಲಿ ತಮ್ಮ ಉತ್ಪಾದನಾ ಸಲಕರಣೆಗಳ ನವೀಕರಣಕ್ಕೆ ಅಗತ್ಯ

ನವ ತಂತ್ರಜ್ಞಾನವನ್ನು ಬೆಳೆಸಬೇಕಾದ ಅನಿವಾರ್ಯತೆಯೂ ಅವರನ್ನು ಕಾಡುತ್ತಿದೆ. ಏಕೆಂದರೆ ತಂತ್ರಜ್ಞಾನವನ್ನು ನವೀಕರಣಗೊಳಿಸಿದರೆ ಉತ್ಪಾದನಾ ವೆಚ್ಚವು ಕಡಿಮೆಯಾಗುತ್ತದೆ. ಮತ್ತು ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಸಾಮ್ರಾಜ್ಯಶಾಹಿಗಳೊಂದಿಗೆ ಸ್ಪರ್ಧಿಸಲು, ಯೋಗ್ಯ ಸರಕನ್ನು ಉತ್ಪಾದಿಸಲು ಸಾಧ್ಯವಾಗುತ್ತದೆ. ಆದ್ದರಿಂದ, ಹಾಗೂ ನಿರ್ವಹಣಾ ಕಾರ್ಯವನ್ನು ನಡೆಸಲು ಮತ್ತು ಮುಂಬರುವ ದಶಕಗಳ ಅಧಿಕಾರಶಾಹಿಗಳನ್ನು ಸೃಷ್ಟಿಸಲು ಕೆಲವೇ ಮಂದಿಗೆ ಶಿಕ್ಷಣವನ್ನು ನೀಡಬೇಬೇಕಾದ ಸಂದಿಗ್ಧ ಸ್ಥಿತಿಯಲ್ಲಿ ಬಂಡವಾಳಶಾಹೀ ವರ್ಗವು ಸಿಲುಕಿಕೊಂಡಿರುವುದರಿಂದ ನವೋದಯ ಶಾಲಾ ಹಾಗೂ ಅಟಾನಮಸ್ ಕಾಲೇಜುಗಳಂತಹ 'Centres of excellence' ಗಳನ್ನು ತೆರೆಯುತ್ತಾರೆ. ಆದರೆ ಈ ಕೆಲವೇ ಮಂದಿ ಶಿಕ್ಷಣ ಪಡೆದವರೂ ಸಹ ಕೇವಲ ಯಂತ್ರಗಳಂತೆ ನಿರ್ಜೀವವಾಗಿ ಯಾವ ಪ್ರತಿಭಟನೆಯಿಲ್ಲದೆ ಕೆಲಸ ಮುಂದುವರಿಸಿಕೊಂಡು ಹೋಗಬೇಕು ಎಂಬ ಉದ್ದೇಶದಿಂದ ಅವರ ಎಲ್ಲ ಜನತಾಂತ್ರಿಕ ಹಕ್ಕುಗಳನ್ನು ಹರಣಗೊಳಿಸಿ ಸರ್ವ ಅಧಿಕಾರವನ್ನೂ ತಮ್ಮ ಹಸ್ತದಲ್ಲಿ ಕೇಂದ್ರೀಕೃತಗೊಳಿಸಲಾಗಿದೆ. ಹಾಗೂ ಸುಸಂಸ್ಕೃತ ಮನುಷ್ಯನು ಎಂದಾದರೊಂದು ದಿನ ಪ್ರತಿಭಟನೆಯ ಧ್ವನಿಯನ್ನು ಎತ್ತುತ್ತಾನೆಂಬ ಐತಿಹಾಸಿಕ ಸತ್ಯವನ್ನು ಅರಿತಿರುವ ಅವರು ವಿದ್ಯಾರ್ಥಿ, ಯುವಜನರಲ್ಲಿ ಜನತಾಂತ್ರಿಕ, ಧರ್ಮಾತೀತ ಮೌಲ್ಯಗಳನ್ನು ನೀಡಲು ಹೆದರುತ್ತಾರೆ. ಆದ್ದರಿಂದ ಅವರನ್ನು ಮೌಢ್ಯದಲ್ಲಿಡಲು ಸಮರ್ಥವಾದ ಸಾಂಪ್ರದಾಯಿಕ ಮತ್ತು ಧಾರ್ಮಿಕ ಮೌಲ್ಯಗಳನ್ನು ನೀಡಲು ಯೋಜಿಸಿದ್ದಾರೆ. ಆ ಮೂಲಕ ಶ್ರೀ ಶಿಬದಾಸ್ ಘೋಷರು ವಿಶ್ಲೇಷಿಸುವಂತೆ ವಿಜ್ಞಾನದ ಕೇವಲ ತಾಂತ್ರಿಕ ವಿಷಯಗಳನ್ನು ಮತ್ತು ಹಳೆಯ ಕಂದಾಚಾರದ ಧಾರ್ಮಿಕ ವಿಷಯಗಳ ವಿಚಿತ್ರ ಸಂಮಿಶ್ರಣ ರೂಪದ ಫ್ಯಾಸಿವಾದಿ ಶಿಕ್ಷಣವನ್ನು ನೀಡಲು ಯೋಜಿಸಲಾಗಿದೆ. ಏಕೆಂದರೆ ಫ್ಯಾಸಿಸ್ಟ್ ಶಿಕ್ಷಣವು ಮನುಷ್ಯನನ್ನು ಮೌಲ್ಯಹೀನನನ್ನಾಗಿ ಮಾಡುತ್ತದೆ. ಹಾಗೂ ಮನುಷ್ಯನನ್ನು ಪ್ರಾಣಿಗಳ ಮಟ್ಟಕ್ಕಿಳಿಸುತ್ತದೆ ಪ್ರಾಣಿ ರೂಪದ, ಸಂಸ್ಕೃತಿ ಹೀನ ಮನುಷ್ಯನು ಆಳುವ ಬಂಡವಾಳ ಶಾಹೀ ವರ್ಗವನ್ನು ವಿರೋಧಿಸಲಾರನಾದ್ದರಿಂದ ಅಂತಹ ಶಿಕ್ಷಣವನ್ನು ಯೋಜಿಸಲಾಗಿದೆ. ಹಿಂದೆ ಹಿಟ್ಲರ್, ಮುಸೋಲಿನಿಗಳು ತಮ್ಮ ದೇಶದಲ್ಲಿ ಇಂತಹ ಶಿಕ್ಷಣ ಪದ್ಧತಿಯನ್ನು ಜಾರಿಗೆ ತಂದಿದ್ದರೆಂಬುದನ್ನು ನಾವಿಲ್ಲಿ ಗುರುತಿಸಬಹುದು.

ಸರ್ಕಾರ ಒಂದು ವಿಷಯವನ್ನು ಗಣನೆಗೆ ತೆಗೆದುಕೊಂಡಿಲ್ಲ. ಅದೆಂದರೆ ಜಾಗೃತ ಜನತೆಯ ಅದಮ್ಯ ಸುಪ್ತ ಚೇತನ; ನಿಜ, ಕೆಲವು ಕಾಲ ಜನತೆಯನ್ನು ಮರುಳುಗೊಳಿಸಬಹುದು ಅಥವಾ ತುಳಿಯಲೂ ಬಹುದು. ಆದರೆ ವಿಶ್ವದ ಇತಿಹಾಸ ಒಂದು ಸತ್ಯವನ್ನು ಬಾರಿ ಬಾರಿಗೂ ಸಾರುತ್ತದೆ, "ಮುಗ್ಧರಾಗಿ, ಅಸಹಾಯಕರಾಗಿ ಕಂಡು ಬಂದ

ಜನತೆಯೇ ಮರಗಟ್ಟಿ ನಿಂತ ಚರಿತ್ರೆಯ ಕಾಲುಗಳಿಗೆ ಚಲನೆ ಒದಗಿಸುತ್ತದೆ, ತುಳಿಯುವ ಕಾಲುಗಳನ್ನು ಮೆಟ್ಟಿ ನಿಲ್ಲುತ್ತದೆ.'' ಇದಕ್ಕೆ ನಮ್ಮ ಭಾರತವೂ ಹೊರತಲ್ಲ.

ಆಧಾರ :

1. ಶಿಕ್ಷಣದ ಸವಾಲು-ನೀತಿ ದರ್ಶನ, (ಭಾರತ ಸರ್ಕಾರ ಶಿಕ್ಷಣ ಸಚಿವಾಲಯ ಪ್ರಕಟಿತ)
2. National Policy on Education - 1986
3. N. E. P,—1986 and Programme of Action
4. Resource Material Part—1 (General)
5. The New Education Policy- An onslaught on Education, Culture and civilisation.
6. Students' Pledge ; Organ of All India Democratic Students' Organisation-Published from Calcutta.
7. ವಿದ್ಯಾರ್ಥಿ ಸಂಕಲ್ಪ : ಎ ಐ. ಡಿ. ಎಸ್. ಓ. ಮುಖಪತ್ರಿಕೆ.
8 ನಮ್ಮ ಶೈಕ್ಷಣಿಕ ಸಾಂಸ್ಕೃತಿಕ ಸಮಸ್ಯೆಗಳಿಗೆ ಒಂದು ವೈಜ್ಞಾನಿಕ ದೃಷ್ಟಿಕೋನ. ಲೇ. ಶ್ರೀ ಶಿಬದಾಸ್ ಘೋಷ್.

ಹೊಸ ಓದು

ಮೂರು ಮಹಾಕಾವ್ಯಗಳು

ಲೇ : ಎಚ್. ಆರ್. ಅಮರನಾಥ್
ಪ್ರ : ಸಮಾಜ ಪುಸ್ತಕಾಲಯ
ಧಾರವಾಡ.
ಬೆಲೆ : 12–50 ರೂ.

ನಮ್ಮದೇ ಶತಮಾನದ ಮಹಾನ್ ಸಂಪಾದಕರಾದ ವಿ. ಎಸ್. ಸುಕ್ಥನ್‌ಕರ್ ವ್ಯಾಸಭಾರತವನ್ನು ನಮ್ಮ ''Collective Consciousness'' ನ ಅಭಿವ್ಯಕ್ತಿ ಎಂದು ಕರೆದರು. ಈ ಸಮಷ್ಟಿ ಪ್ರಜ್ಞೆಯಲ್ಲಿದ್ದುಕೊಂಡು ಅವಿಚಲಿತನಾಗಿ ಸುತ್ತಲಿನ ತುಮುಲವನ್ನು ವೀಕ್ಷಿಸಬಲ್ಲವನು ಋಷಿ. ಸಮಗ್ರ ಗ್ರಹಿಕೆಯಿಂದ ಬರೆಯಬಲ್ಲವನಾಗದೆ ಅನ್ಯಥಾ ಆದರೆ ಅಂಥ ಕೃತಿ ಅಷ್ಟರಮಟ್ಟಿಗೆ ಅಸಮಗ್ರವಾದೀತು. ಸಮಗ್ರತೆಯೇ ಅಪೇಕ್ಷಣೀಯವಾದ್ದರಿಂದ ''ಋಷಿಯಲ್ಲದವನು ಕವಿಯಾಗಲಾರ'' ಎಂಬ ಮಾತು

ಮಹಾಕಾವ್ಯಕ್ಕೆ ವಸ್ತುವಾಗಬಲ್ಲವು ಮಹಾನ್ ಘಟನೆಗಳು. ಇಂಥ ಘಟನೆಗಳು ವಾಸ್ತವವಾಗಿ ಜರುಗಿದ ಕಾಲ ಈಗ ಮುಗಿದಾಗಿದೆ. ಉದಾಹರಣೆಗೆ ಇಸ್ರೇಲಿಗರ ಎಕ್ಸೊಡಸ್. ಅಲೆಗ್ಸಾಂಡರ್‌ನಂತಹ ವಿಜೇತರ ಕಾಲವೂ ಇಲ್ಲ ಈಗ. ಹೀಗಾಗಿ ಮಹಾಕಾವ್ಯದ ಕಾಲ ಮುಗಿಯಿತೇ ಎಂಬ ಶಂಕೆ

''ಇಪ್ಪತ್ತನೆಯ ಶತಮಾನದಲ್ಲಿ ಮಹಾಕಾವ್ಯ ಬರೆಯುವುದು ಸಾಧ್ಯವೇ ? ಎಂಬ ಪ್ರಶ್ನೆ ಹುಟ್ಟಿಕೊಂಡ ನಂತರ ಕನ್ನಡದಲ್ಲಿ ಎರಡನೆಯ ಮಹಾಕಾವ್ಯ ಬಂದಿದೆ.'' ಅದೇ ವಿ.ಕೃ. ಗೋಕಾಕರ ''ಭಾರತ ಸಿಂಧು ರಶ್ಮಿ''. ಮೊದಲನೆಯದು ''ಶ್ರೀ ರಾಮಾಯಣ ದರ್ಶನಂ''.

''ಕನ್ನಡಕ್ಕೆ ಮಹಾಕಾವ್ಯದ ಯೋಗ ಇನ್ನೂ ಮುಗಿದಿಲ್ಲ ಎಂಬುದನ್ನು ನಿರ್ವಿವಾದವಾಗಿ ಒಪ್ಪಿಕೊಳ್ಳುವಂತೆ'' ಬಂದ ಮಹಾಕಾವ್ಯ ''ಭವ್ಯಮಾನವ''. ಇದರ ಕರ್ತೃ ಸಂ. ಶಿ. ಭೂಸನೂರ ಮಠ ಅವರು.

ಹಳಿಯಾಳ-ಕಾರವಾರ ಜಿಲ್ಲೆಯ ಸರ್ಕಾರಿ ಪದವಿ ಮಹಾವಿದ್ಯಾಲಯದಲ್ಲಿ ಇಂಗ್ಲೀಷ್ ಅಧ್ಯಾಪಕರಾಗಿರುವ ಎಚ್. ಆರ್. ಅಮರನಾಥ ಅವರು ಈ ಮೂರು ಮಹಾಕಾವ್ಯ ಗಳ ಬಗ್ಗೆ ಬರೆದಿರುವ ವಿಮರ್ಶೆಯು ಧಾರವಾಡದ ಸಮಾಜ ಪುಸ್ತಕಾಲಯದ ಪ್ರಕಟಣೆ.

"ಭಾರತ ಸಿಂಧು ರಶ್ಮಿ, ಭವ್ಯಮಾನವಗಳ ಕುರಿತಾದ ಲೇಖನಗಳು ಪರಿಚಯಾತ್ಮಕ ವಾಗಿವೆ." "ಈ ಲೇಖನಗಳು ಆ ಎರಡು ಕೃತಿಗಳು ಪ್ರಕಟವಾದ ಮೇಲೆ ಬಂದ ಮೊದಲ ಲೇಖನ"ಗಳೆಂದು ಲೇಖಕರ ತಿಳುವಳಿಕೆ. ಭಾರತ ಸಿಂಧು ರಶ್ಮಿಯ ವಿಷಯದಲ್ಲಿ ಅದು ನಿಜವೂ ಅಹುದು. "ಓದುಗರು ತಾವಾಗಿಯೇ ಗುರುತಿಸಲಾಗದಂಥ" ಕೆಲವು ಭಾಗಗಳನ್ನು ಅಮರನಾಥರ ಲೇಖನ ಆಯ್ದು ತೋರುತ್ತದೆಂಬ ಬಗ್ಗೆ ಗೋಕಾಕರ ಪತ್ರ ತಿಳಿಸುತ್ತದೆ.

"ಭಾರತ ಸಿಂಧು ರಶ್ಮಿ"ಯ ಆಕರ ಋಗ್ವೇದ. ಅದರ ಹವ್ಯಾಸಿ ಅಧ್ಯಯನ ಪರಂಪರೆ ಮಹರ್ಷಿ ಅರವಿಂದರ ಮೂಲಕ ಗೋಕಾಕರಿಗೆ ಲಭ್ಯವಾದುದು. 24000 ಪಂಕ್ತಿಗಳ ಮಹಾಕಾವ್ಯದಲ್ಲಿ ಗೋಕಾಕರು ಕ್ರಿ. ಪೂ. ಸುಮಾರು 2250 ರ ಸಿಂಧೂ ತೀರದ ಜೀವನ, ಅದರ ದರ್ಶನವನ್ನು ನೀಡಲು ಯತ್ನಿಸಿದ್ದಾರೆ.

ಅನುಭಾವಿ ಮಹಾದೇವಿಯಕ್ಕನ ಮೂಲಕ ವೈಚಾರಿಕತೆಯನ್ನು ಮೀರಿದ ಅನನ್ಯವಾದ ಜೀವನ ಶ್ರದ್ಧೆ ಲೋಕಾಭಿಮುಖವಾಗಿ ಹರಿಯುವಂತೆ ಭೂಸನೂರು ಮಠ ಅವರು ಚಿತ್ರಿಸಿದ್ದಾರೆಂಬುದು ಅಮರನಾಥರ ಮತ.

"ಶ್ರೀ ರಾಮಾಯಣ ದರ್ಶನದ ಒಂದು ಆಯಾಮದ" ಬಗ್ಗೆ ಶ್ರೀ ಅಮರನಾಥರ ಮೂರನೆಯ ಲೇಖನ. ಅದು ಆ ಮಹಾಕಾವ್ಯದ ಸ್ವಪ್ನವಿನ್ಯಾಸ- ವಿಶೇಷವಾಗಿ "ದಶಾನನ ಸ್ವಪ್ನಸಿದ್ಧಿ"ಯ ವಿವೇಚನೆಗೆ ಮೀಸಲಾಗಿದೆ.

"ಮಹಾಕಾವ್ಯದ ನೆಲೆ"ಯ ಬಗೆಗಿನ ನಾಲ್ಕನೆಯ ಲೇಖನ ಮೇಲಿನ ಮೂರೂ ಮಹಾಕಾವ್ಯಗಳಲ್ಲಿ "ಹೃದಯ ಪರಿವರ್ತನೆ"ಯ ಸಾಮಾನ್ಯ ಅಂಶವನ್ನು ಗ್ರಹಿಸು ತ್ತದೆ. "ರಾಮಾಯಣದ ರಾವಣ ಭಾರತ ಸಿಂಧು ರಶ್ಮಿಯ ತ್ರಿಶಂಕು ಹಾಗೂ ಭವ್ಯ ಮಾನವದ ಕೌಶಿಕ ಇವರು ಕೆಡುಕಿನಿಂದ ಒಳಿತಿನತ್ತ ಹೊರಳುತ್ತಾರೆ"

ಶ್ರೀ ಅಮರನಾಥರು "ಇಂಥ" ಕಾಲದಲ್ಲಿಯೂ ಮಹಾಕಾವ್ಯಗಳಂಥ ಗಂಭೀರ ಅಧ್ಯ ಯನದಲ್ಲಿ ಸಾಕಷ್ಟು ಕೆಲಸ ಮಾಡಿರುವುದು ತುಂಬ ಸಂತೋಷ ಕೊಡುವಂಥ ಸಂಗತಿ.

"ಮಹಾಕಾವ್ಯಗಳ ಬಗ್ಗೆ ಅಭಿರುಚಿ ಹುಟ್ಟಿಸಲು ಅಗತ್ಯವಾಗಿ" ಬೇಕೆನಿಸುವಂಥ ಈ ಕೃತಿಯ ಉದ್ದೇಶ ಸಫಲವಾಗಲೆಂಬುದು ನಮ್ಮ ಹಾರೈಕೆ.

ವಿಮರ್ಶಕನ ಸಾಮರ್ಥ್ಯದ ಒಂದು ಅಳತೆಗೋಲು ಆತನ ಆನಂದಾನುಭವದ ಪ್ರಮಾಣ. ಪರೋಕ್ಷಪ್ರಿಯರಾದ ದೇವತೆಗಳು–ಸಂದರ್ಭಗಳನ್ನು ಜೋಡಿಸಿ ಕ್ಷಣ ಕ್ಷಣದ ವಿಮರ್ಶೆ ಹಾಗೂ ಸಮಗ್ರ ವಿಮರ್ಶೆಯನ್ನು ಸಕೃತ್ತಾಗಿಯೇ ನೆರವೇರಿಸುವ - ವಿನೋದಿಗಳು ಶ್ರೀ ಅಮರನಾಥರ ಕೃತಿ ತುಂಬ ಮಹತ್ವಾಕಾಂಕ್ಷೆಯ ಕೃತಿ ಎಂದು ತೋರಿದರೂ, ಅವರು ಮಹಾಕಾವ್ಯದ ತಮ್ಮ ಅಭ್ಯಾಸದಿಂದ ಸ್ವಲ್ಪ ದಣಿದಿರುವಂತೆ ಕಾಣುತ್ತಾರೆ. ಆದ್ದರಿಂದಲೇ ಭಾರತ ಸಿಂಧು ರಶ್ಮಿ ಕುರಿತಾದ ಲೇಖನದ ಕೊನೆಯ ಪ್ಯಾರಾಗ್ರಾಫಿನಲ್ಲಿ ಗೋಕಾಕ "ವ್ಯಕ್ತಿ"ಯ ಬಗ್ಗೆ ಅಸ್ಪಷ್ಟರಾದಂತೆ ಕಾಣುತ್ತಾರೆ.

ಕೃತಿಗಳ ರಚನಾ ವಿಶ್ಲೇಷಣೆ (Structural Analysis) ವಿಧಾನದಲ್ಲಿ ಬರೆದಿರುವ ಮಹಾಕಾವ್ಯಗಳ ಬಗೆಗಿನ – ಲೇಖನಗಳು ಅಭಿರುಚಿ ವರ್ಧನೆಯ ಕಾರ್ಯ ಮಾಡಬಲ್ಲವೆನಿಸುತ್ತವೆ. ಆದರೆ ವಿಮರ್ಶೆಯ ಮೂಲಕ ಕವಿಯನ್ನು ಸಮೀಪಿಸಬೇಕೆಂಬ ಅಭ್ಯಾಸಿ ಕವಿಯಂತಹ ಋಷಿಯೇ ಆಗಬೇಕಾದೀತು.

"ಮಹಾಕಾವ್ಯವೆಂಬ ಪದ ಗುಣವಾಚಕವಾದದ್ದು. ಅದರ ಆಳ, ಅಗಲ, ಜೀವನ ದೃಷ್ಟಿಯಿಂದಾಗಿ" ಇಂಥದಕ್ಕಾಗಿ ಈಗಿನ ಮಹಾಕಾವ್ಯಗಳು ಪ್ರಾಚೀನ ಘಟನೆಗಳಲ್ಲಿಯೇ ವಸ್ತುವನ್ನರಸುತ್ತವೆ. ತಮ್ಮ ದೃಷ್ಟಿಗೆ ಹೊಂದುವ ಮಾರ್ಪಾಟುಗಳನ್ನು ಅವುಗಳಲ್ಲಿ ಕಾಣುವುದು ಅತಿ ಸಹಜ. ಎಂದರೆ ಮೂಲ ಘಟನೆಗಳು ಹೀಗಿದ್ದರಾಗಿತ್ತು ಎಂಬ ಆಶಯವನ್ನು ನಾವಿಲ್ಲಿ ಗುರುತಿಸಬೇಕಾಗುತ್ತದೆ.

"Highest Literature is the fruit of Study and meditation...." ಎನ್ನುತ್ತಾರೆ ಡಾ|| ಎಸ್. ರಾಧಾಕೃಷ್ಣನ್. ಈ ಅತ್ಯುತ್ತಮ ಸಾಹಿತ್ಯದ ಫಲವೆಂದರೆ ಓದುಗನಲ್ಲಿ ಅದು ಬಿಂಬಿಸಬೇಕಾದ ಮತ್ತು ಬಿಂಬಿಸುವ "ideals of Serenity of Life". ಉಳಿದದ್ದನ್ನೆಲ್ಲ ನಾವು "ವಾಚಿಕ ಧಿಮಿಂ-ಧಿಮಿಂ" ಎನ್ನಬಹುದು. ಶ್ರೀ ಅಮರನಾಥರ ಮುಂದಿನ ವಿಮರ್ಶೆ ನಮಗೆ ಮಾನಸಿಕ ಪ್ರಸನ್ನತೆಯನ್ನು ನೇರವಾಗಿ ತರುವ ಕಾಲ ಬರಲೆಂದು ನಮ್ಮ ಅಂಬೋಣ.

— ಸಿ. ಆರ್. ಅಣಜಿ

ಶಾಂಗ್ರಿ-ಲಾ
(ಕವನ ಸಂಕಲನ)

ಲೇ : ಬಿ. ಆರ್. ಲಕ್ಷ್ಮಣರಾವ್
ಪ್ರ : ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ
ಪುಟಗಳು : 56
ಬೆಲೆ : ರೂ. 12/-

ಶೂರ ಸೇನಾಪತಿಯೊಬ್ಬನಿಗೆ, ಅವನ ಜೀವನದ ಮಧ್ಯಭಾಗದ ಸುಮಾರಿಗೆ, ಕನಸಿನಲ್ಲಿ ಕಂಡ ದೇವರು ಹೇಳಿದನಂತೆ– ಇನ್ನು ಮುಂದೆ ನೀನು ಹೆಂಗಳೆಯರ - ಚಿಕ್ಕ ಮಕ್ಕಳ ಒಡನಾಟದಲ್ಲಿ ದಿನ ಕಳೆಯಬೇಕು. ಅವರು ತೊಡುವಂತಹ ಬಟ್ಟೆ ತೊಟ್ಟು ಅವರು ಉಣ್ಣುವ ಊಟ ಉಂಡು ಬದುಕಬೇಕು- ಎಂದು. ಆ ಸೇನಾನಿ ಈ ಬದುಕನ್ನು ಒಪ್ಪಿಕೊಂಡು, ಒಂದಿನಿತೂ ಅಪಮಾನವೆಂದುಕೊಳ್ಳದೆ ದೇವರ ಮಾರ್ಗದರ್ಶನದಲ್ಲಿ ಬಾಳಿದನಂತೆ. ಜನಾಂಗೀಯ ಸಾಹಿತ್ಯದಲ್ಲಿ ದಾಖಲಾದ ಈ ಸಂಗತಿಯನ್ನು ಯೂಂಗನು ಮನುಷ್ಯನು ತನ್ನ ಜೀವನದ ಅಪರಾಹ್ನವನ್ನು ತಲುಪುವಾಗ ನಡೆಯುವ ಮಾನಸಿಕ ಕ್ಷೋಭೆಯ ನಿಜವಾದ ಚಿತ್ರವಾಗುತ್ತದೆನ್ನುತ್ತಾನೆ. ಯೂಂಗ್ ಹೇಳುವಂತೆ ನಲವತ್ತು- ಐವತ್ತರ ಆಸುಪಾಸಿನಲ್ಲಿ ಉಂಟಾಗುವ ಗಂಡಸರಲ್ಲಿನ ಮಾನಸಿಕ ಅಸ್ಥಿರತೆ ತೊಂದರೆಗಳಿಗೆ ಕಾರಣವೆಂದರೆ ಇದುವರೆಗೆ ಅವರ ಬದುಕಿನ ರೀತಿಯಾಗಿದ್ದ ಗಂಡು ಜೀವನಶೈಲಿಯು ಕುಸಿದುಬೀಳುತ್ತಿರುವುದು. ಈ ಹಲ್ಲಟದಲ್ಲಿ ಗಂಡಸು 'ಪು'ಂಸ್ತ್ರೀತ್ವ'ದ (effiminate) ಪುರುಷನಾಗುತ್ತಾನಂತೆ. ಅದೇ ರೀತಿ ಹೆಂಗಸು ಪುಂಸತ್ವದ ಗುಣ ಪಡೆಯುತ್ತ ಹೋಗುತ್ತಾಳಂತೆ. ವಯಸ್ಸಾಗುತ್ತಿರುವ ಮನುಷ್ಯ ತಾನು ಇದುವರೆಗೆ ಬಾಳಿದ ತತ್ವ, ನೀತಿ ನಂಬಿಕೆಗಳ ಬಗ್ಗೆ ಬದುಸಾಗುತ್ತ ಕೊನೆಗೆ ಅವುಗಳ ಬಗ್ಗೆ ಸಿನಿಕತೆಯಿಂದ ಕೂಡಿದ ತಿರಸ್ಕಾರ ಬೆಳೆಸಿಕೊಳ್ಳುತ್ತಾನಂತೆ.

ಬಿ. ಆರ್. ಲಕ್ಷ್ಮಣರಾವ್ ಅವರ 'ಶಾಂಗ್ರಿ-ಲಾ' ಕವನಸಂಕಲನದ ಅಧ್ಯಯನದ ಹಿನ್ನೆಲೆಯಲ್ಲಿ ಯೂಂಗ್‌ನ 'ಜೀವನದ ಹಂತಗಳು' (Stages of Life) ಪ್ರಬಂಧದ ಮೇಲಿನ ಕೆಲವು ಮಾತುಗಳನ್ನು ಉದ್ಧರಿಸುತ್ತಿರುವುದರಲ್ಲಿ ಉದ್ದೇಶವಿದೆ. ಲಕ್ಷ್ಮಣರಾವ್ ಅವರ ಕಾವ್ಯ ನಾಯಕನಿಗೆ ವಯಸ್ಸಾಗುತ್ತಿದೆ.

ನಾನು ಕ್ರಮ
ವಾಗಿ ಪಂಚೇಂದ್ರಿಯ
ಹೃದಯ,
ಮಿದುಳು
ಗಳ ದಾಸ.
ಈ ವ್ಯಾಸ
ದಲ್ಲೇ ನನ್ನ
ಭಾರತ, ಕುರುಕ್ಷೇತ್ರ– ಎಂದು ಪಂಚೇಂದ್ರಿಯಗಳಲ್ಲಿ

ಅನನ್ಯ ವಿಶ್ವಾಸವಿರಿಸಿ ತೊಡಗುವ ಕಾವ್ಯನಾಯಕ ಈಗ ಜೀವನದ ಅಪರಾಹ್ನದ ಅಪರಿಚಿತ ಹಂತದಲ್ಲಿ ನಿಂತು ಕಕ್ಕಾವಿಕ್ಕಿಪಡುತ್ತಿದ್ದಾನೆ. ಈ ಕಕ್ಕಾವಿಕ್ಕಿಯ ಸ್ಥಿತಿಯೇ (ಅಪರ ಶುದ್ಧ ರೂಪದಲ್ಲಿ) ಕಾವ್ಯದ ವಸ್ತುವಾಗಿದ್ದರೆ ಅದೊಂದು ತೆರ. ಅದು ಪಂಚೇಂದ್ರಿಯಗಳ ಮೇಲೆ ಪೂರ್ಣ ನಂಬಿಕೆಯಿಟ್ಟ ತಾರುಣ್ಯದ ತಾಜಾ ಕಾವ್ಯದಂತೆಯೇ ಕೌತುಕಪೂರ್ಣವಾದುದಾಗಿರುತ್ತಿತ್ತು. ಇಂಥ ಕಾವ್ಯದ ಹಿಂದೆಯೂ ಮುಗ್ಧತೆಯ ಬೆಂಬಲವಿರುತ್ತಿತ್ತು. ಆದರೆ ಲಕ್ಷ್ಮಣರಾವ್‌ನ ಕಾವ್ಯದ ಸಮಸ್ಯೆ ಆರಂಭವಾಗುವದು ಮುಗ್ಧತೆ ಮತ್ತು ತಾರುಣ್ಯಗಳು ಏಕಕಾಲಕ್ಕೇ ಕುಸಿಮುಬೀಳುತ್ತಿರುವದರಲ್ಲಿ. 'ಕೊಲಂಬಸ್' ಸಂಕಲನದ ಮುನ್ನುಡಿಯಲ್ಲಿ ಸೂಚಿತವಾಗಿರುವಂತೆ 'ಕವಿಯ ತೊಡಕು ಇಂದ್ರಿಯಗಳ ತಾರುಣ್ಯ ಕಳೆದುಕೊಳ್ಳದೇ ಹೃದಯ ಮತ್ತು ಬುದ್ಧಿಯ ಪ್ರೌಢಿಮೆಗಳಿಸುವುದರಲ್ಲಿದೆ ಎನ್ನುವಂತೆಯೇ ಮುಗ್ಧತೆಯನ್ನು ಉಳಿಸಿಕೊಳ್ಳುವದೂ ಒಂದು ಪ್ರಮುಖ ಸಮಸ್ಯೆಯೇ. ಯೂಂಗ್ ಹೇಳುವ ವಯಸ್ಸಾಗುವಿಕೆಯ ಪರಿಣಾಮದ ಅಪಘಾತ ಸಂಭವಿಸದಿರಲು ಸಹಕಾರಿಯಾಗಬಲ್ಲ ಅಂಶಗಳೆಂದರೆ ಮುಗ್ಧತೆ ಇಲ್ಲವೇ ಸ್ಥಿತಪ್ರಜ್ಞ ಎನ್ನಿಸಿಕೊಳ್ಳಬಲ್ಲ ವಾಸ್ತವದ ಬಗೆಗಿನ ಸಹಾನುಭೂತಿಪರವಾದ ಮಾನಸಿಕ ಸ್ಥಿತಿ. ಆದರೆ ತನ್ನೆಲ್ಲ ಸಾಧ್ಯತೆಗಳನ್ನು ಪಂಚೇಂದ್ರಿಯಗಳಲ್ಲಿಯೇ ಗುರುತಿಸಿಕೊಳ್ಳುವ ಕವಿಯಲ್ಲಿ ಮುಗ್ಧತೆಯ ಪ್ರಮಾಣ ಅಪಾರವಾದುದು. ಇಂಥ ಕವಿ ವಾಸ್ತವದ ಬಗೆಗಿನ ಸಹಾನುಭೂತಿಯ ನಿಲುವನ್ನು ಸಾಧಿಸಿಕೊಳ್ಳಲಾಗದೇ ಮುಗ್ಧತೆಯನ್ನೂ ಕಳೆದುಕೊಂಡಾಗ- ವಯಸ್ಸಾಗುವಿಕೆಯ ಸಿಸಿಕಗೊಳ್ಳುವ ಪರಿಣಾಮದ ಅಪಘಾತ ಸಂಭವಿಸುತ್ತದೆ.

'ಏನೂ ಮಾಡಲು ಕೈಸಾಗದೆ ಪೈಚೆಲ್ಲಿ ಅಂಗಾತ ಬಿದ್ದು'- ಹೊರಪ್ರಪಂಚದೊಂದಿಗಿನ ಕೊಡುಕೊಳೆಯನ್ನು ಕಡಿದುಕೊಂಡು- 'ನಾನೀಗ ನಿಜಕ್ಕೂ ಸತ್ತಿರಬಹುದೆ?' ಎಂಬಂತಹ ಮಾನಸಿಕ ಸ್ಥಿತಿಯಾಗಲೀ (ಹತಾಶ); 'ಈಗೇಕೆ ಬಂದೆ, ಹೆಣ್ಣೆ ನನ್ನ ಬಾಳಿಗೆ ? ಈ ಸಿರಾಯುಧನ ಮೇಲೆ ಹೀಗೆ ದಾಳಿಗೆ ?' (ಅಕಾಲ) ಎಂಬಂತಹ effeminate ಸ್ಥಿತಿಯಾಗಲೀ; 'ಮುಳುಗಿದೆ. ಮುಳುಗಿದಷ್ಟೂ ಆಳ. ಎಂಥ ಒಲವಿನ ಜಾಲ ! ಸಾವಂಥ

ಹಿತವಾದ ಕಗ್ಗತ್ತಲು; ಬಸಿರ ಸುಪ್ಪತ್ತಿಗೆ ಆಳ ಮುಟ್ಟಿದೆ; ನಿಶ್ಶಬ್ದ ಜೋಗುಳ; ಮಲಗಿಬಿಟ್ಟೆ' (ಆ ಕಣ್ಣುಗಳು) ಎಂಬಂತಹ ಬಸಿರಿಗೆ ಮರುಳುವ **retrogressive** ಆದ ಅನುಭವವಾಗಲೀ, ಲಕ್ಷ್ಮಣರಾವ್ ಅವರ ಕಾವ್ಯದ ಮೇಲೆ ವಯಸ್ಸಾಗುವಿಕೆಯಿಂದುಂಟಾದ ಪರಿಣಾಮದ ಬಗೆಗೆ ಸೂಚನೆಗಳನ್ನು ನೀಡುತ್ತವೆ.

ಸಂಕಲನದ ದೀರ್ಘಕವನಗಳಲ್ಲಿ ಒಂದಾದ 'ಕ್ವಿಕ್ಸೋಟನ ಕೊನೆಯ ದಿನಗಳು' ಕವನವನ್ನು ಇದೇ ಹಿನ್ನೆಲೆಯಲ್ಲಿ ಗ್ರಹಿಸಬೇಕಾಗುತ್ತದೆ. ಮುಖ್ಯವಾಗಿ, ಕ್ವಿಕ್ಸೋಟ್, ಜೀವನದ ಅಪರಾಹ್ನದ ಘಟ್ಟದ ಹಿನ್ನೋಟದ ಆತ್ಮ ವಿಮರ್ಶೆಗೆ ತಕ್ಕುದಾದ ಪ್ರತಿಮೆಯಾಗಿ ಒದಗಿಬರಲಾರ. ಕ್ವಿಕ್ಸೋಟ್ ಜೀವನದ ಮೊದಲ ಘಟ್ಟಗಳಲ್ಲಿ ತೋರಿದ ಐಲುತನವೇ ಇನ್ನೊಂದು ರೀತಿಯಲ್ಲಿ ಈ ಕೊನೆಯದಿನಗಳಲ್ಲಿ ಬಿಂಬಿತವಾಗುತ್ತದೆ. ಪದ್ಯವು ಮುಗ್ಧತೆಯನ್ನು ಇಡಿಯಾಗಿ ಕಳೆದುಕೊಂಡ ಕ್ವಿಕ್ಸೋಟ್‌ನನ್ನು ನಾಟ್ಯೀಕರಿಸುತ್ತದೆ.

> ನೆನಪು ಶರಶಯ್ಯೆಯಲಿ ಉದ್ವಿಗ್ನ ಕ್ವಿಕ್ಸೋಟ್;
> ಮರಣದ ಮುಖಾಮುಖಿ ಮುಹೂರ್ತದಲೂ ಏಕಿನ್ನು
> ಆತ್ಮವಂಚನೆ ಸೋಗು ಬೀಗು ಬಿಮ್ಮು, ಇಗೋ
> ಹುಚ್ಚಿಳಿದು ಮತ್ತೆ ಮರಳಿದೆ ಚಿತ್ತಸ್ವಾಸ್ಥ್ಯ ...

–ಎನ್ನುವಾಗ ಕ್ವಿಕ್ಸೋಟನಂತಹ ಅಣಕುನಾಯಕನಲ್ಲಿ ನಾವು ಕಾಣಲು ಸಾಧ್ಯವಾಗುವದು ಅವನು ಮುಗ್ಧತೆಯಿಂದ ಕಳಚಿಕೊಳ್ಳುವ ಕ್ರಿಯೆಯನ್ನು ಮಾತ್ರ. ಈಗ ಕ್ವಿಕ್ಸೋಟ್ ತಲುಪಿರುವದು ವಿಷಾದದ ನೆಲೆಯಲ್ಲ, ಸಿನಿಕತನದ ನೆಲೆಯನ್ನು. ಪದ್ಯದ ಕೊನೆಯ ಸ್ಟಾಂಜಾ ಕ್ವಿಕ್ಸೋಟನ ಈ ಸ್ಥಿತಿಯನ್ನು ಸ್ಪಷ್ಟಗೊಳಿಸುತ್ತದೆ.

> ಇತಿಹಾಸಕ್ಕೆ ಹೇಳುತ್ತಾನವ–
> 'ದುಷ್ಟದೈತ್ಯರೇ ನಿನ್ನ ಇಷ್ಟಪುತ್ರರು; ನೀಚ
> ನಿರ್ದಯಿಗಳೇ ನಿನ್ನ ಸಹಜ ಸಂತಾನ; ..... ಇತ್ಯಾದಿ.

ಅಲ್ಲದೆ,– 'ಬಿಡುಗಡೆಯ ಕ್ರಾಂತಿ, ಬರೀ ಬುರುಗು ಗುಳ್ಳೆ.
> ಈ ಭ್ರಷ್ಟ ದುಃಸ್ಥಿತಿ ಇದೇ ಇಲ್ಲಿ ಸಲ್ಲುವದು,
> ಗೆಲ್ಲುವದು ನಿಲ್ಲುವದು ಎಲ್ಲ ಕಾಲಕ್ಕೂ ....

–ಎಂದೆಲ್ಲ ಲಕ್ಷ್ಮಣರಾವ್ ಮಾತಾಡತೊಡಗಿದಾಗ ಇವರಿಗೂ ಅಡಿಗರಷ್ಟು ವಯಸ್ಸಾಯಿಟ್ಟಿತಲ್ಲ ಅನ್ನಿಸಿಬಿಡುತ್ತದೆ. •

ಅಪಾರವಾದ ಮುಗ್ಧತೆಯನ್ನು ಬೆನ್ನಿಗೆ ಕಟ್ಟಿಕೊಂಡು ಜಗತ್ತನ್ನು ನೇರ್ಪುಗೊಳಿಸಲ ಹೊರಟಾತ ಕ್ವಿಕ್ಸೋಟ್. ತನ್ನ ಕೊನೆಯ ದಿನಗಳಲ್ಲಿ ಮುಗ್ಧತೆಯಿಂದ ಪೂರ್ತಿಯಾಗಿ ಕಳೆಕೊಂಡು ತೊಡಗುವ ಆತ್ಮ ವಿಮರ್ಶೆ ಅವನ ಜೀವನವನ್ನು ಶೂನ್ಯವಾಗಿಸಿಬಿಡುತ್ತದೆ. ಕ್ವಿಕ್ಸೋಟನ ಆತ್ಮ ವಿಮರ್ಶೆಗೆ ತನ್ನ ಹಿಂದಿನ ಮುಗ್ಧತೆಯ ಬಗೆಗೆ ಒಮ್ಮೆ ಮುಗುಳುನಗೆ ಹೊಮ್ಮಿಸಲು ಸಾಧ್ಯವಾಗಿದ್ದರೂ ಅವನ ಜೀವನ, ಪರಿಸರದ ಬಗೆಗಿನ ದೃಷ್ಟಿ ಕೋನ ಬೇರೆಯೇ ಆಗಲು ಸಾಧ್ಯವಾಗುತ್ತಿತ್ತು. ಆಗ ಮಾಗುವಿಕೆಯ ರೀತಿಯನ್ನು ಕಾಣಬಹುದಿತ್ತು. ಅದನ್ನು ಬಿಟ್ಟು ಅವನು ತೊಡಗುವ ಸುತ್ತಲಿನವರ ದೂಷಣೆಯ ಮಾತುಗಳು ಕ್ವಿಕ್ಸೋಟ್‌ನನ್ನು ಸಿನಿಕತೆಯ ಭಾವುಕ ಸ್ಥಿತಿಯಲ್ಲಿ ತಂದು ನಿಲ್ಲಿಸುತ್ತವೆ.

ಈ ಮಾತುಗಳ ಹಿಂದಿನ ನನ್ನ ಅತೃಪ್ತಿ ಎಂದರೆ ಲಕ್ಷ್ಮಣರಾವ್ ತಮ್ಮ ಸಹಜವಾದ ಕಾವ್ಯವನ್ನು ಬಲಿಗೊಡುತ್ತಿರುವದು. ಇದು ನಮ್ಮ ವಿಮರ್ಶೆಯ ಪರಿಣಾಮವಾಗಿರ ಒ... ಇಲ್ಲವೇ ಸ್ವತಃ ಲಕ್ಷ್ಮಣರಾಯರ ಮಹತ್ವಾಕಾಂಕ್ಷೆಯ ಪರಿಣಾಮವಿರಬಹುದು. 'ಲಿಲ್ಲಿ ಪುಟ್ಟಿಯ ಹಂಬಲ' ಸಂಕಲನದಲ್ಲಿ ತಮ್ಮ ಸಹಜ ಕಾವ್ಯದ ಮೂಲಕವೇ ಆಧ್ಯಾತ್ಮಿಕ, ಕಾಮವನ್ನು ಮೀರಿದ ಸೌಂದರ್ಯಾನುಭೂತಿಯ ಪಲಕುಗಳನ್ನು ಸಾಧಿಸಿದ ಕವಿ ಶಾಂಗ್ರಿ–ಲಾ ದಲ್ಲಿ ಆ ರೀತಿಯನ್ನು ಬಿಟ್ಟುಕೊಟ್ಟು ಹಿರಿಯದಾದ್ದನ್ನು ಹಿಡಿಯಹೋಗಿ ಸಿನಿಕತೆಯ ಲೇಪ ಪಡೆಯುತ್ತಾರೆ.

ಸಂಕಲನದ ಇನ್ನೊಂದು ಮಹತ್ವಾಕಾಂಕ್ಷೆಯ ಪದ್ಯ ಸಂಕಲನಕ್ಕೆ ಹೆಸರು ಕೊಟ್ಟ 'ಶಾಂಗ್ರಿ–ಲಾ'. ವಯಸ್ಸಾಗುವಿಕೆಯಿಲ್ಲದ, ಪ್ರಕೃತಿ ಸಹಜ ಜೀವನ ನೀಡುತ್ತದೆನ್ನುವ ಶಾಂಗ್ರಿ–ಲಾ ಎಲ್ಲೋ ಕಳೆದುಹೋಗಿದೆ, ಅದನ್ನು ಹುಡುಕಿಕೊಳ್ಳಬೇಕೆಂದು ಹೊರಡುವ ಇಲ್ಲಿನ ಮುಗ್ಧತೆ ನಂಬಿಕೆಗಳು ಜೀವನದ ಬಗೆಗಿನ ಶ್ರದ್ಧೆಯನ್ನು ಬಿಂಬಿಸುತ್ತವೆ.

ಎಲ್ಲಿ ಮುಗ್ಧ ಮಕ್ಕಳು
ನಳನಳಿಸುವ ಹೂಗಳು
ಹದಿಹರೆಯದ ತರುಣ, ತರುಣಿ
ಚೈತನ್ಯದ ನೆಗಸು
ಎಲ್ಲಿ ಗೃಹಸ್ಥಾಶ್ರಮ
ಸಂಬಂಧದ ಸಂಭೋಗದ ಸಂಸಾರದ ಸಂಭ್ರಮ
ಪಕ್ವಗೊಂಡ ಮನಸು
ಎಲ್ಲಿ ಜಿಜ್ಞಾಸು............

....

....

ಎಲ್ಲಿದೆ ಆ ಶಾಂಗ್ರಿ-ಲಾ ?

ಹೀಗೆ ಹಂಬಲಿಕೆಯ ಧಾಟಿಯಲ್ಲಿ ಆರಂಭವಾಗುವ ಪದ್ಯವು ಕ್ರಮೇಣ ಸುತ್ತಣ ಪರಿಸರದಲ್ಲಿ ಪ್ರಬಲಗೊಂಡ ಕ್ರೌರ್ಯ-ಅಸಾತ್ವಿಕ ಗುಣಗಳನ್ನು ದಾಖಲಿಸುತ್ತ ಹೋಗುತ್ತದೆ. ಪರಿಸರದ ಇಲ್ಲಿನ ಋಣಾತ್ಮಕ ಅಂಶಗಳೆಲ್ಲವೂ ಮೂರ್ತವಾಗಿ ಸಾಬೀತುಗೊಳ್ಳುತ್ತಹೋಗುವದರಿಂದ ಸಿನಿಕತೆಯ ಅಪಾಯದಿಂದ ಪಾರಾಗುತ್ತದೆ.

ತಾಮಸಿ ರಾವಣನ ಕೈಲಿ
ಜಗದ ಆತ್ಮಲಿಂಗ
ಟಿಕ್ ಟಿಕ್ ಟಿಕ್ ಎಣಿಸುತ್ತದೆ.
ಟೈಂ ಬಾಂಬ್
ಭೂಗೋಳ

-ಎಂತನ್ನುವಲ್ಲಿ ತಾಮಸದ ಪ್ರಾಬಲ್ಯಕ್ಕೆ ಸಿಕ್ಕು ಇಡೀ ಭೂಗೋಳವೇ ಬಾಂಬಾಗಿ ಪರಿವರ್ತನೆಗೊಂಡಿರುವ ಸಮರ್ಥ ಚಿತ್ರವಿದೆ. ಆದರೆ ಇಷ್ಟೆಲ್ಲ ನಿರಾಸೆಯ ಆಳದೊಳಗೇ ಎಲ್ಲೋ ಕೆಲವು ಮನಗಳಲ್ಲಿ ತಾತ್ವಿಕ ಚೇತನಗಳಲ್ಲಿ ಬೀಜರೂಪಿಯಾಗಿಯಾದರೂ ಶಾಂಗ್ರಿ-ಲಾ ಇರಬಹುದೆನ್ನು ಶ್ರದ್ಧೆ- ಈ 'ಬೋಧಿ'ಯು ಮೊಳೆಯುತ್ತದೆನ್ನುವ ನಂಬಿಕೆ ಕವನಕ್ಕೆ ಧನಾತ್ಮಕ ಆಯಾಮವನ್ನೊದಗಿಸುತ್ತದೆ. ಆದರೆ ಶಾಂಗ್ರಿ-ಲಾ ಸಂವಿಧಾನ ಮೀರಿ ಬೆಳೆದಂತೆನಿಸಿ ಅದರ ಬಂಧ ಸಡಿಲಗೊಂಡಂತಾಗಿ ಅತೃಪ್ತಿ ಮೂಡುತ್ತದೆ.

ಸಂಕಲನದ ಸಾರ್ಥಕ ಪದ್ಯಗಳಲ್ಲಿ 'ಗುಂಡಪ್ಪ ವಿಶ್ವನಾಥ್'

ಆಡಿದಂತೆ ಕುಶಲಕುಂಚ ಪಟ್ಟಿಕದಲಿ ಕಿರಣ
ಕುಲುಕು ನೀಲಿ ಬಳುಕು ಪಚ್ಚೆ ತೊನೆಯುವ ತೆನೆ ಚಿನ್ನ
ಹಿತ ಗುಲಾಬಿ ಸ್ಪರ್ಶಪುಳಕ ತುಳುಕು ಪ್ರೇಮಗಾನ
....
....
ನಗರದ ಪಟ್ಟಡವಿಯಲ್ಲಿ ಅಪರೂಪದ ದೃಶ್ಯ

ಏಕಾಗ್ರಧ್ಯಾನ ಏಕಾಂತ ಏಕಲವ್ಯ
ಪ್ರತಿಭೆ ಅನಾಯಾಸ ಕಡೆದ ಸಹಜಸ್ಫೂರ್ತಿ ಕಾವ್ಯ

ಎನ್ನುವ ಸಾಲುಗಳು ಕಲಾವಿದ ಆಟಗಾರ ವಿಶ್ವನಾಥ್‌ನನ್ನು ಸ್ಪಷ್ಟವಾಗಿ ಕಡೆದು ನಿಲ್ಲಿಸುತ್ತವೆ. ಇಂಥ ಈ 'ಕಲಾವಿದ' ವಯಸ್ಸಾಗುವಿಕೆಗೆ ಪಕ್ಕಾಗುತ್ತ ಜಡವಾಗುತ್ತ ಹೋಗುವ ಪ್ರಕ್ರಿಯೆ ಮುಂದಿನ ಭಾಗದಲ್ಲಿ ನಿರೂಪಿತವಾಗುತ್ತದೆ.

ಪಂಚತಾರಾ ಮಂಚದಲ್ಲಿ ಏದುಸಿರಿನ ಬೊಜ್ಜು
ರೇಡಿಯೋ ಟೀವಿ, ಪತ್ರಿಕೆ ಸಾಲು ನಿಂತು ಸಜ್ಜು
ಪೋಸುಗಳ ಗಮ್ಮತ್ತಿನಲ್ಲಿ ಮುಗ್ಧ ನಜ್ಜು ಗುಜ್ಜು
....
ವೈಭವಗಳ ಹಂಪೆಯಲ್ಲಿ ಅಂಡಲೆಯುವ ಭೂತ
ಸವೆದಸ್ಪರ್ಶಮಣಿ, ಕಂಠ ಕುಂಚ ಉಳಿ ಅನಾಥ
ಕೃತಜ್ಞತೆ, ಸಹಾನುಭೂತಿ, ಗೆಳೆಯ ವಿಶ್ವನಾಥ

ಇಲ್ಲಿ ageing ನ ಆಘಾತವನ್ನು ವೈಯುಕ್ತಿಕ ನೆಲೆಯಲ್ಲಿಯೇ ಪರಿಭಾವಿಸಿರುವುದನ್ನು ಕಾಣಬಹುದು ಅಲ್ಲದೆ ಈ ಆಘಾತದ ಪರಿಣಾಮವನ್ನು ಮುಗ್ಧತೆಯ ನಜ್ಜುಗುಜ್ಜಿನಲ್ಲಿ ಗುರುತಿಸಿಕೊಂಡಿರುವದು ಲಕ್ಷ್ಮಣರಾವ್ ಅವರ ಕಾವ್ಯದ ಸಂದರ್ಭದಲ್ಲಿ ಮಹತ್ವದ ಸಂಗತಿ. ಅಧೋಗತಿಯನ್ನು ವೈಯುಕ್ತಿಕ ನೆಲೆಯಲ್ಲಿ ಗ್ರಹಿಸುವ ಈ ಪದ್ಯವು ಪ್ರತಿಭೆ- ಕಲಾವಿದ ಮೂಡಿಬರುವ ಸಂಗತಿಯನ್ನು ಇಡೀ ಸಮೂಹದ ಸಿದ್ಧಿ ಎಂದು ಗ್ರಹಿಸುವಲ್ಲಿ ಎಲ್ಲ ಸಿನಿಕತೆಯನ್ನು ನೀಗಿಕೊಳ್ಳುತ್ತದೆ. ಯಾಕೆಂದರೆ ಸಿನಿಕತೆ ಮೀರಿದ ಸಹಾನುಭೂತಿಯ ನಿಲುವು ಜೀವನದ ನಿರಂತರತೆಯನ್ನು ಗ್ರಹಿಸುತ್ತದೆ.'... ವಿಶ್ವನಾಥ್' ಪದ್ಯವು, ಪ್ರತಿಭೆಯೊಂದು ತನ್ನೆಲ್ಲ ಭವ್ಯತೆಯನ್ನು ಕಳೆದುಕೊಳ್ಳುತ್ತ ಕುಸಿದುಹೋದರೂ ಅದು ಇಡೀ ಸಮೂಹದ-ಮಧ್ಯಮ ಜನಸಾಮಾನ್ಯರ ದೈನಂದಿನ ಬನಿಯಾಗಿ ಮೂಡಿಬರುವದರಿಂದ ನಿರಂತರವಾಗಿ ಹುಟ್ಟಿಬರುವಂಥದೆನ್ನುವ ಶ್ರದ್ಧೆಯನ್ನು ಸಾಧಿಸಿಕೊಳ್ಳುತ್ತದೆ. ಇಂಥ ಈ ವಿಶಿಷ್ಟ ಅರಿವನ್ನು ನೀಡುವ ವಿಶ್ವನಾಥನಿಗೆ ಅಂತಲೇ ಕೃತಜ್ಞತೆಗಳು ಸಲ್ಲುತ್ತವೆ.

ಅಂಡಾಣು ಪ್ರತಿಭೆ, ಲಕ್ಷ ವೀರ್ಯಾಣು ಪರಿಶ್ರಮ
ಹುಟ್ಟಿದ ಕಲೆ ವಾಮನ ಬೆಳೆಬೆಳೆದಂತೆ ತ್ರಿವಿಕ್ರಮ
What a Shot ! What grace ! ವಿಸ್ಮಯ ಖುಷಿ ಸಂಭ್ರಮ !

'ಕಿಲಾಡಿ ರಸ್ತೆ' ಯ ಕೊನೆಯ ತಿರುವಿನಲ್ಲಪಘಾತ ಕಂಡು ಗಾಬರಿಗೊಳ್ಳದೇ ಜೀವನದ

ನಿರಂತರತೆಯನ್ನು ಮತ್ತು ವೈಯುಕ್ತಿಕ ಸಿದ್ಧಿಯ ಹಿನ್ನೆಲೆಯಲ್ಲಿ ಇಡೀ ಸಮೂಹದ ತೊಡಗುವಿಕೆಯನ್ನು ಗುರುತಿಸುವ ಲಕ್ಷ್ಮಣರಾಯರ ಈ ಪದ್ಯ ಕಂಡು What a Shot! What grace ! ಎಂದು ಖುಷಿ ಸಂಭ್ರಮಪಡುತ್ತ ಲಕ್ಷ್ಮಣರಾವ್ ಅವರ 'ಶಾಂಗ್ರಿ–ಲಾ' ಸಂಕಲನದ ಮುಂತುದಿಯಾಗಿ ಬರುವ ಆರೋಗ್ಯ ಪೂರ್ಣ ಗ್ರಹಿಕೆಯ ನೆಲೆಯನ್ನು ಗುರುತಿಸಿಕೊಂಡು ಅವರ ಮುಂದಿನ ಕಾವ್ಯದ ಬಗ್ಗೆ ಕುತೂಹಲ ತಾಳಬಹುದು.

—ರಾಘವೇಂದ್ರ ಪಾಟೀಲ

ಇಲ್ಲದೆ ಇದ್ದಾಗ

(ಕವನ ಸಂಕಲನ)

ಲೇ : ಕೃಷ್ಣ ಚೆನ್ನಂಗೋಡು

ಪು : 68 ಬೆಲೆ ; ರೂ. 14

ಪ್ರ : ಕನ್ನಡ ಸಂಘ ವಿವೇಕಾನಂದ ಕಾಲೇಜು, ಪುತ್ತೂರು

ಚೆನ್ನಂಗೋಡು ಅವರ ಈ ಸಂಕಲನದಲ್ಲಿರುವ ಐವತ್ತು ಕವಿತೆಗಳಲ್ಲಿ ಗೇಲಿ ತುಂಟತನದ ಕವಿತೆಗಳಿಂದ ಹಿಡಿದು ಇತಿಹಾಸದ ಒಳನೋಟವನ್ನು ಕೊಡುವ, ಪೌರಾಣಿಕ ಪ್ರಭಾವಗಳನ್ನು ಇಂದಿನ ಬೆಳಕಿನಲ್ಲಿ ಅಳೆಯುವ, ತೀರ ವೈಯಕ್ತಿಕವಾದ ವಿಷಯಗಳನ್ನು ಹೇಳಿಕೊಳ್ಳುವಂಥ ಕವಿತೆಗಳಿವೆ.

ಹನಿಗವಿತೆಗಳಲ್ಲಿ, ಮಿನಿಗವಿತೆಗಳಲ್ಲಿ ಲವಲವಿಕೆ ತುಂಟತನಗಳ ಸಮೃದ್ಧಿಯಿದೆ. ಪದಗಳನ್ನು ಮುರಿದು ಜೋಡಿಸಿ–ಎರಡೆರಡು ಅರ್ಥಗಳನ್ನು ಹೊರಡಿಸುವ ರೀತಿಯಿದೆ.

ನೀನು
ಪುಷ್ಪ
ಕವಿ
ಮಾನವಂತೆ– ಎಂದು ಮೊದಲು ಹೇಳಿದ ಪ್ರೇಮಿ ನಂತರ ಪ್ರೇಯಸಿಯನ್ನು 'ಪುಷ್ಪಕ ವಿಮಾನವಂತೆ' ಎಂದು ತಿರಸ್ಕರಿಸುವುದರಲ್ಲಿ ಪದಗಳನ್ನು ಒಡೆದು ಕಟ್ಟುವ ಜಾಣತನದ ಜೊತೆ ವಸ್ತು ಸ್ಥಿತಿಯ ಕಹಿಯೂ ಬೆರೆತಿದೆ.

“ಮೊನ್ನೆಯಷ್ಟೇ ಷಷ್ಠಿಪೂರ್ತಿ ಮುಗಿಸಿದ
ನಮ್ಮೂರ ಸಮಾಜ ಸುಧಾರಕ
ನಿತ್ಯ ಬಡ ಬಡಿಸುತ್ತಾನೆ
‘ಉಳುವವನೇ ಹೊಲದೊಡೆಯ’
ಆತನ ಮಾತನ್ನು ಅಕ್ಷರಶಃ ಪಾಲಿಸುತ್ತಾರೆ
ಚಿಕ್ಕಪ್ರಾಯದ
ಆತನ ನಾಲ್ಕನೆಯ ಹೆಂಡತಿ
ಹಾಗೂ ಮೊದಲ ಹೆಂಡತಿಯ ಹಿರೇ ಮಗ”

ಇಂಥ ಗೀ ತುಂಟತನಗಳ ಕವಿತೆಯಿಂದ ಮುಂದೆ, ಹನಿಗವಿತೆಗಳಲ್ಲಿಯೇ ಕವಿತೆಯ ಚೆಲುವು ಬೆಳೆಯುತ್ತ ಹೋಗುವುದನ್ನು ಕಾಣಬಹುದು. ‘ಹುಣ್ಣಿಮೆ’ ಹನಿಗವಿತೆ ಇದಕ್ಕೊಂದು ಉದಾಹರಣೆ

“ಮುಸ್ಸಂಜೆ ಕಂದನಿಗೆ ಹಾಲೂಡಿ
ರಾತ್ರಿ ಹೆಣ್ಣು ತೆಳು
ನೀಲಿ ರವಿಕೆಯನ್ನು
ಕೆಳಗೆಳೆದು ಕೊಂಡಾಗ
ತೊಟ್ಟು ಸೋಕಿದಲ್ಲೊಂದು
ಒದ್ದೆ ಸೊನ್ನೆ”

ಇವರಿಂದಾಚೆಗೆ ವಸ್ತುವಿನ ದೃಷ್ಟಿಯಿಂದಲೂ ಹೆಚ್ಚು ಗಂಭೀರವಾದ ಕಾವ್ಯದತ್ತ ಕವಿಯ ಗಮನ ಹರಿದಿದೆ.

‘ಇನ್ನೊಬ್ಬ ಕಾಬೂಲಿವಾಲಾ’ ದಲ್ಲಿ ಪ್ರಾರಂಭಕ್ಕೇ ಉಜ್ವಲವಾಗಿ ತೋರುವ ಚರಿತ್ರೆಯ ಒಳನೋಟ ಕೊನೆಗೆ ಪೇಲವವಾಗುತ್ತದೆ.

“ಸಹವಾಸ”, “ಕಪ್ಪು ಬೆಳಕು”ಗಳಲ್ಲಿ ಕಾವ್ಯತ್ವಕ್ಕಿಂತ ಗದ್ಯತೆ ಜಾಸ್ತಿಯೆನಿಸುತ್ತದೆ. ಕಾವ್ಯದ ಲಯವನ್ನು ಹಿಡಿದಿಟ್ಟುಕೊಳ್ಳುದರಲ್ಲಿ ಈ ಕವಿತೆಗಳು ಸೋತಿವೆ.
‘ದಮನ’ ಕವಿತೆಯಲ್ಲಿ ಸೃಷ್ಟಿಯ ಅಚ್ಚರಿ ಸುಂದರವಾಗಿ ಮೂಡಿವೆ. “ಭವಿಷ್ಯದ ಕಪಾಲಿಯ ಒತ್ತಿನಲ್ಲಿ ಕುಸಿದ ವರ್ತಮಾನದ ಗಂಗಾರಾಂ” ಅನ್ನು ತೋರುವ “ಯುಗಾದಿ” ಸಾಮಾಜಿಕ ಕಳಕಳಿಯ ಜೊತೆಗೆ ಕಾವ್ಯಕ್ರಿಯೆಯ ಉತ್ತಮ

ಬಂಧನವನ್ನು ರೂಢಿಸಿಕೊಳ್ಳುತ್ತಿರುವ ಸೂಚನೆಯನ್ನು ಕೊಡುತ್ತದೆ. ಇದು ಹೆಚ್ಚಿನ ಮಟ್ಟದಲ್ಲಿ ವ್ಯಕ್ತವಾಗಿರುವುದು 'ಎಡೆಗೆ ನುಗ್ಗಿದ ಡೇಗೆ' ಕವಿತೆಯಲ್ಲಿ

"ಮಧ್ಯಾಹ್ನದಲ್ಲೇ ಅಮಾವಾಸ್ಯೆಯ ಚಂದ್ರ
ನಾಡಿಗೆ ಅಚ್ಚರಿ ಉಲ್ಕೆ ಎರಗುತ್ತದೆ"

ಎಂಬ ಸಾಭಿನಯದ, ಬಿಗಿಕಟ್ಟಿನ ಕವಿತೆ-

ತಮ್ಮವರು ಹೋದುದಕ್ಕೆ ಹಲವರು ಅತ್ತರು
ಕೆಲವರು ತಾವು ಉಳಿದುದಕ್ಕೆ
ಸಿಂಪಡಿಸಿಕೊಂಡರು ಮೈತುಂಬ ಸಂತಸದ ಅತ್ತರು
ಇತರರಿಗೆ ಅದು ಬರಿಯ ಸುದ್ದಿ
ಹೇಳುತ್ತ ಹೊರಟರು ಇಷ್ಟು ಜನ ಸತ್ತರು

ಎಂಬ ನಿರ್ಲಿಪ್ತಿ, ವಿಷಾದದ ನಾಟಕೀಯತೆಯಲ್ಲಿ

"ಹುಟ್ಟು ಬೆಳಕಿನ ಮೂಲ ದಟ್ಟ ಕತ್ತಲಿನಲ್ಲಿ
ಸಾವು ಕುಸುಮಗಳೆಲ್ಲ ಕತ್ತಲ ಟೊಂಗೆಯಲ್ಲಿ"

ಎಂಬ ತತ್ವಜ್ಞಾನದಲ್ಲಿ ಸಾರ್ಥಕಗೊಳ್ಳುತ್ತದೆ.

ಪೌರಾಣಿಕ ಪ್ರಭಾವಕ್ಕೊಳಪಟ್ಟ ಪ್ರವರ್ತನ, ನೂಪುರೇತ್ವಭಿ ಜಾನಾಮಿ, ಮಾನಿಷಾದ ಕವಿತೆಗಳಲ್ಲಿ ಮಾನಿಷಾದ ಹೆಚ್ಚು ಮಹತ್ವಾಕಾಂಕ್ಷಿಯಾದ ಕವಿತೆ. ಇಲ್ಲಿ ಕ್ರೌಂಚ ಬಿದ್ದು ಸತ್ತ ದುಃಖಕ್ಕಿಂತ

"ಜೊಟ್ಟಿಡುವ ಕಡ್ಡಿಯೊಡನೆ ಅಡಿತಪ್ಪಿ ಎತ್ತರದಿಂದ ಜಾರಿ
ಬಿದ್ದ ಚಿತ್ತಾರದ ಕುಂಕುಮದ ಭರಣಿಯು ಹಾಗೆ" ಎಂದು ಅವರ

ಕಣ್ಣಿಗೆ ಕಟ್ಟಿದ ವರ್ಣವೈಭವವನ್ನು ಮೆಲುಕುವ ಚಪ್ಪರಿಸುವ ಮಾತುಗಳು- ತನ್ನ ಸುಖದ– ಅದನ್ನು ಕಳೆದುಕೊಂಡ ನೆನಪು– ಮೆಲುಕು ಹಾಕುತ್ತ ಕೊನೆಗೆ ಎತ್ತರದ ಬದುಕಿನ ಪೊಳ್ಳುತನವನ್ನು- ನೆಲಕ್ಕಂಟಿದ ಬದುಕಿನ ಚೆಲುವನ್ನು ಬಯಲು ಮಾಡುತ್ತವೆ.

ನಿತ್ಯ ಸುಖ
ನೇವರಿಸೆ ಕಣಿವೆ ಬದುಕಿನ ಕುರುಳ
ನೆಲ ಬಿಟ್ಟು ಏರೇರಿದಂತೆ ಪ್ರಾಣವಾಯು ವಿರಳ.

— ಸ. ಉಷಾ

ಒಂದು ಪ್ರತಿಕ್ರಿಯೆ.

ಮಾನ್ಯರೇ,

'ಸಂವಾದ' ಪತ್ರಿಕೆಯ ಕಳೆದ ಸಂಚಿಕೆಯಲ್ಲಿ (ಜುಲೈ-ಅಗಸ್ಟ್) 'ಖಾಸ ನೀಸರ ಮೂಲಕ "ಮೂಗೇಲ ಮತ್ತು ಇತರ ಕತೆಗಳನ್ನು" ಪರಿಶೀಲಿಸಿರುವ ಶ್ರೀ ತಾಳ್ಯರವರು "ವಾಸ್ತವವನ್ನು ವರ್ತಮಾನವನ್ನು ಚಿತ್ರಿಸುವಾಗ ನಾವು ಈ ಹಿಂದಿನ ತಂತ್ರವನ್ನು ಯಾಕೆ ಬಳಸಬೇಕು ...." ಇತ್ಯಾದಿ ಕುತೂಹಲಕಾರಕ ಪ್ರಶ್ನೆಗಳನ್ನು ಎತ್ತಿದ್ದಾರೆ. ಈ ಅಭಿಪ್ರಾಯದಲ್ಲಿ ಪ್ರಸ್ತುತ ಸಂಕಲನದ "ತಂತ್ರ" ಅದರ ಸೋಲಿಗೆ ಕಾರಣ ಎಂಬ ಅಭಿಪ್ರಾಯಕ್ಕೆ ಬಂದಂತೆ ತೋರುತ್ತದೆ. ಆದರೆ ಈ ನಿಲುವನ್ನು ಅವರು ನಿರ್ಣಯಾತ್ಮಕವಾಗಿ ಪ್ರಕಟಿಸಿಲ್ಲ. ವಿಮರ್ಶೆಯ ಸಂಕೀರ್ಣ ಹಂತಗಳಲ್ಲಿಲ್ಲ "ಯಾಕೋ ಸೋತಿದ್ದಾರೆ" ಎಂಬ ನಿಲುವಿಗೇ ಬದ್ಧರಾಗುತ್ತ ಸಾಗಿದ್ದಾರೆ. ಹೀಗೆ ಅವರು ಪ್ರಕಟಿಸಿರುವ 'ದ್ವಂದ್ವ'ಗಳು ನನ್ನಲ್ಲಿ ಅನೇಕ ಪ್ರಶ್ನೆಗಳನ್ನೆಬ್ಬಿಸಿದವು. ಅವನ್ನು ಈ ಕೆಳಗಿನಂತೆ ದಾಖಲಿಸಿದ್ದೇನೆ.

ಕಥೆ ಓದುಗನನ್ನು ತಲುಪುವಲ್ಲಿ ಎದುರಿಸಬೇಕಾದ ಅತಿ ಮುಖ್ಯ ಸಮಸ್ಯೆಗಳಲ್ಲಿ "ಸಂವಹನ" ಪ್ರಮುಖವಾದುದು ಎಂದು ಐ. ಎ. ರಿಚರ್ಡ್ಸ್ ಗುರುತಿಸುತ್ತಾನೆ. ಏಕೆಂದರೆ ಕಥೆಯ ಗ್ರಹಿಕೆ ಓದುಗನ ಅನುಭವದ ಮಿತಿಗೆ ಒಳಪಟ್ಟಿರುತ್ತದೆಯಾದ್ದರಿಂದ ಅವನು ಗುರುತಿಸುವ ಅಂಶಗಳು ಕಥೆಗಾರನ ಆಶಯದಿಂದ ಭಿನ್ನವಾಗಿರಬಹುದು. ಈ ತೊಂದರೆಯನ್ನು ನಿವಾರಿಸುವ ಅಂಶಗಳಲ್ಲಿ 'ತಂತ್ರ' ಪ್ರಧಾನವಾದದ್ದು. ಇದು ಕಥೆಯ ಒಳಪದರದ ಅಂಶ ಎಂದು ನಾನು ತಿಳಿದಿದ್ದೇನೆ. ಏಕೆಂದರೆ ಕಥೆ ಕಟ್ಟಿಕೊಡುವ ಶಿಲ್ಪದಿಂದ 'ತಂತ್ರ'ವನ್ನು ಕಿತ್ತಿಡಲಾಗದ ಸ್ಥಿತಿಯಲ್ಲಿಯೆ 'ಕಲಾತ್ಮಕತೆ' ಪ್ರಕಟವಾಗುವುದು. "ಶಬ್ದಾರ್ಥೌ ಸಹಿತಾ ಕಾವ್ಯಂ" ಎಂದು ನಮ್ಮ ಪುರಾತನ ಕಾವ್ಯ ಮೀಮಾಂಸಕ ಭಾಮಹ ಗುರುತಿಸಿದ್ದು ಇದನ್ನೇ. ಲೇಖಕನ 'ದರ್ಶನ' ಯಾವ ಸೂಕ್ಷ್ಮ ಸ್ತರಗಳಲ್ಲಿತ್ತೋ ಅದೇ ಸ್ಥರದಲ್ಲಿ ಓದುಗನ ಗ್ರಹಿಕೆಯನ್ನು ಮೂಡಿಸುವಲ್ಲಿ ಕತೆಯ ಯಶಸ್ಸು ಅಡಗಿದೆ. ಖಾಸಗಿ ಸಂವೇದನೆಯನ್ನು ದಾಖಲಿಸುವ ಕತೆಗಳೂ ಗೆಲ್ಲುವುದು 'ತಂತ್ರ' ದಲ್ಲಿಯೆ ಎಂಬುದು ನನ್ನ ನಂಬಿಕೆ. ಈ ಹಿನ್ನೆಲೆಯಲ್ಲಿ ಶ್ರೀ ದೇವರು ಬಳಸಿದ 'ತಂತ್ರ' ಅನಿವಾರ್ಯವಾಗುತ್ತದೆ ಎಂದು

ನಾನು ತಿಳಿದಿದ್ದೇನೆ. ಶ್ರೀ ತಾಳ್ಯ ಅವರು ಹೇಳುವಂತೆ 'ನೇರ ಚಿತ್ರ' ದಿಂದಲೇ ಒಳ ಧ್ವನಿ (IN SIGHT) ಹೊರಡಿಸಲು ಪ್ರಯತ್ನಿಸಿದ 'ಪರ್ವ' ವಿಫಲವಾಗಿದ್ದು ಬಹುಶಃ ಈ ಹಂತದಲ್ಲಿಯೆ. ಏಕೆಂದರೆ ಭೈರಪ್ಪನವರು ಬಳಸುವ ನವ್ಯ ಧಾಟಿಯ 'ತಂತ್ರ' ಕೊನೆಗೂ ''ಸಂವಿಧಾನ''ಕ್ಕೆ ಹೊಂದಿಕೊಳ್ಳದ ಘಟಕವಾಗಿ ಉಳಿಯುತ್ತದೆ.

''ವ್ಯಕ್ತಿಯ ತೀರಾ ಅಂತರಂಗದ ಒಳ ತೋಟಗಳನ್ನು ಅಮೂರ್ತ ಕಲ್ಪನೆಯ ಮೂಲಕ ವಿವರಿಸುವಲ್ಲಿ'' ದೇವರು ಸೋತಿದ್ದಾರೆಂದು ''ಜೀವ ಪಕ್ಷಿ''ಯನ್ನು ಉಲ್ಲೇಖಿಸುತ್ತ ತಾಳ್ಯರು ಹೇಳುತ್ತಾರೆ. ಇಲ್ಲಿ ಅವರು ಕತೆಯ ಆಶಯವನ್ನು ವಾಸ್ತವವನ್ನು ಮೀರುವ ಕನಸುಗಾರಿಕೆ ಇತ್ಯಾದಿ ಮಾನವೀಯ ತುಡಿತ (IMPULSE) ವಾಗಿ ಗುರುತಿಸಿದಂತೆ ತೋರುತ್ತದೆ. ಆದರೆ ಕತೆ ವರ್ತಮಾನದ ಸಾಧ್ಯತೆಗಳಿಗೆ ಮುಕ್ತವಾಗುವ ಜೊತೆಗೆ ಪರಂಪರೆಯಿಂದ ಪಡೆದುದನ್ನು ಅರ್ಥಪೂರ್ಣವಾಗಿ ಕರಗಿಸಿಕೊಂಡಿರುವಂತೆ ನನಗೆ ಭಾಸವಾಯಿತು.

— ಎನ್. ಎಸ್. ಶ್ರೀಧರಮೂರ್ತಿ

ಸಂಪಾದಕರ ಟಿಪ್ಪಣಿಗಳು:

ಕಳೆದ ಬದುಕು ಮತ್ತು ನಾವು

ಆ ವರ್ಷ ಮಳೆಯಿಲ್ಲದೆ ಪೈರು ಬರಸಿಹೋಗಿತ್ತು. ಇಪ್ಪತ್ತು ಚೀಲ ಭತ್ತ ಬೆಳೆಯುವ ಗದ್ದೆಯಲ್ಲಿ ಎರಡು ಚೀಲ ಜರಗು ಸಿಕ್ಕಿದ್ದು ಕಷ್ಟ. ಬಿದಿರಿಗೆ ರಾಜನ್ ಹಾದು ಜನ ಬಿದಿರಕ್ಕಿಗಾಗಿ ಬಿದಿರು ಮಳೆಗೆಲ್ಲ ತೊಟ್ಟಿಲು ಕಟ್ಟಿದ್ದರು

ಆ ಊರಿನಲ್ಲಿ ಇದ್ದದ್ದೆಲ್ಲಾ 50 60 ಮನೆಗಳು ಎಲ್ಲರೂ ಮಳೆ ಕಂಡು ಬೆಳೆ ಬೆಳೆಯಬೇಕಾದರೆ ಹಿಂದಿನ ವರ್ಷ ಬೆಳೆದ ಭತ್ತ ಮಾರಿ ಕೇರಿ ಉಂಡು ತಿಂದು ಮುಗಿದಿದ್ದವು. ಎಲ್ಲಣ್ಣನ ಮನೆಯ ಎರಡು ಕಣಜಗಳಲ್ಲಿ ಒಂದು ಮಾತ್ರ ಊಟಕ್ಕೆ ಅರ್ಧಂಬರ್ಧ ಖರ್ಚಾಗಿದ್ದವು. ಇನ್ನೊಂದು ಕಣಜದ ಭರ್ತಿ ಭತ್ತ ಹಿಡಿ ಕೂಡ ಮುಕ್ಕಾಗಿರಲಿಲ್ಲ. ಎಲ್ಲಣ್ಣ ಮುಂದಾಲೋಚಿಸುವ, ಮಳೆ ಬೆಳೆ ನೋಡಿಕೊಂಡು ಮಾರುವವ. ಬಿತ್ತಿದ ಭತ್ತ ಅರೆವಸೆ ಕಂಡಿರಲಿಲ್ಲವಾದ್ದರಿಂದ ಮಾರುವ ಯೋಚನೆ ಕೈಬಿಟ್ಟಿದ್ದ. ಸುಗ್ಗಿ ಕಂಡ ಜನದ ಹಾಹಾಕಾರ ಕಂಡು ತಳವಾರರ ನೀಲಕ್ಕನನ್ನು ಕರೆದು ಊರಿಗೆಲ್ಲ "ಉಣ್ಣಾಕೆ ಭತ್ತ ಬೇಕಾದೋರು ಯಲ್ಲಣ್ಣನ ಮನೆಗೆ ಬಂದು ತಗಂಡು ಹೋಗ್ಬೇಕಂತೆ, ಎಲ್ಲಣ್ಣನೇ ಹೇಳೀತಿ" ಎಂದು ಸಾರಿಸಿದ. ಬಂದವರಿಗೆಲ್ಲಾ ಅವರವರ ಮನೆತನದ ಜನಸಂಖ್ಯೆ ಮೇಲೆ ಇಷ್ಟಿಷ್ಟು ಅಂತ ಭತ್ತ ಹಂಚಿಕೆಯಾಯಿತು.

ಇದು ಸುಮಾರು ಇಪ್ಪತ್ತೈದು ವರ್ಷಗಳ ಕೆಳಗೆ ನಾನು ಹುಟ್ಟಿದ ಊರಲ್ಲಿ ನಡೆದ ಸಂಗತಿ. ಈ ಎಲ್ಲಣ್ಣ ಒಬ್ಬಂಟಿಗ, ಹೆಬ್ಬೆಟ್ಟಿನವ. ತನ್ನದೊಂದಿಷ್ಟು ಜಮೀನಿನ ಜೊತೆಗೆ ಕೋರುಗುತ್ತಿಗೆ ಹೊಲ ಮಾಡುತ್ತಿದ್ದ. ಅವನ ಪ್ರಾಯದಲ್ಲಿ ದಿನಕ್ಕೆ ಎರಡು ಜೊತೆ ಎತ್ತುಗಳನ್ನು ದಣಿಸುತ್ತಿದ್ದ. ಜನಗಳ ಬಾಯಲ್ಲಿ "ಭಾಂ ಭೋದ್ ಮುಡಿಮುಸ್ತ ಅಂದ್ರೆ ಎಲ್ಲಣ್ಣ ಕಂಡ್ರಲೇ" ಎನಿಸಿಕೊಂಡವ. ದಿಕ್ಕಿಲ್ಲದ ವಿಧವೆಯೊಬ್ಬಳ ಜಮೀನಿನ ಉಳುಮೆ, ಗೋಡು, ಗೊಬ್ಬರ ಮಾಡಿಕೊಡುತ್ತಿದ್ದ ಅವಳೂ ಕಳೆ ಕಾಸಿಕೆ ಬಿತ್ತನೆ ಅಂತ ಕೆಲಸಗಳಿಗೆ ನೆರವಾಗುತ್ತಿದ್ದಳು.

ಇಂಥ ಎಲ್ಲಣ್ಣ ಶ್ರೀಮಂತನೇನಲ್ಲ. ಉಣ್ಣಕೆ, ತಿನ್ನಕೆ ಇದ್ದವನು ಅಷ್ಟೆ. ಬದಲಾವ ಕಾಲದಲ್ಲಿ ಕಾರ್ಪಣ್ಯದ, ಮುಪ್ಪಿನ ದಿನಗಳನ್ನು ಕಳೆಯುತ್ತಿದ್ದಾನೆ. ಇನ್ನೊಬ್ಬರನ್ನು

ಕೇಳುವುದಕ್ಕೂ ನಾಚಿಕೊಳ್ಳುವ ಸೂಕ್ಷ್ಮ ಸ್ವಭಾವದ ಎಲ್ಲಣ್ಣ ಇವತ್ತು ಯಾವುದೋ ರಾಯನ ಕಾಲದ ಸುದ್ದಿ ಹೇಳಿಕೊಳ್ಳುವ ನಿರುಪಯುಕ್ತನಾಗಿ ಕಾಣುತ್ತಾನೆ.

ಲಾಭದ ಆಸೆಗೆ ತಿನ್ನುವ ಅನ್ನಕ್ಕೆ ಕಲ್ಲುಬೆರಸುವ ಅಭಾವ ಸೃಷ್ಟಿಸಿ ಲಾಭ ಮಾಡುವ, ವಿಷ ಬೆರಸಿ ಹೆಂಡ ಮಾರುವ, ಕಟ್ಟುತ್ತಿರುವಾಗಲೇ ಕುಸಿದು ಬೀಳುವಂಥ ಮನೆ ಕಟ್ಟುವ, ವಿದ್ಯೆಯನ್ನು ವ್ಯಾಪಾರ ಮಾಡುವ ಕಸುಬಿನ ಜನರೆದುರು ಎಲ್ಲಣ್ಣ ಕಾಣುತ್ತಾನೆಯೇ ? ಆದರೆ ಅವನಂತೂ ಜನಗಳನ್ನು ಕಂಡಿದ್ದಾನೆ. ಆಗ್ಗೆ ಮಾತೂ ಆಡುತ್ತಾನೆ.

ಮೊನ್ನೆ ಎಲ್ಲಣ್ಣನ್ನ ಮಾತಾಡಿಸುವುದಕ್ಕೆ ಅಂತ ಹೋದಾಗ, ಮಡ್ಡಂಗಿ ನೀರು ಪಂಚೆ ತಲೆಗೊಂದು ಟವಲು ಸುತ್ತಿ ಎಪ್ಪತ್ತು ವರ್ಷ ಪ್ರಾಯದ ಎಲ್ಲಣ್ಣ ತಾನು ಹಾಕಿದ ಮಾವಿನಮರ ಹತ್ತಿ ಬಂದಳಿಕೆ ಸವರುತ್ತಿದ್ದ. ಕಣ್ಣು ಮಬ್ಬಾಗಿದೆ. ಕಿವಿ ಮಂದ ಆಗಿದೆ. ಆದರೂ ಬಂದಳಿಕೆ ಕಂಡರೆ ಸವರ ಬೇಕೆನ್ನಿಸುತ್ತೆ.

"ಮರ ಹತ್ತೊ ವಯಸ್ಸೇನಪ್ಪ ಇದು ? ಹುಡುಗರು ಮಕ್ಕಳಿಗೆ ಹೇಳಿದರೆ ಮಾಡ್ತಾರೆ" ಅಂದ್ರೆ "ಮಕ್ಕಳು ಮಾಡ್ತಾರೆ ಕಣಪಾ- ಚಾ ಕುಡಿಯಾಕೆ ಒಂದು ಮೈಲಿ ನಡಕೊಂಡು ಹಿತ್ಲೂರಿಗೆ ಹೋಗ್ತಾರೆ ಬೇಕಾದ್ರೆ, ಇವನ್ನೆಲ್ಲ ಮಾಡೋರಲ್ಲ ಅವರು, ನಾನು ಕೆರೆಯಿಂದ ಅಡ್ಡೆಯಾಗಿ ನೀರು ಹೊತ್ತು ಸಾಕಿದ ಗಿಡಗಳು, ಕಾಯಿನೋಡು ಹೆಂಗೆ ಬಿಟ್ಟದಾವೆ. ನಾಕು ವರ್ಷ ಆದರೂ ಬುಡಕ್ಕೆ ಒಂಚೂರು ಹೊಸ ಮಣ್ಣಿಲ್ಲ, ಗೊಬ್ಬರ ಗೋಡಿನ ಮಾತು ಅಲ್ಲಿರಲಿ" ಎಂದವನೆ ಮಾತಿನ ಮಧ್ಯೆ ಏನೋ ಜ್ಞಾಪಿಸಿಕೊಂಡಂತೆ- "ಬಾಳೆಕೆರೆ ಏರಿ ಮೇಲೆ ಎರಡು ಹುಣಸೇಮರ ಇದ್ವು ನೋಡಿದಿಯಾ" ಅಂತ ಕೇಳಿದ. "ಇಲ್ಲ ಯಾಕೆ ?" ಅಂತ ಕೇಳಿದಾಗ "ಎರಡು ವರ್ಷದ ಹಿಂದೆ ನನ್ನಂಗೆ ಮುಪ್ಪಾಗಿ ಸಾಯ್ತಿದ್ವು. ಆಚೆ ವರ್ಷ ಕೆರೆ ಏರಿ ದುರಸ್ತಿಗೆ ಬಂದಾಗ ಏರಿಗೆ ಹೊಸ ಮಣ್ಣೇರಿಸಿದ್ರು. ಈಗ ನೋಡು ಹೋಗು, ಒಳ್ಳೇ ಹರೇದ ಹುಡುಗಾಗಿದಾವೆ. ಜಗ್ಗಿ ಕಾಯಿ ಬಿಡಕ್ಕೆ ಹತ್ತಿದಾವೆ ಅಂದ."

ಹೀಗೆ ಪ್ರಕೃತಿಯನ್ನು ಸೂಕ್ಷ್ಮವಾಗಿ ಗಮನಿಸುವ ಎಲ್ಲಣ್ಣ ನಮ್ಮ ಇಂದಿನ ವ್ಯವಸಾಯ ಪದ್ಧತಿಯ ಬಗ್ಗೆ ಕೂಡ ಟೀಕಿಸುತ್ತಾನೆ.

"ಹಿಂದಿನೋರು ಸೊಪ್ಪು ಸೆದೆ ಗೊಬ್ಬರ ಗೋಡು ಮಣ್ಣು ಮಸಿ (ಸುಟ್ಟ ಬೂದಿ), ಗದ್ದೆಗೆ ಹಾಕೋರು, ನೆಲಾನೂ ಕಸುವಾಗೋದು, ಆಳೆತ್ತರ ಪೈರೂ ಬೆಳೆಯೋದು.

ಗೋಡು ತೆಗದಿದ್ದರಿಂದ ಹೋಕ್ತಿದಂಗಾಗಿ ಕೆರೆಯಾಗೆ ನೀರೂ ನಿಲ್ಲೋದು. ಈಗ ನೋಡು ಸೀಮೆಗೊಬ್ಬರ ಅಂತ ಹಾಕ್ತಾರೆ, ಸೊಸೈಟಿಯಾಗೆ ಸಾಲ ತಂದು, ನಾಕು ದಿನ ಮಳೆ ಬರೋದು ತಡ ಆದ್ರೆ ಬೆಳೆ ಎಲ್ಲ ಸುಟ್ ಬಿದ್ ಹೊಕ್ಕಾವೆ. ಹಿಂಗೇ ಸೀಮೆಗೊಬ್ಬರ ಹಾಕ್ಕಂತ ಬರಲಿ, ಭೂಮ್ಯೆಲ್ಲ ಸವುಳು ಬಿದ್ದು ಈಗಿನ ಬೆಳೇನೂ ಬರದಂಗಾಕ್ಕತಿ.''

''ನಿಮ್ಮಪ್ಪಯ್ಯಾರ ಕಾಲ್ದಾಗೆ ಹೊಮ್ಮಂಡ (ಬತ್ತ ಕೊಯ್ದು ಮೇಲೆ ಹಾಕುವ ದ್ವಿದಳ ಧಾನ್ಯಗಳು ಇದರಿಂದ ಭೂಮಿಯೂ ಕಸುವಾಗುತ್ತದೆ. ರೈತನ ಬೆಳೆಗಳಲ್ಲಿ ಮತ್ತು ಆಹಾರವಲ್ಲಿ ವೈವಿಧ್ಯವೂ ಉಂಟಾಗುತ್ತದೆ) ಹಾಕಿದ್ರೆ ಚೀಲಗಟ್ಲೆ ಕಾಳು ಹೇರ್ತಿದ್ವಿ ದನಕರುಗಳಿಗೆ ಹೊಟ್ಟು ಹುಡಿ ಆಗೋದು. ಅವರೆ ಹಾಕಿದರೆ ಸೊಂಟಮಟ ಬೆಳೀತಿದ್ವು ಸೀಮೆಗೊಬ್ಬರ ಹಾಕಕ್ಕೆ ಶುರು ಮಾಡಿದ್ದೆ ಮಾಡಿದ್ದು, ಹೊಮ್ಮಂಡನೇ ಆಗಂಗಿಲ್ಲ. ಈಗೇನೈತಿ ಬರೆ ಮೂರು ಬತ್ತದ ಕಾಳು. ಮನೆತನಕ್ಕೆ ಬೇಕಾದ ದರ ಹನ್ನೊಂದು ಸಾಮಾನು ಬೆಳೀತಿದ್ವಿ ನಾವು. ಅಂಗಡಿಗೆ ಹೋಗೋದು ಅಂದ್ರೆ ಬಟ್ಟೆ, ಬರೆ, ಎಣ್ಣೆ ಸೋಪು ವರ್ಷಕ್ಕೊಂದು ಸಟ ಶಿಕಾರಿಪುರದ ಸಂತೆಗೆ ಹೋಗಿ ಬಂದ್ರೆ ಗೆದ್ದು ಹೋತು. ಈಗ ನೋಡು ಕೋಳಿ ಮುಕಳಾಗೆ ಎದ್ದು ಬೆಲ್ಲ ಚಾ ಪುಡಿ ಅಂತ ಅಂಗಡಿ ಬಾಕಲಾಗೆ ನಿಂತ್‌ಕಂತಾರೆ ಬೀದಿ ಕಸ ಸೈತ ಹೊಸೆದಿರೋದಿಲ್ಲ.''

''ಮತ್ತೆ ನಿಮ್ ಕಾಲ್ದಾಗೆ ಬೆಲ್ಲ ಚಾಪುಡಿ ತಗಂತಿರಲಿಲ್ವಾ'' ಅಂತ ಕೇಳಿದೆ.

''ಇದೆ ನೋಡು ನೀನು ಏನೇನೋ ಗ್ಯಾನ ತಗೀತಿ. ಶಿಪಾರಸ್ಸಿಗೆ ಹೇಳೋ ಮಾತಲ್ಲ ನಮ್ ಕಾಲ್ದಾಗೆ ಎಂಥ ರಂಡೆಮುಂಡೆ ಮನ್ಯಾಗೂ ಒಂದಡಿಗೆ ಬೆಲ್ಲ ಇರ್ತಿತ್ತು. ಎಲ್ಲಿ ನಿನ್ನ ಕಾಲ್ದಾಗೆ ಈಗ ಗೌಡರ ಮನೆಗೆ ಹೋಗಾನ, ಒಂದಡಿಗೆ ಬೆಲ್ಲ ತೋರಿಸ್ಬಿಡು ಮತ್ತೆ. ಬೆಲ್ಲದ ಮಾತು ಹೋಗಲಿ ಹಬ್ಬ ಹರಿದಿನದಾಗೆ ನಿಲ್ಸಾಕೆ ಒಂದ್ ಕೋಲು ಕಬ್ಬು ಸಿಗೋದಿಲ್ಲ. ಕಬ್ಬಿನ ಹೊಲದಾಗೆ ಪುಂಡಿ ಬೆಳೆದು ಪುಂಡಿ ನಾರಿನಾಗೆ ಹಗ್ಗ ಹುರಿ ಮಾಡಿಕಂತಿದ್ವಿ. ಈಗ ಪಟಗಣ್ಣಿ ಸೆರಗಿಗೆ ಬೇಕು ಅಂದ್ರೂನೂ ಅಂಗಡಿ ಮುಂದೆ ಹೋಗಿ ನಿಂತಕೋಬೇಕು.''

''ಆ ಕಾಲ ಹೋತಪಾ ವರ್ಷಕ್ಕೊಂದು ಸಟ ಕಂದಾಯ ಬಂದ್ ಕಟ್ಟಬಿಟ್ರೆ ನಾವೇ ರಾಜರು ಈಗ ನೋಡು, ರೈತರು ಅಂದ್ರೆ ಸರ್ಕಾರದ ಹೆಂಡ್ರು. ಅವರು ಕೊಡೋ ಸಾಲ ತೊಗೋಬೇಕು ಸೀಮೆಗೊಬ್ಬರ ಅಂತೆ, ಔಸಧ ಅಂತೆ. ಇವೆಲ್ಲ ಇಲ್ಲದಲೆ ಬೆಳೇನೇ ಬೆಳೆಯಕ್ಕಾಗಂಗಿಲ್ಲ, ನಸೀಬ್ ಚೊಕ್ಕ ಇದ್ದು ಮಳೆ ಬಂತು ಅಲ್ಪಸ್ವಲ್ಪ ಉಸಿರಾಡ್‌ತೀವಿ, ಇಲ್ಲದಿದ್ರೆ ಜೋಳಿಗೆ ಹಿಡಿಯೋದೇ, ಸಾಯೋ ತಂಕ ಸಾಲ ಮಾಡೋದು ಸಾಲ ತೀರ್ಸೋದು''

'ಸೀಮೆಗೊಬ್ಬರ ಹಾಕೋನಕ್ಕೆ ನಮ್ಮ ಕಾಲ್ದಾಗೆ ಎಕರೆಗೆ ಮೂವತ್ತು ಚೀಲ ಬತ್ತ ಬೆಳೆಯೋದು'' ಅಂದೆ.

'ಹೌದಪಾ ನಮ್ಮ ಕಾಲ್ದಾಗೆ ಎಕರೆಗೆ ಹದಿನೈದು ಇಪ್ಪತ್ತು ಚೀಲ ಬೆಳೀತಿದ್ವಿ ದನಿನ ಗೊಬ್ಬರ ಗೋಡು ಹಾಕ್ತಿದ್ವಿ. ನಿಮ್ಮಂಗೆ ಸಾಲಸೋಲ ಮಾಡಕ್ಕೆ ಹೋಗ್ತಿರ ಲಿಲ್ಲ. ಈ ಗೊಬ್ಬರ ಔಷಧಿ ಕಳೆ ಕಸ ಅಂತ ಲೆಕ್ಕ ಇಟ್ಟು ನೋಡು. ಏನು ಉಳಿತತಿ ಅಂತ ಗೊತ್ತಾಗುತ್ತೆ. ಇಷ್ಟು ಬೆಳದ್ರೂ ಮನಸ್ಸಿಗೆ ನೆಮ್ಮದಿ ಸಿಕ್ಕತಾ ? ಒಂದಕ್ಕಿದ್ರೆ ಒಂದಕ್ಕಿಲ್ಲ.''

ಹೀಗೆ ಎಲ್ಲಣ್ಣ ಮಾತಾಡುತ್ತಾ ಹೋಗುತ್ತಾನೆ. ಒಬ್ಬರಿಗೊಬ್ಬರು ನೆರವಾಗುವ ಸಹ ಕರಿಸುವ ಸರೀಕರು ಮೆಚ್ಚುವಂತೆ ದುಡಿದು ತಿನ್ನುವ ತನಗೆ ಬೇಕಿದ್ದುದನ್ನೆಲ್ಲ ತಾನೇ ಉತ್ಪಾದಿಸಿಕೊಂಡು ಸ್ವಾವಲಂಬಿಗಳಾಗಿದ್ದ ಒಂದು ಪರಿವಾರದಂತಿದ್ದ ನಮ್ಮ ಹಳ್ಳಿ ಗಳು ಈಗ ಎತ್ತ ಸಾಗುತ್ತಿವೆ.?

ತಿಪ್ಪೆಗೆ ಸಗಣಿ ಹೊತ್ತು ಹಾಕಲು ನಾಚಿಕೆ ಪಡುವ ದೈಹಿಕ ಶ್ರಮದ ದುಡಿಮೆಯನ್ನು ಕೀಳರಿಮೆಯಿಂದ ನೋಡುವ ರೈತ ಮಕ್ಕಳು ಎರಡು ಎಕರೆ ಗದ್ದೆ ಇದ್ದರೂ ಅದನ್ನು ಕೋರಿಗೋ ಗುತ್ತಿಗೆಗೋ ಬೇರೆಯವರಿಗೆ ಕೊಟ್ಟು ಬೀಡಿ ಅಂಗಡಿ ಇಡಲು ತೊಡಗಿ ದ್ದಾರೆ. ಅಥವಾ ಇರುವ ಹೊಲವನ್ನು ಮಾರಿ ಸಣ್ಣ ಪುಟ್ಟ ಉದ್ಯೋಗಗಳಿಗೆ ಸೇರಲು ಹಾತೊರೆಯುತ್ತಾರೆ.

ನೇರ ಉತ್ಪಾದನೆಗಿಂತ ಮಧ್ಯವರ್ತಿಗಳು, ನೌಕರರು, ಸುಖವಾಗಿ ಬಾಳುತ್ತಿರುವುದನ್ನು ಕಂಡು ಆಕರ್ಷಿತರಾಗಿದ್ದಾರೆ. ಹಳ್ಳಿಯ ಪರಿಸರಕ್ಕೆ ಅಗತ್ಯವಾಗಿದ್ದ ಗರಡಿಮನೆ, ಕುಸ್ತಿ ದುಂಡಿ ಎತ್ತುವುದು, ಕಬ್ಬಿನ ಹೊರೆ ಎತ್ತುವುದು, ಬೇಟೆಯಂಥ ಸಾಹಸದ ಸ್ಪರ್ಧೆಗಳು ಮಾಯವಾಗಿವೆ. ದಳ್ಳಾಳಿ, ಇಸ್ಪೀಟು, ಓಸಿ ಆಟಗಳು ಜನಪ್ರಿಯವಾಗಿಬಿಟ್ಟಿವೆ. ಗುಡಿ ಗುಂಡಾರಗಳು, ಪಂಚಾಯಿತಿ, ಆಫೀಸುಗಳು ಸೋಂಬೇರಿಗಳ, ಪುಡಾರಿಗಳು ವಾಸಸ್ಥಾನ ಗಳಾಗಿವೆ. ದುಡಿಯುವವರು ದಡ್ಡರೆಂದು ಪರಿಗಣಿಸಲ್ಪಟ್ಟಿದ್ದಾರೆ. ಕದ್ದು ಮುಚ್ಚಿ ಕುಡಿಯುತ್ತಿದ್ದ ಕಳ್ಳಭಟ್ಟಿಗಳು ಹೋಗಿ ರಾಜಾರೋಷವಾಗಿ ಕುಡಿಯುವ ಬೀರು, ಬ್ರಾಂದಿ ಅಂಗಡಿಗಳಾಗಿವೆ. ಜಾತಿ ರಾಜಕೀಯಗಳು ಹಳ್ಳಿಯ ಮನಸ್ಸನ್ನು ಒಡೆದಿವೆ. ಪಂಚೆ ಬದಲು ಪ್ಯಾಂಟು, ಹೋಟೆಲು ಕಾಫಿ, ಟೀ ಸಿಗರೇಟುಗಳು ಇವಿಷ್ಟೇ ಪ್ರಗತಿ ಎಂದುಕೊಳ್ಳೋಣವೇ ?

ನಾವು ಕಳೆದ ಬದುಕಿನ ನಾಸ್ಟಾಲ್ಜಿಕ್ ಪ್ರೀತಿಯಲ್ಲಿ ವಿಜ್ಞಾನ ತಂತ್ರಜ್ಞಾನ ನಾಗ ರೀಕತೆಗಳನ್ನು ಧಿಕ್ಕರಿಸಬೇಕಿಲ್ಲ. ಇದು ಯಾವುದೂ ಒಂದು ದೇಶದ ಅಂತಃ ಸತ್ವವ ನ್ನು ಪೂರ್ತಿಯಾಗಿ ನಾಶಮಾಡದಂಥ ಪ್ರಕೃತಿಯಲ್ಲಿ ಸಮತೋಲನ ಉಳಿಸಿಕೊಳ್ಳು ವಂಥ ಎಚ್ಚರ ಕಾಯ್ದುಕೊಳ್ಳಬೇಕಾಗಿದೆ.

ವಂದನೆಗಳೊಂದಿಗೆ ನಿಮ್ಮ, **ವೈ. ಮಂಜಪ್ಪ**

ಪ್ರಿಯರೆ,

ಸಂವಾದ ಮೊದಲ ಸಂಪುಟದ ಕೊನೆಯ ಸಂಚಿಕೆ ಈಗ ನಿಮ್ಮ ಕೈಯಲ್ಲಿದೆ ಇಲ್ಲಿಗೆ ವಾರ್ಷಿಕ ಚಂದಾದಾರರ ಚಂದಾ ಮುಗಿದಂತಾಗಿದೆ. ನೀವು ಚಂದಾ ಕಳಿಸದ ಮುಂದಿನ ಸಂಪುಟದ ಸಂಚಿಕೆಗಳನ್ನು ಹೊರತರುವುದು ಕಷ್ಟವಾದೀತು ದಯವಿಟ್ಟು ಕೂಡಲೆ ಮುಂದಿನ ಸಂಪುಟದ ವಾರ್ಷಿಕ ಚಂದಾ ಇಪ್ಪತ್ತೈದು ರೂಪಾಯಿಗಳನ್ನು ಎಂ. ಒ. ಮೂಲಕ ಅಥವಾ ಚೆಕ್ ಮೂಲಕ (ಐದು ರೂ. ಬ್ಯಾಂಕ್ ಕಮಿಷನ್ ಸೇರಿಸಿ) ಕಳಿಸಿಕೊಡಿರಿ.

ಕೆಲವರು ಮೊದಲ ವರ್ಷದ ಚಂದಾವನ್ನೂ ಕಳಿಸಿಲ್ಲ. ಈ ಗೆಳೆಯರು ದಯಮಾಡಿ ಕಳೆದ ಸಂಪುಟ ಮತ್ತು ಮುಂದಿನ ಸಂಪುಟದ ವಾರ್ಷಿಕ ಚಂದಾ ಒಟ್ಟು ಐವತ್ತು ರೂ.ಗಳನ್ನು ಆದಷ್ಟು ಬೇಗ ಕಳಿಸಿಕೊಡಿರಿ. ಚೆಕ್ ಮೂಲಕವಾದರೆ 55 ರೂ. ಕಳಿಸಿ ಕೊಡಿ.

ಆಜೀವ ಚಂದಾದಾರರು ಮತ್ತು ಐದು ವರ್ಷದ ಚಂದಾದಾರರಲ್ಲಿ ಕೆಲವರು ಭಾಗಶಃ ಹಣ ಮಾತ್ರ ಕೊಟ್ಟಿದ್ದಾರೆ. ಏನೂ ಕೊಡದವರೂ ಇದ್ದಾರೆ. ದಯವಿಟ್ಟು ಎಲ್ಲರೂ ಕೂಡಲೇ ಹಣ ಕಳುಹಿಸಿ.

ನಮ್ಮ ಎರಡನೇ ಸಂಪುಟದ ಮೊದಲನೇ ಸಂಚಿಕೆ ಫೆಬ್ರವರಿ ಕೊನೆಯೊಳಗೆ ಬರಲಿದೆ. ಆದುದರಿಂದ ಬಾಕಿ ಇರುವವರು ಚಂದಾ ಹಣವನ್ನು ಫೆಬ್ರವರಿ 15 ರೊಳಗಾಗಿ ಕಳಿಸಿ ಕೊಟ್ಟರೆ ಅನುಕೂಲ.

ನಾವು ಪತ್ರಿಕೆ ಆರಂಭಿಸಬೇಕೆಂದುಕೊಂಡಾಗ ನಮ್ಮ ಹಲವಾರು ಗೆಳೆಯರು ಪ್ರೋತ್ಸಾಹದ ಮಾತುಗಳನ್ನಾಡಿದ್ದಲ್ಲದೆ ತಮ್ಮ ಶಕ್ತ್ಯಾನುಸಾರ ಮುಂಗಡ ವಾರ್ಷಿಕ ಚಂದಾ ಐದು ವರ್ಷದ ಚಂದಾ ಆಜೀವ ಚಂದಾ ಹಾಗೂ ಪ್ರೋತ್ಸಾಹ ಧನ- ನೀಡಿ ಸಂವಾದ ಒಂದು ವರ್ಷ ಬರಲು ಸಹಾಯ ಮಾಡಿದ್ದಾರೆ. ನಮ್ಮ ಒಂದು ವರ್ಷದ ಸಾಹಸ ನಮಗೆ ತೃಪ್ತಿ ತಂದಿದೆ. ನಿಮಗೂ ತೃಪ್ತಿ ತಂದಿದೆಯೆಂದು ಭಾವಿಸಿದ್ದೇವೆ. ಸಂವಾದ ಹೀಗೇ ಮುಂದುವರಿಯಲು ನಿಮ್ಮೆಲ್ಲರ ಸಹಕಾರ ಮತ್ತೊಮ್ಮೆ ಕೋರುತ್ತೇವೆ.

ನಮ್ಮ ಸಂಪುಟದ ಆರು ಸಂಚಿಕೆಗಳನ್ನು ಓದಿದ್ದೀರಿ ಮುಂದಿನ ಸಂಪುಟದ ರೂಪುರೇಷೆಗಳ ಬಗ್ಗೆ ನಿಮಗೇನಾದರೂ ಹೇಳಬೇಕೆನ್ನಿಸಿದರೆ ದಯವಿಟ್ಟು ತಿಳಿಸಿ-

ನಿಮ್ಮ – **ಸಂವಾದದ ಗೆಳೆಯರು**